
ಕನ್ನಡ ಜಾಣ



ಕನ್ನಡ ಸಾಹಿತ್ಯ ಚರಿತ್ರೆ

• ತ. ಸು. ಶಾಮರಾಯ

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು- ೫೬೦೦೧೮

ಕನ್ನಡ ಸಾಹಿತ್ಯ ಚರಿತ್ರೆ

ತ. ಸು. ಶಾಮರಾಯ

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು – ೫೬೦೦೧೮

2

KANNADA SAAHITYA CHARITRE - by: Ta.Su. Shamaraya
Published by : **Kannada Sahitya Parishattu**
Pampa Mahakavi Road, Chamarajapete
Bengaluru - 560018
Pages : viii + 286 Price : **Rs.120=00 : 2012**

ಮೊದಲನೆಯ ಮುದ್ರಣ : ೨೦೧೦
ಎರಡನೆಯ ಮುದ್ರಣ : ೨೦೧೨

ಪ್ರತಿಗಳು : ೧೦೦೦
ಬೆಲೆ : ಒಂದುನೂರ ಇಪ್ಪತ್ತು ರೂಪಾಯಿಗಳು

ಮುದ್ರಣ : ಬಿ.ಎಂ.ಶ್ರೀ. ಅಚ್ಚುಕೂಟ ಆಫ್‌ಸೆಟ್ ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – ೧೮

ಅಧ್ಯಕ್ಷರ ನುಡಿ

ಸಮಸ್ತ ಕನ್ನಡಿಗರ ಏಕೈಕ ಪ್ರಾತಿನಿಧಿಕ ಸಂಸ್ಥೆಯಾದ ಕನ್ನಡ ಸಾಹಿತ್ಯ ಪರಿಷತ್ತು ೧೯೧೫ರಲ್ಲಿ ಸ್ಥಾಪನೆಗೊಂಡು ಅಂದಿನಿಂದ ನಿರಂತರವಾಗಿ ಕನ್ನಡ ಕಟ್ಟುವ ಕಾರ್ಯದಲ್ಲಿ ಕ್ರಿಯಾತ್ಮಕವಾಗಿ ತೊಡಗಿಕೊಂಡು ಬರುತ್ತಿದೆ. ಪರಿಷತ್ತು ನಡೆಸುವ ಸಾಹಿತ್ಯ ಪರೀಕ್ಷೆಗಳಾದ ಕನ್ನಡ ಪ್ರವೇಶ, ಕಾವ, ಜಾಣ ಮತ್ತು ರತ್ನ ಬಹಳ ವರ್ಷಗಳಿಂದ ಜನಪ್ರಿಯವಾಗಿವೆ. ಈ ಪರೀಕ್ಷೆಗಳನ್ನು ತೆಗೆದುಕೊಳ್ಳುವವರ ಸಂಖ್ಯೆಯು ವರ್ಷದಿಂದ ವರ್ಷಕ್ಕೆ ಅಧಿಕಗೊಳ್ಳುತ್ತಿರುವುದು ಅವುಗಳ ಜನಪ್ರಿಯತೆಗೆ ಹಿಡಿದ ಕನ್ನಡಿಯಾಗಿದೆ. ಕನ್ನಡ ನಾಡು, ನುಡಿ, ಸಾಹಿತ್ಯ, ಕಲೆ, ಸಂಸ್ಕೃತಿ ಮೊದಲಾದ ವಿಷಯಗಳ ವ್ಯಾಪಕ ಅಧ್ಯಯನಕ್ಕೆ ಅವಕಾಶ ಮಾಡಿಕೊಡುವ ಈ ಪರೀಕ್ಷೆಗಳಲ್ಲಿ ಉತ್ತೀರ್ಣರಾದರೆ ಹಲವಾರು ಪ್ರಯೋಜನಗಳೂ ಇವೆ. ಪರೀಕ್ಷೆಯನ್ನು ಪಾಸು ಮಾಡಿಕೊಂಡ ರಾಜ್ಯ ಸರ್ಕಾರಿ ನೌಕರರಿಗೆ ಕಡ್ಡಾಯ ಕನ್ನಡ ಭಾಷಾ ಪರೀಕ್ಷೆಯಿಂದ ವಿನಾಯಿತಿ ಇದೆ. 'ರತ್ನ' ಪರೀಕ್ಷೆಯಲ್ಲಿ ತೇರ್ಗಡೆಯಾದವರು ಪದವಿ ತರಗತಿಯಲ್ಲಿ ಕನ್ನಡವನ್ನು ಐಚ್ಛಿಕವಾಗಿ ಅಧ್ಯಯನ ಮಾಡದಿದ್ದರೂ ಕನ್ನಡ ಎಂ.ಎ. ಪದವಿಗೆ ಸೇರಲು ಬೆಂಗಳೂರು ಹಾಗೂ ಗುಲ್ಬರ್ಗ ವಿಶ್ವವಿದ್ಯಾಲಯಗಳು ಅವಕಾಶವನ್ನು ಕಲ್ಪಿಸಿಕೊಟ್ಟಿವೆ.

ಇಷ್ಟೆಲ್ಲ ಮಹತ್ವ ಪಡೆದುಕೊಂಡಿರುವ ಪರೀಕ್ಷೆಗಳಿಗೆ ಪಠ್ಯಕ್ರಮವನ್ನು ರೂಪಿಸಿ, ಪಠ್ಯಪುಸ್ತಕಗಳನ್ನು ಸಿದ್ಧಪಡಿಸುವುದು ಅಷ್ಟೊಂದು ಸುಲಭದ ಕೆಲಸವಲ್ಲ. ಕ್ರಿ.ಶ. ೪೫೦ರ ಹಲ್ಮಿಡಿ ಶಾಸನದಿಂದ ಮೊದಲುಗೊಂಡು ಪೂರ್ವದ ಹಳಗನ್ನಡ, ಹಳಗನ್ನಡ, ನಡುಗನ್ನಡ, ಹೊಸಗನ್ನಡ ಇವುಗಳ ವಿಭಿನ್ನ ಪ್ರಕಾರಗಳು, ಆಸಕ್ತಿಗಳು, ಚಳುವಳಿಗಳು, ಸಿದ್ಧಾಂತಗಳು – ಇವೆಲ್ಲವನ್ನೂ ದೃಷ್ಟಿಯಲ್ಲಿರಿಸಿಕೊಂಡು ಎಲ್ಲೂ ಅರೆಕೊರೆಯಾಗದಂತೆ, ಭಾರವಾಗದಂತೆ ಸಮತೋಲನವನ್ನು ಕಾಯ್ದುಕೊಂಡು ಈ ಕೆಲಸವನ್ನು ಮಾಡಬೇಕಾಗುತ್ತದೆ. ಸಮಕಾಲೀನ ಬದುಕು – ಅಭಿರುಚಿ-ಚಿಂತನೆಗಳಿಗೆ ಹೆಚ್ಚಿನ ಒತ್ತು ಕೊಡಬೇಕಾಗುತ್ತದೆ. ವಿಶ್ವವಿದ್ಯಾಲಯಗಳು ರೂಪಿಸುವ ಇದೇ ಉದ್ದೇಶದ ಪಠ್ಯಗಳಿಗೆ ಹೊಯ್‌ಕಯ್ ಆಗಿ ನಿಲ್ಲಬೇಕಾಗುತ್ತದೆ. ನಮ್ಮ ಈ ಆಶಯಕ್ಕೆ ಸ್ಪಂದಿಸುವಂತೆ ಸಾಹಿತ್ಯ ಪರೀಕ್ಷೆಗಳ ಪಠ್ಯಕ್ರಮ ಮತ್ತು ಪಠ್ಯಪುಸ್ತಕಗಳನ್ನು ರೂಪಿಸುವ ಜವಾಬ್ದಾರಿಯನ್ನು ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ, ಡಾ. ಬೈರಮಂಗಲ ರಾಮೇಗೌಡ ಮತ್ತು ಪ್ರೊ. ಎಂ.ಜಿ. ಚಂದ್ರಶೇಖರಯ್ಯ ಪ್ರೀತಿಯಿಂದ ನಿರ್ವಹಿಸಿದ್ದಾರೆ. ವಿವಿಧ ಪಠ್ಯಗಳ ಸಂಪಾದಕರು ಸಕಾಲದಲ್ಲಿ ಅಚ್ಚುಕಟ್ಟಾಗಿ ಪುಸ್ತಕಗಳನ್ನು ಸಿದ್ಧಪಡಿಸಿಕೊಟ್ಟಿದ್ದಾರೆ. ಬಿ.ಎಂ.ಶ್ರೀ. ಅಚ್ಚುಕೂಟದ ಸಿಬ್ಬಂದಿ ಸುಂದರ ವಿನ್ಯಾಸದೊಂದಿಗೆ ಪುಸ್ತಕಗಳನ್ನು ಮುದ್ರಿಸಿದ್ದಾರೆ. ಇವರೆಲ್ಲರಿಗೂ ಪರಿಷತ್ತು ಆಭಾರಿಯಾಗಿದೆ. ಸಾಹಿತ್ಯದ ವಿದ್ಯಾರ್ಥಿಗಳು ಈ ಪುಸ್ತಕಗಳಿಂದ ನಿರೀಕ್ಷಿತ ಪ್ರಯೋಜನ ಪಡೆಯುವರೆಂದು ಭಾವಿಸಿದ್ದೇನೆ.

ಪುಂಡಲೀಕ ಹಾಲಂಬಿ
ಅಧ್ಯಕ್ಷರು

ಗ್ರಂಥಕರ್ತನ ಬಿನ್ನಹ

ನನ್ನ ಕನ್ನಡ ಸಾಹಿತ್ಯ ಚರಿತ್ರೆಗೆ ನನ್ನ ವಿದ್ಯಾಗುರುಗಳಾದ ಕವಿಕುಲಗುರು ಕುವೆಂಪುರವರು ಮುನ್ನುಡಿ ಬರೆಯುತ್ತಾ, ಮಾಡಿರುವ ಕೆಲವು ಉತ್ತೇಜಕವಾದ ನುಡಿಗಳು ನನ್ನನ್ನು ಹುರಿದುಂಬಿಸಿ ಬಲು ಹಿಂದೆಯೇ ಹೊಸಗನ್ನಡ ಸಾಹಿತ್ಯ ಚರಿತ್ರೆಯೊಂದನ್ನು ಬರೆಯುವಂತೆ ಪ್ರೇರೇಪಿಸಿದ್ದವು. ಆದರೆ, ಕೆಲಸವನ್ನು ಕೈಗೆತ್ತಿಕೊಂಡಾಗ ಅದರ ಬೃಹತ್ತು ಮಹತ್ತುಗಳನ್ನು ಕಂಡು ಎದೆ ನಡುಗಿತು. ಈಗ ಕೆಲವು ವರ್ಷಗಳ ಕೆಳಗೆ ನಾನು ನನ್ನ ವಿದ್ಯಾರ್ಥಿ ಗೆಳೆಯರಾದ ಶ್ರೀಮಾನ್ ಕೆ.ಟಿ. ವೀರಪ್ಪನವರನ್ನು ಬೆಂಬಲಕ್ಕೆ ತೆಗೆದುಕೊಂಡು ನಮ್ಮ ಗೆಳೆಯರು ಕೆಲವರ ಸಹಾಯದಿಂದ ಈ ಕೆಲಸವನ್ನು ಮಾಡಬೇಕೆಂದು ಪ್ರಯತ್ನಪಟ್ಟೆ. ಆದರೆ ನನ್ನ ಪ್ರಯತ್ನ ಫಲಿಸಲಿಲ್ಲ. ನನ್ನ 'ಕನ್ನಡ ಸಾಹಿತ್ಯ ಚರಿತ್ರೆ-ಸಮೀಕ್ಷೆ'ಯನ್ನು ಓದಿದ ನನ್ನ ಕೆಲವು ಮಿತ್ರರೂ, ಕೆಲವು ಅಧ್ಯಾಪಕರೂ, ವಿದ್ಯಾರ್ಥಿಗಳೂ ಇದರಲ್ಲಿ ಆಧುನಿಕ ಕನ್ನಡ ಸಾಹಿತ್ಯದ ಒಂದು ಅಧ್ಯಾಯವನ್ನು ಸೇರಿಸಬೇಕೆಂದು ಬಹಳ ದಿನಗಳಿಂದಲೂ ಸೂಚಿಸುತ್ತಿದ್ದರು. ಆದರೆ ವಯಸ್ಸಿನಿಂದ ೯೦ರ ಹೊಸ್ತಿಲಲ್ಲಿ ಬಂದುನಿಂತು, ಅಂಧನಾಗಿರುವ ನಾನು ಆ ಕೆಲಸವನ್ನು ಮಾಡುವುದು ಸಾಧ್ಯವಿಲ್ಲವಾಗಿ ಕೇವಲ ದಿಕ್ಕನ್ನು ಸೂಚಿಸುವ ಕೈಮರವಾಗಿ ಮಾತ್ರನಿಂತು ಈ ಆವೃತ್ತಿಯಲ್ಲಿ 'ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆ'ಯನ್ನು ಸೇರಿಸುವ ಸಾಹಸ ಮಾಡಿದ್ದೇನೆ. ನಾನು ಬರಿಯ ದಿಕ್ಕನ್ನು ಮಾತ್ರ ಸೂಚಿಸಿದ್ದೇನೆಯೇ ಹೊರತು ಅದನ್ನು ನಡೆದು ಅಲ್ಲಲ್ಲಿಯ ಸುಖ ಕಷ್ಟಗಳನ್ನು ಸೌಂದರ್ಯ-ಕುರೂಪಗಳನ್ನು ನೋಡಿ ನನ್ನ ಅನುಭವವನ್ನು ಇಲ್ಲಿ ಬರೆದಿರುವವರು ನನ್ನ ಮೊಮ್ಮಗಳಾದ ಶ್ರೀಮತಿ ಸರ್ವಮಂಗಳಾ, ಎಂ.ಎ., ಅವರು. ಅದರಲ್ಲಿನ ಲೋಪದೋಷಗಳನ್ನು ತೋರಿಸಿದಲ್ಲಿ ಮುಂದಿನ ಆ ಕೃತಿಯಲ್ಲಿ ತಿದ್ದಿಕೊಳ್ಳಬಹುದು.

ಮೈಸೂರು **ತ.ಸು. ಶಾಮರಾಯ**

ಪರಿವಿಡಿ

★ ★ ★

ಕನ್ನಡ ಸಾಹಿತ್ಯ ಚರಿತ್ರೆ

೧. ಮೊದಲ ಮಾತು

ವಿಸ್ತಾರ ವೈವಿಧ್ಯಗಳಿಂದ ಕೂಡಿದ ಭರತಖಂಡದಲ್ಲಿ ನೂರಾರು ಭಾಷೆಗಳು ಬಳಕೆಯಲ್ಲಿವೆ. ಅವುಗಳಲ್ಲಿ ಹದಿನೆಂಟು ಭಾಷೆಗಳನ್ನು ಮಾತ್ರ ಅಧಿಕೃತ ಭಾಷೆಗಳೆಂದು ಸ್ವೀಕರಿಸಿ ಮನ್ನಣೆ ನೀಡಿದ್ದಾರೆ. ಅವುಗಳಲ್ಲಿ ಕನ್ನಡವೂ ಒಂದು. ಇದನ್ನು ಮಾತನಾಡುವ ಜನ ಕನ್ನಡಿಗರು; ಇವರ ಸಂಖ್ಯೆ ಸುಮಾರು ಐದು ಕೋಟಿ; ಇವರು ನೆಲಸಿರುವ ನಾಡು ಕನ್ನಡನಾಡು. ಬ್ರಿಟಿಷರ ರಾಜ್ಯಭಾರ ಕಾಲದಲ್ಲಿ ಹರಿಹಂಚಾಗಿ ಹೋಗಿದ್ದ ಈ ನಾಡು ಈಗ ನಲವತ್ತೊಂದು ವರ್ಷಗಳ ಕೆಳಗೆ ಏಕೀಕರಣವನ್ನು ಕಂಡಿತು. ಇದರ ವಿಸ್ತಾರ ಸುಮಾರು ಎಪ್ಪತ್ತನಾಲ್ಕು ಸಹಸ್ರ ಚದರ ಮೈಲಿಗಳು. ಇದನ್ನು ಈಗ 'ವಿಶಾಲ ಮೈಸೂರು' ಎಂಬ ಹೆಸರಿನಿಂದ ಕರೆಯುತ್ತಿರುವರಾದರೂ ಇದರ ನಿಜವಾದ ಹೆಸರು 'ಕರ್ಣಾಟಕ' ಎಂದು.[೧] ಪ್ರಾಚೀನ ಗ್ರಂಥಗಳಲ್ಲಿಯೂ ಶಾಸನಗಳಲ್ಲಿಯೂ ಈ ನಾಡನ್ನು ಮಾತ್ರವೆ ಅಲ್ಲದೆ ಇಲ್ಲಿನ ಭಾಷೆಯನ್ನು ಕೂಡ ಕರ್ಣಾಟಕವೆಂದೇ ಕರೆಯಲಾಗಿದೆ. ದಕ್ಷಿಣ ಭಾರತದ ಈ ಕರುನಾಡಿನಲ್ಲಿ ಹವ ಹಿತಕರವಾಗಿದೆ, ನೆಲ ಫಲವತ್ತಾಗಿದೆ. ನಮ್ಮ ಮಹಾಕವಿಯೊಬ್ಬ ಹೇಳಿರುವಂತೆ ಫಲಪುಷ್ಪ ಯುತವಾದ ಇಲ್ಲಿನ ಅಡವಿ ಸೊಕ್ಕಿದಾನೆಯನ್ನು ಬೆಳೆಸುತ್ತದೆ, ದೇಮಾತೃಕವೆನಿಸಿದ ಹೊಲ ಗಂಧಶಾಳಿ (ಭತ್ತ)ಯನ್ನು ಬೆಳೆಯುತ್ತದೆ. ಮಾವಿನಹಣ್ಣು, ಮಲ್ಲಿಗೆ ಹೂಗಳಿಗೆ ಇದು ತೌರುಮನೆ. ಮುಡಿಯಲು ಮಲ್ಲಿಗ್ಗೆ, ಮೆಲ್ಲಲು ಮಾವಿನ ಹಣ್ಣು ಇದ್ದ ಮೇಲೆ 'ಸಂಸಾರ ಸಾರಸರ್ವಸ್ವ'ವೆಂಬ ಫಲ ಮಾತ್ತಾವುದು ಬೇಕು? ಎಂದು ಕೇಳುವಂತಹ ರಸಿಕರು ಇಲ್ಲಿನ ಜನ. ಈ ಮನೋಭಾವದಲ್ಲಿ ಬಾಳಿಕೊಂಡು ಬಂದ ಕನ್ನಡಿಗರು ಇಹವನ್ನು ದೂರದೆ ಪರಕ್ಕೆ ದೂರರಾಗದೆ ತುಂಬು ಜೀವನವನ್ನು ನಡೆಸಿಕೊಂಡು ಬಂದಿದ್ದಾರೆ. ದ್ವೈತಮತ ಸ್ಥಾಪಕರಾದ ಮಧ್ವಾಚಾರ್ಯರೂ, ಶಕ್ತಿ ವಿಶಿಷ್ಟಾದ್ವೈತ ಮತಸ್ಥಾಪಕರಾದ ಬಸವಣ್ಣನವರೂ ಹುಟ್ಟಿ ಬೆಳೆದುದು ಈ ನಾಡಿನಲ್ಲಿಯೆ. ಅದ್ವೈತ, ಅದಕ್ಕಿಂತಲೂ ಹೆಚ್ಚಾಗಿ ವಿಶಿಷ್ಟಾದ್ವೈತ ತನ್ನ ಬೆಳವಣಿಗೆಗಾಗಿ ಬಳಸಿಕೊಂಡುದು ಕರ್ಣಾಟಕವನ್ನೇ ಅನೇಕತೆಯಲ್ಲಿ ಏಕತೆಯನ್ನು ಕಂಡುಕೊಂಡ ಕನ್ನಡಿಗರ ಉದಾರಚೇತನ 'ಹರಿಹರ'ನನ್ನು 'ಶಂಕರನಾರಾಯಣ'ನನ್ನು ಸೃಷ್ಟಿಸಿಕೊಂಡಿದೆ. ಈ ನಾಡಿನಲ್ಲಿ ಎಲ್ಲೆಲ್ಲಿಯೂ ಎದ್ದು ಕಾಣುವ ಚಿತ್ರ, ಶಿಲ್ಪ ಇತ್ಯಾದಿ ಕಲಾಕೃತಿಗಳು ಕನ್ನಡಿಗರ ಧರ್ಮಾಭಿಮಾನಕ್ಕೂ, ರಸಿಕತೆಗೂ, ಲೋಕೋತ್ತರವಾದ ಕಲಾಕೌಶಲಕ್ಕೂ ಹಿರಿಯ ಸಾಕ್ಷಿಗಳಾಗಿ ನಿಂತಿವೆ. 'ಕರ್ಣಾಟಕ ಸಂಗೀತ'ವೆಂಬುದಂತೂ ನಮ್ಮ ನಾಡಿನ ಕೀರ್ತಿಪತಾಕೆಯನ್ನು ಗಗನಚುಂಬಿಯಾಗಿ ಮಾಡಿದೆ. ಇಂತಹ ಹಿನ್ನೆಲೆಯಲ್ಲಿ ಹುಟ್ಟಿ ಬೆಳೆದ ಕನ್ನಡ ಸಾಹಿತ್ಯ ಸಾಕಷ್ಟು ಶ್ರೀಮಂತವಾಗಿರುವುದು ಸಹಜವಾಗಿಯೇ ಇದೆ.

ದಕ್ಷಿಣ ಭಾರತದಲ್ಲಿ ತಮಿಳು, ಕನ್ನಡ, ತೆಲುಗು, ಮಲೆಯಾಳ, ತುಳು ಎಂಬ ಐದು ಮುಖ್ಯಭಾಷೆಗಳಿವೆ. ಇವನ್ನು ಪಂಚದ್ರಾವಿಡ ಭಾಷೆಗಳೆಂದು ಕರೆಯುತ್ತಾರೆ. ಬಡಗ, ತೊದವ, ಕೊಡಗ-ಇತ್ಯಾದಿ ಇಲ್ಲಿನ ಜನಾಂಗದವರ ಭಾಷೆಗಳೂ ದ್ರಾವಿಡವರ್ಗಕ್ಕೆ ಸೇರಿದವುಗಳೇ. ಇವೆಲ್ಲಕ್ಕೂ ಮೂಲವಾದ 'ಮೂಲದ್ರಾವಿಡ' ಭಾಷೆಯೊಂದು ಇದ್ದಿರಬೇಕೆಂದು ಪಂಡಿತರ ಅಭಿಪ್ರಾಯ. ಈ ಮೂಲಮಾತೃಕೆಯಿಂದ ಉದಿಸಿದ ಈ ಸೋದರಿಯರು ಬೇರೆ ಬೇರೆಯಾಗಿ ತಮ್ಮ ವ್ಯಕ್ತಿತ್ವವನ್ನು ಎಂದು ಸ್ಥಾಪಿಸಿಕೊಂಡರೆಂಬುದನ್ನು 'ಇದಮಿತ್ಥಂ' ಎಂದು ನಿರ್ಧರಿಸುವಷ್ಟು ಸಾಧನ ಸಾಮಗ್ರಿಗಳು ನಮಗಿನ್ನೂ ಉಪಲಬ್ಧವಾಗಿಲ್ಲ. ದ್ರಾವಿಡ ಭಾಷೆಗಳಲ್ಲಿ ತಮಿಳು ಅತ್ಯಂತ ಪ್ರಾಚೀನವಾದ ಭಾಷಾ ಸಾಹಿತ್ಯಗಳ ಇತಿಹಾಸವನ್ನು ಹೊಂದಿದೆ. ಕನ್ನಡ ನಾಡು, ನುಡಿಗಳ ಇತಿಹಾಸವೂ ಕ್ರಿಸ್ತಪೂರ್ವದಷ್ಟು

---

೧. ಈಗ ಇದರ ಹೆಸರು ಕರ್ಣಾಟಕವೆಂದೇ ಇದೆ.

ಪ್ರಾಚೀನವೆಂಬುದಕ್ಕೆ ಸಾಕಷ್ಟು ಸಾಕ್ಷಿಗಳಿವೆ. ರಾಮಾಯಣ, ಮಹಾಭಾರತಗಳಲ್ಲಿ 'ಕರ್ಣಾಟಕ'ದ ಪ್ರಸ್ತಾಪವಿದೆ. ಕ್ರಿ.ಪೂ. ಎರಡನೆಯ ಶತಮಾನದಲ್ಲಿ ಹುಟ್ಟಿದ ಗ್ರೀಕ್ ಪ್ರಹಸನವೊಂದರಲ್ಲಿ ಬೇಕಾದಷ್ಟು ಕನ್ನಡ ಪದಗಳಿರುವುದು ಕಂಡುಬಂದಿದೆ. ಅದೇ ಶತಮಾನದಲ್ಲಿ ಭಾರತಕ್ಕೆ ಬಂದಿದ್ದ ಗ್ರೀಕ್‌ಪ್ರವಾಸಿ ಟಾಲ್ಮೆಯು ತನ್ನ ಬರಹದಲ್ಲಿ ಕನ್ನಡ ನಾಡಿನ ಪ್ರಸಿದ್ಧ ನಗರಗಳನ್ನೂ ಬಂದರುಗಳನ್ನೂ ಹೆಸರಿಸಿದ್ದಾನೆ. ಪ್ರಾಕೃತ ಸಾಹಿತ್ಯದಲ್ಲಿ ಕಂಡುಬರುವ ಅನೇಕ ಕನ್ನಡಪದಗಳನ್ನೂ ನಮ್ಮ ಪಂಡಿತರು ಹೆಕ್ಕಿ ಹೊರದೋರಿದ್ದಾರೆ.

ಕನ್ನಡ ನಾಡು, ನುಡಿಗಳಂತೆ ನಮ್ಮ ಸಾಹಿತ್ಯವೂ ಕ್ರಿಸ್ತಪೂರ್ವದಷ್ಟು ಪ್ರಾಚೀನವಾಗಿದ್ದಿರ ಬಹುದೆಂದು ಕೆಲವು ಪಂಡಿತರ ಅಭಿಪ್ರಾಯ. ದಿವಂಗತ ಪ್ರೊಫೆಸರ್ ವೆಂಕಣ್ಣಯ್ಯನವರು 'ಬೌದ್ಧರೆ ಕನ್ನಡ ಭಾಷೆಗೆ ಆದಿಕವಿಗಳು, ಸುಮಾರು ಕ್ರಿಸ್ತಶಕದ ಆದಿಭಾಗದಿಂದಲೂ ಕನ್ನಡಭಾಷೆಯಲ್ಲಿ ಗ್ರಂಥರಚನೆಯಾಗುತ್ತಿದ್ದಿರಬೇಕು, ಬೌದ್ಧಮತದ ನಾಶದೊಂದಿಗೆ ಬೌದ್ಧಗ್ರಂಥಗಳೂ ನಾಶವಾದವು' ಎಂದು ಹೇಳಿದ್ದಾರೆ. ದಿವಂಗತ ಶ್ರೀಮಾನ್ ಗೋವಿಂದಪೈರವರು ಕ್ರಿ.ಶ. ೧೫೦ರಲ್ಲಿದ್ದ ಹಾಲರಾಜನ 'ಗಾಥಾಸಪ್ತಶತಿ' ಎಂಬ ಪ್ರಾಕೃತ ಗ್ರಂಥದಲ್ಲಿನ ಹಲವು ಕನ್ನಡಪದಗಳ ಆಧಾರದಿಂದ ಕನ್ನಡ ಸಾಹಿತ್ಯವು ಆ ಗ್ರಂಥಕ್ಕಿಂತಲೂ ಪ್ರಾಚೀನಕಾಲದಿಂದ ಇದ್ದಿರಬೇಕೆಂದು ಊಹಿಸಿದ್ದಾರೆ. ಈ ವಿದ್ವಾಂಸರುಗಳ ಊಹೆಗಳನ್ನು ಬರಿಯ ಊಹೆಗಳೆಂದು ತಳ್ಳಿಹಾಕಿದರೂ ಕನ್ನಡ ಸಾಹಿತ್ಯದ ಪ್ರಾಚೀನತೆಗೆ ಅಪೋಹವೇನೂ ಆಗುವುದಿಲ್ಲ. ಈಗ ನಮಗೆ ಉಪಲಬ್ಧವಾಗಿರುವ ಕನ್ನಡಸಾಹಿತ್ಯ ಸಾಕಷ್ಟು ಪುರಾತನವಾಗಿದೆ.

ಕನ್ನಡದ ಬಾಯ್ನುಡಿ ಸಾಹಿತ್ಯದ ಗದ್ದುಗೆಯೇರಿ ಬರಹರೂಪದಲ್ಲಿ ಮೊಟ್ಟಮೊದಲನೆಯದಾಗಿ ನಮಗೀಗ ಸದ್ಯಕ್ಕೆ ಕಾಣಬಂದಿರುವುದು ಹಲ್ಮಿಡಿಯ ಶಾಸನದಲ್ಲಿ. ಇದರ ಕಾಲ ಸುಮಾರು ಕ್ರಿ.ಶ. ೪೫೦. ಅಳಕದಂಬನೆಂಬ ರಾಜನು ವಿಜಅರಸನೆಂಬುವನಿಗೆ ಎರಡು ಗ್ರಾಮಗಳನ್ನು ದತ್ತಿಯಾಗಿ ಕೊಟ್ಟುದು ಇದರ ತಿರುಳು. ಗದ್ಯರೂಪದಲ್ಲಿರುವ ಈ ಶಾಸನದಲ್ಲಿ ಕೇವಲ ಇಪ್ಪತ್ತು ಪದಗಳು ಮಾತ್ರ ಕನ್ನಡ; ಉಳಿದುದೆಲ್ಲ ಸಂಸ್ಕೃತ. ಆದ್ದರಿಂದ ಈ ಶಾಸನ ಹುಟ್ಟುವ ವೇಳೆಗಾಗಲೇ ಕನ್ನಡದ ಮೇಲೆ ಸಂಸ್ಕೃತದ ಪ್ರಭಾವ ಬೇಕಾದಷ್ಟು ಆಗಿತ್ತೆಂದು ಊಹಿಸುವುದಕ್ಕೆ ಅವಕಾಶವಿದೆ. 'ಶಾಸನದಲ್ಲಿ ಉಪಯೋಗವಾದ ಭಾಷಾಶೈಲಿಯನ್ನು ಗಮನಿಸಿದರೆ ಭಾಷೆಯು ಅಷ್ಟು ಶಕ್ತಿಯುತವಾಗಿ ಬೆಳವಣಿಗೆ ಪಡೆಯಲು ಕೆಲವು ಶತಮಾನಗಳಾದರೂ ಹಿಡಿದಿರಬೇಕೆಂದು ವಿದಿತವಾಗುತ್ತದೆ' ಎಂದು ಶ್ರೀಮಾನ್ ಎಂ. ಮರಿಯಪ್ಪ ಭಟ್ಟರು ತಮ್ಮ 'ಸಂಕ್ಷಿಪ್ತ ಕನ್ನಡ ಸಾಹಿತ್ಯ ಚರಿತ್ರೆ'ಯಲ್ಲಿ ಈ ಶಾಸನವನ್ನು ಕುರಿತು ಹೇಳಿರುವ ಮಾತು ಗಮನಾರ್ಹವಾಗಿದೆ.

ನಮಗೀಗ ದೊರೆತಿರುವ ಮೊಟ್ಟಮೊದಲ ಸಮಗ್ರ ಗ್ರಂಥವೆಂದರೆ 'ಕವಿರಾಜಮಾರ್ಗ'. ಇದರ ಕಾಲ ಒಂಬತ್ತನೆಯ ಶತಮಾನ. ಇದಕ್ಕೂ ಪೂರ್ವದಲ್ಲಿ ಕನ್ನಡ ಸಾಹಿತ್ಯ ವಿಪುಲವಾಗಿ ಬೆಳೆದಿತ್ತೆಂಬುದು ನಿರ್ವಿವಾದ. ಆದರೆ ಸಮಗ್ರ ಗ್ರಂಥವಾವುದೂ ದೊರೆತಿಲ್ಲ. ಕೇವಲ ಶಾಸನಗಳು ಮಾತ್ರ ಸಿಕ್ಕಿವೆ. ಇವುಗಳಲ್ಲಿ ಹಲವು ಅತ್ಯಂತ ಕಾವ್ಯಮಯವಾಗಿವೆ. ಒಂದೆರಡನ್ನು ಉದಾಹರಣೆಯಾಗಿ ತೆಗೆದುಕೊಂಡು ನೋಡಬಹುದು. ಕ್ರಿ.ಶ. ೭೦೦ರಲ್ಲಿ ಹುಟ್ಟಿದ ಬಾದಾಮಿಯ ಶಾಸನ ಇದು:

ಸಾಧುಗೆ ಸಾಧು ಮಾಧುರ್ಯ್ಯಂಗೆ ಮಾಧುರ್ಯ್ಯಂ
ಬಾಧಿಪ್ಪ ಕಲಿಗೆ ಕಲಿಯುಗವಿಪರೀತನ್
ಮಾಧವನೀತನ್ಪೆಱನಲ್ಲ
ಒಳ್ಳಿತ್ತ ಕೆಯ್ವೊರಾರ್ ಪೊಲ್ಲ ದುಮದಱಿನ್ತೆ

ಬಲ್ಲಿತ್ತು ಕಲಿಗೆ ವಿಪರೀತಾ ಪುರಾಕೃತ
ಮಿಲ್ಲಿ ಸಂಧಿಕ್ಕುಮದು ಬಂದು
ಕಟ್ಟಿದ ಸಿಂಘಮನ್ ಕೆಟ್ಟೊಡೇನೆಮಗೆನ್ದು
ಬಿಟ್ಟವೊಲ್ ಕಲಿಗೆ ವಿಪರೀತಂಗಹಿತರ್ಕ್ಕಳ್
ಕೆಟ್ಟರ್ ಮೇಣ್ ಸತ್ತರವಿಚಾರಂ

ಭಾವ ಭಾಷೆಗಳ ವಿದ್ಯುದಾಲಿಂಗನದಿಂದ ಉದಿಸಿದ ಈ ಭಾವಗೀತೆ 'ಕಲಿಯುಗ ವಿಪರೀತನ್' ಎಂಬ ಬಿರುದಿನಿಂದ ಬಾಳಿಹೋದ ಕನ್ನಡಕಲಿ ಕಪ್ಪೆ ಅರಭಟ್ಟನನ್ನು ಕುರಿತ ವೀರಗೀತೆ. ಆ ಕನ್ನಡಕಲಿ ಸಾಧುಗಳಿಗೆ ಸಾಧು, ಗೆಳೆಯರಿಗೆ ಗೆಳೆಯ, ಆದರೆ ಹಿಂಸೆ ಪಡಿಸಲೆಂದು ಬಂದವರಿಗೆ ಮಾತ್ರ ಸಾಕ್ಷಾತ್ ಮಾಧವನಂತೆ ಭಯಂಕರ, ಒಳ್ಳಿತನ್ನು ಮಾಡಿದವರಿಗೆ ಒಳ್ಳಿತನ್ನೂ, ಕೆಡುಕು ಮಾಡಿದವರಿಗೆ ಕೆಟ್ಟುದನ್ನೂ ಮಾಡುವುದರಲ್ಲಿ ಈತ ಪುರಾಕೃತ ಕರ್ಮದಂತೆ ಇದ್ದಾನೆ. ಕಟ್ಟಿದ ಸಿಂಹವನ್ನು ಬಿಚ್ಚಿದರೆ ಏನಂತೆ ಎಂಬ ಎಗ್ಗರಂತೆ ಈ ಕಲಿಯುಗ ವಿಪರೀತನನ್ನು ಕಾಲ್ಕೆದರಿ ಕೆಣಕಿದವರು ಕೆಡುತ್ತಾರೆ, ಸತ್ತು ಹೋಗುತ್ತಾರೆ. ಅಚ್ಚ ಕನ್ನಡದ ತ್ರಿಪದಿಯ ಛಂದಸ್ಸಿನಲ್ಲಿರುವ ಈ ಗೀತೆಯು ಆ ವೀರಗನ್ನಡಿಗನನ್ನು ಕಣ್ಣಿಗೆ ಕಟ್ಟುವಷ್ಟು ಸತ್ವಯುಕ್ತವಾಗಿದೆ, ಸ್ವಾಭಾವಿಕವಾಗಿದೆ. ಸುಮಾರು ಇದೇ ಕಾಲದಲ್ಲಿಯೇ ಹುಟ್ಟಿದ ಶ್ರವಣಬೆಳಗೊಳದ ಈ ಶಾಸನವನ್ನು ನೋಡಿ:

ಸುರಚಾಪಂಬೋಲೆ ವಿದ್ಯುಲ್ಲತೆಗಳ ತೆಱವೊಲ್ ಮಂಜುವೊಲ್ ತೋಱಿ ಬೇಗಂ
ಪಿರಿಗುಂ ಶ್ರೀ ರೂಪಲೀಲಾಧನವಿಭವ ಮಹಾರಾಶಿಗಳ್ ನಿಲ್ಲವಾರ್ಗ್ಗಂ
ಪರಮಾರ್ತ್ಥಂ ಮೆಚ್ಚಿ ನಾನೀ ಧರಣಿಯುಳಿರವಾನೆನು ಸನ್ಯಾಸನಂಗೆ
ಯ್ದೆರುಸತ್ವನ್ ನಂದಿಸೇನಪ್ರವರ ಮುನಿವರನ್ ದೇವಲೋಕಕ್ಕೆ ಸಂದಾನ್ ॥

ಬಾದಾಮಿಯ ಶಾಸನ ವೀರಗೀತೆಯಾದರೆ, ಇದು ವೈರಾಗ್ಯಗೀತೆ. 'ಇಹಲೋಕದ ಭೋಗಭಾಗ್ಯಗಳು ಕಾಮನ ಬಿಲ್ಲಿನಂತೆ, ಮಿಂಚಿನ ಬಳ್ಳಿಯಂತೆ, ಮಂಜಿನಂತೆ ಅತಿ ಚಂಚಲವಾದವು; ಸ್ಥಿರವಾಗಿ ಯಾರಲ್ಲಿಯೂ ನಿಲ್ಲವು. ಈ ಅಸ್ಥಿರವಾದ ಸುಖವನ್ನು ನಾನು ಮೆಚ್ಚುವುದಿಲ್ಲ. ಈ ಜಗತ್ತಿನ ಸಹವಾಸ ನನಗೆ ಸಾಕು – ಎಂದು ಸನ್ಯಾಸವನ್ನು ಸ್ವೀಕರಿಸಿ, ಸತ್ವಶಾಲಿಯಾದ ನಂದಿಸೇನಮುನಿಯು ದೇವಲೋಕಕ್ಕೆ ಹೊರಟುಹೋದನು. 'ಈ ಮಾತುಗಳ ಮೋಡಿ, ಜೋಡಣೆ ಕವಿಯಲ್ಲದವನ ಲೇಖನಿಯಿಂದ ಬರುವುದು ಹೇಗೆ ಸಾಧ್ಯ? ಇಂತಹ ಕವಿಹೃದಯವಿರುವವನು ಕಾವ್ಯವನ್ನೂ ಬರೆದಿರಬಹುದೆಂದು ಊಹಿಸಿದರೆ ಏನು ತಪ್ಪು? ಕಾವ್ಯಗಳನ್ನು ಬರೆದಿರುವ ಕೆಲವು ಕವಿಗಳು ಶಾಸನಗಳನ್ನೂ ಬರೆದಿರುವುದು ನಮಗೆ ಗೊತ್ತಿದೆ; ಶಾಸನಗಳನ್ನು ಬರೆದಿರುವವರಲ್ಲಿ ಕೆಲವರು ಕಾವ್ಯಗಳನ್ನೂ ಬರೆದಿರಬಹುದು. ಅವು ಕಾಲಪುರುಷನ ಗರ್ಭವನ್ನು ಸೇರಿ ಕರಗಿಯೇ ಹೋಗಿವೆಯೊ, ಅಥವಾ ಅಜ್ಞಾತವಾಸವನ್ನು ಅನುಭವಿಸುತ್ತಾ ಕುಳಿತಿವೆಯೊ !

೨. ಕನ್ನಡ ಸಾಹಿತ್ಯ ಚರಿತ್ರೆಯ ವಿಭಾಗಕ್ರಮ

ಕನ್ನಡ ಸಾಹಿತ್ಯದ ಇತಿಹಾಸ ಸಹಸ್ರ ವರ್ಷಗಳಿಗಿಂತಲೂ ಹೆಚ್ಚು ವಿಸ್ತಾರವಾಗಿದೆ. ಸಹಸ್ರಾರು ಕವಿಗಳು ತಮ್ಮ ಕೃತಿಗಳಿಂದ ನಮ್ಮ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ. ಈ ಕೃತಿಗಳು ವಸ್ತು, ರೀತಿಗಳಲ್ಲಿ ವಿಪುಲವಾದ ವೈವಿಧ್ಯತೆಯಿಂದ ಕೂಡಿವೆ. ಆದ್ದರಿಂದ ಈ ಸಾಹಿತ್ಯರಾಶಿಯನ್ನು ಯಾವುದಾದರೊಂದು ಬಗೆಯ ವಿಭಾಗಕ್ಕೆ ಒಳಪಡಿಸಿ, ಅದರ ಸ್ವರೂಪವನ್ನು ಅರ್ಥಮಾಡಿಕೊಳ್ಳುವುದು ಅನಿವಾರ್ಯವಾಗಿದೆ. ಆದರೆ ಹಾಗೆ ವಿಭಾಗ ಮಾಡುವುದು ಅಷ್ಟು ಸುಲಭವಾದ ಕಾರ್ಯವಲ್ಲ;

ಹೇಗೆ ವಿಭಾಗ ಮಾಡಿದರೂ ಅದರಲ್ಲಿ ಒಂದೆರಡು ಲೋಪದೋಷಗಳು ಎದ್ದು ಕಾಣುತ್ತವೆ. ಆದ್ದರಿಂದ ನಮಗೆ ಸಮ್ಮತವೆಂದು ತೋರಿದ ರೀತಿಯಲ್ಲಿ ನಾವು ವಿಭಾಗ ಮಾಡಿಕೊಳ್ಳುವ ಮುನ್ನ, ನಮಗೂ ಪೂರ್ವದಲ್ಲಿ ಯಾವ ವಿಭಾಗಕ್ರಮವನ್ನು ಅನುಸರಿಸಿರುವರೆಂಬುದನ್ನೂ ಅದರಲ್ಲಿರುವ ಲೋಪದೋಷಗಳೇನೆಂಬುದನ್ನೂ ಸ್ವಲ್ಪ ಪರಿಶೀಲಿಸೋಣ:

೧. ಕನ್ನಡ ಸಾಹಿತ್ಯ ಚರಿತ್ರೆಗೆ ಓಂಕಾರವನ್ನು ಬರೆದವರು ದಿವಂಗತ ಆರ್. ನರಸಿಂಹಾಚಾರ್ಯರು. ಅವರ ಕನ್ನಡ ಕವಿಚರಿತೆಯ ಮೂರು ಸಂಪುಟಗಳು ಕನ್ನಡ ಸಾಹಿತ್ಯ ಚರಿತ್ರೆಯನ್ನು ಬರೆಯ ಹೊರಡುವವರಿಗೆ ಅನಿವಾರ್ಯವಾದ ಆಧಾರಗ್ರಂಥಗಳು. ಅವುಗಳ ಮೊದಲ ಸಂಪುಟದಲ್ಲಿ ಕನ್ನಡ ಸಾಹಿತ್ಯವನ್ನು ಮೂರು ವಿಭಾಗಗಳಾಗಿ ವಿಂಗಡಿಸಲಾಗಿದೆ–

(ಅ) ಜೈನಯುಗ–ಕನ್ನಡ ಸಾಹಿತ್ಯದ ಆರಂಭದೆಸೆಯಿಂದ ೧೨ನೆಯ ಶತಮಾನದ ಮಧ್ಯದವರೆಗೆ.

(ಆ) ವೀರಶೈವಯುಗ–೧೨ನೆಯ ಶತಮಾನದ ಮಧ್ಯದಿಂದ ೧೫ನೆಯ ಶತಮಾನದವರೆಗೆ.

(ಇ) ಬ್ರಾಹ್ಮಣಯುಗ–೧೫ನೆಯ ಶತಮಾನದ ಮಧ್ಯದಿಂದ ೧೯ನೆಯ ಶತಮಾನದವರೆಗೆ.

ಈ ಬಗೆಯಾದ ವಿಭಾಗ ಸರ್ವಸಮ್ಮತವಲ್ಲವೆಂಬುದನ್ನು ಶ್ರೀಮಾನ್ ನರಸಿಂಹಾಚಾರ್ಯರು ತಿಳಿಯದೆ ಇರಲಿಲ್ಲ. 'ಬೇರೆ ಬೇರೆ ಕಾಲದಲ್ಲಿ ಬೇರೆ ಬೇರೆ ಮತದ ಕವಿಗಳು ವಿಶೇಷವಾಗಿ ಗ್ರಂಥರಚನೆ ಮಾಡಿದ್ದಾರೆ–ಎಂಬ ಅಂಶವನ್ನು ಸ್ಥೂಲವಾಗಿ ತಿಳಿಯುವುದಕ್ಕೋಸ್ಕರ ಈ ರೀತಿಯಾಗಿ ಕಾಲವಿಭಾಗ ಮಾಡಿದೆ. ಇದರಿಂದ ಜೈನರ ಕಾಲದಲ್ಲಿ ಶೈವ–ವೈಷ್ಣವ ಗ್ರಂಥಗಳೂ, ಶೈವರ ಕಾಲದಲ್ಲಿ ವೈಷ್ಣವ–ಜೈನ ಗ್ರಂಥಗಳೂ, ವೈಷ್ಣವರ ಕಾಲದಲ್ಲಿ ಶೈವ–ಜೈನ ಗ್ರಂಥಗಳೂ ಹುಟ್ಟಲಿಲ್ಲವೆಂದು ತಿಳಿಯಕೂಡದು' ಎಂದು ಹೇಳಿಕೊಂಡಿದ್ದಾರೆ.

೨. ಇಂಗ್ಲಿಷಿನಲ್ಲಿ ಕನ್ನಡ ಸಾಹಿತ್ಯ ಚರಿತ್ರೆಯನ್ನು ಸಂಗ್ರಹವಾಗಿ ಬರೆದಿರುವ ಶ್ರೀಮಾನ್ ಇ. ಪಿ. ರೈಸ್‌ರವರು ಶ್ರೀಮಾನ್ ಆರ್. ನರಸಿಂಹಾಚಾರ್ಯರ ವಿಭಾಗ ಕ್ರಮವನ್ನೇ ಸ್ವೀಕರಿಸಿದ್ದಾರೆ. ಆದರೆ ಕನ್ನಡ ಸಾಹಿತ್ಯವನ್ನು ಒಂದು ಜೀವನದಿಗೆ ಹೋಲಿಸಿ, ಆ ನದಿಗೆ ಮೊದಲು ಜೈನ ಪ್ರವಾಹವೂ, ಆಮೇಲೆ ಕ್ರಮವಾಗಿ ವೀರಶೈವ ಮತ್ತು ವೈಷ್ಣವ ಪ್ರವಾಹಗಳೂ ಅದಕ್ಕೆ ಹರಿದುಹೋಗಿ ಸೇರಿವೆಯೆಂದು ಹೇಳುತ್ತಾರೆ. ಈ ಸಾಹಿತ್ಯ ವಿಭಾಗಗಳು ಧರ್ಮದ ದೃಷ್ಟಿಯಿಂದ ಮಾತ್ರವಲ್ಲದೆ ಛಂದಸ್ಸಿನ ದೃಷ್ಟಿಯಿಂದಲೂ ಬೇರೆಬೇರೆಯಾಗಿವೆಯೆಂದೂ, ಜೈನಯುಗದ ಗ್ರಂಥಗಳೆಲ್ಲವೂ ಸಾಮಾನ್ಯವಾಗಿ ಚಂಪೂರೂಪದಲ್ಲಿಯೂ, ವೀರಶೈವಯುಗದ ಕೃತಿಗಳು ಗದ್ಯ, ಷಟ್ಪದಿ, ತ್ರಿಪದಿ, ರಗಳೆಗಳಲ್ಲಿಯೂ, ಬ್ರಾಹ್ಮಣಯುಗದ ಕೃತಿಗಳಲ್ಲಿ ದೀರ್ಘವಾದುವು ಷಟ್ಪದಿಯಲ್ಲಿಯೂ ಮತ್ತು ಚಿಕ್ಕವು ಕೀರ್ತನರೂಪದಲ್ಲಿಯೂ ಇರುವುದೆಂದು ಹೇಳುತ್ತಾರೆ.

೩. ರೆವರೆಂಡ್ ಎಫ್. ಕಿಟ್ಟೆಲ್‌ರವರು ತಮ್ಮ 'ಛಂದೋಬುಧಿ'ಯ ವಿಸ್ತೃತ ಪ್ರಸ್ತಾವನೆಯಲ್ಲಿ ಕನ್ನಡ ಸಾಹಿತ್ಯವನ್ನು ಮತಧರ್ಮದ ದೃಷ್ಟಿಯಿಂದಲೇ ವಿವೇಚಿಸುವರಾದರೂ, ತಮ್ಮ ಕನ್ನಡ–ಇಂಗ್ಲಿಷ್ ಕೋಶದ ಮುನ್ನುಡಿಯಲ್ಲಿ ಅದನ್ನು ಹಳಗನ್ನಡ, ನಡುಗನ್ನಡ, ಹೊಸಗನ್ನಡವೆಂದು ಮೂರು ಭಾಗಗಳಾಗಿ ವಿಂಗಡಿಸಿದ್ದಾರೆ. ಹತ್ತನೆಯ ಶತಮಾನದಿಂದ ಹದಿಮೂರನೆಯ ಶತಮಾನದ ಮಧ್ಯದವರೆಗೆ ಜೈನರು ಹಳಗನ್ನಡದಲ್ಲಿ ಚಂಪೂಕಾವ್ಯಗಳನ್ನು ಬರೆದರು. ಅಲ್ಲಿಂದ ಮುಂದಕ್ಕೆ ಹದಿನೈದನೆಯ ಶತಮಾನದ ಕೊನೆಯವರೆಗೆ ವೀರಶೈವರು ನಡುಗನ್ನಡದಲ್ಲಿ ಕಾವ್ಯಸೃಷ್ಟಿಯನ್ನು ಕೈಕೊಂಡರು. ಅಲ್ಲಿಂದ ಮುಂದಕ್ಕೂ ಹಳಗನ್ನಡ, ನಡುಗನ್ನಡಗಳಲ್ಲಿ ಕಾವ್ಯ ಸೃಷ್ಟಿಯಾಗುತ್ತಿತ್ತಾದರೂ, ಹದಿನಾರನೆಯ ಶತಮಾನದಿಂದ ಮುಂದಕ್ಕೆ– ಅದರಲ್ಲಿಯೂ ಮುಖ್ಯವಾಗಿ ವೈಷ್ಣವರ ಕೀರ್ತನೆಗಳಲ್ಲಿ

ಭಾಷೆ ಹೊಸಗನ್ನಡವಾಗುತ್ತಾ ಹೋಯಿತೆಂದು ಹೇಳುತ್ತಾರೆ. ಆಧುನಿಕ ಹೊಸಗನ್ನಡವನ್ನು ಅವರು ಗದ್ಯ ಸಾಹಿತ್ಯದ ಭಾಷೆ, ಸಂಭಾಷಣಾ ಭಾಷೆ ಎಂದು ಎರಡು ಭಾಗ ಮಾಡಿ, ಗದ್ಯಸಾಹಿತ್ಯದಲ್ಲಿ ಕಥೆಗಳು, ಶಾಲಾ ಪಠ್ಯ ಪುಸ್ತಕಗಳು, ಪತ್ರಗಳು ಇವುಗಳನ್ನು ಹೆಸರಿಸುತ್ತಾರೆ.

೪. ಶ್ರೀ ಎಂ.ಎ. ರಾಮಾನುಜಯ್ಯಂಗಾರ್ಯರು 'ರನ್ನಕವಿ ಪ್ರಶಸ್ತಿ'ಯ 'ರನ್ನನ ಯುಗ' ಎಂಬ ತಮ್ಮ ಲೇಖನದಲ್ಲಿ ಮೂಲಗನ್ನಡ ಕಾಲ (ಕ್ರಿ.ಶ. ೭೫೦ರ ವರೆಗೆ), ಹಳಗನ್ನಡ ಕಾಲ (ಕ್ರಿ.ಶ. ೭೫೦ ರಿಂದ ೧೧೫೦ರ ವರೆಗೆ), ಮಧ್ಯ ಕನ್ನಡ ಕಾಲ (ಕ್ರಿ.ಶ. ೧೧೫೦ರಿಂದ ೧೫೦೦ ರ ವರೆಗೆ), ಹೊಸಗನ್ನಡ ಕಾಲ (ಕ್ರಿ.ಶ. ೧೫೦೦ ರಿಂದ ೧೮೫೦ರ ವರೆಗೆ) ಮತ್ತು ನವಗನ್ನಡ ಕಾಲ (ಕ್ರಿ.ಶ. ೧೮೫೦ ರಿಂದ ಮುಂದಕ್ಕೆ) ಎಂದು ಐದು ಭಾಗಗಳಾಗಿ ವಿಂಗಡಿಸುತ್ತಾರೆ.

೫. ಕನ್ನಡವಕ್ಕಿ ಎಂಬ ಕಾವ್ಯಾನಾಮದಿಂದ ಶ್ರೀ ಟಿ.ಟಿ. ಶರ್ಮರು ಕರ್ಣಾಟಕದ ಕೈಪಿಡಿಯಲ್ಲಿನ 'ಕರ್ಣಾಟಕ ಸಾಹಿತ್ಯ' ಎಂಬ ತಮ್ಮ ಲೇಖನದಲ್ಲಿ ಕನ್ನಡ ಸಾಹಿತ್ಯದ ಇತಿಹಾಸವನ್ನು ಕ್ಷಾತ್ರಯುಗ (ಕ್ರಿ.ಶ. ೧೦ರಿಂದ ೧೨ನೆಯ ಶತಮಾನದವರೆಗೆ), ಮತಪ್ರಚಾರಯುಗ (ಕ್ರಿ.ಶ. ೧೨ರಿಂದ ೧೬ನೆಯ ಶತಮಾನದವರೆಗೆ), ಸಾರ್ವಜನಿಕ ಯುಗ (೧೬ನೆಯ ಶತಮಾನದಿಂದ ೧೯ನೆಯ ಶತಮಾನದವರೆಗೆ), ಆಧುನಿಕ ಯುಗ (೧೯ನೆಯ ಶತಮಾನದಿಂದ ಮುಂದಕ್ಕೆ) ಎಂದು ನಾಲ್ಕು ಭಾಗಗಳಾಗಿ ವಿಂಗಡಿಸುತ್ತಾರೆ.

೬. ಮೈಸೂರು ವಿಶ್ವವಿದ್ಯಾನಿಲಯ ಪ್ರಚಾರ ಪುಸ್ತಕ ಮಾಲೆಯಲ್ಲಿ ಎಂಟನೆಯ ಕುಸುಮವಾಗಿ ಅರಳಿರುವ 'ಕನ್ನಡ ಸಾಹಿತ್ಯ'ದಲ್ಲಿ, ಅದರ ಕರ್ತೃಗಳಾದ ಶ್ರೀ ಕೆ. ವೆಂಕಟರಾಮಪ್ಪನವರು ಆರಂಭಕಾಲ, ಪಂಪಯುಗ, ಸ್ವತಂತ್ರಯುಗ, ಚಿಕ್ಕದೇವರಾಯರಕಾಲ, ಸಂಧಿಕಾಲ ಎಂದು ವಿಭಾಗಿಸಿದ್ದಾರೆ.

೭. ಆಧುನಿಕ ಕನ್ನಡಸಾಹಿತ್ಯದ ಪಿತಾಮಹರಾದ ಬಿ.ಎಂ.ಶ್ರೀ.ಯವರು ನಮ್ಮ ಸಾಹಿತ್ಯ ಚರಿತ್ರೆಯನ್ನು ಆರಂಭಕಾಲ (೧೦ನೆಯ ಶತಮಾನದವರೆಗೆ), ಮತ ಪ್ರಾಬಲ್ಯದ ಕಾಲ (೧೦ರಿಂದ ೧೬ನೆಯ ಶತಮಾನದವರೆಗೆ ಇದರಲ್ಲಿ ಜೈನಕವಿಗಳು ೧೦ರಿಂದ ೧೨ನೆಯ ಶತಮಾನ; ವೀರಶೈವ ಕವಿಗಳು ೧೨ರಿಂದ ೧೫ನೆಯ ಶತಮಾನ; ಬ್ರಾಹ್ಮಣ ಕವಿಗಳು : ೧೫ರಿಂದ ೧೬ನೆಯ ಶತಮಾನ – ಎಂದು ಮೂರು ಒಳಭೇದಗಳನ್ನು ಸೂಚಿಸಿದೆ) ಮತ್ತು ನವೀನಕಾಲ (೧೬ನೆಯ ಶತಮಾನದಿಂದ ಮುಂದಕ್ಕೆ) ಎಂದು ಮೂರು ಭಾಗಗಳಾಗಿ ವಿಭಾಗಿಸಿದ್ದಾರೆ.

೮. ಡಾ|| ರಂ. ಶ್ರೀ ಮುಗಳಿಯವರು ತಮ್ಮ 'ಕನ್ನಡ ಸಾಹಿತ್ಯ ಚರಿತ್ರೆ'ಯನ್ನು 'ಪಂಪಪೂರ್ವ ಯುಗ', 'ಪಂಪಯುಗ', 'ಬಸವಯುಗ', 'ಕುಮಾರವ್ಯಾಸ ಯುಗ' – ಎಂಬ ನಾಲ್ಕು ಭಾಗಗಳಾಗಿ ವಿಭಾಗಿಸಿದ್ದಾರೆ. ಮೇಲಿನ ವಿಭಾಗಗಳಲ್ಲಿ ಮತಧರ್ಮದ ಆಧಾರದಿಂದ ವಿಭಾಗಿಸುವುದೇ ನಮ್ಮ ಸಾಹಿತ್ಯೇತಿಹಾಸಕಾರರಲ್ಲಿ ಬಹುಜನಕ್ಕೆ ಸಮ್ಮತವಾಗಿರುವಂತೆ ಕಂಡುಬರುತ್ತದೆ, ನಿಜ. ಭರತಖಂಡದ ಇತರ ಸಾಹಿತ್ಯಗಳಂತೆ ಕನ್ನಡ ಸಾಹಿತ್ಯಕ್ಕೂ ಪ್ರೇರಕ, ಪ್ರಚೋದಕ, ಪ್ರಬೋಧಕ, ಪೋಷಕವಸ್ತು ಧರ್ಮವೇ. ಆದರೆ ಮತಧರ್ಮ ಸಾಹಿತ್ಯಗಳು ಒಂದೇ ಎಂಬ ನಿಲುವು ಆಧುನಿಕರಿಗೆ ಹಿಡಿಸುವುದಿಲ್ಲ. ಸಾಹಿತ್ಯದಲ್ಲಿ ನಾವು ಮೆಚ್ಚುವುದು ವಿಶ್ವಧರ್ಮವನ್ನೇ ಹೊರತು ಬೇರೆ ಬೇರೆ ಮತಧರ್ಮವನ್ನಲ್ಲ. ಮತಧರ್ಮ ನಮ್ಮನ್ನು ಒಂದು ಗೂಡಿಸುವುದಕ್ಕಿಂತ ವಿಭಜಿಸುವುದೇ ಹೆಚ್ಚು. ಅಲ್ಲದೆ, ಯಾವ ಒಂದು ಕಾಲದಲ್ಲಿಯೆ ತೆಗೆದುಕೊಂಡರೂ ಆಯಾ ಕಾಲದ ಒಂದೇ ಮತದವರು ಮಾತ್ರ ಕಾವ್ಯಸೃಷ್ಟಿಗೆ ಕೈ ಹಾಕಿರುವಂತೆಯೇನೂ ಕಂಡುಬರುವುದಿಲ್ಲ. ಆದ್ದರಿಂದ ನಮ್ಮ ಸಾಹಿತ್ಯದ ಇತಿಹಾಸವನ್ನು

ಮತಧರ್ಮದ ಆಧಾರದ ಮೇಲೆ ವಿಭಾಗಿಸ ಹೊರಡುವುದು ಆಧುನಿಕರ ದೃಷ್ಟಿಯಲ್ಲಿ ಸರ್ವಸಮ್ಮತವಾಗಲಾರದು.

ನಮ್ಮ ಸಾಹಿತ್ಯವನ್ನು ಚಂಪೂ, ಷಟ್ಪದಿ, ರಗಳೆ ಇತ್ಯಾದಿ ಸಾಹಿತ್ಯ ರೂಪ ಪ್ರಭೇದಗಳ ಅಥವಾ ಹಳಗನ್ನಡ, ನಡುಗನ್ನಡ, ಹೊಸಗನ್ನಡ, ಇತ್ಯಾದಿ ಭಾಷಾಪ್ರಭೇದಗಳ ಆಧಾರದಿಂದ ವಿಭಾಗಿಸ ಹೊರಡುವುದು ಸರ್ವಸತ್ಯವಾಗಲಾರದು. ೧೦-೧೨ ಶತಮಾನಗಳ ಚಂಪೂಯುಗವೊಂದನ್ನು ಬಿಟ್ಟರೆ, ಉಳಿದ ಎಲ್ಲ ಕಾಲಗಳಲ್ಲಿ ಎಲ್ಲ ರೂಪದ ಸಾಹಿತ್ಯವೂ ಸೃಷ್ಟಿಯಾಗುತ್ತಾ ಹೋಗಿದೆ. ಷಟ್ಪದಿ ಯುಗದಲ್ಲಿ ಚಂಪೂಕಾವ್ಯಗಳು ಸೃಷ್ಟಿಯಾಗಿವೆ. ನಡುಗನ್ನಡ, ಹೊಸಗನ್ನಡ ಕಾಲಗಳಲ್ಲಿಯೂ ಹಳಗನ್ನಡ ಕಾವ್ಯಗಳು ಸೃಷ್ಟಿಯಾಗಿವೆ. ಆದ್ದರಿಂದ ಛಂದಸ್ಸಿನ ಅಥವಾ ಭಾಷೆಯ ಪ್ರಭೇದಗಳ ಆಧಾರದಿಂದ ಸಾಹಿತ್ಯ ಚರಿತ್ರೆಯನ್ನು ವಿಭಾಗಿಸಹೊರಡುವಂತಿಲ್ಲ.

ಕನ್ನಡವಕ್ಕಿಯವರ ವಿಭಾಗಕ್ರಮದಲ್ಲಿ ಸಂಪ್ರದಾಯದಿಂದ ಭಿನ್ನವಾದ ನೂತನದೃಷ್ಟಿಯೊಂದು ಕಂಡುಬರುತ್ತದೆ. ಆದರೆ ಶ್ರೀ ರಂ.ಶ್ರೀ ಮುಗಳಿಯವರು ತಮ್ಮ 'ಕನ್ನಡ ಸಾಹಿತ್ಯ ಚರಿತ್ರೆ'ಯಲ್ಲಿ ಹೇಳಿರುವಂತೆ, ಕ್ಷಾತ್ರಯುಗದಲ್ಲಿ ''ವೀರರಸದಷ್ಟೆ ಶಾಂತರಸ ಈ ಯುಗದಲ್ಲಿ ತನಿಗೊಂಡಿದೆ, ಎರಡನೆಯದನ್ನು 'ಮತಪ್ರಚಾರಯುಗ' ಎಂದು ಕರೆದದ್ದರಲ್ಲಿ ಶುದ್ಧ ಸಾಹಿತ್ಯ ದೃಷ್ಟಿ ಎಲ್ಲಿದೆ ? ಮೂರನೆಯದಾದ 'ಸಾರ್ವಜನಿಕ ಯುಗ'ವೆಂಬ ಹೆಸರು ಅತಿವ್ಯಾಪ್ತಿ ದೋಷದಿಂದ ಕೂಡಿದೆ. ಎರಡನೆಯ ಯುಗದಿಂದಲೇ ಸಾಹಿತ್ಯಕ್ಕೂ ಜನಸಾಮಾನ್ಯಕ್ಕೂ ನೇರವಾದ ಸಂಬಂಧವುಂಟಾಗಿದೆ''. ಆದ್ದರಿಂದ ಅವರ ವಿಭಾಗಕ್ರಮವನ್ನೂ ಸ್ವೀಕರಿಸಲಾಗುವುದಿಲ್ಲ.

ಶ್ರೀ ರಂ.ಶ್ರೀ. ಮುಗಳಿಯವರ ವಿಭಾಗಕ್ರಮ ನಿಜವಾಗಿಯೂ ಸ್ವೀಕಾರಾರ್ಹವಾದುದು. ಆದರೆ ಅವರು 'ಬಸವಯುಗ'ವೆಂದು ಕರೆದಿರುವುದು ಸರಿಯೆ ? ಬಸವಣ್ಣನವರನ್ನು ಕೇವಲ ಕವಿಯೆಂದೂ, ಸಾಹಿತಿಯೆಂದೂ ಸ್ವೀಕರಿಸುವುದು ನಮಗೆ ಒಪ್ಪಿಗೆಯಾಗುತ್ತಿಲ್ಲ. ಆತನೊಬ್ಬ ದೊಡ್ಡ ಸಂತ. 'ನೂರು ಕಾವ್ಯದ ಸಾರ ಒಂದು ಸಾಕ್ಷಾತ್ಕಾರ'. ಆದ್ದರಿಂದ 'ಸಂತನಾಗಲು ಬಲ್ಲ ಅವನು, ಸುಧೀರಮತಿ, ಕವಿಯಾಗಲೊಲ್ಲ'. ಆತನೂ ಇತರ ವಚನಕಾರರೂ ಮುಂದಿನ ಕವಿಗಳಿಗೆಲ್ಲ ಪ್ರಚೋದನೆ ಪ್ರೇರಣೆಗಳನ್ನು ನೀಡಿರುವರೆಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಆದರೆ ದಾರ್ಶನಿಕರಾದ ಅವರನ್ನು ಕೇವಲ ಕವಿಗಳ ಸಾಲಿನಲ್ಲಿ ಕುಳ್ಳಿರಿಸಲು ನಾವು ಒಪ್ಪುವುದಿಲ್ಲ. ಆದ್ದರಿಂದ ನಾವು ಆ ಕಾಲಮಾನವನ್ನು 'ಹರಿಹರಯುಗ' ಎಂದು ಕರೆದಿದ್ದೇವೆ. 'ಪಂಪಪೂರ್ವಯುಗ', 'ಪಂಪಯುಗ', 'ಹರಿಹರಯುಗ', 'ಕುಮಾರವ್ಯಾಸಯುಗ' ಎಂಬುದು ನಮ್ಮ ವಿಭಾಗ ಕ್ರಮ.

೩. ಪಂಪಪೂರ್ವಯುಗ

ಈಗ ನಮಗೆ ಸಮಗ್ರವಾಗಿ ಸಿಕ್ಕಿರುವ ಮೊಟ್ಟಮೊದಲ ಕನ್ನಡ ಗ್ರಂಥವೆಂದರೆ 'ಕವಿರಾಜಮಾರ್ಗ'. ಇದೊಂದು ಮೂರು ಪರಿಚ್ಛೇದಗಳ ಅಲಂಕಾರ ಗ್ರಂಥ. ಪ್ರತಿ ಪರಿಚ್ಛೇದದ ಕೊನೆಯಲ್ಲಿ 'ನೃಪತುಂಗ ದೇವಾನುಮತಮಪ್ಪ ಕವಿರಾಜಮಾರ್ಗದೊಳ್' ಎಂದು ಹೇಳುವುದರಿಂದ ಇದು ರಾಷ್ಟ್ರಕೂಟ ದೊರೆ ನೃಪತುಂಗ ಅಮೋಘವರ್ಷನ (ಕ್ರಿ.ಶ. ೮೧೪-೮೭೭) ಕಾಲದಲ್ಲಿ ಹುಟ್ಟಿದುದೆಂದು ನಿರ್ಧರಿಸಲಾಗಿದೆ. ಈ ಗ್ರಂಥದ ಕರ್ತೃತ್ವ ವಿಚಾರದಲ್ಲಿ ಸಾಕಷ್ಟು ಚರ್ಚೆ ನಡೆದು, ಇದೀಗ ನೃಪತುಂಗರಾಜನ ಆಸ್ಥಾನಕವಿಯಾದ ಶ್ರೀ ವಿಜಯನಿಂದ ರಚಿತವಾದುದೆಂದು ನಿಶ್ಚಯಿಸಲಾಗಿದೆ.

'ಕವಿರಾಜಮಾರ್ಗ'ವು ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ಬಹು ಮುಖ್ಯವಾದ ಒಂದು ಮೈಲಿಗಲ್ಲು. ಕವಿರಾಜಮಾರ್ಗಕರ್ತೃವು ಕನ್ನಡನಾಡು, ನುಡಿ, ಸಾಹಿತ್ಯ, ಸಂಸ್ಕೃತಿಗಳನ್ನು ಕುರಿತು ಹೇಳಿರುವ ಮಾತುಗಳು ನಮ್ಮ ಆದರ, ಗೌರವ, ಪ್ರೇಮ, ಹೆಮ್ಮೆಗಳಿಗೆ ಕಾರಣವಾಗಿವೆ. 'ಕಾವೇರಿಯಿಂದಮಾ

ಗೋದಾವರಿವರಮಿರ್ಪ ನಾಡದಾ ಕನ್ನಡದೊಳ್ ಭಾವಿಸಿದ ಜನಪದಂ' ಎಂಬ ಆತನ ಹೇಳಿಕೆಯಿಂದ, ಉತ್ತರಕ್ಕೆ ಗೋದಾವರಿಯೂ, ದಕ್ಷಿಣಕ್ಕೆ ಕಾವೇರಿಯೂ ಕನ್ನಡನಾಡಿನ ಗಡಿಗಳಾಗಿದ್ದವೆಂದು ತಿಳಿದುಬರುತ್ತದೆ. ಈ ಸಾಮ್ರಾಜ್ಯದಲ್ಲಿ ಕಿಸವೊಳಲು, ಕೊಪಣನಗರ, ಪುಲಿಗೆರೆ, ಒಕ್ಕುಂದ–ಎಂಬ ನಾಲ್ಕು ನಗರಗಳ ಮಧ್ಯಪ್ರದೇಶವು 'ಕನ್ನಡದ ತಿರುಳ್' ಎನಿಸಿತ್ತಂತೆ. ಈ ನಾಲ್ಕು ನಗರಗಳೂ ಈಗ ಕ್ರಮವಾಗಿ ಪಟ್ಟದಕಲ್ಲು, ಕೊಪ್ಪಳ, ಲಕ್ಷ್ಮೀಶ್ವರ, ಒಕ್ಕುಂದ ಎಂಬ ಹೆಸರುಗಳಿಂದ ಉಳಿದುಕೊಂಡುಬಂದಿವೆ. ಈ ನಾಲ್ಕು ನಗರಗಳೂ ಕನ್ನಡತಾಯಿ ಭುವನೇಶ್ವರಿಗೆ, ನಾಲ್ಕು ದಿಕ್ಕುಗಳಲ್ಲಿಯೂ ಹಚ್ಚಿಟ್ಟಿರುವ ನಂದಾದೀವಿಗೆಯಂತೆ ತೊಳಗಿ ಬೆಳಗುತ್ತಿವೆ.

ಕನ್ನಡ ಜನರನ್ನು ಕುರಿತು ಕವಿರಾಜಮಾರ್ಗದಲ್ಲಿ ಬರುವ ಈ ಮಾತುಗಳು ರೋಮಾಂಚಕಾರಕ ವಾಗಿವೆ.

ಪದನಱಿದುನುಡಿಯಲುಂನುಡಿ । ದುದನಱಿದಾರಯಲುಮಾರ್ಪರಾ ನಾಡವರ್ಗಳ್
ಚದುರರ್ ನಿಜದಿಂ ಕುಱಿತೋ । ದದೆಯುಂ ಕಾವ್ಯಪ್ರಯೋಗ ಪರಿಣತಮತಿಗಳ್

ನಮ್ಮ ಜನ ಹದವರಿತು ಮಾತನಾಡಬಲ್ಲರು, ಇತರರು ನುಡಿದುದನ್ನು ಅರ್ಥಮಾಡಿಕೊಂಡು ವಿಚಾರವಿಮರ್ಶೆ ಮಾಡಬಲ್ಲರು. ಸ್ವಭಾವಸಹಜವಾಗಿಯೇ ಜಾಣರಾದವರು; ಕವಿಕೃತಿಗಳನ್ನು ವ್ಯಾಸಂಗ ಮಾಡದಿದ್ದರೂ ಕಾವ್ಯಪ್ರಯೋಗಗಳಲ್ಲಿ ಪರಿಣತಮತಿಗಳಾದವರು.

ಕುಱಿತವರಲ್ಲದೆ ಮತ್ತಂ । ಪೆಱರುಂ ತಂತಮ್ಮ ನುಡಿಯೊಳೆಲ್ಲರ್ ಜಾಣರ್
ಕಿಱುವಕ್ಕಳುಮಾ ಮೂಗರು ಮಱಿಪಲ್ಕಱಿವರ್ ವಿವೇಕಮಂ ಮಾತುಗಳಂ

ಕಾವ್ಯಗಳಲ್ಲಿ ಪಾರಂಗತರಲ್ಲದಿದ್ದರೂ ತಮ್ಮ ಮಾತುಗಳಲ್ಲಿ ತುಂಬ ಜಾಣರಾಗಿದ್ದರು. ಎಳೆಯ ಮಕ್ಕಳೂ, ಮೂಕರೂ ಸಹ ಇತರರು ಹೇಳಿದ ವಿವೇಕವನ್ನೂ (ಗಹನ ವಿಚಾರಗಳನ್ನು) ಮಾತುಗಳನ್ನು ಅರ್ಥಮಾಡಿಕೊಳ್ಳುತ್ತಿದ್ದರು. ಎಂದಮೇಲೆ ಹೇಳುವವರೂ ಕೇಳುವವರೂ ಇಬ್ಬರೂ ಕುಶಲಮತಿ ಗಳಾಗಿದ್ದಿರಬೇಕು. ಅಹುದು ಕವಿರಾಜಮಾರ್ಗಕರ್ತೃ ಕನ್ನಡಕ್ಕೆ ನಾಡವರು ಒವಜರು ಎಂದು ಹೇಳುತ್ತಾನೆ.

ಕವಿರಾಜಮಾರ್ಗವು ತನ್ನ ಕಾಲದ ಭಾಷಾಸಾಹಿತ್ಯಗಳನ್ನು ಕುರಿತು ಅಮೂಲ್ಯವಾದ ವಿಷಯಗಳನ್ನು ತಿಳಿಸುತ್ತದೆ. ಕನ್ನಡದಲ್ಲಿ 'ಚತ್ತಾಣ', 'ಬೆದಂಡೆ' ಎಂಬ ಎರಡು ಕಾವ್ಯರೂಪಗಳನ್ನು ಹೆಸರಿಸಿ, ಕಂದಗಳು ಹಲವು ಬಂದು, ಅವುಗಳ ನಡುನಡುವೆ ಸುಂದರ ಕನ್ನಡವೃತ್ತಗಳಾದ ಅಕ್ಕರ, ಚೌಪದಿ, ಗೀತಿಕೆ, ತ್ರಿಪದಿಗಳು ಅಂದಂಬೆತ್ತೆಸೆಯೆ 'ಚತ್ತಾಣ'ವೆಂದೂ ಕಂದಗಳೂ ವೃತ್ತಗಳೂ 'ಬೆಡಂಗೊಂದಿ' ಸುಂದರ ರೂಪಿನಿಂದ ಬಂದರೆ ಅದು 'ಬೆದಂಡೆ'ಯೆಂದೂ ಹೇಳುತ್ತಾನೆ. ಕವಿರಾಜಮಾರ್ಗಕರ್ತೃ ಬಹು ಪ್ರತಿಭಾಶಾಲಿ; ಶಾಸ್ತ್ರ ವಿಷಯಗಳನ್ನು ಕೂಡ ಆತನು ಹೃದಯಂಗಮವಾಗಿ ನಿರೂಪಿಸುತ್ತಾನೆ. ಕನ್ನಡದೇಶಿಯಲ್ಲಿ ಅನೇಕ ಬಗೆಗಳಿವೆಯಂತೆ, ಅವುಗಳನ್ನು ತಿಳಿಸಲು (ಸಹಸ್ರಮುಖದ) ಆದಿಶೇಷನಿಗೂ ಬೇಸರವಾಗುತ್ತದೆಯಂತೆ ! ಸಂಸ್ಕೃತ ಅವ್ಯಯಗಳನ್ನು ಕನ್ನಡ ಶಬ್ದಗಳಿಗೆ ಅಂಟುಹಾಕುವುದರಿಂದ 'ಒತ್ತುಂಗರಡೆಯ ಮದ್ದಳೆಯ ಜರ್ಝರ ಧ್ವನಿಗಳವೊಲ್ ಪರುಷತರಮಕ್ಕುಂ' ಹೇಳಿ, ಅಂತಹ ಪ್ರಯೋಗಗಳನ್ನು ಪ್ರತಿಭಟಿಸುತ್ತಾನೆ. ಅರಿಸಮಾಸ ಪ್ರಯೋಗವನ್ನು ಅಲ್ಲಗಳೆಯುತ್ತಾ 'ಮರಗುವ ಪಾಲ್ಗಳೆಯ ಪನಿಗಳಂ ಬೆರಸಿದವೊಲ್ ವಿರಸಂ' (ಕುದಿಯುವ ಹಾಲಿಗೆ ಮಜ್ಜಿಗೆಯ ತೊಟ್ಟುಗಳನ್ನು ಬೆರಸಿದ ಹಾಗೆ ಹೊಲಸು) ಎನ್ನುತ್ತಾನೆ. ಶಬ್ದಸಾರೂಪ್ಯವಿಲ್ಲದ ಬರಹ 'ನೆಲ್ಲುಂ ಮೊಸರುಂಗುಡಿದಂತೆ'; ಅರ್ಥಸಾರೂಪ್ಯವಿಲ್ಲದ ಬರಹ 'ಮುತ್ತುಂ ಮೆಳಸುಂ ಕೋದಂತೆ' ಅಂತ್ಯ ಲಘುವುಳ್ಳ ಪದದೊಡನೆ ಒತ್ತಕ್ಷರ ಸೇರಿಸಿದರೆ 'ಕೂಸಿನ ತಲೆಯೊಳ್ ಬಿಣ್ಪೊರೆಯನಿಟ್ಟವೋಲಸುಖಕರಂ'. ಇಂತಹ ವರ್ಣನೆಯನ್ನು ಕಂಡಾಗ

'ಕವಿರಾಜಮಾರ್ಗ'ವು ಶಾಸ್ತ್ರ ಗ್ರಂಥವಾದರೂ ಅದರ ಕರ್ತೃ ಕವಿಹೃದಯ ಇದ್ದನೆಂಬುದು ವ್ಯಕ್ತವಾಗುತ್ತದೆ. ಇಷ್ಟೆಲ್ಲ ಹೇಳಿದಮೇಲೆ, ಈ ಗ್ರಂಥದಲ್ಲಿ, ಈ ವಿಷಯನಿರೂಪಣಾ ಸ್ವಾತಂತ್ರ್ಯದ ದೃಷ್ಟಿಯಿಂದ ಹೇಳಿಕೊಳ್ಳುವಂತಹ ಹಿರಿತನವೇನೂ ಇಲ್ಲ. ಸಂಸ್ಕೃತ ಲಾಕ್ಷಣಿಕರಾದ ದಂಡಿ, ಭಾಮಹ ಮೊದಲಾದವರು ಇದಕ್ಕೆ ಪ್ರೇರಕ ಶಕ್ತಿಗಳಾಗಿದ್ದಾರೆ. ಕವಿರಾಜಮಾರ್ಗ ಆ ಸಂಸ್ಕೃತ ಗ್ರಂಥಗಳಿಗಿಂತ ಶ್ರೇಷ್ಠವಾಗೇನೂ ಇಲ್ಲ.

'ಕವಿರಾಜ ಮಾರ್ಗ'ವು ಒಂದು ಲಕ್ಷಣ ಗ್ರಂಥ. ಆದ್ದರಿಂದ ಇದಕ್ಕೆ ಲಕ್ಷ್ಯಗಳನ್ನು ಒದಗಿಸಬಲ್ಲ ಸಾಹಿತ್ಯ ಸಾಕಷ್ಟು ಸಮೃದ್ಧವಾಗಿ ಅದಕ್ಕಿಂತಲೂ ಹಿಂದೆಯೆ ಹುಟ್ಟಿ ಬೆಳೆದಿರಬೇಕು. ಕವಿರಾಜಮಾರ್ಗ ಕರ್ತೃವು ಅಂತಹ ಕಾವ್ಯ ಕರ್ತೃಗಳ ದೊಡ್ಡದೊಂದು ಪಟ್ಟಿಯನ್ನೇ ಕೊಡುತ್ತಾ ಶ್ರೀ ವಿಜಯ, ಕವೀಶ್ವರ, ಪಂಡಿತ, ಚಂದ್ರ, ಲೋಕಪಾಲ – ಇವರು ಪದ್ಯಕವಿಗಳು; ವಿಮಳ, ಉದಯ, ನಾಗಾರ್ಜುನ, ಜಯಬಂಧು, ದುರ್ವಿನೀತ ಇವರು–ಗದ್ಯಕವಿಗಳು. ಆದರೆ ಈ ಗದ್ಯ–ಪದ್ಯ ಕವಿಗಳ ಗ್ರಂಥಗಳಾವುವೂ ಈಗ ಉಪಲಬ್ಧವಾಗಿಲ್ಲ. ಕವಿರಾಜಮಾರ್ಗದಲ್ಲಿ ನಿರೂಪಿತವಾಗಿರುವ ಧೋರಣೆಯನ್ನು ನೋಡಿದರೆ ಅವರೆಲ್ಲರೂ ಮಹಾಕವಿಗಳೆಂದು ಭಾಸವಾಗುತ್ತದೆ. ಆದರೂ ಅವರ ಕಾವ್ಯಗಳಾವುವೂ ದೊರೆಯದಿರುವುದು ನಮ್ಮ ದೌರ್ಭಾಗ್ಯ. ಮೇಲೆ ಹೆಸರಿಸಿರುವ ಕವಿಗಳಲ್ಲಿ ದುರ್ವಿನೀತನು ಸುಮಾರು ಕ್ರಿ.ಶ. ೬೦೦ರಲ್ಲಿದ್ದ ಗಂಗವಂಶದ ದೊರೆ. ಆತನು ಬಹುಶ್ರುತನೂ ಮೇಧಾವಿಯೂ ಆಗಿದ್ದನೆಂದು ಗಂಗರ ಶಾಸನಗಳಿಂದ ತಿಳಿದುಬರುತ್ತದೆ. ಆತನು ಬರೆದನೆಂದೂ ಹೇಳಿರುವ ಬೃಹತ್ಕಥೆ, ಕಿರಾತಾರ್ಜುನೀಯ, ಶಬ್ದಾವತಾರ – ಇತ್ಯಾದಿ ಗ್ರಂಥಗಳು ಕನ್ನಡವೊ ಸಂಸ್ಕೃತವೊ! ಪೈಶಾಚಿಕ ಭಾಷೆಯಲ್ಲಿದ್ದ ಬೃಹತ್ಕಥೆಯನ್ನು ಈತ ಸಂಸ್ಕೃತದಲ್ಲಿ ಬರೆದು, ಅದನ್ನೇ 'ವಡ್ಡಕಥಾ' ಎಂಬ ಹೆಸರಿನಿಂದ ಕನ್ನಡಕ್ಕೆ ತಂದುಕೊಂಡಿರಬೇಕೆಂದು ವರಕವಿ ಬೇಂದ್ರೆಯವರು 'ಜ್ಞಾನೇಶ್ವರ ಪೂರ್ವಕಾಲೀನ ಕಾನಡೀ ವಾಙ್ಮಯ' ಎಂಬ ಲೇಖನದಲ್ಲಿ ಊಹಿಸುತ್ತಾರೆ. ಕನ್ನಡ ಪದ್ಯಕವಿಗಳ ಸಾಲಿನಲ್ಲಿ ಬರುವ ಶ್ರೀವಿಜಯನು ಕವಿರಾಜಮಾರ್ಗಕರ್ತೃವಾದ ಶ್ರೀವಿಜಯನೇ ಆಗಿದ್ದು, ತನ್ನ ಕಾವ್ಯದಲ್ಲಿ ತನಗೇ ಪ್ರಶಸ್ತಿಯನ್ನು ಕೊಟ್ಟುಕೊಂಡಿರುವನೆಂದು ಶ್ರೀಮಾನ್ ರಂ.ಶ್ರೀ ಮುಗಳಿಯವರು ತಮ್ಮ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಅಭಿಪ್ರಾಯಪಟ್ಟಿದ್ದಾರೆ. ಪದ್ಯಕವಿಗಳಲ್ಲಿ ಮತ್ತೊಬ್ಬನಾದ ಚಂದ್ರನು ಕನ್ನಡ ಕವಿಗಳಾದ ಚೌಂಡರಸ, ದುರ್ಗಸಿಂಹ ಮೊದಲಾದವರಿಂದ ಸ್ತುತ್ಯನಾಗಿರುವ ಚಂದ್ರಕವಿಯೆ ಇರಬಹುದು. ಇನ್ನು 'ಕವಿರಾಜಮಾರ್ಗ'ದಲ್ಲಿ ಉದಾಹರಣೆಗಾಗಿ ಕೊಟ್ಟಿರುವ ಹಲವಾರು ಪದ್ಯಗಳ ಕರ್ತೃ ಯಾರೆಂಬುದು ಗೊತ್ತಿಲ್ಲ. ಇವನು ಕವಿರಾಜಮಾರ್ಗಕರ್ತೃವೇ 'ಸಂತೆ ಹೊತ್ತಿಗೆ ಮೂರು ಮೊಳ ನೇದು' ಸೇರಿಸಿದ್ದಾನೋ, ಇತರ ಕವಿಗಳಿಂದ ಉದ್ಧರಿಸುತ್ತಿದ್ದಾನೆಯೊ ಗೊತ್ತಿಲ್ಲ. ರಾಮಾಯಣದ ಹಲವು ಸನ್ನಿವೇಶಗಳನ್ನು ಸೂಚಿಸುವ ಹಲವು ಪದ್ಯಗಳು ಅಲ್ಲಿ ಕಂಡುಬರುವುದರಿಂದ, ಅದಕ್ಕೂ ಪೂರ್ವದಲ್ಲಿ ಕನ್ನಡ ರಾಮಾಯಣವೊಂದು ಇದ್ದಿರಬೇಕೆಂದು ಹೇಳಬಹುದು.

ಕವಿರಾಜಮಾರ್ಗಕ್ಕಿಂತಲೂ ಪೂರ್ವದಲ್ಲಿಯೆ ಕನ್ನಡ ಸಾಹಿತ್ಯ ವಿಸ್ತಾರವಾಗಿ ಬೆಳೆದಿತ್ತೆಂದು ಹೇಳುವುದಕ್ಕೆ ಇನ್ನೂ ಅನೇಕ ಆಧಾರಗಳಿವೆ. ತುಂಬಲೂರಾಚಾರ್ಯರೆಂಬುವರು 'ಚೂಡಾಮಣಿ' ಎಂಬ ಹೆಸರಿನ ವ್ಯಾಖ್ಯಾನ ಗ್ರಂಥವೊಂದನ್ನು ಬರೆದಿರುವುದಾಗಿ ಭಟ್ಟಾಕಳಂಕ (ಕ್ರಿ.ಶ. ೧೬೦೪) ಎಂಬ ವ್ಯಾಕರಣಕಾರನೂ ದೇವಚಂದ್ರ (ಕ್ರಿ.ಶ. ೧೬೩೮) ಎಂಬ ಕವಿಯೂ ತಿಳಿಸುತ್ತಾರೆ. ಇದು ೯೬೦೦೦ ಗ್ರಂಥವುಳ್ಳದೆಂದು ಭಟ್ಟಾಕಳಂಕನೂ ೮೪೦೦೦ ಗ್ರಂಥವುಳ್ಳದೆಂದು ದೇವಚಂದ್ರನೂ ಹೇಳುತ್ತಾರೆ. ತುಂಬಲೂರಾಚಾರ್ಯರ ಕಾಲ ಕ್ರಿ.ಶ. ೭ನೆಯ ಶತಮಾನ. ಅಷ್ಟು ಹಿಂದಿನ ಕಾಲದಲ್ಲಿಯೇ ಇಂತಹ

ಶಾಸ್ತ್ರೀಯ ಬೃಹದ್ಗ್ರಂಥವೊಂದು ಹುಟ್ಟಿರಬೇಕಾದರೆ, ಕನ್ನಡ ಸಾಹಿತ್ಯದ ಪ್ರಾಚೀನತೆ ಅದಕ್ಕಿಂತಲೂ ಹಲವು ಶತಮಾನಗಳಷ್ಟು ಹಿಂದಕ್ಕೆ ಹೋಗಬೇಕಾಗುತ್ತದೆ. ತುಂಬಲೂರಾಚಾರ್ಯನ ಸಮಕಾಲೀನನಾದ ಶ್ಯಾಮಕುಂದಾಚಾರ್ಯನು ಕನ್ನಡದಲ್ಲಿ ಪ್ರಾಭೃತವನ್ನು ರಚಿಸಿದನಂತೆ ! ಸೈಗೊಟ್ಟ ಶಿವಮಾರನೆಂಬ (ಕ್ರಿ.ಶ. ೮೦೦) ಗಂಗರಾಜನು 'ಗಜಾಷ್ಟಕ'ವನ್ನು ಕನ್ನಡದಲ್ಲಿ ಬರೆದಿರುವನೆಂದೂ ಅದು ಅತ್ಯಂತ ಜನಪ್ರಿಯವಾಗಿತ್ತೆಂದೂ ಶಾಸನದಿಂದ (EC. vol. vni, nr 35) ತಿಳಿಯುತ್ತದೆ. ಕವಿರಾಜಮಾರ್ಗವು ಹುಟ್ಟಿದ ಕಾಲದಲ್ಲಿಯೆ 'ಗುಣಗಾಂಕಿಯಿಂ' ಎಂಬ ದೊಡ್ಡ ಛಂದೋಗ್ರಂಥವೊಂದು ಹುಟ್ಟಿತ್ತೆಂದು ತಮಿಳು ಛಂದೋಗ್ರಂಥವೊಂದರಿಂದ ತಿಳಿದುಬರುತ್ತದೆ.

ಕವಿರಾಜಮಾರ್ಗ ಹುಟ್ಟಿದ ಹಿಂಚುಮುಂಚಿನಲ್ಲಿಯೆ ಅಸಗ, ಗುಣನಂದಿ ಎಂಬ ಇಬ್ಬರು ಮಹಾಕವಿಗಳು ಕೃತಿರಚನೆ ಮಾಡಿರುವಂತೆ ಕಂಡುಬರುತ್ತದೆ. ಪೊನ್ನ, ದುರ್ಗಸಿಂಹ ಮೊದಲಾದ ಮುಂದಿನ ಕವಿಗಳು ಅವರನ್ನು ಸ್ತುತಿಸಿದ್ದಾರೆ; ವೈಯಾಕರಣನಾದ ಕೇಶಿರಾಜನು ತನ್ನ 'ಶಬ್ದಮಣಿದರ್ಪಣ'ಕ್ಕೆ 'ಗಜಗನ, ಗುಣನಂದಿಯ, ಮನಸಿಜನಸಗನ . . . . ಸುಮಾರ್ಗಮಿದರೊಳೆ ಲಕ್ಷ್ಯಂ' ಎಂದು ಹೇಳಿದ್ದಾನೆ. ಅಸಗಕವಿಯ 'ವರ್ಧಮಾನಚರಿತೆ' ಎಂಬ ಸಂಸ್ಕೃತ ಗ್ರಂಥದಿಂದ ಆತನು ಕ್ರಿ.ಶ. ೮೫೩ರಲ್ಲಿ ಇದ್ದನೆಂಬುದು ಮಾತ್ರವಲ್ಲದೆ 'ಶ್ರೀ ಅಸಗಭೂಪಕೃತೆ' ಎಂಬ ಹೇಳಿಕೆಯಿಂದ ಆತನು ರಾಜನಾಗಿರಬೇಕೆಂದು ಭಾವಿಸುವುದಕ್ಕೂ ಅವಕಾಶವಿದೆ. ಆತನು ಕನ್ನಡದಲ್ಲಿ ಏನನ್ನು ಬರೆದಿದ್ದಾನೆಯೊ ಗೊತ್ತಿಲ್ಲ. ಗುಣನಂದಿಯನ್ನು ಭಟ್ಟಾಕಳಂಕನು ಬಹುಭಕ್ತಿಯಿಂದ 'ಭಗವಾನ್ ಗುಣನಂದಿ' ಎಂದು ಕರೆದು ಗೌರವಿಸಿದ್ದಾನೆ. ಶ್ರವಣಬೆಳಗೊಳದ ಶಾಸನವೊಂದರಲ್ಲಿ ಆತನ ಪ್ರಶಸ್ತಿ ಕಂಡುಬರುವುದೆಂದೂ, ಆತನು ಆದಿಕವಿ ಪಂಪನ ಗುರುವಾದ ದೇವೇಂದ್ರ ಸೈದ್ಧಾಂತಿಕನ ಗುರುವಿರಬೇಕೆಂದೂ, ಆತನ ಕಾಲ ಸುಮಾರು ಕ್ರಿ.ಶ. ೯೦೦ ಎಂದೂ ಶ್ರೀ ರಂ.ಶ್ರೀ. ಮುಗಳಿಯವರು ತಮ್ಮ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ (ಪುಟ ೪೭) ತಿಳಿಸುತ್ತಾರೆ. ಕೇಶಿರಾಜನು ರಳಕ್ಕೆ ಪ್ರತಿಯಾಗಿ ರೇಫೆಯೊಡನೆ ಕೂಡಿದ ದ್ವಿತ್ವವನ್ನು ಪ್ರಾಸಸ್ಥಾನದಲ್ಲಿ ಬಳಸಿರುವುದಕ್ಕೆ ಗುಣನಂದಿಯ ಪದ್ಯ ಭಾಗವನ್ನು ಉದ್ಧರಿಸಿದ್ದಾನೆ – 'ಚುರ್ಚಿದ ಬಿಸಿಲಳುರೆ ಕಿ । ಮುಳ್ಚಿದ ತಳಿರಂತೆ ನೊಂದು' (ಚುಚ್ಚಿದಂತೆ ಬಿಸಿಲು ವ್ಯಾಪಿಸಲು, ಕಿವುಚಿಹೋದ ಚಿಗುರಿನಂತೆ ನೊಂದು) – ಈ ಪದ್ಯಭಾಗವನ್ನು ನೋಡಿದರೆ ಈತನು ಉತ್ತಮ ಕವಿಯೆಂದು ಭಾಸವಾಗುತ್ತದೆ.

ಕವಿರಾಜಮಾರ್ಗವಾದ ಮೇಲೆ, ಆದಿಕವಿ ಪಂಪನಿಗಿಂತಲೂ ಹಿಂದೆ ಇದ್ದವರೆಂದು ಪ್ರಸಿದ್ಧರಾಗಿರುವ ಇಬ್ಬರು ಕವಿಗಳು ಉಲ್ಲೇಖಾರ್ಹರಾಗಿದ್ದಾರೆ. ಅವರಲ್ಲಿ ಒಬ್ಬನು ಗುಣವರ್ಮ. ಈ ಹೆಸರಿನ ಇಬ್ಬರು ಕನ್ನಡ ಕವಿಗಳಿರುವುದರಿಂದ ಈತನನ್ನು ಮೊದಲನೆಯ ಗುಣವರ್ಮನೆಂದು ಕರೆಯುವ ವಾಡಿಕೆ ಇದೆ. ಎರಡನೆಯ ಗುಣವರ್ಮ (ಕ್ರಿ.ಶ. ೧೨೩೬), ನಯಸೇನ (೧೧೧೨), ಪಾರ್ಶ್ವಪಂಡಿತ (ಕ್ರಿ.ಶ. ೧೨೦೫), ರುದ್ರಭಟ್ಟ(೧೨೦೦) ಮೊದಲಾದ ಕವಿಗಳನೇಕರು ಈತನನ್ನು ಹೊಗಳಿದ್ದಾರೆ. ಕೇಶಿರಾಜ, ನಾಗವರ್ಮ – ಈ ಇಬ್ಬರು ಹಳಗನ್ನಡದ ಸುಪ್ರಸಿದ್ಧ ವೈಯಾಕರಣರೂ ಈತನ ಕಾವ್ಯದಿಂದ ಉದಾಹರಣೆಯನ್ನು ಎತ್ತಿಕೊಂಡಿದ್ದಾರೆ. ಕೇಶಿರಾಜನು ತನ್ನ 'ಶಬ್ದ ಮಣಿದರ್ಪಣ'ದ ೧೧೮ನೆಯ ಸೂತ್ರಕ್ಕೆ ಉದಾಹರಣೆಯನ್ನು ಕೊಡುತ್ತಾ "ಈಂದ ಪುಲಿಯಾ ವೊಲಿರ್ದಳ್ – ಎಂಬುದು ಗುಣವರ್ಮನ ಹರಿವಂಶ ಪ್ರಯೋಗಂ" ಎಂದು ಹೇಳುತ್ತಾನೆ. ನಾಗವರ್ಮನು ತನ್ನ 'ಭಾಷಾಭೂಷಣ'ದಲ್ಲಿ ದ್ವಿತೀಯಾ ವಿಭಕ್ತಿಗೆ ಉದಾಹರಣೆಯಾಗಿ,

ಎನಿತ್ತೆ ನೆತ್ತಂಬುಜ ಪತ್ರ ನೇತ್ರೆಯಾ । ಘನಸ್ತನಂಗಳ್ ಬಳೆಗುರಿ ಕಿರಾತೆಯಾ
ಅನಿತ್ತನಿತ್ತುಂ ವನದೊಳ್ ವನೇಚರಂ । ತನತ್ತು ಬಿಲ್ಲಾನದನಂತೆ ಕೀಸುವಂ

ಎಂಬ ವೃತ್ತವನ್ನು ಕೊಟ್ಟು 'ಗುಣವರ್ಮಕವೇಃ ಭುವನೈಕವೀರಸ್ಯ ಪ್ರಯೋಗಃ' ಎಂದು ತಿಳಿಸುತ್ತಾನೆ. ಮಲ್ಲಿಕಾರ್ಜುನಕವಿಯ (ಕ್ರಿ.ಶ. ೧೨೫೦) ಸೂಕ್ತಿ ಸುಧಾರ್ಣವದಲ್ಲಿಯೂ, ಅಭಿನವವಾದಿವಿದ್ಯಾನಂದನ (ಕ್ರಿ.ಶ. ೧೫೫೦) 'ಕಾವ್ಯಸಾರ'ದಲ್ಲಿಯೂ ಗುಣವರ್ಮಕವಿಯ 'ಶೂದ್ರಕ' ಕಾವ್ಯದಿಂದ ಹಲವು ಗದ್ಯಗಳು ಉದ್ಧೃತವಾಗಿವೆ; ಇವೆಲ್ಲ ವೃತ್ತ, ಕಂದಗಳಲ್ಲಿರುವುದಲ್ಲದೆ, ಒಂದು ಗದ್ಯಭಾಗವೂ ಕಂಡುಬರುವುದರಿಂದ ಇದು ಚಂಪೂಕಾವ್ಯ ಎಂದು ನಿರ್ಧರಿಸಬಹುದಾಗಿದೆ. ಈ ಕಾವ್ಯಭಾಗಗಳಲ್ಲಿ ಅಲ್ಲಲ್ಲಿಯೆ ಗಂಗರಾಜನೊಬ್ಬನ ಹೊಗಳಿಕೆ ಕಂಡುಬರುತ್ತದೆ. ಗಂಗರಾಜರಲ್ಲಿ ಪ್ರಸಿದ್ಧನಾದ ಎರೆಯಪ್ಪನೇ (ಕ್ರಿ.ಶ. ೮೮೬-೯೧೩) ಆ ರಾಜನಿರಬೇಕೆಂದು ನಿರ್ಧರಿಸಿ, ಗುಣವರ್ಮನ ಕಾಲ ಸು ಕ್ರಿ.ಶ. ೯೦೦ ಎಂದು ನಿಶ್ಚಯಿಸಲಾಗಿದೆ.

ಮೇಲೆ ಹೇಳಿದ ಕಾರಣಗಳಿಂದ ಮೊದಲನೆಯ ಗುಣವರ್ಮನು 'ಹರಿವಂಶ', 'ಭುವನೈಕವೀರ', 'ಶೂದ್ರಕ', ಎಂಬ ಮೂರು ಗ್ರಂಥಗಳನ್ನು ಬರೆದಿರುವನೆಂದೂ ಆತನ 'ಶೂದ್ರಕ'ವು ಗಂಗರಾಜನ ಎರೆಯಪ್ಪನ ಕಥೆಯನ್ನು ಸಮೀಕರಿಸಿಕೊಂಡ ಚಂಪೂಕಾವ್ಯವೆಂಬುದಾಗಿಯೂ ತಿಳಿದಂತಾಯಿತು. ಈಗ ಉಪಲಬ್ಧವಾಗಿರುವಷ್ಟು ಕಾವ್ಯಭಾಗಗಳಿಂದಲೆ ಹೇಳುವುದಾದರೆ ಈತನ ಪದಬಂಧ ಪ್ರೌಢವಾಗಿದೆ. ದೇಶಿಗಿಂತಲೂ ಮಾರ್ಗೀಶೈಲಿಯಲ್ಲಿ ಈತನಿಗೆ ಆಸಕ್ತಿ ಹೆಚ್ಚು. ಈತನ ಕಾವ್ಯಶಕ್ತಿ ಲೋಕೋತ್ತರವಾದುದೆಂದು ಹೇಳುವಂತಿಲ್ಲವಾದರೂ ಈತನೇನೂ ಕೀಳುಕವಿಯಲ್ಲ. ಪಂಪನಿಗಿಂತಲೂ ಪೂರ್ವದಲ್ಲಿಯೆ ಚಂಪುವನ್ನು ಬಳಕೆಗೆ ತಂದ ಗುಣವರ್ಮ ನಮಗೆ ಆದರಣೀಯನಾಗಿದ್ದಾನೆ. ತನ್ನ ಸ್ವಾಮಿಯನ್ನು ಶೂದ್ರಕ ಕಾವ್ಯದಲ್ಲಿ ಬಳಸಿಕೊಂಡು, ಪಂಪಕವಿಗೆ 'ವಿಕ್ರಮಾರ್ಜುನವಿಜಯ'ವನ್ನು ಬರೆಯಲು ಒಂದು ಮಾದರಿಯನ್ನು ಈತ ಒದಗಿಸಿರುವನೋ ಏನೋ !

ಪಂಪಪೂರ್ವಯುಗದ ಮತ್ತೊಬ್ಬ ದೊಡ್ಡಕವಿ ಶಿವಕೋಟ್ಯಾಚಾರ್ಯ. ಆತನ ಕೃತಿ 'ವಡ್ಡಾರಾಧನೆ' ಕನ್ನಡ ಸಾಹಿತ್ಯದಲ್ಲಿಯೆ ಅಪೂರ್ವವಾದ ಒಂದು ಕಾವ್ಯ. ಮೊದಲನೆಯದಾಗಿ ಇದೊಂದು ಗದ್ಯಕಾವ್ಯ, ಕನ್ನಡದಲ್ಲಿ ಸಿಕ್ಕುವ ಮೊಟ್ಟಮೊದಲ ಗದ್ಯಕಾವ್ಯ. ಇದು ಮನೋಹರವಾದ ಹತ್ತೊಂಬತ್ತು ಕಥೆಗಳನ್ನು ಒಳಗೊಂಡಿದೆ. ಒಂದೊಂದು ಕಥೆಯ ಆರಂಭದಲ್ಲಿಯೂ ಒಂದೊಂದು ಪ್ರಾಕೃತಗಾಹೆ ಇರುತ್ತದೆ. ಷಟ್ಪದಿಕಾವ್ಯದಲ್ಲಿನ ಸೂಚನೆಯಂತೆ ಈ ಗಾಹೆಯು ಇಡೀ ಕಥೆಯ ಸಾರಾಂಶವನ್ನು ಸೂಚಿಸುತ್ತದೆ. ಕಾವ್ಯಕರ್ತೃವು ಈ ಪ್ರಾಕೃತಗಾಹೆಗೆ ಕನ್ನಡ ಅರ್ಥವನ್ನು ಕೊಟ್ಟು, ಕಥೆಯನ್ನು ಆರಂಭಿಸುತ್ತಾನೆ. ಸಹಸ್ರ ವರ್ಷಗಳಿಗಿಂತಲೂ ಹಿಂದೆ ಹುಟ್ಟಿದ ಈ ಕಾವ್ಯ ಇಂದೂ ನಮ್ಮ ಆದರ, ಗೌರವ, ಮೆಚ್ಚಿಗೆಗಳಿಗೆ ತಕ್ಕುದಾಗಿದೆ. ಓದುಗರನ್ನು ಮೈಮರೆಸಿ ಸೆಳದೊಯ್ಯಬಲ್ಲ ಕಥನಕಲೆ ಈ ಕಾವ್ಯಕರ್ತೃವಿನ ಬಂಡವಾಳ. ಮಾತುಗಳ ಜೋಡಣೆಯೂ ಬಹು ಮುದ್ದಾಗಿದೆ. ಈ ಗ್ರಂಥದ ಆರಂಭದಲ್ಲಿ ಬರುವ 'ಸುಕುಮಾರಸ್ವಾಮಿಯ ಕಥೆ'ಯನ್ನು ನೋಡಿ. ಕಥಾನಾಯಕನಾದ ಸುಕುಮಾರಸ್ವಾಮಿಯ ಜೀವ ಹಲವು ಜನ್ಮಗಳಲ್ಲಿ ತಿರ್‍ರನೆ ತಿರಿದು, ತನ್ನ ಕರ್ಮಗಳನ್ನೆಲ್ಲ ಸವೆಸಿ, ಕಡೆಯ ಜನ್ಮದಲ್ಲಿ ಆಗರ್ಭ ಶ್ರೀಮಂತನ ಸುಕುಮಾರನಾಗಿ ಜನಿಸಿದ. ಅವನ ಐಶ್ವರ್ಯದ ಅತಿಶಯವನ್ನು ಕೇಳಿದ ಆ ದೇಶದ ದೊರೆ ಆತನನ್ನು ನೋಡಲೆಂದು ಅವನ ಮನೆಗೆ ಬಂದು, ಸತ್ಕೃತನಾಗಿ 'ಸುಕುಮಾರನೆಲ್ಲಿದನೆಂದು ಬೆಸಗೊಂಡೊಡೆ, ಸ್ವಾಮಿ, ಆತಂಕರಂ ಸಾದು, ನಿಮ್ಮ ಬರಮನಱಿಯಂ, ಪ್ರಸಾದದ ಮೇಗಣ ನೆಲೆಯೊಳಿರ್ದನೆಂದೊಡರಸಂಬಳಯಿನಟ್ಟಿಮನೆ ತಾಯ್

ಪೋಗಿಮಗನೆ ಅರಸರ್ ವಂದರ್ ಬಾ ಪೋಪಮನೆ ಅರಸರೆಂಬೊರಾರೆನೆ ತಾಯೆಂದಳ್ ನಮ್ಮ ನಾಳ್ವಂ ಎಂದೊಡೆ ನಮ್ಮ ನಾಳ್ವರುಮೊಳರೆ ಎಂದು ವಿಸ್ಮಯಂಬಟ್ಟು ತಾಯವಚನಮಂ ಮಾರ್ಕೊಳಗಲಾರದೆ ಬರ್ಪೊನಂ ನರೇಶ್ವರಂ ಕಂಡು ಕಣ್ಬೆತ್ತ ಫಲಮನಿಂದು ಪೆತ್ತೆನೆಂದು ಕಾಮದೇವನನಪ್ಪಿ ಕೊಳ್ವಂತಪ್ಪಿಕೊಂಡು ದಿವ್ಯಶಯ್ಯಾತಳದ ಮೇಗೊಡನಿರಿಸಿದಾಗಳ್ . . . .' ಇಲ್ಲಿನ ಶೈಲಿಯನ್ನು, ಸಂಭಾಷಣೆಯ ವೈಖರಿಯನ್ನು ನೋಡಿ. ಒಂದೊಂದೇ ಮಾತುಗಳಲ್ಲಿ ಕಥೆಯನ್ನು ಮುಂದುವರಿಸುವ ಈ ಸಂಭಾಷಣೆ ಸಂಗ್ರಹವಾಗಿರುವಷ್ಟೆ ಸಾರವತ್ತಾಗಿದೆ, ಸತ್ವಯುಕ್ತವಾಗಿದೆ, ಸರಸವಾಗಿದೆ. ದೇಶಿಯೇ ಪ್ರಧಾನವಾದ. ಶಿವಕೋಟ್ಯಾಚಾರ್ಯನ ಶೈಲಿ ಹೃದಯಂಗಮವಾಗಿದೆ.

'ವಡ್ಡಾರಾಧನೆ'ಗೆ ಉಪಸರ್ಗಕೇವಲಿಗಳ ಕಥೆ' ಎಂಬ ಮತ್ತೊಂದು ಹೆಸರಿದಿದ್ದಿತೆಂದೂ, ಇಲ್ಲಿನ ಪ್ರತಿಯೊಂದು ಕಥೆಯ ನಾಯಕನೂ ಯಾವುದೋ ಒಂದು ಉಪಸರ್ಗಕ್ಕೆ ಕಟ್ಟುಬಿದ್ದು, ಅದರಿಂದಲೇ ಸತ್ತು ಸ್ವರ್ಗಸುಖವನ್ನು ಸಂಪಾದಿಸುವನೆಂದೂ, ಆ ಚರಿತ್ರೆಯು ಈ ಕಥೆಗಳಲ್ಲಿ ಅಡಗಿರುವುದರಿಂದಲೇ ಈ ಹೆಸರು ಸಾರ್ಥಕವಾಗಿದೆಯೆಂದೂ ದಿವಂಗತ ಪ್ರೊ. ಡಿ.ಎಲ್. ನರಸಿಂಹಾಚಾರ್ಯರು ತಿಳಿಸುತ್ತಾರೆ. ಸಲ್ಲೇಖನ ವ್ರತದಿಂದ ಸಮಾಧಿ ಮರಣವನ್ನು ಪಡೆಯುವವರಲ್ಲಿ ವೈರಾಗ್ಯವನ್ನು ಪ್ರಚೋದಿಸಲು ವಡ್ಡಾರಾಧನೆಯ ಕಥೆಗಳು ಉಪಯುಕ್ತವಾದುವೆಂದು ಶ್ರೀ ಮುಗಳಿಯವರು ತಿಳಿಸುತ್ತಾರೆ. ಈ ಬಗೆಯ ಧರ್ಮದೃಷ್ಟಿ ಹೇಗಾದರೂ ಇರಲಿ, ಇವು ವೈರಾಗ್ಯವನ್ನು ಪ್ರಚೋದಿಸುವಷ್ಟೇ ಮನೋರಂಜನೆಯನ್ನೂ ನೀಡಿ ಮೈಮರೆಸಬಲ್ಲವು.

ವಡ್ಡಾರಾಧನೆಯು ತನ್ನ ಸಮಕಾಲೀನ ಜನಜೀವನಕ್ಕೆ ಹಿಡಿದ ಕನ್ನಡಿಯಂತಿದೆ. ಅದಕ್ಕೂ ಹೆಚ್ಚಾಗಿ ಅಂದಿನ ಭಾಷಾಸ್ವರೂಪವನ್ನು ಅದು ದಿಗ್ದರ್ಶಿಸುತ್ತದೆ. ಕನ್ನಡ ಸಾಹಿತ್ಯಜಗತ್ತಿನಲ್ಲಿ ಇದೊಂದು ಚಿರಂಜೀವಿಯಾದ ಗ್ರಂಥ. ಕವಿರಾಜಮಾರ್ಗದಲ್ಲಿ ಇದರ ಹೆಸರು ಕಾಣಬರದಿರುವುದರಿಂದ ಇದು ಆ ಗ್ರಂಥವಾದ ಮೇಲೆ ಹುಟ್ಟಿದುದಿರಬೇಕು. ಪಂಪನ ಕಾವ್ಯಗಳಿಗಿಂತ ಸ್ವಲ್ಪ ಪೂರ್ವದಲ್ಲಿ – ಸುಮಾರು ಕ್ರಿ.ಶ. ೯೨೦–೩೦ರ ವೇಳೆಗೆ ಇದು ಹುಟ್ಟಿರಬಹುದು.

೪. ಪಂಪಯುಗ

ಕನ್ನಡದ 'ಆದಿಕವಿ'ಯೆಂದು ಪ್ರಖ್ಯಾತನಾಗಿರುವ ಪಂಪಮಹಾಕವಿ ಕ್ರಿ.ಶ. ೧೦ ನೆಯ ಶತಮಾನಕ್ಕೆ ಸೇರಿದವನು. ಈ ಮಹಾಕವಿಯ ಪ್ರಭಾವ ೧೦ರಿಂದ ೧೨ರವರೆಗೆ, ಸುಮಾರು ಎರಡು ಶತಮಾನಗಳಷ್ಟು ಕಾಲ ಕನ್ನಡ ಸಾಹಿತ್ಯದಲ್ಲಿ ಅಪ್ರತಿಹತವಾಗಿ, ಅವಿಚ್ಛಿನ್ನವಾಗಿ ಹರಿದುಹೋಗಿದೆ. ಈ ಕಾಲಮಾನವನ್ನು 'ಪಂಪಯುಗ'ವೆಂದು ಕರೆಯಲಾಗಿದೆ. ಈ ಕಾಲದಲ್ಲಿ ಸೃಷ್ಟಿಯಾದ ಸಾಹಿತ್ಯವು ಅತ್ಯಂತ ಪ್ರೌಢವಾಗಿ, ಸತ್ವಯುಕ್ತವಾಗಿ ರಸಮಯವಾಗಿರುವುದರಿಂದ ಅದನ್ನು ಕನ್ನಡ ಸಾಹಿತ್ಯದ 'ಸ್ವರ್ಣಯುಗ' ಎಂದು ಕರೆದು ಗೌರವಿಸುವ ವಾಡಿಕೆ. ಅಂದಿನ ರಾಜಕೀಯ ವಾತಾವರಣವು ಶಸ್ತ್ರಾಸ್ತ್ರಗಳ ಮಾರ್ಮೊಳಗಿನಿಂದ ಪ್ರಕ್ಷುಬ್ಧಿತವಾಗಿದ್ದು, ಕನ್ನಡಿಗರ ಶೌರ್ಯಕ್ಕೆ ಸಾಣೆಹಿಡಿದಂತಾಗಿತ್ತು. ಯುದ್ಧದ ಹೆಸರನ್ನು ಹೇಳುತ್ತಲೇ ಜನರ ಬಾಹುಗಳು ಸ್ಫುರಣಗೊಳ್ಳುತ್ತಿದ್ದವು. ತಮ್ಮ ಊರಿನ, ಹೆಣ್ಣಿನ, ತುರುಗಳ ರಕ್ಷಣೆಗಾಗಿ ಜನರು ಜೀವದ ಹಂಗುದೊರೆದು ಕಾದಾಡುತ್ತಿದ್ದರು. ಜೀವನ ತರಂಗ ತಾಡನದ ಪ್ರತಿ ಸ್ಪಂದನವೇ ಮಹಾಕವಿಕಾವ್ಯವಷ್ಟೆ! ಅಂದಿನ ಮಹಾಕವಿಗಳಲ್ಲಿ ಬಹುಮಂದಿ ಅದ್ಭುತ ಕಲಿಗಳೆಂದೂ ಪ್ರಸಿದ್ಧರಾಗಿದ್ದವರು, ಅವರ ಕಾವ್ಯಗಳಲ್ಲಿ ವೀರರಸ ನೊರೆಗಟ್ಟಿ ಹರಿಯುತ್ತದೆ. ಆದ್ದರಿಂದ ಈ ಯುಗವನ್ನು ಕನ್ನಡ ಸಾಹಿತ್ಯದ 'ವೀರಯುಗ' ಅಥವಾ 'ಕ್ಷಾತ್ರಯುಗ'ವೆಂದೂ ಕರೆಯುತ್ತಾರೆ. 'ಪಂಪಯುಗ'ದಲ್ಲಿ ಕಾವ್ಯಕರ್ಮಕ್ಕೆ ಕೈಹಾಕಿದವರೆಲ್ಲ ಬಹುಮಟ್ಟಿಗೆ ಜೈನರೇ. ಅವರ ಕಾವ್ಯಗಳೆಲ್ಲವೂ ಪ್ರೌಢವಾದ ಮಾರ್ಗೀಶೈಲಿಯಲ್ಲಿ

ಬರೆದವುಗಳು, ಚಂಪೂರೂಪದಲ್ಲಿವೆ. ಆದ್ದರಿಂದ 'ಪಂಪಯುಗ'ವನ್ನು 'ಜೈನಯುಗ' 'ಚಂಪೂಯುಗ' ಎಂಬ ಹೆಸರುಗಳಿಂದಲೂ ವ್ಯವಹರಿಸುವುದುಂಟು.

ಪಂಪಯುಗದ ಕವಿಗಳಲ್ಲಿ ಪಂಪ, ಪೊನ್ನ, ರನ್ನ – ಈ ಮೂವರನ್ನು 'ರತ್ನತ್ರಯ'ರೆಂದು ಕರೆಯುವುದು ವಾಡಿಕೆ. ಈ ಕೀರ್ತಿಗೆ ಅವರು ಹೇಗೆ ಪಾತ್ರರೆಂಬುದನ್ನು ಆಯಾ ಕವಿಗಳನ್ನು ಕುರಿತು ವಿವೇಚಿಸುವಾಗ ನೋಡೋಣ. ಈ ಮೂವರಿಗೂ ಸಮಾನವಾದ ಲಕ್ಷಣಗಳಿವೆ – ಮೂವರೂ ಜೈನರು, ಮೂವರೂ ತಮ್ಮ ಗ್ರಂಥಗಳಲ್ಲಿ ಒಂದನ್ನು ಧರ್ಮಕ್ಕೂ ಮತ್ತೊಂದನ್ನು ಲೌಕಿಕಕ್ಕೂ ಮೀಸಲಾಗಿರಿಸಿದ್ದಾರೆ. ಮೂವರ ಲೌಕಿಕ ಕಾವ್ಯಗಳಲ್ಲಿಯೂ ಆಯಾ ಕವಿಗಳು ತಮ್ಮ ಪೋಷಕರಿಗೆ ಪುರಾಣ ಪುರುಷರ ವೇಷವನ್ನು ಅಳವಡಿಸಿ, ಆಯಾ ಕಾವ್ಯಗಳ ನಾಯಕರನ್ನಾಗಿ ಮಾಡಿ ಮೆರೆಸಿದ್ದಾರೆ. ಇದರಿಂದ ಆ ಪೋಷಕರ ಇತಿಹಾಸವನ್ನು ಅರಿಯಲು ಸಹಾಯಕವಾಗಿದೆ. ಆದರೆ 'ರತ್ನತ್ರಯ' – ಸಮ್ಯಕ್‌ದರ್ಶನ, ಸಮ್ಯಕ್‌ಜ್ಞಾನ, ಸಮ್ಯಕ್ ಚಾರಿತ್ರರೆಂದು ಇವರನ್ನು ಸಂಭಾವಿಸಿರುವುದಕ್ಕೆ ಇವರ ಧರ್ಮಗ್ರಂಥಗಳೇ ಕಾರಣ. ಹಲವು ಸಾಮಾನ್ಯ ಲಕ್ಷಣಗಳನ್ನು ಹೊಂದಿರುವ ಈ 'ರತ್ನತ್ರಯ'ರನ್ನೂ ತೆಗೆದುಕೊಂಡು ಮೊದಲು ವಿವೇಚಿಸೋಣ. ಇತಿಹಾಸದ ದೃಷ್ಟಿಯಿಂದ ಇದು ಸ್ವಲ್ಪ ಏರುಪೇರಾದಂತೆ – ಪೊನ್ನನಿಗೂ ರನ್ನನಿಗೂ ಮಧ್ಯೆ ಮತ್ತಿಬ್ಬರು ಕವಿಗಳಿದ್ದಾರೆ – ಸಾಹಿತ್ಯಕಂಡರೂ ವಿವೇಚನಾದೃಷ್ಟಿಯಿಂದ ಇದು ಸಮಂಜಸವೆಂದು ತೋರುತ್ತದೆ.

೧. ಮಹಾಕವಿ ಪಂಪ (ಕ್ರಿ.ಶ. ೯೪೧)

ಈಗ ಸುಮಾರು ಆರುನೂರು ವರ್ಷಗಳ ಹಿಂದೆ ಇದ್ದ ನಾಗರಾಜನೆಂಬ ಕವಿ ಪೂರ್ವಕವಿಸ್ತವಾವಸರದಲ್ಲಿ ಪಂಪನನ್ನು ಕುರಿತು 'ಪಸರಿಪ ಕನ್ನಡಕ್ಕೊರ್ವನೆ ಸತ್ಕವಿ, ಪಂಪನಾವಗಂ'– ವಿಸ್ತಾರವಾದ ಕನ್ನಡಕ್ಕೆಲ್ಲ ಎಂದೆಂದಿಗೂ ಒಬ್ಬನೇ ಸತ್ಕವಿ, ಪಂಪ ಎಂದು ಹೊಗಳಿ ಸ್ತೋತ್ರರೂಪದ ಪುಷ್ಪಾಂಜಲಿಯನ್ನು ಅರ್ಪಿಸುತ್ತಾನೆ. 'ಭೂಮಂಡಲಕ್ಕೆ ಚಕ್ರವರ್ತಿಯಂತೆ, ಸ್ವರ್ಗಕ್ಕೆ ದೇವೇಂದ್ರನಂತೆ, ಪಾತಾಳಕ್ಕೆ ಆದಿಶೇಷನ ಹಾಗೆ, ಆಕಾಶಕ್ಕೆ ಸೂರ್ಯನ ಹಾಗೆ ಸಾಹಿತ್ಯ ಜಗತ್ತಿನಲ್ಲಿ ಪ್ರಸಿದ್ಧನಾಗಿದ್ದಾನೆ; ಆತನು ತನ್ನ ವಾಗ್ವಿಲಾಸವನ್ನು ನನಗೆ ಕರುಣಿಸಲಿ ಎಂದು ಬೇಡಿಕೊಳ್ಳುತ್ತಾನೆ. ಆತನಂತೆ ಇತರ ಅನೇಕ ಕವಿಗಳೂ ಪಂಪನ ರಸ, ಭಾವ, ಬೆಡಂಗು, ಇಂಪು ತಮ್ಮ ಕಾವ್ಯಗಳಲ್ಲಿ ಅವತರಿಸುವಂತೆ ಅನುಗ್ರಹಿಸುವ ಹಾಗೆ ಆತನನ್ನು ಸ್ತುತಿಸಿ ಬೇಡಿಕೊಳ್ಳುತ್ತಾರೆ. ಆದರೆ ಯಾರೂ ಅವನ ಎತ್ತರ ಬಿತ್ತರಗಳನ್ನು ಸಾಧಿಸಲಾರದೆ 'ಕನ್ನಡಕ್ಕೊಬ್ಬನೆ ಕವಿ–ಪಂಪ', ಎಂಬ ವಾಣಿ ಅಮರವಾಣಿಯಾಗಿ ನಿಂತಿದೆ. ಶತಮಾನಗಳ ಕಾಲ ಭೂದೇವಿ ಮಾಡುವ ತಪಸ್ಸಿನಿಂದ ಮಹಾಕವಿಯೊಬ್ಬನು ಉದಿಸುವನಂತೆ ! ಹಾಗೆ ಉದಿಸುವ ಮಹಾಕವಿಗಳ ವಿರಳಪಂಕ್ತಿಯಲ್ಲಿ ಮಂಡನಯೋಗ್ಯನಾದವನು, ನಮ್ಮ ಮಹಾಕವಿ ಪಂಪ. ಕನ್ನಡದ ಮಟ್ಟಿಗೆ ಹೇಳುವುದಾದರೆ, ಆತನು 'ನ ಭೂತೋ ನ ಭವಿಷ್ಯತಿ' ಜಾತಿಗೆ ಸೇರಿದವನು.

ಪಂಪ ಮಹಾಕವಿಯು ತನ್ನ ಕಾವ್ಯಗಳಲ್ಲಿ ಕೊಟ್ಟಿರುವ ಹೇಳಿಕೆಗಳನ್ನು ಸಂಗ್ರಹಿಸಿ, ಆತನ ಜೀವನ ಕಥೆಯನ್ನು ಹೀಗೆ ನಿರೂಪಿಸಬಹುದು: ಆತನ ಪೂರ್ವಜರು ವೆಂಗಿಮಂಡಲದ (ಕೃಷ್ಣಾ – ಗೋದಾವರಿಗಳ ಮಧ್ಯಪ್ರವೇಶ)ವೆಂಗಿಪಳುವೆಂಬ ಅಗ್ರಹಾರದಲ್ಲಿ ಇದ್ದವರು. ಅವರು ಜಾತಿಯಲ್ಲಿ ಬ್ರಾಹ್ಮಣರು, ಶ್ರೀವತ್ಸಗೋತ್ರದವರು.

ಪಂಪನ ಮುತ್ತಜ್ಜನ ತಂದೆ ಮಾಧವ ಸೋಮಯಾಜಿ, ಯಜ್ಞಯಾಗಾದಿಗಳನ್ನು ಮಾಡಿ ಎಲ್ಲರಿಂದಲೂ ಪೂಜ್ಯನೆನಿಸಿದ್ದವನು. ಆತನಿಂದ ಕ್ರಮವಾಗಿ ಅಭಿಮಾನಚಂದ್ರ, ಕೊಮರಯ್ಯ, ಅಭಿರಾಮದೇವರಾಯ – ಇವರು ಮಗ, ಮೊಮ್ಮಗ, ಮರಿಮಗನಾಗಿ ಜನಿಸಿದರು. ಈ

ಅಭಿರಾಮದೇವರಾಯನೇ ಪಂಪನ ತಂದೆ. ಈತನ ಹೆಸರು ಭೀಮಪ್ಪಯ್ಯನೆಂದು ಈಚೆಗೆ ತಿಳಿದು ಬಂದಿದೆ. ಈತನು ಸ್ವಜಾತಿಯನ್ನು ತ್ಯಜಿಸಿ ಜೈನಮತಾವಲಂಬಿಯಾದನು. ಬ್ರಾಹ್ಮಣ ಜಾತಿ ಉತ್ತಮವಾದುದಾದರೂ ಅದು 'ಅಹಿಂಸಾ ಪರಮೋಧರ್ಮ'ವನ್ನು ಅಳವಡಿಸಿಕೊಂಡರು ಅತ್ಯುತ್ತಮವಾದೆಂತಾಯಿತೆಂದು ಪಂಪನ ಭಾವನೆ. ತನ್ನ ಪೂರ್ವಜರು ಯಜ್ಞಯಾಗಾದಿಗಳ ಹೋಮಧೂಮದಿಂದ ತಮ್ಮ ಕೀರ್ತಿಗೆ ಕಪ್ಪು ಹತ್ತಿಸಿಕೊಂಡರಲ್ಲಾ ಎಂದು ಪಂಪ ಮರುಗುತ್ತಾನೆ. ಕಾರಣಾಂತರಗಳಿಂದ ಅಭಿರಾಮದೇವರಾಯನು ಹುಟ್ಟಿದೂರನ್ನು ಬಿಟ್ಟು ಕನ್ನಡನಾಡಿಗೆ ವಲಸೆ ಬಂದಂತೆ ಕಾಣಬರುತ್ತದೆ. ಹಾಗೆ ಬಂದವನು ಬನವಾಸಿ ಪ್ರಾಂತದಲ್ಲಿ ನೆಲೆಸಿರಬೇಕು. ಪಂಪನು ಇಲ್ಲಿಯೇ ಹುಟ್ಟಿ ಬೆಳೆದನೆಂದು ಊಹಿಸಲು ಸಾಕಷ್ಟು ಕಾರಣಗಳಿವೆ. ಆತನು ತನ್ನ ಕೃತಿರತ್ನಗಳಲ್ಲಿ ಒಂದಾದ 'ವಿಕ್ರಮಾರ್ಜುನ ವಿಜಯ'ದಲ್ಲಿ ಬನವಾಸಿ ದೇಶವನ್ನು ಅತ್ಯಂತ ಹೃದಯಂಗಮವಾಗಿ ಬಣ್ಣಿಸಿದ್ದಾನೆ. ಅದಲ್ಲದೆ, ತನ್ನ ಕಾವ್ಯದ ಭಾಷೆ 'ಪುಲಿಗೆರೆಯ ತಿರುಳು ಕನ್ನಡ'ವೆಂದು ಆತ ಹೇಳಿಕೊಂಡಿರುವುದು (ಪುಲಿಗೆರೆ ಬನವಾಸಿಯ ನೆರೆಯಲ್ಲಿದೆ) ನಮ್ಮ ಊಹೆಗೆ ಮತ್ತಷ್ಟು ಪುಷ್ಟಿಯನ್ನು ನೀಡುತ್ತದೆ.

ಪಂಪನಿಗೆ ತನ್ನ ದೇಹಸೌಂದರ್ಯದಲ್ಲಿ ತುಂಬ ಹೆಮ್ಮೆ. ಅದನ್ನು ಹೇಳಿಕೊಳ್ಳುತ್ತಾ

ಕದಳೀಗರ್ಭಶ್ಯಾಮಂ । ಮೃದುಕುಟಿಲಶಿರೋರುಹಂ, ಸರೋರುಹವದನಂ
ಮೃದುಮಧ್ಯಮತನು, ಹಿತಮಿತ । ಮೃದುವಚನಂ ಲಲಿತಮಧುರಸುಂದರ ವೇಷಂ

ಬಾಳೆದಿಂಡಿನ ಮಧ್ಯದಲ್ಲಿ ಕಾಣಬರುವ ನಸುಕಪ್ಪು ಬಣ್ಣ, ಮೃದುವಾದ ಗುಂಗುರುಕೂದಲು, ಕಮಲದಂತೆ ದುಂಡಾದ ಮುಖ, ಮಟ್ಟಸವಾದ ಸುಕುಮಾರದೇಹ, ಹಿತಮಿತವಾದ, ಮೃದುವಾದ ಮಾತುಗಳು, ಇವುಗಳಿಗೆ ಒಪ್ಪುವಂತೆ ಮನೋಹರವಾದ ವೇಷ ಭೂಷಣ. ಹೀಗೆ 'ಸೊಗಸುಗಾರ ಪುಟ್ಟಸಾಮಿ'ಯಾದ ಈತನು 'ವನಿತಾಕಟಾಕ್ಷ ಕುವಲಯವನಚಂದ್ರ'ನಾಗಿದ್ದನಂತೆ! ಆ ರಸಿಕ ಶಿಖಾಮಣಿಯು ಸರಸ್ವತಿಯು ಧರಿಸಿರುವ ಮಣಿಹಾರವಂತೆ!

ಕೇರಳ ವಿಟೀ ತಟೀ ಸೂ । ತ್ರಾರುಣಮಣಿ, ಮಲಯಯುವತಿದರ್ಪಣನಾಂಧ್ರೀ
ನೀರಂಧ್ರ ಬಂಧುರಸ್ತನತಟಿ । ಹಾರನುದಾರಂ ಸರಸ್ವತೀಮಣಿಹಾರಂ

ಕೇರಳದ ರಮಣಿಯರ ಒಡ್ಯಾಣದ ರತ್ನ, ಮಲಯದೇಶದ ಸುಂದರಿಯರ ಕೈಗನ್ನಡಿ, ಆಂಧ್ರ ಸ್ತ್ರೀಯರ ವಿಸ್ತಾರವಾದ ಎದೆಯ ಮೇಲಿನ ಹಾರ, ಈ ಸರಸ್ವತೀ ಮಣಿಹಾರನಾದ ಪಂಪ.

ರಸಿಕರ ಋಷಿಯಾದ ಪಂಪನು ಹುಟ್ಟಿ ಬೆಳೆದುದು ಬನವಾಸೀ ಪ್ರಾಂತವಾದರೂ ಆತನು ತನ್ನ ಉಪಜೀವನಕ್ಕಾಗಿ ಹೋಗಿ ನೆಲಸಿದುದು ಹೈದರಾಬಾದು ಜಿಲ್ಲೆಯ ವೇಮಲವಾಡದಲ್ಲಿ. ಚಾಲುಕ್ಯರಾಜರಾದ ಅರಿಕೇಸರಿಯು ಅಲ್ಲಿ ರಾಜ್ಯಭಾರ ನಡೆಸುತ್ತಿದ್ದ. ಆ ರಾಜನು ರಾಷ್ಟ್ರಕೂಟ ಚಕ್ರವರ್ತಿಯ ಸಾಮಂತನಾದರೂ, ಆ ಚಕ್ರವರ್ತಿ ವಂಶದ ಸಂಬಂಧಿಯಾಗಿ, ಆಪ್ತನಾಗಿ, ಪ್ರಭಾವಶಾಲಿಯಾಗಿದ್ದನು. ಪಂಪನು ಆತನ ಆಶ್ರಯವನ್ನು ಪಡೆದು, ಆತನ ಮೆಚ್ಚಿಗೆಗೂ ಗೌರವಕ್ಕೂ, ಗೆಳೆತನಕ್ಕೂ ಪಾತ್ರನಾದನು. ಪಂಪನು ಸ್ವಭಾವತಃ ಬಹು ಸ್ವಾಭಿಮಾನಿ 'ಪೆಱರೀವುದೇಂ? ಪೆಱರು ಮಾಡುವುದೇಂ? ಪೆಱರಿಂದಮಪ್ಪುದೇಂ? ಎಂಬ ಧೋರಣೆಯವನು. ಆದರೂ ಅರಿಕೇಸರಿಯ ಗೆಳೆತನ ಆತನ ಮನಸ್ಸನ್ನು ಸೂರೆಗೊಂಡು, ಆತನ ಆಶ್ರಯದಲ್ಲಿ ನಿಲ್ಲಿಸಿತೆಂದು ತೋರುತ್ತದೆ. ಇತಿಹಾಸದಲ್ಲಿ ಬಾಣ-ಶ್ರೀಹರ್ಷ, ಪುರಾಣದಲ್ಲಿ ಕರ್ಣ-ದುರ್ಯೋಧನರಿಗೆ ಇದ್ದ ಗೆಳೆತನದಂತೆ ಪಂಪ-ಅರಿಕೇಸರಿಗಳ ಸ್ನೇಹವೂ ಲೋಕೋತ್ತರವಾದುದು. ರಾಜನು 'ಗುಣಾರ್ಣವ'ನೆಂಬ ಬಿರುದನ್ನು ತಳೆದಿದ್ದರೆ, ಕವಿಯು 'ಕವಿತಾಗುಣಾರ್ಣವ'ನಾಗಿ ಆತನ ಗೆಳೆತನವನ್ನು ಅನುಭವಿಸಿದ. ರಾಜನ

ಅಚ್ಚುಮೆಚ್ಚಿನ ಕವಿಯಾಗಿದ್ದು, ಸೇನಾಪತಿಯಾಗಿದ್ದು, ಮಂತ್ರಿಯಾಗಿದ್ದು, ಮಿತ್ರನಾಗಿದ್ದು ಐಶ್ವರ್ಯ, ಕೀರ್ತಿ ಪ್ರತಿಷ್ಠೆಗಳನ್ನು ಪಡೆದು ತುಂಬು ಜೀವನವನ್ನು ಬಾಳಿದ ಸುಕೃತಶಾಲಿ ಪಂಪ.

ಪಂಪಮಹಾಕವಿ ಎರಡು ಮಹಾಕಾವ್ಯಗಳನ್ನು ನಮಗೆ ಕೊಟ್ಟಿದ್ದಾನೆ. 'ಬೆಳಗುವೆನಿಲ್ಲಿ ಲೌಕಿಕಮನ್', ಎಂದು ಹೇಳಿ 'ಸಮಸ್ತಭಾರತ'ವನ್ನೂ 'ಅಲ್ಲಿ ಜಿನಾಗಮಮಂ' ಎಂದು ಹೇಳಿ 'ಆದಿಪುರಾಣ'ವನ್ನೂ, ಒಂದನ್ನು ಆರು ತಿಂಗಳಲ್ಲಿಯೂ ಎರಡನೆಯದನ್ನು ಮೂರು ತಿಂಗಳಲ್ಲಿಯೂ ಬರೆಯುವುದಾಗಿ ಕೇಳಿದವರು ಬೆಚ್ಚಿ ಬೀಳುವಂತಹ – ಪ್ರತಿಜ್ಞೆಯನ್ನು ಮಾಡಿ, ಅದರಂತೆಯೆ ಬರೆದು ಮುಗಿಸಿದುದಾಗಿ ತನ್ನ 'ಸಮಸ್ತ ಭಾರತ'ದಲ್ಲಿ ಹೇಳಿಕೊಂಡಿದ್ದಾನೆ. ಪಂಪನ ಪ್ರತಿಜ್ಞೆ ನಿಜವಾಗಿಯೂ ಕೇಳಿದವರು ಮೆಟ್ಟಿಬೀಳುವಂತಹ ಪ್ರತಿಜ್ಞೆಯೆ. ಆತನು ಕನ್ನಡದಲ್ಲಿ ಬರೆಯಲು ಎತ್ತಿಕೊಂಡ ಕಾವ್ಯಗಳೆರಡೂ ಸಂಸ್ಕೃತದ ಮೇರುಕೃತಿಗಳು. ಒಂದು ಲಕ್ಷಶ್ಲೋಕಗಳ ಮಹಾಭಾರತವನ್ನು ಓದಿ ಅರಗಿಸಿಕೊಳ್ಳುವುದು ಕೂಡ ಆರು ತಿಂಗಳಲ್ಲಿ ಅಸಾಧ್ಯ. ಅಂತಹುದರಲ್ಲಿ, ಆ ಹಿರಿದಾದ 'ಕತೆಯ ಮೆಯ್ಗೆಡಲೀಯದೆ'–ಕತೆಯನ್ನು ಸ್ವಲ್ಪವೂ ಲೋಪಮಾಡದೆ–ಮನೋಹರವಾದ ವರ್ಣನೆಯನ್ನು ಸೇರಿಸಿಕೊಂಡು, ಆತ 'ಸಮಸ್ತ ಭಾರತ'ವನ್ನೂ ಬರೆದಿದ್ದಾನೆ. ಈ ಭಾರತದಂತೆ ಆತನ 'ಆದಿಪುರಾಣ'ವೂ ಸಂಸ್ಕೃತದ ಮೇರುಕೃತಿಯೊಂದರ ಕನ್ನಡ ಅವತರಣವೇ. ಇದರ ಮೂಲವಾದ ಜಿನಸೇನಮುನಿಯ 'ಮಹಾಪುರಾಣ'ವು ಬೃಹತ್ತು ಮಹತ್ತುಗಳೆರಡಲ್ಲೂ ಜೈನಪುರಾಣಗಳಲ್ಲಿ ಅಗ್ರಗಣ್ಯವಾದುದು. ಈ ಎರಡೂ ಕಾವ್ಯಗಳನ್ನು ಬರೆದಮೇಲೆ ಪಂಪನು ತಾನು ಕೃತಕೃತ್ಯನಾಗಿರುವುದನ್ನು ಮನಗಂಡು, ಆತ್ಮಪ್ರತ್ಯಯದಿಂದ ತುಂಬಿ ತುಳುಕುತ್ತಾ 'ಮುನ್ನಿನ ಕಬ್ಬಮನೆಲ್ಲ ಮಿಕ್ಕಿ ಮೆಟ್ಟಿದವು ಸಮಸ್ತ ಭಾರತಮುಮಾದಿಪುರಾಣ ಮಹಾ ಪ್ರಬಂಧಮುಂ' ಎಂದು ಘೋಷಿಸುತ್ತಾನೆ. ನಿಜ, ಪಂಪನ ಕೃತಿಸುಭಗತೆ ಆತನಿಗಿಂತಲೂ ಹಿಂದೆ ಹುಟ್ಟಿದ ಸಾಹಿತ್ಯವನ್ನು ನಾಮಾವಶೇಷವಾಗಿ ಮಾಡಿದೆ.

ಪಂಪನು ತನ್ನ 'ಆದಿಪುರಾಣ'ದಲ್ಲಿ ತಾನು ಹುಟ್ಟಿದ ಮತ್ತು ಕಾವ್ಯ ಸೃಷ್ಟಿ ಮಾಡಿದ ಕಾಲವನ್ನು ಹೇಳಿಕೊಂಡಿದ್ದಾನೆ. 'ದುಂದುಭಿ ಗಂಭೀರ ನಿನದಂ' ಆದ ತಾನು 'ದುಂದುಭಿಸಂವತ್ಸರೋದ್ಭವಂ.' ತಾನು ಆದಿಪುರಾಣವನ್ನು ಬರೆದುದು 'ಶಕವರ್ಷಮೆಂಟನೂಱರ್ಕೆ ಕಡೆಯೊಳಱುವತ್ತು ಮೂಱು ಸಂದಂದು' ಎಂದರೆ ಕ್ರಿ.ಶ. ೯೪೧ ಅಥವಾ ೯೬೨ಕ್ಕೆ ಸರಿಹೋಗುವ ಪ್ಲವಸಂವತ್ಸರ, ದುಂದುಭಿ ಸಂವತ್ಸರದ್ದಿಂದ ಪ್ಲವಸಂವತ್ಸರಕ್ಕೆ ೩೯ ವರ್ಷ. ಈ ಕಾವ್ಯ ಸೃಷ್ಟಿಯಾದಾಗ ಕವಿಗೆ ೩೯ ವರ್ಷ. ಆದ್ದರಿಂದ ಆತ ಹುಟ್ಟಿದುದು ಕ್ರಿ.ಶ. ೯೦೨ ಅಥವಾ ೯೦೩.

ಪಂಪಕವಿಯ ಕಾವ್ಯಗಳಲ್ಲಿ 'ಆದಿಪುರಾಣ' ಮೊದಲನೆಯದು. ಈ ಕಾವ್ಯವು ಕವಿಗೆ ಸಂತೋಷಪ್ರದವಾಗಿರುವಂತೆ ಸಮಸ್ತ ಜೀವಲೋಕಕ್ಕೂ ಸಂತೋಷಪ್ರದವಾದುದೆಂದು ಕವಿಯ ಹೇಳಿಕೆ. ಅದಕ್ಕೆ ಆತ ಕೊಡುವ ಕಾರಣ 'ನೆಗಳ್ದಾದಿ ಪುರಾಣದೊಳಱಿವುದು ಕಾವ್ಯಧರ್ಮಮಂ ಧರ್ಮಮುಮಂ' ಅಲ್ಲಿನ ಜೈನಧರ್ಮವು – ಅನೇಕ ವೇಳೆ ಅದು ವಿಶ್ವಧರ್ಮವೂ ಆಗುತ್ತದೆ. ಜೈನರಿಗೆ ಅತ್ಯಂತ ಪ್ರಿಯವಾಗಿದ್ದರೆ, ಕಾವ್ಯಧರ್ಮ ಸರ್ವರಿಗೂ ಸಮಾನವಾಗಿಯೆ ಪ್ರಿಯವಾಗಿದೆ. ಜೈನರಲ್ಲದವರೂ ಇಲ್ಲಿನ ಕಾವ್ಯ ಸೌಂದರ್ಯವನ್ನು ಆಸ್ವಾದಿಸಿ ಆನಂದಿಸಬಹುದು. ಆದಿಪುರಾಣವು ಧರ್ಮ ಗ್ರಂಥವಾದುದರಿಂದ ಮೂಲವನ್ನು ಚಾಚೂ ತಪ್ಪದಂತೆ ಕವಿ ಅನುಸರಿಸಬೇಕಾಗಿದೆ. ಆದರೂ ಆ ಚೌಕಟ್ಟಿನೊಳಗೆ ಇರುವಷ್ಟು ಅವಕಾಶದಲ್ಲಿಯೆ ಆತನ ಪ್ರತಿಭೆ ಕಲ್ಪನಾಶಕ್ತಿಗಳು ಗರಿಗೆದರಿ ನರ್ತಿಸುವುದನ್ನು ನಾವು ಕಾಣುತ್ತೇವೆ. ಜೈನಧರ್ಮದ ಸಾರಸರ್ವಸ್ವವೆಂದರೆ ಭೋಗವಿರತಿ. ಆದರೆ

ಪಂಪನ ಕಲಾಶಕ್ತಿ ಅದನ್ನು ಹೃದ್ಯವಾಗಿ ಮಾಡಿದೆ. ನಾಡಾಡಿಯಾದವನು ನಡೆದು ಹೋಗುವಾಗ ಮರಳುಕಾಡಾಗಿದ್ದುದು ಪಂಪನ ಕವಿದೃಷ್ಟಿಯ ಸೇಚನೆಯಿಂದ ನಂದನವನವಾಗುತ್ತದೆ.

ಆದಿಪುರಾಣವು ಆದಿತೀರ್ಥಂಕರನಾದ ವೃಷಭನಾಥನ ಜೀವನ ಕಥೆ; ಇದರಲ್ಲಿ ಆತನ ಭವಾವಳಿಯೆಲ್ಲವೂ ವರ್ಣಿತವಾಗಿದೆ. ಇದು ಪಂಪನ ಪ್ರತಿಭೆಯ ಫಲವಾಗಿ ಚಲನಚಿತ್ರದ ದೃಶ್ಯ ಪರಂಪರೆಯಂತೆ ನಮ್ಮ ಕಣ್ಣ ಮುಂದೆ ಹಾದುಹೋಗುತ್ತದೆ. ಒಂದೊಂದು ದೃಶ್ಯವೂ ಚೇತೋಹಾರಿಯಾಗಿದೆ. ವೃಷಭನಾಥನ ಜೀವ ತನಗಂಟಿದ ಭೋಗಾಸಕ್ತಿಯನ್ನು ಜನ್ಮ ಜನ್ಮಾಂತರಗಳಿಗೂ ಕೊಂಡೊಯ್ಯುತ್ತದೆ. ಆ ಜೀವ ಲಲಿತಾಂಗನೆಂಬ ದೇವತೆಯಾಗಿದ್ದಾಗ ಸ್ವಯಂಪ್ರಭೆಯೆಂಬುವಳು ಆತನ ಮಡದಿಯಾಗಿರುತ್ತಾಳೆ. ಆ ಮನದನ್ನೆಯಲ್ಲಿ ತಲ್ಲೀನನಾಗಿದ್ದ ಆತನಿಗೆ ಅವಸಾನಕಾಲ ಬಂದಾಗ ಕೂರ್ತ ಮಡದಿಯಿಂದ ಅಗಲುವುದು ಅತ್ಯಂತ ಸಂಕಟಕರವಾಗಿದೆ. ಅದನ್ನು ತಪ್ಪಿಸುವಂತೆ ಆತ ಎಲ್ಲರನ್ನೂ ಹೆಂಡತಿಯನ್ನೂ ಮೊರೆಯಿಡುತ್ತಾನೆ. ಆದರೆ ಎಲ್ಲವೂ ವ್ಯರ್ಥ. 'ಎಳೆದುಯ್ವಂತ ಕಂಗಿಲ್ಲ ದೇವಾಂಗನೆಯರ್ ಮಜಾಂಪರೆ ?' ಮರುಜನ್ಮದಲ್ಲಿ ಆತ ವಜ್ರಜಂಘನೆಂಬ ವಿದ್ಯಾಧರರಾಜನಾಗಿ ಹುಟ್ಟುತ್ತಾನೆ. ಅತ್ತ ಸ್ವಯಂಪ್ರಭೆ 'ಎನ್ನರಸನೆಲ್ಲಿಹನೊ ಲಲಿತಾಂಗವಲ್ಲಭಂ' ಎಂದು ಅಳುತ್ತಾ, ತನ್ನ ಆಯಸ್ಸನ್ನು ಸಮೆಸಿ, ಮರುಜನ್ಮದಲ್ಲಿ ಶ್ರೀಮತಿಯೆಂಬ ರಾಜಕುಮಾರಿಯಾಗಿ ಹುಟ್ಟಿ ವಜ್ರಜಂಘನ ರಾಣಿಯಾಗುತ್ತಾಳೆ. ಭೋಗಸರಸಿಯ ರಾಜಹಂಸಗಳಾಗಿ ಬಾಳಿದ ಅವರಿಗೆ ಮೃತ್ಯು ಸನ್ನಿಹಿತವಾಯಿತು. ಅದೆಷ್ಟು ಆಶ್ಚರ್ಯಕರವಾಗಿ ಬಂತು ! ಅವರು ಶಯ್ಯಾಗೃಹದಲ್ಲಿ ಮೈಮರೆತು ಮಲಗಿರುವಾಗ, ಅವರ ಕೇಶ ಸಂಸ್ಕಾರಕ್ಕೆಂದು ಹಾಕಿದ್ದ ಧೂಮವು ಅವರ ಅಪಮೃತ್ಯುವಿಗೆ ಕಾರಣವಾಯಿತು. ಶಯ್ಯಾಗೃಹದ ಗವಾಕ್ಷಿಯನ್ನು ತೆರೆಯುವುದು ಮರೆತುಹೋಗಿದ್ದುದರಿಂದ, 'ಕೃಷ್ಣಾಗರು ಧೂಪ ಧೂಮನಿವಹಂ, ಕೃಷ್ಣೋರಗಂ ಕೊಲ್ವವೋಲ್' ಅವರನ್ನು ಉಸಿರು ಕಟ್ಟಿಸಿ ಸಾಯಿಸಿತು. ಇದು ಭೋಗದ ಹಣೆಬರಹ. ಇದನ್ನು ನೆನೆದ ಕವಿಗೆ ಆಶ್ಚರ್ಯ ವಿಷಾದಗಳೊಡನೆ ಮೆಚ್ಚಿಗೆಯೂ ಸ್ಫುರಿಸಿದೆ:

ಬಿಡದೆ ಪೊಗೆಸುತ್ತೆ, ತೋಳಂ । ಸಡಲಿಸಿದಾ ಪ್ರಾಣವಲ್ಲಭರ್ ಪ್ರಾಣಮನಂ
ದೊಡಗಳೆದರೋಪರೋಪರೊ । ಳೊಡ ಸಾಯಲ್ಪಡೆದರಿನ್ನವೇಂ ಸೈಪೊಳವೆ

ಜೊತೆಜೊತೆಯಾಗಿ ಬಾಳಿದ ಈ ಗಂಡಹೆಂಡಿರು ಪರಸ್ಪರ ಆಲಿಂಗನದಲ್ಲಿಯೆ ಏಕಕಾಲದಲ್ಲಿ ಸಾಯುವುದಕ್ಕಿಂತ ಇನ್ನೂ ದೊಡ್ಡ ಪುಣ್ಯವುಂಟೆ ? ಎಂದು ಕವಿ ಕೇಳುತ್ತಾನೆ. ಒಲಿದ ಹೃದಯಗಳೆರಡರ ಪ್ರಣಯಸಾಂದ್ರತೆಯನ್ನು ಮಹಾಕವಿ ಪಂಪ ಎಷ್ಟು ಮಾರ್ಮಿಕವಾಗಿ ಚಿತ್ರಿಸಿದ್ದಾನೆ ! ಈ ಅನುಭವದಿಂದ ವಜ್ರಜಂಘನ ಜೀವ ಸ್ವಲ್ಪ ಮಟ್ಟಿಗೆ ಪರಪಾಕಗೊಂಡಿತೆಂದು ತೋರುತ್ತದೆ. ಮರುಜನ್ಮದಲ್ಲಿ ತನ್ನ ಭೋಗತೃಷ್ಣೆಯನ್ನು ಅಣಗಿಸಿಕೊಂಡು, ಗೆಳೆಯನ ವಿವೇಕದಂತೆ ಸಮ್ಯಕ್ ವ್ರತವನ್ನು ಕೈಕೊಳ್ಳುತ್ತಾನೆ. ಕಡೆಯ ಜನ್ಮದಲ್ಲಿ ಆತನು ನಾಭಿರಾಜನ ಮಗನಾದ ಪುರುದೇವನಾಗಿ ಹುಟ್ಟುತ್ತಾನೆ ಕೆಲಕಾಲ ರಾಜ್ಯಭಾರ ಮಾಡಿದ ಮೇಲೆ ವೈರಾಗ್ಯವನ್ನು ತಾಳಿ ಪರಿನಿಷ್ಕ್ರಮಣಕ್ಕೆ ಸಿದ್ಧನಾಗುತ್ತಾನೆ. ಆಗ ದೇವೇಂದ್ರನು ಆತನ ಮನರಂಜನೆಗೆಂದು ನೀಲಾಂಗನೆಯೆಂಬ ದೇವಕನ್ನಿಕೆಯ ನೃತ್ಯವನ್ನು ಏರ್ಪಡಿಸುತ್ತಾನೆ. 'ಕರ್ಬಿನ ಬಿಲ್ಲಂ ಮಸೆದ ಮದನನ ಕಣೆ ಬರ್ದುಂಕಿತ್ತೆನಿಸುತ್ತೆ' ಆ ಅಪ್ಸರೆ ಪುರುದೇವನ ಸಭೆಯಲ್ಲಿ ನರ್ತನ ಮಾಡುತ್ತಾಳೆ. ಆ ಸುರಸುಂದರಿಯ ನಿರಿ, ಕಪ್ಪು ಮುಂಗುರುಳು, ಕೊರಳಹಾರದ ಮುತ್ತು ಕೂಡ ತಾಳಲಯಬದ್ಧವಾಗಿ ನರ್ತಿಸುತ್ತಿದ್ದವಂತೆ! ಅವಳ ಕಣ್ಣು ತಿರುಗಿಸಿದ ಕಡೆ ಬೆಳ್ದಿಂಗಳು ಚೆಲ್ಲಿದಂತಾಗುತ್ತದೆ. ಅವಳು ಸೀರೆಯನ್ನು ಸರಿಮಾಡಿ ಕೊಳ್ಳುವುದು ಅಥವಾ ಮುತ್ತಿನಹಾರವನ್ನು ಸರಿಮಾಡಿಕೊಳ್ಳುವುದು 'ಮದನರಾಜವಿಳಾಸ'ದಂತೆ

ಇತ್ತಂತೆ! ನಾಟ್ಯಮಧ್ಯದಲ್ಲಿಯೇ ಅವಳ ಆಯಸ್ಸು ಮುಗಿಯಿತು, ಅವಳು ಇದ್ದಕ್ಕಿದ್ದಂತೆ ಕರಗಿಹೋದಳು. ಆಗ ದೇವೇಂದ್ರನು ರಸಭಾಸವಾಗದಂತೆ, ಅವಳಂತೆಯೆ ಅಚ್ಚಳಿಯದಿದ್ದ ಬೇರೊಬ್ಬಳನ್ನು ಸೃಷ್ಟಿಸಿ, ನಾಟ್ಯವನ್ನು ಮುಂದುವರಿಸಿದನು. ಎವೆಯಿಕ್ಕುವಷ್ಟರಲ್ಲಿ ನಡೆದುಹೋದ ಈ ಸಂಗತಿ ಸಭೆಯಲ್ಲಿದ್ದವರಾರಿಗೂ ಗೊತ್ತಾಗಲಿಲ್ಲ. ಆದರೆ ಪುರುದೇವನಿಗೆ ಮಾತ್ರ ಗೋಚರವಾಯಿತು. ಪರಿಪಾಕಗೊಂಡಿದ್ದ ಆತನಲ್ಲಿ ವೈರಾಗ್ಯ ಸ್ಥಿರವಾಯಿತು. ಆತನು:

ತನು ರೂಪವಿಭವ ಯೌವನ । ಧನ ಸೌಭಾಗ್ಯ ಯುರಾದಿಗಳ್ಗೆಣೆ ಕಡುಮಿಂ
ಚಿನ ಪೊಳಪು ಮುಗಿಲನೆಳಲಿಂ । ದ್ರದ ಬಿಲ್ ಬೊಬ್ಬುಳಿಕೆಯುರ್ಬು ಪರ್ಬಿದ ಭೋಗಂ

ಎಂದುಕೊಂಡ. ಜನ್ಮ ಜನ್ಮಾಂತರಗಳಿಂದಲೂ ತಾನು ಅನುಭವಿಸಿದ ಭೋಗಗಳೆಲ್ಲ ಆತನಿಗೆ ಜ್ಞಾಪಕಕ್ಕೆ ಬಂದವು. ಆ ಜನ್ಮಗಳಲ್ಲಿ ಭೋಗಸಮುದ್ರವನ್ನೆ ಕುಡಿದು ಕೂಡ ಹೋಗದ ಭೋಗದಾಹ 'ನರಭೋಗಮೆಂಬೀ ಪನಿಪುಲ್ಲಂ ನೆಕ್ಕೆ ತೃಷ್ಣೆ ಪೇಳ್ ಪೋದಪುದೆ ಮಾನವಭೋಗವೆಂಬ ಹುಲ್ಲ ಮೇಲಿನ ಹನಿಯನ್ನು ನೆಕ್ಕಿದರೆ ಹೋಗುತ್ತದೆಯೆ' ? – ಎಂದುಕೊಂಡ. ಆತನು ತಪಸ್ಸು ಮಾಡಿ ಜಿನನಾಗುತ್ತಾನೆ. ಈ ಭಾಗಗಲ್ಲಿ ಕವಿ ಸೃಷ್ಟಿಸಿರುವ ಜಿನಜನ್ಮಾಭಿಷೇಕದ ಚಿತ್ರ 'ಸಾಹಿತ್ಯದಲ್ಲಿ ಭವ್ಯತೆ'ಗೆ ಒಂದು ದೊಡ್ಡ ಉದಾಹರಣೆಯಂತಿದೆ.

ಕಾವ್ಯಧರ್ಮ, ಧರ್ಮಗಳು ಶಬ್ದಾರ್ಥಗಳಂತೆ ಹೀಗೆ ಒಂದಾಗಿ ಈ ಕಾವ್ಯ ವಾಹಿನಿಯಲ್ಲಿ ಪ್ರವಹಿಸುತ್ತಿವೆಯೆಂಬುದನ್ನು ಕಾವ್ಯದ ಉದ್ದಕ್ಕೂ ನೋಡುತ್ತಾ ಹೋಗಬಹುದು. ಪುದುಚಕ್ರಿಯ ಮಕ್ಕಳಾದ ಭರತ ಬಾಹುಬಲಿಗಳ ಪ್ರಸಂಗವೊಂದು ಆದಿಪುರಾಣದ ರಸಘಟ್ಟ. ಹಿರಿಯ ಮಗನಾದ ಭರತನು ತನ್ನ ಆಯುಧಾಗಾರದಲ್ಲಿ ಹುಟ್ಟಿದ ಚಕ್ರರತ್ನದ ಪ್ರಭಾವದಿಂದ ಷಟ್ ಖಂಡಗಳ ಚಕ್ರವರ್ತಿಯಾಗಿ, ತನ್ನ ತಮ್ಮಂದಿರನ್ನೆಲ್ಲ ತನ್ನ ಪ್ರಭುತ್ವಕ್ಕೆ ಒಳಗುಮಾಡಲು ಯತ್ನಿಸುತ್ತಾನೆ. ಅವರು ಸಂಸಾರಕ್ಕೆ ಹೇಸಿ, ತಪೋನಿರತರಾಗುತ್ತಾರೆ. ಅವರಲ್ಲಿ ಒಬ್ಬನಾದ ಬಾಹುಬಲಿ ಭರತನೊಡನೆ ಪ್ರತಿಭಟಿಸಿ ನಿಲ್ಲುತ್ತಾನೆ. ಅವರಿಬ್ಬರಿಗೂ ದೃಷ್ಟಿಯುದ್ಧ, ಜಲಯುದ್ಧ, ಮಲ್ಲಯುದ್ಧಗಳು ನಡೆದು ಭರತ ಸೋಲುತ್ತಾನೆ. ಸಿಗ್ಗಿನಿಂದ ಖತಿಗಿಳಿದ ಭರತ ಅಧರ್ಮಕ್ಕೆ ಕೈಯಿಟ್ಟು, ಚಕ್ರರತ್ನವನ್ನು ಅವನ ಮೇಲೆ ಪ್ರಯೋಗಿಸುತ್ತಾನೆ. ಇದನ್ನು ಕಂಡು ಜಿಹಾಸೆಗೊಂಡ ಬಾಹುಬಲಿ ರಾಜ್ಯವನ್ನು ಅಣ್ಣನಿಗೆ ವಹಿಸಿ ತಪಸ್ಸಿಗೆ ಹೋಗುತ್ತಾನೆ.

ಮುಕ್ತಿಯಾತ್ರೆಗೆಂದು ಹೊರಟ ಚೇತನವೊಂದು ಜನ್ಮಾಂತರಗಳ ಅನುಭವಗಳಿಂದ ಸಂಸ್ಕಾರಗೊಂಡು, ಕ್ರಮಕ್ರಮವಾಗಿ ಮೇಲಕ್ಕೇರುತ್ತಾ, ಹೇಗೆ ತನ್ನ ಗುರಿಯನ್ನು ಮುಟ್ಟಿತೆಂಬುದು ಆದಿಪುರಾಣದಲ್ಲಿ ಮನೋಹರವಾಗಿ ನಿರೂಪಿತವಾಗಿದೆ. ಆದರೆ ಜೈನಧರ್ಮದ ನಿರೂಪಣೆಗಾಗಿಯೇ ಹೊರಟಿರುವ ಈ ಪುರಾಣ ಕಾವ್ಯದಲ್ಲಿ ಮತಪ್ರಕ್ರಿಯೆ, ಧರ್ಮವಿವರಣೆ, ನೀತಿನಿರೂಪಣೆ ಅನಿವಾರ್ಯ. ಬಾಯಿ ಮೊಸರಾಗಬೇಕೆನ್ನುವವರು ಕೈಕೆಸರನ್ನೂ ಮಾಡಿಕೊಳ್ಳಬೇಕಾಗುತ್ತದೆ.

ಇನ್ನು ಪಂಪನ 'ಸಮಸ್ತ ಭಾರತ'ವನ್ನು ನೋಡೋಣ. ಕವಿಯ ಪೋಷಕನಾದ ಅರಿಕೇಸರಿ ವ್ಯಾಸಭಾರತವನ್ನು ಕನ್ನಡದಲ್ಲಿ ಬರೆಸಬೇಕೆಂದು ಬಯಸಿದ. ಆಸ್ಥಾನಕವಿಗಳು 'ಕತೆಯ ಮೆಯ್ಗೆಡಲೀಯದೆ' ಸಂಗ್ರಹವಾಗಿ ಬರೆಯಲು ಪಂಪನೇ ತಕ್ಕವನೆಂದರು. ಪಂಪನಿಗೆತನ್ನ ಸ್ವಾಮಿಯಾದ ಅರಿಕೇಸರಿ ತನ್ನ ಸದ್ಗುಣಗಳಿಂದ ಪ್ರಾಚೀನರಾಜರನ್ನು ಮೀರಿಸಿದವನಾಗಿ ಕಾಣಿಸಿದ. ಆತನನ್ನೂ ಭಾರತದ ಅರ್ಜುನನಲ್ಲಿ ಹೋಲಿಸಿ ಬರೆಯಬೇಕೆನಿಸಿತು. ಅರಿಕೇಸರಿಯೇ ಅರ್ಜುನ, ಅರ್ಜುನನೇ ಅರಿಕೇಸರಿ–ಎಂಬ ಅಭೇದಭಾವದಿಂದ ತನ್ನ ಭಾರತವನ್ನು ಬರೆದ. ಆದ್ದರಿಂದಲೆ ಇದು 'ಸಮಸ್ತ ಭಾರತ'–ಪರಸ್ಪರರ ಸಮಾನವಾದ, ಅಥವಾ ಸೇರಿಕೊಂಡ ಭಾರತ. ಇಲ್ಲಿ ಅರ್ಜುನ,

ಅರ್ಥಾತ್ ಅರಿಕೇಸರಿ ಕಾವ್ಯನಾಯಕ. ಪಾಂಡವ ಮಧ್ಯಮ ಅರ್ಜುನನಾದರೆ ಅರಿಕೇಸರಿ 'ವಿಕ್ರಮಾರ್ಜುನ'. ಆದ್ದರಿಂದ 'ಸಮಸ್ತ ಭಾರತ'ಕ್ಕೆ 'ವಿಕ್ರಮಾರ್ಜುನ ವಿಜಯ'ವೆಂದೂ ಹೆಸರು. ಇದರ ಫಲವಾಗಿ ಗ್ರಂಥದ ಉದ್ದಕ್ಕೂ ಅರಿಕೇಸರಿಯ ಬಿರುದು ಬಾವಲಿಗಳು ಅರ್ಜುನನವಾಗಿವೆ. ಅರ್ಜುನನ ಮಹಿಮೆ ಅರಿಕೇಸರಿಯದಾಗಿದೆ. ಒಮ್ಮೊಮ್ಮೆ, ಪಾಪ, ಅರ್ಜುನ 'ಸಾಮಂತ ಚೂಡಾಮಣಿ' ಎಂದು ಕರೆಸಿಕೊಳ್ಳಬೇಕಾಗುತ್ತದೆ.!

ಪಂಪನು ತನ್ನ ಭಾರತದ ಕೊನೆಯಲ್ಲಿ ಅದನ್ನು 'ಲೋಕಪೂಜ್ಯ'ವೆಂದು ಕರೆದು, ಅದಕ್ಕೆ ಕಾರಣ:

ಚಲದೊಳ್ ದುರ್ಯೋಧನಂ ನನ್ನಿಯೊಳಿನತಯಂ ಗಂಡಿನೊಳ್ ಭೀಮಸೇನಂ
ಬಲದೊಳ್ ಮದ್ರೇಶನತ್ಯುನ್ನತಿಯೊಳಮರ ಸಿಂಧೂದ್ಭವಮಂ ಚಾಪವಿದ್ಯಾ
ಬಲದೊಳ್ ಕುಂಭೋದ್ಭವಂ ಸಾಹಸದ ಮಹಿಮೆಯೊಳ್ ಫಲ್ಗುಣಂ ಧರ್ಮದೊಳ್
ನಿರ್ಮಲಚಿತ್ತಂ ಧರ್ಮಪುತ್ರಂ ಮಿಗಿಲಿವರ್ಗಳಿನೀ ಭಾರತಂ ಲೋಕಪುಜ್ಯಂ ॥

ಎನ್ನುತ್ತಾನೆ. ಇದನ್ನು ಕೇಳಿ ಸಂಪ್ರದಾಯಸ್ಥರು ಚಕಿತರಾಗಬಹುದು. ಭಾರತದ ಹೃದಯದಂತಿರುವ, ಪ್ರಾಣದಂತಿರುವ, ಇಡೀ ಭಾರತದ ಆಗುಹೋಗುಗಳಿಗೆಲ್ಲ ಸೂತ್ರಧಾರನಂತಿರುವ, ಸಾಕ್ಷಾತ್ ಭಗವಂತನ ಅವತಾರವಾಗಿರುವ ಶ್ರೀಕೃಷ್ಣನ ಹೆಸರೇ ಇಲ್ಲಿ ಎತ್ತಿಲ್ಲವಲ್ಲ! ಇದಕ್ಕೆ ಪಂಪ ಹೀಗೆ ಉತ್ತರ ಕೊಡುತ್ತಾನೆ–ಅರ್ಜುನನು ಸಿಂಹಾಸನವೇರಿದ ಮೇಲಿನ ಆತನ ರಾಜ್ಯಭಾರವನ್ನು ಕುರಿತು ಹೇಳುತ್ತಾ ಕವಿಯು:

ಪಸರಿಸಿ ನೀಳ್ದ ತನ್ನ ಜಸದೊಳ್ ಪೆಱನೊರ್ವನ ಕೀರ್ತಿ ತಳ್ತುರಂ
ಜಿಸೆ ನೆಗಳ್ದಾತನೇಂ ನೆಗಳ್ದನೆಂಬ ಚಲಂ ಮಿಗೆ, ತನ್ನ ಪೆಂಪು ತ
ನ್ನ ಸಕಮೆ ತನ್ನ ವಿಕ್ರಮಮೆ ತನ್ನ ನೆಗಳ್ತೆಯೆ ತನ್ನ ಮಾತೆ ತಾ
ನೆಸೆವ ಜಗತ್ರಯಕ್ಕೆನಿಸಿ ಪಾಲಿಸಿದಂ ನೆಲನಂ ಗುಣಾರ್ಣವಂ ॥

ಎಂದು ವರ್ಣಿಸುತ್ತಾನೆ. ತನ್ನ ಕೀರ್ತಿಯಲ್ಲಿ ಇನ್ನೊಬ್ಬನ ಕೀರ್ತಿ ಸೇರಿಕೊಂಡರೆ ಅವನೆಂತಹ ಪ್ರಸಿದ್ಧಪುರುಷ ? ಎಂದು ಛಲದಿಂದ ಕೂಡಿದವನಾಗಿ, ತನ್ನ ಸ್ವಂತ ಮಹಿಮೆ, ತನ್ನ ಸ್ವಂತ ಕಾರ್ಯ, ತನ್ನ ಸ್ವಂತ ಪರಾಕ್ರಮ, ತನ್ನ ಸ್ವಂತ ಕೀರ್ತಿ ಇವುಗಳಿಂದ ಕೂಡಿ, ತನ್ನ ಮಾತೇ ಮೂರು ಲೋಕಕ್ಕೂ ಕೊನೆಯ ಮಾತೆಂಬಂತೆ ದರ್ಪದಿಂದ ಅರ್ಜುನ ರಾಜ್ಯಭಾರ ಮಾಡಿದನಂತೆ ! ಪಂಪನ ಅರ್ಜುನ ಶ್ರೀಕೃಷ್ಣನ ನೆರಳಾಗಿ ಬಾಳುವವನಲ್ಲ. ಅಗ್ನಿ ಆತನಿಂದ ಆಹಾರವನ್ನು ಬೇಡಿ ಪಡೆದಾಗ, ಶ್ರೀಕೃಷ್ಣನು ಅದನ್ನು ಆಕ್ಷೇಪಿಸಿದ ಸಂದರ್ಭದಲ್ಲಿ ಅರ್ಜುನ ಹೇಳುತ್ತಾನೆ–

ಒತ್ತಿ ತಱುಂಬಿ ನಿಂದ ರಿಪುಭೂಜಸಮಾಜದ ಬೇರ್ಗಳಂ ನಭ
ಕ್ಕೆತ್ತದೆ ಬಂದು ತನ್ನ ಮಱೆವೊಕ್ಕೊಡೆ ಕಾಯದೆ, ಚಾಗದೊಳ್ಪಿನ
ಚ್ಚೊತ್ತದೆ, ಪೂಣ್ದು ಬಾಳ್ವಪುೞುವಾನಸನೆಂಬನಜಾಂಡಮೆಂಬುದೊಂ
ದತ್ತಿಯ ಪಣ್ಣೊಳಿರ್ಪ ಪುೞುವಲ್ಲದೆ ಮಾನಸನೇ ಮುರಾಂತಕಾ

'ಕೃಷ್ಣ ಮೇಲೆ ಬಿದ್ದು ಪ್ರತಿಭಟಿಸಿದ ಶತ್ರುರಾಜರೆಂಬ ಮಹಾವೃಕ್ಷಗಳ ಬೇರುಗಳನ್ನು ಆಕಾಶಕ್ಕೆ ಎತ್ತದಿದ್ದರೆ, ಮೊರೆಹೊಕ್ಕವರನ್ನು ಕಾಪಾಡದಿದ್ದರೆ, ತ್ಯಾಗವೆಂಬ ಸದ್ಗುಣದ ಮುದ್ರೆಯನ್ನು ಒತ್ತಿದಿದ್ದರೆ ಅವನು ಮನುಷ್ಯನೆ? ಅಲ್ಲ, ಈ ಬ್ರಹ್ಮಾಂಡವೆಂಬ ಅತ್ತಿಯ ಹಣ್ಣಿನಲ್ಲಿರುವ ಒಂದು ಹುಳು, ಅವನು.' ಇಂತಹ ಆದರ್ಶವನ್ನು ಅಳವಡಿಸಿರುವ ತನ್ನ ನಾಯಕನನ್ನು ಹೆಜ್ಜೆಹೆಜ್ಜೆಗೂ

ಶ್ರೀಕೃಷ್ಣನ ಕೃಪಾಭಿಕ್ಷೆಗೆ ಒಳಗುಮಾಡುವುದು ರಾಜಸಮೂರ್ತಿಯಾದ ಪಂಪನಿಗೆ ಸರಿಕಾಣಲಿಲ್ಲ. ಆದ್ದರಿಂದಲೆ ಆತ ತನ್ನ ಭಾರತವನ್ನು 'ಲೌಕಿಕಕಾವ್ಯ'ವೆಂದು ಕರೆದಿರುವುದು. ಆದರೆ ವೈದಿಕ ಜೈನ ಸಂಸ್ಕೃತಿಗಳೆರಡೂ ರಕ್ತಗತವಾಗಿರುವ ಪಂಪನ ಚೇತನ ಇತರ ಜೈನಕವಿಗಳಂತೆ ಶ್ರೀಕೃಷ್ಣನನ್ನು ನಾರಕಿಯಾಗಿಯೇನೂ ಚಿತ್ರಿಸಿಲ್ಲ, ವೈದಿಕನಾದ ತನ್ನ ಸ್ವಾಮಿಗೆ ಅಪಚಾರವಾಗದಂತೆ ಶ್ರೀಕೃಷ್ಣನ ದೈವತ್ವವನ್ನೂ ಆತ ಅಗತ್ಯವಾದೆಡೆಗಳಲ್ಲೆಲ್ಲ ಉಳಿಸಿಕೊಂಡು, ಬೆಳೆಸಿಕೊಂಡು ಹೋಗಿದ್ದಾನೆ.

ಮಹಾಭಾರತದಲ್ಲಿ ದುಷ್ಟಚತುಷ್ಟಯರ ಸಾಲಿಗೆ ಸೇರಿರುವ ಕರ್ಣ ದುರ್ಯೋಧನರು ಪಂಪಭಾರತದಲ್ಲಿ ಆದರ ಲೋಕಪೂಜ್ಯತೆಗೆ ಕಾರಣರಾದವರ ಸಾಲಿನಲ್ಲಿ ಮಂಡಿಸಿದ್ದಾರೆ. ಪಂಪನು ಆ ಪಾತ್ರಗಳೆರಡಕ್ಕೂ ಅಪಾರವಾದ ಗೌರವವನ್ನು ಸಲ್ಲಿಸಿದ್ದಾನೆ. ಕಾವ್ಯದ ಉದ್ದಕ್ಕೂ ಕೌರವನನ್ನು 'ಸುಯೋಧನ' 'ಅಭಿಮಾನಧನ' ಎಂದು ಕರೆದು ಸನ್ಮಾನಿಸಿದ್ದಾನೆ. ಅವನು ಸತ್ತಮೇಲೆ ಆ ಛಲದಂಕಮಲ್ಲನಿಗೆ ಚರಮಗೀತೆಯ ಪುಷ್ಪಾಂಜಲಿಯನ್ನು ಅರ್ಪಿಸುತ್ತಾನೆ:

ನುಡಿದುದನೆಯ್ದೆ ತುತ್ತತುದಿಯೆಯ್ದೆ ವಿನಂ ನುಡಿದಂ ವಲಂ ಚಲಂ
ಬಿಡಿದುದನೆಯ್ದೆ ಮುಂಪಿಡಿದುದಂ ಪಿಡಿದಂ ಸಲೆ ಪೊಣ್ದ ಪೂಣ್ಕೆ ನೇ
ರ್ಪಡೆ ನಡೆವನ್ನೆಗಂ ನಡೆದನಳ್ಕದೆ ಬಳ್ಕದೆ ತನ್ನೊಡಲ್ ಪಡ
ಲ್ವಡುವಿನಮಣ್ಮುಗುಂದದೆ ದಲೇನಭಿಮಾನಧನಂ ಸುಯೋಧನಂ ॥

ಪಂಪಭಾರತದಲ್ಲಿ ಅರ್ಜುನನು ನಾಯಕನಾದುದರಿಂದ ಮೊದಲಿನಿಂದಲೂ ಅವನ ಪ್ರತಿಸ್ಪರ್ಧಿಯಾಗಿದ್ದ ಕರ್ಣನು ಪ್ರತಿನಾಯಕನಾಗಿರುವುದು ಸಹಜವಾಗಿಯೇ ಇದೆ. ಪ್ರತಿನಾಯಕನ ಪಾತ್ರ ಉನ್ನತವಾದಷ್ಟೂ ನಾಯಕನ ಪಾತ್ರ ಮಹೋನ್ನತಿಗೇರುವುದೆಂಬ ತತ್ವವನ್ನು ಸ್ವೀಕರಿಸಿ ಪಂಪನು ಸೃಷ್ಟಿಸಿರುವ ಕರ್ಣನ ಪಾತ್ರವನ್ನು ಸರಿಯೆಂದು ಸಮರ್ಥನೆ ಮಾಡಬಹುದೊ ಏನೊ ! ಪಂಪನು ಆತನಿಗೆ ತನ್ನ ಕಾವ್ಯದಲ್ಲಿ ಅದ್ವಿತೀಯವಾದ ಸ್ಥಾನವನ್ನು ಕಲ್ಪಿಸಿಕೊಟ್ಟಿದ್ದಾನೆ. ಅದು ಸಹಜವಾಗಿಯೂ ಕಾಣಿಸುತ್ತದೆ. ಸಾಕ್ಷಾತ್ ಸೂರ್ಯ ಮತ್ತು ಕ್ಷತ್ರಿಯರಮಣಿಯಾದ ಕುಂತಿ ಇವರ ಹಿರಿಯ ಮಗನಾಗಿ, ಜಗದ್ವಿಖ್ಯಾತರಾದ ಪಾಂಡವರಲ್ಲಿ ಹಿರಿಯವನಾಗಿ ಹುಟ್ಟಿದ ಅವನು, ಹುಟ್ಟುತ್ತಲೆ ಗಂಗೆಯ ಪಾಲಾಗಿ, ಬೆಸ್ತನ ಮನೆಯಲ್ಲಿ ಬೆಳೆಯಬೇಕಾಯಿತು. ಆದರೆ ಅವನ ಸ್ವಭಾವ ಸಹಜವಾದ ಧೀರೋದಾತ್ತ ಗುಣಗಳೆಲ್ಲಿ ಹೋದಾವು ? ಅವನು ಯೌವನದಲ್ಲಿ ಕಾಲಿಡುತ್ತಿದ್ದಂತೆಯೆ ಬಿಲ್ವಿದ್ಯಾಚತುರನಾದನಂತೆ ! ಅವನು ಹೆದೆಯೇರಿಸಿ ಬಿಲ್ಲನ್ನು ಠೇಂಕಾರ ಮಾಡುತ್ತಲೆ, ಆ ದನಿ ಶತ್ರುರಾಜರಿಗೆ ಸಿಡಿಲು ಬಡಿದಂತಾಗಿ ಅವರು ತತ್ತರಿಸಿ ನೆಲಕ್ಕೆ ಬೀಳುವಂತೆ ಮಾಡುತ್ತಿತ್ತಂತೆ; ಅವನು ದಿನದಿನವೂ ಕತ್ತರಿಸಿಕೊಡುತ್ತಿದ್ದ ಚಿನ್ನದ ಚೂರುಗಳು ಬುಧ, ಮಾಗಧ, ವಂದಿಜನಗಳ ಬಡತನವನ್ನು ಕಡಿದು ಹಾಕುತ್ತಿತ್ತಂತೆ ! ಆದ್ದರಿಂದ ಅವನ ಬಾಯಿಂದ ಬರುತ್ತಿದ್ದ ಮಾತುಗಳೆರಡೆ – 'ಬೇಡಿಮೋಡಿಮಿದುಚಾಗದ ಬೀರದ ಮಾತು ಕರ್ಣನಾ' – ಶತ್ರುಗಳಾದವರು ನನ್ನನ್ನು ಪ್ರತಿಭಟಿಸದೆ ಓಡಿಂ, ಸಾಯಬೇಕಾದವರು 'ಬೇಡ್ಡಿಂ' ಹೀಗೆ ಉದಿತೋದಿತನಾಗುತ್ತಿದ್ದ ಅವನನ್ನು ಕಂಡು, ಮುಂದೆ ತನ್ನ ಮಗನಾದ ಅರ್ಜುನನ ಗತಿಯೇನೆಂದು ದೇವೇಂದ್ರನಿಗೆ ದಿಗಿಲಾಯಿತಂತೆ. ಅವನು ವಟು ವೇಷದಿಂದ ಕರ್ಣನಲ್ಲಿಗೆ ಬಂದು, ಅವನ ಸಹಜಕವಚಕುಂಡಲಗಳನ್ನು ಬೇಡಿದನಂತೆ. ರಾಧೇಯನು ಅದೆಂತಹ ಕಲಿಯೋ ಚಾಗಿಯೋ ! ಅವನು ಬೇಡಿಬಂದವನನ್ನು 'ಸಾಧ್ಯವಿಲ್ಲ ಹೋಗಯ್ಯ' – ಎಂದಾಗಲಿ, 'ಬೇರೊಂದನ್ನು ಕೊಡುತ್ತೇನೆ' ಎಂದಾಗಲಿ ಹೇಳಲಿಲ್ಲ, ಕೇಳಿದುದನ್ನು ನೀಡುವಾಗ ನೋವಿನಿಂದ 'ಆಃ' ಎಂದು ಕೂಡ ಹೇಳಲಿಲ್ಲ, ನಿರ್ಭಯವಾಗಿ 'ಪಿಡಿ' ಎಂದು ಹೇಳಿ, ತನ್ನ 'ಸಹಜಕವಚಮಂನೆತ್ತರ್ ಪನಪನಪನಿಯೆ, ತಿದಿಯುಗಿವಂತೆ' – ಸತ್ತ ಪ್ರಾಣಿಯ ಚರ್ಮವನ್ನು ಸುಲಿಯುವಂತೆ–ಉಗಿದು ಕೊಟ್ಟನ್' ಈ ಮಾತುಗಳಲ್ಲಿ ಕಾಣಬರುವ ಕವಿಯ ಓಜಸ್ಸು, ತೇಜಸ್ಸುಗಳು ಎಷ್ಟು ಪ್ರಭಾವಯುತವಾಗಿವೆ ! ಇದಕ್ಕೂ ಹೆಚ್ಚಾಗಿ ಪಂಪನ ನಿರೂಪಣೆಯಲ್ಲಿ ಕಾಣಬರುವ

ಸಂಗ್ರಹಶಕ್ತಿ ಅದ್ವಿತೀಯವಾದುದು. ಆತನ ಈ ಸಂಗ್ರಹಣ ಗುಣ ಸೂತ್ರಕಾರನ ಕೃಪಣತೆಯಲ್ಲ, ಧ್ವನಿಶಕ್ತಿಯ ದ್ಯೋತಕ. ಆತನು ಎಂತಹ ಸಂಯಮಿ! ನಾಲ್ಕು ಸಾಲಿನ ಒಂದು ಗದ್ಯ, ಮೂರು ಕಂದ ಪದ್ಯಗಳಲ್ಲಿ ಈ ಸನ್ನಿವೇಶವನ್ನೆಲ್ಲ ಮುಗಿಸಿಬಿಟ್ಟಿದ್ದಾನೆ. ಇದರಂತೆಯೆ ಕರ್ಣನು ಪರಶುರಾಮರಲ್ಲಿ ವಿದ್ಯಾಭ್ಯಾಸಕ್ಕೆ ಹೋಗಿ ಶಾಪಗ್ರಸ್ತನಾದುದನ್ನೂ ಒಂದು ಸಣ್ಣ ಪದ್ಯ, ಎರಡು ಸಣ್ಣ ಗದ್ಯಗಳಲ್ಲಿ ಮುಗಿಸಿಬಿಟ್ಟಿದ್ದಾನೆ. ಆದರೂ ಅದು ನಮ್ಮ ಕಣ್ಣಿಗೆ ಕಟ್ಟಿದ್ದಂತಾಗಿ, ಹೃದಯದಲ್ಲಿ ಚಿರಶಾಶ್ವತವಾದ ಮುದ್ರೆಯನ್ನು ಒತ್ತುತ್ತದೆ.

ಕರ್ಣನು ದುರ್ಯೋಧನನ ಗೆಳೆಯನಾಗುವಂತೆ ಮಾಡಿದುದು ವಿಧಿಯ ಕೃತ್ರಿಮವೆಂದು ತೋರುತ್ತದೆ. ಅವನು ದ್ರೋಣರಲ್ಲಿಗೆ ವಿದ್ಯಾಭ್ಯಾಸಕ್ಕೆ ಬಂದಾಗಲೆ ಕವಿ ಸೂಚಿಸುತ್ತಾನೆ–ಕೌರವರಿಗೆ ಪ್ರಾಣವೇ ಬಂದಂತೆ 'ಬಾಣಾಸನಪಾಣಿ ಕರ್ಣಂ ಬಂದ' ಎಂದು. ಕೌರವ ಪಾಂಡವರು ವಿದ್ಯಾಭ್ಯಾಸವನ್ನು ಮುಗಿಸಿ, ತಮ್ಮ ಶಕ್ತಿಪ್ರದರ್ಶನ ಮಾಡುತ್ತಿದ್ದಾಗ, ಅರ್ಜುನನ ಬಿಲ್ವಿದ್ಯಾಚಾತುರ್ಯವನ್ನು ಕಂಡು 'ದುರ್ಯೋಧನನ ಮೊಗಂ ತಲೆನವನರ ಗಂಟಂ ಕಿಱಿದಾಗೆ', ಆ ವೇಳೆಗೆ ಸರಿಯಾಗಿ ಕರ್ಣನು:

ತೊಳಗುವ ತೇಜಂ ತೊಳ । ತೊಳಗುವ ದಿ ವ್ಯಾಸ್ತ್ರಮುಮರ್ದೆ ಕೋದಂಡಮಸುಂ
ಗೊಳಿಸೆ, ಮನಂಗೊಳಿಸೆ, ಭಯಂ । ಗೊಳಿಸೆ, ಸಭಾಸದರನುೞಗೆ ಕರ್ಣಂ ಬಂದಂ

ಹಾಗೆ ಬಂದವನೆ, ದ್ರೋಣರಿಗೆ ನಮಸ್ಕರಿಸಿ, ತನ್ನ ಶರಪರಿಣತೆಯನ್ನು ಪ್ರದರ್ಶಿಸಿದ. ಅವನು ಕಾಲ್ಕೆರೆದು ಅರ್ಜುನನನ್ನು ಯುದ್ಧಕ್ಕೂ ಆಹ್ವಾನಿಸಿದ. ಅದನ್ನು ಕಂಡ ದ್ರೋಣಕೃಪರು ಅವನ ಜಾತಿಯನ್ನೆತ್ತಿ ಹಳಿದು, ಯುದ್ಧ ಮಾಡಲು ಅವನೇನೂ ಅರ್ಜುನನಿಗೆ ಸಮಾನವಲ್ಲವೆಂದರು. ತನ್ನ ಜಾತಿಯ ಮಾತು ಬರುತ್ತಲೆ ಕರ್ಣನು 'ಪಂದೆಯಂ ಪಾವಡರ್ದಂತೆ' ಬೆವತು ಹೋದನು. ಆಗ ದುರ್ಯೋಧನನು, 'ಶೌರ್ಯವೇ ಕುಲವಲ್ಲದೆ ಬೇರೆಯ ಕುಲವೆಲ್ಲಿ'ಯದೆಂದು ಹೇಳಿ 'ನೀಮೊಲಿದೆಲ್ಲಿ ಪುಟ್ಟ ಬೆಳೆದಿರೋ? ಕುಲಮಿರ್ದದೆ ಕೊಡದೊಳಂ ಶರಸ್ತಂಭದೊಳಂ' ಎಂದು ಛೀಗುಟ್ಟಿ ಅವರ ಬಾಯಿಮುಚ್ಚಿಸಿದ. ಅಷ್ಟೇ ಅಲ್ಲ, ನೊಂದ ಕರ್ಣನ ಹೃದಯಕ್ಕೆ ತಂಪಾಗುವಂತೆ ಆ ಕ್ಷಣವೇ ಅವನನ್ನು ಅಂಗರಾಜಾಧಿಪತಿಯಾಗಿ ಪಟ್ಟಕಟ್ಟಿ ಅವನೊಡನೆ–

ಪೊಡಮಡುವರ್ ಜೀಯೆಂಬರ್ । ಕುಡುದಯೆಗೈಯೇಂ ಪ್ರಸಾದಮೆಂಬಿವುಪೆಱರೊಳ್
ನಡೆಗೆಮ್ಮ ನಿನ್ನಯೆಡೆಯೊಳ್ । ನಡೆಯಲ್ವೇಡೆನಗೆ ಕೆಳೆಯನಯ್ ರಾಧೇಯ

ಎಂದು ಹೇಳಿದ. ಅಂದಿನಿಂದ ಕರ್ಣ–ದುರ್ಯೋಧನರು ಹಾಲು–ನೀರಿನಂತೆ ಒಂದಾಗಿಹೋದರು.

ಪಾಂಡವರು ವನವಾಸ ಅಜ್ಞಾತವಾಸಗಳನ್ನು ಮುಗಿಸಿದ ಮೇಲೆ ಅವರಿಗೆ ಅರ್ಧರಾಜ್ಯವನ್ನು ಕೊಡಿಸುವುದಕ್ಕಾಗಿ ಶ್ರೀಕೃಷ್ಣನು ಹಸ್ತಿನಾವತಿಗೆ ರಾಯಭಾರ ಹೋಗಿ ಬಂದ ಭಾಗ ಮಹಾಭಾರತದಲ್ಲಿ ಅತ್ಯಂತ ರಸವತ್ತಾದ ಭಾಗ. ರಾಜಕೀಯ ನಿಪುಣನಾದ ಪಂಪನ ಕೈಲಿ, ಆ ಭಾಗ, ಅದ್ವಿತೀಯವಾದ ಒಂದು ನೂತನ ವರ್ಣವೈಖರಿಯನ್ನು ತಾಳುತ್ತದೆ. ಪಂಪನು ಮೂಲ ಭಾರತವನ್ನು 'ಮೆಯ್ಗೆಡಲೀಯದೆ', ಕರಿಯನ್ನು ಕನ್ನಡಿಯಲ್ಲಿ ಪ್ರತಿಬಿಂಬಿಸುವ ಕಾರ್ಯವನ್ನು ಕೈಕೊಂಡಿದ್ದರೂ, ಶ್ರೀ ತಿ.ನಂ. ಶ್ರೀಯವರು ಹೇಳುವಂತೆ 'ಕನ್ನಡದ ಕನ್ನಡಿಯಲ್ಲಿ ಚಿಕ್ಕದಾಗಿ ಬಿದ್ದ ವ್ಯಾಸಭಾರತದ ನೆರಳಲ್ಲ.' ಮೂಲದಿಂದ ಆತನು ಅಲ್ಲಲ್ಲೆ ಮಾಡಿಕೊಂಡಿರುವ ಸಣ್ಣ ಪುಟ್ಟ ವ್ಯತ್ಯಾಸಗಳು ಅದೆಷ್ಟು ಅರ್ಥಪುಷ್ಟಿಯನ್ನು ಕೊಡುತ್ತವೆ! ಮೂಲದ ಕಥೆಯಾದಾಗಲೂ ಹೇಳುವ ಮಾತಿನಲ್ಲಿ, ರೀತಿಯಲ್ಲಿ

ಅದೆಷ್ಟು ನೂತನತೆ ಕಂಡುಬರುತ್ತದೆ ! ರಾಯಭಾರ ಕಾರ್ಯ ವಿಫಲವಾಗಿ ಶ್ರೀಕೃಷ್ಣನು ಹಸ್ತಿನಾವತಿಯಿಂದ ಹಿಂದಿರುಗುವ ಮುನ್ನ ಕರ್ಣನನ್ನು ಕಂಡು:

ಭೇದಿಸಲೆಂದು ದಲ್ ನುಡಿದರೆನ್ನದಿರೊಯ್ಯನೆ ಕೇಳ ಕರ್ಣ ನಿ
ನ್ನಾದಿಯೊಳಬ್ಬೆ ಕೊಂತಿ, ನಿನಗಮ್ಮ ನಹರ್ಪತಿ, ಪಾಂಡುನಂದನರ್
ಸೋದರರೆಯ್ದೆ ಮೆಯ್ದುನನೆ ನಾಂ ಪೆಱತೇಂ ಪಡೆಮಾತೋ ನಿನ್ನದೀ
ಮೆದಿನಿ, ಪಟ್ಟಮುಂ ನಿನತೆ, ನೀನಿರೆ, ಮತ್ತೆ ಪೆಱರ್ ನರೇಂದ್ರರೇ

ಎಂದ 'ಕಳ್ಳನ ಮನಸ್ಸು ಹುಳ್ಳು ಹುಳ್ಳುಗೆ' ಎಂಬಂತೆ ಭೇದಕ್ಕಾಗಿ ಬಂದ ಕೃಷ್ಣ ಪ್ರಾರಂಭದಲ್ಲಿಯೇ 'ಅಯ್ಯ, ಭೇದಿಸುವುದಕ್ಕಾಗಿಯೇ ಹೀಗೆ ಹೇಳುತ್ತೇನೆಂದು ತಿಳಿಯಬೇಡ' ಎಂದು ಪೀಠಿಕೆ ಹಾಕುತ್ತಾನೆ. 'ನೀನು ಪಾಂಡವರಲ್ಲಿ ಹಿರಿಯ, ಆದ್ದರಿಂದ ರಾಜ್ಯಕ್ಕೆ ನೀನೇ ಹಕ್ಕುದಾರ' ಎಂದು ಹೇಳಿದುದು ಸಾಲದೆಂಬಂತೆ 'ನೀನು ಯಾರೆಂಬುದು ದುರ್ಯೋಧನನಿಗೆ ಗೊತ್ತು' ಎಂದು ಹೇಳುತ್ತಾನೆ. ತಾನು ಬೆಸ್ತನೆಂದುಕೊಂಡಿದ್ದ ಕರ್ಣನಿಗೆ ಆಶ್ಚರ್ಯದ ಮೇಲೆ ಆಶ್ಚರ್ಯ ! ಕೃಷ್ಣನು ಕಥೆಯನ್ನು ಮುಂದುವರಿಸುತ್ತಾನೆ. ಒಮ್ಮೆ ಕರ್ಣ-ದುರ್ಯೋಧನರು ಸತ್ಯಂತಪರೆಂಬ ಋಷಿಗಳ ಆಶ್ರಮಕ್ಕೆ ಹೋಗಿದ್ದಾಗ, ಅವರು ಕರ್ಣನಿಗೆ ಮೊದಲು ಆಸನವಿತ್ತು ಗೌರವಿಸಿದರಂತೆ. ಮಾನಧನನಾದ ಕೌರವ ಕರ್ಣನನ್ನು ಕಾರ್ಯಾಂತರವಾಗಿ ಕಳುಹಿಸಿ, 'ಅನಿರೆ, ನೀಮಿದೇಕೆ ದಯೆಗೈದಿರೊ ಮೀಂಗುಲಿಗಂಗೆ' ಎಂದು ಋಷಿಗಳನ್ನು ಕೇಳಿದ. ಅವರಿಂದ ಕರ್ಣನ ಜನ್ಮ ವೃತ್ತಾಂತವರನ್ನರಿತ ದುರ್ಯೋಧನ ಅಂದೆ ನಿಶ್ಚಯಿಸಿದನಂತೆ 'ಪಾಟಿಸುವೆನೊ[illegible]ನೆ ಮುಳ್ಳೊಳೆ ಮುಳ್ಳನ್' ಎಂದು ! ಪಾಂಡವನಿಂದ ಪಾಂಡವರನ್ನು ಕೊಲ್ಲಿಸಬೇಕೆಂಬುದು ದುರ್ಯೋಧನನ ಹಂಚಿಕೆ – ಎಂಬ ಶ್ರೀಕೃಷ್ಣನ ಮಾತು ಅದೆಷ್ಟು ಮರ್ಮಭೇದಕವಾಗಿದೆ ! ಕರ್ಣನಂತಹ ಮಹಾನುಭಾವನಲ್ಲದಿದ್ದರೆ ಶ್ರೀಕೃಷ್ಣನು ಒಡ್ಡಿದ ಬಲೆಗೆ ಒಡನೆಯೆ ಬೀಳಬೇಕಾಗಿತ್ತು. ಆದರೆ ಮಹಾನುಭಾವನಾದ ಕರ್ಣ ಕಣ್ಣಲ್ಲಿ ನೀರು ತುಂಬಿಕೊಂಡು 'ನಣ್ಪಿನ ನೆವದಿಂದೆ ಪಾಂಡವರ ನಾನೊಳಪೊಕ್ಕೊಡೆ ನೀವೇ ಪೇಸಿರೆ ?' ಎಂದು ಪ್ರಶ್ನಿಸುತ್ತಾನೆ. ಕೌರವನ ವಿಶ್ವಾಸಘಾತುಕತನಕ್ಕೆ ಶ್ರೀಕೃಷ್ಣ ಒಂದು ಉದಾಹರಣೆಯನ್ನು ಕೊಟ್ಟರೆ, ಆತನ ಅಸದೃಶವಾದ ಸ್ನೇಹಕ್ಕೆ ಒಂದು ಉದಾಹರಣೆ ಕೊಡುತ್ತಾನೆ, ಕರ್ಣ:

ನೆತ್ತಮನಾಡಿ, ಭಾನುಮತಿ ಸೋಲ್ತೊಡೆ, ಸೋಲಮನೀವುದೆಂದು ಕಾ
ಡುತ್ತಿರೆ, ಲಂಬಣಂ ಪಱಿಯೆ, ಮುತ್ತಿನ ಕೇಡನೆ ನೋಡಿ ನೋಡಿ ಬ
ಳ್ಕುತ್ತಿರೆ, ಯೇವಮಿಲ್ಲ ದಿವನಾಯ್ತುದೊ ತಪ್ಪದೆ ಪೇಳಿಮೆಂಬ ಭೂ
ಪೋತ್ತಮನಂ ಬಿಸುಟ್ಟಿರದೆ ನಿಮ್ಮೊಳೆ ಪೊಕ್ಕುಡೆ ಬೇಡನಲ್ಲನೆ ?

ಟೀಕೆಯಿಲ್ಲದೆ ಈ ಪದ್ಯ ಅರ್ಥವಾಗದು. ಒಂದು ದಿನ ಕರ್ಣನು ದುರ್ಯೋಧನನ ಅಂತಃಪುರದಲ್ಲಿ ಭಾನುಮತಿಯೊಡನೆ ಪಗಡೆಯಾಡುತ್ತಿದ್ದಾನೆ. ದುರ್ಯೋಧನ ವೀಕ್ಷಕನಾಗಿದ್ದಾನೆ. ಭಾನುಮತಿ ಸೋತಳು. (ಸೋತವರು ಗೆದ್ದವರಿಗೆ ತಾವು ಧರಿಸಿದ್ದ ಮುತ್ತಿಹಾರವನ್ನು ಕೊಡಬೇಕೆಂದು ಪಣ ಕಟ್ಟಿದರೇನೊ!) ಕರ್ಣನು ತನಗೆ ಬರಬೇಕಾದ ಪಣವನ್ನು ಕೊಡೆಂದು (ರಾಣಿಯ ಕತ್ತಿನಲ್ಲಿದ್ದ ಹಾರಕ್ಕೆ ಕೈ ಹಾಕಿ) ಕಾಡಿದ್ದಾನೆ. ಮುತ್ತಿನಹಾರ ಹರಿಯಿತು. (ಮುತ್ತುಗಳೆಲ್ಲ ನೆಲದ ಮೇಲೆ ಚೆಲ್ಲಾಡಿದುದನ್ನು ಕಂಡಾಗ, ಗೆಲುವಿನ ಉತ್ಸಾಹದಲ್ಲಿ ಮೈಮರೆತಿದ್ದ ಕರ್ಣನಿಗೆ ತನ್ನ ಅವಿವೇಕ ಅರ್ಥವಾಗಿರಬೇಕು) ಅದನ್ನು ಕಂಡು ಕರ್ಣ ಭಯದಿಂದ ನಡುಗುತ್ತ ನಿಂತ. ಅದನ್ನು ಕಂಡ ದುರ್ಯೋಧನ ಸ್ವಲ್ಪವೂ ಚಲಚಿತ್ತನಾಗದೆ 'ಅಯ್ಯ, ಮುತ್ತುಗಳನ್ನು ಆಯ್ದುಕೊಡಲೆ?' ಎಂದು ಕೇಳಿದ. ಅಂತಹ ರಾಜಶ್ರೇಷ್ಠನನ್ನು ಬಿಟ್ಟು, ನಿಮ್ಮೊಡನೆ ಸೇರಿಕೊಂಡರೆ ನಾನು ನಿಜವಾದ ಬೇಡನಾಗುವುದಿಲ್ಲವೆ ? (ಇದುವರೆಗೆ ಕೇವಲ ಅಜ್ಞಾನದಿಂದ ಬೇಡನಾಗಿದ್ದೆ ಅಷ್ಟೆ)

ಪಂಪನ ಬರಹದ ಸ್ವರೂಪಕ್ಕೆ ಮೇಲಿನ ಪದ್ಯ ಒಂದು ಉದಾಹರಣೆ. ಅವನ ಬರಹ ಅದೆಷ್ಟು ಸಂಗ್ರಹ, ಅದೆಷ್ಟು ಧ್ವನಿಪೂರ್ಣ ! ಕವಿ ಕುವೆಂಪುರವರ ಮಾತಿನಲ್ಲಿ ಹೇಳುವುದಾದರೆ 'ವಿಶೇಷದ ಲವವೇಶವೂ ಇಲ್ಲದಲ್ಲಿ ಮಹಾಧ್ವನಿ ಸಮುದ್ರ ಅಲ್ಲೋಲ ಕಲ್ಲೋಲವಾಗಿದೆ. ಮುಳ್ಳಿಂದ ಮುಳ್ಳು ತೆಗೆಯುವಂತೆ ಪಾಂಡವರನ್ನು ಕರ್ಣನಿಂದಲೆ ನಿರ್ಮೂಲ ಮಾಡಿಸಬೇಕೆಂಬ ಸ್ವಾರ್ಥಮೂಲವಾದ ಅಭಿಸಂಧಿ ಮಾತ್ರವಿದ್ದಿದ್ದರೆ, ಸ್ನೇಹ ಆ ಆತ್ಮೀಯತೆಯ ಅಂತಃಪುರದ ರಾಜರಾಜೇಶ್ವರಿಯ ಎಡೆಗೆ ಏರಲು ಹೇಗೆ ತಾನೆ ಸಾಧ್ಯವಾಗುತ್ತಿತ್ತು? . . . . . ನೆತ್ತವಾಡುವಷ್ಟರ ಮಟ್ಟಿಗೆ ನಿರ್ಮಲಮೈತ್ರಿ ಬೆಳೆದಿರಬೇಕಾದರೆ ಆ ಮೈತ್ರಿಗೆ ಕಳಂಕಾರೋಪಣಮಾಡಲು ಸಾಧ್ಯವೆ ?' ಕರ್ಣನ ಮಾತುಗಳಿಂದ 'ಈ ಮೀನು ತನ್ನ ಬಲೆಗೆ ಬೀಳುವುದಿಲ್ಲ' ಎಂದುಕೊಂಡ ಕೃಷ್ಣ ಹೊರಟುಹೋದ. ಆದರೆ ಅವನು ಬಿತ್ತಿದ ಭೇದೋಪಾಯ ತನ್ನ ಫಲವನ್ನು ಕೊಟ್ಟಿತು. ಕರ್ಣನು ಕಣ್ಣೀರು ಸುರಿಸುತ್ತಾ 'ಸೋದರರನ್ನು ಕೊಲ್ಲುವಂತಿಲ್ಲ, ಸ್ವಾಮಿಗೆ ಮೋಸಮಾಡುವಂತಿಲ್ಲ, ಆದ್ದರಿಂದ ಯುದ್ಧ ಪ್ರಾರಂಭವಾಗುತ್ತಲೆ ತಾನು ಆತ್ಮಯಜ್ಞದ ಬಲಿದಾನ ಮಾಡಿಕೊಳ್ಳಬೇಕೆಂದು ನಿಶ್ಚಯಿಸುತ್ತಾನೆ. ಆದ್ದರಿಂದಲೇ ಭೀಷ್ಮರಿಗೆ ವೀರಪಟ್ಟ ಕಟ್ಟಬೇಕೆಂದಾಗ, ಕರ್ಣನ ಮನೋವೇದನೆ ಭೀಷ್ಮರ ತಿರಸ್ಕಾರರೂಪದಲ್ಲಿ ಕಾಣಿಸಿಕೊಳ್ಳುತ್ತದೆ. ಆತನೊಡನೆ ಕೌರವ ಅಯ್ಯ, ಈ ಮುದುಕನಿಗೆ ಕಟ್ಟುವ ಪಟ್ಟ ಒಂದು ಬಾಳೆಯ ಪಟ್ಟೆಗೆ ಸಮ, ಆತ ಹಿಡಿದ ಅಸ್ತ್ರ ಸಪ್ಪೆದಂಟಿಗೆ ಸಮಾನ, 'ಪಗೆವರ ನಿಟ್ಟೆಲ್ವಂ ಮುರಿವೊಡೆನಗೆ ಪಟ್ಟಂಗಟ್ಟಾ' ಎನ್ನುತ್ತಾನೆ. ಭೀಷ್ಮರು ಪಾಂಡವರಪಕ್ಷಪಾತಿಗಳು, ಮುದುಕರು ಎಂಬ ಕಾರಣದಿಂದ ಕರ್ಣನಲ್ಲಿ ಅವರ ವಿಚಾರದ ತಿರಸ್ಕಾರ ಮೂಡಿರುವಂತೆ ಹೊರನೋಟಕ್ಕೆ ಕಾಣಿಸಿದರೂ, ತನ್ನ ಜನ್ಮ ವೃತ್ತಾಂತದಿಂದ ಮೂಡಿದ್ದ ಒಳತೋಟಿಯು ಇದಕ್ಕೆ ಕಾರಣವಿರಬಹುದು.

ಭೀಷ್ಮರನ್ನು ಮುದುಕರೆಂದು ಕರ್ಣ ಹೇಳಿರುವುದಕ್ಕೆ ಸರಿಯಾಗಿ ಪಂಪನು ಕೊಟ್ಟಿರುವ ಅವರ ಚಿತ್ರವನ್ನು ನೋಡಿ: 'ಜೋಲ್ದ ಪುರ್ವನೆತ್ತಿ ಕಟ್ಟಿದ ಲಲಾಟ ಪಟ್ಟ'ವಂತೆ! ಕೆಳಕ್ಕೆ ಕುಸಿದು ಜೋಲುಬಿದ್ದಿರುವ ಹುಬ್ಬುಗಳನ್ನು ಮೇಲೆ ಎತ್ತಿ ಕಟ್ಟಿದ್ದಾರೆ ಹಣೆಯಲ್ಲಿ.. ಆದರೇನು ? ದ್ರೋಣರು ಹೇಳುವಂತೆ 'ಭೀಷ್ಮರ ಮುಪ್ಪೂ ಸಿಂಹದ ಮುಪ್ಪೂ ಒಂದು ಮುಪ್ಪೆ ?' 'ಅತ್ಯುನ್ನತಿಯೊಳಮರ ಸಿಂಧೂದ್ಭವಂ' ಎಂದು ಕವಿ ಹೇಳಿರುವ ಮಾತಿಗೆ ತಕ್ಕಂತೆ ಕಾವ್ಯದ ಉದ್ದಕ್ಕೂ ಬರುವ ಆತನ ಪಾತ್ರ ಲೋಕೋತ್ತರವಾಗಿದೆ. ಕರ್ಣನು ಕಡೆ ನುಡಿದಾಗ ಆತನು ಶಾಂತಿಯನ್ನು ಕಳೆದುಕೊಳ್ಳುವುದಿಲ್ಲ. 'ಮುದುಕರ ಬಿಲ್‌ಬಲ್ಮೆ ಅಣ್ಣನೆಂದಂತುಟೆ' ಎಂದು ಹಸನ್ಮುಖದಿಂದ ನುಡಿದು, ಗಂಭೀರ ಧ್ವನಿಯಲ್ಲಿ ತಮ್ಮ ಪರಾಕ್ರಮದ ಎಲ್ಲೆಯನ್ನು ಸೂಚಿಸುತ್ತಾರೆ:

ಓಡಿಯೆಂ ಚಕ್ರಮನೆಂಬ ಚಕ್ರಿಯನಿಳಾಚಕ್ರಂ ಭಯಂಗೊಳ್ವಿನಂ
ಓಡಿಯಿಪ್ಪೆಂ ಕರಚಕ್ರಮಂ, ನರರಥಂ ತೂಳ್ದಾ ಕುರುಕ್ಷೇತ್ರದಿಂ
ಪಡುವಣ್ಗಾವುದು ಪೋಗೆ ಪೋಗಡಿಸುವೆಂ ನಿಚ್ಚಂ ಧರಾಧೀಶರಂ
ಪಡಲಿಟ್ಟಂತಿರೆ ಮಾಳ್ಪೆನೋವದೆ ಘಯಿಂಘಾಸಿರ್ವರಂ ಯುದ್ಧದೊಳ್

ಈ ಮಾತು ಭೀಷ್ಮರ ಪರಾಕ್ರಮವನ್ನು ಎಷ್ಟು ಭವ್ಯವಾಗಿ ಧ್ವನಿಸುತ್ತದೆ ! ಭೀಷ್ಮರು ನುಡಿದಂತೆ ನಡೆದು ಕಡೆಗೆ ಶರಶಯ್ಯೆಯಲ್ಲಿ ಮಲಗಿದರು. 'ಭೀಷ್ಮಾನಂತರಂ ದ್ರೋಣಂ' ಅವರ ಸರದಿ ಮುಗಿದ ಮೇಲೆ ಕರ್ಣ ಆತ ಸೇನಾಪತಿಯಾಗುವ ಮುನ್ನ ಶರಶಯ್ಯೆಯಲ್ಲಿದ್ದ ಭೀಷ್ಮರ ಬಳಿಗೆ ಹೋಗಿ, ಅವರಿಗೆ ಅಡ್ಡಬಿದ್ದು, ತಾನು ಆಡಿದ ಕಟುನುಡಿಗಳನ್ನು ಮನ್ನಿಸುವಂತೆ ಬೇಡಿಕೊಳ್ಳುತ್ತಾನೆ. ಆ ಸಂದರ್ಭದಲ್ಲಿ ಅವನು ಅವರನ್ನು 'ಅಜ್ಜ' ಎಂದು ಸಂಬೋಧಿಸಿ, ಮನಸ್ಸಿನಲ್ಲಿಯೇ ಹಿಗ್ಗುತ್ತಾನೆ. ಅವನ ಜನ್ಮ ವೃತ್ತಾಂತವನ್ನು ಅರಿಯದಿದ್ದರೂ ವಿಧಿ ಅವರ ಬಾಯಿಂದ ನೀನೆಮಗೆ ಕುಂತಿಯ ಗಾಂಧಾರಿಯ ಮಕ್ಕಳ ಲೆಕ್ಕದೆ ಮೊಮ್ಮನೈ' ಎಂದು ಹೇಳಿಸುತ್ತದೆ.

ಕರ್ಣನ ಪಾತ್ರವನ್ನು ಚಿತ್ತರಿಸುವ ಕವಿ ಕಾವ್ಯಸಮಾಧಿಗೆ ಏರಿ, ತನ್ನ ನಾಯಕನಾರೆಂಬುದನ್ನೆ ಮರೆತುಬಿಟ್ಟನೊ ಏನೊ ! ಆತನ ಅವಸಾನವಾದ ಮೇಲೆ:

ನೆನೆಯಿರಣ್ಣ ಭಾರತದೊಳಿಂ ಪೆಱರಾರುಮನೊಂದೆ ಚಿತ್ತದಿಂ
ನೆನೆವೊಡೆ ಕರ್ಣನಂ ನೆನೆಯ; ಕರ್ಣನೊಳಾರ್ದೊರೆ । ಕರ್ಣನೇಱು, ಕ
ರ್ಣನ ಕಡು ನನ್ನಿ, ಕರ್ಣನಳವಂಕದ ಕರ್ಣನ ಚಾಗಮೆಂದು ಕ
ರ್ಣನ ಪಡೆಮಾತಿನೊಳ್ ಪುದಿದು ಕರ್ಣರಸಾಯನಮಲ್ತೆ ಭಾರತಂ

ಎಂದು ಉದ್ಗಾರವೆತ್ತುತ್ತಾನೆ.

ಪಂಪನು ಸೃಷ್ಟಿಸಿರುವ ಕರ್ಣನ ಪಾತ್ರದಲ್ಲಿ ಗ್ರೀಕ್ ರುದ್ರನಾಟಕಗಳಲ್ಲಿ ಬರುವ ದುರಂತನಾಯಕನ ಗುಣವಿಶೇಷಗಳೆಲ್ಲವೂ ಅಡಕವಾಗಿರುವುದನ್ನು ಕಂಡು ಆಶ್ಚರ್ಯವಾಗುತ್ತದೆ. ಶೌರ್ಯ ಔದಾರ್ಯಾದಿ ಸಕಲಸದ್ಗುಣಗಳಿಂದ ಕೂಡಿದ ಆತನು ಧರ್ಮಪರರಾದ ಪಾಂಡವರಿಗೆ ಪ್ರತಿಕಕ್ಷಿಯಾಗಿ ನಿಂತು, ವಿಧಿಯ ಮಸಕಕ್ಕೆ ತುತ್ತಾಗಿ ಹೋಗುತ್ತಾನೆ. ಪಂಪಕವಿ ಹಾಡಿರುವ ಆತನ ಚರಮಗೀತೆಯನ್ನು ಕೇಳಿದಾಗ ನಮ್ಮ ಹೃದಯ ಕಿವಿಚಿದಂತಾಗುತ್ತದೆ, ಕಣ್ಣು ಹನಿಗೂಡುತ್ತದೆ; ವಿಧಿಯ ದುರ್ದಮ್ಯತೆಯನ್ನು ಕಂಡು ಭಯವಾಗುತ್ತದೆ. ಪಂಪಕವಿಯ ಕರ್ಣ ಮುಂದೆ ಬಂದ ರನ್ನನ ದುರ್ಯೋಧನನಿಗೂ, ನಾಗಚಂದ್ರನ ರಾವಣನಿಗೂ ಮಾದರಿಯಾಗಿದ್ದಾನೆ. ಮಹಾಕವಿ ರನ್ನ ಪಂಪನನ್ನು ಬಹುಭಕ್ತಿಯಿಂದ ಸ್ಮರಿಸಿ ಗೌರವಿಸಿದ್ದರೆ, ನಾಗಚಂದ್ರನು ತನ್ನನ್ನು 'ಅಭಿನವ ಪಂಪ'ನೆಂದು ಕರೆದುಕೊಂಡು ಹೆಮ್ಮೆಪಟ್ಟಿದ್ದಾನೆ.

ಪಂಪಕವಿಯ ಚರಿತ್ರೆ ಆತನ ಕನ್ನಡನಾಡ ವರ್ಣನೆಯಿಲ್ಲದೆ ಪರಿಪೂರ್ಣವಾಗದು. ಅರ್ಜುನನು ತೀರ್ಥಯಾತ್ರೆ ಮಾಡುತ್ತಾ ಬನವಾಸಿಗೆ ಬಂದು, ಅದನ್ನು ಆರ್ದ್ರಹೃದಯದಿಂದ ವರ್ಣಿಸುತ್ತಾನೆ–

ಸೊಗಯಿಸಿ ಬಂದ ಮಾಮರನೆ, ತಳ್ತೆ ಲವಳ್ಳಿಯೆ ಪೂತ ಜಾತಿಸಂ
ಪಗೆಯೆ ಕುಕಿಲ್ವ ಕೋಗಿಲೆಯೆ ಪಾಡುವ ತುಂಬಿಯೆ ನಲ್ಲರೊಳ್ಮೊಗಂ
ನಗೆಮೊಗದೊಳ್ ಪಳಂಚಲೆಯೆ ಕೂಡುವ ನಲ್ಲರೆ ನೋಳ್ಪೊಡಾವ ಬೆ
ಟ್ಟಗಳೊಳಮಾವ ನಂದನ ವನಂಗಳೊಳಂ ಬನವಾಸಿ ದೇಶದೊಳ್
ಚಾಗದ ಭೋಗದಕ್ಕರದ ಗೇಯದ ಗೊಟ್ಟಿಯಲಂಪಿನಿಂಪುಗ
ಳ್ಗಾಗರಮಾದ ಮಾನಿಸರೆ ಮಾನಿಸರಂತವರಾಗಿ ಪುಟ್ಟಲೇ
ನಾಗಿಯುಮೇನೊ ತೀರ್ದಪುದೆ, ತೀರದೊಡಂಮಱಿದುಂಬಿಯಾಗಿಮೇಣ್
ಕೋಗಿಲೆಯಾಗಿ ಪುಟ್ಟುವುದು ನಂದನದೊಳ್ ಬನವಾಸಿ ದೇಶದೊಳ್
ತೆಂಕಣ ಗಾಳಿ ಸೋಂಕಿದೊಡಮೊಳ್ನುಡಿಗೇಳ್ದೊಡಮಿಂಪನಾಳ್ದ ಗೇ
ಯಂ ಕಿವಿವೊಕ್ಕೊಡಂ ಬಿರಿದ ಮಲ್ಲಿಗೆಗಂಡೊಡಮಾದ ಕೆಂದಲಂ
ಪಂ ಕೆಡೆಗೊಂಡೊಡಂ ಮಧುಮಹೋತ್ಸವಮಾದೊಡಮೇನನೆಂಬನೆನಾ
ರುಕುಸಮಿಂಟ್ಪೊಡಂ ನೆನೆವುದೆನ್ನ ಮನಂ ಬನವಾಸಿ ದೇಶಮಂ

ಕಾಳಿದಾಸನಿಗೆ ಹೋಲಿಸಲು ಕನ್ನಡದಲ್ಲಿ ಯಾರಾದರೂ ಒಬ್ಬ ಕವಿಯಿದ್ದರೆ, ಆತ ಮಹಾಕವಿ ಪಂಪ. ಆತ ಸಂದು ಸಹಸ್ರ ವರ್ಷಗಳಿಗಿಂತಲೂ ಹೆಚ್ಚು ಕಾಲವಾಗಿದ್ದರೂ ಆತನ ಹಿರಿತನ, ಪೂಜ್ಯತೆ ಅಚ್ಚಳಿಯದೆ ನಿಂತಿವೆ.

೨. ಪೊನ್ನ

ರತ್ನತ್ರಯರಲ್ಲಿ ಎರಡನೆಯವನಾದ ಪೊನ್ನ ರಾಷ್ಟ್ರಕೂಟ ಚಕ್ರವರ್ತಿಯಾದ ಮುಮ್ಮಡಿಕೃಷ್ಣನ (ಕ್ರಿ.ಶ. ೯೩೯–೯೬೮) ಆಸ್ಥಾನಕವಿಯಾಗಿದ್ದ. ಆದ್ದರಿಂದ ಈತನ ಕಾವ್ಯರಚನೆ ಸುಮಾರು ಕ್ರಿ.ಶ. ೯೫೦ರ ಹಿಂಚುಮುಂಚಿನಲ್ಲಿ ನಡೆದಿರಬೇಕು. ಈತನೂ ಪಂಪನಂತೆ ವೆಂಗಿಮಂಡಲದಿಂದ ಬಂದವನೆ ಇರಬೇಕು. ವೆಂಗಿಮಂಡಲದ ಪುಂಗನೂರಿನಲ್ಲಿ ನಾಗಮಯ್ಯ ಎಂಬೊಬ್ಬ ಜೈನ ಬ್ರಾಹ್ಮಣ ಇದ್ದ. ಆತನಿಗೆ ಮಲ್ಲಪ್ಪ, ಪುಣ್ಣಮಯ್ಯ ಎಂಬಿಬ್ಬರು ಸುಪುತ್ರರಿದ್ದರು. ಅವರು ತಮ್ಮ ಗುರುವಾದ ದಿನಚಂದ್ರ ದೇವನು ಕಾಲವಾಗಲು, ಆತನ ಸದ್ಗತಿಗಾಗಿ ಪೊನ್ನ ಕವಿಯಿಂದ ಹದಿನಾರನೆಯ ತೀರ್ಥಂಕರನ ಭವಾವಳಿಗಳನ್ನು ಒಳಗೊಂಡ 'ಶಾಂತಿಪುರಾಣ'ವನ್ನು ಬರೆಸಿದರಂತೆ ! ಅವರಲ್ಲಿ ಹಿರಿಯನಾದ ಮಲ್ಲಪ್ಪನಿಗೆ ಅತ್ತಿಮಬ್ಬೆಯೆಂಬ ಮಗಳಿದ್ದಳು. ದಾನಚಿಂತಾಮಣಿಯೆಂದು ಕೀರ್ತಿವೆತ್ತಿರುವ ಈ ಮಹನೀಯಳು ಪೊನ್ನನ 'ಶಾಂತಿಪುರಾಣ'ದ ಸಹಸ್ರ ಪ್ರತಿಗಳನ್ನು ಬರೆಸಿ, ಸುವರ್ಣಜಿನಪ್ರತಿಮೆಗಳೊಡನೆ ಅವನ್ನು ದಾನಮಾಡಿದಳಂತೆ ! (ರನ್ನ ಕವಿಯ ಚರಿತ್ರೆಯಲ್ಲಿ ಈಕೆಯ ಇತಿಹಾಸ ವಿಸ್ತಾರವಾಗಿ ಬಂದಿದೆ) ಪೊನ್ನನು ಪಂಪನಂತೆಯೆ – ಆತನನ್ನು ಅನುಕರಿಸಿಯೊ ಏನೊ – 'ಲೋಕೋತ್ತರ ಲೌಕಿಕಪರಿಣತಿ ಪೊನ್ನಿಗಂಗೆ ಶಾಂತೀಶ್ವರ ರಾಮಕಥಾ ಪೊನ್ನನ ಧಾರ್ಮಿಕ, ಲೌಕಿಕ ಪರಿಣತಿ ವ್ಯಕ್ತವಾಗುತ್ತದೆ' – ಎಂದು ಹೇಳಿಕೊಂಡಿದ್ದಾನೆ. ಪಂಪನು ತನ್ನ ಭಾರತವನ್ನು 'ವಿಕ್ರಮಾರ್ಜುನ ವಿಜಯ'ವೆಂದು ಕರೆದಿರುವಂತೆ ಪೊನ್ನನು ತನ್ನ ಲೌಕಿಕ ಕಾವ್ಯವಾದ ರಾಮಾಯಣವನ್ನು 'ಭುವನೈಕ ರಾಮಾಭ್ಯುದಯ'ವೆಂದು ಕರೆದಿದ್ದಾನೆ. ಪಂಪನ ಸ್ವಾಮಿಯಾದ ಅರಿಕೇಸರಿಯು ವಿಕ್ರಮಾರ್ಜುನನಾಗಿ ಮೆರೆದಿರುವಂತೆ, ಇಲ್ಲಿ ಪೊನ್ನನ ಸ್ವಾಮಿಯಾದ ಮುಮ್ಮಡಿ ಕೃಷ್ಣನು ಶ್ರೀರಾಮನ ವೇಷಧಾರಿಯಾಗಿರಬಹುದೊ ಏನೊ ! ಈ ಗ್ರಂಥ ಉಪಲಬ್ಧವಾಗಿಲ್ಲ. ಪೊನ್ನನು ತನ್ನ ಈ ಕಾವ್ಯದಲ್ಲಿ ಹದಿನಾಲ್ಕು ಅಶ್ವಾಸಗಳಿವೆಯೆಂದೂ, 'ಪದಿನಾಲ್ಕು ಭುವನಂಗಳ್, ಪದಿನಾಲ್ಕಾಶ್ವಾಸ ರಚನೆಗಂ ಬೆಲೆಯಕ್ಕುಂ' ಎಂದು ಹೇಳಿಕೊಂಡಿದ್ದಾನೆ.

ಚಕ್ರವರ್ತಿ ಮುಮ್ಮಡಿಕೃಷ್ಣನು ತನ್ನ ಕವಿತಾವಿಲಾಸವನ್ನು ಮೆಚ್ಚಿ ತನಗೆ ಉಭಯಕವಿ ಚಕ್ರವರ್ತಿಯೆಂಬ ಬಿರುದನ್ನು ಕೊಟ್ಟನೆಂದು ಕವಿ ಹೇಳಿಕೊಂಡಿದ್ದಾನೆ. ಜೈನಧರ್ಮದ ಕಾವ್ಯವನ್ನು ಬರೆದುದಕ್ಕಾಗಿ ಈತನಿಗೆ 'ಕುರುಳ್ಗಳ ಸವಣ' – ಕೂದಲಿರುವ ಶ್ರವಣ – ಎಂಬ ಹಿರಿಮೆಯ ಹೆಸರೂ ಇತ್ತೆಂದು ತೋರುತ್ತದೆ. ಇವುಗಳ ಹುಮ್ಮಸ್ಸಿನಲ್ಲಿ ಆತ ಮೈಮರೆತು, ತನ್ನ ಕವಿತಾಸಾಮರ್ಥ್ಯ ಕನ್ನಡದಲ್ಲಿ ಅಸಗಕವಿಗೂ, ಸಂಸ್ಕೃತದಲ್ಲಿ ವರಕವಿ ಕಾಳಿದಾಸನಿಗೂ ನೂರ್ಮಡಿ ಮಿಗಿಲೆಂದೂ ಹೇಳಿಕೊಂಡಿದ್ದಾನೆ. ಆದರೆ ಆತನ ಕಾವ್ಯವನ್ನು ಆಮೂಲಾಗ್ರವಾಗಿ ಓದಿದ ಮೇಲೆ ಈತನ ಆಟಾಟೋಪ ಹುರುಳಿಲ್ಲದುದೆನಿಸುತ್ತದೆ. ತನ್ನ 'ಶಾಂತಿಪುರಾಣ' ಉಪಮಾತೀತವೆಂದೂ ಪುರಾಣಚೂಡಾಮಣಿಯೆಂದೂ ಕವಿ ಹೇಳಿಕೊಂಡಿರುವುದು 'ಬಂಡವಾಳವಿಲ್ಲದ ಬಡಾಯಿ' ಎನಿಸುತ್ತದೆ. ಇಲ್ಲಿ ಧರ್ಮನಿರೂಪಣೆಯಿದೆ. ಆದರೆ ಕಾವ್ಯ ಧರ್ಮಗಳಾದ ರಸ, ಭಾವಗಳಿಗೆ ಎಡೆಯಿಲ್ಲ. ಆತನ ಪಾಂಡಿತ್ಯ ಪ್ರದರ್ಶನ ಲಾಲಿತ್ಯವನ್ನು ಮೆಟ್ಟಿಹಾಕಿದೆ. 'ಆದಿಪುರಾಣ'ವನ್ನು ಓದಿದ ಮೇಲೆ 'ಶಾಂತಿಪುರಾಣ'ವನ್ನು ಓದಿದರೆ ಸಕ್ಕರೆಯನ್ನು ತಿಂದಮೇಲೆ ನೀರನ್ನು ಚಪ್ಪರಿಸಿದಂತಾಗುತ್ತದೆ. ಅಸಗನ ಕಾವ್ಯ ನಮಗೆ ಸಿಕ್ಕಿಲ್ಲ. ಆದರೆ 'ಕಾಳಿದಾಸನಿಗೆ ನೂರ್ಮಡಿ' ಎಂದು ತನ್ನನ್ನು ಈತ ಕರೆದುಕೊಂಡಿರುವುದು ಶುದ್ಧ ಆಭಾಸ. ಎಲ್ಲಿಯ ಕಾಳಿದಾಸ, ಎಲ್ಲಿಯ ಪೊನ್ನ ? ತನ್ನ 'ಶಾಂತಿಪುರಾಣ'ದಲ್ಲಿ ಬರುವ ಜ್ಯೋತಿಪ್ರಭೆಯ ಸ್ವಯಂವರ ಭಾಗದಲ್ಲಿ ಕಾಳಿದಾಸನ ರಘುವಂಶದಲ್ಲಿ ಬರುವ ಇಂದುಮತಿ ಸ್ವಯಂವರ ಭಾಗವನ್ನು ಕೃತಜ್ಞತೆಯನ್ನು ಸೂಚಿಸದೆಯೆ

ಅನಾಮತ್ತಾಗಿ ಎತ್ತಿಕೊಂಡಿದ್ದಾನೆ. ಹೋಗಲಿ, ಅದು ಲಲಿತ ಮನೋಹರವಾಗಿಯಾದರೂ ಇದೆಯೇ ? ಅದೂ ಇಲ್ಲ.

ಪೊನ್ನನ 'ಜಿನಾಕ್ಷರಮಾಲೆ' ಕಕಾರದಿಂದ ಳಕಾರದವರೆಗಿನ ಒಂದೊಂದು ಅಕ್ಷರದಿಂದ ಪ್ರಾರಂಭವಾಗುವ ಕಂದಪದ್ಯಗಳನ್ನು ಒಳಗೊಂಡಿದೆ. ಭಕ್ತಿಭಾವದ ಮಹೋನ್ನತಿ ಇಲ್ಲದಿದ್ದರೂ ಸಾಕಷ್ಟು ಚಮತ್ಕಾರವಿದೆ. ಈತನು 'ಗತ ಪ್ರತ್ಯಾಗತ'ವೆಂಬ ಗ್ರಂಥವೊಂದನ್ನು ಬರೆದಿರುವುದಾಗಿ ಪ್ರತೀತಿ. ಆದರೆ ಅದು ಉಪಲಬ್ಧವಾಗಿಲ್ಲ.

ಏನಾದರೇನು ? ಪೊನ್ನನು ಅದೃಷ್ಟಶಾಲಿ. ಚಕ್ರವರ್ತಿಯ ಆಶ್ರಯ ದೊರೆತ ಇವನು 'ಕವಿ ಚಕ್ರವರ್ತಿ' ಎನಿಸಿದ. ಮೇಲಕ್ಕೆತ್ತುವ ಮಹಾನುಭಾವರು ಸಿಕ್ಕಾಗ ಸರ್ವಸಾಮಾನ್ಯರಿಗೂ ಅಸಾಧಾರಣ ಪದವಿ, ಪ್ರತಿಷ್ಠೆ ದೊರೆಯಬಹುದಾದ ಲೋಕರೂಢಿಗೆ ಪೊನ್ನನೊಂದು ಉದಾಹರಣೆ. ಆತನ ಧರ್ಮತತ್ವ ನಿರೂಪಣೆ ಬಹಳ ನಿಖರವಾದುದೆಂಬ ಗೌರವದಿಂದ ಜೈನಧರ್ಮ ಪ್ರತಿಪಾದಕರೆಲ್ಲ ಆತನನ್ನು ಹೊಗಳಿದ್ದಾರೆ; ವೈಯಾಕರಣರು ಆತನ ಪದ್ಯ ಭಾಗಗಳನ್ನು ತಮ್ಮ ಸೂತ್ರಗಳಿಗೆ ಉದಾಹರಣೆಗಳಾಗಿ ಬಳಸಿಕೊಂಡಿದ್ದಾರೆ. ಪೊನ್ನನು ತನ್ನ ಕಾವ್ಯವನ್ನು ಪಂಡಿತರೂ, ಮೂರ್ಖರೂ ಒಟ್ಟಿಗೆ ಹೊಗಳುತ್ತಾರೆಂದು ಹೇಳಿಕೊಂಡಿದ್ದಾನೆ. ಶ್ರೀಮಾನ್ ಮುಗಳಿಯವರು ಹೇಳುವಂತೆ, 'ಅವನ ಶಾಂತಿಪುರಾಣ ಶ್ರೇಷ್ಠ ಕೃತಿಯೆಂದು ಹೊಗಳುವವರು ಪಂಡಿತರಾದರೂ ಇರಬೇಕು, ಮೂರ್ಖರಾದರೂ ಇರಬೇಕು. ರಸಿಕರಿಗೆ ರಸದೌತಣವೇನಿಲ್ಲಿಲ್ಲ.'

೩. ರನ್ನ

ರತ್ನತ್ರಯರಲ್ಲಿ ಕಡೆಯವನಾದ ರನ್ನ ಅಥಾವ ರತ್ನನ ಅಂಕಿತನಾಮ ಅನ್ವರ್ಥನಾಮವೂ ಅಹುದು. ಆತನು ಕವಿರತ್ನ, ಅನರ್ಘ್ಯ ಕವಿರತ್ನ, ರತ್ನತ್ರಯರನ್ನು ಮೊದಲು ಹೆಸರಿಸಿದವನು ಆತನೇ. 'ಅಜಿತಪುರಾಣ', 'ಸಾಹಸಭೀಮವಿಜಯ', (ರನ್ನಕಂದ) 'ಚಕ್ರೇಶ್ವರ ಚರಿತೆ', 'ಪರಶುರಾಮಚರಿತೆ' – ಎಂಬ ಗ್ರಂಥಗಳನ್ನು ತಾನು ಬರೆದಿರುವುದಾಗಿ ಆತ ಹೇಳಿಕೊಂಡಿದ್ದಾನೆ. ಇವುಗಳಲ್ಲಿ ಮೊದಲ ಎರಡು ಅಖಂಡವಾಗಿಯೂ, 'ರತ್ನಾಕಂದ'ದ ಕೆಲವು ಪದ್ಯಗಳೂ ಈಗ ಉಪಲಬ್ಧವಾಗಿವೆ. ಆತನ 'ಸಾಹಸಭೀಮವಿಜಯ' ಅಥವಾ 'ಗದಾಯುದ್ಧ'ವೇ 'ಚಕ್ರೇಶ್ವರ ಚರಿತೆ' ಯಾಗಿರಬಹುದೆಂದು ಕೆಲವು ಪಂಡಿತರ ಊಹೆ; 'ಸಮರ ಪರಶುರಾಮ'ನೆಂದು ಪ್ರಖ್ಯಾತನಾಗಿ, ರನ್ನನ ಏಳಿಗೆಗೆ ಕಾರಣಕರ್ತನಾದ ಚಾವುಂಡರಾಯನನ್ನು ಕುರಿತ ಗ್ರಂಥವಿರಬೇಕು. 'ಪರಶುರಾಮಚರಿತೆ'. ಈ ಎರಡು ಕಾವ್ಯಗಳೂ ಈಗ ಉಪಲಬ್ಧವಾಗಿಲ್ಲ.

ಪಂಪನಂತೆ ರನ್ನಕವಿಯೂ ತನ್ನ ಕಾವ್ಯಗಳಲ್ಲಿ ತನ್ನ ವಿಚಾರವನ್ನೆಲ್ಲ ಆಮೂಲಾಗ್ರವಾಗಿ ಹೇಳಿಕೊಂಡಿದ್ದಾನೆ. ಆತನ ಜನನ ಬೆಳುಗಲಿನಾಡಿನ ಮುದವೊಳಲು (ಈಗಿನ ಮುಧೋಳ್); ತಾಯಿ ಅಬ್ಬಲಬ್ಬೆ, ತಂದೆ ಜಿನೇಂದ್ರವಲ್ಲಭ; ಕ್ರಿ.ಶ. ೯೪೯ಕ್ಕೆ ಸರಿಹೋಗುವ ಸೌಮ್ಯ ಸಂವತ್ಸರದಲ್ಲಿ ಈತನ ಜನನ. ದೃಢಬಾಹು, ರೇಚಣ, ಮಾರಯ್ಯ ಎಂಬುವರು ಈತನ ಅಣ್ಣಂದಿರು. ಚಿಕ್ಕಂದಿನಲ್ಲಿ ಶ್ರವಣಬೆಳಗೊಳದ ಅಜಿತಸೇನಾಚಾರ್ಯರ ಬಳಿಯಲ್ಲಿ ಈತ ವಿದ್ಯಾಭ್ಯಾಸ ಮಾಡಿದ. ಕನ್ನಡ ಸಂಸ್ಕೃತಗಳಲ್ಲಿ ಸುಪ್ರಸಿದ್ಧವಾಗಿದ್ದ ಗ್ರಂಥಗಳೆಲ್ಲ ಆತನಿಗೆ ಕರತಲಾಮಲಕವಾಗಿರಬೇಕು. ಶ್ರವಣಬೆಳುಗೊಳದ ಸಣ್ಣ ಬೆಟ್ಟದ ಮೇಲಿರುವ ದೊಡ್ಡ ಬಂಡೆಯೊಂದರ ಮೇಲೆ ಶ್ರೀ 'ಕವಿರತ್ನ' ಎಂದು ಕೊರೆದ ಅಕ್ಷರಗಳು ಕಂಡುಬರುತ್ತವೆ; ಬಾಲಕನಾದ ರನ್ನನೇ ಅವುಗಳನ್ನು ಕೆತ್ತಿರಬೇಕೆಂದು ಒಂದು ಊಹೆ. ಚಿಕ್ಕಂದಿನಲ್ಲಿಯೇ ಕಾವ್ಯದೇವಿ ಆತನನ್ನು ಒಲಿದಳೆಂದು ತೋರುತ್ತದೆ. ಮೊದಮೊದಲು

ಸಾಮಂತರಾಜರಲ್ಲಿ ಉದಿತೋದಿತನಾಗಿ ಮಂಡಲೇಶ್ವರರಿಂದ ಅಭ್ಯುದಯವನ್ನು ಪಡೆದು, ಕಡೆಗೆ ಚಕ್ರವರ್ತಿಯಿಂದ ಉದಯಪರಂಪರೆಯನ್ನು ಪಡೆದುದಾಗಿ ಕವಿ ಹೇಳಿಕೊಂಡಿದ್ದಾನೆ. ಆತನಿಗೆ ಜಕ್ಕಿ, ಶಾಂತಿ- ಎಂಬ ಇಬ್ಬರು ಮಡದಿಯರು; ಬಹುಕಾಲ ಮಕ್ಕಳಿಲ್ಲದೆ, ಇಳಿವಯಸ್ಸಿನಲ್ಲಿ ಒಬ್ಬ ಮಗ, ಒಬ್ಬ ಮಗಳು ಆತನಿಗೆ ಜನಿಸಿದರು. ಮಗನಿಗೆ, ತನ್ನ ಪೋಷಕನಾಗಿದ್ದ ಚಾವುಂಡರಾಯರ ನೆನಪಿಗಾಗಿ 'ರಾಯ' ಎಂದೂ, ಮಗಳಿಗೆ ತನ್ನ ಮತ್ತೊಬ್ಬ ಪೋಷಕಳಾದ ಅತ್ತಿಮಬ್ಬೆಯ ನೆನಪಿಗಾಗಿ 'ಅತ್ತಿಮಬ್ಬೆ'ಯೆಂದೂ ಹೆಸರು ಇಟ್ಟನು. ಚಾಲುಕ್ಯ ಚಕ್ರವರ್ತಿಯಾದ ತೈಲಪ ಮತ್ತು ಅವನ ಮಗ ಸತ್ಯಾಶ್ರಯ – ಇವರ ಆಶ್ರಯದಲ್ಲಿ ಉದಯಪರಂಪರೆಯನು ಪಡೆದು 'ಕವಿ ಚಕ್ರವರ್ತಿ' ಎಂಬ ಬಿರುದನ್ನೂ ಅನೇಕ ಮಾನಮರ್ಯಾದೆಗಳನ್ನೂ ಪಡೆದನು.

ರನ್ನನು ಬಹು ಆತ್ಮಪ್ರತ್ಯಯವುಳ್ಳ ಕವಿ. ತನ್ನನ್ನೂ, ತನ್ನ ಕವಿತಾ ಸಾಮರ್ಥ್ಯವನ್ನೂ ನಿಸ್ಸಂಕೋಚವಾಗಿ, ನಿರ್ಭಯವಾಗಿ, ನಿಸ್ಸಂದಿಗ್ಧವಾಗಿ, ಮುಕ್ತ ಕಂಠದಿಂದ ಹೊಗಳಿಕೊಂಡಿದ್ದಾನೆ. ತನ್ನ ಕಾವ್ಯ ವಿಮರ್ಶಕನನ್ನು ಕುರಿತು:

ರತ್ನ ಪರೀಕ್ಷ ಕನಾಂ ಕೃತಿ । ರತ್ನ ಪರೀಕ್ಷಕನೆಂದು ಫಣಿಪತಿಯ ಫಣಾ
ರತ್ನಮುಮಂ ರನ್ನನ ಕೃತಿ । ರತ್ನಮುಮಂ ಪರೀಕ್ಷಿಪಂಗೆಂಟೆರ್ದೆಯೆ ?

ಎಂದು ಕೇಳುತ್ತಾನೆ. ತಾನು ಹುಟ್ಟಿ 'ಬಹುರತ್ನಾ ವಸುಂಧರಾ' ಎಂಬ ಹೇಳಿಕೆಯನ್ನು ಅಳಿಸಿಹಾಕಿ, 'ಈ ಲೋಕದಲ್ಲಿ ಒಬ್ಬನೇ ರತ್ನ' ಎನ್ನುವಂತೆ ಮಾಡಿಬಿಟ್ಟನಂತೆ ! ಹಿಂದೆ ಯಾವ ಕವಿಗಳಿಂದಲೂ ಸಾಧ್ಯವಾಗದಿದ್ದ ಮಹಾಕಾರ್ಯವನ್ನು ರನ್ನನು ಸಾರಸ್ವತಕವಿತೆಯಿಂದ ನಿರ್ವಹಿಸಿ, 'ವಾಗ್ದೇವಿಯ ಭಂಡಾರದ ಮುದ್ರೆಯನೊಡೆದಂ' ರಸಭಾವಗಳನ್ನು ಅರಿತುಕೊಂಡು. ಹೊಸದೇಶಿಯಲ್ಲಿ ಕಾವ್ಯರಚನೆ ಮಾಡಬಲ್ಲ ರನ್ನ, ತನ್ನ ಸೃಷ್ಟಿಶಕ್ತಿಯಲ್ಲಿ ಇನ್ನೊಬ್ಬ ಚತುರ್ಮುಖನಂತೆ ! ಈ ಮಾತುಗಳು ಹೊರನೋಟಕ್ಕೆ ಅತಿಶಯೋಕ್ತಿಗಳಂತೆ ಕಾಣಬಹುದಾದರೂ ರನ್ನನ ಕಾವ್ಯಗಳನ್ನು ಆಮೂಲಾಗ್ರವಾಗಿ ಓದಿದ ಮೇಲೆ, ಕಣಕದಷ್ಟೆ ಹೂರಣವು ಇದೆಯೆಂಬ ಸಮಾಧಾನ, ಸಂತೃಪ್ತಿ, ಸಂತೋಷಗಳುಂಟಾಗುತ್ತವೆ.

ರನ್ನನ ಉಪಲಬ್ಧ ಕೃತಿಗಳಲ್ಲಿ 'ಅಜಿತಪುರಾಣ' ಮೊದಲನೆಯದು. ಇದನ್ನು ಬರೆದುದು ಕ್ರಿ.ಶ. ೯೯೩ರಲ್ಲಿ. ಇದರ ಹೆಸರೇ ಸೂಚಿಸುವಂತೆ ಇದು ಎರಡನೆಯ ತೀರ್ಥಂಕರನಾದ ಅಜಿತನಾಥನ ಪುಣ್ಯಕಥೆ. ೧೨ ಆಶ್ವಾಸನಗಳುಳ್ಳ ಈ ಧರ್ಮಕಾವ್ಯದಲ್ಲಿ ಉಳಿದ ಜೈನಪುರಾಣಗಳಲ್ಲಿ ಕಾಣಬರುವ ಭವಾವಳಿಯ ಗೊಂದಲ ಇಲ್ಲ. ಅಜಿತನ ಪೂರ್ವಜನ್ಮಗಳಲ್ಲಿ ಒಂದರ ಕಥೆ ಮಾತ್ರ ಇಲ್ಲಿ ಬಂದಿದೆ. ಪೊನ್ನನ ಶಾಂತಿಪುರಾಣದ ಸಾವಿರ ಪ್ರತಿಗಳನ್ನು ದಾನ ಮಾಡಿದ ದಾನಚಿಂತಾಮಣಿ ಅತ್ತಿಮಬ್ಬೆಯೇ ರನ್ನನ ಪೋಷಕಗಳಾಗಿದ್ದು, ಆತನಿಂದ ಇದನ್ನು ಬರೆಸಿದಳು. ಕವಿಯು ತನ್ನ ಈ ಪುರಾಣಕಾವ್ಯದಲ್ಲಿ ಅತ್ತಿಮಬ್ಬೆಯ ಇತಿಹಾಸವನ್ನೆಲ್ಲ ವಿಸ್ತಾರವಾಗಿ ಕೊಟ್ಟು, ಆಕೆಯ ದಾನಗುಣವನ್ನು ಹಾಡಿ ಹರಿಸಿದ್ದಾರೆ. ಆಕೆಯನ್ನು ಅಜರಾಮರಳಾಗಿ ಮಾಡಿದ್ದಾನೆ. ಕವಿಯು ತನ್ನ ಈ ಗ್ರಂಥ ಪುರಾಣವಾಗಿರುವಂತೆ ಕಾವ್ಯರತ್ನವೂ ಆಗಿರುವುದಾಗಿ ಹೇಳಿಕೊಂಡಿದ್ದಾನೆ. ಆದರೆ ಕಾವ್ಯಧರ್ಮಕ್ಕಿಂತಲೂ ಧರ್ಮಕ್ಕೆ ಇಲ್ಲಿ ಪ್ರಾಶಸ್ತ್ಯ ಹೆಚ್ಚು – ಎಂಬುದನ್ನು ಮರೆಯುವಂತಿಲ್ಲ. ಕವಿಯ ಮಾತಿನ ಸತ್ಯತೆಯನ್ನು ನೋಡಬೇಕು. ಈ ಕಥೆ ಅತ್ಯಂತ ಹೃದಯಸ್ಪರ್ಶಿಯಾಗಿದೆ. ಸಗರನನ್ನು ಪ್ರತಿಬೋಧಿಸಲೆಂದು ಜನ್ಮ ಜನ್ಮಗಳ್ಲಲಿಯೂ ಹುಟ್ಟಿಬರುತ್ತಿರುವ ಆತನ ಮಿತ್ರ ಚೇತನ, ಮಣಿಕೇತು, ದೃಷ್ಟಿವಿಷೋರಗನ ರೂಪವನ್ನು ತಾಳಿ, ರಾಜನ ಅರವತ್ತು ಸಾವಿರ ಮಕ್ಕಳಲ್ಲಿ ಭಗೀರಥನೊಬ್ಬನ ಹೊರತು ಉಳಿದವರನ್ನೆಲ್ಲ ಸಾಯುವಂತೆ ಮಾಡುತ್ತಾನೆ. ಅನಂತರ ಬ್ರಾಹ್ಮಣವೇಷದಿಂದ ರಾಜನ ಅರಮನೆಗೆ ಬಂದು ಹುಯ್ಯಲಿಡಲು

ಆರಂಭಿಸಿದ. ಕಾರಣವನ್ನು ಕೇಳಿದಾಗ "ನನ್ನ ಮಗನನ್ನು ಜವನೆಂಬ ಸಿಡಿಲೆಱಗಿದೊಡಾನಂ ನಿನ್ನಡಿಗೆಱಗಿದೆ', 'ಎನಗೆ ಮರಣಂ ಶರಣಂ, ಮೇಣೆನಿತೆ ನಿನ್ನ ಚರಣಂ ಶರಣಂ' ಎಂದು ಹೇಳಿದ. ರಾಜನ ಸಾವು ಅನಿವಾರ್ಯವೆಂದು ಆವನಿಗೆ ಬೋಧಿಸುತ್ತಾನೆ:

ಆರಾರಂ ನುಂಗಿದನಿ । ಲ್ಲಾರಾರಂ ನೊಣೆದುನಿಲ್ಲ ? ಸರಿನೋಡಿದನಿ
ಲ್ಲಾರಾರಂ, ಸುರಮಾನವ । ನಾರಕ ತಿರ್ಯಕ್ ಸಮೂಹಮಂ ಯಮರಾಜಂ ?

ಆ ಯಮನಿಗೆ –

ಮೃತಪಟಹಂ ಜಯಪಟಹಂ । ಚಿತ್ತಾಗ್ನಿ ಧೂಮಂ ಜಯಧ್ವಜಂ, ಜನಕರುಣಾ
ರುತಿ ಜಯಮಂಗಳಾರುತಿಯನೆ । ಕೃತಾಂತರಾಜಂಗೆ ರಾಜ್ಯ ಚಿಹ್ನಮಿದಲ್ತೆ ?

ಎಂದು ಬೋಧಿಸಿದ. ಆಗ ಕಪಟ ಬ್ರಾಹ್ಮಣ 'ಈ ನಿನ್ನ ಪೇಳ್ದ ಧರ್ಮ ಮಿದೇನೆನಗೆಯೊ, ನಿನಗಮುಂಟೊ ?' ಎಂದು ಕೇಳಿದ. ರಾಜ ನಕ್ಕು 'ಎನಗದು ಮುನ್ನಂ' ಎಂದ. ಒಡನೆಯೇ ಬ್ರಾಹ್ಮಣ 'ನಿನ್ನ ಅರವತ್ತು ಸಾವಿರ ಮಕ್ಕಳೂ ಸತ್ತರು' ಎಂದ. ಅದನ್ನು ಕೇಳಿದ ಅರಮನೆ ದುಃಖದ ಬೀಡಾಯಿತು. ರಾಜನು ಮಾತ್ರ ಚಲವಿಚಲಿತನಾಗದೆ ವೈರಾಗ್ಯದಿಂದ ತಪಸ್ಸಿಗೆ ಹೋದ. ಈ ಇಡೀ ಕಥೆ ಒಂದು ರಸಘಟ್ಟಿಯಂತಿದೆ.

ರನ್ನನ ವೈರಾಗ್ಯವರ್ಣನೆ ಅದ್ಭುತವಾಗಿದೆ. ಕವಿಯ ಆತ್ಮರೋದನೆ ಇಲ್ಲಿ ಹೆಪ್ಪು ಗಟ್ಟಿ ಕುಳಿತಿದೆ. ಎಂತಹ ನಾಸ್ತಿಕನೂ ಈ ವರ್ಣನೆಯನ್ನು ಓದಿದಾಗ ವೈರಾಗ್ಯಪರನಾಗುತ್ತಾನೆ–

ಮತಿಗೆಟ್ಟು ಜೀವ । ಧರ್ಮಾಮೃತಮಂ ಸೇವಿಸದಧರ್ಮಮಂ ಸೇವಿಸಿ ದು
ರ್ಗತಿಗಿಳಿದೀ ಜವನೆಂಬಱಿ । ಸಿ ತಿಂಬ ದೈವಕ್ಕೆ ಪೋಗಿ ಪಾಳಂಬಡುವೈ ॥
ಎನಿತೆನಿತು ಕಳಿದ ಭವಮುಂ । ನೆನೆದಪೆ ? ಯೆನಿತೆನಿತು ಭವದ ಬಂಧುಗಳಂನೀ
ನೆನೆದಪೆ ? ಯೆನಿತೆನಿತೊಡಲಂ । ನೆನೆದಪೆಯೆಲೆ ಜೀವ ? ನೀನೆ ಪೇಳ್ ಪವಣೊಳವೆ ?
ಎನಿತಂ ಕುಕ್ಕಳಗುದಿದಪೆ ? ಎನಿತಂ ಕಕ್ಕಳಗಳದ್ಧಪ್ಯ ? ಜೀವನೆ ನೀ
ನೆನಿತಂ ಮಲ್ಮಲ ಮರುಗುವೆ ? ಎನಿತಂ ಸಂಸಾರದೊಳಗೆ ತಿರ್ರನೆ ತಿರಿವೈ ? ॥
ಕಡೆಯಿಲ್ಲದ ಸಂಸಾರದ । ಕಡೆಗಾಣಲ್ ಬಗೆವೆಯಪ್ಪೊಡೆನ್ನುಕ್ತಿಗೊಡಂ
ಬಡು ಜೀವ ನಿನ್ನ ಕಾಲಂ । ಪಿಡಿವೆಂ ಧರ್ಮಮನೆ ಮಗುಳೆ ಬಲ್ವಿಡಿವಿಡಿಯಾ ॥

ಕವಿಯು ಚೇತನ ಎಷ್ಟು ಸುಸಂಸ್ಕೃತವಾದುದು । ಎಂತಹ ವೇದನೆಯನ್ನು ನುಭವಿಸುತ್ತಾ ಕವಿ ಬರೆಯುತ್ತಿದ್ದಾನೆ। ಹೇಗೆ ನಮ್ಮ ಮನಸ್ಸನ್ನು ಸೆರೆ ಹಿಡಿದು ವಶವರ್ತಿಯಾಗಿ ಮಾಡಿಕೊಳ್ಳುತ್ತಿದ್ದಾನೆ!

ರನ್ನ ಕವಿಯ 'ಕೃತಿ ರತ್ನ'ವೆಂದು ಕೀರ್ತಿವೆತ್ತಿರುವ 'ಗದಾಯುದ್ಧ' ಕಾವ್ಯವನ್ನು ಸ್ವಲ್ಪ ನೋಡೋಣ. ಕವಿ ಹೇಳಿಕೊಂಡಿಲ್ಲವಾದರೂ ಇದು ಎಲ್ಲ ವಿಧದಲ್ಲಿಯೂ 'ಪಂಪಭಾರತ'ದ ಅನುಕರಣೆ. ಅದು 'ವಿಕ್ರಮಾರ್ಜುನವಿಜಯ'ವಾದರೆ ಇದು 'ಸಾಹಸ ಭೀಮವಿಜಯ'. ಅಲ್ಲಿ ಕಥಾನಾಯಕನಾದ ಅರ್ಜುನನನ್ನು ಅರಿಕೇಸರಿಯೊಡನೆ ಸಮೀಕರಿಸಿ 'ಸಮಸ್ತಭಾರತ'ವನ್ನು ಸೃಷ್ಟಿಸಿದ್ದರೆ, ಇಲ್ಲಿ ಭೀಮನನ್ನು ಸತ್ಯಾಶ್ರಯನೊಡನೆ ಅಭೇದವುಳ್ಳವನನ್ನಾಗಿ ಮಾಡಿ 'ಸಮಸ್ತಗದಾಯುದ್ಧ'ವನ್ನು ಸೃಷ್ಟಿಸಲಾಗಿದೆ. ಅಲ್ಲಿ ಅರ್ಜುನನಿಗೆ ಪಟ್ಟಾಭಿಷೇಕ, ಇಲ್ಲಿ ಭೀಮನಿಗೆ. ಅಲ್ಲಿ ಅರಿಕೇಸರಿಯ ಇತಿಹಾಸ, ಇಲ್ಲಿ ಸತ್ಯಾಶ್ರಯನ ಇತಿಹಾಸ. ಇಷ್ಟೇ ಅಲ್ಲ; ಪಂಪನ 'ವಿಕ್ರಮಾರ್ಜುನ ವಿಜಯ'ವನ್ನು ಆಮೂಲಗ್ರವಾಗಿ ಓದಿ ಹೃದ್ಗತ ಮಾಡಿಕೊಂಡು, ಅದರ ಹದಿಮೂರನೆಯ ಆಶ್ವಾಸದ ಕಥಾಭಾಗಕ್ಕೆ ಮನಸೋತು.

ಅಷ್ಟನ್ನೆ ಒಂದು ಸ್ವತಂತ್ರಕಾವ್ಯವಾಗಿ ಸೃಷ್ಟಿಸಹೊರಟಿದ್ದಾನೆ; ಹಾಗೆ ಮಾಡುವಾಗ ತನ್ನ ಹೃದ್ಗತವಾಗಿದ್ದ ಪದ ಪದಬಂಧುರತೆಯನ್ನೂ ತನ್ನ ಕಾವ್ಯದಲ್ಲಿ ಬಳಸಿಕೊಂಡಿದ್ದಾನೆ. ಒಂದು ಕಡೆಯಂತೂ ಆತನ ಪದ್ಯವೊಂದನ್ನು ಅಖಂಡವಾಗಿ ಎತ್ತಿಕೊಂಡು ಬಳಸಿದ್ದಾನೆ. ಹೊರನೋಟಕ್ಕೆ ಆತನೊಬ್ಬ ಕೃತಚೋರನಂತೆ ಕಾಣಿಸಿದರೂ ಆಶ್ಚರ್ಯವಿಲ್ಲ. ಆದರೆ ಆತನ ಕಾವ್ಯಗಳನ್ನು ಆಳವಾಗಿ ಅಭ್ಯಾಸ ಮಾಡಿದ ಮೇಲೆ ಆತನ ಮಹತ್ತು, ಕವಿತಾಶಕ್ತಿಯ ಔನ್ನತ್ಯ, ಆತನ ಅದ್ಭುತ ಪ್ರತಿಭೆ, ಸನ್ನಿವೇಶ ರಚನಾ ಸಾಮರ್ಥ್ಯ ಅರ್ಥವಾಗುತ್ತದೆ. ರನ್ನನ ಈ 'ಕೃತಿರತ್ನ'ವು ಸಂಸ್ಕೃತದ 'ವೇಣೀಸಂಹಾರ' ಮತ್ತು 'ಊರುಭಂಗ' ನಾಟಕಗಳಿಂದ ಪ್ರೇರಣೆ ಪ್ರಭಾವಗಳನ್ನು ಪಡೆದಿದೆ.

'ಗದಾಯುದ್ಧ'ದ ತಿರುಳು ಗದಾ ಮತ್ತು ಸೌಪ್ತಿಕಪರ್ವದ ತಿರುಳಾದರೂ 'ಸಿಂಹಾವಲೋಕನ ಕ್ರಮ'ದಿಂದ ನೋಡಿದಾಗ ಇಡೀ ಭಾರತದ ಕಥೆಯೆಲ್ಲವೂ ಇಲ್ಲಿ ಕಂಡುಬರುವುದಾಗಿ ಕವಿ ಹೇಳಿಕೊಂಡಿದ್ದಾನೆ. ಆ ಮಾತು ನಿಜ. ಸ್ಮಶಾನದಂತಿರುವ ರಣರಂಗದಲ್ಲಿ ಬರುತ್ತಿರುವಾಗ, ಅಲ್ಲಿ ಮಡಿದು ಬಿದ್ದಿರುವ ವೀರಾಧಿವೀರರನ್ನು ಕಂಡು, ಅವರ ಕಥೆಯನ್ನೆಲ್ಲಾ ಜ್ಞಾಪಿಸಿಕೊಳ್ಳುತ್ತಾನೆ. ಅವರನ್ನು ಕಂಡು, ಅವನ ಕರುಳು ಕಿವುಚಿದಂತಾಗುತ್ತದೆ. ಅವನ ಕಣ್ಣು ಹನಿಗೂಡುತ್ತದೆ, ರೋದನೆ ಹೊರಹೊಮ್ಮುತ್ತದೆ. ಅದರಲ್ಲಿಯೂ ತನ್ನ 'ಅಣುಗದಮ್ಮ'ನಾದ ದುಶ್ಶಾಸನನ್ನೂ ಜೀವದ ಗೆಳೆಯನಾದ ಕರ್ಣನನ್ನೂ ಕಂಡಾಗ ಆತನು ಪಡುವ ಸಂಕಟ ದುರ್ಭರವಾಗುತ್ತದೆ. ದುರ್ಯೋಧನನೇನೂ ಸಜ್ಜನಶಿರೋಮಣಿಯಲ್ಲ; ಆದರೆ ರನ್ನನು ಚಿತ್ರಿಸಿರುವ ರೀತಿಯಲ್ಲಿ ಆತನ ಪಾತ್ರ ನಮ್ಮ ಹೃದಯವನ್ನು ಸೂರೆಗೊಳ್ಳುತ್ತದೆ. ರಣರಂಗದಲ್ಲಿ ಬಿದ್ದಿರುವ ಅಭಿಮನ್ಯುವಿನ ಕಳೇಬರವನ್ನು ಕಂಡು, ಆತನ ತಲೆಯಲ್ಲಿ ಸುಳಿಯುವುದು ಆ ವೀರಬಾಲಕ ಅದ್ವಿತೀಯ ಪರಾಕ್ರಮವೇ ಹೊರತು ಅವನು ಶತ್ರು ಪುತ್ರನೆಂಬುದಲ್ಲ, 'ನಿನ್ನಂ ಪೆತ್ತಳ್ ಮೊಲೆವೊತ್ತಳೆ ? ವೀರ ಜನನಿವೆಸರಂ ಪೆತ್ತಳ್' ಎಂದು ಬಾಯ್ತುಂಬ ಹೊಗಳುತ್ತಾನೆ. ಆತನ ಮೆಚ್ಚಿಗೆ ಮುಂದುವರಿದು ಭಕ್ತಿಯಾಗಿ ಪರಿಣಮಿಸುತ್ತದೆ.

ಅಸಮಬಲ ಭವದ್ವಿಕ್ರಮ । ಮಸಭವಂ ಪೆಱರ್ಗೆ ನಿನ್ನನಾನಿನಿತಂ ಪ್ರಾ
ರ್ಥಿಸುವೆನಭಿಮನ್ಯು ನಿಜಸಾ । ಹಸೈಕದೇಶಾನುಮರಣಮೆಮಗಕ್ಕೆ ಗಡಾ ॥

ಎಂದು ಹೇಳಿ ನಮಸ್ಕರಿಸುತ್ತಾನೆ. ಇದರಂತೆಯೇ, ಅಶ್ವತ್ಥಾಮನು ಉಪಪಾಂಡವರ ತಲೆಗಳನ್ನು ತರಿದುತಂದಾಗ ಸುಯೋಧನನು ತನ್ನ ಶತ್ರು ಶೇಷ ನಿಶ್ಶೇಷವಾಯಿತೆಂದು ಸಂತೋಷಪಡುವುದಕ್ಕೆ ಬದಲಾಗಿ 'ಪರಮಜ್ಞಾನಿಯೆ, ವಿವೇಕವಿಕಳರವೋಲ್ ಬಾಲರ ತಲೆಯನರಿದು ತಂದೆಯೊ । ದೊರೆಕೊಂಡುದು ನಿನಗೆ ಪಾತಕಂ ಬಾಲವಧಂ' ಎಂದು ಮಮ್ಮಲ ಮರುಗುತ್ತಾನೆ. ಇಂತಹ ಲೋಕೋತ್ತರ ಗುಣಗಳನ್ನು ಕಂಡು, 'ಗದಾಯುದ್ಧದ ವಿಮರ್ಶಕರು ಇಲ್ಲಿನ ಕೌರವನನ್ನು 'ಮಹಾನುಭಾವ'ನೆಂದು ಕರೆದಿದ್ದಾರೆ. ಪಂಪಭಾರತದ ಕರ್ಣನಂತೆ ಗದಾಯುದ್ಧದ ಪ್ರತಿನಾಯಕನಾದ ಸುಯೋಧನನು ನಮ್ಮ ಪ್ರೇಮ ಕರುಣೆಗಳಿಗೆ ಆಸ್ಪದನಾಗಿದ್ದಾನೆ.

ಸುಯೋಧನನ ಮತ್ತೊಂದು ಮುಖವೆಂದರೆ ಆತನು 'ಸಾಹಸಧನ' ಮತ್ತು 'ಛಲದಂಕಮಲ್ಲ' ನಾಗಿರುವುದು. ಯುದ್ಧಭೂಮಿಯಲ್ಲಿ ದೇಶಿಗನಂತೆ ಏಕಾಂಗಿಯಾಗಿ ಹೋಗುತ್ತಿರುವ ಆತನನ್ನು ಆತನ ತಾಯ್ತಂದೆಗಳು ಸಂಧಿಸಿ ಅಪ್ಪ, ಕುರುಡನಾದ ಈ ನಿನ್ನ ತಂದೆ ಕಾಲು ಹಿಡಿದು ಬೇಡಿಕೊಳ್ಳುತ್ತಾನೆ; ಪಾಂಡವರಿಗೆ ಅರ್ಧರಾಜ್ಯವನ್ನು ಕೊಟ್ಟುಬಿಡು' – ಎಂದು ತಂದೆಯೂ,

ಸಮರವ್ಯಾಪಾರಂ ಮಾಣ್ದು । ಮಗನೆ ನಿಜ ಶಿಬಿರದತ್ತ ಬಿಜಯಂಗೆಯ್, ಸತ್ತ
ಮಗಂದಿರ್ ಸತ್ತರ್, ನೀ । ನೆಮಗುಳ್ಳೊಡೆ ಸಾಲ್ಗುಮವರನಿಂ ತಂದಪೆವೆ ?

ಎಂದು ಅವನ ತಾಯಿಯೂ ಕಂಬನಿಗರೆಯುತ್ತ ಬೇಡಿಕೊಳ್ಳುತ್ತಾಳೆ. 'ವೀರಶತಜನನಿ'ಯಾಗಿದ್ದ ಗಾಂಧಾರಿ ಈಗ ದುಃಖಶತಜನನಿಯಾಗಿದ್ದಾಳೆ. ಆದರೆ ಕೌರವನ ವೇದನೆಯನ್ನು ಅವನ ಹೃದಯ ಮಾತ್ರ ಬಲ್ಲುದು. ಅತ್ತ ಧರ್ಮರಾಯ ತನ್ನ ತಮ್ಮಂದಿರಲ್ಲಿ ಒಬ್ಬನು ಸತ್ತರೂ ಅಗ್ನಿಪ್ರವೇಶ ಮಾಡುವುದಾಗಿ ಪ್ರತಿಜ್ಞೆ ಮಾಡಿದ್ದಾನೆ. ಹಾಗಿರುವಾಗ ನೂರು ಜನ ಸೋದರರನ್ನೂ ಜೀವದ ಗೆಳೆಯನನ್ನೂ ಕಳೆದುಕೊಂಡು ತಾನು ಬದುಕಬೇಕೆ ? ಆತನು ನಿಷ್ಠುರನಾಗಿ ಹೇಳುತ್ತಾನೆ–'ಬಾಳ್ವೆನೆಂಬ ಎನ್ನ ಅಳಿಯಾಸೆಯಂ ಬಿಸುಡಿಂ; ಎನ್ನವರಾದುವನಾಗದಿರ್ಪನೆ ?' ದುಶ್ಶಾಸನ ಕರ್ಣರನ್ನು ನೆನೆದು ಆತನ ಹೃದಯ ಅಗ್ನಿ ಪರ್ವತವಾಗುತ್ತದೆ; ಲಾವಾರಸದಂತಹ ಮಾತುಗಳು ಉಕ್ಕುತ್ತವೆ–

ಸಾಧಿಸುವೆಂ ಫಲ್ಗುಣನಿಂ । ಸಾಧಿಸುವೆಂ ಪವನಸುತನ ಬಸಿಱಿಂ ಹಾ ಕ
ರ್ಣಾ! ದುಶ್ಶಾಸನ! ತೆಗೆವೆಂ । ಸಾಧಿಸಿ ನಿರ್ದೋಷಿಯಪ್ಪ ಯಮಜನೊಳ್ ಪುದುವಾಳ್ವೆಂ

ಅವನ ದ್ವೇಷವೆಲ್ಲ ದುಶ್ಶಾಸನನನ್ನು ಕೊಂದ ಭೀಮ, ಕರ್ಣನನ್ನು ಕೊಂದ ಅರ್ಜುನ ಈ ಇಬ್ಬರ ಮೇಲೆ ಮಾತ್ರ. ಅವರು ಹತರಾದರೆ ನಿರ್ದೋಷಿಯಾದ ಧರ್ಮಜನೊಡನೆ ರಾಜ್ಯವನ್ನು ಹಂಚಿಕೊಂಡು ಆಳಲು ಅವನ ಅಡ್ಡಿ ಇಲ್ಲ. ಅವನ ಹೃದಯವೇನೂ ಧರ್ಮಬಾಹಿರವಲ್ಲ. ಆತ ತಾಯ್ತಂದೆಗಳನ್ನು ಕುರಿತು

ಆಂ ಮಗನೆ ನಿಮಗೆ, ಧರ್ಮಜ । ನೇಂ ಮಗನಲ್ಲ ವೆ ? ಬಳಿಕ್ಕೆ ನೀಮುಂ ತಾಮುಂ
ನಿಮ್ಮೊಳ್ ನೇರ್ಪಡುಗಿಡದೆ ಸು । ಖಮ್ಮಿರ್ನ್ನಿನ ತೆಱದೆ ಬಾಳ್ವೆನ್ ಬಿಡಿಮೆನ್ನಂ

ಎಂದು ಹೇಳುತ್ತಾನೆ. ಅವರ ಬುದ್ಧಿವಾದದಂತೆ, ಸುಯೋಧನನು ಮುಂದಿನ ಕಾರ್ಯವನ್ನು ಆಲೋಚಿಸಲು ಭೀಷ್ಮರಲ್ಲಿಗೆ ಹೋಗುತ್ತಾನೆ. ಅವರು ಈ ಮೊಮ್ಮಗನನ್ನು ಬಾಯ್ತುಂಬ ಹೊಗಳಿ, ಸಂಧಿಮಾಡಿಕೊಳ್ಳುವಂತೆ ಬುದ್ಧಿ ಹೇಳುತ್ತಾರೆ. ಕೌರವ ಬೆಚ್ಚಿಬಿದ್ದು 'ಸಮರದೊಳೆನಗಜ್ಜ ! ಪೇಳಿಮಾವುದು ಕಜ್ಜಂ ?'– 'ಅಜ್ಜ ಯುದ್ಧದಲ್ಲಿ ನಾನೇನು ಮಾಡಬೇಕೆಂಬುದನ್ನು ಹೇಳಿ. ಸಂಧಿಯ ಮಾತು ಬೇಡ'– ಎನ್ನುತ್ತಾನೆ :

ನೆಲಕಿಱಿವೆನೆಂದು ಬಗೆವಿರೆ ? । ಚಲಕಿಱಿವೆಂ, ಪಾಂಡುಸುತರೊಳೀ ನೆಲನಿದು ಪಾ
ಳ್ಗೆಲನೆನಗೆ, ದಿನಪಸುತನಂ ! ಕೊಲಿಸಿದ ನೆಲದೊಡನೆ ಮತ್ತೆ ಪುದುವಾಳ್ದ ಪೆನೆ ?

ಎಂದು ಪ್ರಶ್ನಿಸುತ್ತಾನೆ. 'ನೀವಿಲ್ಲ, ದ್ರೋಣರಿಲ್ಲ, ಕರ್ಣನಿಲ್ಲ, ದುಶ್ಶಾಸನನಿಲ್ಲ; ಯಾರೊಡನೆ ರಾಜ್ಯಭಾರ ಮಾಡಲಿ ? ಯಾರಿಗೆ ನನ್ನ ವೈಭವವನ್ನು ತೋರಿಸಿಕೊಂಡು ಮೆರೆಯಲಿ ?' ಎಂದು ಕೇಳಿ ಅವರ ಬಾಯಿ ಮುಚ್ಚಿಸುತ್ತಾನೆ. ಅವರ ಬುದ್ಧಿವಾದದಂತೆ ವೈಶಂಪಾಯನ ಕೊಳದಲ್ಲಿ, ಆ ದಿನ ತಲೆಮರೆಸಿಕೊಳ್ಳಲು ಒಪ್ಪಿ ಹೋಗುತ್ತಾನಾದರೂ, ಕ್ಷತ್ರಿಯೋಚಿತವಲ್ಲದ ಆ ಗರ್ಹಣೀಯ ಕಾರ್ಯವನ್ನು ಕೈಕೊಳ್ಳಲು ಮಿತ್ರ, ಸೋದರರ ವಧೆಗಿಂತಲೂ ಹೆಚ್ಚಾಗಿ ವ್ಯಥೆಪಡುತ್ತಾನೆ. ಮತ್ತೆ ಮತ್ತೆ ಎಲ್ಲರೂ ಸಂಧಿಯ ಪ್ರಸ್ತಾಪ ಎತ್ತುವುದನ್ನು ನೋಡಿ 'ಸಂಧಿಯಂ ಮಾಡುವುದೆಂಬರ ನುಡಿಯಂ ಕೇಳಲ್ಕೆಂದೆರಡುಂ ಕಿವಿಗಳುಮನೆನಗೆ ಬಿದಿ ಮಾಡಿದನೆ' ಎಂದು ಬಿಸುಸುಯ್ಯುತ್ತಾನೆ. ಹಿರಿಯರ ಮಾತಿಗಾಗಿ ಕೊಳದಲ್ಲಿ ತಲೆಮರೆಸಿಕೊಂಡನಾದರೂ, ಭೀಮನು ಮೂದಲಿಸಿ ಆಡಿದ ಮಾತುಗಳನ್ನು ಕೇಳುತ್ತಲೆ **'ನೀರೊಳಿಗಿರ್ದುಂ ಬೆಮರ್ತನುರಗಪತಾಕಂ'**. ಅಷ್ಟೇ ಅಲ್ಲ 'ರಸೆಯಿಂ ಕಾಲಾಗ್ನಿರುದ್ರಂ ಪೊಱಮಡುವೊಲ್' ನೀರಿನಿಂದ ಹೊರಕ್ಕೆ ಹಾರಿಬಂದು, ಭೀಮನೊಡನೆ ಹೋರಾಡಿ. ಅವನನ್ನು ನೆಲಕ್ಕೆ ಉರುಳಿಸುತ್ತಾನೆ. ಬಿದ್ದವನನ್ನು ಕೊಲ್ಲೆನೆಂದು ಹೇಳಿ ಗದೆಯ ಗಾಳಿಯಿಂದ ಅವನನ್ನು ಮೇಲಕ್ಕೆಬ್ಬಿಸುತ್ತಾನೆ. ಕೊನೆಗೆ ಭೀಮನ ಅಧರ್ಮಯುದ್ಧಕ್ಕೆ ಬಲಿಯಾಗಿ ನೆಲಕ್ಕುರುಳಿರುತ್ತಾನೆ. ಮುಕುಟ ಭಂಗದ ಅಪಮಾನಕ್ಕೆ ಒಳಗಾಗುತ್ತಾನೆ – ಇದು ರನ್ನನು ಚಿತ್ರಿಸಿರುವ

ಕೌರವನ ಪಾತ್ರದ ತಿರುಳು. ಆತನು ವೀರ, ಕರುಣಗಳ ಒಂದು ಸಂಗಮ ಸ್ಥಾನ. ಆ ಮಾನಧನನ ಛಲ ನಮ್ಮ ಹೃದಯವನ್ನು ಸೂರೆಗೊಳ್ಳುತ್ತದೆ. ರನ್ನನು ಪಂಪ ಕವಿಯು ಬರೆದ ಚರಮಗೀತೆಯನ್ನು ತನ್ನ ಕಾವ್ಯದಲ್ಲಿಯೂ ಬಳಸಿಕೊಂಡಿದ್ದಾನೆ–

ನುಡಿದುದನೆಯ್ದೆ ತುತ್ತತುದಿಯೆಯ್ದು ವಿನಂ ಪಿಡಿದಂ ವಲಂ ಚಲಂ
ಬಿಡಿದುದನೆಯ್ದೆ ಮುಂ ಪಿಡಿದುದಂ ಪಿಡಿದಂ ಸಲೆ ಪೂಣ್ದು ಪೂಣ್ಕೆ ನೇ
ರ್ಪಡೆ ನಡೆವನ್ನೆಗಂ ನಡೆದನಳ್ಕದೆ ಬಳ್ಕದೆ ತನ್ನೊಡಲ್ ಪಡ
ಲ್ವಡುವಿನಮಣ್ಮಿ ಗುಂದದಲೇನಭಿಮಾನಧನಂ ಸುಯೋಧನಂ

ಈ ಚರಮಗೀತೆ ಪಂಪನ ದುರ್ಯೋಧನನಿಗಿಂತಲೂ ತನ್ನ ದುರ್ಯೋಧನನಿಗೇ ಹೆಚ್ಚು ಒಪ್ಪುವುದೆಂದು ರನ್ನ ಭಾವಿಸಿದನೇನೋ ! ಸುಯೋಧನನ ಅಂತ್ಯವನ್ನು ಸೂರ್ಯಾಸ್ತದೊಡನೆ ಹೋಲಿಸಿ **'ಕುರುಕುಲಾರ್ಕನುಮರ್ಕನುಮಸ್ತಮೆಯ್ದಿದರ್'** ಎಂದು ಹೇಳುವುದರ ಮೂಲಕ, ಇನ್ನು ಕುರುವಂಶಕ್ಕೆ ಕತ್ತಲೆ ಕವಿಯಿತೆಂದು ಕವಿ ಸೂಚಿಸುತ್ತಿದ್ದಾನೊ ಏನೊ !

ಮೇಲಿನ ಕೌರವಪ್ರಶಸ್ತಿಯನ್ನು ಕಂಡು 'ರನ್ನನು ತನ್ನ ಸ್ವಾಮಿಗೆ ದ್ರೋಹವನ್ನು ಬಗೆದನೆ ?' ಎಂದು ಯಾರಾದರೂ ಕೇಳಿಯಾರು. ರನ್ನನು ಬರೆದುದು 'ಸಾಹಸ ಭೀಮವಿಜಯ'ವಲ್ಲವೆ ? ನಿಜ, ಇಲ್ಲಿನ ಭೀಮನ ಪಾತ್ರ ಅತ್ಯಂತ ಉಜ್ವಲವಾಗಿಯೆ ಇದೆ. ಆ ಪಾತ್ರಕ್ಕೆ ಪ್ರೇರಕಶಕ್ತಿಯಂತಿರುವ ದ್ರೌಪದಿಯ ಪಾತ್ರವೂ ಇಲ್ಲಿ ರಂಗುರಂಗಾಗಿ ಚಿತ್ರಿತವಾಗಿದೆ. ವಿದೂಷಕನು ಆಕೆಯನ್ನು 'ದೇವಾಸುರಯುದ್ಧಕ್ಕೆ ಕರಗಂಬೊತ್ತ ಡಾವರ ಡಾಕಿನಿ' ಎಂದು ಕರೆದು:

ಕುರುಕುಲಮಂ ನುಂಗಿದೆ ಇ । ನೆಬರುವಂ ನುಂಗಲಿರ್ಪೆ ಕುರುಪತಿಯುಮನೀ
ಎರಡನೆಯ ಹಿಡಿಂಬೆಯನೆ । ಮ್ಮ ರಸಂ ರಕ್ಕಸಿಯದೆಲ್ಲಿ ತಂದನೊ ನಿನ್ನಂ

ಎಂದು ಹಾಸ್ಯಮಾಡುತ್ತಾನೆ. ಈ ಹಾಸ್ಯದಲ್ಲಿ ಸತ್ಯದ ಬಿತ್ತವಿದೆ. ಅವಳು ಭೀಮನನ್ನು ಕೆರಳಿಸುವ ಮೋಡಿಯನ್ನು ನೋಡಿ–

ಇಱಿವಬೆಡಂಗ, ದೇವ, ಪರಮೇಶ್ವರ, ಸಾಹಸಭೀಮ, ನಿನ್ನೊಳಾ
ರಿಱಿದು ಬರ್ದುಂಕುವರ್ ನಿಜಭುಜೋಗ್ರ ಗದಾ ವಸಿಘಪ್ರಹಾರದಿಂ
ಪೞಿಪೞಿಯಾಗಿ ಪೊಣ್ಮುವೆಣನಾಗಿ ಮರುಳ್ಗುಣಿಸಾಗಿ ಯುದ್ಧದೊಳ್
ಕುಱದೞಿಯಾಗಿ ಬಿಳ್ದರಿಬಲಂಗಳೆ ಪೇಳವೆ ನಿನ್ನ ಬೀರಮಂ

ಎಂದು ಕೇಳುತ್ತಾಳೆ. ಗಂಡೆಂದರೆ ಭೀಮನೆ ಗಂಡು. ಅವನಿಗೆ ಆಕೆ ಜೀವನಾದರ್ಶವನ್ನು ಹೇಳಿಕೊಡುತ್ತಾಳೆ:

ಒಡಲೊಡಮೆಯೆಂಬಿವೆರಡುಂ । ಕೆಡಲಿರ್ಪುವು ಕೆಡದ ಕಸವರಂ ಜಸಮದಱಿಂ
ಕೆಡುವೊಡಲೊಡ ಮೆಯನೆಂದುಂ । ಕೆಡದೊಡಮೆಗೆಮಾಱಿಗುಡುವುದಿಱಿವಬೆಡಂಗ ॥

ದ್ರೌಪದಿಗೆ ಭೀಮನು ಅಚ್ಚುಮೆಚ್ಚಿನ ಗಂಡ. ಏಕೆಂದು ಆಕೆ ಹೇಳುತ್ತಾಳೆ–

ಮಣಿಕನಕಂ ವಸ್ತುವಿಭೂ । ಷಣಂಗಳಂ ಕೊಟ್ಟು ಪೆಂಡಿರೊಲ್ವರೆ ? ಗಂಡರ್
ಗುಣಮನೆ ಮೆಱಿವುದು ಶಸ್ತ್ರ । ವ್ರಣಮಂ ನಿನ್ನಂತೆ ಮೆಱಿವುದಿಱಿವ ಬೆಡಂಗ

ದ್ರೌಪದಿ ಭೀಮರ ಜೋಡಿ ಆದರ್ಶಯುತವಾದುದು. ಭೀಮ ದ್ರೌಪದಿಗೆ ಹೇಳುತ್ತಾನೆ–

ನೀನಗ್ನಿಪುತ್ರಿಯ್ಯೆ ಪವ । ಮಾನತನೂಭವನೆ ನಾನ್ ಚಲಂ ಕೂಡಿರೆ ಸಂ
ಧಾನಮರಿನೃಪರೊಳೆಂತನ । ಲಾನಿಲ ಸಂಯೋಗಮರಿಪದಿರ್ಕುಮೆ ಪಗೆಯಂ ?

ಬೆಂಕಿಯ ಮಗಳು ಗಾಳಿಯ ಮಗ ಪರಸ್ಪರ ಒಂದಾದಾಗ ಸಂಧಾನವೆಲ್ಲಿ ಬಂತು ? ಬೆಂಕಿ ಗಾಳಿ ಸೇರಿ ಶತ್ರುಗಳು ದಗ್ಧವಾಗಿ ಹೋಗುತ್ತಾರೆ – ಈ ಮಾತುಗಳು ಎಷ್ಟು ಹರಿತವಾಗಿ ಶಕ್ತಿಯುತವಾಗಿವೆ. ರನ್ನನು ಎಂತಹ ಶಕ್ತಿ ಕವಿ ! ದಿವಂಗತ ಶ್ರೀಯವರು ಹೇಳುವಂತೆ ರನ್ನನು 'ಭೀಮನನ್ನು ಇಳಿಸಿಲ್ಲ, ದುರ್ಯೋಧನನನ್ನು ಏರಿಸಿರುವನು, ಘನತೆಗೊಯ್ದಿರುವನು.'

ಗದಾಯುದ್ಧವು ಕಾವ್ಯವಾದರೂ ಅದರ ಚೌಕಟ್ಟಿನಲ್ಲಿ ನಾಟಕವೊಂದು ಹುದುಗಿದೆ. ರನ್ನನು ಇದನ್ನು ಮೊದಲು ನಾಟಕವಾಗಿಯೇ ಬರೆಯಬೇಕೆಂದು ಬಯಸಿದ್ದನೋ ಏನೊ ! ಗದಾಯುದ್ಧದಲ್ಲಿ ಬರುವ ರಸವತ್ತಾದ ಸಂಭಾಷಣಾ ಶೈಲಿ, ನಾಟಕೋಚಿತವಾದ ಕ್ರಿಯಾಸನ್ನಿವೇಶಗಳು ಮಾತ್ರವಲ್ಲದೆ ನಾಟಕಕ್ಕೆ ಅಗತ್ಯವಾದ ವಿದೂಷಕನ ಪಾತ್ರ ಕೂಡ ಈ ಕಾವ್ಯದಲ್ಲಿ ಕಾಣಬರುತ್ತದೆ. ದಿವಂಗತ ಬಿ.ಎಂ. ಶ್ರೀ.ಯವರು ೫೭೬ ಪದ್ಯಗಳ ಈ ಕಾವ್ಯವನ್ನು ೧೪೭ ಪದ್ಯಗಳಿಗೆ ಭಟ್ಟಿ ಇಳಿಸಿ, ಅತ್ಯಲ್ಪವಾದ ಬದಲಾವಣೆಗಳೊಡನೆ ಇದನ್ನೊಂದು ಅದ್ಭುತ ರುದ್ರನಾಟಕವಾಗಿ ಪರಿವರ್ತಿಸಿದ್ದಾರೆ. ಈ ನಾಟಕೀಯತೆಯಲ್ಲಿ ರನ್ನನಿಗೆ ಅಗ್ರಸ್ಥಾನ; ಪಂಪನಿಗಿಲ್ಲದ ಕೋಡು ಈತನಿಗೆ ಮೂಡಿರುವುದು ಇಲ್ಲಿಯೆ.

ಗದಾಯುದ್ಧವನ್ನು ಆಮೂಲಾಗ್ರವಾಗಿ ಓದಿದ ಮೇಲೆ ಕವಿ ರತ್ನ 'ವಾಗ್ದೇವಿಯ ಭಂಡಾರದ ಮುದ್ರೆಯನ್ನೊಡೆ'ದಿರುವುದು ಸುಳ್ಳೇನೂ ಅಲ್ಲ ಎನ್ನಿಸುತ್ತದೆ.

೪. ಚಾವುಂಡರಾಯ

ಶ್ರವಣಬೆಳಗೊಳದಲ್ಲಿ ಗೊಮ್ಮಟನ ಪ್ರತಿಮೆಯನ್ನು ನಿಲ್ಲಿಸಿ ಅಮರತೆಯನ್ನು ಪಡೆದ ಚಾವುಂಡರಾಯನು ಗಂಗರಾಜರಾಚಮಲ್ಲನ (ಕ್ರಿ.ಶ. ೯೭೪-೯೮೪) ಮಂತ್ರಿಯಾಗಿ, ಸೇನಾಪತಿಯಾಗಿ, ತನ್ನ ಪರಾಕ್ರಮದಿಂದ 'ಸಮರಪರಶುರಾಮ', 'ವೀರಮಾರ್ತಾಂಡ', 'ಪ್ರತಿಪಕ್ಷ ರಾಕ್ಷಸ' ಎಂಬ ಬಿರುದುಗಳನ್ನು ಪಡೆದನು. ತನ್ನ ಔದಾರ್ಯದಿಂದ ಈತನು ರಾಜನಿಂದ 'ರಾಯ'ನೆಂಬ ಪ್ರಶಸ್ತಿಯನ್ನೂ, ಜನರಿಂದ 'ಅಣ್ಣ' ಎಂಬ ಮೆಚ್ಚಿಗೆಯನ್ನೂ ಪಡೆದನು. ಪಂಪನಂತೆ ಈತನೂ ಕವಿಯಾಗಿಯೂ ಕಲಿಯಾಗಿಯೂ ಇದ್ದನು. ಈತನು 'ತ್ರಿಷಷ್ಟಿಲಕ್ಷಣಮಹಾಪುರಾಣ'ವೆಂಬ ಗದ್ಯ ಕಾವ್ಯವನ್ನು ಬರೆದ್ದಿದಾನೆ. ಇದಕ್ಕೆ 'ಚಾವುಂಡರಾಯ ಪುರಾಣ'ವೆಂಬ ಜನಮೆಚ್ಚಿಗೆಯ ಹೆಸರೂ ಉಂಟು. ಜೈನರಲ್ಲಿ ಪೂಜ್ಯರಾದ ತೀರ್ಥಂಕರರು, ಚಕ್ರವರ್ತಿಗಳು ಇತ್ಯಾದಿ ೬೩ ಜನ ಶಲಾಕಾಪುರುಷರ ಕಥೆಗಳನ್ನು ಒಳಗೊಂಡಿದೆ. ಈ ಗ್ರಂಥ ಸಂಸ್ಕೃತದ ಜಿನಸೇನ, ಗುಣಭದ್ರರ ಮಹಾಪುರಾಣದ ಆಧಾರದಿಂದ ಬರೆದಿರುವ ಈ ಕಾವ್ಯ ಜೈನರಿಗೆ ಬಹು ಪವಿತ್ರವಾದುದಾಗಿದೆ. ಕವಿಯು ಧರ್ಮದೊಡನೆ ಕಾವ್ಯಧರ್ಮವನ್ನೂ ಇಲ್ಲಿ ತರಲು ಯತ್ನಿಸಿ, ಬಹುಮಟ್ಟಿಗೆ ಕೃತಕೃತ್ಯನಾಗಿದ್ದಾನೆ. ಪಾರಿಭಾಷಿಕ ಪದಗಳು ಮತ್ತು ಸಂಸ್ಕೃತದ ಸಮಾಸಗಳ ಬಾಹುಳ್ಯವಿದ್ದರೂ, ಗಾಂಭೀರ್ಯದಿಂದ ಕೂಡಿದ ಸರಳತೆಯೊಡನೆ ಇಲ್ಲಿನ ಗದ್ಯ ಹರಿಯುತ್ತದೆ. ತಾನು ಕೈಕೊಂಡಿರುವುದು ಆಗಮಸಾಹಿತ್ಯವಾದುದರಿಂದ, ಕವಿಯು ಹೆಚ್ಚು ಸ್ವಾತಂತ್ರ್ಯವನ್ನು ವಹಿಸದೆ, ನೇರವಾಗಿ ಗುರಿಯತ್ತ ಸಾಗಿದ್ದಾನೆ. ಕನ್ನಡ ಗದ್ಯಸಾಹಿತ್ಯದ ಇತಿಹಾಸದಲ್ಲಿ ಚಾವುಂಡರಾಯನ ಕಾವ್ಯಕ್ಕೆ ಸಾಕಷ್ಟು ಮನ್ನಣೆ ಸಲ್ಲಬೇಕಾಗಿದೆ.

೫. ಮೊದಲನೆ ನಾಗವರ್ಮ

'ಕರ್ನಾಟಕಕಾದಂಬರಿ', 'ಛಂದೋಂಬುಧಿ', 'ಭಾಷಾಭೂಷಣ', 'ಕಾವ್ಯಾವಲೋಕನ', 'ವಸ್ತುಕೋಶ' – ಎಂಬ ಐದು ಗ್ರಂಥಗಳು ನಾಗವರ್ಮ ಕೃತವೆಂದು ಪ್ರಸಿದ್ಧವಾಗಿವೆ. ಇವುಗಳಲ್ಲಿ ಮೊದಲಿನವೆರಡನ್ನು ಬರೆದವನು ಮೊದಲನೆಯ ನಾಗವರ್ಮನೆಂದು ಪಂಡಿತರ ಅಭಿಪ್ರಾಯ.

ಈತನು ಪಂಪ ಪೊನ್ನರಂತೆ ವೆಂಗಿಪಳುವಿನವನೆಂದೂ, ಕೌಂಡಿಣ್ಯಗೋತ್ರದ ವೆಣ್ಣಮಯ್ಯ–ಪೋಳಕಬ್ಬೆ ಎಂಬ ಬ್ರಾಹ್ಮಣದಂಪತಿಗಳ ಹಿರಿಯ ಮಗನೆಂದೂ ಛಂದೋಂಬುಧಿಯ ಪದ್ಯಗಳಿಂದ ತಿಳಿಯಬರುತ್ತದೆ. ಕವಿರಾಜ, ಬುಧಾಬ್ಜವನಕಳಹಂಸ, ಕಂದಕಂದರ್ಪ, ನೆಗಳ್ತೆಗೋಜ ಎಂಬಿವು ಈತನ ಬಿರುದುಗಳು. ಈತನ ಕಾಲ ಹತ್ತನೆ ಶತಮಾನದ ಕೊನೆಯ ಭಾಗ. ನಾಗವರ್ಮನ 'ಛಂದೋಂಬುಧಿ'ಯ ಕನ್ನಡ ಛಂದಸ್ಸನ್ನು ಕುರಿತು ಹೇಳುವ ಮೊಟ್ಟಮೊದಲ ಗ್ರಂಥ. ಈಶ್ವರನು ಛಂದಸ್ಸನ್ನು ಉಮೆಗೆ ಹೇಳಿದನಂತೆ ! ಆದ್ದರಿಂದ ನಾಗವರ್ಮನೂ ತನ್ನ ಕೂರ್ತಮಡದಿಗೆ ಈ ಛಂದಸ್ಸನ್ನು ಬೋಧಿಸುತ್ತಾನೆ. ಹೀಗೆ ಶಾಸ್ತ್ರವಿಷಯವನ್ನು ಹೆಂಡತಿಗೆ ಹೇಳಹೊರಟ ಕವಿಯ ರಸಿಕತೆಯನ್ನೂ, ಆ ನೀರಸಶಾಸ್ತ್ರವನ್ನೂ ತನ್ಮಯತೆಯಿಂದ ಕೇಳಿದ ಆ ಕವಿಪತ್ನಿಯ ತಾಳ್ಮೆಯನ್ನೂ ಸಹೃದಯತೆಯನ್ನೂ ನಾವು ಅಚ್ಚರಿಯಿಂದ ಮೆಚ್ಚಬೇಕಾಗಿದೆ. ಮದನವತಿ, ಅಕ್ಕರ, ಚೌಪದಿ, ಗೀತಿಕೆ, ಏಳೆ, ತ್ರಿಪದಿ, ಉತ್ಸಾಹ, ಷಟ್ಪದಿ, ಅಕ್ಕರಿಕೆ – ಇವು ಕನ್ನಡಕ್ಕೆ ವಿಶಿಷ್ಟವಾದ ಛಂದೋಜಾತಿಗಳೆಂದು ಈತ ತಿಳಿಸುತ್ತಾನೆ. ತನ್ನ ನಿಯಮಗಳ ಲಕ್ಷಣವನ್ನು ವಿವರಿಸುವ ಪದ್ಯಗಳೇ ಆಯಾ ನಿಯಮಗಳ ಉದಾಹರಣೆಯೂ ಆಗುವಂತೆ ಆತನು ಯೋಜಿಸಿರುವುದು ಚಾತುರ್ಯಪೂರ್ಣವಾಗಿರುವಂತೆ ಸಂಗ್ರಹಸಾಧಕವೂ ಆಗಿದೆ.

ನಾಗವರ್ಮನ ರಸಿಕತೆ, ಕಲಾಕೌಶಲ, ಕಲ್ಪನಾಶಕ್ತಿ, ಪ್ರತಿಭೆಗಳನ್ನು ಕಾಣಬೇಕಾದರೆ ನಾವು ಆತನ 'ಕರ್ಣಾಟಕ ಕಾದಂಬರಿ'ಗೆ ಹೋಗಬೇಕು. ಬಹುಶಃ ಈತನೂ ಪಂಪನಂತೆ ಏಕಕಾಲದಲ್ಲಿ ಕವಿಯೂ ಕಲಿಯೂ ಆಗಿದ್ದ ಎಂದು ಕಾಣುತ್ತದೆ. ಈತನ ಕೃತಿಗೆ ಮೆಚ್ಚಿ ಭೋಜರಾಜನು ಈತನಿಗೆ ಹಲವು ಜಾತಿಯ ಕುದುರೆಗಳನ್ನು ಕೊಟ್ಟನೆಂದೂ, ಬೀರಸಿರಿಯಕ್ಕೆ ಭುಜಾಸಿಗೆ ನಾಗವರ್ಮನಾ' ಎಂದೂ ಕವಿ ಹೇಳಿಕೊಂಡಿರುವುದು ಈ ಊಹೆಗೆ ಸಾಧಕವಾಗಿದೆ. ಇಷ್ಟೇ ಅಲ್ಲ, ಪಂಪ ರನ್ನರಂತೆ ಈತನೂ ತನ್ನ ಕಾವ್ಯದ ಕಥಾನಾಯಕನೊಡನೆ ತನ್ನ ಪೋಷಕನಾದ ಚಂದ್ರರಾಜನನ್ನು ಸಮೀಕರಿಸಿ ಕಾವ್ಯರಚನೆ ಮಾಡಿರುವಂತೆ ಭಾಸವಾಗುತ್ತದೆ. ಆದರೆ ಆ ಚಂದ್ರರಾಜನಾರೋ, ಆತನ ಬಾಳಕಥೆ ಎಷ್ಟರಮಟ್ಟಿಗೆ ಕಾದಂಬರಿಯ ಕಥೆಯನ್ನು ಹೋಲುತ್ತದೆಯೋ 'ಇದಮಿತ್ಥಂ' ಎಂದು ಹೇಳಲು ಸರಿಯಾದ ಸಾಧನಗಳು ಇಲ್ಲ.

ಸಂಸ್ಕೃತದ ಕಾದಂಬರಿಯೆಂದರೆ ಕಥೆಯೊಳಗೆ ಕಥೆ ಹೆಣೆದುಕೊಂಡು ಹೋಗಿ ದುರ್ಗಮವಾಗಿರುವ ಒಂದು ದೊಡ್ಡ ಪೆಳೆ. ಆ ಕಥೆಯ ಗೊಂಡಾರಣ್ಯದಲ್ಲಿ ಪಾಂಡಿತ್ಯಪೂರ್ಣವಾದ ವರ್ಣನೆಗೆ ಮಧ್ಯೆ ಸಿಕ್ಕಿಕೊಂಡಾಗ ಓದುಗನು ಹಾದಿಗಾಣದೆ ಕಣ್ಣುಕಣ್ಣು ಬಿಡುತ್ತಾ ನಿಲ್ಲಬೇಕಾಗುತ್ತದೆ. ಇದನ್ನು ಭಾಷಾಂತರಿಸ ಹೊರಟಿರುವ ನಾಗವರ್ಮನು ಕೇವಲ ಭಾಷಾಂತರಕಾರನಾಗದೆ, ದಿವ್ಯಪ್ರತಿಭೆಯ ಶ್ರೇಷ್ಠಕವಿಯಾದುದರಿಂದ, ಮೂಲದ ಸಂಸ್ಕೃತವರ್ಣನೆಗಳನ್ನು ಸಂಗ್ರಹಿಸುವುದರ ಜೊತೆಗೆ, ಅಲ್ಲಿನ ಪಾಂಡಿತ್ಯವನ್ನು ತನ್ನ ಪ್ರತಿಭೆಯ ಕಾವಿನಲ್ಲಿ ಕರಗಿಸಿ, ಲಲಿತವಾದ ಕಾವ್ಯಧಾರೆಯಾಗಿ ಹರಿಸುತ್ತಾನೆ. ಮೂಲದಲ್ಲಿ, ವರ್ಣನೆ ಪಲ್ಲಕ್ಕಿಯಲ್ಲಿ ಕುಳಿತು, ಕಥೆ ಪರಾಕು ಹೇಳುವಂತಿರುವುದು, ನಾಗವರ್ಮನ ಜಾಣ್ಮೆಯಿಂದ, ಅವರೆಡೂ ಪರಸ್ಪರಾವಲಂಬನೆಯಿಂದ ಮುಂದುವರಿಯುವಂತಾಗಿದೆ. ಆದರೂ ಸಾಮಾನ್ಯ ಓದುಗ ಇಲ್ಲಿನ ಕಥಾ ಸರಣಿಯಲ್ಲಿ ಹೊಲಬುದಪ್ಪುತ್ತಾನೆ. ಆದರೇನು ? ಕೈ ಕೆಸರಾದರೆ ಬಾಯ್ ಮೊಸರು. ಎಂತಹ ಮನಮೋಹಕ ಸೌಂದರ್ಯ, ಏನು ನಯ, ವಿನಯ, ನಾಗರಿಕತೆ, ಸಂಸ್ಕೃತಿ ! ಈ ಹೊಂಗನಸಿನ ದಿವ್ಯದೃಶ್ಯದರ್ಶನದಿಂದ ಓದುಗ ಧನ್ಯನಾಗುತ್ತಾನೆ.

'ಕಾದಂಬರಿ' ಎಂಬ ಕಾವ್ಯದ ಹೆಸರು ಇಲ್ಲಿನ ಕಥಾನಾಯಕಿಯ ಹೆಸರೂ ಆಗಿದೆ. ಈ ಅಂಕಿತನಾಮ ಅನ್ವರ್ಥನಾಮ(ಕಳ್ಳು)ವೂ ಆಗುವಷ್ಟು ಮೋಹಕ ರೂಪಿನ ಆ ಹೆಣ್ಣು ಗಂಧರ್ವಕನ್ಯೆ. ಆಕೆಗೂ

ಚಂದ್ರಾಂಶಸಂಭೂತನಾದ ಚಂದ್ರಾಪೀಡನೆಂಬ ರಾಜಕುಮಾರನಿಗೂ ನಡೆದ ಪ್ರಣಯ ವ್ಯಾಪಾರ ಇದರ ಕಥಾವಸ್ತು. ಇದಕ್ಕೂ ಹೆಚ್ಚಾಗಿ, ಋಷಿಕುಮಾರ ಪುಂಡರೀಕ ಮತ್ತು ಅಪ್ಸರಕನ್ಯೆ ಮಹಾಶ್ವೇತೆಯರ ಪ್ರಣಯ ಕಥೆಯು ಮುಖ್ಯ ಕಥೆಯೊಡನೆ, ಯಮಳನದಿಯಂತೆ ಹರಿದು ಬರುತ್ತದೆ. ಸಿಕ್ಕುಸಿಕ್ಕಾಗಿರುವ ಈ ಕಥೆಯ ಆಕೃತಿ ರೇಖಾಚಿತ್ರ ಇಷ್ಟು ಮಹಾಶ್ವೇತೆಯನ್ನು ಮೋಹಿಸಿದ ಪುಂಡರೀಕನು ವಿರಹವೇದನೆಯನ್ನು ತಾಳಲಾರದೆ ಉಲ್ಬಣಕ್ಕೆ ಕಾರಣನಾದ ಚಂದ್ರನನ್ನು ಮೂರು ಜನ್ಮಗಳಲ್ಲಿ ಮಾನವನಾಗಿ ಹುಟ್ಟುವಂತೆ ಶಪಿಸಿ ಸಾಯುತ್ತಾನೆ. ಚಂದ್ರನೂ ಪ್ರತಿಶಾಪವೀಯುತ್ತಾನೆ– ತಾನು ಮಾನವನಾಗಿ ಹುಟ್ಟಿದಾಗ ಪುಂಡರೀಕನೂ ತನ್ನ ಗೆಳೆಯನಾಗಿ ಹುಟ್ಟಲೆಂದು ಪುಂಡರೀಕನ ಶಾಪದಿಂದ ಚಂದ್ರಾಪೀಡನಾಗಿ ಹುಟ್ಟಿದ ಚಂದ್ರನು ಕಾದಂಬರಿಯನ್ನು ಮೋಹಿಸಿ, ಅವಳನ್ನು ವಿವಾಹವಾಗುವ ಮುನ್ನವೇ ಪ್ರಿಯಸಖನಾದ ವೈಶಂಪಾಯನನ (ಶಾಪಗ್ರಸ್ತನಾದ ಪುಂಡರೀಕ) ಮರಣ ವೃತ್ತಾಂತವನ್ನು ಕೇಳಿ, ದೇಹತ್ಯಾಗಮಾಡಿ, ಶೂದ್ರಕರಾಜನಾಗಿ ಹುಟ್ಟುತ್ತಾನೆ. ಶಾಪ ವಿಮೋಚನೆಯಾದ ಮೇಲೆ ಆ ದೇಹವನ್ನು ಬಿಟ್ಟು, ಕಾದಿರಿಸಿದ್ದ ತನ್ನ ಚಂದ್ರಾಪೀಡದೇಹವನ್ನು ಪ್ರವೇಶಿಸಿ ಕಾದಂಬರಿಯನ್ನು ಪಡೆಯುತ್ತಾನೆ. ಅತ್ತ ಚಂದ್ರನಿಂದ ಶಾಪಗ್ರಸ್ತನಾದ ಪುಂಡರೀಕನು ಚಂದ್ರಾಪೀಡನ ಗೆಳೆಯನಾದ ವೈಶಂಪಾಯನನಾಗಿ ಹುಟ್ಟಿ ಪೂರ್ವಜನ್ಮ ಸಂಸ್ಕಾರದಿಂದ ಮಹಾಶ್ವೇತೆಯನ್ನು ಮತ್ತೆ ಮೋಹಿಸಿ, ಪರಪುರುಷನೆಂಬ ಭಾವನೆಯಿಂದ ಆಕೆ ಶಪಿಸಲು ಗಿಳಿಯಾಗಿ ಹುಟ್ಟಿ ಆತನ ತಾಯ್ತಂದೆಗಳು ಮಾಡಿದ ಯಾಗಫಲದಿಂದ ಶಾಪವಿಮುಕ್ತನಾಗಿ, ಪುಂಡರೀಕದೇಹವನ್ನು ಹೊಕ್ಕು ಮಹಾಶ್ವೇತೆಯನ್ನು ಮದುವೆಯಾಗುತ್ತಾನೆ.

ಋಷಿ ಬಾನುಗಳಿಗೆ ಒಂದು ರಸಸೇತುವೆಯನ್ನು ನಿರ್ಮಿಸಿದಂತಿರುವ ಕಾದಂಬರಿಯ ಕಥೆ ಗಂಡು–ಹೆಣ್ಣಿನ ಪ್ರಣಯ ವ್ಯಾಪಾರವನ್ನು ಮನೋಹರವಾಗಿ ಚಿತ್ರಿಸಿದೆ. ಮೊದಲು ಬರಿಯ ಕಾಮನಾಗಿದ್ದುದು ವಿರಹವೇದನೆಯ ಬೆಂಕಿಯಲ್ಲಿ ಬೆಂದು, ಜನ್ಮಾಂತರಗಳನ್ನು ದಾಟಿ ಬರುವಾಗ ತನ್ನ ಕಾಳಿಕೆಯನ್ನು ಕಳೆದುಕೊಂಡು, ಕೊನೆಯಲ್ಲಿ ಅಪರಂಜಿಯಂತಹ ಪ್ರೇಮವಾಗಿ ಪರಿವರ್ತಿತವಾಗುತ್ತದೆ. ಮೂರು ಜನ್ಮಗಳಷ್ಟು ದೀರ್ಘಕಾಲ ತಮ್ಮ ಪ್ರಿಯರಾಗಿ ಕಾದು ಕುಳಿತಿದ್ದ ಹೆಣ್ಣುಗಳು ತಮ್ಮ ನಿಷ್ಠೆಯಿಂದ, ತಪೋಮಹಿಮೆಯಿಂದ, ಪ್ರೇಮದಿಂದ ತಮ್ಮ ಗಂಡಂದಿರ ಉದ್ಧಾರಕ್ಕೆ ಕಾರಣರಾಗಿ, ತಮ್ಮ ಇಷ್ಟಸಿದ್ಧಿಯನ್ನು ಪಡೆಯುತ್ತಾರೆ.

ಕಾದಂಬರಿ ಕಥೆ ಕೊನೆಯಿಂದ ಪ್ರಾರಂಭವಾಗಿ ಹಿಂದಕ್ಕೆ ಸುರುಳಿಯನ್ನು ಬಿಚ್ಚಿಕೊಳ್ಳುತ್ತಾ ಹೋಗುತ್ತದೆ. ಶೂದ್ರಕರಾಜನು ತನ್ನ ಆಸ್ಥಾನದಲ್ಲಿ ಕುಳಿತಿದ್ದಾನೆ .... ಸ್ವರ್ಗಕ್ಕೆ ಏರುತ್ತಿದ್ದ ತ್ರಿಶಂಕು ಮಹಾರಾಜನು ಭಾಗ್ಯಲಕ್ಷ್ಮೀ ಇಂದ್ರನ ಹುಂಕಾರದಿಂದ ಕೆಳಕ್ಕೆ ಬಿದ್ದಳೊ ಎಂಬಂತೆ ಸುಂದರಳಾದ ಚಂಡಾಲ ಕನ್ಯೆಯೊಬ್ಬಳು ಪಂಜರಸ್ಥ ಗಿಳಿಯೊಂದರೊಡನೆ ಆತನ ಆಸ್ಥಾನಕ್ಕೆ ಬರುತ್ತಾಳೆ. ಅದನ್ನು ಹೊತ್ತು ತಂದಿದ್ದ ಚಂಡಾಲ ಬಾಲಕನು ಅದನ್ನು ರಾಜನ ಮುಂದಿರಿಸಿ:

ವನಿತೆಯರೊಲವಿನ ಕಲಹದ । ಮುನಿಸುಗಳಂ ತಿಳಿಪುವೆಡೆಯೊಳತಿ ಚತುರಂ ತಾ
ನೆನಿಸಿರ್ದುಂ ವೈಶಂಪಾ । ಯನನೆಪುದು ಪೆಸರೊಳೀ ಶುಕಂ ಭುವನಪತೀ

ಎಂದು ಅದರ ಪರಿಚಯ ಮಾಡಿಕೊಟ್ಟು, ಆ ಪಂಜರದ ಬಾಗಿಲನ್ನು ತೆರೆಯುತ್ತಲೇ ಆ ಗಿಳಿ ತನ್ನ ಬಲಗಾಲನ್ನೆತ್ತಿ ರಾಜನಿಗೆ ನಮಸ್ಕರಿಸಿ, ಅಸ್ಖಲಿತವಾಣಿಯಿಂದ,

ವೀರರ ವೀರ ವಿಮುಕಾ । ಹಾರಂ ಭವದರಿವಧೂಸ್ತ ನದ್ವಿತಯಂ ಕ
ಣ್ಣೀರಿಂ ಮಿಂದೆದೆಗಿರ್ಚಿಂ । ದೋರಂತಿರೆ ಬೆಂದು ಚರಿಸುತಿರ್ಪುದು ತಪಮಂ

ಎಂದು ಹೇಳಿತು. ಅದರ ಚತುರೋಕ್ತಿಗಳನ್ನು ಕಂಡು ಸಂತೋಷಗೊಂಡ ರಾಜ ಅದನ್ನು ರಾಜಮಾತೆಯ ಹತ್ತಿರಕ್ಕೆ ಕಳುಹಿಸಿದ. ಮಜ್ಜನ ಭೋಜನಾನಂತರ ಆತನು ಅದನ್ನು ಮತ್ತೆ ತನ್ನ ಬಳಿಗೆ ಕರೆಸಿ 'ದೇವಿಯರ ಅರಮನೆಯಲ್ಲಿ ಏನೇನನ್ನು ಊಟಮಾಡಿದೆ ?' ಎಂದು ಕೇಳಿದ. ಅದು 'ಮಹಾರಾಜ, ನಾನು ಏನನ್ನು ತಾನೆ ಆಸ್ವಾದಿಸಲಿಲ್ಲ?' ಎಂಬ ಪ್ರತಿಪ್ರಶ್ನೆಯೊಡನೆ ಪ್ರಾರಂಭಿಸಿ–

ಕಳಕಂಠಲೋಚನಚ್ಛವಿ । ವಿಳಾಸಮಂ ತಳೆದ ನೀಳ ಪಾಟಳ ಜಂಬೂ
ಫಳ ಮಧುರರಸಮನೀಂಟಿದೆ । ನಿಳೇಶ ಪರಿದಳ್ತಿಯಂ ಮನಂ ಕಳಿವಿನೆಗಂ ॥
ಹರಿವಿದಳಿತ ಮದಗಜ ಕುಂ । ಸಿ ರಕ್ತ ಸಿಕ್ತಾರ್ದ್ರಮೌಕ್ತಿಕಪ್ರಕರದವೊಲ್
ಕರಮೆಸೆವ ದಾಡಿಮೀ ಬೀ । ಜರಾಜಿಯಂ ತೆಗೆದು ರಸವನಾಸ್ವಾದಿಸಿದೆಂ ॥
ಅದತ್ತಾಮಳಕ ಫಳಾ । ಸ್ವಾದನೆಯಿಂ ತೃಪ್ತಿ, ದೇವ, ಗಳಪುತ್ತಿರಲೇಂ ?
ಆದತ್ತ ಮೃತಂ ದೇವಿಯ । ರಾದರದಿಂ ತಮ್ಮ ಕೊಯ್ಯೊಳೂಡಿದರೆನ್ನಂ ॥

ಎಂದು ಹೇಳುತ್ತದೆ.

ಅದರ ಮೃದುಮಧುರವಾದ ರಸನುಡಿಗಳಿಂದ ಮುಗ್ಧನಾಗಿ ಹೋದ ರಾಜನು ಅದರ ವೃತ್ತಾಂತವನ್ನು ವಿಚಾರಿಸಿದನು. ಅದು ತನ್ನ ಜನ್ಮಾಂತರಗಳ ಕರುಣದ ಕಥೆಯನ್ನು ಹೇಳುತ್ತಾ ಹೋಗುತ್ತದೆ. ಅದು ವಿಂಧ್ಯೆಯಲ್ಲಿ ಹುಟ್ಟಿ ಬೇಡನ ಕೈಯಿಂದ ಅಕಸ್ಮಾತ್ತಾಗಿ ತಪ್ಪಿಸಿಕೊಂಡು ಜಾಬಾಲಿ ಋಷಿಯ ಆಶ್ರಮವನ್ನು ಸೇರಿತಂತೆ ! ಆ ಋಷ್ಯಾಶ್ರಮದ ಋಷಿಗಳು ಅದರ ಪೂರ್ವಜನ್ಮ ವೃತ್ತಾಂತವನ್ನು ಕೇಳಬಯಸಲು ಜಾಬಾಲಿ ಋಷಿ ಅದರ ಪೂರ್ವವೃತ್ತಾಂತವನ್ನು ಅವರಿಗೆ ತಿಳಿಸುತ್ತಾನೆ. ಆ ಸಂದರ್ಭದಲ್ಲಿ ಚಂದ್ರಾಪೀಡನ ಜನ್ಮ ವೃತ್ತಾಂತ ಬರುತ್ತದೆ. ಅವನು ಬೇಟೆಗೆಂದು ಹೋದವನು ಅಚ್ಛೋದ ಸರೋವರದ ತಡಿಯಲ್ಲಿದ್ದ ಸಿದ್ಧಾಯತನದಲ್ಲಿ ಮಹಾಶ್ವೇತೆಯನ್ನು ಕಂಡು ಆಕೆಯಿಂದ ಕಾದಂಬರಿಯ ಸ್ನೇಹವನ್ನು ಸಂಪಾದಿಸುವುದಲ್ಲದೆ, ಮಹಾಶ್ವೇತೆಯ ಪೂರ್ವ ಜನ್ಮ ವೃತ್ತಾಂತವನ್ನೂ ಕೇಳುತ್ತಾನೆ. ಹೀಗೆ, ನಾಗವರ್ಮ ಕವಿ ತನ್ನ ಕಾವ್ಯ ಕಥೆಯನ್ನು ಅದರಲ್ಲಿ ಬರುವ ಪಾತ್ರಗಳ ಬಾಯಿಂದಲೆ ಹೇಳಿಸಿ ಬೆಳೆಸಿದ್ದಾನೆ.

ಕವಿ ಕುವೆಂಪುರವರು ಕಾದಂಬರೀ ಕಾವ್ಯವನ್ನು ಕುರಿತು ಹೀಗೆ ಹೇಳುತ್ತಾರೆ – 'ಮಹಾಕವಿ ಪ್ರತಿಭೆಯ ಸ್ವಪ್ನ ಸುಂದರ ಸಾಹಸಗಳಲ್ಲಿ ಕಾದಂಬರೀ ಕಾವ್ಯವೂ ಒಂದು ಅದ್ಭುತ ಕೃತಿ. ಅದೊಂದು ಮೇಘಚುಂಬಿಯಾದ ಶೃಂಗಾರ ಗೋಪುರ . . . . . ಅದರ ಜಗತ್ತು ಹೊಸ ಮಳೆಯಲ್ಲಿ ಮಿಂದ ಮಲೆಗಳ ಮೇಲೆ ಮೂಡುವ ಸೂರ್ಯೋದಯದ ಚೈತ್ರಕಾನನ ಕ್ರಾಂತಿಯ ವರ್ಣವೈವಿಧ್ಯದಿಂದಲೂ ಖಚಿತ ರಚನಾವೈಖರಿಯಿಂದಲೂ ಶೋಭಿಸುತ್ತಿದ್ದರೂ ಬೆಳ್ದಿಂಗಳ ರಾತ್ರಿಯಂತೆ ಹೊಂಗನಸಿನ ಹೊದಿಕೆಯಲ್ಲಿ ಧ್ಯಾನಶೀಲವಾಗಿದೆ. 'ಈ ರಸ ವಿಮರ್ಶೆ ಅರ್ಥವಾಗಬೇಕಾದರೆ ಮಾನವನ 'ಹಂಬಲದ ಹೊಂಗನಸಿನಂತೆ ಮೋಹದ ಒಂದು ಐಂದ್ರಜಾಲಿಕ ಸೃಷ್ಟಿಯಂತೆ' ಇರುವ ಕಾದಂಬರಿಯನ್ನು ಆಮೂಲಾಗ್ರವಾಗಿ ಓದಬೇಕು. ಕಾವ್ಯಸೃಷ್ಟಿಯ ಒಂದೆರಡು ಸನ್ನಿವೇಶಗಳನ್ನು ಇಲ್ಲಿ ಉದಾಹರಣೆಗಾಗಿ ಕೊಡಲಾಗಿದೆ.

ಶೈತ್ಯಸೌರಭ ಮಾಂದ್ಯಗಳಿಂದ ಕೂಡಿದ ಮಾರುತವೊಂದು ಮನುಜೇಂದ್ರ ಚಂದ್ರನಾದ ಚಂದ್ರಾಪೀಡನನ್ನು ಆಲಿಂಗನಮಾಡಿಕೊಂಡು ಅಚ್ಛೋದ ಸರೋವರಕ್ಕೆ ಆಹ್ವಾನಿಸುವಂತೆ ಬೀಸಿತಂತೆ! ಆ ಗಾಳಿ ಬಂದ ದಿಕ್ಕನ್ನೇ ಹಿಡಿದು ಬರಲು ಆ ಸರೋವರ ಆತನ ಕಣ್ಣಿಗೆ ಬಿತ್ತು. ಅದರ ವರ್ಣನೆ ಇದು–

ಎಲೆ ತಾರಾರಗಂ ಹರಂ ಕಣ್ಣೆಡೆ ಕರಗಿದುದಂತಲ್ತು ರುದ್ರಾಟ್ಟಹಾಸಂ
ಜಲಮಾದತ್ತಲ್ತು ಚಂದ್ರಾತಪಮಮೃತರಸಾಕಾರಮಾಯ್ತು ಲ್ತು, ಹೈಮಾ
ಚಲಮಂಭೋರೂಪದಿಂದಂ ಪರಿಣಮಿಸಿದುದಂತಲ್ತು ನೈರ್ಮಲ್ಯ ಶೋಭಾ
ಕಲಿತಂ ತ್ರೈಲೋಕ್ಯಲಕ್ಷ್ಮೀ ಮಣಿಮುಕುರಮೆನಲ್ ಚೆಲ್ವದಾಯ್ತಬ್ಧಷಂಡಂ

ಸರೋವರವನ್ನು ಕಾಣುತ್ತಲೆ ರಾಜಕುಮಾರರ ಬಾಯಲ್ಲಿ 'ಎಲೆ' ಎಂಬ ಆಶ್ಚರ್ಯಸೂಚನೆ ಹೊರಬರುತ್ತದೆ. ಬೆಳ್ಳಿಯ ಬೆಟ್ಟ-ಕೈಲಾಸ-ಶಿವನ ಹಣೆ ಕಣ್ಣಿಂದ ಕರಗಿ ನೀರಾಯಿತೊ ! ಎಂದು ಆತನು ಭ್ರಮಿಸುತ್ತಾನೆ, ಸೂರ್ಯ ಕಾಂತಿಯಲ್ಲಿ ಪಳಪಳ ಹೊಳೆಯುತ್ತಿರುವ ನೀರನ್ನು ಕಂಡು. ಆದರೆ ಶಿವನು ತನ್ನ ವಾಸಸ್ಥಳವನ್ನು ಕರಗಿಸಲು ಕಾರಣವಿಲ್ಲವಾದ್ದರಿಂದ ತನ್ನ ಮೊದಲ ಊಹೆ ತಪ್ಪೆಂದು ಗ್ರಹಿಸಿ, 'ಅಲ್ಲ, ಅದಲ್ಲ' ಎಂದುಕೊಂಡು, 'ರುದ್ರನ ಅಟ್ಟಹಾಸವೇ ಸರೋವರವಾಗಿರಬಹುದೆ ?' ಎಂದುಕೊಳ್ಳುತ್ತಾನೆ. ದಡಕ್ಕೆ ಅಪ್ಪಳಿಸುತ್ತಿರುವ ಆ ಸರೋವರದ ಅಲೆಗಳನ್ನು ಕೇಳಿ. ಅದನ್ನೂ ಅಲ್ಲವೆಂದು ಕೊಂಡು 'ಬೆಳುಂದಿಗಳೇ ಅಲ್ಲಿ ಹಾಲಿನ ಆಕಾರವನ್ನು ತಾಳಿ ನಿಂತಿರುವ'ದೆಂದು ಪರಿಭಾವಿಸುತ್ತಾನೆ. ಅದನ್ನೂ 'ಅಲ್ಲ'ವೆಂದು ಹೇಳಿ, ಹಿಮಾಲಯವೇ ನೀರಿನ ಆಕಾರವನ್ನು ತಾಳಿರಬೇಕೆಂದುಕೊಳ್ಳುತ್ತಾನೆ, ಅದರ ವಿಸ್ತಾರವನ್ನು ಕಂಡು. ಕಟ್ಟಕಡೆಗೆ ಸರೋವರದ ದಂಡೆಯನ್ನೇ ಸೇರಿದಾಗ, ಸುತ್ತುಮುತ್ತಿನ ಪ್ರಕೃತಿ ಸೌಂದರ್ಯವನ್ನೆಲ್ಲ ಪ್ರತಿಬಿಂಬಿಸುತ್ತಿರುವ ಆ ಸರೋವರದ ನಿರ್ಮಲೋದಕವನ್ನು 'ತ್ರಿಲೋಕಲಕ್ಷ್ಮೀಯ ಸಿರಿಗನ್ನಡಿಯದು' ಎಂದು ಕೊಳ್ಳುತ್ತಾನೆ.೧

ಚಂದ್ರಾಪೀಡನು ಮಹಾಶ್ವೇತೆಯನ್ನು ಕಾಣುವ ಸನ್ನಿವೇಶ ಅವಳ ಹೆಸರೆಂತೆಂತೆ, ಅವಳ ಗುಣಸ್ವಭಾವಗಳೆಂತಂತೆ ಶುಭ್ರಧವಳವಾಗಿದೆ. ಅಮೃತಶಿಲೆಯಿಂದ ನಿರ್ಮಿತವಾದ ಒಂದು ಸಿದ್ಧಾಯತನ; ಒಳಗಡೆ ರತ್ನಪೀಠ ಘಟಿತವಾದ ಮುತ್ತಿನ ಶಿಲಾಲಿಂಗ; ಅದರ

೧. ಕುವೆಂಪುರವರ-ತಪೋನಂದನ, ಸರೋವರದ ಸಿರಿಗನ್ನಡಿಯಲ್ಲಿ, ಪುಟ ೭೫-೭೭

ತಲೆಯ ಮೇಲೆ ಈಶ್ವರನ ಅಟ್ಟಹಾಸವೇ ಆಕಾರ ತಾಳಿದಂತೆ, ಆದಿಶೇಷನ ಅನಂತ ಫಣಾಮಣಿಗಳಂತೆ, ಪೂರ್ಣಚಂದ್ರನ ಷೋಡಶಕಲೆಗಳಂತೆ ಬೆಳಗುತ್ತಿರುವ ಬಿಳಿಯ ಕಮಲಗಳು; ಆ ಧವಳಮೂರ್ತಿಯನ್ನು ಪೂಜಿಸುತ್ತಿರುವ ಆ ಹೆಣ್ಣು! ಕ್ಷೀರಸಾಗರದ ಪ್ರವಾಹದಂತಿರುವ ಆಕೆಯ ತಪಸ್ಸು ಲೋಕವೆಲ್ಲವನ್ನೂ ವ್ಯಾಪಿಸಿತೋ ಎಂಬಂತಿರುವ ದೇಹಕಾಂತಿ ! ಆ ಕಾಂತಿ ಸುತ್ತಲಿನ ಅರಣ್ಯವನ್ನೆಲ್ಲ ದಂತಮಯವಾಗಿ ಮಾಡುವಷ್ಟು ಬೆಳ್ಳಿಯ ಬೆಟ್ಟವನ್ನೆಲ್ಲ ನುಣುವಾಗಿ ಮಾಡುವಷ್ಟು ದಟ್ಟವಾಗಿದೆ. ಆಕೆಯನ್ನು ನೋಡಿದರೆ-

ಕಡೆದರೊ ಶಂಖದಿಂ, ತೆಗೆದರೋ ನವಮೌಕ್ತಿಕದಿಂ, ಮೃಣಾಳದಿಂ
ಪಡೆದರೊ, ದಂತದಿಂದೆಸೆಯೆ ಮಾಡಿದರೋ, ರುಚಿರೋಜ್ವಳಾಂಗಮಂ
ಬಿಡವಮೃತಾಂತುರಶ್ಮಿಗಳ ಕುಂಚಿಗೆಯಿಂದಮೆ ಕರ್ಚಿ, ಪಾರದಂ
ದೊಡೆದರೊ ಸೇಱಿನಲ್ ಕರಮೆ ಕಣ್ಗೆಸೆದಿರ್ದುದು ರೂಪು ಕಾಂತೆಯಾ

ಆಕೆ ಪೂಜೆಯನ್ನು ಮುಗಿಸಿ ಚಂದ್ರಾಪೀಡನ ಕಡೆ ನೋಡಿದಳಂತೆ. ಪ್ರೇಮದಿಂದ ಆಶ್ವಾಸಿಸುವಂತೆ, ಪುಣ್ಯ ಸಮೂಹದಿಂದ ಮುಟ್ಟುವಂತೆ, ಪುಣ್ಯ ತೀರ್ಥೋದಕದಿಂದ ಅಭಿಷೇಕಮಾಡುವಂತೆ, ಪವಿತ್ರತೆಯನ್ನು ಹರಡುವಂತೆ, ಉತ್ಸಾಹದಿಂದ ವರಗಳನ್ನು ಕೊಡುವಂತೆ ಆಕೆ ಚಂದ್ರಾಪೀಡನನ್ನು ತನ್ನ ದೃಷ್ಟಿಯಿಂದ ಮುಟ್ಟಿ ನೋಡದಳಂತೆ ! ಆಕೆಯ ನೋಟ ಸ್ನಿಗ್ಧಮಧುರವಾಗಿರುವಂತೆ ಹಾಗೂ ಮನೋಹರ. ಬಾಯ್ತುಂಬ ಅವನಿಗೆ ಸ್ವಾಗತವನ್ನು ಕೋರಿ, ಆದರಾತಿಥ್ಯದಿಂದ ಆತನನ್ನು

ಉಪಚರಿಸಿದ ಮೇಲೆ ತನ್ನ ಗೆಳತಿ ಕಾದಂಬರಿಯ ದುಃಖನಿವಾರಣೆಗಾಗಿ ಚಂದ್ರಾಪೀಡನನ್ನು ಅವಳ ಬಳಿಗೆ ಕೊಂಡೊಯ್ಯಬೇಕೆಂದು ನಿರ್ಧರಿಸುತ್ತಾಳೆ. ಆಕೆ;

ನಿನ್ನನಕಾರಣ ಬಂಧವ । ನಂ ನೋಡಿಯೆ ಶೋಕವಾರಿದುದು, ಸುಜನರ ಲೋ
ಕೋನ್ನತರ, ಪರಹಿತರ, ನಿ । ಮ್ಮನ್ನರ ಬರವಾರ್ಗೆ ಸುಖಮನುತ್ಪಾದಿ ಸದೊ ॥
ನ್ನರ ಬರವಾರ್ಗೆ ಸುಖಮನುತ್ಪಾದಿ ಸದೊ ॥

ಎಂದು ಹೇಳಿ, ರಾಜಕುಮಾರನನ್ನು ಕಾದಂಬರಿಯ ಬಳಿಗೆ ಕರೆದೊಯ್ಯುತ್ತಾಳೆ. ಆ ಗಂಧರ್ವ ಕುಮಾರಿಯ ಸೌಂದರ್ಯ ರಾಜಕುಮಾರನ ಕಣ್ಣುಗಳನ್ನು ಸೆರೆಹಿಡಿಯಿತು. ಆತ:

ಇವಳಿಂ ನೋಡಲ್ ಪಡೆದ । ನ್ನ ವಿಲೋಚನಮಾವ ನೋಂಪಿಯಂ ನೋಂತವೊ ಮಾ
ಯ್ಗ ವಿಧಾತ್ರನೇಕೆ ವಿರಚಿಸ । ನೊ ವಿಲೋಚನಮಯಮೆನಲ್ ಮದಿಂದ್ರಿಯಚಯಮಂ

ಎಂದುಕೊಂಡ. ಕಾದಂಬರಿಗೂ ಪ್ರಥಮದರ್ಶನದಲ್ಲಿಯೇ ರಾಜಕುಮಾರನಲ್ಲಿ ಪ್ರಣಯಾಂಕುರವಾಯಿತು–

ಒಡನೆ ಪುಲಕಾಂಕುರಗಳ್ । ಮೊದಲೊಳ್, ಭೂಷಣದ ರವಮೆರೆಡನೆಯ ಸೂಳ್
ಮುನಿದಿರೇಳೆ ತಾಂ ಬಳಿಕ್ಕಿರ ದಿದಿರಳ್ದ ಳಾ ತರಳನಯನೆ ಸಂಭ್ರಮದಿಂದಂ

ಚಂದ್ರಾಪೀಡ ಕಾದಂಬರಿಯರ ಸಮಾಗಮವೂ, ಆತನು ಕಾದಂಬರಿಯ ಅತಿಥಿಯಾಗಿದ್ದು ಅಲ್ಲಿಂದ ಹಿಂದಿರುಗಿದುದೂ ಒಂದು ಸ್ವರ್ಗೀಯ ದೃಶ್ಯ. ತನ್ನ ಯೋಚನೆಯಂತೆ ಚಂದ್ರಾಪೀಡನ ಆಗಮನದಿಂದ ಕಾದಂಬರಿಯ ದುಃಖಶಮನವಾದುದನ್ನು ಕಂಡು, ಸಂತೋಷಗೊಂಡ ಮಹಾಶ್ವೇತೆ ಅವರಿಬ್ಬರ ಪ್ರಣಯವಲ್ಲರಿಗೆ ಅಮೃತಸೇಚನೆ ಮಾಡಹೊರಟು ಕಾದಂಬರಿಯಿಂದ ರಾಜಕುಮಾರನಿಗೆ ತಾಂಬೂಲ ಕೊಡಿಸಹೊರಡುತ್ತಾಳೆ. ಆಗ ಕಾದಂಬರಿ–

ಆನಕ್ಕ ನಾಣ್ಚುವೆಂ ಪಿಡಿ । ನೀನೆ ನೃಪಂಗಿಕ್ಕು ತಂಬುಲಮಱಿವೆನೆ ಪೇ
ಳೇನಾನುಮನಾನೆಂದತಿ ಲ । ಜ್ಜಾನತಮುಖಿಯಾಗಿ ಕಾಂತೆ ಮೆಲ್ಲನೆ ನುಡಿದಳ್

ಆದರೆ, ಅಕ್ಕ ಬಲವಂತ ಮಾಡಿದಾಗ

ಬೆಮರಿಂ ಮುಳುಗಿದಪೆಂ ಸಂ । ಭ್ರಮದಿಂ ಬಳ್ದಪ್ಪೆನರಸ ಕೈಗುಡು ನೀಂ ಬೇ
ಗಮೆನಿಪ್ಪ ತೆಱದ ತಾಂಬೂ । ಲಮಿಳಿತಮಂ ಕಾಂತೆ ನೀಡಿದಳ್ ನಿಜಕರಮಂ

ಅದನ್ನು ಸ್ವೀಕರಿಸುವುದಕ್ಕಾಗಿ ಚಂದ್ರಾಪೀಡನು ತನ್ನ ಪಂಚೇಂದ್ರಿಯಗಳೇ ಬೇರೆ ಬೇರೆ ರೂಪವನ್ನು ತಾಳಿರುವುವೆಂಬಂತಿರುವ ಐದು ಬೆರಳುಗಳಿಂದ ಕೂಡಿದ ಕೈಯನ್ನು ಚಾಚಿದ. ಕಾದಂಬರಿ:

ಎನಸುಂ ಮುಂದೆ ನಖಾಂಶು ನಿಳ್ಕೆ ನೃಪಹಸ್ತಾ ನ್ವೇಷಣಂಗೈಯ್ವವೊಲ್
ನಿನಗೆನ್ನಂ ಬಿಡೆದುಣ್ಮಿದೀ ಬೆಮರೆ ಕಯ್ನೀರಾಗಿರಲ್ ತೋರ್ಕೆಗೊ
ಟ್ಟೆನನಂಗಂ ಪಿಡಿ ನಿನ್ನ ಕೈಯೊಡೆಯನೊಂದಿರ್ದಪ್ಪು ದಿನ್ನೆನ್ನ ಜೀ
ವನವೆಂಬಂದದಿನಿಕ್ಕಿದಳ್ ನಡುಗುತುಂ ತನ್ವಂಗಿ ತಾಂಬೂಲಮಂ

ಚಂದ್ರಾಪೀಡ ಕಾದಂಬರಿಯ ಆತಿಥ್ಯದಿಂದ ಧನ್ಯನಾಗಿ ತನ್ನೂರಿಗೆ ಹಿಂದಿರುಗಿದ.

ಗೆಳೆಯನ ಮರಣವಾರ್ತೆಯನ್ನು ಕೇಳಿ ಚಂದ್ರಾಪೀಡನು ಎದೆಯೊಡೆದು ಸತ್ತು ಹೋದನು. ಇದನ್ನು ಕೇಳಿ ಕಾದಂಬರಿ ಸಹಗಮನಕ್ಕೆ ಸಿದ್ಧಳಾಗುತ್ತಾಳೆ. ಆಗ, ರಾಜಪುತ್ರನ ದೇಹ

ನಿತ್ಯವಾದುದೆಂದೂ, ಬಹು ಬೇಗ ಆತನ ಸಮಾಗಮವಾಗುವುದೆಂದೂ ಆಕಾಶದಲ್ಲಿದ್ದ ಚಂದ್ರ ಆಶ್ವಾಸನೆ ನೀಡುತ್ತಾನೆ. ಮಹಾಪತಿವ್ರತೆಯಾದ ಮಹಾಶ್ವೇತೆ ಕಾದಂಬರಿಯೊಡನೆ ಈ ಸಂದರ್ಭದಲ್ಲಿ ಹೇಳಿದ ಮಾತು ಕವಿಯು ಜಗತ್ತಿಗೆ ನೀಡುವ ಸಂದೇಶದಂತೆಯೂ ಇದೆ-

ಎನಗಿದು ದೈವಮೆಂದು ಮನದೊಳ್ ಪರಿಭಾವಿಸಿ ಕಲ್ಲ ಮಣ್ಣ ರೂ
ಪನೆ ಗಡ ಪೂಜಿಸುತ್ತು ಮಿರೆ ಸನ್ನಿದವಾದವುದೊಡಕ್ಕನೆ
ಟ್ವನೆ ಮನುಜೇಂದ್ರ ಚಂದ್ರವೆಸರಿಂದೆಸೆವಗ್ಗದ ಚಂದ್ರಮೂರ್ತಿಯಂ
ಮನವೊಸೆದರ್ಚಿಸುತ್ತು ಮಿರೆ ಸನ್ನಿದನಪ್ಪುದಿರಾವ ಸಂದೆಗಂ ?

ಈ ಇಬ್ಬರು ಸಾಧ್ವಿಯರ ಪುಣ್ಯಕರ್ಮದಿಂದ ಅವರಿಬ್ಬರ ಪತಿಗಳೂ ದೊರೆತು, ಅವರಿಬ್ಬರ ಬಾಳೂ ಪರಿಪೂರ್ಣತೆಯನ್ನು ಪಡೆಯುತ್ತದೆ; ಕಾವ್ಯ ಮಂಗಳಾಂತವಾಗುತ್ತದೆ.

೬. ದುರ್ಗಸಿಂಹ

ಕನ್ನಡದಲ್ಲಿ ಪಂಚತಂತ್ರವನ್ನು ಬರೆದಿರುವ ದುರ್ಗಸಿಂಹ ತನ್ನನ್ನು ಕುರಿತು ತನ್ನ ಕಾವ್ಯದಲ್ಲಿ ಇಷ್ಟು ವಿಷಯಗಳನ್ನು ತಿಳಿಸುತ್ತಾನೆ. ಕರ್ನಾಟಕದ ಕಿಸುನಾಡಿನ ಸೈಯಡಿಯೆಂಬ ಅಗ್ರಹಾರದಲ್ಲಿ ಸಕಲವಿದ್ಯಾಪಾರಂಗತನಾದ ದುರ್ಗಮಯ್ಯ ಎಂಬ ಬ್ರಾಹ್ಮಣನೊಬ್ಬನಿದ್ದ. ಆತನ ಮಗ ಈಶ್ವರಾರ್ಯ. ಈ ಈಶ್ವರಾರ್ಯನಿಗೂ ಆತನ ಮಡದಿ ರೇವಾಂಬೆಗೂ ಮಗನಾಗಿ ಜನಿಸಿದನು, ದುರ್ಗಸಿಂಹ. ಮಹಾಯೋಗಿಗಳಾದ ಶಂಕರಭಟ್ಟರು ಈತನ ಗುರುಗಳು. ಕವಿ ದುರ್ಗಸಿಂಹನು ಒಂದನೆಯ ಜಯಸಿಂಹ ಜಗದೇಕಮಲ್ಲನಲ್ಲಿ ಸಂಧಿವಿಗ್ರಹಿಯಾಗಿ ಸೇರಿ, ಸುಖವಾಗಿ ಬಾಳುತ್ತಾ, ಅನೇಕ ಹರಿಹರ ದೇವಾಲಯಗಳನ್ನು ಕಟ್ಟಿಸಿ, ಕೀರ್ತಿಶಾಲಿಯಾದ. ತನ್ನ ಗ್ರಂಥವನ್ನು ಈತ ಕ್ರಿ.ಶ. ೧೦೩೧ರಲ್ಲಿ ಬರೆದ. ತನ್ನ ಗ್ರಂಥದ ಮೂಲದ ಮಹತ್ತನ್ನು ಕುರಿತು ಆತ ಹೀಗೆ ಹೇಳುತ್ತಾನೆ- ಹಿಂದೆ ಪಾರ್ವತಿ ಪರಶಿವನನ್ನು ಕುರಿತು ಅಪೂರ್ವವಾದ ಒಂದು ಕಥೆಯನ್ನು ಹೇಳುವಂತೆ ಬೇಡಿಕೊಂಡಳು. ಶಿವನು ಆಕೆಗೆ ಕಥೆ ಹೇಳುತ್ತಿದ್ದಾಗ ಪುಷ್ಪದಂತನೆಂಬ ಒಬ್ಬ ಗಣಧರನು ಅದನ್ನು ಕದ್ದು ಕೇಳುತ್ತಿದ್ದನು. ಕಾರಣಾಂತರಗಳಿಂದ ಭೂಲೋಕದಲ್ಲಿ ಗುಣಾಢ್ಯನೆಂಬ ಹೆಸರಿನಿಂದ ಹುಟ್ಟಬೇಕಾಗಿ ಬಂದ ಆ ಗಣಧರನು ತಾನು ಶಿವನಿಂದ ಕೇಳಿದ್ದ 'ಕಥೆಯನ್ನೆಲ್ಲ ಪೈಶಾಚಿಕ ಭಾಷೆಯಲ್ಲಿ ಬರೆದಿಟ್ಟ. ಅದೇ ಪ್ರಸಿದವಾದ 'ಬೃಹತ್ಕಥೆ'. ಆದರಿಂದ ಕಥೆಗಳನ್ನು ಆಯ್ದುಕೊಂಡು ವಸುಭಾಗಭಟ್ಟನು 'ಪಂಚತಂತ್ರ'ವನ್ನು ರಚಿಸಿದ. ಆ ವಸುಭಾಗಭಟ್ಟನ ಕೃತಿಯನ್ನು ಕನ್ನಡಿಸಿದ್ದಾನೆ, ದುರ್ಗಸಿಂಹ.

ವಸುಭಾಗಭಟ್ಟನು ರಚಿಸಿದ ಪಂಚತಂತ್ರ ಈಗ ಭಾರತದಲ್ಲಿ ಎಲ್ಲಿಯೂ ಉಪಲಬ್ಧವಾಗಿಲ್ಲ. ಈಗ ಬಳಕೆಯಲ್ಲಿ ಇರುವವು ವಿಷ್ಣುಶರ್ಮ, ಪೂರ್ಣಭದ್ರರ ಪಂಚತಂತ್ರಗಳು. ವಸುಭಾಗಭಟ್ಟನ ಗ್ರಂಥವು ಜಾವಾ, ಸುಮಾತ್ರ ಮೊದಲಾದ ದ್ವೀಪಗಳಲ್ಲಿ ಬಳಕೆಯಲ್ಲಿತ್ತೆಂದೂ, ಅದರ ಪ್ರತಿಗಳು ಕೂಡಾ ಅಲ್ಲಿ ಕಾಣಬರುತ್ತವೆಂದೂ ದಿವಂಗತ ಡಾ. ವೆಂಕಟಸುಬ್ಬಯ್ಯನವರು ತಿಳಿಸುತ್ತಾರೆ. ಪಂಚತಂತ್ರಗಳ ಚರಿತ್ರೆಯನ್ನು ಕ್ರಮಬದ್ಧವಾಗಿ ಅಭ್ಯಾಸ ಮಾಡಲು ಇತರ ಪಂಚತಂತ್ರಗಳ ಜೊತೆಗೆ ವಸುಭಾಗಭಟ್ಟನ ಪಂಚತಂತ್ರವೂ ಅತ್ಯಗತ್ಯ. ಅದರ ಸ್ವರೂಪ ಹೇಗಿತ್ತೆಂಬುದನ್ನು ಅರಿತುಕೊಳ್ಳಲು ಈಗ ಭಾರತದಲ್ಲಿರುವ ಒಂದೇ ಒಂದು ಆಧಾರವೆಂದರೆ ದುರ್ಗಸಿಂಹನ ಕನ್ನಡ ಪಂಚತಂತ್ರ. ಈ ದೃಷ್ಟಿಯಿಂದ ಕನ್ನಡ ಪಂಚತಂತ್ರ ಅತ್ಯಮೂಲ್ಯವಾದುದು. ಈಗ ಪ್ರಚುರವಾಗಿರುವ ಸಂಸ್ಕೃತ ಪಂಚತಂತ್ರಗಳಲ್ಲಿ ಕಾಣ ಬರದ ಅನೇಕ ಕಥೆಗಳು ಕನ್ನಡ ಪಂಚತಂತ್ರದಲ್ಲಿ ಕಾಣಬರುತ್ತವೆ.

ದುರ್ಗಸಿಂಹನ ಪಂಚತಂತ್ರ ಚಂಪೂರೂಪದಲ್ಲಿದೆ. ಇದರ ತಿರುಳು ಅರ್ಥಶಾಸ್ತ್ರ. ಇದರ ಪ್ರಸ್ತಾವನಾ ಭಾಗದಲ್ಲಿ ಹೀಗೆ ಹೇಳಿದೆ – ಸೌರೂಪ್ಯಪೂರದ ರಾಜನಾದ ಅಮರಶಕ್ತಿಯು ಸ್ವೇಚ್ಛಾಚಾರಿಗಳಾದ ತನ್ನ ಮೂವರು ಮಕ್ಕಳನ್ನು ತಿದ್ದಿ ಹಾದಿಗೆ ತರುವಂತೆ ವಸುಭಾಗಭಟ್ಟನನ್ನು ಬೇಡಿಕೊಂಡನಂತೆ. ಆಗ ಭಟ್ಟನು ಅರ್ಥಶಾಸ್ತ್ರದ ಐದು ಉಪಾಯಗಳನ್ನು ಒಳಗೊಂಡ ಐದು ಕಥೆಗಳನ್ನು ಹೇಳಿ ಅವರನ್ನು ಹಾದಿಗೆ ತಂದನಂತೆ ! ಆ ಐದು ಉಪಾಯಗಳೆಂದರೆ : (೧) ಜೀವದ ಗೆಳೆಯರಲ್ಲಿ ಒಡಕು ಹುಟ್ಟಿಸುವ ಭೇದೋಪಾಯ, (೨) ನಂಬದವರನ್ನು ನಂಬುವಂತೆ ಮಾತನಾಡಿ ಅವರ ಒಳಹೋಗುವುದು ವಿಶ್ವಾಸೋಪಾಯ, (೩) ಯಾವ ವಿಚಾರವನ್ನೂ ಪರೀಕ್ಷಿಸದೆ ಕೈಕೊಳ್ಳಬಾರದೆಂದು ಬೋಧಿಸುವ ಪರಿಕ್ಷೋಪಾಯ, (೪) ಬೇರೆಯವರ ಮನಸ್ಸನ್ನು ತಿಳಿದುಕೊಂಡು ಸಂಧಾನದಿಂದ ಮೋಸಮಾಡುವುದು – ವಂಚನೋಪಾಯ, (೫) ಎಲ್ಲರನ್ನೂ ಅತಿ ಸ್ನೇಹದಿಂದ ತನ್ನವರನ್ನಾಗಿ ಮಾಡಿಕೊಳ್ಳುವ ಮಿತ್ರಕಾರ್ಯೋಪಾಯ. ಈ ಐದು ತಂತ್ರಗಳೂ ಪಿಂಗಳಕನೆಂಬ ಸಿಂಹಕ್ಕೂ ಸಂಜೀವಕನೆಂಬ ಎತ್ತಿಗೂ ನಡೆದ ವ್ಯವಹಾರದಲ್ಲಿ ಆಚರಣೆಗೆ ಬಂದಿವೆ.

ವ್ಯಾಪಾರಕ್ಕೆಂದು ಹೊರಟ ಉಜ್ಜಯನಿಯ ವರ್ಧಮಾನ ಶ್ರೇಷ್ಠಿ ಹಾದಿಯಲ್ಲಿ ಕುಂಟುಬಿದ್ದ ತನ್ನ ಎತ್ತೊಂದನ್ನು ಕಾಡಿನಲ್ಲಿ ಬಿಟ್ಟುಹೋದ. ಸಂಜೀವಕ ಎಂಬ ಈ ಎತ್ತು ಯಮುನಾ ನದೀ ತೀರದಲ್ಲಿ ಎಳೆಯ ಗರುಕೆಯನ್ನು ಮೇದು ಮೈದುಂಬಿಕೊಂಡು ಒಂದು ಗುಟುರು ಹಾಕಿತು. ನೀರು ಕುಡಿಯಲೆಂದು ನದಿಗೆ ಬಂದಿದ್ದ ಪಿಂಗಳಕನೆಂಬ ಸಿಂಹ ಆ ಶಬ್ದವನ್ನು ಕೇಳಿ ಭಯದಿಂದ ಓಡಿಹೋಯಿತು. ಇದನ್ನು ಕಂಡ ಕರಟಕ, ದಮನಕರೆಂಬ ಎರಡು ಬಳ್ಳುಗಳು ಎತ್ತಿಗೂ ಸಿಂಹಕ್ಕೂ ಗೆಳತನ ಬೆಳಸಿ, ಅದರಿಂದ ತಮ್ಮ ಸ್ವಾರ್ಥಕ್ಕೆ ಲೋಪ ಬಂದುದರಿಂದ, ಅವರೆಡಕ್ಕೂ ದ್ವೇಷವನ್ನು ತಂದೊಡ್ಡಿ ಎತ್ತನ್ನು ಕೊಲ್ಲಿಸಿದವು. ಇದು ಮೊದಲ ತಂತ್ರದ ಕಥೆ. ಉಳಿದ ತಂತ್ರಗಳಲ್ಲಿಯೂ ಸಣ್ಣ ಸಣ್ಣ ಕಥೆಗಳ ಮೂಲಕ ನೀತಿ ನಿರೂಪಣೆ ಮಾಡಿದ್ದರೂ, ಕಲಾದೃಷ್ಟಿಯಿಂದ ಪ್ರಥಮ ತಂತ್ರ ಅತ್ಯಂತ ಸುಂದರವಾಗಿದೆ.

ದುರ್ಗಸಿಂಹನು ಒಳ್ಳೆಯ ಕತೆಗಾರ; ಇದಕ್ಕೂ ಹೆಚ್ಚಾಗಿ ದೊಡ್ಡ ವಿಡಂಬನಕಾರ. ಪಿಂಗಳಕನ ಅರಮನೆಯಲ್ಲಿ ಎರಡು ಕೋಣಗಳು ಬಾಗಿಲು ಕಾಯುವ ಕೆಲಸಕ್ಕೆ ನೇಮಕವಾಗಿವೆ. ಈ ಹೆಡ್ಡ ಪ್ರಾಣಿಗಳೊಡನೆ ಚತುರಮತಿಗಳಾದ ಬಳ್ಳುಗಳು ನಡೆದುಕೊಳ್ಳುವ ರೀತಿ ಹಾಸ್ಯರಸಭರಿತವಾಗಿರುವುದಲ್ಲದೆ ಕೋಣನ ಬುದ್ಧಿಯವರು ಸ್ಥಾನಬಲದಿಂದ ಹೇಗೆ ನಡೆದುಕೊಳ್ಳುವರೆಂಬುದೂ ವಿದಿತವಾಗುತ್ತದೆ. ಸ್ವಾರ್ಥಸಾಧಕರ ವ್ಯವಹಾರಕ್ಕೆ ಬಳ್ಳುಗಳು, ರಾಜರು ಸಮಯಸಾಧಕರ ಕೈಗೊಂಬೆಗಳಾಗುವರೆಂಬುದಕ್ಕೆ ಸಿಂಹವೂ ಉದಾಹರಣೆಯಾಗಿವೆ. ಕಾಕು ನುಡಿಗಳಿಂದ ವ್ಯಕ್ತಿಗಳನ್ನು ಗೇಲಿಗೆಬ್ಬಿಸುವುದರಲ್ಲಿ ದುರ್ಗಸಿಂಹನು ಎತ್ತಿದ ಕೈ. 'ಕೋತಿ' ಎಂಬ ಕಡೆ 'ಗೋಲಾಂಗೂಲ', 'ಎತ್ತು' ಎನ್ನುವ ಕಡೆ 'ಶಾಕ್ವರ ಪರಿವೃಢ' 'ನಾಯಿ' ಎಂಬ ಕಡೆ 'ಸಾರಮೇಯ' ಎಂಬ ಪದಗಳನ್ನು ಬಳಸಿ, ಗೇಲಿಗೆಬ್ಬಿಸುತ್ತಾನೆ. ಆತನ ಪದ್ಯಗಳ ಶೈಲಿ ಪ್ರೌಢವಾಗಿದೆ; ಮನಃ ಪೂರ್ವಕವಾಗಿ, ನಿರ್ದಿಷ್ಟ ಧ್ಯೇಯಸಾಧನೆಗಾಗಿ ಆತ ಈ ಪ್ರೌಢಶೈಲಿಯನ್ನು ಬಳಸುತ್ತಾನೆ–

ಅನಿಮಿಷ ಚಾಪದಂತೆ ಸಿರಿ, ಶಾರದನೀರದ ಕಾಂತಿಯಂತೆ ಯೌ
ವನದೆಸಕಂ, ತೃಣಾಗ್ರಗತ ವಾಃಕಣಿಕಾಗಣದಂತೆ ಸಂದ ಜೀ
ವನಮದಱಿಂ ಭವಪ್ರಭವ ಜೀವಿಗೆ ನಿರ್ಮಲ ಧರ್ಮಮಾರ್ಗದೊಳ್
ಮನಮೊಸೆದಾಗಳುಂ ನಡೆಯವೇಳ್ಪುದು ವಿಶ್ವಮೃಗೇಂದ್ರ ವಲ್ಲಭಾ

ಕಾವ್ಯಧರ್ಮ, ಧರ್ಮಗಳನ್ನು ಒಳಗೊಂಡ ಈ ಪದ್ಯವನ್ನು ಪ್ರತ್ಯೇಕವಾಗಿ ಕೇಳಿದಾಗ ಪಂಪನೊರನ್ನನೊ ಇದರ ಕರ್ತೃವೆನಿಸೀತು !

ದುರ್ಗಸಿಂಹನೊಬ್ಬ ಸವ್ಯಸಾಚಿ. ಪದ್ಯಗಳೆಲ್ಲ ಸಂಸ್ಕೃತಮಯವಾದ ಮಾರ್ಗೀಶೈಲಿ, ಗದ್ಯವೆಲ್ಲ ಸರಳ ಸುಂದರವಾದ ದೇಶೀ ಶೈಲಿ. ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ, ಅದರಲ್ಲಿಯೂ ಕನ್ನಡ ಗದ್ಯ ಸಾಹಿತ್ಯದ ಬೆಳವಣಿಗೆಯಲ್ಲಿ ಈತನಿಗೊಂದು ಹಿರಿಯ ಸ್ಥಾನವಿದೆ. ಕವಿ ತನ್ನನ್ನು ಕುರಿತು–

ನಿಶ್ಚಿತಮನರಲ್ಲ ದಂದುಶ್ಚರಿತನೆಯ್ದು ಪದೆದ ದೋಷಕ್ಕಂ ಪ್ರಾ
ಯಶ್ಚಿತ್ತವೆಂದು ಸಕಲ ವಿಪಶ್ಚಿನ್ನಿಧಿಯೆನಿಪ ದುರ್ಗನಂ ಬಿದಿ ಪಡೆದಂ

ಎಂದು ಹೇಳಿಕೊಂಡಿರುವುದು ಅತಿಶಯವಾಗಿರುವುದಾದರೂ ಅವಶ್ಯವೇನಲ್ಲ.

೭. ಶಾಂತಿನಾಥ (ಕ್ರಿ.ಶ. ೧೦೬೮)

ಶಾಂತಿನಾಥಕವಿಯು 'ಸುಕುಮಾರಚರಿತಂ' ಎಂಬ ಚಂಪೂ ಕಾವ್ಯವನ್ನು ಬರೆದಿದ್ದಾನೆ. ಈತನಿಗೆ 'ಸಹಜಕವಿ', 'ಚತುರಕವಿ', 'ಸರಸ್ವತೀಮುಖಮುಕುರ', 'ಜಿನಮತಾಂಭೋಜಿನೀ ರಾಜಹಂಸ' ಇತ್ಯಾದಿ ಬಿರುದುಗಳಿವೆ ಕ್ರಿ.ಶ. ೧೦೬೮ರಲ್ಲಿ ಹುಟ್ಟಿದ. ಶಿಕಾರಿಪುರದ ೧೩೬ನೇ ಶಾಸನವನ್ನು ಶಾಂತಿನಾಥನೇ ಬರೆದಿರಬೇಕೆಂದು ಊಹಿಸಲು ಆಧಾರಗಳಿವೆ: ಅದರಲ್ಲಿ 'ಸುಕರರಸಭಾವದಿಂ ವರ್ಣಕದಿಂ ತತ್ವಾರ್ಥನಿಚಯದಿಂ ಸೂಕ್ತಮೆನಲ್ ಸುಕುಮಾರ ಚರಿತಮಂ ಪೇಳ್ದ ಕವೀಂದ್ರಾ ಗಣೆ' ತಾನೆಂದು ಅದನ್ನು ಬರೆದವ ಹೇಳಿಕೊಂಡಿರುವುದರಿಂದ, ಸುಕುಮಾರಚರಿತೆ ಕ್ರಿ.ಶ. ೧೦೬೮ಕ್ಕೂ ಮೊದಲೇ ಹುಟ್ಟಿರಬೇಕು. ಈ ಕವಿ ಚಾಲುಕ್ಯ ಚಕ್ರವರ್ತಿ ಭುವನೈಕಮಲ್ಲನ (ಕ್ರಿ.ಶ. ೧೦೬೮-೧೦೭೬) ಪಸಾಯಿತನಾದ ಲಕ್ಷ್ಮಣರಾಜನ ಮಂತ್ರಿಯಾಗಿ, ಬನವಾಸಿ ೧೨೦೦೦ಕ್ಕೆ ಅರ್ಥಾಧಿಕಾರಿಯಾಗಿದ್ದ. ಆತನ ತಂದೆ 'ಸತ್ಯರತ್ನಾಕರ' ಗೋವಿಂದರಾಜ; ತಮ್ಮ ವಾಗ್ಭೂಷಣ ರೇವಣ; ಆರಾಧ್ಯ ದೈವ ಜಿನಪತಿ.

ಪಂಪಕವಿಯನ್ನು ಅನುಕರಿಸಿ, ಶಾಂತಿನಾಥನೂ 'ಈ ಸುಕುಮಾರ. ಚರಿತದೊಳ್ ನೋಳ್ಕೆ ಕಾವ್ಯ ಧರ್ಮಮುಮನಮಳ ಜಿನಧರ್ಮಮುಮಂ' ಎಂದು ಹೇಳಿಕೊಂಡಿದ್ದಾನೆ. ಇಡೀ ಕಾವ್ಯದ ನಾಲ್ಕರಲ್ಲೊಂದು ಪಾಲು ಮತತತ್ವದ ನಿರೂಪಣೆಯಿಂದಲೆ ತುಂಬಿದೆ. ಜೈನಧರ್ಮದ ಪಾರಿಭಾಷಿಕ ಪದಗಳಿಂದ ತುಂಬಿರುವುದರಿಂದ ಈ ಕಾವ್ಯ ಜನಸಾಮಾನ್ಯರಿಗೆ ದುರವಗಾಹವಾಗಿದೆ. ಆತನ ಕಾವ್ಯಧರ್ಮ ಇಷ್ಟೇ ದಟ್ಟವಾಗಿದೆಯೆಂದು ಹೇಳುವಂತಿಲ್ಲ. ಈತನ ಶೈಲಿ ಪ್ರೌಢವಾದರೂ ಸರಳ, ಲಲಿತ, ವರ್ಣನೆ ಹಿತ, ಮಿತ ! ಪಾತ್ರ ಸಜೀವ; ಸನ್ನಿವೇಶ ರಚನೆ ಸ್ವಾಭಾವಿಕ; ಕಥಾ ನಿರೂಪಣೆ ಮನೋಹರ. ಆದರೂ ಈತನ ಕವಿತೆಯಲ್ಲಿ ಸಂಪ್ರದಾಯಾನುಸರಣೆ, ಕವಿ ಸಮಯಗಳ ಪ್ರಾಚುರ್ಯ ಕಂಡು ಬರುತ್ತದೆ. ಆಗಾಗ ಆತನ ಶೈಲಿಯ ಹರಿತ ನಮ್ಮ ಮನಸ್ಸನ್ನು ಸೂರೆಗೊಳ್ಳುತ್ತದೆ. ವಾಯುಭೂತಿ ತನ್ನ ಸೋದರಮಾವನೊಡನೆ–

ನೀಂ ಬೇವಾದೊಡೆ ನಿನ್ನಕು ।
ಟುಂಬಿನಿಯಂ ಕಯ್ಪುಸೊರೆಯ ಕುಡಿಯೇಂ ಮಿಡಿಯೇ
ನೆಂಬಂತೆ ದರಸಿಯೋದಳಿ ।
ದೇಂ ಬಳ್ವಳ ಬಳದ ಬಂಧುತನಮಿನಿದಾಯ್ತೋ

ಎಂಬ ಮಾತು ಕತ್ತಿಯ ಮೊನೆಯಂತೆ ಹರಿತವಾಗಿದೆ. ಸೂರ್ಯಮಿತ್ರ ಭಟ್ಟಾರಕನು ಅಳಿಯನನ್ನು ಕುರಿತು:

ಪಗೆಯಾವುದು ಕೆಳೆಯಾವುದು ।
ಬಗೆವೊಡೆ ಭಾವಿಸುವೊಡೆಂದು ನೋಡುವೊಡೆಂದುಂ
ಪಗೆ ಕರ್ಮಮೆ, ಕೆಳೆ ಧರ್ಮಮೆ ।
ಜಗದೊಳ್ ಮುನಿಪತಿಗೆ ಪರಮ ಜಿನಪತಿಮತದಿಂ ॥

ಎಂದು ಹೇಳುವ ಮಾತು ಸರಳವಾಗಿರುವಷ್ಟೆ ಪ್ರಭಾವಯುತವಾಗಿದೆ. ಇಂತಹ ಸಂದರ್ಭಗಳಲ್ಲೆಲ್ಲ ಶಾಂತಿನಾಥನು ಕಾವ್ಯಧರ್ಮ ಧರ್ಮಗಳನ್ನು ಸಮನ್ವಯಗೊಳಿಸಿ, ಕೃತಕೃತ್ಯನಾಗಿದ್ದಾನೆ.

೮. ನಾಗಚಂದ್ರ

'ಮಲ್ಲಿನಾಥ ಪುರಾಣ', 'ರಾಮಚಂದ್ರ ಚರಿತಪುರಾಣ' – ಎಂಬ ಎರಡು ಜೈನಪುರಾಣ ಕಾವ್ಯಗಳನ್ನು ಬರೆದ ನಾಗಚಂದ್ರ ಕವಿ ಬಿಜಾಪುರದವನೆಂದೂ, ೧೧ನೆಯ ಶತಮಾನದ ಕಡೆಯ ಭಾಗ ಮತ್ತು ೧೨ನೇ ಶತಮಾನದ ಆದಿಭಾಗದಲ್ಲಿ ಇದ್ದವನೆಂದೂ ತಿಳಿದುಬರುತ್ತದೆ. ದ್ವಾರಸಮುದ್ರದ ಬಲ್ಲಾಳರಾಜನು (೧೧೦೦–೧೧೦೬) ತನ್ನ ಮಕ್ಕಳ ಬುದ್ಧಿಶಕ್ತಿಯನ್ನು ಉದ್ದೀಪನಗೊಳಿಸುವುದಕ್ಕಾಗಿ ತಯಾರು ಮಾಡಿಸಿದ ಜ್ಯೋತಿಷ್ಮತೀ ತೈಲವನ್ನು ಕಂತಿಯೆಂಬ ದಾಸಿ ಕುಡಿದು ಕವಯಿತ್ರಿಯಾದಳಂತೆ! ಆಕೆಗೂ ರಾಜನ ಆಸ್ಥಾನ ಕವಿಯಾಗಿದ್ದ 'ಅಭಿನವಪಂಪ' ನಾಗಚಂದ್ರನಿಗೂ ಕಾವ್ಯ ಸ್ಪರ್ಧೆ ನಡೆಯಿತೆಂಬ ದಂತಕಥೆಯೊಂದು ಪ್ರಚಲಿತವಾಗಿದೆ. 'ದನಮಂ ಕಡಿಕಡಿದು ಬಸದಿಗೆಳೆಯುತ್ತಿರ್ಪರ್' ಎಂಬ ಸಮಸ್ಯೆಯೊಂದನ್ನು ಕವಿ ಒಡ್ಡಿದರೆ, ಕಂತಿವನದೊಳಗೆ ಪುಟ್ಟಿ ಬೆಳೆಯುತೆ, ತನಿಗಂಪಂ ಪತ್ತುದೆಸೆಗೆ ಬೀರುತ್ತಿರ್ಪಾ, ಘನತರ ಸುರುಚಿರ ಸಚ್ಚಂದನಮಂ ಕಡಿಕಡಿದು ಬಸದಿ ಗೆಳೆಯುತ್ತಿರ್ಪರ್' ಎಂದು ಹೇಳಿ ಸಮಸ್ಯಾ ಪೂರಣ ಮಾಡುತ್ತಿದ್ದಳಂತೆ! (ಇಂತಹ ಹಲವು ಪದ್ಯಗಳನ್ನು ಒಳಗೊಂಡ 'ಕಂತಿ–ಹಂಪರ ಸಮಸ್ಯೆ' ಎಂಬ ಪುಟ್ಟಗ್ರಂಥವಿದೆ) ಈ ದಂತಕಥೆಯಲ್ಲಿ ಏನಾದರೂ ಹುರುಳಿರುವ ಪಕ್ಷದಲ್ಲಿ ನಾಗಚಂದ್ರನು ೧೨ನೆಯ ಶತಮಾನದ ಆದಿಭಾಗದಲ್ಲಿ ಇದ್ದನೆಂದೂ, ಕನ್ನಡದ ಮೊಟ್ಟಮೊದಲ ಕವಯಿತ್ರಿ ಕಂತಿಯೆಂದೂ ಸಿದ್ಧಾಂತವಾದಂತಾಗುತ್ತದೆ.

ನಾಗಚಂದ್ರನ ಕಾವ್ಯಗಳೆರಡೂ ಆ ಕವಿಯ ಧರ್ಮಾಭಿಮಾನಕ್ಕೆ ಹಿಡಿದ ಸೊಡರಿನಂತಿವೆ. ಆದರೆ 'ಧರ್ಮ'ದಷ್ಟೇ 'ಕಾವ್ಯಧರ್ಮ'ವೂ ಅವುಗಳಲ್ಲಿ ಉಜ್ವಲವಾಗಿವೆ. ಕವಿಯು ತನ್ನನ್ನು 'ಅಭಿನವ ಪಂಪ'ನೆಂದು ಕರೆದುಕೊಂಡಿರುವುದು ಸಾರ್ಥಕವಾಗುವಂತೆ ಆತನು ಅದ್ಭುತ ಕವಿತಾಶಕ್ತಿಯುಳ್ಳವನಾಗಿದ್ದಾನೆ. ಆತನ ಮಲ್ಲಿನಾಥ ಪುರಾಣ' – ಬಹುಶಃ ಇದು ಕವಿಯ ಕೃತಿಗಳೆರಡರಲ್ಲಿ ಮೊದಲನೆಯದಾಗಿರಬೇಕು–೧೯ನೆಯ ತೀರ್ಥಂಕರನ ಚರಿತ್ರೆಯನ್ನು ಒಳಗೊಂಡಿವೆ. (ಕವಿ ಇದರಲ್ಲಿ ಚಾಲುಕ್ಯ ಚಕ್ರವರ್ತಿ ಸೋಮೇಶ್ವರನನ್ನು (ಕ್ರಿ.ಶ. ೧೧೦೦–೧೧೨೬) ಶ್ಲೇಷೆಯಿಂದ ಹೊಗಳಿರುವನೆಂದು ದಿವಂಗತ ಶ್ರೀ ಗೋವಿಂದ ಪೈ ತಿಳಿಸುತ್ತಾರೆ). ೧೪ ಆಶ್ವಾಸಗಳ ಚಪ್ಪರದ ಮೇಲೆ ಹಬ್ಬಿ ಹರಡಿರುವ ಈ ಪುರಾಣದಲ್ಲಿ ತೀರ್ಥಂಕರ ಭವಾವಳಿಗಳ ಪೈಕಿ ಒಂದು ಜನ್ಮದ ಕಥೆ ಮಾತ್ರ ನಿರೂಪಿತವಾಗಿದ್ದು, ತೀರ್ಥಂಕರನ ಜನ್ಮದ ಜೀವಿತ ವೃತ್ತಾಂತ ವಿಸ್ತಾರವಾಗಿ ವರ್ಣಿತವಾಗಿದೆ. ತೀರ್ಥಂಕರನ ಕಥೆ ಹ್ರಸ್ವವಾಗಿದ್ದು, ವರ್ಣನೆ ಪ್ರಾಧಾನ್ಯವನ್ನು ಪಡೆದಿದೆ. ಧಾರ್ಮಿಕ ಕಾವ್ಯವಾದುದರಿಂದ ಕಥೆಯ ಸಂವಿಧಾನದಲ್ಲಿ ವ್ಯತ್ಯಾಸ ಮಾಡುವ ಸ್ವಾತಂತ್ರ್ಯ ಕವಿಗಿಲ್ಲ; ಆದ್ದರಿಂದ ಸಂಪ್ರದಾಯದ ಚೌಕಟ್ಟಿನಲ್ಲಿಯೆ ಆತನ ಪ್ರತಿಭೆ ಸಂಚರಿಸಬೇಕಾಗಿದೆ. ನಾಗಚಂದ್ರನ ವರ್ಣನೆಗಳು ಸಹಜ ಸುಂದರವಾಗಿ ಮನೋಹರವಾಗಿವೆ. ಸಿಡಿಲಿನಿಂದ ನೆಲಕ್ಕುರುಳಿದ ಆಲದಮರವನ್ನು ವೈಶ್ರವಣ ಮಹಾರಾಜ ಕಂಡನಂತೆ.

ಸಿಡಿಲೆಂಬ ಜವನ ಕೊಡಲಿಯ । ಕಡುಪೊಯ್ಲಿಂ ನೆಗೆದ ಬೇರ್ಗಳೊಡನೆ ನೆಲ ಬಾ
ಯ್ವಿಡೆ ಬೆಟ್ಟು ಕೆಡೆವ ತೆಱದಿಂ। ಕೆಡೆದಾಲಮನಿದಿರೊಳವನಿಪಾಲಂ ಕಂಡಂ

ಇದನ್ನು ಕಂಡು ಅಚ್ಚರಿಗೊಂಡ ರಾಜನಿಗೆ ಅದು ವೈರಾಗ್ಯರಸಕ್ಕೆ ಒಂದು ಸೇತುವೆಯಾಯಿತಂತೆ। ಮರುದಿನದ ಬೆಳಗನ್ನು ವರ್ಣಿಸುತ್ತಾ, ಕವಿ ಮುಂಜಾನೆಯ ಸಂಜೆಗೆಂಪು ಕಂಪಾದ ಚಿಗುರಿನ ಪರ್ಣಶಾಲೆಯಂತಿತ್ತು; ಚಂದ್ರಮಂಡಲವು ಬಾಡಿದ ಮಾಧವೀ ಪುಷ್ಪಗಳ ಗೊಂಚಲಿನಂತಿತ್ತು; ನಕ್ಷತ್ರಗಳು ತೊಟ್ಟಿನಿಂದ ಉದುರಿದ ಹಣ್ಣು ಹೂಗಳಂತಿದ್ದವು. ತಂಗಾಳಿ ಬೀಸುತ್ತಿರಲಾಗಿ ಆಕಾಶವು ತಪೋವನಂಬೋಲತಿ ಪಾವನಮಾಯ್ತು' ಎಂದು ಹೇಳುತ್ತಾನೆ. ಭಕ್ತಿಯಿಂದ ಕವಿ ಹಾಡುವ ಜಿನಸ್ತುತಿಯಲ್ಲಿ ಧರ್ಮಾನುರಾಗದ ಹೊಳೆಯೇ ಹರಿಯುತ್ತಿದೆ–

ನಿನಗೆ ರಸವೊಂದೆ ಶಾಂತಮೆ । ಜಿನೇಂದ್ರ!ಮನಮಾ ರಸಾಂಬುನಿಧಿಯೊಳವಗಾ
ಹನಮಿದು ಮಿಕ್ಕ ರಸಮಂ । ಕನಸಿನೊಳಂ ನೆನೆಯದಂತು ಮಾಡೆನಗರ್ಹಾ
ಮಣಿಭೂಷಣ ಭರದಿಂ ತನು । ಕಿಣಮಪ್ಪುದದೇಕೆ ನಿನ್ನ ನಿರ್ಮಲಗುಣಭೂ
ಷಣಮಂ ದಯೆಗೆಯ್ ಪಡೆವೆಂ । ಪ್ರಣಯಮನಪವರ್ಗ ಲಕ್ಷ್ಮಿಗವಱಿಂದರ್ಹಾಯ್

ಭಕ್ತಿ ಭರಿತವಾದ ಇಂತಹ ಪದ್ಯಗಳು ದಿವಂಗತ ಬಿ.ಎಂ. ಶ್ರೀಯವರ ಮಾತಿನಲ್ಲಿ ಹೇಳುವುದಾದರೆ ಅಭಿನವ ಪಂಪನ 'ಆತ್ಮಸಾರ'.

ನಾಗಚಂದ್ರ ಕವಿಯ 'ರಾಮಚಂದ್ರಚರಿತಪುರಾಣ'ವು ಜೈನಸಂಪ್ರದಾಯಾನುಸಾರವಾಗಿ ಬಂದಿರುವ ಮೊದಲ ರಾಮಾಯಣ. ವಿಮಲ ಸೂರಿಯು (ಕ್ರಿ.ಶ. ೧ನೆ ಶತಮಾನ) ಪ್ರಾಕೃತದಲ್ಲಿ ಬರೆದಿರುವ 'ಪವುಚರಿಯ'ವೂ ರವಿಷೇಣನು (ಕ್ರಿ.ಶ. ೭ನೆ ಶತಮಾನ) ಸಂಸ್ಕೃತದಲ್ಲಿ ಬರೆದಿರುವ 'ಪದ್ಮ ಪುರಾಣ'ವೂ ಇದಕ್ಕೆ ಆಕರಗಳೆಂದು ಪಂಡಿತರ ಅಭಿಪ್ರಾಯ. ಕವಿ ನಾಗಚಂದ್ರನು 'ವಿಮಲ ಸೂರಿಯ ಜಾಡನ್ನೇ ಚಾಚೂ ತಪ್ಪದೆ ಅನುಸರಿಸಿದ್ದಾನೆ. ಉತ್ಕೃಷ್ಟ ಕಲೆಯಿಂದ ತುಂಬಿದ ಮಾರ್ಪಾಟುಗಳಾವುವೂ ಅವನ ಕಾವ್ಯದಲ್ಲಿ ಕಂಡುಬರುವುದಿಲ್ಲ' ಎಂದು ದಿವಂಗತ ಡಿ.ಎಲ್.ಎನ್. ಹೇಳಿರುವುದನ್ನು ನೋಡಿದರೆ ನಾಗಚಂದ್ರನೂ ನಾಗವರ್ಮನಂತೆ ಭಾಷಾಂತರಕಾರನೆಂದು ಭಾವಿಸಬೇಕಾಗುತ್ತದೆ. ಇವರಿಬ್ಬರೂ ಶ್ರೇಷ್ಠ ಭಾಷಾಂತರಕಾರರಾಗಿರುವಂತೆ ಶ್ರೇಷ್ಠ ಸಂಗ್ರಹಕಾರರು, ಶ್ರೇಷ್ಠ ಕವಿಗಳು. ಇಬ್ಬರೂ ತಮ್ಮ ಕಾವ್ಯಗಳಲ್ಲಿ ತಮ್ಮ ವ್ಯಕ್ತಿತ್ವವನ್ನು ಒಡಮೂಡಿಸಿದ್ದಾರೆ. ಪದಲಾಲಿತ್ಯದಲ್ಲಿ, ದೇಸೀ ಶೈಲಿಯಲ್ಲಿ ನಾಗಚಂದ್ರನು ನಾಗವರ್ಮನಿಗಿಂತಲೂ ಮಿಗಿಲಾದವನೆಂದು ಹೇಳಬಹುದು.

ಜೈನರಾಮಾಯಣ ವೈದಿಕರಾಮಾಯಣದಿಂದ ಬಹು ಭಿನ್ನವಾದುದು. ಇಲ್ಲಿ ಯಜ್ಞ ಯಾಗಾದಿಗಳಾಗಲಿ, ಋಷಿ ಬ್ರಾಹ್ಮಣರಾಗಲಿ ಕಂಡು ಬರುವುದಿಲ್ಲ. ಇಲ್ಲಿನ ರಾಮ ಮಹಾವಿಷ್ಣುವಿನ ಅವತಾರವೂ ಅಲ್ಲ, ರಾವಣನನ್ನು ಅವನು ಕೊಲ್ಲುವುದೂ ಇಲ್ಲ. ಅವನು ಜೈನರ ತ್ರಿಷಷ್ಟಿಶಲಾಕಾಪುರುಷರಲ್ಲಿ ಓರ್ವನಾದ ಬಲದೇವ; ಅವನ ತಮ್ಮನಾದ ಲಕ್ಷ್ಮಣ ವಾಸುದೇವ. ಇಲ್ಲಿನ ರಾವಣ ಶಾಪಗ್ರಸ್ತನಾದ ವೈಕುಂಠದ ದ್ವಾರಪಾಲಕನಲ್ಲ, ಪ್ರತಿವಾಸುದೇವ, ವಾಸುದೇವನಾದ ಲಕ್ಷ್ಮಣನಿಂದ ಹತನಾಗುತ್ತಾನೆ. ಸೀತೆ ಅಯೋನಿಜೆಯಲ್ಲ, ಜನಕನ ಔರಸಪುತ್ರಿ, ಪ್ರಭಾಮಂಡಲನ ತಂಗಿ; ಸುಗ್ರೀವ ಹನುಮಂತಾದಿಗಳು ಕಪಿಗಳಲ್ಲ, ಕಪಿಧ್ವಜರು ಇಲ್ಲಿ ಸಮುದ್ರಕ್ಕೆ ಸೇತುವೆ ಕಟ್ಟುವುದಿಲ್ಲ, ಪ್ರಭಾವದಿಂ ಎಲ್ಲರೂ ಸಮುದ್ರವನ್ನು ಹಾರುತ್ತಾರೆ; ರಾವಣಾದಿಗಳು ರಾಕ್ಷಸರಲ್ಲ ಖೇಚರರು; ಅವರಿಗೂ ಕಪಿಧ್ವಜರಿಗೂ ಬಂಧುತನವುಂಟು; ಹನುಮಂತನು ರಾವಣನ ತಂಗಿಯ ಅಳಿಯ; ರಾವಣನಿಗೆ ಹತ್ತು ತಲೆಗಳಿಲ್ಲ, ಕನ್ನಡಿಯಲ್ಲಿ ಹತ್ತು ತಲೆ ಪ್ರತಿಬಿಂಬಿಸಿ ಅವನು ದಶಶಿರ ಎನಿಸಿದ್ದಾನೆ; ಇಲ್ಲಿ ಮಂಥರೆಯ ಪ್ರಸಕ್ತಿಯಿಲ್ಲ; ವಾಲಿಯ ವಧೆಯಿಲ್ಲ; ಇಲ್ಲಿನ ಹನುಮಂತ ಸಂಸಾರಿ, ಲಕ್ಷ್ಮಣನಿಗೂ ಹಲವು ಮದುವೆಗಳಾಗುತ್ತವೆ.

ಪಂಪನ 'ವಿಕ್ರಮಾರ್ಜುನವಿಜಯ'ವು ಜನಪ್ರಿಯವಾಗಿ 'ಪಂಪಭಾರತ' ಎಂಬ ಹೆಸರನ್ನು ಪಡೆದಂತೆ ಅಭಿನವ ಪಂಪನ ರಾಮಾಯಣವು 'ಪಂಪ ರಾಮಾಯಣ' ಎಂಬ ಜನಪ್ರಿಯ ನಾಮವನ್ನು ಪಡೆದಿದೆ. ನಾಗಚಂದ್ರನ ಕವಿತಾಶಕ್ತಿ ಸಂಪೂರ್ಣವಾಗಿ ಅರಳಿರುವುದು ಈ ಕಾವ್ಯದಲ್ಲಿಯೆ. ಇಲ್ಲಿನ ರಾವಣನ ಪಾತ್ರಸೃಷ್ಟಿ ಲೋಕೋತ್ತರವಾಗಿದೆ. ಕವಿ ತನಗೆ ಪ್ರಿಯವಾದ ಈ ಪಾತ್ರವನ್ನು ಜೈನನನ್ನಾಗಿಯೆ; ಪರಿಭಾವಿಸಿದ್ದಾನೆ. ಇಲ್ಲಿ ಮಹಾನುಭಾವನ ಪಟ್ಟಕ್ಕೇರಿರುವ ರಾವಣ 'ಪರಾಂಗನಾವಿರತಿವ್ರತ' ಧಾರಿಯಾಗಿದ್ದಾನೆ. ಒಮ್ಮೆ ಆತನು ನಳಕೂಬರನ ರಾಜಧಾನಿಯಾದ 'ದುರ್ಲಂಘ್ಯಪುರ'ಕ್ಕೆ ಮುತ್ತಿಗೆ ಹಾಕಿದ. ಅದು ದುರ್ಲಂಘ್ಯವಾಗಿತ್ತು. ನಳಕೂಬರನ ಹೆಂಡತಿಯಾದ ಉಪರಂಭೆ ರಾವಣನಲ್ಲಿ ಮೋಹಗೊಂಡು ಅದನ್ನು ಗೆಲ್ಲುವ ಉಪಾಯವನ್ನು ಹೇಳಿಕೊಟ್ಟಳು. ವಿಜಯಿಯಾದ ರಾವಣನು ಒಲಿದು ಬಂದ ಆ ದಿವ್ಯ ಸುಂದರಿಗೆ ವಿವೇಕವನ್ನು ಹೇಳಿ ಸನ್ಮಾರ್ಗಕ್ಕೆ ತರುತ್ತಾನೆ. ಇಂತಹ ಮಹಾನುಭಾವನಾದ್ದರಿಂದಲೆ ಭೂತ ಭವಿಷ್ಯತ್ ವರ್ತಮಾನಗಳನ್ನು ತಿಳಿಸಬಲ್ಲ 'ಅವಲೋಕಿನೀವಿದ್ಯೆ' ಅವನ ಕೈವಶವಾಗಿದೆ. ಏನಾದರೇನು ? ಬೆಂಕಿಯ ಕಿಡಿ ಮಸಿಯಾದಂತೆ ಅವನ ಮನಸ್ಸು ಶ್ರೀರಾಮನ ಪತ್ನಿಯಾದ ಸೀತೆಯಲ್ಲಿ ಅನುರಕ್ತವಾಗುತ್ತದೆ. ಬರಸಿಡಿಲ ಬಳಿಯಲ್ಲಿರುವ ಕುಡಿ ಮಿಂಚಿನಂತೆ ಶ್ರೀರಾಮನ ಬಳಿಯಲ್ಲಿದ್ದ ಸೀತೆಯನ್ನು ಕಾಣುತ್ತಲೆ–

ಬಲೆ ದೃಷ್ಟಿಗೆ, ವಜ್ರದ ಸಂ । ಕಲೆ ಹೃದಯಕ್ಕೆನಿಪ ರೂಪವತಿ ಜಾನಕಿ ಕ
ಣ್ಬೊಲದೊಳಿರೆ ಪದ್ಮ ಪತ್ರದ । ಜಲಬಿಂದುವಿನಂತೆ ಚಲಿತಮಾದುದು ಚಿತ್ತಂ
ಇದನ್ನು ಕಂಡ ಅವಲೋಕಿನೀ ವಿದ್ಯೆ:
ಅನ್ನೆಯದಿಂ ನಡೆವವರಂ । ನೀನ್ ನಿಯಮಿಸುವೈ ದಶಾಸ್ಯ ಪೇಱನಾವನ್ ನಿ
ನ್ನನ್ನಿಯಮಿಸುವಂ, ಮುನ್ನೀರ್ । ಬೆನ್ನೀರೆನೆ ಬೆರಸಲಣ್ಣ ತಣ್ಣೀರೊಳವೆ ?

ಎಂದು ಹೇಳಿತು. ಮನಸ್ಸನ್ನು ಹತೋಟಿಗೆ ತೆಗೆದುಕೊಳ್ಳಲಾರದ ರಾವಣ ವಿದ್ಯೆಯನ್ನು ಗದರಿಸಿ ಬಾಯಿಮುಚ್ಚಿಸಿದ. ಅಲ್ಲಿಂದ ಮುಂದೆ ಅವನ ಅಧಃಪತನ ಪ್ರಾರಂಭವಾಯಿತು. ಅವನು ಪೂರ್ವಾರ್ಜಿತ ಕರ್ಮದಿಂದ ದುರ್ವಿಧಿಯ ಕೈಗೊಂಬೆಯಾದ. ಕಾಳೋರಗನನ್ನು ಕೈಲಿ ಹಿಡಿದ ಬಾಲಕನಂತೆ ಅವನು ಸೀತೆಯನ್ನು ಎತ್ತಿಕೊಂಡು ಹೋದ, ಸೆರೆಯಲ್ಲಿಟ್ಟ, ರಾಮ ರಾವಣ ಯುದ್ಧ ಸನ್ನಿಹಿತವಾಯಿತು. ರಾವಣನು 'ಬಹುರೂಪಿಣೀ ವಿದ್ಯೆ'ಯನ್ನು ಸಾಧಿಸಿ ಅಜೇಯನಾದ. ಇದನ್ನು ಕಂಡು ಸೀತೆ ಭಯದಿಂದ ತನ್ನ ಗಂಡನ ಜೀವದಾನವನ್ನು ಬೇಡಿದಳು. ಆ ಪತಿವ್ರತೆಯನ್ನು ಕಂಡು 'ಕದಡಿದ ಸಲಿಲಂ ತಿಳಿವಂದದೆ' ರಾವಣನ ಮನಸ್ಸು ತಿಳಿಯಾಯಿತು. ಆತನು ಕೃತಕಾರ್ಯಕ್ಕಾಗಿ ಪಶ್ಚಾತ್ತಾಪದಿಂದ

ರಾಮನಿನಗಲ್ಚಿ ತಂದಾ । ನೀ ಮಾನಿನಿಗಿನಿತು ದುಃಖಮಂ ಪುಟ್ಟಿಸಿದೆಂ
ಕಾಮವ್ಯಾಮೋಹದಿನಾ । ಶಾಮುಖಮಂ ಪುದಿಯೆ ದುರ್ಯಶಪಟಹರವಂ

ಎಂದುಕೊಂಡು, ಒಡನೆಯೆ ಸೀತೆಯನ್ನು ರಾಮನಿಗೆ ಒಪ್ಪಿಸಬೇಕೆಂದುಕೊಳ್ಳುತ್ತಾನೆ. ಅದಕ್ಕೆ ಮುನ್ನವೇ ಪ್ರಾಣಕ್ಕೆ ಎರವಾಗುತ್ತಾನೆ. ಹೀಗೆ ದುರಂತನಾಯಕನಾಗಿ ಸಾಯುವ ರಾವಣನಲ್ಲಿ ಕವಿಗಿರುವ ಸಹಾನುಭೂತಿ, ಅನುಕಂಪ, ಆತ್ಮೀಯತೆ ಕಾವ್ಯದ ಉದ್ದಕ್ಕೂ ಅಲ್ಲಲ್ಲಿ ಮಿಂಚುತ್ತದೆ.

ನಾಗಚಂದ್ರನನ್ನು 'ಅರ್ಥಾಂತರನ್ಯಾಸಪ್ರಿಯ' ಎಂದು ಕರೆಯುತ್ತಾರೆ. ಆತನ ಈ ಅರ್ಥಾಂತರನ್ಯಾಸದ ಒಲವು ಕಾವ್ಯಶೈಲಿಗೆ ಸತ್ವವನ್ನು ಒದಗಿಸಿದೆ. 'ಮುನ್ನೀರ್ ಬೆನ್ನೀರೆನೆ ಬೆರಸಲಣ್ಣ ತಣ್ಣೀರೊಳವೆ ?' 'ಗುಣಹೀನನ ಸಿರಿಗಿಂತಂ ಗುಣಿಗಳ ಬಡತನವೆ ಲೇಸು' ಇಂತಹ ನುಡಿಗಟ್ಟುಗಳು ಅಭಿನವ ಪಂಪನ ಪ್ರತಿಭೆ, ಕಲ್ಪನಾಶಕ್ತಿಗಳಿಗೂ ಲೋಕಾನುಭವಕ್ಕೂ ಹಿಡಿದ ಸೊಡರಿನಂತಿವೆ. ಆತನ

ಕಥಾಸಂವಿಧಾನ, ಸನ್ನಿವೇಶ ರಚನೆ, ಪಾತ್ರಸೃಷ್ಟಿ – ವರ್ಣನಾವೈಖರಿಗಳು 'ಅಭಿನವ ಪಂಪ'ನೆಂಬ ಆತನ ಬಿರುದನ್ನು ಸಾರ್ಥಕಗೊಳಿಸಿವೆ.

೯. ನಯಸೇನ

ನಯಸೇನ ಕವಿಯ ಕಾಲ ಕ್ರಿ.ಶ. ೧೧೧೨. ಆತನು ಬರೆದ ಕಾವ್ಯ ಧರ್ಮಾಮೃತ. ೧೪ ಆಶ್ವಾಸಗಳ ಈ ಕಾವ್ಯದಲ್ಲಿ 'ಜಿನಮತದೊಳೆನಿತು ಸಾರಮದನಿತುಂ ಲೇಸಾಗಿ ತೋರ್ಪುದು' ಎಂದು ಕವಿ ಹೇಳಿಕೊಂಡಿದ್ದಾನೆ. ಆತನು 'ಸುಕವಿಜನ ಮನಃ ಪದ್ಮಿನೀರಾಜಹಂಸ', 'ಸುಕವಿನಿಕರಪಿಕ ಮಾಕಂದ' ಎಂದೂ 'ದಿಗಂಬರದಾಸ', 'ಸೂತ್ರ ಕವಿತಾ ವಿಲಾಸ' ಎಂಬ ಬಿರುದುಗಳುಳ್ಳವನೆಂದೂ ತಿಳಿದು ಬರುತ್ತದೆ. ಈತನ ಕಾವ್ಯ ಒಂದೊಂದು ಆಶ್ವಾಸದಲ್ಲಿಯೂ ಧರ್ಮದ ಒಂದು ಅಂಗವು ಸುಂದರವಾದ ಒಂದು ಕಥೆಯ ಮೂಲಕ ಅಭಿವ್ಯಕ್ತವಾಗಿದೆ.

ನಯಸೇನನು ಪಂಪ ರನ್ನಾದಿಗಳಂತೆ ಮಹಾಕವಿಯಲ್ಲದಿದ್ದರೂ, ಕನ್ನಡದ ಮಾರ್ಗೀಶೈಲಿಯನ್ನು ಪ್ರತಿಭಟಿಸಿ, ಶುದ್ಧ ದೇಸೀ ಶೈಲಿಯನ್ನು ಚಂಪೂಕಾವ್ಯವನ್ನು ಹೊರಕ್ಕೆ ತಂದ ಕ್ರಾಂತಿಕಾರ. ಅವನ ಸವಾಲನ್ನು ಕೇಳಿ–

ಸಕ್ಕದಮಂ ಪೇಳ್ವೊಡೆ ನೆರೆ । ಸಕ್ಕದಮಂ ಪೇಳ್ಗೆ ; ಶುದ್ಧ ಕನ್ನಡದೊಳ್ ತಂ
ದಿಕ್ಕುವುದೇ ಸಕ್ಕದಂಗಳ । ತಕ್ಕುದೆ ಬೆರಸಲ್ಕೆ ಘೃತಮುಮಂತೈಲಮುಮಂ ?

ಕಥೆಗಳ ಮೂಲಕ ಧರ್ಮನಿರೂಪಣೆಗೆಂದು ಹೊರಟಿರುವ ನಯಸೇನ ಕವಿ ಪರಮತವಿಡಂಬನೆಯ ಮೂಲಕ ಸ್ವಮತಸ್ಥಾಪನೆಗೆ ಕೈ ಹಾಕಿದ್ದಾನೆ. ಆದ್ದರಿಂದ ಆತನ ಮಾತು ಸಾಕಷ್ಟು ಹರಿತವಾಗಿದೆ. ಸತ್ಯಸ್ಥಾಪನೆಗೆ ಹೊರಟಾಗ ಪ್ರತಿಭಟನೆ ಬರುವುದು ಸ್ವಾಭಾವಿಕ.

ಕನ್ನಡಿಯಂ ತೋಱುವಡ । ತ್ಯುನ್ನತ ಸಲ್ಲಕ್ಷಣಂಗೆ ಮುನಿಸಾಗದು, ಮ
ತ್ತೆನ್ನದೆ ಮೂಕೊಱೆಯಂಗಂ । ಕನ್ನಡಿಯಂ ತೋಱೆ ಬಡಿಗುಮಿಱಿಗೆಕೊಲ್ಗುಂ

ಎಂಬುದು ಅವನಿಗೆ ಗೊತ್ತಿದ್ದ ವಿಷಯವೇ. ನಗುನಗುತ್ತಲೆ ಎದುರಾಳಿಯನ್ನು ಮರ್ಧಿಸುವ ಅವನ ಕವಿಜಾಣ್ಮೆ ಮನೋಹರವಾಗಿದೆ. ಅವನ ಹಾಸ್ಯ, ಕಾಕು ಎಷ್ಟು ಪ್ರಭಾವಯುತವಾಗಿದೆ. ನೋಡಿ–

ಕಲಿತನದಿಂದಂ ಲೋಗರ್ । ಪುಲಿಯಂ ಪಿಡಿದೊಡಮದೇಂ ಬಿಡೆಂಬರ್ ತಾಮೊಂ
ದಿಲಿಯಂ ಪಿಡಿದೊಡಮುದ ಪೆ । ರ್ಬುಲಿಯೆಂಬರ್ ದುರ್ಜನರ್ಗೆ ತಾನಿದು ಸಹಜಂ

ಕಥೆಗಳ ಮೂಲಕ ಧರ್ಮಪ್ರಸಾರ, ಪರಮತ ವಿಡಂಬನೆಯ ಮೂಲಕ ಸ್ವಮತ ಸ್ಥಾಪನೆ–ಇದರ ಪರಂಪರೆಯೊಂದಕ್ಕೆ ನಯಸೇನ ಆದಿಪುರುಷ. ಈತನ ವಿಡಂಬನೆ ಹರಿತವಾಗಿ, ಬುದ್ಧಿಪೂರ್ವಕವಾದುದಾದರೂ ವಿವೇಚನಾರಹಿತವಾದುದಲ್ಲ, ಗಾಂಭೀರ್ಯದ ಎಲ್ಲೆಯನ್ನು ಮೀರಿಲ್ಲ. ಆತನ ಕಾವ್ಯದಲ್ಲಿ ಬರುವ 'ನಾಯಿಗೆ ನವಿಲಾಟವೆ ?' 'ಕನಸಿನ ಭತ್ತಕ್ಕೆ ಗೋಣಿ ಒಡ್ಡಿದ' 'ಸಾಕ್ಷಿಯಿಲ್ಲದೆ ಸಾಲ ಕೊಟ್ಟ ಹಾಗೆ', 'ನಾಯಿಯ ಬಾಲ ಡೊಂಕು' ಇತ್ಯಾದಿ ಗಾದೆಗಳು ಜನರ ಮನಸ್ಸನ್ನು ಆಕರ್ಷಿಸಿ, ಆತನ ಕಾವ್ಯವನ್ನು ಜನಪ್ರಿಯವಾಗಿ ಮಾಡಿದ್ದರೂ ಆಶ್ಚರ್ಯವಿಲ್ಲ. ಆತನ ಈ ಗಾದೆಗಳು ಇಂದಿಗೂ ಸಜೀವವಾಗಿ ಉಳಿದುಕೊಂಡು ಬಂದಿವೆ.

೧೦. ಬ್ರಹ್ಮಶಿವ

೧೨ನೆಯ ಶತಮಾನದ ಮಧ್ಯಭಾಗದಲ್ಲಿದ್ದ ಬ್ರಹ್ಮಶಿವನು ನಯಸೇನನ ಪರಮತ ವಿಡಂಬನದ ಸಂಪ್ರದಾಯವನ್ನು ಮುಂದುವರಿಸಿ, 'ಸಮಯ ಪರೀಕ್ಷೆ' 'ತ್ರೈಲೋಕ್ಯ ಚೂಡಾಮಣಿ' ಎಂಬ ಎರಡು ಗ್ರಂಥಗಳನ್ನು ರಚಿಸಿದ್ದಾನೆ. 'ಸಮಯ ಪರೀಕ್ಷೆ' ಕವಿಯ ಸಮಕಾಲೀನ ಮತಗಳನ್ನು ಪರೀಕ್ಷಿಸಿ

ಅವುಗಳ ಯೋಗ್ಯತೆಯನ್ನು ನಿರ್ಣಯಿಸುವ ಗ್ರಂಥ. ೧೫ ಅಧಿಕಾರಗಳಲ್ಲಿರುವ ಈ ಕಾವ್ಯದಲ್ಲಿ ಕಂದ, ವೃತ್ತಗಳೆ ಹೊರತು ಗದ್ಯದ ಪ್ರಸಕ್ತಿ ಇಲ್ಲ. ಇತರ ಮತಗಳ ದೋಷಗಳನ್ನು ಎತ್ತಿ ತೋರಿಸಿ, ಜೈನ ಧರ್ಮವೇ ಸರ್ವಗ್ರಾಹ್ಯವೆಂದು ಸಿದ್ಧಾಂತ ಮಾಡಲು ಹೊರಟಿದ್ದಾನೆ, ಬ್ರಹ್ಮಶಿವ. ಆತನು ಒಮ್ಮೆ ಜೈನಮತದಿಂದ ಶೈವಧರ್ಮಕ್ಕೆ ಹೋಗಿ, ಪುನಃ ಜೈನಮತಕ್ಕೆ ಹಿಂದಿರುಗಿದನು. ಅಲ್ಲದೆ, ತನಗೆ ಸೌರ, ಕೌಳವ, ವೇದ, ಸ್ಮೃತಿ, ಪುರಾಣಗಳ ಹುರುಳೆಲ್ಲ ತಿಳಿದಿರುವುದೆಂದು ಕವಿ ಹೇಳಿಕೊಂಡಿದ್ದಾನೆ. ಬಹುಶಃ ಇತರ ಮತಗಳ ಧರ್ಮಸ್ವರೂಪಕ್ಕಿಂತಲೂ ಮತಾಚಾರಗಳ ಹುಳುಕುಗಳೇ ಆತನಿಗೆ ಎದ್ದು ಕಂಡಿರಬೇಕು. ಅವುಗಳನ್ನು ಎತ್ತಿ ಹಿಡಿದು ಗೇಲಿಗೆಬ್ಬಿಸುವ ಕಾರ್ಯದಲ್ಲಿ ಕವಿ ಪ್ರವೃತ್ತನಾಗಿದ್ದಾನೆ. ಕವಿಯ 'ತ್ರೈಲೋಕ್ಯ ಚೂಡಾಮಣಿ' ೩೬ ವೃತ್ತಗಳಿಂದ ಕೂಡಿದ ಜಿನಸ್ತೋತ್ರ. ಆದರೆ ಅದರಲ್ಲಿ ಜಿನಭಕ್ತಿಗಿಂತ ಮತವಿಡಂಬನೆಯೇ ಹೆಚ್ಚು. ಆ ಕಾಲದ ಸಾಮಾಜಿಕ, ಧಾರ್ಮಿಕ ಸ್ಥಿತಿಗಳನ್ನು ಅರಿತುಕೊಳ್ಳಲು ಸಹಾಯಕವಾಗಿವೆ, ಆತನ ಕಾವ್ಯಗಳು.

ಬ್ರಹ್ಮಶಿವನ ಭಾಷೆ ಸುಲಭ, ಬಂಧ ಬಂಧುರ; ಕವಿಯ ನಾಲಗೆ ಮಾತ್ರ ಬಹು ಹರಿತ. ನಿರ್ದಯವಾಗಿ, ನಿರ್ದಾಕ್ಷಿಣ್ಯವಾಗಿ, ನಿರ್ಭಯವಾಗಿ, ಕಠೋರವಾಗಿ ಆತ ಪರಮತ ಖಂಡನೆಗೆ ತೊಡಗುತ್ತಾನೆ – ಇದು ವೈಷ್ಣವರ ಮೇಲೆ ಮಾಡಿದ ಗದಾಪ್ರಹಾರ.

ಧರೆಗೊಡೆಯಂ ಚಕ್ರೇಶಂ । ತಿರವನೆ ಬಲಿಯಲ್ಲಿ ಬೇಡಿ ಮೂಱಡಿನೆಲನಂ ?
ಸಿರಿಯೊಡೆಯಂ ಕೀಳಾಳಾ । ಗಿರಲಱಿವನೆ ಪರಿಸುತಂ ಕಿರೀಟಿಯ ರಥಮಂ ?

ಇನ್ನು ಶಿವನ ಗ್ರಹಚಾರ ಬಿಡಿಸುತ್ತಾನೆ–

ಅಱಿವಿಲ್ಲೆಂಬುದನಕ್ಷ ಸೂತ್ರ ಮಣಿಯಿಂ, ಕಾರುಣ್ಯ ಮಿಲ್ಲೆಂಬುದಂ
ವಿಱುಗುತ್ತಿರ್ಪ ತ್ರಿಸೂಳದಿಂ, ತನಗಣಂ ನಾಣ್ ಮುನ್ನಮಿಲ್ಲೆಂಬುದಂ
ಮೋಱಗೆಟ್ಟಿರ್ಪ ಲಿಂಗದಿಂ ತಪದ ಮಾತಿಲ್ಲೆಂಬುದಂ ಗೌರಿಯಿಂ
ದಱಿದೇನೆಂದು ಜಡರ್ ಮೃಡಂಗೆಱಗುವರ್ ತ್ರೈಲೋಕ್ಯ ಚೂಡಾಮಣೀ ?

ಮೇಲಿನ ಎರಡು ಪದ್ಯಗಳು ಆತನ ಎರಡು ಕಾವ್ಯಗಳಿಂದ ಕ್ರಮವಾಗಿ ಆಯ್ದುಕೊಂಡವು. ಅವು ಆತನ ಕಾವ್ಯಗಳ ಸ್ವರೂಪವನ್ನು ದಿಗ್ದರ್ಶಿಸುತ್ತವೆ. ಬ್ರಹ್ಮನೇ ಮೊದಲಾದ ಎಲ್ಲ ದೈವಗಳೂ ಆತನ ವಿಡಂಬನೆಗೆ ಆಹುತಿಯಾಗಿವೆ. ಜೈನಧರ್ಮದ ಭೇರಿನಿನಾದವು ಡಂಗುರ ಹೊಡೆದು ಹೀಗೆ ಸಾರುತ್ತಿದೆಯಂತೆ!

ಪುಸಿವವನೆ ತೊಲಗು, ಹಿಂಸೆಯೊ । ಳೆಸುಗುತ್ತಿರ್ಪವನೆ ತೊಲಗು, ಪರವಧು ವಿಂಗಾ
ಟಿಸುವವನೆ ತೊಲಗೆನುತ್ತುಂ । ಪಸರಿಸುವುದು ಜೈನಧರ್ಮ ಭೇರೀ ನಿನದಂ

ಬ್ರಹ್ಮಶಿವನ ವಿಡಂಬನೆಯಲ್ಲಿಯೂ ಮೋಹಕವಾದ ತಿಳಿಹಾಸ್ಯವಿದೆ. ಅವನ ಕೈಲಿ ಬೈಸಿಕೊಳ್ಳುವುದೂ ಅನೇಕ ವೇಳೆ ಹಿತವಾಗಿರುತ್ತದೆ.

೧೧. ವೃತ್ತ ವಿಲಾಸ

ನಯಸೇನನಲ್ಲಿ ಕುಡಿಯಿಟ್ಟು, ಬ್ರಹ್ಮ ಶಿವನಲ್ಲಿ ಬೆಳೆದ ಪರಮತ ವಿಡಂಬನೆ ವೃತ್ತವಿಲಾಸನಲ್ಲಿ ಹೆಮ್ಮರವಾಗಿ ಬೆಳೆದುನಿಂತಿದೆ. ಸಂಸ್ಕೃತದ ಧರ್ಮಪರೀಕ್ಷೆಯನ್ನು ಕನ್ನಡದಲ್ಲಿ ಬರೆಯುತ್ತಿರುವುದಾಗಿ ಕವಿ ಹೇಳಿಕೊಂಡಿದ್ದಾನೆ. ಈತ ಒಳ್ಳೆಯ ಕಥೆಗಾರ. ಈತನ ಕಾವ್ಯ ಆರಂಭವಾಗುವುದೇ ಒಂದು ಕಥೆಯಿಂದ. ಮನೋವೇಗ, ಪವನವೇಗರೆಂಬ ರಾಜಕುಮಾರರಿಬ್ಬರು ಪಾಟಲಿಪುರಕ್ಕೆ ಹೋಗಿ, ಅಲ್ಲಿನ ಬ್ರಹ್ಮದೇವಾಲಯದಲ್ಲಿದ್ದ ನಗಾರಿಯನ್ನು ಬಾರಿಸಿ, ಸಮೀಪದಲ್ಲಿದ್ದ ಸಿಂಹಾಸನದಲ್ಲಿ ಕುಳಿತರು. ನಗಾರಿ ಹೊಡೆದವರು ಬ್ರಾಹ್ಮಣರನ್ನು ವಾದದಲ್ಲಿ ಗೆದ್ದ ಮೇಲೆ ಸಿಂಹಾಸನವೇರಬೇಕು. ಇದನ್ನು ಅಲ್ಲಿದ್ದ

ಬ್ರಾಹ್ಮಣರು ಅವರಿಗೆ ತಿಳಿಸಿ ''ನೀವು ಯಾವ ಶಾಸ್ತ್ರದಲ್ಲಿ ಪಂಡಿತರು ?'' ಎಂದು ಕೇಳಿದರು. ರಾಜಪುತ್ರರು ತಮಗೇನೂ ತಿಳಿಯದೆಂದು ಹೇಳಿ, ನೆಲದ ಮೇಲೆ ಕುಳಿತು, ಕಥೆಗಳ ಮೂಲಕ ಬ್ರಾಹ್ಮಣರ ಮತವನ್ನು ಖಂಡಿಸಿ, ಜೈನಧರ್ಮ ಪತಾಕೆಯನ್ನು ಮೇಲೆತ್ತಿದ್ದರು. ಆ ಕಥೆಗಳೇ 'ಧರ್ಮ ಪರೀಕ್ಷೆ'ಯ ತಿರುಳು.

ಕವಿಯ ಕಥಾನಿರೂಪಣೆ ಸರಳ ಸುಂದರವಾಗಿದೆ. ನಗೆಯ ತರಂಗಗಳನ್ನು ಎಬ್ಬಿಸುತ್ತಿದೆ. ದಿವಂಗತ ಆರ್. ನರಸಿಂಹಾಚಾರ್ಯರ 'ನಗೆಗಡಲು' ಇಲ್ಲಿಂದಲೆ ಎತ್ತಿ ಕೊಂಡುದೆಂಬುದನ್ನು ತಿಳಿದರೆ, ಇಲ್ಲಿನ ಹಾಸ್ಯದ ಸ್ವರೂಪ ಅರ್ಥವಾದೀತು. ವೃತ್ತವಿಲಾಸ ಒಳ್ಳೆಯ ಕಥೆಗಾರನಾಗಿರುವಂತೆ ಒಳ್ಳೆಯ ಕವಿಯೂ ಆಗಿದ್ದಾನೆ-

ಪರಿಹರಿಸಿ ನಿದ್ರೆ ಯುಡುಗಿದ । ಕೊರಲಂ ನಿಮಿರ್ದೆತ್ತಿ ನೋಡಿ ನಾಲ್ದೆ ಸೆಯಂ ಕೇ
ಸರಮಂ ಬಿದಿರ್ದೆಟಿಂಕೆಯ । ನೆರಡುಂ ಬಡಿದದ್ದು ಕೋಳಿ ಕೂಗಿದುದಾಗಳ್

ಅವನ ಕವಿತೆಯಲ್ಲಿ ಕಾಣ ಬರುವ ಸಹಜತೆ ಗಮನಾರ್ಹವಾದುದು. ಪದ್ಯ ಸುಂದರವಾಗಿರುವಷ್ಟೆ ಭಾವ ಸರಳವಾಗಿದೆ. ಈ ಸಹಜ ಸರಳತೆಯೇ ಅವನ ವಿಡಂಬನೆಯ ಹರಿತಕ್ಕೆ ಕಾರಣವಾಗಿದೆ.

ಈ ಕವಿಯ ಕಾಲ ೧೨ನೆಯ ಶತಮಾನದ ಮಧ್ಯ ಭಾಗವೆಂದು ಕವಿಚರಿತೆಕಾರರು ತಿಳಿಸುತ್ತಾರೆ. ಆದರೆ ಈತನು ೧೪ನೆಯ ಶತಮಾನದವನೆಂದು ಈಚಿನ ವಿದ್ವಾಂಸರ ಮತ. ಆದರೂ ಈತನು ನಯಸೇನ, ಬ್ರಹ್ಮಶಿವರ ಪಂಥಕ್ಕೆ ಸೇರಿದವನಾದುದರಿಂದ ಇಲ್ಲಿಯೇ ಅವನ ವಿಚಾರವನ್ನು ಕುರಿತು ಪ್ರಸ್ತಾಪಿಸಲಾಗಿದೆ.

೧೨. ಕರ್ಣಪಾರ್ಯ (ಕ್ರಿ.ಶ. ೧೧೪೦)

ಈ ಕವಿಯು ಇಪ್ಪತ್ತೆರಡನೆಯ ತೀರ್ಥಂಕರನಾದ ನೇಮಿನಾಥಪುರಾಣವನ್ನು ಬರೆದಿದ್ದಾನೆ. ಕವಿಯು ಜನನ ಪಂಚಕಲ್ಯಾಣಗಳ ಜೊತೆಗೆ ಹರಿವಂಶ, ಕುರುವಂಶಗಳ ಕಥೆಯನ್ನು ಇದರಲ್ಲಿ ತಂದಿದ್ದಾನೆ. ಇದೇ ಇದರ ವೈಶಿಷ್ಟ್ಯ. ಜೈನಧರ್ಮಾನುಸಾರವಾದ ಮಹಾಭಾರತವೂ ಶ್ರೀ ಕೃಷ್ಣಚರಿತ್ರೆಯೂ ವೈದಿಕಸಾಹಿತ್ಯದಿಂದ ಭಿನ್ನವಾಗಿವೆ. ಈತನ ಕಾವ್ಯಬಂಧ ಪ್ರೌಢವಾಗಿದೆ. ಶಬ್ದಾಲಂಕಾರಗಳ ಕುಣಿತವಿದೆ. ೧೮ ಬಗೆಯ ವರ್ಣನೆಗಳ ವಿಜೃಂಭಣೆಯಿದೆ. ಈತನಿಗೆ, 'ಸಹಜಕವಿತಾರಸೋದಯ', 'ಭವ್ಯಜನಮನ ಮಾರ್ತಾಂಡ', 'ಸಮ್ಯಕ್ತ್ವ ರತ್ನಾಕರ' ಇತ್ಯಾದಿ ಬಿರುದುಗಳಿವೆ. ಇವುಗಳಲ್ಲಿ ಮೊದಲನೆಯದನ್ನು ಸರಿಯೆಂದು ಸಾಧಿಸುವುದು ಕಷ್ಟ ಕಾವ್ಯಕ್ಕೆ ಜೀವಾಳವಾದ ರಸಕ್ಕೆ ಇಲ್ಲಿ ಅಭಾವವಾಗಿದೆ.

'ಪಂಪಯುಗ'ದ ಸಾಹಿತ್ಯೇತಿಹಾಸವನ್ನು ಮುಗಿಸುವ ಮುನ್ನ ಈ ಯುಗದಲ್ಲಿ ಗಣ್ಯರಾದ ಮತ್ತೆ ಕೆಲವು ಶಾಸ್ತ್ರಗ್ರಂಥಗಳ ಕರ್ತೃಗಳನ್ನು ನೆನೆಯಬಹುದು. ಗಣಿತಶಾಸ್ತ್ರವನ್ನು ಮೊತ್ತ ಮೊದಲು ಕನ್ನಡಕ್ಕೆ ತಂದ 'ಗಣಿತವಿಲಾಸ'ನೆಂಬ ಬಿರುದಾಂಕಿತ ರಾಜಾದಿತ್ಯ (೧೧೨೦), 'ಗೋವೈದ್ಯ'ವನ್ನು ಬರೆದ ಕೀರ್ತಿವರ್ಮ (೧೧೨೫) 'ಕಲ್ಯಾಣಕಾರಕ'ವೆಂಬ ವೈದ್ಯ ಗ್ರಂಥವನ್ನು ಬರೆದ 'ವಿಚಿತ್ರ ಕವಿ' ಜಗದ್ದಳ ಸೋಮನಾಥ (೧೧೫೦), 'ಕಾವ್ಯವಲೋಕನ', 'ಭಾಷಾಭೂಷಣ'

'ವಸ್ತುಕೋಶ'ಗಳನ್ನು ಬರೆದ ಎರಡನೆಯ ನಾಗವರ್ಮ (೧೧೪೫) 'ಉದಯಾದಿತ್ಯಾಲಂಕಾರ' ವನ್ನು ಬರೆದ ಉದಯಾದಿತ್ಯ (೧೧೫೦) ಮೊದಲಾದವರು ಉಲ್ಲೇಖಾರ್ಹರು. ಇವರಲ್ಲಿ ಕೆಲವರು ಒಳ್ಳೆಯ ಕವಿತಾಶಕ್ತಿಯುಳ್ಳವರು; ಕೆಲವರು ಕಾವ್ಯಗಳನ್ನು ಬರೆದಿರುವರೆಂಬ ಪ್ರತೀತಿ. ಇವರೆಲ್ಲರೂ ಕನ್ನಡ ಸಾಹಿತ್ಯದ ತುಷ್ಟಿ ಪುಷ್ಟಿಗಳಿಗೆ ಕಾರಣರಾದರು.

೫. ಹರಿಹರಯುಗ

ಪಂಪಯುಗದಲ್ಲಿ ಕಾವ್ಯಸೃಷ್ಟಿಗೆ ಕೈಹಾಕಿದವರೆಲ್ಲರೂ ಸಾಮಾನ್ಯವಾಗಿ ಜೈನರು; ರಾಜ, ಮಹಾರಾಜರ ಕೃಪಾಶ್ರಯದಲ್ಲಿ ತುಂಬುಜೀವನವನ್ನು ಬಾಳಿದವರು. ಅವರ ಕಾವ್ಯಗಳು ಸಂಸ್ಕೃತ ಗ್ರಂಥಗಳ ಆಧಾರದಿಂದ ಹುಟ್ಟಿದವುಗಳು. ಅವುಗಳ ವಸ್ತು, ರೀತಿಗಳು ಸಂಸ್ಕೃತದಿಂದ ಪ್ರಭಾವಿತವಾದವುಗಳು. ಅವುಗಳ ಹೆಗ್ಗುರಿ ವಸ್ತು ನಿರೂಪಣೆಯಷ್ಟೆ ಪ್ರತಿಭೆ, ಪಾಂಡಿತ್ಯಗಳ ಪ್ರದರ್ಶನವಾಗಿತ್ತು. ರಾಜರ ಅನುಗ್ರಹ ಮತ್ತು ಪಂಡಿತರ ಮೆಚ್ಚಿಗೆಗಳಿಗೆ ಕೈ ನೀಡಿದ ಈ ಕಾವ್ಯಗಳ ಭಾಷೆ, ರಾಜಾಸ್ಥಾನದ ಪೋಷಾಕಿನಂತೆಯೆ ಭವ್ಯವಾಗಿರಬೇಕಾಗಿತ್ತು. ಕವಿಗಳು ಪ್ರತಿಭೆ ಪಾಂಡಿತ್ಯಗಳಿಂದ ಮಂಡಿತಳಾದ ಕಾವ್ಯದೇವಿ ಅವರ ಆಶ್ರಯದಾತರಂತೆ ಸಿಂಹಾಸನಸ್ಥಳಾಗಿ ಕುಳಿತಿದ್ದಳು. ಜನಸಾಮಾನ್ಯರು ಅವುಗಳ ವೈಭವವನ್ನು ದೂರದಿಂದ ಕಂಡು ನಮಸ್ಕರಿಸಬೇಕಾಗುತ್ತೆ ಹೊರತು, ವೈಭವದಲ್ಲಿ ಪಾಲುಗೊಳ್ಳುವಂತಿರಲಿಲ್ಲ.

ಕವಿಕಾವ್ಯ ಸಾರ್ಥಕವಾಗಬೇಕಾದರೆ ಆದಷ್ಟು ಹೆಚ್ಚು ಜನ ಅವುಗಳನ್ನು ಓದಬೇಕು. ಅದರ ಪಾಂಡಿತ್ಯದ ಹೆಪ್ಪುಗಟ್ಟಿ ಕುಳಿತಿದ್ದ ಅಂದಿನ ಕಾವ್ಯಗಳು ಜನಸಾಮಾನ್ಯರ ಸ್ವತ್ತಾಗುವಂತಿರಲಿಲ್ಲ. ಅವುಗಳ ಭಾಷಾಶೈಲಿಗಳಲ್ಲಿ ಪರಿಷ್ಕರಣವಾಗಬೇಕೆಂಬ ಕೂಗು ಮೊದಲಿನಿಂದಲೂ ಇತ್ತು. ಕವಿರಾಜಮಾರ್ಗ ಕರ್ತೃ ಕನ್ನಡ ಕಾವ್ಯಗಳಲ್ಲಿ ಬಳಸುತ್ತಿದ್ದ ಸಂಸ್ಕೃತದ ವಿಚಾರದಲ್ಲಿ ಸಾಕಷ್ಟು ಆಕ್ಷೇಪಣೆಗಳನ್ನು ಎತ್ತಿದ; ಸಮರಸವಿಲ್ಲದ ಭಾಷಾಶೈಲಿಗಳು 'ನೆಲ್ಲುಂ ಮೊಸರಂ ಕುಡಿದಂತೆ', 'ಮುತ್ತು ಮೆಳಸುಂ ಕೋದಂತೆ', 'ಒತ್ತುಂಗರಡೆಯ ಮದ್ದಳೆಯ ಜರ್ಝರಧ್ವನಿಗಳವೊಲಂ ಪರುಷತರ', 'ಮರುಗುವ ಪಾಲ್ಗೆ ಅಳೆಯ ಪನಿಗಳಂ ಬೆರಸಿದವೊಲ್ ವಿರಸಂ', 'ಕೂಸಿನ ತಲೆಯೊಳ್ ಬಿಣ್ಪೊರೆಯನಿಟ್ಟವೊಲ್ ಅಸುಖಕರಂ' ಎಂದು ಹೇಳಿ, ಸಂಸ್ಕೃತ ಕನ್ನಡಗಳನ್ನು ಪರಸ್ಪರ ಬೆರೆಸುವಾಗ ಆಗುವ ಅನಾಹುತಗಳನ್ನು ಆತ ಖಂಡಿಸಿದ. ನಯಸೇನ ಕವಿ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, ಕನ್ನಡ ಬಳಸುವ ಕಡೆ ಸಂಸ್ಕೃತವನ್ನು ಇಡುವವನು ಕವಿಯೇ ಅಲ್ಲವೆಂದು ಹೇಳಿ, 'ಬೆರಸಲ್ ತಕ್ಕುದೆ ಘೃತಮುಮಂ ತೈಲಮುಮಂ'

ಎಂದು ಅಬ್ಬರಿಸಿದ, ಏನಾದರೇನು ? ನರಿಯ ಕೂಗು ಗಿರಿಗೆ ಮುಟ್ಟೀತೆ ? ಪರಿಸ್ಥಿತಿ ಹೀಗಿರುವಾಗ ೧೨ನೆಯ ಶತಮಾನದಲ್ಲಿ ಕನ್ನಡ ಸಾಹಿತ್ಯದ ವಸ್ತು ರೀತಿಗಳೆರಡರಲ್ಲೂ ಕೋಲಾಹಲಕರವಾದ ಕ್ರಾಂತಿಯೊಂದು ನಡೆದುಹೋಯಿತು. ಇದನ್ನು ಅರ್ಥಮಾಡಿಕೊಳ್ಳ ಬೇಕಾದರೆ ಆಗಿನ ಕಾಲದ ಧಾರ್ಮಿಕ ಮತ್ತು ಸಾಮಾಜಿಕ ಸ್ಥಿತಿಗಳನ್ನು ಅರ್ಥ ಮಾಡಿಕೊಳ್ಳಬೇಕು.

ಹನ್ನೊಂದನೆಯ ಶತಮಾನದಲ್ಲಿ ಚೋಳರ ದಾಳಿಗೆ ಸಿಕ್ಕಿ ಕಳೆಗುಂದಿ ಹೋದ ಜೈನಮತ ಮತ್ತೆ ಮೊದಲಿನ ಕಾಂತಿಯನ್ನು ಪಡೆಯಲಿಲ್ಲ. ಅದು ತನ್ನ ಅಸ್ತಿತ್ವವನ್ನು ಉಳಿಸಿಕೊಂಡರೆ ಸಾಕಾಗಿತ್ತು. ವೈದಿಕಮತ ಕೇವಲ ಢಾಂಭಿಕತನ, ಅರ್ಥಹೀನ ಆಚಾರ, ಜಾತೀಯತೆಗಳಿಗೆ ಸೀಮಿತವಾಗಿತ್ತೆಂದು ತೋರುತ್ತದೆ. ಉತ್ತರ ದಕ್ಷಿಣ ಕರ್ನಾಟಕದ ರಾಜರುಗಳು ಪರಸ್ಪರ ಹೋರಾಟದಲ್ಲಿ ತೊಡಗಿದ್ದರಿಂದ ರಾಜಕೀಯ ಸ್ಥಿತಿಯು ಅನಿಶ್ಚಿತವಾಗಿತ್ತು. ಆ ಅನಿಶ್ಚಿತತೆಯಲ್ಲಿ ಜನರು ಪಡುತ್ತಿದ್ದ ಕಷ್ಟಕಾರ್ಪಣ್ಯಗಳು ಒಂದು ಕಡೆ ಕುರುಡರ ಕೈಹಿಡಿದು ಹೋಗುವ ಕುರುಡರಂತೆ ವೈದಿಕ ಸಂಪ್ರದಾಯವಾದಿಗಳನ್ನು ಅನುಸರಿಸಿಕೊಂಡು ಹೋಗುತ್ತಿರುವ ಜನಜಂಗುಳಿ; ಮತ್ತೊಂದು ಕಡೆ, ಹೀಗೆ ಮೂಕಪ್ರಾಣಿಗಳಂತೆ ತಮ್ಮನ್ನು ಅನುಸರಿಸುತ್ತಿರುವ ಜನಜಂಗುಳಿಯನ್ನು ದೈವ, ಧರ್ಮಗಳ ಹೆಸರಿನಲ್ಲಿ ಶೋಷಿಸಿ, ಸ್ವಾರ್ಥಸಾಧನೆ ಮಾಡಿಕೊಳ್ಳುತ್ತಿರುವ ಧರ್ಮನಿಯಂತ್ರಣ ಕರ್ತೃಗಳ ತಂಡ; ಮಗುದೊಂದೆಡೆ – ಸಮಾಜದ ಈ ದಾರುಣ ಸ್ಥಿತಿಯನ್ನು ಕಂಡು ವಿಚಾರಪರರಾದ ಸಜ್ಜನರ ಮನಸ್ಸು ಕರಗಿತೆಂದು

ತೋರುತ್ತದೆ. ಸಮಾನ ಸ್ವಾತಂತ್ರ್ಯದ ತಳಹದಿಯ ಮೇಲೆ ನೂತನ ಸಮಾಜವೊಂದನ್ನು ಸೃಷ್ಟಿಸಲು ಅವರು ಕೈ ಹಾಕಿದರು. ಇಂತಹದರಲ್ಲಿ ೧೨ನೆ ಶತಮಾನದ ಆದಿಭಾಗದಲ್ಲಿ ಕಾಣಿಸಿಕೊಂಡ ರಾಮಾನುಜಾಚಾರ್ಯರು ಮೊದಲನೆಯವರು. ಹರಿಪಾರಮ್ಯವನ್ನು ಸಾರುವ ಈತ ವಿಶಿಷ್ಟಾದ್ವೈತವನ್ನು ಸ್ಥಾಪಿಸಿದ. ಇದನ್ನು ಕಂಡು ಶಿವಪಾರಮ್ಯವನ್ನು ನಂಬಿದ್ದ ಬ್ರಾಹ್ಮಣ ಪಂಥ ವೀರಶೈವ ಅಥವಾ ಶಕ್ತಿವಿಶಿಷ್ಟಾದ್ವೈತ ಪಂಥವನ್ನು ಸ್ಥಾಪಿಸಿರಬೇಕು. ಈ ವಿಚಾರದಲ್ಲಿ 'ಇದಮಿತ್ಥಂ' ಎಂದು ಹೇಳಲು ಸಾಮಾಗ್ರಿ ಸಾಲದು. ಬಹುಶಃ ಎರಡು ಪಂಥಗಳೂ ಏಕಕಾಲದಲ್ಲಿ ಉದಯಿಸಿರಬೇಕೆಂಬುದು ನಮ್ಮ ಊಹೆ. ವಿವರಣೆಗಳಲ್ಲಿ ವ್ಯತ್ಯಾಸವಿದ್ದರೂ ಇವೆರಡರ ಧ್ಯೇಯವೂ ಒಂದೆ. ಮೋಕ್ಷದ ಹೆದ್ದಾರಿಗೆ ಅಡ್ಡವಾಗಿದ್ದ ಮತದ ಮುಳ್ಳುಬೇಲಿಯನ್ನು ಕಿತ್ತುಹಾಕುವುದರಲ್ಲಿ ಈ ಎರಡು ಮತಗಳೂ ಸಮಾನವಾಗಿಯೆ ಶ್ರಮಿಸಿದವು. ಎಲ್ಲ ಮತಗಳಿಗೂ ಈ ಎರಡು ಮತಗಳ ಧ್ವಜದಡಿಯಲ್ಲಿ ಆಶ್ರಯ ದೊರೆಯಿತು; ಎಲ್ಲರಿಗೂ ಮೋಕ್ಷದ ಹೆಬ್ಬಾಗಿಲು ತೆರೆಯಿತು. ಶ್ರೀ ವೈಷ್ಣವಕ್ಕೆ ಮುದ್ರೆ, ತ್ರಿಪುಂಡ್ರಗಳ ಲಾಂಛನವಾದರೆ, ವೀರಶೈವಕ್ಕೆ ಲಿಂಗ, ವಿಭೂತಿಗಳ ಲಾಂಛನವಾಯಿತು. ಕರ್ಮಕಾಂಡ ವರ್ಣಾಶ್ರಮಗಳ ನಿರಾಕರಣೆಯನ್ನು ವಿಶಿಷ್ಟಾದ್ವೈತ ಒಪ್ಪುತ್ತದೆ, ಆದರೆ ಬೋಧಿಸುವುದಿಲ್ಲ; ಶಕ್ತಿ ವಿಶಿಷ್ಟಾದ್ವೈತ ಇದನ್ನು ಒಪ್ಪುತ್ತದೆ, ಸಾರುತ್ತದೆ. ಮಾನವ ಪ್ರೇಮ, ಸರ್ವಸಮಾನತೆ, ದೈವಭಕ್ತಿ, ನೈತಿಕ ಜೀವನ – ಇತ್ಯಾದಿ ಗುಣಗಳು ಎರಡು ಪಂಥಗಳಿಗೂ ಸಮಾನವಾಗಿವೆ. ಇಷ್ಟೇ ಅಲ್ಲ; ಧರ್ಮ ಜಗತ್ತಿನಲ್ಲಿ ಮೂಡಿದ ಈ ಕ್ರಾಂತಿ ಸಾಹಿತ್ಯ ಜಗತ್ತಿಗೂ ಚಲಿಸಿತು. ಎರಡು ಮತಗಳಲ್ಲಿಯೂ ಸಂತರು ಕಾಣಿಸಿಕೊಂಡು, ತಮ್ಮ ತಮ್ಮ ಮಾತೃಭಾಷೆಯಲ್ಲಿ ಧರ್ಮಬೋಧನೆಯನ್ನು ನಡೆಸಿದರು. ಶ್ರೀವೈಷ್ಣವರ 'ತೇವಾರ'ಗಳೂ ವೀರಶೈವರ 'ವಚನ'ಗಳೂ ಅವರವರ ಮಾತೃಭಾಷೆಯಿಂದ ತಮಿಳಿಗೂ ಕನನಡಕ್ಕೂ ನೀಡಿದ ಅಪೂರ್ವ ಕಾಣಿಕೆಗಳು. ನಿರಾಭರಣ ಸುಂದರಿಯಂತಿರುವ ವಚನವಾಙ್ಮಯ ಕನ್ನಡಕ್ಕೆ ಮೀಸಲಾದ, ಕನ್ನಡಕ್ಕೆ ಕೋಡನ್ನು ಮೂಡಿಸಿರುವ, ಕನ್ನಡಿಗರ ಹಿರಿಯ ಸ್ವತ್ತು. ಈ ಜಾತಿಯ ವಾಙ್ಮಯ ಭಾರತದ ಮತ್ತಾವ ಭಾಷೆಯ್ಲಲೂ, ಕಂಡುಬರುವುದಿಲ್ಲ. ಇದರ ವಸ್ತು ರೀತಿಗಳೂ, ಭಾವ ಭಾಷೆಗಳೂ ಕನ್ನಡದ ನೆಲದಲ್ಲಿಯೆ ಹುಟ್ಟಿ ಕನ್ನಡ ವಾತಾವರಣದಲ್ಲಿಯೆ ಬೆಳೆದು, ಅಪ್ಪಟ ಕನ್ನಡತನದಿಂದ ತುಂಬಿದವು.

'ವಚನ ಎಂದರೆ ಮಾತು' ಎಂದರ್ಥ. ಚಂಪೂಕಾವ್ಯಗಳಲ್ಲಿ ಬರುವ ಗದ್ಯಕ್ಕೂ 'ವಚನ'ವೆಂದೇ ಹೆಸರು. ಗದ್ಯ ರಚನೆಗೆಲ್ಲ ಇದೇ ಹೆಸರಿತ್ತೆಂದು ತೋರುತ್ತದೆ. ಆದ್ದರಿಂದ ಗದ್ಯರೂಪದಲ್ಲಿರುವ ವೀರಶೈವಶರಣರ ಬೋಧನೆಯನ್ನು 'ವಚನ'ವೆಂದು ಕರೆದಿರಬೇಕು. ಆದರೆ ಇಂದು ಶಿವಶರಣರ 'ವಚನ'ವನ್ನು ಒಂದು 'ಅಧ್ಯಾತ ಶಾಸ್ತ್ರ' ಎಂಬ ಅರ್ಥದಲ್ಲಿ ಬಳಸುತ್ತಿದ್ದೇವೆ. ಇದಕ್ಕೆ 'ಷಟ್‌ಸ್ಥಲಶಾಸ್ತ್ರ'ವೆಂದೂ ಹೆಸರಿದೆ. ನಮ್ಮ ಅಧ್ಯಾತ್ಮ ಜ್ಞಾನಕ್ಕೆಲ್ಲ ಸಂಸ್ಕೃತವೇ ಮಾತೃಸ್ಥಾನ. ಆ ಭಾಷೆಯ ಜ್ಞಾನ ಕೇವಲ ಯಾವುದೋ ಒಂದು ವಿಶಿಷ್ಟ ವರ್ಗಕ್ಕೆ ಮೀಸಲಾಗಿತ್ತು. ಜನಸಾಮಾನ್ಯರಿಗೆ ಇದು ಮೊದಲ ಕೋಡಾಗಿತ್ತು. ಇದನ್ನು ನಿವಾರಿಸಿ, ಜನಸಾಮಾನ್ಯರಲ್ಲಿ ಜ್ಞಾನ ಪ್ರಸಾರ ಮಾಡಲು ಹೊರಟರು ಬೌದ್ಧರು, ಜೈನರು ಕನ್ನಡಿಗರ ವಿಚಾರದಲ್ಲಿ ಅದನ್ನು ನಿಜವಾಗಿಯೂ ಸಾಧಿಸಿದವರು ವಚನಕಾರರು. ದಕ್ಷಿಣಾಚಾರವನ್ನು ಸ್ವೀಕರಿಸುವ ೧೮ ಶೈವಾಗಮಗಳು ಸಚ್ಚಿದಾನಂದ ಸ್ವರೂಪಿಯಾದ ಶಿವನನ್ನು ಕುರಿತು ಜ್ಞಾನ, ಶಿವಾದ್ವೈತವನ್ನು ಬೋಧಿಸುತ್ತವೆ. ಈ ಆಗಮೋಕ್ತವಾದ ಶಿವಾದ್ವೈತವನ್ನು ಸಾರಹೊರಟರು. ವಚನಕಾರರು ಆದ್ದರಿಂದ ವಚನವಾಙ್ಮಯವನ್ನು 'ಕನ್ನಡದ ಶೈವಾಗಮ'ಗಳೆಂದು ಕರೆದು ಗೌರವಿಸಲಾಗಿದೆ. ಆದರೆ ಇವುಗಳು ಆಗಮಗಳ ಭಾಷಾಂತರವೇನೂ ಅಲ್ಲ. ವೀರಶೈವರಲ್ಲಿ ಅರವತ್ತು ಮೂರು ಪುರಾತನರು' ಎಂದು ಪ್ರಸಿದ್ಧರಾಗಿರುವ ಸಂತರು–ಅವರೆಲ್ಲ ತಮಿಳರು.

ನಡೆನುಡಿಗಳೇ ವಚನಗಳಿಗೆ ಆಧಾರ ಎಂದು ತೋರುತ್ತದೆ. ಆದ್ದರಿಂದ ವಚನಗಳು ಪುರಾಣದ ಬದನೆಕಾಯಿ ಆಗಿರದೆ, ಸಚ್ಚಾರಿತ್ರ್ಯದ ಸಜ್ಜನರೂ ಉಜ್ವಲ ಶಿವಭಕ್ತರೂ ಪವಾಡ ಪುರುಷರೂ ಆದ ಮಾಹಾನುಭಾವರ ಜೀವಂತ ಆಚರಣೆಯ ಗಂಗಾಸ್ತೋತ್ರ ಎಂದು ಅರ್ಥವಾಗುತ್ತದೆ.

ಆತ್ಮೋದ್ಧಾರದ ಹೆದ್ದಾರಿ ಸರ್ವರ ಸ್ವತ್ತಾಗುವಂತೆ ಜನಜಾಗೃತಿಯಾಗಬೇಕೆಂಬುದು ವಚನಕಾರ ಹೆಗ್ಗುರಿ. ಆಬಾಲವೃದ್ಧರಾದ ಗಂಡುಹೆಣ್ಣುಗಳಿಗೆ ಅದು ಅರ್ಥವಾಗಬೇಕು, ಅನುಕರಣಯೋಗ್ಯ ವಾಗಬೇಕು, ಅನುಸರಣಸಾಧ್ಯವಾಗಬೇಕು. ಆದ್ದರಿಂದ ತಿಳಿಗನ್ನಡದ ತೊಡಿಗೆಯುಟ್ಟು ಪಂಡಿತಪಾಮರರಿಬ್ಬರನ್ನೂ ಏಕಕಾಲದಲ್ಲಿ ಮೆಚ್ಚಿಸಬಲ್ಲ ನಿತ್ಯಸತ್ಯದ ದೇವಗಂಗೆ ಈ ವಚನಗಳ ಮೂಲಕ ಇಳಿದುಬಂದಿದೆ, ಇಲ್ಲಿ ಪಾಂಡಿತ್ಯಕ್ಕಲ್ಲ ಪುರಸ್ಕಾರ; ಅನುಭಾವಿಗಳ ಹೃದಯದಿಂದ ಪುಟಿದು ಬರುವ ಅನುಭವೈಕ ಧರ್ಮದರ್ಶನಕ್ಕೆ. ಅಧ್ಯಾತ್ಮ, ಧರ್ಮ, ನೀತಿ–ಇವುಗಳ ನಿರೂಪಣೆಯಿಂದ ಮಾನವನನ್ನು ದೇವನನ್ನಾಗಿ ಮಾಡಬಲ್ಲ ಮಹೋನ್ನತ ಗುಣವಿರುವುದರಿಂದಲೆ ಇವು ಅಮರವಾಗಿವೆ. ಈ ಅನುಭವಾಮೃತ ಚಿಲುಮೆಯಿಂದ ನೀರು ಉಕ್ಕಿದಂತೆ ಶರಣರ ಬಾಯಿಂದ ಹೊರಹೊಮ್ಮಿ ಸಾರವತ್ತಾದ, ಸೂತ್ರ ಪ್ರಾಯವಾದ, ಅರ್ಥಗರ್ಭಿತವಾದ ವಚನರೂಪದಿಂದ ಹರಿದುಬಂದಿದೆ. ಅಮೋಘವಾದ ಆಧ್ಯಾತ್ಮಿಕತತ್ವವೊಂದು ನಾಲ್ಕಾರು ಸಣ್ಣ ಪುಟ್ಟ ಕಾವ್ಯಗಳಲ್ಲಿ, ಅನೇಕ ವೇಳೆ ಪ್ರಾಸ ಬದ್ಧವಾಗಿದ್ದು, ಗಾದೆಯಂತೆ ಸರಳವಾದರೂ ರಸವತ್ತಾದ ತಿಳಿಗನ್ನಡದಲ್ಲಿ ಮಿಂಚುತ್ತದೆ. ಮಹತ್ತಾದ ತತ್ವಗಳನ್ನು ತಿಳಿಯಾದ ಮಾತಿನಲ್ಲಿ ಹೇಳುವ ಈ ವಚನಗಳನ್ನು 'ಕನ್ನಡದ ಉಪನಿಷತ್ತು' ಎಂದು ಕರೆದಿರುವುದು ಸಾರ್ಥಕವಾಗಿದೆ.

ವೀರಶೈವವು ಸರ್ವಸಮತೆಯನ್ನು ಸಾರಿದುದರಿಂದ ಎಲ್ಲ ಜಾತಿ, ಮತ ಪಂಥದವರೂ ತಾವು ಉದ್ಧಾರವಾಗುವುದಕ್ಕೆ ಮಾತ್ರವಲ್ಲದೆ, ಇತರರನ್ನು ಉದ್ಧರಿಸಲೂ ಶಕ್ತರಾದರು. ಅಧ್ಯಾತ್ಮ ಜ್ಞಾನಕ್ಕೆ ಅನರ್ಹರೆಂದು ಭಾವಿಸಲಾಗಿದ್ದ ಸ್ತ್ರೀಶೂದ್ರರೂ ವಚನ ರಚನೆ ಮಾಡಿದ್ದಾರೆ. ಕುಲಕ್ಕಿಂತ ಶೀಲ ಮುಖ್ಯ, ಕಾಯಕ ಮುಖ್ಯ, 'ಕಾಯಕವೇ ಕೈಲಾಸ' ಆ ಕಾಯಕದಲ್ಲಿ ಕೀಳುಮೇಲುಗಳಿಲ್ಲ; ಕಟ್ಟಿಗೆ ಮಾರುವವನು, ಹಗ್ಗ ಹೊಸೆಯುವವ, ಚಪ್ಪಲಿ ಹೊಲಿಯುವವ, ಅಗಸ, ಬೆಸ್ತ, ಬೇಡ–ಎಲ್ಲರೂ ವೇದವನ್ನೋದುವ ಬ್ರಾಹ್ಮಣನಷ್ಟೆ ಮುಖ್ಯ, ಮನುಷ್ಯನ ಜಾತಿಗಿಂತ, ನುಡಿಗಿಂತ ನಡೆಮುಖ್ಯ. ಶೀಲಶುದ್ಧರಾದವರು ಕೀಳು ಜಾತಿಯಾಗಿದ್ದರೂ ವಚನ ರಚನೆಯಿಂದ ಸಂತರ ಪಟ್ಟಕ್ಕೇರಿದ್ದಾರೆ. ವಚನವಾಙ್ಮಯವು ಧರ್ಮಗ್ರಂಥವೊ, ಸಾಹಿತ್ಯವೊ ? ಇದಕ್ಕೆ ನಮ್ಮ ಉತ್ತರ ಇಷ್ಟೆ–ವೇದ ಉಪನಿಷತ್ತುಗಳು ಧರ್ಮ ಗ್ರಂಥಗಳೋ ಸಾಹಿತ್ಯವೋ ? ವಚನಕಾರರು ಸತ್ಯೋಪಾಸಕರಾದ ಸಾಧಕರು. ಅವರ ವಚನಗಳು ಬಹು ಮಟ್ಟಿಗೆ ಉಪದೇಶಾತ್ಮಕವಾದವು, ಪ್ರಾರ್ಥನಾತ್ಮಕವಾದವು. ಇವುಗಳಲ್ಲಿ ಕಾಣಬರುವ ವಿಚಾರಸರಣಿಯೆಂದರೆ ಷಟ್‌ಸ್ಥಲ ಶಾಸ್ತ್ರನಿರೂಪಣೆ, ಸದಾಚಾರ ಸದ್ಭಕ್ತಿಗಳ ನಿರೂಪಣೆ. ಆದ್ದರಿಂದ ವಚನವಾಙ್ಮಯ ನಿರ್ವಿವಾದವಾಗಿಯೂ ಶಾಸ್ತ್ರಗ್ರಂಥ. ಅದು ವಚನಶಾಸ್ತ್ರ ಹೀಗೆ ಹೇಳುವಾಗ ವಚನಗಳಲ್ಲಿ ಸಾಹಿತ್ಯ ಗುಣ ಇಲ್ಲವೆಂದಲ್ಲ. ಕಿರಿದರಲ್ಲಿ ಹಿರಿದನ್ನು ಅಲ್ಪದಲ್ಲಿ ಕಲ್ಪವನ್ನು ನೋಡಬೇಕೆಂದರೆ ವಚನಗಳಿಗೆ ಹೋಗಬೇಕು. ನಿರಾಡಂಬರವಾದ ಅಲ್ಲಿನ ನುಡಿಯ ಕಿಡಿ ಅಜ್ಞಾನದ ಕತ್ತಲೆಯನ್ನು ನಿಶ್ಶೇಷಗೊಳಿಸುವಷ್ಟು ಉಜ್ಜಲವಾಗಿದೆ; ಕೆಲವು ವಚನಗಳಂತೂ ಪಾದಗಳಾಗಿ ವಿಂಗಡಿಸುವಷ್ಟು ಛಂದೋಬದ್ಧವಾಗಿದ್ದು, ಪ್ರಾಸ, ತಾಳ, ಲಯಗಳೂ ಅಲ್ಲಲ್ಲಿ ಕಂಡುಬರಬಹುದು. ಇವು ಹಾಡಿಗೆ ಅಳವಡಿಸಬಹುದು. ಆದರೂ ಇವು ಹಾಡುಗಳಲ್ಲ, ಪದ್ಯಗಳಲ್ಲ, ಗದ್ಯವೇ. ಕಾವ್ಯಮಯವಾದ ಗದ್ಯ. ಹಾಗೆ ಗದ್ಯವಾದುದರಿಂದಲೇ ಅದು ಅತಿಶಯವಾದ ಮಹತ್ತಿಗೆ ಅರ್ಹವಾಗಿದೆ. 'ಗದ್ಯಂ ಕವೀನಾಂ ನಿಕಷಂ ವದನ್ತಿ' ಎಂಬ ಸೂಕ್ತಿಗೆ ಈ ಗದ್ಯ ಸಾರ್ಥಕತೆಯನ್ನು

ಒದಗಿಸಿದೆ. ಪದ್ಯ ಕಾವ್ಯದಲ್ಲಿ ಮಾತ್ರ ಸಾಧ್ಯವಾಗಬಲ್ಲ ಭಾವೌನ್ನತ್ಯವನ್ನು ಗದ್ಯದಲ್ಲಿ ತಂದಿರುವುದು ವಚನಗಳ ಮಹತ್ತು ! ಕನ್ನಡಭಾಷೆ ಸೂಕ್ಷ್ಮವಾದ, ಮಹತ್ತಾದ ಭಾವನೆಗಳನ್ನು ವ್ಯಕ್ತಪಡಿಸಬಲ್ಲುದೆಂಬುದನ್ನು ಸಂದೇಹಿಸುವ ಕಿಲ್ಬಿಷರು 'ತನ್ನ ತಾನರಿದರೆ ತನ್ನರಿವೇ ಗುರು' ಎಂಬ ವಚನಭಾಗವನ್ನು ಜಪ ಮಾಡಲಿ.

ಹರಿಹರಯುಗದ ವಚನಕಾರರು

೧. ದೇವರ ದಾಸಿಮಯ್ಯ

ನಮಗೀಗ ದೊರೆತಿರುವ ವಚನಕಾರರಲ್ಲಿ ದೇವರ ದಾಸಿಮಯ್ಯನೇ ಮೊಟ್ಟಮೊದಲನೆಯವನು. ಈತ ಚಾಲುಕ್ಯ ಜಯಸಿಂಹನ (೧೦೧೫-೧೦೪೨) ಕಾಲದಲ್ಲಿ ಇದ್ದವನೆಂದು ತಿಳಿದು ಬರುತ್ತದೆ ರಾಜನ ಮಡದಿಯಾದ ಸುಗ್ಗಲಾದೇವಿಯು ದೇವರ ದಾಸಿಮಯ್ಯನ ಶಿಷ್ಯಳಾಗಿದ್ದಾಳಂತೆ ! ಈತನ ೧೫೦ ವಚನಗಳು ಈಗ ಉಪಲಬ್ಧವಾಗಿವೆ. ಇವುಗಳ ಪ್ರಸಾದ ಗುಣ ಪ್ರಶಂಸಾರ್ಹವಾದುದು. ಭಗವಂತನು ಜಗದ್ಭರಿತನೆಂಬುದನ್ನು ಬೋಧಿಸ ಹೊರಟ ದಾಸಿಮಯ್ಯ ನಿಮ್ಮ ದಾನ, ಬೆಳೆ ನಿಮ್ಮ ದಾನ, ಸುಳಿದು ಬೀಸುವ ನಿಮ್ಮ ದಾನ, ನಿಮ್ಮ ದಾನವನುಂಡು ಅನ್ಯರ ಹೊಗಳುವ ಕುನ್ನಿಗಳೇನೆಂಬೆ ರಾಮನಾಥಾ' ಎಂದು ಹೇಳುತ್ತಾನೆ. ಆತನ ಶೈವನಿಷ್ಠೆ ಉತ್ಕಟವಾದುದು. ಪರಮಾತ್ಮ ಸಾಧನೆಯಲ್ಲಿರುವ ಆತನಿಗೆ ಭೋಗಭಾಗ್ಯಗಳಾವುವೂ ಬೇಡ. 'ಕರಿಯನಿತ್ತೊಡೊಲ್ಲೆ, ಸಿರಿಯನಿತ್ತೊಡೊಲ್ಲೆ, ಹಿರಿಯಪ್ಪ ರಾಜ್ಯವನಿತ್ತೊಡೊಲ್ಲೆ, ನಿಮ್ಮ ಶರಣರ ಸೂಳುನುಡಿಯ ಒಂದರಗಳಿಗೆ ಇತ್ತಡೆ ನಿನ್ನನಿತ್ತೆ ಕಾಣಾ ರಾಮನಾಥ' ಎಂದು ಹಾರೈಸುತ್ತಾನೆ. ಭಕ್ತಿಪಥದಲ್ಲಿ ಮುಂದುವರಿದವನಿಗೆ ನಿಷ್ಠೆಯ ಊರೆಗೋಲು, ಅಂತಹ 'ನಿಷ್ಠೆಯುಳ್ಳ ಭಕ್ತ ನಟ್ಟಡವಿಯಲ್ಲಿರ್ದಡೇನು ? ಅದು ಪಟ್ಟಣವೆಂದೆನಿಸುವುದು, ನಿಷ್ಠೆ ಇಲ್ಲದ ಭಕ್ತ ಪಟ್ಟಣದಲ್ಲಿದ್ದರೂ ಅದು ನಟ್ಟಡವಿ ಕಾಣಾ ರಾಮನಾಥ' ಎಂಬುದು ಆತನ ನಿಲುವು. ಭಕ್ತನಾದವನು ಜೀವನದಲ್ಲಿ ಬರುವ ಎಡರುತೊಡರುಗಳಿಗೆ ಅಂಜಬಾರದು. ಅವುಗಳನ್ನು ಭಕ್ತರ ಸತ್ವಪರೀಕ್ಷೆಗಾಗಿ ಭಗವಂತನೇ ಒಡ್ಡುತ್ತಾನೆ. ಹರ ತನ್ನ ಭಕ್ತರ ತಿರಿವಂತೆ ಮಾಡುವ, ಒರೆದು ನೋಡುವ ಸುವರ್ಣದ ಚಿನ್ನದಂತೆ, ಅರೆದು ನೋಡುವ ಕಬ್ಬಿನ ಕೋಲಿನಂತೆ, ಬೆದರದೆ, ಬೆಚ್ಚದೆ ಇದ್ದಡೆ ಕರವಿಡಿದು ಎತ್ತಿಕೊಂಬ ನಮ್ಮ ರಾಮನಾಥನು' ಎಂಬ ನುಡಿಗಳು ಆತನ ಸಂಸ್ಕೃತಿಗೆ ಹಿಡಿದ ಸೊಡರಿನಂತಿವೆ. ಆತನ ಕೆಲವು ವಚನ ಭಾಗಗಳು ಗಾದೆಯಂತೆ ಸಾರವತ್ತಾಗಿವೆ. ದೆಜ್ಜರವಿಡಿದ ಬಾಯಿಗೆ ನೊರೆವಾಲು ಒಲಿವುದೆ ? 'ಎಳ್ಳು ಇಲ್ಲದ ಗಾಣದಲ್ಲಿ ಎಣ್ಣೆಯುಂಟೆ ?' 'ಮಠದೊಳಗಿನ ಬೆಕ್ಕು ಇಲಿಯ ಕಂಡು ಪುಟನೆಗೆದಂತಾಯಿತು.'

ದೇವರ ದಾಸಿಮಯ್ಯನ ಸಮಕಾಲೀನನಾಗಿದ್ದ ಶಂಕರದಾಸಿಮಯ್ಯನೂ ವಚನಗಳನ್ನು ಹಾಡಿರುವನೆಂದೂ, ಇವರಿಬ್ಬರೂ ಪವಾಡ ಪುರುಷರೆಂದೂ ವೀರಶೈವ ಪುರಾಣಗಳಿಂದ ತಿಳಿದು ಬರುತ್ತದೆ. ಶಂಕರ ದಾಸಿಮಯ್ಯನವೆಂದು ಹೇಳಲಾದ ಒಂದೆರಡು ವಚನಗಳೂ ಅಸ್ತಿತ್ವದಲ್ಲಿವೆ. ಅಷ್ಟರ ಆಧಾರದಿಂದಲೆ ಆ ವಚನಗಳನ್ನು ಕುರಿತು ಅಭಿಪ್ರಾಯ ಸೂಚಿಸುವುದು ಅಷ್ಟೇನೂ ಉಚಿತವಲ್ಲ.

೨. ಸಕಲೇಶ ಮದರಸ

ಅದ್ವಿತೀಯ ವಚನಕಾರನಾದ ಬಸವಣ್ಣನ ಸಮಕಾಲಿಕರಾದರೂ ಆತನಿಗಿಂತಲೂ ಹಿರಿಯರಾದ ಇಬ್ಬರು ವಚನಕಾರರು ಉಲ್ಲೇಖಾರ್ಹರಾಗಿದ್ದಾರೆ. ಅವರಲ್ಲಿ ಸಕಲೇಶ ಮಾದರಸನು ಒಬ್ಬ ಆತನ ಹೆಸರೇ ಸೂಚಿಸುವಂತೆ ಆತನು ಸಣ್ಣ ರಾಜ್ಯವೊಂದಕ್ಕೆ ಅರಸನಾಗಿದ್ದವನು. ಆತನ

ಜೀವನಕಥೆಯನ್ನು ನೋಡಿದರೆ ಆತನು ಭೋಗಜೀವನದ ಕ್ಷಣಿಕತೆಯನ್ನು ಅನುಭವ ಮಾಡಿಕೊಂಡ ವೈರಾಗ್ಯದಿಂದ ಶ್ರೀಶೈಲಕ್ಕೆ ಹೋದನೆಂದೂ, ಅಲ್ಲಿದ್ದ ಆತನ ತಂದೆ ಮಲ್ಲರಸನು ಆತನನ್ನು ಬಸವಣ್ಣನ ಬಳಿಗೆ ಕಳುಹಿಸಿದನೆಂದೂ ತಿಳಿದು ಬರುತ್ತದೆ. ಈತನ ೮೮ ವಚನಗಳು ಉಪಲಬ್ಧವಾಗಿವೆ. ಈತನ ಅಂಕಿತ 'ಸಕಳೇಶ್ವರ' ಎಂದು. ಈತನ ವಚನಗಳು ದೇವರದಾಸಿಮಯ್ಯನ ವಚನಗಳಿಗಿಂತ ಹೆಚ್ಚು ಸೂತ್ರಬದ್ಧವಾಗಿವೆ. ಮಾರ್ಮಿಕವಾಗಿವೆ. 'ಆಶೆಯಿಂದ ಬಿಟ್ಟು ಕಿರಿಯರಿಲ್ಲ ನಿರಾಸೆಯಿಂದ ಬಿಟ್ಟು ಹಿರಿಯರಿಲ್ಲ; ದಯದಿಂದ ಬಿಟ್ಟು ಧರ್ಮವಿಲ್ಲ, ವಿಚಾರದಿಂದ ಬಿಟ್ಟು ಸಹಾಯಗಳಿಲ್ಲ, ಸಚರಾಚರಕ್ಕೆ ಸಕಳೇಶ್ವರದೇವರಿಂದ ಬಿಟ್ಟು ದೈವವಿಲ್ಲ' ಎಂಬ ಆತನ ಬೋಧನೆ ಸಂಗ್ರಹವಾಗಿರುವಷ್ಟೆ ಸಾರವತ್ತಾಗಿದೆ, ಪ್ರಭಾವಯುತವಾಗಿದೆ 'ಜನಮೆಚ್ಚು ಶುದ್ಧನಲ್ಲದೆ ಮನಮೆಚ್ಚು ಶುದ್ಧನಲ್ಲವಯ್ಯ', 'ಮಳೆಯ ಮೇಳೆ ಕಲ್ಲನಿಕ್ಕಿ ಮಳೆ ಭಕ್ತನಾಗಬಲ್ಲುದೆ ?' 'ದಯದಿಂದ ಬಿಟ್ಟು ಧರ್ಮವಿಲ್ಲ' ಇವೇ ಮೊದಲಾದ ಈತನ ವಚನಗಳನ್ನು ಓದಿದಾಗ ಬಸವಣ್ಣನ ವಚನಗಳು ಜ್ಞಾಪಕಕ್ಕೆ ಬರುತ್ತವೆ. ಸಾಹಿತ್ಯದ ದೃಷ್ಟಿಯಿಂದ ಈತನ ವಚನಗಳು ಮಹೋನ್ನತವೆಂದು ಹೇಳದಿದ್ದರೂ ಶಾಸ್ತ್ರದೃಷ್ಟಿಯಿಂದ ಸ್ವಾಗತಾರ್ಹವಾಗಿವೆ.

೩. ಪ್ರಭುದೇವ

ಬಸವಣ್ಣನ ಕಾಲದ ಮತ್ತೊಬ್ಬ ಹಿರಿಯ ವಚನಕಾರ, ಪ್ರಭುದೇವ. ಈತನ ಹಿರಿತನ ಕಾಲ, ದೇಶಗಳ ಎಲ್ಲೆಯನ್ನು ಮೀರಿದುದು. ಬಳ್ಳಿಗಾವೆಯೆಂಬ ಊರಿನ ನಿರಹಂಕಾರ-ಸುಜ್ಞಾನಿ ಎಂಬ ಶೈವದಂಪತಿಗಳ ಸುಪುತ್ರನಾದ ಈತ ಯೌವನದಲ್ಲಿಯೆ ವಿರಕ್ತನಾಗಿ, ಆಳವಾದ ಆತ್ಮ ಚಿಂತನೆಯಿಂದ ದಿವ್ಯ ಜ್ಞಾನಿಯಾಗಿ, ದೇಶಪರ್ಯಟನೆ ಮಾಡುತ್ತಾ ಕಲ್ಯಾಣಕ್ಕೆ ಬಂದ. ಶಿವಶರಣರ ಕಾಮಧೇನುವಿನಂತಿದ್ದ ಬಸವಣ್ಣನೂ ಆತನೂ ಸೇರಿ ಕಲ್ಯಾಣದ ಶಿವಶರಣರನ್ನೆಲ್ಲ ಸಂಘಟಿಸಿದರು; ಸಾಧಕರಿಗೆ ಮಾರ್ಗದರ್ಶನ ನೀಡುವುದಕ್ಕಾಗಿ ಅನುಭವಮಂಟಪ ಸ್ಥಾಪನೆಯಾಯಿತು; ಪ್ರಭುದೇವನು ಅದರ ಅಧ್ಯಕ್ಷನಾದನು. ಆಗಾಗ ಶರಣರ ಗೋಷ್ಠಿಗಳು ನಡೆದು ಶಿವತತ್ತ್ವ, ಶಿವಾಚಾರಗಳು ನಡೆಯಲು ಮೊದಲಾಯಿತು. ಬಸವಣ್ಣ, ಸಕಲೇಶ ಮಾದರಸ, ಮಹಾದೇವಿಯಕ್ಕ, ಚೆನ್ನಬಸವಣ್ಣ ಸಿದ್ಧರಾಮಯ್ಯ ಮೊದಲಾದ ವಿಭೂತಿ ಪುರುಷರು ತಮ್ಮ ಶಿವಾನುಭವಗಳನ್ನು ಅಲ್ಲಿ ವಿವರಿಸಿ ಹೇಳುತ್ತಿದ್ದರು. ಪ್ರಭುದೇವ ನಿಂತ ಎಡೆ ಕೈಲಾಸವಾಯಿತು. ಆತನ ಕೀರ್ತಿ ನಾಲ್ಕು ದಿಕ್ಕಿನ ಶಿವಶರಣರನ್ನೂ ಕಲ್ಯಾಣಕ್ಕೆ ಆಕರ್ಷಿಸಿತು. ಆತನ ಉಪದೇಶದಿಂದ ಭಕ್ತರು ಉದ್ಧಾರವಾದರು. ಅನುಭಾವಿಗಳು ಮುಮುಕ್ಷುಗಳಾದರು. ಬಸವಣ್ಣನು ಪ್ರಭುದೇವನಿಗಾಗಿ ಶೂನ್ಯಸಿಂಹಾಸನವನ್ನು ರಚಿಸಿದನು. ('ಶೂನ್ಯ' ಎಂದರೆ ಮುಕ್ತಿ ಎಂದರ್ಥ. ಅನುಭವಮಂಟಪದ ಅಧ್ಯಕ್ಷನಾದ ಪ್ರಭುದೇವನಿಗೆ ಆ ಹೆಸರಿನ ಒಂದು ಸಿಂಹಾಸನವಿತ್ತೊ ಅಥವಾ ನಿರಾಕರ ಸಿದ್ಧಿಯನ್ನು ಪಡೆದ ಆತನು ಮೋಕ್ಷದ ಅಧಿಷ್ಠಾತೃವಾಗಿದ್ದನೊ !) ಶೂನ್ಯ ಸಿಂಹಾಸನಾಸೀನನಾದ ಆತನ ನುಡಿಗಳು ದೇವವಾಣಿಯಂತೆ ಪ್ರಾಮಾಣಿಕವಾದವು, ಸತ್ಯನಿಷ್ಠವಾದವು. ನಿಷ್ಪಕ್ಷಪಾತ ಮತ್ತು ನಿರ್ದಾಕ್ಷಿಣ್ಯವಾದವು 'ಗುಹೇಶ್ವರ' ಈತನ ಅಂಕಿತ.

ಒಮ್ಮೆ ಸಹಸ್ರಾರು ಶಿವಭಕ್ತರೆಲ್ಲ ಬಸವಣ್ಣನ ಭಕ್ತಿಯಲ್ಲಿ ಕೊರೆಯಾಯಿತೆಂದು ಕೋಪಿಸಿಕೊಂಡರಂತೆ ! ಬಸವಣ್ಣನು ಇದಕ್ಕಾಗಿ ಕಳವಳಪಡುತ್ತಿರಲು ಪ್ರಭುದೇವನು 'ಅಂಗಜಂಗುಳಿಗಳೆಲ್ಲ ಅಶನಕ್ಕೆ ನೆರೆದರು. ಲಿಂಗದ ಹವಣನಿವರೆತ್ತ ಬಲ್ಲರು ? ಕಾಯಜೀವಿಗಳು ಕಳವಳಧಾರಿಗಳು, ದೇವರ ಸುದ್ದಿಯನಿವರೆತ್ತ ಬಲ್ಲರು ? ಮದ್ಯಪಾನವನುಂಡು ಮದವೆದ್ದ ಜೋಗಿಯಂತೆ ನುಡಿದವರು, ಮಹೇಶ್ವರನ ನಿಲುವನಿವರೆತ್ತ ಬಲ್ಲರು ?' ಎಂದು ಗುಡುಗುತ್ತಾನೆ.

ಉಳಿದ ಯಾವ ವಚನಕಾರನಲ್ಲಿಯೂ ಕಾಣಬರದ ನ್ಯಾಯನಿಷ್ಠುರತೆ ಈತನದು. ವ್ರತ ನೇಮಗಳ ಅಂಧಶ್ರದ್ಧೆಯನ್ನು ಬಡಿದೋಡಿಸುವಂತೆ' ಹಾಲನೇಮವ ಹಿಡಿದಾತ ಬೆಕ್ಕಾಗಿ ಹುಟ್ಟುವ, ಕಡಲೆಯ ನೇಮವ ಹಿಡಿದಾತ ಕುದುರೆಯಾಗಿ ಹುಟ್ಟುವ ; ಅಗ್ಘವಣಿಯ ನೇಮವ ಹಿಡಿದಾತ ಕಪ್ಪೆಯಾಗಿ ಹುಟ್ಟುವ, ಪುಷ್ಪದ ನೇಮವ ತುಂಬಿಯಾಗಿ ಹುಟ್ಟುವ, ಇವು ಷಟ್ ಸ್ಥಲಕ್ಕೆ ಹೊರಗು, ಭಕ್ತಿನಿಷ್ಠೆಯಿಲ್ಲದವರ ಕಂಡಡೆ ಮೆಚ್ಚ ಗುಹೇಶ್ವರ' ಎಂದು ಗೇಲಿ ಎಬ್ಬಿಸುತ್ತಾನೆ. ಜಾತಿ, ಮತ ಪಂಥಗಳಿಂದ ಅತೀತನಾಗಿರುವ ಜ್ಞಾನಿಗೆ ತನ್ನವರೆಂಬ ಅಭಿಮಾನವಾಗಲೀ, ಪರರೆಂಬ ಪಕ್ಷಪಾತವಾಗಲೀ ಇಲ್ಲ. ಅದ್ವೈತದ ಮಹೋನ್ನತಿಗೇರಿರುವ ಆತನಿಗೆ ಶಿವಭಕ್ತನೊಬ್ಬೊಬ್ಬನೂ ತನ್ನ ಲಿಂಗವೇ ಮಹತ್ತಾದುದೆಂದು ವಿಜೃಂಭಿಸುವುದು ಹಿಡಿಸುವುದಿಲ್ಲ. ಆತನ ದೃಷ್ಟಿ ತೀಕ್ಷ್ಣ ಬುದ್ಧಿ ಚುರುಕು, ನಾಲಗೆ ಹರಿತ; ಬಹಿರಂಗದ ಪೂಜೆಯನ್ನೆ ಖಂಡಿಸುತ್ತಾ ಹೇಳುತ್ತಾನೆ, ಆತ' – ಎನಗೊಂದು ಲಿಂಗ, ನಿನಗೊಂದು ಲಿಂಗ, ಮನೆಗೊಂದು ಲಿಂಗವಾಯಿತು. ಹೋಯಿತಲ್ಲಾ ಭಕ್ತಿ ಜವಲಕೊಡಿ ಊಳಿ ಮುಟ್ಟಿದ ಲಿಂಗವ ಮನಮುಟ್ಟುಬಲ್ಲುದೆ ಗುಹೇಶ್ವರಾ ! 'ಇನ್ನೊಂದು ಹೆಜ್ಜೆ ಮುಂದೆ ಹೋಗಿ ಪೃಥ್ವಿಗೆ ಹುಟ್ಟಿದ ಶಿಲೆ, ಕಲ್ಲು ಕುಟಿಕಂಗೆ ಹುಟ್ಟಿದ ಮೂರುತಿ, ಮಂತ್ರಕ್ಕೆ ಲಿಂಗವಾಯುತಲ್ಲಾ ! ಈ ಮೂವರಿಗೆ ಹುಟ್ಟಿದ ಮಗನ ಲಿಂಗವೆಂದು ಕೈವಿಡಿದ ಅಚ್ಚವ್ರತಗೇಡಿಗಳನೇನೆಂಬೆ ಗುಹೇಶ್ವರಾ !' ಎನ್ನುತ್ತಾನೆ. ನಿರ್ಗುಣನಿರಾಕಾರವನ್ನು ಸಾಕ್ಷಾತ್ಕಾರ ಮಾಡಿಕೊಂಡ ಆ ಜ್ಞಾನಿಯ ಮಾತು ಮತನಿಷ್ಠರಾದವರಿಗೆ ನುಂಗಲಾರದ ತುತ್ತಾಗುತ್ತದೆ. 'ಕಲ್ಲ ದೇವರೆಂಬ ಪೂಜಿಸುವರು, ಆಗದು ಕಾಣಿರೊ ! ಅಗಡಿಗರಾದಿರಲ್ಲಾ ! ಮುಂದೆ ಹುಟ್ಟುವ ಕೂಸಿಂಗೆ ಇಂದು ಮೊಲೆಯನ್ನು ಕೊಡುವಂತೆ' ಎಂದು ಹೇಳಿ ಆತ ವಿಗ್ರಹಾರಾಧನೆಯ ಬುಡಕ್ಕೆ ಕೊಡಲಿಯನ್ನಿಡುತ್ತಾನೆ. ದೇವರ ವಿಗ್ರಹವನ್ನು ಕಲ್ಲೆಂದು ಜರೆಯುವವನು ವಿಗ್ರಹ ಪ್ರತಿಷ್ಠೆಯನ್ನು ಒಪ್ಪಿಯಾನೆ ? 'ಕಲ್ಲು ಮನೆಯ ಮಾಡಿ ಕಲ್ಲುದೇವರ ಮಾಡಿ, ಆ ಕಲ್ಲು ಕಲ್ಲ ಮೇಲೆ ಕಡೆದರೆ ದೇವರೆತ್ತ ಹೋದರೋ ? ಲಿಂಗ ಪ್ರತಿಷ್ಠೆಯ ಮಾಡಿದವಂಗೆ ನಾಯಕನರಕ ?' 'ದೇಹದೊಳಗೆ ದೇವಾಲಯವಿದ್ದು ಮತ್ತೆ ಬೇರೆ ದೇವಾಲಯವೇಕೆ ?' ಚಿನ್ಮಯ ದೇವನನ್ನು ಮೃಣ್ಮಯ ರೂಪದಲ್ಲಿ ಪೂಜಿಸುವವನು 'ಹುರಿಯನೆ ಪೂಜಿಸಿ, ಗಸಣಿಗೊಳಗಾದವನು. ಕರ್ಮಮಾರ್ಗ ಭಕ್ತಿಮಾರ್ಗಗಳನ್ನು ಮೀರಿ, ಮುಕ್ತಿಮಾರ್ಗಕ್ಕೇರಿರುವ ಆತನ ನುಡಿಗಳು ಆತನ ವ್ಯಕ್ತಿತ್ವ ಮತ್ತು ನಿಲುವಿಗೆ ತಕ್ಕಂತೆ ಇವೆ – 'ವೇದವೆಂಬುದು ಓದಿನ ಮಾತು, ಶಾಸ್ತ್ರವೆಂಬುದು ಸಂತೆಯ ಸುದ್ದಿ, ಪುರಾಣವೆಂಬುದು ಪುಂಡರ ಗೋಷ್ಠಿ, ತರ್ಕವೆಂಬುದು ತಗರ ಹೋರಟೆ, ಭಕ್ತಿಯೆಂಬುದು ತೋರುಂಬ ಲಾಭ' 'ಇಷ್ಟಲಿಂಗವ ತೋರಿ ಮೃಷ್ಟಾನ್ನವ ಹೊಡೆವವರಿಗೆ ಇಷ್ಟಾರ್ಥಸಿದ್ಧಿಯದೆಲ್ಲಿಯದೋ ? ಅದೆಲ್ಲಿಯದೋ ಲಿಂಗ ? ಅದೆಲ್ಲಿಯದೊ ಜಂಗಮ ? ಅದೆಲ್ಲಿಯದೊ ಪಾದೋದಕ ಪ್ರಸಾದ ? ಅಲ್ಲದಾಟವನಾಡಿ ಎಲ್ಲರೂ ಮುಂದುಗೆಟ್ಟರು, ಗುಹೇಶ್ವರ ನಿಮ್ಮ ಆಣೆ'. ಇಷ್ಟು ಸ್ಪಷ್ಟವಾಗಿ ಕಟುಸತ್ಯವನ್ನು ನುಡಿದೂ ಆತನು ಸರ್ವಪೂಜ್ಯತೆಯನ್ನು ಪಡೆದಿದ್ದನೆಂದಾಗ ಆತನ ವ್ಯಕ್ತಿತ್ವ ಮಹೋನ್ನತವಾದುದೇ ಸರಿ. ಸಾಕಾರಪೂಜೆಯನ್ನು ಖಂಡಿಸಿದಾಗ ಆತ ತನ್ನ ಪೂಜಾವಿಧಾನವನ್ನು ಕುರಿತು ಹೀಗೆ ಹೇಳುತ್ತಾನೆ. ತನ್ನ ಹೃದಯಕಮಲದಲ್ಲಿ ನೆಲೆಸಿರುವ ಪ್ರಾಣೇಶ್ವರನಿಗೆ ಕ್ಷಮೆಯೆ ಅಭಿಷೇಕ, ವೈರಾಗ್ಯವೇ ಪುಷ್ಪಮಾಲೆ, ಸಮಾಧಿಯೇ ಶ್ರೀಗಂಧ, ನಿರಹಂಕಾರವೇ ಅಕ್ಷತೆ, ಸತ್ಯವೇ ದಿವ್ಯಾಭರಣ, ವಿಶ್ವಾಸವೇ ಧೂಪ, ದಿವ್ಯ ಜ್ಞಾನವೇ ದೀಪ– ಹೀಗೆ ಷೋಡಶೋಪಚಾರ ಪೂಜೆಯು ಅಂತಃಕರಣದಿಂದ ಮಾಡತಕ್ಕದು. ಆತನ 'ಕಾಯಕವೆ ಕೈಲಾಸವಾಯಿತು. ಮನವೆ ಲಿಂಗವಾಯಿತು. ತನುವೆ ಸಜ್ಜೆಯಾಗಿತ್ತು. ಗುಹೇಶ್ವರಲಿಂಗ ಲೀನವಾಗಿತ್ತು' ಇಂತಹ ಪರಮಜ್ಞಾನಿ 'ಆನುನೀನೇಂಬುದು ತಾನಿಲ್ಲ ತಾನರಿದ

ಬಳಿಕ ಮತ್ತೇನೂ ಇಲ್ಲ, ಇಲ್ಲ, ಇಲ್ಲದ ಇಲ್ಲವೆಯೆಲ್ಲಿಂದ ಬಪ್ಪದೊ ?' ಎಂದು ಕೇಳುವುದು ಸಹಜವಾಗಿಯೇ ಇದೆ.

ಪ್ರಭುದೇವನ ವಚನಗಳಲ್ಲಿ ಗಣನೀಯವಾದ ಒಂದು ಭಾಗ ಬೆಡಗಿನ ವಚನಗಳು. ಇಲ್ಲಿನ ಭಾಷೆ ತಂತ್ರ ಸಾಹಿತ್ಯದ ಭಾಷೆಯಂತೆ ಸಾಂಕೇತಿಕ ಭಾಷೆ. ಇಲ್ಲಿನ ಗುಪ್ತ ಅಥವಾ ಗುಹ್ಯವಾದ ಅರ್ಥವನ್ನು ಗಮನಿಸಿದಾಗ 'ಗುಹೇಶ್ವರ' ಎಂಬ ಆತನ ವಚನಗಳ ಅಂಕಿತ ಅರ್ಥವತ್ತಾದುದಾಗುತ್ತದೆ. ಮೇಲುನೋಟಕ್ಕೆ ಅಸಂಬದ್ಧವಾಗಿ ಕಾಣುವ ಈ ವಚನಗಳು ವ್ಯಾಖ್ಯಾನದ ಸಹಾಯವಿಲ್ಲದೆ ಅರ್ಥವಾಗುವುದು ಕಷ್ಟ. 'ಆಕಾಶವ ಕಪ್ಪೆ ನುಂಗಿದರೆ, ಅಗಳೆಹತ್ತಿತ್ತು ರಾಹು, ನೋಡಿದರೆ ಅಪೂರ್ವಾತಿಶಯ! ಅಂಧಕ ಹಾವ ಹಿಡಿದ, ಇದು ಕಾರಣ ಲೋಕಕ್ಕೆ ಅರುಹದೆ ನಾನರಿದೆನು' ಇದರ ಅರ್ಥ ಇದು–ಬ್ರಹ್ಮ ರಂಧ್ರದಲ್ಲಿರುವ ಶಾಂತಿ ಬಿಂದುವು ಪರಮಾಮೃತ ಸ್ವರೂಪವನ್ನು ಪಡೆಯಲು, ಕುಂಡಲಿ ಸ್ಥಾನದ ಸುಪ್ತಭುಜಂಗವು ಆ ಅಮೃತವನ್ನು ಆರೋಗಿಸುವುದು. ಇದರ ಸುಖವನ್ನು ಭಿನ್ನ ದೃಷ್ಟಿಯಿಲ್ಲದ ಭಕ್ತನು ಅರಿತು ಅದನ್ನು ಲೋಕಕ್ಕೆ ತಿಳಿಸದೆ ಮೌನವಾಗಿದ್ದಾನೆ. ಈಗ ಮತ್ತೊಂದು ಉದಾಹರಣೆಯನ್ನು ನೋಡಿ, ಕೆಂಡದ ಗಿರಿಯ ಮೇಲೆ ಒಂದು ಅರಗಿನ ಕಂಭವಿದ್ದುದ ಕಂಡೆ, ಅರಗಿನ ಕಂಭದ ಮೇಲೊಂದರ ಹಂಸೆ ಇದ್ದುದ ಕಂಡೆ. ಕಂಭ ಬೆಂದು ಹಂಸೆ ಹಾರಿತ್ತು, ಜ್ಞಾನಗಿರಿಯ ಮೇಲೆ ಅಶಾಶ್ವತ ದೇಹವೆಂಬ ಒಂದು ಅರಗಿನ ಕಂಭವಿದೆ. ದೇಹಭಾವ ಕರಗಿ ಹೋಗುತ್ತಲೆ, ದೇಹದಲ್ಲಿನ ಆತ್ಮ ಹೋಗಿ ಪರಮಾತ್ಮನಲ್ಲಿ ಲೀನವಾಗುತ್ತದೆ ಎಂಬುದು ಇದರ ಅರ್ಥ. ಕೆಂಡದ ಬೆಟ್ಟ ಅದರ ಮೇಲೆ ಅರಗಿನ ಕಂಭ ಅವುಗಳ ಮೇಲಿನ ಹಂಸೆ – ಇವುಗಳ ಯಥಾರ್ಥಕಲ್ಪನೆಯೂ ಮನೋಹರವಾಗಿದೆ.

ಪ್ರಭುದೇವನ ವಚನಗಳು ಎಷ್ಟು ಅರ್ಥಪೂರ್ಣವಾಗಿ, ಸಾರವತ್ತಾಗಿ, ಸಂಗ್ರಹವಾಗಿ ಒಡಮೂಡಿವೆ! 'ತನ್ನ ತಾನರಿದರೆ ನುಡಿಯೆಲ್ಲ ಪರತತ್ವ', 'ಸಾಸುವೆಯಷ್ಟು ಸುಖಕ್ಕೆ ಸಾಗರದಷ್ಟು ದುಃಖ ಮಾತೆಂಬುದು ಜ್ಯೋತಿರ್ಲಿಂಗ, ಸ್ವರವೆಂಬುದು ಪರತತ್ವ' ಈತನ ವಚನಗಳು; ಅಧರಕ್ಕೆ ಸಿಹಿ, ಉದರಕ್ಕೆ ರುಚಿ ಮಾತ್ರವೇ ಅಲ್ಲ; ನಿತ್ಯ ಸತ್ಯದ ಪರಂಜ್ಯೋತಿಯೂ ಆಗಿವೆ. ಶರಣರೆಲ್ಲರೂ ಐಕ್ಯಸ್ಥಿತಿಯನ್ನು ಪಡೆಯುವ ಘಟ್ಟ ಬಂದಾಗ ಆತನು ಅವರವರಿಗೆ ವಿಹಿತವಾದ ನಿರವಸ್ಥಿತಿಯನ್ನು ನಿರೂಪಿಸಿ, ತಾನೂ ಗುಹೇಶ್ವರನೆಂಬ ಲಿಂಗದ ನಿಜ ಸಮಾಧಿಯಲ್ಲಿ ನಿಂದು, ಪರವಶನಾಗಿ, ನಿರಾಳಕ್ಕೆ ನಿರಾಳವಾದನು ಹಾಗೆ ನಿರಾಳನಾಗುವ ಮುನ್ನ 'ಗೋರಕ್ಷ'ನೆಂಬ ಹಟಯೋಗಿ ಸಿದ್ಧನನ್ನು ಸಂಧಿಸಿ ಆತನಿಗೆ ಉಪದೇಶಾಮೃತವನ್ನು ನೀಡಿದನಂತೆ. ಆಗ ಅವರಿಬ್ಬರ ಸಿದ್ಧಿಯ ಸ್ಪರ್ಧೆ ನಡೆಯಿತಂತೆ! ಕತ್ತಿಯಿಂದ ಗೋರಕ್ಷನ ದೇಹವನ್ನು ಹೊಡೆದಾಗ ಅವನ ದೇಹ ಕೂದಲು ಕೊಂಕದೆ ಕಿಡಿಕಾರಿತಂತೆ! ಆದರೆ ಅದೇ ಕತ್ತಿಯಿಂದ ಪ್ರಭುದೇವನನ್ನು ಹೊಡೆದಾಗ ಅದು ಗಾಳಿಗೆ ಕೊಟ್ಟ ಹೊಡೆತದಂತಾಯಿತಂತೆ! ಅದ್ವೈತ ಸಿದ್ಧಿಯ ಮುಂದೆ ಹಠಯೋಗದ ಅಲ್ಪತೆ ವ್ಯಕ್ತವಾಯಿತು.

೪. ಬಸವಣ್ಣ

ಬಸವಣ್ಣನ ಜೀವನಚರಿತ್ರೆಯನ್ನು ಬರೆದಿರುವವರಲ್ಲಿ ಅಗ್ರಗಣ್ಯನಾದ ಹರಿಹರಕವಿ ಆತನನ್ನು ಕುರಿತು ತನ್ನ 'ಬಸವರಾಜದೇವರ ರಗಳೆ'ಯಲ್ಲಿ ಹೀಗೆ ತಿಳಿಸುತ್ತಾನೆ; ಬಾಗೆವಾಡಿಯೆಂಬ ಅಗ್ರಹಾರದಲ್ಲಿ ಮಾದಿರಾಜ–ಮಾದಾಂಬಿಕೆ ಎಂಬ ಕಮ್ಮೆ ಕುಲ ಬ್ರಾಹ್ಮಣ ದಂಪತಿಗಳು ಬಸವಣ್ಣನ ತಂದೆ–ತಾಯಿಗಳು. ಇವರು ಬಾಲ್ಯದಲ್ಲೇ ತೀರಿಹೋದುದರಿಂದ ತಬ್ಬಲಿಯಾದ ಬಸವಣ್ಣ 'ಶಿವಭಕ್ತಿಯ ಮುತ್ತಂತಿದ್ದ ಮುತ್ತಜ್ಜಿಯ ಬಳಿಯಲ್ಲಿ ಬೆಳೆದು ದೊಡ್ಡವನಾದ. ಆತನಿಗೆ ಬ್ರಾಹ್ಮಣ ಮತದ ಕರ್ಮಮಾರ್ಗದಲ್ಲಿ ಜಿಹಾಸೆ ಹುಟ್ಟಿತು. 'ಕರ್ಮಲತೆಯಂತೆ ಇದ್ದ ಜನಿವಾರವನ್ನು ಕಿತ್ತು

ಬಿಸುಟು, ಮಲಪ್ರಹರಿ ಕೃಷ್ಣವೇಣಿಗಳ ಸಂಗಮದಲ್ಲಿದ್ದ ಕಪ್ಪಡಿಗ್ರಾಮಕ್ಕೆ ಬಂದು, ಅಲ್ಲಿದ್ದ ಸಂಗಮೇಶ್ವರ ಗುಡಿಯಲ್ಲಿ ಸ್ಥಾನಪತಿಯಾಗಿದ್ದ ಈಶಾನ ಗುರುಗಳಲ್ಲಿ ಆಶ್ರಯವನ್ನು ಪಡೆದ. ಅಲ್ಲಿ ಸಂಗಮೇಶ್ವರನನ್ನು ಪೂಜಿಸುತ್ತಾ ಭಕ್ತಿ ಸಾಧನೆಯಲ್ಲಿರಲು ಶಿವನು ಆತನ ಕನಸಿನಲ್ಲಿ ಕಾಣಿಸಿಕೊಂಡು ಮಂಗಳವಾಡಕ್ಕೆ ಹೋಗುವಂತೆ ಅಪ್ಪಣೆಮಾಡಿದನು. ಬಸವಣ್ಣನು ಅಲ್ಲಿಗೆ ಹೋಗಲು ರಾಜಭಂಡಾರಿಯಾದ ಸಿದ್ಧದಂಡೇಶನ ಆಶ್ರಯ ದೊರೆಯಿತು. ಈತನ ಜಾಣತನ ರಾಜನಾದ ಬಿಜ್ಜಳನ ಕಿವಿಯನ್ನು ಮುಟ್ಟಿ ರಾಜಾಸ್ಥಾನದ ಮನ್ನಣೆ ದೊರೆಯಿತು. ಸಿದ್ದದಂಡೇಶನ ಮರಣಾನಂತರ ಈತನೇ ಆತನ ಆಸ್ತಿ ಅಧಿಕಾರಗಳಿಗೆ ಉತ್ತರಾಧಿಕಾರಿಯಾದನು. ಸುಂದರಿಯರಾದ ಗಂಗಾದೇವಿ, ಮಾಯಿದೇವಿಯವರು ಈತನ ಪತ್ನಿಯರಾದರು. ಮಾನವನು ಬಯಸಬಹುದಾದ ಅಧಿಕಾರ, ಐಶ್ವರ್ಯ, ಕಾಮಿನಿ, ಕೀರ್ತಿ, ರೂಪು, ಯೌವನ, ವೈಭವ, ಎಲ್ಲವೂ ಆತನಿಗೆ ಅಣಿಯಾಗಿದ್ದವು. ಆದರೆ ಬಸವಣ್ಣನ ಚೇತನ ಊರ್ಧ್ವ ಮುಖವಾದುದು. ರಾಜನ ಭಂಡಾರಿಯಾಗುವ ವೇಳೆಗೆ ಆತನು ಭಕ್ತಿ ಭಂಡಾರಿಯೂ ಆಗಿದ್ದನು. ತನ್ನ ತನು ಮನಧನಗಳನ್ನು ಶಿವಾರ್ಪಣ ಬುದ್ಧಿಯಿಂದ ಜಂಗಮಾರಾಧನೆಗೆ ವಿನಿಯೋಗಿಸಿ ಕೃತಕೃತ್ಯನಾದ. ಆತನ ಕೀರ್ತಿ ದಶದಿಕ್ಕುಗಳಿಗೂ ಹರಡಿ, ಶಿವಶರಣರನ್ನು ತಂಡ ತಂಡವಾಗಿ ಕಲ್ಯಾಣಕ್ಕೆ ಕರೆ ತಂದಿತು. ಬಸವಣ್ಣ ಅವರ ಇಹಪರಗಳನ್ನು ಸಾಧಿಸುವುದಕ್ಕಾಗಿ ನಿತ್ಯ ದಾಸೋಹದ ಜೊತೆಗೆ 'ಅನುಭವ ಮಂಟಪ'ವನ್ನು ಸ್ಥಾಪಿಸಿ, ಶರಣಗೋಷ್ಠಿಗಳನ್ನು ನಡೆಸಿದನು. ದೇವ ಮಾನವನಾದ ಅಲ್ಲಮಪ್ರಭುವು ಅಲ್ಲಿನ ಶೂನ್ಯಸಿಂಹಾಸನದಲ್ಲಿ ಮಂಡಿಸಿ ಜನರಿಗೆ ಮಾರ್ಗದರ್ಶಕನಾದನು. ಇದರಿಂದ ಸಮಾಜದಲ್ಲಿದ್ದ ಸಹಸ್ರ ದೋಷಗಳು ನಿವಾರಣೆಯಾಗಿ, ಮಾನವ ಜನಾಂಗ ಶ್ರೇಯಸ್ಸಿನ ಹಾದಿಯನ್ನು ಹಿಡಿಯಿತು. ಬಸವಣ್ಣನ ಜನ್ಮ ಸಾರ್ಥಕವಾಯಿತು. ಇಂತಹ ಧರ್ಮ ನಿರತನಾದ ತ್ಯಾಗಪುರುಷನನ್ನು ಅವತಾರ ಪುರುಷನೆಂದು ಕರೆಯುವುದು ಸ್ವಾಭಾವಿಕ. ಕೈಲಾಸದಲ್ಲಿ ವೃಷಭಮುಖನೆಂಬ ಗಣಪನು ಶಿವ ಪ್ರಸಾದವನ್ನು ಶಿವನ ಆಸ್ಥಾನದವರಿಗೆಲ್ಲ ಹಂಚಹೊರಟವನು, ಷಣ್ಮುಖನಿಗೆ ಕೊಡುವುದನ್ನು ಮರೆತ; ಆಕ್ಷೇಪಿಸಿದಾಗ ಕೊಟ್ಟೆನೆಂದೇ ವಾದಿಸಿದ. ಇದರಿಂದ ಕುಪಿತನಾದ ಪರಶಿವ ಅವನನ್ನು ಭೂಲೋಕದಲ್ಲಿ ಮಾನವನಾಗಿ ಹುಟ್ಟಿ, ಭಕ್ತರಿಗೆ ಪ್ರಸಾದವನ್ನು ಹಂಚಿ ಹಿಂದಕ್ಕೆ ಬರುವಂತೆ ಅಪ್ಪಣೆ ಮಾಡಿದ. ಆತನೇ ಬಸವಣ್ಣ ಎಂದು ಹೇಳಲಾಗಿದೆ.

ಶಾಪದಿಂದ ಮಾನವನಾಗಿ ಹುಟ್ಟಿದ ಬಸವಣ್ಣ ಅನೇಕ ಪವಾಡಗಳನ್ನು ಮೆರೆದನೆಂದು ಕವಿ ಕೃತಿಗಳಲ್ಲಿ ಕಂಡುಬರುತ್ತದೆ. ಜನಸಾಮಾನ್ಯರಲ್ಲಿ ಧರ್ಮನಿಷ್ಠೆಯನ್ನು ನಾಟುವುದಕ್ಕೆ ಪವಾಡಗಳು ಸಾಕಷ್ಟು ಸಹಾಯಕವಾಗಬಲ್ಲವಾದರೂ. ವಿಚಾರಪರರಾದವರು ಪವಾಡಗಳಷ್ಟರಿಂದಲೇ ತೃಪ್ತರಾಗುವುದಿಲ್ಲ; ಅವರು ಮಹಾಪುರುಷನ ಜೀವನದಲ್ಲಿ ಮಾನವೀಯ ಮೌಲ್ಯಗಳನ್ನು ಅರಸುತ್ತಾರೆ. ಅಂತಹವರ ದೃಷ್ಟಿಯಲ್ಲಿ ದೇವರು ಮಾನವನಾಗಿ ಅವತರಿಸುವುದಿಲ್ಲ; ಮಾನವನು ತನ್ನ ಮಹತ್ಕಾರ್ಯಗಳ ಸೋಪಾನಗಳಿಂದ ದೇವತ್ವಕ್ಕೇರುತ್ತಾನೆ. ಬಸವಣ್ಣನು ಅಂತಹ ದೇವಮಾನವನೆಂಬುದನ್ನು ಆತನ ವಚನಗಳು ದಿಗ್ದರ್ಶಿಸುತ್ತವೆ. ಮಾನವನಾಗಿದ್ದ ಆತ ಹೇಗೆ ಸಾಧನೆಯ ಹೆದ್ದಾರಿಯಲ್ಲಿ ಹೆಜ್ಜೆ ಹೆಜ್ಜೆಯಾಗಿ ಮುಂದುವರಿದು ದೇವಮಾನವನಾದನೆಂಬುದು ಇಲ್ಲಿ ಸ್ಪಷ್ಟವಾಗುತ್ತದೆ. ಆತನು ಶಿವನನ್ನು ಕುರಿತು ಹೇಳುವ 'ಅಯ್ಯಾ ಅಯ್ಯಾ ಎಂದು ಕರೆವುತ್ತಲಿದೇನೆ; ಅಯ್ಯಾ ಅಯ್ಯಾ ಎಂದು ಒರಲುತ್ತಲಿದ್ದೇನೆ; ಓ ಎನ್ನಲಾಗದೆ ಅಯ್ಯಾ ?' ಅಕಟಕಟಾ, ಶಿವ ! ನಿನಗಿನಿತು ಕರುಣವಿಲ್ಲ;

ಅಕಟಕಟಾ, ಶಿವಾ ! ನಿನಗಿನಿತು ಕೃಪೆಯಿಲ್ಲ ಏಕೆ ಹುಟ್ಟಿಸಿದೆ ಇಹಲೋಕ ದುಃಖಿಯ, ಪರಲೋಕದೂರನ ?' ಎಂದೋ ಸಂಸಾರದಂದುಗ ಹಿಂಗುವುದು ? ಎಂದೊ ಮನದಲ್ಲಿ ಪರಿಣಾಮವಹುದೆನಗೆ ? ಎಂದೋ, ಎಂದೋ, ಕೂಡಲಸಂಗಮದೇವ, ಇನ್ನೆಂದೋ ! ಇತ್ಯಾದಿ ವಚನಗಳಲ್ಲಿ ನಾವು ಸಾಧಕನ ಮನದ ಹೋರಾಟ ಮಾರ್ಮಿಕವಾಗಿ ಚಿತ್ರಿತವಾಗಿರುವದನ್ನು ಕಾಣುತ್ತೇವೆ. ಉದ್ಧಾರಕ್ಕಾಗಿ ಆತನು ತೋರುತ್ತಿರುವ ತವಕ ರೋಮಾಂಚಕಾರಿಯಾಗಿದೆ.

ಆತ್ಮ ಸಾಕ್ಷಾತ್ಕಾರಕ್ಕೆ ಹೆದ್ದಾರಿ ಚಿತ್ತೈಕಾಗ್ರತೆ. ಸಾಧಕನಾದ ಬಸವಣ್ಣನ ಮನಸ್ಸು ಇನ್ನೂ ಹತೋಟಿಗೆ ಸಿಕ್ಕಿಲ್ಲ, 'ಕೊಂಬೆಯ ಮೇಲಿನ ಮರ್ಕಟನಂತೆ ಲಂಘಿಸುವುದೆನ್ನ ಮನವು 'ಇದು ಸಾಲದೆಂಬಂತೆ ಮಾಯೆ ಬೇರೆ–ತಾಯಾಗಿ, ಮಗಳಾಗಿ, ಮಡದಿಯಾಗಿ ಕಾಡುತ್ತಿದೆ' 'ಎನ್ನ ಚಿತ್ತವು ಅತ್ತಿಯ ಹಣ್ಣು ನೋಡಯ್ಯ, ವಿಚಾರಿಸಿದೊಡೇನು ಹುರುಳಿಲ್ಲವಯ್ಯ' ಎಂದು ಆತ ಮರುಗುತ್ತಾನೆ. ದೇವರನ್ನು ಕುರಿತು 'ವಿಷಯವೆಂಬ ಹಸುರನೆನ್ನ ಮುಂದೆ ತಂದು ಪಸರಿಸಿದೆಯಯ್ಯ, ಪಶುವೇನಬಲ್ಲುದು ? ಹಸುರೆಂದೆಳಸುವುದು 'ಆದ್ದರಿಂದ ವಿಷಯ ಸುಖಕ್ಕೆ ಅವಕಾಶವಿಲ್ಲದ ಹಾಗೆ ಅತ್ತಲಿತ್ತ ಹೋಗದಂತೆ ಹೆಳವನ ಮಾಡಯ್ಯ ತಂದೆ, ಸುತ್ತಿ ಸುಳಿದು ನೋಡದಂತೆ ಅಂಧಕನ ಮಾಡಯ್ಯ ತಂದೆ, ಮತ್ತೊಂದ ಕೇಳದಂತೆ ಕಿವುಡನ ಮಾಡಯ್ಯ ತಂದೆ' ಎಂದು ಬೇಡಿಕೊಳ್ಳುತ್ತಾನೆ. ಆತನು ಕೈಕೊಂಡಿರುವ ಭಕ್ತಿಮಾರ್ಗ ಹೊರನೋಟಕ್ಕೆ ಸುಲಭವಾಗಿ ಕಾಣಿಸಿದರೂ, ಅಹಂಕಾರ ಮಮಕಾರಗಳಿಂದ ಮುಕ್ತನಾಗದ ಹೊರತು ಅದು ಅಳುವಡದು. ಅವುಗಳನ್ನು ಬಿಟ್ಟೆನೆಂದು ಬಾಯಿಂದ ಹೇಳಿಬಿಟ್ಟರಾಯಿತೆ? 'ನೆಚ್ಚಿದನೆಂದರೆ, ಮೆಚ್ಚಿದನೆಂದರೆ, ಸಲೆ ಮಾರುವೋದೆನೆಂದರೆ, ತನುವನಲ್ಲಾಡಿಸಿ ನೋಡವೆ ನೀನು; ಮನವನಲ್ಲಾಡಿಸುವೆ ನೀನು ! ಧನವನಲ್ಲಾಡಿಸುವೆ ನೀನು !' ಎಂದು ಹೇಳುತ್ತಾನೆ, ಬಸವಣ್ಣ. ಕ್ರಮಕ್ರಮವಾಗಿ ಆತನ ಮನಸ್ಸು ನಿಸ್ಸಾರ ವಸ್ತುಗಳ ಚಿಂತನೆಯನ್ನು ಕಳೆದುಕೊಂಡು 'ಕೂಡಲ ಸಂಗಯ್ಯ ಒಲಿದಾನೋ ಒಲಿಯನೊ ಎಂಬ ಚಿಂತೆ ಹಾಸಲುಂಟು ಹೊದೆಯಲುಂಟು' ಎಂಬ ಮಟ್ಟಕ್ಕೇರಿತು. ಹೀಗೆ ಮನಸ್ಸು ಸ್ಥಿರವಾದಾಗ 'ವಚನದಲ್ಲಿ ನಾಮಾಮೃತ ತುಂಬಿ, ನಯನದಲ್ಲಿ ನಿಮ್ಮ ಮೂರುತಿ ತುಂಬಿ, ಮನದಲ್ಲಿ ನಿಮ್ಮ ನೆನಹು ತುಂಬಿ, ಕಿವಿಯಲ್ಲಿ ನಿಮ್ಮ ಕೀರುತಿ ತುಂಬಿ, ಕೂಡಲಸಂಗಮದೇವ ! ನಿಮ್ಮ ಚರಣ ಕಮಲದೊಳಗಾನು ತುಂಬಿ' ಎಂದು ಹೇಳುವಂತಹ ತುಂಬಿದ ಕೊಡವಾದ. ಇಲ್ಲಿಂದ ಮುಂದೆ ಆತನ ಬಾಯಿಂದ ಜ್ಞಾನಗಂಗೆ ತಾನೇ ತಾನಾಗಿ ಹರಿದುಬಂತು.

ಬಸವಣ್ಣನ ವಚನಗಳೆಂದರೆ ಸದಾಚಾರಸ್ಮೃತಿಗಳು. ಅವು ಎಷ್ಟು ಸರಳ, ಎಷ್ಟು ಸುಲಭ, ಎಷ್ಟು ಲಲಿತ ! 'ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ, ಮುನಿಯಬೇಡ, ಅನ್ಯರಿಗೆ ಅಸಹ್ಯಪಡಬೇಡ, ತನ್ನ ಬಣ್ಣಿಸಬೇಡ, ಇದಿರ ಹಳಿಯಲುಬೇಡ. ಇದೇ ಅಂತರಂಗಶುದ್ಧಿ ! ಇದೇ ಬಹಿರಂಗ ಶುದ್ಧಿ ! ಇದೇ ನಮ್ಮ ಕೂಡಲಸಂಗಮನನೊಲಿಸುವ ಪರಿ' ಸದಾಚಾರವೇ ಮುಕ್ತಿಗೆ ಸೋಪಾನವೆಂದು ಬಸವಣ್ಣನ ಬೋಧನೆ. ಮಾನವಜನ್ಮ ಸಾರ್ಥಕವಾಗಬೇಕಾದರೆ ಸುತ್ತುಮುತ್ತಿನ ಹತ್ತು ಜನಕ್ಕೆ ಉಪಕಾರಿಯಾಗಿ ಬಾಳಬೇಕು. 'ಮರ್ತ್ಯವೆಂಬುದು ಕರ್ತಾರನ ಕಮ್ಮಟ, ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುತ್ತಾರೆ' ಆದ್ದರಿಂದ ಇಹಪರಗಳೆರಡನ್ನೂ ಸಾಧಿಸುವ ಸುಲಭೋಪಾಯ ಎಂದರೆ ಎಲ್ಲರಲ್ಲಿಯೂ ದಯಶಾಲಿಯಾಗಿರುವುದು. ಅದೇ ಅತ್ಯಂತ ಶ್ರೇಷ್ಠವಾದ ಮಾನವಧರ್ಮ. 'ದಯವಿಲ್ಲದ ಧರ್ಮವೇವುದಯ್ಯ ! ದಯವೇ ಬೇಕು ಸರ್ವಪ್ರಾಣಿಗಳೆಲ್ಲರಲಿ ದಯವೇ ಧರ್ಮದ ಮೂಲವಯ್ಯ' ಎನ್ನುತ್ತಾನೆ ಬಸವಣ್ಣ. ಆತನ ಮಾತುಗಳನ್ನು ಕೇಳಿ – 'ಸತ್ಯವ ನುಡಿವುದೇ ದೇವಲೋಕ, ಮಿಥ್ಯವ ನುಡಿವುದೇ ಮರ್ತ್ಯಲೋಕ; ಆಚಾರವೇ ಸ್ವರ್ಗ, ಅನಾಚಾರವೇ ನರಕ;

ಅಯ್ಯಾ ಎಂದಡೆ ಸ್ವರ್ಗ, ಎಲ್ಲವೊ ಎಂದಡೆ ನರಕ. ದೇವಾ, ಭಕ್ತ, ಜಯ ಜೀಯ ಎಂಬ ನುಡಿಯೊಳಗೆ ಕೈಲಾಸವಿದೆ' ಎಂಬ ವಚನಗಳನ್ನು ಕೇಳಿದಾಗ ಉಪನಿಷದ್ವಾಕ್ಯಗಳನ್ನು ಕೇಳಿದ ಅನುಭವವಾಗುತ್ತದೆ; ವಚನಗಳನ್ನು 'ಕನ್ನಡದ ಉಪನಿಷತ್ತು'ಗಳೆಂದು ಕರೆದುದರ ಸಾರ್ಥಕತೆ ಅರ್ಥವಾಗುತ್ತದೆ.

ಬಸವಣ್ಣನು ತನ್ನ ಸುತ್ತುಮುತ್ತಿನ ಸಮಾಜದಲ್ಲಿನ ಅಜ್ಞಾನ ಅಂಧಕಾರಗಳನ್ನು ತೊಡೆದುಹಾಕಲು ಬದ್ಧಕಂಕಣನಾಗಿದ್ದನು. 'ಮಡಿಕೆದೈವ, ಬೀದಿಯ ಕಲ್ಲು ದೈವ, ಹಣಿಗೆ ದೈವ, ಬಿಲ್ಲನಾರಿ ದೈವ ಕಾಣಿರೊ !' ಆ ಕೀಳು ದೈವಗಳು 'ಮೊರಡಿಗಳಲ್ಲಿ ಊರ ದಾರಿಗಳಲ್ಲಿ, ಕೆರೆ ಬಾವಿ ಹೂಗಿಡ ಮರಂಗಳಲ್ಲಿ '........ ಮನೆಮಾಡಿಕೊಂಡು ಅಜ್ಞಾನಿಗಳಿಗೆ ಹಿಂಸೆಕೊಡುತ್ತಾ 'ಮಾರಯ್ಯ, ಬೀರಯ್ಯ, ಅಂತರ, ಕಾಳಯ್ಯ, ಕೇತಯ್ಯ' ಎಂಬ ಹೆಸರುಗಳಿಂದ ವಿಜೃಂಭಿಸುತ್ತಿದ್ದರೆ, ಅವುಗಳನ್ನು ನಿರ್ಮೂಲ ಮಾಡಲು 'ನಮ್ಮ ಕೂಡಲ ಸಂಗಮದೇವ ಶರಣೆಂಬುದೊಂದೆದಡಿ ಸಾಲದೆ ?' ಎಂದು ಕೇಳುತ್ತಾನೆ, ಬಸವಣ್ಣ. 'ಅರುಗು ತಿಂದರೆ ಕರಗುವ ದೈವವ ಉರಿಯ ಕಂಡರೆ ಮುರುಟುವ ದೈವವ, ಅವಸರ ಬಂದರೆ ಮಾರುವ ದೈವವ 'ದೇವರೆಂದು ಕರೆಯಬೇಕೆ ? ಜನ ಬಾಯಲ್ಲಿ ಹೇಳುವ ತತ್ವಕ್ಕೂ ಕಾರ್ಯತಃ ಮಾಡುವ ಕೃತಿಗೂ ಎಷ್ಟು ಅಂತರ ! 'ಕಲ್ಲನಾಗರ ಕಂಡರೆ ಹಾಲನೆರೆಯೆಂಬರು, ದಿಟದನಾಗರ ಕಂಡರೆ ಕೊಲ್ಲೆಂಬರಯ್ಯ, ಉಂಬ ಜಂಗಮ ಬಂದರೆ ನಡೆ ಎಂಬರು, ಉಣ್ಣದ ಲಿಂಗಕ್ಕೆ ಬೋನವ ಹಿಡಿ ಎಂಬರಯ್ಯ !' ಅನಾಗರಿಕರಾದ ಅಜ್ಞಾನಿಗಳ ಸ್ಥಿತಿ ಈ ದುಃಸ್ಥಿತಿಯಾದರೆ, ವೇದ ಶಾಸ್ತ್ರಗಳನ್ನು ಓದಿದ ಬ್ರಾಹ್ಮಣರು ಯಜ್ಞಯಾಗಾದಿಗಳ ಹೆಸರಿನಲ್ಲಿ ಪ್ರಾಣಿಹತ್ಯೆ ಮಾಡ್ತುತಾರೆ! ಯಾಗಪಶುವೊಂದನ್ನು ಕಂಡ ಬಸವಣ್ಣನ ಹೃದಯ ಕರಗಿ 'ಮಾತಿನ ಮಾತಿಂಗೆ ನಿನ್ನ ಕೊಂದ ಹರೆಂದು ಎಲೆ ಹೋತಾ ಅಳು, ಕಂಡಾ ! ವೇದವನೋದಿದವರ ಮುಂದೆ ಅಳು ಕಂಡಾ ! ಶಾಸ್ತ್ರವನೋದಿದವರ ಮುಂದೆ ಅಳು ಕಂಡಾ ! ನೀನತ್ತುದಕ್ಕೆ ತಕ್ಕುದ ಮಾಡುವ ಕೂಡಲ ಸಂಗಮದೇವಾ' ಎಂಬ ಕರುಣರಸದ ಹೊನಲು ಹರಿಯುತ್ತದೆ. ಸರ್ವಸಮಾನತೆಯನ್ನು ಸಾರಹೊರಟ ಆತನಿಗೆ ಜಾತಿಯಲ್ಲಿನ ಮೇಲುಕೀಲು ಅರ್ಥಹೀನವಾದುದು. ಆತನ ಕೆರಳಿ 'ಕುಲವನರಸದಿರಿಂಭೋ!' ಎಂದು ಹೇಳಿ ಪ್ರಖ್ಯಾತರಾದ ಋಷಿಗಳ ಉದಾಹರಣೆಯಿಂದ ತನ್ನ ಅಭಿಪ್ರಾಯವನ್ನು ಸಮರ್ಥಿಸಿ ಕೊಳ್ಳುತ್ತಾನೆ. ಅಗಸ, ಕಮ್ಮಾರ, ಬ್ರಾಹ್ಮಣ ಇತ್ಯಾದಿ ಮತಗಳವರಲ್ಲಿ ಆತನಿಗೆ ಅಂತಹ ವ್ಯತ್ಯಾಸವೇನೂ ಕಾಣುತ್ತಿಲ್ಲ. 'ಕಾಸಿ ಕಮ್ಮಾರನಾದ ಬೀಸಿ ಮಡಿವಾಳನಾದ, ಹಾಸನಿಕ್ಕಿ ಸಾಲಿಗನಾದ, ವೇದವನೋದಿ ಹಾರುವನಾದ ಒಬ್ಬೊಬ್ಬನದು ಒಂದೊಂದು ಕಾಯಕ. ಇದರಲ್ಲಿ ಮೇಲುಕೀಳಿನ ಪ್ರಶ್ನೆಯೆಲ್ಲಿ ಬಂತು. 'ಕೊಲ್ಲುವವನೆ ಮಾದಿಗ, ಹೊಲಸು ತಿಂಬುವನೆ ಹೊಲೆಯ, ಕುಲವೇನೋ. ಅವದಿರ ಕುಲವೇನೋ ?' ಎಂದು ಹೇಳಿ, ನಿಜವಾದ ಭಕ್ತನೇ ಶ್ರೇಷ್ಠ ಕುಲಜನೆಂದು ಆತ ನಿರ್ಧರಿಸುತ್ತಾನೆ ಕಾಯಕಗಳಲ್ಲಿ ಕೀಳುಮೇಲುಗಳನ್ನು ಗಣಿಸುವುದೂ ಆತನ ದೃಷ್ಟಿಯಲ್ಲಿ ಅಕ್ಷಮ್ಯ ಅಪರಾಧ. ಮನೆಗೆ ಭಕ್ತನ ಕಾಯಕವಾವುದೆಂದು ಕೇಳಿದರೆ ತನ್ನ ತಲೆದಂಡವೆಂದು ಹೇಳಿಕೊಂಡಿದ್ದಾನೆ.

ವೀರಶೈವವನ್ನು ಸ್ವೀಕರಿಸಿದ ಮೇಲೆಯೂ ಪೂರ್ವಸಂಸ್ಕಾರಕ್ಕೆ ಅಂಟಿ ಕೊಂಡಿರುವವನ್ನು ಕುರಿತು 'ಪರುಷ ಮುಟ್ಟಿದ ಬಳಿಕ ಕಬ್ಬುನವಾಗದು ನೋಡಾ' ಎಂದು ಗದರಿಸುತ್ತಾನೆ. ತಲೆ ಬೋಳಾದರೂ ಮನ ಬೋಳಾಗದ ಜಂಗಮರನ್ನೂ, ಭಕ್ತರಲ್ಲದ ವೇಷಧಾರಿಗಳನ್ನೂ ಬಹಿರಾಡಂಬರದ ಆಟಮಟ ಭಕ್ತರನ್ನೂ ಆತ ಕಟುವಾಗಿ ಟೀಕಿಸುತ್ತಾನೆ. 'ಏತ ತಲೆವಾಗಿದರೇನು, ಗುರು ಭಕ್ತನಾಗಬಲ್ಲುದೆ? ಇಕ್ಕುಳ ಕೈಮುಗಿದರೇನು, ಭೃತ್ಯಾಚಾರಿಯಾಗಬಲ್ಲುದೆ ? ಗಿಳಿಯೋದಿದರೇನು,

ಲಿಂಗವೇದಿಯಾಗಬಲ್ಲುದೆ?' ಎಂದು ಕೇಳುತ್ತಾನೆ. ಗುರುಲಿಂಗ ಜಂಗಮದಲ್ಲಿ ಎರಡರಿಯದ ಭಕ್ತಿಯನ್ನು ಬೆಳೆಸಿಕೊಂಡಿದ್ದ ಬಸವಣ್ಣ ಅದನ್ನೆ ಜನರಿಗೆ ಬೋಧಿಸಿದ. ಬಸವಣ್ಣನು ನಿಷ್ಕಪಟಿಯಾದ ಸದಾಚಾರಿ, ಲಿಂಗನಿಷ್ಠ ಭಕ್ತಿ ಭಂಡಾರಿ. ಆದರೆ ಇದಕ್ಕಾಗಿ ಜನ ತನ್ನನ್ನು ಹೊಗಳುವುದು ಆತನಿಗೆ ಅಸಹ್ಯಕರ. 'ಎನ್ನವರೊಲಿದು ಹೊನ್ನ ಶೂಲದಲಿಕ್ಕಿದರೆನ್ನ ಹೊಗಳಿ, ಹೊಗಳಿ' ಎಂದು ಆತ ಅಕ್ಕಸಪಡುತ್ತಾನೆ. ನ್ಯಾಯ ನಿಷ್ಠುರನಾದ ಆತ ಜನರ ತೆಗಳಿಕೆಗೂ ಸೊಪ್ಪು ಹಾಕುವವನಲ್ಲ. 'ದೇವನೊಬ್ಬ ನಾಮ ಹಲವು; ಪರಮ ಪತಿವ್ರತೆಗೆ ಗಂಡನೊಬ್ಬ' ಎಂದು ಆತ ಬೋಧಿಸಿದರೂ ಹಲವರು ಊಸುರುಳ್ಳಿಯಂತೆ ಕ್ಷಣಕ್ಕೊಂದು ಬಣ್ಣ ತಾಳುವುದನ್ನು ಕಂಡು ಕೆರಳಿ 'ಭಕ್ತರ ಕಂಡರೆ ಬೋಳಪ್ಪಿರಯ್ಯ, ಸವಣರ ಕಂಡರೆ ಬತ್ತಲೆಪ್ಪಿರಯ್ಯ, ಹಾರುವವರ ಕಂಡರೆ ಹರಿನಾಮವೆಂಬಿರಯ್ಯ, ಅವರವರ ಕಂಡರೆ ಅವರವರಂತೆ ಸೂಳೆಗೆ ಹುಟ್ಟಿದವರ ತೋರದಿರಯ್ಯ' ಎಂದು ಗುಡುಗುತ್ತಾನೆ. ಇದನ್ನು ಕಂಡು ಪ್ರತಿಭಟನೆ, ನಿಂದೆ ನಿಷ್ಠುರಗಳು ಬಂದವೆಂದು ಕಾಣುತ್ತದೆ. ಬಸವಣ್ಣ ಅದಕ್ಕೆ ಸೊಪ್ಪು ಹಾಕದೆ 'ಆರು ಮುನಿದು ಎಮ್ಮನೇನ ಮಾಡುವರು ? ಊರು ಮುನಿದು ಎಮ್ಮನೇನು ಮಾಡುವುದು ? ನಮ್ಮ ಕುನ್ನಿಗೆ ಕೂಸ ಕೊಡಬೇಡ, ನಮ್ಮ ಸೊಣಗಂಗೆ ತಳಿಗೆಯಲ್ಲಿಕ್ಕಬೇಡ ಆನೆಯ ಮೇಲೆ ಹೋಹನ ಶ್ವಾನ ಕಚ್ಚಬಲ್ಲುದೆ ? ಎಂದು ಸವಾಲು ಹಾಕುತ್ತಾನೆ.

ಬಸವಣ್ಣನ ಬೋಧನಾವಿಧಾನ ಅನೇಕ ಕಡೆ ಅತ್ಯಂತ ಲಲಿತ ಸುಂದರವಾದ ಸಾಹಿತ್ಯ ರೂಪದಲ್ಲಿದೆ; ನೆರೆ ಕೆನ್ನೆಗೆ, ತೆರೆ ಗಲ್ಲಕೆ, ಶರೀರ ಗೂಡುವೋಗದ ಮುನ್ನ ಹಲ್ಲು ಹೋಗಿ ಬೆನ್ನು ಬಾಗಿ ಅನ್ಯರಿಂಗೆ ಹಂಗಾಗದ ಮುನ್ನ ಮುಪ್ಪಿಂದೊಪ್ಪವಳಿಯದ ಮುನ್ನ, ಮೃತ್ಯು ಮುಟ್ಟದ ಮುನ್ನ ಪೂಜಿಸು ಕೂಡಲ ಸಂಗಮದೇವನ' ಏಕೆಂದರೆ 'ಸಂಸಾರವೆಂಬುದು ಗಾಳಿಯ ಸೊಡರು, ಸಿರಿಯೆಂಬುದು ಸಂತೆಯಮಂದಿ' ಎಂದು ಆತ ಬೋಧಿಸುತ್ತಾನೆ. ಅಳಿಮನದವನಿಗೆ ಶಿವದೀಕ್ಷೆ ಕೊಟ್ಟರೆ ಅದು ವ್ಯರ್ಥವೆಂದು ಹೇಳುತ್ತ ಹೇಳುತ್ತ 'ಕುಂಬಳಕಾಯಿಗೆ ಕಬ್ಬುನದ ಕಟ್ಟು ಕೊಟ್ಟರೆ ಕೊಳೆಯುವುದಲ್ಲದೆ ಬಲುಹಾಗಬಲ್ಲುದೆ ?' ಹಾಗೆಯೆ 'ಸಗಣಿಯ ಬೆನಕಂಗೆ ಸಂಪಿಗೆಯರಳಲ್ಲಿ ಪೂಜಿಸಿದರೆ, ರಚನೆಯಲ್ಲದೆ ಅದರ ಗಂಜಳ ಬಿಡದಣ್ಣ', 'ಮಣ್ಣ ಪುತ್ಥಳಿಯ ಮಾಣದೆ ಜಲದಲ್ಲಿ ತೊಳೆದರೆ ನಿಚ್ಚಕ್ಕೆ ನಿಚ್ಚಕೆಸರಹುದಲ್ಲದೆ ಅವರಚ್ಚಿಗೆ ಬಿಡದಣ್ಣ, ಅಂದರಂತೆಯೆ ಮೂಢನಿಗೆ ದೀಕ್ಷೆ ಕೊಟ್ಟು ಪ್ರಯೋಜನವಿಲ್ಲ. 'ಒಡೆತ್ತಬಲ್ಲದು ಅವಲಕ್ಕಿಯ ಸವಿಯ' ಕೋಡುಗ ಬಲ್ಲುದೆ ಸೆಳೆಮಂಚದ ಸುಖವ ?'

ಬಸವಣ್ಣನ ವಚನಗಳ ಆಧಾರದಿಂದ ಹೇಳುವುದಾದರೆ, ಆತ್ಮವಿಮರ್ಶೆಯಲ್ಲಿ ತೊಡಗಿರುವ ಆತನು ಮಾನವಾತೀತನಾಗದೆ, ದೇವತ್ವ ಮನುಷ್ಯತ್ವಗಳು ಸಂಧಿಸುವ ಸ್ಥಾನದಲ್ಲಿ ನಿಂತಿದ್ದಾನೆ. ಆತನ ವಚನಗಳು ಜ್ಞಾನಜ್ಯೋತಿಯ ಶುಭ್ರಕಾಂತಿಯಿಂದ ತೊಳಗಿ ಬೆಳಗುತ್ತಿವೆ. ಆತನು ಹೇಳುವ 'ನುಡಿದರೆ ಮುತ್ತಿನ ಹಾರದಂತಿರಬೇಕು, ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು. ನುಡಿದರೆ ಸ್ಫಟಿಕದ ಶಲಾಕೆಯಂತಿರಬೇಕು, ನುಡಿದರೆ ಲಿಂಗಮೆಚ್ಚಿ ಅಹುದೆನಬೇಕು' ಎಂಬ ಆದರ್ಶಕ್ಕೆ ಆತನ ನುಡಿಗಳೇ ಉದಾಹರಣೆಯಾಗಿವೆ, ಅಹುದು, ಲಿಂಗ ಮೆಚ್ಚಿ 'ಅಹುದು' ಎಂದುದರಿಂದಲೇ ಬಸವಣ್ಣ ಅಮೃತಪುತ್ರನಾದುದು, ಪವಾಡ ಪುರುಷನಾದುದು, ಮಾನವದೇವನಾದುದು. ಆತನ ವಚನಗಳಲ್ಲಿ ಧರ್ಮ ಕಾವ್ಯಧರ್ಮಗಳು ಸಮರಸವಾಗಿ ಬೆರೆತು ಹೃದಯಕ್ಕೆ ಆನಂದವನ್ನೂ ಆತ್ಮಕ್ಕೆ ಶ್ರೇಯಸ್ಸನ್ನೂ ಒದಗಿಸುತ್ತವೆ.

೫. ಮಹಾದೇವಿಯಕ್ಕ

ವಚನಕಾರರಲ್ಲಿ ಬಸವಣ್ಣ ಅಗ್ರಗಣ್ಯನಾಗಿರುವಂತೆ ವಚನಕಾರ್ತಿಯರಲ್ಲಿ ಅಕ್ಕಮಹಾದೇವಿ ಅಗ್ರಗಣ್ಯೆ. ಉಡುತಡಿಯೆಂಬ ಊರಿನ ನಿರ್ಮಲಶೆಟ್ಟಿ-ಸುಮತಿ ಎಂಬ ವೀರಶೈವ ದಂಪತಿಗಳಿಗೆ ಮಗಳಾಗಿ ಹುಟ್ಟಿದವಳು ಅಕ್ಕಮಹಾದೇವಿ. ಆಕೆಯ ಜೊತೆಯಲ್ಲಿಯೆ ಶಿವಭಕ್ತಿ ಬೆಳೆಯಿತು. ದಿವ್ಯ ಸುಂದರಿಯಾದ ಈ ಹೆಣ್ಣು ಉಡುತಡಿಯ ರಾಜನಾದ ಕೌಶಿಕನ ಕಣ್ಣಿಗೆ ಬಿದ್ದು, ಆತನ ಮೋಹಕ್ಕೆ ಪಾತ್ರಳಾದಳು. ಜೈನನಾದ ಆತನಿಗೆ ಮಗಳನ್ನು ಕೊಡಲು ನಿರ್ಮಲಶೆಟ್ಟಿಗೆ ಇಷ್ಟವಿರಲಿಲ್ಲ; ಆದರೆ ರಾಜಕೋಪಕ್ಕೆ ಪಾತ್ರನಾಗಲು ಭಯ. ಈ ಸಂದಿಗ್ಧ ಸ್ಥಿತಿಯನ್ನು ಕಂಡ ಅಕ್ಕಮಹಾದೇವಿ ತನ್ನ ಗುರುಲಿಂಗ ಜಂಗಮ ಪೂಜೆಗೆ ವಿಘ್ನವಾಗುವಂಥ ಮೂರು ತಪ್ಪುಗಳನ್ನು ಮಾಡಿದೊಡನೆಯ ರಾಜನನ್ನುತ್ಯಜಿಸುವೆ ಎಂಬ ಷರತ್ತನ್ನು ಮುಂದಿಟ್ಟು ಆತನನ್ನು ಮದುವೆಯಾದಳು. ಕಾಮಿಯಾದ ರಾಜ ಬಹುಬೇಗ ಆ ತಪ್ಪುಗಳನ್ನು ಮಾಡಿದ. ಮಹಾದೇವಿ ಆತನನ್ನು ತ್ಯಜಿಸಿ, ದಿಗಂಬರಳಾಗಿ, ತನ್ನ ತಲೆಕೂದಲಿನಿಂದಲೇ ಮೈಮನವನ್ನು ಮುಚ್ಚಿಕೊಂಡು ಶಿವಶರಣರ ಕೈಲಾಸದಂತಿದ್ದ ಕಲ್ಯಾಣಕ್ಕೆ ಹೊರಟಳು. ಅನುಭವಮಂಟಪದಲ್ಲಿದ್ದ ಹಿರಿಯ ಶರಣರೆಲ್ಲ ಆಕೆಯ ಸ್ಥಿರ ಭಕ್ತಿಯನ್ನು ಒರೆ ಹಚ್ಚಿ ನೋಡಿದರು. ಆಕೆ ಹೇಳಿದಳು – 'ಹರನೇ ನೀನೆನಗೆ ಗಂಡನಾಗಬೇಕೆಂದು ಅನಂತಕಾಲ ತಪಿಸಿದ್ದೆ ನೋಡಾ ! ಹಸೆಯ ಮೇಲಣ ಮಾತು ಬೆಸಗೊಳ್ಳಲ್ಪಟ್ಟಿದರೆ ಶಶಿಧರನ ಹತ್ತಿರ ಕಳುಹಿದರೆಮ್ಮವರು. ಭಸ್ಮವನೆ ಹೂಸಿ, ಕಂಕಣವನೆ ಕಟ್ಟಿ ಮಲ್ಲಿಕಾರ್ಜುನ ತನಗೆ ನಾನಾಗಬೇಕೆಂದು 'ಆ ಎಳೆವರೆಯದಲ್ಲಿಯೆ ಆಕೆಗೆ ಕಾಯದ ಮೇಲಿನ ಅಭಿಮಾನ ಸತ್ತು ಹೋಗಿತ್ತು. 'ಕಾಯ ಕರ್ರನೆ ಕಂದಿದರೇನಯ್ಯ ? ಕಾಯ ಮಿರ್ರನೆ ಮಿಂಚಿದರೇನಯ್ಯ ? ಅಂತರಂಗ ಶುದ್ಧವಾದ ಬಳಿಕ ಚನ್ನಮಲ್ಲಿಕಾರ್ಜುನ ಲಿಂಗವು ಒಲಿದ ಕಾಯವು ಹೇಗಿದ್ದರೇನಯ್ಯ ?' ಆಕೆಯ ಭಕ್ತಿ ಅತ್ಯಂತ ಸ್ಥಿರವಾದುದು 'ಚಂದನವ ಕಡಿದು ಕೊರೆದು ನೊಂದನೆಂದು ಕಂಪ ಬಿಟ್ಟಿತ್ತೆ ? ತಂದು ಸುವರ್ಣವ ಕಡಿದೊರೆದಡೆ ಬೆಂದು ಕಳಂಕ ಹಿಡಿದಿತ್ತೆ ? ಸಂದು ಸಂದು ಕಡಿದು ಕಬ್ಬನು ತಂದು ಗಾಣದಲ್ಲಿಕ್ಕಿ ಬೆಂದ ಪಾಕಗಳು ಸಕ್ಕರೆಯಾಗಿ, ನೊಂದನೆಂದು ಸವಿಯ ಬಿಟ್ಟಿತ್ತೆ ? ... ಎನ್ನ ತಂದೆ ಚೆನ್ನಮಲ್ಲಿಕಾರ್ಜುನದೇವಯ್ಯ ಕೊಂದಡೆ ಶರಣೆಂಬುದ ಮಾಣೆ. ಆಕೆಯ ಈ ನಿಲುವನ್ನು ಅರ್ಥಮಾಡಿಕೊಂಡ ಶರಣರು ಆಕೆಯನ್ನು ಅನುಭವ ಮಂಟಪ ಪ್ರಮುಖ ಸದಸ್ಯಳಾಗಿ ಗಣಿಸಿ ಗೌರವಿಸಿದರು.

ಬಸವಣ್ಣನ ವಚನಗಳಂತೆ ಅಕ್ಕನ ವಚನಗಳಲ್ಲಿಯೂ ಭಗವಂತನ ಸಾಕ್ಷಾತ್ಕಾರಕ್ಕಾಗಿ ಸಾಧಕನಲ್ಲಿ ಕಾಣಬಹುದಾದ ಆಂತರಿಕ ಹೋರಾಟ ಆತ್ಮರೋದನಗಳು ಸುಂದರವಾದ ಭಾವಗೀತೆಯ ಮಾಧುರ್ಯದಿಂದ ತುಂಬಿ, ಅಭಿವ್ಯಕ್ತಿಗೊಂಡಿವೆ. 'ಅಂಗಸತಿ ಲಿಂಗಪತಿ' ಸ್ಥಿತಿ ಬಲಿತು ಆಕೆ ಚನ್ನಮಲ್ಲಿಕಾರ್ಜುನನಿಗಾಗಿ ಹಲುಬಿ ಹಂಬಲಿಸುತ್ತಾಳೆ. ಭಕ್ತಿ ಭಾವಭರಿತವಾಗಿದ್ದ ಆಕೆಯ ಸಾತ್ವಿಕ ಚೇತನಕ್ಕೆ ಸುತ್ತು ಮುತ್ತಿನ ಪ್ರಕೃತಿಯೆಲ್ಲವೂ ಜೀವ ಪೂರ್ಣವಾಗಿದೆ – 'ಅಳಿ ಸಂಕುಳವೆ, ಮಾಮರನೆ, ಬೆಳದಿಂಗಳೆ, ಕೋಗಿಲೆಯೆ ನಿಮ್ಮ ನಿಮ್ಮನೆಲ್ಲರನು ಒಂದು ಬೇಡುವೆನು, ಎನ್ನೊಡೆಯ ಚೆನ್ನಮಲ್ಲಿಕಾರ್ಜುನ ದೇವರ ಕಂಡರೆ ಕರೆದು ತೋರಿರೆ !' 'ಚಿಲಿಮಿಲಿಯೆಂದೋದುವ ಗಿಳಿಗಳಿರಾ, ನೀವು ಕಾಣಿರೆ ನೀವು ಕಾಣಿರೆ ? ಎರಗಿ ಬಂದಾಡುವ ತುಂಬಿಗಳಿರಾ, ನೀವು ಕಾಣಿರೆ ನೀವು ಕಾಣಿರೆ ? ಕೊಳನ ನಡೆಯಾಡುವ ಹಂಸಗಳಿರಾ, ನೀವು, ಕಾಣಿರೆ ನೀವು ಕಾಣಿರೆ ? ಗಿರಿಗಹ್ವರದೊಳಗಾಡುವ ನವಿಲುಗಳಿರಾ, ನೀವು ಕಾಣಿರೆ ನೀವು ಕಾಣಿರೆ ? ಚೆನ್ನಮಲ್ಲಿಕಾರ್ಜುನನೆಲ್ಲಿರ್ದಹನೆಂದು ನೀವು ಹೇಳಿರೆ ನೀವು ಹೇಳಿರೆ ? 'ದೇವೋನ್ಮಾದದಲ್ಲಿ ಮುಳುಗಿರುವ ಆಕೆ ತನ್ನ ವಿರಹವನ್ನು ಸಹಿಸಲಾರದೆ

‘ಕಿಚ್ಚಿಲ್ಲದ ಬೇಗೆಯಲ್ಲಿ ಬೆಂದೆನವ್ವಾ! ಏರಿಲ್ಲದ ಗಾಯದಲ್ಲಿ ನೊಂದೆನವ್ವಾ’! ಸುಖವಿಲ್ಲದೆ ಧಾವತಿಗೊಂ[illegible]ವ್ವಾ! ಚೆನ್ನಮಲ್ಲಿಕಾರ್ಜುನ ದೇವರಿಗೊಲಿದು ಬಾರದ ಭವಂಗಳ್ಲಲಿ ಬಂದೆನವ್ವಾ!’ ‘ಹೊಳೆವ ಜಡೆಯ ಮೇಲೆ ಎಳೆವೆಳದಿಂಗಳು ಫಣಿಮಣಿ ಕುಂಡಲದವ ನೋಡವ್ವಾ! ರುಂಡಮಾಲೆಯ ಕೊರಳವನ ಕಂಡರೆ ಬರಹೇಳವ್ವಾ, ಗೋವಿಂದನ ನಯನ ಉಂಗುಟದ ಮೇಲಿಪ್ಪುದು. ‘ಆಕೆಯದು ಎರಡಿಲ್ಲದ ಭಕ್ತಿ. ಆಕೆಯ ಆತ್ಮರೋದನ ಸಹಜವಾದುದೇ. ಆಕೆಯೆ ಹೇಳುತ್ತಾಳೆ. ‘ಗಿರಿಯಲ್ಲಲ್ಲದೆ ಹುಲ್ಲು ಮೊರಡಿಯಲ್ಲಾಡುವುದೇ ನವಿಲು ? ಕೊಳನಲ್ಲದೆ ಕಿರುವಳ್ಳಕ್ಕೆಳಸುವುದೇ ಹಂಸೆ ? ಮಾಮರ ತಳಿತಲ್ಲದೆ ಸರಗೈವುದೇ ಕೋಗಿಲೆ ? ಪರಿಮಳವಿಲ್ಲದ ಪುಷ್ಪಕ್ಕೆಳಸುವುದೇ ಭ್ರಮರ? ಎನ್ನದೇವ ಚೆನ್ನಮಲ್ಲಿಕಾರ್ಜುನನಲ್ಲದೆ ಅನ್ಯಕ್ಕೆಳಸುವುದೇ ಎನ್ನ ಮನ?’ ಇಂತಹ ನಿಷ್ಠೆಗೆ ಫಲ ದೊರೆಯದಿರುತ್ತದೆಯೆ ? ಆಕೆಗೆ ಆತ್ಮ ಸಾಕ್ಷಾತ್ಕಾರವಾಯಿತು. ಆಕೆ ಆನಂದದಿಂದ ಹಾಡಿದಳು: ‘ಹೊಳೆವ ಕೆಂಜೆಡೆಗಳು, ಮಣಿಮಕುಟ, ಒಪ್ಪುವ ಸುಲಿಪಲ್ಲ ನಗೆಮೊಗದ ಕಂಗಳ ಕಾಂತಿಯಂ ಈರೇಳು ಭುವನಮಂ ಬೆಳಗುವ ದಿವ್ಯ ಸ್ವರೂಪನ ಕಂಡೆ ನಾನು, ಕಂಡೆನ್ನ ಕಂಗಳ ಬರಹಿಂಗಿತ್ತಿಂದು, ಗಂಡಗಂಡರೆಲ್ಲ ಹೆಂಡಹೆಂಡಿರಾಗಿ ಆಳುವ ಗುರುವನ ಕಂಡೆ, ನಾನು, ಜಗದಾದಿ ಶಕ್ತಿಯೊಳು ಬೆರಸಿಯೊಡನಾಡುವ ಪರಮಗುರು ಚೆನ್ನ ಮಲ್ಲಿಕಾರ್ಜುನನ ನಿಲುವು ಕಂಡು ಬದುಕಿದೆನು.

ಅಕ್ಕನ ವಚನಗಳು ಆಕೆಯ ಹೃದಯಮಂದಿರದ ಗರ್ಭಗುಡಿಯಲ್ಲಿ ಹಚ್ಚಿಟ್ಟಿರುವ ನಂದಾದೀವಿಗೆಗಳಾಗಿ ಅಲ್ಲಿ ಪ್ರತಿಷ್ಠಿತವಾಗಿರುವ ಆತ್ಮ ಚರಿತ್ರ ರೂಪದ ಸುಂದರಪ್ರತಿಮೆಗಳು ತೊಳಗಿ ಬೆಳಗುತ್ತಿವೆ. ಅವುಗಳನ್ನು ಕಂಡು ಸಹೃದಯರ ಹೃದಯ ಆನಂದದ ಅಲೆಗಳಂತೆ ತುಂಬಿಕೊಳ್ಳುತ್ತದೆ. ‘ಬೆಟ್ಟದ ಮೇಲೆ ಒಂದು ಮನೆಯಾ ಮಾಡಿ ಮೃಗಗಳಿಗಂಜಿದಡೆಂತಯ್ಯ ? ಸಮುದ್ರದ ತಡಿಯಲ್ಲಿ ಮನೆಯ ಮಾಡಿನೊರೆತೆರೆಗಳಿಗಂಜಿದಡೆಂತಯ್ಯ ? ಸಂತೆಯೊಳೊಂದು ಮನೆಯ ಮಾಡಿ ಶಬ್ದಕ್ಕೆ ನಾಚಿದಡೆಂತಯ್ಯ ? ಮಲ್ಲಿಕಾರ್ಜುನದೇವ ಕೇಳಯ್ಯ, ಲೋಕದಲ್ಲಿ ಹುಟ್ಟಿರ್ದ ಬಳಿಕ ಸ್ತುತಿ ನಿಂದೆಗಳು ಬಂದಡೆ ಮನದಲ್ಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು !’ ಇಂತಹ ಸ್ಥಿತಪ್ರಜ್ಞ ಮಟ್ಟಕ್ಕೆ ಏರಿದ್ದುದ್ದರಿಂದಲೆ ಆಕೆಯ ವಚನಗಳು ಮಹೋನ್ನತವಾದ ಗೌರವಕ್ಕೆ ಪಾತ್ರವಾಗಿವೆ. ಚೆನ್ನಬಸವಣ್ಣ – ‘ಆದ್ಯರ ಅರವತ್ತು ವಚನಕ್ಕೆ ದಣ್ಣಾಯಕರ ಇಪ್ಪತ್ತು ವಚನ, ದಣ್ಣಾಯಕರ ಇಪ್ಪತ್ತು ವಚನಕ್ಕೆ ಪ್ರಭುದೇವರ ಹತ್ತು ವಚನ, ಪ್ರಭುದೇವರ ಹತ್ತು ವಚನಕ್ಕೆ ಅಜಗಣ್ಣನ ಐದು ವಚನ, ಅಜಗಣ್ಣನ ಐದು ವಚನಕ್ಕೆ ಕೂಡಲ ಚೆನ್ನಸಂಗಯ್ಯನಲ್ಲಿ ಮಹಾದೇವಿಯಕ್ಕನ ಒಂದು ವಚನ ಕಾಣಾ ಸಿದ್ಧರಾಮಯ್ಯ !’ ಎಂದು ಅಕ್ಕನನ್ನು ಗೌರವಿಸಿರುವುದು ಸಾರ್ಥಕವಾಗಿದೆ.

ಅಕ್ಕ ಮಹಾದೇವಿ ಅರವತ್ತೇಳು ತ್ರಿಪದಿಗಳನ್ನು ಒಳಗೊಂಡ ‘ಯೋಗಾಂಗ ತ್ರಿವಿಧಿ’ ಎಂಬ ತಾತ್ವಿಕ ಗ್ರಂಥಗವೊಂದನ್ನು ಬರೆದಿದ್ದಾಳೆ. ವಚನಗಳಂತೆ ಇವುಗಳಲ್ಲಿಯೂ ಆಕೆಯ ಅನುಭಾವ ವ್ಯಕ್ತವಾಗುತ್ತದೆ.

೬. ಚೆನ್ನ ಬಸವಣ್ಣ

ಬಸವಣ್ಣನ ಸೋದರಳಿಯನಾದ ಚೆನ್ನ ಬಸವಣ್ಣ ಅನುಭವ ಮಂಟಪದ ಆಧಾರ ಸ್ತಂಭಗಳಲ್ಲಿ ಒಂದರಂತೆ ಇರುವವನು. ಜ್ಞಾನಕ್ಕೆ ಅಲ್ಲಮಪ್ರಭು, ಭಕ್ತಿಗೆ ಬಸವಣ್ಣ ಹೆಸರಾಗಿರುವಂತೆ ವೀರಶೈವಾಚಾರ ನಿರೂಪಣೆಗೆ ಚೆನ್ನಬಸವಣ್ಣ ಪ್ರಸಿದ್ಧನಾಗಿದ್ದಾನೆ. ಈತನ ವಚನಗಳು ವೀರಶೈವಾಚಾರಕ್ಕೆ ಆಧಾರ ಗ್ರಂಥಗಳಂತಿವೆ. ಶರಣರು ಬಸವಣ್ಣನನ್ನು ‘ದಣ್ಣಾಯಕ’ ಎಂದು ಕರೆದು, ಆತನ ಕಾರ್ಯರಂಗದಲ್ಲಿ ಆತನ ಬಲಗೈಯಂತೆ ಇದ್ದ ಈತನನ್ನು ‘ಚಿಕ್ಕ ದಣ್ಣಾಯಕ’ ಎಂದು ಕರೆದಿದ್ದಾರೆ.

ಪ್ರಭುದೇವನೇ ಆದಿಯಾಗಿ ಎಲ್ಲರೂ ಈತನಲ್ಲಿ ವಿಶೇಷ ಗೌರವವನು ತೋರುತ್ತಾರೆ. ಈತನು ವಚನಗಳನ್ನೆ ಅಲ್ಲದೆ 'ಕರುಣಹಸುಗೆ', 'ಮಂತ್ರ ಗೋಪ್ಯ', 'ಮಿಶ್ರ ಗೋಪ್ಯ' ಎಂಬ ಶಾಸ್ತ್ರ ಗ್ರಂಥಗಳನ್ನೂ ಬರೆದ್ದಿದಾನೆ. ಆತನಲ್ಲಿ ನಿಷ್ಕೃಷ್ಟವಾದ ಶಾಸ್ತ್ರಜ್ಞಾನ ಕಂಡು ಬರುವುದಾದರೂ ಕಾವ್ಯಾಂಶ ಬಹಳ ಕಡಿಮೆ. ಈತನ ವನಚನಗಳಲ್ಲಿನ ಆತ್ಮ ಪ್ರತ್ಯಯ ಸ್ಪಷ್ಟೋಕ್ತಿ ಪ್ರಶಂಸಾರ್ಹವಾದುದಾದರೂ ಅನ್ಯಮತ ಅನ್ಯ ದೈವಗಳಲ್ಲಿ ಈತನು ತೋರುವ ಅಸಹನೆ ಸಮನ್ವಯ ದೃಷ್ಟಿಗೆ ಆತಂಕಕಾರಿಯಾಗಿದೆ. ಆತನಲ್ಲಿ ಆಗಾಗ ಮಿಂಚುವ ಪ್ರತಿಭೆಗೆ ಇದೊಂದು ಉದಾ: ಬಟ್ಟಬಯಲೆಲ್ಲ ಗಟ್ಟಿಗೊಂಡೊಡೆ ಸ್ವರ್ಗ ಮರ್ತ್ಯ ಪಾತಾಳಕ್ಕೆ ಠಾವಿನ್ನೆಲ್ಲಿಹುದೊ ? ಮೇಘಜಲವೆಲ್ಲ ಮುತ್ತಾದೊಡೆ ಸಪ್ತ ಸಾಗರಂಗಳಿಗೆ ಉದಕವಿನ್ನೆಲ್ಲಿ ಹುದೊ ? ಕಷ್ಟಜೀವಿ ಮನುಜರೆಲ್ಲ ನೆಟ್ಟನೆ ಶಿವಜ್ಞಾನಿಗಳಾದಡೆ, ಮುಂದೆ ಭವದ ಬಳ್ಳಿಗೆ ಬೀಜ ವಿನ್ನೆಲ್ಲಿಹುದೊ? 'ಗುರು ಭಕ್ತಿಂ ಪರಿತ್ಯಜ್ಯ ಸದ್ಯೋಪಿ ನರಕಂ ವ್ರಜೇತ್' ಇಂತೆಂದುದಾಗಿ ನಮ್ಮ ಕೂಡಲ ಚೆನ್ನ ಸಂಗಯ್ಯನಲ್ಲಿ ಸಾವಿರಕ್ಕೊಬ್ಬ ಸತ್ಯ, ಲಕ್ಷಕ್ಕೊಬ್ಬ ಭಕ್ತ, ಕೋಟಿಗೊಬ್ಬ ಶರಣ' ಕಾರ್ಯ ಕಾರಣ ಸಂಬದ್ಧವಾಗಿ ಶಾಸ್ತ್ರ ವಿಚಾರ ಚರ್ಚೆಯನ್ನು ಒಳಗೊಂಡಾಗ ಈತನ ವಚನಗಳು ಸುದೀರ್ಘವಾಗಿ ಹರಿದು ಹೋಗುವುದು ಅನಿವಾರ್ಯವಾಗುತ್ತದೆ.

೭. ಸಿದ್ಧರಾಮಯ್ಯ

ಮೊರಡಿಯ ಮುದ್ದ-ಸುಗ್ಗವ್ವೆ ಎಂಬ ಸಾತ್ವಿಕ ದಂಪತಿಗಳ ಇಳಿವಯಸ್ಸಿನಲ್ಲಿ ಹುಟ್ಟಿದ ಸಿದ್ಧರಾಮಯ್ಯ ಹೊರನೋಟಕ್ಕೆ ಅರೆ ಬೆಪ್ಪನಂತೆ ಕಾಣುತ್ತಾ, ಬಾಲ್ಯದ ಮರೆಯ ಪರಬ್ರಹ್ಮನಾಗಿ ಬೆಳೆದು, ತಾರುಣ್ಯದಲ್ಲಿ ಸ್ವಂತವಾದ ಒಂದು ಮಠವನ್ನು ಸ್ಥಾಪಿಸಿಕೊಂಡು ನೆಲಸಿದಂತೆ ! ಕರ್ಮಯೋಗಿಯಾಗಿದ್ದ ಆತನ ಕೀರ್ತಿ ಎಲ್ಲೆಲ್ಲಿಯೂ ಹಬ್ಬಿತು. ಜನರು ತಂಡತಂಡವಾಗಿ ಆತನ ಬಳಿಗೆ ಬಂದರು. ಆತನ ಆಶ್ರಮವಿದ್ದ ಕಡೆ ಸೊನ್ನಲಿಗೆಯೆಂಬ (ಈಗಿನ ಸೊಲ್ಲಾಪುರ) ಪಟ್ಟಣ ಹುಟ್ಟಿಕೊಂಡಿತು. ಸಿದ್ದರಾಮ ಅಲ್ಲಿ ಹಲವಾರು ಶಿವದೇಲಾಯಗಳನ್ನೂ, ದೊಡ್ಡದೊಂದು ಕೆರೆಯನ್ನೂ ಕಟ್ಟಿಸಿ ಅನೇಕ ಪವಾಡಗಳನ್ನು ಮೆರೆದನು. ಒಮ್ಮೆ ಪ್ರಭುದೇವನು ಆತನನ್ನು ಸಂಧಿಸಿ ತನ್ನೊಡನೆ ಕಲ್ಯಾಣಕ್ಕೆ ಕರೆದೊಯ್ದು ಚೆನ್ನಬಸವಣ್ಣನಿಂದ ದೀಕ್ಷೆಯನ್ನು ಕೊಡಿಸಿದನು: ಅಂದಿನಿಂದ ಆತನು ಅನುಭವ ಮಂಟಪದ ಪ್ರತಿಷ್ಠಿತ ವ್ಯಕ್ತಿಯಾಗಿದ್ದುಕೊಂಡು ಮುಕ್ತನಾದನು. ಈತನು ಹಾಡಿರುವ ವಚನಗಳು ಗಹನವಾದ ವಿಷಯಗಳನ್ನು ಬಲು ಸರಳವಾಗಿ, ಸುಲಭವಾಗಿ ನಿರೂಪಿಸುತ್ತವೆ. ಅಲ್ಲಲ್ಲಿ ಆತನ ಆತ್ಮ ಕಥೆಯ ಮೇಲೆ ಬೆಳಕು ಚೆಲ್ಲುವ ಸೂಚನೆಗಳನ್ನು ಒಳಗೊಂಡಿರುವದರಿಂದ ಕಥಾನಕದ ರಮಣೀಯತೆಯನ್ನು ಪಡೆಯುತ್ತವೆ.

'ವೇಷವ ಧರಿಸಿ ಫಲವೇನಯ್ಯ, ವೇಷದಂತಾಚರಣೆ ಇಲ್ಲದನ್ನಕ್ಕ ? ವೇದಾಂತವನೋದಿ ಫಲವೇನಯ್ಯ, ಬ್ರಹ್ಮ ತಾನಾಗದನ್ನಕ್ಕ ? ಪುಣ್ಯತೀರ್ಥಗಳು ಬರದನ್ನಕ್ಕ ? ಕಪಿಲ ಸಿದ್ಧ ಮಲ್ಲಿಕಾರ್ಜುನಾ !' 'ನದಿಯ ನೀರು ಹೋದವಯ್ಯ ಸಮುದ್ರಕ್ಕೆ, ಸಮುದ್ರದ ನೀರು ಬರವಯ್ಯ ನದಿಗೆ; ನಾನು ಹೋದೆನಯ್ಯ ಲಿಂಗದ ಕಡೆಗೆ, ಲಿಂಗಬಾರದು ನೋಡಯ್ಯ ನನ್ನ ಕಡೆಗೆ; ಮಗ ಮುನಿದರೆ ತಂದೆ ಮುನಿಯನು; ನಾ ಮುನಿದರೆ ಮುನಿಯೆ ನೋಡಯ್ಯ ಕಪಿಲ ಸಿದ್ಧ ಮಲ್ಲಿನಾಥಾ'

ಆತನ ವಚನಗಳೆಲ್ಲ ಭಾವದ ಭಾರದಿಂದ ಬಳಕುವ ಪುಟ್ಟ ವಾಕ್ಯಗಳು – ನಿನ್ನ ಕಾಟ ಎನ್ನ ಪ್ರಾಣದೋಟ' 'ನೀನಿಕ್ಕಿದ ತೊಡಕ ಬಿಡಬಾರದು, ನೀನು ಬಿಡಿಸಿದ ತೊಡಕನಿಕ್ಕಬಾರದು'; ಅಂಗವೆಂದರೆ ಅಜ್ಞಾನ, ಲಿಂಗವೆಂದರೆ ಸುಜ್ಞಾನ 'ಕಾಯವಿಡಿದನ್ನಕ್ಕೆ ಕಾಮವೇ ಮೂಲ, ಜೀವ

ಹಿಡಿದನ್ನಕ್ಕ ಕ್ರೋಧವೇ ಮೂಲ, ಕರ್ಮಭಕ್ತಿ ಜ್ಞಾನಮಾರ್ಗಿಗಳ ಸ್ವರೂಪವನ್ನು ಕುರಿತು ಕಾಯ ನಾನೆಂದರೆ ಕರ್ಮಕಾಂಡಿ, ಸಕಲ ಕ್ರಿಯೆ ಈಶಾರ್ಪಣವೆಂದರೆ ಭಕ್ತಿ ಕಾಂಡಿ, ಸಕಲ ಕರ್ಮ ಸಾಕ್ಷಿ ಎಂದರೆ ಜ್ಞಾನ ಕಾಂಡಿ' ಎಂದು ಹೇಳುವುದು ಎಷ್ಟು ಮಾರ್ಮಿಕವಾಗಿದೆ! ಅಲ್ಲಲ್ಲಿ ಕೆಲವು ಬೆಡಗಿನ ವಚನಗಳು ಈತನಲ್ಲಿ ಕಾಣಿಸಿಕೊಳ್ಳುತ್ತವೆ. ಅಲ್ಲಲ್ಲಿ ತಾನೊಬ್ಬ ಯಾಗಸಾಧಕನೆಂದು ಈತ ಹೇಳಿಕೊಂಡಿದ್ದಾನೆ. ಕರ್ಮಯೋಗಿಯಾಗಿದ್ದ ಈತ ಪ್ರಭುದೇವನ ಪ್ರಭಾವದಿಂದ ಜ್ಞಾನಯೋಗಿಯ ಮಟ್ಟಕ್ಕೆ ಏರಿದನೆಂದು ತೋರುತ್ತದೆ.

೮. ಆದಯ್ಯ

ಈತನು ಗುಜರಾತಿನಿಂದ ವ್ಯಾಪಾರಕ್ಕಾಗಿ ಕನ್ನಡನಾಡಿಗೆ ಬಂದು, ಧಾರವಾಡ ಜಿಲ್ಲೆಯ ಲಕ್ಷೇಶ್ವರದವಲ್ಲಿ ನೆಲಸಿದನೆಂದು ತಿಳಿದುಬರುತ್ತದೆ. ಅಲ್ಲಿ ಜೈನವಣಿಕನಾದ ಪಾರಿಸೆಟ್ಟಿಯೆಂಬುವನ ಮಗಳು ಪದ್ಮಾವತಿ ಆದಯ್ಯನನ್ನು ಮೋಹಿಸಿ, ಆತನ ಇಷ್ಟದಂತೆ ಶಿವದೀಕ್ಷೆಯನ್ನು ವಹಿಸಿ ಆತನನ್ನು ಮದುವೆಯಾದಳು. ಕಾಲಕ್ರಮದಲ್ಲಿ ಆತ ಪ್ರಬಲವಾಗಿ, ಅಲ್ಲಿದ್ದ ಜೈನ ಬಸದಿಯಲ್ಲಿ ಶಿವಲಿಂಗವನ್ನು ಸ್ಥಾಪಿಸಿ, ಶಿವಶರಣರಲ್ಲಿ ಅಗ್ರಗಣ್ಯನೆನಿಸಿದನು. ಆತನು 'ಸೌರಾಷ್ಟ್ರ ಸೋಮೇಶ್ವರಾ' ಎಂಬ ಅಂಕಿತದಿಂದ ವಚನಗಳನ್ನು ಬರೆದಿದ್ದಾನೆ. ಗುಜರಾತಿಯೊಬ್ಬನು ಇಲ್ಲಿ ನೆಲಸಿ, ಕನ್ನಡವನ್ನು ಕಲಿತು ವಚನ ರಚನೆ ಮಾಡಿದುದು ಅಭಿನಂದನಾರ್ಹವಾದುದು. ಸಾಹಿತ್ಯದೃಷ್ಟಿಯಿಂದ ಅವುಗಳಲ್ಲಿ ಮಹತ್ವವಾದುದೇನೂ ಇಲ್ಲ; ಆತ ಶರಣಶ್ರೇಷ್ಠವಾಗಿದ್ದನೆಂಬುದಕ್ಕೆ ಅವು ಸಾಕ್ಷಿಯಾಗಿವೆ ಅಷ್ಟೆ

ಹನ್ನೆರಡನೆ ಶತಮಾನದಲ್ಲಿ ಹಡಪದ ಅಪ್ಪಣ್ಣ, ಮಾಡಿವಾಳ ಮಾಚಯ್ಯ, ಸೊಡ್ಡಳ ಬಾಚರಸ, ಬಹುರೂಪಿ ಚೌಡಯ್ಯ, ಡೋಹರ ಕಕ್ಕಯ್ಯ, ಮೋಳಿಗೆ ಮಾರಯ್ಯ, ಮೇದಾರ ಕೇತಯ್ಯ, ಕೋಲಶಾಂತಯ್ಯ, ಮುಕ್ತಾಯಕ್ಕ, ಲಕ್ಕಮ್ಮ, ಮಹಾದೇವಿಯಮ್ಮ ಇತ್ಯಾದಿ ಇತ್ಯಾದಿ ಲೆಕ್ಕವಿಲ್ಲದಷ್ಟು ಜನ ವಚನಕಾರರೂ ವಚನಕಾರ್ತಿಯರೂ ಆಗಿಹೋಗಿದ್ದಾರೆ. ಅವರೆಲ್ಲರ ವಚನಗಳನ್ನು ವಿವೇಚಿಸುವುದು ಇರಲಿ, ಅವರೆಲ್ಲರ ಹೆಸರನ್ನು ಹೇಳುವುದು ಕೂಡ ಇಲ್ಲಿನ ಎಲ್ಲೆಗೆ ಮೀರಿದ ಕೆಲಸ.

ಹನ್ನೆರಡನೆಯ ಶತಮಾನದ ಕಲ್ಯಾಣವು ವೀರಶೈವಶರಣರ ಮತ್ತು ವಚನಕಾರರ ತೌರುಮನೆಯಾಗಿತ್ತು. ಕಾಯಕಕ್ಕೆ ಮಹತ್ವವನ್ನು ಕೊಟ್ಟು, ಸರ್ವಸಮಾನತೆಯನ್ನು ಬೋಧಿಸಿದ ವೀರಶೈವಧ್ವಜದಡಿಯಲ್ಲಿ ಅಸಂಖ್ಯಾತರಾದ ಜನ ಶರಣಪಂಥಕ್ಕೆ ಸೇರಿ, ಅವರಲ್ಲಿ ಅನೇಕರು ವಚನಗಳಿಗೆ ಕೈ ಹಾಕಿದರು. ಅವರೆಲ್ಲರ ಆಶೋತ್ತರ ಆದರ್ಶಗಳು ಒಂದೇ ಇರಬಹುದಾದರೂ ಅವರ ಬುದ್ಧಿ, ಜ್ಞಾನ, ಸಂಸ್ಕಾರ, ಸಂಸ್ಕೃತಿ ಪ್ರತಿಭೆಗಳು ಒಂದೇ ಮಟ್ಟದವಾಗಿದ್ದವೆಂದು ಹೇಳುವುದಕ್ಕೆ ಸಾಧ್ಯವೇ ? ಅಗಸ, ಕುಂಬಾರ, ಅಕ್ಕಸಾಲಿ, ಚಮ್ಮಾರ ಮೊದಲಾದವರು ವೀರಶೈವ ಧರ್ಮದ ದೃಷ್ಟಿಯಲ್ಲಿ ಧರ್ಮ ಸೋದರರಾಗಿರಬಹುದಾದರೂ ತಮ್ಮ ಪ್ರಜ್ಞೆ, ಪ್ರತಿಭೆ, ಸಂಸ್ಕಾರಗಳಲ್ಲಿ ಸಮಾನರಾಗಲು ಹೇಗೆ ಸಾಧ್ಯ ? ಉಜ್ಜಲ ಪ್ರತಿಭೆ ಆಳವಾದ ಅನುಭವ, ಸಾಹಿತ್ಯಾಭ್ಯಾಸಗಳಿಲ್ಲದ ನಿರೂಪಣೆ ನೀರಸವಾಗುತ್ತದೆ, ಸಂಪ್ರದಾಯಶೀಲವಾಗುತ್ತದೆ. ಅನುಕರಣ ಲೋಲವಾಗುತ್ತದೆ. ಚರ್ವಿತಚರ್ವಣವಾಗುತ್ತದೆ. ಕೆಲವು ವೇಳೆ ರೂಕ್ಷವಾಗಿ, ವಿರೂಪವಾಗಿ, ಗ್ರಾಮ್ಯವಾಗಿರುವ ಅಸಹನೆಯ ನುಡಿಗಳು ಕಾಣಿಸಿಕೊಂಡು 'ಕನ್ನಡದ ಉಪನಿಷತ್ತು'ಗಳೆಂದು ವಚನಗಳಿಗೆ ಬಂದಿರುವ ಕೀರ್ತಿಗೆ ಕಂಟಕಪ್ರಾಯವಾಗುತ್ತವೆ. 'ನವಿಲನ್ನು ನೋಡಿ ಕೆಂಬೂತ ಪುಕ್ಕ ತರಿದುಕೊಂಡಿತು' ಎಂಬ ಗಾದೆಗೆ ಉದಾಹರಣೆಯಾಗಬಲ್ಲ ವಚನಗಳಿಲ್ಲದೆ ಹೋಗಿಲ್ಲ. ಅಧ್ಯಾತ್ಮ ರಹಸ್ಯಗಳನ್ನು ಒಗಟಾಗಿ ಹೇಳುವುದಕ್ಕೆ ಬದಲಾಗಿ ಒಗಟನ್ನೆ ಅಧ್ಯಾತ್ಮ ರಹಸ್ಯ ಎಂದು, ಸತ್ಯ ನಿಷ್ಠುರರಾಗುವುದಕ್ಕೆ ಬದಲಾಗಿ ನಿಷ್ಠುರವನ್ನೆ ಸತ್ಯವೆಂದು ಭ್ರಮಿಸುವ ಜನ ಕಾಣಿಸಿಕೊಂಡಿದ್ದರೂ ಆಶ್ಚರ್ಯವಿಲ್ಲ.

ಬಸವಣ್ಣನ ಸರ್ವಸಮಾನತೆಯನ್ನು ಸಾರಿ, ಸಮಾಜವನ್ನು ಸಂಸ್ಕರಿಸ ಹೊರಟವನು ಆತನ ಅನುಯಾಯಿಗಳಲ್ಲಿ ಮಧುವಯ್ಯನೆಂಬ ಬ್ರಾಹ್ಮಣ. ತನ್ನ ಮಗಳನ್ನು ಹರಳಯ್ಯನೆಂಬ ಹೊಲೆಯನ ಮಗನಿಗೆ ಮದುವೆಮಾಡಿಕೊಟ್ಟನು. ಈ ವರ್ಣಸಂಕರವನ್ನು ಕಂಡು ವರ್ಣಾಶ್ರಮಿಗಳು ಕೆರಳಿದರು. ಅವರ ಹೇಳಿಕೆಗೆ ಮನಸೋತ ಮಹಾರಾಜನು ನೂತನ ವಧೂವರರ ತಂದೆಗಳನ್ನು ಕ್ರೂರವಾಗಿ ಮರಣದಂಡನೆ ಗುರಿ ಮಾಡಿದನು. ಇದನ್ನು ಕಂಡು ರೊಚಿಗೆದ್ದ ಶಿವಶರಣರು ದಂಗೆಯೆದ್ದರು. ಅವರಲ್ಲಿ ಜಗದೇವ, ಬ್ರಹ್ಮಯ್ಯ ಎಂಬಿಬ್ಬರು ವೀರಾವೇಶದಿಂದ ರಾಜನ ಸಭೆಗೆ ನುಗ್ಗಿ ಅವನನ್ನು ಕೊಂದು ಹಾಕಿದರು. ಒಡನೆ ರಾಜನ ಸೈನ್ಯ ಶರಣರನ್ನು ಶಿಕ್ಷಿಸಹೊರಟಿತು. ಶರಣರು ದಿಕ್ಕು ದಿಕ್ಕಿಗೆ ಚೆದರಿಹೋದರು. ವೀರಶೈವದ ಅಧ್ವರ್ಯುಗಳಾಗಿದ್ದ ಮೂವರು ಮೂರು ಕಡೆಗೆ ಬಸವಣ್ಣ ಸಂಗಮಕ್ಕೆ, ಪ್ರಭುದೇವ ಶ್ರೀಶೈಲಕ್ಕೆ, ಚನ್ನಬಸವಣ್ಣ ಉಳಿವಿಗೆ ಹೋಗಿ ಶಿವೈಕ್ಯರಾದರು. ೧೨ನೆಯ ಶತಮಾನದ ಕೊನೆಯಲ್ಲಿ ಆದಯ್ಯ, ಏಕಾಂತದ ರಾಮಯ್ಯ ಎಂಬ ಶರಣರಿಬ್ಬರು ವೀರಶೈವಧರ್ಮದ ಪುನರ್ವ್ಯವಸ್ಥೆಗೆ ಶ್ರಮಿಸಿ, ಸಾಕಷ್ಟು ಕೃತಕೃತ್ಯರೇನೋ ಆದರು. ಆದರೆ ವಚನವಾಙ್ಮಯದ ಬೆಳವಣಿಗೆಯೇಸೋ ತಾತ್ಕಾಲಿಕವಾಗಿ ಅಲ್ಲಿಗೆ ನಿಂತು ಹೋಯಿತು. ೧೩ನೆಯ ಶತಮಾನದ ಕಡೆಯ ಭಾಗದಲ್ಲಿ ಇಡೀ ದಕ್ಷಿಣ ಭಾರತಕ್ಕೇ ಭಯಂಕರವಾದ ಪೀಡೆ ಹೊಕ್ಕಂತೆ ಅಲ್ಲಾವುದ್ದೀನ್ ಖಿಲ್ಜಿಯ ದಾಳಿ ನಡೆಯಿತು. ಅದಕ್ಕೆ ಸಿಕ್ಕಿ ಅನೇಕ ಧರ್ಮ ಗ್ರಂಥಗಳೆಲ್ಲ ಅಗ್ನಿಗೆ ಆಹುತಿಯಾದವು. ವಚನ ಸಾಹಿತ್ಯದ ಬಹುಭಾಗವೂ ಆಗ ನಾಶವಾಗಿರಬಹುದು. ೧೪ನೆಯ ಶತಮಾನದ ಮಧ್ಯಭಾಗದ ವೇಳೆಗೆ ವಿಜಯನಗರ ರಾಜ್ಯ ಸ್ಥಾಪನೆಯಾಗಿ, ದೇಶದಲ್ಲಿ ಶಾಂತಿ ನೆಲಸಿತು. ೧೫ನೆಯ ಶತಮಾನದ ಆದಿ ಭಾಗದಲ್ಲಿ ಪ್ರೌಢದೇವರಾಯನು ವೀರಶೈವಕ್ಕೆ ಒತ್ತಾಸೆ ನೀಡಿದನು. ಆ ಶತಮಾನದ ಉತ್ತರಾರ್ಧದಲ್ಲಿದ್ದ ತೋಂಟದ ಸಿದ್ಧಲಿಂಗಯತಿ (ಕ್ರಿ.ಶ. ೧೪೭೦) ತುಮಕೂರು ಜಿಲ್ಲೆಯ ಎಡೆಯೂರಿನಲ್ಲಿ ಮಠವನ್ನು ಸ್ಥಾಪಿಸಿ, ವಚನವಾಙ್ಮಯದ ಪುನರ್‌ಜ್ಜೀವನಕ್ಕೆ ಪ್ರೋತ್ಸಾಹ ನೀಡಿದನು. ಹೊಸ ವಚನಗಳ ಉಯದೊಡನೆ, ಅಳಿಯದ ಹಳೆಯ ವಚನಗಳನ್ನೆಲ್ಲ ಸಂಗ್ರಹಿಸಿ, ಅವುಗಳನ್ನು ಸ್ಥಲಾನುಕ್ರಮವಾಗಿ ವಿಂಗಡಿಸುವ ಕಾರ್ಯವು ಭರದಿಂದ ನಡೆಯಿತು; ಅವುಗಳಿಗೆ ಅನೇಕ ಟೀಕೆ ಟಿಪ್ಪಣಿಗಳೂ ಹುಟ್ಟಿಕೊಂಡವು. ಈ ಉತ್ಸಾಹಕ್ಕೆ ಕಿರೀಟವಿಟ್ಟ ಕಾರ್ಯವೆಂದರೆ 'ಶೂನ್ಯ ಸಂಪಾದನೆ'ಯ ಉದಯ.

'ಶೂನ್ಯ ಸಂಪಾದನೆ' ಒಂದು ಅದ್ಭುತವಾದ ಗ್ರಂಥ. ೧೨ನೆಯ ಶತಮಾನದ ಅನುಭವಮಂಟಪವನ್ನು ೩೦೦ ವರ್ಷಗಳಷ್ಟು ದೂರದಲ್ಲಿ ನಿಂತು ಛಾಯಚಿತ್ರವನ್ನು ತೆಗೆದು ಕೊಳ್ಳುವ ಕಾರ್ಯ ಇಲ್ಲಿ ನಡೆದಿದೆ. ಅಲ್ಲಿನ ಶಿವಶರಣ ವಿಚಾರ ಮಂಥನದಿಂದ ಧರ್ಮದ ನವನೀತ ಉದಿಸುತ್ತಿರುವ ದಿವ್ಯ ಚಿತ್ರವನ್ನು ನಮ್ಮ ಕಣ್ಣಿಗೆ ಕಟ್ಟುವ ಈ ಅಮೋಘ ಕೃತಿ ವೀರಶೈವರ ಧರ್ಮಯಾತ್ರಿಕರಿಗೆ ಒಂದು ಬೆಳಗುಗಂಬದಂತಿದೆ. ೧೨ನೆಯ ಶತಮಾನದ ಪ್ರಮುಖ ವಚನಕಾರರೆಲ್ಲ ಇಲ್ಲಿ ಕಾಣಿಸಿಕೊಂಡಿದ್ದಾರೆ. ಅವರಲ್ಲಿ ಹಲವರು ನಡೆಸಿದಂತೆ ಚಿತ್ರಿತವಾಗಿರುವ ಧಾರ್ಮಿಕ ಚರ್ಚೆಯ ಈ ಗ್ರಂಥದ ತಿರುಳು. ಶರಣನೊಬ್ಬನು ತನ್ನೊಂದು ಅಥವಾ ಕೆಲವು ವಚನಗಳ ಮೂಲಕ ಸಂವಾದವನ್ನು ಪ್ರಾರಂಭಿಸುತ್ತಾನೆ. ಮತ್ತೊಬ್ಬ ತನ್ನ ವಚನದ ಮೂಲಕ ಅದನ್ನು ಮುಂದುವರೆಸುತ್ತಾನೆ. ಕೆಲವು ವೇಳೆ ಅಧ್ಯಕ್ಷನಾಗಿ ಕುಳಿತಿರುವ ಪ್ರಭುದೇವನೆ ಆ ಸಂವಾದಕ್ಕೆ ಉತ್ತರ ರೂಪವಾಗಿ ತನ್ನೊಂದು ವಚನವನ್ನು ಹೇಳಬಹುದು. ಸಂಕಲಕಾರನು ಈ ಇಬ್ಬರ ವಚನಗಳಿಗೂ ತನ್ನೊಂದು ಮಾತಿನಿಂದ ಸಂಬಂಧ ಸೂತ್ರವನ್ನು ಕಲ್ಪಿಸುತ್ತಾನೆ. ಒಮ್ಮೊಮ್ಮೆ ಈ ಸಂದರ್ಭದ ವಚನಗಳಿಗೆ

ವಿವರಣೆಯನ್ನು ನೀಡಬಹುದು. ಹೀಗೆ ಕುತೂಹಲ ಜನಕವಾದ ದೃಶ್ಯಾಂಶದಿಂದ ಕೂಡಿರುವುದರಿಂದ ಇವುಗಳನ್ನು ಓದಬೇಕೆಂಬ ಕುತೂಹಲ ಹುಟ್ಟುವುದು ಸಹಜವಾಗಿಯೇ ಇದೆ. ಇದು ಬಹು ಬೇಗ ಅತ್ಯಂತ ಜನಪ್ರಿಯವಾಯಿತೆಂದು ತೋರುತ್ತದೆ. ಸುಮಾರು ೧೪ನೆಯ ಶತಮಾನದ ಕಡೆಯ ಭಾಗದಲ್ಲೋ, ಹದಿನೈದರ ಆರಂಭದಲ್ಲೋ ಇದ್ದ ಶಿವಗಣಪ್ರಸಾದಿ ಮಹದೇವಯ್ಯ ಇದರ ಕರ್ತೃ. ಅಲ್ಲಿಂದ ಮುಂದೆ ಅದು ನಾಲ್ಕು ಸಂಸ್ಕರಣಗಳನ್ನು ಪಡೆದು, ನಾಲ್ಕನೆಯ ಬಾರಿ ಪರಿಷ್ಕೃತವಾದ ಗೂಳೂರು ಸಿದ್ದವೀರಣ್ಣೊಡೆಯರದು ಈಗ ಪ್ರಚಾರದಲ್ಲಿದೆ.

'ಶೂನ್ಯ ಸಂಪಾದನೆ' ಎಂದರೆ ದೈವ ಸಾಕ್ಷಾತ್ಕಾರವನ್ನು ಪಡೆಯುವುದು ಎಂದರ್ಥ. ಶೂನ್ಯ ಸಿಂಹಾಸನಾಧೀಶನಾದ ಪ್ರಭುದೇವನು ತನ್ನ ಪ್ರಭಾವಲಯದಲ್ಲಿ ಬಂದ ಮುಕ್ತಾಯಕ್ಕ, ಸಿದ್ಧರಾಮಯ್ಯ, ಮರುಳುಶಂಕರ, ಬಸವಣ್ಣ ಮಡಿವಾಳಯ್ಯ, ಆಯ್ದಕ್ಕಿಮಾರಯ್ಯ, ಮೋಳಿಗೆಯ್ಯ, ನುಲಿಯಚೆಂದಯ್ಯ, ಘಟ್ಟಿ ವಾಳಯ್ಯ, ಮಹಾದೇವಿಯಕ್ಕ, ಗೋರಕ್ಷ – ಇವರಿಗೆ ಕ್ರಮವಾಗಿ ಶೂನ್ಯ ಸಂಪಾದನೆಯನ್ನು ಕರುಣಿಸಿದುದು ಶೂನ್ಯ ಸಂಪಾದನೆಯಲ್ಲಿ ಕಂಡುಬರುತ್ತದೆ. ಈ ದಿವ್ಯ ಕಾವ್ಯವನ್ನು ಶ್ರೀಮಾನ್ ರಾನಡೆಯವರು ಪ್ಲೇಟೋ ಸಂಭಾಷಣೆಗಳ ಮಾದರಿಯಲ್ಲಿ ರಚಿತವಾದುದೆಂದು ಸ್ತುತಿಸಿ ಅಲ್ಲಿನ ಸಾಕ್ರಟೀಸ್‌ನ ಸ್ಥಾನದಲ್ಲಿ ಅಲ್ಲಮಪ್ರಭು ನಿಲ್ಲುತ್ತಾನೆಂದು ತಮ್ಮ 'Pathway to god Kannada Literature' ಎಂಬ ಪುಸ್ತಕದಲ್ಲಿ ಹೇಳಿದ್ದಾರೆ. ಇದು ಸಾಹಿತ್ಯ ಜಗತ್ತಿನ ಒಂದು ಅದ್ಭುತವೆಂದು ಅವರು ಕರೆದು ಗೌರವಿಸಿದ್ದಾರೆ.

೬. ಹರಿಹರ ಯುಗದ ಕವಿಗಳು

ಕನ್ನಡ ಸಾಹಿತ್ಯಕ್ಕೆ ಪ್ರೇರಣೆ, ಪೋಷಣೆ, ಪ್ರಚೋನೆಗಳು ಬಂದಿರುವುದು ಕೇವಲ ಧರ್ಮದಿಂದಲೆ ಆದರೂ ಧರ್ಮ ಮತ್ತು ಕಾವ್ಯಗಳು ಬೇರೆ ಬೇರೆ ಒಬ್ಬನೇ ಸೂರ್ಯನಲ್ಲಿ ಬೆಳಕು ಬಿಸಿಲುಗಳೆರಡೂ ಇರುವುದಾದರೂ ಬೆಳಕನ್ನು ಬಿಸಿಲೆಂದಾಗಲಿ ಬಿಸಿಲನ್ನು ಬೆಳಕೆಂದಾಗಲಿ–ಅವೆರಡೂ ವೈಜ್ಞಾನಿಕವಾಗಿ ಒಂದೇ ಶಕ್ತಿ ಇರಬಹುದಾದರೂ–ಕರೆಯುವುದಿಲ್ಲ. ಈ ದೃಷ್ಟಿಯಿಂದಲೆ ನಾವು ವಚನಕಾರರನ್ನು ಕೇವಲ ಕವಿಗಳೆಂದು ಪರಿಗಣಿಸಲು ಸಿದ್ಧರಾಗಿಲ್ಲ. ಅವರನ್ನು ಅನುಭಾವಿಗಳೆಂದೂ, ಸಂತರೆಂದೂ ಧರ್ಮಶಾಸ್ತ್ರಜ್ಞರೆಂದೂ ಕರೆಯಬಹುದು. ಭರತ ಖಂಡದ ಸಾಹಿತ್ಯ ರಾಶಿಯನ್ನು ಕಾವ್ಯ ಮತ್ತು ಧರ್ಮವೆಂದು ವಿಂಗಡಣೆ ಮಾಡುವುದು ಕಷ್ಟಸಾಧ್ಯವಾಗಬಹುದೇ ಹೊರತು ಅಸಾಧ್ಯವೇನೂ ಅಲ್ಲ. ಯಾವುದು ಧರ್ಮಕ್ಕೆ ಪ್ರಮಾಣಭೂತವಾಗಬಲ್ಲುದೋ ಅದು ಧರ್ಮ ಅಥವಾ ಶಾಸ್ತ್ರ ಗ್ರಂಥ; ಯಾವುದು ಧರ್ಮ ಪ್ರಮಾಣವಾಗುವುದಕ್ಕಿಂತಲೂ ಹೆಚ್ಚಾಗಿ ರಹಸ್ಯಂದಿ ಯಾಗಬಲ್ಲುದೊ ಅದು ಕಾವ್ಯ. ವಚನ ವಾಙ್ಮಯವು ವೀರಶೈವ ಧರ್ಮದ ಪ್ರಮಾಣ ಗ್ರಂಥವೆಂದು ಸ್ವೀಕರಿಸಲಾಗಿದೆ. ಆದ್ದರಿಂದ ಅದು ಶಾಸ್ತ್ರಶ್ರೇಷ್ಠವಾದ ಕಾವ್ಯಗುಣ ಅದರಲ್ಲಿ ಕಾಣಬಹುದಾದರೂ, ಕಾವ್ಯ ಗುಣದಲ್ಲಿ ಅದಕ್ಕಿಂತಲೂ ಕೆಳಮಟ್ಟದಲ್ಲಿರುವ ಸಾಹಿತ್ಯ ಸಮುದಾಯವನ್ನು ಕಾವ್ಯವೆಂದು ಸ್ವೀಕರಿಸುತ್ತೇವಾದರೂ ವಚನವಾಙ್ಮಯ ನಿಸ್ಸಂದೇಹವಾಗಿಯೂ ಧರ್ಮ ಗ್ರಂಥವೇ. ಕಲೆ ಕೇವಲ ಸಂಸ್ಕೃತಿ ವಿಲಾಸ; ಆದರೆ ಬಾಳು ಸೃಷ್ಟಿಗೆ ವಿಕಾಸ. ಆದ್ದರಿಂದ ಸಾಹಿತ್ಯಕ್ಕಿಂತಲೂ ಬಾಳು ಮಹತ್ತಾದುದು. ಮಹತ್ತಾದ ಬಾಳಿನಿಂದ ಇತರರಿಗೆ ಮಾರ್ಗದರ್ಶನ ನೀಡಿದ ಸಂತರನ್ನು ಕೇವಲ ಕವಿಗಳೆಂದು ಪರಿಗಣಿಸುವುದು ಸರಿಯಲ್ಲವೆಂದು ನಮ್ಮ ಭಾವನೆ, ವಚನಕಾರರು ಕವಿಗಳಲ್ಲದಿದ್ದರೂ, ಮುಂದಿನ ಕವಿಗಳಿಗೆ ಪ್ರೇರಣೆ ಪ್ರಚೋದನೆಗಳನ್ನಿತ್ತಿರುವರೆಂಬುದರಲ್ಲಿ ಯಾವ ಸಂದೇಹವು ಇಲ್ಲ. ಹಾಗೆ ಪ್ರಭಾವಿತನಾಗಿ, ಕನ್ನಡ ಸಾಹಿತ್ಯದ ಭಾವ, ಭಾಷೆ, ರೀತಿಗಳಲ್ಲಿ ಚಿರನೂತನತೆಯನ್ನು ಅದ್ಭುತ

ಕ್ರಾಂತಿಯನ್ನು ತಂದು, ಹೊಸ ಯುಗವನ್ನು ಸಂಸ್ಥಾಪಿಸಿದ ಕೀರ್ತಿ ಹಂಪೆಯ ಹರಿಹರದೇವನಿಗೆ ಸಲ್ಲುತ್ತದೆ.

೧. ಹರಿಹರ ದೇವ (೧೧೮೦-೧೨೨೦)

ಕನ್ನಡ ಸಾಹಿತ್ಯದ ನೂತನ ಯುಗಪ್ರವರ್ತಕನೆಂದು ಕೀರ್ತಿತನಾಗಿರುವ ಹರಿಹರದೇವನು ಹುಟ್ಟಿದುದು ಕನ್ನಡ ನಾಡಿನ ಪವಿತ್ರ ಕ್ಷೇತ್ರವಾದ ಹಂಪೆಯಲ್ಲಿ, ಮಹದೇವ ಭಟ್ಟ, ಶರ್ವಾಣಿ ಎಂಬ ಸಾತ್ವಿಕ ಶೈವ ಬ್ರಾಹ್ಮಣರು ಆತನ ತಂದೆ ತಾಯಿಗಳು. ಹಿರಿಯ ಮಗನಾದ ಹರಿಹರನಿಗೆ ರುದ್ರಾಣಿಯೆಂಬ ತಂಗಿ ಇದ್ದಳು. ಆಕೆ ಹಂಪೆಯಲ್ಲಿದ್ದ ಶಿವಭಕ್ತನೊಬ್ಬನನ್ನು ಕೈ ಹಿಡಿದು ಸದ್ ಗೃಹಿಣಿಯೆನಿಸಿಕೊಂಡಿದ್ದಳು. ಆಕೆಯ ಪುಣ್ಯ ಗರ್ಭದಲ್ಲಿ ಜನಿಸಿದವನೆ ರಾಘವಾಂಕ ಕವಿ. ಹರಿಹರನು ಮಾಯಿದೇವರೆಂಬ ಗುರುಗಳಲ್ಲಿ ವಿದ್ಯಾಭ್ಯಾಸ ಮಾಡಿ, ಉದರಂಭರಣಕ್ಕಾಗಿ, ದ್ವಾರಸಮುದ್ರದ ಹೊಯ್ಸಳ ರಾಜ ನರಸಿಂಹ ಬಲ್ಲಾಳನಲ್ಲಿ ಕರಣಿಕನಾಗಿದ್ದ. ಒಮ್ಮೆ ಆತ ಲೆಕ್ಕವನ್ನು ಬರೆಯುತ್ತಿದ್ದವನು ಇದಕ್ಕಿದ್ದಂತೆಯೆ ಅದನ್ನು ನಿಲ್ಲಿಸಿ ಕೈಗಳನ್ನು ಹೊಸಗಿಕೊಂಡನಂತೆ; ಹಾಗೆ ಏಕೆಂದು ರಾಜನು ಕೇಳಲು, ಹಂಪೆಯ ವಿರುಪಾಕ್ಷನ ಗುಡಿಯಲ್ಲಿ ಮೇಲುಕಟ್ಟಿನ ಬಟ್ಟೆಗೆ ಹತ್ತಿದ್ದ ಉರಿಯನ್ನು ಆರಿಸಿದುದಾಗಿ ತಿಳಿಸಿದನಂತೆ ! ರಾಜನು ಇದನ್ನು ಪರೀಕ್ಷಿಸಿ ಅದು ಸತ್ಯವೆಂದು ಅರ್ಥ ಮಾಡಿಕೊಂಡ. ಹರಿಹರನು ಕೇವಲ ಕರಣಿಕನಲ್ಲ, ಕಾರಣ ಪುರುಷನೆಂದು ಆತನಿಗೆ ಅರ್ಥವಾಯಿತು. ಆದರೆ ಹರಿಹರನಿಗೆ ರಾಜನ ಊಳಿಗ ಅಸಹ್ಯವೆನಿಸಿತು. ಆತನು ಹಂಪೆಗೆ ವಿರೂಪಾಕ್ಷನ ಪೂಜೆ ಮತ್ತು ಸತ್ಕಾವ್ಯಗಳ ರಚನೆಯಲ್ಲಿ ಮಗ್ನನಾದ.

ವೀರಶೈವ ಪುರಾಣಗಳಲ್ಲಿ ಕಾಣಬರುವ ಮೇಲಿನ ಕಥೆ ಅಸತ್ಯವಲ್ಲವೆಂದು ತೋರುತ್ತದೆ. ಆತನು ತನ್ನ ಶತಕಗಳಲ್ಲಿ ಒಂದಾದ ಪಂಪಾಶತಕದಲ್ಲಿ ರಾಜಸೇವೆಯ ದುಃಸ್ಥಿತಿಯನ್ನು ಹೃದಯ ಸ್ಪರ್ಶಿಯಾಗಿ ಬಣ್ಣಿಸುತ್ತಾನೆ:

ಪೋಗೆನೆ ಪೋಪ ಬಾರೆಲವೋ ಬಾರೆನೆ ಜೀಯ ! ಹಸಾದಮೆಂದು ಬೆ
ಳ್ಳಾಗುತೆ ಬರ್ಪ, ಮಾಣೆಲವೊ ಸುಮ್ಮನಿರೆಂದೊಡೆ ಸುಮ್ಮನಿರ್ಪ, ಮ
ತ್ತಾಗಳೆ ಝುಂಕಿಸುತ ನಡುಗಿ ಬೀಳುವ ಸೇವಿಕ ಕಷ್ಟವೃತ್ತಿಯಂ
ನೀಗಿದೆನಿಂದು ನಿಮ್ಮ ದಯೆಯಿಂ ಕರುಣಾಕರ ಹಂಪೆಯಾಳ್ದನೇ !

ಇದು ಆತನ ಆತ್ಮ ಕಥನದ ಒಂದು ದಿಗ್ದರ್ಶನವೋ ಏನೋ ಅದೇ ಶತಕದ ಮತ್ತೊಂದು ಪದ್ಯದಲ್ಲಿ ಆತನು ತನ್ನ ಜೀವನದ ಆದರ್ಶವನ್ನು ಹೀಗೆ ಎತ್ತಿ ಹಿಡಿದಿದ್ದಾನೆ.

ಮನುಜನ ಮೇಲೆ, ಸಾವವರ ಮೇಲೆ, ಕನಿಷ್ಠರ ಮೇಲೆ ಪದ್ಯ, ಮಂ
ತನತನಗಿಂದ್ರ, ಚಂದ್ರ, ರವಿ, ಕರ್ಣ, ದಧೀಚಿ, ಬಲೀಂದ್ರರೆಂದು ತಾಂ
ಅನವರತಂ ಪೊಗಪಮ್ದಿ ಕೆಡಬೇಡಿಲೆ ಮಾನವ, ನೀನಹರ್ನಿಶಂ
ನೆನೆ, ಪೊಗಟರ್ಚಿಸೆಮ್ಮ ಕಡುಸೊಂಪಿನ ಪೆಂಪಿನ ಹಂಪೆಯಾಳ್ದ ನಂ

ಇದನ್ನು ನೋಡಿದರೆ ರಾಜನ ಊಳಿಗದಲ್ಲಿ ಆತನಿಗಿದ್ದ ಜಿಹಾಸೆ ಮತ್ತಷ್ಟು ಸ್ಪಷ್ಟವಾಗುತ್ತದೆ. ಆತನು ಹಾಕಿಕೊಟ್ಟ ಈ ಸ್ವತಂತ್ರ ಮನೋವೃತ್ತಿಯ ಹೆದ್ದಾರಿಯನ್ನು ಆತನ ಯುಗದ ಬಹುಮಂದಿ ಕವಿಗಳು ಅನುಸರಿಸಿ, ಅದೊಂದು ಹೊಸ ಸಂಪ್ರದಾಯವನ್ನೆ ಕನ್ನಡದಲ್ಲಿ ಬೆಳೆಸಿದ್ದಾರೆ. ಆದ್ದರಿಂದ ಹರ ಹರಿಹರಯುಗವನ್ನು 'ಸ್ವತಂತ್ರಯುಗ'ವೆಂದೂ ಕರೆಯುವ ರೂಢಿ ಬಂದಿದೆ.

ಕವಿಯು ದ್ವಾರಸಮುದ್ರದಿಂದ ಹಂಪೆಗೆ ಮರಳಿದ ಮರುದಿನ ಬೆಳಗ್ಗೆ ಹಂಪೆಯ ರಾಜನು ಕಳುಹಿಸಿದ್ದ ಪಲ್ಲಕ್ಕಿಯಲ್ಲಿ ಕುಳಿತು ಅರಮನೆಗೆ ಹೋಗುತ್ತಾ 'ಪಂಪಾಶತಕ'ವನ್ನು ಹಾಡಿದನೆಂದು ಹೇಳುತ್ತಾರೆ. ಇದು ನಿಜವಾದ ಪಕ್ಷದಲ್ಲಿ 'ಆತನ ಕಾವ್ಯ ಕರ್ಮ ಪಂಪಾಶತಕದಿಂದ ಪ್ರಾರಂಭವಾಯಿತೆಂದು ಹೇಳಬೇಕಾಗುತ್ತದೆ. ಹರಿಹರನು 'ರಕ್ಷಾ ಶತಕ'ವೆಂಬ ಮತ್ತೊಂದು ಶತಕವನ್ನೂ ಬರೆದಿದ್ದಾನೆ. ಇದರಲ್ಲಿ ಆತನ ಭಕ್ತಿ ಹೆಚ್ಚು ನಿಶ್ಚಲವಾಗಿ, ಪರಿಪಕ್ವವಾಗಿರುವುದನ್ನು ಕಾಣುತ್ತೇವೆ. ಇದರಲ್ಲಿ ಆತನ ಕವಿತಾಶಕ್ತಿ ತನ್ನ ನೆಲೆಯನ್ನು ಕಂಡುಕೊಂಡಿದೆ. ಆ ಮಾತುಗಳ ರಭಸ, ಪದಗಳ ಪುನರಾವರ್ತನೆ, ಒಂದೇ ಭಾವವನ್ನು ವಿಧ ವಿಧವಾಗಿ ಹೇಳಿ ಓದುಗನ ಮನಸ್ಸಿನಲ್ಲಿ ಆ ಭಾವವನ್ನು ಖಚಿತಗೊಳಿಸುವ ಉತ್ಸಾಹ – ಇತ್ಯಾದಿ ಕಾವ್ಯಗುಣಗಳೆಲ್ಲ ಇಲ್ಲಿಯೇ ಅರುಳಲು ಪ್ರಾರಂಭಿಸಿವೆ. ಧರ್ಮಪ್ರತಿಪಾದನೆ ಅವುಗಳ ತಿರುಳಾದರೂ ಆತನ ಶತಕಗಳು ನೀರಸವಾಗಿಲ್ಲ; ಭಾವಗೀತೆಗಳಂತೆ ಭಾವ ಪುಷ್ಟಿಯನ್ನು ಪಡೆದು ಹೃದಯಂಗಮವಾಗಿವೆ. 'ಪಂಪಾಶತಕ'ದಲ್ಲಿ ಸಾಧಕನ ಉದ್ರೇಕವಿದ್ದರೆ, 'ರಕ್ಷಾಶತಕ'ದಲ್ಲಿ ಸಿದ್ಧಪುರುಷನ ಪ್ರಶಾಂತತೆ ಕಂಡು ಬರುತ್ತದೆ.

ಮೇಲಿನ ಶತಕಗಳಲ್ಲದೆ 'ಮುಡಿಗೆಯ ಅಷ್ಟಕ' 'ಗಿರಿಜಾಕಲ್ಯಾಣ' ಮತ್ತು 'ಶಿವಶರಣರ ರಗಳೆಗಳು' ಎಂಬ ಇತರ ಕಾವ್ಯಗಳೂ ಹರಿಹರನ ಲೆಕ್ಕಣಿಕೆಯಿಂದ ಹರಿದು ಬಂದಿದೆ. ಕವಿ ಒಂದು ದಿನ ನಂದಿಗೆ ನಮಸ್ಕರಿಸುವಾಗ ಆತನ ಟೋಪಿ ಕೆಳಕ್ಕೆ ಬಿತ್ತಂತೆ. ಅದನ್ನು ಕಂಡು ಪಟಿಂಗನೊಬ್ಬ ಹಾಸ್ಯ ಮಾಡಿದನಂತೆ. 'ಶಿವನೇ ಪರದೈವವೆಂದು ಸವಾಲು ಹಾಕುತ್ತಾನೆ, ನನ್ನ ಸವಾಲನ್ನು ಎದುರಿಸುವವರು ಈ ಟೋಪಿಯನ್ನು ಎತ್ತಲಿ' ಎಂದು ಹರಿಹರ ಹೇಳಿದನಂತೆ. ಆ ಸಂದರ್ಭದಲ್ಲಿ ಸೃಷ್ಟಿಸಿದ ಅಷ್ಟಕ 'ಮುಡಿಗೆಯ ಅಷ್ಟಕ' ಇಲ್ಲಿನ ಎಂಟು ಪದ್ಯಗಳಲ್ಲಿಯೂ ಕೈ ಕಾರವನ್ನು ಪ್ರಾಸಸ್ಥಾನದಲ್ಲಿ ತಂದಿದ್ದಾನೆ ಕವಿ.

ಹರಿಹರನು ತನ್ನ ಶಿವಶರಣರ ಕಥೆಗಳನ್ನು ಅಚ್ಚಕನ್ನಡವಾದ ರಗಳೆಯ ಛಂದಸ್ಸಿನಲ್ಲಿ ಬರೆದಿದ್ದಾನೆ. ಅದನ್ನು ಕಂಡ ಅರಸಿಕನಾರೂ ಹರಿಹರದೇವನನ್ನು 'ರಗಳೆಯ ಕವಿ' ಎಂದು ಹಾಸ್ಯಮಾಡಿದನಂತೆ. ಆದ್ದರಿಂದ ಕವಿ, ಚಂಪೂ ರೂಪದ 'ಗಿರಿಜಾ ಕಲ್ಯಾಣ'ವನ್ನು ಬರೆದನೆಂದು ಒಂದು ದಂತಕಥೆ ಪ್ರಚಲಿತವಾಗಿದೆ. ಆದರೆ ಅದೊಂದು ಪೊಳ್ಳು ಕಥೆ ಆತನ ಕವಿತಾ ಶಕ್ತಿ ಸಂಪೂರ್ಣವಾಗಿ ಅರಳಿರುವುದು ಆತನ ರಗಳೆಗಳಲ್ಲಿಯೆ 'ಗಿರಿಜಾ ಕಲ್ಯಾಣ' ಆ ರಗಳೆಗಳಿಗಿಂತಲೂ ಮೊದಲೆ ಬರೆದುದೆಂಬುದು ನಿಸ್ಸಂದೇಹ.

ಗಿರಿಜಾ ಕಲ್ಯಾಣದ ಕಥಾವಸ್ತು ಮತ್ತು ನಿರೂಪಣಾವಿಧಾನ – ಎರಡೂ ಹಳೆಯವೆ ಮಹಾಕಾವ್ಯದಲ್ಲಿ ಹದಿನೆಂಟು ವರ್ಣನೆಗಳಿರಬೇಕೆಂಬ ನಿಯಮಕ್ಕೆ ಕಟ್ಟುಬಿದ್ದು, ಕಾವ್ಯ ಮಧ್ಯದಲ್ಲಿ ವೇಶ್ಯಾ ವಾಟಿಯನ್ನು ನಿರ್ಮಿಸಿ, ಪಾಪ! ಹನುಮಂತನೊಡನೆ ನಾರದನೂ ಅಲ್ಲೆಲ್ಲ ಚಂದ್ರಿಕಾ ವಿಹಾರದಲ್ಲಿ ತೊಡಗುವಂತೆ ಮಾಡಿದ್ದಾನೆ. ಕವಿ ಮಹಾಕಾವ್ಯ ಪಟ್ಟಕ್ಕಾಗಿಯೇ ಸುದೀರ್ಘ ವರ್ಣನೆಗಳನ್ನು ತಂದಿದ್ದಾನೆ. ಹೀಗೆ ಹರಿಹರ ಕವಿ ಸಂಪ್ರದಾಯ ಶರಣನಾಗಿಯೆ ಕಾವ್ಯ ಕರ್ಮಕ್ಕೆ ಕೈಹಾಕಿರುವನಾದರೂ ಆತನ ಚೇತನ ಅವ್ಯಕ್ತವಾಗಿಯೆ ನೂತನತೆಯನ್ನು ದರ್ಶಿಸುತ್ತೆಂದು ಕಾಣುತ್ತದೆ. ತನ್ನ ಕಾವ್ಯ ಕನ್ನಿಕೆಗೆ ಆತನು ಮಾಡಿರುವ ನಾಮಕರಣ 'ತಾರಕ ಸಂಹಾರ' ಅಥವಾ 'ಕುಮಾರಸಂಭವ' ಎಂದೆಲ್ಲ; 'ಗಿರಿಜಾ ಕಲ್ಯಾಣ' ಎಂದು ಇಲ್ಲಿನ ಕಥಾನಾಯಕಿ ಗಿರಿಜೆ, ಈ ಕಾವ್ಯ ಗಿರಿಜೆಯ ಬಾಳ ಕಥೆ. ಉಳಿದ ಪಾತ್ರಗಳೆಲ್ಲ ಶಿವನ ಪಾತ್ರ ಕೂಡಾ – ಕಥಾನಾಯಕಿಯೆ ಪಾತ್ರ ಪೋಷಣೆಗೆ ಸಹಾಯಕ. ಸಂಪ್ರದಾಯದ ಕಥೆಯಲ್ಲಿ ತಾರಕಸಂಹಾರ ಮತ್ತು ಆ ಕಾರಣಕ್ಕಾಗಿ

ಕುಮಾರಸಂಭವ ಕಥೆಯ ಶಿಖರವಾಗಿದ್ದರೆ, ಇಲ್ಲಿ ಗಿರಿಜಾಕಲ್ಯಾಣವೇ ಕಥೆಯ ಕಡೆಯ ಗುರಿ. ಕಥೆಯ ವಿವರಗಳಲ್ಲಿ ಕೆಲವು ಬದಲಾವಣೆಗಳನ್ನು ಮಾಡಿಕೊಂಡಿದ್ದಾನೆ. ಕೆಲವು ಕಡೆ ಅವು ಅನುಚಿತವಾಗಿವೆ. ಶಿವನ ತಪೋಭಂಗಕ್ಕಾಗಿ ಮನ್ಮಥನನ್ನು ನೇಮಿಸುವ ಕಾರ್ಯವನ್ನೂ ಇಲ್ಲಿ ನಾರಾಯಣನಿಗೆ ವಹಿಸುರುವುದೂ ಆ ತಂದೆ ಮಕ್ಕಳ ಸಂಭಾಷಣೆಯೂ ಸ್ವಾಭಾವಿಕವಾಗಿಲ್ಲ. ಇಂತಹ ಕೆಲವು ಘಟನೆಗಳನ್ನು ಬಿಟ್ಟರೆ. ಆತನ ಬದಲಾವಣೆಗಳು ಆತನ ಔಚಿತ್ಯ ಜ್ಞಾನಕ್ಕೂ ಶ್ರೀಮಂತ ಪ್ರತಿಭೆಗೂ ಸಾಕ್ಷಿಯಾಗಿದೆ.

ಹರಿಹರ ಕವಿಯ ಸನ್ನಿವೇಶರಚನಾಕೌಶಲಕ್ಕೆ ಮನ್ಮಥದಹನದ ಪ್ರಸಂಗ ಉತ್ತಮ ಉದಾಹರಣೆ. ಪುಷ್ಪಾಲಂಕಾರಭೂಷಿತೆಯಾಗಿ ಶಿವನ ಮುಂದೆ ನಿಂತಿದ್ದ ಗಿರಿಜೆಯನ್ನು ಕಂಡ ಮನ್ಮಥನು ತನ್ನ ಪುಷ್ಪಬಾಣವನ್ನು ಶಿವನ ಮೇಲೆ ಪ್ರಯೋಗಿಸಿದನು. ಒಡನೆಯೆ ಆತನ ಸಮಾಧಿ ಸಡಿಲಿತು. ಶಿವನು ನಸುಕೋಪದಿಂದ ಕಣ್ದೆರೆದನು, ಪುಷ್ಪಬಾಣಕ್ಕಿಂತಲೂ ಮೋಹಕಳಾಗಿದ್ದ ಗಿರಿಜೆಯನ್ನು ಆತ ಕಣ್ಣೆತ್ತಿಯೂ ನೋಡಲಿಲ್ಲ. ಬಾಣ ಬಂದ ಕಡೆ ದೃಷ್ಟಿಯನ್ನು ತಿರುಗಿಸಿದ, ಹಣೆಗಣ್ಣುರಿ ನಿಮಿಷಾರ್ಧದಲ್ಲಿ ಮನ್ಮಥನನ್ನು ಸುಟ್ಟು ಹಾಕಿತು. ಹರಿಹರ ಇದನ್ನು ಕಟ್ಟುವ ಹಾಗೆ ಮನಸ್ಸಿನಲ್ಲಿ ನಟ್ಟು ನಿಲ್ಲುವ ಹಾಗೆ ವರ್ಣಿಸುತ್ತಾನೆ.

ಪೊಗೆದುದು, ಪೊತ್ತಿದತ್ತು, ಕಿಡಿಯಿಟ್ಟುದು, ನಾಲ್ವೆ ಸೆದೋಱಿದತ್ತು, ಬಾ
ನ್ದೊಗೆದುದು. ನಿಂದು ಪೊಂಬೆಳಗುಮಂ ಪರೆಪುತ್ತದು ದಂ । ಧಗಿಲ್ಧಗಿ
ಲ್ಧಗಿಲೆನು ತಟ್ಟಿದುದು, ಮುಟ್ಟಿತು, ಸುಟ್ಟಿತು, ತಿಂದು ತೇಗಿದ
ತ್ತಗಿಯದೆ ನಿಂದ ಪೂಗಣೆಯನಂ ಪಣೆಗಣ್ಣುರಿ ಹಂಪೆಯಾಳ್ದನಾ

ಇಷ್ಟು ಹೇಳಿದುದರಿಂದ ಕೇಳುವವರ ಮನಸ್ಸಿಗೆ ಹಣೆಗಣ್ಣುರಿಯ ಭೀಕರತೆ ಬೋಧನೆಯಾಗುತ್ತದೆಯೋ ಇಲ್ಲವೋ ಎಂದು ಹರಿಹರ ಕವಿ, ಉರಿಯ ವರ್ಣನೆಯನ್ನು ಮುಂದುವರಿಸುತ್ತಾನೆ.

ಅರರೇ ಘುರ್ಘುಗು ಭಾಪುರೇ ಪ್ರಜ್ವಾಲಿಮಜ್ಜಯ್ಯ ದೇ
ವುರೇ ಕೋಪಾನಳ ನ್ವಿಸ್ಫುಲಿಂಗಮಮಮ ಪ್ರದ್ಯೋತಮಯ್ಯ ಯ್ಯ ಭೀ
ಕರವಾಹಾ ಛಣಿ ಛಿಳ್ ಛಿಟಲ್ ಛಲರೆ ಭಾಳಾಭೀಳ ಮುಂದೆಂದು ನಿ
ರ್ಜರಲೋಕಂ ಬೆರಗಾಗಿ ಸುಟ್ಟುದು ವಿರೂಪಾಕ್ಷಕ್ಷಿ ಕಂದರ್ಪನಂ

ಇದು ಹರಿಹರನ ಶೈಲಿ. ಇಲ್ಲಿನ ಪದಗಳ ಅರ್ಥಕ್ಕಿಂತಲೂ ಅವುಗಳ ನಾದದಿಂದ ಅಭಿವ್ಯಕ್ತವಾಗುವ ಭಾವ ಮುಖ್ಯ. ಅನುಕರಣಪದಗಳ ಸಾರ್ಥಕತೆಯನ್ನು ನಾವಿಲ್ಲಿ ಕಾಣುತ್ತೇವೆ. ಕವಿಯ ಶಬ್ದಗಾರುಡಿಗನಾಗಿ ಅಸಾಧಾರಣವಾದ ವಾತಾವರಣವೊಂದನ್ನು ಓದುಗರ ಕಣ್ಣೆದುರಿಗೆ ಕಟ್ಟಿ ನಿಲ್ಲಿಸುತ್ತಾನೆ. ಹಣೆಗಣ್ಣುರಿಗೆ ಸಿಕ್ಕ ಮನ್ಮಥ ಘರಿಲೆಂದುರಿದ 'ಬೆಂದನುಲಿಯಂತೆ' ನಿಂದನಂತೆ ! ಕವಿಯ ಕಲ್ಪನಾಶಕ್ತಿ ಆತನ ಅನುಭವಕ್ಕೆ ಎಂತಹ ನಿರುಪಣಾಶಕ್ತಿಯನ್ನು ಒದಗಿಸಿದೆ ! ಬೆಂದ ಹಗ್ಗದಲ್ಲಿ ಆಕಾರವಿದೆ, ಸತ್ವವಿಲ್ಲ; ಬೆಂದ ಕಾಮದಲ್ಲಿ ಆಕಾರವುಳಿದಿದೆ, ಜೀವವಿಲ್ಲ.

ಕಾಮನ ಪ್ರಳಯದಿಂದ ರತಿಯ ಬಾಳು ಬೆಂಗಾಡಾಯಿತು. ಆಕೆಯ ಪ್ರಲಾಪದಲ್ಲಿ ಹರಿಹರ ಕವಿ ಕರುಣರಸದ ಹೊಳೆಯನ್ನೆ ಹರಿಸಿದ್ದಾನೆ. ಆಕೆ ತನ್ನ ಮತ್ತು ಮನ್ಮಥನ ಶೃಂಗಾರಜೀವನದ ಅನುಭವವನ್ನೆಲ್ಲ ನೆನೆನೆನೆದು ಗೋಳಿಡುತ್ತಾಳೆ. ಮನೆದೇವತೆ,

ಮನದೇವತೆ, ದೆಸೆದೇವತೆಯರನ್ನೆಲ್ಲ ಅನಾಥೆಯಾದ ತನ್ನನ್ನು ಒಳಕೊಳ್ಳುವಂತೆ ಬೇಡಿಕೊಳ್ಳುತ್ತಾಳೆ. ಅಳುತ್ತಾ ನೆಲದ ಮೇಲೆ ಹೊರಳಾಡುತ್ತಿರುವ ಅವಳನ್ನು ಅಲ್ಲಿಯೇ ನಿಂತಿದ್ದ ಗಿರಿಜೆ ಸಮಾಧಾನ ಮಾಡುತ್ತಾಳೆ. ಆಗ ದುಃಖ ಮರುಕಳಿಸಿದ ರತಿ ಆಕೆಯ ಕಾಲ ಮೇಲೆ ಹೊರಳಾಡುತ್ತಾ–

ಕರುಣಿಸಿ ತಾಯೇ, ತವರೇ ! ಪರಿರಕ್ಷಿಸು, ದಯೋಳೀಕ್ಷಿಸುಡುಗಿಸು ನೋವಂ
ಪರಿಹರಿಸು ದುಃಖಮಂ, ವರ ! ಗಿರಿರಾಜತನೂಜೆ, ಕಾದುಕೊಳ್, ಎನ್ನಸುವಂ

ಎಂದು ಅಳುತ್ತಾಳೆ. ಕರುಣಾಮಯಿಯಾದ ಗಿರಿಜೆಗೆ ಶಿವನ ನಡತೆ ಸ್ವಲ್ಪವೂ ಸರಿಬೀಳಲಿಲ್ಲ. ತಾನು ಆತನಿಗಾಗಿ ಸಮಸ್ತವನ್ನೂ ತ್ಯಾಗಮಾಡಿ ಒಂದೇ ಮನಸ್ಸಿನಿಂದ ಪೂಜಿಸುತ್ತಿರುವಾಗ 'ಏನೊಂದುಂ ನೋಡುದುಗ್ರಂ ರಜಕ ಗಿರಿಗೆ ಪೋದಂ, ನಿಕೃಷ್ಟಾತ್ಮನಾದಂ' ಎಂದು ಆ ಚಲದಲಲನೆ 'ಬಲ್ಪಿನ ಭಾವಕಿ' ಕೆರಳಿದವಳಾಗಿ:

ತಾನಿರ್ದಲ್ಲಿಗೆ ನಡೆತಂ । ದಾನರ್ಚಿಸೆ ಕಾಮವೈರಿ ನುಡಿಯಿಸದಂತ
ರ್ಧಾನಕ್ಕೆ ಸರಿದನವರಿಂ । ದಾನಿರ್ದಲ್ಲಿಗೆ ಸಮಂತು ತನ್ನನೆ ತೆರ್ಪಂ

ಎಂದು ಪ್ರತಿಜ್ಞೆಯನ್ನು ಕೈಕೊಳ್ಳುತ್ತಾಳೆ. ಆ ಪ್ರತಿಜ್ಞೆಯನ್ನು ನೆರವೇರಿಸಿಕೊಳ್ಳುವುದಕ್ಕಾಗಿ ಆಕೆ ಬೇಸಿಗೆ, ಮಳೆ, ಚಳಿಗಳನ್ನು ಲೆಕ್ಕಿಸದೆ ಬಟ್ಟ ಬಯಲಿನಲ್ಲಿ ಘೋರ ತಪವನ್ನು ಕೈಕೊಳ್ಳುತ್ತಾಳೆ. ಈ ಭಾಗದಲ್ಲಿ ಹರಿಹರದೇವನ ಕವಿತಾ ಪಕ್ಷಿಯು ತನ್ನ ಪ್ರತಿಭೆ, ಕಲ್ಪನೆಗಳ ರೆಕ್ಕೆಗಳನ್ನು ಕೆದರಿ ಗಗನವಿಹಾರಿಯಾಗುತ್ತದೆ. ಆಕೆಯ ತಪಸ್ಸಿನ ತಾಪ ಸ್ವತಃ ಸೂರ್ಯನಿಂದಲೂ ಸಹಿಸಲಸಾಧ್ಯವಾಗಿತ್ತಂತೆ ! ಆತನು ಆಕೆಯ ತಪಸ್ಸು ಮಾಡುತ್ತಿದ್ದ ಸ್ಥಳವನ್ನು ಬಿಟ್ಟು ಮಗ್ಗುಲ ಹಾದಿಯಿಂದ ನುಸುಳಿಕೊಂಡು ಹೋಗುತ್ತಿದ್ದನಂತೆ ! ಮೃಗ ಪಕ್ಷಿಗಳೆಲ್ಲ ಸತ್ತುರುಳಿದವು; ಬೆಟ್ಟಗಳು ಉರಿದು ಹೋದವು. ಸಮುದ್ರ ಬತ್ತಿತು, ಭೂಮಿ ಕಾದಿ ಕೆಂಗೆಂಡವಾಯಿತು; ಬಿಸಿಲು, ಬಿಸಿಲು, ಬಿಸಿಲು, ಎಲ್ಲೆಲ್ಲಿಯೂ ಬಿಸಿಲು, ಮರದಡಿಯೊಳ್, ಕಾನನದೊಳ್, ಗಿರಿತಟದೊಳ್, ಬಟ್ಟಬಯಲೊಳ್, ಅಂಬರತಳದೊಳ್, ಕ್ರಮವಾಗಿ ಕರಿಯ ಬಿಸಿಲ್ ಉರಿಯ–ಬಿಸಿಲ್, ಅಚ್ಚರಿಯ ಬಿಸಿಲ್, ಪರಿಯ ಬಿಸಿಲ್, ಅಖಂಡಿತದ ಬಿಸಿಲ್ ಎಂದು ವಿಭಾಗಮಾಡಬೇಕೆ ಹೊರತು ಬಿಸಿಲಿಲ್ಲದ ಸ್ಥಳವಿಲ್ಲ. ಬಿಸಿಲನ ಝಳದಿಂದ ನೆಲಕ್ಕಿಟ್ಟ ಕಾಲನ್ನು ಮೇಲಕ್ಕೆ ಎತ್ತಲಾರದೆ ಸಂಕಟದಿಂದ ಕಣ್ ಮುಚ್ಚಿಕೊಂಡು, ಸೊಂಡಿಲನ್ನು ಬಾಯಲ್ಲಿಟ್ಟು ಸ್ತಬ್ಧವಾಗಿ ನಿಂತ ಆನೆಯೊಂದರ ನೆತ್ತಿಯೊಡೆದು ಅಲ್ಲಿನ ಮುತ್ತುಗಳೆಲ್ಲ ಚಲ್ಲಾಪಿಲ್ಲಿಯಾದವಂತೆ ! ಇಂತಹ ಭಯಂಕರ ನಡು ಬೇಸಿಗೆಯಲ್ಲಿ ಪಾರ್ವತಿ ಪಂಚಾಗ್ನಿ ಮಧ್ಯದಲ್ಲಿ ಕುಳಿತು ತಪಸ್ಸು ಮಾಡಿದಳಂತೆ ! ನೆರೆ ಗಂಗಾಧರನಂ ಶಶಿಧರನಂ ನೆನೆದು ಕಳದಳಾ ಬೇಸಿಗೆಯಂ' ಎಂದು ಕವಿ ಹೇಳುವ ಮಾತು ಎಷ್ಟು ಧ್ವನಿಪೂರ್ಣವಾಗಿದೆ, ಬೇಸಿಗೆಯಂತೆ ಮಳೆಗಾಲವೂ ಆಕೆಯ ತಪಸ್ಸಿಗೆ ಪ್ರತಿಸ್ಪರ್ಧಿಯಾದ ಪ್ರಕೃತಿಶಕ್ತಿಯಾಗಿ ಪರಿಣಮಿಸಿತು. ಅದನ್ನು ಮುಗಿಸಿದ ಮೇಲೆ ಚಳಿಗಾಲ ಬಂತು, ಅದು ಶಿಶಿರಾಜನ ಆಡಳಿತ. ಅವನು ಜನರಿಂದ ಶಿಶಿರನಾಟ್ಯವನ್ನೆ ಆಡಿಸಿದ. ಅದಕ್ಕೆ ವಾದ್ಯ ಹಲ್ಲುಗಳು, ಹುಹುಹು ಎಂಬುದೇ ಹಾಡು, ಕೈಗಳನ್ನು ಉಜ್ಜಿ ಕೊಳ್ಳುವುದೆ ತಂಬೂರಿಯ ವಾದನ; ಆ ಛಳಿಯಲ್ಲಿ 'ಒಡಲೇ ಪ್ರಾಣಂಗೆ ಚಳಿಯ ಕುಪ್ಪಸಮಾಯ್ತು' ಎಂದು ಕವಿಯ ಹೇಳಿಕೆ ಹುಟ್ಟಿದುದು. ಬೆಳೆದುದು, ಕೊಟ್ಟದು, ಕೊಂಡದು ಎಲ್ಲವೂ ಚಳಿ. ಸರ್ವ ಚಳಿಮಯಂ ಜಗತ್. ಇಲ್ಲಿ ಕಾಣಬರುವ ಕವಿಯ ಅನುಭವ, ಕಲ್ಪನೆ, ಸೌಂದರ್ಯ ದೃಷ್ಟಿ ಅಮೋಘವಾದುದು.

ಗಿರಿಜೆಯ ಈ ಘೋರತಪಸ್ಸಿಗೆ ಒಲಿದ ಶಿವನು ವಟುವೇಷದಿಂದ ಕಾಣಿಸಿಕೊಂಡು ಕಪಟ ನುಡಿಗಳಿಂದ ಆಕೆಯನ್ನು ಕೆರಳಿಸಿ, ಆಕೆ ಹೊಡೆದ ವಿಭೂತಿಯಿಂದ ಸ್ವಸ್ವರೂಪಿಯಾಗಿ ಕಾಣಿಸಿಕೊಳ್ಳುತ್ತಾನೆ 'ಶಿವನಾದೊಡೇಂ ? ಪುಸುದಿಟಕ್ಕೆ ನಿಲ್ವದೆ ?' ಕೋಪದಿಂದ ಆಕೆಒಗೆದ ವಿಭೂತಿ ಮದುವೆಯ ಮುಹೂರ್ತದ ಜೀರಿಗೆ ಬೆಲ್ಲವಾಗಿ ಪರಿಣಮಿಸಿತು. ಶಿವನು ಗಿರಿಜೆಯನ್ನು ವರಿಸಿ, ಆಕೆಯ ಪ್ರಾರ್ಥನೆಯಂತೆ ಕಾಮನು ಅನಂಗರೂಪಿನಿಂದ ರತಿಪತಿಯಾಗಿರಲೆಂದು ಅನುಗ್ರಹಿಸುತ್ತಾನೆ.

ಹರಿಹರ ಕವಿಯ 'ಗಿರಿಜಾ ಕಲ್ಯಾಣ'ವು ಸುಂದರವಾದ ಒಂದು ಚಂಪೂ ಕೃತಿ ನಿಜ. ಆದರೆ ಹರಿಹರನನ್ನು ಯುಗಪುರುಷನ ಪಟ್ಟಕ್ಕೇರಿಸಿದುದು ಆತನ 'ಶಿವಶರಣರರಗಳೆಗಳು' ಆತನು 'ಗಿರಿಜಾ ಕಲ್ಯಾಣ'ವನ್ನು ಬರೆಯುವಂದು ತನ್ನ ಕಾವ್ಯ ನೀರಸರರಿವಂತೇನಿದು ತಾರಲೆಯೆ ? ಬೀದಿವಾಡೆ ? ನೆರವಿಯತುಮುಕೆ ? ಎಂದು ಗರ್ಜಿಸುತ್ತಾನೆ. ಜನಸಾಮಾನ್ಯರೂ 'ಬೀದಿವಾಡು'ಗಳೂ ಅವನ ದೃಷ್ಟಿಯಲ್ಲಿ ಆಗ ಕೀಳು. ಆತ 'ಗಿರಿಜಾಕಲ್ಯಾಣ'ವನ್ನು ಬರೆದು ಮುಗಿಸುವ ವೇಳೆಗೆ ಹರಭಕ್ತಿ ಆತನಲ್ಲಿ ರಕ್ತಗತವಾಗುವುದರ ಜೊತೆಗೆ, ತಾನು ಕೀಳ್ಗಂಡಿದ್ದ ಜನಸಾಮಾನ್ಯರಲ್ಲಿ ಅಪಾರವಾದ ಕರುಣೆ ಮಮತೆಗಳು ಬೆಳೆದು ಹೆಮ್ಮರವಾಗಿ ಹೋಗಿದ್ದವೆಂದು ಕಾಣಿಸುತ್ತದೆ. ಅದರ ಸುಮಧುರ ಫಲಗಳೇ 'ಶಿವಶರಣರರಗಳೆ'ಗಳು.

ಇತರರ ಅನುಕರಣಕ್ಕೆ ಹೊರಡದೆ, ತನ್ನದೆ ಒಂದು ಹೆದ್ದಾರಿಯನ್ನು ನಿರ್ಮಿಸುವುದು ಹಿರಿತನದ ಹೆಗ್ಗುರುತು. ಹರಿಹರಕವಿ ಅಂತಹ ಹಿರಿತನವುಳ್ಳ ಮಹಾಪುರುಷ. ಆತನ ಕವಿಸಹಜವಾದ ನಿರಂಕುಶಮತಿ. ಆತನ ಸ್ವಭಾವ ಸಹಜವಾದ ಸ್ವತಂತ್ರ ಮನೋವೃತ್ತಿ 'ಗಿರಿಜಾಕಲ್ಯಾಣ'ದಲ್ಲಿಯೆ ಸ್ವಲ್ಪ ಮಟ್ಟಿಗೆ ಇಣಕಿ ಹಾಕಿದೆ. ಪ್ರಾಸಸ್ಥಾನದಲ್ಲಿ ರಳ ಕುಳ ಕ್ಷಳಗಳನ್ನು ಬೆರಸಬಾರದೆಂಬುದು ಒಂದು ಛಂದೋನಿಯಮ. ಈ ಮೂರು ಬಗೆಯ 'ಳ' ಕಾರಗಳಲ್ಲಿ 'ರಳ' ಉಚ್ಚಾರಣೆ ಹರಿಹರನ ಕಾಲಕ್ಕೆ ಸತ್ತು ಹೋಗಿತ್ತು. ಕವಿಗಳು ಪ್ರಾಸ ಸ್ಥಾನದಲ್ಲಿ ಅವುಗಳನ್ನು ತಪ್ಪಾಗಿ ಬಳಸುತ್ತಿದ್ದರು. ಆದರೆ ಇದನ್ನು ಸ್ಪಷ್ಟವಾಗಿ ಬಿಡುವಷ್ಟು ಧೈರ್ಯವಿಲ್ಲ; ಪಂಡಿತರ ಅಂಕುಶದ ಹೆದರಿಕೆ. ಈ ಅತಂತ್ರ ಸ್ಥಿತಿಯನ್ನು ಕಂಡು ಕೆರಳಿದ ಹರಿಹರ ಸಿಡಿದೆದ್ದು ಗುಡುಗಿದ-

ನೋಡುವೊಡೊಂದಕ್ಕರಮದು । ಮಾಡುವೊಡುಚ್ಚರಣೆಗರಿದು ಮೂರು ತೆರನಂ
ಕೊಡೆ ಕವಿತತಿ ವಿಚಾರಿಸ । ಬೇಡದಿರಂ ರಳಕುಳಕ್ಷಳಂಗಳಿನಿದರೊಳ್

ನಾನು ಆ ವ್ಯಾಕರಣನಿಯಮವನ್ನು ಪಾಲಿಸುವುದಿಲ್ಲ ಎಂದು ಕವಿ ಘಂಟಾ ಘೋಷವಾಗಿ ಹೇಳುತ್ತಾನೆ. ಈತನ ಈ ಸ್ವತಂತ್ರಮನೋವೃತ್ತಿ ಸಂಪೂರ್ಣವಾಗಿ ಅರಳಿರುವುದು ಆತನ ರಗಳೆಗಳಲ್ಲಿ. ಆ ಸ್ವತಂತ್ರ ಮನೋವೃತ್ತಿ ವಚನ ವಾಙ್ಮಯದಿಂದ ಪ್ರೇರೇಪಿತವಾದುದೆಂಬುದನ್ನು ಮರೆಯುವಂತಿಲ್ಲ. ೧೨ನೆಯ ಶತಮಾನದ ಧರ್ಮಕ್ರಾಂತಿಯೆಂಬ ಮೆಕ್ಕಲುನೆಲದ ಮೇಲೆಯೇ ಬೆಳೆದು ನಿಂತಿರುವ ಮಹೋನ್ನತ ವಟವೃಕ್ಷ, ಹರಿಹರದೇವ. ಭೂಮಿಯಲ್ಲಿ ಬೇರು ಬಿಟ್ಟು ಆಕಾಶದಲ್ಲಿ ಅರಳಿದೆ. ಆ ಮಹಾವೃಕ್ಷದ ಎತ್ತರ ಬಿತ್ತರಗಳನ್ನು ಮಹತ್ತಾಗಿ ಬೆಳೆಸಲು ಸಹಾಯಕವಾದ ಬಿಳಲುಗಳಂತಿವೆ, ಆತನ ರಗಳೆಗಳು. ಅವುಗಳ ಸಂಖ್ಯೆಯನ್ನು ಕುರಿತು ಬೇಕಾದಷ್ಟು ಚರ್ಚೆ ನಡೆದು ಅವುಗಳ ಸಂಖ್ಯೆ ನೂರಾರೆಂದು ಈಗ ನಿಶ್ಚಯಿಸಲಾಗಿದೆ. ಇವು ಒಂದೊಂದು ಹರಪಾರಮ್ಯವನ್ನು ಸ್ಥಾಪಿಸ ಹೊರಟು ಕೃತಕೃತ್ಯವಾಗಿದೆ.

ಹರಿಹರನ ರಗಳೆಗಳನ್ನು ಸ್ಥೂಲವಾಗಿ ಕಥನಾತ್ಮಕ ಭಾವಗೀತಾತ್ಮಕಗಳೆಂದು ಎರಡು ಪಂಗಡಗಳಾಗಿ ವಿಂಗಡಿಸಬಹುದು. ಕಥನಾತ್ಮಕಗಳಲ್ಲಿ ಪುರಾತನ ಮತ್ತು ನೂತನ ಶರಣರ ಕಥೆಗಳು ಕಂಡುಬರುತ್ತವೆ. ವೀರಶೈವರಲ್ಲಿ, ಜೈನರ ತ್ರಿಷಷ್ಟಿ ಶಲಾಕಾಪುರುಷರ ಹಾಗೆ, ೬೩ ಜನ ಪುರಾತನರು

ಪ್ರಸಿದ್ಧರಾಗಿದ್ದಾರೆ. ಅವರೆಲ್ಲ ಬಹುಮಟ್ಟಿಗೆ ತಮಿಳರು. ಕ್ರಿ.ಶ. ಸು. ೧೧೪೫ರಲ್ಲಿದ್ದ ಶೇಕ್ಕಿಳಾರ್ ಎಂಬ ತಮಿಳು ಕವಿ 'ಪೆರಿಯಾಪುರಾಣಂ' ಎಂಬ ತನ್ನ ಕಾವ್ಯದಲ್ಲಿ ಈ ಪುರಾತನರ ಕಥೆಯನ್ನು ಬಿತ್ತರಿಸಿದ್ದಾನೆ. ಈ ಕಾವ್ಯದ ಆಧಾರದ ಮೇಲೆ ಹರಿಹರನು ತನ್ನ ಹಲವು ರಗಳೆಗಳನ್ನು ಬರೆದಿದ್ದಾನೆ. ಪೆರಿಯಪುರಾಣದ ಅರವತ್ತು ಮೂವರ ಜೊತೆಗೆ ಹರಿಹರ ಕವಿ ಕರಿಕಾಲವ್ವೆ, ನಂಬಿಯಕ್ಕ, ಮಾದಾರಚೆನ್ನಯ್ಯ ಎಂಬ ಮೂವರ ಕಥೆಗಳನ್ನೂ ಸೇರಿಸಿ ಪುರಾತನ ಸಂಖ್ಯೆಯನ್ನು ಅರವತ್ತಾರಾಗಿ ಮಾಡಿರುವಂತೆ ದಿ|| ಶ್ರೀ ದೊ.ಲ.ನ.ರವರು ತಿಳಿಸುತ್ತಾರೆ. ಕವಿಯು ಈ ಪುರಾತನರನ್ನು ಮಾತ್ರವೇ ಅಲ್ಲದೆ ಅಲ್ಲಮ, ಬಸವಣ್ಣ ಇತ್ಯಾದಿ ೨೮ ಜನ ನೂತನರ ಕಥೆಗಳನ್ನೂ ರಗಳೆಯಲ್ಲಿ ಬರೆದಿದ್ದಾನೆ. ಇವರಲ್ಲಿ ಹಲವರನ್ನು ಆತ ಪ್ರತ್ಯಕ್ಷವಾಗಿ ಕಂಡಿದ್ದರೂ ಇರಬಹುದು. ಉಳಿದವರ ಕಥೆಗಳನ್ನು ಆತ ಕಂಡವರಿಂದ ಕೇಳಿರಬಹುದು. ಕಂಡವರಾಗಲಿ ಕೇಳಿದವರಾಗಲಿ – ಈ ಕಥೆಗಳಲೆಲ್ಲ ಹರಿಹರನ ವ್ಯಕ್ತಿತ್ವ ತನ್ನ ಚಿರಮುದ್ರೆಯೊನ್ನೊತ್ತಿರುವುದೆಂಬುದರಲ್ಲಿ ಸಂದೇಹವಿಲ್ಲ.

ಹರಿಹರನ ಭಾವಗೀತಾತ್ಮಕ ರಗಳೆಗಳಲ್ಲಿ ಪಂಚಾಕ್ಷರಿ, ವಿಭೂತಿ, ರುದ್ರಾಕ್ಷಿ ಇತ್ಯಾದಿಗಳ ಮಹಿಮೆಯನ್ನು ಎತ್ತಿ ತೋರಿರುವ ರಗಳೆಗಳು ವಸ್ತು ನಿಷ್ಠವಾದವು; ಪಿಂಡೋತ್ಪತ್ತಿ, ಪುಷ್ಪ ಇತ್ಯಾದಿಗಳು ವ್ಯ ಕ್ತಿನಿಷ್ಠವಾದುವು. ಈ ವ್ಯಕ್ತಿ ನಿಷ್ಠವಾದುವುಗಳಲ್ಲಿ ಹರಿಹರನ ಆತ್ಮ ಕಥೆ ಸ್ವಲ್ಪ ಮಟ್ಟಿಗೆ ವ್ಯ ಕ್ತವಾಗಿರುವಂತೆ ತೋರುತ್ತದೆ. ಬಹುಶಃ ಹರಿಹರನು ಕೆಲವು ಕಾಲ ಸಂಸಾರಿಯಾಗಿದ್ದು ಹೆಂಡತಿ ಮಕ್ಕಳೊಡನೆ ಜೀವನದ ಸುಖ ದುಃಖಗಳನ್ನು ಅನುಭವಿಸಿರಬೇಕೆಂದು ತೋರುತ್ತದೆ. ತಾಯಿಯ ಗರ್ಭವನ್ನು ಪ್ರವೇಶಿಸಿದಂದಿನಿಂದ ಯೌವನವನ್ನು ಮುಟ್ಟುವವರೆಗೆ ಅನುಭವಿಸಿದ ಸಂಕಟಗಳೂ, ಯೌವನದಲ್ಲಿ 'ದೈತ್ಯೆ'ಯಂತಹ ಹೆಂಡತಿಯನ್ನು ಕಟ್ಟಿಕೊಂಡು, ವಿರಸದಾಂಪತ್ಯದ ಫಲವಾಗಿ ಅಡ್ಡ ಹಾದಿ ಹಿಡಿದು 'ಸಂತತಂ ಯವ್ವನದ ನರಕದೊಳ್ ಮುಳುಗಿ ಕೈಲಿದ್ದ ಕಾಸೂ ಮೈಲಿದ್ದ ಕಸುವೂ ಮುಗಿದ ಮೇಲೆ 'ನಡೆವೆಣನೆ, ನುಡಿನೆಣನೆ, ಬಾಳ್ವೆಣನೆ ಪೋಗೆಂದು' ವಾರಸ್ತ್ರೀಯರಿಂದ ಬಂದ ನಿಂದನೆಗಳೂ 'ಸಾಲದಿಂ ಸಿಗ್ಗಾಗಿ, ಪಲವುಪವಾಸಂ. ಪತ್ತಿ 'ಹೆಂಡತಿ ಮಕ್ಕಳಕಾಟಕ್ಕಾಗಿ ಪರರ ಆಳಾಗಿ ಭಿಕ್ಷಾಟನೆಯನ್ನು ಕೂಡ ಕೈಕೊಂಡು, ಜೀವ ರೋಸಿ, 'ಅನೇಕ ಸಂಸಾರವೇಕೆ ಕೇಳಲೆ ತಂದೆ, ನೀನು ಎನೆ ಗೊಡ್ಡಿದ ಮಹೇಂದ್ರಜಾಲಂ ತಂದೆ' ಎಂದು ಶಿವನನ್ನು ಕುರಿತು ಮಾಡುವ ಪ್ರಾರ್ಥನೆಗಳೂ 'ಪಿಂಡೋತ್ಪತ್ತಿರಗಳೆ'ಯಲ್ಲಿ ಹೃದಯಂಗಮವಾಗಿ ವರ್ಣಿತವಾಗಿದೆ. ಸಂಸಾರದಲ್ಲಿ ನೊಂದ ಆತ 'ನಿತ್ಯಲಿಂಗಾರ್ಚನೆಯೊಳಿರಿಸೆನ್ನನೆಲೆದೇವ' ಎಂದು ಶಿವನನ್ನು ಬೇಡಿದ. ಶಿವನು 'ತಥಾಸ್ತು' ಎಂದೆನೊಏನೊ ! ಕವಿಯು ಸರ್ವಸಂಗ ಪರಿತ್ಯಾಗ ಮಾಡಿ, ಶಿವಪೂಜೆ, ಕೀರ್ತನೆಗಳ ಆನಂದದಲ್ಲಿ ಮಗ್ನನಾದ. ಈ ವಿರಕ್ತ ಜೀವನದ ಚಿತ್ರ 'ಪುಷ್ಪರಗಳೆ'ಯಲ್ಲಿ ಮನೋಹರವಾಗಿ ಕಾಣಿಸಿಕೊಂಡಿದೆ. ಶಿವನ ಪೂಜೆಗಾಗಿ ಆತ ಹೂದೋಟದಿಂದ ಹೂಗಳನ್ನು ತಿರಿದು ತಂದುದು ಇದರ ವಸ್ತು. ಆ ತೋಟ 'ಪರಿಮಳದ ಸುಗ್ಗಿ, ಸೌರಭದ ಸಂದಣಿ; ಕವಿಯ ಬಾಯಿ ಶಿವಭಕ್ತರ ಕೀರ್ತಿಯನ್ನು ಕೈ ವಾರಿಸುತ್ತಾ ಇದೆ, ಮನಸ್ಸು ಕುಣಿಯುತ್ತಿದೆ; ಕಣ್ಣು ಇರುವಂತಿಗೆ, ಸಂಪಿಗೆ, ಸೇವಂತಿಗೆಗಳನ್ನು ಕಂಡು ನಲಿಯುತ್ತಾ ಜಾಜಿಯನ್ನು ಕಂಡು

ಜಾತಿ ನೀನೆ ಸಕಲ ಪುಷ್ಪ ಜಾತಿಗೆ ಜಾತಿ
ಭೂತೇಶ್ವರನ ಒಡೆಯ ಮುಡಿಗೇರಿದೊಡೆ ಜಾತಿ

ಎಂದು ಅದನ್ನು ಹೊಗಳಿ ಶೇಖರಿಸಿದ; ಕೇದಗೆಯನ್ನು ಕಂಡು,

ಹೊರಗೆ ಮಳ್ಳೊಳಗೆ ಕಂಪಕಕ್ಕು ನಿನ್ನ ಪರಿ
ಹೆರೆ ಸೂಡಿದನ ಗುಪ್ತ ಭಕ್ತ ನಂತಿರ್ಪ ಪರಿ

ಎಂದು ಅದನ್ನು ಸ್ತುತಿಸಿ ಬುಟ್ಟಿಗೆ ಹಾಕಿದ. ಹೀಗೆಯೇ ಮೊಲ್ಲೆ ಮಲ್ಲಿಗೆ ಮರುಗ ಮಡಿವಾಳಾದಿಗಳನ್ನು ಶೇಖರಿಸಿ, ಸರಸಿಜ ಸೂತ್ರದಿಂದ ಅವುಗಳನ್ನು ಮಾಲೆಯಾಗಿ ಕಟ್ಟುತ್ತಾನೆ. ಅವುಗಳನ್ನು ಕಟ್ಟುವಂದು ಅವನ ಭಾವ ಅದೆಷ್ಟು ಕೋಮಲವಾಗಿದೆ:

ಕೈಮುಟ್ಟಿ ಮುಟ್ಟದೆ ಮನಂ ಮುಟ್ಟಿ ಕಟ್ಟುತಂ
ಕೈ ಮರೆದು ಪೂ ಬೀಳೆ ಸತ್ತು ಹುಟ್ಟುತಂ
ನೋಡಿದರೆ ಪೂ ಬಾಡುಗೆಂದು ಕಣ್ಮುಚ್ಚುತುಂ
ನಾಡೆ ನೆನೆದೊಡೆ ಕುಂದಾಗೆಂದು ಮನಬೆಚ್ಚುತುಂ

ಆತ ಹಾರವನ್ನು ಕಟ್ಟಿದನಂತೆ ! ಆ ವೇಳೆಗೆ ದುಂಬಿಗಳು ಹೂಗಳನ್ನರಸುತ್ತಾ ತೋಟಕ್ಕೆ ಹೋಗಿ, ಅಲ್ಲಿಲ್ಲದಿರಲು 'ಪರಿಮಳದ ಪಥವಿಡಿದು' ಹರಿಹರನ ಬಳಿಗೆ ಬರುತ್ತದೆ. ಆತ ಅವುಗಳನ್ನು ಕುರಿತು -----

ಬೇಡನೆಲೆ ಹಂಪೆಯ
ರಸನ ಕುಮಾರಂ ಸಿತಗ
ನಾಡಂಬರಂಗಳಂ ಕೊಳ್ಳನಾರಡಿಗೆರಗೆ
ಅಳಿಯಾಸೆ ಬೇಡ, ನಿಮಗಿಲ್ಲಿ ಸೋಲುವರಿಲ್ಲ
ಗಳಗಳನೆ ಬಂದಂತೆ ಮರಳಿಗಳಗಳನೆಲ್ಲ

ಎಂದು ಗದರಿಸುತ್ತಾನೆ. ಅನಂತರ ಹೂಗಳೊಡನೆ ಶಿವಗುಡಿಗೆ ಹೋಗಿ, 'ಏನೆನ್ನ ಶಿವನೆ ! ಉಪ್ಪವಡಿಸಿದಿರ್ದಾ ತಂದೆ ?' ಎಂದು ಹತ್ತಿರಕ್ಕೆ ಹೋಗಿ, ಸೇವಂತಿಗೆ ಹೂವಿನ ಪನ್ನೀರಿಂದ ಮುಖತೊಳೆದು, ಪರಾಗದ ವಿಭೂತಿಯಿಟ್ಟು ಕೇತಕಿಯ ನುಣ್ಣೆಸಳ್ಗಳಿಂದ ಜಟೆಯನ್ನು ಸಿಕ್ಕುಬಿಡಿಸಿ, ಶಶಿಕಳೆ ನೋಯದಂತೆ ಸುರನದಿ ತುಳುಕದಂತೆ ಅದನ್ನು ಗಂಟು ಹಾಕಿ, ಪುಷ್ಪಾಲಂಕಾರ ಮಾಡುತ್ತಾನೆ.

ಕವಿಯೂ ಪುಷ್ಪಾಪಚಯ ಪರಶಿವನ ಅಲಂಕಾರದೊಳಗೆ ಕನ್ನಡ ಸಾಹಿತ್ಯ ದೇವಿಯ ಅಲಂಕರಣವನ್ನೂ ಮಾಡಿ ಶಿವಭಕ್ತರಂತೆ ಸಾಹಿತ್ಯ ಭಕ್ತರ ಮನ್ನಣೆಗೂ ಪಾತ್ರವಾಗಿದೆ.

ಇನ್ನು ಹರಿಹರದೇವರ ಕಥನಾತ್ಮಕ ರಗಳೆಗಳನ್ನು ಸ್ವಲ್ಪ ನೋಡೋಣ. ಈ ಜಗತ್ತು ವಿಶಾಲ, ವೈವಿಧ್ಯಮಯ, ಭಕ್ತಿ ಭಾವಭರಿತ. ಈ ಜಗತ್ತಿನಲ್ಲಿ ಸಂಚರಿಸುವ ಶಿವಶರಣರಲ್ಲಿ ಮಕ್ಕಳಿಂದ ಮುದುಕರವರೆಗೆ ಎಲ್ಲ ವಯಸ್ಸಿನವರೂ ಇದ್ದಾರೆ. ಇವರೆಲ್ಲರಿಗೂ 'ಕಾಯಕ'ವೇ ಕೈಲಾಸವೆಂಬ ತತ್ತ್ವ ಸಮಾನವಾಗಿದ್ದರೂ ಅವರ ಸ್ವಭಾವ, ಅಭಿರುಚಿ, ಜೀವನದೃಷ್ಟಿ ಭಕ್ತಿ ಮಾರ್ಗಗಳಲ್ಲಿ ಬೇಕಾದಷ್ಟು ಭಿನ್ನತೆಯಿದೆ. ಅವರ ವೃತ್ತಿಯೂ ಬೇರೆ ಬೇರೆ. ಆದರೂ ಅವರೆಲ್ಲ ನಿಷ್ಠರಾದ ಭಕ್ತರು; ತಾವು ಕೈಕೊಂಡ ವೃತ್ತಿಯಲ್ಲಿಯೇ ಆದರ್ಶವನ್ನು ಕಲ್ಪಿಸಿಕೊಂಡು, ಆ ವೃತ್ತಿಯನ್ನೇ ಅಧ್ಯಾತ್ಮಕ್ಕೆ ಅಳವಡಿಸಿಕೊಂಡವರು. ತನ್ನ ಆತ್ಮೋನ್ನತಿಯನ್ನು ಸಾಧಿಸಿಕೊಂಡಿರುವ ಹರಿಹರದೇವ ಕವಿಯ ಕಾವ್ಯ ಸೃಷ್ಟಿಯಲ್ಲಿ ಅವರೆಲ್ಲ ಜೀವಂತರಾಗಿ ವ್ಯವಹರಿಸುತ್ತಾರೆ. ಕವಿಯಆತ್ಮ ದೇವರಿಗಾಗಿ ಹಂಬಲಿಸಿತು. ತನ್ನ ಆತ್ಮೋದ್ಧಾರವನ್ನು ಸಾಧಿಸಿತು. ತನ್ನಂತೆಯೆ ಅದನ್ನು ಸಾಧಿಸಿಕೊಂಡ ಶಿವಶರಣರ ಜೀವಿತಗಳನ್ನು ಆತನ ಕೈಯಕುಂಚ

ಅತ್ಯಂತ ಸ್ವಾಭಾವಿಕವಾಗಿ ಚಿತ್ರಿಸಬಲ್ಲುದು. ಅವರ ಕಥೆಗಳನ್ನು ಹೇಳುವ ಕವಿಗೆ ಅಪರಿಮಿತವಾದ ಉತ್ಸಾಹ. ಆ ಉತ್ಸಾಹದ ತುಂಬುನೆರೆಯಲ್ಲಿ ಸುಧಾಪ್ರವಾಹ ಓದುಗರನ್ನೂ ಎಳೆದುಕೊಂಡು ವೇಗವಾಗಿ ತನ್ನ ಗಮ್ಯ ಸ್ಥಾನವನ್ನು ಮುಟ್ಟುತ್ತದೆ. ಕವಿಯ ಕಥನಾತ್ಮಕ ರಗಳೆಯಲ್ಲಿ ಯಾವುದನ್ನು ಓದಿದರೂ ಇದು ಸ್ಪಷ್ಟವಾಗುತ್ತದೆ.

ಹರಿಹರನ ಶರಣರ ನವವಿಧ ಭಕ್ತಿಗೂ-ಇವುಗಳ ನಿಯಮಗಳಿಗೆ ಅತೀವವಾದ ಭಕ್ತಿ ಮಾರ್ಗ ಸಹ ಈ ಶರಣ ತಿಂಥಿಣಿಯಲ್ಲಿ ಸಿಕ್ಕೀತು-ಬೇಕಾದಷ್ಟು ಉದಾಹರಣೆಗಳಿವೆ. ಪರಮೇಶ್ವರನು ಹಾಲಾಹಲವನ್ನು ಕುಡಿದನೆಂದು ಕೇಳಿ ಮುಗ್ಧ ಭಕ್ತನಾದ ರುದ್ರ ಪಶುಪತಿ ಗಳಗಳ ಅಳುತ್ತಾ ಸಮುದ್ರದ ಮಧ್ಯದಲ್ಲಿ ಕುತ್ತಿಗೆಯ ಮಟ್ಟ ನೀರಿನೊಳಗೆ ನಿಂತು ಪಂಚಾಕ್ಷರಿ ಜಪಿಸುತ್ತಾನೆ. ಕಾಲ ಸಂಹರಣ ಜೀವವುಳಿಸಹೊರಟ ಅವನ ದೇಹವನ್ನೆಲ್ಲ ಜಲಚರಗಳು ತಿಂದು ಜೀವಿಸುತ್ತವೆ. ತನ್ನ ಅಸ್ಥಿಗಳು 'ಅಸ್ಥಿ ಮಾಲಾಭರಂಗರ್ಪಿತವೆಂಬಂತೆ' ಆತ ಅಸ್ಥಿ ಪಂಜರವಾಗಿ ನಿಲ್ಲುತ್ತಾನೆ; ಕಡೆಗೆ ಶಿವ ಸಾಯುಜ್ಯವನ್ನು ಪಡೆಯುತ್ತಾನೆ. ಇಂತಹುದೇ ಮುಗ್ಧಭಕ್ತಿ 'ಕೋಳೂರು ಕೊಡಗೂಸು'ನಲ್ಲಿ ಮತ್ತೂ ರಮ್ಯವಾಗಿ ಚಿತ್ರಿತವಾಗಿದೆ. ಅವಳಿಗೆ ಶಿವಲಿಂಗ ಕಲ್ಲಲ್ಲ, ಸಾಕ್ಷಾತ್ಪರಮೇಶ್ವರ. ಹಾಲು ಕುಡಿಯಬೇಕೆಂದು ಲಿಂಗವನ್ನು ಬೇಡಿಕೊಳ್ಳುತ್ತಾಳೆ. ಲಿಂಗದಲ್ಲಿರುವ ಶಿವನಿಗೆ ಹಾಲಿಗಿಂತ ಅವಳ ಮಾತು ಹೆಚ್ಚು ರುಚಿಯಾಗಿದೆ; ಮೌನವಾಗಿ ಕುಳಿತಿದ್ದಾನೆ, ಹುಡುಗಿ ಅಳುತ್ತಳುತ್ತಾ ಅಂಗಲಾಚುತ್ತಾಳೆ. ಆ ಮುಗ್ಧ ಸರಳತೆ ಶಿವನನ್ನು ಮೆಚ್ಚಿಸುತ್ತದೆ; ಆತ ಪ್ರತ್ಯಕ್ಷನಾಗಿ ಬಂದು ಹಾಲು ಕುಡಿಯುತ್ತಾನೆ. ಕೊಡಗೂಸಿನ ಬಾಯಲ್ಲಿ ಬರುವ ಮಾತು ಹರಿಹರ ಕೃತ. ಆತ ಸ್ವತಃ ಮಗುವಿನಷ್ಟು ಸರಳವಾದ ಮನಸ್ಸಿನವನು. ಆತ ಶಿವನೊಡನೆ ಮಾತನಾಡುತ್ತಾನೆ. ಆತನ ತಲೆ ಬಾಚುತ್ತಾನೆ. ಹೂ ಮುಡಿಸುತ್ತಾನೆ, ಊಟ ಮಾಡಿಸ್ತುತಾನೆ. ಇಂತಹ ಸಾತ್ವಿಕ ಭಕ್ತನ ಕವಿತೆಯಲ್ಲಿ ಅದೇ ಮುಗ್ಧ ಸರಳತೆ ಮೂಡುವುದು ಕೇವಲ ಸ್ವಾಭಾವಿಕ. ಈ ಕಥೆಗಳನ್ನು ಪ್ರತಿಮಾ ದೃಷ್ಟಿಯಿಂದ ವಿವೇಚಿಸಿದಾಗ ಹೆಚ್ಚು ಅರ್ಥವತ್ತಾಗುತ್ತದೆ. ಮುಗ್ಧ ಭಕ್ತಿಗೆ ದೈವಭಕ್ತಿ ಬೇಗ ಒಲಿಯುತ್ತದೆಂಬುದು ಇಲ್ಲಿನ ಅಂತರಾರ್ಥ.

ಕಾಯಕವನ್ನು ಅಧ್ಯಾತ್ಮಕ್ಕೆ ಅಳವಡಿಸಿಕೊಂಡಿರುವ ಹಲವು ಶರಣರ ಕಥೆಗಳು ಹರಿಹರನ ರಗಳೆಗಳಲ್ಲಿ ಕಾಣಬರುತ್ತದೆ. ಅವುಗಳಲ್ಲಿ 'ಕುಂಬಾರಗುಂಡಯ್ಯ'ನ ಕಥೆ ಅತ್ಯಂತ ಭವ್ಯವಾಗಿ, ಚೇತೋಹಾರಿಯಾಗಿದೆ. ಗುಂಡಯ್ಯ ವೃತ್ತಿಯಲ್ಲಿ ಕುಂಬಾರ. ಆತನು ತನ್ನಲ್ಲಿರ್ದುದನ್ನೆಲ್ಲ ಶರಣರಿಗರ್ಪಿಸಿ ಹರಕೃಪೆಗೆ ಪಾತ್ರನಾಗಿದ್ದಾನೆ. ಆತ ದಿನವೂ ಮಡಕೆಯನ್ನು ತಟ್ಟುವ ತಾಳಕ್ಕೆ ಶಿವ ನರ್ತಿಸುತ್ತಾನೆ. ಇಲ್ಲಿನ ಕಥೆ ಇಷ್ಟೆ. ಕವಿ ಇಷ್ಟರಲ್ಲಿಯೆ ಒಂದು ರಸದ ಮಡುವನ್ನು ಸೃಷ್ಟಿಸಿದ್ದಾನೆ. ಶಿವನ ತಾಂಡವ ನೃತ್ಯವಿದು.

ದಶಭುಜಮಂ ದಿಕ್ತ ಕೆಟಂ ಪಸರಿಸ । ಎಸೆವ ಕರಂಗಳನೆತ್ತಲ್ ನೇಮಿಸಿ
ಒಂದು ಪದಂ ಪಾತಾಳವನೊತ್ತಲ್ । ಒಂದು ಪದಂ ಬ್ರಹ್ಮಾಂಡವನೊತ್ತಲ್
ಜಡೆಗಳ್ ಬೆಂಬಳಿವಿಡಾದಾಡುತ್ತಿರೆ । ಮುಡಿಯೊಳ್ ಸುರನದಿ ತುಳ್ಳಾಡುತ್ತಿರೆ
ತಡಿಯೊಳ್ ಶಶಿಕಲೆಯಲ್ಲಾಡುತ್ತಿರೆ । ಕಡು ಚೆಲ್ವಳಕಂ ಕುಣಿದಾಡುತ್ತಿರೆ
ಮಿಸುಗುವ ಡಮರುಗ ಥಂ ಥಂ ಥಣಲೆಸೆ । ತಿಸುಳದಿ ಹರಿಯುವ ತಾರಂತಿರ್ರನೆ

ತಿರುಗುತ್ತಿರೆ ಅಹಿಗಳ್ ಹೆಡೆಯೆತ್ತಲು । ಕರಿಯ ತೊವಲ್ ನಭಮಂ ಜೋಹರಿಸಲು
ಸರಸಿಜಭವನ ತಿರಂ ಬೊಬ್ಬಿಡುತಿರೆ । ಸುರರ ಶಿರೋಮಾಲೆಗಳುಲಿವುತ್ತಿರೆ
ಪೊಂಗೆಜ್ಜೆಗಳ ರವಂ ಘಲುಘಲುಕೆನೆ । ತೊಗಲಗಂಟೆ ಢಣಂ ಢಂ ಢಣಲೆನೆ
ಆಡಿದನಾಡಿದನಾಹಾ । ಶಂಕರ

ಶಿವನ ನಾಟ್ಯವನ್ನು ಕಂಡು ಗುಂಡಯ್ಯನಿಗೆ ಆವೇಶ ಬಂತು

ಶಿವನಂ ಕಂಡಾ ಭಕ್ತಂ ಕುಣಿಯಲು । ಶಿವಭಕ್ತನಕೂಡಭವಂ ಕುಣಿಯಲು
ಇರ್ವರನೀಕ್ಷಿಸಿ ಗಣಪಂ ಕುಣಿಯಲು । ಸರ್ವಸ್ಥಾವರ ಜಂಗಮವಾಡಲು
ಮಡಕೆಯ ಶಬ್ದಕ್ಕಾಡುತ್ತಿರ್ದಂ । ಮೃಡನಖಿಳರುವೆರೆಸಾಡುತ್ತಿರ್ದಂ

ಓದುತ್ತ ಹೋದಂತೆ ನಾವು ಮೈಮರೆತು, ದಿವ್ಯಜಗತ್ತೊಂದನ್ನು ದರ್ಶಿಸಿದವರಂತೆ ತಲ್ಲೀನರಾಗುತ್ತೇವೆ. ಇಲ್ಲಿನ ಒಂದೊಂದು ಸಾಲೂ, ಒಂದೊಂದು ನುಡಿಯೂ ಶಿವನೊಡನೆ ಕುಣಿಯುತ್ತಿವೆ, ಓದುವವರನ್ನೂ ಕೇಳುವವರನ್ನೂ ಕುಣಿಸುತ್ತಿವೆ. ಕತೆಯಿಲ್ಲದಲ್ಲಿಯೂ ಕೃತಿ ಕ್ರಿಯಾಪೂರ್ಣವಾಗಿದೆ, ಭವ್ಯತೆಯನ್ನು ಧರಿಸಿ ರೋಮಾಂಚಕಾರಿಯಾಗಿದೆ.

ಮಲುಹಣ-ಮಲುಹಣಿಯರ ಪ್ರಣಯಜೀವನದ ದೈವಪ್ರೇಮವಾಗಿ - ತೀವ್ರದ ಕಾಮೋದ್ರೇಕ ಭಕ್ತಿಯ ಪಾಕವಾಗಿ-ಪರಿವರ್ತಿತವಾದುದನ್ನು ಹರಿಹರಕವಿ ಅತ್ಯಂತ ರಮ್ಯವಾಗಿ, ಅತ್ಯಂತ ಸ್ವಾಭಾವಿಕವಾಗಿ ಚಿತ್ರಿಸಿದ್ದಾನೆ. ಕವಿ ವರ್ಣಿಸಿರುವ ಇವರ ಪ್ರಣಯಜೀವನ ಒಂದು ಪ್ರಣಯಸೂಕ್ತದಂತಿದೆ. ಮಲುಹಣನು 'ಸುಕುಮಾರಾಂಗಿಯೊಳೊಲ್ದು ನೆರವ ಸುಖಸಮಯದೊಳ್ ಕರಣವಲ್ಲಂ ನೋಟ, ನೋಟವೆಲ್ಲಂ ನುಡಿ, ನುಡಿಯೆಲ್ಲಂ ವಿರಹ, ವಿರಹವೆಲ್ಲಂ ದೈನ್ಯ, ದೈನ್ಯವೆಲ್ಲಂ ಸಾತ್ವಿಕಂ, ಸಾತ್ವಿಕಮೆಲ್ಲಂ ಮೆಯ್, ಮೆಯ್ಯೆಲ್ಲಂ ಕೂಟಂ, ಕೂಟಮೆಲ್ಲೆ ಮನಂ, ಮನನಮೆಲ್ಲಂ ಮೆಚ್ಚು, ಮೆಚ್ಚಲ್ಲಂ ಸೋಲಂ, ಸೋಲಮೆಲ್ಲಂ ರಸಮಯಂ' ಆಗಿ ಅವರಿಬ್ಬರೂ ಯುಗವೊಂದು ಕ್ಷಣವಾಗಿ ಕಾಲ ಕಳೆದಂತೆ!

ಆಗರ್ಭ ಶ್ರೀಮಂತನಾದ ಮಲುಹಣ ಭಿಕಾರಿಯಾದ, ಈ ಸೂಳೆಯ ಸಹವಾಸದಿಂದ. ಆಗ ಮಹುಹಣಿಯ ತಾಯಿ ಆ ಕಾಮುಕನನ್ನು ಮನೆಯಿಂದ ಅಟ್ಟಿದಳು. ಮಲುಹಣ ವಿರಹದಲ್ಲಿ ಬೇಯುತ್ತಾ ರಾತ್ರಿಯೆಲ್ಲ ಮಲುಹಣಿಯ ಮನೆಯ ಹೊರಗೆ ನಿಂತು, ಮೇಲಿನಿಂದ ಬಿದ್ದ ಮಂಜಿನಿಂದ ಹಿಮದ ಬೊಂಬೆಯಂತಾಗುತ್ತಾನೆ. ಮನಮರುಗಿದ ಮಲುಹಣಿ 'ಎನ್ನ ಮೇಲಿಕ್ಕುವ ಈ ಚಿತ್ತದಾತುರತೆಯನ್ನು ಪನ್ನಗಾಭರಣನೊಳಗೆ ಇಡು; ನನ್ನಂತಹ ಕೋಟಿ ಮಲುಹಣಿಯರು ನಿನಗೆ ದೊರೆತಾರು' ಎಂದು ಅವನಿಗೆ ಹೇಳಿ ಕಳುಹಿಸಿದಳು. ಅಷ್ಟು ಸಾಕು, ಮಲುಹಣನ ಚಿತ್ತಪರಿವರ್ತನೆ, ಹೆಣ್ಣಿನ ಮೇಲಿದ್ದ ಚಿತ್ತೈಕಾಗ್ರತೆ ಶಿವಪ್ರೇಮದ ಚಿತ್ತೈಕಾಗ್ರತೆಯಾಯಿತು, ಆತ ಧನ್ಯನಾದ.

ಹರಿಹರನ ರಗಳೆಗಳಲ್ಲಿ 'ಬಸವರಾಜದೇವರ ರಗಳೆ' ತಲೆವಣಿಯಂತಿದೆ. ಇದರ ನಾಯಕನಾದ ಬಸವಣ್ಣ ಹದಿನಾರರ ಹರಯದಲ್ಲಿ ಕರ್ಮಲತೆಯಂತಿದ್ದ ಜನಿವಾರವನ್ನು ಕಿತ್ತು ಬಿಸುಟು, ಕಪ್ಪಡಿ ಸಂಗಮಕ್ಕೆ ಹೋದ. ಅಲ್ಲಿ ಈಶಾನ್ಯ ಗುರುಗಳ ಆಶ್ರಯವನ್ನು ಪಡೆದು ಕಪ್ಪಡಿ ಸಂಗಮದ

ಪರಮಭಕ್ತನಾದ. ಪುಷ್ಪಗಗಳೆಯಲ್ಲಿ ನಾವು ಕಂಡ ಹರಿಹರನೇ ಇಲ್ಲಿ ಶಿವಪೂಜೆಗೆ ಪುಷ್ಪಗಳನ್ನು ತಿರಿದು ತರುವ ಬಸವಣ್ಣನಲ್ಲಿ ಪರಕಾಯ ಪ್ರವೇಶ ಮಾಡಿದ್ದಾನೆ. ಪುಷ್ಪಗಳನ್ನು ಎತ್ತಿಕೊಂಡು ಬಂದ ಬಸವಣ್ಣ ನದಿಯಲ್ಲಿ ಮಿಂದು, ಶೋಧಿಸಿದ ಅಗ್ಘವಣಿಯನ್ನು ತಂದು, 'ಚಿತ್ತದೊಳು ಪೂಜೆಯಚ್ಚೊತ್ತಿದ್ದಂತೆ' ಅರ್ಚನೆಮಾಡಿದ. ಷೋಡಶೋಪಚಾರ ಪೂಜೆಯಾದ ಮೇಲೆ

ಎನ್ನ ಕಣ್ಣೊಳಗೆ ಪರಿದಾಡು ಕೂಡಲ ಸಂಗ
ಎನ್ನ ಮನದೊಳಗೆ ಕುಣಿದಾಡು ಕೂಡಲ ಸಂಗ

ಎಂದು ಬೇಡಿಕೊಂಡ, ಭಗವಂತನನ್ನು ನೋಡುತ್ತ ನೋಡುತ್ತ ಆತನ ಸಾತ್ವಿಕರಸ ಮಸಗಿತು.

ಮಣಿ ಮಣಿದು ಕುಣಿಕುಣಿದು ಕಲಿಕಲಿದು ನಲಿದಾಡಿ
ತಣಿತಣಿದು ತಕ್ಕೈಸಿ ಮಿಕ್ಕು ಮಲೆಮಲೆದಾಡಿ
ಆಡುತಾಡುತ್ತಲ್ಲಿ ಪೊಗಳ್ವುದೆ ನೆರೆ ಮರೆತು
ನೋಡ ನೋಡುತ್ತಲ್ಲಿ ನೋಟಮಂ ಮಿಗೆ ಮರೆದು
ಕಣ್ಮುಚ್ಚಿ ಗದಗದಿಸಿ ಜೋಲ್ದು ಜೊಂಪಿಸಿ ಬಿದ್ದು
ಉಣ್ಮುವ ಶಿವಾನಂದರಸದ ಹೊನಲೊಳಗಿದ್ದು
ಈಸಾಡಿ ಗಂಗಾಧರನ ಚರಣಮಂ ಪಿಡಿದು
ಲೇಸಾಗಿ ಚಿತ್ತದೊಳು ಸಂಗನಂ ನೆರೆ ಹಿಡಿದು

'ಸುಖಮೂರ್ಛೆ'ಯಿಂದ ನೆಲಕ್ಕೆಬಿದ್ದು ಆನಂದಮಯವಾಗಿ ಹೋಗುತ್ತಾನೆ. ದಿ|| ಪ್ರೊ. ವೆಂಕಣ್ಣಯ್ಯನವರು ಹೇಳಿದಂತೆ 'ಈ ವರ್ಣನೆಯು ಎಷ್ಟು ಉಜ್ಜಲವಾಗಿರುವುದೆಂದರೆ ನಾಸ್ತಿಕನ ಹೃದಯದಲ್ಲಿ ಕೂಡ ಭಕ್ತಿ ಭಾವವನ್ನು ಉದ್ರೇಕಿಸುವಂತಿದೆ ! 'ಹರಿಹರದೇವನ ವರ್ಣನೆಗಳು ಓದುವವರ ಅಥವಾ ಕೇಳುವವರ ಹೃದಯದಲ್ಲಿ ನೆಲೆ ನಿಲ್ಲುತ್ತವೆ. ಆ ವರ್ಣನೆಗಳು ಅಷ್ಟು ಭವ್ಯವಾಗಿರುತ್ತವೆ. ಇದರ ಜೊತೆಗೆ ಆತನ ಔಚಿತ್ಯಜ್ಞಾನ ಸ್ತೋತ್ರಾರ್ಹವಾದುದು. ಕವಿಯ ಗುರಿ ಬಸವಣ್ಣನ ಧಾರ್ಮಿಕಜೀವನ ನಿರೂಪಣೆ.

ಅದಕ್ಕೆ ಆಗತ್ಯವಾದ ಗುರು ಲಿಂಗ ಜಂಗಮಾರಾಧನೆಗಳ ವಿಚಾರವನ್ನು ಮನತಣಿಯುವಂತೆ ವರ್ಣಿಸುತ್ತಾನೆ. ಆದರೆ ಆತನ ಹುಟ್ಟಿದೂರು ತಾಯ್ತಂದೆಗಳು ಬಾಲ್ಯವಿವಾಹ ಇತ್ಯಾದಿಗಳು ಸೂಕ್ಷ್ಮವಾಗಿ ಸೂಚಿಸುತ್ತಾನೆ, ಅಷ್ಟೆ ಕವಿ ನಮ್ಮ ಇದಿರಿಗೆ ಕಡೆದು ನಿಲ್ಲಿಸಿರುವ ಬಸವಣ್ಣನ ವ್ಯಕ್ತಿಚಿತ್ರ ಮಹೋನ್ನತವಾದುದು. ಆತನ ಭಕ್ತಿಯನ್ನು ಒರೆಹಚ್ಚುವಂತಹ ಸನ್ನಿವೇಶ ಬಂದಾಗ ಆತನ ಎಂತಹ ಸಂಯಮದಿಂದ ಉದಾತ್ತತೆಯಿಂದ ವ್ಯವಹರಿಸುತ್ತಾನೆ ! ಸಾಕ್ಷಾತ್ ಪರಶಿವನೆ ವಿಟಜಂಗಮರೂಪಿನಿಂದ ಬಂದು 'ಬಸವ ಬಸವಾ; ನಾವು ಹೆಂಗೂಸಿಲ್ಲದೆ ಇರ್ದುದಿಲ್ಲ' ಎಂದು ಹೇಳಿದಾಗ ಬೇಡಿದವರಿಗೆ ಬೇಡಿದುದನ್ನು ನೀಡುವ ಪ್ರತಿಜ್ಞೆಯನ್ನು ಕೈಕೊಂಡ ಬಸವಣ್ಣ 'ಪಟ್ಟಣದ ಪಣ್ಯಾಂಗನೆಯರೆಲ್ಲಂ ಕೂಡಿ ದಂಪತಿಗಳಾಗಿರೆ' ಅನಿವಾರ್ಯವಾಗಿ 'ಸಿರಿ ಸರಸ್ವತಿಯರಂ ಕೀಳ್ಮಾಡುವ ಮಾಯಿ ದೇವಿಯಂ' ಆತನಿಗೆ ಅರ್ಪಿಸಿದ. ಮಾಯಿದೇವಿ ಮಲಗಿದ್ದ ವಿಟಜಂಗಮನನ್ನು ಎಬ್ಬಿಸಿದಳು. ಆಕೆ ಮುಟ್ಟಿದೊಡನೆಯೆ 'ಮಾಯೆಯ ಜವನಿಕೆಯಂ ತೆಗೆವಂತೆ' ಶಿವನು ಪ್ರತ್ಯಕ್ಷನಾದ. ಅದನ್ನು ಕಂಡು ಅಚ್ಚರಿಗೊಂಡ ಮಾಯಿದೇವಿ 'ಬಸವ ಬಸವಾ, ಜಂಗಮ ದೇವರು

ಸಂಗಮದೇವರಾಯರು' ಎಂದು ಕೂಗಿಕೊಂಡಳು. ಬಸವಣ್ಣ ಸ್ವಲ್ಪವೂ ಅಚ್ಚರಿಗೊಳ್ಳದೆ 'ತಾಯೆ, ತಾಯೆ, ಮುನ್ನವಾರೆಂದು ಕೊಟ್ಟೆಂ ?' ಎಂದು ಪ್ರಶ್ನಿಸುತ್ತಾನೆ. ಪರೀಕ್ಷಿಸಲೆಂದು ಬಂದ ಪರಮೇಶ್ವರ ಸೋತು ನಾಚಿಕೆಯಿಂದ ಮಾಯವಾಗುತ್ತಾನೆ. ಈ ಸಂದರ್ಭದಲ್ಲಿ ಬಸವಣ್ಣನ ಪಾತ್ರ ಮಹೋನ್ನತವಾಗಿ ಹೋಗುತ್ತದೆ.

ಹರಿಹರ ಕವಿಯ ಚಂಪೂಕೃತಿ ರಚನೆಯಲ್ಲಿ ಸಿದ್ಧಹಸ್ತನಾಗಿದ್ದರೂ ಮಲ್ಲಿಕಾರ್ಜುನನು ತನ್ನ 'ಸೂಕ್ತಿಸುಧಾರ್ಣವ'ದಲ್ಲಿ ಈತನ 'ಗಿರಿಜಾಕಲ್ಯಾಣ'ದಿಂದ ಪದ್ಯಗಳನ್ನು ಉದ್ಧರಿಸಿದ್ದಾನೆ–ಶಿವಶರಣರ ಪುಣ್ಯಚರಿತ್ರೆ ಜನಸಾಮಾನ್ಯರ ಸ್ವತ್ತಾಗಲೆಂಬ ಉದಾತ್ತಧ್ಯೇಯದಿಂದ, ಜನಜೀವನಕ್ಕೆ ಸಮೀಪವಾದ ಅಚ್ಚ ಕನ್ನಡ ರಗಳೆಯ ಛಂದಸ್ಸನ್ನು ತನ್ನ ಕಾವ್ಯವಾಹಕವಾಗಿ ಬಳಸಿಕೊಂಡ. ಈ ರಗಳೆಯ ಛಂದಸ್ಸು ಕನ್ನಡ ಸಾಹಿತ್ಯದಲ್ಲಿ ಹಿಂದಿನಿಂದ ಬಳಕೆಯಲ್ಲಿತ್ತು; ಆದರೆ ಬಹಳ ಕ್ವಚಿತ್ತಾಗಿ ಮಾತ್ರ. ಅದನ್ನು ಸಮಗ್ರ ಗ್ರಂಥ ರಚನೆಗೆ ಬಳಸಿಕೊಂಡ ದಿಟ್ಟತನ, ಹರಿಹರನದು. ತನ್ನ ಶಿವಶರಣರ ಕಥಾ ನಿರೂಪಣೆಗೆ 'ರಗಳೆ'ಯು ನಿರರ್ಗಳವಾಗಿ ಹರಿಯುವ ಛಂದಸ್ಸಾಗಿ ಆತನಿಗೆ ಕಾಣಿಸಿರಬೇಕು. ಆದರೆ ಆದಿ ಅಂತ್ಯಪ್ರಾಸಗಳನ್ನು ಆತ ಬಳಸಿದುದು ಅದರ ಓಟಕ್ಕೆ, ಸರಳತೆಗೆ ಸ್ವಲ್ಪಮಟ್ಟಿಗೆ ಮಾರಕವಾಗಿ, ಓದುಗರ ಬೇಸರಕ್ಕೆ ಕಾರಣವಾಗಬಹುದು. ಅದನ್ನು ಅರಿತೋ ಏನೋ ಆತ ಕಥೆ ಅತಿ ದೀರ್ಘವಾದಾಗ ಅದನ್ನು ಸ್ಥಳಗಳಾಗಿ ವಿಂಗಡಿಸಿ, ಒಂದು ಸ್ಥಲವನ್ನು ರಗಳೆಯಲ್ಲೂ ಮತ್ತೊಂದನ್ನು ಗದ್ಯದಲ್ಲಿಯೂ ಬರೆದಿದ್ದಾರೆ. ಪ್ರಸಾದ ನಿಯಮವನ್ನು ಆತ ಕಿತ್ತುಹಾಕಿದ್ದರೆ ಇಂದಿನ ಸರಳ ರಗಳೆಯಂತೆ ಕಥಾನಿರೂಪಣೆಗೆ ಸೊಗಸಾಗಿ ಹೊಂದಿಕೊಳ್ಳುತ್ತಿತ್ತು. ಆತನ ಗದ್ಯ ಚಂಪೂವಿನಲ್ಲಿ ಬರುವ ಗದ್ಯವಲ್ಲ; ವಚನಕಾರರು ಬಳಸಿರುವ ಹೃದ್ಯವಾದ ಗದ್ಯ. ಗದ್ಯ ಸಾಹಿತ್ಯ ಆತನ ಕೈಲಿ ಮೈದುಂಬಿಕೊಂಡು ಕಳಕಳಿಸುತ್ತಿದೆ. ಗದ್ಯ ಸಾಹಿತ್ಯದ ಚರಿತ್ರೆಯಲ್ಲಿ ಹರಿಹರಕವಿ ಒಂದು ಮೈಲಿಗಲ್ಲು.

ಹರಿಹರಕವಿ ಕನ್ನಡ ಸಾಹಿತ್ಯದಲ್ಲಿ ಹೊಸದೊಂದು ಹೆದ್ದಾರಿಯನ್ನು ನಿರ್ಮಿಸಿ ಯುಗಪುರುಷನಾದ. ಆತನ ಕಾವ್ಯಗಳು ರಸಮಯವಾಗಿರುವಷ್ಟೇ ಆತ್ಮ ಕಲ್ಯಾಣ ಸಾಧಕಗಳಾಗಿವೆ. ಆತನ ಸಂಪರ್ಕ ಸಾನ್ನಿಧ್ಯಗಳು ಪವಿತ್ರ ತೀರ್ಥಸ್ನಾನದಂತೆ ಪಾವನಕರ. ಆತ ತನ್ನ ಕಾಲದ ಸೀಮಾ ಪುರುಷ. ಆದ್ದರಿಂದಲೆ ಆತನ ನಂತರ ಬಂದ ಕವಿಗಳನೇಕರು ತಮ್ಮ ಕಾವ್ಯಾರಂಭದಲ್ಲಿ ಆತನಿಗೊಂದು ಸ್ತುತಿರೂಪದ ಪುಷ್ಪಾಂಜಲಿಯಿತ್ತು. ಕೃತಿರಚನೆಗೆ ತೊಡಗುತ್ತಾರೆ. ಷಡಕ್ಷರಿ ಕವಿ ಆತನನ್ನು ಕುರಿತು ಕೇಳಿದ 'ಹರೀಶ್ವರಸೇನ ಕವಿಃ ಕಃ ಎಂಬ ಪ್ರಶ್ನೆ ಕಾಲಗರ್ಭದಿಂದ ತೂರಿಬಂದು, ಉತ್ತರವನ್ನು ಕಾಣದೆ ಅನುರಣಿತವಾಗುತ್ತಿದೆ.

೨. ಕವಿ ರಾಘವಾಂಕ

ಹರಿಹರಕವಿ ಪುಣ್ಯಶಾಲಿ, ಆದ್ದರಿಂದಲೇ ; ಶಿಷ್ಯಾಧಿಚ್ಛೇತ್ ಪರಾಜಯಂ' ಎಂಬ ಸೂಕ್ತಿ ಸಾರ್ಥಕವಾಗುವಂತೆ ಆತನ ಸೋದರಳಿಯ ರಾಘವಾಂಕ ಆತನಿಗೆ ಶಿಷ್ಯನಾಗಿ ದೊರೆತ. ಈ ಶಿಷ್ಯನು ದೈವದತ್ತವಾದ ಪ್ರತಿಭೆಯೊಡನೆ ಗುರುದತ್ತವಾದ ಪಾಂಡಿತ್ಯವೂ ಸೇರಿ, ಸುವರ್ಣಕ್ಕೆ ಸುವಾಸನೆ ಬಂದಂತಾದನು. ಶಿವನ ಸಾನ್ನಿಧ್ಯ, ಶಿವಕವಿಯ ಶಿಕ್ಷಣಗಳ ಫಲವಾಗಿ ರಾಘವಾಂಕನಲ್ಲಿ ಧರ್ಮ ಕಾವ್ಯಧರ್ಮಗಳು ಅವಳಿ ಜವಳಿಯಾಗಿ ಬೆಳೆದುಬಂದವು. ಆತನಲ್ಲಿದ್ದ ಕಾವ್ಯಶಕ್ತಿ ಗುರುವಿನಿಂದ ಸ್ಫೂರ್ತಿಯನ್ನು ಪಡೆದು 'ಚತುರ ಕವಿರಾಯ ಹಂಪೆಯ ಹರೀಶ್ವರನ ವರಸುತನು' ಎಂದು ಹೇಳಿಕೊಳ್ಳುವಷ್ಟು ಮಾರ್ಗದರ್ಶನವನ್ನು ಪಡೆಯಿತು; ಅಂಕುರಿಸಿ, ಅರಳಾಯಿತು. ಕವಿ ರಾಘವಾಂಕನು ತನ್ನ ಗುರುವಿನ ನಿರಂಕುಶಮತಿಯನ್ನು ಮುಂದುವರಿಸಿ 'ಷಟ್ಪದಿಬ್ರಹ್ಮ'ನೆಂಬ ಕೀರ್ತಿಗೆ ಪಾತ್ರನಾದನು.

'ಕವಿಶರಭಭೇರುಂಡ', 'ಉಭಯಕವಿಕಮಲರವಿ', 'ಅದಟಕವಿ ನಿಕರಚ್‌ದಂತ' ಇತ್ಯಾದಿ ಬಿರುದುಗಳಿಗೆ ಪಾತ್ರನಾಗುವಂತೆ ಕಾವ್ಯ ಸೃಷ್ಟಿ ಮಾಡಿದನು. ಆತನು 'ಹರಿಶ್ಚಂದ್ರ ಕಾವ್ಯ' 'ವೀರೇಶಚರಿತೆ' 'ಸಿದ್ಧರಾಮ ಪುರಾಣ' 'ಸೋಮನಾಥ ಚರಿತೆ' 'ಶರಭಚಾರಿತ್ರ' 'ಹರಿಹರ ಮಹತ್ವ' ಎಂಬ ಆರು ಗ್ರಂಥಗಳನ್ನು ಬರೆದಿರುವುದಾಗಿ ತಿಳಿದುಬರುತ್ತದೆ. ಆದರೆ ಇವುಗಳಲ್ಲಿ ಕಡೆಯದೆರಡು ಇನ್ನೂ ಉಪಲಬ್ಧವಾಗಿಲ್ಲ.

ರಾಘವಾಂಕನನ್ನು 'ಷಟ್ಪದಿಬ್ರಹ್ಮ'ನೆಂದು ಕರೆದಿರುವರಾದರೂ ಆತನಿಗಿಂತಲೂ ಮುಂಚೆಯೇ ಷಟ್ಪದಿ ಹುಟ್ಟಿತ್ತು. ಆದರೆ ಶರಷಟ್ಪದಿ ಮಾತ್ರ ಕ್ವಚಿತ್ತಾಗಿ ಕಾವ್ಯದಲ್ಲಿ ಬಳಕೆಯಾಗಿತ್ತು. ಷಟ್ಪದಿಯಲ್ಲಿಯೆ ಅಖಂಡ ಕಾವ್ಯ ಸೃಷ್ಟಿಗೆ ಕೈಯಿಟ್ಟವರಲ್ಲಿ ಈತನೇ ಮೊದಲಿಗ. ಅಷ್ಟೇ ಅಲ್ಲ ಷಟ್ಪದಿಯಲ್ಲಿ ವೈವಿಧ್ಯವನ್ನು ತರಲು ಈತನು ಸಾಕಷ್ಟು ಪ್ರಯೋಗಗಳನ್ನು ಮಾಡಿರುವಂತೆ ಕಂಡುಬರುತ್ತದೆ. ಆಗ ದೊರೆತಿರುವ ಆತನ ಕಾವ್ಯಗಳೆಲ್ಲ ವಾರ್ಧಕಷಟ್ಪದಿಯಲ್ಲಿ ಇರುವುದಾದರೂ, ಆತನ 'ವೀರೇಶಚರಿತೆ'ಯಲ್ಲಿನ ಷಟ್ಪದಿ ರಚನೆ ವಿಲಕ್ಷಣವಾಗಿದೆ. ಅದರ ಸಾಲುಗಳಲ್ಲಿರುವ ಮಾತ್ರಾ ಸಂಖ್ಯೆ ಇತರ ವಾರ್ಧಕಷಟ್ಪದಿಗಳಂತೆಯೆ ಇರುವುದಾದರೂ ಗಣಗಳು ಮಾತ್ರ ಐದು ಮಾತ್ರೆಯ ಗಣಗಳಿಗೆ ಬದಲಾಗಿ ನಾಲ್ಕು ಮಾತ್ರೆಯ ಗಣಗಳಾಗಿವೆ. ಈಗ ಉಪಲಬ್ಧವಿಲ್ಲದಿರುವ ಆತನ ಕಾವ್ಯಗಳಲ್ಲಿ ಇನ್ನೇನಾದರೂ ಪ್ರಯೋಗಗಳನ್ನು ನಡೆಸಿರಬಹುದೇ ಎಂಬ ಕುತೂಹಲ ಹುಟ್ಟುವುದು ಸಹಜವಾಗಿಯೇ ಇದೆ.

ರಾಘವಾಂಕನ ಕಾವ್ಯಗಳಲ್ಲಿ 'ಹರಿಶ್ಚಂದ್ರ ಕಾವ್ಯ' ಅಗ್ರಗಣ್ಯವಾದುದು. ಇದನ್ನು ಬರೆದುದಕ್ಕಾಗಿ–ಮಾನವನಾದ ಹರಿಶ್ಚಂದ್ರನನ್ನು ಇಲ್ಲಿ ಸ್ತುತಿಸಿರುವನೆಂಬ ಕಾರಣಕ್ಕಾಗಿ–ಹರಿಹರದೇವನು ಕೆರಳಿ ರಾಘವಾಂಕನ ಹಲ್ಲುಗಳನ್ನೆಲ್ಲ ಉದುರಿಸಿದನೆಂದೂ ತನ್ನ ಈ ಪಾಪ ನಿವಾರಣೆಗಾಗಿ ರಾಘವಾಂಕನು 'ಸಿದ್ಧರಾಮಪುರಾಣ'ವೇ ಮೊದಲಾದ ಪುರಾಣಪ್ರಪಂಚಗಳನ್ನು ಬರೆದನೆಂದೂ, ಅದರಿಂದ ಆತನ ಹಲ್ಲುಗಳು ಮತ್ತೆ ಹುಟ್ಟಿದವೆಂದೂ ಒಂದು ದಂತಕಥೆ ಪ್ರಚಲಿತವಾಗಿದೆ. ಆದರೆ ಅದು ಅರ್ಥವಿಲ್ಲದ ಕಥೆಯೆಂದು ತೋರುತ್ತದೆ. ಮಾವನಂತೆ ಅಳಿಯನೂ ಪರಮಶಿವ ಭಕ್ತ 'ಹಂಪೆಯರಸನ ಪೊಗಳ್ವ ನಾಲಗೆ ಯೊಳನ್ಯದೈವವ ಭವಿಗಳಂಕೀರ್ತಿಸಿದೆನಾದಡೆ ಮನಸಿಜಾರಿಯ ಭಕ್ತನಲ್ಲ ತಾನು' ಎಂಬ ಕೆಚ್ಚುಳ್ಳವನು. ಆತನ ದೃಷ್ಟಿಯಲ್ಲಿ ಹರಿಶ್ಚಂದ್ರನು ಬಹುದೊಡ್ಡ ಶಿವಭಕ್ತ. ಆದ್ದರಿಂದ ಈ ಕೃತಿ 'ಪುಣ್ಯಾದಾಕೃತಿಯದು' ಎಂಬುದು ರಾಘವಾಂಕನ ಹೇಳಿಕೆ. ಈ ಕೃತಿಕನ್ನಿಕೆಯನ್ನು ಹಡೆದು ಈ ವಿರೂಪಾಕ್ಷನಿಗೆ ಧಾರೆಯೆರೆದು ಕೊಟ್ಟನಂತೆ, ಕವಿ. ಆ ಕನ್ನೆಗೆ ––––

ರಸ ಜೀವ, ಭಾವ ವೊಡಲರ್ಥವವಯವ, ಶಬ್ದ
ವಿಸರವೇ ನುಡಿಯಲಂಕಾರ ತೊಡಿಗೆಯುತ
ವೆ ಸುಲಕ್ಷಣವೆ ಲಕ್ಷಣ ವಿಮಲ ಪದನ್ಯಾಸ ನಡೆ, ರೀತಿ ಸುಕುಮಾರತೆ
ರಸಿಕತನ ಸುಳಿ ಸುಖಿಂ ನಿಳಿಯವಂತಪ್ಪಯೀ
ಪೊಸಕಾವ್ಯಕನ್ನಿಕೆಯ ಪಡೆದು ಪಂಪಾಂಬಿಕೆಯ
ರಸ ವಿರೂಪಾಕ್ಷರಿಗೆ ಕೊಟ್ಟ ಹಂಪೆಯ ರಾಘವಾಂಕನೇಂ ಕೃತಕೃತ್ಯನೊ

ಅಹುದು. ಕವಿ ರಾಘವಾಂಕನು ಧನ್ಯನೇ. ಕಾವ್ಯದಲ್ಲಿ ರಸವೇ ಜೀವವೆನ್ನುವ ಗುಟ್ಟನ್ನು ಅರಿತ ರಸಋಷಿ ರಾಘವಾಂಕ. ಆತನು ತನ್ನ ಕಾವ್ಯವನ್ನು ಹೊಸ ಕನ್ನಿಕೆಗೆ ಹೋಲಿಸಿರುವುದೂ, ಆ ಕನ್ಯೆಯನ್ನು ಪಂಪಾವತಿಗೆ ಅರ್ಪಿಸಿರುವುದೂ ಎಂತಹ ಮಾರ್ಮಿಕವಾದ ಸುಂದರ ಕಲ್ಪನೆ ! ಕವಿಯ ಭಾವಗಳ ಸಮಾವೇಶದಿಂದ ಸೃಷ್ಟಿಯಾದ ಒಡಲಿನಲ್ಲಿ ರಸದ ಜೀವನವನ್ನು ಪಡೆದವಳು, ಆ

ಕಾವ್ಯ ಕನ್ನಿಕೆ. ಆಕೆಯ ಅಂಗಾಂಗಗಳು ಸುಪುಷ್ಟವಾಗಿ, ಮಾಂಸಲವಾಗಿ, ಮೋಹಕವಾಗಿ ಕಾಣಿಸಬೇಕಾದರೆ ಅಲ್ಲಿನ ಮಾತುಗಳು ಅರ್ಥವತ್ತಾಗಿರಬೇಕು. ಆ ಮಾತುಗಳು ಸಜೀವವಾಗಿ ಕಾವ್ಯ ಕನ್ನಿಕೆಯ ನಿಂತು ಮಾತನಾಡುವಂತಿರಬೇಕು. ಸ್ವಭಾವಸುಂದರಿಯಾದವಳು ಒಡವೆಗಳಿಂದ ಅಲಂಕೃತಳಾದರೆ ಸುವರ್ಣಕ್ಕೆ ಸುವಾಸನೆ ಬಂದಂತೆ ; ಇಲ್ಲಿನ ಕಾವ್ಯ ಕನ್ನಿಕೆ ಕಾವ್ಯಾಲಂಕಾರಗಳಿಂದ ಶೋಭಿಸುತ್ತಿದ್ದಾಳೆ. ಮಾತುಗಳ ಜೋಡಣೆ ಮನೋಹರವಾಗಿದೆ, ಜೊತೆಗೆ ಸುಕುಮಾರಾದಿ ಕಾವ್ಯಗುಣಗಳೂ ಹೆಣ್ಣಿನ ಸದ್ಗುಣಗಳಂತೆ ಇಲ್ಲಿವೆ. ಇಂತಹ ಸರ್ವಾಂಗ ಸುಂದರಿಯಾದ ದಿವ್ಯ ಕಾವ್ಯಕನ್ಯೆಯನ್ನು ಶಿವನಿಗೆ ಅರ್ಪಿಸಬಲ್ಲವನು ಸುಕೃತಿಯಲ್ಲದೆ ಮತ್ತೇನು ?

ರಾಘವಾಂಕನ 'ಹರಿಶ್ಚಂದ್ರ ಕಾವ್ಯ'ವು ರನ್ನನ 'ಗದಾಯುದ್ಧ'ದಂತೆ ತನ್ನ ಕಾವ್ಯದ ಚೌಕಟ್ಟಿನಲ್ಲಿ ನಾಟಕವೊಂದನ್ನು ಹೊತ್ತು ಕುಳಿತಿರುವ ಕೃತಿ. ಗದಾಯುದ್ಧದಂತೆ ಅಲ್ಪಸ್ವಲ್ಪ ಬದಲಾವಣೆಗಳೊಡನೆ ನಾಟಕವಾಗಿ ಪರಿವರ್ತಿಸಬಹುದು. ಪರಿವರ್ತಿಸಲಾಗಿದೆ. ಈ ಕಾವ್ಯರೂಪದ ನಾಟಕ ಪ್ರಾರಂಭವಾಗುವುದು ಮಂಗಳಕರವಾದ ದೇವೇಂದ್ರನ ಆಸ್ಥಾನದ ದೃಶ್ಯದಿಂದ. ಅಲ್ಲಿ ಹರಿಶ್ಚಂದ್ರನು ಪರಮ ಸತ್ಯವಂತನೆಂದು ವಸಿಷ್ಠ ಹೇಳಿದುದೇ ನೆಪವಾಗಿ, ವಸಿಷ್ಠ ವಿಶ್ವಾಮಿತ್ರರಲ್ಲಿ ವಾಗ್ಯುದ್ಧ ನಡೆದು ಮುಂದೆ ನಡೆಯಬೇಕಾದ ಕಥೆಗೆ ಅಸ್ತಿಭಾರ ಹಾಕಿದಂತಾಗುತ್ತದೆ. 'ಕೋಣನೆರಡುಂ ಹೋರೆಗಿಡುವಿಂಗೆ ಮಿತ್ತು' ಎಂಬಂತೆ ವಸಿಷ್ಠ ವಿಶ್ವಾಮಿತ್ರರ ಜಗಳ ಹರಿಶ್ಚಂದ್ರನ ಕಷ್ಟಕ್ಕೆ ಮೂಲವಾಗುತ್ತದೆ. ವಿಶ್ವಾಮಿತ್ರನು ಆತನ ಬಳಿಗೆ ಬಂದು ಅಪಾರವಾದ 'ಹೊಸ ಹೊನ್ನ ರಾಶಿಯನ್ನು ಕೇಳಿ, ಪಡೆದ ಅದನ್ನು ರಾಜನಲ್ಲಿಯೇ ಬಿಟ್ಟು ನಾನಾ ಮೃಗಪಕ್ಷಿಗಳನ್ನು ಸೃಷ್ಟಿಮಾಡಿ, ದೇಶದಲ್ಲೆಲ್ಲ ಕ್ಷೋಭೆಯನ್ನುಂಟು ಮಾಡಿದ. ಇದರ ಫಲವಾಗಿ ರಾಜ ಬೇಟೆಗೆ ಹೋಗಬೇಕಾಯಿತು. ಋಷಿ ಮಾಯೆಯ ಹಂದಿಯೊಂದನ್ನು ನಿರ್ಮಾಣಮಾಡಿ, ರಾಜನ ಪಡೆಯ ಬಳಿಗೆ ಕಳುಹಿಸಿದ. ಅದರ ಅಟ್ಟುಳಿಯನ್ನು ಸಹಿಸಲಾರದೆ ಬೇಡ ಪಡೆಯುವನೊಬ್ಬ ಜೀವಭಯದಿಂದ ರಾಜನ ಬಳಿಗೆ ಓಡಿ ಬಂದ.

ಬಿಟ್ಟ ತಲೆ, ಗಿಡ ಕಳೆದುಡೆಗೆ, ಕಾಡಮುಳ್ಳು
ನಟ್ಟು ಕುಂಟುವ ಪದಂ, ಬೆನ್ನ ಬಿಗುಹಳಿದಳಲ
ಮೊಟ್ಟೆ ಗೋಳಿಡಹಿ ಕೆಡೆದೊಡೆದ ಮೊಣಕಾಲ್, ತೇಕವಳ್ಳೆಗಳುವೆರಸೊರಲುತ
ಕೆಟ್ಟೋಡುತಲಿರಲೊರ್ವನವನ ಕಂಡಿದಿರಡ್ಡ
ಗಟ್ಟಿ ಕೇಳಲು ಹು ಹು ಹು ಹುಲೆಯಲ್ಲ ಹಂದಿಯರೆ
ಯಟ್ಟಿ ಬರುರ್ತಿದರ್ುದೆನೆಯೆಲ್ಲಿ ತೋರೆನಲು ನೀವೆ ಅರಸಿಕೊಂಬುದೆಂದ

ಭಯಭರಿತನಾದ ಬೇಡನ ಚಿತ್ರ, ಪದ್ಯವನ್ನು ಓದುತ್ತಿದ್ದಂತೆಯೆ ಕಣ್ಣಿಗೆ ಕಟ್ಟುನಿಲ್ಲುತ್ತದೆ. ಸರಳ ಸುಂದರವಾಗಿ ಅತ್ಯಂತ ಸ್ವಾಭಾವಿಕವಾಗಿ ವರ್ಣಿಸುವುದರಲ್ಲಿ ರಾಘವಾಂಕ ಎತ್ತಿದ ಕೈ.

ಹಂದಿಯ ಸಾವಿನಿಂದ ಕೋಪಗೊಂಡ ವಿಶ್ವಾಮಿತ್ರ ತನ್ನ ಹುಂಕಾರದಿಂದ ಹುಟ್ಟಿದ ಹೊಲತಿಯರಿಬ್ಬರನ್ನು ಹರಿಶ್ಚಂದ್ರನ ಬಳಿಗೆ ಕಳುಹಿಸುತ್ತಾನೆ. ಅದರಂತೆ ಅವರು ರಾಜನ ಬಳಿಗೆ ಬಂದು, ತಮ್ಮ ದಿವ್ಯ ಗಾಯನದಿಂದ ಆತನನ್ನು ಮೆಚ್ಚಿಸುತ್ತಾರೆ. ಆತನು ಕೊಟ್ಟ ಬಹುಮಾನವನ್ನು ಸ್ವೀಕರಿಸದೆ ತಮ್ಮನ್ನೇ ಸ್ವೀಕರಿಸುವಂತೆ ಅವರು ಬೇಡುತ್ತಾರೆ. ಈ ಸಂದರ್ಭದಲ್ಲಿ ರಾಜನಿಗೂ ಹೊಲತಿಯರಿಗೂ ನಡೆದ ಸಂಭಾಷಣೆ ರಾಘವಾಂಕನ ನಾಟಕೀಯ ಶೈಲಿಗೆ ಅತ್ಯುತ್ತಮ ಉದಾಹರಣೆಯಂತಿದೆ. ಕವಿಯು ತನ್ನ ಕಾವ್ಯ ಕನ್ನಿಕೆಯನ್ನು ಶಬ್ದವಿಸರದ ನುಡಿಯಿಂದ ಅಳವಡಿಸಿರುವನೆಂದು ಹೇಳಿಕೊಂಡಿರುವುದು ಎಷ್ಟು ಉಚಿತವಾಗಿದೆ; ರಾಘವಾಂಕನು

ಎಂತಹ ದೊಡ್ಡ ನಾಟಕಕಾರನಾಗಬಹುದಿತ್ತೆಂಬುದನ್ನು ಇದು ದಿಗ್ದರ್ಶಿಸುತ್ತದೆ, ಚಕಮಕಿಯ ತಾಡನದಿಂದ ಮೂಡುವ ಕಿಡಿಗಳಂತೆ ಸಂಭಾಷಣೆ ಸತ್ವಯುಕ್ತವಾಗಿ, ಸಂಗ್ರಹವಾಗಿ ಸಾರವತ್ತಾಗಿ ಮುಂದುವರಿಯುತ್ತದೆ.

ಹರಿಶ್ಚಂದ್ರ ಕಥೆಯೂ ಆತನು ಅನುಭವಿಸಿದ ಕ್ಲೇಶಗಳೂ ರಾಘವಾಂಕನ ಸ್ವಕಪೋಲ ಕಲ್ಪಿತಗಳೇನೂ ಅಲ್ಲ; ಜನರಿಗೆಲ್ಲ ಚಿರಪರಿಚಿತವಾದ ಕಥೆಯೇ. ಆ ಹಳೆಯ ಕಥೆ ರಾಘವಾಂಕನ ಪ್ರತಿಭೆಯಲ್ಲಿ ಕರಗಿ, ಆತನ ಕಲ್ಪನಾಶಕ್ತಿಯಲ್ಲಿ ಮತ್ತೊಮ್ಮೆ ಚಿರನೂತನವಾದ ಆಕಾರವನ್ನು ತಾಳಿ, ನಮ್ಮ ಮೆಚ್ಚಿಗೆ, ಆದರ, ಗೌರವಗಳಿಗೆ ಪಾತ್ರವಾಗಿದೆ ಕಥೆಯ ಸ್ಥೂಲರೇಖೆ ಹಳೆಯದಾದರೂ ಅದಕ್ಕೆ ವಿವರಗಳ ಬಣ್ಣ ತುಂಬಿ, ತನ್ನ ವರ್ಣನಾ ವೈಖರಿಯಿಂದ ವೀರ, ಕರುಣರಸಪರಿಪ್ಲುತಳಾದ ಹೊಸ ಕಾವ್ಯ ಕನ್ನೆಯೊಬ್ಬಳನ್ನು ನಮ್ಮ ಇದಿರಿಗೆ ನಿಲ್ಲಿಸುತ್ತಾನೆ. ರಾಜ್ಯಭ್ರಷ್ಟನಾಗಿ 'ಪುರದ ಪುಣ್ಯಂ ಪುರುಷರೂಪಿಂದೆ ಪೋಗುತಿವೆ' ಎಂಬಂತೆ ಆತನು ಹೋಗುತ್ತಿರುವಾಗ ಆತನಿಂದ ಹಣ ವಸೂಲು ಮಾಡಲು ಹೊರಟ ತೆರಕಾರ ನಕ್ಷತ್ರಿಕ– ಅವನು ಪಠಾಣರಿಗಿಂತ ಕಠಿಣ ಹೃದಯದವ– ತನ್ನ ಸ್ವಾಮಿ ವಿಶ್ವಾಮಿತ್ರನಿಗೆ ಹೇಳುತ್ತಾನೆ–

ಬಿಸಿಲಾಗಿ, ಬಿರುಗಾಳಿಯಾಗಿ, ಕಲು ನೆಲವಾಗಿ,
ವಿಷಮಾಗ್ನಿಯಾಗಿ, ನಾನಾ ಕ್ರೂರಮೃಗವಾಗಿ,
ಮಸಗಿ ಘೋರಾರಣ್ಯವಾಗಿ, ಗರ್ಜಿಸಿ ಕವಿದ ಭೂತಬೇತಾಳರಾಗಿ
ಹಸಿವು ನೀರಡಿಕೆ ನಿದ್ರಾಲಸ್ಯವಾಗಿ ಸಂ
ಧಿಸಿ ಹುಂ ಹೊಕ್ಕಲ್ಲಿ ಹೊಕ್ಕು ಧಾವತಿಗೊಳಿಸಿ
ಹುಸಿಗೆ ಹುಂ ಕೊಳಿಸುವೆಂ ಭೂಭುಜನನೆನ್ನಿಂದ ಬಲ್ಲಿ ದರದಾರೆಂದನು

ಹರಿಶ್ಚಂದ್ರನಂತೆ ನಕ್ಷತ್ರಿಕನೂ ಸತ್ಯಸಂಧನೇ! ಸಾಲಗಾರನಿಗೆ ಹಿಂಸೆ ಕೊಡುವುದರಲ್ಲಿ ಅವನಿಗಿಂತ ಬಲ್ಲಿದರಿಲ್ಲ. ಆತ ತನ್ನ ಮಾತಿನಂತೆ ರಾಜನಿಗೆ ಚಿತ್ರ ಹಿಂಸೆ ಕೊಟ್ಟನು. ಆದರೆ ಅಪಾರವಾದ ಹೊನ್ನರಾಶಿಯನ್ನು ಕೊಡಿಸುವುದೆಂತು ? ಕವಿ ಕುವೆಂಪು ಹೇಳಿದಂತೆ 'ಸಾಲದ ವಸೂಲಿಗೆ ನಕ್ಷತ್ರಿಕನನ್ನು ಛೂಬಿಟ್ಟ ವಿಶ್ವಾಮಿತ್ರನೇ ಸಾಲ ತೀರಿಸಲು ಅವಶ್ಯಕವಾದ ಹೊನ್ನನ್ನೂ ಕೊಟ್ಟು, ಹರಿಶ್ಚಂದ್ರನನ್ನೂ ಕೊಂಡು ಕೊಂಡು, ಅವನು ವಚನಭ್ರಷ್ಟನಾಗದಂತೆ ನೋಡಿಕೊಳ್ಳುವ ಭಾರವನ್ನು ವಹಿಸುತ್ತಾನೆ. 'ಆತನ ಆದೇಶದಂತೆ ಅಗ್ನಿ ಬ್ರಾಹ್ಮಣ ವೇಷದಿಂದ ಹರಿಶ್ಚಂದ್ರನ ಹೆಂಡತಿಯನ್ನೂ ಮಗನನ್ನೂ ಕೊಂಡುಕೊಳ್ಳುತ್ತಾನೆ. ಯಮನು ವೀರಬಾಹುಕನೆಂಬ ಚಂಡಾಲನ ವೇಷದಿಂದ ಹರಿಶ್ಚಂದ್ರನನ್ನು ಕೊಂಡುಕೊಳ್ಳುತ್ತಾನೆ ಇಲ್ಲಿ ಹರಿಶ್ಚಂದ್ರನ ಸಾಲ ತೀರಿ, ಸತ್ಯ ಉಳಿಯಿತು.

ಹರಿಶ್ಚಂದ್ರನ ಸತ್ಯ ಉಳಿಯಿತಾದರೂ ಸತ್ವ ಪರೀಕ್ಷೆ ಮುಂದುವರಿಯುತ್ತದೆ. ಆತನ ಹೆಂಡತಿ, ಮಗ ಬ್ರಾಹ್ಮಣನ ಮನೆಯಲ್ಲಿ ಸತ್ತು ಹುಟ್ಟುತ್ತಿದ್ದಾರೆ. ದೈವ ಇದನ್ನು ಸಹಿಸಲಿಲ್ಲ. ಬ್ರಾಹ್ಮಣನ ಮನೆಗೆ ಹುಲ್ಲು ಹುಳ್ಳಿಗಳನ್ನು ತರಲೆಂದು ಹೋದ ರಾಜ ಪುತ್ರ ಹಾವು ಕಡಿದು ಸತ್ತ. ಇದನ್ನು ಕೇಳಿದ ಚಂದ್ರಮತಿ ಬ್ರಾಹ್ಮಣನ ಅಪ್ಪಣೆಯನ್ನು ಪಡೆದು ಅಡವಿಗೆ ನಡೆದು ಬಂದಳು, ಅಲ್ಲಿನ ಹುತ್ತವೊಂದರ ಬುಡದಲ್ಲಿ ಮಗ ಸತ್ತುಬಿದ್ದಿದ್ದಾನೆ. ಈ ಭಾಗದಲ್ಲಿ ಕವಿಯು ಓದುಗರ ಅಂತರಂಗದ ಮರ್ಮವನ್ನು ಹಿಡಿದು ಮಿಡಿಯುವುದರಲ್ಲಿ ಎಂತಹ ಜಾಣ್ಮೆಯನ್ನು ಪ್ರದರ್ಶಿಸಿದ್ದಾನೆ! 'ಹರಿಶ್ಚಂದ್ರ ರಾಯಕುಮಾರ' ಎಂದು ಕೂಗಿಕೊಂಡು ಬರುವುದಕ್ಕೂ, ಹೊಟ್ಟೆಗೆ ಹಿಟ್ಟಿಲ್ಲದೆ ಹೊಟ್ಟೆ ಬೆನ್ನಿಗೆ ಹತ್ತಿ ಸತ್ತು ಹೋಗಿರುವ ಆ ಮಗ ಕಣ್ಣಿಗೆ ಬೀಳುವುದಕ್ಕೂ ಎಂತಹ ವಿರೋಧಾಭಾಸ ! ಆಕೆಯ ದುಃಖದ ಹೊನಲನ್ನು ರಗಳೆಯ ಪಾತ್ರದಲ್ಲಿ ತುಂಬು ನೆರೆಯಾಗಿ ಹರಿಸಿದ್ದಾನೆ ಕವಿ !

ಏವನೇವಲೆ ಮಗನೇ ಮಗನೇ ! ಸಾವೇಕಾಯಿತ್ತಲೆ ಚೆನ್ನಿಗನೇ
ಇರಿದೆಯಲಾ ಎನ್ನನು ಸುಕುಮಾರ ! ಕೊರೆದೆಯಲಾ ಕೊರಳನು ಚಿತಮಾರಾ

★ ★ ★

ಎತ್ತಣ ಬರಸಿಡಿಲೆರಗಿತೊ ನಿನ್ನ ನಿನ್ನ ! ಹುತ್ತಿನ ಹತ್ತಿರ ಒರಗಿದೆ ಚಿನ್ನ
ಹಾವು ಹಿಡಿಯ ಹಾ ಎಂದೊರಲಿದೆಯಾ ! ಸಾವಾಗವ್ವಾ ಎಂದಳಲಿದೆಯಾ
ಹೆತ್ತ ಹೊಟ್ಟೆಯುರಿಯುತ್ತಿದೆ ಮಗನೆ ! ಎತ್ತಿದ ತೋಳನು ಕೆತ್ತಿದೆ ಮಗನೆ
ಹಾಡುವ ಬಾಯಲಿ ಮಣ್ಣನು ಹೊಯ್ದೆ ! ನೋಡುವ ಕಣ್ಣಲಿ ಸುಣ್ಣವ ಹೊಯ್ದೆ
ಪಾಪಿಯಂನ್ನ ನೀನೊಮ್ಮೆಗೆ ನೋಡಾ ! ಕೋಪವನುಳಿದೊಯ್ಯನೆ ಮಾತಾಡ
ನುಡಿದೊಡೆ ಪಾಪವೆ ಹೆತ್ತವರೊಡನೆ ! ಕಡಿಮುಳಿಸೇ ಮಗನೇ ಎನ್ನೊಡನೆ

ತಾಯಿ ಕರುಳು ಅತ್ತು ಅತ್ತು, ಸಂಕಟ ಸೋರಿದ ಮೇಲೆ ಕರ್ತವ್ಯಜ್ಞಾನ ಮೂಡಿತು. ಮಗನ ದೇಹವನ್ನು ಹೊತ್ತು ತಂದ ಸ್ಮಶಾನದಲ್ಲಿ ಅಗ್ನಿಗೆ ಅರ್ಪಿಸಹೊರಟಳು. ಅಗ್ನಿಯನ್ನು ಮುಟ್ಟಿಸುವ ಮುನ್ನ 'ಬೆಳದಲ್ಲಿ ಬೆಳೆ, ಹುಟ್ಟದಲ್ಲಿ ಹುಟ್ಟು' ಎಂದು ಹರಿಸಿ ಮತ್ತೊಮ್ಮೆ ಗಟ್ಟಿಯಾಗಿ ಅತ್ತಳು. ಆ ರೋದನವನ್ನು ಕೇಳಿದ ಸ್ಮಶಾನ ಕಾಯುತ್ತಿದ್ದ ಹರಿಶ್ಚಂದ್ರ ಅಲ್ಲಿಗೆ ಬಂದ. ಶ್ಮಶಾನದ ಕಾಣಿಕೆಯನ್ನು ಕೊಡದೆ ಸುಡಹೊರಟುದನ್ನು ಕಂಡು 'ಸುಟ್ಟೆಯಾದೊಡೆ ನಿನಗೆ ವೀರಬಾಹುಕನಾಣೆ, ಕದ್ದು ಸುಡಬಂದೆ? ನಿನ್ನ ನಿಟ್ಟೆಲುವ ಮುರೆವೆನ್' ಎಂದು ಗರ್ಜಿಸುತ್ತಾ ಬಂದು 'ಪಿಡಿದಿರ್ದ ಕಿಚ್ಚಂ ಕೆದರಿ' ಮುಟ್ಟಿಗೆಯ ಮೇಲಿರ್ದ ಸುತನ ಹಿಂಗಾಲ್ವಿಡಿದು ಸೆಳೆದಿ ಬಿಸುಟಂ. ಚಂದ್ರಮತಿ ಹೌಹಾರಿ 'ಬಿಸುಡದಿರು, ಬಿಸುಡದಿರು ಬೇಡ ಬೇಡ ಕಟಕಟ ಹಸುಳೆನೊಂದಹನ್' ಎಂದು ಹೇಳಿ ಬೀಳುವ ಮಗುವನ್ನು ಎತ್ತಿಕೊಂಡು 'ಇವನೆನ್ನ ಮಗನಲ್ಲ, ನಿನ್ನ ಶಿಶುವಿನೋಪಾದಿ, ಸುಡಲನುಮತಿಯನ್ನು ರಕ್ಷಿಸು ಕರುಣಿ' ಎಂದು ಕೇಳಿಕೊಳ್ಳುತ್ತಾಳೆ. ಎಂತಹ ಕಟುಸತ್ಯ ! ಎಷ್ಟು ಹೃದಯ ವಿದ್ರಾಕವಾಗಿದೆ ! ಹಸುಳೆನೊಂದಹನು' ಎಂಬ ಮಾತಿನಲ್ಲಿ ಮಾತೃಹೃದಯದ ಎಂತಹ ಮಾರ್ಮಿಕ ಚಿತ್ರವಿದೆ ! ಕರುಣರಸದ ಹೊನಲು ಹೇಗೆ ಬುಗ್ಗೆ ಬುಗ್ಗೆಯಾಗಿ ಉಕ್ಕುತ್ತದೆ ! ಈ ಹೊತ್ತಿನಲ್ಲಿ ಗಂಡ ಹೆಂಡರಿಗೆ ಪರಸ್ಪರ ಪರಿಚಯವಾಗುತ್ತದೆ; ಸತ್ತ ಮಗನ ಅಸಹ್ಯ ವೇದನೆಯನ್ನೂ ಅನುಭವಿಸುತ್ತಾರೆ ! ಆದರೇನು ? ಸತ್ಯಕ್ಕೆ ಲೋಪಬರಬಾರದು. ತೆರಿಗೆಯ ಹಣ ತರಲೇಬೇಕು. ಅದಕ್ಕಾಗಿ ಹೋದ ಚಂದ್ರಮತಿ, ಕೊಲೆಯ ಆರೋಪ ಹೊತ್ತು ಮರಣದಂಡನೆಗೆ ಗುರಿಯಾಗಿ ಶ್ಮಶಾನಕ್ಕೆ ಬಂದಳು ಅವಳ ತಲೆ ಕಡಿಯುವ ಕಾರ್ಯ ಹರಿಶ್ಚಂದ್ರನ ಮೇಲೆಯೆ ಬಿತ್ತು. 'ಬಲಿದ ಪದ್ಮಾಸನಂ ಮುಗಿದಕ್ಷಿ ಮುಚ್ಚಿದಂಜಲಿವೆರಸು' ಆ ಪರಮ ಪತಿವ್ರತೆ ಮರಣಕ್ಕೆ ಸಿದ್ಧಳಾದಳು. ಸತ್ಯನಿಷ್ಠನಾದ, ಹರಿಶ್ಚಂದ್ರ 'ಪ್ರತಿಜ್ಞೆಯುಳಿದೆಡೆ ಸಾಕು' ಎಂದು ಕತ್ತಿಯಿಂದ 'ಶಿವ ಶಿವ ಮಹದೇವ, ಹೊಡೆದಂ ಹೊಡೆದನು ಆದರೆ 'ಹೊಡೆದ ಕಡುಗದ ಬಾಯ ಕಡೆಯ ಹೊಡೆಗಳನಾಂತು ಮಡದಿಯೆಡೆ ಗೊರಳ ನಡುವಡಿಸಿ ಮೂಡಿದನು – ಕಾಶೀರಮಣ ವಿಶ್ವನಾಥಂ.

ಎಲ್ಲವೂ ಮಂಗಳಮಯವಾಗಿ ಕೊನೆಗೊಂಡಿತು. ಸತ್ತ ಮಗ ಲೋಹಿತಾಶ್ವ ಮೇಲಕೆದ್ದ. ಪರಶಿವನು ಹರಿಶ್ಚಂದ್ರನ ತಲೆ ಮೈಗಳನ್ನು ಸವರುತ್ತ 'ಅತಿಹುಸಿವಯತಿ ಹೊಲೆಯ, ಹುಸಿಯದಿಹ ಹೊಲೆಯನುನ್ನತ ಯತಿವರನು' ಎಂದು ರಾಜನ ಸತ್ಯದ ಮಹತ್ತನ್ನು ಘೋಷಿಸಿದನು.

ರಾಘವಾಂಕ ಕವಿಯ ಕಾವ್ಯ 'ಹರನೆಂಬುದೇ ಸತ್ಯ, ಸತ್ಯವೆಂಬುದೆ ಹರನು' ಎಂಬ ಸಂದೇಶವನ್ನು ಜಗತ್ತಿಗೆ ಸಾರುತ್ತದೆ.

ಪ್ರಸಿದ್ಧ ವಚನಕಾರರಾದ ಹೊನ್ನಲಿಗೆ ಸಿದ್ಧರಾಮಯ್ಯನೇ 'ಸಿದ್ಧರಾಮಚರಿತೆ'ಯ ನಾಯಕ. ಈತನು ಲೋಕಕ್ಕೆ ಮರುಳನಂತೆ ಕಾಣುತ್ತಿದ್ದರೂ, ತನ್ನ ಭಕ್ತಿಯಿಂದ ಪರಶಿವನನ್ನು ಪ್ರತ್ಯಕ್ಷವಾಗಿ ಮಾಡಿಕೊಂಡಿದ್ದವನು. ಆತನ ಕೀರ್ತಿ ಎಲ್ಲೆಲ್ಲಿಯೂ ಹಬ್ಬಿ ಹರಡಿತ್ತು. ಆದರೆ ಆತನು ಕೀರ್ತಿ ಕಾಮುಕನಾಗಿರಲಿಲ್ಲ, ಆತನ ಬಯಕೆ ಶ್ರೇಯಸ್ಸೇ ಹೊರತು ಕೀರ್ತಿಯಲ್ಲ, ಅದನ್ನು ಕವಿ ಬಹು ಚಮತ್ಕಾರವಾಗಿ ಬಣ್ಣಿಸುತ್ತಾನೆ. ಕೀರ್ತಿ ಆತನನ್ನು ದೂರುತ್ತಿದ್ದಳಂತೆ ! ಏಕೆ

ಹಿರಿದು ಭಕ್ತ್ಯಂಗನೆಯನುರದೊಳಂ, ಜಯಸತಿಯ
ವರ ಭೂಜದೊಳು, ರಮಾಸತಿಯ ಮುಖದೊಳತಿ ಶಾಂತಿ
ತರುಣಿಯಂ ಮನದೊಳೆಡೆವಿಡದಪ್ಪಿ ನಿರೆವುದಲ್ಲಗೆ ಪರನಾರಿಗೆ
ತೆರೆವನಟ್ಟುವನಿವನ ಬೇಟದೊಳು ಕಣ್ಣಾಗ್ಣ
ದಿರದೆ ಕೈವಿಡರೆನ್ನ ನೂಂಕಿ ಕಳೆದಂ ಮಹಾ
ಪುರುಷರರಿದಿರಿ ಸಿದ್ಧ ಮನೆಂದಾ ಕೀರ್ತಿವಧು ದೂರಿದಳು ಜಗದೊಳು

ಸಿದ್ಧರಾಮನು ಅನೇಕ ಪವಾಡಗಳನ್ನು ಮೆರೆದಿದ್ದಾನೆ. ಇದಕ್ಕೂ ಹೆಚ್ಚಾಗಿ ಆತನು ಲೋಕಕಾರುಣ್ಯಮೂರ್ತಿಯಂತೆ ವ್ಯವಹರಿಸಿದ್ದಾನೆ. ಆತನು ಸೊನ್ನಲಿಗೆಯಲ್ಲಿ ಮಾಡಿದ ಜನೋಪಕಾರ ಕಾರ್ಯಗಳು ಆದರಣೀಯವಾಗಿವೆ. ಅಧ್ಯಾತ್ಮ ಜಗತ್ತಿನಲ್ಲಿ ದೇದೀಪ್ಯಮಾನನಾಗಿರುವ ಸಿದ್ಧರಾಮನು ಲೌಕಿಕ ಜಗತ್ತಿಗೂ ನಿಷ್ಕಾಮ ಸೇವೆಯ ಒಂದು ದೊಡ್ಡ ಉದಾಹರಣೆಯನ್ನು ಬಿಟ್ಟು ಹೋಗಿದ್ದಾನೆ.

ರಾಘವಾಂಕನ 'ಸೋಮನಾಥಚರಿತೆ' ಆದಯ್ಯನೆಂಬ ವೀರಶೈವ ಶರಣನ ಜೀವನ ವೃತ್ತಾಂತವನ್ನು ಒಳಗೊಂಡಿದೆ ಕಥಾನಾಯಕ ಉಗ್ರ ವೀರಶೈವ. ಕಾರಣಾಂತರಗಳಿಂದ ಆವನಿಗೆ ತನ್ನ ಮಾವನಾದ ಜೈನರ ಪಾರಸೆಟ್ಟಿಯಲ್ಲಿ ಅಸಮಾಧಾನ ಹುಟ್ಟಿತು. ಇದರ ಫಲವಾಗಿ ಹುಲಿಗೆರೆಯಲ್ಲಿದ್ದ ಜೈನ ಬಸದಿಯಲ್ಲಿ ಸೋಮೇಶ್ವರನ ಸ್ಥಾಪನೆಯಾಯಿತು. ಮಾತಾಭಿಮಾನವೊಂದನ್ನು ಬಿಟ್ಟರೆ ಆದಯ್ಯನಲ್ಲಿ ಕಾವ್ಯ ನಾಯಕನಾಗುವ ಮಹೋನ್ನತ ಗುಣವಾವುದೂ ಕಂಡುಬರುವುದಿಲ್ಲ. ಶ್ರೀ ಮಾನ್ ಎ.ಆರ್. ಕೃಷ್ಣಶಾಸ್ತ್ರಿಗಳು ತಮ್ಮ ಹರಿಶ್ಚಂದ್ರ ಕಾವ್ಯ ಸಂಗ್ರಹದ'ದ ಮುನ್ನುಡಿಯಲ್ಲಿ 'ಆದಯ್ಯನು ಅವತಾರ ಪುರುಷ, ಶಿವಭಕ್ತ ಎಂದು ವರ್ಣಿತನಾಗಿದ್ದರೂ, ಸೋಮಯ್ಯ ಸೋಮಯ್ಯನೆನ್ನುತ್ತಾ ಸೋಮನಾಥನಸ್ತುತಿ ಮಾಡಿದ್ದರೂ ಅವನಲ್ಲಿ ಸಿದ್ಧರಾಮನ ಘನತೆ ಗುರುತ್ವಗಳಿಲ್ಲ, ಸಿದ್ಧರಾಮನ ಸ್ವಾರ್ಥತ್ಯಾಗ ಪರೋಪಕಾರ ಬುದ್ಧಿ ಪಾರಲೌಕಿಕ ವಿಚಾರ, ನಿತ್ಯಾನಿತ್ಯಾ ವಿವೇಕ ಮುಂತಾದ ಮಹಾಪುರುಷ ಗುಣಗಳು ಕಂಡುಬರುವುದಿಲ್ಲ, ಅವನಲ್ಲಿ ಆ ಪೂಜ್ಯ ಭಾವವುಂಟಾಗುವುದಿಲ್ಲ' ಎಂದು ಹೇಳಿರುವ ಮಾತುಗಳು ಅರ್ಥವತ್ತಾಗಿವೆ.

ರಾಘವಾಂಕನ 'ವೀರೇಶಚರಿತೆ' ದಕ್ಷಯಜ್ಞವನ್ನು ವೀರಭದ್ರ ನಾಶ ಮಾಡಿದ ಕಥೆ. ೧೨೭ ಪದ್ಯಗಳನ್ನೊಳಗೊಂಡ ಎರಡು ಸಂಧಿಗಳ ಪುಟ್ಟಗ್ರಂಥ, ಇದು. ಇದಕ್ಕೆ 'ಮೀಸಲುಗವಿತೆ' ಎಂಬ ಹೆಸರೂ ಉಂಟು. ಓರಂಗಲ್ಲಿನ ಪ್ರತಾಪರುದ್ರ ರಾಜನ ಸಭೆಯಲ್ಲಿ ಏಕದಂಡಿ, ದ್ವಿದಂಡಿ, ತ್ರಿದಂಡಿಗಳೆಂಬ ಮೂವರು ವೈಷ್ಣವ ಕವಿಗಳಿದ್ದರಂತೆ! ಅವರು ಆಸ್ಥಾನಕ್ಕೆ ಬಂದ ಕವಿಗಳಿಂದ ಅವರ ಕಾವ್ಯಗಳನ್ನು ಓದಿಸಿ ಕೇಳಿ, ಸ್ಮರಣಶಕ್ತಿಯಿಂದ ಅವುಗಳನ್ನು ತಾವೇ ಆಮೂಲಾಗ್ರವಾಗಿ ಹೇಳಿ, 'ನನ್ನ ಪದ್ಯವ ನೀನೆಲ್ಲಿ ಕಲಿತೇ?' ಎಂದು ಮುಖಭಂಗ ಮಾಡುತಿದ್ದರಂತೆ. ಇದನ್ನು ಕೇಳಿದ ರಾಘವಾಂಕ ಓರಂಗಲ್ಲಿನ ವೀರಭದ್ರದೇವರ ಗುಡಿಯ ಹಿಂದೆ ಕುಳಿತು 'ವೀರೇಶಚರಿತೆ' ಬರೆದನಂತೆ. ದೇವರು ಆತನ ಭಕ್ತಿಗೆ ಮೆಚ್ಚಿ ಹಿಮ್ಮುಖಕ್ಕೆ ತಿರುಗಿಕೊಂಡನಂತೆ ! ಕವಿಗಳು ಹೆದರಿ ಆತನಿಗೆ ಶರಣಾದರಂತೆ ! ಈ ಕಥೆಯಲ್ಲಿ ಸ್ವಲ್ಪ ಸತ್ಯವಿರುವಂತೆ ಕಾಣಿಸುತ್ತದೆ.

ನಾವು ಹಿಂದೆಯೇ ಹೇಳಿರುವಂತೆ ಈ ಕಾವ್ಯದ ಛಂದಸ್ಸು ಕುತುಹಲಕಾರಿಯಾಗಿದೆ.

ಪರಿಣಾಮದ ಕಣಿ ಶಾಂತಿಯ ನಿಧಿ ಭಕ್ತಿಯ ಸಾ
ಗರನೇಕೊನಿಷ್ಠೆಯ ಹರನತಿ ಸಾಮರ್ಥ್ಯದ
ತರು ನೀತಿಯ ಕಡಲು ದಯಾಗಾರಂ ಪುಣ್ಯದ ಪುಂಜಂ ಸತ್ಯದ ಸದನಂ

ಈ ಪದ್ಯಭಾಗದ ಮಾತ್ರೆಗಳ ಸಂಖ್ಯೆ ವಾರ್ಧಕ ಷಟ್ಪದಿಯಂತೆಯೆ ಇದೆ. ಗಣಗಳು ಮಾತ್ರ ಐದಕ್ಕೆ ಬದಲಾಗಿ ನಾಲ್ಕು ಮಾತ್ರೆಗಳು. ಇದನ್ನು 'ಉದ್ಧಂಡ ಷಟ್ಪದಿ'ಯೆಂದು ಕರೆದಿರುವುದಾಗಿ ಹೇಳಲಾಗಿದೆ. ಇದು ರಾಗ ಪ್ರಧಾನವಾಗಿರದ ತಾಳ ಪ್ರಧಾನವಾಗಿರುವುದಾಗಿ ತಿಳಿದು ಬರುತ್ತದೆ.

ಹರಿ ಹರನ ಶೈಲಿ ಆರಕ್ಕೆ ಹಿಗ್ಗದ, ಬರಕ್ಕೆ ತಗ್ಗದ ಸೌವರ್ಣ ಮಧ್ಯಗಾಮಿ. ಈತನು ಹಳಗನ್ನಡ, ನಡುಗನ್ನಡ, ಹೊಸಗನ್ನಡ ರೂಪಗಳನ್ನು ಬಳಸುತ್ತಾನೆ: ಕನ್ನಡ ಸಂಸ್ಕೃತಗಳೆರಡನ್ನೂ ಹದವರಿತು ಬಳಸುತ್ತಾನೆ. ಆತನ ಸಂಸ್ಕೃತ ಸುಲಭ, ದೇಶಿ ಮನೋಹರ. ಆತನ ಬಂಧ ಚಂಪೂವಿನ ಬಿಕ್ಕಟ್ಟನ್ನು ಒಳಗೊಂಡಿದೆಯಾದರೂ, ಸರಳ, ಸುಲಭ, ಲಲಿತ, ಸುಂದರ. ಪಂಪಕವಿಯು ಚಂಪೂಕಾವ್ಯಕ್ಕೆ ಹೇಗೋ, ಹರಿಹರನು ರಗಳೆ ಛಂದಸ್ಸಿಗೆ ಹೇಗೋ ಹಾಗೆ ರಾಘವಾಂಕನು ಷಟ್ಪದಿ ಛಂದಸ್ಸಿಗೆ ಆದಿಕವಿ.

೩. ಕೆರೆಯ ಪದ್ಮರಸ (ಕ್ರಿ.ಶ. ೧೨೦೦)

ಈತನು ದೋರಸಮುದ್ರದ ರಾಜನಾದ ನರಸಿಂಹಬಲ್ಲಾಳನ ಮಂತ್ರಿಯಾಗಿದ್ದನು. ಇವನು ಪ್ರಸಿದ್ಧ ವಚನಕಾರನಾದ ಸಕಳೇಶ ಮಾದರಸನ ವಂಶದವನು. ಈತನು ತ್ರಿಭುವನ ತಾತನೆಂಬ ವೈಷ್ಣವನನ್ನು ವಾದದಲ್ಲಿ ಸೋಲಿಸಿ, ಆತನಿಗೆ ವೀರಶೈವ ದೀಕ್ಷೆಯನ್ನು ಕೊಟ್ಟವನು. ಬೇಲೂರಿನಲ್ಲಿ ದೊಡ್ಡದೊಂದು ಕೆರೆಯನ್ನು ಕಟ್ಟಿಸಿದುದರಿಂದ ಮುಂದೆ ಈತನಿಗೆ ಕೆರೆಯ ಪದ್ಮರಸನೆಂದು ಹೆಸರಾಯಿತು. ಸಮಾಜದಲ್ಲಿ ಗಣ್ಯನಾಗಿ, ಧರ್ಮ ಜಗತ್ತಿನಲ್ಲಿ ಪೂಜ್ಯನಾಗಿದ್ದ ಪದ್ಮರಸ 'ಶಿವಾದ್ವೈತ ಸಾನಂದ ಚರಿತ್ರ' ಎಂಬ ಸಂಸ್ಕೃತ ಗ್ರಂಥವನ್ನೂ 'ದೀಕ್ಷಾಬೋಧೆ' ಎಂಬ ಕನ್ನಡ ರಘಟ ಗ್ರಂಥವನ್ನೂ ಬರೆದಿದ್ದಾನೆ. ಈತನಲ್ಲಿ ಹರಿಹರ ರಾಘವಾಂಕರಿಗೆ ಅಪರಿಮಿತವಾದ ಪೂಜ್ಯ ಭಾವನೆಯಿದ್ದಂತೆ ಕಂಡು ಬರುತ್ತದೆ. ಈತನಿಗೆ ರಾಘವಾಂಕನ 'ಸಿದ್ಧ ರಾಮಪುರಾಣ'ದಲ್ಲಿ ಬಹಳ ಮೆಚ್ಚಿಗೆ ಇದ್ದಂತೆ ತಿಳಿದುಬರುತ್ತದೆ. ಈತನ 'ದೀಕ್ಷಾ ಬೋಧೆ' ತ್ರಿವಿಧ-ರಗಳೆಗಳಿಂದ ಕೂಡಿದೆ. ಆದರೆ ಅದು ಧರ್ಮಗ್ರಂಥ. ಕಾವ್ಯ ಗುಣಗಳೇನೂ ಇಲ್ಲ. ಪದ್ಮರಸನ ಮಗನಾದ ಕುಮಾರ ಪದ್ಮರಸನು ತನ್ನ ತಂದೆ ಬರೆದ 'ಸಾನಂದಚಾರಿತ್ರ'ವನ್ನು ಷಟ್ಪದಿರೂಪದಿಂದ ಕನ್ನಡಕ್ಕೆ ತಂದುಕೊಟ್ಟಿದ್ದಾನೆ; ಕುಸುಮ ಮತ್ತು ಭಾಮಿನಿ ಷಟ್ಪದಿಗಳು ಹೆಚ್ಚಾಗಿವೆ.

ಸಾನಂದನೆಂಬ ಋಷಿ ಪಂಚಾಕ್ಷರೀ ಮಹಿಮೆಯಿಂದ ನಾರಕಿಗಳನ್ನೆಲ್ಲ ಉದ್ಧಾರಮಾಡಿದುದು ಇದರ ಕಥಾವಸ್ತು. ಇಲ್ಲಿಯೂ ಅಂತಹ ಶ್ರೇಷ್ಠ ಕಾವ್ಯ ಗುಣಗಳೇನೂ ಇಲ್ಲ. ಷಟ್ಪದಿಯನ್ನು ಬರೆಯ ಹೊರಟವರಲ್ಲಿ ಬಹಳ ಹಳಬನೆಂಬುದು ಈತನ ಪ್ರಾಶಸ್ತ್ಯ

೪. ಪಾಲ್ಕುರಿಕೆ ಸೋಮ (ಕ್ರಿ.ಶ. ೧೧೯೫)

ಈತನೂ ಹರಿಹರ ರಾಘವಾಂಕರ ಸಮಕಾಲೀನ. ಇವನು ಸುಪ್ರಸಿದ್ಧನಾದ ತೆಲುಗು ಕವಿ. ಈತನ 'ಬಸವಪುರಾಣಮು' ಭೀಮಕವಿಯ ಕನ್ನಡ 'ಬಸವ ಪುರಾಣ'ಕ್ಕೆ ಆಕರ. ಈತನು ಸಂಸ್ಕೃತ, ಪ್ರಾಕೃತ, ಕನ್ನಡಗಳಲ್ಲಿಯೂ ಪ್ರವೀಣನಾಗಿದ್ದು ಗ್ರಂಥರಚನೆ ಮಾಡಿದ್ದಾನೆ. 'ಸದ್ಗುರುರಗಳೆ', 'ಚೆನ್ನಬಸವರಗಳೆ', 'ಗಂಗೋತ್ಪತ್ತಿರಗಳೆ', 'ಶೀಲ ಸಂಪಾದನೆ', 'ಗಣಸಹಸ್ರನಾಮ', 'ಪಂಚರತ್ನ'

ಇವು ಆತನ ಕನ್ನಡ ಗ್ರಂಥಗಳು. ಸಾಹಿತ್ಯ ದೃಷ್ಟಿಯಿಂದ ಇವುಗಳಲ್ಲಿ ಮಹೋನ್ನತವಾದುದೇನೂ ಇಲ್ಲ. ಇವೆಲ್ಲ ಪುಟ್ಟ ಕೈಹೊತ್ತಿಗೆಗಳು, ಸ್ತೋತ್ರ ರೂಪವಾದವು. 'ಶೀಲ ಸಂಪಾದನೆ'ಯಲ್ಲಿ ೬೪ ಶೀಲಗಳು ವಚನರೂಪದಲ್ಲಿ ಕಾಣಿಸಿಕೊಂಡಿವೆ. 'ಗಣ ಸಮಸ್ತನಾಮ'ದಲ್ಲಿ ಸಹಸ್ರಕ್ಕೂ ಮಿಕ್ಕ ಗಣಗಳ ಪಟ್ಟಿಯಿದೆ. 'ಗಂಗೋತ್ಪತ್ತಿರಗಳೆ' ಯಲ್ಲಿ ಗಂಗಾನದಿ ಸ್ವರ್ಗದಿಂದ ಭೂಮಿಗಿಳಿದು ಬಂದ ಕಥೆಯಿದೆ. ಉಳಿದವರೆಡೂ ಆಯಾ ಹೆಸರಿನ ಸ್ತೋತ್ರಗಳು. ಈತನಿಗೆ 'ತತ್ವವಿದ್ಯಾಕಲಾಪ' 'ಅನ್ಯದೇವ ಕೋಲಾಹಲ' 'ಕವಿತಾಸಾರ' ಎಂಬ ಬಿರುದುಗಳಿವೆ. ಪದ್ಮರಸ ಸುಪ್ರಸಿದ್ಧ ತೆಲುಗು ಕವಿ ವೇಮನನ ಶಿಷ್ಯ ಪರಂಪರೆಗೆ ಸೇರಿದವನೆಂದೂ, ಭೃಂಗೀಶ್ವರನ ಅವತಾರವೆಂದೂ, ವೈಷ್ಣವನಾದ ಚಕ್ರಪಾಣಿ ರಂಗನಾಥನನ್ನು ವಾದದಲ್ಲಿ ಸೋಲಿಸಿ, ವೀರಶೈವ ದೀಕ್ಷೆಯನ್ನು ಕೊಟ್ಟನೆಂದೂ ತೋಂಟದಾರ್ಯನ 'ಪಾಲ್ಕುರಿಕೆ ಸೋಮೇಶ್ವರ ಪುರಾಣ'ದಿಂದ ತಿಳಿದುಬರುತ್ತದೆ. ಈತನು ಗುಬ್ಬಿಯ ಮಲ್ಲಣ್ಣಾರ್ಯನೇ ಮೊದಲಾದ ಕನ್ನಡ ಕವಿಗಳ ಸ್ತೋತ್ರಕ್ಕೆ ಪಾತ್ರನಾಗಿದ್ದಾನೆ.

೫. ಕುಮುದೇಂದು (೧೩೭೦)

ಈತನು ಜೈನರಾಮಯಣವನ್ನು ಬರೆದಿದ್ದಾನೆ. ಜೈನ ಕವಿಯೊಬ್ಬನು ಷಟ್ಪದಿಯಲ್ಲಿ ಕಾವ್ಯ ರಚನೆ ಮುಡಿದುದು ಇದೇ ಮೊಟ್ಟಮೊದಲು. ಇದರ ಕಥೆ ಬಹುಮಟ್ಟಿಗೆ ಪಂಪರಾಮಯಣವನ್ನೇ ಅನುಸರಿಸಿದೆ. ಆದರೆ ಇದರ ಷಟ್ಪದಿ ವೈವಿಧ್ಯಮಯವಾಗಿದೆ. ಒಂದೊಂದು ಸಂಧಿಯಲ್ಲಿ ಒಂದೊಂದು ಬಗೆಯ ಷಟ್ಪದಿ ಇದೆ ಬಹುಶಃ ಈತನೂ ಷಟ್ಪದಿ ರಚನೆಯಲ್ಲಿ ಹೊಸ ಹೊಸ ಪ್ರಯೋಗ ಮಾಡಹೊರಟ್ಟಿದ್ದನೋ ಏನೋ ! ಈತನಿಗೆ 'ಪರವಾದಿ ಗಿರಿವಜ್ರ' 'ಸರಸಕವಿ ತಿಲಕ' ಎಂಬ ಬಿರುದುಗಳಿವೆ. ಮೊದಲನೆಯದಕ್ಕೆ ಯಾರ ಅಡ್ಡಿಯೂ ಇಲ್ಲ. ಎರಡನೆಯದು ಸ್ವಲ್ಪ ಅತಿಶಯೋಕ್ತಿ ಎಂದು ಕೊಳ್ಳಬೇಕಾಗಿದೆ.

ಎಳಸದರಾರ್ ಶರದಿಂದುವ ಚಂದ್ರಿಕೆ
ಗೆಳಸದರಾರ್ ಹರಿಚಂದನಣ್ಪಿಂ
ಗೆಳಸದರಾರ್ ನವವಿಕಸಿತ ವಿಚಕಿತಲತಿಕಾಮಂಜರಿಗೆ
ಎಳಸದರಾರ್ ನವಯೌವನಲಕ್ಷ್ಮಿಗೆ
ಯೆಳಸದರಾರ್ ನವಯುವತೀನಿವಹಕೆ
ಯೆಳಸದರಾರ್ ಕುಮದೇಂದುಮುನೀಶ್ವರ ವಿರಚಿತ ಕಾವ್ಯ ಕಥಾರಸಕೆ ॥

ನಿಜ, ಎಲ್ಲರೂ ಎಲ್ಲಕ್ಕೂ ಎಳಸುತ್ತಾರೆ. ಆದರೆ ಸಿಕ್ಕುವುದು ಮಾತ್ರ ಅವರ ಪುಣ್ಯ. ಕವಿಯ ಬಂಧ ಪ್ರೌಢವಾಗಿದ್ದರೂ ಲಲಿತವಾಗಿದೆ. ಕಲ್ಪನಾವಿಲಾಸಕ್ಕಿಂತಲೂ ಕವಿಸಮಯ, ಚಮತ್ಕೃತಿಗಳೇ ಹೆಚ್ಚು

೬. ಭೀಮ ಕವಿ (ಕ್ರಿ.ಶ. ೧೩೬೦)

ಈತನು ೧೪ನೆಯ ಶತಮಾನದ ಕಡೆಯ ಭಾಗದಲ್ಲಿದವನು. ಈತನು 'ಬಸವಪುರಾಣ' 'ಭೀಮಕವೀರಶ್ವರರಗಳೆ' 'ಭೃಂಗಿದಂಡಕ' ಎಂಬ ಕಾವ್ಯಗಳನ್ನು ರಚಿಸಿರುವುದಾಗಿ ತಿಳಿದುಬರುತ್ತದೆ. ಕಡೆಯದು ಇನ್ನೂ ಉಪಲಬ್ಧವಾಗಿಲ್ಲ. 'ಭೀಮಕವೀಶ್ವರ ರಗಳೆ ಕೇವಲ ೧೦೮ ಚರಣಗಳನ್ನು ಒಳಗೊಂಡಿರುವ ರಗಳೆ ಛಂದಸ್ಸಿನ ಒಂದು ಪುಟ್ಟ ಸ್ತೋತ್ರ ಗ್ರಂಥ. ಸಾಹಿತ್ಯದೃಷ್ಟಿಯಿಂದ ಇಲ್ಲಿ ಮಹತ್ವವಾದುದೇನೂ ಇಲ್ಲ. ಕವಿಯ ಬಸವ ಪುರಾಣ'ವು ೬೧ ಸಂಧಿಗಳನ್ನು ಒಳಗೊಂಡ ೮ ಆಶ್ವಾಸಗಳ ಉದ್ಗ್ರಂಥ, ಇದು ಮುಂದಿನ ವೀರಶೈವ ಪುರಾಣ ಕರ್ತೃಗಳಿಗೂ

7

ಧರ್ಮಾಭಿಮಾನಿಗಳಿಗೂ ಅತ್ಯಂತ ಪ್ರಿಯವಾದ ಗ್ರಂಥ. ಅವರೆಲ್ಲ ಈತನನ್ನು ಭಕ್ತಿಯಿಂದ ಸ್ಮರಿಸಿ ಬಾಯ್ತುಂಬ ಹೊಗಳಿದ್ದಾರೆ. ಬಸವ ಪುರಾಣವನ್ನು ತಾನು ಬರೆಯಬಲ್ಲೆನೆ ಎಂದು ಚಿಂತಿಸುತ್ತಾ ಕವಿ ಮಲಗಿರುವಾಗ ಅನಘದೇವಾರ್ಯನೂ ಪಾಲ್ಕುರಿಕೆ ಸೋಮನಾಥನೂ ಆತನ ಕನಸಿನಲ್ಲಿ ಕಾಣಿಸಿಕೊಂಡು, ತಾವು ಆತನ ಅಂತರಂಗದಲ್ಲಿ ಕುಳಿತು ಬರೆಸುವುದಾಗಿ ಆಶ್ವಾಸನೆ ಇತ್ತರಂತೆ ! ಕವಿಯು ಕೃತಿರಚನೆಗೆ ಕೈ ಹಾಕಿ 'ಕವಿ ಸೋಮನಾಥಂ ರಸಮೊಸರೆ ಮುನ್ನ ಸಿರಿದುರ್ಗದನೆ ಕನ್ನಡಿಸ ಪೇಳ್ವೆಂ' ಎಂದು ಹೇಳಿಕೊಂಡಿದ್ದಾನೆ. ಆದರೆ ಈತನು ಬರಿಯ ಭಾಷಾಂತರಕಾರನೇನೂ ಅಲ್ಲ, ಕವಿಹೃದಯವುಳ್ಳ ಭಾಷಾಂತರಕಾರ.

ಕವಿಯು ತನ್ನನ್ನು ಉಭಯಕವಿತ್ವಸಮರ್ಥನೆಂದೂ, ಸರಳಪದಶಯ್ಯೆ, ದೃಢವ್ಯಾಕರಣಯುತ ಲಾಲಿತ್ಯ, ನಿಯಮಾಕ್ಷರ ಸುಲಕ್ಷಣ ಭಾವವಾಗಿ ಕೃತಿ ರಚನೆ ಮಾಡಬಲ್ಲವನೆಂದೂ ಹೇಳಿಕೊಂಡಿದ್ದಾನೆ. ಕಾವ್ಯಾರಂಭದಲ್ಲಿ ಈತ ಹರಿಹರ ರಾಘವಾಂಕರನ್ನು ಭಕ್ತಿಯಿಂದ ಸ್ತೋತ್ರ ಮಾಡುತ್ತಾನೆ. ಭಾಮಿನಿಷಟ್ಪದಿಯಲ್ಲಿ ಇಡೀ ಕಾವ್ಯವನ್ನು ಬರೆದವರಲ್ಲಿ ಈತನೇ ಮೊದಲನೆಯವನು. ಆ ಷಟ್ಪದಿ ಈತನಿಗೆ ವಿಧೇಯವಾಗಿದೆಯೆ ಹೊರತು ಒಲಿದು ಬಂದಿಲ್ಲ. ಕವಿಯ ಕಲ್ಪನಾಶಕ್ತಿಯೂ ಮಹೋನ್ನತವಾದುದೇನೂ ಅಲ್ಲ. ಆತನ ವರ್ಣನೆಗಳು ಕವಿ ಸಮಯವನ್ನು ಆಶ್ರಯಿಸಿವೆಯಾದರೂ ಹೃದಯಂಗಮವಾಗಿವೆ. ಕರ್ಮಮಾರ್ಗಾವಲಂಬನೆಗಿಂತ ಭಕ್ತಿ ಮಾರ್ಗ ಶ್ರೇಷ್ಠವೆಂದು ಹೇಳುವಲ್ಲಿ 'ಹಟ್ಟಿಯೊಳು ಸುರಧೇನು ಬಂದವಳವಟ್ಟಿರಲು ಗೊಡ್ಡಂ ಪಿಡಿದು ಮತಿಗೆಟ್ಟು ಕರೆದಪನೆಂಬನವೊಲು' ಎಂದೂ 'ಪಿರಿದು ತವರಾಜ ಕಟ್ಟದಿರೊಳಾಗಲುಮಿರಲ್ಕದ ಬಿಟ್ಟು ತವುಡಂ ಮುಕ್ಕುವೊನವೊಲು' ಎಂದು ಕೊಟ್ಟಿರುವ ಉಪಮೆಗಳು ಹೃದ್ಯವಾಗಿವೆ.

ಭೀಮ ಕವಿ ಪುರಾಣಕರ್ತೃ. ಆತನಿಗೆ ಕಥೆಯ ಏಕಮುಖತೆಗಿಂತಲೂ ಶಿವಶರಣ ಕಥೆಗಳಿಗೆ ಆದಷ್ಟು ಹೆಚ್ಚಾಗಿ ಅವಕಾಶ ಮಾಡಿಕೊಡುವುದರಲ್ಲಿಯೆ ಆಸಕ್ತಿ ಹೆಚ್ಚು. ಈ ಕಥೆಗಳನ್ನು ಸುಂದರವಾಗಿ ರೂಪಿಸಿದ್ದಾನೆ. ಈ ಕತೆಗಳ ಮಧ್ಯೆ ಮುಖ್ಯ ಕಥೆಯಾದ ಬಸವಣ್ಣನ ವ್ಯಕ್ತಿ ಚಿತ್ರ ಮುಚ್ಚಿಹೋಗಿದೆ. ಹರಿಹರ ಕವಿಯ 'ಬಸವರಾಜದೇವರರಗಳೆ'ಯಲ್ಲಿನ ಕಾವ್ಯಾಂಶ ಇಲ್ಲಿಲ್ಲ. ಆತನ ಮುಂದೆ ಈತ ಸೂರ್ಯನ ಮುಂದಿನ ಸೊಡರು ಅಷ್ಟೆ

೭. ಪದ್ಮಣಾಂಕ (ಕ್ರಿ.ಶ. ೧೪೦೦)

೧೫ನೇ ಶತಮಾನದ ಪೂರ್ವಾರ್ಧದಲ್ಲಿದ್ದ ಪದ್ಮಣಾಂಕನು ಕೆರೆಯ ಪದ್ಮರಸನ ವಂಶದವನು. ತಾನು ಉಭಯಕವಿಯೆಂದು ಹೇಳಿಕೊಂಡಿರುವುದರ ಜೊತೆಗೆ ತನ್ನ ಕವಿತೆ ರಸದಾಳೆಗಬ್ಬಿನ ಹಾಲಿನ ಪ್ರವಾಹ, ಜೇನಿನ ಮಳೆ, ಹುಣ್ಣಿಮೆ ಚಂದ್ರನಿಂದ ಹರಿದುಬರುವ ಅಮೃತ ಪ್ರವಾಹ ಇತ್ಯಾದಿಗಳಿಗೆ ಸಮಾನವಾದುದೆಂದು ಹೇಳಿಕೊಂಡಿದ್ದಾನೆ. ಆದರೆ ಇದು ಕವಿ ಕಾಣುತ್ತಿರುವ ಹಗಲ್ಗನಸಷ್ಟೆ. ಆತನ 'ಪದ್ಮ ರಾಜಪುರಾಣ'ವಾರ್ಧಕ ಷಟ್ಪದಿಯ ೧೩ ಸಂಧಿಗಳನ್ನು ಒಳಗೊಂಡಿದೆ. ಕೆರೆಯ ಪದ್ಮರಸನ ಜೀವನ ಇದರ ಕಥಾ ವಸ್ತು. ಕಥಾನಾಯಕನು ಪರವಾದಿಗಳನ್ನು ವಾದದಲ್ಲಿ ಖಂಡಿಸುವ ಸಂದರ್ಭಗಳಲ್ಲಿ ಕವಿಯ ಶ್ರುತಿಸ್ಮೃತಿಗಳ ವಾಕ್ಯಗಳನ್ನೂ ಷಟ್ಪದಿಯ ಛಂದಸ್ಸಿಗೆ ತಿರುಗಿಸಿ ಪದ್ಯಗಳನ್ನು ಹೊಸೆಯುತ್ತಾನೆ. ತನ್ನ ಕಾವ್ಯವನ್ನು 'ಪಾಪಾಕ್ಷಯಾರ್ಥಂ ಭಕ್ತಿಯಿಂ ವಿರಚಿಸಿದೆಂ' ಎಂದು ಕವಿ ಹೇಳಿಕೊಂಡಿದ್ದಾನೆ. ಕಾವ್ಯವನ್ನು ಓದುವಾಗಲೂ ಇದೇ ದೃಷ್ಟಿಯಿಂದ ಓದಬೇಕು. ಕಾವ್ಯಾಂಶಗಳನ್ನು ಹೆಚ್ಚಾಗಿ ಬಯಸಿದರೆ ಆಶಾಭಂಗವಾಗುತ್ತದೆ. ಪದ್ಮಣಾಂಕನು ದೊಡ್ಡ ಪಂಡಿತನೇ ಹೊರತು ದೊಡ್ಡ

ಕವಿಯಲ್ಲ 'ಈ ಕೃತಿ ಯುವತಿ ಕೋವಿದರನೇಂ ಸೋಲಿಸದೆ ಬಿಡುವಳೆ ?' ಎಂಬ ಕವಿ ಪ್ರಶ್ನೆಗೆ 'ನಿಜ ಸೋಲಿಸುತ್ತಾಳೆ' ಎಂದು ಹೇಳಬಹುದು. ಆದರೆ ಕಥಾನಾಯಕನ ಈ ವರ್ಣನೆ ನೋಡಿ–

ಸ್ಫುರಿಸಿ ಲಿಂಗತ್ರಯಮನಾಕ್ರಿಯಾಕಾರಕೋ
ತ್ಕರನಾಗಿ ತದ್ಧಿ ತಮನಟಿ ಪಿಯಂತಸ್ಥೋರು
ತರವಿಧಿಯನೊರೆದು ವ್ಯಕ್ತವ್ಯಮಿಂತೆಂದು ಬೋಧಿಸಿಯಾಗಮದ ಹೃದಯಮಂ
ನಿರವಿಸಿ ಲಸತ್ಪತ್ಯಯಂಬೇಳ್ದು ಮೇಣ್ ಪ್ರಕೃತಿ
ಪುರುಷವೃತ್ತಿಯನ್ನೆದೆ ಕಾಣಿಸುವಿನ ಸೂತ್ರದಿಂ
ಚರಿತವೋಲೆಸಗಿ ಶಾಬ್ದಿಕರ ಗುರುವೆನಿಪ ಕೆರೆಯಪದ್ಮ ರಸರೋವುಗಿಳೆಯಂ

ಶ್ಲೇಷೆಯಿಂದ ಕೂಡಿದ ಈ ಪದ್ಯವನ್ನು ಓದುತ್ತಿದ್ದಂತೆ ಕವಿಯು ಹಿಡಿದಿರುವ ಹಾದಿ, ತಿರುಗುವ ದಿಕ್ಕು ನಮಗೆ ಅರ್ಥವಾಗುತ್ತದೆ. ಆತನ 'ಕವಿ ಮುಖಕವಾಟ' (ಗತಪ್ರತ್ಯಾಗತ) ಪದ್ಯವು ಪಾಂಡಿತ್ಯಕ್ಕೆ ಹಾಕಿದ ಸವಾಲಿನಂತಿದೆ. ಆತನು ಬಳಸುವ ಸಂಸ್ಕೃತ ಪದಗಳು ಸಂಸ್ಕೃತ ಪಂಡಿತರನ್ನೂ ಬೆರಗುಗೊಳಿಸಿಯಾವು ! ದೇಸೀಯ ಛಂದಸ್ಸಿನಲ್ಲಿ ಮಾರ್ಗೀಶೈಲಿ ಎಷ್ಟು ವಿಕೃತವಾಗಬಹುದೆಂಬುದಕ್ಕೆ ಈ ಕಾವ್ಯವೊಂದು ಉತ್ತಮ ಉದಾಹರಣೆ. ಇಷ್ಟಾದರೂ ಪದ್ಮಣಾಂಕನು ಸ್ತುತ್ಯ. ಆತನೊಬ್ಬ ಚರಿತ್ರಕಾರ. ಪದ್ಮರಸನ ಚರಿತ್ರೆ ಕೊಟ್ಟಿದ್ದಾನೆ, ಹರಿಹರನಚರಿತ್ರೆಯ ಮೇಲೂ ಬೆಳಕು ಚೆಲ್ಲಿದ್ದಾನೆ.

೭. ಹರಿಹರಯುಗದ ಚಂಪೂಕವಿಗಳು

೧೨ರಿಂದ ೧೫ನೆಯ ಶತಮಾನದವರೆಗಿನ ಕಾಲಮಾನವನ್ನು ಹರಿಹರಯುಗ ಎಂದು ಗುರುತಿಸಲಾಗಿದೆ. ಈ ಯುಗದಲ್ಲಿ ದೇಸೀಸಾಹಿತ್ಯ, ಶೈಲಿಗಳು ಹೆಚ್ಚು ಜನಪ್ರಿಯ ಅಥವಾ ಕವಿಪ್ರಿಯವಾದಂತೆ ಕಂಡುಬಂದಿಲ್ಲ. ಕಾವ್ಯ ಕರ್ತೃಗಳೂ ಕಾವ್ಯ ಪ್ರಿಯರೂ ಸಾಂಪ್ರದಾಯಕವಾಗಿ ಬೆಳೆದುಕೊಂಡು ಬಂದಿದ್ದ ಚಂಪೂ ಪದ್ಧತಿಯಲ್ಲಿ ಆದರ, ಗೌರವ, ಆಸಕ್ತಿ, ಅಭಿರುಚಿಗಳುಳ್ಳವರಾಗಿದ್ದುದರಿಂದ ಆ ಪದ್ಧತಿ ಹಲವು ಶತಮಾನಗಳವರೆಗೆ ಅನಿರ್ಬಾಧಿತವಾಗಿ ನಡೆದುಕೊಂಡು ಹೋದಂತೆ ಕಾಣಬರುತ್ತದೆ. ಆದರೆ ಅದರಲ್ಲಿ ಪಂಪಯುಗದ ಸತ್ವ ಇಲ್ಲ. ಆ ಯುಗದ ವೀರರಸ ಪ್ರಚುರತೆಗೆ ಬದಲಾಗಿ ಇಲ್ಲಿ ಶೃಂಗಾರರಸ ಎದ್ದು ನಿಲ್ಲುತ್ತದೆ; ಕೇವಲ ಧರ್ಮನಿರೂಪಣೆಗೆಂದು ಹೊರಟ ಕಾವ್ಯಗಳು ಕೂಡ ಶೃಂಗಾರಸರಸಿಯನ್ನು ನಿರ್ಮಿಸಿಕೊಂಡು ಅದರಲ್ಲಿ ಮುಳುಗುಹಾಕುತ್ತವೆ. ಜನಜೀವನದಲ್ಲಿ ಸಾಹಸಗುಣಕ್ಕೆ ಬದಲಾಗಿ ಭೋಗಲಾಲಸೆ ಬೆಳೆಯಿತೆಂದು ಕಾಣುತ್ತದೆ. ಇಲ್ಲಿನ ಚಂಪೂಕಾವ್ಯಗಳಲ್ಲಿನ ಒಂದು ವಿಶೇಷ ಲಕ್ಷಣವೆಂದರೆ – ಹರಿಹರಯುಗದ ಪ್ರಭಾವದಿಂದಲೊ ಏನೊ–ಭಾಷೆಯಲ್ಲಿ ದೇಸೀಯ ಕಡೆಗೆ ಬೆಳೆಯುತ್ತಿರುವ ಒಲವು. ಈ ಯುಗದ ಚಂಪೂಮಹಾಕವಿ ಜನ್ನನ 'ಅರುಹನ ಮೂರುತಿಯಂತಿರೆ ನಿರಾಭರಣಂ ಮೆರೆಯಲ್ಕೆ' ಕಾವ್ಯ ಸೃಷ್ಟಿಯಾಗಿರಬೇಕೆಂದು ಹೇಳುತ್ತಾನೆ. ಇದೇ ಹಾದಿಯಲ್ಲಿ ಮುಂದುವರಿದ ಆಂಡಯ್ಯನೆಂಬ ಮತ್ತೊಬ್ಬ ಕವಿ ತನ್ನ ಕಾವ್ಯದಲ್ಲಿ ಸಂಸ್ಕೃತಪದಗಳನ್ನೇ ಬಳಸುವುದಿಲ್ಲವೆಂದು ಪ್ರತಿಜ್ಞೆ ಮಾಡಿ ಹೊರಟ. ಈ ಯುಗದ ಮತ್ತೊಂದು ಗಮನಾರ್ಹವಾದ ಸಂಗತಿಯೆಂದರೆ ಬ್ರಾಹ್ಮಣಕವಿಗಳು ಕಾವ್ಯ ರಚನೆ ಮಾಡಹೊರಟರು. ಅವರು ಎಲ್ಲೊ ಅಪರೂಪವಾಗಿ ಒಂದೆರಡು ಲೌಕಿಕಕಾವ್ಯಗಳನ್ನು ಬರೆದಿರಬಹುದಾದರೂ ಧರ್ಮನಿರೂಪಣೆಗೆ ಕನ್ನಡವನ್ನು ಆಶ್ರಯಿಸಿರಲಿಲ್ಲ. ಅಂತಹ ಕಾವ್ಯವೊಂದನ್ನು ಕನ್ನಡದಲ್ಲಿ ಮೊಟ್ಟಮೊದಲು ರಚಿಸಿದ ಕೀರ್ತಿ ರುದ್ರಭಟ್ಟನಿಗೆ ಸಲ್ಲುತ್ತದೆ. ೧೪ನೆಯ ಶತಮಾನದಿಂದ ಆರಂಭವಾದ ದಾಸ ಸಾಹಿತ್ಯವಂತೂ ಸ್ವತಂತ್ರಯುಗದ ಉದಾತ್ತ ತತ್ತ್ವಗಳನ್ನು ನೆತ್ತಿಯ ಮೇಲೆ ಹೊತ್ತೇ ಕಾರ್ಯರಂಗಕ್ಕಿಳಿದುವುಗಳು. ಆದರೆ ಇವು ಚಂಪೂ ಕಾವ್ಯಗಳಲ್ಲ, ದೇಶಿ ಶೈಲಿಯ

ಕೀರ್ತನೆಗಳು. ಇವರನ್ನು ಕುರಿತು ಪ್ರತ್ಯೇಕವಾಗಿ ವಿವೇಚನೆ ಮಾಡೋಣ. ಸದ್ಯಕ್ಕೆ ಈ ಯುಗದ ಚಂಪೂಕವಿಗಳನ್ನು ನೋಡೋಣ.

೧. ನೇಮಿಚಂದ್ರ (ಸು. ಕ್ರಿ.ಶ. ೧೨೦೦)

ಹರಿಹರನ ಸಮಕಾಲೀನನಾದ ಈತನು 'ಲೀಲಾವತಿ' 'ನೇಮಿನಾಥಪುರಾಣ' ಎಂಬ ಎರಡು ಕಾವ್ಯಗಳನ್ನು ಬರೆದಿದ್ದಾನೆ. ಬಹುಶಃ ಪಂಪನಂತೆ ತಾನೂ ಒಂದು ಲೌಕಿಕ, ಮತ್ತೊಂದು ಧಾರ್ಮಿಕ ಕಾವ್ಯವನ್ನು ಬರೆದಿರವನೆಂದು ತನಗೆ ತಾನೆ ಭುಜ ಚಪ್ಪರಿಸಿಕೊಂಡಿರಬಹುದು. 'ಲೀಲಾವತಿ'ಯ ಕೊನೆಯಲ್ಲಿ ಸೌಂದರ್ಯ ರಟ್ಟವಂಶದ ದೊರೆ ಲಕ್ಷ್ಮಣರಾಜನನ್ನೂ (ಕ್ರಿ.ಶ. ೧೧೯೦) ಆತನ ಮಡದಿ ಚಂಚಲದೇವಿಯನ್ನೂ ಸ್ಮರಿಸಿದ್ದಾನೆ; ನೇಮಿನಾಥನ ಪುರಾಣದ ಮೊದಲಲ್ಲಿ ವೀರಬಲ್ಲಾಳನ (೧೧೯೩-೧೨೨೦) ಪ್ರಧಾನವಾದ ಸಜ್ಜೆವಳ್ಳ ಪದ್ಮನಾಭನನ್ನು ಸ್ಮರಿಸಿದ್ದಾನೆ. ಆದ್ದರಿಂದ ಕವಿಯು ಆ ಇಬ್ಬರ ಆಸ್ಥಾನದಲ್ಲಿಯೂ ಇದ್ದನೆಂದು ಹೇಳಬಹುದು.

೧೪ನೇ ಶತಮಾನದಲ್ಲಿದ್ದ ಮಧುರನೆಂಬ ಕವಿ ಪೂರ್ವಕವಿಸ್ತವಾವಸರದಲ್ಲಿ ನೇಮಿಚಂದ್ರನನ್ನು 'ಕರ್ಣಾಟಕೃತಿಗೆ ಸೀಮಾಪುರುಷ' ಎಂದು ಕರೆದು ಗೌರವಿಸಿದ್ದಾನೆ. ಈ ಗೌರವ ಎಲ್ಲೆ ಮೀರಿದುದಾದರೂ ನೇಮಿಚಂದ್ರ ಒಳ್ಳೆಯ ಕವಿ ಎಂದು ಹೇಳುವುದಕ್ಕೆ ಯಾವ ಅಡ್ಡಿಯೂ ಇಲ್ಲ. ಈತನಿಗೆ 'ಕವಿಧವಳ', 'ಕವಿರಾಜಮಲ್ಲ', 'ವಿದ್ಯಾವಧೂವಲ್ಲಭ', 'ಕಲಾಕಾಂತ', 'ಶೃಂಗಾರಕಾರಾಗೃಹ', 'ಚತುರ್ಭಾಷಾ ಕವಿಚಕ್ರವರ್ತಿ', ಇತ್ಯಾದಿ ಬಿರುದುಗಳಿವೆ. ಇದಕ್ಕೆ ತಕ್ಕಂತೆ ಆತನ ಆತ್ಮ ಪ್ರತ್ಯಯವೂ ಹಿರಿದಾದುದೆ. ಸರಸ್ವತಿಯು ಪುರಾತನ ಕವಿಗಳ ಆಗಲಿಕೆಯಿಂದುಂಟಾದ ತನ್ನ ವಿರಹವೇದನೆಯನ್ನು ನೇಮಿಚಂದ್ರನ ನಾಲಗೆಯೆಂಬ ಚಿಗುರಿನ ಹಾಸಿಗೆಯಲ್ಲಿರುವಾಗ ಮರೆತು ಬಿಟ್ಟಳಂತೆ ! ಕವಿ ಸ್ವಸಾಮರ್ಥ್ಯವನ್ನು ಕುರಿತು ಆತ ಹೇಳಿರುವ ಮಾತುಗಳು ಕನ್ನಡ ಜಗತ್ತಿನಲ್ಲಿ ಸುಪ್ರಸಿದ್ಧವಾಗಿವೆ–ಕೋತಿಗಳು ಸಮುದ್ರಕ್ಕೆ ಸೇತುವೆಯನ್ನು ಕಟ್ಟಿದವೋ ಬಿಟ್ಟವೋ; ವಾಮನನು ತ್ರಿವಿಕ್ರಮನಾಗಿ ಅವನ ಪಾದ ಆಕಾಶವನ್ನು ಮುಟ್ಟಿತೊ ಬಿಟ್ಟಿತೋ; ಹರನ ಗಂಟಲನ್ನು ಅರ್ಜುನ ಮೆಟ್ಟಿದನೊ ಬಿಟ್ಟನೊ, ಕವಿಗಳಂತೂ ಈ ಕಾರ್ಯವನ್ನು ತಮ್ಮ ಕಾವ್ಯಗಳಲ್ಲಿ ನಿರೂಪಿಸಿ, ಜನರು ಅವನ್ನ ಸ್ವೀಕರಿಸುವಂತೆ ಮಾಡಿದ್ದಾರೆ. 'ಏನಳವಗ್ಗಳಮೊ ಕವೀಂದ್ರರಾ !' ಇನ್ನೂ ಕೇಳಿ, ಮಹಾಕವಿ ಉದಿಸುವುದು ಭುವನದ ಭಾಗ್ಯದಿಂದಲಂತೆ!

ಬೆಲೆಯಿಂದಕ್ಕುಮೆ ಕೃತಿಗಾ । ವಿಲ ಭುವನವ ಭಾಗ್ಯ ದಿಂದಮಕ್ಕುಂ ನೋಟ್ಟಿಂ
ಬೆಲೆಗೊಟ್ಟು ತಾರ ಮಧುವಂ‌ಃ ಮಲಯಾನಿಲನಂ ಮನೋಜನಂ ಕೌಮುದಿಯಂ ॥

ಎನ್ನುತ್ತಾನೆ.

ಕವಿಯ ಪ್ರಥಮ ಕೃತಿಯಾದ 'ಲೀಲಾವತಿ' ಒಂದು ಶೃಂಗಾರಕಾವ್ಯ. ಇದರ ಕಥೆ ಸುಬಂಧುವಿನ 'ವಾಸವದತ್ತೆ'ಯಿಂದ ಎತ್ತಿಕೊಂಡದು. ಶೃಂಗಾರಮಂ ಕಾವ್ಯ ಬಂಧುವಿನ ದೊಳ್ ತಾಂ ಸೆಟಿಗೈವ ಮೈಮೆನೇಮಿಯದು, ಆದ್ದರಿಂದಲೇ ಆತ 'ಶೃಂಗಾರಕಾರಾಗೃಹ'ನೆನಿಸಿರುವುದು. ಆತನ 'ಲೀಲಾವತಿ'ಯಲ್ಲಿ ಶೃಂಗಾರ ರಸ ಸೆರೆ ಸಿಕ್ಕಿ ಬಿದ್ದಿದೆ. ಇಲ್ಲಿನ ಕಥೆ ರುಚಿಕಟ್ಟಾಗಿದೆ. ಬನವಾಸಿಯ ರಾಜಕುಮಾರ ಕಂದರ್ಪದೇವನು ತನ್ನ ಕನಸಿನಲ್ಲಿ ಕಂಡ ಸುಂದರಿಯನ್ನು ಅರಸುತ್ತಾ ಮಂತ್ರಿಕುಮಾರ ಮಕರಂದನೊಡನೆ ದೇಶಾಂತರ ಹೊರಡುತ್ತಾನೆ. ಅವನ ಕನಸಿನ ಹೆಣ್ಣಾದ ರಾಜಕುಮಾರಿ ಲೀಲಾವತಿಯು ಕನಸುಕಂಡು, ಆ ಕನಸಿನ ಪುರುಷನನ್ನು ಕರೆತರಲು ದೂತರನ್ನಟ್ಟುತ್ತಾಳೆ. ಹಲವಾರು ಅಡ್ಡಿ ಆತಂಕಗಳಾದ ಮೇಲೆ ನಾಯಕ ನಾಯಕಿಯರ ಸಮಾಗಮವಾಗುತ್ತದೆ. ಇಂತಹ ಕಥೆಯಲ್ಲಿ

ಶೃಂಗಾರ ನಿರೂಪಣೆಗೆ ಅಭಾವವೇ? ದಡತುಂಬಿ ಹರಿಯುವಷ್ಟಿದೆ. ಆದರೆ ಕವಿಯ ಭಾವಾವೇಶ ರಸಸ್ಥಾನವನ್ನು ಮುಟ್ಟುವುದು ಅಪರೂಪ. ಕನ್ನಡದಲ್ಲಿ ದೊರೆವ ಮೊಟ್ಟಮೊದಲ ಶೃಂಗಾರಕಾವ್ಯವೆಂಬುದು ಇದರ ಪ್ರಾಶಸ್ತ್ಯ ಕಥಾನಾಯಕನು ಎಲ್ಲೆಲ್ಲಿಯೋ ಅಲೆದು ಒಂದು ಮರದ ಕೆಳಗೆ ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದಾಗ, ಆ ಮರದ ಮೇಲಿದ್ದ ಸಾರಿಕೆ ತನ್ನ ಪ್ರಿಯನ ವಿರಹದಿಂದ ವೇದನೆಯನ್ನು ಅನುಭವಿಸುತ್ತಿರುವ ಚಿತ್ರ ಹೃದಯಸ್ಪರ್ಶಿಯಾಗಿದೆ. ಗಂಡುಹಕ್ಕಿ ಹಿಂದಿರುಗಿದಾಗ ಹೆಣ್ಣು ಮಾಡುವ ಪ್ರಣಯಕಲಹ ಮತ್ತು ಅದನ್ನು ಗಂಡುಹಕ್ಕಿ ಸಮಾಧಾನಪಡಿಸುವಾಗ ಕಂದರ್ಪದೇವನಿಗೆ ಲೀಲಾವತಿಯ ವೃತ್ತಾಂತ ತಿಳಿದುಬರುವುದು ಚಮತ್ಕಾರಯುಕ್ತವಾಗಿ ರಸವತ್ತಾಗಿದೆ. ಕವಿಯು 'ಚತುರ್ಭಾಷಾ ಕವಿಚಕ್ರವರ್ತಿ' ಎಂಬ ತನ್ನ ಬಿರುದಿಗೆ ತಕ್ಕಂತೆ ಅಪಾರ ಪಾಂಡಿತ್ಯವುಳ್ಳವನು. ಆತನ ಶಬ್ದಭಂಡಾರ, ಮಾತಿನ ಧೋರಣೆ, ವರ್ಣನಾ ವೈಖರಿ, ಚಮತ್ಕಾರಗಳು ಕಥೆಯ ಓಟವನ್ನು ಕುಂಠಿತಗೊಳಿಸುತ್ತವೆ. ಆದರೂ ಅಲ್ಲಲ್ಲಿ ಕವಿಪ್ರತಿಭೆ ಮಿಂಚುತ್ತದೆ. ಈ ಕಾವ್ಯ ಬಹುಕಾಲದವರೆಗೆ ಅತ್ಯಂತ ಜನಪ್ರಿಯವಾಗಿತ್ತೆಂದು ತೋರುತ್ತದೆ. ಆದ್ದರಿಂದಲೆ ಕಾದಂಬರೀ ಕಾವ್ಯವನ್ನು ಸುಡಿಸಿ 'ಲೀಲಾವತಿಗೆ ಅದರ ಬೊಟ್ಟಿಡಿಸಿದರೆಂಬ ದಂತಕಥೆ ಬಹುಕಾಲ ಚಲಾವಣೆಯಲ್ಲಿದ್ದಂತೆ ಕಂಡುಬರುತ್ತದೆ. ಬಾಹುಬಲಿ (೧೫೦೦), ದೊಡ್ಡಯ್ಯ (೧೫೫೦), ದೇವಚಂದ್ರ (೧೮೩೮) ಮೊದಲಾದ ಕವಿಗಳು. ತಮ್ಮ ಕಾವ್ಯಗಳಲ್ಲಿ ಇದನ್ನು ಪ್ರಸ್ತಾಪಿಸಿದ್ದಾರೆ. ಕವಿ ನೇಮಿಚಂದ್ರನು ಇನ್ನು 'ಒಂದೆಗಡ ಬರಿಸಲಿಕ್ಕೆ ಬರದಂ !' ಆದ್ದರಿಂದ 'ಏಮ್ ನಿಶಿತಮತಿಯೊ ಕೃತಿಕುಲ ದೀಪಂ !' ಎಂದು ತನ್ನನ್ನು ತಾನೆ ಹೊಗಳಿಕೊಂಡಿದ್ದಾನೆ. ಅಹುದು, ಕವಿಯಮತಿ ನಿಶಿತ; ಪ್ರತಿಭೆ ಮಾತ್ರ ಎರಡನೆ ಮೆಟ್ಟಿಲಿನ ಮೇಲಿದೆ.

ನೇಮಿಚಂದ್ರನ 'ನೇಮಿನಾಥಪುರಾಣ' ಕಾವ್ಯಧರ್ಮ ಧರ್ಮಗಳೆರಡನ್ನೂ ಒಳಗೊಂಡ ಶ್ರೇಷ್ಠಕಾವ್ಯ. ಇಪ್ಪತ್ತೆರಡನೇ ತೀರ್ಥಂಕರನಾದ ನೇಮಿನಾಥನ ಕಥೆಯೊಡನೆ 'ಸಂಧಿಸಿ ವಸುದೇವಾಚ್ಯುತಕಂದರ್ಪ ಕಥೆಗಳನಿತುಮಂ ವಿರಚಿಸುವೆಂ' ಎಂದು ಹೇಳಿದವನು ಕಂಸವಧೆಯವರೆಗೆ ಬರೆದು ನಿಲ್ಲಿಸಿದ್ದಾನೆ. ಕಾವ್ಯ ಮುಗಿವ ಮುನ್ನವೇ ಕವಿಯು ಗತಿಸಿಹೋದನೊ ಏನೊ ! ಕಾವ್ಯ ಅರ್ಧಕ್ಕೇ ನಿಂತಿರುವುದರಿಂದ ಇದಕ್ಕೆ 'ಅರ್ಧನೇಮಿ' ಎಂಬ ಅನ್ವರ್ಥನಾಮ ಬಂದಿರುವಂತೆ ಕಾಣುತ್ತದೆ. ನೇಮಿಚಂದ್ರನ ಮಾತುಗಳು 'ರಸವೊ, ರಸಾಯನವೊ, ಕಾವ್ಯರೂಪದ 'ವಸಂತಮಾಸವೊ ಕವಿಗಳ ಅಮೃತವೊ' ಎನ್ನುವಷ್ಟು ಮನೋಹರವೆಂದು ಕವಿಯ ಹೇಳಿಕೆ. ಶ್ರೀಕೃಷ್ಣ ಕಥಾಪ್ರಸಂಗದಲ್ಲಿ ಈ ಕಾವ್ಯ ನಿಜವಾಗಿಯೂ 'ಕರ್ಣರಸಾಯನವೇ' ಆಗಿದೆ. ಅದರಲ್ಲಿಯೂ ವಾಮನನೂ ತ್ರಿವಿಕ್ರಮನಾಗಿ ಬಲಿಯುನ್ನು ರಸಾತಳಕ್ಕೆ ತುಳಿಯುವ ಸನ್ನಿವೇಶ ಅತ್ಯಂತ ಭವ್ಯವಾಗಿದೆ. ವಾಮನನು ತ್ರಿವಿಕ್ರಮನಾಗಿ ಬೆಳೆಯುತ್ತಾ ಹೋದುದು ಕಣ್ಣಿಗೆ ಕಟ್ಟುವಂತಿದೆ. ಕವಿಯ ಕಲ್ಪನಾ ಸಾಮರ್ಥ್ಯಕ್ಕೂ ಅಲೌಕಿಕ ದೃಷ್ಟಿಗೂ ಹಿಡಿದ ಸೊಡರಿನಂತಿದೆ ಆ ಭವ್ಯಚಿತ್ರ. ಶ್ರೀಕೃಷ್ಣನ ಗೋವರ್ಧನೋದ್ಧರಣ ಚಿತ್ರವೂ, ಚಾಣೂರನೊಡನೆ ಮಾಡುವ ಮಲ್ಲಯುದ್ಧವೂ ಹೃದ್ಯವಾಗಿವೆ. ಕವಿಯು 'ಲೀಲಾವತಿ'ಯನ್ನು ಬರೆದ ಮೇಲೆ ಈ ಕಾವ್ಯವನ್ನು ಬರೆಯುವಷ್ಟರಲ್ಲಿ ಆತನ ಕೈ ಪಳಗಿದೆ. ಕಾವ್ಯಪಕ್ಷಿಯ ಪ್ರತಿಭೆ ಕಲ್ಪನೆಗಳ ರೆಕ್ಕೆ ಬಲಿತಿವೆ, ದೃಷ್ಟಿ ಉದಾತ್ತವಾಗಿದೆ.

೨. ರುದ್ರಭಟ್ಟ (ಕ್ರಿ.ಶ. ೧೨೦೦)

ವೈದಿಕ ಪುರಾಣವೊಂದನ್ನು ಕನ್ನಡ ಕಾವ್ಯರೂಪವಾಗಿ ಕೊಟ್ಟವರಲ್ಲಿ ರುದ್ರಭಟ್ಟ ಮೊತ್ತಮೊದಲಿಗ. ಈತನ 'ಜಗನ್ನಾಥ ವಿಜಯ'ವು ವಿಷ್ಣುಪುರಾಣದ ೫, ೬ನೆಯ ಅಂಕಗಳಲ್ಲಿ ಕಾಣಬರುವ

ಕೃಷ್ಣಚರಿತೆಯನ್ನು ಒಳಗೊಂಡಿದೆ. ಈತನು 'ರಸಕಲಿಕೆ' ಎಂಬ ಒಂದು ಲಕ್ಷಣ ಗ್ರಂಥವನ್ನೂ ಬರೆದಿರುವುದಾಗಿ ಸಾಳ್ವನು ತನ್ನ ರಸರತ್ನಾಕರದಲ್ಲಿ ಹೇಳಿದ್ದಾನೆ. ಆದರೆ ಅದು ಈವರೆಗೆ ಸಿಕ್ಕಿಲ್ಲ.

ರುದ್ರಭಟ್ಟನು ನೇಮಿಚಂದ್ರನ ಸಮಕಾಲೀನ. ಇಬ್ಬರೂ ವೀರಬಲ್ಲಾಳನ (೧೧೯೩, ೧೨೨೦) ಕಾಲದವರೆ. ನೇಮಿಚಂದ್ರನು ವೀರಬಲ್ಲಾಳನ ಮಂತ್ರಿ ಪದ್ಮನಾಭನನ್ನು ಆಶ್ರಯಿಸಿದ್ದರೆ, ರುದ್ರಭಟ್ಟನು ಆ ದೊರೆಯ ಮತ್ತೊಬ್ಬ ಮಂತ್ರಿ 'ಚಂದ್ರಮೌಳಿ'ಯನ್ನು ಆಶ್ರಯಿಸಿದ್ದನು. ಆತ ತನ್ನ ಸ್ವಾಮಿಯ ಸಂತೋಷಕ್ಕಾಗಿ ನೇಮಿನಾಥಪುರಾಣನನ್ನು ಬರೆದ; ಈತ 'ಜಗನ್ನಾಥ ವಿಜಯವನ್ನು' ಬರೆದು ತನ್ನ ಪೋಷಕನನ್ನು ಸಂತೋಷಪಡಿಸಿದ. ಇಬ್ಬರ ಕಥೆಗಳೂ ಕೃಷ್ಣನವೇ. ಇಬ್ಬರ ಧರ್ಮ ಮತ್ತು ದೃಷ್ಟಿಗಳು ಬೇರೆ ಬೇರೆಯಾದರೂ, ತಮ್ಮ ಕಾವ್ಯವನ್ನು ಪರಸ್ಪರ ಓದಿ, ಮೆಚ್ಚಿ ಸಂತೋಷಗೊಂಡು, ಸಂತೋಷಪಡಿಸುತ್ತಿದ್ದರೆಂದು ಕಲ್ಪಿಸಿಕೊಳ್ಳುವುದು ಎಷ್ಟು ಸುಂದರ ! ರುದ್ರಭಟ್ಟನು ಉದಾರ ಹೃದಯದವನು. ತಾನು ಬ್ರಾಹ್ಮಣನಾದರೂ ಶಂಕವರ್ಮ, ಶಾಂತಿವರ್ಮ, ಗುಣವರ್ಮ, ಮೊದಲಾದ ಜೈನ ಕವಿಗಳನ್ನು ಸ್ಮರಿಸಿ, ಅವರ ವಿಶಿಷ್ಟ ಕಾವ್ಯಗುಣ ತನ್ನ ಗ್ರಂಥದಲ್ಲಿಳಿದು ಬರಲೆಂದು ಹಾರೈಸಿದ್ದಾನೆ.

ರುದ್ರಭಟ್ಟನಿಗೆ 'ಕವಿರಾಜ', 'ಕೃತಿಶಾರದಾಭ್ರ ಚಂದ್ರಾತಪ' ಎಂಬ ಬಿರುದುಗಳಿದ್ದಂತೆ ಕವಿಯ ಹೇಳಿಕೆ. ತನ್ನ ಕಾವ್ಯವು ಸುಂದರಿಯ ಸೋಂಕಿನಂತೆ ಹೊಸ ಮಾವಿನ ಹೂಗೊಂಚಲಂತೆ, ಶ್ರೀಗಂಧದ ರಸದಂತೆ' ಮೊಗ್ಗು ಸುರಿದ ಮಲ್ಲಿಗೆಯಂತೆ, ಪೂರ್ಣಚಂದ್ರನ ಕಾಂತಿಯಂತೆ, ಮಂದಮಾರುತನಂತೆ ಸಜ್ಜನರ ಮನಸ್ಸನ್ನು ಸಂತೋಷಗೊಳಿಸುವುದೆಂದು ಕವಿ ಹೇಳಿಕೊಂಡಿದ್ದಾನೆ. ಈ ಹೇಳಿಕೆ ಖಂಡಸತ್ಯ. ಕವಿಯಕಾವ್ಯದಲ್ಲಿ ಆನಂದಕ್ಕೆ ವಸ್ತುವಿದೆ. ಅದನ್ನು ಕಷ್ಟಪಟ್ಟು ಪಡೆಯಬೇಕಾಗಿದೆ. ಕವಿಯ ರಚನೆ ದ್ರಾಕ್ಷಾಸಾರವಲ್ಲ, ನಾರಿಕೇಳಪಾಕ. ಆತನ ಸಂಸ್ಕೃತಪಾಂಡಿತ್ಯದ ಸಿಪ್ಪೆ ಚಿಪ್ಪುಗಳನ್ನು ಭೇದಿಸಿದ ಮೇಲೆ ತಿರುಳು ಸಿಕ್ಕಬೇಕು. ಹೀಗೆ ಸಂಸ್ಕೃತ ಭೂಯಿಷ್ಠಮಯವಾದ 'ಜಗನ್ನಾಥ ವಿಜಯ'ದ ಮೊದಲ ೫ ಪದ್ಯಗಳನ್ನು 'ಪಂಚಪಾಷಾಣ'ಗಳೆಂದು ಕರೆದು ಅವುಗಳಿಗೆ ಸಂಸ್ಕೃತದಲ್ಲಿ ವ್ಯಾಖ್ಯಾನ ಬರೆದಿದ್ದಾರೆ. ಇದನ್ನು ನೋಡಿದರೆ ಕವಿಯ ಪ್ರಕಾಂಡಪಾಂಡಿತ್ಯ ಅರ್ಥವಾಗುತ್ತದೆ.

ನೇಮಿಚಂದ್ರನಂತೆ ರುದ್ರಭಟ್ಟನೂ ಕವಿಗಿಂತ ಹೆಚ್ಚಾಗಿ ಪಂಡಿತನಾದವನು. ನೇಮಿಚಂದ್ರನು 'ಸ್ತ್ರೀರೂಪಮೇ ರೂಪಂ, ಶೃಂಗಾರಮೇ ರಸಂ' ಎಂದು ತನ್ನ ಆದರ್ಶವನ್ನು ಎತ್ತಿಹಿಡಿದರೆ, ರುದ್ರಭಟ್ಟ 'ವೈಷ್ಣವಕಾವ್ಯ ರಸಾರ್ಣವಂ ತುಳುಕಾಡುಗೆ' ಎಂಬ ಆದರ್ಶದಿಂದ ಹೊರಟನು. ಆದರ್ಶ ಬೇರೆಬೇರೆಯಾದರೂ ರಸಾಸ್ವಾದನೆಗೆಂದು ಹೊರಟವರಿಗೆ ಆಗುವ ಫಲ ಒಂದೇ-ಪಾಂಡಿತ್ಯ ಪ್ರಚುರವಾದ 'ನಾಕೆಳಪಾಕ' ಭಾಷೆಯ ಭಾರವನ್ನು ಹೊರವಷ್ಟು ಭಾವಪುಷ್ಟಿಯಿಲ್ಲ, ಇವರ ಕವಿತೆಗಳಿಗೆ. ವರ್ಣನೆಯಲ್ಲಿ ಇಬ್ಬರೂ ಕವಿ ಸಮಯ ಬಳಸುತ್ತಾರೆ. ಆದರೆ ವರ್ಣನೆಯಲ್ಲಿ ನೂತನತೆ ಇಲ್ಲದೆ ಹೋಗಿಲ್ಲ.

'ಜಗನ್ನಾಥ ವಿಜಯ'ದ ಕಥೆ ಶ್ರೀಕೃಷ್ಣ ಜನನದಿಂದ ಬಾಣಾಸುರವಧೆಯವರೆಗೆ 'ಏಕೋತ್ತರಶತ ಕೃತ್ಯ'ಗಳ ಹಂದರದ ಮೇಲೆ ಹಬ್ಬಿದೆ. ಶ್ರೀಕೃಷ್ಣನ ಕೊಳಲಗಾನಕ್ಕೆ ಗೋಪಿಯರು ಮನಸೋತು ಓಡಿಬರುವ ಸನ್ನಿವೇಶ ಹೃದಯಂಗಮವಾಗಿದೆ ಕೃಷ್ಣನ ವೇಣುಗಾನ 'ನಾರಿಕೇಳರಸಧಾರಾವೃಷ್ಟಿ ಜೇನೆಯ್ಯಸೋದೆ ಸುಧಾಸಾರವಿದೆತ್ತಣಿಂಪಸರಿಸಿತ್ತೆಂಬಂತು' ದಿವ್ಯವಾಗಿತ್ತು. ಅದನ್ನು ಕೇಳಿದ ದೇವೇಂದ್ರ, 'ಶ್ರೀ ಕೃಷ್ಣಮೂರ್ತಿಯನ್ನು ನೋಡಲು ಸಹಸ್ರನೇತ್ರಗಳಿವೆ. ಆದರೆ ವೇಣುನಾದವನೆಸೆದಾಲಿಸಲ್ ಕಿವಿಗಳೇಕೆಯೊ ಸಾಸಿರವಾದುದಿಲ್ಲ' ಎಂದು ಮರುಗಿದನಂತೆ ! ಗೋಪಿಯರು ಚೈತ್ರಮಾಸದ ಮಂದಾನಿಲನು ಚಲಿಸಲಾಗಿ ವನಲತೆಗಳು ನರ್ತಿಸುವಂತೆ ನರ್ತಿಸಿದರಂತೆ ! ಈ ರಾಸಕ್ರೀಡೆಯ ಭಾಗ ಒಂದು ರಸದ ಮಡು.

ರುದ್ರಭಟ್ಟನ ಬಂಧ ಬಿಗಿ; ಓಜಸ್ಸಿನಿಂದ ತುಂಬಿದೆ; ಆದರೆ ಪ್ರಸಾದಗುಣ ಕಮ್ಮಿ. ಒಮ್ಮೊಮ್ಮೆ ಅದು ತಿಳಿಯಾಗುವುದೂ ಉಂಟು. ಈ ಗ್ರೀಷ್ಮ ಋತು ವರ್ಣನೆಯನ್ನು ನೋಡಿ–

ಉರಿವುರಿವ ಬಿಸಿಲ ಬೆಂಕಿಯ । ಭರದೆ ಮಳಲ್ದಿಂಟೆ ಕಾಯ್ದು ಸಿಡಿಯುತಿರೆ ಘಂ
ಕರುಹಭವಾಂಡದ ಹಂಚಿನ । ಹುರಿಗಡಲೆವೊಲೊಡೆದು ಪಾಱಿದೆವು ಬೆಟ್ಟಂಗಳ್

'ಬ್ರಹ್ಮಾಂಡದ ಹೆಂಚಿನಲ್ಲಿರುವ ಹುರುಗಡಲೆಯ ಹಾಗೆ ಬೆಟ್ಟಗಳು ಒಡೆದು ಹಾರಿದವು' ಎಂಬ ಭಾವ ಭವ್ಯವಾಗಿರುವಷ್ಟೆ ಸರಳವಾಗಿಯೂ ಇದೆ. ಆದರೆ ಇಂತಹ ವರ್ಣನೆಗಳೂ ಅಪೂರ್ವ. ಶಿಶುಪಾಲನು ಶ್ರೀಕೃಷ್ಣನನ್ನು ನಿಂದಿಸುವ ಭಾಗ ಬಹು ರಸವತ್ತಾಗಿದೆ. ಆದರೆ ಅದಕ್ಕೆ ಕಾರಣ ಮೊದಲನೆಯದಾಗಿ ಅದು ನಿಂದಾಸ್ತುತಿಯಾಗಿರುವುದು; ಎರಡನೆಯದಾಗಿ ಈ ಭಾಗ ಆದಿಕವಿ ಪಂಪನ ವಿಕ್ರಮಾರ್ಜುನವಿಜಯದಿಂದ ಉಪಕೃತವಾಗಿರುವುದು. ಆತನು ಭಟ್ಟಿಯಿಳಿಸಿ ತಯಾರುಮಾಡಿರುವ ಸಾರವಸ್ತುವಿಗೆ ರುದ್ರಭಟ್ಟನು ನೀರನ್ನು ಸೇರಿಸಿ, ಪಾನೀಯವನ್ನು ತಯಾರುಮಾಡಿದ್ದಾನೆ.

ಕಾವ್ಯರಸಾಸ್ವಾದನೆಗಿಂತಲೂ ಹೆಚ್ಚಾಗಿ ಪಾಂಡಿತ್ಯಾರ್ಜನೆಗೆ ನೇಮಿಚಂದ್ರ, ರುದ್ರಭಟ್ಟ – ಈ ಇಬ್ಬರ ಕಾವ್ಯಗಳೂ ಅಭ್ಯಾಸಯೋಗ್ಯವಾಗಿದೆ.

೩. ಬೊಪ್ಪಣಪಂಡಿತ (ಕ್ರಿ.ಶ. ೧೨೦೦)

ನೇಮಿಚಂದ್ರ ಮತ್ತು ರುದ್ರಭಟ್ಟರ ಸಮಕಾಲೀನನಾದ ಬೊಪ್ಪಣಪಂಡಿತನು 'ನಿರ್ವಾಣಲಕ್ಷ್ಮೀಪತಿ' ಮತ್ತು 'ಗೊಮ್ಮಟಸ್ತುತಿ'ಗಳನ್ನು ಬರೆದಿದ್ದಾನೆ. ಎರಡೂ ಕೇವಲ ೨೭ ವೃತ್ತಗಳನ್ನು ಒಳಗೊಂಡ ಪುಟ್ಟ ಗ್ರಂಥಗಳು. ಇವುಗಳಲ್ಲಿ ಮೊದಲನೆಯದರ ಪ್ರತಿಪದ್ಯವೂ 'ನಿರ್ವಾಣಲಕ್ಷ್ಮೀಪತಿ' ಎಂದು ಮುಗಿಯುವುದರಿಂದಲೂ, ೨೭ ನಕ್ಷತ್ರಗಳ ಸಂಖ್ಯೆಯಲ್ಲಿ ರಚಿತವಾಗಿರುವುದರಿಂದಲೂ ಅದಕ್ಕೆ 'ನಿರ್ವಾಣಲಕ್ಷ್ಮೀಪತಿ ನಕ್ಷತ್ರಮಾಲಿಕೆ' ಎಂಬ ಹೆಸರು ಬಂದಿದೆ. ಲಕ್ಷ್ಮಿಗೆ ಪತಿಯಾದವನು ಜಿನ. ಆ ಜಿನನ ಮತ ಮತ್ತು ಜೈನ ಋಷಿಗಳ ಮಹತ್ತನ್ನು ಹೊಗಳುವುದು ಈ ಪುಟ್ಟ ಕಾವ್ಯದ ಹುರುಳು. ಇದು ಅಪ್ಪಟ ಧರ್ಮಗ್ರಂಥವಾದರೂ ಕಾವ್ಯಮಯವಾಗಿದೆ. ಕವಿಯ 'ಗೊಮ್ಮಟಸ್ತುತಿ'ಯು ಬಾಹುಬಲಿಯನ್ನು ಅತ್ಯಂತ ಭಕ್ತಿಯಿಂದ ಮೈದುಂಬಿ ಸ್ತುತಿಸುತ್ತಿರುವ ಒಂದು ಭಾವಗೀತೆ. ಗೊಮ್ಮಟನ ಶ್ರೀರೂಪವು ಆತ್ಮೋಪಮವಂತೆ !

ಅತಿ ತುಂಗಾಕೃತಿಯಾದೊಡಾಗದದಱತೊಳ್ ಸೌಂದರ್ಯ ಮೌನ್ನತ್ಯಮುಂ
ನುತ ಸೌಂದರ್ಯಮುಮಾಗೆ ಮತ್ತ ತಿಶಯಂ ತಾನಾಗದೌನ್ನತ್ಯಮುಮಂ
ನುತ ಸೌಂದರ್ಯಮುಮೂರ್ಜತಾತಿಶಯಮುಂ ತನ್ನಲ್ಲಿ ನಿಂದಿರ್ದುವೇಂ
ಕ್ಷಿತಿಸಂಪೂಜ್ಯಮೊ ಗೊಮ್ಮಟೇಶ್ವರ ಜಿನಶ್ರೀರೂಪಮಾತ್ಮೋಪಮಂ

ಎತ್ತರ, ಸೌಂದರ್ಯ, ಅತಿಶಯ – ಈ ಮೂರು ಏಕತ್ರ ಸೇರಿರುವ ಶ್ರೀ ರೂಪವು ಆತ್ಮೋಪಮವಲ್ಲದೆ ಮತ್ತೇನು ?

'ಸುಜನೋತ್ತಂಸ' ಎಂಬ ಅಂಕಿತವಿರುವ ಅಜ್ಞಾತ ಕವಿಕೃತವಾದ ಅನೇಕ ಕಂದಪದ್ಯಗಳು ಬಳಕೆಯಲ್ಲಿವೆ. ಬೊಪ್ಪಣನೇ ಅವುಗಳ ಕರ್ತೃವಾಗಿದ್ದರೂ ಇರಬಹುದು. ಹಲವು ಕವಿಗಳೂ ಈತನನ್ನು ಅತಿಶಯವಾಗಿ ಹೊಗಳಿರುವುದರಿಂದಲೂ 'ಶಬ್ದಮಣಿದರ್ಪಣ'ದಲ್ಲಿ 'ಸುಜನೋತ್ತಂಸನ ಸುಮಾರ್ಗಮಿದರೊಳೆ ಲಕ್ಷ್ಯಂ' ಎಂಬ ಹೇಳಿಕೆ ಕಂಡುಬಂದಿರುವುದರಿಂದಲೂ, ಈತನ ಉಪಲಬ್ಧ ಕೃತಿಗಳಲ್ಲಿ ಅಸಾಧಾರಣವಾದ ಕವಿತಾಶಕ್ತಿ ಕಂಡುಬರುವುದರಿಂದಲೂ ಈತನು ಉದ್ಗ್ರಂಥಗಳನ್ನು ಬರೆದಿದ್ದರೂ ಬರೆದಿರಬಹುದೆಂದು ಊಹಿಸಲೂ ಅವಕಾಶವಿದೆ.

೪. ಅಗ್ಗಳ (ಕ್ರಿ.ಶ. ೧೨೦೦)

೧೨ನೆಯ ಶತಮಾನದ ಕಡೆಯ ಭಾಗದಲ್ಲಿದ್ದ ಅಗ್ಗಳನು ಇಂಗಳೇಶ್ವರವೆಂಬ ಊರಿನ ಶಾಂತೀಶ ಪೋಚಾಂಬಿಕೆ ಎಂಬ ಜೈನದಂಪತಿಗಳ ಸುಪುತ್ರ. 'ಭಾರತಿಭಾಳನೇತ್ರ', 'ಸಾಹಿತ್ಯವಿನೋದ' ಇತ್ಯಾದಿ ಬಿರುದಾಂಕಿತನಾದ ಈತ ಎಂಟನೆಯ ತೀರ್ಥಂಕರನ ಕಥೆಯನ್ನು 'ಚಂದ್ರಪ್ರಭಪುರಾಣ' ಎಂಬ ಹೆಸರಿನಿಂದ ಬರೆದಿದ್ದಾನೆ. ಇದು ೧೯ ಆಶ್ವಾಸಗಳನ್ನು ಒಳಗೊಂಡ ಬೃಹದ್ಗ್ರಂಥ. ಜಗತ್ತಿನಲ್ಲಿರುವ ಕಲೆಗಳಲ್ಲೆಲ್ಲ ನಿಪುಣನಾಗಿರುವವನಿಗಿಂತಲೂ ಶ್ರೇಷ್ಠನಾಗಿರುವ ತಾನು ರಾಜಸಭೆಯಲ್ಲಿಯೂ ಗಣ್ಯನಾಗಿದ್ದುದಾಗಿ ಆತ ಹೇಳಿಕೊಂಡಿದ್ದಾನೆ. ಚಂದ್ರಪ್ರಭ ತೀರ್ಥಂಕರನು ಹೇಗೆ ಅಸಹಾಯ ಶೂರನಾಗಿ ಸಂಸಾರಸಾಗರವನ್ನು ದಾಟಿದನೊ ಹಾಗೇ ತಾನೂ ಆ ತೀರ್ಥಂಕರನ ಕಥಾಸಮುದ್ರವನ್ನು ಅಸಹಾಯನಾಗಿ ದಾಟಿರುವನಂತೆ! ಪಂಪ, ಪೊನ್ನ, ರನ್ನರ ಮೂರು ಧರ್ಮ ಕಾವ್ಯಗಳಿಗೆ ಮೂರು ಲೋಕಗಳ ಬೆಲೆ ಆಗುತ್ತದೆ ಎಂದು ಹೇಳಿ, ಅಲ್ಲದೆ ನಿಲ್ಲದೆ, ಅವರದಾದಮೇಲೆ ಬಂದ ತನ್ನ ಕಾವ್ಯ ಅವರ ಕಾವ್ಯಗಳಂತೆಯೇ ಅಮೂಲ್ಯವಾದುದೆಂದು ಹೇಳಿಕೊಂಡಿದ್ದಾನೆ. ಈತನ ಕಾವ್ಯ ಸಂಸ್ಕೃತ ಭೂಯಿಷ್ಠವಾಗಿ ಬಿಗಿಯಾದ ಬಂಧದಿಂದಕೂಡಿ ಪ್ರೌಢವಾಗಿದೆ. ಅಗ್ಗಳನಿಗೆ ಕವಿಹೃದಯವಿದೆ, ಆತನ ವರ್ಣನೆಗಳಲ್ಲಿ ಕಲ್ಪನಾವಿಲಾಸವಿದೆ, ಅಲ್ಲದೆ ತನ್ನ ಕಾವ್ಯದ ವೀರಜೀವನದ ಮೇಲೆ ಸ್ವಲ್ಪಮಟ್ಟಿಗೆ ಬೆಳಕನ್ನು ಚೆಲ್ಲುತ್ತಾನೆ. ಎಂಟನೇ ತೀರ್ಥಂಕರನನ್ನು ಕುರಿತು ಬರೆದವರಲ್ಲಿ ಇವನೇ ಮೊದಲಿಗ.

೫. ಆಚಣ್ಣ (ಕ್ರಿ.ಶ. ೧೨೦೦)

೧೩ನೆಯ ಶತಮಾನದ ಆದಿಭಾಗದಲ್ಲಿದ್ದ ಆಚಣ್ಣನು ಪುಲುಗೆರೆಯ ಕೇಶವರಾಜ ಮಲ್ಲಾಂಬಿಕೆಯರೆಂಬ ಜೈನದಂಪತಿಗಳ ಮಗ. ಈತನು 'ವಸುಧೈಕಬಾಂಧವ' ಎಂಬ ಬಿರುದುಳ್ಳ ರೇಚಣಮೂಪನ ಅಪೇಕ್ಷೆಯಂತೆ ತನ್ನ ತಂದೆ ತಿಕ್ಕಣಚಾವಣನೆಂಬ ಗೆಳೆಯನೊಡನೆ ಸೇರಿಕೊಂಡು ಬರೆಯ ಹೊರಟಿದ್ದ 'ವರ್ಧಮಾನಪುರಾಣ'ವನ್ನು ಬರೆದು ಮುಗಿಸಿದನು. ಇದರಲ್ಲಿ ೭೯ ಆಶ್ವಾಸಗಳಿವೆ. ಇದು ೨೪ನೆಯ ತೀರ್ಥಂಕರನಾದ ವರ್ಧಮಾನನನ್ನು ಕುರಿತು ಕನ್ನಡದಲ್ಲಿ ಬರೆದ ಮೊದಲ ಕಾವ್ಯ. *ಇದೇ ಅದರ ಪ್ರಶಸ್ತಿ. ಹಿಂದಿನ ಚಂಪೂ ಅಚ್ಚಿನಲ್ಲಿ ಇಳಿದುಬಂದಿರುವ ಈ ಕಾವ್ಯದಲ್ಲಿ ಉಳಿದೆಲ್ಲ ಕಾವ್ಯಗಳಿಗಿಂತಲೂ ಹೆಚ್ಚು ಶಬ್ದಾಲಂಕಾರಗಳಿವೆ. ಈ ಕವಿಯು 'ಪದಾಶೀತಿ' ಎಂಬ ಮತ್ತೊಂದು ಗ್ರಂಥವನ್ನೂ ಬರೆದಿದ್ದಾನೆ. ಅದರಲ್ಲಿ ಅರ್ಹಂತ, ಸಿದ್ಧ, ಆಚಾರ್ಯ, ಉಪಾಧ್ಯಾಯ, ಸಾಧು–ಎಂಬ ಪಂಚಪರಮೇಷ್ಟಿಗಳ ನಾಮ ಮಹಿಮೆಯನ್ನೊಳಗೊಂಡ ೪೯ ಕಂದಪದ್ಯಗಳಿವೆ.

೬. ಕವಿ ಕಾಮ (ಕ್ರಿ.ಶ. ೧೨೦೦)

ಆಚಣ್ಣನ ಸಮಕಾಲೀನನಾದ ಕವಿ ಕಾಮನು ಬರಿಯ ಕವಿ ಮಾತ್ರವಲ್ಲ, ಬಹುಮುಖಾವಧಾನಿ. ನಾಲ್ಕು ದಿಕ್ಕಿನಲ್ಲಿಯೂ ನಾಲ್ವರು ನಿಂತು ಬರೆದುಕೊಳ್ಳುವಂತೆ ಕಾವ್ಯವನ್ನು ರಚಿಸಿ, ಹೇಳಬಲ್ಲ; ಅತ್ತ ಪಗಡೆಯಾಟ, ಇತ್ತ ಓದುತ್ತಿರುವ ತನ್ನ ಬರಹವನ್ನು ತಿದ್ದುವುದು, ಸಂಗೀತ ಶ್ರವಣ, ಹಾಸ್ಯದ ಚಟಾಕಿ ಹಾರಿಸುವುದು – ಇಷ್ಟನ್ನೂ ಏಕಕಾಲದಲ್ಲಿ ಮಾಡಬಲ್ಲ, ಹಾಗೆಂದು ಕವಿ ಹೇಳಿಕೊಂಡಿದ್ದಾನೆ. 'ಕವಿಮುಖಮುಕುರ', 'ಶೃಂಗಾರರತ್ನಾಕರ' ಎಂಬವು ಈತನ ಬಿರುದುಗಳು. ಸಾಮಂತರ, ಮಂಡಳಿಕರ, ಚಕ್ರೇಶ್ವರ ಸಭೆಯೊಳ್ ಆತ ಪ್ರಸಿದ್ಧನಾಗಿದ್ದನಂತೆ! ಈತನು 'ಶೃಂಗಾರರತ್ನಾಕರ' ಎಂಬ ಶಾಸ್ತ್ರಗ್ರಂಥವೊಂದನ್ನು ಬರೆದಿದ್ದಾನೆ. ಇದಕ್ಕೆ 'ರಸವಿವೇಕ'ವೆಂಬ ಮತ್ತೊಂದು ಹೆಸರೂ ಉಂಟು, 'ರಸಮೆ ಮೊದಲ್ ಕವಿತೆಗೆ' ಎಂದು ಹೇಳಿ ಕಾವ್ಯದಲ್ಲಿ ರಸಕ್ಕಿರುವ ಪ್ರಾಧಾನ್ಯತೆಯನ್ನು ಎತ್ತಿ ನಿಲ್ಲಿಸಿದ್ದಾನೆ. ಇವನು ಶಾಂತರಸವನ್ನು ಒಪ್ಪುವುದಿಲ್ಲ; ಶೃಂಗಾರರಸವನ್ನು ಕುರಿತು ವಿಸ್ತಾರವಾಗಿ ಪ್ರತಿಪಾದಿಸಿದ್ದಾನೆ. ಕನ್ನಡದಲ್ಲಿ ರಸಪ್ರಕರಣವನ್ನು ವಿವರಿಸಹೊರಟವರಲ್ಲಿ ಇವನೇ

ಮೊದಲನೆಯವನು. ಈತನು 'ಸ್ತನಶತಕ'ವೆಂಬ ಮತ್ತೊಂದು ಕೃತಿಯನ್ನು ರಚಿಸಿರುವುದಾಗಿ ಪಾರ್ಶ್ವಕವಿ ಹೇಳುತ್ತಾನೆ; ಅದು ಈಗ ಉಪಲಬ್ಧವಾಗಿಲ್ಲ. ಈತನ ಗ್ರಂಥದ ಆಂತರಿಕ ಪ್ರಮಾಣಗಳಿಂದ ಇವನೊಬ್ಬ ಶೈವ ಬ್ರಾಹ್ಮಣನೆಂದು ಊಹಿಸಬಹುದು. ಈತನು 'ಜಗದೊಳ್ ಸನ್ನಿದಮಾದ ನಾಳ್ನುಡಿಗಳಂ ಛಂದಕ್ಕೆ ಬರ್ಪಂತು ನೆಟ್ಟಿಗೆ ಮಾತಾಡುವ ಬಲ್ಮೆ ಚಿತ್ರದೊಳೊಱಲ್ದರ್ಥಮಂ ಕೂಡೆ ನಾಲಗೆಯಂ ರಂಜಿಸುವೊಂದು ಬಿನ್ನಣಂ' – ಉಳ್ಳ ಪುಣ್ಯೈಕ್ಯಭಾಗಿಯೆಂದು ತನ್ನನ್ನು ಕರೆದುಕೊಂಡಿದ್ದಾನೆ. ಅದು ನಿಜ. ಆತ ಮಾತುಗಳನ್ನು ಪದ್ಯವಾಗಿ ಕಟ್ಟಬಲ್ಲ, ಸುಂದರವಾಗಿ ಅಭಿವ್ಯಕ್ತಗೊಳಿಸಬಲ್ಲ.

ಈಗ ನಾಗವರ್ಮನ 'ವರ್ಧಮಾನ ಪುರಾಣ' ಉಪಲಬ್ಧವಾಗಿ ಪ್ರಕಟಗೊಂಡಿದೆ.

೭. ಬಂಧುವರ್ಮ (ಕ್ರಿ.ಶ. ೧೨೦೦)

ಈತನು 'ಹರಿವಂಶಾಭ್ಯುದಯ' ಮತ್ತು 'ಜೀವಸಂಬೋಧನೆ' ಎಂಬ ಎರಡು ಗ್ರಂಥಗಳನ್ನು ಬರೆದಿದ್ದಾನೆ. ತಾನೊಬ್ಬ ವೈಶ್ಯೋತ್ತಮನೆನ್ನುವುದನ್ನು ಬಿಟ್ಟು ಕವಿ ಮತ್ತೇನನ್ನೂ ತನ್ನ ವಿಚಾರವಾಗಿ ಹೇಳಿಕೊಂಡಿಲ್ಲ. ೧೪ನೆಯ ಶತಮಾನದಲ್ಲಿದ್ದ ನಾಗರಾಜನೆಂಬ ಕವಿ ತನ್ನ 'ಪುಣ್ಯಾಸ್ರವ'ದಲ್ಲಿ ಈತನನ್ನು ಹೊಗಳುತ್ತಾ, ಈತನ ಮುಂದೆ ಉಳಿದ ಕವಿಗಳೆಲ್ಲ 'ರವಿಯಂ ಬಳಸಿರ್ದ ಬಹಳ ಭಗಣಂಗಳ (ನಕ್ಷತ್ರಗಳ) ವೊಲ್' ಕಾಂತಿಹೀನರೆಂದು ಹೇಳಿದ್ದಾನೆ. ಈತನಿಗೂ ಹಿಂದಿನ ಹರಿಹರಯುಗದ ಚಂಪೂಕವಿಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಹೇಳುವುದಾದರೆ ಈ ಮಾತು ಬಹುಮಟ್ಟಿಗೆ ಸತ್ಯ. 'ಕುದುರೆಗಿಂತಲೂ ಲದ್ದಿ ಬಿರುಸು' ಎಂಬ ಗಾದೆಯಂತೆ ಭಾವಕ್ಕಿಂತಲೂ ಭಾಷೆಯೇ ಹೆಚ್ಚು ಪ್ರಮುಖವಾಗಿ, ಬಂಧದಬಿಗಿಯಿಂದ ಉಸುರುಕಟ್ಟಿ ಹೋಗಿದ್ದ ವಾಗ್ದೇವಿಯು ಬಂಧುವರ್ಮನ ಕೃತಿಗಳಲ್ಲಿ ಸರಾಗವಾಗಿ ಉಸಿರಾಡುವಂತಾಗಿದ್ದಾಳೆ. 'ಹರಿವಂಶಾಭ್ಯುದಯ'ವು ೧೪ ಆಶ್ವಾಸಗಳ ಚಂಪೂ ಕಾವ್ಯ. ಇದರಲ್ಲಿ ೨೨ನೇ ತೀರ್ಥಂಕರನಾದ ನೇಮಿಜಿನೇಶನ ವೃತ್ತಾಂತವಿದೆ. ಇದನ್ನು ಈ ಹಿಂದೆಯೇ ನೇಮಿಚಂದ್ರ ಕವಿ ಬರೆದಿದ್ದ. ಹೀಗೆ ಹರಿವಂಶಾಭ್ಯುದಯದ ಕಥೆ ಹಳೆಯದಾದರೂ ಅದರ ನಿರೂಪಣಾ ವಿಧಾನದಲ್ಲಿ ನವೀನತೆಯಿದೆ. ಅದರ ವರ್ಣನಾಭಾಗಗಳಲ್ಲೆಲ್ಲ ಸರಳತೆ, ಲಾಲಿತ್ಯ, ಪ್ರಸಾದಗುಣಗಳು ಕಂಡುಬರುತ್ತವೆ. ಅದರಲ್ಲಿ ಬರುವ ಅಹಿಂಸಾ ವರ್ಣನೆಯಿದು–

ಕಾವವರಾರುಮಿಲ್ಲ ದನಮೆಂಬುದು, ಸೀರನಿತುಮಿಲ್ಲ ದೋಷಮೆಂ
ಬಾವುದುಮಿಲ್ಲ ಬೆರ್ಚುವುದು ಮೆಯ್ ಮುಳಿಸಿಲ್ಲದ ಮೂಗುಜಾತಿಗಳ್
ಮೇವುದು ಪುಲ್, ಜಲಂ ಕುಡಿವುದಿರ್ಪೆಯಂ ಪೆಱುವಂತಮಿಷ್ಟಸಂ
ಸೇವನೆಯಲ್ಲಿ ಮೆಯ್ಯಱಿಯದಿರ್ದುವನೇಂ ಗಳ ಕೊಲ್ವುದೊಳ್ಳಿತೇ

ಇದು ರುಕ್ಮಿಣಿಯ ಕುರುಳ ವರ್ಣನೆ–

ಕರಿಯವೆನಿಸಿರ್ದು ಪೊಳೆವುವು! ಸುರುಳ್ದು ಕಿಸಿದಿರ್ದುಮರಳುತಿರ್ಪುವು ಬೇಱಾ
ಗಿರುತುಂ ಬಂಬಲ್ಗೊಳ್ವುವು ಕುರುಳಂದಮಿದೇಂ ವಿರುದ್ಧಮೋ ಕಾಮಿನಿಯಾ ॥

ಬಂಧುವರ್ಮನ 'ಜೀವಸಂಬೋಧನೆ' ಜೈನಮತದ 'ದ್ವಾದಶಾನುಪ್ರೇಕ್ಷೆ'ಗಳನ್ನು ಕನ್ನಡದಲ್ಲಿ ಹೇಳಹೊರಟಿರುವ ಗ್ರಂಥ. ಹನ್ನೆರಡು ಅಧಿಕಾರಗಳಿಂದ ಕೂಡಿರುವ ಈ ಗ್ರಂಥ, ಇದು ಸ್ವಲ್ಪ ಹೆಚ್ಚು ಕಡಿಮೆ ಚಂಪೂರೂಪದಲ್ಲಿಯೇ ಇವೆ – ನೀತಿ ವೈರಾಗ್ಯಬೋಧಕವಾದರೂ ಲಲಿತ ಸುಂದರವಾಗಿವೆ.

'ಜೀವಸಂಬೋಧನೆ'ಯಲ್ಲಿ ಕವಿ ನಿರೂಪಿಸುತ್ತಿರುವುದು ಜೈನತತ್ವಗಳನ್ನಾದರೂ, ಅವುಗಳಲ್ಲಿ

ಬಹುಭಾಗ ಮಾನವ ಧರ್ಮವೇ. ಆದ್ದರಿಂದ ಸರ್ವಜನಾದರಣೀಯವಾಗಿದೆ.

ಕುಡಲಾರ್ಪೊಡೆಯನಪ್ಪುದು । ಕುಡಲಾಱದೆ ಬೇಡಿದವರ್ಗಳಂ ಮಱಗಿಸುತಿ
ರ್ಪೊಡಮೆಯಿನಾರ್ಗಂ ಮಱುಕಮ । ನೊಡಂಸದಿರ್ಪೊಂದರು ಬಡತನಂ ಲೇಸಲ್ತೆ

ಬಂಧದಲ್ಲಿ ಬಿಗಿಯಿದ್ದರೂ ಲಾಲಿತ್ಯಕ್ಕೆ ಲೋಪಬರದ ಇಂತಹ ಶೈಲಿಯೇ ಬಂಧುವರ್ಮನನ್ನು ನಮ್ಮ ಮೆಚ್ಚಿಗೆಗೂ ಗೌರವಕ್ಕೂ ತಕ್ಕವನನ್ನಾಗಿ ಮಾಡಿದೆ. ಹರಿಹರಯುಗಧರ್ಮವು ಕವಿಯ ಶೈಲಿಯ ಮೇಲೆ ಮೂಡಿಸಿರುವ ಪ್ರಭಾವ ಗಮನಾರ್ಹವಾದುದು. ಈತನನ್ನು ನಾಗರಾಜಕವಿ ಹೊಗಳಿರುವುದರಿಂದ ೧೪ನೆಯ ಶತಮಾನಕ್ಕೂ ಹಿಂದಿನವನು.

೮. ದೇವಕವಿ (ಕ್ರಿ.ಶ. ೧೨೨೫)

'ಕುಸುಮಾವಳಿ' ಎಂಬ ಕಾಲ್ಪನಿಕ ಕಥೆಯೊಂದನ್ನು ಚಂಪುವಿನಲ್ಲಿ ಬರೆದ ದೇವ ಕವಿ, ತನ್ನ ಕಾವ್ಯದಲ್ಲಿ ತನ್ನ ಹೆಸರಿನ ಸೂಚನೆಯೊಂದನ್ನು ಕೊಟ್ಟಿರುವನೇ ಹೊರತು, ಸ್ಪಷ್ಟವಾಗಿ ತನ್ನ ಹೆಸರನ್ನು ಹೇಳಿಕೊಂಡಿಲ್ಲ. ಆತನ ಗ್ರಂಥವು ನೇಮಿಚಂದ್ರನ 'ಲೀಲಾವತಿ'ಯಂತೆ ಒಂದು ಶೃಂಗಾರಪೂರ್ಣವಾದ ಕಲ್ಪನಾ ಕಥೆ; ಬ್ರಾಹ್ಮಣನಾದ ತಾನು ಈ ಶೃಂಗಾರಕಥೆಯ ಕರ್ತೃವೆಂದು ಹೇಳಿಕೊಳ್ಳಲು ನಾಚಿದನೊ ಏನೋ ! ತನ್ನ ಗ್ರಂಥಕ್ಕೆ ನಾಯಕನು ಚಿಕ್ಕ ರಾಜ ಚಮೂಪನೆಂದು ಹೇಳಿ, ಆತನ ಇತಿಹಾಸವನ್ನು ಕೊಟ್ಟಿರುವನಾದರೂ ಆ ಚಮೂಪ ಯಾರು ? ಯಾವ ರಾಜನ ಚಮೂಪ ? ಎಂಬುದು ಗೊತ್ತಾಗುವಂತಿಲ್ಲ. ತಾನು 'ಕವಿಕಮಳಜಸೂಕ್ತಿಸುಧಾರ್ಣವಸೋಮಂ' ಎಂದು ಹೇಳಿಕೊಂಡಿರುವುದರಿಂದ ಈತನು ಕಮಲಭವ (೧೩ನೆ ಶತಮಾನದ ಮಧ್ಯಭಾಗ) ಕವಿಯ 'ಶಾಂತೀಶ್ವರಪುರಾಣ'ದ ರಚನೆಯಲ್ಲಿ ಸಹಾಯಕನೊ ಪೋಷಕನೊ ಆಗಿದ್ದಿರಬಹುದು. ಈ ಊಹೆ ಸ್ಥಿರಗೊಳ್ಳುವಂತೆ 'ಕುಸುಮಾವಳಿ'ಯ ಕೆಲವು ವರ್ಣನಾಪದ್ಯಗಳು 'ಶಾಂತಿಶ್ವರಪುರಾಣ'ದಲ್ಲಿಯೂ ಕಂಡುಬರುತ್ತವೆ. ಈತನಿಗೆ 'ಕೃತಿರತಿರಮಣ', 'ಭಾರತೀಭೂಷಣ' ಮೊದಲಾದ ಬಿರುದುಗಳಿವೆ. ತಾನು 'ಸುಕೃತಿಶ್ರೀಭಾಮಿನೀ ಮಂಗಳಮಣಿ ಮುಕ್ತಕಂ', 'ಬುಧಸ್ತುತ್ಯ ಸಾಹಿತ್ಯ ಕಳಾಸಂದೋಹ ಸೀಮಂ' ಎಂದು ಆತ ತನ್ನನ್ನು ಸನ್ಮಾನಿಸಿಕೊಂಡಿದ್ದಾನೆ. ಈತ ವರ್ಣನಾಪ್ರಿಯ. ಕವಿಯ ಈ ವರ್ಣನಾಪ್ರೇಮವೂ ಪಾಂಡಿತ್ಯಾಭಿರುಚಿಯೂ ಕಥೆಯ ಓಟವನ್ನು ಕುಂಠಿತಗೊಳಿಸಿವೆ. 'ಈತನ ಬಂಧ ಪ್ರೌಢ, ನಿರರ್ಗಳ, ಗಂಭೀರ' ಎಂಬ ಕವಿಚರಿತ್ರಕಾರರ ಮಾತು ನಿಜವಾದರೂ ಮನರಂಜನೆಯ ಆದರ್ಶದಿಂದ ಹೊರಟ ಕಥೆ ಪ್ರೌಢಿಮೆಯ ಉಡುಪನ್ನು ತೊಡದೆ ಸರಳ ಸುಲಭವಾಗಿದ್ದಿದ್ದರೆ ಹೆಚ್ಚು ಉಚಿತವಾಗಿರುತ್ತಿತ್ತು. ಈತನು ಬಹುಶಃ ೧೪ನೆಯ ಶತಮಾನದ ಆರಂಭದಲ್ಲಿ ಇದ್ದಿರಬಹುದು.

೯. ಪಾರ್ಶ್ವಪಂಡಿತ (ಕ್ರಿ.ಶ. ೧೨೨೫)

'ಕವಿಕುಳತಿಲಕಂ', 'ವಿಬುಧಜನಮನಃಪದ್ಮಿನೀಪದ್ಮ ಮಿತ್ರಂ' ಇತ್ಯಾದಿಗಳುಳ್ಳ ಈ ಕವಿ ೧೯ ಆಶ್ವಾಸಗಳ 'ಪಾರ್ಶ್ವನಾಥ ಪುರಾಣ'ದ ಕರ್ತೃ. ಈತನೂ ೧೩ನೆಯ ಶತಮಾನದ ಪೂರ್ವಾರ್ಧದಲ್ಲಿದ್ದವನೆ. 'ಒಗಂಟು ಪೇಳ್ವ ಕವಿಯುಂ ಕವಿಯೆ' ಎಂದು ಹೇಳಿ ಸರಳವಾಗಿ ಬರೆಯಬೇಕೆಂಬ ಆದರ್ಶದಿಂದ ಹೊರಟಿರುವ ಈ ಕವಿ ಸ್ವಲ್ಪಮಟ್ಟಿಗೆ ತನ್ನ ಹೆಗ್ಗುರಿಯನ್ನು ಸಾಧಿಸಿದ್ದಾನೆ. ೨೩ನೆಯ ತೀರ್ಥಂಕರನಾದ ಪಾರ್ಶ್ವನಾಥಜಿನನನ್ನು ಕುರಿತು ಕನ್ನಡದಲ್ಲಿ ಬರೆದ ಕವಿಗಳಲ್ಲಿ ಈತ ಮೊದಲಿಗ. ತನ್ನ ಕಾವ್ಯವು ಸತ್ಕೀರ್ತಿಯೆಂಬ ರಮಣಿಯನ್ನು ಒಲಿಸಬಲ್ಲ ವಶೀಕರಣಮಂತ್ರ, ನಿರ್ದುಷ್ಟವಾದ ಪರೀಕ್ಷೆಗೆ ನಿಲ್ಲಬಲ್ಲ ಕಾಂತಿಯುಕ್ತವಾದ ಮನೋರತ್ನ

ಸರಸಯುಕ್ತವಾಗಿ, ಸಾರವತ್ತಾಗಿ, ಸುವರ್ಣನೆಯುಳ್ಳದ್ದಾಗಿ ಕಿವಿಗೂ ಹೃದಯಕ್ಕೂ ಆಭರಣಪ್ರಾಯವಾದುದು, ಇದು ಸಮಸ್ತ ಜನಕ್ಕೂ ಒಪ್ಪಿಗೆಯಾಗದೆ ಇರುತ್ತದೆಯೆ? – ಎಂದು ಕವಿ ಕೇಳುತ್ತಾನೆ. ನಿಜ, ಆತನು ಹೇಳುವುದನ್ನೆಲ್ಲ ಬಹುಮಟ್ಟಿಗೆ ಒಪ್ಪಬಹುದು – ಸರಸವಾದ ಕಥೆ, ಒಳ್ಳೆಯ ವರ್ಣನೆ, ಕಿವಿಗೂ ಮನಸ್ಸಿಗೂ ಹಿತವಾಗಬಲ್ಲ ಶೈಲಿ – ಇವುಗಳಿಂದ ಕೂಡಿದ ಈತನ ಕಾವ್ಯ 'ಸಮಸ್ತಬುಧಬೃಂದ'ಕ್ಕೆ ಒಪ್ಪಿಗೆಯಾಗುತ್ತದೆ. ಇದು ಈತನ ಮಾವಿನಮರದ ವರ್ಣನೆ–

ಚಿಗುರ್ಗಳನೊಮ್ಮೆ ಕರ್ಚಿ, ತಳಿರ್ದೊಂಗಲನೊರ್ಮೆ ಕರ್ದುಂಕಿ ಕೋಕಿಳಂ
ಮುಗುಳ್ಗಳನೊರ್ಮೆ ಜಕ್ಕುಲಿಸಿ, ಪೂಗಳನೊರ್ಮೋರ್ದಲೀಂಟಿ ಷಟ್ಪದಂ
ಬಗೆಗೊಳೆ ಬಂದ ಮಾವುಗಳ ಕಾಯ್ಗಳನೊರ್ಮೆ ತುಂಡುಂಕಿ ತುಡದಿಂ
ಸೊಗಯಿಪ ಪಣ್ಣನೊರ್ಮೆ ಸವಿದೇಂ ಸುಕಮಂ ಶುಕನೊಲ್ದು ತಾಳ್ದಿತೋ

ಈ ವರ್ಣನೆಯಲ್ಲಿ ಮಹೋನ್ನತವಾದ ಕಲ್ಪನೆಯಿಲ್ಲದಿದ್ದರೂ ಕಣ್ಣಿಗೆ ಕಟ್ಟುವಂತೆ ಚಿತ್ರಿತವಾಗಿದೆ, ನಿರಾಭರಣಸುಂದರವಾಗಿದೆ. ಈ ಕಾವ್ಯದಲ್ಲಿ ಬರುವ ಕಮಠನ ಕಥೆಯನ್ನು ಓದಿದಾಗ 'ಸುಕವಿಜನಮನೋಹರ್ಷ ಸಸ್ಯಪ್ರವರ್ಷಂ' ಎಂದು ಕವಿ ತನ್ನನ್ನು ಹೊಗಳಿಕೊಂಡಿರುವುದು ಅನ್ಯಾಯವಲ್ಲವೆನಿಸುತ್ತದೆ.

೧೦. ಜನ್ನ (ಕ್ರಿ.ಶ. ೧೨೨೫)

ಪಂಪ ರನ್ನಾದಿ ಕವಿಗಳಲ್ಲಿದ್ದ ಲೋಕೋತ್ತರ ಪ್ರತಿಭೆ ಕಲ್ಪನಾಶಕ್ತಿಗಳು ಸುಮಾರು ಎರಡು ಶತಮಾನಗಳ ಕಾಲ ಸುಪ್ತಸ್ಥಿತಿಯಲ್ಲಿದ್ದು ೧೨ನೆಯ ಶತಮಾನದ ಮಧ್ಯದಲ್ಲಿ ಉದಿಸಿದ ಜನ್ನನನ್ನು ಬಂದು ಆಶ್ರಯಿಸಿದನೆಂದು ತೋರುತ್ತದೆ. ಜನ್ನಕವಿ ಬಹು ಸುಕೃತಶಾಲಿ. ಹೊಯ್ಸಳ ನಾರಸಿಂಹನಲ್ಲಿ ಕಟಕೋಪಾಧ್ಯಾಯನಾಗಿದ್ದು, ಬಹುಶಃ ದೊಡ್ಡ ಕವಿಯೆಂದು ಪ್ರಸಿದ್ಧನಾಗಿ 'ಸುಮನೋಬಾಣ'ನೆಂಬ ಬಿರುದಿನಿಂದ ಖ್ಯಾತನಾಗಿದ್ದ ಶಂಕರನು ಜನ್ನನ ತಂದೆ; ಜಗದೇಕಮಲ್ಲನಲ್ಲಿ ಕಟಕೋಪಾಧ್ಯಾಯನಾಗಿ 'ಅಭಿನವಶರ್ಮ ವರ್ಮ' ಎಂಬ ಬಿರುದನ್ನು ಪಡೆದಿದ್ದ, ಎರಡನೆ ನಾಗವರ್ಮಕವಿ ಆತನ ವಿದ್ಯಾ ಗುರು; ಈತನ ಸೋದರಿ 'ಸೂಕ್ತಿಸುಧಾರ್ಣವ'ದ ಕರ್ತೃವಾದ ಮಲ್ಲಿಕಾರ್ಜುನನ ಮಡದಿ. ಆ ಪುಣ್ಯದಂಪತಿಗಳ ಸುಪುತ್ರನೇ ಪ್ರಸಿದ್ಧ ವೈಯಾಕರಣನಾದ ಕೇಶಿರಾಜ. ಇಂತಹ ಸಾರಸ್ವತ ವಾತಾವರಣದಲ್ಲಿ ಜನ್ನನ ಕವಿತಾಶಕ್ತಿ ಅಂಕುರಿಸಿ ಅರಳುತ್ತಾ ಹೋಯಿತು. ಈತನ ಕೀರ್ತಿ ಹರಡಿತು. ಹಲವು ಕಡೆಗಳಿಂದ ಶಾಸನ ಪದ್ಯಗಳನ್ನು ಬರೆಯಲು ಕರೆ ಬಂದಿತು. ಅವುಗಳನ್ನು ಬರೆಯುತ್ತಾ ಹೋದಂತೆ ಕವಿತಾವಲ್ಲರಿ ಬೆಳೆಯುತ್ತಾ ಹೋಯಿತು. 'ಸೊಬಗಿನ ಅಭಿನವ ಮದನನ್' ಆದ ಆ ತರುಣನಿಗೆ ದೊಡ್ಡ ವಂಶದ ಹೆಣ್ಣು ಮಡದಿಯಾಗಿ ದೊರೆತಳು. ಆತನ ಕೀರ್ತಿ ರಾಜಾಸ್ಥಾನವನ್ನು ಮುಟ್ಟಿತು. ಆತನು ಚೋಳಕುಲೋದ್ಧಾರಕನಾದ ನರಸಿಂಹಬಲ್ಲಾಳನ ಆಸ್ಥಾನಕವಿಯಾದ. ಅಷ್ಟೇ ಅಲ್ಲ; ನಿಂತರೆ ಸೇನಾಪತಿ, ಕುಳಿತರೆ ಮಂತ್ರಿ, ಕಾವ್ಯಾಸಕ್ತನಾದರೆ ಕವಿ; ಬರಿಯ ಕವಿಯಲ್ಲ, ಕವಿ ಚಕ್ರವರ್ತಿ. ಚಕ್ರವರ್ತಿ ಕೃಷ್ಣನಿಂದ ಪೊನ್ನ; ತೈಲಪ ಚಕ್ರವರ್ತಿಯಿಂದ ರನ್ನ; ಬಲ್ಲಾಳ ಚಕ್ರವರ್ತಿಯಿಂದ ಜನ್ನ–ಕವಿಚಕ್ರವರ್ತಿಗಳೆನಿಸಿದರು. ಯೋಗ್ಯತೆಯಲ್ಲಿ ತಾನು ತನ್ನ ಹಿಂದಿನವರಿಬ್ಬರಿಗಿಂತಲೂ ಒಂದು ಗುಂಜುತೂಕ ಹೆಚ್ಚೆಂತೆ!

ರನ್ನಂ ವೈಯಾಕರಣಂ। ಜನ್ನಂ ಮೇಣ್ ಕವಿಗಳೊಳಗೆ ವೈಯಾಕರಣಂ
ಪೊನ್ನನಸಹಾಯಕವಿ ಮೇಣ್। ಜನ್ನಿಗನಸಹಾಯಸುಕವಿ ಕವಿಚಕ್ರಿಗಳೊಳ್

ತನ್ನ ಕವಿತಾಶಕ್ತಿ ಅಸಾಧಾರಣವಾದುದೆಂಬ ಆತ್ಮಪ್ರತ್ಯಯವಿದೆ ಜನ್ನನಿಗೆ. ತಾನೊಬ್ಬ ಉಭಯಕವಿಚಕ್ರವರ್ತಿ; ರಾಜಸಭೆಯಲ್ಲಿನ ಅಖಿಳಕಳಾನಿಪುಣರ ಮಧ್ಯೆ ಬೆರಳೆತ್ತಿ ಗೆಲ್ಲುವ ಶಕ್ತನೆಂದರೆ

ಚತುರ್ವಿಧಪಂಡಿತನಾದ ತಾನೊಬ್ಬನೇ; ತನ್ನ ಮಾತುಗಳು ಶ್ರೀಗಂಧದಂತೆ, ಕ್ಷೀರಸಾಗರದಂತೆ, ಮುತ್ತಿನಂತೆ, ಬೆಳದಿಂಗಳಿನಂತೆ ಇವೆ; ತನಗೆ ಇದಿರಾರು? ಎನ್ನುತ್ತಾನೆ ಆತ. ಇದು ಲೌಕಿಕೋನ್ನತಿ. ಈ ಉನ್ನತಿಯ ಮತ್ತೊಂದು ಮುಖವಾದ ಪಾರಲೌಕಿಕವೂ ಇಷ್ಟೇ ಭವ್ಯವಾಗಿದೆ. ಜನ್ನಕವಿ ಜನಿಸಿದುದೆ ಆಷಾಡಕೃಷ್ಣ ತ್ರಯೋದಶಿಯ ರೇವತಿ ನಕ್ಷತ್ರ ಶಿವಯೋಗದಲ್ಲಿ; ಆತನ ಆರಾಧ್ಯ ದೈವವಾದ ಅನಂತನಾಥ ತೀರ್ಥಂಕರನು ಹುಟ್ಟಿದ ಮಂಗಳಮುಹೂರ್ತ ಅದು. ಜನ್ನನ ಹೆಸರಿನೊಡನೆ ತಾಯ್ತಂದೆಗಳಾದ ಗಂಗಾದೇವಿ-ಶಂಕರರು ತಮ್ಮ ಹೆಸರನ್ನು ಸೇರಿಸಿ ಹೇಳಿದಾಗ ಮಗುವಿನಲ್ಲಿ ಉದಿಸಿದ ಸಾತ್ವಿಕಭಾವ ಅವನ ವಯಸ್ಸಿನೊಡನೆ ಬೆಳೆಯುತ್ತಾ ಹೋಗಿರಬೇಕು. ಆತನು ಗಂಡರಾದಿತ್ಯನ ಪೊಳಲಲ್ಲಿ ಅನಂತನಾಥನ ಬಸದಿಯನ್ನೂ ದ್ವಾರಸಮುದ್ರದಲ್ಲಿ ಪಾರ್ಶ್ವಜಿನೇಶ್ವರನ ಬಸದಿಯ ದ್ವಾರವನ್ನೂ ಕಟ್ಟಿಸಿದುದರಲ್ಲಿ ಆತನ ಧರ್ಮಾನುರಕ್ತಿ ವ್ಯಕ್ತವಾಗುತ್ತದೆ.

ಜನ್ನಕವಿ ತನ್ನ ಕಾವ್ಯ 'ಚಾರಚೋರವೀರರ ಕಥೆಯಂತೆ ಬಾಯ್ಸವಿಯ ಮಾತುಗಳಂ ಬಱಿಕೆಯ್ವ ಚರ್ಚೆಯಲ್ಲ; ಬಾಳಬಟ್ಟೆಯ ಪರಮಾಗಮ ಹೇಳಿಕೊಂಡಿದ್ದಾನೆ. ಕಾವ್ಯದ ಉದ್ದೇಶವನ್ನು ಕುರಿತು ಆತ ಹೇಳಿರುವ ಮಾತುಗಳು ಬಹು ಅರ್ಥವತ್ತಾಗಿವೆ;

ಕವಿತಾಶಕ್ತಿ ಸುರೇಂದ್ರ ಧೇನುವದು, ಪುಣ್ಯಾಯತ್ತಮಾಕಾಮಧೇ
ನುವೆ ಕೈಸಾರ್ದೊಡಮಾ ವಚಸ್ಸುಧೆಯನನ್ಯರ್ಗಿತ್ತು ಕಾಳ್ಚೆಕ್ಕಿಗೂ
ಡವವೊಲ್ ತುಯ್ಯಲನಿಂದ್ರ ವಂದಿತನನರ್ಹದ್ದೇವನಂ ಭರ್ತ್ಯಮಾ
ಡುವುದಾತಂ ಕಿಱಿದಾತನಲ್ತೆ ತಳೆಯೊಲ್ವಾಲಂ ಭವದ್ವಂದ್ವದಾ

ಹಿಂದೆ ಪಂಪರನ್ನರು ಬರೆದ ಲೌಕಿಕಕಾವ್ಯಗಳಿಗೂ ಜನ್ನನ ಕಾವ್ಯಗಳಿಗೂ ಇರುವ ದೃಷ್ಟಿಭೇದ ಸುಸ್ಪಷ್ಟವಾಗಿದೆ. ಹರಿಹರನಂತೆ ಜನ್ನನೂ ತನ್ನ ಕಾವ್ಯ ಶಕ್ತಿಯನ್ನು ಪರಮೇಶ್ವರನ ಪೂಜೆಗೆ ಮಾತ್ರವೇ ಬಳಸಬೇಕೆಂದು ಸುಸ್ಪಷ್ಟವಾಗಿ ಹೇಳಿದ್ದಾನೆ. ಪಂಪಾದಿಗಳಂತೆ ಈತನೂ 'ಕಾವ್ಯಕಲಾಪರಿಣತಿ', 'ಖಡ್ಗಕಲಾ ಪರಿಣತಿ' ಇರುವ ಸವ್ಯಸಾಚಿಯೆ ! ಆದರೆ ಮಾನವರನ್ನು ಹೊಗಳುವ ಕಾರ್ಯವನ್ನು ಈತ ಒಪ್ಪುವುದಿಲ್ಲ. ಭೋಗಭಾಗ್ಯಗಳು ಬೇಕಾಗಿದ್ದರೆ ರಾಜರೇ ಆಗಬೇಕೆ ? 'ದೇವಾಧೀಶನನ್ನೊಮ್ಮೆ ವರ್ಣಿಸೆ ಮನೋವಾಕ್ಕಾಯಸಂಶುದ್ಧಿಯಿಂ, ದೇವೇಂದ್ರತ್ವಮೆ ಸಾರ್ವುದು' ಎಂಬುದು ಈತನ ನಿಲುವು. ಇದು ಹರಿಹರಯು‌ಗಧರ್ಮಕ್ಕೆ ಅನುಸಾರಿಯಾಗಿಯೂ ಇದೆ.

ಜನ್ನಕವಿ ಬರೆದ ಗ್ರಂಥಗಳಲ್ಲಿ ಮುಖ್ಯವಾದುವು ಎರಡು – 'ಯಶೋಧರ ಚರಿತೆ (೧೨೦೯), 'ಅನಂತನಾಥಪುರಾಣ' (೧೨೩೦). ಇವೆರಡೂ ಜೈನರ ಧರ್ಮಗ್ರಂಥಗಳೇ. ಆತನು 'ಸ್ಮರತಂತ್ರ'ವನ್ನೂ ಬರೆದಿರುವನಂತೆ. ಅದು ಉಪಲಬ್ಧವಾಗಿಲ್ಲ. 'ಯಶೋಧರಚರಿತ್ರೆ' ಜೀವದಯಾಷ್ಟಮಿಯಂದು ದುರ್ಗಿಗೆ ಪ್ರಾಣಬಲಿಯನ್ನು ಕೊಡುವ ದುರ್ಗಾಷ್ಟಮಿಯ ಜೈನರಿಗೆ ಜೀವದಯಾಷ್ಟಮಿ- ಜೈನಶ್ರಾವಕರು ಉಪವಾಸವ್ರತವನ್ನು ಆಚರಿಸಿದ ಮೇಲೆ ಮರುದಿನ ಪಾರಣೆಯನ್ನು ಮಾಡುವ ಮುನ್ನ ಇದನ್ನು ಕೇಳಬೇಕು. ಇದು 'ಪಾರಣೆ ಕಿವಿಗಳ್ಗೆ'. ಜೈನರಿಗೆ ಅತ್ಯಂತ ಪ್ರಿಯವಾದ ಈ ಕಥೆಯನ್ನು ಜನ್ನಕವಿಯು ವಾದಿರಾಜಕೃತ ಸಂಸ್ಕೃತ ಯಶೋಧರಚರಿತೆಯ ಆಧಾರದಿಂದ ಬರೆದಿದ್ದಾನೆ. ಇದು ಸುಮಾರು ೩೦೦ ಕಂದಪದ್ಯಗಳನ್ನು ಒಳಗೊಂಡ ನಾಲ್ಕು ಆಶ್ವಾಸಗಳಿಂದ ಕೂಡಿದೆ. ಅಭಯರುಚಿಯೆಂಬ ರಾಜಕುಮಾರನು 'ಹಿಂಸಾರಭಸಮತಿ'ಯಾಗಿದ್ದ ಮಾರಿದತ್ತನಿಗೆ ಧರ್ಮೋಪದೇಶಮಾಡಿ ಅವನನ್ನು ಸನ್ಮಾರ್ಗಕ್ಕೆ ತಂದುದು ಕಥೆಯ ತಿರುಳು, ಅಹಿಂಸಾಬೋಧನೆಗೆ ಮಾರಿದತ್ತನ ಕಥೆ ಅದ್ವಿತೀಯವಾದ ಹಿನ್ನೆಲೆಯನ್ನು ಒದಗಿಸಿದೆ ! ಸಮಸ್ತ ಸುಖಸಂತೋಷಗಳಿಗೆ

ಶೌರುಮನೆಯಾದ ವಸಂತಋತು ಮಾರಿದತ್ತನ ರಾಜ್ಯದಲ್ಲಿ ಭಯಂಕರವಾದ ಪ್ರಾಣಹಿಂಸೆಯ ಸೂಚಕವಾಗಿದೆ. ಆಕಾಶದಲ್ಲಿನ ಅರ್ಧ ಚಂದ್ರ ಪ್ರಾಣಿಗಳ, ನೆತ್ತಿಯಲ್ಲಿ ಚುಚ್ಚಿದ ಗಾಳದಂತಿದ್ದಾನೆ; ಚಿಗುರಿದ ಅಶೋಕವೃಕ್ಷ ಉರಿಯ ಉಯ್ಯಾಲೆಯಂತಿದೆ; ಕೋಗಿಲೆಯ ಧ್ವನಿ ಪ್ರಾಣಿಹತ್ಯೆಯಂದು ಮಾಡುವ ಮೂದಲೆಯಂತಿದೆ. ಈ ಪ್ರಕೃತಿ ವ್ಯಾಪಾರ ನಿಜ ಜೀವನದ ಪ್ರತಿಮೆ ಮಾತ್ರ. ಅದರ ಪ್ರತಿಕೃತಿ ಎದೆನಡುಗುವಂತಿದೆ. 'ಪಸಿದಕೃತಾಂತನ ಅಡುಗೆಯ ಮನೆಯಂತಿರುವ ಮಾರಿಯ ಗುಡಿಯಲ್ಲಿ–

ತಳಮನುಡಿದಿಡುವ, ಕಣ್ಣಂ । ಕಳೆದೇಱಿಪ, ಕರುಳ ತೋರಣಂಗಟ್ಟುವ ಕಾ
ಲ್ಗಳನುರಿಪಿ ನೆತ್ತರಾ ಕೂ । ೞ್ಗಳ ನಡುವ ವೀರರೆತ್ತೆ ನೋೞ್ಪಡಮದಱಿಕೂಳ್ ॥
ತಾಳುಗೆಯನುರ್ಚಿ ನೆತ್ತಿಯ । ಗಾಳಂ ಗಗನದೊಳೊಳೆಳಲ್ವ ವಾರಿಯ ಬೀರರ್
ಪಾಳಿಯೊಳೆಸೆದರ್ ಪಾಪದ । ಚೋಳದ ಬೆಳಸಿಂಗೆ ಬೆರ್ಚುಗಟ್ಟಿದ ತೆಱದಿಂ ॥

ಕುರಿಕೋಣಗಳನ್ನು ಅಸಂಖ್ಯಾತವಾಗಿ ಕೊಲ್ಲುತ್ತಿರುವಾಗ, ಅವುಗಳ ರೋದನದ ಪ್ರತಿಧ್ವನಿ ಅಡವಿಯೆ ಅಳುವಂತೆ ಕಾಣುತ್ತಿದೆ. ಅವುಗಳ ದುಃಖವನ್ನು ಕಂಡು ಭೂದೇವಿಯ ಎದೆ ಬಿರಿಯುವಂತಿದೆ. ಮಾರಿಯ ಮುಖ್ಯ ಭಕ್ತನಾದ ಮಾರಿದತ್ತ ಹಿರಿದ ಕತ್ತಿಯೊಡನೆ ಮನುಜಯುಗಳವನ್ನು ಬಲಿ ಕೊಡಲು ಕಾದ್ದಿದಾನೆ. ಆಗ ಅಭಯರುಚಿ, ಅಭಯಮತಿ ಎಂಬ ಎಳೆವರಯದ ಅಣ್ಣತಂಗಿಯರನ್ನು ಬಲಿಗಾಗಿ ಅಲ್ಲಿಗೆ ಎಳೆತರುತ್ತಾರೆ. ಅಭಯರುಚಿಯು ಸ್ವಲ್ಪವೂ ಅಳುಕದೆ 'ನೃಪವರ, ನಿರ್ಮಲ ಧರ್ಮದಿಂದೆ ಪಾಲಿಸು ಧರೆಯಂ' ಎಂದು ಮಾರಿದತ್ತನನ್ನು ಬಾಯ್ತುಂಬ ಹರಸುತ್ತಾನೆ. ಇದನ್ನು ಕಂಡು ಮಾರಿದತ್ತನಿಗೆ ಅತ್ಯಾಶ್ಚರ್ಯ.

ಕಿತ್ತ ಕರವಾಳ್ಗಮೆನಗಂ । ಮೃತ್ಯುವಿನಂತಿರ್ದ ಮಾರಿಗಂ ಬೆದಱದೆ ನಿಂ
ದರ್ತಿಯನೆ ನುಡಿದವರಿವರ ನೆ । ಗಳ್ತೆ ಕರಂ ಪಿರಿದು ಧೀರರಕಟ ಕುಮಾರರ್ ॥

ಎಂದುಕೊಂಡು, ನೀವಾರೆಂದು ಅವರನ್ನು ಕೇಳುತ್ತಾನೆ. ಆತ ತನ್ನ ಏಳು ಪೂರ್ವಭವಗಳ ಕಥೆಯನ್ನು ಹೇಳುತ್ತಾನೆ – ಅತ್ಯಂತ ಸುಂದರ ಸುಕುಮಾರನಾಗಿದ್ದು ಚಕ್ರವರ್ತಿಯಾಗಿದ್ದ ಯಶೋಧರನು, ತನ್ನ ಮಡದಿಯಾದ ಅಮೃತಮತಿ ಅಷ್ಟಾವಂಕನೆಂಬ ಮಹಾಕುರೂಪಿಯನ್ನು ಮೋಹಿಸಿ ಚಾರಿತ್ರಹೀನಳಾಗಲು, ಅತ್ಯಂತ ವೈರಾಗ್ಯಪರನಾಗುತ್ತಾನೆ. ಆತನ ಕಳೆಗೆಟ್ಟ ಮುಖವನ್ನು ಕಂಡ ತಾಯಿ ಚಂದ್ರಮತಿಯು ಮಗನ ಅಮಂಗಳ ನಿವಾರಣೆಗಾಗಿ ಹಿಟ್ಟಿನ ಕೋಳಿಯೊಂದನ್ನು ಮಗನ ಕೈಲಿ ಮಾರಿದೇವಿಗೆ ಬಲಿಕೊಡಿಸುತ್ತಾಳೆ. ಆ ವೇಳೆಗೆ ಆ ಕೃತಕ ಕೋಳಿಯಲ್ಲಿ ಹೊಕ್ಕಿದ್ದ ಬೆಂತರವು ಕೋಳಿಯನ್ನು ಕಡಿಯುತ್ತಲೆ 'ಕೊ ಕ್ಕೊ ಕೋ' ಎಂದು ಕೂಗಿಬಿಡುತ್ತದೆ. ಇದರಿಂದ ಜೈನನಾದ ಯಶೋಧರನು ತಪಸ್ಸಿಗೆ ಹೊರಡಲು ಸಿದ್ಧನಾಗುತ್ತಾನೆ. ಅಮೃತಮತಿ ಉಪಾಯದಿಂದ ವಿಷವಿಕ್ಕಿ ತಾಯಿಯನ್ನೂ ಮಗನನ್ನೂ ಕೊಂದುಹಾಕುತ್ತಾಳೆ. ಅವರು ಹಲವು ಜನ್ಮಗಳನ್ನೆತ್ತಿ, ಪಡಬಾರದ ಸಂಕಟಗಳನ್ನು ಅನುಭವಿಸಿ, ಕಡೆಗೆ ಅಭಯರುಚಿ ಅಭಯಮತಿಗಳಾಗಿ ಹುಟ್ಟುತ್ತಾರೆ. ಈ ಕಥೆಯನ್ನು ಕೇಳಿದ ಮಾರಿದತ್ತನು ತನ್ನ ರಾಜ್ಯದಲ್ಲಿ ಪ್ರಾಣಿಹಿಂಸೆಯನ್ನು ನಿಲ್ಲಿಸಿ ತಾನೂ ಧರ್ಮಪರನಾಗುತ್ತಾನೆ.

ಜನ್ನಕವಿಯು ತನ್ನ 'ಯಶೋಧರಚರಿತ್ರೆಯ'ಯ ಕಥೆಯ ಮೂಲಕ ಮಾನವ ಜನಾಂಗಕ್ಕೊಂದು ದಿವ್ಯಸಂದೇಶವನ್ನು ನೀಡಿದ್ದಾನೆ – 'ಮನಸಿಜನ ಮಾಯೆ ವಿಧಿವಿಳಸನದ ನೆರಂಬಡೆಯೆ ಕೊಂದು ಕೂಗದೆ ನರರಂ ?' ಮನ್ಮಥನ ಮಾಯೆಗೆ ದುರ್ವಿಧಿಯ ನೆರವೂ ಸಿಕ್ಕಾಗ ಅದು ಮನುಷ್ಯನನ್ನು ಕೊಂದುಕೂಗುತ್ತದೆ ಎಂದು. ಕಾಮದ ಕೇಡನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿರುವ ಈ ಕಾವ್ಯ ಮೂಲದ ಭಾಷಾಂತರವೇನೂ ಅಲ್ಲ, ಮೂಲಕಥೆಯ ಕಂಕಾಳಕ್ಕೆ ಕವಿ ತನ್ನದೆ ಆದ ಬಣ್ಣವನ್ನು ತುಂಬಿದ್ದಾನೆ.

ಇಲ್ಲಿನ ಪದ್ಯಗಳು ಭಾವಪರಿಪುಷ್ಟಿಯಿಂದ ತುಂಬಿತುಳುಕುತ್ತವೆ. ಆತನ ಶೈಲಿಯಲ್ಲಿ ಸರಳತೆ ಸೌಲಭ್ಯ ಲಾಲಿತ್ಯಗಳಿವೆ; ಪಾತ್ರಗಳು ಜೀವಪೂರ್ಣವಾಗಿವೆ. ಅದರಲ್ಲಿಯೂ ಅಮೃತಮತಿಯ ಪಾತ್ರದಲ್ಲಿ ಆತ ಅತ್ಯಂತ ಕುಶಲಕಲೆಗಾರನಾಗಿದ್ದಾನೆ. ಅವಳ ಕಾಮ ದುರದೃಷ್ಟದ ಹುಚ್ಚುಹೊಳೆಗೆ ಸಿಕ್ಕ ಹುಲ್ಲುಕಡ್ಡಿಯಂತೆ ಅಸಹಾಯಕವಾಗಿ ಹೋಗಿದೆ. ಆ ದುರಂತವ್ಯಕ್ತಿಯನ್ನು ಕಂಡು ನಾವು ಮರುಗುತ್ತೇವೆ, ನಿಡುಸುಯ್ಯುತ್ತೇವೆ; ಅದೃಷ್ಟದ ದುರ್ಭರಶಕ್ತಿಯನ್ನು ಕಂಡು ನಡುಗುತ್ತೇವೆ.

ಕವಿಯ ಎರಡನೆಯ ಕಾವ್ಯವಾದ 'ಅನಂತನಾಥಪುರಾಣ' ಹದಿನಾಲ್ಕನೆಯ ತೀರ್ಥಂಕರನಾದ ಅನಂತನಾಥನ ಕಥೆ. ಸುಮಾರು ೧೪೦೦ ಪದ್ಯಗಳನ್ನು ಒಳಗೊಂಡ ೧೪ ಆಶ್ವಾಸಗಳ ಚಂಪೂಗ್ರಂಥ. ಈ ಜಾತಿಯ ಇತರ ಜೈನಪುರಾಣಗಳಂತೆ ಇಲ್ಲಿಯೂ ತೀರ್ಥಂಕರನ ಭವಾವಳಿಗಳೂ ಪಂಚಕಲ್ಯಾಣಗಳೂ ಸಂಪ್ರದಾಯ ರೀತಿಯಲ್ಲಿ ವರ್ಣಿತವಾಗಿವೆ. ಕವಿಯು ಬಹುಶಃ ಈ ಕಾವ್ಯಕ್ಕೆ 'ಮಹಾಕಾವ್ಯ'ದ ಪಟ್ಟವನ್ನು ಕಟ್ಟುವುದಕ್ಕೆ ಹೊರಟೋ ಏನೋ, ತನ್ನ ಪಾಂಡಿತ್ಯವನ್ನೆಲ್ಲ ಇದಕ್ಕೆ ಧಾರೆಯೆರೆದಿದ್ದಾನೆ. ಇದರ ಫಲವಾಗಿ ಕಾವ್ಯ ಬಿರುಸಾಗಿ, ಔಚಿತ್ಯಕ್ಕೆ ಕುಂದು ಬರುವಷ್ಟು ಅಷ್ಟಾದಶವರ್ಣನೆಗಳ ಹಾವಳಿ ನಡೆದಿದೆ. ತೀರ್ಥಂಕರನಾಗಬೇಕಾದ ಅನಂತನಾಥ ವೇಶ್ಯಾವಾಟಿಯಲ್ಲಿ ಚಂದ್ರಿಕಾವಿಹಾರಕ್ಕೆ ಹೊರಟಿದ್ದಾನೆ. ಈ ಕಾವ್ಯವನ್ನು 'ಬಾಳಬಟ್ಟೆಯ ಪರಮಾಗಮ' ಎಂದು ಕರೆದಿರುವ ಕವಿ ಶೃಂಗಾರವರ್ಣನೆಗೆ ಒಂದು ಮಿತಿ ಹಾಕಿಕೊಂಡಿದ್ದರೆ ಚೆನ್ನಾಗಿರುತ್ತಿತ್ತು. ಕವಿ 'ಸೊಬಗಿನ ಮದನ' ಬಾಲಕಿಯರ ಹರಿದಾಡುವ ಕೈಗಳಿಂದ ಹರಿದ ಉಡುಗೆ, ವ್ಯಾಕುಲಮತಿಯರ ದರಶನಕ್ಕೆ ಒಳಗಾದ ಮೌಂಜಿ, ಭದ್ರೆಯರು ಎಳೆದುಕೊಂಡು ಉಡುವುದನ್ನು ಕಲಿಸುವಿಕೆ; ಹೆಂಗಸರು ಕಚ್ಚಿಕಚ್ಚಿ ಅವನ ಮೈಲಿ ಎಳ್ಳಿಡುವಷ್ಟು ಜಾಗವನ್ನು ಕೂಡಾ ಬಿಟ್ಟಿರಲಿಲ್ಲವಂತೆ! ಇಂತಹ 'ಸುರತವಿಲಾಸಿ' ಶೃಂಗಾರ ನಿರೂಪಣೆಗಾಗಿ ತನ್ನ ಪ್ರತಿಭೆಯನ್ನು ವಿನಿಯೋಗಿಸುವುದು ಸಹಜವಾದರೂ ಈ ಸಂದರ್ಭದಲ್ಲಿ ಅನುಚಿತ.

ಅನಂತನಾಥಪುರಾಣದ ಅಂತ್ಯದಲ್ಲಿ ಬರುವ ಬಲದೇವ, ವಾಸುದೇವರ ಪೂರ್ವಜನ್ಮ ಕಥೆ ಕಾವ್ಯದೃಷ್ಟಿಯಿಂದ ಮುಖ್ಯಕಥೆಗಿಂತಲೂ ಹೆಚ್ಚು ರಮ್ಯವಾಗಿದೆ. ಮಹಾಪುರಾಣದಲ್ಲಿ ೪-೫ ಪದ್ಯಗಳು ಮಾತ್ರವಿರುವುದನ್ನು ಜನ್ನ ಕವಿ ಇಲ್ಲಿ ವಿಸ್ತರಿಸಿದ್ದಾನೆ. ವಾಸುದೇವನಾಗಲಿರುವ ಸುಷೇಣ ಪೌದನಪುರದ ರಾಜ. ಸುರಸುಂದರಿಯಾದ ಆತನ ಪತ್ನಿ ಸುನಂದೆಯನ್ನು ರಾಜನ ಗೆಳೆಯನಾದ ಚಂಡಶಾಸನನು ಮೋಹಿಸಿ, ಅವಳನ್ನು ಎತ್ತಿಕೊಂಡು ಹೋಗುತ್ತಾನೆ. ಆದರೆ ಆಕೆ ವಶಳಾಗದೆ ಸತ್ತು ಹೋಗಲು. ಚಂಡಶಾಸನನು ಅವಳ ಕಳೇಬರದೊಡನೆ ಸಹಗಮನ ಮಾಡುತ್ತಾನೆ. ಇಲ್ಲಿನ ಮಿತ್ರ ದ್ರೋಹವೂ ಸುನಂದೆಯ ಪಾತಿವ್ರತ್ಯವು ಹೃದಯಂಗಮವಾಗಿ ವರ್ಣಿತವಾಗಿವೆ. ಪತಿವ್ರತೆಯಾದ ಹೆಣ್ಣು ಗಂಡನೊಡನೆ ಸಹಗಮನ ಮಾಡುವುದು ಹಿಂದೆ ನಮ್ಮಲ್ಲಿದ್ದ ಲೋಕರೂಢಿ. ಗಂಡಸು ಹೆಣ್ಣಿನೊಡನೆ ಸಹಗಮನ ಮಾಡುವಂತೆ ನಿಯೋಜಿಸಿರುವುದು ಜನ್ನನ ಕೃತಿಜಗತ್ತಿನಲ್ಲಿ ಮಾತ್ರವೇ.

ಜನ್ನಕವಿಯ ಕಾವ್ಯಗಳಲ್ಲಿ ಬರುವ ನಾಯಕಿಯರನ್ನು ಮಾತ್ರವೇ ದೃಷ್ಟಿಯಲ್ಲಿಟ್ಟುಕೊಂಡು ಹೇಳುವುದಾದರೆ ಅಲ್ಲಿನ ಇಬ್ಬರಲ್ಲಿಯೂ ಅಜಗಜಾಂತರ ವ್ಯತ್ಯಾಸವಿದೆ. ಅಮೃತಮತಿ ಕೇವಲ ಸಂಗೀತವನ್ನು ಕೇಳಿಯೇ ತನ್ನ ಮನಸ್ಸನ್ನು ಅನ್ಯಪುರುಷನಿಗೆ 'ಪಸಾಯದಾನಂಗೊಟ್ಟಳ್' ಅಷ್ಟವಂಕನಂತಹ ಭಯಂಕರ ಕುರೂಪಿಯ ವರ್ಣನೆಯನ್ನು ಕೇಳಿಯೇ ಅವಳ ಮನಸ್ಸು ಜಿಹಾಸೆಗೊಳ್ಳಬೇಕಾಗಿತ್ತು. ಅದಕ್ಕೆ ಬದಲಾಗಿ 'ಪೊಲ್ಲಮೆಯೇ ಲೇಸುನಲ್ಲರ ಮೆಯ್ಯೊಳ್' ಎಂಬ ವಿತರ್ಕವನ್ನು ಹೂಡಿ, ಮನ್ಮಥನಂತಹ ಗಂಡನಿರುವಾಗ ಆ ಹೊಲಸು ದುರ್ನಾತದ ಬದಗನನ್ನು ಕಂಡಮೇಲೂ, ಅವನಲ್ಲಿ ಅನುರಕ್ತಳಾದಳು; ಅರಸಿಕನಾದ ಅವನು ಸಾಯಬಡಿದರೂ ಹೊಲಸಿನಲ್ಲಿ

ಹೊರಳಾಡುವ ಹುಳದಂತೆ ಅವನಲ್ಲಿ ವ್ಯವಹರಿಸಿದಳು. ಇದು ಕೇವಲ ಅಸ್ವಾಭಾವಿಕವಾಗಿದೆ. ಕವಿ ಇದನ್ನು 'ವಿಧಿವಿಳಸನ'ವೆಂದು ಕರೆದಿದ್ದಾನೆ. ಸುನಂದೆಯ ಬಾಳಕಥೆ ಇದರಿಂದ ಭಿನ್ನವಾದುದು. ಆಕೆ ಪರಪುರುಷನನ್ನು ಕಣ್ಣೆತ್ತಿಯೂ ಕಂಡವಳಲ್ಲ. ತನ್ನನ್ನು ಕರೆದೊಯುವನನ್ನು ನಿರ್ದಾಕ್ಷಿಣ್ಯವಾಗಿ ಬೈದು, ಖಂಡಿಸಿ, ಕೊನೆಗೂ ಅವನ ವಶಳಾಗದೆ ಮೃತ್ಯುವನ್ನಪ್ಪಿ ಪಾತಿವ್ರತ್ಯತದ ಪತಾಕೆಯನ್ನು ಗಗನಕ್ಕೆ ಹಾರಿಸಿದವಳು.

ನಾಯಕಿಯರ ಪಾತ್ರಗಳಲ್ಲಿ ಈ ವಿಸದೃಶ ಕಂಡುಬಂದರೂ ಎರಡೂ ಕಾವ್ಯಗಳಲ್ಲಿರುವ ಮೂಲತತ್ವ ಒಂದೇ-ಕಾಮದ ಕೇಡು. ಒಂದೇ ನಾಣ್ಯದ ಎರಡು ಮುಖಗಳಂತಿರುವ ಈ ಕಾಮಜೀವನ ಎರಡು ಕತೆಯಲ್ಲಿಯೂ ಕಟ್ಟು ಹರಿದ ಪಂಜಿನಂತೆ ಉಲ್ಬಣಗೊಂಡಿದೆ. ಇವೆರಡರಲ್ಲಿ ಚಂಡಶಾಸನ ಪ್ರಣಯ ಅಮೃತಮತಿಯ ಪ್ರಣಯಕ್ಕಿಂತಲೂ ಹೆಚ್ಚು ಸ್ವಾಭಾವಿಕವಾಗಿದೆ. ಅವನು ತನ್ನ ಜೀವನ ಗೆಳೆಯನ ಹೆಂಡತಿಯನ್ನು ಮೋಹಿಸಿ ಮಿತ್ರ ದ್ರೋಹ ಮಾಡಿದನಾದರೂ, ತಾನು ಮಾಡುತ್ತಿರುವುದು ಅನ್ಯಾಯವೆಂದು ತಿಳಿಯದೆ ಹೋಗಿಲ್ಲ. ಗೆಳೆಯನಾದ ಸುದರ್ಶನನೊಡನೆ 'ಈ ಕಡುನಂಟನ ಸತಿಯ ರೂಪು ಸೋಲಿಸಿತೆನ್ನಂ' ಎಂದು ಮಿಡುಕುತ್ತಾನೆ. ಈ ಪಾಪಿ ಸುದರ್ಶನನ ಪ್ರೋತ್ಸಾಹವಿಲ್ಲದಿದ್ದರೆ ಅವನ ಕಾಮ ಅಷ್ಟು ಉಲ್ಬಣಿಸುತ್ತಿತ್ತೋ ಇಲ್ಲವೊ ! ಅವನ ಪ್ರೇಮ ಕಳಂಕಪೂರಿತವಾದುದಾದರೂ ನಿಶ್ಚಲವಾದುದು. ಸುನಂದೆಯೊಡನೆ ಸಹಗಮನ ಮಾಡುವಷ್ಟು ನಿಶ್ಚಲವಾಗಿದೆ, ಅವನ ಪ್ರೇಮ. ಅವನು ತಪ್ಪಿತಸ್ಥನಾದರೂ ಅವನ ದುರಂತವನ್ನು ಕಂಡು ನಮಗೆ ಕನಿಕರ ಹುಟ್ಟುತ್ತದೆ.

ಗಂಡು ಹೆಣ್ಣಿನ ಸಮಸ್ಯೆ ಅನಾದಿ, ಅನಂತ ಮೋಹಕ್ಕೆ ತುತ್ತಾದ ಮನುಷ್ಯ ಪಾತ್ರಗಳನ್ನಾಗಲಿ, ಮಾನ ಮರ್ಯಾದೆಗಳನ್ನಾಗಲಿ, ಪಾಪಪುಣ್ಯಗಳನ್ನಾಗಲಿ ಲೆಕ್ಕಿಸುವುದಿಲ್ಲ. ಅದು ಮದ್ದಿಲ್ಲದ ದೌರ್ಬಲ್ಯ. ಇವನ್ನು ಕುರಿತು ಕವಿ ಜಗತ್ತಿಗೆ ನೀಡುವ ಸಂದೇಶವಿಷ್ಟೆ- 'ಮನಸಿಜನ ಮಾಯೆ ವಿಧಿ ವಿಳಸನವ ನೆರಂಬಡೆಯ ಕೊಂದು ಕೂಗದೆ ನರರಂ ?'

೧೧. ಸೋಮರಾಜ (ಕ್ರಿ.ಶ. ೧೨೨೫)

ಈತನು ವೀರಶೈವ ಶರಣರಲ್ಲಿ ಒಬ್ಬನಾದ ಉದ್ಧಟನ ಕಥೆಯನ್ನು ೧೨ ಆಶ್ವಾಸಗಳ ಚಂಪೂರೂಪದಲ್ಲಿ ಬರೆದಿದ್ದಾನೆ. ತನ್ನ ಕಾವ್ಯದ ಇಂಪು ಚಂದ ಮರೀಚಿಯಂತೆ, ತನಿಮಾವಿನ ಪಣ್ಗಳ ತಂದಲಂತೆ, ನವಚಂಪಕಮಂಜರಿಯಂತೆ, ಬುಧರನ್ನು ಬಗೆಗೊಳ್ಳುವುದೆಂದು ಕವಿ ಹೇಳಿಕೊಂಡಿದ್ದಾನೆ. ಇಲ್ಲಿನ ಕಥೆಯ ತಿರುಳು ಶಿವಭಕ್ತಿಯಾದರೂ ಅದು ಹರಡಿಕೊಂಡಿರುವುದು ಪ್ರಣಯದ ಚಪ್ಪರದ ಮೇಲೆಯೆ. ಕಥಾನಾಯಕನಾದ ಉದ್ಭಟದೇವನು ಗುಜರಾತ ದೇಶದ ಭಲ್ಲಕೀಪುರದ ದೊರೆ. ಈತನು ಹಂಪೆಯಲ್ಲಿದ್ದ ದೇವಲ ಋಷಿಯ ಆಹ್ವಾನದಂತೆ ಹಂಪೆಗೆ ಹೋಗಿ, ಅಲ್ಲಿದ್ದ ನಿಘರ್ಬಾಸುರನನ್ನು ಸಂಹರಿಸಿ ಹಿಂದಿರುಗುತ್ತಿರುವಾಗ ಬೇಡನ ಬಂಧನಕ್ಕೆ ಸಿಲುಕಿ ಸಾಯುವಂತಿದ್ದ ಗಿಳಿಯೊಂದನ್ನು ಬಂಧನದಿಂದ ಬಿಡಿಸಿ ಉಪಚರಿಸಲು ಅದು ತನ್ನ ಒಡತಿಯಾದ ಚೋಳ ರಾಜಕುಮಾರಿಗೆ ವರನನ್ನು ಅರಸುತ್ತಾ ಉದ್ಭಟರಾಜನಲ್ಲಿಗೆ ಹೊರಟಿದ್ದುದಾಗಿ ತಿಳಿಸಿತು. ರಾಜನು ಆ ಗಿಳಿಯ ಅಪೇಕ್ಷೆಯಂತೆ ಚೋಳ ರಾಜಕುಮಾರಿಯನ್ನು ಮದುವೆಯಾಗಿ, ಆಕೆಯೊಡನೆ ರಾಜಧಾನಿಗೆ ಹಿಂದಿರುಗಿದ. ಓಹಿಲನೆಂಬ ಶಿವಭಕ್ತನು ವಿಮಾನದಲ್ಲಿ ಕೈಲಾಸಕ್ಕೆ ಹೋದನೆಂಬುದನ್ನು ಕೇಳಿ, ಉದ್ಭಟನು ತನ್ನ ಹೆಂಡತಿಯೊಡನೆ ಪಂಥವನ್ನು ಕಟ್ಟಿ ಅದು ನೆರವೇರುವಂತೆ ಊರವರನ್ನೆಲ್ಲ ಕೈಲಾಸಕ್ಕೆ ಕರೆದೊಯ್ದ. ಇದು ಕಾವ್ಯ ಕಥೆ.

ಸೋಮರಾಜನ 'ಉದ್ಭಟದೇವನ ಕಥೆ'ಗೆ ಹರಿಹರನ 'ಉದ್ಭಟರಗಳೆ' ಮೂಲ. ಶೃಂಗಾರವೇ ಕಾವ್ಯದ ಸಾರವೆಂದು ಭಾವಿಸಿರುವ ಕವಿ ತನ್ನ ಕಾವ್ಯಕ್ಕೆ 'ಶೃಂಗಾರಸಾರ' ಎಂದು ಮತ್ತೊಂದು ಹೆಸರನ್ನೂ

ಕೊಟ್ಟಿದ್ದಾನೆ. ಹೆಸರಿಗೆ ತಕ್ಕಂತೆ ಶೃಂಗಾರ ಕಾವ್ಯದಲ್ಲಿ ತುಂಬಿ ತುಳುಕುತ್ತಿದೆ. ವೇಶ್ಯ ಗೃಹವರ್ಣನೆಯನ್ನು ಯಥಾವತ್ತಾಗಿ ಮಾಡಹೊರಟು ಶೃಂಗಾರವು ಸಾಕಷ್ಟು ಬಗ್ಗಡವಾಗಿಯೂ ಹೋಗಿದೆ. ಆದರೆ ಆತನ ಶೈಲಿ ಲಲಿತವಾಗಿದೆ. ಕೆಲವು ಕಡೆ ಆತನ ವರ್ಣನೆಯಲ್ಲಿ ನಾವೀನ್ಯತೆಯೂ ಇದೆ. ವರ್ಷಾಕಾಲದ ವರ್ಣನೆ ಇದು –

ಗಗನಾಂಗನೆ ಕುಡುಮಿಂಚೆಂ ।
ಬುಗುರ್ಗೊನೆಯಿಂ ಮುಗಿಲೆನಿಪ್ಪ ಮುಡಿಯಂ ಪಿಕ್ಕಲ್ ॥
ಮಿಗೆ ಮುಂ ತುಱುಂಬಿದೊಳ್ಳಲ ।
ರುಗವಪ್ಪೊಲುದಿರ್ದತ್ತು ಕರನಿಕರಮದಿಳೆಯೊಳ್ ॥

ಎಂಬಲ್ಲಿ ಕವಿಯ ಕಲ್ಪನೆ ಮನೋಹರವಾಗಿದೆ. ಕವಿಯು ತನ್ನ ಕಾವ್ಯಕ್ಕೆ ಪಂಪಾಧಿಪತಿ ನಾಯಕನೆಂದೂ, ಗುರು ಅಲ್ಲಮಾಂಕನ ದಯೆಯಿಂದ ತನ್ನ ಕೃತಿಯನ್ನು ಬರೆದಿರುವೆನೆಂದೂ ಹೇಳಿಕೊಂಡಿದ್ದಾನೆ. ಈತನು ಅಲ್ಲಮನನ್ನು ಸ್ತುತಿಸುತ್ತಾ–

ಶಿವನೆಂದುತ್ತಮ ಶೈವರಂಬುರು ಹರಿಗೆತ್ತು ತಾಂ ವೈಷ್ಣವರ್
ಹವಿರನ್ನ ಪ್ರಿಯನೆಂದು ಭೂಮಿದಿವಿಜರ್ ಜೈನರ್ಜಿನಂಗೆತ್ತು ತ
ಮ್ಮ ವನೆಂದರ್ಚಿಸಲೊಲ್ವು ಸರ್ವಮುಖದಿಂ ಪೂಜೆಗೊಂಡಾವಗಂ
ಸುವಿಲಾಸಂಬಡಿದೊಪ್ಪುವಲ್ಲಮನೆ ಬೆಚ್ಚಿಕ್ಕೆನ್ನ ಚಿತ್ತಾಬ್ಜದೊಳ್

ಇಲ್ಲಿ ಕಾಣಬರುವ ಸಮನ್ವಯದೃಷ್ಟಿ ಸ್ತೋತ್ರಾರ್ಹವಾದುದು.

ಸೋಮರಾಜನು ಚಂದ್ರವಂಶಕ್ಕೆ ಸೇರಿದ ಇಂದುಶೇಖರ ರಾಜನ ಮಗ; ಪಶ್ಚಿಮತೀರದ ಸಣ್ಣ ರಾಜ್ಯವೊಂದಕ್ಕೆ ದೊರೆಯಾಗಿದ್ದಿರಬಹುದೆಂಬ ಊಹೆ ಇದೆ.

೧೨. ಎರಡನೆಯ ನಾಗವರ್ಮ (ಕ್ರಿ.ಶ. ೧೨೨೫)

'ಹರಿವಂಶ', 'ಶೂದ್ರಕ'ಗಳನ್ನು ಬರೆದ ನಾಗವರ್ಮನ ತರುವಾಯ ಬಂದ ಎರಡನೆಯ ನಾಗವರ್ಮನು 'ಪುಷ್ಪದಂತಪುರಾಣ' ಮತ್ತು 'ಚಂದ್ರನಾಥಷ್ಟಕ'ಗಳನ್ನು ಬರೆದಿದ್ದಾನೆ. ೧೩ನೆಯ ಶತಮಾನದ ಪೂರ್ವಾರ್ಧದಲ್ಲಿದ್ದ ವಜ್ರದೇವ ಮಹಾರಾಜನ ಆಸ್ಥಾನದ ಕೋವಿದರು ತನ್ನ ಕವಿತಾ ಮಾಧುರ್ಯವನ್ನು ಸವಿಯ ಬಯಸಲಾಗಿ ಶಾಂತಿವರ್ಮ ದಂಡನಾಥನು ಅವರ ಪರವಾಗಿ ನಾಗವರ್ಮನನ್ನು ಪ್ರಾರ್ಥಿಸಿದನಂತೆ ! ವಿಷ್ಣು ಸಮುದ್ರರಾಜನಿಗೆ ತನ್ನನ್ನೇ ಅರ್ಪಿಸಿ ಲಕ್ಷ್ಮಿಯನ್ನೂ ಕೌಸ್ತುಭಮಣಿಯನ್ನೂ ಪಡೆದಂತೆ ಶಾಂತಿವರ್ಮನು ತನ್ನನ್ನೇ ನಾಗವರ್ಮನಿಗೆ ಅರ್ಪಿಸಿಕೊಂಡು ಕೀರ್ತಿಯನ್ನೂ ಕವಿಕೃತಿಕನ್ನಿಕೆಯಾದ 'ಪುಷ್ಪದಂತ ಪುರಾಣ'ವನ್ನೂ ಪಡೆದನಂತೆ. ಕೃತಿ ಕವಿಯ ಮಗಳು. ಅದನ್ನು ಪಡೆದ ಶಾಂತಿವರ್ಮ ಕವಿಯ ಅಳಿಯ. ಇದು ಕವಿಪ್ರೋಕ್ತ ಪುಷ್ಪದಂತಪುರಾಣೋತ್ಪತ್ತಿಯ ಕಥೆ.

'ಪುಷ್ಪದಂತಪುರಾಣ'ವು ಒಂಬತ್ತನೆಯ ತೀರ್ಥಂಕರನ ಚರಿತ್ರೆ. ತನ್ನ ಈ ಕಾವ್ಯವು ಸುಕವಿಗಳೆಂಬ ದುಂಬಿಗಳಿಗೆ ಮಾವಿನ ಗೊಂಚಲು, ಕುಕವಿಗಳೆಂಬ ದುಂಬಿಗಳಿಗೆ ಸಂಪಿಗೆಯ ಗೊಂಚಲು; ಆದ್ದರಿಂದ ಸುಕವಿಗಳು ಮುತ್ತಿಗೊಳ್ಳುತ್ತಾರೆ, ಕುಕವಿಗಳು ಓಡಿಹೋಗುತ್ತಾರೆ–ಎಂಬುದು ಕವಿಯ ಹೇಳಿಕೆ. ಈ ಗ್ರಂಥದಲ್ಲಿ ಕಥೆಯು ಇಲ್ಲವೆನ್ನುವಷ್ಟು ಅತ್ಯಲ್ಪವಾದ ಕಥೆ. ಅದನ್ನು ಕವಿ ೧೪ ಆಶ್ವಾಸಗಳಷ್ಟು ಹಿಗ್ಗಲಿಸಿದ್ದಾನೆ. ಅಲ್ಲದೆ ಇದಕ್ಕೆ 'ಮಹಾಕಾವ್ಯ'ದ ತಲೆಚೀಟಿ ಬೇರೆ. ಆದ್ದರಿಂದ ಕಾವ್ಯವೆಲ್ಲ ವರ್ಣನೆಗಳಿಂದ ತುಂಬಿಹೋಗಿದೆ. ವೃತ್ಯನುಪ್ರಾಸ ಯಮಕಾದಿ ಶಬ್ದಾಲಂಕಾರಗಳೂ ಇಲ್ಲಿ ವಿಜೃಂಭಿಸುತ್ತಿವೆ. ಇಲ್ಲಿರುವುದೆಲ್ಲ ಬರಿಯ ಚರ್ವಿತಚರ್ವಣ. ಕವಿಯು ತನ್ನ ಕಾವ್ಯದಲ್ಲಿ

ಶಾಂತರಸವೇ ಪ್ರಧಾನವೆಂದೂ ಮುಂದಾದರದವರಿಗಾಗಿ ಮಕ್ಕಳಿಗೆ ಸಕ್ಕರೆ ಸೇರಿಸಿ ಔಷಧ ಕೊಡುವಂತೆ – ಶೃಂಗಾರವನ್ನು ಇಲ್ಲಿ ತಂದಿರುವೆನೆಂದೂ ಕವಿ ಹೇಳಿಕೊಂಡಿದ್ದಾನೆ. ನಿಜ, ಈತನ ಶೃಂಗಾರ ನಿರೂಪಣೆಯಲ್ಲಿ ರಸ ಹೋಗಲಿ, ರಸಾಭಾಸಕೂಡ ಇಲ್ಲ. 'ಕತೆ ಕಿಱಿದಾದೊಡಂ ಕಥೆಯ ನಾಯಕನುನ್ನತ ವಂಶವೀರ್ಯ ಮಹಿಮಾಪ್ರಪಂಚ'. ಆದ್ದರಿಂದ ಕಾವ್ಯವನ್ನು ಗೌರವಿಸಬೇಕಂತೆ ! ಆಗಬಹುದು.

ಚಂದ್ರನಾಥಾಷ್ಟಕದಲ್ಲಿ ಸ್ರಗ್ಧರಾವೃತ್ತದ ೯ ಪದ್ಯಗಳಿವೆ. ಕವಿಯು ಗಂಭೀರವಾದ ಶೈಲಿಯಲ್ಲಿ ಜಿನಭಕ್ತಿಯನ್ನು ಹಾಡಿದ್ದಾನೆ, ಇದರಲ್ಲಿ.

೧೩. ಕಮಲಭವ (ಕ್ರಿ.ಶ. ೧೨೨೫)

೧೩ನೇ ಶತಮಾನದ ಮಧ್ಯಭಾಗದಲ್ಲಿ ಈ ಕವಿ 'ಶಾಂತೀಶ್ವರಪುರಾಣ'ವನ್ನು ೧೬ ಆಶ್ವಾಸಗಳಲ್ಲಿ ಹಬ್ಬಿಸಿ ಬರೆದಿದ್ದಾನೆ. ತನ್ನ ಕವಿತಾಸಾರವು ಅಮೃತ ಸಾರದ ಹೊಳೆ, ಮನ್ಮಥನ ಮೋಹನಾಸ್ತ್ರ ರಮಣೀಯ ಗಾನ, ಪ್ರೇಯಸಿಯ ಕೂಡ ಇತ್ಯಾದಿಯಾಗಿ ಕವಿ ಹೆಮ್ಮೆಯಿಂದ ಹೇಳಿಕೊಂಡಿದ್ದಾನೆ. ಆ ಮಾತು ಅತಿಶಯೋಕ್ತಿಯಾದರೂ, ಇದೇ ವಸ್ತುವನ್ನು ಬಳಸಿ ಬರೆದಿರುವ ಕವಿಚಕ್ರವರ್ತಿ ಪೊನ್ನನಿಗಿಂತ ಕಾವ್ಯಶಕ್ತಿಯಲ್ಲಿ ಮೇಲು. ಧರ್ಮನಿರೂಪಣೆಯಲ್ಲಿ ಪೊನ್ನನ ಪ್ರಶಸ್ತಿಯನ್ನು ಕಿತ್ತುಕೊಳ್ಳುವಂತಿಲ್ಲವಾದರೂ, ಕಮಲಭವನ ಶೈಲಿ ಸರಳ ಲಲಿತವಾಗಿದೆ. ಆದರೆ ಕಥೆಯಲ್ಲಿ ನೂತನತೆಯೇನೂ ಇಲ್ಲ, ಎಲ್ಲವೂ ಚರ್ವಿತಚರ್ವಣ – ಅದೇ ಪಂಚಕಲ್ಯಾಣಗಳು, ಅದೇ ಅಷ್ಟಾದಶವರ್ಣನೆ. ಈ ಪುರಾಣದಲ್ಲಿ ಬರುವ ಅಶ್ವಗ್ರೀವನ ಕಥೆ ರಮ್ಯವಾಗಿದೆ.

೧೪. ಆಂಡಯ್ಯ (ಕ್ರಿ.ಶ. ೧೨೨೫)

'ಲೆಕ್ಕಿಗರ ಪಿರಿಯ'ನೆಂದು ಖ್ಯಾತಿವೆತ್ತ ಆಂಡಯ್ಯನ ಮೊಮ್ಮಗ ಕವಿ ಆಂಡಯ್ಯ. ಅಜ್ಜ ಆಂಡಯ್ಯನ ಮೂವರು ಮಕ್ಕಳಲ್ಲಿ ಹಿರಿಯನಾದ ಸಾಂತ ಮತ್ತು ಅವನ ಮಡದಿ ಬಲ್ಲವ್ವೆ ಇವರ ಮಗ ಕವಿ ಆಂಡಯ್ಯ. ಈತನ ಕನ್ನಡದ ಅಭಿಮಾನ ಲೋಕೋತ್ತರವಾದುದು. ಸ್ವಲ್ಪವೂ ಸಂಸ್ಕೃತವನ್ನು ಬೆರೆಸದೆ ಅಚ್ಚಗನ್ನಡದಲ್ಲಿ ರಚಿಸಿದ್ದಾನೆ ಈತ, ತನ್ನ 'ಕಬ್ಬಿಗರ ಕಾವ'ವನ್ನು. ಹಿಂದಿನ ಕವಿಗಳಾರೂ ಸಂಸ್ಕೃತಪದಗಳನ್ನು ಬಳಸದೆ ಕನ್ನಡದಲ್ಲಿ ಕಾವ್ಯವನ್ನು ಸೃಷ್ಟಿಸಲಾರರೆಂಬ ಒಂದು ಅಪವಾದವನ್ನು ನಿರಾಕರಿಸುವುದಕ್ಕಾಗಿಯೆ ಈ ಕಾವ್ಯವನ್ನು ಬರೆದು, ಇದಕ್ಕೆ 'ಕಬ್ಬಿಗರ ಕಾವ' – ಕವಿಗಳ ರಕ್ಷಕ – ಎಂದು ನಾಮಕರಣ ಮಾಡಿದನೊ ಏನೊ ! ಇದು ರಮ್ಯವಾಗಿರುವುದರಿಂದ ಇದಕ್ಕೆ 'ಸೊಬಗಿನ ಸೋನೆ'– 'ಸೌಂದರ್ಯದ ತುಂತುರು' ಎಂಬ ಹೆಸರೂ ಬಂದಿದೆ. ಪಂಡಿತಕವಿಗಳ ಪುರಾಣಕಾವ್ಯಗಳಲ್ಲಿ ಬರುವ ಚರ್ವಿತಚರ್ವಣವನ್ನು ಓದಿ ಬೇಸತ್ತ ಮನಸ್ಸಿಗೆ ಆಂಡಯ್ಯನು ತನ್ನ ಕಾವ್ಯದ ಮೂಲಕ ಹೊಸ ಉತ್ಸಾಹವನ್ನು ನೀಡುತ್ತಾನೆ.

'ಕಬ್ಬಿಗರ ಕಾವ' ಕಥೆ ಕವಿಯ ಸ್ವಕಪೋಲಕಲ್ಪಿತ. ಕರ್ವುವಿಲ್ಲನು (ಕಾಮ) ತನ್ನ ಮಡದಿ ಇಚ್ಚೆಗಾರ್ತಿ (ರತಿ)ಯೊಡನೆ ಕಂಪಿನ ಪೊಳಲಲ್ಲಿ ರಾಜ್ಯಭಾರ ಮಾಡುತ್ತಿರಲು ಶಿವನು ಚಂದ್ರನನ್ನು ಸೆರೆಹಿಡಿದಿರುವನೆಂದು ಸುದ್ದಿ ಬರುತ್ತದೆ. ಕುಪಿತನಾದ ಕರ್ವುವಿಲ್ಲನು ಶಿವನ ಮೇಲೆ ದಂಡೆತ್ತಿ ಹೋಗಿ, ತನ್ನ ಬಾಣಪ್ರಯೋಗದಿಂದ ಅವನನ್ನು ಅರೆವೆಣ್ಣಾಗಿ ಮಾಡುತ್ತಾನೆ. ಕೋಪಗೊಂಡ ಶಿವನು ಶಪಿಸಲು ಕರ್ವುವಿಲ್ಲನು ಹೆಂಡತಿಯಿಂದ ಅಗಲಿ ಸ್ವಸ್ವರೂಪ ಜ್ಞಾನವಿಲ್ಲದೆ 'ಪೂವಿನ ಪೊಳಲ'ಲ್ಲಿ 'ನನೆಯೆಂಬ' ಹೆಸರಿನಿಂದ ರಾಜ್ಯವಾಳುತ್ತಿರುತ್ತಾನೆ. ಒಮ್ಮೆ ಆತನು ತನ್ನ ಉದ್ಯಾನದಲ್ಲಿ ಅಪ್ಸರಸ್ತ್ರೀಯೊರ್ವಳನ್ನು ಕಂಡು, ಅವಳಿಂದ ಪೂರ್ವವೃತ್ತಾಂತವನ್ನೆಲ್ಲ ಕೇಳಿದೊಡನೆಯೆ ಶಾಪ ವಿಮೋಚನೆಯಾಗುತ್ತದೆ. ಹೆಂಡತಿಯೊಡನೆ ಸುಖವಾಗಿರುತ್ತಾನೆ. ಕರ್ವುವಿಲ್ಲ ಶಿವನನ್ನು ಗೆದ್ದುದೇ

ಇಲ್ಲಿನ ಕಥಾವಸ್ತುವಾದುದರಿಂದ ಈ ಕಾವ್ಯಕ್ಕೆ 'ಕಾವನಗೆಲ್ಲ' ಎಂಬ ಮತ್ತೊಂದು ಹೆಸರೂ ಇದೆ. ಸಂಸ್ಕೃತ ತಿಳಿದವರು ಇದನ್ನು 'ಮದನವಿಜಯ' ಎಂದು ಕರೆಯುತ್ತಾರೆ. ಇದಕ್ಕೆ 'ಸಂಸ್ಕೃತ ಸಹೋದರಿ' ಎಂಬ ಮತ್ತೊಂದು ಹೆಸರೂ ಇದೆ.

'ಕಬ್ಬಿಗರ ಕಾವ'ದ ಕಥೆ ಪ್ರಾರಂಭವಾಗುವುದು ಕರ್ವುವಿಲ್ಲ ಶಿವನ ಶಾಪದಿಂದ ನನೆಯೆಂಬನಾಗಿದ್ದ ಸಂದರ್ಭದಿಂದ. ಆಗ ಅವನಿದ್ದುದ್ದು ಕನ್ನಡ ನಾಡಿನಲ್ಲಿ ಎಂದು ಕಲ್ಪಿಸಿಕೊಂಡಿರುವ ಕವಿ ತನ್ನ ತಾಯ್ನಾಡನ್ನು ಮುಕ್ತಕಂಠದಿಂದ ಹೊಗಳಿದ್ದಾನೆ. ಇಷ್ಟು ಸುಂದರವಾಗಿ ತನ್ನ ತಾಯ್ನಾಡನ್ನು ಹೊಗಳಿರುವವರಲ್ಲಿ ಪಂಪನನ್ನು ಬಿಟ್ಟರೆ ಈತನೇ ಎರಡನೆಯವನು. ಸಹಸ್ರ ನಾಲಗೆಗಳುಳ್ಳ ಆದಿಶೇಷನಿಗೆ ಕೂಡ ಈ ನಾಡನ್ನು ವರ್ಣಿಸಲು ಸಾಧ್ಯವಿಲ್ಲವಂತೆ ! 'ಮಲ್ಲಿಗೆಯಲ್ಲದೆ, ಸಂಪಿಗೆಯಲ್ಲದೆ, ದಾಳಿಂಬಮಲ್ಲದೆ, ಚೆಂದೆಂಗಲ್ಲದೆ, ಮಾವಲ್ಲದೆ, ಕೌಂಗಲ್ಲದೆ' ಬೇರೆ ಗಿಡಮರಗಳೇ ಅಲ್ಲಿ ಇಲ್ಲವಂತೆ ! ಕೋತಿಗಳು ಕೆಡವಿದ ತೆಂಗಿನಕಾಯಿಯ ಎಳನೀರಿನಿಂದಲೇ ಅಲ್ಲಿನ ವನವೆಲ್ಲ ಬೆಳೆಯುತ್ತದಂತೆ ! ಭತ್ತದ ಗದ್ದೆಗಳಂತೂ ತೆನೆಯ ಭಾರದಿಂದ ನೆಲಕ್ಕೆ ಬಾಗಿ 'ಉಱುಕಾಯ್ದ ಬಿಸಿಲೊಳೆಮ್ಮಂ ಮೆಱಿದುಂ ಕೊರಗಿಸದೆ ಪೊರೆದುದೆಂದೊಲವಿಂ ಬಂದೆರಗುವವೊಲ್' ಭೂದೇವಿಗೆ ನಮಸ್ಕರಿಸುತ್ತಿರುವಂತೆ ಕಾಣುತ್ತಿವೆ. ಅಲ್ಲಿನ ನೀರಹಕ್ಕಿಗಳು ಪರಸ್ಪರ ಕಾದಾಡಿ ನೀರೆರಚಿದುದರಿಂದ ಗಾಳಿ ಅದರಲ್ಲಿ ನೆನೆದು ಮೆತ್ತಗೆ ಬೀಸುತ್ತದೆಯಂತೆ ! ವೀಳೆಯದಲೆ ಬಳ್ಳಿಗಳು ಹಬ್ಬದ ಗಿಡವಿಲ್ಲ, ಕೊಳಗಳಿಲ್ಲದ ತೋಟವಿಲ್ಲ, ಗಂಡುಕೋಗಿಲೆಗಳಿಲ್ಲದ ಮರವಿಲ್ಲ, ಕಾಲುವೆಗಳಿಲ್ಲದ ತೊರೆಗಳಿಲ್ಲ, ದುಂಬಿಗಳಿಲ್ಲದ ಪುಷ್ಪಗಳಿಲ್ಲ, ಹಂಸಗಳಿಲ್ಲದ ಕೊಳವಿಲ್ಲ, ರತಿಸುಖವಿಲ್ಲದ ವೇಶ್ಯೆಯಿಲ್ಲ, ಕೀರ್ತಿವಂತರಲ್ಲದ ಮಾನವರಿಲ್ಲ ! ಕನ್ನಡನಾಡಿನ ಜನಜೀವನ ಮಧುರವಾಗಿದೆ. ಮನೋಹರವಾಗಿದೆ, ರಸಮಯವಾಗಿದೆ, ನಾಡು ತುಷ್ಟಿಪುಷ್ಟಿಗಳಿಂದ ತುಂಬಿ ಇಲ್ಲಿನ ಜನ ರಸಿಕರಾಗಿ ತುಂಬು ಜೀವನವನ್ನು ಬಾಳುತ್ತಿದ್ದರೆಂದು ಕವಿ ಸೂಚಿಸಿದ್ದಾನೆ.

ಕವಿಯ ಕಥಾಕಟ್ಟಡ, ಸನ್ನಿವೇಶ ರಚನೆಗಳಲ್ಲಿ ಮಹೋನ್ನತವಾದುದೇನೂ ಇಲ್ಲ. ಆದರೆ ಕವಿಯ ಕಾವ್ಯಲ್ಲಿರುವ ಲಾಲಿತ್ಯಮಾಧುರ್ಯಗಳು ಮನೋಜ್ಞವಾಗಿದೆ. ಶಿವನ ಮೇಲೆ ಮನ್ಮಥ ಬಾಣಬಿಟ್ಟಾಗ ತೊರೆ, ಬನ, ಬೆಟ್ಟ, ಹೊಲ, ಬಾನು, ದೆಸೆಗಳೆಲ್ಲ ಜಲಕ್ಕನೆ ಆಲರಿಂದ ಸಮೆಗವೊಲ್, ಆಯಿತಂತೆ ! ಮನ್ಮಥನ ಬಾಣಗಳ ಪ್ರಭಾವದಿಂದ ಜಗತ್ತೆಲ್ಲವೂ ಬಾಯಿ ಬಿಡುವಂತೆ ಹೂ ಬಾಣಗಳು ಹಾರಿಬಂದವಂತೆ ! ಅವು ಅಪ್ಸರೆಯರ ಕಣ್ಣ ಕಾಂತಿಯೊ, ನಕ್ಷತ್ರಗಳ ಬೆಳಕೊ, ಮಿಂಚಿನ ಗೊಂಚಲೊ, ಹಾದಿತಪ್ಪಿದ ಚಂದ್ರನ ಕಿರಣಗಳೊ ಎಂಬಂತೆ ಬಂದು ಶಿವನ ಹಣೆ, ಕೆನ್ನೆ ಅಂಗೈ, ತೊಡೆ, ತೋಳುಗಳ ಮೇಲೆ ಬಿದ್ದವಂತೆ ! ಆಗ 'ತೊಟ್ಟನೆ ಮಾದೇವಿಯರ ಸನರೆವೆಣ್ಣಾದಂ' ಶಿವನು ಅರ್ಧನಾರೀಶ್ವರನಾದುದೂ, ಚಂದ್ರನು ಹಣೆಯಲ್ಲಿ ಧರಿಸಿದುದೂ ಕವಿಯ ಕಲ್ಪನೆಯಲ್ಲಿ ಎಂತಹ ರೂಪವನ್ನು ತಳೆದಿದೆ !

ಶಿವನ ಶಾಪದಿಂದ ಗಂಡನನ್ನು ಅಗಲಿದ ರತಿದೇವಿ ವಿರಹತಾಪದಿಂದ ನೊಂದು ಕೆಂದಳಿರ ಹಾಸಿಗೆಯಲ್ಲಿ ಹೊರಳಾಡುತ್ತಾ, ಗಂಡನು ಎಂದು ಹಿಂದಿರುಗುವನೆಂದು ಗಿಳಿಯನ್ನು ಮೇಲಿಂದ ಮೇಲೆ ಕೇಳುತ್ತಾಳೆ. ಅಷ್ಟೇ ಅಲ್ಲ, 'ಹೇ ಗಿಳಿ, ನಿನಗೆ ತನಿವಣ್ಣನು ಲಂಚ ಕೊಡುತ್ತೇನೆ; ಎಲೆ ದುಂಬಿ, ನಿನಗೆ ಹೂಗೊಂಚಲನ್ನು ಕೊಡುತ್ತೇನೆ ನನ್ನ ಪ್ರಾಣಪ್ರಿಯನನ್ನು ತಂದುಕೊಡಿ' ಎಂದು ಅಂಗಲಾಚುತ್ತಾಳೆ. ಕೊನೆಗೊಮ್ಮೆ ಗಂಡ ಬಂದನೆಂದು ಕೇಳುತ್ತಲೇ ಧಾವಿಸಿ, ಗಂಡನನ್ನು ನೋಡುತ್ತಾಳೆ. ಆಗ ಅವಳ ದೃಷ್ಟಿ-

ಅಡಿಯಂ ಬಳ್ವಿಡಿದುವು ನು ಣ್ಣೊಡೆಯಂ ಪಿಡಿಕಿಸಿದ್ದು ವಡರ್ದು ಕಾವನ ತೋಳಂ
ಬಿಡಿದಪ್ಪಿದುವಂದಾಕೆಯ ಕೊಡಕೆವರಂ ನಿಮಿರ್ದು ಪೊಳೆವ ತುಱುಗೆಮೆ ಗಣ್ಗಳ್ ॥

ಬಿರಿದೊಳ್ದಾವರೆಗಂಪಂ। ಕೊರಲುದ್ದಂ ಪೀರ್ವ ತುಂಬಿಯೆನೆ ನೀಱನ ಚೆ
ಲ್ವೊರೆದ ಸವಿದುಟಯನೊಲವಿಂ। ಬರೆಪೀರ್ದುವು ನೋಡವಿಚ್ಚೆಗಾರ್ತಿಯ ಕಣ್ಗಳ್‌॥

ಪ್ರೇಮಾಧಿದೇವತೆಯರಾದ ಅವರ ಸಮ್ಮಿಳನ ವರ್ಣನಾತೀತವಾದುದು.

ಆಂಡಯ್ಯನು ಜೈನಕವಿ. ಆತನು ತನ್ನ ಧರ್ಮದ ಹಿರಿಮೆಯನ್ನು ಮುಗಿಲೆತ್ತರಕ್ಕೆ ಏರಿಸಲು ಹೊರಟಿದ್ದಾನೆ. ಶಿವನನ್ನು ಒಂದೇ ಹೊಡೆತದಿಂದ ಅರೆವೆಣ್ಣಾಗಿ ಮಾಡಿದ ಮಹಾಶೂರನಾದ ಮನ್ಮಥ ಸಾಮಾನ್ಯ ಸವಣನೊಬ್ಬನ ಮಹಿಮೆಯನ್ನು ಕೇಳುತ್ತಲೇ ಗಡಗಡ ನಡುಗಿ ಭಕ್ತಿಯುಕ್ತನಾಗುತ್ತಾನೆ. ಆ ಸವಣನ ತಪೋಮಹಿಮೆ ಎಂತಹುದಿರಬೇಕು ? ಇನ್ನು ಸ್ವತಃ ತೀರ್ಥಂಕರನ ಮಹಿಮೆ ಎಂತಹುದಿರಬೇಕು ? ಶಿವನಿಗೂ ಜಿನನಿಗೂ ಅಜಗಜಾಂತರ ! ಆದರೆ ಇದನ್ನು ಕವಿ ವಾಚ್ಯವಾಗಿ ಹೇಳುವುದಿಲ್ಲ. ಪರಮತದ ಅವಹೇಳನ ಮಾಡದೆ ಸ್ವಮತದ ಮಹಿಮೆಯನ್ನು ಎತ್ತಿ ಹಿಡಿದಿರುವ ಆಂಡಯ್ಯನ ಜಾಣ್ಮೆ ಮೆಚ್ಚತಕ್ಕದ್ದು.

'ಕಬ್ಬಿಗರ ಕಾವ'ವು ಐತಿಹಾಸಿಕ ಘಟನೆಯೊಂದರ ನಿರೂಪಣವೆಂದು ಶ್ರೀಮಾನ್ ಮುಳಿಯ ತಿಮ್ಮಪ್ಪಯ್ಯನವರು ಹೇಳುತ್ತಾರೆ. 'ಕನ್ನಡ ಮೆನಿಪ್ಪಾನಾಡು ಚೆಲ್ವಾಯ್ತು' ಎಂಬ ಕವಿಯ ಹೇಳಿಕೆಯನ್ನಿಟ್ಟುಕೊಂಡು 'ಕನ್ನಡ' ಎಂಬ ಹೆಸರಿನ ನಾಡೊಂದು ಇದ್ದಿರಬೇಕೆಂದೂ, ಕದಂಬರಾಜನಾದ ಕಾಮದೇವನು ಹೊಯ್ಸಳರೊಡನೆ ಹೋರಾಡಿ ಗೆದ್ದುದು 'ಕಾಮನಗೆಲ್ಲ' ಕಥೆಯೆಂದೂ ಅವರು ಊಹಿಸಿದ್ದಾರೆ. ಇದು ವಿಚಾರಾರ್ಹವಾದುದು. ಕವಿವರ ಬೇಂದ್ರೆಯವರು ಈ ಕಾವ್ಯದಲ್ಲಿ ಕಾಮನ ಗೆಲುವು, ಕಾವ್ಯತತ್ವ ಶಿವನ ಗೆಲವು ಸೃಷ್ಟಿತತ್ವ, ಶ್ರವಣ ವಿರಕ್ತಿ ಮುಕ್ತಿ ತತ್ವ' ಎಂದು ಹೇಳಿ ಇದರಲ್ಲಿ ಒಂದು ತಾತ್ವಿಕ ಧ್ವನಿಯನ್ನು ಗುರುತಿಸಿದ್ದಾರೆ. ಇದರಲ್ಲಿ ಯಾವುದಿರಲಿ, ಇಲ್ಲದಿರಲಿ; ನಿಂತ ನೀರಾಗಿದ್ದ ಚಂಪುವಿಗೆ ಹೊಸದೊಂದು ಕಾಲುವೆಯನ್ನು ತೋಡಿ, ಅದನ್ನು ಬಳಸಿಕೊಳ್ಳಲು ಅನುವು ಮಾಡಿಕೊಟ್ಟ ಆಂಡಯ್ಯ ಅಭಿನಂದನೀಯ.

೧೫-೧೬. ಮಲ್ಲಿಕಾರ್ಜುನ, ಕೇಶಿರಾಜ (ಕ್ರಿ.ಶ. ೧೨೫೦)

'ಸೂಕ್ತಿಸುಧಾರ್ಣವ'ದ ಕರ್ತೃವಾದ ಮಲ್ಲಿಕಾರ್ಜುನನೂ, 'ಶಬ್ದಮಣಿ ದರ್ಪಣ' ಕರ್ತೃವಾದ ಕೇಶಿರಾಜನೂ ೧೩ನೆ ಶತಮಾನದ ಮಧ್ಯಭಾಗದಲ್ಲಿದ್ದ ತಂದೆ-ಮಕ್ಕಳು. ಮಲ್ಲಿಕಾರ್ಜುನನು- ಆತನನ್ನು ಮಲ್ಲ, ಮಲ್ಲಪ್ಪ ಎಂಬ ಹೆಸರುಗಳಿಂದಲೂ 'ಚಿದಾನಂದ' ಎಂಬ ಬಿರುದಿನಿಂದಲೂ ಕರೆಯಲಾಗಿದೆ - ತನ್ನ ಕಾಲದವರೆಗೆ ಬೆಳೆದುಬಂದಿದ್ದ ಕನ್ನಡ ಸಾಹಿತ್ಯದಿಂದ ಉತ್ತಮವಾದ ಪದ್ಯಗಳನ್ನು ಆಯ್ದು, ಸಂಕಲನ ಗ್ರಂಥವೊಂದನ್ನು ರಚಿಸಿದ್ದಾನೆ. ಈ ಗ್ರಂಥದಲ್ಲಿ ೧೯ ಆಶ್ವಾಸಗಳಿವೆ. ಮೊದಲನೆಯದಾದ ಪೀಠಿಕಾಶ್ವಾಸದಲ್ಲಿ ಆತನೆ ರಚಿಸಿದ ಹಲವು ಪದ್ಯಗಳು ದೊರೆಯುತ್ತವೆ; 'ರಸಜ್ಞರಾದ ಕವಿಗಳು ಸಭೆಯಲ್ಲಿ ತಾನು ಕವಿ, ಮುನಿಗಳ ಸಭೆಯಲ್ಲಿ ಮುನಿ, ವಿದ್ವಾಂಸರ ಸಭೆಯಲ್ಲಿ ಶ್ರೇಷ್ಠ ವಿದ್ವಾಂಸ' ಎಂದು ಆತ ತನ್ನನ್ನು ಸಂಭಾವಿಸಿಕೊಂಡಿದ್ದಾನೆ. ಆತನು ರಚಿಸಿರುವ ಕೆಲವು ಶಾಸನಪದ್ಯಗಳೂ ಅಲ್ಲಿ ದೊರೆಯುತ್ತವೆ. ಆದರೆ ಆತನು ಕಾವ್ಯಗಳನ್ನು ಬರೆದಿರುವುದಾಗಿ ಹೇಳಿಕೊಂಡಿಲ್ಲ. ಈವರೆಗೆ ಯಾವ ಕಾವ್ಯವೂ ಉಪಲಬ್ಧವಾಗಿಲ್ಲ. ಈತನ ಮಗನಾದ ಕೇಶಿರಾಜನು ತನ್ನ 'ಶಬ್ದಮಣಿದರ್ಪಣ'ದಲ್ಲಿ 'ಚೋಳಪಾಲ ಚರಿತ', 'ಸುಭದ್ರಾಹರಣ', 'ಪ್ರಬೋಧಚಂದ್ರ', 'ಕಿರಾತ', ಎಂಬ ಗ್ರಂಥಗಳನ್ನು ಬರೆದಿರುವುದಾಗಿ ಹೇಳಿಕೊಂಡಿದ್ದಾನೆ. ಆದರೆ ಅವುಗಳಲ್ಲಿ ಯಾವುದೊಂದೂ ಉಪಲಬ್ಧವಾಗಿಲ್ಲ. 'ಸೂಕ್ತಿ ಸುಧಾರ್ಣವ'ದ ಕೆಲವು ಪದ್ಯಗಳು 'ಚೋಳಪಾಲಚರಿತ'ದಿಂದ ತೆಗೆದುಕೊಂಡಿರಬಹುದೆಂದು ವಿದ್ವಾಂಸರು ಊಹಿಸುತ್ತಾರೆ. ಈ ವಿಚಾರದಲ್ಲಿ 'ಇದಮಿತ್ಥಂ' ಎಂದು ಹೇಳುವಂತಿಲ್ಲ. ಆ ಸಂಕಲನಗ್ರಂಥದಲ್ಲಿ ಈವರೆಗೆ ಸಿಕ್ಕದಿರುವ ಎಷ್ಟೋ ಕವಿಕಾವ್ಯಗಳಿಂದ

ಉದ್ಧರಿಸಿರುವ ಪದ್ಯಗಳಿವೆ. ಇವುಗಳಲ್ಲಿ ಈ ತಂದೆ ಮಕ್ಕಳ ಕಾವ್ಯಗಳಿಂದಲೂ ಆಯ್ದ ಪದ್ಯಗಳಿರಬಹುದು.

ಸೂಕ್ತಿಸುಧಾರ್ಣವದ ಪೀಠಿಕಾ ಸಂಧಿಯನ್ನು ಬಿಟ್ಟು, ಉಳಿದ ೧೮ ಆಶ್ವಾಸಗಳಲ್ಲಿ ೧೮ ಬಗೆಯಾದ ವರ್ಣನೆಗಳಿವೆ. ಸಂಸ್ಕೃತದಲ್ಲಿ ಇಂತಹ ಸಂಕಲನ ಗ್ರಂಥಗಳಿವೆ. ಕನ್ನಡದಲ್ಲಿ ಇದೇ ಮೊಟ್ಟಮೊದಲಿನದು. ಈ ಸಂಕಲನದಲ್ಲಿ ವೃತ್ತಕಂದಗಳಿಗೆ ಮಾತ್ರ ಅವಕಾಶ. ಹರಿಹರನ ಗಿರಿಜಾಕಲ್ಯಾಣದಿಂದ ಉದ್ಧೃತವಾದ ಪದ್ಯಗಳಿವೆ, ರಗಳೆಗಳಿಂದಿಲ್ಲ, ದೇಶೀ ಗ್ರಂಥಗಳಿಗೆ ಪುರಸ್ಕಾರವಿರಲಿಲ್ಲ ಎಂದು ಕಾಣುತ್ತದೆ ! ಈ ಸೂಕ್ತಿ ಸುಧಾರ್ಣವವು ಕನ್ನಡ ಸಾಹಿತ್ಯ ಚರಿತ್ರೆಯ ನಿರ್ಮಾಣಕ್ಕೆ ಅಮೂಲ್ಯವಾದ ಸಹಾಯವನ್ನು ನೀಡಿದೆ. ಇನ್ನೂ ಅಜ್ಞಾತದಲ್ಲಿರುವ, ಅಥವಾ ಸತ್ತೇ ಹೋಗಿರುವ ಎಷ್ಟೋ ಕವಿಕಾವ್ಯ ಭಾಗಗಳು ಇದರಲ್ಲಿ ಸಿಕ್ಕುತ್ತವೆ. ಇದಕ್ಕೂ ಹೆಚ್ಚಾಗಿ ಕವಿಕಾವ್ಯ ಕಾಲನಿರ್ಣಯಕ್ಕೆ ಇದೊಂದು ಮುಖ್ಯ ಆಧಾರ. ಇಲ್ಲಿನ ಉದಾಹರಣೆಗಳೆಲ್ಲ ಕ್ರಿ.ಶ. ೧೨೫೦ ಕ್ಕೂ ಹಿಂದಿನವು. ಮಲ್ಲಿಕಾರ್ಜುನನು ತನ್ನ ಸಂಕಲನಾಕಾರ್ಯದಲ್ಲಿ ಅಸಾಧಾರಣವಾದ ಪ್ರತಿಭೆ, ವಿವೇಕ, ರುಚಿಶುದ್ಧಿಗಳನ್ನು ಪ್ರದರ್ಶಿಸಿದ್ದಾನೆ. ಈ ಕಾರ್ಯದಲ್ಲಿ ಕೇಶಿರಾಜನೂ ಸಹಕರಿಸಬಹುದು. ಈ ಮೂಲಕ ಆತನು ಬರೆದ ವ್ಯಾಕರಣಕ್ಕೆ ಸೊಗಸಾದ ಪ್ರಯೋಗಗಳು ಸಿಕ್ಕಿದರೂ ಸಿಕ್ಕಿರಬಹುದು.

ಕೇಶಿರಾಜನ ಶಬ್ದಮಣಿದರ್ಪಣ ಸಪ್ರಮಾಣವಾದ ಹಳಗನ್ನಡದ ವ್ಯಾಕರಣ ಗ್ರಂಥ. ಇಲ್ಲಿನ ಸೂತ್ರಗಳೆಲ್ಲವೂ ಕೇಶಿರಾಜ ವಿರಚಿತ ಕಂದಪದ್ಯಗಳು. ಅವುಗಳ ವೃತ್ತಿಯನ್ನು ತಾನೇ ಬರೆದು. ಪೂರ್ವಕವಿ ಪ್ರಯೋಗಗಳನ್ನು ಉದಾಹರಣೆಯಾಗಿ ಕೊಡುತ್ತಾನೆ. ಕೇಶಿರಾಜನು ಒಳ್ಳೆಯ ಕವಿ ಎಂಬುದಕ್ಕೆ ಸರಳವಾಗಿ ನಿರರ್ಗಳವಾಗಿ ಹರಿದುಕೊಂಡು ಹೋಗುವ ಈ ಪದ್ಯಗಳೇ ಸಾಕ್ಷಿ. ಆತನು ರಸಜ್ಞನೆಂಬುವುದಕ್ಕೆ ಆತನ ಉದಾಹರಣೆಗಳೇ ಸಾಕ್ಷಿ. ಅವು ವ್ಯಾಕರಣಕ್ಕೆ ಕಾವ್ಯದ ಮೆರಗನ್ನು ಕೊಟ್ಟಿವೆ. ಆತನ ಪ್ರಾಮಾಣಿಕತನ ಸ್ತೋತ್ರಾರ್ಹವಾದುದು. ಪ್ರಮಾಣವಿಲ್ಲದೆ ಆತ ನಿಯಮ ರಚನೆಗೆ ಕೈ ಹಾಕ. ಕನ್ನಡ ಭಾಷಾ ಬುದ್ಧಿಯನ್ನು ಉಳಿಸಿಕೊಳ್ಳಲು ಆತನು ಕಳಕಳಿಯಿಂದ ಪ್ರಯತ್ನಿಸಿದ್ದಾನೆ. ಕನ್ನಡಕ್ಕೆ ಧಾತುಪಾಠವನ್ನು ಸೃಷ್ಟಿಮಾಡಿ ಕೊಟ್ಟ ಕೀರ್ತಿಯೂ ಆತನಿಗೆ ಸಲ್ಲಬೇಕು. ಸುಸಂಸ್ಕೃತವಾದ ಸಾರಸ್ವತ ವಾತಾವರಣದಲ್ಲಿ ಹುಟ್ಟಿ ಬೆಳೆದ ಆತನಿಗೆ ತನ್ನ ನಿಷ್ಕೃಷ್ಟಜ್ಞಾನದಲ್ಲಿ ಆತ್ಮಪ್ರತ್ಯಯ ತುಂಬಿದೆ. ತಾನು 'ನಡೆದುದೆ ಮಾರ್ಗಂ, ಪದವಿಡಲೊಡರಿಸಿದುದೆ ಭಂಗಿ, ಕೇಶವಂಗಿದಿರುಂಟೆ ?' ಎಂಬ ಹೇಳಿಕೆ ಅಹಂಕಾರಮೂಲವಾದುದಲ್ಲ, ಸರ್ವಸತ್ಯ. 'ನಿರುತಂ ಕರ್ಣಾಟದೊಳ್ ಪರಿಕಿಸೆ ಶಬ್ದಜ್ಞನಾವನೊರ್ವನೆ ಲೋಕಕ್ಕರಿವಲ್ತೆ ಭಾವು ಕವಿಕುಂಜರಿ ಕೇಶಿರಾಜ' ಎಂದು ಕವಿಮಲ್ಲ (ಕ್ರಿ.ಶ. ೧೪೦೦) ಈತನನ್ನು ಹೊಗಳಿರುವುದು ಸಾರ್ಥಕವಾಗಿದೆ.

೧೭. ಮಹಾಬಲ (ಕ್ರಿ.ಶ. ೧೨೫೪)

ಈತ ೨೨ನೇ ತೀರ್ಥಂಕರ ನೇಮಿನಾಥನ ಕಥೆಯನ್ನೊಳಗೊಂಡ 'ನೇಮಿನಾಥಪುರಾಣ'ವನ್ನು ೧೯ ಆಶ್ವಾಸಗಳಲ್ಲಿ ಹಬ್ಬಿಸಿದ್ದಾನೆ. ರಾಯಿದೇವ ರಾಜಿಯಕ್ಕ ಇವನ ತಂದೆ ತಾಯಿಗಳು, ಮೇಘಚಂದ್ರ ಧರ್ಮಗುರು, ಮಾಧವಚಂದ್ರ ವಿದ್ಯಾಗುರು. 'ಕ್ಷೇಮಂಕರ' ಎಂಬ ಬಿರುದುಳ್ಳ ಕೇತ ನಾಯಕನ ಅಪೇಕ್ಷೆಯಂತೆ ಕವಿಯು ಕೃತಿರಚನೆ ಮಾಡಿದನಂತೆ ! 'ಸಹಜಕವಿಮನೋಗೇಹಮಾಣಿಕ್ಯ ದೀಪ', 'ವಿಶ್ವವಿದ್ಯಾವಿರಿಂಚಿ' ಇವನ ಬಿರುದುಗಳು. ತನ್ನ ಕಾವ್ಯ 'ಎಳವೆಂಗಳಪಾಂಗಪ್ರಭೆ' ಇತ್ಯಾದಿಯಂತೆ ಮನೋಹರವೆನ್ನುತ್ತಾನೆ. ಅದು ಶುದ್ಧ ಸುಳ್ಳು ಹಳೆಯದು, ಕಾವ್ಯವೆಲ್ಲ ಚರ್ವಿತ ಚರ್ವಣ, ವರ್ಣನೆ ಕನಿಸಮಯಮಯ, ಔಚಿತ್ಯಕ್ಕೆ ಅಪೋಹ.

೧೮. ನರಹರಿತೀರ್ಥ (ಕ್ರಿ.ಶ. ೧೨೮೧)

ಹರಿದಾಸಪಂಥಕ್ಕೆ ಸೇರಿದ ಈತನ ಚರಿತ್ರೆಯನ್ನು 'ದಾಸಪಂಥ'ದ ಭಾಗದಲ್ಲಿ ಮುಂದೆ ಪ್ರಸ್ತಾಪಿಸಲಾಗಿದೆ.

೧೯. ಚೌಂಡರಸ (ಕ್ರಿ.ಶ. ೧೩೦೦)

'ದಶಕುಮಾರಚರಿತೆ', 'ನಳಚರಿತ್ರೆ' ಎಂಬ ಎರಡು ಚಂಪೂಕಾವ್ಯಗಳನ್ನು ರಚಿಸಿದ್ದಾನೆ. ಈತ. ತಂದೆ ಮಧುಸೂದನ, ತಾಯಿ ಮಲ್ಲವ್ವೆ, ಮಡದಿ ಲಕ್ಷ್ಮಿ, ಅಣ್ಣ 'ಸರಸಕವೀಶ್ವರ' ತನ್ನ 'ದಶಕುಮಾರಚರಿತೆ'ಯ ಪ್ರಾರಂಭದಲ್ಲಿ ವಿಟ್ಠಲನನ್ನು ಸ್ತೋತ್ರಮಾಡಿರುವುದರಿಂದಲೂ, ಆ ಕಾವ್ಯದ ನಾಯಕನನ್ನು ಫಂಡರಾಪುರಕ್ಕೆ ಕರೆತಂದು ವಿಠಲನನ್ನು ಸ್ತೋತ್ರಮಾಡಿಸಿರುವುದರಿಂದಲೂ ಈತನು ಫಂಡರಾಪುರದವನೆಂದು, ಅಥವಾ ಈ ಪ್ರಾಂತದವನೆಂದು ಊಹಿಸಲು ಅವಕಾಶವಿದೆ.

'ದಶಕುಮಾರಚರಿತೆ' ಸಂಸ್ಕೃತದ ಉದ್ದಾಮಕವಿ ದಂಡಿಯ ಕಾವ್ಯದಿಂದ ಕನ್ನಡಕ್ಕೆ ಎತ್ತಿಕೊಂಡುದು. ಕಥೆಯೇ ಪ್ರಧಾನವಾದ, ಸರಗಥೆಯನ್ನು ಒಳಗೊಂಡ ಈ ಕಾವ್ಯದಲ್ಲಿ ಹತ್ತುಜನ ರಾಜಕುಮಾರರ ಕಾಮರಾಜ್ಯವಿಹಾರ ವರ್ಣಿತವಾಗಿದೆ. ಗಂಡುಹೆಣ್ಣುಗಳ ಭೋಗ ಸಂಭೋಗ ದೃಷ್ಟಿಯೆ ಇಲ್ಲಿ ಎದ್ದು ಕಾಣುತ್ತವೆ. ಕಥನಕುತೂಹಲವೇ ಮುಖ್ಯ ಪ್ರಯೋಜನವಾದ ಕಾವ್ಯದಲ್ಲಿ ಬಿರುಸಾದ ಭಾಷಾಶೈಲಿಗಳು ಬಂದಾಗ ಕಡಲೆ ಮುಕ್ಕ ಹೊರಟವನಿಗೆ ಕಲ್ಲುಹರುಳುಗಳು ಸಿಕ್ಕಂತಾಗುತ್ತದೆ. ಮೂಲದಲ್ಲಿ ಸಂಕ್ಷೇಪವಾಗಿ ಸಾರವತ್ತಾಗಿರುವುದನ್ನು ಚೌಂಡರಸ ಹಿಗ್ಗಲಿಸುತ್ತಾನೆ. ಗುಂಭವಾಗಿ ಹೇಳಿರುವುದನ್ನು ವಿವರಿಸುತ್ತಾನೆ; ಹೆಣ್ಣಿನ ಆಪಾದಮಸ್ತಕ ವರ್ಣನೆಯನ್ನು ವಿವರವಿವರವಾಗಿ ವರ್ಣಿಸಹೊರಟು, ನಮ್ಮ ಅಭಿರುಚಿಯನ್ನೆಲ್ಲ ಆಹುತಿ ತೆಗೆದುಕೊಳ್ಳುತ್ತಾನೆ. ಔಚಿತ್ಯವಿಲ್ಲದ ವರ್ಣನೆ, ಭಾವಕ್ಕೆ ತಕ್ಕುದಲ್ಲದ ಭಾಷೆ, ರುಚಿಶುದ್ಧಿಯಿಲ್ಲದ ಅಭಿರುಚಿ – ಇವು ಈ ಕಾವ್ಯದ ಸ್ವರೂಪ. 'ನಾನು ಯಾವುದನ್ನು ಕುತೂಹಲದಿಂದ ವರ್ಣಿಸಿದರೂ ಅದು ಹರಿಸ್ತೋತ್ರ' ಎಂಬ ನಿಲುವು ಆತನಿಗೆ. ಕವಿಗೆ ಕಥನಶಕ್ತಿಯೆ ಇಲ್ಲವೆಂದಲ್ಲ, ಕಥೆಗಳನ್ನೂ ಬಿಡಿಬಿಡಿಯಾಗಿ ತೆಗೆದುಕೊಂಡು, ಕಥನೈಕದೃಷ್ಟಿಯಿಂದ ನೋಡಿದಾಗ ವಿಚಿತ್ರವಾಗಿ, ರಮ್ಯವಾಗಿರುವ ಕೆಲವು ಕಥೆಗಳು ಸಿಕ್ಕುತ್ತವೆ. ಧೂಮಿನಿಯ ಕಥೆ, ಮರೀಚಿಋಷಿಯ ಕಥೆ ಮೊದಲಾದವು ಸುಷ್ಠುವಾದ ಕವಿದೃಷ್ಟಿಯಿದ್ದಿದ್ದರೆ ಅದ್ಭುತವಾದ ರುದ್ರಕಾವ್ಯಗಳಾಗಬಹುದಾಗಿತ್ತು. ಸಹಸ್ರ ಪದ್ಯಗಳ ಕಾವ್ಯದಲ್ಲಿ ಕಗ್ಗತ್ತಲೆಯ ಮಧ್ಯದ ಮಿಂಚು ಹುಳುಗಳಂತೆ, ಸುಂದರವಾದ ವರ್ಣನೆಗಳು ಸಿಕ್ಕುತ್ತವೆ.

'ನಳಚರಿತ್ರೆ' ಆಶ್ವಾಸವಿಭಾಗಗಳೇನೂ, ಇಲ್ಲದೆ ಸುಮಾರು ೮೦೦ ಪದ್ಯಗಳಲ್ಲಿ ಹರಡಿರುವ ಚಂಪೂಕಾವ್ಯ. ಇಲ್ಲಿಯೂ ವರ್ಣನೆಗಳ ಹಾವಳಿ ಇದ್ದರೂ ಕಥಾವಸ್ತುವಿನ ದೃಷ್ಟಿಯಿಂದ ಶ್ರೇಷ್ಠವಾಗಿದೆ.

೨೦. ನಾಗರಾಜ (ಕ್ರಿ.ಶ. ೧೩೩೧)

ಈತನ ತಂದೆ ವಿವೇಕವಿಟ್ಠಲದೇವ, ತಾಯಿ ಭಾಗೀರಥಿ, ಸೋದರ ತಿಪ್ಪರಸ, ಗುರು ಅನಂತವೀರ ಕೇವಲಿ. 'ಭಾರತೀಭಾಳನೇತ್ರ', 'ಸರಸ್ವತೀಮುಖತಿಲಕ' ಎಂಬವು ಆತನ ಬಿರುದುಗಳು. ತನ್ನ ಗುರುವಿನ ಅಪ್ಪಣೆಯಂತೆ ಸಗರದ ನಗರದವರಿಗಾಗಿ ಈತ 'ಪುಣ್ಯಾಸ್ರವ'ವನ್ನು ರಚಿಸಿದ. ತನ್ನ ಮಾತುಗಳ ಬೆಡಗು ಕಲ್ಲುಸಕ್ಕರೆಯ ಸವಿಯನ್ನು ವಿದ್ವಾಂಸ ಸಮೂಹದ ಕಿವಿಗೆ ಎರೆಯಬಲ್ಲುದಂತೆ! ಇದು ನಿಜ. ಈ ಗ್ರಂಥದಲ್ಲಿ ಪೂಜೆ, ಗುರೂಪಾಸ್ತಿ, ಸ್ವಾಧ್ಯಾಯ, ಸಂಯಮ, ದಾನ, ತಪಸ್ಸು – ಎಂಬ ಗೃಹಸ್ಥ ಧರ್ಮದ ವಿವರಣೆ ಇದೆ; ಆ ಧರ್ಮಗಳನ್ನು ಆಚರಿಸಿ ಸ್ವರ್ಗಾಪವರ್ಗವನ್ನು ಪಡೆದ ಪುಣ್ಯಪುರುಷರ ಕಥೆಗಳಿವೆ. ಇವು ಜೈನಧರ್ಮದ ಶ್ರೇಷ್ಠತೆಯನ್ನು ಸಂಸ್ಥಾಪಿಸುತ್ತವೆ.

ವಡ್ಡಾರಾಧನೆಯಲ್ಲಿರುವ ಕಥೆಗಳಲ್ಲಿ ಕೆಲವು ಇಲ್ಲಿ ಇವೆ. ಕಥಾನಿರೂಪಣೆಯಲ್ಲಿ ಕೌಶಲವಿದೆ; ಸರಳವಾದ, ಲಲಿತವಾದ, ದೇಶೀಶೈಲಿ; ವರ್ಣನೆಗಳಲ್ಲಿ ನೈಜತೆ ಕಂಡುಬರುತ್ತದೆ.

೨೧. ಬಾಹುಬಲಿಪಂಡಿತ (ಕ್ರಿ.ಶ. ೧೩೫೨) ಮತ್ತು

೨೨. ಮಧುರ ಕವಿ (ಕ್ರಿ.ಶ. ೧೩೮೫).

ಈ ಇಬ್ಬರು ಕವಿಗಳೂ ೧೫ನೆಯ ತೀರ್ಥಂಕರನಾದ ಧರ್ಮನಾಥನ ಪುರಾಣವನ್ನು ಬರೆದಿದ್ದಾರೆ; 'ಉಭಯಭಾಷಾಚಕ್ರವರ್ತಿ' ಬಿರುದಾಂಕಿತ ಬಾಹುಬಲಿಯದು ೧೬ ಆಶ್ವಾಸಗಳ ಪ್ರೌಢಗ್ರಂಥ. ಮಧುರಕವಿಯ ಗ್ರಂಥದಲ್ಲಿ ನಾಲ್ಕು ಆಶ್ವಾಸಗಳು ಮಾತ್ರ ಉಪಲಬ್ಧವಾಗಿದೆ. ಆತನು ವಿಜಯನಗರದ ಹರಿಹರರಾಜನ ಆಸ್ಥಾನದಲ್ಲಿ ಕವಿಯಾಗಿದ್ದನೆಂದು ತೋರುತ್ತದೆ. ಆಸ್ಥಾನದಲ್ಲಿ ಪೋಷಾಕನ್ನು ಧರಿಸಿದಾಗ ಮೈಯೆಲ್ಲ ಶಕ್ತಿ ಸಂಚಾರವಾಗಿಯೊ ಏನೊ, ಆತ ತನ್ನನ್ನು ಅತಿಶಯವಾಗಿ ಹೊಗಳಿಕೊಂಡಿದ್ದಾನೆ. 'ತನ್ನಾಣೆ ಗೋಸಣೆ ಸಲ್ಗುಂ ಸುಕವೀಂದ್ರಸಭೆಯೊಳ್, ತಾನೆಂದೊಡಮ್ಮಮ್ಮ ಧಾರುಣಿಯೊಳ್ ಕೇಳ್ದಱಿಯಾ, ಜಡ, ಮಧುರನಂ? ನಿರ್ಣೀತ ಕರ್ಣಾಟಲಕ್ಷಣ ಭಾಷಾ ಕವಿರಾಜನಂ, ಪ್ರವಿಸಲದ್ವಾಣೀಮುಖಾಂಭೋಜನಂ!' ಬಂಡವಾಳಕ್ಕಿಂತ ಬಡಾಯಿ ಹೆಚ್ಚಾಗಿದೆ. ಈ ಕವಿಗಳಿಬ್ಬರೂ ಹಿಡಿದಿರುವ ಹಾದಿ ಸಂಪ್ರದಾಯಶೀಲವಾದುದೇ. ಜೈನಪುರಾಣಗಳ ಅದೇ ಪಡಿಯಚ್ಚು, ಅದೇ ಪ್ರೌಢಿಮೆ, ಅದೇ ವರ್ಣನಾವೈಖರಿ. ಆದರೆ ಮಧುರನ ವರ್ಣನೆಗಳಲ್ಲಿ ಸ್ವಲ್ಪಮಟ್ಟಿಗೆ ಸಹಜತೆಯಿದೆ; ಈತನ ಕಾವ್ಯದಿಂದ ಅಭಿನವವಾದಿವಿದ್ಯಾನಂದನು ತನ್ನ ಸಂಕಲನ ಗ್ರಂಥಕ್ಕೆ ಪದ್ಯಗಳನ್ನು ಆಯ್ದುಕೊಂಡಿದ್ದಾನೆ. ಈತನೇ ಜೈನಚಂಪೂ ಪುರಾಣಕರ್ತರಲ್ಲಿ ಕಡೆಯವ.

೨೩. ಮಂಗರಾಜ (ಕ್ರಿ.ಶ. ೧೩೬೦)

'ಖಗೇಂದ್ರಮಣಿದರ್ಪಣ'ವೆಂಬ ವಿಷವೈದ್ಯ ಗ್ರಂಥವನ್ನು ಬರೆದ ಮಂಗೇಶನು ತಾನು ಹೊಯ್ಸಳದೇಶದ ದೇವಳಿಗೆಯ ನಾಡಿನ ಮುಗುಳಿಪುರದ ಅಧಿಪನೆಂದೂ, ಪೂಜ್ಯಪಾದನ ಶಿಷ್ಯನೆಂದೂ, ಆತನಿಗೆ ಕಾಮಲತೆ ಎಂಬ ಹೆಂಡತಿ ಮತ್ತು ಮೂವರು ಮಕ್ಕಳಿದ್ದರೆಂದು ತನ್ನ ಗ್ರಂಥದಲ್ಲಿ ಹೇಳಿಕೊಂಡ್ಡಿದಾನೆ. ವಿಜಯನಗರದರಸ ಹರಿಹರನನ್ನು ಹೊಗಳಿರುವುದರಿಂದ ಆ ರಾಜನ ಸಮಕಾಲೀನ ಇದ್ದರೂ ಇರಬಹುದು. 'ಸುಲಲಿತಕವಿಪಿಕ ವಸಂ', 'ವಿಭುವಂಶಲಲಾಮ' ಎಂಬುವು ಆತನ ಬಿರುದುಗಳು. ಇತರ ಕವಿಗಳಂತೆ ನೀರಾಟ, ಸೂಳೆಯರು, ಹೆಂಡ, ಕಾಮಕೇಳಿ, ವಾಟರು – ಇತ್ಯಾದಿಗಳನ್ನು ಕೊಂಡಾಡಿ ಬೆಂಡಾಗದೆ, ಸರ್ವಜನೋಪಕಾರಿಯಾದ ಮಂತ್ರೌಷಧಿ ಹೇಳುತ್ತಿರುವವನು ದೇವಸಮಾನನಂತೆ ! ವೈದ್ಯ ಮೋಕ್ಷಸಾಧನವಂತೆ ! ಔಷಧದಿಂದ ಆರೋಗ್ಯ, ಆರೋಗ್ಯದಿಂದ ದೇಹ, ದೇಹದಿಂದ ಜ್ಞಾನ, ಜ್ಞಾನದಿಂದ ಮೋಕ್ಷ ಎಂಬುದು ಈತನ ವಿಚಾರ ಸರಣಿ. ಸ್ಥಾವರ ಮತ್ತು ಜಂಗಮ – ಈ ಎರಡು ಬಗೆಯಾದ ವಿಷಕ್ಕೂ ಈತ ಔಷಧವನ್ನು ಸೂಚಿಸಿದ್ದಾನೆ. ಇದು ಶಾಸ್ತ್ರಗ್ರಂಥವಾದರೂ ಕಾವ್ಯಗುಣಗಳಿಂದ ಕೂಡಿದೆ. ಮಂಗರಾಜನ ರಚನೆ ಲಲಿತವಾಗಿ ನಿರರ್ಗಳವಾಗಿ ಹರಿಯುತ್ತದೆ.

ಕನ್ನಡ ಸಾಹಿತ್ಯ ಜಗತ್ತಿನಲ್ಲಿ ನಾಲ್ಕು ಜನ ಮಂಗರಾಜರಿದ್ದಾರೆ. ಮೊದಲನೆ ಮಂಗರಸ ಖಗೇಂದ್ರಮಣಿದರ್ಪಣಕಾರ. ಎರಡನೆಯ ಅಭಿನವ ಮಂಗರಾಜ (ಕ್ರಿ.ಶ. ೧೩೯೮) 'ಕವಿಮಂಗಾಭಿಧಾನ' ಎಂಬ ನಿಘಂಟುವನ್ನು ಬರೆದವನು. ಮೂರನೆ ಮಂಗರಾಜ (ಕ್ರಿ.ಶ. ೧೫೧೦) ಸಮ್ಯಕ್ತ ಕೌಮುದಿ, ಜಯನೃಪ ಕಾವ್ಯ. ಜಿನೇಶಸಂಗತಿ ಇತ್ಯಾದಿಗಳನ್ನು ಬರೆದವನು ನಾಲ್ಕನೆ ಮಂಗರಾಜ (೧೮ನೇ ಶತಮಾನ) ನಾಗಕುಮಾರನ ಕಥೆಯನ್ನು ಬರೆದವನು.

೮. ಕುಮಾರವ್ಯಾಸಯುಗ

ಹನ್ನೆರಡನೆಯ ಶತಮಾನದಲ್ಲಿ ಹರಿಹರ ರಾಘವಾಂಕರು ದೇಶೀಯ ಛಂದಸ್ಸನ್ನು ಬೆಳಕಿಗೆ ತಂದು, ಕನ್ನಡ ಸಾಹಿತ್ಯದ ಸ್ವತಂತ್ರಯುಗವೊಂದನ್ನು ಸ್ಥಾಪಿಸಿದರು. ಆದರೆ ಅವರು ನಾಟಿದ ಬೆಳೆ ಹುಲುಸಾಗಿ ಬೆಳೆದು ಫಲಭರಿತವಾದುದು ೧೫ನೇ ಶತಮಾನದಲ್ಲಿ. ಅಲ್ಲಿಯವರೆಗೆ ಕಾವ್ಯಕ್ಷೇತ್ರದ ಕೃಷಿಯಲ್ಲಿ ತೊಡಗಿದವರೆಲ್ಲ ಬಹುಮಟ್ಟಿಗೆ ಸಂಪ್ರದಾಯಶೀಲರಾಗಿದ್ದುದನ್ನು ಹರಿಹರಯುಗದ ಕವಿಚರಿತ್ರೆಯಲ್ಲಿ ನಾವೀಗಾಗಲೆ ಕಂಡಿದ್ದೇವೆ. ಅಂದಿನ ಪಂಡಿತ ವರ್ಗ ದೇಶಿ ಛಂದಸ್ಸಿಗೆ ಸಾಹಿತ್ಯದ ಸ್ಥಾನಮಾನಗಳನ್ನು ನೀಡಲಿಲ್ಲವೆಂದು ತೋರುತ್ತದೆ. ಅವರ ದೃಷ್ಟಿಯಲ್ಲಿ ಅದು ಬೆಳೆಯಲ್ಲ, ಕಳೆ. ಆದ್ದರಿಂದಲೆ ೧೩ನೆಯ ಶತಮಾನದಲ್ಲಿ ಹುಟ್ಟಿದ ಸೂಕ್ತಿಸುಧಾರ್ಣವದಲ್ಲಿ ಹರಿಹರನ 'ಗಿರಿಜಾಕಲ್ಯಾಣ'ಕ್ಕೆ ಸಿಕ್ಕಿದ ಮನ್ನಣೆ, ಕಾವ್ಯದ ದೃಷ್ಟಿಯಲ್ಲಿ ಅದಕ್ಕೂ ಮಿಗಿಲಾದ ಆತನ ರಗಳೆಗಳಿಗಾಗಲಿ, ರಾಘವಾಂಕನ ಷಟ್ಪದೀ ಕಾವ್ಯಗಳಿಗಾಗಲಿ ದೊರೆಯಲಿಲ್ಲ. ಇದನ್ನು ನೋಡಿದರೆ ಸಂಪ್ರದಾಯದ ಪ್ರಭಾವ ಎಷ್ಟು ಬಲವತ್ತರವಾದುದು, ಅದರ ಉಲ್ಲಂಘನೆ ಎಷ್ಟು ಕಷ್ಟಸಾಧ್ಯವೆಂಬುದು ಅರ್ಥವಾಗುತ್ತದೆ. ಕುಮಾರವ್ಯಾಸನಂತಹ ಅದ್ಭುತಕವಿ ಹುಟ್ಟಿ ಜನರ ಮೌಢ್ಯವನ್ನು ನಿವಾರಿಸಬೇಕಾಯಿತು; ದೇಶೀಛಂದಸ್ಸನ್ನು ಸ್ಥಿರಗೊಳಿಸಬೇಕಾಯಿತು.

೧೨ನೆಯ ಶತಮಾನದಲ್ಲಿ ವಚನವಾಙ್ಮಯ ಉದಿಸಿ, ಜನರನ್ನು ತಂಡೋಪತಂಡವಾಗಿ ಆಕರ್ಷಿಸಿದುದನ್ನು ಕಂಡು, ಅಂತಹುದೇ ಮತ್ತೊಂದು ವಿಧಾನದಿಂದ ಜನರನ್ನು ವೈದಿಕಮತದ ಕಡೆಗೆ ಆಕರ್ಷಿಸುವುದಕ್ಕಾಗಿ ಹುಟ್ಟಿದುದೆ ದಾಸವಾಙ್ಮಯ. ಇದು ಉದಿಸಿದುದು ೧೩ನೆಯ ಶತಮಾನದಲ್ಲಿ. ವೈದಿಕ ಪಂಥದವರು ಕನ್ನಡವನ್ನು ಧಾರ್ಮಿಕ ಸಾಹಿತ್ಯಸೃಷ್ಟಿಗಾಗಿ ಬಳಸಿಕೊಂಡುದು ಒಂದು ದೃಷ್ಟಿಯಿಂದ ಅದ್ಭುತವಾದ ಕ್ರಾಂತಿ. ವೀರಶೈವ ಧರ್ಮದ ಪ್ರಭಾವದಿಂದ ತಮ್ಮ ಅಳಿವು ಉಳಿವುಗಳ ಪ್ರಶ್ನೆ ಮೇಲೆದ್ದಾಗ, ವೈದಿಕಮತ ತನ್ನ ಮಡಿವಂತಿಕೆಯನ್ನು ಬದಿಗಿಟ್ಟು ಧರ್ಮನಿರೂಪಣೆಗಾಗಿ ಕನ್ನಡವನ್ನು ಆಶ್ರಯಿಸುವುದು ಅನಿವಾರ್ಯವಾಯಿತು. ಇದರ ಫಲವೇ ದಾಸವಾಙ್ಮಯ. ಒಮ್ಮೆ ಸಮಸ್ಯೆ ಬಗೆಹರಿಯಿತೆಂದರೆ ಮುಂದೆ ನಿರಾಳ. ಇನ್ನು ಮುಂದೆ ವೈದಿಕ ಸಾಹಿತ್ಯ ಕನ್ನಡದಲ್ಲಿ ಕಾಣಿಸಿಕೊಳ್ಳುವುದಕ್ಕೆ ಇದ್ದ ಅಡ್ಡಿ – ನಿವಾರಣೆಯಾಯಿತು. ವೈದಿಕ ಕಾವ್ಯಗಳು ದೇಶೀಛಂದಸ್ಸಿನಲ್ಲಿ ವಿಪುಲವಾಗಿ ಸೃಷ್ಟಿಯಾದವು. ವಚನವಾಙ್ಮಯ ಹರಿಹರನಿಗೆ ಪ್ರೇರಕಶಕ್ತಿಯಾದಂತೆ ದಾಸವಾಙ್ಮಯ ಕುಮಾರವ್ಯಾಸನ ಸ್ಫೂರ್ತಿಮೂಲವಾಯಿತು.

೧೫ನೆಯ ಶತಮಾನದಲ್ಲಿ ಉದಿಸಿದ ಕುಮಾರವ್ಯಾಸ 'ನ ಭೂತೋ ನ ಭವಿಷ್ಯತಿ' ಜಾತಿಗೆ ಸೇರಿದ ಕವಿ. ಆತನಿಂದ ಮುಂದೆ ಸುಮಾರು ೫೦೦ ವರ್ಷಗಳವರೆಗೆ ಆತನ ಪ್ರಭಾವ ಕನ್ನಡ ಸಾಹಿತ್ಯದಲ್ಲಿ ಅವ್ಯಾಹತವಾಗಿ ನಡೆದುಕೊಂಡು ಬಂದಿದೆ. ಮುಂದಿನ ಕವಿಗಳೆಲ್ಲ ಆತನ ಕಾವ್ಯದಿಂದ ಪ್ರಭಾವಿತರಾಗಿದ್ದಾರೆ. ಭಾವ ಭಾಷೆಗಳನ್ನು ಆತನಿಂದ ಎರವಲಾಗಿ ತಂದುಕೊಂಡಿದ್ದಾರೆ. ಆತನಿಗೆ ಹೆಗಲೆಣೆಯಾಗಿ ನಿಲ್ಲಬಲ್ಲ ಮತ್ತೊಬ್ಬ ಕವಿಯಿಲ್ಲ, ಆ ಕಾಲದಲ್ಲಿ. ಆತನೆ ಏಕಮೇವಾದ್ವಿತೀಯನಾದ ಮಹಾಕವಿ. ಆದ್ದರಿಂದ ಆ ಕಾಲವನ್ನು 'ಕುಮಾರವ್ಯಾಸಯುಗ'ವೆಂದು ಕರೆಯಲಾಗಿದೆ. ಈ ಯುಗದಲ್ಲಿ ಎಲ್ಲ ಧರ್ಮದ ಕವಿಗಳು ಕಾಣಿಸಿಕೊಂಡಿದ್ದಾರೆ. ಎಲ್ಲ ಛಂದಸ್ಸಿನ ಕಾವ್ಯಗಳು ಕಾಣಿಸಿಕೊಂಡಿವೆ. ದಾಸವಾಙ್ಮಯದಲ್ಲಿ ಪದ, ಸುಳಾದಿ, ಉಗಾಭೋಗಗಳು ಸಾಹಿತ್ಯರೂಪದಿಂದ ಧರ್ಮಪ್ರತಿಪಾದನೆಗೆ – ದ್ವೈತಧರ್ಮ ಬೆಳವಣಿಗೆಗೆ ಕೈಹಾಕಿದವು. ಹೀಗಾಗಿ ಈ ಯುಗವನ್ನು 'ಸಂಕೀರ್ಣಯುಗ'ವೆಂದು ಕರೆದರೂ ಸಮಂಜಸವಾಗಿಯೆ ಇರುತ್ತದೆ. ಈ ಯುಗದಲ್ಲಿ ದೇಸಿಛಂದಸ್ಸೇ ಹೆಚ್ಚು ಪ್ರಚುರವಾಗಿದೆ. ಅದರಲ್ಲೂ ಷಟ್ಪದಿಗೆ ಅಗ್ರಸ್ಥಾನ. ಈ ಯುಗದ

ಪ್ರಮುಖ ಕಾವ್ಯಗಳೆಲ್ಲ ಬಹುಮಟ್ಟಿಗೆ ವಾರ್ಧಕ ಅಥವಾ ಭಾಮಿನೀ ಷಟ್ಪದಿಯಲ್ಲಿ ಕಾಣಿಸಿಕೊಂಡಿವೆ. ಆದ್ದರಿಂದ ಈ ಯುಗವನ್ನು 'ಷಟ್ಪದಿಗಳ ಯುಗ'ವೆಂದೂ ಕರೆಯಲಾಗಿದೆ. ವೈವಿಧ್ಯಮಯವಾದ ಈ ಯುಗವನ್ನು ಅಭ್ಯಾಸದ ಅನುಕೂಲಕ್ಕಾಗಿ ಬೇರೆ ಬೇರೆ ಭಾಗಗಳಾಗಿ ವಿಂಗಡಿಸುವುದು ಅನಿವಾರ್ಯ. ಈಗ ಸದ್ಯಕ್ಕೆ ಅದನ್ನು ವೈದಿಕ, ವೀರಶೈವ, ಜೈನ – ಎಂದು ಮೂರು ಭಾಗಗಳಾಗಿ ವಿಂಗಡಿಸಿರುವುದರ ಜೊತೆಗೆ ವಿಶಿಷ್ಟಗುಣಗಳನ್ನು ಒಳಗೊಂಡ 'ದಾಸವಾಙ್ಮಯ'ವನ್ನೂ ವಿಶೇಷವಾಗಿ, ವಿಶಿಷ್ಟವಾಗಿ ಸಾಹಿತ್ಯಸೇವೆ ಕೈಗೊಂಡ 'ಮೈಸೂರರಸರ ಕಾಲದ ಕನ್ನಡ ಸಾಹಿತ್ಯ'ವನ್ನೂ ಬೇರೆ ಬೇರೆಯಾಗಿ ವಿವೇಚಿಸಲಾಗಿದೆ.

೧) ವೈದಿಕ ಕವಿಗಳು

೧) ಕುಮಾರವ್ಯಾಸ (ಕ್ರಿ.ಶ. ೧೪೩೦)

ಕನ್ನಡ ನಾಡಿನಲ್ಲಿ ಕುಮಾರವ್ಯಾಸನ ಭಾರತವನ್ನು ಹಾಡದ ಹಳ್ಳಿಯಿಲ್ಲ, ಕೇಳದ ಕನ್ನಡಿಗರಿಲ್ಲ. ಅರಮನೆಯಿಂದ ಅಂಗಡಿಯವರೆಗೆ ಆತನ ಕೀರ್ತಿ ವ್ಯಾಪಿಸಿದೆ. ಆತನು ವ್ಯಾಸಭಾರತದ ಮೊದಲ ಹತ್ತು ಪರ್ವಗಳನ್ನು ಮಾತ್ರ ಕನ್ನಡಿಸಿದ್ದಾನೆ. ಪ್ರತಿ ಪರ್ವದ ಕೊನೆಯ ಗದ್ಯದಿಂದ ಕವಿಯು ಗದುಗಿನ ವೀರ ನಾರಾಯಣಸ್ವಾಮಿಯ ಪರಮ ಭಕ್ತನೆಂದೂ, ಆತನ ಹೆಸರು ಕುಮಾರವ್ಯಾಸನೆಂದೂ, ಕಾವ್ಯದ ಹೆಸರು 'ಕರ್ಣಾಟಭಾರತಕಥಾಮಂಜರಿ'ಯೆಂದೂ ತಿಳಿದುಬರುತ್ತದೆ. ಕವಿ ತನ್ನನ್ನು 'ಕುಮಾರವ್ಯಾಸಯೋಗೀಂದ್ರ', 'ಕುಮಾರವ್ಯಾಸಮುನಿ', 'ಶುಕರೂಪ' ಎಂದು ಕರೆದುಕೊಂಡಿರುವುದರಿಂದ ಆತನು ಸನ್ಯಾಸಿಯಾಗಿದ್ದನೆಂದು ಊಹಿಸುವುದಕ್ಕೂ ಅವಕಾಶವಿದೆ. ಆತನ ಭಾರತವನ್ನು 'ನಾರಣಪ್ಪನ ಭಾರತ', 'ಗದುಗಿನ ಭಾರತ' ಎಂದು ಕರೆಯುವುದು ಲೋಕರೂಢಿ. ಆದ್ದರಿಂದ ಆತನ ಹೆಸರನ್ನು ನಾರಣಪ್ಪನೆಂದೂ, 'ಕುಮಾರವ್ಯಾಸ'ನೆಂಬುದು ಆತನ ಸನ್ಯಾಶ್ರಮದ ಹೆಸರೊ, ಕಾವ್ಯನಾಮವೊ ಇರಬೇಕೆಂದೂ ಊಹಿಸಬಹುದು. ಗದಗು ಪ್ರಾಂತದ ಜನರ ಹೇಳಿಕೆಯಂತೆ ಈತನು ಗದುಗಿನ ಸಮೀಪದ ಕೋಳಿವಾಡ ಗ್ರಾಮದವನೆಂದೂ, ಆ ಗ್ರಾಮ ಆತನ ವಂಶದವರಿಗೆ ವಿಜಯನಗರದ ರಾಜರಿಂದ ಉಂಬಳಿಯಾಗಿ ಬಂದುದೆಂದೂ ತಿಳಿದುಬರುತ್ತದೆ. ಈತನ ತಂದೆಯಾದ ಲಕ್ಕರಸ ಅಥವಾ ಲಕ್ಷ್ಮಣದೇವನು ವಿಜಯನಗರದ ದೇವರಾಯನಲ್ಲಿ (ಕ್ರಿ.ಶ. ೧೪೦೬–೧೪೨೨) ಮಂತ್ರಿಯಾಗಿದ್ದನೆಂದೂ, ಆ ಲಕ್ಷ್ಮಣದೇವನ ಐವರು ಗಂಡುಮಕ್ಕಳಲ್ಲಿ ಹಿರಿಯನೇ ವೀರನಾರಾಯಣನೆಂದೂ, ಗದುಗಿನ ವೀರನಾರಾಯಣಸ್ವಾಮಿಯ ಪ್ರಾಸಾದಿಕ ಪುತ್ರನಾದ ಈ ವೀರನಾರಾಯಣನೆ ಕುಮಾರವ್ಯಾಸನೆಂದೂ ತಿಳಿದುಬರುತ್ತದೆ.

ಕುಮಾರವ್ಯಾಸನ ಕಾಲ ೧೨ ಮತ್ತು ೧೬ನೆಯ ಶತಮಾನಗಳ ಮಧ್ಯೆ ತೂಗುಯ್ಯಾಲೆಯಾಡುತ್ತದೆ. ಆತನು ರಾಘವಾಂಕ ಕವಿಯ 'ಹರಿಹರ ಮಹತ್ವ'ವನ್ನು ಕೇಳಿದನೆಂಬ ದಂತಕಥೆಯನ್ನು ನಂಬುವುದಾದರೆ ಆತ ೧೨ನೆಯ ಶತಮಾನದಷ್ಟು ಪುರಾತನನಾಗಬೇಕಾಗುತ್ತದೆ; ಆತನು ವ್ಯಾಸರಾಯ ಪುರಂದರದಾಸರನ್ನು ಕಂಡನೆಂಬ ಕಥೆ ನಂಬುವುದಾದರೆ ೧೬ನೆಯ ಶತಮಾನದವನೆನ್ನಬೇಕಾಗುತ್ತದೆ. ಆದರೆ ಕ್ರಿ.ಶ. ೧೫೦೦ರಲ್ಲಿದ್ದ ಕುಮಾರವಾಲ್ಮೀಕಿ ಆತನನ್ನು ಸ್ತುತಿಸಿದ್ದಾನೆ; ೧೫೦೦ರಲ್ಲಿದ್ದ ತಿಮ್ಮಣ್ಣ ಕವಿ ಆತನು ಬರೆಯದೆ ಬಿಟ್ಟ ಭಾರತದ ಭಾಗವನ್ನು ಮುಂದುವರಿಸಿರುವುದರಿಂದ ಕುಮಾರವ್ಯಾಸ ಅದಕ್ಕೂ ಹಿಂದಿನವನು. ವೀರಶೈವಪುರಾಣಗಳಲ್ಲಿ ಕುಮಾರವ್ಯಾಸನು ಚಾಮರಸನ ತಂಗಿಯ ಗಂಡನೆಂದು ಹೇಳಿರುವುದನ್ನು ಆಧಾರವಾಗಿಟ್ಟುಕೊಂಡು ಆತನ ಕಾಲ ಕ್ರಿ.ಶ. ೧೪೩೦ ಎಂದು ಕವಿಚರಿತೆಕಾರರು ನಿರ್ಧರಿಸಿದ್ದಾರೆ. ಆತನ ಮತ ವಿಚಾರದಲ್ಲಿಯೂ ಸಾಕಷ್ಟು ಗೊಂದಲವಿದೆ. ಅವನ ಹೆಸರನ್ನು

ನೋಡಿದರೆ ಬ್ರಾಹ್ಮಣನೆಂದೂ ಗೊತ್ತಾಗುತ್ತದೆ. ಮಹಾಕವಿಗೆ ಕುಲವೇನು ಮುಖ್ಯ? ಆತ ಕನ್ನಡ ಕುಲದವನು. ಆತನೂ ಕಾವ್ಯವೂ ಕನ್ನಡಿಗರ ಹಿರಿಯ ಆಸ್ತಿ, ಹೆಮ್ಮೆ.

ಕುಮಾರವ್ಯಾಸನು ಅಶ್ವತ್ಥಾಮನಿಂದ ಉಪದೇಶವನ್ನು ಪಡೆದು ಭಾರತವನ್ನು ಬರೆಯಹೊರಟನೆಂದೂ, ದಿನವೂ ಬೆಳಗ್ಗೆ ಸ್ನಾನಮಾಡಿ, ಒದ್ದೆಯಬಟ್ಟೆ ಆರುವವರೆಗೆ ತಾನೇತಾನಾಗಿ ಹೊರಹೊಮ್ಮುತ್ತಿದ್ದ ಕಾವ್ಯಪ್ರವಾಹವನ್ನು ಬರೆದಿಟ್ಟುಕೊಳ್ಳುತ್ತಿದ್ದನೆಂದೂ ತಿಳಿಸುವ ದಂತಕಥೆಗಳಿವೆ. ಈ ಕಥೆಗಳು ಅಕ್ಷರಶಃ ಸತ್ಯವಲ್ಲದಿರಬಹುದು, ಆದರೆ ಆತನು ದೇವರ ಸಾನ್ನಿಧ್ಯದಲ್ಲಿ ಕುಳಿತು, ಭಕ್ತಿಯ ಆವೇಶದಿಂದ ಮೈದುಂಬಿ ಬರೆದಿರಬಹುದೆಂದು ಭಾವಿಸುವುದು ಅಷ್ಟೇನೂ ತಪ್ಪಾಗಲಾರದು. 'ವೀರನಾರಾಯಣನೆ ಕವಿ, ಲಿಪಿಕಾರ ಕುಮಾರವ್ಯಾಸ' ಎಂದು ಆತ ಹಾಡಿಕೊಂಡಿದ್ದಾನೆ. ಇದರಲ್ಲಿ ಕವಿಯ ನಮ್ರತೆ ಮಾತ್ರವೇ ಅಲ್ಲ, ತನ್ನ ವಾಣಿ ವೀರನಾರಾಯಣನ ಪ್ರಾಸಾದಿಕವಾದ ವಾಣಿ; ಅದರಷ್ಟು ಭವ್ಯ, ದಿವ್ಯ – ಎಂಬ ಭಾವವೂ ಧ್ವನಿತವಾಗುತ್ತದೆ. 'ಹಲಗೆ ಬಳಪವ ಪಿಡಿಯದೊಂದಗ್ಗಳಿಕೆ' ಇತ್ಯಾದಿಯಾಗಿ ಆತ ತನ್ನ ಅಗ್ಗಳಿಕೆಗಳನ್ನು ಹೇಳಿಕೊಳ್ಳುವಲ್ಲಿ, ಆತನ ಕವಿತಾಶಕ್ತಿಯ ಮೂಲ ಬರಿಯಪಾಂಡಿತ್ಯ ಪ್ರತಿಭೆಗಳಾಗಿರದೆ ಭಗವದನುಗ್ರಹವೆಂಬ ಸೂಚನೆಯನ್ನು ಕವಿಯಿಂದ ನಾವು ಗ್ರಹಿಸಬೇಕು.

ವ್ಯಾಸಭಾರತವು ಭಾರತೀಯರ ಅಚ್ಚುಮೆಚ್ಚಿನ ಪೂಜ್ಯ ಗ್ರಂಥ, ಅದು ಪಂಚಮವೇದ. 'ಜಗತ್ತಿನಲ್ಲಿ ಇರುವುದೆಲ್ಲವೂ ಇಲ್ಲಿದೆ, ಇಲ್ಲಿ ಇಲ್ಲದುದು ಜಗತ್ತಿನಲ್ಲಿಲ್ಲ' ಎನ್ನುವಷ್ಟು ವಿಷಯಗಳನ್ನು ಒಳಗೊಂಡ ಮಹಕಾವ್ಯ ಅದು. ಬೃಹತ್ತು ಮಹತ್ತುಗಳಲ್ಲಿ ಇದನ್ನು ಮೀರಿಸಿದ ಗ್ರಂಥ ಮತ್ತೊಂದಿಲ್ಲ. ಲಕ್ಷ ಶ್ಲೋಕಗಳ ಈ ದಿವ್ಯಗ್ರಂಥವನ್ನು ಆಮೂಲಾಗ್ರವಾಗಿ ಓದಿದ್ದಾನೆ, ಕುಮಾರವ್ಯಾಸ. ಬರಿಯ ರಸಾಸ್ವಾದನೆ ಮಾಡಿರುವಷ್ಟೆ ಅಲ್ಲ, ಅನೇಕ ವೇಳೆ ಅದನ್ನು ವಾಚೋವಿಧೇಯವಾಗಿ ಮಾಡಿಕೊಂಡಿದ್ದಾನೆ. ಹೆಜ್ಜೆ ಹೆಜ್ಜೆಗೂ ಮೂಲವನ್ನು ಅನುಸರಿಸುವುದಲ್ಲದೆ, ಅನೇಕ ಕಡೆ ಮೂಲ ಶ್ಲೋಕಗಳನ್ನು ಭಾಷಾಂತರ ಮಾಡುತ್ತಾನೆ. ಆದರೂ ಆತ ಬರಿಯ ಭಾಷಾಂತರಕಾರನೂ ಅಲ್ಲ, ಸಂಗ್ರಹಕಾರನೂ ಅಲ್ಲ, ಅವನು ವಿಶಿಷ್ಟ ಶಕ್ತಿಯ ಸ್ವತಂತ್ರ ಕವಿ. ತನಗೆ ಸೂಕ್ತ ತೋರಿದಂತೆ ಮೂಲದಲ್ಲಿನ ಹಲವು ಅಂಶಗಳನ್ನು ಕೈಬಿಟ್ಟಿದ್ದಾನೆ. ಕೆಲವು ಕಡೆ ವ್ಯತ್ಯಾಸ ಮಾಡಿದ್ದಾನೆ, ಹೊಸ ಅಂಶಗಳನ್ನು ಸೇರಿಸಿಯೂ ಇದ್ದಾನೆ. ಇಡೀ ಉಪಾಖ್ಯಾನವನ್ನು ಅರ್ಧಪದ್ಯದಲ್ಲಿ ಕೊಟ್ಟು ಮುಂದುವರಿದಿರುವುದೂ ಉಂಟು. ಕಥೆಯ ಹೊರಮೈಯಲ್ಲಿ ಮಾಡಿಕೊಂಡಿರುವ ಈ ಬದಲಾವಣೆಗಳಿಗಿಂತಲೂ ಆತನು ಕಥಾನಿರೂಪಣೆಯಲ್ಲಿ ಮೆರೆದಿರುವ ನಿರಂಕುಶಮತಿ ಆತನ ಕಾವ್ಯಕ್ಕೆ ಚಿರನೂತನತೆಯನ್ನು ಒದಗಿಸಿದೆ.

ವ್ಯಾಸಭಾರತವನ್ನು ಮೊಟ್ಟಮೊದಲು ಕನ್ನಡಕ್ಕೆ ತಂದುಕೊಟ್ಟವನು ಆದಿ ಕವಿ ಪಂಪನಷ್ಟೆ. ದಿವ್ಯ ಪ್ರತಿಭೆ ಆ ಕವಿ ಬರೆದ ಕಾವ್ಯವನ್ನೆ ಮತ್ತೆ ಬರೆವವನಿಗೆ ಎಂಟೆರ್ದೆಯೆ ಇರಬೇಕು. ಕುಮಾರವ್ಯಾಸನಿಗೆ ಎಂಟೆರ್ದೆಯಲ್ಲ, ಎಂಟು ಎಂಟೆರ್ದೆಗಳಿವೆ. ಕುಮಾರವ್ಯಾಸನು ಪಂಪನಿಗೆ ಹೊಯ್‌ಕಯ್ ಆಗುವಂತೆ ಕಾವ್ಯರಚನೆ ಮಾಡಿ ಸೈ ಎನಿಸಿಕೊಂಡಿದ್ದಾನೆ. ಇಬ್ಬರೂ ಮಹಾಕವಿಗಳು, ವರಕವಿಗಳು, ಆದರೆ ಅವರಿಬ್ಬರ ನಿಲುವು ಬೇರೆ ಬೇರೆ. ಪಂಪ 'ಕಲಿತವರ ಕಲ್ಪವೃಕ್ಷ', 'ಕುಮಾರವ್ಯಾಸ' ಕಲಿಯದವರಿಗೂ ಕಾಮದೇನು. ಪಂಪ ವೀರಯುಗದವನು, ಆತನ ಕಾವ್ಯದಲ್ಲಿ ವೀರರಸ ನೊರೆಗಟ್ಟಿ ಹರಿಯುತ್ತದೆ; ಕುಮಾರವ್ಯಾಸ ಭಕ್ತಿಯುಗದವನು, ಆತನ ಕಾವ್ಯದಲ್ಲಿ ಭಕ್ತಿರಸ ಹೆಪ್ಪುಗಟ್ಟಿ ಕುಳಿತಿದೆ. ಪಂಪಭಾರತದ ನಾಯಕ ಅರ್ಜುನನ ವೇಷ ಧರಿಸಿದ ಅರಿಕೇಸರಿ, ಕುಮಾರವ್ಯಾಸನ ನಾಯಕ ಶ್ರೀಕೃಷ್ಣ; ಪಂಪನ ಸಭಾಸದರು ಆಸ್ಥಾನ ವಿದ್ವಾಂಸರು, ಕುಮಾರವ್ಯಾಸನ ಶ್ರೋತೃಗಳು ಜಂಗಮ

ಜನಾರ್ದನರು; ಪಂಪನದು ರಾಜಗಾಂಭೀರ್ಯ, ಮಾತನಾಡಿದರೆ ಮುತ್ತು ಸುರಿದೀತು; ಕುಮಾರವ್ಯಾಸ ಜನರಿಗೆ ಅರ್ಥವಾಗುವಂತೆ ಹಿಗ್ಗಲಿಸಿ ಬರೆದವನು. ಕುಮಾರವ್ಯಾಸನ ಭಾರತ, ಪಂಪ ಭಾರತದ ನಾಲ್ಕರಷ್ಟಿದೆ. ಪಂಪನಿಗೆ ಲೌಕಿಕಕಾವ್ಯವಾಗಿರುವುದು ಕುಮಾರವ್ಯಾಸನಲ್ಲಿ 'ನರರ ದುರಿತಾಂಕುರದ ಬೇರಿನ ಬೇಗೆ'.

ಕುಮಾರವ್ಯಾಸನು ತನಗಿಂತಲೂ ಪೂರ್ವದವನಾದ ಪಂಪಕವಿಯ ಕಾವ್ಯವನ್ನು ಆಮೂಲಾಗ್ರವಾಗಿ ಓದಿರುವನೆಂಬುದರಲ್ಲಿ ಸಂಶಯವಿಲ್ಲ. ಶ್ರೀಕೃಷ್ಣನು ಸಂಧಿಗೆಂದು ಹಸ್ತಿನಾವತಿಗೆ ಹೋದಾಗ, ದುರ್ಯೋಧನನು ತುಂಬಿದ ಸಭೆಯಲ್ಲಿ ವಿದುರನನ್ನು ನಿಂದಿಸುತ್ತಾನೆ. ಇದರಿಂದ ಕುಪಿತನಾದ ವಿದುರ 'ಭೀಮನು ನಿನ್ನ ತೊಡೆಯನ್ನು ಮುರಿಯಹೊರಟಾಗ ನಿನ್ನನ್ನು ರಕ್ಷಿಸಬೇಕೆಂದಿಟ್ಟುಕೊಂಡಿದ್ದ ಧನಸ್ಸು ಇದು' ಎಂದು ಹೇಳಿ ಅದನ್ನು ಮುರಿದುಹಾಕುತ್ತಾನೆ. ಇದು ಮೂಲಭಾರತದಲ್ಲಿಲ್ಲ, ಪಂಪಭಾರತದಲ್ಲಿದೆ; ಕುಮಾರವ್ಯಾಸನಲ್ಲಿಯೂ ಇದೆ. ಹಾಗೆಯೆ, ಕರ್ಣನು ಕುಂತಿಯನ್ನು ಗಂಗಾ ನದಿಯ ಸಮೀಪದಲ್ಲಿ ಸಂಧಿಸುವ ಮುನ್ನ ಸೂರ್ಯನು ಪ್ರತ್ಯಕ್ಷನಾಗಿ 'ನಿನ್ನ ತಾಯಿಗೆ ಹುರಿಗಣೆಯನ್ನು ಕೊಡಬೇಡ' ಎಂದು ಬುದ್ಧಿ ಹೇಳುವ ಭಾಗ ವ್ಯಾಸಭಾರತದಲ್ಲಿಲ್ಲ; ಪಂಪ, ಕುಮಾರವ್ಯಾಸರಲ್ಲಿ ಕಂಡುಬರುತ್ತದೆ. ಕುಮಾರವ್ಯಾಸನು ಪಂಪಭಾರತಕ್ಕೆ ಋಣಿ ಎಂಬುದರಲ್ಲಿ ಸಂದೇಹವಿಲ್ಲ. ಕುಮಾರವ್ಯಾಸನ ಭಾಷಾ ಶ್ರೀಮಂತಿಕೆಯನ್ನು ಕಂಡರೆ ಆತನ ಕಾವ್ಯಾಭ್ಯಾಸ ಅತ್ಯಂತ ವಿಸ್ತಾರವಾದುದೆನಿಸುತ್ತದೆ. ತುಂಬಿದ ಸಭೆಯಲ್ಲಿ ಅಹಂಕಾರದಿಂದ ಕುಳಿತಿದ್ದ ದುರ್ಯೋಧನನು ಸಿಂಹಾಸನಸಹಿತ ತನ್ನ ಕಾಲ ಮೇಲೆ ಬಂದು ಬೀಳುವಂತೆ ಶ್ರೀಕೃಷ್ಣನು ಭೂಮಿಯನ್ನು ಒತ್ತುವ ಪ್ರಸಂಗ ನಾರಣಪ್ಪನ ಸ್ವಂತ ಸೃಷ್ಟಿ ಅಥವಾ ಭಾಸಕವಿಯ 'ದೂತಕಾವ್ಯ' ಇದಕ್ಕೆ ಪ್ರಚೋದಕವಾಗಿದ್ದರೂ ಇರಬಹುದು.

ಆಧುನಿಕ ಕನ್ನಡದ ಮಹಾಕವಿ ಕುವೆಂಪು 'ಕುಮಾರವ್ಯಾಸನು ಹಾಡಿದನೆಂದರೆ ಕಲಿಯುಗ ದ್ವಾಪರವಾಗುವುದು' ಎಂದು ಹಾಡಿದ್ದಾರೆ. ಕುಮಾರವ್ಯಾಸನನ್ನು ಓದಿದಮೇಲೆ ಆ ಕವಿವಾಣಿ ಕೇವಲ ಅಲಂಕಾರದ ನುಡಿಯಾಗಿರದೆ ಸತ್ಯದರ್ಶಿ ಎನ್ನಿಸುತ್ತದೆ. ಕುಮಾರವ್ಯಾಸನು ತನ್ನ ಅದ್ಭುತಕವಿತಾಶಕ್ತಿಯ ಗಾರುಡ ಮಂತ್ರದಿಂದ ನಮ್ಮನ್ನು ಮೈಮರೆಸಿ, ದ್ವಾಪರಯುಗದ ವಾತಾವರಣಕ್ಕೆ ಕೊಂಡೊಯ್ಯುತ್ತಾನೆ; ಮಹಾಭಾರತದ ಪಾತ್ರಗಳೆಲ್ಲವೂ ನಮ್ಮ ಒಳಗಣ್ಣಿನ ಇದಿರಿನಲ್ಲಿ ಸಜೀವವಾಗಿ ವ್ಯವಹರಿಸುತ್ತವೆ. ಕವಿಯು ತನ್ನ ಕವಿತಾಶಕ್ತಿಯ ಪ್ರಭಾವದಿಂದ ರಸಭಾವಗಳ ಅಮೃತಪ್ರವಾಹವನ್ನು ಹರಿಸಿ, ದ್ವಾಪರಯುಗದ ಜೀವಜಗತ್ತಿಗೆ ನೂತನ ಚೇತನವನ್ನು ನೀಡುತ್ತಾನೆ. ಪರಕಾಯಪ್ರವೇಶ ಮಾಡಿದವನಂತೆ ಆ ಜೀವಿಗಳೆಲ್ಲರ ಸ್ವಭಾವ ಸೂಕ್ಷ್ಮತೆ, ಆಲೋಚನಾಲಹರಿಗಳ ಪದರಪದವನ್ನು ಪ್ರತ್ಯಕ್ಷಗೊಳಿಸುತ್ತಾನೆ. ಅವರು ಆಡುವ ಮೌನವಾಣಿಗೆ ಸಂಗೀತವನ್ನು ತೊಡಿಸಿ ಕಿವಿಗೆ ಇಂಪೂ ಹೃದಯಕ್ಕೆ ತಂಪೂ ಆಗುವಂತೆ ಹಾಡಿಸುತ್ತಾನೆ.

ಕುಮಾರವ್ಯಾಸನ ಭಾರತವೆಂದರೆ ಭಿನ್ನಭಿನ್ನಸ್ವಭಾವದ ಮಾನವರ ಭಾವ ಪ್ರದರ್ಶನಾಲಯ ಇಲ್ಲಿ ಬಾನವರು, ದಾನವರು, ಮಾನವರು – ಚಕ್ರವರ್ತಿಯಿಂದ ಹಿಡಿದು ಸೇವಕನವರೆಗೆ ಎಲ್ಲ ಮಟ್ಟದವರು, ಎಲ್ಲ ಗುಣದವರು ಗಂಡಸರು, ಮಕ್ಕಳು ಎಲ್ಲರೂ ಚಿತ್ರಿತರಾಗಿದ್ದಾರೆ. ಭೀಷ್ಮರಂತಹ ಮಹೋನ್ನತರು, ಕರ್ಣನಂತಹ ತ್ಯಾಗಶೀಲರಾದ ದುರ್ದೈವಿಗಳು, ಶಲ್ಯಭೀಮರಂತಹ ಗಂಡುಗಲಿಗಳು, ಅರ್ಜುನ ಅಭಿಮನ್ಯು ಅಶ್ವತ್ಥಾಮರಂತಹ ವೀರಪುರುಷರು, ಧರ್ಮರಾಯನಂತಹ ನಿರ್ಮಲಚಿತ್ತರು, ವಿದುರನಂತಹ ಸುಜ್ಞಾನಿಗಳು, ದುರ್ಯೋಧನನಂತಹ ಅಭಿಮಾನಧನರಾದ ಛಲದಂಕಮಲ್ಲರು, ಕೀಚಕನಂತಹ ನೀಚರು, ಶಕುನಿಯಂತಹ ಕುತಂತ್ರಿಗಳು, ಉತ್ತರಕುಮಾರನಂತಹ

ಮಾತಿನ ಮಲ್ಲರು, ಕುಂತಿ ದ್ರೌಪದಿ ಗಾಂಧಾರಿಯಂತಹ ಚಾರಿತ್ರಶೀಲರಾದ ಕ್ಷತ್ರಿಯ ರಮಣಿಯರು ಇಲ್ಲಿ ಕಾಣಬರುತ್ತಾರೆ. ಈ ಎಲ್ಲ ಪಾತ್ರಗಳ ಸೂತ್ರಧಾರಿ ಶ್ರೀಕೃಷ್ಣ. ಕವಿ ತನ್ನ ಈ ಆರಾಧ್ಯದೈವವನ್ನು ಕೇಂದ್ರದಲ್ಲಿ ನಿಲ್ಲಿಸಿ, ಆತನ ಸುತ್ತಲೂ ಪಾತ್ರಧಾರಿಗಳೆಲ್ಲರ ರುದ್ರರಮಣೀಯವಾದ ಲಾಸ್ಯಲೀಲೆಯನ್ನು ನೇಪುಗೊಳಿಸಿದ್ದಾನೆ. ಈತನ ದೃಷ್ಟಿಯಲ್ಲಿ ಶ್ರೀಕೃಷ್ಣನೇ ತನ್ನ ಕಾವ್ಯದ ಕಥಾನಾಯಕ. ಆತನೆ ಇಡಿ ಭಾರತದ ಪ್ರೇರಕಶಕ್ತಿಯಾಗಿರುವಂತೆ ಕಾರಕ ಶಕ್ತಿಯೂ ಆಗಿದ್ದಾನೆ. ನರನಾಟಕವ ನಟಿಸಿ ತೋರಿಸುವ ಸೂತ್ರಧಾರಿ ಆತ. 'ಮಮ ಪ್ರಾಣಾ ಹಿ ಪಾಂಡವಾ' ಎಂದು ಹೇಳಿಕೊಂಡಿರುವ ಆತನೆ ಕುಮಾರವ್ಯಾಸ ಭಾರತದ 'ನಾಯಕ, ವಸ್ತು, ಜೀವ, ಸೊಬಗು, ಸ್ವಾಮಿ, ಸ್ವಾರಸ್ಯ'.

ಕುಮಾರವ್ಯಾಸನು ತನ್ನ ಕಾವ್ಯ ನವರಸಭರಿತವಾಗಿ 'ಕಾವ್ಯಕ್ಕೆ ಗುರು' ಎನ್ನುವಂತೆ ಇದೆಯೆಂದು ಹೇಳಿಕೊಂಡಿದ್ದಾನೆ. ಆ ಮಾತು ಸರ್ವಸತ್ಯ. ಕಾವ್ಯದಲ್ಲಿ ಎಲ್ಲೆಲ್ಲಿಯೂ ಓದುಗರಿಗೆ ರಸದೌತಣ! 'ಮನುಮಥನ ಖಾಡಾ ಖಾಡಿ'ಯಾದ ದ್ರೌಪದಿಯನ್ನು ಸಭೆಗೆ ಎಳೆತರುವಂತೆ ದುರ್ಯೋಧನನು ವಿದುರನಿಗೆ ಅಜ್ಞಾಪಿಸಲು ಆತ ಹೇಳುವ ಬುದ್ಧಿವಾದ ಇದು-

ಸಿಡಿಲ ಪೊಟ್ಟಣಗಟ್ಟಿ ಸೇಕವ । ಕೊಡುವರೇ ಹರನೇತ್ರ ವಹ್ನಿಯೊ
ಳಡಬಡವ ಸುಡಬಗೆದೆಲಾ ಮರಳೇ ಮಹೀಪತಿಯೆ
ಹೆಡತಲೆಯ ತುರಿಸುವರೆ ಹಾವಿನ! ಹೆಡೆಯನಕಟಾ ಪಾಂಡುಪುತ್ರರ
ಮಡದಿ ತೊತ್ತಹಳೇ ಶಿವಾಯೊಂದಳಿಲಿದನು
ಕಾಳಕೂಟದ ತೆರೆಗಳಲಿ ಜಲ ! ಕೇಳಯೇ ಕಾಲಾಂತಕನದಂ
ಷ್ಟ್ರಾಳಿಯಲಿ ನವಿಲುಯ್ಯಾಲೆಯ ನೀವಾಡಲಾಪಿರಲ
ಕಾಳಿರುದ್ರನ ಲಳಿಯ ನಾಟ್ಯದ । ಕೇಳಿಕೆಗೆ ನೀವರ್ತಿಕಾರರೆ
ಹೋಲದ್ಯೆ ಶಿವಯೆನುತ ಕಂಬನಿದುಂಬಿದನು ॥

ಮಾತುಗಳು ಎಷ್ಟು ಸತ್ವಯುಕ್ತವಾಗಿವೆ ! ದ್ರೌಪದಿಯ ಸೆರೆಸೀಳೆಯ ಸಂದರ್ಭದಲ್ಲಿ ಭೀಮಾರ್ಜುನರು 'ಮನದೊಳಗೆ ಕೌರವನ ಕರುಳನು ತನಿ ರಕುತದಲಿ ಕುದಿಸಿದರು' ಅಂತೆ ! ಅನಾಥಳಾದ ದ್ರೌಪದಿ 'ಪತಿಗಳೆನ್ನನು ಮಾರಿ ಧರ್ಮಸ್ಥಿತಿಯ ಕೊಂಡರು' ಎಂದು ಹೇಳಿಕೊಂಡು ಕೃಷ್ಣನನ್ನು ಪ್ರಾರ್ಥನೆ ಮಾಡುತ್ತಾಳೆ; ಆ ಭಾಗ ಭಕ್ತಿ ಕರುಣೆಗಳ ರಸಗಂಗಾಪ್ರವಾಹ ! ಅರ್ಜುನನು ಪರಮೇಶ್ವರನಿಂದ ಪಾಶುಪತಾಸ್ತ್ರವನ್ನು ಪಡೆದ ಸನ್ನಿವೇಶವೂ ಭಕ್ತಿರಸದಿಂದ ತುಂಬಿತುಳುಕುತ್ತಿದೆ. ಅಲ್ಲಿಂದ ಮುಂದೆ ಅರ್ಜುನನು ಸ್ವರ್ಗಕ್ಕೆ ಹೋಗಿ, 'ಕುಸುಮಾಯುಧನ ಖಂಡೆಯ'ದಂತಿದ್ದ ಊರ್ವಶಿಯ ಶಾಪವನ್ನು ಪಡೆಯುವ ಭಾಗವಂತೂ ಶೃಂಗಾರರಸದ ತನಿರಸಪ್ರವಾಹ. ಆಕೆ 'ಜನಮನದ ಸಂಕಲೆವನೆಯೊ, ಲೋಚನಮೃಗದ ತಡೆವೇಂಟೆಕಾತಿಯೋ' ಎಂಬಂತೆ ಬಳಿಗೆ ಬರುತ್ತಲೆ 'ಎಳೆಯ ಬೆಳದಿಂಗುಳವೊಲಿಕೆಯ ಥಳಥಳಿಪ ಮುಖಚಂದ್ರಮನ ತಂಬೆಲರು ಸುಳಿದುದು ಸಾರತರ ಪರಿಮಳದ ಪೂರದಲಿ' ಆತನ ನಿದ್ರೆ ತಿಳಿಯಿತು. ಕಣ್ತೆರೆದರೆ ಇದಿರಿನಲ್ಲಿ 'ಕಿರಣಲಹರಿಯ ದಿವ್ಯರತ್ನಾಭರಣ ರುಚಿರತರ ಪ್ರಭಾಪಂಜರದೊಳಗೆ ಹೊಳೆಹೊಳೆವ ಮದನಾಲಸೆ' ಯಾದ ಊರ್ವಶಿ ! ಆಕೆಯನ್ನು ತನ್ನ ತಾಯೆಂದು ನಿರಾಕರಿಸಿದ ಅವನಿಗೆ 'ಸುಮನೋಹರ ಭಯಂಕರ' ರೂಪಿನ ಆಕೆ ನಪುಂಸಕನಾಗುವಂತೆ ಶಾಪಕೊಡುತ್ತಾಳೆ. ಈ ಸನ್ನಿವೇಶದಲ್ಲಿ ವಿಶ್ವಮೋಹಕವಾದ ಶೃಂಗಾರರಸನಿರೂಪಣೆಯಿದೆ. ಅದಕ್ಕೂ ಹೆಚ್ಚಾಗಿ ಅರ್ಜುನನು ಸಂಯಮಶಕ್ತಿ, ಜಿತೇಂದ್ರಿಯಶಕ್ತಿ ಕುಮಾರವ್ಯಾಸನ ಕಾವ್ಯ ಶಕ್ತಿಗಿಟ್ಟ ಚಿನ್ನದ ಕಳಶದಂತಿದೆ ! ಪ್ರಣಯ ಪ್ರಸಂಗದ ಮತ್ತೊಂದು

ಮುಖದಂತಿರುವ ಕೀಚಕೋಪಾಖ್ಯಾನದಲ್ಲಿ ಭೀಮನ ಪಾತ್ರ ಸಜೀವವಾಗಿ ನಮ್ಮ ಕಣ್ಣೆದುರಿಗೆ ನಿಲ್ಲುತ್ತದೆ. ಕೀಚಕನು ಭೀಮನೊಡನೆ ಹೋರಾಡಿ 'ಖಳನು ಕಾಲನ ಕೋಣ ತುಳಿದಂತಿಳೆಯೊಳೊರಗಿದ್ದಾನೆ' ಈ ವಾಯುಪುತ್ರನಿಗೆ ತಕ್ಕ ಹೆಂಡತಿ ಆ ಅಗ್ನಿಪುತ್ರಿ. ಇವರಿಬ್ಬರೂ ಸೇರಿಯೆ ಶತ್ರುದಹನ. ಅವಳು ಪ್ರೇರಕ ಶಕ್ತಿ, ಇವನು ಕಾರಕಶಕ್ತಿ. ೧೮ ದಿನಗಳ ಯುದ್ಧದಲ್ಲಿ ೧೮ ಅಕ್ಷೋಹಿಣಿ ಸೈನ್ಯ ಮಡಿದುಹೋದ ಭಾರತಯುದ್ಧದಲ್ಲಿ ವೀರರಸಕ್ಕೆ ಅಭಾವವೇ ? ಈ ಕಾವ್ಯವೇ ವೀರರಸಪ್ರಧಾನವಾದ ಕಾವ್ಯ. ಭೂಭಾರಹರಣಕ್ಕಾಗಿ ಇಳೆಯಲ್ಲವೆ ತರಿಸಿರುವ ಶ್ರೀಕೃಷ್ಣನ ದೈವಶಕ್ತಿಯ ಎರಡು ಬಾಹುಗಳು ಭೀಮಾರ್ಜುನರು. ಆದ್ದರಿಂದ ವೀರರಸ ಇಲ್ಲಿ ಮಡುಗಟ್ಟಿಹರಿಯುತ್ತಿರುವುದು ಸ್ವಾಭಾವಿಕವಾಗಿಯೆ ಇದೆ. ಉಳಿದ ರಸಗಳು ಅಮುಖ್ಯವಾದರೂ ನಿರೂಪಣೆಯಲ್ಲಿ ಲೋಕೋತ್ತರವಾದ ಸೊಬಗನ್ನು ಪಡೆದಿವೆ. 'ಪ್ರತಿಪರ್ವರಸೋದಯ'ವಾದ ಭಾರತದಲ್ಲಿ ಕುಮಾರವ್ಯಾಸಕವಿ ಹಾಸ್ಯರಸವನ್ನು ಮನೋಜ್ಞವಾಗಿಯೆ ತಂದಿದ್ದಾನೆ. 'ಅರಸುಗಳಿಗಿದು ವೀರ'ವಾದ ಉತ್ತರಕುಮಾರ. ರಣಹೇಡಿಯಾದ ಇವನ ವೀರವಾಣಿ ನಮ್ಮಲ್ಲಿ ಹಾಸ್ಯವನ್ನು ಉಕ್ಕಿಸಿ, ನಗುವಿನ ಹುಚ್ಚುಹೊಳೆಯನ್ನೇ ಹರಿಸುತ್ತದೆ. ಕುಮಾರವ್ಯಾಸಕವಿ ಕಡೆದು ನಿಲ್ಲಿಸಿರುವ ಈ ಉತ್ತರನ ಪಾತ್ರ ಕನ್ನಡ ಸಾಹಿತ್ಯದಲ್ಲಿಯೆ ಅಪೂರ್ವ, ಅದ್ವಿತೀಯ, ಅನುಕರಣೀಯ.

ಕುಮಾರವ್ಯಾಸನ ಭಾಷಾಶೈಲಿಗಳು ಅದ್ವಿತೀಯ, ಅನುಕರಣೀಯ, ವಾಗರ್ಥಗಳ ಉಮಾಮಹೇಶ್ವರರ ಮೆರವಣಿಗೆಯನ್ನು ಕಾಣುತ್ತೇವೆ, ಆತನ ಬರವಣಿಗೆಯಲ್ಲಿ ಮಾತುಗಳ ಜೀವನಾಡಿಯನ್ನು ಹಿಡಿದು ಮಿಡಿಸಬಲ್ಲ ರಸಜ್ಞ ಆತ. 'ಕಡ್ಡಿ ತಡೆವುದೇ ಕಡಲ ?', 'ಕುರುಬರೂರಲಿ ಗಾಜು ಮಾಣಿಕ', 'ಎಳಲತೆಯ ಕುಡಿ ಮಾಳಿಗೆಗೆ ತೊಲೆಯೆ ?' ಇಂತಹ ಸೂಕ್ತಿಗಳನ್ನು ಯಥೇಚ್ಛವಾಗಿ ನೀಡಿ, ಆತನು ಕನ್ನಡಸಾಹಿತ್ಯವನನು ಶ್ರೀಮಂತಗೊಳಿಸಿದ್ದಾನೆ. ಆತನ ವಾಕ್ಪ್ರವಾಹದಲ್ಲಿ ವ್ಯಾಕರಣ ಕೊಚ್ಚಿಹೋಗುತ್ತದೆ ಕಮಲಗಣ್ಣು, ಕೃಪಣತನ, ಕಡುಲೋಲುಪತೆ, ಮರಿಮೇಘ, ನಾರಾಯಣ ! ಇಂತಹ ಪ್ರಯೋಗಗಳ ಸಾಧುತ್ವವನ್ನು ರಸಪ್ರವಾಹದಲ್ಲಿ ಮೈ ಮರೆಯಬಲ್ಲ ಯಾವ ಓದುಗ ತಾನೆ ಪ್ರಶ್ನಿಸುತ್ತಾನೆ ? ಕುಮಾರವ್ಯಾಸನ ಭಾಷೆಗೆ ಕುಮಾರವ್ಯಾಸನೆ ಪಾಣಿನಿ.

ಕುಮಾರವ್ಯಾಸನು 'ರೂಪಕಸಾಮ್ರಾಜ್ಯ ಚಕ್ರವರ್ತಿ' ಆತ ಮಾತಾಡುವುದೆ ರೂಪಕದಲ್ಲಿ. ಈ ಶಬ್ದಬ್ರಹ್ಮ ಕೂಗಿದುದೆಲ್ಲ ರಾಗ, ಗೆರೆಯೆಳೆದುದೆಲ್ಲ ಚಿತ್ರ. 'ಅಕೀರ್ತಿಕಾಮಿನಿ ಕುಣಿವಳೈ ತ್ಯೆ ಜಗದ ಜಿಹ್ವಾರಂಗಮಧ್ಯದಲಿ', 'ಕಾರಿರುಳ ಪಟ್ಟಣಕೆ ಚಂದ್ರನ ತೋರಣವ ಬಿಗಿದಂತೆ', 'ಅರಿವಿನ ಸೆರಗು ಹಾರಿತು', 'ಕೋಪಾಯುಧವ ಮಸೆದಳು ಧಾರೆಗಂಗಳಲಿ', 'ಬಂಧುದರುಶನ ಫಲವಲಾ ಸಂಸಾರತರುವಿಂಗೆ', 'ಎನ್ನ ಪುಣ್ಯವುಗಾಳಿಗೊಡ್ಡಿದ ಸೊಡರಲಾ', 'ಬೀಳಕೂಡದು ಲಜ್ಜೆ', 'ಮಹಿಮೆಯ ಕೀಲು ಕಳಚಿತು' ಇಂತಹ ರೂಪಕಗಳಿಗೆ ಕೊನೆ ಮೊದಲೆಲ್ಲಿ ? ನಾರಣಪ್ಪನ ಉಕ್ತಿವೈಚಿತ್ರ್ಯ, ಮಾತಿನ ಗಾರುಡೀ ಹಿತಮಿತವರ್ಣನೆಗಳ ಸೊಗಸು – ಇವನ್ನು ವರ್ಣಿಸಲು ಮಾತುಗಳಿಗೆ ಶಕ್ತಿ ಸಾಲದು. ಉತ್ತಮ ಕೃತಿರಚನೆಯೆಂಬುದು 'ಭುವನದ ಭಾಗ್ಯದಿಂದಮಕ್ಕು' ಎಂಬ ಸೂಕ್ತಿಗೆ ಕುಮಾರವ್ಯಾಸ ಬಹುದೊಡ್ಡ ಉದಾಹರಣೆ.

೨. ಕುಮಾರ ವಾಲ್ಮೀಕಿ (ಕ್ರಿ.ಶ. ಸು ೧೫೫೦)

ವ್ಯಾಸಭಾರತವನ್ನು ಸಂಗ್ರಹಿಸಿದವನು 'ಕುಮಾರವ್ಯಾಸ'ನಾಗಿರುವಂತೆ, ವಾಲ್ಮೀಕಿರಾಮಾಯಣವನ್ನು ಸಂಗ್ರಹಿಸಿದವನು 'ಕುಮಾರವಾಲ್ಮೀಕಿ'ಯಾಗಿದ್ದಾನೆ. ಗದುಗಿನ ವೀರನಾರಯಣನು ಕುಮಾರವ್ಯಾಸನ ಆರಾಧ್ಯ ದೈವವಾಗಿರುವಂತೆ ತೊರವೆಯ ನರಸಿಂಹನು ಕುಮಾರವಾಲ್ಮೀಕಿಯ ಇಷ್ಟ ದೈವವಾಗಿದ್ದಾನೆ.

ಅದು ಗದುಗಿನ ಭಾರತ, ಇದು ತೊರವೆಯ ರಾಮಾಯಣ. ಇಬ್ಬರೂ ಭಾರತದ ಎರಡು ಮಹಾಕಾವ್ಯಗಳನ್ನು ತೆಗೆದುಕೊಂಡು ಸಂಗ್ರಹಿಸಿದ್ದಾರೆ. ಇಬ್ಬರ ಕಾವ್ಯದೃಷ್ಟಿಯಲ್ಲಿಯೂ ಭಾಗವತದೃಷ್ಟಿಯಿದೆ. ಇಬ್ಬರೂ ತಮ್ಮ ಕಾವ್ಯಗಳ ನಾಯಕರನ್ನು ಭಗವಂತನೆಂದು ನಂಬಿ ಭಕ್ತಿಯಿಂದ ಮೈದುಂಬಿ ಬರೆದಿದ್ದಾರೆ. ಇಷ್ಟೆ ಇವರಿಬ್ಬರ ಹೋಲಿಕೆ. ಆದರೆ ಕುಮಾರವಾಲ್ಮೀಕಿ ಈ ಹೋಲಿಕೆಯನ್ನು ಮುಂದುವರಿಸಿ, ಕಾವ್ಯಶಕ್ತಿಯಲ್ಲಿಯೂ ತಾನು ಆತನಿಗೆ ಸಮಾನನೆನ್ನುವಂತೆ ಹೇಳಿಕೊಂಡಿದ್ದಾನೆ. ಇದು ಮಾತ್ರ ನವಿಲನ್ನು ನೋಡಿ ಕೆಂಬೂತ ಪುಕ್ಕ ತೆರೆದುಕೊಂಡಂತೆ.

ತೊರವೆ ರಾಮಾಯಣ ೫೦೦೦ಕ್ಕೂ ಹೆಚ್ಚು ಪದ್ಯಗಳನ್ನು ಒಳಗೊಂಡಿರುವ ಬೃಹತ್ಕಾವ್ಯ. ಇದರಲ್ಲಿ ಅರ್ಧಭಾಗದಷ್ಟನ್ನು ಯುದ್ಧಕಾಂಡವೆ ಆಕ್ರಮಿಸಿದೆ. ಈತನ ಭಾಷೆ ಸರಳ, ನಿರೂಪಣೆ ನಿರರ್ಗಳ, ಶೈಲಿ ಪ್ರಸಾದಪೂರ್ಣ. ಈತ ಕುಮಾರವ್ಯಾಸನ ಉಗ್ರಾಣಕ್ಕೆ ಕನ್ನಹಾಕಿ ತುಷ್ಟಿಪುಷ್ಟಿಗಳನ್ನು ಪಡೆದಿದ್ದಾನೆ. ಆದರೆ ಅಲ್ಲಿನ ದರ್ಶನ, ಧ್ವನಿಗಳು ಇಲ್ಲಿಲ್ಲ. ಇದೊಂದು ಕಿರು ದೊರೆಯೆ ಹೊರತು ಮಹಾನದಿಯಲ್ಲ. ಕವಿಯು ಮಹಾಕವಿಯಲ್ಲ, ಭಕ್ತ ಕವಿ. ರಾಮಾಯಣದ ಕಥೆಯನ್ನು ಶಿವನು ಪಾರ್ವತಿಗೆ ಹೇಳಿದಂತೆ ಇಲ್ಲಿ ಸಂಭಾವಿಸಲಾಗಿದೆ. ವಾಲ್ಮೀಕಿಯು ಅದ್ವಿತೀಯನಾದ ಮಾನವಶ್ರೇಷ್ಠನನ್ನು ಶ್ರೀರಾಮನಲ್ಲಿ ಕಂಡಿದ್ದರೆ ಕುಮಾರವಾಲ್ಮೀಕಿ ಆತನಲ್ಲಿ ದೇವತ್ವದ ಆವಾಹನೆ ಮಾಡಿದ್ದಾನೆ. ಅದಕ್ಕೆ ತಕ್ಕಂತೆ ಸೀತೆಯೂ 'ಸಾಕ್ಷಾತ್ ಲಕ್ಷ್ಮೀ', 'ವಿಶ್ವಮಾತೆ', ಲೋಕದ ಮಹಾಮಾಯಾವಿನೋದೆ. ಹೀಗೆ ನಾಯಕ ನಾಯಕಿಯರಿಬ್ಬರೂ ಅಲೌಕಿಕದ ಪ್ರಭಾವಳಯದಲ್ಲಿಯೆ ಕಾಣಿಸಿಕೊಳ್ಳುತ್ತಾರೆ. ಇಂತಹ ಅಪ್ರಾಕೃತ ಪಾತ್ರಗಳ ಪುಣ್ಯಚರಿತ್ರೆಯಾದುದರಿಂದ ಇದು ಜನಸಾಮಾನ್ಯರ ಹೃದಯಕ್ಕೆ ಇಂಪನ್ನೂ ತಂಪನ್ನೂ ಕೊಡಬಲ್ಲುದು.

ಕುಮಾರವಾಲ್ಮೀಕಿ ಕುಮಾರವ್ಯಾಸನನ್ನು (೧೪೩೦) ಹೊಗಳಿದ್ದಾನೆ. ಕುಮಾರವಾಲ್ಮೀಕಿಯನ್ನು ಬೊಬ್ಬೂರು ರಂಗಕವಿ (೧೭೬೦) ಹೊಗಳಿದ್ದಾನೆ. ಆದ್ದರಿಂದ ಕವಿಯ ಕಾಲ ಇವೆರಡರ ಮಧ್ಯದ್ದು. ಕುಮಾರವ್ಯಾಸನ ನಿಜವಾದ ಹೆಸರು ವೀರನಾರಾಯಣ ಎಂದು ಹೇಳುವಂತೆ, ಈತನ ಹೆಸರನ್ನು ನರಹರಿ ಎಂದು ನಿರ್ದೇಶಿಸುತ್ತಾನೆ. ಈತನಿಗೆ 'ಕವಿರಾಜಹಂಸ' ಎಂಬ ಬಿರುದಿದ್ದಂತೆ ತಿಳಿದುಬರುತ್ತದೆ. ಈತನು 'ಮೈರಾವಣಕಾಳಗ'ವನ್ನೂ ಬರೆದಿದ್ದಾನಂತೆ!

೩. ತಿಮ್ಮಣ್ಣ ಕವಿ (ಕ್ರಿ.ಶ. ೧೫೧೦)

ವಿಜಯನಗರದ ಶ್ರೀಕೃಷ್ಣದೇವರಾಯನ (೧೫೦೯-೧೫೨೯) ಆಸ್ಥಾನ ಕವಿ. ತಿಮ್ಮಣ್ಣ ರಾಜನ ಅಪ್ಪಣೆಯಂತೆ 'ಸುರನದಿಯ ಯಮುನಾ ತರಂಗಿಣಿ ಬೆರೆಸಿ ಹರಿವಂದದಲಿ' ಕುಮಾರವ್ಯಾಸನು ಬರೆಯದೆ ಬಿಟ್ಟ ವ್ಯಾಸಭಾರತದ ಭಾಗವನ್ನು ಬರೆದು 'ಕೃಷ್ಣರಾಯಭಾರತಕಥಾಮಂಜರಿ' ಎಂಬ ಹೆಸರಿನಿಂದ ಅದಕ್ಕೆ ಸೇರಿಸಿದ್ದಾನೆ. ಈತನಿಗೆ 'ಕರ್ಣಾಟಕವಿಕುಲಸಾರ್ವಭೌಮ' ಎಂಬ ಬಿರುದಿದೆ. ಆತನಿಗೆ ಕವಿಹೃದಯವಿದೆಯಾದರೂ ಈ ಬಿರುದು ಆತನ ಕಾವ್ಯ ಶಕ್ತಿಗಿಂತಲೂ ಹೆಚ್ಚಾಗಿ ರಾಜಕಟಾಕ್ಷಪ್ರಭಾವದಿಂದ ಬಂದಿರಬೇಕು. ತಿಮ್ಮಣ್ಣ ಕವಿಯ ಗ್ರಂಥವೇನೊ ದೊಡ್ಡದೆ; ೩,೭೭೬ ಭಾಮಿನೀ ಷಟ್ಪದಿಯ ಪದ್ಯಗಳನ್ನು ಒಳಗೊಂಡಿದೆ. ಆದರೆ ಕುಮಾರವ್ಯಾಸನೆಲ್ಲಿ, ತಿಮ್ಮಣ್ಣನೆಲ್ಲಿ? ಆ ಸೂರ್ಯನ ಇದಿರಿನಲ್ಲಿ ಇದೊಂದು ಸೊಡರು ಅಷ್ಟೆ. ಇದಲ್ಲದೆ, ತಿಮ್ಮಣ್ಣ ಆಯ್ದುಕೊಂಡಿರುವ ಕಾವ್ಯಭಾಗ ರಸಭರಿತವಾದುದಲ್ಲ; ಇದರಲ್ಲಿ ಬರುವ ರಾಜನ ಅಥವಾ ಋಷಿಗಳ ಉಪಾಖ್ಯಾನಗಳಲ್ಲಿ ಧರ್ಮಜಿಜ್ಞಾಸೆ, ರಾಜನೀತಿ, ವೇದಾಂತ ಇತ್ಯಾದಿ ವಿಷಯಗಳು ಹೃದಯದ ರಸಸ್ಥಾನವನ್ನು ಮಿಡಿಸುವಂತಹುವೇನೂ ಅಲ್ಲ. ಇಂತಹ ನೀರಸ ವಿಷಯಗಳನ್ನು ಆಯ್ದುಕೊಂಡುದೆ ತಪ್ಪು. ಅದರಲ್ಲಿಯೂ ತಿಮ್ಮಣ್ಣ ಸಂಸ್ಕೃತ ಮೂಲಕ್ಕೆ ಹೋಗದೆ ತಿಕ್ಕಣ್ಣ ಮತ್ತು ನನ್ನಯ್ಯ ಕವಿಗಳು

ಬರೆದಿರುವ ತೆಲುಗು ಭಾರತದಿಂದ ಎತ್ತಿಕೊಂಡಿದ್ದಾನೆ. ಇದು ಕವಿಯ ಆತ್ಮವಿಕಸನದ ಅಭಾವಕ್ಕೆ ಸಾಕ್ಷಿಯಾಗಿದೆ.

೪. ಚಾಟುವಿಟ್ಠಲನಾಥ (ಕ್ರಿ.ಶ. ೧೫೩೦)

ಶುಕಮುನಿರಚಿತ ಸಂಸ್ಕೃತಭಾಗವತವನ್ನು ಕನ್ನಡಕ್ಕೆ ತಂದುಕೊಟ್ಟಿರುವ ಈ ಕವಿ ತನ್ನನ್ನು ಕುರಿತು ಇದು 'ಸದಾನಂದಾಖ್ಯಯೋಗಿಯ ತೊದಲು ನುಡಿ', 'ಗೋಪಿನಾಥನು ಮಂಗಳವನೀವನು ಸದಾನಂದಾಖ್ಯಮುನಿವರಿಗೆ' ಎಂದು ಹೇಳಿಕೊಂಡಿರುವುದರಿಂದ ಈತನ ನಿಜವಾದ ಹೆಸರು ಸದಾನಂದಯೋಗಿ ಎಂದು ಹೇಳಲು ಅವಕಾಶವಿದೆ. ಕನ್ನಡದಲ್ಲಿ ಭಾರತ ಬರೆದಿರುವ 'ಕುಮಾರವ್ಯಾಸ', ರಾಮಾಯಣ ಬರೆದವ 'ಕುಮಾರ ವಾಲ್ಮೀಕಿ'ಯಾದಂತೆ ಭಾಗವತವನ್ನು ಬರೆದ ಸದಾನಂದಮುನಿ 'ನಿತ್ಯಾತ್ಮ ಶುಕಯೋಗಿ' ಎಂಬ ಕಾವ್ಯನಾಮವನ್ನು ಧರಿಸಿದ್ದಾನೆ. ಈ ಕಾವ್ಯದ ಕರ್ತೃತ್ವವನ್ನು ಕುರಿತು ಸಾಕಷ್ಟು ವಿಚಾರವಿಮರ್ಶೆ ನಡೆದಿದೆ. ನಿತ್ಯಾತ್ಮನಾಥ, ವಿದ್ಯಾನಾಥ, ಸದಾನಂದಯೋಗಿ, ನಿರ್ವಾಣನಾಥ, ಚಾಟುವಿಟ್ಠಲನಾಥ ಈ ಐದು ಜನ ಕವಿಗಳು ಕನ್ನಡ ಭಾಗವತದ ಬೇರೆಯ ಭಾಗಗಳನ್ನು ಬರೆದಿರುವರೆಂದೂ, ಅವರು ಐವರೂ ನವನಾಥಪಂಥಕ್ಕೆ ಸೇರಿದ ಸನ್ಯಾಸಿಗಳೆಂದೂ ಶ್ರೀಮಾನ್ ಬೆಟಗೇರಿ ಕೃಷ್ಣಶರ್ಮರು ಸಾಹಿತ್ಯ ಪರಿಷತ್ ಪತ್ರಿಕೆಯ (ಸಂ. ೧೨, ಸಂ. ೩) ಲೇಖನವೊಂದರಲ್ಲಿ ತಿಳಿಸುತ್ತಾರೆ.

ಶ್ರೀ ಆರ್.ಎಸ್. ಮುಗಳಿಯವರು 'ಭಾಗವತದ ಹತ್ತು ಸ್ಕಂಧಗಳನ್ನು ಆರಾಧ್ಯೇಂದ್ರ ಬರೆದನೆಂದೂ, ಹನ್ನೊಂದನೆಯ ಸ್ಕಂಧವನ್ನು ಸದಾನಂದ ಶಿವಯೋಗಿ ಬರೆದನೆಂದೂ, ಹನ್ನೆರಡನೆಯ ಸ್ಕಂಧವನ್ನು ನಿರ್ವಾಣನಾಥ ಬರೆದನೆಂದೂ ತಿಳಿಯಲು ಆಧಾರವಿದೆ. ಇವರೆಲ್ಲರ ಕೃತಿಗಳನ್ನು ಒಟ್ಟುಗೂಡಿಸಿ ಸಂಗ್ರಹಗೊಳಿಸಿದ ಶ್ರೇಯಸ್ಸು ಮಾತ್ರ ಚಾಟುವಿಟ್ಠಲನಾಥನಿಗೆ ಸಲ್ಲುತ್ತದೆ' ಎಂದು ತಮ್ಮ ಕನ್ನಡ ಸಾಹಿತ್ಯಚರಿತ್ರೆಯಲ್ಲಿ ಹೇಳುತ್ತಾರೆ. ಕವಿಯು ಕುಮಾರವ್ಯಾಸನಿಗಿಂತ ಈಚೆಯವನೆಂಬುದು ನಿರ್ವಿವಾದ ; ಏಕೆಂದರೆ ಚಾಟುವಿಟ್ಠಲನಾಥನ ಮತ್ತೊಂದು ಕಾವ್ಯವಾದ ಮಹಾಭಾರತದಲ್ಲಿ ಕುಮಾರವ್ಯಾಸನು ಬರೆಯದೆ ಬಿಟ್ಟ ಪೌಲೋಮ ಮತ್ತು ಆಸ್ತಿಕಪರ್ವಗಳ ಕಥೆಯಿದೆ. ಆದರಲ್ಲಿ ಕುಮಾರವ್ಯಾಸನ ಪ್ರಭಾವ ಸುಸ್ಪಷ್ಟವಾಗಿ ಗೋಚರವಾಗುತ್ತದೆ. ಕುಮಾರವ್ಯಾಸನ ಪ್ರತಿಭೆ, ಕಲ್ಪನಾಶಕ್ತಿಗಳಿಲ್ಲದಿದ್ದರೂ ವ್ಯಾಕರಣವಿರೋಧವಾದ ಪ್ರಯೋಗಗಳು ಇದರಲ್ಲಿ ಹೇರಳವಾಗಿವೆ. ಈ ಕಾವ್ಯದ ಆಧಾರದಿಂದ ಚಾಟುವಿಟ್ಠಲನು ಕುಮಾರವ್ಯಾಸನಿಂದ ಈಚೆಯವನು ಎಂಬುದು ಸುಸ್ಪಷ್ಟ ಕವಿಯು ತನ್ನ ಭಾಗವತದಲ್ಲಿ ತನ್ನ ಗುರುಗಳಾದ ಅಚ್ಯುತಾರಣ್ಯತಿಗಳನ್ನು ಸ್ತೋತ್ರ ಮಾಡುವ ಸಂದರ್ಭದಲ್ಲಿ ವಿಜಯನಗರದ ಕೃಷ್ಣದೇವರಾಯ (ಕ್ರಿ.ಶ. ೧೫೦೮-೧೫೨೯) ಮತ್ತು ಅಚ್ಯುತರಾಯರನ್ನು (೧೫೩೦-೧೫೪೨) ಹೆಸರಿಸಿರುವುದರಿಂದ ಈತನ ಕಾಲ ಸುಮಾರು ೧೫೩೦ ಎಂದು ಹೇಳಬಹುದು. ಭಾಗವತವು ಗಾತ್ರದಲ್ಲಿ ಕುಮಾರವ್ಯಾಸಭಾರತಕ್ಕೆ ಒಂದೂವರೆಯಷ್ಟಿದೆ. ಇದರ ಕವಿ ತನ್ನ ಕಾವ್ಯ ಸೃಷ್ಟಿಗೆ ಕೈಹಾಕಿರುವುದು 'ಅಖಿಳಭವರೋಗಹರವಿದು' ಎಂಬ ಕಾರಣದಿಂದ. 'ಹರಿಗುಣಸ್ತುತಿ, ಹರಿಪರಾಯಣ, ಶರಣಜನ ಸತ್ಕೀರ್ತಿ ಸಂಸ್ತುತಿ, ಹರಿಪದಾಂಬುಜಶಕ್ತಿ, ತತ್ ಸಾಧನದ ವಿಸ್ತಾರ, ಹರಿನಿಜಜ್ಞಾನೋಪಲಾಲಿತ ಪರತರಾನಂದಾನುಭವ' ಇವನ್ನು ಒಳಗೊಂಡ ಹರಿಭಕ್ತಿಕೋಶ ಇದು. ಕವಿ ತನ್ನ ಹೆಗ್ಗುರಿಯಾದ ಧರ್ಮನಿರೂಪಣೆಯನ್ನು ಇಲ್ಲಿ ಸಾಧಿಸಿ ಕೃತಕೃತ್ಯನಾಗಿದ್ದಾನೆ. 'ಕನ್ನಡದ ಕೃತಿಯೆಂದವಜ್ಞಾಪ್ಪನ್ನ ರಾಗದಿರಕಟದರ್ಪಣ ಕನ್ನಡಿಯಿದೆಂದೆಂದಡಾವುದು ಕೊರತೆ ?'' ಎಂಬ ಹೇಳಿಕೆ ಈತನ ಕನ್ನಡ ಅಭಿಮಾನಕ್ಕೆ ಹಿಡಿದ ಸೊಡರು. ಕವಿಯ ಕೃತಿರಚನೆ ಸರಳವಾಗಿ

ಸತ್ವಯುಕ್ತವಾಗಿದೆ. ಆತನ ನಿರೂಪಣೆಯಲ್ಲಿ ನಿರರ್ಗಳತೆಯಿದೆ. ಅಲ್ಲಲ್ಲಿ ಸುಂದರವಾದ, ಸಮಯೋಚಿತವಾದ ವರ್ಣನೆಗಳಿವೆ - ದೇವಕಿಯನ್ನು ಕೊಲ್ಲಹೊರಟ ಕಂಸನನ್ನು ವಸುದೇವ 'ಮುಳ್ಳು ಕಾಲಲಿ ಮುರಿದೊಡಕಟಾಹಲ್ಲ ಸುಡುವರೆ ?' ಎಂದು ಕೇಳುತ್ತಾನೆ; ದೇವಕಿ ಮಕ್ಕಳನ್ನು ಹೆತ್ತುದು ನೆರೆ ದಂಡಕ್ಕೆಧನವನು ಗಳಿಸುವಂತೆ' ಇಂದ್ರನು ಮಳೆಗರೆದಾಗ' ಗೋಕುಲ ವೈದೆ ನೀರೊಳಗಿಟ್ಟ ಮೃತ್ತಿಕೆಯಂತೆ ನೆನೆದುದು', ಜನರು ಶ್ರೀಕೃಷ್ಣ ಬಲರಾಮರನ್ನು 'ಕಣ್ಣಲ್ಲಿ ಮುಳುಗಿ ಮೊಗದೀಂಟಿದರು, ಕಂಸ ವಧೆಯ ವೃತ್ತಾಂತವನ್ನು ಕೇಳಿ ಕಣ್ಗಲಿ ಮುಕ್ಕಳಿಸಿದನು ಮಗಧಪತಿ ರೋಷಾಗ್ನಿಯುವರಣೆಯ', ಹಲಧರನೊಡನೆ ಯುದ್ಧಕ್ಕೆ ನಿಂತ ಜರಾಸಂಧನಿಗೆ 'ಕೆತ್ತಿದವು ಮೀಸೆಗಳು, ಕಂಗಳು ಹೊತ್ತ ವರುಣಚ್ಛವಿಯನೈತಹ ಮೃತ್ಯುವಿನ ವೊಲಿದಿರುಗೊಂಡನು' - ಈ ವರ್ಣನಾ ಭಾಗಗಳನ್ನು ಓದುವಾಗ ಕುಮಾರವ್ಯಾಸನ ನೆನಪಾಗುವುದು ಸಹಜ. ಕನ್ನಡ ಭಾಗವತವೂ ಕುಮಾರವ್ಯಾಸನ ಕಾವ್ಯದಂತೆ 'ಭಾಮಿನೀಷಟ್ಪದಿ'ಯಲ್ಲಿದೆ. ಕವಿಯ ಈ ಬೃಹದ್ಗ್ರಂಥದಲ್ಲಿ ಹತ್ತನೆಯ ಸ್ಕಂಧ, ಅದರಲ್ಲಿಯೂ ಶ್ರೀಕೃಷ್ಣನ ಬಾಲಲೀಲೆ, ರುಕ್ಮಿಣೀಕಲ್ಯಾಣ, ಕುಚೇಲೋಪಾಖ್ಯಾನ ಇತ್ಯಾದಿಗಳು ಹೃದಯಸ್ಪರ್ಶಿಯಾಗಿವೆ.

೫. ಲಕ್ಷ್ಮೀಶ (ಕ್ರಿ.ಶ. ೧೫೩೦)

ಮಹಾಕವಿ ಪಂಪನಿಗೆ ರನ್ನ, ಮಹಾಕವಿ ಹರಿಹರನಿಗೆ ರಾಘವಾಂಕ ಜೋಡಿಯಾಗಿ ದೊರೆತಂತೆ ಮಹಾಕವಿ ಕುಮಾರವ್ಯಾಸನಿಗೆ ಲಕ್ಷ್ಮೀಶನ ಜೋಡಿ ಒದಗಿದೆ. ಈ ಹೋಲಿಕೆ ಅವರ ಕಾವ್ಯಶಕ್ತಿಗಿಂತಲೂ ಅವರ ಕವಿ ಕಾವ್ಯ ಸೃಷ್ಟಿಗೆ ಸಂಬಂಧಿಸಿದುದು. ಕುಮಾರವ್ಯಾಸ, ಲಕ್ಷ್ಮೀಶ ಇಬ್ಬರೂ ಪಾಂಡವರ ಕಥೆಯನ್ನು ಕಾವ್ಯವಸ್ತುವಾಗಿ ಸ್ವೀಕರಿಸಿದ್ದಾರೆ, ಇಬ್ಬರ ಕಥಾನಾಯಕನೂ ಶ್ರೀಕೃಷ್ಣ; ಇಬ್ಬರೂ ತಮ್ಮ ಕಾವ್ಯಗಳನ್ನು ಕೃಷ್ಣಚರಿತಾಮೃತವೆಂದು ಕರೆದು ಸನ್ಮಾನಿಸಿದ್ದಾರೆ. ಕುಮಾರವ್ಯಾಸನದು ವ್ಯಾಸಭಾರತ, ಲಕ್ಷ್ಮೀಶನದು ಜೈಮಿನಿಭಾರತ, ಸಂಸ್ಕೃತಮೂಲದಿಂದ ಉದಿಸಿರುವ ಈ ಎರಡು ಕಾವ್ಯಗಳು ಸ್ವತಂತ್ರ ಕೃತಿಗಳೆನ್ನುವಷ್ಟರ ಮಟ್ಟಿಗೆ ತಮ್ಮತನವನ್ನು ಸ್ಥಾಪಿಸಿಕೊಂಡಿವೆ. ಇಬ್ಬರೂ ಹರಿಹರವಿಭೇದದ ಸುಳಿಗೆ ಸಿಕ್ಕದೆ ಸರ್ವಧರ್ಮಸಮನ್ವಯಬುದ್ಧಿಯನ್ನು ಮೆರೆದಿದ್ದಾರೆ. ಇಬ್ಬರ ಕಾವ್ಯಶಕ್ತಿಯಲ್ಲಿ ಅಜಗಜಾಂತರ ವ್ಯತ್ಯಾಸವಿದ್ದರೂ ಇಬ್ಬರೂ ಪಂಡಿತಪಾಮರರ ಗೌರವಾದರಗಳಿಗೆ ಪಾತ್ರರಾಗಿದ್ದಾರೆ. ಇಬ್ಬರೂ ಒಂದೊಂದು ದೃಷ್ಟಿಯಿಂದ ಅಸದೃಶಕೀರ್ತಿಶಾಲಿಗಳಾಗಿದ್ದಾರೆ. ಕುಮಾರವ್ಯಾಸನ ಹಿಮಾಚಲಸದೃಶವಾದ ಪ್ರತಿಭೆ ಭಾಮಿನೀಷಟ್ಪದಿಯಲ್ಲಿ ಅಭಿವ್ಯಕ್ತವಾಗಿದ್ದರೆ, ಲಕ್ಷ್ಮೀಶನ ವಾರ್ಧಕಷಟ್ಪದಿಯಲ್ಲಿ ಅದ್ವಿತೀಯವಾದ ನಾದಮಾಧುರ್ಯ, ಷಟ್ಪದಿಗಳ ಝೇಂಕಾರ-ಕೇಳಿ ಬರುತ್ತದೆ. ಕುಮಾರವ್ಯಾಸನದು ಪ್ರಾಸಾದಿಕವಾಣಿಯಾದರೆ ಲಕ್ಷ್ಮೀಶನು ತನ್ನ ಸ್ವಾಮಿಯಾದ 'ಗೀರ್ವಾಣಪುರನಿಲಯ ಲಕ್ಷ್ಮೀವರಂ ತಾನೆ ಸಂಗೀತಸುಕಲಾನಿಪುಣನು, ವೀಣೆಯಂ ಗಾನಮಂ ನುಡಿಸುವಂದದೊಳೆನ್ನ ವಾಣಿಯಿಂಕವಿತೆಯಂ ಪೇಳಿಸಿದನ್' ಎಂದು ಹೇಳಿ, ತನ್ನ ಕಾವ್ಯವೂ ಪ್ರಾಸಾದಿಕವಾದುದೇ ಎಂದು ಹೇಳಿಕೊಂಡಿದ್ದಾನೆ.

ಕನ್ನಡ ಜೈಮಿನಿಭಾರತದ ಕರ್ತೃವಾದ ಲಕ್ಷ್ಮೀಶನು ಅಣ್ಣಮಾಂಕನ ಮಗನೆಂದೂ, 'ಕವಿಚೂತವನಚೈತ್ರ' ಎಂಬ ಬಿರುದಿತ್ತೆಂದೂ, ದೇವಪುರದ ಲಕ್ಷ್ಮೀರಮಣನು ಆತನ ಆರಾಧ್ಯದೈವವೆಂದು ಆತನ ಕಾವ್ಯದಿಂದ ಗೊತ್ತಾಗುತ್ತದೆ. ಕಾವ್ಯದ ಮಧ್ಯದಲ್ಲಿ ಆತನು 'ಸುರಪುರ' ಎಂಬುದನ್ನು 'ದೇವಪುರ'ಕ್ಕೆ ಪರ್ಯಾಯವಾಗಿ ಬಳಸಿರುವುದರಿಂದ ಈತನ ಊರು ಕಡೂರು ಜಿಲ್ಲೆಯ ದೇವನೂರೆ ? ರಾಯಚೂರು ಬಳಿ ಇರುವ ಸುರಪುರವೆ ? ಎಂಬ ಸಂದೇಹ ಹುಟ್ಟಿಕೊಂಡು, ಆ ವಿಚಾರವಾಗಿ ಸಾಕಷ್ಟು ಚರ್ಚೆ ನಡೆದಿದೆ. ಕವಿ ತನ್ನ ಕಾವ್ಯದಲ್ಲಿ ಯೌವನಾಶ್ವನ ಭದ್ರಾವತಿಯನ್ನು

ಅನುಭವೈಕವೇದ್ಯವೆಂಬಂತೆ ಹೃದ್ಯವಾಗಿ ವರ್ಣಿಸಿರುವುದರಿಂದಲೂ, 'ಸುರಪುರ' ಎಂಬುದಕ್ಕಿಂತ ದೇವಪುರ ಎಂಬ ಮಾತನ್ನೇ ಹೆಚ್ಚಾಗಿ ಬಳಸಿರುವುದರಿಂದಲೂ, ದೇವಪುರದ ಲಕ್ಷ್ಮೀರಮಣಸ್ವಾಮಿಯ ಅರ್ಚಕರು ಕವಿಯ ವಂಶದವರಾಗಿದ್ದರೆಂಬ ದೇವಪುರದ ಜನರ ಹೇಳಿಕೆಯಿಂದಲೂ ಆತನು ದೇವಪುರದವನೇ ಇರಬೇಕೆಂಬ ಬಹು ಜನಪಂಡಿತರ ಅಭಿಪ್ರಾಯ. ಈತನ ಕಾಲನಿರ್ಣಯವೂ ಬಹಳ ತೊಡಕಾಗಿದೆ. ಗೋಪಕವಿ (ಕ್ರಿ.ಶ. ೧೭೦೦) ಈತನನ್ನು ಹೊಗಳಿರುವುದರಿಂದ ಲಕ್ಷ್ಮೀಶ ೧೬೦೦ಕ್ಕೂ ಹಿಂದಿನವನು ಎಂಬುದು ನಿರ್ವಿವಾದ. ಎಷ್ಟು ಹಿಂದಿನವನು ಎಂದು ಹೇಳಲು ಆಧಾರಗಳಿಲ್ಲ. ಭದ್ರಾವತಿಯ ವರ್ಣನೆಯಲ್ಲಿ ವಿಜಯನಗರದ ವೈಭವ-ಅದರಲ್ಲಿಯೂ ಕೃಷ್ಣದೇವರಾಯನ ವೈಭವ-ಕಣ್ಣಿಗೆ ಕಟ್ಟುವಂತಿರುವುದರಿಂದ ಈತನ ಕಾಲ ಕ್ರಿ.ಶ. ೧೫೩೦ ಎಂದು ಶ್ರೀ ತಿ.ತಾ ಶರ್ಮರು (ಶ್ರೀ ತ.ಸು. ಶಾಮರಾಯರು 'ಜೈಮಿನಿಭಾರತ ಸಂಗ್ರಹ'ದ ಮುನ್ನುಡಿ) ಅಭಿಪ್ರಾಯಪಟ್ಟಿದ್ದಾರೆ.

ಲಕ್ಷ್ಮೀಶನ ಕಾವ್ಯವು ಪಂಡಿತಪಾಮರರಿಗೆ, ಆಬಾಲವೃದ್ಧರಿಗೆ ಅತ್ಯಂತ ಪ್ರಿಯವಾಗಿದೆ. ನಮ್ಮ ಹಿಂದಿನ ತಲೆಮಾರಿನಲ್ಲಿ ನಮ್ಮ ಜನರ ಕನ್ನಡಪಾಂಡಿತ್ಯಕ್ಕೆ ಇದೇ ಒರೆಗಲ್ಲಾಗಿತ್ತು. ಅದನ್ನು ಓದಿ ಸ್ವಾರಸ್ಯವಾಗಿ ಅರ್ಥಹೇಳಬಲ್ಲವನೆ ಅಂದಿನ ವಿದ್ಯಾದಿಗ್ಗಜ. ಹೀಗೆ ಜನಪ್ರಿಯವಾಗಿರುವುದಕ್ಕೆ ಮುಖ್ಯ ಕಾರಣ ಅದರಲ್ಲಿರುವ ಸುಂದರವಾದ ಕಥೆಗಳು. ಯೌವನಾಶ್ವ, ನೀಲಧ್ವಜ, ಚಂಡಿ, ಸುಧನ್ವ, ಪ್ರಮೀಳೆ, ಚಂದ್ರಹಾಸ, ಕಾವ್ಯದ ಆದಿಯಿಂದ ಅಂತ್ಯದವರೆಗೆ ಕಥೆಯ ಮೇಲೆ ಕಥೆಯನ್ನು ಒಳಗೊಂಡ ಒಂದು ಕಥಾಸರಿತ್‌ಸಾಗರ, ಆತನ ಕಾವ್ಯ. ಕಥೆಯ ಆರಂಭ, ಬೆಳವಣಿಗೆ, ಮುಕ್ತಾಯಗಳಲ್ಲಿ ಆತನ ಕಲಾಕೌಶಲ ಎದ್ದುಕಾಣುತ್ತದೆ; ಹೆಜ್ಜೆಹೆಜ್ಜೆಗೂ ಓದುಗರ ಕುತೂಹಲವನ್ನು ಕೆರಳಿಸುತ್ತಾ, ಈಟಿಯ ಎಸುಗೆಯಂತೆ ಅವಿರಾಮಶೀಲವಾಗಿ ಸಾಗಿ, ಮುಕ್ತಾಯವನ್ನು ಮುಟ್ಟುತ್ತದೆ.

ಜೈಮಿನಿಭಾರತ ಪಾಂಡವರ ಅಶ್ವಮೇಧಯಾಗದ ಕಥೆ ; ಆ ಯಾಗದ ಕುದುರೆ ಭೂಮಂಡಲದಲ್ಲಿ ಸ್ವೇಚ್ಛೆಯಿಂದ ತಿರುಗುತ್ತಿರುವಾಗ, ಅದನ್ನು ಕಟ್ಟಿಹಾಕಿದ ವೀರರೊಡನೆ ಯುದ್ಧಮಾಡಬೇಕಾಗುತ್ತದೆ. ಆದ್ದರಿಂದ ಇದು ವೀರರಸಪ್ರಧಾನವಾದ ಕಾವ್ಯ. ಯುದ್ಧದ ಮೇಲೆ ಯುದ್ಧ ನಡೆಯುತ್ತಿದ್ದರೂ ಅದರ ವರ್ಣನೆಯಲ್ಲಿ ಸಾಕಷ್ಟು ವೈವಿಧ್ಯವಿರುವುದರಿಂದ ಕಾವ್ಯದಲ್ಲಿ ಬೇಸರಕ್ಕೆ ಅವಕಾಶವಿಲ್ಲ. ಲಕ್ಷ್ಮೀಶನು ಉತ್ತರಕುಮಾರನನ್ನು ಕೂಡ ಸಂಗ್ರಾಮಶೂರನನ್ನಾಗಿ ಮಾಡಬಲ್ಲ ಮಾತಿನ ಮೋಡಿಯುಳ್ಳವನು. 'ತಲೆ ಬೀಳಲಟ್ಟೆಗಳು ಕಾದುವುವು, ನೆಲಕುರುಳೆ ತಲೆಗಳೆದ್ದಾಡುವುವು, ಕೈದುಗಳ ನಿಲುಕುವವು ಖಂಡಿಸಿದ ತೋಳ್ಗಳ್, ಉರೆ ಕಡಿದ ಕಾಲ್ಗಳ್ ಮುಂದಕಡಿಯಿಡುವುವು' – ಇಂತಹ ವರ್ಣನೆಯನ್ನು ಕೇಳಿದಾಗ ಹೇಡಿಯ ಧಮನಿಯಲ್ಲಿಯೂ ವೀರರಸಸಂಚಾರವಾಗಿ ಅವನು ಕೆರಳಿದ ಕೇಸರಿಯಾದಾನು.

ಲಕ್ಷ್ಮೀಶನ ಜೈಮಿನಿಭಾರತ ವೀರರಸದಷ್ಟೆ ಇತರ ರಸಗಳಿಗೂ ಆಶ್ರಯವನ್ನಿತ್ತಿದೆ. ವಿಶ್ವಮೋಹಕವಾದ ಶೃಂಗಾರರಸನಿರೂಪಣೆಯಲ್ಲಿ ಆತನು ತನ್ನ ಓದುಗರನ್ನೂ ಹರ್ಷಪುಳಕಿತರನ್ನಾಗಿ ಮಾಡಿ ಮೈಮರೆಸುತ್ತಾನೆ. 'ಅಂಗಜನ ಸೊಕ್ಕಾನೆ'ಗಳಂತೆ, 'ಅಂಗಜನ ಜಯಸಿರಿ'ಯಂತೆ ಇರುವ ಹೆಣ್ಣುಗಳಿಗೆ, ಅವರ ಶೃಂಗಾರ ಜೀವನಕ್ಕೆ ಇಲ್ಲಿ ಕೊರತೆಯಿಲ್ಲ. 'ವಿಮಲಸುಮತಿಯಂ ತಾಯೆನಗೆ ತಾಯೆನಗೆಗೂಡಿ ನೋಡಿ' ಎಂಬ ಕವಿಪ್ರಾರ್ಥನೆಗೆ 'ತಥಾಸ್ತು' ಎಂದು ತಾಯಿ ಶಾರದೆ ಹೇಳಿದಳೊ ಎಂಬಂತಹ ಸುಂದರ ಹಾಸ್ಯರಸವೂ ಇಲ್ಲಿ ನೆಲೆಗೊಂಡಿದೆ. ಚಂಡಿಯ ಕಥೆ, ಭೀಮನು ಶ್ರೀಕೃಷ್ಣನ ಬಳಿಗೆ ಹೋದ ಸನ್ನಿವೇಶಗಳು ಇದಕ್ಕೆ ಅತ್ಯುತ್ತಮ ಉದಾಹರಣೆಗಳು. ಇಲ್ಲಿನ ಉತ್ತರ ರಾಮಾಯಣದ ಕಥೆ

ಕರುಣರಸದ ಕೋಡಿಯನ್ನೆ ಹರಿಸುತ್ತದೆ. ಕವಿ ಬಹುದೊಡ್ಡ ರಸಜ್ಞ ಎಂಬುದರಲ್ಲಿ ಸ್ವಲ್ಪವೂ ಸಂದೇಹವಿಲ್ಲ.

ಕವಿಲಕ್ಷ್ಮೀಶನು ತನ್ನ ಕಾವ್ಯವನ್ನು ಸಂಸ್ಕೃತದಿಂದ ಎತ್ತಿಕೊಂಡಿರುವನಾದರೂ, ಇದೊಂದು ಸ್ವತಂತ್ರ ಕೃತಿರತ್ನವೆಂಬಂತೆ ತನ್ನ ಕಾವ್ಯವನ್ನು ಸೃಷ್ಟಿಸಿದ್ದಾನೆ. ಪುರಾಣ ರೂಪವಾಗಿರುವ ಮೂಲಗ್ರಂಥವನ್ನು ಅರ್ಧದಷ್ಟಕ್ಕೆ ಸಂಗ್ರಹಿಸಿರುವುದೂ, ಮೂಲಕಥೆಯನ್ನು ತನ್ನ ಅಭಿರುಚಿ ಆವಶ್ಯಕತೆಗಳಿಗೆ ತಕ್ಕಂತೆ ಹಿಗ್ಗಿಸಿ ಕುಗ್ಗಿಸಿರುವುದೂ ಆತನ ಹಿತಮಿತಜ್ಞಾನಕ್ಕೆ ಹಿರಿಯ ಸಾಕ್ಷಿ. ಅಷ್ಟೇ ಅಲ್ಲ, ಮೂಲಪುರಾಣವು ಕವಿಯ ಕೈಯಲ್ಲಿ ಕಾವ್ಯವಾಗಿ ಪರಿವರ್ತಿತವಾಗಿರುವುದು, ಆತನ ರಸಮಯವಾದ ವರ್ಣನಾಚಾತುರ್ಯದಿಂದ. ಸ್ತ್ರೀಪುರುಷರ ರೂಪಶೀಲಗಳ ವರ್ಣನೆಯಂತೆಯೆ ಪ್ರಕೃತಿ ವರ್ಣನೆಯೂ ಆತನ ಪ್ರತಿಭೆಯ ಪ್ರಭಾವದಿಂದ ಹೃದಯಂಗಮವಾಗಿದೆ. ಸುತ್ತುಮುತ್ತಿನ ಜನ-ಜೀವನದಲ್ಲಿ ಕಾಣುತ್ತಿದ್ದ ವ್ಯಕ್ತಿಗಳು ಕವಿಯ ಪ್ರತಿಭಾಗಂಗೆಯಲ್ಲಿ ಮಿಂದು ಪುನೀತರಾಗಿ ಕಾಣಿಸಿಕೊಂಡಿದ್ದಾರೆ, ಆತನ ಕಾವ್ಯದಲ್ಲಿ, ಆತನ ವರ್ಣನೆಗಳಲ್ಲಿ ಕಣ್ಣಿಗೆ ಕಟ್ಟಬಲ್ಲ ಚಿತ್ರಕಾರನ ಕಲಾಕುಶಲತೆಯ ಜೊತೆಗೆ ಕಿವಿಗೆ ಹಿತವನ್ನು ತರುವ ಸಂಗೀತಗಾರನ ಸ್ವರಜ್ಞಾನವೂ ಸೇರಿದೆ.

ಕುಮಾರವ್ಯಾಸನು 'ರೂಪಕಸಾಮ್ರಾಜ್ಯ ಚಕ್ರವರ್ತಿ'ಯಾಗಿರುವಂತೆ ಲಕ್ಷ್ಮೀಶ 'ಉಪಮಾಲೋಲ'ನಾಗಿದ್ದಾನೆ. ಆತನ ಉಪಮೆಗಳು ಮನೋಜ್ಞವಾಗಿವೆ. ಆತನ ಉಪಮೆಗಳೆಂದರೆ ಕವಿ ಕುವೆಂಪು ಹೇಳುವಂತೆ 'ಮೂಡುವ ಸೂರ್ಯನ ಎಳೆಬಿಸಿಲಿನ ಹೊಂಬೆಳಗಿನಲ್ಲಿ ನಳನಳಿಸಿ, ತಣ್ಣನೆ ಬೀಸುವ ತೆಳು ಗಾಳಿಗೆ ತಲೆಯೊಲೆದು ನಲಿದಾಡುವ ಹಚ್ಚನೆಯ ಹೊಸ ಹಸುರಿನಲ್ಲಿ, ಗರಿಗೆದರಿ, ಮಳೆಬಿಲ್ಲಿನ ಮರಿಗಳಂತೆ ಮನೋಹರವಾಗಿ ನರ್ತಿಸುವ ಮಯೂರಗಳು.' ಗರ್ಭಿಣಿಯಾದ ಸೀತೆ ಶ್ರೀ ರಾಮನು ತನ್ನನ್ನು ವನವಾಸಕ್ಕಟ್ಟಿದನೆಂಬುದನ್ನು ಕೇಳುತ್ತಲೆ 'ಬಿರುಗಾಳಿ ಪೊಡೆಯಲ್ಕೆ ಕಂಪಿಸಿ ಫಲಿತ ಕದಲಿ ಮುರಿದಿಳೆಗೊರಗುವಂತೆ' ನೆಲಕ್ಕೆ ಬಿದ್ದಳಂತೆ ! ಮೈಮರೆತ ಸೀತೆ 'ಬೇರ್ಗೊಯ್ದು ಬಿಸುಟೆಳೆಯ ಬಳ್ಳಿಯಂತೆ' ಇದ್ದಳಂತೆ ! ಚಂದ್ರಹಾಸನನ್ನು ಕೊಲ್ಲಲೆಂದಿದ್ದ ದುಷ್ಟಬುದ್ಧಿ ಬ್ರಾಹ್ಮಣರ ಇದಿರಿನಲ್ಲಿ ವಿನೀತವಾಗಿ ಕಾಣಿಸಿದುದು 'ಕ್ರೂರನಕ್ರಾಕುಲದೊಳಿಡಿದಿರ್ದ ಪೆರ್ಮಡು ಗಂಭೀರನಿರ್ಮಲಜಲದೊಳೆಸೆವಂತೆ' ಇತ್ತಂತೆ.

ವಸ್ತು, ಪಾತ್ರ, ರಸ-ಮೂರು ದೃಷ್ಟಿಯಿಂದಲೂ ಲಕ್ಷ್ಮೀಶನ ಕಾವ್ಯ ಶ್ರೇಷ್ಠವಾದುದು. ಆತನು ಅನನ್ಯ ಸಾಧಾರಣನಾದ ಕವಿ. ಆತನು ಪ್ರತಿಭಾಶಾಲಿ. ಆದರೆ ಆತನ ಪ್ರಜ್ಞಾವಲಯವೇ ಅದರ ನಾಟ್ಯರಂಗ. ಆತನ ಕವಿತೆ ಹುಚ್ಚುಹೊಳೆಯಲ್ಲ, ನಿರ್ದಿಷ್ಟ ಪಾತ್ರದಲ್ಲಿ, ನಿರ್ದಿಷ್ಟ ಪ್ರಮಾಣದಲ್ಲಿ ಹರಿದುಕೊಂಡುಹೋಗುತ್ತಿರುವ ಪಾತ್ರ.

೬. ರಂಗಾಚಾರ್ಯ (ಕ್ರಿ.ಶ. ೧೫೩೦)

ಈತ ಸಂಸ್ಕೃತ ಬ್ರಹ್ಮಾಂಡಪುರಾಣದಲ್ಲಿ ಮಹೇಶ್ವರ-ನಾರದ ಸಂವಾದ ರೂಪವಾಗಿದ್ದ ಶ್ರೀರಂಗಮಾಹಾತ್ಮ್ಯವನ್ನು ಕನ್ನಡಿಸಿದ್ದಾನೆ. ಈತನ ಪದ್ಯ ರಚನೆ ಸರಸವಾಗಿ ಸುಲಭವಾಗಿದೆ. ಕನ್ನಡದಲ್ಲಿ ಕಾವ್ಯರಚನೆ ಮಾಡಹೊರಟ ಶ್ರೀವೈಷ್ಣವರಲ್ಲಿ ಈತ ಮೊದಲನೆಯವನು.

೭. ಗೋವಿಂದ (ಕ್ರಿ.ಶ. ೧೫೮೧)

ವಾರ್ಧಕಷಟ್ಪದಿಯಲ್ಲಿ 'ನಂದಿಮಾಹಾತ್ಮ್ಯ' ಮತ್ತು 'ಚಿತ್ರಭಾರತ' ಎಂಬ ಎರಡು ಬೃಹದ್ ಗ್ರಂಥಗಳನ್ನು ರಚಿಸಿರುವ ಗೋವಿಂದ ಕವಿ ಕ್ರಿ.ಶ. ೧೫೮೧ರಲ್ಲಿ ಇದ್ದವನೆಂದು ಆತನ ಚಿತ್ರಭಾರತದಿಂದ ತಿಳಿದುಬರುತ್ತದೆ. ಆತನು ಕರಣಿಕನಾದ ಜ್ಯೋತಿ ಎಂಬುವನ ಮಗನೆಂದೂ,

ಮದನಗೋಪಾಲಸ್ವಾಮಿ ಭಕ್ತನೆಂದೂ, ಭೀಮರಥೀ ತೀರದ ಬುಯ್ಯರ ಗ್ರಾಮ (ಷೋಲಾಪುರ ಜಿಲ್ಲೆ) ದವನೆಂದೂ ಆತನ ಕಾವ್ಯಗಳಿಂದ ತಿಳಿದುಬರುತ್ತದೆ.

ಪಾರ್ವತೀದೇವಿಯನ್ನು ಆಸ್ಥಾನಕ್ಕೆ ಕರೆತರುವಂತೆ ಶಿವನಿಂದ ಆಜ್ಞಪ್ತನಾದ ನಂದಿಯು 'ಇಂದುಧರನ ರೂಪಂದಳೆದು' ಆಕೆಯ ಬಳಿಗೆ ಹೋಗುತ್ತಾನೆ. ಶಿವೆ ಶಿವನೆಂದೇ ತಿಳಿದು ಆತನನ್ನು ಗೌರವಿಸುತ್ತಾಳೆ. ಆಗ ತನ್ನ ಅಚಾತುರ್ಯಕ್ಕಾಗಿ ಪಶ್ಚಾತ್ತಾಪಗೊಂಡ ನಂದಿ, ಶಿವೆಯನ್ನು ಶಿವಸಾನ್ನಿಧ್ಯಕ್ಕೆ ಮುಟ್ಟಿಸಿ, ಪುನಃ ತನ್ನ ಸ್ವಸ್ವರೂಪವನ್ನು ಪಡೆಯುವುದಕ್ಕಾಗಿ ತಪಸ್ಸು ಮಾಡಬಗೆದು ಅದಕ್ಕೆ ಯೋಗ್ಯಸ್ಥಳವಾವುದೆಂದು ಗಣನಾಥಕೂಷ್ಮಾಂಡನನ್ನು ಕೇಳುತ್ತಾನೆ. ಆತ ಶೈವಕ್ಷೇತ್ರಗಳ ಮಹಿಮೆಯನ್ನು ನಿರೂಪಿಸುತ್ತಾನೆ. ಇದೇ 'ನಂದಿಮಾಹಾತ್ಮ್ಯ'ದ ಕಥಾವಸ್ತು. ಕವಿಯು ತನ್ನ ಕಾವ್ಯ 'ಸುಲಿದ ರಸಗಂಧಿವಾಳೆಯೊಳು ಜೇನ್ನಳೆದಂತೆ' ಸವಿಯಾಗಿದೆಯೆಂದು ಹೇಳಿಕೊಳ್ಳುತ್ತಾನೆ. ಆದರೆ ತಿರುಳಿಗಿಂತ ಚಿಪ್ಪೇ ದಪ್ಪವಾಗಿರುವ ನಾರಿಕೇಳಪಾಕ, ಆತನ ಗ್ರಂಥ. 'ಆನೆ ಹೋದುದೆ ಬೀದಿಯಲ್ಲವೆ ಜಗದೊಳು ?' ಎಂದು ಕವಿ ಹೇಳುತ್ತಾನೆ. ನಿಜ ಆದರೆ ಈ ಕವಿಗಜ ನುಗ್ಗಿ ಹೋಗುವ ಹಳುವದಲ್ಲಿ ಓದುಗರು ಹಿಂಬಾಲಿಸಿ ಹೋಗುವುದು ಕಷ್ಟ; ಹೋದರೂ ಕಬ್ಬಿನ ಗದ್ದೆಯೇನೂ ಸಿಕ್ಕುವುದಿಲ್ಲ, ಜೊಂಡಿನ ಜೌಗುಪ್ರದೇಶ ಸಿಕ್ಕುತ್ತದೆ, ಅಥವಾ ಬಿದಿರಿನ ಮೆಳೆ ಸಿಕ್ಕುತ್ತದೆ. ಕವಿಯ ಬಂಧ ಪ್ರೌಢವಾಗಿದೆ, ಬಿಗಿಯಾಗಿದೆ, ಬಿರುಸಾಗಿದೆ, ಆದರೂ ತಿರುಳಿಲ್ಲದೆ ಇಲ್ಲ, ಎಂಟಾಣೆ ಖರ್ಚು ಮಾಡಿದರೆ ನಾಲ್ಕಾಣೆ ಲಾಭ.

'ಚಿತ್ರಭಾರತ' ಮೂವತ್ತು ಸಂಧಿಗಳ ಕಾವ್ಯ. ಇದನ್ನು ಕವಿ 'ಮಹಾಕಾವ್ಯ'ವೆಂದು ಕರೆದುಕೊಂಡಿದ್ದಾನೆ. ಅದು ಶುದ್ಧಸುಳ್ಳು. ಅಲ್ಲಲ್ಲಿಯೆ ಕೃತಿ ಚಮತ್ಕೃತಿಯಿಂದ ಕೂಡಿದ ಒಂದು ಸಾಮಾನ್ಯ ಕಾವ್ಯ. 'ಸಾರಮಿದು ಶ್ರೀ ಹರಿಕಥಾಮೃತಂ' ಎಂದು ಕವಿ ಹೇಳಿಕೊಂಡಿರುವುದರಲ್ಲಿ ಸ್ವಲ್ಪ ಸತ್ಯವಿದೆ. ಕವಿಯ ದೈವಭಕ್ತಿ ಇಲ್ಲಿ ಸ್ವಲ್ಪಮಟ್ಟಿಗೆ ಅಭಿವ್ಯಕ್ತವಾಗಿದೆ.

೮. ತಿರುಮಲಭಟ್ಟ (ಕ್ರಿ.ಶ. ೧೬೦೦)

ಈ ಕವಿ ವಾರ್ಧಕಷಟ್ಪದಿಯಲ್ಲಿ ೩೭೭ ಪದ್ಯಗಳ 'ಶಿವಗೀತೆ'ಯನ್ನು ಬರೆದಿದ್ದಾನೆ. 'ಸತ್ಕವಿಶಿರೋವರಮಣಿ' ಬಿರುದಾಂಕಿತನಾದ ಈತ ಕೆಳದಿಯ ದೊರೆ ವೆಂಕಟಪ್ಪನ (ಕ್ರಿ.ಶ. ೧೫೮೨-೧೬೨೯) ಆಶ್ರಿತನಾಗಿದ್ದ. ತನ್ನ ಪೋಷಕನ ಅಪ್ಪಣೆಯಂತೆ ಪದ್ಮ ಪುರಾಣದಲ್ಲಿರುವ 'ಶಿವಗೀತೆ'ಯನ್ನು ಆಂಧ್ರದ ಟೀಕೆಗಳನ್ನೆಲ್ಲ ಬಳಸಿಕೊಂಡು ಕನ್ನಡದಲ್ಲಿ ಬರೆದನಂತೆ! ಒಳಗೆ ಅಮೃತದಂತಹ ರಸವಿದ್ದರೂ ಅದರ ಮೇಲಿನ ಕರಟಸಪ್ಪುಗಳಿಗೆ ಹೆದರುವ ಜನರಿಗೆ ಸುಲಭವಾಗಿ ತತ್ತ್ವ ಅರ್ಥವಾಗುವಂತೆ 'ಸಕಲರರಿವಂತೆ ವಿರಚಿಸುವೆನೀ ಕೃತಿಯನು' ಎನ್ನುತ್ತಾನೆ ಕವಿ. ತನ್ನ ಕಾವ್ಯ ಭಗವದ್ಗೀತೆಗಿಂತ ಶ್ರೇಷ್ಠವಂತೆ! ಬಂಧುಗಳನ್ನು ಕೊಲ್ಲಹೊರಟ ಅರ್ಜುನನಿಗೆ ಸಾರಥಿಯಾಗಿ ನಿಂತು ಬೋಧಿಸ ಹೊರಟ ಆ ಗೀತೆಯಲ್ಲಿ! 'ಭುವನೋಪಕಾರಕ್ಕೆ ನರನಾದ ಹರಿಗೊರೆದ ಶಿವಗೀತೆಗೇಂ ದೊರೆಯೆ' ಅದು ? ಎಂದು ಕೇಳುತ್ತಾನೆ, ಕವಿ. ಆತನ ತರ್ಕಸರಣಿ ವಿಲಕ್ಷಣವಾಗಿದ್ದರೂ ಆತನ ಕವಿತೆಯಲ್ಲಿ ಪ್ರಾಸಾದಿಕಗುಣವಿದೆ. ಕಠಿಣವಾದ ವಿಷಯಗಳನ್ನು ಉಚಿತವಾದ ಉದಾಹರಣೆಯೊಡನೆ ಮನಮುಟ್ಟುವಂತೆ ಕವಿ ಬರೆದಿದ್ದಾನೆ. ಆತನ ಕಲ್ಪನಾಶಕ್ತಿಯು ಕೀಳಾದುದಲ್ಲ. ಈಶ್ವರನ ವಾಹನವಾದ ನಂದಿಯನ್ನು ಕಣ್ಣಿಗೆ ಕಟ್ಟುವಂತೆ ವರ್ಣಿಸಿದ್ದಾನೆ. ಜನನದ ಘೋರ ದುಃಖವನ್ನು ವರ್ಣಿಸುತ್ತಾ 'ಮತಿಗೆಟ್ಟಧೋಮುಖನಾಗಿ ನೆಟ್ಟನೆ ನೆಲಕ್ಕೆ ಬೀಳ್ವ ಕಟ್ಟಳೆಯನೇನೆಂಬೆ ?' ಎಂದು ಕೇಳಿ, 'ನಟ್ಟ ಸುಜ್ಞಾನದೀ ಪುಟ್ಟನಳಿದಪನೆ ಚದುರಂ' ಎಂದು ಉದ್ಗಾರ ತೆಗೆಯುವುದು ಹೃದಯಸ್ಪರ್ಶಿಯಾಗಿದೆ.

೯. ಸೋಮನಾಥ ಕವಿ (ಕ್ರಿ.ಶ. ೧೬೦೦)

ಶ್ರೀ ಕೃಷ್ಣ–ಬಲರಾಮರ ಜನನದಿಂದ ಹಿಡಿದು ಕಂಸವಧೆಯವರೆಗಿನ ಕಥೆಯನ್ನೊಳಗೊಂಡ 'ಅಕ್ರೂರಚರಿತೆ'ಯನ್ನು ಈತ ಭಾಮಿನೀಷಟ್ಪದಿಯಲ್ಲಿ ಬರೆದಿದ್ದಾನೆ. ಕಾವ್ಯಾರಂಭದಲ್ಲಿ ನಾರಾಯಣನನ್ನೂ, ಅನಂತರ ಕ್ರಮವಾಗಿ ಈಶ್ವರ, ವಿಘ್ನೇಶ್ವರ, ಶಾರದೆ, ಮನ್ಮಥ, ವೇದವ್ಯಾಸರನ್ನೂ ಸ್ತುತಿಸಿ, ಕನ್ನಡ ಕವಿಗಳಲ್ಲಿ ಕುಮಾರವ್ಯಾಸವನ್ನು ಮಾತ್ರ ಸ್ತುತಿಸಿದ್ದಾನೆ. 'ಕೃಷ್ಣ ಚರಿತದ ಶರಧಿಯೊಳಗಕ್ರೂರಚರಿತೆಯನೊರೆವೆ' ಎಂದು ಹೇಳುವುದಕ್ಕೆ ಸರಿಯಾಗಿ ಇಲ್ಲಿ ಅಕ್ರೂರನ ಕಥೆಗಿಂತ ಆದ್ಯಂತರವಾಗಿ ಬರುವ ಶ್ರೀಕೃಷ್ಣನ ಕಥೆಯೆ ಪ್ರಮುಖವಾದುದಾಗಿದೆ. ಕಾವ್ಯವನ್ನು ಮನೋಹರವಾಗಿ ಬರೆಯಲು ಸಾಕಷ್ಟು ರಸಸ್ಥಾನಗಳಿವೆ, ಆದರೆ ಅದಕ್ಕೆ ಅಗತ್ಯವಾದ ಪ್ರತಿಭೆ, ಕಲ್ಪನಾಶಕ್ತಿಗೆ ಈತನಲ್ಲಿ ಅಭಾವ. ಅನೇಕ ವೇಳೆ ಈತನು ಕುಮಾರವ್ಯಾಸನ ಮಾತುಗಳನ್ನೇ ಎತ್ತಿಕೊಂಡು ಬಳಸಿಕೊಳ್ಳುತ್ತಾನೆ. ಆದರೇನು ? ಕಾಕಃ ಕಾಕಃ ಪಿಕಃ ಪಿಕಃ.

೯ (ಎ) ಪುಲಿಗೆರೆಯ ಕವಿ ಸೋಮ (ಕ್ರಿ.ಶ. ೧೬೦೦)

ಪುಲಿಗೆರೆಯ ಕವಿ ಸೋಮನ ಸೋಮೇಶ್ವರಶತಕ ಸಾಕಷ್ಟು ಜನಪ್ರಿಯವಾದ ಕೃತಿ. ಈ ಶತಕ ಸಾಮಾಜಿಕ ನೀತಿಯನ್ನು ಹೇಳುವಂಥದು. ಇವನು ತನ್ನ ನಾಂದಿಪದ್ಯದಲ್ಲಿ ಪುಲಿಗಿರಿ ನಗರೀ 'ಶಾಸನಾಂಕಂ ಮೃಗಾಂಕಂ' ಎಂದು ತನ್ನ ಇಷ್ಟದೈವವನ್ನು ಪ್ರಾರ್ಥಿಸಿದ್ದಾನೆ. ಪಾಲ್ಕುರಿಕೆ ಸೋಮನಾಥ ವೀರಶೈವನಾದರೆ ಇವನು ಬ್ರಾಹ್ಮಣ. ಇವನ ಶತಕಕ್ಕೆ ಬಳಕೆಯಾಗಿರುವ ಭಾಷೆ ಶಿಥಿಲವಾದ ಹಳಗನ್ನಡ. 'ಹರಹರಾ ಶ್ರೀ ಚೆನ್ನ ಸೋಮೇಶ್ವರಾ' ಎನ್ನುವುದು ಇವನ ಪ್ರತಿಪದ್ಯದ ಕಡೆಯಲ್ಲಿ ಅಂಕಿತವಾಗಿ ಬರುತ್ತದೆ. ಇವನ ಅನೇಕ ಪದ್ಯಗಳು, ಪದ್ಯಭಾಗಗಳು ಜನರ ಬಾಯಲ್ಲಿವೆ. 'ರವಿಯಾಕಾಶಕೆ ಭೂಷಣಂ', 'ಕೆಲವಂ ಬಲ್ಲವರಿಂದ ಕೇಳಿ ಕಲ್ತು' ಮೊದಲಾದ ಪದ್ಯಗಳು ಇಂಥವು. ಇವನ ರಚನೆಗಳಲ್ಲಿ ಬರುವ 'ಹರಕೊಲ್ಲಲ್ ಪರ ಕಾಯ್ವನೇ', 'ಕಲಿಸಿದಾತಂ ವರ್ಣಮಾತ್ರಂ ಗುರು' ಗಿಡ ವೃಕ್ಷಂಗಳಿಗಾರು ನೀರನೆರೆವರ್' ಮೊದಲಾದ ಪ್ರಯೋಗಗಳು ಜನಪರಿಚಿತವಾದವು.

೧೦. ನರಹರಿ (ಕ್ರಿ.ಶ. ೧೬೫೦)

ಈತನು ಕಾವೇರಿ ತೀರದ ಬಲ್ಲಾಳಪುರದ ಪ್ರಭು. ಸುಮಾರು ಸಾವಿರದ ನೂರು ಪದ್ಯಗಳನ್ನು ಒಳಗೊಂಡ 'ಪ್ರಹ್ಲಾದಚರಿತ್ರೆ'ಯನ್ನು ಭಾಮಿನೀ ಷಟ್ಪದಿಯಲ್ಲಿ ಬರೆದಿದ್ದಾನೆ. 'ಪೊಸರಸಾಲಂಕಾರಜಾಣ್ನುಡಿಯೆಸೆವ ಪದಬಂಧಗಳ ಶಬ್ದದಗಸಣಿಯರಿತವನಲ್ಲ' ಎಂಬ ನಮ್ರತೆಯನ್ನು ಪ್ರದರ್ಶಿಸಿ, ತನ್ನ ಇಷ್ಟದೇವತೆಯಾದ ಗರುಡಗಿರಿವಾಸನನ್ನು ತನ್ನ ನಾಲಗೆಯಲ್ಲಿ ನಿಂತು ನುಡಿಸುವಂತೆ ಪ್ರಾರ್ಥಿಸಿದ್ದಾನೆ. ತನ್ನ ಕಾವ್ಯದಲ್ಲಿನ 'ಹರಿಭಕ್ತಿಸಾರದ ಸುಖವು ಹೊಸ ಕುಸುಮಪರಿಮಳವನಳಿ ಭುಂಜಿಸುವವೊಲು, ಜೀಮೂತನಾದಗಳಿಸಯೆ ಶಿಖಿ ಕುಣಿವವೊಲು ಬೆಲ್ಲದ ರಸವ ಡಗೆ ಕ್ಷತ್ತಿಗನ ಸವಿವೊಲ್' ಎಸೆವುದೆಂದು ಹೇಳಿಕೊಂಡಿದ್ದಾನೆ. ಆ ಮಾತು ಸತ್ಯದೂರವೇನು ಅಲ್ಲ. ಕವಿಗೆ ಒಳ್ಳೆಯ ಕಲ್ಪನಾ ಶಕ್ತಿಯಿದೆ; ಆತನ ಮಾತು ಸರಳ, ಶೈಲಿ ಬಂಧುರ; ಕವಿತೆ ಭಾವಗರ್ಭಿತ. ಹಿರಣ್ಯಕಶಿಪು–ಪ್ರಹ್ಲಾದರ ಸಂಭಾಷಣೆ ಮನೋಹರವಾಗಿದೆ. ತಂದೆ ಮಗನನ್ನು ಕುರಿತು, ಹರಿಯಸ್ನೇಹ 'ತಿಮಿರಿದ–ರವಿಯ ಸಖಿತನದಗಾದೆಯಹುದಂತ್ಯದಲ್ಲಿ' ಎಂದು ಹೇಳಿದರೆ, ಆ ಮಗ–

ಅರಸುತಿಹ ಲತೆ ಕಾಲ ತೊಡಕಲು । ಹರಿದು ಬಿಡುವರುಂಟೆ ? ಸಿರಿ ಬರ
ಲರಿದರಿದು ಪದದೊದೆದು ನೂಕುವರುಂಟೆ ? ಹಸಿದಿರಲು
ಕರೆದು ಕ್ಷೀರಾನ್ನವನು ಬಡಿಸಲು । ಹೊರಗೆ ಸೂಸುವರುಂಟೆ ? ಸಿಂಧರ
ಸ್ಮರಣೆ ಬಾಯಿಗೆ ಬರಲು ನಾನದನೆಂತು ಬಿಡಲೆಂದ

ಇಲ್ಲಿ ಕುಮಾರವ್ಯಾಸನ ಛಾಯೆ ಸ್ವಲ್ಪಮಟ್ಟಿಗೆ ಮೂಡಿದೆ. ಯಾವ ಕವಿಯಾದರೂ ಆ

ಮಹಾಕವಿಯ ಪ್ರಾಸಾದಿಕ ವಾಣಿಯಿಂದ ಪ್ರಭಾವಿತನಾಗದಿರುವುದು ಹೇಗೆ ಸಾಧ್ಯ ?

೧೧. ವೆಂಕಕವಿ (ಕ್ರಿ.ಶ. ೧೬೫೦)

ಈತನು 'ವೆಂಕಟೇಶ್ವರ ಪ್ರಬಂಧ' ಎಂಬ ಚಂಪೂಕಾವ್ಯವನ್ನು ಬರೆದಿದ್ದಾನೆ. ಈತನು 'ಬೆಟ್ಟದ ಕೋಟೆರಾಯ'ನನ್ನು – ಮೈಸೂರು ಜಿಲ್ಲೆಯ ಹಿಮವದ್ಗೋಪಾಲಸ್ವಾಮಿ ಬೆಟ್ಟದ ಪ್ರಾಂತ್ಯಕ್ಕೆ ಬೆಟ್ಟದಕೋಟೆ ಎಂಬ ಹೆಸರಿದೆ – ಸ್ಮರಿಸಿರುವುದರಿಂದ ಆ ಪ್ರಾಂತ್ಯದವನಾಗಿದ್ದು, ಹಿಮವದ್ಗೋಪಾಲ ಸ್ವಾಮಿಯ ಭಕ್ತನಾಗಿದ್ದಿರಬಹುದು. ಕವಿಚರಿತ್ರೆಯಲ್ಲಿ ಉದ್ಧೃತವಾಗಿರುವ ಈತನ ಪದ್ಯಗಳನ್ನು ನೋಡಿದರೆ ಈತನ ಬಂಧ ಪ್ರೌಢವಾಗಿದ್ದು, ಪ್ರಕೃತಿವರ್ಣನೆ ರಮ್ಯವಾಗಿರುವಂತೆ ಕಂಡುಬರುತ್ತದೆ. ಕವಿಯು ಕವಿಸಮಯಕ್ಕೆ ಶರಣನಾಗಿದ್ದರೂ ಪ್ರಕೃತಿಯ ಮಡಿಲಲ್ಲಿ ಪ್ರಭಾವಿತನಾಗಿರುವಂತೆ ಕಾಣುತ್ತಾನೆ. ಆತನ ಕಾವ್ಯ ಅಸಮಗ್ರವಂತೆ; ಅಷ್ಟನ್ನಾದರೂ ನೋಡದೆ ಏನೂ ಹೇಳುವಂತಿಲ್ಲ.

೧೨. ನಾಗರಸ (ಕ್ರಿ.ಶ. ೧೬೫೦)

ಈತ ಭಗವದ್ಗೀತೆಯನ್ನು ಕನ್ನಡಿಸಿದ್ದಾನೆ. ತನ್ನ ಕಾಲ ದೇಶಗಳ ವಿಚಾರವಾಗಿ ಆತ ಏನನ್ನೂ ಹೇಳಿಕೊಂಡಿಲ್ಲ. ಕವಿಯು ಕಾಶ್ಯಪಗೋತ್ರದ ವಿಶ್ವೇಶ್ವರನ ಮಗ, ಶಂಕರಗುರುವಿನ ಶಿಷ್ಯ ಎಂಬುದು ಮಾತ್ರ ಆತನ ಗ್ರಂಥದಿಂದ ಗೊತ್ತಾಗುತ್ತದೆ. ಗ್ರಂಥಾರಂಭದಲ್ಲಿ 'ಪಂಡರಿವರದ ವಿಟ್ಠಲರಾಯ ರಕ್ಷಿಪುದು' ಎಂದಿರುವುದರಿಂದ ಆತ ಪಂಡರಾಪುರದ ಪ್ರಾಂತದವನಿರಬಹುದು. ತನ್ನ ಗ್ರಂಥವನ್ನು 'ವಾಸುದೇವಕಥಾಮೃತ' ಎಂದು ಕರೆದು 'ವಿಶ್ವಾಸದಿಂ ನೆರೆತಿಳಿದು ಸುಖಿಸುವುದು, ಆಸೆಯೆಲ್ಲವ ಬಿಟ್ಟು ಮುನಿಗಳು, ಹರಿಪರಾಯಣರು' ಎಂದು ಹೇಳಿರುವುದರಿಂದ ಭಾಗವತಪಂಥಕ್ಕೆ ಸೇರಿದವನೆಂದು ಹೇಳಬಹುದು.

ಆತನ ಗ್ರಂಥ ಭಾಮಿನೀಷಟ್ಪದಿಯಲ್ಲಿದೆ. ಮೂಲದ ಒಂದೊಂದು ಶ್ಲೋಕಕ್ಕೂ ಒಂದೊಂದು ಷಟ್ಪದಿಯನ್ನು ಬರೆದಿದ್ದಾನೆ. ೭೩೭ ಪದ್ಯಗಳಿವೆ. ಮೂಲದ ಬಿಕ್ಕಟ್ಟು, ಸೂತ್ರರೂಪವಾದ ಭಾಷೆ ಭಾಷಾಂತರದಲ್ಲಿಲ್ಲ; ಹಿಂಜಿದ ಹತ್ತಿಯಂತಿದೆ. ಮೂಲದ ಅರ್ಥಕ್ಕೆ ಎಲ್ಲಿಯೂ ಲೋಪ ಬಂದಿಲ್ಲ, ಶಾಸ್ತ್ರವಿಷಯವನ್ನು ಲಲಿತವಾಗಿ ಹೇಳಿರುವೆನೆಂಬುದೆ ಇದರ ಪ್ರಾಶಸ್ತ್ಯ

೧೩. ರಂಗನಾಥ (ಕ್ರಿ.ಶ. ೧೬೭೫)

ಈತನು 'ಅನುಭವಾಮೃತ' ಎಂಬ ಅದ್ವೈತ ಸಿದ್ಧಾಂತ ನಿರೂಪಣೆಯ ಗ್ರಂಥವೊಂದನ್ನು ಬರೆದಿದ್ದಾನೆ. ಈತನಿಗೆ ರಂಗಾವಧೂತ, ಮಹಲಿಂಗರಂಗ ಎಂಬ ಪರ್ಯಾಯನಾಮಗಳೂ ಉಂಟು. ಈತನ ತಂದೆ 'ಸಹವಾಸಿ' ವಂಶದ ಮಹಲಿಂಗದೇವನೆಂದೂ, ಗುರು ಸಹಜಾನಂದನೆಂದೂ ಕವಿ ಹೇಳಿಕೊಂಡಿದ್ದಾನೆ. 'ಸಹವಾಸಿ' ಎಂಬ ಈತನ ವಂಶದ ಹೆಸರು ಸವ್ವಾಶೆ (೧೨೫) ಎಂಬ ಮರಾಠಿಪದದಿಂದ ಬಂದಿರಬೇಕೆಂದೂ, ಧಾರವಾಡ ಜಿಲ್ಲೆಯ ೧೨೫ ಬ್ರಾಹ್ಮಣ ಮನೆತನದವರಾದ ಈ ಸವ್ವಾಶೆಗಳು ಶಾಂಕರಶಿಷ್ಯಕೋಟಿಯವರಾಗಿದ್ದು, ರಂಗನಾಥನು ಈ ವಂಶಕ್ಕೆ ಸೇರಿದವನಾಗಿರಬೇಕೆಂದೂ ಶ್ರೀ ಹೊಸಕೆರೆ ಚಿದಂಬರಯ್ಯನವರು 'ಅನುಭವಾಮೃತ'ದ ಪ್ರಸ್ತಾವನೆಯಲ್ಲಿ ತಿಳಿಸುತ್ತಾರೆ. ಕವಿಯು ಮಾಯೆಯ ಸ್ವರೂಪವನ್ನು ಹೇಳುತ್ತಾ 'ಉಚ್ಚಂಗಿಕೋಟೆಯ ವೊಲು ಹೆಚ್ಚುವುದು. ಆಲಿಸಿದರೊಮ್ಮೆಳನು' ಕೋಟೆಯ ಒಳಹೊಕ್ಕು ನೋಡಿದರೆ ಹುರುಳಿಲ್ಲ – ಎಂಬ ಮಾತನ್ನು ನೋಡಿದರೆ ಆತನು ಆ ಕೋಟೆಯ ಸುತ್ತು ಮುತ್ತಿನ ಪ್ರದೇಶದವನಾಗಿರಬೇಕೆಂದು ತೋರುತ್ತದೆ. ಈ ಊಹೆಗೆ ಪೋಷಕವಾಗಿ ಕವಿಯು 'ಸಂಬಾಳಿಸು', 'ರಂಗ' ಇತ್ಯಾದಿ ಪ್ರಾದೇಶಿಕ ಶಬ್ದಗಳನ್ನು ಬಳಸಿದ್ದಾನೆ. ರಂಗನಾಥನು ಶಿವೋಪಾಸಕನಾದ ಅದ್ವೈತಿಯಾಗಿದ್ದನೆಂದು ಆತನ ಗ್ರಂಥದಿಂದ ವ್ಯಕ್ತವಾಗುತ್ತದೆ. ತನ್ನ ಗ್ರಂಥವನ್ನು ಕವಿ ಶ್ರೀಶೈಲದ ಮಲ್ಲಿಕಾರ್ಜುನನಿಗೆ ಅಂಕಿತ ಮಾಡಿದ್ದಾನೆ.

'ಅನುಭವಾಮೃತ'ವು ಅಖಿಳವೇದಾಂತಾರ್ಥವನ್ನು ಸಂಗ್ರಹಿಸಿ' ಸಕಲರಿಗೂ ತಿಳಿಯುವಂತೆ ಸರಳ, ಸುಲಭ, ಸುಭಗವಾದ ೮೦೦ ಭಾಮಿನೀಷಟ್ಪದಿಯ ಪದ್ಯಗಳನ್ನು ಒಳಗೊಂಡಿದೆ. ಕವಿಯ

ಕನ್ನಡಾಭಿಮಾನ ಸ್ತೋತ್ರಾರ್ಹವಾಗಿದೆ. ಕನ್ನಡಿ-ದರ್ಪಣ ಈ ಮಾತುಗಳಲ್ಲಿ ಏನು ವ್ಯತ್ಯಾಸ ? ಎಂದು ಪ್ರಶ್ನೆ ಹಾಕಿಕೊಂಡು, ತಾನು ಸಂಸ್ಕೃತದ ಜ್ಞಾನವನ್ನು ಕನ್ನಡದಲ್ಲಿ ಬರೆಯಹೊರಟಿದ್ದೇನೆ ಎಂಬ ಪೀಠಿಕೆಯೊಡನೆ-

ಸುಲಿದ ಬಾಳೆಯ ಹಣ್ಣಿನಂದದಿ । ಕಳೆದ ಸಿಗುರಿನ ಕಬ್ಬಿನಂದದ
ಲಿಳಿಸಿದುಷ್ಣದ ಹಾಲಿನಂದದಿ ಸುಲಭವಾಗಿರ್ಪ
ಲಲಿತವಹ ಕನ್ನಡದ ನುಡಿಯಲಿ । ತಿಳಿದು ತನ್ನೊಳು ತನ್ನ ಮೋಕ್ಷವ
ಗಳಿಸಿಕೊಂಡರೆ ಸಾಲದೆ ? ಸಂಸ್ಕೃತದಲ್ಲಿನ್ನೇನು ?

ಎಂದು ಸವಾಲು ಹಾಕುತ್ತಾನೆ. ಆತನ ವಾದ ಹೃದಯಂಗಮವಾಗಿರುವುದರ ಜೊತೆಗೆ ಯುಕ್ತಿಯುಕ್ತವಾಗಿಯೂ ಇದೆ. ಮಾನವನು ಉದ್ಧಾರವಾಗುವ ಮಾರ್ಗ ಭಾಷೆಯಲ್ಲಿಲ್ಲ, ಅದರಲ್ಲಿರುವ ಜ್ಞಾನದಿಂದ ಬರತಕ್ಕದ್ದು. ಆ ಜ್ಞಾನ ಕನ್ನಡದಲ್ಲಿ ಬರುವುದಾದರೆ ಸಂಸ್ಕೃತವೇಕೆ ? ತಾಯಿಯ ಎದೆ ಹಾಲು ಸಿಕ್ಕುವಂತಿದ್ದರೆ ಗೋಕ್ಷೀರವೇಕೆ ?

ರಂಗನಾಥನು ಒಳ್ಳೆಯ ಕವಿ ಹೃದಯವುಳ್ಳವನು. ಗಹನವಾದ ವೇದಾಂತ ತತ್ತ್ವಗಳು ಕೂಡ ಆತನ ಪ್ರತಿಭೆಯ ಪ್ರಭಾವದಿಂದ ಕಾಂತಾಸಮ್ಮಿತದ ಬಣ್ಣವನ್ನು ತಳೆಯುತ್ತದೆ. ಯೌವನ, ಧನಸಂಪತ್ತಿ ಇತ್ಯಾದಿಗಳಿದ್ದವರಿಗೆ ಅಧ್ಯಾತ್ಮ ಅಳವಡದಂತೆ !

ಮೊದಲೆ ಮರ್ಕಟ ಮೇಲೆ ಮದ್ಯದ । ಮದುವೆದೆಯ ಹಿಡಿದಿರಲು ವೃಶ್ಚಿಕ
ತುದಿಯ ಕಾಲನು ಕಚ್ಚಿದರೆ ಕುಣಿದಾಡುವಂದದಲಿ
ಅಧಿಕಧನಸಂಪತ್ತು ಯೌವನ । ವೊದಗಿರಲು ವನಿತಾದಿ ವಿಷಯಾ
ಸ್ಪದನೆನಿಸಿಯೊಡಲರಿಯದವಗಧ್ಯಾತ್ಮ ವೇಕೆಂದ
ಸುಜ್ಞಾನವಿಲ್ಲದೆ ಸ್ನಾನಜಪಾದಿಗಳು ವ್ಯರ್ಥ-
ಮೀನು ನೀರೊಳಗಿದ್ದೊಡೇನೈ । ಧ್ಯಾನವನು ಬಕ ಮಾಡಲೇನದು
ಕಾನನವನಾಶ್ರಯಿಸಿ ಮರ್ಕಟವಿದ್ದೊಡೇನಲ್ಲಿ
ಮೌನದಲಿ ಕೋಗಿಲಿಯಿರಲ್ಕದ । ಕೇನು ಫಲ ಸುಜ್ಞಾನದವಿಲ್ಲದೆ
ಮೌನಮೊದಲಾದವರೊಳೇನೆಲೆ ಮಗನೆ ಕೇಳಿಂದ.

'ಮರ್ಕಟಕೇಕೆ ಮಾಣಿಕ ?', 'ನಾಯಿಗೇತಕೆ ನವರಸಾನ್ನವು', 'ನರಿಗಳೂರನು ಸೇರುವವೆ ?', 'ಕತ್ತೆಯರಿವುದೆ ಕತ್ತುರಿಯ', 'ನರಿಗೇಕೆ ಸುರಲೋಕ', 'ರಾಣಿಯೇಕೆ ನಪುಂಸಕಗೆ' – ಇಂತಹ ದೃಷ್ಟಾಂತ, ಉಪಮಾ, ರೂಪಕ ಇತ್ಯಾದಿ ಅಲಂಕಾರಗಳು ವಿಷಯವನ್ನು ಸ್ಪಷ್ಟಪಡಿಸುವುದರೊಡನೆ ಕಾವ್ಯಾನಂದವನ್ನು ನೀಡುವುದಕ್ಕೂ ಸಹಾಯಕವಾಗುತ್ತವೆ. ಕವಿಯು ವಸ್ತು ಮತ್ತು ಅದರ ನಿರೂಪಣೆ ಎರಡರಲ್ಲೂ ಅದ್ಭುತವಾದ ಅಪೂರ್ವವಾದ ಪ್ರತಿಭೆ ಪಾಂಡಿತ್ಯಗಳನ್ನು ಮೆರೆದಿದ್ದಾನೆ. ಆದ್ದರಿಂದಲೆ ಇದು ಸಂಸ್ಕೃತಕ್ಕೆ ಭಾಷಾಂತರವಾಗಿದೆ. ಶ್ರೀಮತ್ಪರಮಹಂಸ, ಬಾಲಕೃಷ್ಣ ಬ್ರಹ್ಮಾನಂದ ಇಂತಹ ಯೋಗಿಗಳೆಂಬುವರು ಮೂಲದ ಹೆಸರನ್ನೇ ಇಟ್ಟು ಇದನ್ನು ಭಾಷಾಂತರಿಸಿದ್ದಾರೆ. ಇದು ಕನ್ನಡಿಗರಿಗೆ ಹೆಮ್ಮೆಯ ವಿಷಯ !

೧೪. ಬೊಬ್ಬೂರು ರಂಗ

ಚಿತ್ರದುರ್ಗ ಜಿಲ್ಲೆಯ ಘನಪುರಿಯಲ್ಲಿ (ಹಿರಿಯೂರು) ಕರಣಿಕಾಗ್ರಣಿಯಾಗಿ 'ಪಂಪಾವಿರೂಪಾಕ್ಷಶತಕ'ವನ್ನು ಬರೆದಿದ್ದ ರಂಗಕವಿಯ ಮಗ ಬೊಬ್ಬೂರು ರಂಗ. ಅಲ್ಲಿಗೆ ಸಮೀಪದಲ್ಲಿರುವ ಬೊಬ್ಬೂರಿನ ರಂಗನಾಥಸ್ವಾಮಿ ಈತನ ಕುಲದೈವವೆಂದು ಕಾಣುತ್ತದೆ. ಈತನು

ಭಾಮಿನಿಷಟ್ಪದಿಯಲ್ಲಿ 'ಅಂಬಿಕಾವಿಜಯ'ವನ್ನೂ ವಾರ್ಧಕದಲ್ಲಿ 'ಪರಶುರಾಮ ರಾಮಾಯಣ'ವನ್ನೂ ಬರೆದಿದ್ದಾನೆ. ತಾನು 'ಸುಕವಿಗಳ ಕುಮುಕರ', 'ಕುಕವಿಗಳ ಎದೆಗೆಬ್ಬು' ಎಂದೂ, ತಾನು, ಕುಮಾರವ್ಯಾಸ, ಕುಮಾರವಾಲ್ಮೀಕಿ, ಲಕ್ಷ್ಮೀಶ ಈ ನಾಲ್ವರೇ 'ಕೃತಿಸೃಜಿಸುವತಿದಿಗ್ಗರು, ತಮಗಿದಿರಾರು ಧರಣಿಯಲಿ ?' ಎಂದೂ ವಿಜೃಂಭಿಸುತ್ತಾನೆ. ಕುಮಾರವ್ಯಾಸನಂತೆ ಈತನೂ 'ಅಗ್ಗಳಿಕೆ ಪರರನು ಸರಿಸದೊಂ। ದಗ್ಗಳಿಕೆ ಭಾಮಿನಿಯ ಷಟ್ಪದಿ ಮುಗ್ಗಿಸದೆ ಕರಪುಸ್ತಕದಿ ಪದಗಳು ನಿರ್ಮಿಸುವೆ' ಎಂದು ತನ್ನ ಹಿರಿತನವನ್ನು ಹೊಗಳಿಕೊಂಡಿದ್ದಾನೆ. 'ಮಿಯಾಂ' ಎಂಬುದನ್ನೆ ಆರ್ಭಟವೆಂದು ಕೊಂಡಿರುವ ಇವನಿಗೆ 'ಎಲೆ ಬೆಕ್ಕೆ ರೂಪಿನಿಂದಲೆ ಹುಲಿಜಾತಿಗೆ ಸೇರ್ದನೆಂದು ಗರ್ವಿಸಬೇಡಾ' ಎಂದು ಹೇಳಬೇಕಾಗಿದೆ.

'ಅಂಬಿಕಾವಿಜಯ' ೩,೦೦೦ ಪದ್ಯಗಳ ಬೃಹತ್‌ಗ್ರಂಥ; 'ಪರಶುರಾಮ ರಾಮಾಯಣ'ವೂ ೧೫೦೦ಕ್ಕಿಂತ ಹೆಚ್ಚು ಪದ್ಯಗಳನ್ನು ಒಳಗೊಂಡಿದೆ. ಆದಿಶಕ್ತಿಯಿಂದ ಅಂಬಿಕೆ ರಕ್ತಬೀಜಾಸುರನನ್ನು ಸಂಹರಿಸಿದ ಕಥೆ 'ಅಂಬಿಕಾ ವಿಜಯ', ಇದರಲ್ಲಿ ಶಿವಭಕ್ತ ಮಾರ್ಕಂಡೇಯನ ಕಥೆಯೂ ಇದೆ. ಪರಶುರಾಮನ ಜೀವನಕಥೆಯನ್ನು ಒಳಗೊಂಡುದು 'ಪರಶುರಾಮರಾಮಾಯಣ'. ಕವಿಯಲ್ಲಿ ಪ್ರತಿಭೆ, ಕಲ್ಪನಾಶಕ್ತಿಗಳು ಇವೆಯಾದರೂ, ಆಯಾ ಕಾವ್ಯಗಳ ಗಾತ್ರಕ್ಕೆ ತಕ್ಕಷ್ಟು ಕಥೆಯಿಲ್ಲವಾದುದರಿಂದ ವರ್ಣನೆ ಸಿಂಹಾಸನವೇರುತ್ತದೆ. ಕವಿಯ ಭಾಷೆ ಸರಳ, ಸುಲಭ; ಪದ್ಯಗಳ ಓಟ ಧಾರಾಳವಾಗಿದೆ. ವರ್ಣನಾ ಭಾಗವು ಕವಿಸಮಯದ ಚೌಕಟ್ಟಿನೊಳಗೆ ಇರುವ ಚಿತ್ರವಾದರೂ ನೂತನ ವರ್ಣವೈಖರಿಯನ್ನು ಪಡೆದಿದೆ.

೧೫. ಚಿದಾನಂದಾಭೂತ (ಕ್ರಿ.ಶ. ೧೭೦೦)

ಈತನು ಭಾಮಿನೀಷಟ್ಪದಿಯಲ್ಲಿ 'ಜ್ಞಾನಸಿಂಧು', 'ದೇವೀಮಾಹಾತ್ಮ್ಯ' ಎರಡು ಗ್ರಂಥಗಳನ್ನೂ 'ಪಂಚೀಕರಣ'ವೆಂಬ 'ವಚನಗ್ರಂಥ', 'ತತ್ತ್ವಚಿಂತಾಮಣಿ' ಎಂಬ ಗದ್ಯಗ್ರಂಥ, 'ನವಚಕ್ರಕುಲರೇಖಾಲಕ್ಷಣ' ಎಂಬ ಟೀಕಾ ಗ್ರಂಥವನ್ನೂ 'ಬಗಳಾಂಬಾಸ್ತೋತ್ರ', 'ಕಾಮವಿಡಂಬನ' ಎಂಬ ಪದ್ಯಗಳ ಗ್ರಂಥಗಳನ್ನೂ 'ಚಿದಾನಂದರ ವಚನ' ಎಂಬ ಹಾಡುಗಳನ್ನೂ ಬರೆದಿದ್ದಾನೆ. ತುಂಗಾನದೀ ತೀರವಾಸಿಯಾಗಿದ್ದ ಈತನು ಅವಧೂತನೊ ಸನ್ಯಾಸಿಯೊ ಆಗಿದ್ದನೆಂದು ತೋರುತ್ತದೆ.

ಚಿದಾನಂದಾವಧೂತ ಗ್ರಂಥಗಳಲ್ಲಿ ಮೊದಲಿನವೆರಡು ಗಮನಾರ್ಹವಾದುವು. ಆತನ 'ಜ್ಞಾನಸಿಂಧು' ಅದ್ವೈತವೇದಾಂತವನ್ನು ಪ್ರತಿಪಾದಿಸುವ ೩,೬೨೦ ಪದ್ಯಗಳನ್ನು ಒಳಗೊಂಡಿದೆ. ಇದನ್ನು ಶಿವನು ಷಣ್ಮುಖನಿಗೆ ಬೋಧಿಸಿದನಂತೆ ! ತನ್ನನ್ನು ತಾನೇ ತಿಳಿದು, ತಾನು ತಾನೇ ಆಗಿ, ತನ್ನ ಅನುಭವವನ್ನು ತುಂಬಿಕೊಂಡಿರುವುದರಿಂದ ಇದಕ್ಕೆ 'ಜ್ಞಾನಸಿಂಧು' ಎಂಬ ಹೆಸರು ಬಂತಂತೆ ! ಈ ಗ್ರಂಥವು ರಂಗನಾಥನ 'ಅನುಭವಾಮೃತ'ವನ್ನು ಬಹುಮಟ್ಟಿಗೆ ಅನುಸರಿಸಿರುವುದಲ್ಲದೆ, ಅದರಂತೆಯೆ ಲಲಿತವಾಗಿದೆ. ನೀರಸವಾದ ವೇದಾಂತ ವಿಚಾರವನ್ನು ಲಲಿತವಾಗಿ ಬರೆಯಬಲ್ಲ ಈತ ಅಭಿನಂದನೀಯ. ಈತನ 'ದೇವೀಮಾಹಾತ್ಮ್ಯ'ವು ಗುರುಚಿದಾನಂದರ ಆಜ್ಞೆಯಂತೆ ಸಂಸ್ಕೃತದಿಂದ ಕನ್ನಡಿಸಿದ ಕಾವ್ಯ. ಕವಿಯ ಕಾವ್ಯಶಕ್ತಿಗೆ ಉದಾಹರಣೆಯಂತಿರುವ ದೇವಿಯ ಯುದ್ಧದ ವರ್ಣನೆ ಇದು–

ಏರಿಸಿದಳೈ ದೇವಿ ಧನವನು । ಕಾರಿಸಿದಳಸುಗಳನ ದೈತ್ಯರ
ತೂರಿದಳು ಕೂರ್ಗಣೆಯ ಗರಿ ಗಾಳಿಯಲುಳಿಯದಂತೆ
ಹಾರಿದವು ತಲೆ ಕುದುರೆ ಗಜಗಳಿ । ಸೋರಿಡುವ ರಕ್ತದಲಿ ದಿನಪನ
ಚಾರುಕಿರಣಗಳಡಗಿದವು ಕತ್ತಲೆಯು ಕವಿಯಿತ್ತು

ಕುಮಾರವ್ಯಾಸನ ಛಾಯೆ ಇದೆ. ಅದನ್ನು ಬಳಸಿಕೊಳ್ಳುವಲ್ಲಿ ತನ್ನ ತನವನ್ನು ಮೆರೆದಿದ್ದಾನೆ. ಈತನ ಕಲ್ಪನಾಶಕ್ತಿ ಸಮತೋಲನವಾದ ಶೈಲಿ, ಸಾರ್ಥಕವಾದ ಭಾಷೆ ಸ್ತೋತ್ರಾರ್ಹವಾಗಿದೆ.

೧೬. ಕೋನಯ್ಯ (ಕ್ರಿ.ಶ. ೧೭೫೦)

ಸುಮಾರು ೧೭೨೦ ಪದ್ಯಗಳುಳ್ಳ 'ಕೃಷ್ಣಾರ್ಜುನರ ಸಂಗರ'ವನ್ನು ಭಾಮಿನೀಷಟ್ಪದಿಯಲ್ಲಿ ಬರೆದ ಕೋನಯ್ಯನು ಹೋತೂರ ಬೆಟ್ಟರಸನ ಮಗನೆಂದೂ, 'ಸರಸಭಾರತಿ' ಎಂಬುದು ಆತನ ಬಿರುದು ಎಂದೂ ಆತನ ಗ್ರಂಥದಿಂದ ತಿಳಿದುಬರುತ್ತದೆ. ಗಯನೆಂಬ ಗಂಧರ್ವನು ಶ್ರೀಕೃಷ್ಣನಿಗೆ ದ್ರೋಹವೆಸಗಿ ಪ್ರಾಣಭಯದಿಂದ ಅರ್ಜುನನ ಮೊರೆಹೊಕ್ಕನು. ಅವನನ್ನು ತನಗೆ ಒಪ್ಪಿಸುವಂತೆ ಶ್ರೀಕೃಷ್ಣನು ಹೇಳಲು ಅರ್ಜುನನು ಅದಕ್ಕೊಪ್ಪದೆ ಯುದ್ಧಕ್ಕೆ ನಿಂತನು. ಹರಿನರರು ದ್ವೈತಕಾನನದಲ್ಲಿ ಯುದ್ಧ ಮಾಡುತ್ತಿರಲು ಪರಮೇಶ್ವರನು ಪ್ರತ್ಯಕ್ಷನಾಗಿ 'ಇರುವರು ತಿಳುಹಿ ಸಾಮದಲೊಂದು ಮಾಡಿದನು' ಇದು ಇಲ್ಲಿನ ಕಥಾವಸ್ತು. ಇದನ್ನು ಭಾರತದ ವನಪರ್ವದಿಂದ ಆಯ್ದುಕೊಂಡಿರುವುದಾಗಿ ಕವಿ ತಿಳಿಸಿದ್ದಾನೆ. ವ್ಯಾಸಭಾರತದಲ್ಲಿ ಇದು ಸಿಕ್ಕುವುದಿಲ್ಲ. ಕವಿಗೆ ಆಕರವಾದ ಭಾರತ ಯಾವುದೋ ಗೊತ್ತಿಲ್ಲ. ಇದಕ್ಕೆ 'ಗಯಚರಿತ್ರೆ' ಎಂಬ ಹೆಸರೂ ಉಂಟು. ಜನಪ್ರಿಯವಾಗಿರುವ ಈ ವಸ್ತುವನ್ನು ಆಧರಿಸಿ ಅನೇಕ ಕಾವ್ಯ, ಯಕ್ಷಗಾನ ನಾಟಕಗಳು ಹುಟ್ಟಿಕೊಂಡಿದೆ. ಕೋನಯ್ಯನ ಕಾವ್ಯವೂ ಸರಳವಾಗಿ ಸರಸವಾಗಿ ಲಲಿತವಾಗಿರುವುದರಿಂದ ತುಂಬ ಜನಪ್ರಿಯವಾಗಿದೆ.

೧೭. ಹೆಳವನಕಟ್ಟೆ ಗಿರಿಯಮ್ಮ (ಕ್ರಿ.ಶ. ೧೭೫೦)

ಚಿತ್ರದುರ್ಗ ಜಿಲ್ಲೆಯ ಹರಿಹರದ ಸಮೀಪದಲ್ಲಿರುವ ಕೊಮಾರ್‌ಹಳ್ಳಿ ಈಕೆಯ ಜನ್ಮಸ್ಥಳ. ಅಲ್ಲಿನ ಹೆಳವನಕಟ್ಟೆ ರಂಗನಾಥಸ್ವಾಮಿಯು ಈಕೆಯ ಆರಾಧ್ಯದೈವ. ಈ ದೇವರ ಅಂಕಿತದಲ್ಲಿ ಈಕೆ 'ಚಂದ್ರಹಾಸನ ಕಥೆ', 'ಸೀತಾಕಲ್ಯಾಣ', 'ಉದ್ದಾಳಿಕನ ಕಥೆ' ಎಂಬ ಪುಟ್ಟ ಕಾವ್ಯಗಳನ್ನು ಬರೆದಿರುವುದಲ್ಲದೆ ಅನೇಕ ಹಾಡುಗಳನ್ನೂ ರಚಿಸಿದ್ದಾಳೆ. ಈಕೆಯ ಮೂರು ಗ್ರಂಥಗಳು ಪೌರಾಣಿಕವಾದವು. ಚಂದ್ರಹಾಸನ ಕಥೆಯನ್ನು ಲಕ್ಷ್ಮೀಶನ ಜೈಮಿನಿಭಾರತದಿಂದ ಎತ್ತಿಕೊಂಡು ಸಾಂಗತ್ಯದಲ್ಲಿ ಬರೆಯುತ್ತಿರುವುದಾಗಿ ಕವಯಿತ್ರಿಯೇ ಹೇಳಿಕೊಂಡಿದ್ದಾಳೆ; ಇಲ್ಲಿ ಲಕ್ಷ್ಮೀಶನ ಪ್ರಭಾವ ಎದ್ದು ಕಾಣುತ್ತದೆ. ಕಾವ್ಯದ ಆರಂಭದಲ್ಲಿ ಮನೆದೇವರನ್ನು ಮತ್ತು ಪತಿಚರಣಗಳನ್ನು ಸ್ಮರಿಸಿದ್ದಾಳೆ. ಕಾವ್ಯದ ಕೊನೆಯಲ್ಲಿ 'ನಿತ್ಯನಿರ್ಮಲಪರಮಾನಂದ ಹೃದಯೆ' ಎಂದು ತನ್ನನ್ನು ಕರೆದುಕೊಂಡಿದ್ದಾಳೆ. ಈಕೆಯ 'ಸೀತಾ ಕಲ್ಯಾಣ' ಹಾಡಿನ ಮಟ್ಟಿನಲ್ಲಿದೆ. 'ಉದ್ದಾಳಕನ ಕಥೆ' ಸಾಂಗತ್ಯದಲ್ಲಿದೆ. ಹೆಣ್ಣು ಮಕ್ಕಳು ಓದಿ ಆನಂದಪಡುವುದಕ್ಕೂ ಅನುಕೂಲಿಸುವಂತೆ ಹಾಡುಗಬ್ಬಗಳಾಗಿ ರಚಿತವಾಗಿರುವ ಈಕೆಯ ಕೃತಿಗಳು ಸಾಕಷ್ಟು ಜನಪ್ರಿಯವಾಗಿವೆ. ಈಕೆಯ ಹಾಡುಗಳ ತತ್ತ್ವ ಮತ್ತು ನೀತಿಬೋಧೆ ಸರಳವಾಗಿ ಅರ್ಥಗರ್ಭಿತವಾಗಿದೆ. ಈ ಹಾಡುಗಳು ಹರಿದಾಸರ ಹಾಡುಗಳಂತೆಯೇ ಜನಸಾಮಾನ್ಯರನ್ನೂ, ಹೆಣ್ಣುಮಕ್ಕಳನ್ನೂ ಉದ್ಧರಿಸುವ ಸಾಧನಗಳಾಗಿವೆ.

೧೮. ತಿಮ್ಮಾಮಾತ್ಯ (ಕ್ರಿ.ಶ. ೧೭೫೦)

'ರಾಮಾಯಭ್ಯುದಯಕಥಾಕುಸುಮಮಂಜರಿ' ಎಂಬುದು ಈತನು ಭಾಮಿನೀಷಟ್ಪದಿಯಲ್ಲಿ ಬರೆದಿರುವ ಗ್ರಂಥ. ಸುಮಾರು ೩೫೦೦ ಪದ್ಯಗಳನ್ನೊಳಗೊಂಡ ಈ ಕಾವ್ಯಕ್ಕೆ 'ಆನಂದರಾಮಾಯಣ' ಎಂಬ ಹೆಸರೂ ಉಂಟು. ಇದು ಎಲ್ಲ ರಾಮಾಯಣಗಳ ಕಥಾಸಾರವನ್ನೂ, ವಿಷ್ಣುವಿನ ವರಾಹ, ನರಸಿಂಹ ಅವತಾರಗಳ ಕಥೆಯನ್ನೂ, ರಾವಣ ದಿಗ್ವಿಜಯವನ್ನು ಬಾಲಕಾಂಡದಲ್ಲಿಯೇ ಒಳಗೊಂಡು, ಶ್ರೀರಾಮನ ರಾಜ್ಯಭಾರ, ದಿಗ್ವಿಜಯ, ಅಶ್ವಮೇಧಗಳ ಕಥೆಯನ್ನೂ ಉತ್ತರಕಾಂಡದಲ್ಲಿ ಒಳಗೊಂಡಿದೆಯಂತೆ! ಈತನ ಸ್ಥಳ ಬೆಂಗಳೂರು ಜಿಲ್ಲೆಯ ಅಗರವೆಂದೂ, ಅದೇ ಜಿಲ್ಲೆಯಲ್ಲಿರುವ ಸಹದೇವಪುರ ಅಥವಾ ಸಾಧನಹಳ್ಳಿಯ ತಿರುಮಲದೇವಗು ಈತನ

ಮನೆದೇವರೆಂದೂ, ಆ ದೇವರ ಅಂಕಿತದಲ್ಲಿಯೇ ತನ್ನ ಕಾವ್ಯಗಳನ್ನು ರಚಿಸಿರುವನೆಂದೂ ತಿಳಿದುಬರುತ್ತದೆ. ಈತನ ನುಡಿನಿರಿಗೆ ತಿಳಿಯಾಗಿ ಲಲಿತವಾಗಿದೆ; ಲಕ್ಷ್ಮೀಶನ ಪ್ರಭಾವ ಕವಿಯ ಮೇಲೆ ಸಾಕಷ್ಟು ಆಗಿದೆ ಎಂಬುದು ಸುಸ್ಪಷ್ಟ ರಾಮಾಯಣದ ವಿವಿಧ ಕಥೆಗಳನ್ನು ಒಳಗೊಂಡು ರಾಮಾಯಣದ ಒಂದು ಕೋಷದಂತಿದೆ ಈ ಕಾವ್ಯ.

೧೯. ವೆಂಕಾಮಾತ್ಯ (ಕ್ರಿ.ಶ. ೧೭೭೦)

ಈ ಕವಿಯು 'ರಾಮಾಯಣ', 'ಇಂದಿರಾಭ್ಯುದಯ', 'ಹನುಮದ್ವಿಲಾಸ' ಎಂಬ ಕನ್ನಡ ಗ್ರಂಥಗಳನ್ನೂ ಅನೇಕ ಸಂಸ್ಕೃತ ಗ್ರಂಥಗಳನ್ನೂ ಬರೆದಿದ್ದಾನೆ. ರಾಮಪುರಿಯ ಹಂಪೆಯಾಮಾತ್ಯ, ವಾಮಾಂಬೆಯರ ಪುತ್ರನಾದ ಈತನು ಅಂಜನೇಯರ ವರಪ್ರಸಾದದಿಂದ ಕವಿತಾಶಕ್ತಿಯನ್ನೂ ಗಾಂಧರ್ವವಿದ್ಯೆಯನ್ನೂ ಪಡೆದುದಾಗಿ ಹೇಳಿಕೊಂಡಿದ್ದಾನೆ. ತನ್ನ 'ಅಲಂಕಾರಮಣಿದರ್ಪಣ'ದಲ್ಲಿ ಕವಿಯು ತನ್ನನ್ನು 'ಷಡ್ದರ್ಶನೀವಲ್ಲಭ', ಘಟಕಾ ಪ್ರಬಂಧರಚನಾವಿದಗ್ಧ' ಎಂದು ಕರೆದುಕೊಂಡಿದ್ದಾನೆ. ಆತನ ರಾಮಾಯಣವು ವಾರ್ಧಕಷಟ್ಪದಿಯಲ್ಲಿದ್ದು ೯೮೭೫ ಪದ್ಯಗಳನ್ನೊಳಗೊಂಡಿದೆ. ಈತನ ರಚನೆಯು ಲಕ್ಷಣಬದ್ಧವಾಗಿ ಪ್ರೌಢವಾಗಿದೆ. ಕವಿಯ 'ಇಂದಿರಾಭ್ಯುದಯ'ವು ಚಂಪೂರೂಪವಾಗಿದೆ; ಲಕ್ಷ್ಮೀದೇವಿಯ ಅವತಾರಾದಿ ವಿಷಯಗಳನ್ನು ಒಳಗೊಂಡಿದೆ.

೨೦. ಲಿಂಗಣ್ಣ (ಕ್ರಿ.ಶ. ೧೭೫೦)

ಈ ಕವಿಯು 'ಕೆಳದಿನೃಪವಿಜಯ'ವನ್ನು ಬರೆದಿದ್ದಾನೆ. ಇದರಲ್ಲಿ ಕೆಳದಿಯ ಅರಸರ ಚರಿತ್ರೆಯನ್ನು ಬರೆಯಲಾಗಿದೆ. ಇದು ಚಂಪೂಗ್ರಂಥ. ಈ ಗ್ರಂಥದಲ್ಲಿ ಮೊದಮೊದಲು ಸಾಕಷ್ಟು ಶಬ್ದ ಮತ್ತು ಅರ್ಥಾಲಂಕಾರಾದಿ ಕಾವ್ಯಚಮತ್ಕಾರಗಳು ಕಂಡುಬರುತ್ತವೆ. ಆದರೂ ಇದರಲ್ಲಿ ಕಾವ್ಯಾಂಶಕ್ಕಿಂತ ಚರಿತ್ರಾಂಶವೇ ಹೆಚ್ಚಾಗಿದೆ. ಇದು ಚಿತ್ರದುರ್ಗ, ಬೇಲೂರು, ವಿಜಯನಗರ ಮೊದಲಾದ ರಾಜ್ಯಗಳ ಇತಿಹಾಸದ ಮೇಲೂ ಸಾಕಷ್ಟು ಬೆಳಕನ್ನು ಚೆಲ್ಲುತ್ತದೆ. ಕವಿಯು ಪ್ರತಿಭಾಶಾಲಿ, ಆತನ ಕಾವ್ಯಶಕ್ತಿ ಅಲ್ಲಲ್ಲೆ ಮಿನುಗುತ್ತದೆ. ಆದರೆ ಕವಿಯ ದೃಷ್ಟಿ ಪ್ರೌಢವಾದ ಕಾವ್ಯರಚನೆಗಿಂತಲೂ ಕಂದ ಮತ್ತು ವಚನಗಳೇ ಹೆಚ್ಚಾಗಿವೆ. ಈತನ ಭಾಷೆ ಹಳಗನ್ನಡವಾದರೂ ಸುಲಭವಾಗಿದೆ. ಅಲ್ಲಲ್ಲೆ ಹೊಸಗನ್ನಡ ರೂಪಗಳೂ ಕಾಣಿಸಿಕೊಂಡಿದೆ. ಮರಾಠಿ ಮತ್ತು ಹಿಂದೂಸ್ತಾನಿ ಪದಗಳೂ ಅಲ್ಲಲ್ಲೆ ಕಾಣಬರುತ್ತದೆ. ಈತನೂ ಕಂದಪದ್ಯಗಳ ನಿಯಮವನ್ನು ಉಲ್ಲಂಘಿಸಿರುವ ಎಷ್ಟೋ ಸಂದರ್ಭಗಳು ಕಂಡುಬರುತ್ತದೆ. ಶ್ರೀ ಎ.ಆರ್. ಕೃಷ್ಣಶಾಸ್ತ್ರಿಗಳು ಈ ಗ್ರಂಥದ ಉಪೋದ್ಘಾತದಲ್ಲಿ ತಿಳಿಸಿರುವಂತೆ ಇಲ್ಲಿನ ಅನೇಕ ಪದಪ್ರಯೋಗಗಳಿಗೆ 'ಸಾಧುತ್ವವನ್ನು ಕಲ್ಪಿಸುವುದು ಸುಲಭವಲ್ಲ'.

ವೈದಿಕ ಸಾಹಿತ್ಯ

ದಾಸ ಸಾಹಿತ್ಯ

೧೨ನೆಯ ಶತಮಾನದಲ್ಲಿ ನಡೆದ ಕೋಲಾಹಲಕರವಾದ ಧರ್ಮಕ್ರಾಂತಿ ಸನಾತನವಾದ ವೈದಿಕಮತವನ್ನು ಬುಡಮಟ್ಟ ಅಲ್ಲಾಡಿಸಿತಷ್ಟೆ? ಅದುವರೆಗೆ ವೈದಿಕ ಮತಾನುಯಾಯಿಗಳಾಗಿದ್ದವರು ತಂಡತಂಡವಾಗಿ ವೀರಶೈವ ಮತವನ್ನು ಆಲಿಂಗಿಸಿದುದನ್ನು ಕಂಡು ವೈದಿಕಮತವೇ ಅಳಿದುಹೋಗುವುದೆಂಬ ಭಯ ವೈದಿಕರಿಗೆ ಹುಟ್ಟಿರಬೇಕು. ಅಂದು ವೀರಶೈವಮತವು 'ಶೂನ್ಯ

ಸಿಂಹಾಸನ', 'ಅನುಭವಮಂಟಪ' – ಇವುಗಳ ಸ್ಥಾಪನೆ ಸಂಘಟನೆಗಳ ಮೂಲಕ ವಚನ ವಾಙ್ಮಯದ ಪ್ರಚಾರ ಪ್ರಸಾರಗಳನ್ನು ಕೈಗೊಂಡು ಜನಮನವನ್ನು ಅದ್ಭುತ ರೀತಿಯಲ್ಲಿ ಆಕರ್ಷಿಸಿತ್ತು. ಅಂತಹುದೇ ಒಂದು ಉಪಾಯವನ್ನು ಕೈಗೊಂಡು ವೈದಿಕಮತದಿಂದ ಹೊರಗೆ ಹೋಗುತ್ತಿದ್ದ ಹೊಳೆಗೆ ಅಡ್ಡಕಟ್ಟೆಹಾಕುವ ಕಾರ್ಯ ಕೈಗೊಳ್ಳಬೇಕಾಯಿತೆಂದು ತೋರುತ್ತದೆ. ಈ ನಿಟ್ಟಿನಲ್ಲಿ ನಡೆದ ಪ್ರಯತ್ನವೇ ದ್ವೈತಮತಸ್ಥಾಪನೆಯೊ ಏನೊ ! ಈ ಮತದ ಸ್ಥಾಪಕನು ಮಧ್ವಾಚಾರ್ಯನಾದುದರಿಂದ ಈ ಮತಕ್ಕೆ ಮಾಧ್ವಮತವೆಂದು ಹೆಸರು ಬಂದಿದೆ.

ಉಡುಪಿಯ ಸಮೀಪದಲ್ಲಿರುವ ಶಿವಳ್ಳಿಯೆಂಬ ಹಳ್ಳಿಯಲ್ಲಿ ಹುಟ್ಟಿದ ಮಧ್ವಾಚಾರ್ಯನು ತನ್ನ ಬ್ರಹ್ಮಚರ್ಯಾಶ್ರಮದಲ್ಲಿರುವಾಗಲೆ ಸನ್ಯಾಸವನ್ನು ಸ್ವೀಕರಿಸಿ, ಅದ್ವೈತಮತಖಂಡನೆಯೊಡನೆ ದ್ವೈತಮತವನ್ನು ಸ್ಥಾಪಿಸಿದನು. ನಾಡಿನಲ್ಲೆಲ್ಲ ದ್ವೈತಮತವನ್ನು ಪ್ರಚಾರಮಾಡುತ್ತಾ ಈತನು ಉಡುಪಿಯಲ್ಲಿ ಅಷ್ಟಮಠಗಳನ್ನು ಸ್ಥಾಪಿಸಿದನು. ಇಂದಿಗೂ ಉಡುಪಿ ದ್ವೈತಮತ ಕೇಂದ್ರವಾಗಿದೆ.

ಬಸವಣ್ಣನಂತೆ ಮಧ್ವಾಚಾರ್ಯನೂ ಕನ್ನಡಿಗನೇ. ಇಬ್ಬರ ಕಾರ್ಯರಂಗವೂ ಬಹುಮಟ್ಟಿಗೆ ಕರ್ಣಾಟಕವೇ. ಬಸವಣ್ಣನವರು ಹರಪಾರಮ್ಯಬೋಧನೆ, ಮಧ್ವಾಚಾರ್ಯನದು ಹರಿಸರ್ವೋತ್ತಮತ್ವ. ಇಬ್ಬರೂ ಆಧ್ಯಾತ್ಮಿಕದಲ್ಲಿ ಭಕ್ತಿಗೆ ಪ್ರಥಮಸ್ಥಾನವನ್ನು ನೀಡಿದ್ದಾರೆ. ತಮ್ಮ ಮತಪ್ರಚಾರಕ್ಕಾಗಿ ಇವರು ಅನುಸರಿಸಿದ ಮಾರ್ಗವೂ ಸ್ವಲ್ಪ ಹೆಚ್ಚು ಕಡಿಮೆ ಸಮಾನವಾದುದೇ. ಇಬ್ಬರೂ ಉಪದೇಶಕ್ಕೆ ಜನರ ನುಡಿಯನ್ನೆ ಆಶ್ರಯಿಸಿದರು. ಶಿವಶರಣರು ಕಾವ್ಯಮಯವಾದ ಗದ್ಯದಲ್ಲಿ ತಮ್ಮ ವಚನಗಳನ್ನು ಕಟ್ಟಿ ಹಾಡಹೊರಟರೆ, ಹರಿದಾಸರು ಹೃದಯವನ್ನು ಸೂರೆಗೊಳ್ಳಬಲ್ಲ ಕೀರ್ತನೆಗಳನ್ನು ಕಟ್ಟಿ ಹಾಡಹೊರಟರು. ಕಾಲಕ್ರಮದಲ್ಲಿ ನೃತ್ಯವೂ ಇದಕ್ಕೆ ಸೇರಿಕೊಂಡಿತು. ವೀರಶೈವರ ಸಂಘಟನೆ, ಮಾರ್ಗದರ್ಶನಗಳಿಗೆ 'ಶೂನ್ಯ ಸಿಂಹಾಸನ', ಅನುಭವಮಂಟಪಗಳು 'ನೆರವಾದರೆ, ಅದೇ ಕಾರ್ಯಕ್ಕಾಗಿ ಹರಿದಾಸರು 'ವ್ಯಾಸಕೂಟ', 'ದಾಸಕೂಟ'ಗಳನ್ನು ಸ್ಥಾಪಿಸಿಕೊಂಡರು. ಎರಡು ಕೂಟಗಳ ಹೆಗ್ಗುರಿಯೂ ದ್ವೈತ ಮತಪ್ರಚಾರವೇ. ವೈದಿಕ ಆಧಾರಗ್ರಂಥಗಳನ್ನು ಮೂಲದಲ್ಲಿ ಓದಿ, ದ್ವೈತ ಸಿದ್ಧಾಂತಗಳನ್ನು ಜನಸಾಮಾನ್ಯರಲ್ಲಿ ಕೀರ್ತನೆಗಳ ಮೂಲಕ ಪ್ರಸಾರಮಾಡುವ ಕಾರ್ಯ 'ದಾಸಕೂಟ'ಕ್ಕೆ ಸೇರಿದುದು. ಇವೆರಡಕ್ಕೂ ಇರುವ ವ್ಯತ್ಯಾಸ ಕೇವಲ ಭಾಷೆಗೆ ಮಾತ್ರ ಸಂಬಂಧಿಸಿದುದು. ವಚನಗಳಿಗೂ ಕೀರ್ತನೆಗಳಿಗೂ ಇರುವ ಮತ್ತೊಂದು ಮುಖ್ಯ ಹೋಲಿಕೆಯೆಂದರೆ ಅವರ ಕೃತಿಗಳಲ್ಲಿ ಇರುವ ಅಂಕಿತ. ವಚನಕಾರರು ತಮ್ಮ ಇಷ್ಟ ದೈವವನ್ನು ತಮ್ಮ ವಚನಗಳಲ್ಲಿ ಅಂಕಿತವಾಗಿ ಬಳಸುತ್ತಾರೆ. ಹರಿದಾಸರು ತಮ್ಮ ಇಷ್ಟದೈವವನ್ನು ಬಳಸುತ್ತಾರೆ. ತಮ್ಮ ಕೀರ್ತನಗಳಲ್ಲಿ, ಪುರಂದರದಾಸರ ಕಾಲಕ್ಕೆ ಹರಿದಾಸನು ತನ್ನ ಗುರುವಿನಿಂದ ಅಂಕಿತವನ್ನು ಸ್ವೀಕರಿಸಬೇಕೆಂದು ನಿಯಮ ಹುಟ್ಟಿಕೊಂಡಿತು. ಹಾಗೆ ಅಂಕಿತವನ್ನು ಕೊಡುವ ಮುನ್ನ ಗುರುವು ಅಂಕಿತಪದವೊಂದನ್ನು ರಚಿಸಿ, ಅದರ ಪ್ರಾರಂಭದ ಚರಣದಲ್ಲಿ ಶಿಷ್ಯನ ಅಂಕಿತವನ್ನೂ ಮುಕ್ತಾಯದ ನುಡಿಯಲ್ಲಿ ತನ್ನ ಅಂಕಿತವನ್ನೂ ಹಾಕುವ ಸಂಪ್ರದಾಯ ಬೆಳೆದುಬಂದಿತು. ಪಂಢರಪುರದ ವಿಠಲಸ್ವಾಮಿ ನಾದಬ್ರಹ್ಮನೆಂದು ಪ್ರಖ್ಯಾತನಾದ್ದರಿಂದ ಆತನೇ ದಾಸಪಂಥದವರ ಉಪಾಸ್ಯ ದೈವ.

ದಾಸಸಾಹಿತ್ಯ ಮತ್ತು ವಚನವಾಙ್ಮಯ – ಎರಡರ ಗುರಿಯೂ ಮತ ತತ್ತ್ವಪ್ರತಿಪಾದನೆ ಮತ್ತು ಪ್ರಚಾರ. ಇತರ ಮತಗಳಿಗಿಂತ ತಮ್ಮ ಮತ ಶ್ರೇಷ್ಠವೆಂಬ ಸಮರ್ಥನೆ, ತಮ್ಮದಲ್ಲದ ದೈವದ ಅವಹೇಳನ, ನೀತಿಬೋಧೆ, ಸಮಾಜದ ದುರಾಚಾರ ಮತ್ತು ಲೋಪದೋಷಗಳ ಖಂಡನೆ– ಇವು ಎರಡಕ್ಕೂ ಸಮಾನ. ಸಂಸ್ಕೃತದಲ್ಲಿದ್ದ ಆಧ್ಯಾತ್ಮಿಕ ತತ್ತ್ವಗಳನ್ನು ಜನರ ಮಾತಿನಲ್ಲಿ ಅಳವಡಿಸಿಕೊಂಡು ಮನೆಮನೆಗೂ ಕೊಂಡೊಯ್ದು ಹಂಚುವ ಸತ್ಕಾರ್ಯದಲ್ಲಿ ಈ ಎರಡೂ ಬಗೆಯ

ವಾಙ್ಮಯಗಳಿಗೆ ಸಮಾನ ಪ್ರಶಸ್ತಿ ಸಲ್ಲಬೇಕಾಗಿದೆ. ನುಡಿದಂತೆ ನಡೆದು ದೊಡ್ಡ ಬಾಳನ್ನು ನಡೆಸಿದ ಈ ಸಂತಜೀವಿಗಳು ಜನರಲ್ಲಿ ದೈವಭಕ್ತಿಯನ್ನು ಪ್ರಚೋದಿಸಿ, ಸಮಾಜದ ನೈತಿಕಮಟ್ಟವನ್ನು ಮೇಲಕ್ಕೆತ್ತುವುದರಲ್ಲಿ ಬಹುಮಟ್ಟಿಗೆ ಕೃತಕೃತ್ಯರಾದರು. ವಚನಕಾರನಾದರೆ ಏಕನಾದವನ್ನು ಹರಿದಾಸನಾದರೆ ತಂಬೂರಿಯನ್ನು ಕೈಲಿ ಹಿಡಿದು ಮನೆಯಿಂದ ಮನೆಗೆ ಹಾಡುತ್ತಾ ಹೋಗುವ ದೃಶ್ಯಕಲ್ಪನೆ ರೋಮಾಂಚಕರವಾಗಿದೆ. ವಚನವಾಙ್ಮಯದಂತೆ ಹರಿದಾಸ ಕೀರ್ತನೆಗಳೂ ಅಪಾರವಾಗಿದೆಯೆಂಬ ನಂಬಿಕೆಯಿದೆ. ಪುರಂದರದಾಸನು ನಾಲ್ಕು ಲಕ್ಷ ಎಪ್ಪತ್ತೈದು ಸಾವಿರ ಕೃತಿಗಳನ್ನು ರಚಿಸಿದನಂತೆ !

'ದಾಸಕೂಟ' ಎಂದರೆ ಸೇವಕರ ಗುಂಪು – ಶ್ರೀಹರಿಯ ಸೇವಕರ ಪಂಥಕ್ಕೆ ಸೇರಿದವನು – ಎಂದು ವಾಚ್ಯಾರ್ಥ. ದ್ವೈತಮತಸ್ಥಾಪಕನಾದ ಮಧ್ವಾಚಾರ್ಯನೇ ದಾಸಪಂಥಕ್ಕೂ ಮೂಲಪುರುಷನೆಂದು ಹೇಳುವುದುಂಟು. ಆತನು ಪಶ್ಚಿಮಸಮುದ್ರತೀರದಿಂದ ಉಡುಪಿಯವರೆಗೆ ಗೋಪಿಚಂದನದ ಗಡ್ಡೆಗಳನ್ನು ಹೊತ್ತು ತರುತ್ತಾ 'ಆನಂದ ಮುಕುಂದ ಅರವಿಂದನಯನ ಆನಂದತೀರ್ಥಪರಾನಂದವರ' ಇತ್ಯಾದಿಯಾದ ದ್ವಾದಶಸ್ತೋತ್ರಗಳನ್ನು ಹಾಡಿದುದಾಗಿಯೂ, ಅದರಿಂದಲೇ ದಾಸವಾಙ್ಮಯದ ಬೀಜಾವಾಪನೆಯಾದುದಾಗಿಯೂ ಹೇಳುತ್ತಾರೆ. ಆದರೆ ಕನ್ನಡದಲ್ಲಿ ಅವುಗಳನ್ನು ಮೊಟ್ಟಮೊದಲು ಕಟ್ಟಿಹಾಡಿದ ಕೀರ್ತಿ ನರಹರಿತೀರ್ಥನಿಗೆ ಸಲ್ಲಬೇಕು.

೧. ನರಹರಿತೀರ್ಥ (ಕ್ರಿ.ಶ. ೧೨೮೦-೧೩೩೩)

ಈತನು ಒರಿಸ್ಸಾದೇಶದ ಗಜಪತಿರಾಜನಲ್ಲಿ ಸ್ವಾಮಿಶಾಸ್ತ್ರಿಯೆಂಬ ಹೆಸರಿನಿಂದ ಅಧಿಕಾರಿಯಾಗಿದ್ದನು. ಮಧ್ವಾಚಾರ್ಯನು ಬದರಿಯ ಯಾತ್ರೆಯನ್ನು ಮುಗುಸಿಕೊಂಡು ಒರಿಸ್ಸಾ ದೇಶಕ್ಕೆ ಬರಲು ಆತನ ಪಾಂಡಿತ್ಯಕ್ಕೂ ಉಪದೇಶಕ್ಕೂ ಮನಸೋತ ಸ್ವಾಮಿಶಾಸ್ತ್ರಿ ಆತನ ಶಿಷ್ಯನಾಗಿ, ನರಹರಿತೀರ್ಥನೆಂಬ ಹೆಸರಿನಿಂದ ಸನ್ಯಾಸ ಸ್ವೀಕರಿಸಿದನು. ಆದರೂ ಗುರುವಿನ ಅಪ್ಪಣೆಯಂತೆ ಆತ ಅಲ್ಲಿಯೇ ನಿಂತನು. ಅಲ್ಲಿನ ರಾಜನು ಸತ್ತುಹೋಗಲು, ಗರ್ಭಿಣಿಯಾಗಿದ್ದ ರಾಜಪತ್ನಿ ಮಗುವನ್ನು ಹೆತ್ತು. ಆ ಮಗನು ಪ್ರಾಪ್ತ ವಯಸ್ಕನಾಗುವವರೆಗೆ ರಾಜ್ಯಭಾರ ಮಾಡುತ್ತಿದ್ದು ಆಮೇಲೆ ಗುರುವಿನ ಅಪ್ಪಣೆಯಂತೆ ರಾಜನ ಬೊಕ್ಕಸದಲ್ಲಿದ್ದ ರಾಮಸೀತೆಯರ ಮೂಲವಿಗ್ರಹಗಳನ್ನು ತಂದು ಮಧ್ವಾಚಾರ್ಯರಿಗೆ ಅರ್ಪಿಸಿದನಂತೆ ಸಂಸ್ಕೃತದಲ್ಲಿ ಉದ್ದಾಮ ಪಂಡಿತನಾಗಿದ್ದ ನರಹರಿತೀರ್ಥನು ಕನ್ನಡದಲ್ಲಿ ಹರಿಕೀರ್ತನೆಗಳನ್ನು ರಚಿಸಿ, ತೀರ್ಥಯಾತ್ರೆ ಮಾಡುತ್ತಾ ದ್ವೈತವನ್ನು ಪ್ರಚಾರಮಾಡಿದನಂತೆ ! ಆತನು ಅನೇಕ ಕೃತಿಗಳನ್ನು ರಚಿಸಿರುವನೆಂಬ ಹೇಳಿಕೆಯಿದ್ದರೂ ಎರಡು ಮಾತ್ರ ಈವರೆಗೆ ಉಪಲಬ್ಧವಾಗಿವೆ. ಆತನಿಂದ ರಚಿತವಾಗಿ (ಈಗ ಉಪಲಬ್ಧವಾಗಿರುವುಗಳಲ್ಲಿ) ಮೊಟ್ಟಮೊದಲ ಹರಿದಾಸ ಕೀರ್ತನೆಯೆಂದು ಪ್ರಖ್ಯಾತವಾಗಿರುವುದು 'ಎಂತು ಮರುಳಾದೆ।ನಾ। ನೆಂತು ಮರುಳಾದೆ' ಎಂದು ತನ್ನ ತಪ್ಪನ್ನು ಹರಿಯಲ್ಲಿ ತೋಡಿಕೊಳ್ಳುವ ಹಾಡು. ಈ ಹಾಡಿನಲ್ಲಿ ಸಾಕಷ್ಟು ಪಾಠಾಂತರಗಳು ಕಂಡುಬರುವುದರಿಂದ ಈತನ ಅಂಕಿತ 'ನರಹರಿ'ಯೋ 'ರಘುಪತಿ'ಯೋ 'ಶ್ರೀ ರಘುಪತಿ'ಯೋ ಎಂಬ ಸಂದೇಹ ಹುಟ್ಟಿಕೊಂಡಿದೆ. ಈ ಕೀರ್ತನೆಯ ಕಡೆಯ ನುಡಿಯಲ್ಲಿ 'ಭಜಿಸು ಬ್ರಹ್ಮಾದಿವಂದಿತ ಹರಿಯ । ತ್ಯಜಿಸು ಕಾಮಾದಿ ದುರ್ವಿಷಯ । ಸುಜನವಂದಿತನಾದ ನರಹರಿಯ । ಭಜಿಸು ಶ್ರೀಶ್ರೀಶ್ರೀ ರಘುಪತಿಯ' ಎಂಬಲ್ಲಿ 'ಶ್ರೀರಘುಪತಿ' ಆತನ ಅಂಕಿತವಿರಬೇಕೆನ್ನಿಸುತ್ತದೆ. 'ಹರಿಯೇ ಇದು ಸರಿಯೇ। ಚರಣಸೇವಕನಲ್ಲಿ ಕರುಣ ಬಾರದ್ಯಾಕೆ' ಎಂಬ ಎರಡನೆಯ ಕೀರ್ತನೆಯಲ್ಲಿ 'ದೊರೆ ನಿನ್ನ ಮನಸ್ಸಿಗೆ ಸರಿ ಬಂದಂತೆ ಮಾಡು । ಮೊರೆ ಹೊಕ್ಕೆನುನಾ ನರಹರಿಪೂರ್ಣನೆ' ಎಂದಿರುವುದನ್ನು ನೋಡಿದಾಗ 'ನರಹರಿಪೂರ್ಣ' ಎಂಬುದು ಆತನ

ಅಂಕಿತವಿರಬಹುದೆನ್ನಿಸುತ್ತದೆ. ಆತನ ಇತರ ಕೀರ್ತನೆಗಳು ದೊರೆಯದಿರುವುದರಿಂದ ಆತನ ಅಂಕಿತ ಇಂತಹುದೇ ಎಂದು ಹೇಳುವುದಕ್ಕಾಗಲೀ, ಆತನ ಕೃತಿಶಕ್ತಿಯನ್ನು ನಿರ್ಧರಿಸುವುದಕ್ಕಾಗಲಿ ಸಾಧ್ಯವಿಲ್ಲ.

೨. ಶ್ರೀಪಾದರಾಜ (೧೪೫೦-೧೪೮೬)

ನರಹರಿತೀರ್ಥರನಂತರ ಸುಮಾರು ಒಂದು ಶತಮಾನಕ್ಕೂ ಹೆಚ್ಚು ಕಾಲ ದಾಸ ಪಂಥದ ಕಾರ್ಯರಂಗ ಸ್ಥಗಿತವಾಗಿದ್ದಂತೆ ಕಂಡುಬರುತ್ತದೆ. ನರಹರಿತೀರ್ಥನ ನಂತರ ವೇದಾಂತ ಪೀಠವನ್ನೇರಿದವರೆಲ್ಲ ಗ್ರಂಥ ರಚನೆಯಲ್ಲಿಯೂ ವಾದಿನಿಗ್ರಹ ಕಾರ್ಯದಲ್ಲಿಯೂ ತೊಡಗಬೇಕಾಗಿ ಬಂದುದರಿಂದ ಅವರು ದಾಸ ಸಾಹಿತ್ಯ ದೃಷ್ಟಿಯ ಕಡೆ ಗಮನಹರಿಸಲಿಲ್ಲ. ಅದನು ಮುಂದುವರಿಸಿದ ಕೀರ್ತಿ ಶ್ರೀಪಾದರಾಜನದು. ಈತನು ಬೆಂಗಳೂರು ಜಿಲ್ಲೆಯ ಅಬ್ಬೂರಿನಲ್ಲಿ ದಟ್ಟ ದರಿದ್ರ ಬ್ರಾಹ್ಮಣ ಕುಟುಂಬವೊಂದರಲ್ಲಿ ಲಕ್ಷ್ಮೀನಾರಾಯಣನೆಂಬ ಹೆಸರಿನಿಂದ ಜನಿಸಿದವನು. ಚಿಕ್ಕಂದಿನಲ್ಲಿ ಈತ ದನ ಕಾಯುತ್ತಿದ್ದನಂತೆ ! ಪಾದರಸದಂತೆ ಚುರುಕು ಬುದ್ಧಿಯಿಂದಿದ್ದ ಈ ಹುಡುಗ ಶ್ರೀರಂಗದ ಸ್ವರ್ಣವರ್ಣತೀರ್ಥರ ಕಣ್ಣಿಗೆ ಬಿದ್ದ. ಅವರು ಈತನನ್ನು ಶ್ರೀರಂಗಕ್ಕೆ ಕರೆದೊಯ್ದು ತಮ್ಮ ಮಠದಲ್ಲಿ ವಿದ್ಯಾಭ್ಯಾಸ ಮಾಡಿಸಿದರು. ಅದ್ಭುತಪಂಡಿತನಾಗಿಹೋದ ಆ ಬಾಲಕ ಸ್ವರ್ಣವರ್ಣರ ತರುವಾಯ ಅವರ ಗದ್ದುಗೆಗೇರಿದ. ಈ ಬಾಲಯೋಗಿಯ ದಿವ್ಯಜ್ಞಾನವನ್ನು ಕಂಡು ಉತ್ತರಾದಿಮಠದ ಶ್ರೀರಘುನಾಥ ತೀರ್ಥರು 'ನಾವು ಶ್ರೀಪಾದಂಗಳಾದರೆ, ನೀನು 'ಶ್ರೀಪಾದರಾಜ' ಎಂದರಂತೆ ! ಅಂದಿನಿಂದ ಆತನ ಹೆಸರು ಶ್ರೀಪಾದರಾಜನೆಂದೇ ಆಯಿತು. ಈತನು ಮುಳುಬಾಗಿಲಿನಲ್ಲಿದ್ದ ಪದ್ಮನಾಭತೀರ್ಥರ ಮಠಕ್ಕೆ ಅಧಿಪತಿಯಾಗಿ ಆ ಮಠದಲ್ಲಿ ಒಂದು ವಿದ್ಯಾಕೇಂದ್ರವನ್ನು ಸ್ಥಾಪಿಸಿದನು. ವಿಜಯನಗರದ ಅರಸನಾದ ಸಾಳುವ ನರಸಿಂಹನು ತಿರುಪತಿ ಅರ್ಚಕರ ಅಕೃತ್ಯಗಳನ್ನು ಕಂಡು ಸಹಿಸಲಾರದೆ ಅವರನ್ನು ಸಮೂಲವಾಗಿ ನಾಶಪಡಿಸಿದನಂತೆ ! ಆಮೇಲೆ ತನ್ನ ಪಾಪಪ್ರಕ್ಷಾಲನೆಗಾಗಿ ಶ್ರೀಪಾದರಾಜನನ್ನು ಆಶ್ರಯಿಸಿದ. ಆತ ರಾಜನಿಂದ ಶಾಂತಿಕರ್ಮಗಳನ್ನು ಮಾಡಿಸಿದ. ಇದರಿಂದ ಸುಪ್ರೀತನಾದ ರಾಜ ಶ್ರೀಪಾದರಾಜನನ್ನು ಸಿಂಹಾಸನದ ಮೇಲೆ ಕೂರಿಸಿ ಕನಕಾಭಿಷೇಕ ಮಾಡಿಸಿದನಂತೆ !

ಶ್ರೀಪಾದರಾಜನು ಅನೇಕ ತೀರ್ಥಯಾತ್ರೆಗಳನ್ನು ಮಾಡಿ, ಹಲವಾರು ಪವಾಡಗಳನ್ನು ಮೆರೆದು, ಅವತಾರಪುರುಷನೆನಿಸಿದನು. ಈತನು 'ವಾಗ್ವಜ್ರ'ವೇ ಮೊದಲಾದ ಸಂಸ್ಕೃತ ಪ್ರೌಢಗ್ರಂಥಗಳನ್ನು 'ರಂಗವಿಠಲ' ಎಂಬ ಅಂಕಿತದಿಂದ ಅನೇಕ ದೇವರನಾಮಗಳನ್ನು ರಚಿಸಿದ್ದಾನೆ. ದಾಸಕೂಟದ ಇತಿಹಾಸದಲ್ಲಿ ಆತ ಚಿರಸ್ಮರಣೀಯ. ಕೀರ್ತನೆಗಳನ್ನು ಬರೆದುದು ಮಾತ್ರವೇ ಅಲ್ಲ, ದೇವರ ಇದಿರಿನಲ್ಲಿ ಅವುಗಳನ್ನು ಹಾಡಿಸುವುದರ ಮೂಲಕ ಅವುಗಳಿಗೆ ಒಂದು ಪ್ರಾಶಸ್ತ್ಯವನ್ನು ಕಲ್ಪಿಸಿಕೊಟ್ಟನು. ತಾನು ರಚಿಸಿದ ಭ್ರಮರಗೀತ, ವೇಣುಗೀತ, ಗೋಪಿಗೀತಗಳನ್ನು ವೇದಪಾರಾಯಣ ಮಾಡುವಂತೆ ದಾಸರ ಕೈಲಿ ನಿತ್ಯವೂ ಹಾಡಿಸುತ್ತಿದ್ದನಂತೆ! ಹೀಗೆ ಕನ್ನಡ ಗೀತೆಗಳಿಗೆ ಆಧ್ಯಾತ್ಮಿಕ ತತ್ತ್ವಗಳ ಸ್ಥಾನಮಾನವನ್ನು ಕಲ್ಪಿಸಿದುದರ ಜೊತೆಗೆ ಅವುಗಳ ಮೂಲಕ ದ್ವೈತತತ್ವವನ್ನು ಜನಸಾಮಾನ್ಯರಲ್ಲಿ ಪ್ರಚಾಮಾಡಬಲ್ಲ ಹರಿದಾಸತಂಡವೊಂದನ್ನು ಈತ ತಯಾರುಮಾಡಿದ. ಈತನ ಕಾಲದಲ್ಲಿ ಕೀರ್ತನೆಯ ಜೊತೆಯಲ್ಲಿ ನರ್ತನ ಮಾಡುವ ಪರಿಪಾಠವೂ ಬೆಳೆದುಬಂತು. ಈ ನರ್ತನಸೇವೆಗಾಗಿಯೆ ವಿಶಿಷ್ಟವಾದ ಕೃತಿಗಳನ್ನು ಈತ ರಚಿಸಿದ್ದಾನೆ.

ಶ್ರೀಪಾದರಾಜನ ಕವಿತಾಶಕ್ತಿ ಮಹೋನ್ನತವಾದುದಲ್ಲದಿದ್ದರೂ ಭಕ್ತಿ ವೈರಾಗ್ಯಗಳ ಪ್ರತಿಪಾದದಲ್ಲಿ ಶ್ರೀಕೃಷ್ಣನ ಬಾಲಲೀಲೆಯ ನಿರೂಪಣೆಯಲ್ಲಿ ಆತನ ಆಧ್ಯಾತ್ಮನುರಾಗ

ಮಹಿಮಾನ್ವಿತವಾಗಿ ಕಾಣಬರುತ್ತದೆ. 'ಭಕ್ತಿಬೇಕು, ವಿರಕ್ತಿಬೇಕು, ಶಕ್ತಿಬೇಕು, ಮುಂದೆ ಮುಕ್ತಿ ಬಯಸುವಗೆ' ಎಂಬುದು ಈತನ ಆಧ್ಯಾತ್ಮಿಕ ನಿಲುವು. 'ನಾ ನಿನಗೇನು ಬೇಡುವುದಿಲ್ಲ, ಎನ್ನ। ಹೃದಯ ಮಂಟಪದೊಳು ನಿಂದಿರೊ ಕೃಷ್ಣ' ಎಂದು ಆತ ಹರಿಯನ್ನು ಬೇಡುತ್ತಾನೆ. 'ಶಿರ ನಿನ್ನ ಚರಣದಲ್ಲೆರಗಲಿ, ಎನ್ನ ಚಕ್ಷುಗಳು ನಿನ್ನ ನೋಡಲಿ। ಕರ್ಣ ಗೀತಂಗಳ ಕೇಳಲಿ, ಎನ್ನ। ನಾಸಿಕ ನಿರ್ಮಾಲ್ಯಾ ಘ್ರಾಣಿಸಲಿ, ಕೃಷ್ಣ' ಎಂಬುದು ಆತನ ಹಾರೈಕೆ. 'ಹೆತ್ತ ಮಕ್ಕಳು ಹುಚ್ಚರಾದರೆ ತಾಯ್ತಂದೆ। ಎತ್ತದ ನೆಲಕೆ ಬಿಸುಡುವರೆ ಗೋವಿಂದ?' ಎಂದು ಬಹು ಮಾರ್ಮಿಕವಾಗಿ ದೇವರನ್ನು ಪ್ರಶ್ನಿಸುತ್ತಾನೆ. ಮಾನವ ಬುದ್ಧಿ ತಪ್ಪುಹಾದಿ ಹಿಡಿದರೆ ದೇವರು ಅವರನ್ನು ದೂರ ಮಾಡಬೇಕೇನು? ಎಂಬುದು ಆತನ ಸವಾಲು. ಉದ್ಧಾರ ಮಾಡಲು ಸಾಧ್ಯವಿಲ್ಲದಿದ್ದರೆ ತನ್ನನ್ನೇಕೆ ಹುಟ್ಟಿಸಬೇಕಾಗಿತ್ತು?' ಯಾಕೆ ಪುಟ್ಟಿಸಿದೆ ನೀ ಸಾಕಲಾರದೆ ಜಗ। ದೇಕ ಕಾರಣ ಪುರುಷನೆ ಕೃಷ್ಣ?' ಎಂಬ ಆತನ ಪ್ರಶ್ನೆ ಹೃದಯಸ್ಪರ್ಶಿಯಾಗಿದೆ. ದೈವಸಾಕ್ಷಾತ್ಕಾರವಾಗದಾಗ ಆತನು ಅಸಹ್ಯವೇದನೆಯಿಂದ 'ಉರಿಯೊಳಗೆ ಬಿದ್ದು ಶರೀರವ ಕಳೆಯಲೊ । ಪರುವತನೇರುತುರುಳಲೊ ಕೃಷ್ಣ' ಎಂದು ಹಳಹಳಿಸುತ್ತಾನೆ. ಪರಿಪರಿಯಾಗಿ ಭಗವಂತನನ್ನು ಅಂಗಲಾಚುತ್ತಾ 'ಕರುಣವಾರಿಧಿಯೆನ್ನ ಕರವಿಡಿದು ಸಲಹದಿರೆ, ಧರೆಯೊಳುದ್ಧರಿಪರಾರೊ?' ಎಂದು ಪ್ರಶ್ನಿಸುತ್ತಾನೆ.

ಈತನನ್ನು ಈತನ ಶಿಷ್ಯನಾದ ವ್ಯಾಸರಾಯನು 'ಆದಿಶೇಷನ ಪೋಲ್ವ ಮುನಿ' ಎಂದೂ ಪುರಂದರದಾಸನ ಮಗ ಮಧ್ವಹರಿದಾಸ 'ವರುಧ್ರುವನವತಾರ ಶ್ರೀಪಾದರಾಯರು' ಎಂದೂ ಸಂಭಾವಿಸಿರುವುದು ಸಾರ್ಥಕವಾಗಿದೆ. ಈತನು ಸನ್ಯಾಸಿಯಾದರೂ ರಾಜನಂತೆ ವೈಭವದಿಂದ ಬಾಳಿದನಂತೆ! ಹಾಸಿಗೆಯಿಂದ ಏಳುವಾಗ ಈತನ ಹೆಸರು ಹೇಳಿದರೆ ಆ ದಿನ ಮೃಷ್ಟಾನ್ನ ಭೋಜನ ದೊರೆಯುತ್ತಿತ್ತಂತೆ!

೩. ವ್ಯಾಸರಾಯ

ಶ್ರೀಪಾದರಾಜನ ಶಿಷ್ಯನಾದ ವ್ಯಾಸರಾಯ ಮೈಸೂರು ಜಿಲ್ಲೆಯ ಬನ್ನೂರಿನಲ್ಲಿ ಸುಮತಿ–ಅಕ್ಕವ್ವ ಎಂಬ ಸಾತ್ವಿಕ ದಂಪತಿಗಳ ಸುಪುತ್ರನಾಗಿ ಹುಟ್ಟಿದವನು; ಮಧ್ವಾಚಾರ್ಯರ ಮೂಲಪೀಠಸ್ಥರಾದ ಬ್ರಹ್ಮಣ್ಯತೀರ್ಥರ ಕೃಪೆಯಿಂದ ಜನಿಸಿದನು; ಈತನಿಗೆ 'ಯತಿರಾಜ'ನೆಂದೆ ನಾಮಕರಣವಾಯಿತು. ಈ ಮಗು ಬ್ರಹ್ಮಣ್ಯತೀರ್ಥರು ಪೂಜಿಸುತ್ತಿದ್ದ ಶ್ರೀರಾಮಚಂದ್ರನ ಅಭಿಷೇಕದ ಹಾಲಿನಿಂದಲೆ ಬೆಳೆಯಿತಂತೆ! ಐದು ವರ್ಷಕ್ಕೆ ಉಪನಯನ, ಏಳಕ್ಕೆ ಸನ್ಯಾಸ; ದೀಕ್ಷಾನಾಮ 'ವ್ಯಾಸರಾಯ'. ಬಾಲಕ ವ್ಯಾಸರಾಯ ಶ್ರೀಪಾದರಾಯರಲ್ಲಿ ವಿದ್ಯಾಭ್ಯಾಸ ಮಾಡಿ 'ಶಿಷ್ಯಾದಿಚ್ಛೇತ್ ಪರಾಜಯಂ' ಎಂಬ ಸೂಕ್ತಿಯನ್ನು ಸಾರ್ಥಕಪಡಿಸಿದ. ಬ್ರಹ್ಮಣ್ಯತೀರ್ಥರ ನಂತರ ತೀರ್ಥಯಾತ್ರೆ ಮಾಡಿ, ಹೋದಲ್ಲೆಲ್ಲ ತನ್ನ ಮತಪ್ರಚಾರ ಮಾಡಿ, ಕಡೆಗೆ ವ್ಯಾಸರಾಯರಮಠದ ಸ್ವಾಮಿಯಾದ. ಈತನು ವಿಜಯನಗರದರಸು ಸಾಳುವ ನರಸಿಂಹನ ಗುರುವಾಗಿ, ಮುಂದೆ ಅರವತ್ತು ವರ್ಷಗಳಷ್ಟು ದೀರ್ಘಕಾಲ ವಿಜಯನಗರ ಸಾಮ್ರಾಜ್ಯದ ರಾಜಗುರುವಾಗಿ, ಸಂರಕ್ಷಕನಾಗಿ, ಲೌಕಿಕ ಪಾರಲೌಕಿಕಗಳಲ್ಲಿ ಅವರಿಗೆ ಮಾರ್ಗದರ್ಶನವಿತ್ತನು. ಕೃಷ್ಣದೇವರಾಯನಿಗೆ ಪ್ರಾಪ್ತವಾಗಿದ್ದ 'ಕುಹು'ದುರ್ಯೋಗವನ್ನು ತಪ್ಪಿಸುವುದಕ್ಕಾಗಿ ಕೆಲಕಾಲ ಸಿಂಹಾಸನವನ್ನೇರಿ ರಾಜ್ಯಭಾರವನ್ನು ಮಾಡಿದನಂತೆ! ಸಾಳುವ ನರಸಿಂಹನು ತಿರುಪತಿಯ ಅರ್ಚಕರ ವಂಶವನ್ನೇ ನಿರ್ಮೂಲ ಮಾಡಲು ತಾನೆ ಅಲ್ಲಿಯ ಅರ್ಚನೆಯನ್ನು ವಹಿಸಿಕೊಂಡು, ಹನ್ನೆರಡು ವರ್ಷಗಳವರೆಗೆ ನಡೆಸಿದನಂತೆ! ತೊಂಬತ್ತು ವರ್ಷಗಳಷ್ಟು ದೀರ್ಘಕಾಲ ಬಾಳಿ ಅನೇಕ ಧರ್ಮಕಾರ್ಯಗಳನ್ನೂ ನಡೆಸಿದನಂತೆ!

ವ್ಯಾಸರಾಯನು ವ್ಯಾಸತ್ರಯವೆಂದು ಪ್ರಸಿದ್ಧವಾಗಿರುವ ನ್ಯಾಯಾಮೃತ, ತರ್ಕತಾಂಡವ, ತಾತ್ಪರ್ಯಚಂದ್ರಿಕಾ ಎಂಬ ಮೂರು ಸಂಸ್ಕೃತಗ್ರಂಥಗಳ ಜೊತೆಗೆ ಇನ್ನೂ ಅನೇಕ ಸಂಸ್ಕೃತ ಗ್ರಂಥಗಳನ್ನು ನೂರಾರು ಕನ್ನಡ ಕೀರ್ತನೆಗಳನ್ನೂ ರಚಿಸಿದ್ದಾನೆ. ಈತನ ಕೀರ್ತನೆಗಳ ಅಂಕಿತ 'ಕೃಷ್ಣ', 'ಶ್ರೀ ಕೃಷ್ಣ' ಅಥವಾ 'ಸಿರಿಕೃಷ್ಣ'.

ವ್ಯಾಸರಾಯರ ಕೀರ್ತನೆಗಳಲ್ಲಿ ಹಲವು ಲಲಿತಮನೋಹರವಾಗಿ, ಭಾವಪೂರ್ಣವಾಗಿ ರಸಭರಿತವಾಗಿವೆ. ವಾತ್ಸಲ್ಯಭಾವದ ಈ ಕೀರ್ತನೆ ಅತ್ಯಂತ ಜನಪ್ರಿಯವಾಗಿದೆ:

ಕೊಳಲನೂದುವ ಚದುರನಾರೆ ಪೇಳಮ್ಮಯ್ಯ !
ತಳಿರಂದದಿ ತಾ ಪೊಳೆವ ಕರದಿ ಪಿಡಿದು
ನಾದದಿ ತುಂಬಿತು ಗೋವರ್ಧನಗಿರಿ । ಯಾದವಕುಲಜನ ಒರೆಗಿತು ಖಗಕುಲ ।
ಸಾಧಿಸಿ ನೋಡಲು ಕೃಷ್ಣನ ಈಗಲೆ । ಸಾಧ್ಯವೇನೆ ಬೃಂದಾವನದೊಳು ॥೧॥
ಮೇವ ಮರೆತವುಗೋವುಗಳೆಲ್ಲ । ಸಾವಧಾನದಿ ಹರಿದಳು ಯಮುನಾ
ಆವ ಕಾವುತಲಿ ಗೋವಳರೆಲ್ಲರ । ಹಾವಭಾವದಲಿ ಬೃಂದಾವನದಲಿ ॥೨॥
ಸುರರು ಸುರಿದರಾಕಾಶದಿ ಸುಮಗಳ । ಪರಿದು ಪೋಗಿ ನೋಡೆ ಬೃಂದಾವನದೊಳು ।
ಸಾರಿ ಸಾರಿ ಶ್ರೀಕೃಷ್ಣನು ಈಗಲೆ, ತುರುಗಳ ಕಾಯುವ ಕದಂಬ ವನದೊಳು ॥೩॥

ಸಂಸಾರದ ಅನಿಶ್ಚತೆ, ಕಷ್ಟಕಾರ್ಪಣ್ಯಗಳಿಂದ ಉದ್ಧಾರವಾಗಲು ಹರಿಕರುಣವೊಂದೆ ಹೆದ್ದಾರಿ, ಎರಡಿಲ್ಲದ ಭಕ್ತಿಯಿಂದ ಆತನನ್ನು ಶರಣುಹೋಗಬೇಕು. ಹರಿಯು ಭಕ್ತಾಧೀನನಾದುದರಿಂದ ಭಕ್ತನ ಸಂಗ ಅತ್ಯಗತ್ಯ – ಎಂಬುದು ಆತನ ಬೋಧನೆ. ಈತನ ಕೀರ್ತನೆಗಳಲ್ಲಿ ಮೇಲಿಂದಮೇಲೆ ಸುಂದರ ರೂಪಕಗಳು ಮಿಂಚುತ್ತದೆ. 'ನಮೋ ನಮೋ ಸಿರಿಕೃಷ್ಣ' ಎಂಬುದು 'ಮುಕುತಿಕನ್ನಿಕೆಯ ವಾದ್ಯಘೋಷ'ವಂತೆ ! 'ದೇಹವೆಂಬ ಏಳು ಸುತ್ತಿನ ಕೋಟೆ ಯಮನಾಳ ಮುತ್ತಿಕೊಂಡು । ಪಾಳು ಮಾಡುವೆ'ವೆಂದು ಹೇಳುತ್ತಿದ್ದಾರಂತೆ ! ಕೊಳಲು ನುಡಿಸೆಂದು ಬೇಡುತ್ತಾ 'ಕೊಳಲ ನುಡಿಸಿ ಪ್ರೇಮ ಸುಧೆಯ । ಮಳೆಯ ಸುರಿಸಿ ಭವದ ತಾಪ । ಕಳೆದು ತಿಳಿವಿನೆಳೆಬಳ್ಳಿಯ ಬೆಳಗಿನ ಬೆಳಗನ್ನೆ ಮನದೊಳು' ಎಂಬ ರೂಪಕಪರಂಪರೆಯನ್ನೆ ಬೆಳೆಸುತ್ತಾನೆ. ಆತನ ನುಡಿಗಳಲ್ಲಿ ಕೇಳುವವರ ಮನಸ್ಸನ್ನು ಭೇದಿಸಬಲ್ಲ ಮಾರ್ಮಿಕತೆಯಿದೆ.

ವ್ಯಾಸರಾಯನಿಂದ ವ್ಯಾಸಪಂಥ ದಾಸಪಂಥಗಳೆರಡು ಶ್ರೀಮಂತವಾದವು. ರಾಜಗುರುವಾಗಿ ಆತನು ಧರ್ಮಪ್ರಚಾರದಲ್ಲಿಯೂ ದಿಗ್ವಿಜಯಿಯಾದ. ಆತನ ಶಿಷ್ಯರಾದ ವಾದಿರಾಜ, ವಿಜಯೇಂದ್ರ, ಪುರಂದರ, ಕನಕ, ವೈಕುಂಠ ಮೊದಲಾದ ಒಬ್ಬೊಬ್ಬರೂ ದಾಸವಾಙ್ಮಯಜಗತ್ತಿನಲ್ಲಿ ಚಿರಸ್ಮರಣೀಯರು. ಅವರು ತಮ್ಮ ಕೀರ್ತನೆಗಳಿಂದ ಜನಸಮುದ್ರದಲ್ಲಿ ಭಕ್ತಿಯ ತೆರೆಗಳನ್ನೆಬ್ಬಿಸಿ, ಅಧ್ಯಾತ್ಮದ ರಸಪ್ರವಾಹವನ್ನು ನಾಡಿನ ಮೂಲೆಮೂಲೆಯಲ್ಲಿಯೂ ಹರಿಸಿದರು. ಶ್ರೀಪಾದರಾಜನು ನನ್ನ ಶಿಷ್ಯರಿಂದ ಈತನನ್ನು 'ಸಾಸಿರ ಜಿಹ್ವೆಗಳುಳ್ಳ ಶೇಷನೇ ಕೊಂಡಾಡಬೇಕು' ಎಂದು ಹೇಳಿದ್ದರೆ ಈ ಶಿಷ್ಯರ ಶಿಷ್ಯರಾದ ಪುರಂದರದಾಸರು 'ಶೇಷಾವೇಶ ಪ್ರಹ್ಲಾದನವತಾರ' ಎಂದು ಈತನನ್ನು ಸ್ತುತಿಸಿದ್ದಾರೆ. ಹದಿನೈದನೆಯ ಶತಮಾನದ ಮಧ್ಯದಿಂದ ಹದಿನಾರನೆಯ ಶತಮಾನದ ಮಧ್ಯದವರೆಗೆ ಬಾಳಿ, ಲೌಕಿಕ ಪಾರಲೌಕಿಕಗಳೆರಡರಲ್ಲೂ ಕೀರ್ತಿಗಳಿಸಿದ ಸಾರ್ಥಕಜೀವಿ, ಈತ.

೪. ವಾದಿರಾಜ

ದಕ್ಷಿಣ ಕನ್ನಡ ಜಿಲ್ಲೆಯ ಹೂವಿನಕೆರೆ ಎಂಬ ಹಳ್ಳಿಯಲ್ಲಿ ಹುಟ್ಟಿದ ಭೂವರನು ಸ್ವಾದೀಮಠದ ವಾಗೀಶತೀರ್ಥರಲ್ಲಿ ವಿದ್ಯೆಯನ್ನೂ ಸನ್ಯಾಸದೀಕ್ಷೆಯನ್ನೂ ವಾದಿರಾಜನೆಂಬ ಆಶ್ರಮನಾಮವನ್ನೂ

ಪಡೆದನು. ಗುರುಗಳನಂತರ ಅವರ ಧರ್ಮಗದ್ದುಗೆಯನ್ನೇರಿ, ವ್ಯಾಸರಾಯರಲ್ಲಿ ಪ್ರೌಢವಿದ್ಯೆಯನ್ನು ಪಡೆದನು. ಈತನ ವಾಗ್ವೈಖರಿಯನ್ನು ಮೆಚ್ಚಿದ ಕೃಷ್ಣದೇವರಾಯನು ಈತನಿಗೆ 'ಪ್ರಸಂಗಾಭರಣತೀರ್ಥ' ಎಂಬ ಬಿರುದಿತ್ತನು. ಈತನು ಸಂಸ್ಕೃದಲ್ಲಿ ಮಾತ್ರವೇ ಅಲ್ಲದೆ ಕನ್ನಡದಲ್ಲಿಯೂ 'ವೈಕುಂಠವರ್ಣನೆ', 'ಸ್ವಪ್ನಗದ್ಯ', 'ಲಕ್ಷ್ಮಿಯ ಶೋಭಾನೆ', 'ಭಾರತತಾತ್ಪರ್ಯನಿರ್ಣಯ ಟೀಕೆ' ಇತ್ಯಾದಿ ಅನೇಕ ಗ್ರಂಥಗಳನ್ನು ಬರೆದಿದ್ದಾನೆ. ಈತನು ಅನೇಕ ಕೀರ್ತನೆ, ಸುಳಾದಿ, ಉಗಾಭೋಗಗಳನ್ನು ರಚಿಸಿದ್ದಾನೆ. ಕಾವ್ಯಗಳೆ ಆಗಲಿ, ಕೀರ್ತನೆಗಳೆ ಆಗಲಿ, ಅವುಗಳ ತಿರುಳು ಒಂದೆ-ದ್ವೈತಮತ ತತ್ತ್ವಗಳ ನಿರೂಪಣೆ.

ವಾದಿರಾಜನ 'ವೈಕುಂಠವರ್ಣನೆ'ಗೆ ತತ್ತ್ವಸಾರದ 'ಸೊಬಗಿನ ಸೋನೆ' ಎಂಬ ಮತ್ತೊಂದು ಹೆಸರೂ ಇದೆ. ಇದು ಸಾಂಗತ್ಯ ಹಾಡುಗಳನ್ನು ಒಳಗೊಂಡ ನಾಲ್ಕು ಸಂಧಿಗಳ ಪುಟ್ಟ ಕಾವ್ಯ. 'ಶ್ರುತಿಪುರಾಣಗಳ ಮೊತ್ತವನು ನೆರೆ ಮಥಿಸಿ, ಮೇಲಣ ಮುಕ್ತಿ, ಸೃಷ್ಟಿಸ್ಥಿತಿಲಯಗಳನರ್ಥಿಯಲಿ ಬಣ್ಣಿಸಿದ' ಕಾವ್ಯವಿದು. 'ಸ್ವಪ್ನಗದ್ಯ' ಎಂಬುದು ಗದ್ಯವಲ್ಲ, ೪೫ ಭಾಮಿನೀಷಟ್ಪದಿಗಳ ಪದ್ಯಕಾವ್ಯ. ವಾದಿರಾಜನ ಸ್ವಪ್ನದಲ್ಲಿ ಹರಿ ಹೇಳಿದ ಪದ್ಯಗಳಂತೆ, ಇವು ! ಲಕ್ಷ್ಮಿಯ ಶೋಬಾನೆ' ೧೧೨ ಪದ್ಯಗಳ ಪುಟ್ಟ ಗ್ರಂಥ. ಸ್ವಾದಿಯ ಅರಸರ ಅಳಿಯ ಸತ್ತು ಹೋಗಿರಲು ಈ ಶೋಬಾನೆ ಹಾಡುತ್ತಲೆ ಮತ್ತೆ ಬದುಕಿದನಂತೆ ! ಲಕ್ಷ್ಮೀದೇವಿ ಸಮುದ್ರಮಥನಕಾಲದಲ್ಲಿ ಹುಟ್ಟಿ ನಾರಾಯಣನನ್ನು ವರಿಸಿದ ಕಥೆ ಇಲ್ಲಿದೆ. ಮಧ್ವರಾಯನು ಸಂಸ್ಕೃತದಲ್ಲಿ ಬರೆದ 'ಮಹಾಭಾರತ ತಾತ್ಪರ್ಯ ನಿರ್ಣಯ'ಕ್ಕೆ ಕನ್ನಡಲ್ಲಿ ಟೀಕೆ ಬರೆದಿರುವುದು 'ಭಾರತ ತಾತ್ಪರ್ಯನಿರ್ಣಯ ಟೀಕೆ.'

ವಾದಿರಾಜನ ಕೀರ್ತನೆಗಳು 'ಹಯವದನ' ಎಂಬ ಅಂಕಿತದಲ್ಲಿವೆ. 'ಹಣವೆ ನಿನ್ನಯ ಗುಣವೆನಿತು ಬಣ್ಣಿಸಲಿ' ಎಂಬ ಈತನ ಕೀರ್ತನೆ ಬಹುಪ್ರಸಿದ್ಧವಾದುದು. ಇಲ್ಲಿನ ಮಾತುಗಳು ಸರಳವಾಗಿರುವಷ್ಟೆ ಮೊನಚಾಗಿ ಪ್ರಭಾವಯುತವಾಗಿವೆ. ಆತನ ಕವಿತೆ ತರ್ಕಬದ್ಧವಾದುದು. ವಾದಿರಾಜನು ಮೇಧಾವಿಯಾದ ತಾರ್ಕಿಕವಾದಿಗಳನ್ನು ಗೆಲ್ಲುವುದರಲ್ಲಿ ಎತ್ತಿದ ಕೈಯಾಗಿ ವಾದಿರಾಜನೆಂಬ ತನ್ನ ಹೆಸರನ್ನು ಸಾರ್ಥಕಪಡಿಸಿಕೊಂಡಿದ್ದಾನೆ. ಆತನದು ಬಹು ಮಟ್ಟಿಗೆ ಶಾಸ್ತ್ರಸಾಹಿತ್ಯ. ಸಾಹಿತ್ಯ ಜಗತ್ತಿಗಿಂತಲೂ ಧಾರ್ಮಿಕ ಜಗತ್ತಿನಲ್ಲಿ ಹೆಚ್ಚು ಉಜ್ವಲವಾಗಿ ಬೆಳಗಿದವರು. ಈಗ ನಡೆಯುವ ಪರ್ಯಾಯೋತ್ಸವ ಪದ್ಧತಿ ಪ್ರಾರಂಭವಾದದ್ದು ಈತನಿಂದಲೆ. ಧರ್ಮಸ್ಥಳದ ಮಂಜುನಾಥಸ್ವಾಮಿಯನ್ನು ಸ್ಥಾಪಿಸಿದವನು. ಈತನು ೧೨೦ ವರ್ಷಬಾಳಿ ಐದು ಪರ್ಯಾಯೋತ್ಸವಗಳನ್ನು ತಾನೆ ನಡೆಸಿದನು. ಈತ ವಾಯುದೇವನ ಅವತಾರ ಎಂಬ ನಂಬಿಕೆಯಿದೆ.

೫. ಪುರಂದರದಾಸ (ಕ್ರಿ.ಶ. ೧೪೮೪-೧೫೬೪)

ಪುರಂದರಗಡದ ವರದಪ್ಪನೆಂಬ ಕೋಟೇಶ್ವರನ ಮಗನಾಗಿ ಹುಟ್ಟಿದ ಶ್ರೀನಿವಾಸನು ಲೌಕಿಕ-ವೈದಿಕ ವಿದ್ಯೆಗಳಲ್ಲಿಯೂ ಸಂಗೀತದಲ್ಲಿಯೂ ಪರಿಶ್ರಮ ಪಡೆದು ಸರಸ್ವತಿಯೆಂಬ ಸತ್ಕುಲಪ್ರಸೂತೆಯೊಡನೆ ಸುಖಸಂಸಾರವನ್ನು ಅನುಭವಿಸುತ್ತಿದ್ದನು. ರತ್ನಪಡಿ ವ್ಯಾಪಾರದಲ್ಲಿ ತೊಡಗಿದ್ದ ಆತನು ಹಲವು ರಾಜಾಸ್ಥಾನಗಳಲ್ಲಿಯೂ ಪ್ರಸಿದ್ಧನಾಗಿದ್ದನು. ಒಮ್ಮೆ ಒಬ್ಬ ಬಡಬ್ರಾಹ್ಮಣ ಮಗನ ಉಪನಯನಕ್ಕೆಂದು ಯಾಚನೆಗೆ ಬಂದವನು ಶ್ರೀನಿವಾಸನಿಂದ ಹೆಚ್ಚು ಪ್ರತಿಫಲ ದೊರೆಯದೆ ಆತನ ಮಡದಿ ಸರಸ್ವತಿಯಲ್ಲಿ ಸಹಾಯವನ್ನು ಯಾಚಿಸಿದ. ಆಕೆ ಮನಕರಗಿ, ತನ್ನ ತೌರುಮನೆಯವರಿತ್ತಿದ್ದ ಮೂಗುತಿಯನ್ನು ಆತನಿಗೆ ಎತ್ತಿಕೊಟ್ಟಳು. ಬ್ರಾಹ್ಮಣ ಅದನ್ನು ಶ್ರೀನಿವಾಸನಿಗೆ ಕೊಟ್ಟು ಕೊಳ್ಳುವಂತೆ ಪ್ರಾರ್ಥಿಸಿದ. ಆತ, ಅದು ತನ್ನ ಹೆಂಡತಿಯದೆಂದು ಗುರುತುಹಿಡಿದು, ಮನೆಗೆ ಹೋಗಿ ಮೂಗುತಿಯೆಲ್ಲಿಯೆಂದು ಪ್ರಶ್ನಿಸಿದ. ಕುತ್ತದಿಂದ ಪಾರಾಗುವುದಕ್ಕಾಗಿ ಆಕೆ ವಿಷಪ್ರಾಶನ

ಮಾಡಹೊರಟಳು. ಆಗ ವಿಷದ ಬಟ್ಟಲಲ್ಲಿ ತನ್ನ ಮೂಗುತಿ ಕಾಣಿಸಿತು. ಇದನ್ನು ಕಂಡು ಆಶ್ಚರ್ಯಗೊಂಡ ಶ್ರೀನಿವಾಸ, ತಾನು ಮೊಹರು ಮಾಡಿಟ್ಟಿದ್ದ ಮೂಗುತಿ ಅಲ್ಲಿ ಕಾಣಿಸಿದುದು ಭಗವಂತನ ಮಾಯೆಯೆಂದು ಭಾವಿಸಿದ. ಆತನಿಗೆ ವೈರಾಗ್ಯ ಹುಟ್ಟಿತು. ಅಲ್ಲಿಯವರೆಗೆ ಪರಮಲೋಭಿಯಾಗಿದ್ದವನು ಆಗ ತನ್ನ ಐಶ್ವರ್ಯವನ್ನೆಲ್ಲ ಬಡಬಗ್ಗರಿಗೆ ದಾನಮಾಡಿ, ತಾಳ ತಂಬೂರಿಗಳನ್ನು ಕೈಲಿ ಹಿಡಿದು, ಹೆಂಡತಿಮಕ್ಕಳೊಡನೆ ಹಂಪೆಗೆ ಕಾಲ್ನಡಿಗೆಯಲ್ಲಿ ಹೊರಟ. ಅಲ್ಲಿ ವ್ಯಾಸರಾಯನಿಂದ ಹರಿದಾಸದೀಕ್ಷೆಯನ್ನು ವಹಿಸಿ, ಪುರಂದರದಾಸನಾದನು. ಅಂದಿನಿಂದ ಆತನು ಆಹಾರವನ್ನು ಭಿಕ್ಷೆ ಬೇಡಿ ಸಂಪಾದಿಸುತ್ತಾ ಸಂಸಾರವನ್ನು ನಡೆಸಹೊರಟನು. 'ಸಾಲಮಾಡಬೇಡ, ಸಾಲದೆನಬೇಡ, ನಾಳಿಗಿಡಬೇಡ' ಎಂಬುದು ಆತನ ಜೀವನಾದರ್ಶನವಾಯಿತು. ನಿಂತಲ್ಲಿ ಕೂತಲ್ಲಿ ಹರಿಕೀರ್ತನೆಗಳು ಆತನ ಬಾಯಿಂದ ಉಕ್ಕಿ ಹರಿದು ಬರಲಾರಂಭವಾಯಿತು. ಇದು ಆತನ ವಿಚಾರದಲ್ಲಿ ಪ್ರಚಲಿತವಾಗಿರುವ ಕಥೆ.

ಪುರಂದರದಾಸನು ಭರತಖಂಡವನ್ನೆಲ್ಲ ತಿರುಗಿ, ಎಲ್ಲ ತೀರ್ಥಕ್ಷೇತ್ರಗಳನ್ನೂ ಸಂದರ್ಶಿಸಿರುವಂತೆ ಆತನ ಕೀರ್ತನೆಗಳಿಂದ ಕಂಡುಬರುತ್ತದೆ. ಹೀಗೆ ಸಂಚರಿಸುವಾಗ ಬಗೆಬಗೆಯ ಜನರೊಡನೆ ಬೆರತು ಆತನ ಲೋಕಾನುಭವವೂ ಜೀವನ ವೈವಿಧ್ಯದ ಪರಿಜ್ಞಾನವೂ ಹಣ್ಣಾಗಿರಬೇಕು. ಉಳಿದೆಲ್ಲ ದಾಸರಿಗಿಂತ ಈತನು ಆಳವಾಗಿ, ವಿವರವಾಗಿ ಜೀವನವನ್ನು ಕಂಡಿರುವುದು ಮಾತ್ರವೇ ಅಲ್ಲ; ಉಳಿದೆಲ್ಲರಿಗಿಂತ ಹೆಚ್ಚು ಪ್ರಭಾವಯುತನಾಗಿ ಅದನ್ನು ನಿರೂಪಿಸುತ್ತಾನೆ. ಸಮಾಜದ ಲೋಪದೋಷಗಳನ್ನು ಗುರುತಿಸುವಂತೆ, ಅವುಗಳಿಂದ ಉದ್ಧಾರವಾಗುವ ಮಾರ್ಗವನ್ನೂ ಸೂಚಿಸುತ್ತಾನೆ. ಸಂಗ್ರಹವಾಗಿ, ಸಾರವತ್ತಾಗಿ ಸತ್ಯನಿರೂಪಣೆಯನ್ನು ಒಳಗೊಂಡ ಆತನ ಕೀರ್ತನೆಗಳನ್ನು 'ಪುರಂದರೋಪನಿಷತ್' ಎಂದು ಕರೆಯುವುದುಂಟು. ಕನಕದಾಸನೊಬ್ಬನನ್ನು ಬಿಟ್ಟರೆ ಈತನಷ್ಟು ಭಾವಪೂರ್ಣವಾಗಿ, ಭಕ್ತಿಭರಿತವಾಗಿ, ರಸಸ್ಯಂದಿಯಾಗಿ ಕೀರ್ತನೆಗಳನ್ನು ಕಟ್ಟಿ ಹಾಡಿರುವ ಮತ್ತೊಬ್ಬ ಹರಿದಾಸನಿಲ್ಲ. 'ದಾಸರೆಂದರೆ ಪುರಂದರದಾಸರಯ್ಯ' ಎಂದು ವ್ಯಾಸರಾಯನು ಈತನನ್ನು ಹೊಗಳಿರುವುದು ಸಾರ್ಥಕವಾಗಿದೆ.

ಹರಿದಾಸರೆಲ್ಲರೂ ಹರಿಸರ್ವೋತ್ತಮತ್ವವನ್ನು ಸ್ಥಾಪಿಸಿಹೊರಟಿರುವಂತೆ ಪುರಂದರನೂ ಹೊರಟಿದ್ದಾನೆ. ಆದರೆ ಈತನು ಹೇಳುವ ಧಾಟಿ ಅದ್ವಿತೀಯ; 'ಹೊಡಿ ನಗಾರಿ ಮೇಲೆ ಕೈಯ । ಘುಡ ಘುಡ, ಹೊಡೀ ನಗಾರಿ ಮೇಲೆ ಕೈಯ ॥ಪ॥ ಮೃಡವಂದ್ಯನ ಪದ ಬಿಡದೆ ಭಜಿಪರ । ಬಿಡಿಸಿ ಪೊರೆವ ಜಗದೊಡೆಯನೆ ಪರನೆಂದು ॥ಅ. ಪ॥ ಇಂತಹ ನಂಬುಗೆಯಿಂದ ಭಗವಂತನನ್ನು ನಂಬಿದವನು ನಿರ್ಭೀತನಾಗುತ್ತಾನೆ. ತನಗೆ ಪ್ರಾಪ್ತವಾಗುವುದೆಲ್ಲ ತನ್ನ ಒಳತಿಗಾಗಿಯೆ ಎಂಬ ಭಾವನೆ ಬಲಿಯುತ್ತದೆ. ಆಗ 'ಆದದ್ದೆಲ್ಲ ಒಳಿತೆ ಆಯಿತು । ಮಾಧವನಂಘ್ರಿಯಸೇವಿಸುವುದಕೆ ಸಾಧನಸಂಪತ್ತಾಯಿತು' ಎಂದುಕೊಳ್ಳುತ್ತದೆ. ಜೀವ 'ನಾನ್ಯಾಕೆ ಬಡವನು ? ನಾನ್ಯಾಕೆ ಪರದೇಶಿ ? ಶ್ರೀನಿಧೇಹರಿಯೆನಗೆ ನೀನೀರುವತನಕ !' ಎಂದು ಘೋಷಿಸುತ್ತದೆ. ಆದರೆ ಈ ಸ್ಥಿತಿಯನ್ನು ಪಡೆಯಬೇಕಾದರೆ ಇಹಸುಖದಲ್ಲಿ ಜಿಹಾಸೆ ಹುಟ್ಟಿ ವೈರಾಗ್ಯ ಮನೆಮಾಡಿಕೊಂಡಿರಬೇಕು. ಇದಕ್ಕೆ ಅಡ್ಡಿಯಾಗಿರುವ ವಸ್ತುಗಳು ಮೂರು; 'ಆರು ಹಿತವರು ನಿನಗೆ ಈ ಮೂವರೊಳಗೆ ?' ಯಾರು ಆ ಮೂವರು 'ನಾರಿಯೋ, ಧಾರುಣಿಯೋ, ಬಲುಧನದ ಸಿರಿಯೋ ?' ನಾರಿ ಬೇಕೆ ? 'ಅನ್ಯರಲ್ಲಿ ಜನಿಸಿದ್ದ ಅಂಗನೆಯ ಕರೆತಂದು ! ನಿನ್ನ ಮನೆಗವಳ ಯಜಮಾನಿಯೆನಿಸಿ । ಭಿನ್ನವಿಲ್ಲದೆಯರ್ಧದೇಹವೆನಿಸುವ ಸತಿಯು । ಕಣ್ಣಲ್ಲಿ ನೋಡಲಂಜುವಳು ಕಾಲವಶದಿಂ ॥' ಮಣ್ಣು ಆಸ್ತಿ, ರಾಜ್ಯ ಅವು ನಮ್ಮವೆ ? 'ಮುನ್ನ ಶತಕೋಟಿ ಆರಾಯರುಗಳಾಳಿದ ನೆಲವು । ತನ್ನದೆಂದೆನುತ

ಶಾಸನವ ಬರೆಸಿ । ಬಿನ್ನಣದ ಮನೆಕಟ್ಟಿ ಕೋಟೆಕೊತ್ತಳವಿಕ್ಕಿ । ಚೆನ್ನಿನವನಸುವಳಿಯಹೊರಗೆ ಹಾಕುವರು' ಧನಕನಕಗಳೂ ಅಷ್ಟೆ. ಉದ್ಯೋಗ ವ್ಯವಹಾರ, ನೃಪಸೇವೆಗಳಲ್ಲಿ ತೊಡಗಿ, ಕೊನೆಗೆ ಕ್ಷುದ್ರತನ, ಕಳವು, ಕೊಲೆಗಳಿಗೆ ಕೂಡ ಹೇಸದೆ ಗಳಿಸಿದ ಹಣವನ್ನೆಲ್ಲ ಯಾರ ಪಾಲೊ ಮಾಡಿ ಸತ್ತುಹೋಗುವುದು ತಾನೆ !

'ಯಾವಾಗಲೂ ಚಿಂತೆ ಜೀವಕ್ಕೆ' ಈ ಚಿಂತೆಯಿಂದ ನಿಶ್ಚಿಂತನಾಗಲು ಅರಿಷಡ್ವರ್ಗಗಳನ್ನು ಗೆದ್ದು ವಿರಕ್ತನಾಗಬೇಕು. ವಿಷಯಸೇವನೆಗಿಂತಲೂ ಅದರ ಆಸಕ್ತಿಯೆ ನಿಜವಾದ ದುಃಖಮೂಲ. ಅದು ಸಾಯದೆ, ಜಪಮಾಡಿ, ಬಹಿರಾಡಂಬರಗಳನ್ನು ಆಚರಿಸುವುದು ಕೇವಲ ಉದರವೈರಾಗ್ಯ. ಬಹಿರಾಡಂಬರದ ಬೂಟಾಟಿಕೆಯವರನ್ನು ಕಂಡು ಪುರಂದರದಾಸನು 'ನಗೆಯು ಬರಿತಿದೆ, ಎನಗೆ ನಗೆಯು ಬರುತಿದೆ । ಜಗದೊಳಿರುವ ಜಾಣರೆಲ್ಲ ಹಗರಣ ಮಾಡುವುದು ಕಂಡು' ಎನ್ನುತ್ತಾನೆ. ಸಮಾಜದ ಜಾತೀಯತೆ, ಮಡಿ ಮೈಲಿಗೆಗಳ ವಿಚಾರದಲ್ಲಿ ಆತನ ದೃಷ್ಟಿ ಬಹು ಉದಾರವಾದುದು. ಮಾನವ ಶ್ರೇಷ್ಠನಾಗುವುದು ಜನ್ಮದಿಂದಲ್ಲ, ಗುಣಕರ್ಮಗಳಿಂದ– 'ಹೊಲೆಯ ಹೊರಗಿಹನೆ ? ಊರೊಳಗಿಲ್ಲವೆ ?' ಎಂದು ಪ್ರಶ್ನಿಸಿ 'ಸತಿವಶನಾಗಿ ಜನನಿ ಜನಕಗೆ । ಅತಿನಿಷ್ಠುರ ನುಡಿವವ ಹೊಲೆಯ । ಸುತರ ಪಡೆದು ವಾರ್ಧಿಕ ಮದವೇರಿ ಪತಿದ್ವೇಷ ಮಾಡುವವಳೆ ಹೊಲತಿ'. ಇತ್ಯಾದಿ ಹೊಲೆಯ ಹೊಲತಿಯರ ಒಂದು ಪಟ್ಟಿಯನ್ನೇ ಕೊಡುತ್ತಾನೆ. ಮಡಿ ಮೈಲಿಗೆಯ ವಿಚಾರದಲ್ಲೂ ಅಷ್ಟೆ. ಮಲ ಮೂತ್ರಗಳು ತುಂಬಿ ಹೊಲಸಾದ ಈ ದೇಹ ಹುಟ್ಟು ಸಾವುಗಳ ಸೂತಕದ ಮಧ್ಯೆ ನಿಂತಿರುವಾಗ ಕಾವೇರಿಯಲ್ಲಿ ಮುಳುಗಿದರೆ ಮೈಲಿಗೆ ಹೋಗುತ್ತದೆಯೆ ? 'ಚರ್ಮವ ತೊಳೆದರೆ ಧರ್ಮವೂ ಹೋಗೋದೆ ?' ಕಾಮಕ್ರೋಧಾದಿಗಳನ್ನು ಹೊಟ್ಟೆಯಲ್ಲಿ ಇಟ್ಟುಕೊಂಡು ನೀರಿನಲ್ಲಿ ಮುಳುಗಿದರೆ ಮಡಿಯಾಗುತ್ತದೆಯೆ ? 'ಸ್ನಾನ ಮಡಿರೊ ಜ್ಞಾನತೀರ್ಥದಲಿ । ನಾನು ಎಂಬ ಅಹಂಕಾರವನ್ನು ಬಿಟ್ಟು' ಎಂಬುದು ಪುರಂದರನ ಉಪದೇಶ.

ಸಂಸಾರ ಅಸಾರ, ಅಶಾಶ್ವತವೆಂಬುದನ್ನು ಪುರಂದರದಾಸ ಮತ್ತೆ ಮತ್ತೆ ಎತ್ತಿ ಹೇಳುತ್ತಿದ್ದಾನೆ. ಆದರೆ 'ಈಸಬೇಕು ಇದ್ದು ಜೈಸಬೇಕು; ಹೇಸಿಗೆ ಸಂಸಾರದಲ್ಲಿ ಆಶೆ ಲೇಶ ಮಾಡದ್ಹಂಗೆ'. ಕಷ್ಟಸುಖಗಳು ಬಂದಾಗ ಚಲವಿಚಲಿತನಾಗದೆ 'ಕಲ್ಲಾಗಿ ಇರಬೇಕು' ಕಠಿಣಭವತೊರೆಯೊಳಗೆ; ಹಾಗಿದ್ದರೆ 'ಸಂಸಾರವೆಂಬಂಥ ಭಾಗ್ಯವಿರಲಿ, ಕಂಸಾರಿ ನೆನಪೆಂಬ ಸೌಭಾಗ್ಯವಿರಲಿ' ಎನ್ನಿಸೀತು ! 'ಮಾನವ ಜನ್ಮ ದೊಡ್ಡದು' ಈ ಜನ್ಮದಲ್ಲಿ 'ಧರ್ಮವೇ ಜಯವೆಂಬ ದಿವ್ಯಮಂತ್ರ'ವನ್ನು ಪಠಿಸುತ್ತಾ 'ಬಂದದ್ದೆಲ್ಲ ಬರಲಿ, ಗೋವಿಂದನ ದಯೆವೊಂದಿರಲಿ' ಎಂದುಕೊಂಡು ಮುಂದುವರಿಯಲೇಬೇಕು. ಹೆಜ್ಜೆಹೆಜ್ಜೆಗೂ ತನ್ನನ್ನು ತಾನು ಪರೀಕ್ಷಿಸಿಕೊಳ್ಳಬೇಕು, ತಪ್ಪನ್ನು ತಿದ್ದಿಕೊಳ್ಳಬೇಕು, ಉದ್ಧಾರವಾಗಬೇಕು.

ಪುರಂದರನ ಕೃತಿಗಳಲ್ಲಿ ಹಲವಕ್ಕೆ ಹಿನ್ನೆಲೆಯೊಂದನ್ನು ಸುಲಭವಾಗಿ ಊಹಿಸಬಹುದು. ಆತನ ಭಿಕ್ಷಕ್ಕೆ ಯಾರೋ ರಾಗಿಯನ್ನು ನೀಡಬಂದರೇನೋ ! ಆಶುಕವಿ ಪುರಂದರ 'ರಾಗಿ ತಂದಿರಾ ಭಿಕ್ಷಕ್ಕೆ ರಾಗಿ ತಂದಿರಾ ?' ಎಂದು ಹಾಸ್ಯ ಮಾಡಿ ಪ್ರಶ್ನಿಸಿದನೆಂದು ತೋರುತ್ತದೆ; ದಾಸನನ್ನು ದೂರದಿಂದ ಕಂಡವಳೊಬ್ಬಳು ಬಾಗಿಲು ಹಾಕಿಕೊಂಡಳೇನೊ, ಆಗ 'ಕದವ ಮುಚ್ಚಿದಳಿದಕೊ ! ಗಯ್ಯಾಳಿ ಮೂಳಿ ॥ಪ॥ ಕದವ ಮುಚ್ಚಿದಳಿದಕೊ । ಚಿಲಕವಲ್ಲಾಡುತ್ತಿದೆ । ಒಳಗಿದ್ದ ಪಾಪವೆಲ್ಲ ಹೊರಗೆ ಹೋದೀತೆಂದು' ಎಂದು ಹಾಡಿ ಆ ಹೆಣ್ಣಿನ ಮುಖದ ನೀರಿಳಿಸಿರಬೇಕು. ಹಸಿದು ಮನೆಗೆ ಹೋದಾಗ ಆಟದಲ್ಲಿ ಮಗ್ನಳಾಗಿರುವುದನ್ನು ಕಂಡು 'ಊಟಕ್ಕೆ ಬಂದೆವು ನಾವು, ನಿಮ್ಮ ಆಟಪಾಟವ ಬಿಟ್ಟು ಅಡುಗೆ ಮಾಡಮ್ಮ' ಎಂದು ಆಕೆಯನ್ನು ಕರ್ತವ್ಯಮಗ್ನಳಾಗುವಂತೆ ಮಾಡಿರಬಹುದು. ಇಂತಹ ಹಿನ್ನೆಲೆಗಳು ಪುರಂದರ ಕೃತಿಗಳಲ್ಲಿ ತಂಡ ತಂಡವಾಗಿ ಸಿಕ್ಕುತ್ತವೆ.

ಭಗವಂತನನ್ನು ಸ್ತುತಿಸುವ, ಶ್ರೀಕೃಷ್ಣನ ಲೀಲೆಯನ್ನು ವರ್ಣಿಸುವ 'ಪೋಗದಿರೆಲೊ ರಂಗ, ಬಾಗಿಲಿಂದಾಚೆ' ಇತ್ಯಾದಿ ಮನೋಹರವಾದ ಲೆಕ್ಕ ಇಲ್ಲದಷ್ಟು ಕೃತಿಗಳು ಪುರಂದರರನಿಂದ ರಚಿತವಾಗಿವೆ. ಪರಲೋಕದೃಷ್ಟಿಯನ್ನು ನೀಡುವುದರ ಜೊತೆಗೆ ಇಹಲೋಕದ ತುಷ್ಟಿಯನ್ನು ನೀಡುತ್ತವೆ, ಅವು ನವ ವಿಧ ಭಕ್ತಿಭಾವಗಳನ್ನು ಒಳಗೊಂಡು, ರಸಮಯವಾದ ಕಾವ್ಯದ ಮೆರಗನ್ನು ಹೊಂದಿದೆ, ಪುರಂದರರ ಕೃತಿಗಳು. ಆತನ ಉಪದೇಶ ಜನ ಮನದ ಕೊಳೆಯನ್ನು ತೊಳೆದು ಸಮಾಜಜೀವನವನ್ನು ಹಸನಾಗಿ ಮಾಡಿದೆ; ಆತನ ಕವಿತೆ ಕನ್ನಡಭಾಷೆಗೆ ತುಷ್ಟಿಪುಷ್ಟಿಗಳನ್ನು ನೀಡಿವೆ; ನಟ ವಿಟ ಗಾಯಕರ ಸ್ವತ್ತೆನಿಸಿದ್ದ ಸಂಗೀತಕ್ಕೆ ಭಕ್ತಿಯುಕ್ತವಾದ ಸಾಹಿತ್ಯವನ್ನು ಒದಗಿಸಿ ಅದಕ್ಕೆ ಕರ್ಣಾಟಕ ಸಂಗೀತ'ವೆಂಬ ಕೀರ್ತಿಯ ಕೋಡನ್ನು ಮೂಡಿಸಿದೆ. ತ್ಯಾಗರಾಜನು ತನ್ನ ತಾಯಿ ಹಾಡುತ್ತಿದ್ದ ಪುರಂದರದಾಸರ ಕೀರ್ತನೆಗಳನ್ನು ಕೇಳಿ, ತನ್ನ ಕೃತಿರಚನೆಗೆ ಸ್ಫೂರ್ತಿಯನ್ನು ಪಡೆದನಂತೆ! ಶಿವಶರಣರ ಸಾಲಿನಲ್ಲಿ ಬಸವಣ್ಣ ಹೇಗೋ ಹಾಗೆ, ಹರಿದಾಸರ ಸಾಲಿನಲ್ಲಿ ಪುರಂದರದಾಸ ಅಗ್ರಗಣ್ಯ.

೬. ಕನಕದಾಸ (ಕ್ರಿ.ಶ. ೧೫೦೯–೧೬೦೭)

ಈತನು ಪುರಂದರದಾಸನ ಸಮಕಾಲೀನ. ಇವರಿಬ್ಬರನ್ನೂ ದಾಸಪಂಥದ ಅಶ್ವಿನೀದೇವತೆಗಳೆಂದು ಕರೆವ ವಾಡಿಕೆ. ಇಬ್ಬರೂ ವ್ಯಾಸರಾಯನ ಶಿಷ್ಯರು. ಪುರಂದರನು ಅದ್ವಿತೀಯ ಕೀರ್ತನಕಾರನಾಗಿದ್ದರೆ ಕನಕದಾಸನು ಹರಿಕೀರ್ತನೆಗಳೊಡನೆ 'ಮೋಹನತರಂಗಿಣಿ', 'ನಳಚರಿತ್ರೆ', 'ಹರಿಭಕ್ತಿಸಾರ', 'ರಾಮಧಾನ್ಯ ಚರಿತ್ರೆ' ಎಂಬ ಕಾವ್ಯಗಳನ್ನು ರಚಿಸಿದ ಕವಿಯೂ ಆಗಿದ್ದಾನೆ.

ಧಾರವಾಡ ಜಿಲ್ಲೆಯ ಬಾಡವೆಂಬ ಗ್ರಾಮದಲ್ಲಿದ್ದ ಬೀರಪ್ಪ-ಬಚ್ಚಮ್ಮ ಎಂಬ ಕುರುಬ ದಂಪತಿಗಳಿಗೆ ತಿರುಪತಿ ವೆಂಕಟರಮಣನ ಕೃಪೆಯಿಂದ ಜನಿಸಿದ ಪ್ರಾಸದಿಪುತ್ರ, ತಿಮ್ಮಪ್ಪ. ಈತನು ಪುಟ್ಟದೊಂದು ಪಾಳೆಯ ಪಟ್ಟಿಗೆ ಅಧಿಪತಿಯಾಗಿದ್ದ. ಒಮ್ಮೆ ಈತ ಭೂಶೋಧನೆ ಮಾಡಿಸುತ್ತಿರುವಾಗ ಅಪಾರವಾದ ಧನರಾಶಿ ಸಿಕ್ಕಿತು. ಅಂದಿನಿಂದ ಆತನ ಹೆಸರು ಕನಕಪ್ಪನೆಂದಾಯಿತು. ಈತನು ಕಾಗಿನೆಲೆಯೆಂಬಲ್ಲಿ ಭವ್ಯವಾದ ಗುಡಿಯೊಂದನ್ನು ಕಟ್ಟಿಸಿ ಅದರಲ್ಲಿ ಆದಿಕೇಶವಸ್ವಾಮಿಯನ್ನು ಸ್ಥಾಪಿಸಿದನು. ಕಾಲಕ್ರಮದಲ್ಲಿ ಅದು ಉತ್ತರದ ತಿರುಪತಿಯಾಯಿತು. ಹೀಗಿರಲು ಕನಕನಿಗೆ ಪತ್ನೀವಿಯೋಗವಾಯಿತು, ಯುದ್ಧದಲ್ಲಿ ಪರಾಜಯವಾಯಿತು. ಭಯಂಕರವಾದ ಹೊಡೆತದಿಂದ ಗಾಯಗೊಂಡು ನೆಲಕ್ಕುರುಳಿದ ಈ ಕ್ಷತ್ರಿಯನು ಜೀವನದಲ್ಲಿ ಜಿಗುಪ್ಸೆ ಹೊಂದಿ ವೈರಾಗ್ಯಪರನಾದನು. ಕೆಲಕಾಲ ಬಹುಶಃ ಆತನು ಶ್ರೀವೈಷ್ಣವ ಧರ್ಮವನ್ನು ಅಂಗೀಕರಿಸಿದ್ದನೋ ಏನೋ! ಅನಂತರ ಆತನು ವ್ಯಾಸರಾಯರ ಶಿಷ್ಯನಾಗಿ ಕನಕದಾಸನೆಂಬ ಹೆಸರಿನಿಂದ ದಾಸಕೂಟದ ಸದಸ್ಯರಲ್ಲಿ ಪ್ರಮುಖನಾದನು. ಪುರಂದರದಾಸನೂ ಆತನೂ ಜೀವದ ಗೆಳೆಯರಾದರು. ಪುರಂದರನು ಪರಂಧಾಮಕ್ಕೆ ತೆರಳುವ ಮುನ್ನ ತನ್ನ ತಂಬೂರಿಯನ್ನು ಕನಕನಿಗೆ ಒಪ್ಪಿಸಿದನಂತೆ. ಕನಕನು ತನ್ನ ಜೀವಿತದ ಬಹುಭಾಗವನ್ನು ತಿರುಪತಿಯಲ್ಲೆ ಕಳೆದು, ಕಡೆಗಾಲದಲ್ಲಿ ಕಾಗಿನೆಲೆಯ ಕೇಶವನ ಪಾದದಲ್ಲಿ ತಲೆಯಿಟ್ಟುಕೊಂಡು ಕಡೆಯುಸಿರು ಎಳೆದನಂತೆ!

ಕನಕದಾಸನು ಮಹಾ ವಿದ್ವಾಂಸನಲ್ಲದಿದ್ದರೂ ತುಂಬ ಪ್ರತಿಭಾಶಾಲಿಯಾಗಿದ್ದ, ಕುಶಲಮತಿಯಾಗಿದ್ದ, ಜ್ಞಾನಿಯಾಗಿದ್ದ. ಆತನನ್ನು ಕುರಿತ ಹಲವು ದಂತಕಥೆಗಳು ಪ್ರಚಲಿತವಾಗಿವೆ. ಮೋಕ್ಷಕ್ಕೆ ಅರ್ಹರಾರೆಂದು ವಿದ್ವದ್ಗೋಷ್ಠಿಯಲ್ಲಿ ಪ್ರಶ್ನೆ ಎದ್ದಾಗ ಎಲ್ಲರೂ ಮೌನದಿಂದಿರಲೂ, ಕನಕ 'ನಾನು ಹೋರೆ ಹೋದೇನು!' ಎಂದನಂತೆ. ಎಲ್ಲರೂ ಆಶ್ಚರ್ಯದಿಂದ ಸ್ತಂಭೀಭೂತರಾದಾಗ 'ನಾನು' ಎಂಬ ಅಹಂ ಹೋದವನಿಗೆ ಮೋಕ್ಷ – ಎಂದು ಕನಕದಾಸ ವಿವರಿಸಿದನಂತೆ! ಯಾರೂ ಇಲ್ಲದ ಕಡೆ

ಬಾಳೆಹಣ್ಣು ತಿನ್ನುವಂತೆ ವ್ಯಾಸರಾಯರು ಭಕ್ತರೆಲ್ಲರಿಗೂ ವಿಧಿಸಿ ಹಣ್ಣನ್ನು ಕೊಟ್ಟಾಗ್ಗ, ತಮತಮಗೆ ತೋರಿದ ರೀತಿಯಲ್ಲಿ ಭಕ್ತರೆಲ್ಲ ಗೋಪ್ಯವಾಗಿ ಅದನ್ನು ತಿಂದುಬಂದರಂತೆ; ಆದರೆ ಕನಕದಾಸ 'ದೇವರಿಲ್ಲದ ಸ್ಥಳವಿಲ್ಲ, ಯಾರೂ ಇಲ್ಲದ ಸ್ಥಳ ಎಲ್ಲಿದೆ ?' ಎಂದು ಹೇಳಿ ಹಣ್ಣನ್ನು ಹಾಗೆ ಹಿಂದಕ್ಕೆ ತಂದನಂತೆ ! ಕನಕನನ್ನು ಶೂದ್ರನೆಂದು ತೆಗಳುತತಿದ್ದ ಬ್ರಾಹ್ಮಣರೆಲ್ಲರ ಬಾಯಿಯನ್ನು ಈ ಉಪಾಯದಿಂದ ಮುಚ್ಚಿಸಿದನಂತೆ, ಗುರು ವ್ಯಾಸರಾಯ ! ಮೇಲಿಂದಮೇಲೆ ತನ್ನ ಸೂಕ್ಷ್ಮ ಬುದ್ಧಿಯನ್ನು ಮೆರೆದ ಕನಕದಾಸ ಸರ್ವಮಾನ್ಯನಾದ. ಆತನು ಕೆಲವು ಪವಾಡಗಳನ್ನು ಮೆರೆದಂತೆ ಹೇಳುತ್ತಾರೆ. ಉಡುಪಿಯ ಶ್ರೀಕೃಷ್ಣದರ್ಶನಕ್ಕೆ ಶೂದ್ರನಾದ ಈತನಿಗೆ ಅರ್ಚಕರು ಅವಕಾಶಕೊಡದೆ ಹೋಗಲು, ಶ್ರೀಕೃಷ್ಣ ವಿಗ್ರಹ ಆತನಿದ್ದ ಕಡೆಗೆ ತಿರುಗಿಕೊಂಡಿತಂತೆ! ಅಲ್ಲಿನ ಗೋಡೆಯಲ್ಲಿ ಒಂದು ಕಿಂಡಿ ಬಿದ್ದಿತಂತೆ! ಅದನ್ನು ಈಗ 'ಕನಕನ ಕಿಂಡಿ' ಎಂಬ ಹೆಸರಿನಿಂದ ಕರೆಯುತ್ತಾರೆ. ಇಂತಹ ಇನ್ನೂ ಅನೇಕ ಪವಾಡಗಳಿವೆ. ಈತನನ್ನು ದಾಸಪಂಥದವರು 'ಯಮಧರ್ಮನ ಅವತಾರ' ಎಂದು ಕರೆದು ಗೌರವಿಸುತ್ತಾರೆ.

ಕನಕನ ಕಾವ್ಯಗಳಲ್ಲಿ 'ಮೋಹನತರಂಗಿಣಿ' ಸುಮಾರು ೨೩೦೦ ಪದ್ಯಗಳನ್ನು ಒಳಗೊಂಡ ಸಾಹಿತ್ಯ ಗ್ರಂಥ. ಇದಕ್ಕೆ 'ಕೃಷ್ಣಚರಿತೆ' ಎಂಬ ಮತ್ತೊಂದು ಹೆಸರು ಇದೆ. ಶಿವನ ಹಣೆಗಣ್ಣಿಂದ ಕಾಮದಹನ, ಮನ್ಮಥನ ಪುನರ್ಜನ್ಮ, ಶಂಬರಾಸುರನ ವಧೆ, ಉಷಾ – ಅನುರುದ್ಧರ ಪ್ರೇಮಲೀಲೆ, ಬಾಣಾಸುರವಿಜಯ – ಇವು ಈ ಕಾವ್ಯದ ಕಥಾವಸ್ತು. ಈ ಕಾವ್ಯದ ಆರಂಭದಲ್ಲಿ 'ಸಾತ್ವಿಕೋಲ್ಲಾಸ ಶ್ರಾರಾಮಾನುಜಮುನಿಶರಣು' ಎಂದು ಹೇಳಿ, ಆಮೇಲೆ ತಾತಾಚಾರ್ಯರನ್ನು ಸ್ತೋತ್ರಮಾಡಿದ್ದಾನೆ. ಆದ್ದರಿಂದ ಈ ಕಾವ್ಯ ಬರೆದ ಕಾಲಕ್ಕೆ ಆತನು ಶ್ರೀವೈಷ್ಣವ ಮತದ ಅನುಯಾಯಿಯಾಗಿದ್ದರೂ ಇದ್ದಿರ ಬಹುದು. ಕವಿ ತನ್ನ ಈ ಕಾವ್ಯವು 'ಹರಿಶರಣರ ಪೆರ್ಚು, ಬುಧಜನರಿಗೆ ಮೆಚ್ಚು, ದುರಿತಾಟವಿಗೆ ಕಾಳ್ಗಿಚ್ಚು, ವಿರಹಿಗಳಿಗೆ ಮೆಚ್ಚು, ಕೇಳ್ವರಿಗಿದು ತನಿಬೆಲ್ಲದೆಚ್ಚು' ಎಂದು ಹೇಳಿಕೊಂಡಿರುವುದು ಬಹುಮಟ್ಟಿಗೆ ಸಾರ್ಥಕವಾಗಿದೆ. ಇಲ್ಲಿನ ವರ್ಣನೆಗಳಲ್ಲಿ ಸಹಜತೆಯಿದೆಯಾದರೂ ಅನಾವಶ್ಯಕವಾದ ಹದಿನೆಂಟು ವರ್ಣನೆಗಳು ಇಲ್ಲಿ ತಲೆಹಾಕಿವೆ. ಈತನ ಬಂಧ ಬಂಧುರವಾಗಿದೆ. ಇದು ಸೂರ್ಯಾಸ್ತದ ವರ್ಣನೆ–

ಅರೆಯಿಟ್ಟ ಖಳರ ಖಂಡಿಸಿ ರಕುತವ ಕೆಂ ದೊರೆಯೊಳು ತಳೆದು ಚಕ್ರವನು
ಒರೆಯೊಳು ಕೃಷ್ಣ ಬೈಚಿಡುವಂತೆ ಪಡುವೆಟ್ಟ ಮರೆಯೊಳು ರವಿ ಮುಳಗಿದನು॥

ಇಂತಹ ವರ್ಣನೆಗಳು ಮೇಲಿಂದಮೇಲೆ ಬರುವುದರಿಂದ ಇದಕ್ಕಿಟ್ಟಿರುವ 'ಮೋಹನತರಂಗಿಣಿ' ಎಂಬ ಹೆಸರು ಸಾರ್ಥಕಗೊಳ್ಳುತ್ತದೆ. ಇದನ್ನು 'ಕೃಷ್ಣ ಚರಿತೆ' ಎಂದು ಕರೆದಿರುವಲ್ಲಿ ವಿಜಯನಗರದ ಅರಸನಾದ ಕೃಷ್ಣರಾಯನನ್ನು ಸೂಚಿಸುತ್ತಿದ್ದಾನೊ ಏನೊ ! ಅಸಹಜವಾದ ಘಟನೆಗಳಿಂದ ತುಬಿರುವುದರಿಂದ ಇಲ್ಲಿ ಮಾನವೀಯತೆಗೆ ಸ್ವಲ್ಪ ಲೋಪ ಬಂದಿದೆ. ಭಕ್ತಿ ಇಲ್ಲಿನ ಗುರಿಯಾದರೂ ಕಾವ್ಯ ರಸವತ್ತಾಗಿದೆ. ಕವಿಯ ಮಾತಿನಲ್ಲೆ ಹೇಳುವಿದಾದರೆ ಇದೊಂದು 'ಮೇಲ್ಗಟ್ಟೆ'.

ಕವಿಯ ನಳಚರಿತ್ರೆ ಮೂಲತಃ ಅತ್ಯಂತ ರಮ್ಯವಾದ ಒಂದು ಕಥನ ಕಾವ್ಯ. ಮಹಾಭಾರತದಿಂದ ಎತ್ತಿಕೊಂಡಿರುವ ಈ ಕಥಾವಸ್ತು ೪೮೦ ಭಾಮಿನೀ ಷಟ್ಪದಿಗಳಲ್ಲಿ ಇಳಿದುಬಂದಿದೆ. ಅತ್ಯಂತ ಜನಪ್ರಿಯವಾದ ಕನ್ನಡ ಕಾವ್ಯದಲ್ಲಿ 'ನಳಚರಿತ್ರೆ'ಯೂ ಒಂದು ಔಚಿತ್ಯದ ಎಲ್ಲೆಯನ್ನು ಎಳ್ಳಷ್ಟೂ ಮೀರದೆ ಹಿತಮಿತವಾದ ವರ್ಣನೆಗಳೊಡನೆ, ಮೃದುಪದಗತಿಯಲ್ಲಿ, ರಸವತ್ತಾಗಿ ಹರಿಯುತ್ತದೆ, ಇಲ್ಲಿನ ಕಥೆ, ಪಾತ್ರಚಿತ್ರಣ ಸಜೀವವಾಗಿ, ಉದಾತ್ತವಾಗಿದೆ. ಮಾನವೀಯತೆಯ ವಿವಿಧ ಭಾವಗಳನ್ನು ಕವಿಯು ಹೃದಯ ಸ್ಫೂರ್ತಿಯಾಗಿ ನಿರೂಪಿಸಿದ್ದಾರೆ. ಸುಪ್ರಸಿದ್ಧವಾದ,

ಹೃದಯಂಗಮವಾದ, ಆದರ್ಶಪ್ರೇಮದ ಕಥೆ; ತಿಳಿಯಾದ, ಸರಳವಾದ ಸುಲಭವಾದ ನಿರೂಪಣೆ; ಹಿತಮಿತವಾದ, ರಸಸ್ಯಂದಿಯಾದ ವರ್ಣನೆಗಳಿಂದ ಕೂಡಿದ ನಳಚರಿತ್ರೆ ಒಂದು ರಸಪಾಕದಂತಿದೆ. ಇಲ್ಲಿ ಕುಮಾರವ್ಯಾಸನ ಛಾಯೆ ಕಂಡು ಬರುತ್ತದೆ. ಅದು ಕವಿಯ ರಸಜ್ಞತೆಗೆ ಸಾಕ್ಷಿಯೇ ಹೊರತು ಕೃತಿಚೌರ್ಯದ ದೋಷವೇನೂ ಇಲ್ಲ.

ಕನಕಕವಿಯ 'ಹರಿಭಕ್ತಿಸಾರ' ನಳಚರಿತ್ರೆಯಂತೆಯೆ ಜನಪ್ರಿಯವಾದ, ಲಲಿತಮಧುರ ಕಾವ್ಯ. ನೀತಿ ಭಕ್ತಿ ವೈರಾಗ್ಯಗಳನ್ನು ಬೋಧಿಸುವ ೧೧೦ ಭಾಮಿನೀ ಷಟ್ಪದಿಗಳನ್ನು ಒಳಗಂಡ ಈ ಪುಟ್ಟ ಕಾವ್ಯದ ಪ್ರತಿಯೊಂದು ಪದ್ಯವೂ 'ರಕ್ಷಿಸು ನಮ್ಮನನವರತ' ಎಂದು ಕೊನೆಯಾಗುತ್ತದೆ. ಇಲ್ಲಿನ ಪ್ರತಿಯೊಂದು ಪದ್ಯವೂ ಭಕ್ತಿಮುಕ್ತಾಫಲ. ಉನ್ನತವಾದ ಭಾವಗಳನ್ನು ಆತನು ಎಷ್ಟು ಸರಳವಾಗಿ, ಲಲಿತವಾಗಿ, ಲೀಲಾಜಾಲವಾಗಿ ಹೇಳಬಲ್ಲ. 'ದೀನ ನಾನು ಸಮಸ್ತ ಲೋಕಕೆ । ದಾನಿ ನೀನು ವಿಚಾರಿಸಲು ಮತಿ । ಹೀನ ನಾನು ಮಹಾಮಹಿಮ ಕೈವಲ್ಯಪತಿ ನೀನು' ಅಥವಾ 'ಎಂಜಲೆಂಜಲು ಎಂಬರಾ ನುಡಿ। ಎಂಜಲಲ್ಲವೆ? ವಾರಿ ಜಲಚರ। ದೆಂಜಲಲ್ಲವೆ? ಹಾಲು ಕರುವಿನ ಎಂಜಲೆನಿಸಿರದೆ?' ಎಂಬಂತಹ ಪದ್ಯಗಳು ಎಷ್ಟು ಸರಳವೋ ಅಷ್ಟೇ ಹೃದಯಂಗಮ.

'ರಾಮಾಧಾನ್ಯ ಚರಿತ್ರೆ' ಚಮತ್ಕಾರಯುಕ್ತವಾದ ಒಂದು ಖಂಡಕಾವ್ಯ. ಇದರಲ್ಲಿ ರಾಗಿಯ ಹಿರಿಮೆಯನ್ನು ಎತ್ತಿಹಿಡಿಯುವ ೧೬೫ ಪದ್ಯಗಳಿವೆ. ರಾವಣವಧಾನಂತರ ಶ್ರೀರಾಮನ ಋಷಿಗಳ ಆಶ್ರಮಕ್ಕೆ ಬಂದನಂತೆ! ಋಷಿಗಳತ್ತ ಭಕ್ಷ್ಯ ಭೋಜ್ಯಗಳನ್ನು ಸವಿಸುತ್ತಾ, ಅವುಗಳನ್ನು ತಯಾರಿಸಲು ಬಳಸಿದ ಧಾನ್ಯಗಳನ್ನು ತರಿಸಿದನಂತೆ ! ರಾಗಿ, ಭತ್ತ, ಹಾರಕ, ಜೋಳ, ಸಾಮೆ ಮೊದಲಾದ ನವಧಾನ್ಯಗಳಲ್ಲಿ ಯಾವುದು ಶ್ರೇಷ್ಠವೆಂದು ಜಿಜ್ಞಾಸೆ ನಡೆಯಿತು. ಒಬ್ಬೊಬ್ಬ ಋಷಿ ಒಂದೊಂದು ಧಾನ್ಯವನ್ನು ಹೊಗಳಿದ. ಆಗ ನರೆದಲೆಗನಿಗೂ (ರಾಗಿ), ವ್ರೀಹಿಗೂ (ಅಕ್ಕಿ) ಸಾಕಷ್ಟು ವಾಗ್ವಾದ ನಡೆಯಿತು. ಅದು ತನ್ನಿದಿರಿನಲ್ಲಿಯೇ ಮರ್ಯಾದೆ ಮೀರಿ ಹರಟದುದಕ್ಕಾಗಿ ಅವೆರಡನ್ನೂ ಶ್ರೀರಾಮ ಆರು ತಿಂಗಳು ಸೆರೆಗೆ ಹಾಕಿಸಿದ. ಆಮೇಲೆ ತರಿಸಿದಾಗ ನೆರದಲೆಗೆ ಸಾರಹೃದಯನೆಂದೂ, ವ್ರೀಹಿನಿಸ್ಸಾರನೆಂದೂ ತೀರ್ಮಾನವಾಯಿತು. ಶ್ರೀರಾಮ ನರೆದಲೆಗನಿಗೆ 'ರಾಘವ'ನೆಂಬ ನೂತನ ನಾಮಧೇಯವಿತ್ತು ಸನ್ಮಾನಿಸಿದನು. ಅದೇ ಇಂದು 'ರಾಗಿ'ಯೆಂದಾಗಿದೆ. ಈ ಕಥೆ ಧ್ವನಿ ಪೂರ್ಣವಾದ ಒಂದು ವಿಡಂಬನೆಯಂತೆ ತೋರುತ್ತದೆ. ಉತ್ತಮ ಜಾತಿಯವರೆನಿಸಿಕೊಂಡವರೂ, ಶ್ರೀಮಂತರೆನಿಸಿಕೊಂಡವರೂ ಅಂತಸ್ಸತ್ತ್ವವಿಲ್ಲದವರಾಗಿದ್ದು ಕೇವಲ ಅಹಂಕಾರಿಗಳಾಗಿ ಬಹಿರಾಡಂಬರದಿಂದ ಬಾಳತಕ್ಕವರು, ದೈವಕ್ಕೆ ದೂರರಾದವರು – ಎಂದು ಕವಿ ಸೂಚಿಸುತ್ತಿರುವಂತೆ ಭಾಸವಾಗುತ್ತದೆ.

ಕನಕನು 'ನೃಸಿಂಹಸ್ತವ' ಎಂಬ ೯೨ ಪದ್ಯಗಳ ಪುಟ್ಟ ಸಾಂಗತ್ಯಕಾವ್ಯವನ್ನು ರಚಿಸಿರುವುದಾಗಿ ಕವಿಚರಿತೆಕಾರರು ಊಹಿಸುತ್ತಾರೆ.

ಕನಕದಾಸನ ಕವಿತಾಶಕ್ತಿ ಸಂಪೂರ್ಣವಾಗಿ ಅರಳೆ ಸುವಾಸಿತವಾಗಿರುವುದು ಆತನ ಕೀರ್ತನೆಗಳಲ್ಲಿ! ಕೀರ್ತನೆಗಳ ವೈವಿಧ್ಯದಲ್ಲಿ ಲೌಕಿಕ ಪಾರಲೌಕಿಕ ಜ್ಞಾನದಲ್ಲಿ ಪುರಂದರದಾಸನು ಅಗ್ರಗಣ್ಯನಾಗಿರುವಂತೆ, ಕಾವ್ಯಗುಣದಲ್ಲಿ ಕನಕದಾಸನು ಅಗ್ರಗಣ್ಯ; ವಿಚಾರಸ್ವಾತಂತ್ರ್ಯದಲ್ಲಿ ಕವಿತಾಶಕ್ತಿಯಲ್ಲಿ ಈತನು ದಾಸಪಂಥದವರಲ್ಲೆಲ್ಲ ಅತ್ಯಂತ ಪ್ರತಿಭಾಶಾಲಿಯೆಂದು ಹೇಳಬಹುದು. ಈತನ ಉಪಮೆಗಳೂ ದೃಷ್ಟಾಂತಗಳೂ ಬಹುರಮ್ಯವಾಗಿವೆ. ಸಂತಕವಿಯಾದ ಕನಕನು ಹಾಡಿರುವ ರಾಗಗಳೂ ಬಳಸಿರುವ ಮಾತುಗಳೂ ಹೃದಯಂಗಮವಾಗಿವೆ. ಒಮ್ಮೆ ಪಾಳೆಯಗಾರನಾಗಿದ್ದು ಜನಸಂಪರ್ಕವನ್ನು ನಿಕಟವಾಗಿ ಪಡೆದಿದ್ದ, ಆತನಿಗೆ ಜನಸಾಮಾನ್ಯರ ನುಡಿಗಟ್ಟು

ಚಿರಪರಿಚಿತವಾಗಿದೆ. ಆದ್ದರಿಂದಲೆ ನುಡಿಗಳು ಸತ್ವಯುಕ್ತವಾಗಿವೆ. ಜನರ ಲೋಪದೋಷಗಳನ್ನು ಕಂಡಾಗ ಆತ ಕೆರಳಿ ಕೆಂಗೆಂಡವಾಗುತ್ತಾನೆ. ಕಟುವಾಗಿ ಟೀಕಿಸುತ್ತಾನೆ. ಆತನ ಮಾತುಗಳು ಅರಳು ಹುರಿದಂತೆ ಪಟಪಟ ಸಿಡಿಯುತ್ತವೆ. ಜಾತೀಯತೆಯನ್ನು ಆತ ಉಗ್ರವಾಗಿ ಖಂಡಿಸುತ್ತಾನೆ 'ಕುಲ ಕುಲ ಕುಲವೆನ್ನುತಿಹರು ! ಕುಲ ಯಾವುದು ಸತ್ಯ ಸುಖವುಳ್ಳ ಜನರಿಗೆ ?' ಎಂದು ಪ್ರಶ್ನಿಸಿ 'ಕೆಸರಲ್ಲಿ ಹುಟ್ಟಿದ ಕಮಲ ದೇವರಿಗೆ ಅರ್ಪಿತವಾಗುತ್ತದೆ. ಹಸುವಿನ ಮಾಂಸದಿಂದ ಉತ್ಪತ್ತಿಯಾದ ಕ್ಷೀರವನ್ನು ಭೂಸುರರು ಉಣ್ಣುತ್ತಾರೆ! ಆತ್ಮ ಯಾವ ಕುಲ ? ಜೀವ ಯಾವ ಕುಲ ? ತತ್ತ್ವೇಂದ್ರಿಯಗಳ ಕುಲ ? – ಆದ್ದರಿಂದ ಭಗವಂತರು ಒಲಿದಮೇಲೆ ಕುಲವನ್ನು ಅರಿಸುವುದು ಬೇಡ – ಎನ್ನುತ್ತಾನೆ. 'ಅಪುತ್ರಸ್ಯ ಗತಿರ್ನಾಸ್ತಿ' ಎಂಬ ಹೇಳಿಕೆಯನ್ನು ಖಂಡಿಸುತ್ತಾ 'ಸತ್ಯನೊಬ್ಬ ಮಗ, ಶಾಂತನೊಬ್ಬ ಮಗ, ದುರವೃತ್ತಿನಿಗ್ರಹ, ಸಮಚಿತ್ತನು' ಉತ್ತಮರೀನಾಲ್ಕು ಮಕ್ಕಳಿದ್ದ ಮೇಲೆ, 'ಹೆತ್ತರೆ ಫಲವೇನು ? ಹೆರದಿದ್ದರೇನು ?' ಎಂದು ಪ್ರಶ್ನಿಸುತ್ತಾನೆ. ಭಗವಂತನ ಅನುಗ್ರಹದಲ್ಲಿ ಅಚಲ ವಿಶ್ವಾಸವನ್ನಿಟ್ಟು, ಭಕ್ತಿನಿರ್ಭರತೆಯನ್ನು ಸಾರುತ್ತಿರುವ ಕನಕನ ಭಾವ 'ತಲ್ಲಣಿಸದಿರು ಕಂಡ್ಯ ತಾಳು ಮನವೆ' ಎಂಬ ಕೀರ್ತನೆಯಲ್ಲಿ ಎಷ್ಟು ಸೊಗಸಾಗಿ ಅಭಿವ್ಯಕ್ತವಾಗಿದೆ ! ಬೆಟ್ಟದ ತುದಿಯಲ್ಲಿರುವ ಮರಗಳಿಗೆ ನೀರು ಹಾಕಿದವರಾರು ? ಅಡವಿಯ ಮೃಗಪಕ್ಷಿಗಳಿಗೆಲ್ಲ ಆಹಾರವಿತ್ತವರಾರು ? ಕಲ್ಲೊಳಗೆ ಹುಟ್ಟಿ ಕೂಗುವ ಕಪ್ಪೆಗಳಿಗೆ ಆಹಾರ ಕೊಟ್ಟವರು ಯಾರು? ಎಂಬ ಪ್ರಶ್ನೆಗಳು 'ಬಲ್ಲಿದನು ಕಾಗಿನೆಲೆಯಾದಿಕೇಶವರಾಯ ಎಲ್ಲರನು ಸಲಹುವನು, ಇದಕೆ ಸಂಶಯವಿಲ್ಲ' ಎಂಬ ನಿಶ್ಚಲಭಕ್ತಿಗೆ ಎಷ್ಟು ಪೋಷಕವಾಗಿವೆ !

ಕವಿ ಕನಕನ ಹಾಡುಗಳಲ್ಲಿ ಸಾಕಷ್ಟು ವ್ಯಂಗ್ಯ ಉಕ್ತಿ ಚಾತುರ್ಯಗಳನ್ನು ನಾವು ಕಾಣುತ್ತೇವೆ. 'ಅಜ್ಞಾನಿಗಳ ಕೂಡೆ ಅಧಿಕ ಸ್ನೇಹಕ್ಕಿಂತ ಸುಜ್ಞಾನಿಗಳ ಕೂಡೆ ಜಗಳ ಲೇಸು' 'ತೀರ್ಥವನ್ನು ಪಿಡಿದವರೆಲ್ಲ ತಿರುನಾಮಧಾರಿಗಳೆ ? ಜನ್ಮ ಸಾರ್ಥಕವಿಲ್ಲದವರೆಲ್ಲ ಭಾಗವತರೆ ?' 'ಹಳ್ಳಹರಿದು ಹೋಗುವಾಗ ಗುಳ್ಳೆ ಬಂದು ಒಡೆಯಿತಲ್ಲ ! ಉಳ್ಳೆಪೊರೆಯಂತೆ ಕಾಣೊ ಸಂಸಾರದ ಆಟ !' ಎಂಬಂತಹ ನೂರಾರು ಉದಾಹರಣೆಗಳನ್ನು ಕೊಡಬಹುದು ಒಮ್ಮೊಮ್ಮೆ ಆತನ ಕಲ್ಪನಾಶಕ್ತಿ ಗಗನಚುಂಬಿಯಾಗಿ, ಭಾವಗಲು ಭವ್ಯತೆಗೇರುತ್ತವೆ – 'ಹಲವು ಜನುಮದಿ ತಾಯಿ ಎನಗಿತ್ತ ಮೊಲೆಹಾಲು ನಲಿದುಂಬಾಗ ನೆಲಕ್ಕೆ ಬಿದ್ದುದು ಕೂಡಿ, ಆಳೆಯ ಕ್ಷೀರಾಂಬುಧಿಗೆ ಇಮ್ಮಿಗಿಲು' ಎನ್ನುತ್ತಾನೆ ಆತ. ಈ ವಿಚಾರಧಾರೆಯನ್ನೇ ಮುಂದುವರೆಸಿ, ಮಗುವಾಗ ಜನಿಸಿದಾಗ ಅತ್ತ ಕಣ್ಣೀರೆಲ್ಲ ಸೇರಿದರೆ ಲವಣಸಮುದ್ರದ 'ಮೂರರಷ್ಟಾಗುವುದೆಂದೂ, ಆಯಾ ಜನ್ಮಗಳಲ್ಲಾದ ದೇಹಗಳ ಎಲುಬುಗಳನ್ನೆಲ್ಲ ಒಟ್ಟಿದರೆ ಮೇರುಪರ್ವತಕ್ಕೆ ನಾಲ್ಕು ಮಡಿಯಾಗುವುದೆಂದೂ ಆತ ಹೇಳುತ್ತಾನೆ. ಎಂದಮೇಲೆ ಒಂದು ಜೀವಿ ಎಷ್ಟು ಜನ್ಮಗಳನ್ನು ಎತ್ತಿ ಬಂದಿರಬೇಕು ! ಕಣ್ಣಿಗೆ ಕಟ್ಟುವಂತೆ ರೂಪಕಗಳನ್ನು ಸೃಷ್ಟಿಸುವುದರಲ್ಲಿಯೂ ಕನಕನು ಅದ್ಭುತ ಶಕ್ತಿಯನ್ನು ಪ್ರದರ್ಶಿಸಿದ್ದಾನೆ. 'ಪಂಚೇಂದ್ರಿಯಗಳೆಂಬ ಮಂಚಿಗೆಯ ಹಾಕಿರಯ್ಯಾ. ಚಂಚಲವೆಂಬ ಹಕ್ಕಿಯನ್ನು ಓಡಿಸಿರಯ್ಯ, ಉದಯಾಸ್ತಮಾನವೆಂಬ ಎರಡು ಕೊಳಗಳ ಮಾಡಿ, ಆಯುಷ್ಯದ ರಾಶಿಯನ್ನು ಅಳೆಯಿರಯ್ಯ' ಎಂದು ಹೇಳುವಲ್ಲಿ ಆತನ ಕಲ್ಪನೆ ಎಷ್ಟು ಭವ್ಯವಾಗಿದೆ. 'ಗಾಳಿ ಗೊಡ್ಡಿದ ಸೊಡರು ಈ ಸಂಸಾರ, ಸಂಸಾರವೆಂಬ ಸಾಗರವನ್ನುತ್ತಾರಿಸುವೊಡೆ ಕಂಸಾರಿ ನಾಮವೊಂದೆ ಸಾಕು 'ಹೇರೊಪ್ಪಿಸಿದ ಮೇಲೆ ಸುಂಕವೆ ?' 'ದೇವರಿಲ್ಲದ ಗುಡಿಯು ಹಾಳುಬಿದ್ದಂಗಡಿಯು' 'ಬೊಂಬೆಯಾಟವನಾಡಿಸಿದೆ ಮಹಾಭಾರತದ ಎಂಬಂತಹ ರೂಪಕಗಳಲ್ಲಿ ಆತನ ಭಕ್ತಿ, ಕಾವ್ಯಶಕ್ತಿಗಳೆರಡೂ ಮಹೋನ್ನತಿಗೇರಿದೆ.

ಅಲ್ಲಮಪ್ರಭುವಿನಂತೆ ಕನಕದಾಸನೂ ಒಗಟೆಯಂತಿರುವ ಕೆಲವು ಕೃತಿಗಳನ್ನು ರಚಿಸಿದ್ದಾನೆ. 'ಒಂಬತ್ತು ಹೂವಿಗೆ ಒಂದೇ ನಾಳವು ಚೆಂದಮಾಮ ! ತುಂಬಿ ನಾಳತುದಿ ತುಂಬಿ ಭಾನುಪ್ರಭೆ ಚೆಂದಮಾಮಾ !' ಇಂತಹ ಕೃತಿಗಳನ್ನು 'ಕನಕಮುಂಡಿಗೆ' ಎಂದು ಕರೆಯುತ್ತಾರೆ. ಮೋಡದ ಗರ್ಭದಲ್ಲಿರುವ ಮಿಂಚಿನಂತೆ ಅವುಗಳ ಅರ್ಥ ಅಕಸ್ಮಾತ್ತಾಗಿ ಆಗಬೇಕು. ಹೊರನೋಟಕ್ಕೆ ಅಸಂಬದ್ಧವಾಗಿ ಕಾಡುವ ಈ ಹಾಡುಗಳು ಸಾಂಕೇತಿಕ ಭಾಷೆಯನ್ನು ತಿಳಿದವರಿಗೆ ಗಹನವಾದ ಆಧ್ಯಾತ್ಮಿಕ ತತ್ತ್ವಗಳೆಂದು ಅರ್ಥವಾಗುತ್ತದೆ. ಆದರೆ 'ಕನಕನಾಡಿ ಗುಟ್ಟು ಆದಿಕೇಶವ ಬಲ್ಲ ಚೆಂದಮಾಮಾ !' ಸಂತ ಕವಿ ಕನಕದಾಸನು ಕನ್ನಡ ನುಡಿಯ ಒಂದು ಕೀರ್ತಿ ಧ್ವಜ.

೭. ವೈಕುಂಠದಾಸ

ವ್ಯಾಸ, ವಾದಿರಾಜ, ಪುರಂದರ, ಕನಕ – ಇವರ ಸಮಕಾಲೀನನಾದ ವೈಕುಂಠದಾಸನು ಶ್ರೀ ವೈಷ್ಣವಮತಕ್ಕೆ ಸೇರಿದವನೆಂದೂ, ಬೇಲೂರಿನ ಚೆನ್ನಕೇಶವ ಸ್ವಾಮಿಯ ಭಕ್ತನಾಗಿದ್ದು ಹಲವು ಪವಾಡಗಳನ್ನು ಮೆರೆದನೆಂದೂ ತಿಳಿದುಬರುತ್ತದೆ. 'ವೈಕುಂಠಕೇಶವ' ಎಂಬ ಅಂಕಿತದಿಂದ ಆತನು ಹಲವು ಕೀರ್ತನೆಗಳನ್ನು ಬರೆದಿದ್ದಾನೆ.

೮. ರಾಘವೇಂದ್ರ ತೀರ್ಥ

ವೈಕುಂಠದಾಸನ ತರುವಾಯ ಸುಮಾರು ಎಪ್ಪತ್ತು–ಎಂಬತ್ತು ವರ್ಷಗಳವರೆಗೆ ದಾಸಸಾಹಿತ್ಯದ ಬೆಳವಣಿಗೆ ಬಹುಮಟ್ಟಿಗೆ ಕುಂಠಿತವಾಗಿ ಹೋದಂತೆ ಕಾಣುತ್ತದೆ. ದಾಸಪರಂಪರೆಯು ಸಂಪೂರ್ಣವಾಗಿ ನಿಂತುಹೋಗಲಿಲ್ಲ; ಪ್ರತಿಭಾಶಾಲಿಗಳಾದ ಅಪರೋಕ್ಷಜ್ಞಾನಿಗಳನ್ನು ಉದಿಸಲಿಲ್ಲ. ಪುರಂದರದಾಸನ ನಾಲ್ವರು ಮಕ್ಕಳೂ ದಾಸಪರಂಪರೆಯನ್ನು ಮುಂದುವರಿಸಿದರು. ವಿಜಯೀಂದ್ರತೀರ್ಥನೂ ಆತನ ಶಿಷ್ಯ ಪರಂಪರೆಯೂ ದಾಸ ಸಾಹಿತ್ಯಕ್ಕೆ ತಮ್ಮ ಕಾಣಿಕೆ ಸಲ್ಲಿಸಿರಬೇಕು. ಸುಧೀಂದ್ರ ತೀರ್ಥರ ಶಿಷ್ಯನಾದ ರಾಘವೇಂದ್ರ ತೀರ್ಥನೂ ಈ ಕಾಲದ ಅತ್ಯಂತ ಪ್ರತಿಭಾಶಾಲಿ. ಕುಂಭಕೋಣದ ತಿಮ್ಮಪ್ಪನಿಗೆ ವೆಂಕಟೇಶನ ಅನುಗ್ರಹದಿಂದ ಜನಿಸಿದ ಈತನು 'ಸುಧಾ' ಗ್ರಂಥಕ್ಕೆ 'ಪರಿಮಳ'ವೆಂಬ ವ್ಯಾಖ್ಯಾನವನ್ನು ಬರೆದನು. ಈತನು ಸನ್ಯಾಸಿಯಾಗುವ ಮುನ್ನ ಸಂಸಾರಿಯಾಗಿ ನಾರಾಯಣ ಎಂಬ ಮಗನನು ಪಡೆದಿದ್ದನಂತೆ ! ಸನ್ಯಾಸಿಯಾದ ಮೇಲೆ ಮಂತ್ರಾಲಯದಲ್ಲಿ ಹೋಗಿ ನೆಲೆಸಿದ್ದ ಈತನು ಅಪರೋಕ್ಷಜ್ಞಾನಿಗಳಲ್ಲಿ ಅಗ್ರಗಣ್ಯನೆನಿಸದನು. ಸಂಸ್ಕೃತ ಗ್ರಂಥಗಳ ಮೂಲಕ ವ್ಯಾಸಕೂಟಕ್ಕೂ ಕನ್ನಡ ಕೀರ್ತನೆಗಳ ಮೂಲಕ ದಾಸಕೂಟಕ್ಕೂ ಸೇವೆಸಲ್ಲಿಸಿದ ಈತನು 'ವೇಣುಗೋಪಾಲ' ಎಂಬ ಅಂಕಿತವನ್ನು ಧರಿಸಿದ್ದಾನೆ. ಆತನ ಕೀರ್ತನೆಗಳಲ್ಲಿ ಬಹು ಜನಪ್ರಿಯವಾದದ್ದು 'ಇಂದು ಎನಗೆ ಗೋವಿಂದ ನಿನ್ನಯ ಪಾದಾರವಿಂದವ ತೋರೋ ಮುಕುಂದನೆ' ಎಂಬ ಹಾಡು ಸಾಹಿತಿಯಾಗಿ ಅಲ್ಲದಿದ್ದರೂ ಬ್ರಹ್ಮಜ್ಞಾನಿಯಾಗಿ ಈತನು ಅದ್ವಿತೀಯವಾದ ಕೀರ್ತಿಗೆ ಪಾತ್ರನಾಗಿದ್ದಾನೆ. 'ಮಂತ್ರಾಲಯದ ರಾಯ' ಎಂಬ ಹೆಸರಿನಿಂದ ಪ್ರಸಿದ್ಧನಾಗಿರುವ ಈತನ ಮಹಾತ್ಮ್ಯವನ್ನು ಕೇಳದ ಕನ್ನಡಿಗನಿಲ್ಲ. ಅಸಂಖ್ಯಾತ ಜನ ಆತನ ಭಕ್ತರಾಗಿ ತಮ್ಮ ಅಭೀಷ್ಟಸಿದ್ಧಿಯನ್ನು ಪಡೆಯುತ್ತಿದ್ದಾರೆ. ವಿಜಯನಗರದ ಪತನಾನಂತರ ದಕ್ಷಿಣದೇಶದಲ್ಲಿ ನಡೆಯುತ್ತಿದ್ದ ಧಾರ್ಮಿಕ ವಿಪ್ಲವವನ್ನು ತಡೆಗಟ್ಟಿದ ಕೀರ್ತಿ ಈತನದು. ಈತನ ಪ್ರಭಾವದಿಂದ ಮಂತ್ರಾಲಯದ ಸುತ್ತಮುತ್ತ ಪ್ರಸನ್ನ ವೆಂಕಟದಾಸ, ವಿಜಯದಾಸ ಮೊದಲಾದ ಹಲವು ಹರಿದಾಸರು ಏಕಕಾಲದಲ್ಲಿ ಉದಿಸಿ, ದಾಸಸಾಹಿತ್ಯದ ಪುಷ್ಟಿತುಷ್ಟಿಗಳಿಗೆ ಕಾರಣವಾದರು.

೬. ಪ್ರಸನ್ನ ವೇಂಕಟದಾಸ (ಕ್ರಿ.ಶ. ೧೬೮೦)

ಈತನು ಬಿಜಾಪುರಜಿಲ್ಲೆಯ ಬಾಗಲಕೋಟೆಯಲ್ಲಿ ಜನಿಸಿ, ಚಿಕ್ಕಂದಿನಲ್ಲಿಯೇ ತಾಯ್ತಂದೆಗಳನ್ನು ಕಳೆದುಕೊಂಡು, ತನ್ನ ಅತ್ತಿಗೆಯ ಕಾಟವನ್ನು ತಡೆಯಲಾರದೆ ತಿರುಪತಿಗೆ ಓಡಿಹೋದನಂತೆ! ನಿರಕ್ಷರಕುಕ್ಷಿಯಾದ ಈತ ವೆಂಕಟರಮಣ ಸ್ವಾಮಿಯ ಅನುಗ್ರಹದಿಂದ ಕವಿತಾ ಶಕ್ತಿಯನ್ನು ಪಡೆದು 'ಪ್ರಸನ್ನ ವೆಂಕಟ ಕೃಷ್ಣ' ಎಂಬ ಅಂಕಿತದಿಂದ ಹಲವು ಕೀರ್ತನೆಗಳನ್ನು ರಚಿಸಿದನೆಂದು ಹೇಳುತ್ತಾರೆ. 'ಅರಿಗಳೇ ಸಖರಕ್ಕು ಅತಿವಿಷಾಮೃತವಕ್ಕು, ಉರಗ ಪೂಮಾಲೆಯಕ್ಕು, ಶರಧಿ ಗೋಷ್ಪದವಕ್ಕು, ಶರಘಾತ ಬಂಡಕ್ಕು, ನರಹರಿಯ ನಾಮವನ್ನು ನಂಬಿ ಭಜಿಪರಿಗೆ' ಎಂಬ ನಂಬುಗೆಯಿಂದ ಬಾಳಿ, ಆ ನಂಬುಗೆಯನ್ನು ಇತರರಿಗೂ ಹಂಚಿಕೊಟ್ಟ ದೊಡ್ಡ ಜೀವ ಈತನದು. ಈತನು ಭಾಗವತ ದಶಮಸ್ಕಂಧವನ್ನು ಹಾಡು, ದ್ವಿಪದಿ, ವೃತ್ತಗಳಾಗಿ ಕನ್ನಡಿಸಿದ್ದಾನೆ. ಶ್ರೀ ಕೃಷ್ಣನ ಬಾಲಲೀಲೆಯಲ್ಲಿನ ಬಾಲ ಭಾಷೆ ಹೃದ್ಯವಾಗಿದೆ – 'ಯಶೋಧೆಯಮ್ಮ ನಂಗನ್ನೆತ್ತಿಕೋ ಅಮ್ಮ! ಒತ್ತಿ ಬಲು ಅತ್ತು ಬಂದೀನೆ ನಾ (ಹೊಟ್ಟೆ ಬಲು ಹಸ್ತು ಬಂದೀವೆ ನಾ)' ಎಂದು ಹಾಡುವಲ್ಲಿ ದಾಸನ ಹೃದಯ ಮಗುವಿನಷ್ಟೆ ಮುಗ್ಧವಾಗಿರಬೇಕೆನ್ನಿಸುತ್ತದೆ. ಈತನ ಭಾಷೆ ಉತ್ತರ ಕರ್ಣಾಟಕದ್ದು. ಅಲ್ಲಿ ಈತನ ಕೀರ್ತನೆಗಳು ಬಹು ಜನಪ್ರಿಯವಾಗಿವೆಯಂತೆ!

೧೦. ವಿಜಯದಾಸ (ಕ್ರಿ.ಶ. ೧೬೮೩–೧೭೫೫)

ಈತನು ಪ್ರಸನ್ನವೆಂಕಟದಾಸನ ಸಮಕಾಲೀನ; ರಾಯಚೂರು ಜಿಲ್ಲೆಯ ಒಂದು ಹಳ್ಳಿಯಲ್ಲಿದ್ದ ಶ್ರೀನಿವಾಸ–ಕೂಸಮ್ಮ ಎಂಬ ಬಡದಂಪತಿಗಳ ಹಿರಿಯ ಮಗ; ಹೆಸರು ದಾಸಪ್ಪ ಎಂದು. ಶುದ್ಧ ದಡ್ಡನಾಗಿದ್ದ ಇವನನ್ನು ಹುಡುಗರೆಲ್ಲ 'ಕೂಸೀ ಮಗ ದಾಸ' ಎಂದು ಗೇಲಿಮಾಡುತ್ತಿದ್ದರು. ಹುಡುಗನಾಗಿದ್ದಾಗಲೆ ಇವನು ಗೃಹತ್ಯಾಗಿಯಾಗಿ ಕಾಶಿಗೆ ಓಡಿಹೋದ. ಅಲ್ಲಿ ಒಂದು ರಾತ್ರಿ ಕನಸಿನಲ್ಲಿ ಇವನಿಗೆ ಪುರಂದರದಾಸರು ಕಾಣಿಸಿಕೊಂಡು, ಅವನ ನಾಲಗೆಯ ಮೇಲೆ ಬೀಜಾಕ್ಷರ ಬರೆದರಂತೆ! ಅಂದಿನಿಂದ ಅವನು ಆಡಿದ್ದೆಲ್ಲ ಹಾಡಾಯಿತು. 'ಹಯವದನವಿಠಲ' ಎಂಬ ಅಂಕಿತದಿಂದ ಅನೇಕ ಹಾಡುಗಳನ್ನು ರಚಿಸಿ, ಈತ ಕೀರ್ತಿಶಾಲಿಯಾದ. ತನ್ನ ಅಂತರಂಗದಲ್ಲಿ ಜ್ಯೋತಿ ಬೆಳಗಿದಂದು ಆತ 'ಅಂತರಂಗದ ಕದವು ತೆರೆಯಿತಿಂದು' ಎಂದು ಹೇಳಿಕೊಂಡು, ಸದಾ ಸಾನ್ನಿಧ್ಯವನ್ನು ಕರುಣಿಸುವಂತೆ ಹರಿಯನ್ನು ಬೇಡುತ್ತಾನೆ. 'ಸದಾ ಎನ್ನ ಹೃದಯದಲ್ಲಿ ವಾಸಮಾಡೋ ಶ್ರೀಹರಿ' ಎಂದು ಆರಂಭಿಸಿ 'ನಿನ್ನ ನಾನು ಬಿಡುವವನಲ್ಲ, ಎನ್ನ ನೀನು ಬಿಡಲು ಸಲ್ಲ' ಎಂದು ಮುಕ್ತಾಯಮಾಡುತ್ತಾನೆ. ಈತನು ಅಸಂಖ್ಯಾತ ಸುಳಾದಿಗಳನ್ನು ಬರೆದಿದ್ದಾನೆ. ಈತನ ಕೀರ್ತನೆಗಳು ಅರ್ಥಗರ್ಭಿತವಾಗಿ ತತ್ತ್ವ ಬೋಧಕವಾಗಿವೆ.

೧೧. ಗೋಪಾಲದಾಸ (ಕ್ರಿ.ಶ. ೧೭೨೨–೧೭೬೫)

ಈತ ರಾಯಚೂರು ಜಿಲ್ಲೆಯ ಮೊಸರುಕಲ್ಲು ಎಂಬ ಊರಿನಲ್ಲಿ ಮುರಾರಿ ರಾಯ ವೆಂಕಮ್ಮ ಎಂಬ ಬಡದಂಪತಿಗಳ ಹಿರಿಯ ಮಗನಾಗಿ, ಭಾಗಣ್ಣ ಎಂಬ ಹೆಸರಿನಿಂದ ಜನಿಸಿದ. ಬಾಲಕನಾದ ಭಾಗಣ್ಣ ಒಮ್ಮೆ ಭಗವಂತ ಚಿಂತನೆಯಲ್ಲಿ ಮೈಮರೆದು ಕೆಳಗೆ ಮಲಗಿರುವಾಗ ನಾಗರ ಹಾವೊಂದು ಆತನ ಮೈ ಮೇಲೆಲ್ಲ ಹರಿದಾಡಿತಂತೆ! ಅದನ್ನು ಕಂಡ ಜನ ಆತನನ್ನು ಮಹನೀಯ ಎಂದರು. ಅದಕ್ಕೆ ಅಂದಿನಿಂದ ಆತನಲ್ಲಿ ಮಹತ್ತು ಕಾಣಿಸಿಕೊಂಡಿತು. ಹರಿಕೀರ್ತನೆ ಆತನ ಬಾಯಿಂದ ಹರಿದುಬರಲಾರಂಭಿಸಿತು. ಇದನ್ನು ಕಂಡ ವಿಜಯದಾಸನು ಈತನಿಗೆ ದಾಸದೀಕ್ಷೆಯನ್ನು ಕೊಟ್ಟು 'ಗೋಪಾಲವಿಠಲ' ಎಂಬ ಅಂಕಿತವನ್ನು ನೀಡಿದರು. ದೀಕ್ಷೆ ವಹಿಸಿದ ಭಾಗಣ್ಣ ಗೋಪಾಲದಾಸನಾದನು. 'ಭಕ್ತಿಯಲಿ ಭಾಗಣ್ಣ' ಎಂದು ಜನ ಆತನನ್ನು ಕೀರ್ತಿಸಿದರು.

ಭವರೋಗದಿಂದ ತನ್ನನ್ನು ಉದ್ಧರಿಸುವಂತೆ ಪ್ರಾರ್ಥಿಸುತ್ತಾ ಆತನು 'ಆವ ರೋಗವು ಎನಗೆ ದೇವ ಧನ್ವಂತ್ರಿ ? ಸಾವಧಾನದಿ ಎನ್ನ ಕೈಹಿಡಿದು ನೋಡಯ್ಯ' ಎಂದು ಹೇಳಿ ತನ್ನ ರೋಗದ ಸ್ವರೂಪವನ್ನು ವಿಷವರಿಸುತ್ತಾನೆ. 'ಹರಿಮೂರ್ತಿಗಳು ಎನ್ನ ಕಂಗಳಿಗೆ ಕಾಣಿಸವು, ಹರಿಯ ಕೀರ್ತನೆ ಕೇಳಿಸದೆನ್ನ ಕಿವಿಗೆ, ಹರಿಯ ಮಂತ್ರಸ್ತೋತ್ರ ಬಾರದು ಎನ್ನ ನಾಲಗೆಗೆ, ಹರಿಪ್ರಸಾದ ಜಿಹ್ವೆಗೆ ಸವಿಯಾಗದಯ್ಯ' ಎಂದು ಮುಂತಾಗಿ ಹೇಳುತ್ತಾನೆ. 'ಏನ ಬೇಡಲಿ ನಿನ್ನ ಬಳಿಗೆ ಬಂದು ?' ಎಂದು ದೇವರನ್ನು ಪ್ರಶ್ನಿಸಿದ ಈತ ತಾಯಿ ತಂದೆ ಧನ ಪುತ್ರ ಅಧಿಕಾರಗಳಿಂದ ಸುಖ ದಕ್ಕದೆಂಬುದನ್ನು ಸೋದಾಹರಣವಾಗಿ ವಿವರಿಸಿ, 'ಬೇಡದವಂತೆ ಪರರ ಮಾಡೆನ್ನ ದೊರೆಯೆ' ಎಂದು ಮುಕ್ತಾಯ ಮಾಡುವುದು ಯುಕ್ತಿ ಯುಕ್ತವಾಗಿ ಮನೋಹರವಾಗಿದೆ. ಗೋಪಾಲದಾಸನ ಮೂವರು ತಮ್ಮಂದಿರೂ ಆತನ ಶಿಷ್ಯರಾಗಿ ದಾಸದೀಕ್ಷೆ ವಹಿಸಿದರು. ಹದಿನೆಂಟನೆ ಶತಮಾನದ ಹರಿದಾಸರಲ್ಲಿ ಅಗ್ರಗಣ್ಯನಾದ ಜಗನ್ನಾಥದಾಸನೂ ಕವಯತ್ರಿ ಹೆಳವನಕಟ್ಟೆ ಗಿರಿಯಮ್ಮನೂ ಈತನ ಶಿಷ್ಯವರ್ಗಕ್ಕೆ ಸೇರಿದವರು.

೧೨. ಜಗನ್ನಾಥದಾಸ (ಕ್ರಿ.ಶ. ೧೭೨೮-೧೮೦೯)

ರಾಯಚೂರು ಜಿಲ್ಲೆಯ ಬ್ಯಾಗವಟ್ಟೆ ಗ್ರಾಮದಲ್ಲಿ ಕರಣಿಕನಾಗಿದ್ದ ನರಸಪ್ಪ ಮತ್ತು ಆತನ ಮಡದಿ ಲಕ್ಷ್ಮೀಬಾಯಿ ಇವರಿಗೆ ಶ್ರೀನಿವಾಸನ ಅನುಗ್ರಹದಿಂದ ಜನಿಸಿದ ಮಗ ಶ್ರೀನಿವಾಸ ಈತನು ಮಂತ್ರಾಲಯದಲ್ಲಿ ಸಂಸ್ಕೃತ ಪ್ರೌಢ ಶಿಕ್ಷಣ ಪಡೆದು 'ಆಚಾರ್ಯ'ನೆಂಬ ಬಿರುದನ್ನು ಪಡೆದನು. ವಿದ್ಯೆ, ಬುದ್ಧಿ, ಕೀರ್ತಿಗಳೊಡನೆ ಸಾಕಷ್ಟು ಶ್ರೀಮಂತಿಕೆಯನ್ನು ಗಳಿಸಿಕೊಂಡ ಶ್ರೀನಿವಾಸನು ಅಹಂಕಾರಿಯಾಗಿ, ವಾದದಲ್ಲಿ ಇದಿರಾದವರನ್ನೆಲ್ಲ ಸೋಲಿಸ ಹೊರಟನು. ಒಮ್ಮೆ ವಿಜಯದಾಸನನ್ನು ಸಂಧಿಸಿದಾಗ ಈತನು ಆತನನ್ನು 'ಕೂಸೀ ಮಗ ದಾಸವೇಷದಿಂದ ಜನರಿಗೆ ಮೋಸಮಾಡುವವ' ಎಂದು ಹೇಳಿ ಅವಮಾನ ಮಾಡಿದನು. ಇದರ ಫಲವಾಗಿ ಶ್ರೀನಿವಾಸನಿಗೆ ಕ್ಷಯರೋಗ ಬಂತು. ಅದರ ನಿವಾರಣೆಗಾಗಿ ವಿಜಯದಾಸನಿಗೇ ಶರಣಾಗಬೇಕಾಯಿತು. ಆತನ ಅಪ್ಪಣೆಯಂತೆ ಶ್ರೀನಿವಾಸನು ಗೋಪಾಲದಾಸನನ್ನು ಆಶ್ರಯಿಸಿ, ಆತನು ಅಭಿಮಂತ್ರಿಸಿಕೊಟ್ಟ ಜೋಳದ ರೊಟ್ಟಿಯೊಂದನ್ನು ತಿಂದು ಕ್ಷಯರೋಗದೊಡನೆ ಭವರೋಗವನ್ನೂ ಕಳೆದುಕೊಂಡನು. ಆತನ ಮನಸ್ಸು ಭಕ್ತಿಯ ಕಡೆ ಬಾಗಿ, ಆತನು ಹರಿದಾಸನಾದನು. ಗುರುವಿನ ಅಪ್ಪಣೆಯಂತೆ ಆತನು ಪಂಢರಪುರಿಗೆ ಹೋಗಿ, ಚಂದ್ರಭಾಗಾ ನದಿಯಲ್ಲಿ ಸ್ನಾನಮಾಡುತ್ತಿರುವಾಗ 'ಜಗನ್ನಾಥ ವಿಠಲ' ಎಂಬ ಅಂಕಿತವನ್ನು ಬರೆದಿದ್ದ ಕಲ್ಲೊಂದು ಅಲ್ಲಿ ಸಿಕ್ಕಿತು, ಆತನಿಗೆ. ಅಂದಿನಿಂದ ಆತನು ಜಗನ್ನಾಥದಾಸನಾಗಿ, ದೈವದತ್ತವಾದ ಅಂಕಿತದಲ್ಲಿ ದಿವ್ಯ ನಾಮಸಂಕೀರ್ತನೆ ಮಾಡುತ್ತಾ ಹೊರಟನು.

ಜಗನ್ನಾಥನ ಪಾಂಡಿತ್ಯ ಪ್ರತಿಭೆಗಳು ಮಹೋಜ್ವಲವಾದವು. ಆತನ 'ಹರಿಕಥಾಮೃತಸಾರ'ವು ಒಂದು ಸಹಸ್ರ ಪದ್ಯಗಳನ್ನು ಒಳಗೊಂಡು ಮೂವತ್ತೆರಡು ಸಂಧಿಗಳಷ್ಟು ವಿಸ್ತಾರವಾಗಿದೆ. ಇಲ್ಲಿನ ಮಾಧ್ವಮತ ತತ್ತ್ವ ನಿರೂಪಣೆ ಪ್ರಮಾಣಭೂತವಾದುದು. ಇದನ್ನು ದ್ವೈತಸಿದ್ಧಾಂತದ ಒಂದು ಪುಟ್ಟ ಕೋಶವೆನ್ನಬಹುದು. ಜಗನ್ನಾಥದಾಸನು ಇಲ್ಲಿನ ಪ್ರಭುಸಮ್ಮಿತವನ್ನು ಕಾಂತಾಸಮ್ಮಿತವಾಗಿ ಮಾಡಲು ಯತ್ನಿಸಿ ಬಹುಮಟ್ಟಿಗೆ ಕೃತಕೃತ್ಯನಾಗಿದ್ದಾನೆ. ಶ್ರೀಹರಿಯು ಎಂತಹ ಕರುಣಾಮಯನೆಂಬುದನ್ನು ವರ್ಣಿಸುತ್ತಾ–

ಮಲಗಿ ಪರಮಾದರದಿ ಪಾಡಲು ! ಕುಳಿತು ಕೇಳುವ, ಕುಳಿತು ಪಾಡಲು
ನಿಲುವ, ನಿಂತರೆ ನಲಿವ ನಲಿದರೆ ಒಲಿವ ನಿಮಗೆಂಬ
ಸುಲಭನೊ ಹರಿ, ತನ್ನ ವರನೆ । ಘಳಿಗೆ ಬಿಟ್ಟಗಲನೊ ......

ಇತ್ಯಾದಿಯಾಗಿ ಹೇಳಿರುವುದು ಸುಲಭವಾಗಿರುವಷ್ಟೆ ಹೃದಯಂಗಮವಾಗಿದೆ. ಭಗವಂತನ ಸ್ಮರಣೆಗೆ ಮಡಿ ಮೈಲಿಗೆಗಳ ಆತಂಕ ಬೇಡ–

ಮಕ್ಕಳಾಡಿಸುವಾಗ, ಮಡದಿಯೊ । ಳಕ್ಕರದಿ ನಲಿವಾಗ, ಹಯ ಪ
ಲ್ಲಕ್ಕಿಗಜ ಮೊದಲಾದ ವಾಹನವೇರಿ ಮೆರೆವಾಗ
ಬಿಕ್ಕುವಾಗಾಕಳಿಸುತಲಿ ದೇ । ವಕ್ಕಿತನಯನ ಸ್ಮರಿಸುತಿಹ ನರ
ಸಿಕ್ಕನೋ ಯಮದೂತರಿಗೆ ಆವಲ್ಲಿ ನೋಡಿದರು

ದ್ವೈತಮತಪ್ರತಿಪಾದನೆಯಲ್ಲಿ ತೊಡಗಿದ್ದರೂ ಜಗನ್ನಾಥದಾಸನ ದೃಷ್ಟಿ ಉದಾತ್ತ, ಉದಾರ ಸರ್ವಜನಸಮ್ಮತ – 'ಆವ ಕುಲದವನಾದಡೇನಿ ನ್ನಾವ ದೇಶದೊಳಿದ್ದಡೇನಿ । ನ್ನಾವ ಕರ್ಮವ ಮಾಡಲೇನಿನ್ನಾವ ಕಾಲದಲಿ' ದೇವರನ್ನು ಸ್ತೋತ್ರ ಮಾಡುವವರೆಲ್ಲ ಉದ್ಧಾರವಾಗುತ್ತಾರೆ. ದೇವರು ಎಲ್ಲಿಲ್ಲ? 'ಎಲ್ಲಿ ಕೇಳಿದರೆಲಿ ನೋಡಿದ । ರೆಲ್ಲಿ ಬೇಡಿದರೆಲ್ಲಿ ನೀಡಿದರೆಲ್ಲಿ ಓಡಿದರೆಲ್ಲಿಯಾಡಿದರೆಲ್ಲಿ ಇರುತಿಹನು' ಭಾಮಿನೀಷಟ್ಪದಿಯಲ್ಲಿ ನಿರರ್ಗಳವಾಗಿ ಹರಿಯುತ್ತಿರುವ ಈ ತತ್ತ್ವಪ್ರತಿಪಾದಕ ಕಾವ್ಯದಲ್ಲಿ ಹೃದಯಂಗಮವಾದ ಉಪಮೆಗಳು ಮೇಲಿಂದಮೇಲೆ ಕಾಣಿಸಿಕೊಂಡು ಓದುಗರನ್ನು ಆನಂದಪಡಿಸುತ್ತವೆ. ಉಪಮೆ ಮತ್ತು ದೃಷ್ಟಾಂತಗಳ ಮೂಲಕ ಗಹನವಾದ ವೇದಾಂತ ತತ್ತ್ವಗಳನ್ನು ಸುಲಿದ ಬಾಳೆಯ ಹಣ್ಣಿನಂತೆ ಸುಲಭ ಗ್ರಾಹ್ಯವಾಗಿ ಮಾಡುತ್ತಾನೆ. ಕವಿ ಜಗನ್ನಾಥ.

ಜಗನ್ನಾಥದಾಸನು ತಮ್ಮ ಕೀರ್ತನೆಗಳಲ್ಲಿ ಒಬ್ಬ ಸವ್ಯಸಾಚಿಯಾಗಿದ್ದಾನೆ. ಈತನ ಸುಮಾರು ಇನ್ನೂರು ಕೀರ್ತನೆಗಳು ಈಗ ಉಪಲಬ್ಧವಾಗಿವೆ. ಇವುಗಳಲ್ಲಿ ಬಹುಭಾಗ ಭಗವಂತ ಮತ್ತು ಭಾಗವತರ ಸ್ತೋತ್ರವಾಗಿವೆ. 'ದಾಸೋಹ ತವ ದಾಸೋಹ' ಎಂಬ ಕೀರ್ತನೆ ಮೊದಲಿಂದ ಕಡೆಯವರೆಗೆ ಸಂಸ್ಕೃತಮಯವಾಗಿದೆ. ಆತನು ಆಗಾಗ ಪ್ರಾಸಪ್ರಿಯನಾಗುವುದೂ ಉಂಟು – 'ವ್ಯಾಸಗುಪ್ತ, ಜಗದಾಪ್ತ, ದೋಷನಿರ್ಲಿಪ್ತ, ತೃಪ್ತಗತಸುಪ್ತ, ಸುಷುಪ್ತ' ಇತ್ಯಾದಿ. ಈತನ ಕೀರ್ತನೆಗಳಲ್ಲಿ ಭಾವನಾಂಶಕ್ಕಿಂತಲೂ ಹೆಚ್ಚಾಗಿ ಚಿಂತನಾಂಶವಿದೆ. 'ರಂಗ ನಿನ್ನ ಕೊಂಡಾಡುವ ಮಂಗಳಾತ್ಮರ ! ಸಂಗಸುಖವನಿತ್ತು ಕಾಯೊ ಕರುಣಾಸಾಗರ' ಎಂಬ ಕೀರ್ತನೆಯಲ್ಲಿ ಭಾಗವತಸ್ವರೂಪ ಮನೋಹರವಾಗಿ ಚಿತ್ರಿತವಾಗಿದೆ. ಭಕ್ತರು 'ಕಂಡ ಕಂಡಲ್ಲಿ ವಿಶ್ವರೂಪ ಕಾಂಬರು । ಉಂಡು ಉಣಿಸಿದ್ದೆಲ್ಲ ನಿನ್ನ ಯಜ್ಞವೆಂಬರು ! ಬಂಡುಣಿಯಂದದಿ ನಾಮಾಮೃತವನುಂಬರು ! ಹೆಂಡಿರು ಮಕ್ಕಳು ನಿನ್ನ ತೊಂಡನೆಂಬರು 'ಎಂಬಲ್ಲಿ ವ್ಯಾಪ್ತೋಪಾಸನೆ ಸ್ಪಷ್ಟವಾಗಿ ವ್ಯಾಕ್ತವಾಗಿದೆ. 'ಅರಿತವರಿಗತಿ ಸುಲಭ ಹರಿಯ ಪೂಜೆ' ಎಂಬ ಕೃತಿಯಲ್ಲಿ ಸರ್ವಸಮರ್ಪಣಭಾವ ದಿವ್ಯವಾಗಿ ಪ್ರಕಟಗೊಂಡಿದೆ; ವಿರಾಟಪೂಜೆಯ ದಿಗ್ದರ್ಶನವಾಗುತ್ತದೆ.

ಜಗನ್ನಾಥದಾಸನು ಕೀರ್ತನೆ ಸುಳಾದಿಗಳನ್ನು ಮಾತ್ರವೇ ಅಲ್ಲದೆ, ತ್ರಿಪದಿಯ ಛಂದಸ್ಸಿನಲ್ಲಿ ಭಕ್ತಿಭರಿತವಾದ 'ತತ್ತ್ವಸುವಾಲಿ'ಗಳನ್ನೂ ವಿಷ್ಣುಸ್ತುತಿರೂಪವಾದ ಇಪ್ಪತ್ತೇಳು ನುಡಿಗಳನ್ನು ಒಳಗೊಂಡ 'ತಂತ್ರಸಾರ'ವನ್ನೂ ರಚಿಸಿದ್ದಾನೆ. ಅವು ಅತ್ಯಂತ ಸರಳವಾಗಿ ಸುಲಭಗ್ರಾಹ್ಯವಾಗಿವೆ. 'ಉಂಡು ಉಟ್ಟದ್ದೆಲ್ಲ ರಂಗನ ಸೇವೆಯನ್ನಿ । ಕಂಡ । ಕಂಡದ್ದು ಹರಿಪ್ರೀತಿಯೆನ್ನಿ । ಹರಿಪ್ರೀತಿಯೆನ್ನಿ ಮೂರ್ಲೋಕಕ್ಕೆ ಪಾಂಡವಪ್ರಿಯನೆ ದೊರೆಯೆನ್ನಿ' ಇಂತಹ ಸರಳನುಡಿಗಳು ಹೃದ್ಯವಾಗಿದೆ.

ಜಗನ್ನಾಥದಾಸನನ್ನು 'ರಂಗನೊಲಿದ ದಾಸ' ಎಂದು ಕರೆದು ಗೌರವಿಸಿದ್ದಾರೆ. ಆತನು ರಂಗೋಲಿಯಲ್ಲಿ ದೇವರ ಆಕಾರಗಳನ್ನು ಬಹು ಸುಂದರವಾಗಿ ನಿರ್ಮಿಸುತ್ತಿದ್ದುದರಿಂದ 'ರಂಗೋಲೆದಾಸ' ಎಂಬ ಅಡ್ಡಹೆಸರೂ ಇತ್ತಂತೆ ! ಆತನು ಭಾಗವತೋತ್ತಮನಾಗಿ ಬಾಳಿ, ತನ್ನ ಶಿಷ್ಯ ಸಮುದಾಯದ ಮೂಲಕ ದಾಸಸಾಹಿತ್ಯ ಮುಂದುವರಿಯುವಂತೆ ಮಾಡಿ, ಕನ್ನಡ ಸಾಹಿತ್ಯ ಸಂಸ್ಕೃತಿಗಳ ಇತಿಹಾಸದಲ್ಲಿ ಅಮರನಾಗಿದ್ದಾನೆ.

ವೈದಿಕ ಕವಿಗಳು

ಒಡೆಯರ ಕಾಲದ ಕನ್ನಡಸಾಹಿತ್ಯ

ವನಿತೆಯರಂತೆ, ಲತೆಯಂತೆ ಕವಿಯೂ ಆಶ್ರಯಹೀನನಾದರೆ ಶೋಭಿಸನು, ನಿಜ. ಜಗತ್ತಿನಲೆಲ್ಲ ಸಾಹಿತ್ಯ ಕಲೆಗಳು ಉಳಿದು ಬೆಳೆದು ಬಂದಿರುವುದು, ಅರಮನೆ ಗುರುಮನೆಗಳ ಆಶ್ರಯದಲ್ಲಿಯೆ. ಕನ್ನಡ ಸಾಹಿತ್ಯವೂ ಇದಕ್ಕೆ ಹೊರತಲ್ಲ. ಅದರ ಅರುಣೋದಯವಾಗಿರುವುದೇ ನೃಪತುಂಗರಾಜನ ಆಸ್ಥಾನದಲ್ಲಿ. ದೊಡ್ಡ ಕವಿಗಳ ತಂಡವೇ ಆತನ ಶ್ವೇತಚ್ಛತ್ರದ ನೆರಳನ್ನು ಆಶ್ರಯಿಸಿತ್ತೆಂಬುದನ್ನು ನಾವೀಗಾಗಲೇ ನೋಡಿದ್ದೇವೆ. ಪಂಪಯುಗದ ಕವಿಗಳೆಲ್ಲರೂ ರಾಜರನ್ನು ಆಶ್ರಯಿಸಿದ್ದವರೇ. ಹರಿಹರಯುಗದಲ್ಲಿಯೂ ಚಂಪೂ ಕಾವ್ಯಗಳನ್ನು ಬರೆದವರಲ್ಲಿ ಬಹುಪಾಲು ಕವಿಗಳು ರಾಜಾಶ್ರಯದಲ್ಲಿದ್ದವರೇ. ೧೪ನೆಯ ಶತಮಾನದಲ್ಲಿ ವಿಜಯನಗರ ಸ್ಥಾಪಿತವಾದ ಮೇಲೆ ಅದು ಕವಿಗಳಿಗೆ ಆಶ್ರಯಸ್ಥಾನವಾಯಿತು. ೧೬ನೆಯ ಶತಮಾನದಲ್ಲಿ ಆ ರಾಜ್ಯ ಪತನವಾದ ಮೇಲೆ, ದಕ್ಷಿಣದಲ್ಲಿ ಪ್ರಬಲವಾಗಿ ಬೆಳೆದು ನೆಲೆಯಾಗಿನಿಂತ ಮೈಸೂರರಸರು ಕನ್ನಡಕವಿಗಳಿಗೆ ಆಶ್ರಯದಾತರಾದರು.

ಮೈಸೂರು ಒಡೆಯರ ಚರಿತ್ರೆ ೧೭ನೆಯ ಶತಮಾನದಿಂದ ಆರಂಭವಾಗುತ್ತದೆ. ಕ್ರಿ.ಶ. ೧೬೧೦ ರಲ್ಲಿ ರಾಜ ಒಡೆಯರು ಶ್ರೀರಂಗಪಟ್ಟಣದಲ್ಲಿ ಪಟ್ಟಾಭಿಷಿಕ್ತರಾಗಿ, ಸ್ವತಂತ್ರ ರಾಜರಾದರು. ಅವರ ದಂಡನಾಯಕನಾದ ತಿರುಮಲಾರ್ಯನು 'ಕರ್ಣವೃತ್ತಾಂತಕಥೆ'ಯನ್ನು ಸಾಂಗತ್ಯದಲ್ಲಿ ಬರೆದನು. ರಾಜಒಡೆಯರ ನಂತರ ಪಟ್ಟಕ್ಕೆ ಬಂದ ಚಾಮರಾಜ ಒಡೆಯರು (ಕ್ರಿ.ಶ. ೧೬೧೭-೧೬೩೭) 'ಚಾಮರಾಜೋಕ್ತಿವಿಲಾಸ' 'ಮಣಿಪ್ರಕಾಶ' ಎಂಬ ಎರಡು ಗ್ರಂಥಗಳನ್ನು ಬರೆದಂತೆ ಪ್ರತೀತಿ 'ಚಾಮರಾಜೋಕ್ತಿವಿಲಾಸ'ವು ಕನ್ನಡಗದ್ಯ ರಾಮಾಯಣಗಳಲ್ಲಿ ಮೊದಲನೆಯದು. ಬಹುಶಃ ವಿರೂಪಾಕ್ಷನೆಂಬ ಪಂಡಿತ ಇದನ್ನು ರಾಜನ ಹೆಸರಿನಲ್ಲಿ ಬರೆದಿರಬಹುದು. 'ಮಣಿ ಪ್ರಕಾಶ 'ಸ್ಕಾಂದಪುರಾಣಾಂತರ್ಗತ ಬ್ರಹ್ಮೋತ್ತರಖಂಡದ ವ್ಯಾಖ್ಯೆ. ರಾಜನ ಆಶ್ರಯದಲ್ಲಿದ್ದ ರಾಮಚಂದ್ರ ಎಂಬುವನು ಶಾಲಿಹೋತ್ರನ ಅಶ್ವಶಾಸ್ತ್ರವನ್ನು ಕನ್ನಡಕ್ಕೆ ಭಾಷಾಂತರಿಸಿದ್ದಾನೆ. ಇದು ಲಲಿತವಾದ ಗದ್ಯದಲ್ಲಿದೆ. ರಾಜನ ಮತ್ತೊಬ್ಬ ಆಶ್ರಿತ ಪದ್ಮಣ ಪಂಡಿತನು 'ಚಾಮರಾಜೀಯ' ಎಂಬ ಹೆಸರಿನಿಂದ 'ಹಯಸಾರಸಮುಚ್ಚಯ'ವನ್ನು ಕಂದದಲ್ಲಿ ಬರೆದಿದ್ದಾನೆ.

ಮೈಸೂರರಸರಲ್ಲಿ ಕಂಠೀರವನರಸರಾಜರ (೧೬೩೮-೧೬೫೯) ಕಾಲ ರಾಜ್ಯ ವಿಸ್ತರಣೆಯಂತೆ ಸಾಹಿತ್ಯಗೋಷ್ಠಿಯ ವಿಸ್ತರಣೆಯೂ ನಡೆದ ಕಾಲ. ಅರಮನೆಯಲ್ಲಿ ಚಿತ್ರಶಾಲೆ, ನಾಟಕ ಶಾಲೆಗಳು ಹುಟ್ಟಿಕೊಂಡವು. ಕವಿ ವಾದಿ, ವಾಗ್ಮಿಗಳಿಗೆ ಆತನ ಆಸ್ಥಾನದಲ್ಲಿ ಪುರಸ್ಕಾರ ದೊರೆಯಿತು. ರಾಜಾಶ್ರಯದಲ್ಲಿದ್ದ ಭಾಸ್ಕರಕವಿ 'ಬೇಹಾರಗಣಿತ' ಬರೆದನು. 'ಸರಸಂ, ಸತ್ಕವಿ ವಲ್ಲಭಂ' ಆದ ಈತನಲ್ಲಿ ಕವಿತಾಶಕ್ತಿಗಿಂತ ಶಾಸ್ತ್ರಪರಿಣತಿ ಹೆಚ್ಚಾಗಿದೆ. ರಾಜನ ಆಶ್ರಯದಲ್ಲಿದ್ದ ಮತ್ತೊಬ್ಬ ಕವಿ ಗೋವಿಂದವೈದ್ಯನು 'ಕಂಠೀರವ ನರಸರಾಜವಿಜಯ'ವನ್ನು ಸಾಂಗತ್ಯದಲ್ಲಿ ಬರೆದಿದ್ದಾನೆ. 'ನಾ ವಿಷ್ಣುಃ ಪೃಥ್ವಿವೀಪತಿಃ ಎಂಬ ಶ್ರುತಿವಾಕ್ಯವಿರುವುದರಿಂದ ಈತನ ಕಾವ್ಯವನ್ನು ನರಸ್ತುತಿಯೆಂದು ತೆಗಳಕೂಡದಂತೆ ತನ್ನ ಕಾವ್ಯ 'ಸೊಕ್ಕುಜವ್ವನೆಯ ತೆಕ್ಕೆಯ ಸವಿಯಂದದೆ' ಮನೋಹರವೆನ್ನುತ್ತಾನೆ, ಆತ ಇದು ಕಂಠೀರವ ನರಸರಾಜನ ದಿಗ್ವಿಜಯ ಪರಂಪರೆಯನ್ನು ಚಿತ್ರಿಸಹೊರಟಿದೆ. ಆದ್ದರಿಂದ ವೀರರಸಪ್ರಧಾನವಾಗಿರುವುದು ಸಹಜವಾಗಿಯೆ ಇದೆ. ಅಂದಿನ ಯುದ್ಧಪದ್ಧತಿ, ಪಾಳೆಯ ರಚನೆ, ಉಡುಪುಗಳು, ಆಯುಧಗಳು, ಇತ್ಯಾದಿಗಳ ವಿಸ್ತೃತವರ್ಣನೆ ಇಲ್ಲಿ ದೊರೆಯುತ್ತದೆ. ಇದರಲ್ಲಿ ಬರುವ ಮದನಮೋಹಿನಿಯ ಪ್ರಸಂಗ ಅಪ್ರಾಸಂಗಿಕವಾದರೂ ಮನೋಹರವಾಗಿದೆ. ಕಾವ್ಯದಲ್ಲಿ

ಅಲ್ಲಲ್ಲೆ ಬರುವ ವಿವಿಧ ವರ್ಣನೆಗಳು ಸುಂದರವಾಗಿವೆ. ಕವಿಯು ಅನೇಕ ಉರ್ದು ಪದಗಳನ್ನು ಬಳಸುವುದರ ಮೂಲಕ ಆ ಕಾಲದ ಭಾಷಾಸ್ವರೂಪಕ್ಕೆ ಕನ್ನಡಿ ಹಿಡಿದಿದ್ದಾನೆ. ಇಡೀ ಪದ್ಯವನ್ನೆ ಉರ್ದುವಿನಲ್ಲಿ ಬರೆದಿರುವುದೂ ಉಂಟು. ಕನ್ನಡದಲ್ಲಿ ಇಂದು ಗುರುತು ಹಿಡಿಯಲು ಅಸಾಧ್ಯವಾಗುವಂತೆ ಬೆರೆತುಹೋಗಿರುವ ಉರ್ದುಪದಗಳು ಹೇಗೆ ಬಂದು ಸೇರಿದವೆಂಬುದು ಇಲ್ಲಿ ಸ್ವಲ್ಪಮಟ್ಟಿಗೆ ಅರ್ಥವಾಗುತ್ತದೆ.

ಚಿಕ್ಕದೇವರಾಜ ಒಡೆಯರ ಕಾಲ (ಕ್ರಿ.ಶ. ೧೬೭೨-೧೭೦೪)

ಮೈಸೂರಿನ ಇತಿಹಾಸದಲ್ಲಿ ಒಂದು ಸ್ವರ್ಣಯುಗ ; ಒಡೆಯರ ಕಾಲದ ಸಾಹಿತ್ಯ ಚರಿತ್ರೆಯಲ್ಲಿಯೂ ಇದು ಸ್ವರ್ಣಯುಗ. ಈತನ ಕಾಲದಲ್ಲಿ ರಾಜ್ಯ ವಿಸ್ತರಿಸಿತು, ಆಡಳಿತ ವ್ಯವಸ್ಥೆಗೊಂಡು, ರಾಮರಾಜ್ಯವೆನಿಸಿತು; ಅಪಾರವಾದ ಐಶ್ವರ್ಯವನ್ನು ಗಳಿಸಿದ ರಾಜ 'ನವಕೋಟಿನಾರಾಯಣ'ನೆನಿಸಿದ; ದೆಹಲಿಯ ಚಕ್ರವರ್ತಿ ಈತನನ್ನು 'ರಾಜಾಜಗದೇವ' ಎಂಬ ಬಿರುದಿನಿಂದ ಸನ್ಮಾನಿಸಿ ಸಖ್ಯವನ್ನು ಬೆಳೆಸಿದ. ಶೂರನಾಗಿದ್ದಂತೆ ಭಗವದ್ಭಕ್ತನೂ ಆಗಿದ್ದ ಚಿಕ್ಕದೇವರಾಯ ಸಾಹಿತ್ಯ ಸಂಗೀತಗಳೆರಡರಲ್ಲಿಯೂ ಆತನಿಗೆ ಆದರ, ಅಭಿರುಚಿ, ಪರಿಶ್ರಮ. ಆತನಿಗೆ 'ರಸಿಕಜನಕರ್ಣರಸಾಯನೀಕೃತ ಸಂಗೀತವಿಸ್ತರಂ', 'ಸಾಹಿತ್ಯ ವಿದ್ಯಾನಿಕಷಪ್ರಸ್ತರಂ' ಎಂಬ ಬಿರುದುಗಳಿದ್ದವು. ಆತನು ವೀಣೆ ಬಾರಿಸಿದನೆಂದರೆ ಕಸ್ತೂರಿಯ ಕಂಪಿನಂತೆ ನಾದ ಕವಿಯುತ್ತಿತ್ತಂತೆ! ಸಾಹಿತ್ಯ ಜಗತ್ತಿನಲ್ಲಂತೂ ಆತ ಚಿರಂಜೀವಿ. ಸಂಸ್ಕೃತದಲ್ಲಿ 'ಯದುಗಿರಿನಾರಾಯಣಸ್ತವ', 'ಸತ್ ಶೂದ್ರಾಚಾರನಿರ್ಣಯ'ಗಳನ್ನು ಬರೆದಿದ್ದಾನೆ, ಕನ್ನಡದಲ್ಲಿ 'ಚಿಕ್ಕದೇವರಾಜಬಿನ್ನಪ' 'ಗೀತಾಗೋಪಾಲ', 'ಭಾರತ' 'ಭಾಗವತ', 'ಶೇಷಧರ್ಮ' ಎಂಬ ಗ್ರಂಥಗಳನ್ನು ಬರೆದಿರುವನೆಂದು ಪ್ರತೀತಿ. ಇವುಗಳಲ್ಲಿ ಕೆಲವು ಆತ ಬರೆದುವಲ್ಲವೆಂದೂ ತೋರುತ್ತದೆ. ಅದು ಹಾಗಿರಲಿ, ಆತನ ಪೋಷಣೆಯಲ್ಲಿ ತಿರುಮಲಾರ್ಯ, ಸಿಂಗರಾರ್ಯ, ಚಿಕ್ಕುಪಾಧ್ಯಾಯ, ಶೃಂಗಾರಮ್ಮ, ಹೊನ್ನಮ್ಮ, ವೇಣುಗೋಪಾಲವರಪ್ರಸಾದ. ತಿಮ್ಮಕವಿ, ಮಲ್ಲಿಕಾರ್ಜುನ, ಚಿದಾನಂದಕವಿ, ಮಲ್ಲರಸ ಏಕಕಾಲದಲ್ಲಿ ಇಷ್ಟು ಜನ ಕವಿಗಳು ಒಂದೆಡೆ ಸೇರಿ, ಅಮಿತವಾದ ಕಾವ್ಯರಚನೆಯಿಂದ ಕನ್ನಡ ಸಾಹಿತ್ಯವನ್ನು ಅತ್ಯಂತ ಶ್ರೀಮಂತವಾಗಿ ಮಾಡಿದರು.

ಚಿಕ್ಕದೇವರಾಜನ 'ಚಿಕ್ಕದೇವರಾಜಬಿನ್ನಪ'ವು ವಿಶಿಷ್ಟಾದ್ವೈತ ಧರ್ಮದ ಸಾರವನ್ನು ಒಳಗೊಂಡ ಮೂವತ್ತು ಬಿನ್ನಪಗಳನ್ನು ಒಳಗೊಂಡಿದೆ. 'ಅಕ್ಕರಮನಱಿಯದೊಕ್ಕಲಿಗರ್ಗಂ, ಪೆಣ್ಗಳ್ಗಂ, ಸಕ್ಕದದಿಂ ತತ್ವಜ್ಞಾನ ಮಪ್ಪುದರಿದು' ಎಂದು 'ಎಲ್ಲರುಮಱಿವಂತೆ ಕನ್ನಡವಾತಿನೊಳಂ ಮೆಲ್ನುಡಿಗಳಿಂದ ಅಖಿಲ ತತ್ವಾರ್ಥಗಳಂ ಸಂಗತಿಗೊಳಿಸಿ' ಇವನ್ನು ಹೇಳುತ್ತಿರುವುದಾಗಿ ಕವಿಯ ಹೇಳಿಕೆ. ಆಶಯ ಉದಾತ್ತಮವಾದುದಾಗಲಿ, ಆತನ ಕನ್ನಡ ಆಶಯವನ್ನು ಎಷ್ಟರ ಮಟ್ಟಿಗೆ ಸಾರ್ಥಕಗೊಳಿಸುವುದೊ ಹೇಳುವಂತಿಲ್ಲ, ಆತನ ಬಿನ್ನಪಗಳನ್ನು ಓದಿದ ಮೇಲೆ ಆತನು ತಿಳಿಮನಸ್ಸಿನ, ಸರಳಸ್ವಭಾವದ ಶ್ರೇಷ್ಠ ಭಕ್ತನೆಂದು ಬೋಧೆಯಾಗುತ್ತದೆ. ಚಿಕ್ಕದೇವರಾಜನ 'ಭಾರತ', 'ಭಾಗವತ', 'ಶೇಷಧರ್ಮ'ಗಳು ಆಯಾ ಹೆಸರಿನ ಸಂಸ್ಕೃತ ಗ್ರಂಥಗಳ ಭಾಷಾಂತರಗಳು. 'ಭಾರತ'ವು ಶಾಂತಿಪರ್ವದಿಂದ ಮುಂದಕ್ಕೆ ಮಾತ್ರ ಇದೆ. ಬಹುಶಃ ಅದು ವೇದಾಂತ ವಿಷಯಗಳಿಂದ ತುಂಬಿರುವುದೇ ಅದಕ್ಕೆ ಕಾರಣವಿರಬಹುದು. ಈ ರಾಜಕವಿಯ ಗ್ರಂಥಗಳಲ್ಲೆಲ್ಲ 'ಗೀತ ಗೋಪಾಲ' ಅತ್ಯಂತ ಶ್ರೇಷ್ಠವಾದುದು. ಇದು ಜಯದೇವ ಕವಿಯ 'ಗೀತಗೋವಿಂದ'ದಂತೆ ಕೀರ್ತನರೂಪವಾಗಿದೆ. ಇದರಲ್ಲಿ ಎರಡು ಭಾಗಗಳಿವೆ; ಒಂದೊಂದು ಭಾಗದಲ್ಲಿಯೂ ಏಳು ಖಂಡಗಳು, ಪ್ರತಿ ಖಂಡದಲ್ಲಿಯೂ ಏಳು ಕೀರ್ತನೆಗಳೂ ಇವೆ. ಆದ್ದರಿಂದ ಇದನ್ನು 'ಸಪ್ತಪದಿ' ಎಂದು ಕರೆಯುತ್ತಾರೆ. ಒಂದೊಂದು

ಸಪ್ತಪದಿಯ ಆರಂಭಲ್ಲಿಯೂ ಸಪ್ತಪದಿಯ ತಿರುಳನ್ನು ಗದ್ಯರೂಪದಲ್ಲಿ ಕೊಟ್ಟಿದೆ. 'ಹರಿಕೀರ್ತನಸಪ್ತೆ [illegible] ಪರಗತಿನುಕೂಲ' ಎಂದು ಕವಿಯ ಭಾವನೆ. ಆದ್ದರಿಂದಲೆ–

ಪಾಲಂ ಬಯಸಿದ ರೋಗಿಗೆ । ಪಾಲಿಂದೌಷಧಮನೀವ ವೈದ್ಯನ ತೆಱದಿಂ
ದೀ ಲೋಗರೊಲ್ವ ಗೀತದ । ಮೂಲದೊಳೇ ಮುಕ್ತಿಗತಿಯ ಮೊಗದೋರಿಸಿದಂ

ನಿಜ, ಇಲ್ಲಿನ ನುಡಿಗಳು ಭಕ್ತಿಯ ಭಾರದಿಂದ ಬಳಕುತ್ತವೆ. ಇವು ಕಿವಿಗೆ ಇಂಪನ್ನೂ ಹೃದಯಕ್ಕೆ ತಂಪನ್ನೂ, ಆತ್ಮಕ್ಕೆ ಸೊಂಪನ್ನೂ ನೀಡಬಲ್ಲವು. ಕಾಂಬೋಂಧಿರಾಗ ಝಂಪೆತಾಳದಲ್ಲಿ ಬರೆದಿರುವ ಈ ಹಾಡನ್ನು ನೋಡಿ:

ಕಂಗೊಳಿಸದಿರಲಾರೆ ಕಣ್ಣ ಪುಣ್ಯದ ಬೆಳಸ । ಕಂಗೊಳಿಸದಿರಲಾರೆನೆ
ಪೂಂಗೊಳಲ ನುಡಿಸುತಿಳಿಹೊತ್ತಿನೊಳು ಪುರವೀದಿ । ಸಿಂಗರಿಸಿ ಮೆರದ ಹರಿಯ ಸಿರಿಯ
॥ಪ॥

ಕ್ರಮದಿ ನಡು ತೋಳ್ಮುಡಿಗಳೊಂದಿನಿಸು ಕೊಂಕಿನೊಳು ಕಮನೀಯವೆಂದೆನಿಸಿ ಮೆರೆಯ
ಸಮದಳದಿ ನಿಂದಡಿಯ ಮುಂದ ಮತ್ತೊಂದಡಿಯ ಸಾರ್ಚಿಯುಂಗುಟವನೂರಿ
ರಮಣೀಯ ರೇಖೆಯೊಳು ನಿಂದು ಕೊಳಲುಲಿಗೊಳುವ ರಾಯಗೋವಳನ
ತೋರೆ, ನೀರೆ ॥೨॥

ಕಳೆವೆತ್ತ ಕುತ್ತುರಿಯ ವೀಣೆಯೊಡನೊಡನುಣ್ಮೆ ಕವಿದ ತನಿಗುಂಪಿನಂತೆ
ಬಳೆವ ತಾನದ ಗಮಕಗತಿಯ ಮೈಸಿರಿಗೆ ಮೊಗ ಬಗೆಬಗೆಯ ಭಾವವಡೆಯೆ
ಕೊಳಲಿಗಿಂದುಟಿಯ ಸವಿದೋರಿಯೊಳದನಿಗೊಳುವ ಕೊನೆಬುಗೋವಳನ ತೋರೆನೀರೆ
॥೨॥

ಮೊದಲ ನುಡಿ ಗೋಪಾಲಕೃಷ್ಣನ ಸುಂದರ ಚಿತ್ರವನ್ನು ಕಣ್ಣಿಗೆ ಕಟ್ಟುತ್ತದೆ; ಎರಡನೆಯ ನುಡಿ ಸಂಗೀತದ ಮಾಧುರ್ಯವನ್ನು ಹೃದಯಂಗಮವಾಗಿ ಬಣ್ಣಿಸುತ್ತದೆ. 'ಗೀತಗೋಪಾಲ' ಮತ್ತು ಬಿನ್ನಪ – ಇವನ್ನು ಚಿಕ್ಕದೇವರಾಯನ ಆಶ್ರಿತನಾದ ತಿರುಮಲಾರ್ಯನು ಬರೆದಿರಬೇಕೆಂದು ಊಹಿಸಲು ಅವಕಾಶವಿದೆ. ತಿರುಮಲಾರ್ಯನ ಕಾವ್ಯಗಳಲ್ಲಿ ಈ ಕಾವ್ಯಗಳ ಪದ್ಯಗಳು ಕಾಣಿಸಿಕೊಂಡಿರುವುದೂ, ಇವುಗಳಲ್ಲಿ ಬರುವ ಸ್ವಪ್ರಶಂಸೆ ಅತಿಶಯವಾಗಿದ್ದು ತನ್ನನ್ನು ತಾನೆ ಕವಿ ಹಾಗೆ ಹೊಗಳಿಕೊಳ್ಳುವುದು ಅಸಂಭವವಾದುದಾಗಿರುವುದೂ ಇವು ತಿರುಮಲಾರ್ಯನವೇ ಇರಬಹುದು. ಯಾರವೇ ಆಗಿರಲಿ, ಅವು ಶ್ರೇಷ್ಠ ಕೃತಿಗಳು.

೧. ತಿರುಮಲಾರ್ಯ

ಇನ್ನು ಚಿಕ್ಕದೇವರಾಯನ ಆಸ್ಥಾನಕವಿಗಳತ್ತ ನೋಡೋಣ – ಅವರಲ್ಲಿ ಅಗ್ರಗಣ್ಯನಾದವನು ತಿರುಮಲಾರ್ಯ. ಅಳಸಿಂಗಾರಾರ್ಯ–ಸಿಂಗಾರಮ್ಮ ಎಂಬ ಶ್ರೀವೈಷ್ಣವ ದಂಪತಿಗಳ ಸುಪುತ್ರನಾದ ಈತನು ರಾಜನ ಸಹಪಾಠಿಯಾಗಿ, ಗೆಳೆಯನಾಗಿ, ಆಸ್ಥಾನಪಂಡಿತನಾಗಿ, ಕಡೆಗೆ ಮಂತ್ರಿಯೂ ಆದನು. ಕವಿ ತನ್ನ 'ಚಿಕ್ಕದೇವರಾಯವಿಜಯ'ದಲ್ಲಿ ತನ್ನನ್ನು 'ಚಿಕ್ಕದೇವರಾಜನ ಪ್ರೇಮವೇ ಪುರುಷಾಕೃತಿಯನ್ನು ತಾಳಿದಂತೆ ಪ್ರಕಾಶಿಸುವ ಪುಣ್ಯವಂತ' ಎಂದು ಹೇಳಿಕೊಂಡಿದ್ದಾನೆ. ಅವರಿಬ್ಬರ ಗೆಳೆತನ ಅರಿಕೇಸರಿ–ಪಂಪರ ಗೆಳೆತನವನ್ನು ನೆನಪಿಗೆ ತರುತ್ತದೆ. ಪಂಪನು ತನ್ನ ಸ್ವಾಮಿಯನ್ನು ತನ್ನ ಕಾವ್ಯ ಕಥಾನಾಯಕನನ್ನಾಗಿ ಮಾಡಿದ; ತಿರುಮಲಾರ್ಯನಾದರೂ ತನ್ನ ಕಾವ್ಯಗಳನ್ನೆರಡನ್ನು – ಗೀತಗೋಪಾಲ, ಚಿಕ್ಕದೇವರಾಜಬಿನ್ನಪ – ಆತನ ಹೆಸರಿನಲ್ಲಿಯೇ ಪ್ರಕಟಿಸಿಬಿಟ್ಟಿದ್ದಾನೆ.

ತಿರುಮಲಾರ್ಯನು 'ಚಿಕ್ಕದೇವರಾಜವಿಜಯ', 'ಚಿಕ್ಕದೇವರಾಜವಂಶಾವಳಿ', 'ಚಿಕ್ಕದೇವರಾಜಶತಕ', 'ಅಪ್ರತಿಮವೀರಚರಿತೆ' ಎಂಬ ನಾಲ್ಕು ಗ್ರಂಥಗಳನ್ನು ಬರೆದಿದ್ದಾನೆ; ನಾಲ್ಕರಲ್ಲಿಯೂ ತನ್ನ ಸ್ವಾಮಿಯ ಮಹತ್ತನ್ನು ಉಗ್ಘಡಿಸಿದ್ದಾನೆ. 'ಚಿಕ್ಕದೇವರಾಜಶತಕ' ಈಗ ಉಪಲಬ್ಧವಾಗಿಲ್ಲ. 'ಅಪ್ರತಿಮವೀರಚರಿತೆ' ನಾಲ್ಕು ಪ್ರಕರಣಗಳ ಒಂದು ಅಲಂಕಾರ ಗ್ರಂಥ; ಸಂಸ್ಕೃತ ಸೂತ್ರಗಳಿಗೆ ಕನ್ನಡದಲ್ಲಿ ವೃತ್ತಿಯನ್ನು ಬರೆದು, ಸ್ವಕಲ್ಪಿತವಾದ ಕನ್ನಡ ಪದ್ಯಗಳನ್ನು ಉದಾಹರಣೆಯಾಗಿ ಕೊಟ್ಟಿದೆ. ಈ ಉದಾಹರಣೆಗಳು ಚಿಕ್ಕದೇವರಾಜನ ಸ್ತುತಿರೂಪದ ಪದ್ಯಗಳು. ಚಿಕ್ಕದೇವರಾಜನಿಗೆ 'ಅಪ್ರತಿಮವೀರ' ಎಂಬ ಬಿರುದಿದ್ದುದರಿಂದ ಆತನ ಸ್ತುತಿರೂಪದ ಪದ್ಯಗಳಿರುವ ಈ ಲಕ್ಷಣಗ್ರಂಥಕ್ಕೆ ಆ ಹೆಸರೇ ಬಂದಿದೆ. ಈ ಗ್ರಂಥ ನಮ್ಮ ಪಂಡಿತರ ಮಾನ್ಯತೆಯನ್ನು ಪಡೆದಿರುವುದಾದರೂ ಕಾವ್ಯಕ್ಕೆ ಜೀವಜೀವಾಳದಂತಿರುವ ಅರಸ ಮತ್ತು ಧ್ವನಿಗಳ ಪ್ರತಿಪಾದನೆಯೆ ಇದರಲ್ಲಿಲ್ಲ.

ಕವಿಯ 'ಚಿಕ್ಕದೇವರಾಜವಿಜಯ'ವು ಮೈಸೂರು ರಾಜರೆಲ್ಲರ ಇತಿಹಾಸವನ್ನು ಸಂಗ್ರಹವಾಗಿ ನೀಡಿ, ಚಿಕ್ಕದೇವರಾಜನ ಬಾಲ್ಯ, ವಿದ್ಯಾಭ್ಯಾಸ, ಸಂಗೀತ ನೈಪುಣ್ಯಗಳನ್ನು ರಸವತ್ತಾಗಿ ಚಿತ್ರಿಸುವ ಒಂದು ಸುಂದರ ಚಂಪೂ ಗ್ರಂಥ. ಅದರಲ್ಲಿ ಕವಿಯು ತನ್ನ ಸ್ವಾಮಿಯನ್ನು ಮೈದುಂಬಿ ಹಾಡಿ ಹರಸುವುದರ ಮೂಲಕ ತನ್ನ ಪ್ರೇಮವನ್ನೂ ಭಕ್ತಿಯನ್ನೂ ಪ್ರದರ್ಶಿಸಿದ್ದಾನೆ. ಇಲ್ಲಿ ಅಂತಹ ಕಥಾಸ್ವಾರಸ್ಯವನೇನೂ ಇಲ್ಲ, ಕಾವ್ಯಶೈಲಿಯಲ್ಲಿ ಪ್ರಸಾದ ಗುಣವುಕಡಿಮೆ; ಆದರೆ ವರ್ಣನಾವೈಖರಿ ಮನೋಹರವಾಗಿದೆ. 'ಕಬ್ಬಿಗರ್ ತಾಮಘಟಿತ ಘಟನಾ ನೂತನ ಬ್ರಹ್ಮರಲ್ತೆ ?' ಎಂದು ಪರೋಕ್ಷವಾಗಿ ತನ್ನ ಕವಿತಾಶಕ್ತಿಯನ್ನು ಹೊಗಳಿಕೊಂಡಿರುವ ಕವಿ, ಚಿಕ್ಕದೇವ ರಾಜನ ವೀಣಾವಾದನಪಟುತ್ವವನ್ನು ವರ್ಣಿಸುವಲ್ಲಿ ಅದನ್ನು ಸಾರ್ಥಕಪಡಿಸಿಕೊಂಡಿದ್ದಾನೆ. ಕವಿಯು ನಾದ ಸುಖವನ್ನು ಅನುಭವಿಸಿ ಅದನ್ನು ಓದುಗರಿಗೂ ನೀಡುತ್ತಾನೆ. ಜಾಣನಾದ ಚಿಕ್ಕದೇವರಾಜಕುಮಾರ ವೀಣೆಯನ್ನು ಬಾರಿಸ ಹೊರಟಾಗ 'ಪ್ರಾಣಬಂದುದು ಜಂತ್ರ ಬಿಜ್ಜೆಗೆ' ಸಂಗೀತದ ಕೀರ್ತಿ ಬೆಳೆಯಿತು. 'ಪ್ರಾಣಿ ಪ್ರಾಂತದೊಳಾಂತುದಿಯ ಚಿತಮಾಯ್ತಾ ವಾಣಿಯಂ ವೀಣೆಯ !' ಎಲ್ಲ ತಂತಿಗಳಿಂದಲೂ ಒಂದೇ ದನಿ ಹೊರಟಿತು ಎಂಬಂತೆ ತೋರುವ ನಾದವು ಕಂಬಚ್ಚಿನಲ್ಲಿ ಎಳೆದ ಚಿನ್ನದ ಸರಿಗೆಯನ್ನು ಹೋಲುತ್ತದೆಯಂತೆ ! ಕಸ್ತೂರಿಯ ಸುವಾಸನೆಯಂತೆ ಆ ನಾದವು ಎಲ್ಲೆಡೆಯಲ್ಲಿಯೂ ತುಂಬಿಕೊಳ್ಳುತ್ತದೆಯಂತೆ ! ಸ್ವರಪ್ರಸ್ತಾರ ರತ್ನಸಮೂಹದಂತೆ ಹೊಳೆಯುತ್ತದೆಯಂತೆ ! 'ವಾಣಿಯ ನೂಪುರಸ್ವರ', 'ತುಂಬಿಯ ಬಂಬಲ ಒಳ್ಸರ', 'ಗಿಳಿವಾತಿನ ನುಣ್ಚರ ಇವು ಮುಪ್ಪುರಿ ಗೊಂಡಂತಿದೆಯಂತೆ ಚಿಕ್ಕದೇವನ ವೀಣೆಯಿಂಚರ ! ಅದನ್ನು ಕೇಳಿದವರು ಅಲುಗದ ದಿಟ್ಟ ಅಡದ ಎವೆ, ತೋಱಿದುರ್ಕುವ ಅಲಿನೀರ್ ... ಮೊಯ್ಮೆರೆವ ಕರಣಂಗಳಿಂದ' ಕೂಡಿದವರಾಗಿ ಸಂಸತಪಡುತ್ತಾರಂತೆ ! ಮರಗಳೆಲ್ಲ ಸಂಗೀತವನ್ನು ಕೇಳಿ ರೋಮಾಂಚನಗೊಂಡು ಮಾನವರಂತಾಗಿವೆಯಂತೆ ! ಮಾನವರು ಅದನ್ನು ಕೇಳಿ ಮೈಮರೆತು ಮರಗಳಂತೆ ನಿಂತಿದ್ದಾರಂತೆ ! ರತ್ನಾಕರವರ್ಣಿಯನ್ನು ಹೊರತು ಸಂಗೀತವನ್ನು ಇಷ್ಟು ಸುಂದರವಾಗಿ ವರ್ಣಿಸಿರುವ ಕನ್ನಡ ಕವಿ ಮತ್ತೊಬ್ಬನಿಲ್ಲ. ಪ್ರಕೃತಿವರ್ಣನೆಯಲ್ಲಿಯೂ ತಿರುಮಲಾರ್ಯ ತನ್ನ ಸಾಮರ್ಥ್ಯವನ್ನು, ನೂತನತೆಯನ್ನು ವೈಶಿಷ್ಟ್ಯವನ್ನು ಪ್ರದರ್ಶಿಸಿದ್ದಾನೆ. ಆತನ ಚಂದ್ರನ ವರ್ಣನೆ, ಬೆಳೆದಿಂಗಳ ವರ್ಣನೆಗಳು ಚಿರನೂತನವಾಗಿವೆ. ಈ ಕಾವ್ಯವು ಮನೋಹರವಾದ ಕಾವ್ಯಾಂಶಗಳಿಂದ ಕೂಡಿದ ಒಂದು ಒಳ್ಳೆಯ ವರ್ಣನಾಪ್ರಧಾನವಾದ ಕಾವ್ಯ. ಆದರೆ ಇದು ಸಮಗ್ರವಾಗಿಲ್ಲ.

'ಚಿಕ್ಕದೇವರಾಜವಂಶಾವಳಿ'ಯು ರಾಜ ಒಡೆಯರಿಂದ ಹಿಡಿದು ಚಿಕ್ಕದೇವರಾಜ ಒಡೆಯರವರೆಗಿನ ಮೈಸೂರು ಅರಸರ ಜೀವನ ಚರಿತ್ರೆಯನ್ನು ಒಳಗೊಂಡ ಹಳಗನ್ನಡ ಗದ್ಯ ಗ್ರಂಥ.

ಇದರ ವಸ್ತು ಇತಿಹಾಸವಾದರೂ ಇದು ಅಪ್ಪಟ ಇತಿಹಾಸವಲ್ಲ. ತಿರುಮಲಾರ್ಯ ಕವಿಯೇ ಹೊರತು ಇತಿಹಾಸಕಾರನಲ್ಲ. ಇದರಲ್ಲಿಯೂ ಕವಿ ಸ್ವಾಮಿಗೂ ಆತನ ವಂಶದವರಿಗೂ ಅಪಾರವಾದ ಆದರ, ಪ್ರೇಮ, ಗೌರವಗಳನ್ನು ಪ್ರದರ್ಶಿಸುತ್ತಾನೆ. ಈತನ ಪ್ರಮಾಣ ಜ್ಞಾನಕ್ಕೆ ಸ್ವಲ್ಪ ಮಬ್ಬು ಮುಸುಕಿದೆಯೊ ಏನೋ ! ತನ್ನ ರಾಜನ ತಂದೆಯಾದ ದೊಡ್ಡದೇವರಾಯನ ಕಥೆಯನ್ನು ಸುದೀರ್ಘವಾಗಿ ಬೆಳೆಸಿಕೊಂಡು ಹೋಗಿರುವ ಕವಿ ಅದ್ವಿತೀಯ ಪರಾಕ್ರಮಿಯಾದ ಕಂಠೀರವ ನರಸರಾಜನ ಕಥೆಯನ್ನು ಹ್ರಸ್ವಗೊಳಿಸಿದ್ದಾನೆ. ವರ್ಣನೆಗಳು ಬಿಡಿಬಿಡಿಯಾಗಿ ನೋಡಿದಾಗ ರಮ್ಯವಾಗಿದ್ದರೂ ಕಾವ್ಯದಲ್ಲಿ ವರ್ಣನಾಭಾಗ ಸ್ವಲ್ಪ ಅತಿಯೆನಿಸುತ್ತದೆ.

ತಿರುಮಲಾರ್ಯನು ಕನ್ನಡ-ಸಂಸ್ಕೃತಗಳಲ್ಲಿ ಅದ್ವಿತೀಯ ಪಾಂಡಿತ್ಯವುಳ್ಳವನು, ಒಳ್ಳೆಯ ಕವಿ ಹೃದಯವುಳ್ಳವನು. ಆತನ ಶೈಲಿ ಪದಗಳ ಸಮತೋಲನದಿಂದ ಕೂಡಿ ತುಂಬ ಗಂಭೀರವಾದ ನದಿಯಂತೆ ರಮಣೀಯವಾಗಿದೆ. ಹಾಲಿಗೆ ಸಕ್ಕರೆ ಬೆರೆತಂತೆ ಆತನ ಭಕ್ತಿಭಾವ ಕಾವ್ಯಕ್ಕೆ ಹೃದ್ಯತೆಯನ್ನು ಗಳಿಸಿಕೊಟ್ಟಿದೆ. ಆತ ತನ್ನ ಆರಾಧ್ಯದೈವವನ್ನು ಅಡಿಯಿಂದ ಮುಡಿಯವರೆಗೆ ಮುಡಿಯಿಂದ ಅಡಿಯವರೆಗೆ ವರ್ಣಿಸುತ್ತಾ, ಭಕ್ತಿಪರವಶತೆಯಿಂದ ದಣಿದು ಹೋಗುತ್ತಾನೆ. ಓದುಗರನ್ನು ತಣಿಸುತ್ತಾನೆ. ಕನ್ನಡ ಗದ್ಯ ಸಾಹಿತ್ಯದ ಇತಿಹಾಸದಲ್ಲಿ ಇದಕ್ಕೆ ಒಂದು ಪ್ರಮುಖವಾದ ಸ್ಥಾನವುಂಟು. ಆದರೆ 'ಚಿಕ್ಕದೇವರಾಜ ವಿಜಯ'ದಂತೆ ಈ ಗ್ರಂಥವೂ ಅಸಮಗ್ರವಾಗಿದೆ.

೨. ಚಿಕ್ಕುಪಾಧ್ಯಾಯ

ತೆರಕಣಾಂಬಿಯ ರಂಗಾಚಾರ್ಯ ಪಂಡಿತ – ನಾಚ್ಚಾರಮ್ಮನ ಯಮಳಪುತ್ರರಲ್ಲಿ ಒಬ್ಬನಾದ ಲಕ್ಷ್ಮೀಪತಿಯೆಂಬುವನೇ ಚಿಕ್ಕುಪಾಧ್ಯಾಯನೆಂಬ ಹೆಸರಿನಿಂದ ಚಿಕ್ಕದೇವರಾಜನ ಕರಣಿಕಾಗ್ರೇಸರನಾಗಿ, ಮಂತ್ರಿಯಾಗಿ, ವಿಪುಲವಾದ ಗ್ರಂಥರಚನೆಗಳಿಂದ ಪ್ರಸಿದ್ಧನಾಗಿದ್ದಾನೆ. ಈತನು ರಾಜನಿಗೆ ಉಪಾಧ್ಯಾಯನಾಗಿದ್ದುದರಿಂದ ಚಿಕ್ಕುಪಾಧ್ಯಾಯನೆಂಬ ಹೆಸರು ಬಂದಿದೆ. ಈತನು ಅಷ್ಟೈಶ್ವರ್ಯ ಸಂಪನ್ನನಾಗಿ, ಇಬ್ಬರು ಪತ್ನಿಯರೊಡನೆ ತುಂಬು ಜೀವನವನ್ನು ಬಾಳಿದಂತೆ ಆತನ ಹೇಳಿಕೆ ಈತನ ಗ್ರಂಥಗಳ ಪ್ರಸ್ತಾವನಾಭಾಗದಿಂದ ಮೈಸೂರು ಅರಸರ ಇತಿಹಾಸಕ್ಕೆ ಸಾಕಷ್ಟು ಸಾಮಗ್ರಿ ದೊರೆಯುತ್ತದೆ. ಆತನ ಕಾವ್ಯಗಳ ಮಹತ್ವ ಹಾಗಿರಲಿ, ಅವುಗಳ ಬೃಹತ್ತೇ ನಮ್ಮ ಗೌರವಕ್ಕೆ ಕಾರಣವಾಗಿದೆ. ಈತನ 'ಕಮಲಾಚಲಮಾಹಾತ್ಮ್ಯ', 'ಹಸ್ತಗಿರಿ ಮಾಹಾತ್ಮ್ಯ', 'ಯಾದವಗಿರಿ ಮಾಹಾತ್ಮ್ಯ', 'ಶ್ರೀರಂಗ ಮಾಹಾತ್ಮ್ಯ' – ಇವು ಸ್ಥಳ ಮಹಾತ್ಮೆಯ ಗ್ರಂಥಗಳು. 'ಕಮಲಾಚಲ ಮಾಹಾತ್ಮ್ಯ' ಹಿಮವದ್ಗೋಪಾಲಸ್ವಾಮಿ ಬೆಟ್ಟದ ಮಾಹಾತ್ಮೆಯನ್ನು ೩೭೫೦ ಪದ್ಯಗಳಷ್ಟು ವಿಸ್ತಾರವಾಗಿ ಬರೆದ ಚಂಪೂಗ್ರಂಥ. 'ಹಸ್ತಗಿರಿ ಮಹಾತ್ಮ್ಯ' ಕಂಚಿಯ ಮಹತ್ತನ್ನು ಹೇಳುವ ೧೨೦೦ ಪದ್ಯಗಳ ಚಂಪೂ. 'ಯಾದವಗಿರಿ ಮಾಹಾತ್ಮ್ಯ' (ಸು. ೧೨೦೦ ಪದ್ಯಗಳು). ಪಶ್ಚಿಮರಂಗ ಮಹಾತ್ಮ್ಯ (೩೨೦ ಪದ್ಯಗಳು) – ಇವೆರಡೂ ಸಾಂಗತ್ಯದಲ್ಲಿವೆ. ಉಳಿದ ಮೂರು ಮಹಾತ್ಮ್ಯಗಳು ಗದ್ಯದಲ್ಲಿವೆ.

ಕವಿಯ 'ರುಕ್ಮಾಂಗದಚರಿತ್ರೆ' (೨೨೮೬ ಪದ್ಯಗಳು) ಏಕಾದಶಿವ್ರತ ಮಹಿಮೆಯನ್ನು ಒಳಗೊಂಡ ರುಕ್ಮಾಂಗದನ ಕಥೆಯನ್ನೂ 'ವಿಷ್ಣುಪುರಾಣ' (೬೨೫೫ ಪದ್ಯಗಳು) ಸಂಸ್ಕೃತಪುರಾಣದ ಅನುವಾದವನ್ನೂ 'ದಿವ್ಯಸೂರಿ ಚರಿತೆ' (೮೨೬ ಪದ್ಯಗಳು) ಹನ್ನೆರಡು ಜನ ಆಳ್ವಾರರ ಕಥೆಗಳನ್ನೂ 'ಸ್ವಾತಿಕಬ್ರಹ್ಮ ವಿದ್ಯಾವಿಲಾಸ' (೯ ಆಶ್ವಾಸ) ಗುರು ಶಿಷ್ಯ ಪ್ರಶ್ನೋತ್ತರ ರೂಪವಾದ ವಿಶಿಷ್ಟಾದ್ವೈತ ವೇದಾಂತವನ್ನೂ, 'ಅರ್ಥಪಂಚಕ' ಎಂಬ ತಮಿಳು ಗ್ರಂಥದ ಕನ್ನಡ ಅನುವಾದವನ್ನೂ ಚಂಪೂ ರೂಪದಲ್ಲಿ ಬರೆದಿದ್ದಾನೆ.

ಕವಿಯು ಗದ್ಯದಲ್ಲಿಯೂ ಹಲವು ಗ್ರಂಥಗಳನ್ನು ಬರೆದಿದ್ದಾನೆ. 'ವಿಷ್ಣು ಪುರಾಣ'ವನ್ನು ಚಂಪೂವಿನಲ್ಲಿ ಬರೆದುದು ಸಾಲದಂತೆ ಗದ್ಯದಲ್ಲಿಯೂ ಬರೆದ್ದಿದಾನೆ. 'ಶೇಷಧರ್ಮ' (೨೫ ಅಧ್ಯಾಯಗಳು) 'ಕಾಮಂದಕನೀತಿ' ಮತ್ತು 'ತಿರುವಾಯ್ಮೊಳಿ'ಗಳ ಕನ್ನಡ ಟೀಕು. ಸಂಸ್ಕೃತದ 'ಶುಕಸಪ್ತತಿ'ಯ ಕನ್ನಡ ಭಾಷಾಂತರ (೭೦೦೦ ಗ್ರಂಥಗಳು) – ಇವುಗಳು ಆತನ ಗದ್ಯಗ್ರಂಥಗಳು. 'ಮದನ ಮೋಹಿನೀಕಥೆ', 'ರಂಗಧಾಮಸ್ತುತಿ', 'ಪಶ್ಚಿಮರಂಗಸಾಹಿತ್ಯ', 'ರಂಗಧಾಮಿನೀತಿಶತಕದ ಸಾಂಗತ್ಯ', 'ರಂಗಧಾಮ ಪುರುಷವಿರಹಸಾಂಗತ್ಯ', 'ರಂಗನಾಯಕ ರಂಗನಾಯಕೀ ಸ್ತುತಿ ಸಾಂಗತ್ಯ', 'ಶೃಂಗಾರಶತಕದ ಸಾಂಗತ್ಯ', 'ಚಿತ್ರಶತಕದ ಸಾಂಗತ್ಯ', 'ಅಕ್ಷರಮಾಲಿಕಾ ಸಾಂಗತ್ಯ' – ಇವು ಈತನ ಸಾಂಗತ್ಯಗ್ರಂಥಗಳು. 'ರಂಗನಾಥಸ್ವಾಮಿಯ ಶೃಂಗಾರ ಸೂತ್ರೋದಾಹರಣೆ'ಯ ಶೃಂಗಾರಸೂತ್ರಗಳನ್ನು ಒಳಗೊಂಡ ಕಂದಪದ್ಯಗಳ ಗ್ರಂಥ. ಚಿಕ್ಕದೇವರಾಜ ಸ್ತುತಿರೂಪದ ಹಲವು ಶೃಂಗಾರದ ಹಾಡುಗಳೂ ಆತನ ಹೆಸರಿನಲ್ಲಿವೆ. 'ವೈದ್ಯಾಮೃತಟೀಕೆ', 'ತತ್ತ್ವತ್ರಯ', 'ಅಮರಶತಕ'ಗಳನ್ನು ಈತ ಬರೆದಿದ್ದಾನಂತೆ! ಅವು ಉಪಲಬ್ಧವಿಲ್ಲ.

ಮೇಲಿನ ಕಾವ್ಯಗಳ ಪಟ್ಟಿಯನ್ನು ನೋಡಿದರೆ ಆತನ ಕಾವ್ಯವಸ್ತುಗಳಲ್ಲಿ ಛಂದಸ್ಸಿನಲ್ಲಿ ವಿಪುಲವಾದ ವೈವಿಧ್ಯ ಕಂಡುಬರುತ್ತದೆ. ಆತನ ಚಂಪೂ ಬಹು ಕ್ಲಿಷ್ಟವಾದುದು, ಸಂಸ್ಕೃತಭೂಯಿಷ್ಠವಾಗಿರುತ್ತದೆ; ಸಾಂಗತ್ಯ ಸರಳವಾಗಿ, ತಿಳಿಯಾಗಿರುತ್ತದೆ; ಗದ್ಯ ಮನೋಹರವಾಗಿರುತ್ತದೆ. ಇವುಗಳಲ್ಲೆಲ್ಲ ಸಾಮಾನ್ಯವಾಗಿ ಕಾಣುವುದು ಶ್ರೀವೈಷ್ಣವಧರ್ಮದ ನಿರೂಪಣೆ. ಚಿಕ್ಕದೇವರಾಜನು ಶ್ರೀ ವೈಷ್ಣವಧರ್ಮಪ್ರೇಮಿಯಾಗಿದ್ದುದರಿಂದ, ಆತನ ಒತ್ತಾಸೆ-ಪ್ರೋತ್ಸಾಹಗಳಿಂದ ಆ ಧರ್ಮಗ್ರಂಥಗಳು ವಿಪುಲವಾಗಿ ಬೆಳೆಯಲು ಕಾರಣವಾಯಿತು. ರಾಜನ ಅಪ್ಪಣೆಯಂತೆ ತಾನು ಕಾವ್ಯರಚನೆ ಮಾಡುತ್ತಿರುವುದಾಗಿ ಕವಿ ಹೇಳಿಕೊಂಡಿದ್ದಾನೆ.

ಇತರ ಎಲ್ಲ ಕವಿಗಳಂತೆ ಚಿಕ್ಕುಪಾಧ್ಯಾಯನೂ – ಇನಿವಾಲ ಸವಿದಂತೆ. ಜವ್ವನಿಯನಪ್ಪಿದಂತೆ- ತನ್ನ ಕಾವ್ಯ ಸಂತಸಕರವಾದುದೆಂದು ಹೇಳಿಕೊಳ್ಳುತ್ತಾನೆ. ಅವೆಲ್ಲ ಸಂಪ್ರದಾಯದ ನುಡಿಗಳೇ ಹೊರತು ಸತ್ಯವೇನೂ ಅಲ್ಲ. ಆತನ ಕಾವ್ಯವಾಹಿನಿಯ ಪಾತ್ರ ವಿಸ್ತಾರವಾಗಿದ್ದರೂ, ಅದರೊಳಗೆ ಹರಿಯುತ್ತಿರುವುದು ಕಾಲಹೊಳೆ ಮಾತ್ರ. ಅಲ್ಲಿ ಪೂರ್ಣಪ್ರವಾಹದ ಮಾರ್ಮೊಳಗು, ಆಳ ಸೆಳವು ಯಾವುದೂ ಇಲ್ಲ. ಆತನ ಪ್ರತಿಭೆ ಕಲ್ಪನೆಗಳ ವಿಹಂಗಮವಿಹಾರಿಗಳಲ್ಲ. ಪದ್ಯ ರಚನೆಯಲ್ಲಿ ಆತ ಸಿದ್ಧಹಸ್ತ. ಆದರೆ ಕವಿತೆ ಸಂಪ್ರದಾಯದ ಚೌಕಟ್ಟನ್ನು ಆಶ್ರಯಿಸಿದೆ. ಪ್ರತಿಭಾಪೂರ್ಣವಾದ ನವೀನತೆಗಿಂತ ಕವಿ ಸಮಯಾಶ್ರಯವಾದ ಚಾತುರ್ಯ ಇಲ್ಲಿ ಹೆಚ್ಚು. 'ಹಸ್ತಗಿರಿಯ ಮಾಹಾತ್ಮ್ಯ'ದಲ್ಲಿ ಬರುವ ಕನ್ನಡ ನಾಡಿನ ವರ್ಣನೆ ಮನೋಹರವಾಗಿದೆ. ಚಿತ್ರ ಶತಕ ಸಾಂಗತ್ಯದಲ್ಲಿ ಕೆಲವು ಚಮತ್ಕಾರವಾದ ಮಾತುಗಳಿವೆ. 'ಸರಸನನರನೆಂಬುದು ಪೂರ್ಣಗೃಹವನು । ಅರಮನೆಯೊಂದು ಸುರುವುದು। ನರಪಕುಮಾರನನರ ಮಗನೆಂಬುದೇ। ನೊರೆ ರಂಗ ಕನ್ನಡದೊಳ್' ಇತ್ಯಾದಿ ಹೇಳುವಲ್ಲಿ ಶಬ್ದ ಭಂಡಾರದ ಶ್ರೀಮಂತತೆ ಅರ್ಥವಾಗುತ್ತದೆ. ಆತನ ಚಂಪೂಗ್ರಂಥಗಳಲ್ಲೆಲ್ಲ 'ರುಕ್ಮಾಂಗದ ಚರಿತೆ' ಅತ್ಯಂತ ಶ್ರೇಷ್ಠವಾದುದು; ಧರ್ಮಾಂಗದ-ಮೋಹಿನಿಯರ ಪ್ರಸಂಗ ಇಲ್ಲಿ ಮನೋಹರವಾಗಿ ಚಿತ್ರಿತವಾಗಿದೆ.

ಚಿಕ್ಕುಪಾಧ್ಯಾಯನು ಪೂರ್ವಕವಿಗಳಲ್ಲಿ ರುದ್ರಭಟ್ಟನನ್ನು ಮಾತ್ರ ಸ್ತುತಿಸಿದ್ದಾನೆ. ಆದರೆ ಕವಿಯು ಪೂರ್ವಕವಿಗಳ ಚಿರಪರಿಚಯವನ್ನು ಪಡೆದಿದ್ದಾನೆ ಎಂಬುದು ನಿರ್ವಿವಾದ. ಆತ 'ರುಕ್ಮಾಂಗದಚರಿತೆ'ಯಲ್ಲಿ ತಂದಿರುವ ಮೋಹಿನಿಯ ಸಂಗೀತ 'ಕರ್ಣಾಟಕ ಕಾದಂಬರಿ'ಯಲ್ಲಿ ಬರುವ ಮಾಹಾಶ್ವೇತೆಯ ಸಂಗೀತವನ್ನು ಹೋಲುತ್ತದೆ. ವಿಷ್ಣುಪುರಾಣದ ಪದ್ಯಗಳಿಗೆ ರುದ್ರಭಟ್ಟನ

'ಜಗನ್ನಾಥವಿಜಯ', 'ಷಡಕ್ಷರಿ'ಯ 'ರಾಜಶೇಖರವಿಳಾಸ'ಗಳು ಆಕರವಾಗಿವೆ. ಪಂಪನ ಪ್ರಭಾವವು ಅಲ್ಲಲ್ಲಿ ಎದ್ದು ಕಾಣುತ್ತದೆ. ಕನ್ನಡ-ಸಂಸ್ಕೃತಗಳಲ್ಲಿ ಮಾತ್ರವೇ ಅಲ್ಲದೆ ತಮಿಳಿನಲ್ಲಿಯೂ ಆತ ದೊಡ್ಡ ಪಂಡಿತನಾಗಿದ್ದಿರಬೇಕು. ಆತನ ಗದ್ಯಗ್ರಂಥಗಳು ಆತನ ಕಾಲದ ಗದ್ಯಶೈಲಿಗೆ ಕನ್ನಡಿಯನ್ನು ಹಿಡಿದಿವೆ. ಕನ್ನಡ ಗದ್ಯ ಚರಿತ್ರೆಯಲ್ಲಿ ಚಿಕ್ಕುಪ್ಯಾಯನಿಗೆ ಒಂದು ಪ್ರಮುಖ ಸ್ಥಾನ ಮೀಸಲಾಗಿದೆ.

೩. ಸಿಂಗರಾರ್ಯ

ಈತನು ಕವಿ ತಿರುಮಲಾರ್ಯನ ತಮ್ಮ, ಚಿಕ್ಕದೇವರಾಜನ ಆಸ್ಥಾನಕವಿ, 'ಮಿತ್ರವಿಂದಾ ಗೋವಿಂದ' ಎಂಬ ನಾಟಕವನ್ನು ಬರೆದಿದ್ದಾನೆ. ಇದು ಈವರೆಗೆ ಸಿಕ್ಕಿರುವ ಕನ್ನಡ ನಾಟಕಗಳಲ್ಲಿ ಮೊಟ್ಟಮೊದಲನೆಯದು. ಇದೇ ಈ ಕಾವ್ಯದ ಹಿರಿಮೆ. ಇಂದು ಸಂಸ್ಕೃತದಲ್ಲಿ ಶ್ರೀ ಹರ್ಷಕವಿ ಬರೆದಿರುವ 'ರತ್ನಾವಳಿ' ನಾಟಕದ ಭಾಷಾಂತರ. ಮೂಲದಲ್ಲಿ ಬರುವ ಸ್ತ್ರೀಲೋಲನಾದ ವತ್ಸರಾಜನ ಪೋಷಾಕನ್ನು ಶ್ರೀಕೃಷ್ಣನಿಗೂ, ವಾಸವದತ್ತೆಯ ವೇಷವನ್ನು ರುಕ್ಮಿಣಿಗೂ, ರತ್ನಾವಳಿಯ ಉಡುಗೆಯನ್ನು ಸರಸ್ವತಿಗೂ, ಹೊಟ್ಟೆಬಾಕ ವಿದೂಷಕನ ಹೊದಿಕೆಯನ್ನು ಕುಚೇಲನಿಗೂ ಅಳವಡಿಸಿದ್ದಾನೆ. ಇದರಿಂದ ಕೃತಿ ವಿಕೃತಿಯಾಗಿದೆ. ಮೂಲದ ಸನ್ನಿವೇಶ ರಚನಾಕೌಶಲವಾಗಲಿ, ಸಂಭಾಷಣಾಚಾತುರ್ಯವಾಗಲಿ, ರಸಾಭಿವ್ಯಕ್ತಿಯಾಗಲಿ ಭಾಷಾಂತರದಲ್ಲಿ ಬಂದಿಲ್ಲ. ಶೃಂಗಾರವೇ ಸಾರಸರ್ವಸ್ವವಾಗಿರುವ ಮೂಲನಾಟಕಗಳನ್ನು ಹಳಗನ್ನಡದಲ್ಲಿ ಬರೆದಿರುವುದು ಕಡಲೆಯನ್ನು ಮುಕ್ಕುವ ಕಡೆ ಕಲ್ಲು ಹರಳನ್ನು ಜಗಿದಂತಾಗುತ್ತದೆ. ವಿಷಯ ಪ್ರೌಢವಾಗಿಲ್ಲದಾಗ ಭಾಷೆ ಪ್ರೌಢವಾದರೆ ಅದೊಂದು ಅಣಕದಂತಾಗುತ್ತದೆ. ಆತನ ನಾಟಕದ ಪ್ರಸ್ತಾವನೆ ಸುದೀರ್ಘವಾಗಿದ್ದು ಸಮಕಾಲೀನ ಇತಿಹಾಸರಚನೆಗೆ ಸ್ವಲ್ಪ ಸಹಾಯವಾಗಬಹುದು. ಏನಾದರೂ ಆತನದ್ದು ಕನ್ನಡದಲ್ಲಿ ಮೊದಲ ನಾಟಕ, ಅದೇ ಅದರ ಪ್ರಶಸ್ತಿ. ಈತ ರಾಘವಾಭ್ಯುದಯ, ಗೀತರಂಗೇಶ್ವರ ಎಂಬ ನಾಟಕಗಳನ್ನು ಬರೆದಿದ್ದಾನಂತೆ! ಇಲ್ಲಿಯವರೆಗೆ ಅವು ಇನ್ನೂ ಸಿಕ್ಕಿಲ್ಲ.

ಅಂದಿನ ಉಳಿದ ಕವಿಗಳಲ್ಲಿ ತಿಮ್ಮಕವಿಯ 'ಯಾದವಗಿರಿ ಮಾಹಾತ್ಮ್ಯ', 'ವೆಂಕಟಗಿರಿ ಮಾಹಾತ್ಮ್ಯ', 'ಪಶ್ಚಿಮರಂಗಮಾಹಾತ್ಮ್ಯ' ಎಂಬ ಮೂರು ಚಂಪೂಗ್ರಂಥಗಳನ್ನು ರಚಿಸಿದ್ದಾನೆ. 'ಯಾದವಗಿರಿಮಾಹಾತ್ಮ್ಯ'ದಲ್ಲಿ ಮೇಲುಕೋಟೆಯ ಮಹತ್ತಿನ ಜೊತೆಗೆ ಚಿಕ್ಕದೇವರಾಜನ ಪರಾಕ್ರಮ, ಆತನ ವಂಶಾವಳಿಗಳ ಇತಿಹಾಸವೂ ಇದೆ. ರುದ್ರಭಟ್ಟನನ್ನು ಅನುಕರಿಸುವ ಈ ಕವಿಕೃತಿಗಳು ಪ್ರೌಢವಾಗಿವೆ. ಮಲ್ಲಿಕಾರ್ಜುನ ಕವಿ 'ಶ್ರೀ ರಂಗಮಹಾತ್ಮ್ಯ'ವನ್ನು ಚಂಪೂವಿನಲ್ಲಿ ಬರೆದಿದ್ದಾನೆ; ಆತನ ಕಲ್ಪನಾಶಕ್ತಿ ಮಹೋನ್ನತವಲ್ಲದಿದ್ದರೂ ಆತನ ಶೈಲಿ ಲಲಿತವಾಗಿದೆ. ವೇಣುಗೋಪಾಲ ವರಪ್ರಸಾದನು 'ಚಿಕ್ಕದೇವರಾಜವಂಶಾವಳಿ'ಯನ್ನೂ, ಚಿದಾನಂದಕವಿ 'ಮುನಿವಂಶಾಭ್ಯುದಯ'ವನ್ನು ಮಲ್ಲರಸನು 'ದಶಾವತಾರ ಚರಿತೆ'ಯನ್ನು ಬರೆದಿದ್ದಾನೆ. ಮೊದಲಿನವೆರಡು ಚಂಪೂ ರೂಪದಲ್ಲಿವೆ; ಕಥೆಗಿಂತ ವರ್ಣನೆಗೆ ಹೆಚ್ಚು ಪ್ರಾಶಸ್ತ್ಯ ಅವುಗಳಲ್ಲಿ. 'ಮುನಿವಂಶಾಭ್ಯುದಯ' ಜೈನಮುನಿಗಳ ಪರಂಪರೆಯನ್ನು ಒಳಗೊಂಡು ಸಾಂಗತ್ಯದಲ್ಲಿದೆ.

೪. ಹೊನ್ನಮ್ಮ

ಈಕೆ ಚಿಕ್ಕದೇವರಾಜನ ಸಂಚಿಕೆಯ ಊಳಿಗದಲ್ಲಿದ್ದವಳು, ರಾಜನ ಪಟ್ಟಮಹಿಷಿ ದೇವಾಜಮ್ಮಣ್ಣಿಯ ಪ್ರೀತಿಪಾತ್ರಳಾಗಿದ್ದವಳು, ಅಳಸಿಂಗರಾರ್ಯನ ಶಿಷ್ಯಳಾಗಿದ್ದವಳು. ರಾಜನು ಈಕೆಯನ್ನು 'ಸರಸಸಾಹಿತ್ಯದ ವರದೇವತೆ' ಎಂದು ಹೇಳಿ, ಅವಳಿಂದ ಕಾವ್ಯವನ್ನು ಬರೆಸುವಂತೆ ರಾಣಿಗೆ ಹೇಳಿದನಂತೆ! ರಾಣಿಯ ಅಪ್ಪಣೆಯಂತೆ ಹೊನ್ನಮ್ಮ 'ಹದಿಬದೆಯ ಧರ್ಮ'ವನ್ನು ಬರೆದಳು. ೪೭೭೮ ಸಾಂಗತ್ಯಪದ್ಯಗಳನ್ನು ಒಳಗೊಂಡು ಈ ಕಾವ್ಯ ಪತಿವ್ರತಾಧರ್ಮವನ್ನು ಬೋಧಿಸುತ್ತದೆ.

'ಧರ್ಮದ ತನಿಗಂಪು ತಲೆದೋರೆ ಕಾವ್ಯದ। ಪೆರ್ಮೆ ಬೇರ್ವರಿದು ಬಿತ್ತರಿಸೆ। ನಿರ್ಮಲಸತಿಯರ ಧರ್ಮದ ಕೃತಿ'ಯನ್ನು ನಿರ್ಮಿಸುತ್ತಿರುವುದಾಗಿ ಹೇಳಿಕೊಂಡಿದ್ದಾಳೆ. ಕವಯಿತ್ರಿ, ಇದು ನಿಜ; ಪರಂಪರಾಗತವಾಗಿ ಬಂದ ಪತಿವ್ರತಾಧರ್ಮ ಇದರಲ್ಲಿ ಸರಳಸುಂದರವಾಗಿ ನಿರೂಪಿತವಾಗಿದೆ. ಹೆಣ್ಣಿನ ಸ್ಥಾನಮಾನಗಳನ್ನು ಹೊನ್ನಮ್ಮ ಬಹು ಸುಂದರವಾಗಿ ಶಕ್ತಿಯುತವಾಗಿ ನಿರೂಪಿಸುತ್ತಾಳೆ.

ಪೆಣ್ಣಲ್ಲವೆ ತಮ್ಮನೆಲ್ಲ ಪಡೆದ ತಾಯಿ । ಪೆಣ್ಣಲ್ಲವೆ ಪೊರೆದವಳು
ಪೆಣ್ಣುಪೆಣ್ಣೆಂದೇಕೆ ಬೀಳುಗಳೆವರು । ಕಣ್ಣು ಕಾಣದ ಗಾವಿಲರು

'ಕುವರನಾದೊಡೆ ಬಂದ ಗುಣವೇನದರಿಂದ ಕುವರಿಯಾದೊಡೆ ಕುಂದೇನು ?' ಎಂದು ಪ್ರಶ್ನಿಸಿ, 'ಪೆಣ್ಣು ಪೆತ್ತದರಿಂದೆ ಪೆಸರವಿಸಿತು ಮಿಗೆ। ಬಣ್ಣವೇರಿತು ವಾಲ್ಗಡಲು ಎಂದು ಹೆಣ್ಣಿನ ಮೇಲ್ಮೆಯನ್ನು ಎತ್ತಿಹಿಡಿಯುತ್ತಾಳೆ.

ಪತಿಶುಶ್ರೂಷೆಗಿಂತ ದೊಡ್ಡ ತಪಸ್ಸಿಲ್ಲವಂತೆ । ಪತಿವ್ರತೆಯ ನಡತೆ ಹೇಗಿರಬೇಕು ?
ಮುಡಿಯೊಳು ಪೊತ್ತು ಮುದ್ದಿಸಿದೊಡೇನಡಿಗಳಂ
ಪೊಡೆವಿಗಿಟ್ಟೊರಸಿದೊಡೇನು।
ಒಡೆಯನಿಟ್ಟಂತಿರ್ಪುದೊಡನೆಗುಚಿತವೆಂದು
ನಡೆವುದು ನಲ್ವೆಂಡಿರೊಲಿದು
ಹೆಣ್ಣು ಅಂತಹ ಪತಿವ್ರತೆಯಾದರೆ
ಮಳೆ ಕರೆವುದು ಬೆಳೆ ಪೆರ್ಚುದಿಳೆ ತಳ । ಕಿಳಿದುಪೋಗದೆ ಪಡೆದಿಹುದು
ಪಳಿವಿಲ್ಲದೆ ಪತಿವ್ರತೆಯರ ನಡತೆಯ । ಬಳದೊಳೆಂಬರು ಬಲ್ಲವರು

ಎಂದು ಹೇಳುತ್ತಾಳೆ.

'ಮನದನ್ನನೊಳು ಮಾಧವನ ಭಾವಿಸೆ' ಸತಿಗೆ ಮೋಕ್ಷ ಶ್ರೀಪತಿಯ ಭಕ್ತಿಗಿಂತಲೂ ಪತಿಭಕ್ತಿ ಮಿಗಿಲೆಂದು ಬೋಧಿಸುತ್ತಾ ಈಕೆ ಹೇಳಿರುವ ಪತಿವ್ರತೆಯ ಕಥೆ ಬಹು ರಮ್ಯವಾಗಿದೆ, ರಸವತ್ತಾಗಿದೆ, ಬೋಧಪ್ರದವಾಗಿದೆ, ಹೆಣ್ಣು ಗಂಡನ್ನು ಗೌರವಿಸುವಂತೆ ಗಂಡೂ ಹೆಣ್ಣನ್ನು ಅಕ್ಕರೆಯಿಂದ ಪೋಷಿಸಬೇಕು – 'ನಸುನಾಣ್ಣುವೆಳವೆಂಡಿರ ನಲವೇರಿಸ ... ಪೊಸ ಪೂವಸರಗೈದು' ಮುಡಿಯುವಂತೆ ಗುರು ಗೌರವ ಪ್ರೇಮಗಳಿಂದ ಲಾಲನೆ ಪಾಲನೆ ಮಾಡಬೇಕು.

ನೀತಿಬೋಧನೆಯ ತನ್ನ ಗುರಿಯನ್ನು ಸಾಧಿಸಿರುವುದರಲ್ಲಿ ಕವಯಿತ್ರಿ ಅಗ್ರಗಣ್ಯಳಾಗಿದ್ದಾಳೆ.

೫. ಶೃಂಗಾರಮ್ಮ

'ಚಿಕ್ಕದೇವಭೂಪಾಲ ಸಂತವಿಸಿದ ಸಣ್ಣಮಗಳು' ತಾನು ಎಂದುಕೊಂಡಿರುವ ಶೃಂಗಾರಮ್ಮ 'ಪದ್ಮಿನೀಕಲ್ಯಾಣ'ವನ್ನು ಸಾಂಗತ್ಯದಲ್ಲಿ ಬರೆದಿದ್ದಾಳೆ. ತಿರುಪತಿಯ ಶ್ರೀನಿವಾಸನಿಗೂ ಪದ್ಮಾವತಿಗೂ ನಡೆದ ವಿವಾಹ ಇದರ ವಸ್ತು. ಹೊನ್ನಮ್ಮನ ಕಾವ್ಯಶಕ್ತಿ ಈಕೆಯಲ್ಲಿಲ್ಲ. ಕಾವ್ಯವು ೧೮೯ ಪದ್ಯಗಳನ್ನು ಒಳಗೊಂಡ ಪುಟ್ಟಗ್ರಂಥ. ಇದು ಮುದ್ದಾಗಿದೆ. ಪದ್ಮಾವತಿಯ ಸಖಿಯರನ್ನು ವರ್ಣಿಸುತ್ತಾ–

ನುಡಿವರು ಗಿಳಿಯಂತೆ, ಸಖಿಯರೊಂದಾಗಿ ಮೆ । ಲ್ಲಡಿಯಿಡುವರು ಹಂಸೆಯಂತೆ
ಬೆಡಗಿಂದ ನವಿಲಂತೆ ನಲಿಯುತ್ತಿದ್ದರು ಮುನ್ನ । ಕಡುಚಪಲೆಯರೊಂದುಗೂಡಿ

ಎಂದು ಹಾಡುವುದು ಕವಿಸಮಯದ ಚೌಕಟ್ಟಿನಲ್ಲಿಯೇ ಇದ್ದರೂ ಸರಳ ಸುಂದರವಾಗಿದೆ. ಕವಯಿತ್ರಿಯರ ವಿರಳ ಸಂಖ್ಯೆಯ ದೃಷ್ಟಿಯಿಂದ ಈಕೆಗೆ ಸ್ವಾಗತವುಂಟು.

ಚಿಕ್ಕದೇವರಾಜನ ನಂತರ ಇಮ್ಮಡಿ ನರಸರಾಜ ಪಟ್ಟಕ್ಕೆ ಬಂದ. ಆತನ ತರುವಾಯ ರಾಜನಾದ ದೊಡ್ಡದೇವರಾಜನ ಆಳ್ವಿಕೆಯಲ್ಲಿ (೧೭೧೭-೩೧) ಬಲವೈದ್ಯದ ಚೆಲುವನೆಂಬ ಕವಿ 'ಕನ್ನಡಲೀಲಾವತಿ' ಮತ್ತು 'ರತ್ನಶಾಸ್ತ್ರ'ಗಳನ್ನು ಬರೆದನು. 'ಲೀಲಾವತಿ' ಗಣಿತ ಶಾಸ್ತ್ರವನ್ನು ಕಂದ, ವಾರ್ಧಕಷಟ್ಪದಿಗಳಲ್ಲಿಯೂ, 'ರತ್ನಶಾಸ್ತ್ರ'ವನ್ನೂ ವಾರ್ಧಕದಲ್ಲಿಯೂ ರಚಿಸಿದ್ದಾನೆ. ಸಾಹಿತ್ಯ ದೃಷ್ಟಿ ಇಲ್ಲಿ ಅಷ್ಟಾಗಿ ಇಲ್ಲ. ರಾಜನ ಷಟ್ಟಮಹಿಷಿಯಾದ ಚೆಲುವಾಂಬೆ ತನ್ನ ಗಂಡನ ಅಪ್ಪಣೆಯಂತೆ 'ವರನಂದೀ ಕಲ್ಯಾಣ'ವನ್ನು ಏಳು ಸಂಧಿಗಳ ಸಾಗತ್ಯದಲ್ಲಿ ರಚಿಸಿದಳು. ಸತ್ಯಭಾಮೆಯು ಡೆಲ್ಲಿಯ ಬಾದಶಹನ ಮಗಳಾಗಿ 'ವರನಂದಿ' ಎಂಬ ಹೆಸರಿನಿಂದ ಹುಟ್ಟಿದ್ದಳೆಂದೂ, ಅವಳಿಗೂ ಮೇಲುಕೋಟೆಯ ಚೆಲುವರಾಯಸ್ವಾಮಿಗೂ ವಿವಾಹ ನಡೆಯಿತೆಂದೂ ಇಲ್ಲಿ ಸಂಭಾವಿಸಿಕೊಳ್ಳಲಾಗಿದೆ. ಆಕೆಯ ಶೈಲಿ ಲಲಿತ ಮಧುರವಾಗಿದೆ. ವರನಂದಿಯ ವಿರಹವೃತ್ತಾಂತ ಮನೋಹರವಾಗಿದೆ. ಈಕೆಯು 'ವೆಂಕಟಾಚಲ ಮಾಹಾತ್ಮ್ಯ ಲಾಲಿಪದ' ಎಂಬ ೨೦೦ ಪದಗಳನ್ನೂ 'ಅಲಮೇಲುಮಂಗಲಾಲೀಪದ' ಎಂಬ ೩೫ ಪದಗಳನ್ನೂ, ಗದ್ಯರೂಪದ 'ತುಲಾಕಾವೇರಿ ಮಾಹಾತ್ಮ್ಯ ಟೀಕೆ'ಯನ್ನು ಬರೆದಿದ್ದಾಳೆ.

ಕಳಲೆಯ ವೀರರಾಜನು ಮೈಸೂರರಸರ ಸಾಮಂತನಾಗಿದ್ದೂ 'ವೈದ್ಯ ಸಂಹಿತಾಸಾರ್ಣವ'ವನ್ನು ಬರೆದಿದ್ದಾನೆ, 'ವೀರರಾಜೋಕ್ತಿ ವಿಲಾಸ' ಎಂಬ ಮತ್ತೊಂದು ಹೆಸರಿನ ಈ ಗ್ರಂಥ ವೈದ್ಯಶಾಸ್ತ್ರಕ್ಕೆ ಪ್ರಮಾಣಗ್ರಂಥದಂತಿದೆ.

ದೊಡ್ಡ ದೇವರಾಜನ ನಂತರ ಪಟ್ಟಕ್ಕೆ ಬಂದವರು ದುರ್ಬಲರಾದುದರಿಂದ ರಾಜ್ಯವು ಕ್ರಮೇಣ ಹೈದರ ಮತ್ತು ಅವನ ಮಗ ಟಿಪ್ಪುವಿನ ಕೈವಶವಾಯಿತು. ಕ್ರಿ.ಶ. ೧೮೧೧ರಲ್ಲಿ ಮುಮ್ಮಡಿ ಕೃಷ್ಣರಾಜರು ರಾಜ್ಯಸೂತ್ರಗಳನ್ನು ವಹಿಸಿಕೊಂಡ ಮೇಲೆ, ಮೈಸೂರು ಅರಸರೊಡನೆ ಕನ್ನಡ ಸಾಹಿತ್ಯವು ಬೆಳೆಯಿತು.

೬. ಮುಮ್ಮಡಿ ಕೃಷ್ಣರಾಜ

ಉದಾರಿಯು ಶ್ರೀಮಂತನಾದರೆ, ವಿದ್ವಾಂಸನು ಅಸೂಯೆಯಿಲ್ಲದವನಾದರೆ ಕವಿಗಳು ಧನ್ಯರಾಗುವರೆಂದು ಮಹಾಕವಿ ರನ್ನನ ಹೇಳಿಕೆ. ಮುಮ್ಮಡಿ ಕೃಷ್ಣರಾಜನು ಆ ಎರಡು ಗುಣಗಳಿಗೂ ತವರುಮನೆಯಾಗಿದ್ದವನು. ಆತನು ಸಾಹಿತ್ಯ ಸಂಗೀತಗಳಲ್ಲಿ ಮಾತ್ರವೇ ಅಲ್ಲದೆ ವೇದಾಂತ ಜ್ಯೋತಿಷಾದಿಗಳಲ್ಲಿ ಆಳವಾದ ಪರಿಜ್ಞಾನವಿದ್ದವನು ಆ ಕೊಡುಗೈ ದೊರೆಯು ಆಸ್ಥಾನ ಸರಸ್ವತಿ ನಿಲ್ದಾಣವಾಗಿತ್ತು. ಸ್ವತಃ ರಾಜನೆ ರಚಿಸಿರುವನೆಂದು ಹೇಳುವ ಗ್ರಂಥಗಳು ತಮ್ಮ ವೈಪುಲ್ಯ, ವೈವಿಧ್ಯಗಳಲ್ಲಿ ನಮಗೆ ಅಚ್ಚರಿಯನ್ನುಂಟು ಮಾಡುತ್ತವೆ. ಆತನು 'ಕೃಷ್ಣರಾಜವಾಣೀವಿಲಾಸರತ್ನಾಕರ' ಎಂಬ ಹೆಸರಿನಿಂದ ಕಾಳಿದಾಸನ ಎಲ್ಲ ನಾಟಕಗಳ ಗದ್ಯ ಕಥೆಗಳನ್ನು ಬರೆದಿದ್ದಾನೆ; ಹಾಗೆಯೇ 'ಉತ್ತರರಾಮಚರಿತ ಕಥೆ', 'ಕಾದಂಬರಿ', 'ದಶಕುಮಾರ ಕಲಾನಿಧಿ', 'ಉಷಾಪರಿಣಯ', 'ಹರಿಶ್ಚಂದ್ರೋಪಾಖ್ಯಾನ', 'ನಳೋಪಾಖ್ಯಾನ', 'ಭಾಮಕಥೆ', ಇತ್ಯಾದಿ ಲಲಿತ ಸುಂದರ ಕಥಾನಕಗಳನ್ನೂ 'ಬತ್ತೀಸಪುತ್ಥಳಿಯ ಕಥೆ', 'ಭೇತಾಳಪಂಚವಿಂಶತಿಯ ಕಥೆ', 'ಶುಕಸಪ್ತತಿ' ಇತ್ಯಾದಿ ಅದ್ಭುತ ರಮ್ಯ ಕಥೆಗಳನ್ನೂ ಬರೆದಿದ್ದಾನೆ. 'ಕಾವೇರಿಮಾಹಾತ್ಮ್ಯ', 'ಅರ್ಕಪುಷ್ಕರಣೀಮಾಹಾತ್ಮ್ಯ', 'ಚುಂಚನಕಟ್ಟೆಮಾಹಾತ್ಮ್ಯ', 'ಶ್ರೀಶೈಲ ಮಹಾತ್ಮ್ಯ', 'ಹಾಲಾಸ್ಯಮಾಹಾತ್ಮ್ಯ' ಎಂಬ ಮಾಹಾತ್ಮ್ಯಗಳನ್ನು ಬರೆದಿದ್ದಾನೆ. 'ಅಶ್ವಮೇಧಿಕ ಟೀಕೆ', 'ದೇವಿಭಾಗವತತಾತ್ಪರ್ಯ ಟೀಕೆ', 'ರಾಮಾಯಣ ಟೀಕೆ', 'ರಾಮಾಯಣತಾತ್ಪರ್ಯ ದೀಪಿಕಾಟೀಕೆ' ಎಂಬ ಪೌರಾಣಿಕ ಗ್ರಂಥಗಳ ಟೀಕೆಯೊಡನೆ 'ಜಾತಕಸಾಮ್ರಾಜ್ಯ ಟೀಕೆ'ಯನ್ನೂ ಬರೆದಿದ್ದಾನೆ. 'ದೇವಿಮಾಹಾತ್ಮ್ಯ', 'ಸಪ್ತಶತಿ',

'ಲಲಿತೋಪಾಖ್ಯಾನ'ಗಳನ್ನೂ 'ಲೈಂಗ್ಯಪುರಾಣ', 'ಶಂಕರಸಂಹಿತೆ'ಗಳನ್ನೂ, 'ಕೃಷ್ಣಕಥಾರತ್ನಾಕರ', 'ಗಯಾಚರಿತ್ರೆ'ಗಳನ್ನೂ ಬರೆದಿದ್ದಾನೆ; ರಾಮಕಥಾ ಕಲ್ಪವೃಕ್ಷ, 'ಭಾರತ ಭಾಗವತ'ಗಳೂ ಆತನಿಂದ ಕನ್ನಡಕ್ಕೆ ಇಳಿದು ಬಂದಿವೆ; 'ಅಧ್ಯಾತ್ಮ ರಾಮಾಯಣ', 'ಕಾಶಿಕಾಂಡ', 'ಉತ್ತರಗೀತೆ', 'ಶನೈಶ್ಚರಕಥೆ' ಇತ್ಯಾದಿಗಳು ಕನ್ನಡದಲ್ಲಿ ಕಾಣಿಸಿಕೊಂಡಿವೆ. ಭರತಖಂಡದ ವೈದಿಕ ಪುರಾಣ ಸಾಹಿತ್ಯವೆಲ್ಲ ಆತನಿಂದ ಕನ್ನಡದಲ್ಲಿ ಕಾಣಿಸಿಕೊಂಡಿದೆಯೆಂದು ಹೇಳಬಹುದು.

ಮುಮ್ಮಡಿ ಕೃಷ್ಣರಾಜನ ಗ್ರಂಥಗಳೆಲ್ಲವೂ – ಸೌಗಂಧಿಕಾಪರಿಣಯ (ಇದು ಗದ್ಯದಲ್ಲಿಯೂ ಇದೆ) ನಂಜುಂಡಶತಕ ಇತ್ಯಾದಿ ಎರಡು ಮೂರನ್ನು ಬಿಟ್ಟರೆ ಗದ್ಯ ಗ್ರಂಥಗಳೇ, ಆತನ ಶೈಲಿ ಪುರಾಣಿಕವಾದುದು. ಗದ್ಯದ ಬೆಳವಣಿಗೆಯಲ್ಲಿ ಆತನೂ ಆತನ ಆಶ್ರಿತನೂ ನೀಡಿರುವ ಪಾತ್ರ ಅದ್ವಿತೀಯವಾದುದು. ಆಧುನಿಕ ಕನ್ನಡ ಸಾಹಿತ್ಯಕ್ಕೆ ಅರುಣೋದಯವಾದುದೂ ಈತನ ಕಾಲದಲ್ಲಿಯೆ. ಕಾವ್ಯಸೃಷ್ಟಿಯಲ್ಲಿ ಆತನ ಆಸಕ್ತಿ ಅಭಿಮಾನ, ಪರಿಶ್ರಮ, ಪಾಂಡಿತ್ಯಗಳು ಸ್ತುತ್ಯವಾದವು. ಆತನು ತನ್ನ 'ರಾಮಕಥಾ ಕಲ್ಪವೃಕ್ಷ'ವನ್ನು ಬರೆಯುವ ಮುನ್ನ 'ಶ್ರೀಮದ್ರಾಮಾಯಣ', 'ವಿಷ್ಣು ಪುರಾಣ', 'ಪದ್ಮ ಪುರಾಣ', 'ಕೂರ್ಮಪುರಾಣ', 'ಅಧ್ಯಾತ್ಮಿಕ ರಾಮಾಯಣ', 'ಶಿವಧರ್ಮೋತ್ತರ', 'ವಿಷ್ಣುಧರ್ಮೋತ್ತರ', 'ಜೈಮಿನಿ' ಇತ್ಯಾದಿ ಗ್ರಂಥಗಳಲ್ಲಿರುವ ರಾಮಕಥೆಗಳನ್ನು ಪರಿಶೋಧನೆ ಮಾಡಿ, ಸಾರವನ್ನು ಸಂಗ್ರಹಿಸಿ, ಗ್ರಂಥರಚನೆ ಮಾಡಿರುವಂತೆ ಹೇಳಿಕೊಂಡಿದ್ದಾನೆ; ಹಾಗೆಯೇ 'ಕೃಷ್ಣ ಕಥಾರತ್ನ'ವನ್ನು ಬರೆವ ಮುನ್ನ 'ಭಾಗವತ', 'ವಿಷ್ಣುಪುರಾಣ', 'ಹರಿವಂಶ', 'ಭಾರತ' ಇತ್ಯಾದಿ – ಗ್ರಂಥಗಳನ್ನು ಪರಿಶೋಧನೆ ಮಾಡಿರುವನಂತೆ !

ಮುಮ್ಮಡಿ ಕೃಷ್ಣರಾಜನ ಆಶ್ರಯದಲ್ಲಿದ್ದ ಅನೇಕ ಕವಿಗಳು ಸಂಸ್ಕೃತ ಕನ್ನಡಗಳಲ್ಲಿ ನೂರಾರು ಗ್ರಂಥಗಳನ್ನು ಬರೆದಿದ್ದಾರೆ. ಇವರಲ್ಲಿ ತಮ್ಮಯ್ಯ ಕವಿ, ಮುದ್ದಗಿರಿನಂಜಪ್ಪ, ಸೀತಾರಾಮಸೂರಿ, ನಂಜುಂಡಕವಿ, ಶಾಂತರಾಜ ಪಂಡಿತ ಮೊದಲಾದವರು ಕನ್ನಡದಲ್ಲಿ ಕಾವ್ಯಗಳನ್ನು ರಚಿಸಿದ್ದಾರೆ. ಅಂದಿನ ಕಾವ್ಯಗಳಲ್ಲಿ ಕೆಂಪುನಾರಾಯಣನ 'ಮುದ್ರಾಮಂಜೂಷ' ಅತ್ಯಂತ ಗಮನಾರ್ಹವಾದುದು, ಜನಪ್ರಿಯವಾದುದು.

೭. ಕೆಂಪು ನಾರಾಯಣ

ಈತನ 'ಮುದ್ರಾಮಂಜೂಷ'ವು ವಿಶಾಖದತ್ತನ 'ಮುದ್ರರಾಕ್ಷಸ' ನಾಟಕದ ಆಧಾರದ ಮೇಲೆ ರಚಿತವಾದುದು. ರಾಜ ತಂತ್ರ ನಿಪುಣನಾದ ಚಾಣುಕ್ಯನು ಮತಾಂಧರಾದ ನವನಂದರನ್ನು ಸಂಹರಿಸಿ, ಮೌರ್ಯನಾದ ಚಂದ್ರಗುಪ್ತನನ್ನು ಪಟ್ಟಕ್ಕೇರಿಸಿದುದು ಈ ಕಥೆಯ ವಸ್ತು. ತಾನು ಎಡವಿದ ಗರಿಕೆಯನ್ನು ಚಾಣುಕ್ಯನು ಸಮೂಲವಾಗಿ ಕಿತ್ತೆಸುವುದು, ಇದನ್ನು ಕಂಡ ಚಂದ್ರಗುಪ್ತ ಆತನನ್ನು ಆಶ್ರಯಿಸುವುದು. ಅನ್ನಸತ್ರದಲ್ಲಿ, ಆದ ಅಪಮಾನದಿಂದ ಚಾಣುಕ್ಯ ಮಾಡುವ ಪ್ರತಿಜ್ಞೆ ಇತ್ಯಾದಿ ಕಥಾಭಾಗಗಳನ್ನು ಬೃಹತ್ಕಥೆ, ವಿಷ್ಣುಪುರಾಣ, ಕಾಮಾಂಧಕಾದಿಗಳಿಂದ ಸಂಗ್ರಹಿಸಿ, ಚಾಣುಕ್ಯನ ಕಥೆಯನ್ನು ಆದ್ಯಂತವಾಗಿ ಹೆಣೆದಿದ್ದಾನೆ. ಚಾಣುಕ್ಯನ ಸೂಕ್ಷ್ಮಬುದ್ಧಿ, ಕಾರ್ಯಕ್ಷಮತೆ, ರಾಜತಂತ್ರಜ್ಞತೆ, ತ್ಯಾಗಶೀಲತೆ, ನಿಸ್ವಾರ್ಥಬುದ್ಧಿ ಮತ್ತು ಬ್ರಹ್ಮ ತೇಜಸ್ಸುಗಳು ನಮ್ಮನ್ನು ಬೆರಗುಗೊಳಿಸುತ್ತವೆ. ಚಂದ್ರಗುಪ್ತನು ರಾಜನಾದಾಗಲೂ ಆತನಿದ್ದುದು ಒಂದು ಗುಡಿಸಿಲಲ್ಲಿ, ಅವನನ್ನು ಸಿಂಹಾಸನದಲ್ಲಿ ಕೂಡಿಸಿ, ಸ್ವಾಮಿಭಕ್ತನೂ ರಾಷ್ಟ್ರಪ್ರೇಮಿಯೂ ಚತುರಮತಿಯೂ ಆದ ರಾಕ್ಷಸನನ್ನು ಮಂತ್ರಿಯಾಗಿ ನೇಮಿಸಿ, ಆತನು ತಪೋವನಕ್ಕೆ ಹೊರಟುಹೋಗುತ್ತಾನೆ. ಆತನ ಪಾತ್ರ ಉಜ್ವಲವಾಗಿದೆ, ಪ್ರಭಾವಪೂರ್ಣವಾಗಿದೆ, ಮಹೋನ್ನತವಾಗಿದೆ. ಕೆಂಪುನಾರಾಯಣನ ಗದ್ಯ ಪ್ರೌಢವಾದುದಾದರೂ ಲಲಿತವಾಗಿದೆ. ಶಕ್ತಿಯುತವಾಗಿದೆ, ಸಾರವತ್ತಾಗಿದೆ. ಗದ್ಯಸಾಹಿತ್ಯದ ಬೆಳವಣಿಗೆಯಲ್ಲಿ ಆಧುನಿಕ ಸಾಹಿತ್ಯವನ್ನು ಮುಟ್ಟುವುದರ ಹಿಂದಿನ ಮಜಲೆ 'ಮುದ್ರಾಮಂಜೂಷ'.

೮. ಅಳಿಯ ಲಿಂಗರಾಜ

ಈತ ಮುಮ್ಮಡಿ ಕೃಷ್ಣರಾಜನ ಇಬ್ಬರು ಪುತ್ರಿಯರನ್ನು ಮದುವೆಯಾಗಿ 'ಅಳಿಯಲಿಂಗರಾಜ'ನೆಂದು ಪ್ರಖ್ಯಾತನಾದವನು. ಕನ್ನಡ-ಸಂಸ್ಕೃತಗಳಲ್ಲಿ ಆಳವಾದ ಪಾಂಡಿತ್ಯವನ್ನು ಗಳಿಸಿಕೊಂಡು, ಸಂಗೀತಸಾಹಿತ್ಯಗಳಲ್ಲಿ ನಿಪುಣನೆಂದೆನಿಸಿಕೊಂಡಿದ್ದ ಈತನು 'ಉಭಯಕವಿತಾವಿಶಾರದ'ನೆಂಬ ಬಿರುದನ್ನು ಪಡೆದಿದ್ದನು. ಈತನು ಸುಮಾರು ೫೦ ಗ್ರಂಥಗಳನ್ನು ಬರೆದಿದ್ದಾನೆ. ಇವು ಚಂಪೂ, ಷಟ್ಪದಿ, ಸಾಂಗತ್ಯ, ಶತಕ, ಯಕ್ಷಗಾನ, ಹಾಡು ಇತ್ಯಾದಿ ಹಲವು ರೂಪಗಳಲ್ಲಿದ್ದು, ಕವಿಯ ಸರ್ವತೋಮುಖವಾದ ಕವಿತಾಶಕ್ತಿಗೆ ಸಾಕ್ಷಿಯಾಗಿವೆ. ಈತನ 'ನರಪತಿಚರಿತೆ' ಒಂದು ಅಲಂಕಾರಗ್ರಂಥ. ಇದರ ಉದಾಹರಣಾ ಪದ್ಯಗಳೆಲ್ಲ ರಾಜನ ಸ್ತುತಿರೂಪವಾಗಿವೆ. ಈತನ ಕಾವ್ಯಗಳಲ್ಲಿ ಸುಮಾರು ३೦ ಯಕ್ಷಗಾನಗಳೇ ಆಗಿವೆ. ರಾಜನು ಯಕ್ಷಗಾನಪ್ರಿಯನಾಗಿದ್ದ ಎಂದು ತೋರುತ್ತದೆ. ಆ ಕಾಲದಲ್ಲಿ ಯಕ್ಷಗಾನಗಳ ಸುರಿಮಳೆಯನ್ನು ನೋಡುತ್ತೇವೆ. ದಕ್ಷಿಣ ಕನ್ನಡದಿಂದ ಯಕ್ಷಗಾನದ ಗುಂಪೊಂದು ಬಂದು ಆಶ್ರಯದಲ್ಲಿ ನೆಲೆಸಿತ್ತಂತೆ!

ಮುಮ್ಮಡಿ ಕೃಷ್ಣರಾಜನನ್ನು 'ಕನ್ನಡದ ಭೋಜರಾಜ' ಎಂದು ಕರೆದು ಗೌರವಿಸುತ್ತಾರೆ. ಆತನ ರಸಿಕತೆ, ರಸಜ್ಞತೆ, ಔದಾರ್ಯ, ವಿದ್ವಜ್ಜನಗೋಷ್ಠಿಗಳು ಆತನ ಪೀಳಿಗೆಯವರಿಗೆಲ್ಲ ಮಾರ್ಗದರ್ಶಕವಾದುವು. ಆತನ ನಂತರ ಪಟ್ಟಕ್ಕೆ ಬಂದ ಚಾಮರಾಜನು ತಂದೆಯಂತೆಯೆ ಸಾಹಿತ್ಯ ಸಂಗೀತಪ್ರಿಯನಾಗಿದ್ದನು. ಆತನ ಕಾಲದಲ್ಲಿ ಕನ್ನಡಸಾಹಿತ್ಯದ ಆಧುನಿಕಯುಗ ಪ್ರಾರಂಭವಾಯಿತು. ಕನ್ನಡದಲ್ಲಿ ಮೊದಲ ಕೋಡೆನಿಸಿದ್ದ ನಾಟಕಸಾಹಿತ್ಯ ಈತನ ಪ್ರೋತ್ಸಾಹದಿಂದ ಅತುಲವಾಗಿ ಬೆಳೆಯಿತು. ಹಲವಾರು ಕವಿಗಳು, ಕನ್ನಡ ನಾಟಕಕಾರರು ಈತನ ಆಶ್ರಯದಲ್ಲಿ ಪೋಷಣೆಯನ್ನು ಪಡೆದರು. ಅವರಲ್ಲಿ ಬಸಪ್ಪಶಾಸ್ತ್ರಿಯ ಹೆಸರು ಚಿರಸ್ಮರಣೀಯವಾದುದು. ಆತನನ್ನು ಕುರಿತು 'ಕುಮಾರವ್ಯಾಸಯುಗದ ವೀರಶೈವ ಕವಿಗಳು' ಎಂಬ ಭಾಗದಲ್ಲಿ ವಿವೇಚಿಸಲಾಗಿದೆ.

ಜೈನ ಕವಿಗಳು

ಚಂಪೂವಿನಲ್ಲಿ ಕನ್ನಡಸಾಹಿತ್ಯವನ್ನು ಮೇಲೆತ್ತಿ ಮುಗಿಲುಮುಟ್ಟಿಸಿದ ಜೈನ ಕವಿಗಳು ಕುಮಾರ ವ್ಯಾಸಯುಗದಲ್ಲಿ, ಈ ಯುಗಧರ್ಮಕ್ಕೆ ಶರಣಾಗಿಯೊ ಏನೊ ! ದೇಶಿಯ ಛಂದಸ್ಸಿನಲ್ಲಿ ಕಾವ್ಯಸೃಷ್ಟಿಯನ್ನು ಕೈಕೊಂಡರು. ಪಾಂಡಿತ್ಯಪ್ರಚುರವಾಗಿ ರಾಜಸಭೆಯಲ್ಲಿ ಮನ್ನಣೆಪಡೆಯುತ್ತಿದ್ದ ಅವರ ಕಾವ್ಯ ಶಕ್ತಿ ಇಂದು ಷಟ್ಪದಿ ಸಾಂಗತ್ಯಗಳ ಧಾಟಿಯನ್ನು ಪಡೆದು ಜನಸಾಮಾನ್ಯರ ಸ್ವತ್ತಾದವು. ಜೈನಕವಿಗಳ ಪ್ರಭಾವ ಇತರ ಕವಿಗಳ ಮೇಲಾಗುವುದಕ್ಕಿಂತ ಇತರ ಕವಿಗಳ ಪ್ರಭಾವ ಇವರ ಮೇಲೆ ಬಿದ್ದಿದೆಯೆಂದು ಕಾಣುತ್ತದೆ, ಈ ಯುಗದಲ್ಲಿ ಜೈನಕವಿಗಳ ಸಂಖ್ಯೆ ಕಡಿಮೆ. ಅವರಲ್ಲಿಯೂ ಒಬ್ಬಿಬ್ಬರನ್ನು ಬಿಟ್ಟರೆ ಉಳಿದವರೆಲ್ಲ ಅಷ್ಟೇನೂ ಶ್ರೇಷ್ಠರಾದ ಕವಿಗಳಲ್ಲ. ಅವರಲ್ಲಿ ಕೆಲವರನ್ನು ಇಲ್ಲಿ ಪರಿಚಯ ಮಾಡಿಕೊಡಹೊರಡುತ್ತೇವೆ.

೧. ಭಾಸ್ಕರ (ಕ್ರಿ.ಶ. ೧೪೨೪)

ಈತನು 'ಜೀವಂಧರಚರಿತೆ'ಯ ಕರ್ತೃ ಕವಿಯು ಬಸವಾಂಕನೆಂಬ ಜೈನಬ್ರಾಹ್ಮಣನ ಮಗನೆಂದೂ, ಪೆನುಗೊಂಡೆಯ ಶಾಂತೇಶ್ವರ ಜಿನಾಲಯದಲ್ಲಿ ಶಕ ೧೪೨೫ರಲ್ಲಿ (ಕ್ರಿ.ಶ. ೧೫೧೫) ತನ್ನ ಈ ಕಾವ್ಯವನ್ನು ಬರೆದವನೆಂದೂ ಹೇಳಿಕೊಂಡಿದ್ದಾನೆ. ವಾರೀಭ ಸಿಂಹಸೂರಿ ಸಂಸ್ಕೃತದಲ್ಲಿ ಬರೆದುದನ್ನು ಈತ ಕನ್ನಡಿಸಿದ್ದಾನಂತೆ. ಇಲ್ಲಿನ ಕಥಾಭಾಗವು ರಮ್ಯವಾಗಿದೆ. ರಾಜಪುರಿಯ ಸತ್ಯಂಧರ ರಾಜನ ಮಗ ಜೀವಂಧರ. ಈತ ಗರ್ಭದಲ್ಲಿದ್ದಾಗಲೇ ಈತನ ತಾಯಿ ಮಂತ್ರಿಯಾದ ಕಾಷ್ಠಾಂಗಾರನ ಕೈಗೆ ಸಿಕ್ಕಿ ಅಡವಿಪಾಲಾಗುತ್ತಾಳೆ. ಅಲ್ಲಿ ಜನಿಸಿದ ಜೀವಂಧರನು ಬೆಳೆದು ದೇಶದೇಶಗಳನ್ನೆಲ್ಲ ಅಲೆದು,

ಹಲವು ರಾಜಕುಮಾರಿಯರನ್ನು ಮದುವೆಯಾಗಿ ಕಾಷ್ಠಾಂಗಾರನನ್ನು ನಿಗ್ರಹಿಸಿ, ರಾಜಪುರಿಯ ರಾಜನಾಗುತ್ತಾನೆ, ಕೆಲಕಾಲದ ಮೇಲೆ ಆತ ವೈರಾಗ್ಯಪರನಾಗಿ ಸನ್ಯಾಸಿಯಾಗುತ್ತಾನೆ. ಜೀವಂಧರನ ತಾಯಿ ಅಡವಿಯಲ್ಲಿ ದಿಕ್ಕೆಟ್ಟು ತಿರುಗುವ ಸಂದರ್ಭ ಕರುಣಾರಸಭರಿತವಾಗಿದೆ. ಕವಿಯ ವರ್ಣನೆಗಳು ಹೃದ್ಯವಾಗಿವೆ. 'ನುಡಿಸಿ ತುಂಬಿಯನೆಲರ ದಟ್ಟಡಿಯಿಡಿಸಿ, ಗೂಡಿನ ತೊಟ್ಟಿಲೊಳು ಖಗವಿಡಿದು ನಗಿಸಿಯೆ ..... ಹಲವು ಮಕ್ಕಳ ಹಡೆದ ತಾಯಂದದಲಿ ಸಂಧ್ಯಾಮಡದಿಯೊಪ್ಪಿದಳು' ಎಂಬ ಕವಿಕಲ್ಪನೆ ಎಷ್ಟು ರಮ್ಯವಾಗಿದೆ ! ಕವಿಯ ಶೈಲಿ ಸರಳವಾಗಿದೆ, ಲಲಿತವಾಗಿದೆ, ನಾದಮಯವಾಗಿದೆ, ಈತನ ಭಾವ ಭಾಷೆಗಳಲ್ಲಿ ಕುಮಾರವ್ಯಾಸನ ಛಾಯೆ ಕಂಡು ಬರುತ್ತದೆ.

೨. ಕಲ್ಯಾಣ ಕೀರ್ತಿ (ಕ್ರಿ.ಶ. ೧೪೨೯)

'ಜ್ಞಾನಚಂದ್ರಾಭ್ಯುದಯ', 'ಕಾಮನ ಕಥೆ', 'ಅನುಪ್ರೇಕ್ಷೆ', 'ಜಿನಸ್ತುತಿ', 'ತತ್ತ್ವಭೇದಾಷ್ಟಕ' ಎಂಬ ಗ್ರಂಥಗಳ ಕರ್ತೃವಾದ ಕಲ್ಯಾಣಕೀರ್ತಿ ತನ್ನ 'ಜ್ಞಾನಭ್ಯುದಯ'ದಲ್ಲಿ ಆ ಕಾವ್ಯಸೃಷ್ಟಿಯ ಕಾಲವನ್ನು ಹೇಳಿಕೊಂಡಿದ್ದಾನೆ. ವಾರ್ಧಕ, ಭಾಮಿನಿ ಮತ್ತು ಪರಿವರ್ಧಿನಿಷಟ್ಪದಿಗಳ ೬೦೦ ಪದ್ಯಗಳನ್ನು ಒಳಗೊಂಡ 'ಜ್ಞಾನಚಂದ್ರಾಭ್ಯುದಯ'ದಲ್ಲಿ ಜ್ಞಾನಚಂದ್ರನೆಂಬ ರಾಜ ತಪಸ್ಸು ಮಾಡಿ ಅಭ್ಯುದಯವನ್ನು ಪಡೆದ ಕಥೆ ಅಡಕವಾಗಿದೆ. ಕವಿಸಮಯದ ಚೌಕಟ್ಟಿನಲ್ಲಿಯೇ ವರ್ಣನಾಭಾಗಗಳನ್ನು ಒಳಗೊಂಡ ಈ ಕೃತಿಯಲ್ಲಿ ಮಹೋನ್ನತ ಭಾವಗಳೇನೂ ಇಲ್ಲ. ಈತನ 'ಕಾಮನ ಕಥೆ' ತುಳುವ ದೊರೆ ಪಾಂಡ್ಯಸಿಂಹನ ಅಪೇಕ್ಷೆಯಂತೆ ಬರೆದ ಜೈನಧರ್ಮಕ್ಕನುಸಾರವಾದ ಕಾಮನ ಕಥೆ, ಮಧ್ಯೆ ಮಧ್ಯೆ ಕಂದಷಟ್ಪದಿಗಳನ್ನು ಒಳಗೊಂಡ ಈ ಸಾಂಗತ್ಯ ಗ್ರಂಥದಲ್ಲಿ ೩೩೦ ಪದ್ಯಗಳಿದ್ದು ಛಂದಸ್ಸಿನ ಚೌಚೌ ಇದ್ದಂತಿದೆ. ಇದು ಸರಳವಾಗಿದೆ, ಲಲಿತವಾಗಿದೆ, ಸ್ವಾಭಾವಿಕವಾಗಿದೆ. ಕವಿಯು ಬರೆದಿರುವ ಉಳಿದ ಮೂರು ಕಾವ್ಯಗಳೂ ಜೈನಧರ್ಮನಿರೂಪಣೆಗೆ ಮೀಸಲಾಗಿವೆ. ಈತನು 'ಸಿದ್ಧರಾಶಿ' ಎಂಬ ಗ್ರಂಥವನ್ನೂ ಬರೆದಿರುವನಂತೆ. ಆತನ ಕಾವ್ಯಾಂಶಗಳಲ್ಲಿಯೆ ಕಾವ್ಯಾಂಶಕ್ಕೆ ಅಭಾವವಾಗಿರುವ ಆತನ ಧರ್ಮಗ್ರಂಥಗಳಲ್ಲಿ ಕಾವ್ಯಾಂಶಗಳನ್ನು ಹುಡುಕುವುದೆಲ್ಲಿ ಬಂತು?

೩. ರತ್ನಾಕರವರ್ಣಿ (ಕ್ರಿ.ಶ. ೧೪೩೭)

ಕುಮಾರವ್ಯಾಸಯುಗದ ಜೈನ ಕವಿಗಳಲ್ಲಿ ರತ್ನಾಕರವರ್ಣಿ ಅಗ್ರಗಣ್ಯ. ೧೯ನೆಯ ಶತಮಾನದ ದೇವಚಂದ್ರನು ತನ್ನ 'ರಾಜಾವಳೀಕಥೆ'ಯಲ್ಲಿ ರತ್ನಾಕರನ ಕಥೆಯನ್ನು ಕೊಟ್ಟಿದ್ದಾನೆ. ಅದರಿಂದ ಈ ಕವಿಯ ವಿಚಾರವಾಗಿ ಇಷ್ಟು ತಿಳಿದು ಬರುತ್ತದೆ. ರತ್ನಾಕರನು ಸೂರ್ಯವಂಶಕ್ಕೆ ಸೇರಿದ ದೇವರಾಜನ ಮಗ. ಕಾರ್ಕಳದರಸು ಭೈರವರಾಜನ ಆಸ್ಥಾನಕವಿಯಾಗಿ 'ಶೃಂಗಾರ ಕವಿ' ಎಂಬ ಬಿರುದನ್ನು ಪಡೆದಿದ್ದ. ಆತನು ರಾಜನ ಮಗನ ಪ್ರೇಮಪಾತ್ರನೆಂಬ ಕಾರಣದಿಂದ ರಾಜನ ಆಗ್ರಹಕ್ಕೆ ಪಾತ್ರನಾಗುವ ಭಯದಿಂದ ಓಡಿಹೋಗಿ ಗುರುಗಳಾದ ಮಹೇಂದ್ರ ಕೀರ್ತಿಗಳಲ್ಲಿ ದೀಕ್ಷೆ ವಹಿಸಿದ್ದ. ಅಲ್ಲಿ ವಿಜಯಣ್ಣ ಕವಿಯ ಕನ್ನಡ 'ದ್ವಾದಶಾನುಪ್ರೇಕ್ಷೆ'ಗೆ ಪ್ರಭಾವನೆಯಾದುದನ್ನು ಕಂಡು ತನ್ನ ಕಾವ್ಯವಾದ ಭರತೇಶವೈಭವಕ್ಕೂ ಆ ಮರ್ಯಾದೆ ಸಲ್ಲಬೇಕೆಂದು ಹೇಳಿ, ಹಟ ಹಿಡಿದು, ಆ ಮೂಲಕ ಗುರುಗಳ ಆಗ್ರಹಕ್ಕೆ ಒಳಗಾಗಿ, ಬಹಿಷ್ಕೃತನಾದ. ಕುಪಿತನಾದ ಕವಿ ಜೈನಧರ್ಮಕ್ಕೆ ತಿಲಾಂಜಲಿಯಿತ್ತು ವೀರಶೈವ ಮತವನ್ನು ಸ್ವೀಕರಿಸಿದ. ಆದರೂ ಸಾಯುವ ಮುನ್ನ ಮತ್ತೆ ಜೈನಮತಕ್ಕೆ ಹಿಂದಿರುಗಿದ. ಈತನು 'ಭರತೇಶವೈಭವ'ವನ್ನೂ 'ಅಪರಾಜಿತೇಶ್ವರಶತಕ', 'ತ್ರಿಲೋಕಶತಕ', 'ರತ್ನಾಕರಾಧೀಶ್ವರಶತಕ' ಎಂಬ ಶತಕತ್ರಯವನ್ನೂ ಎರಡು ಸಹಸ್ರ ಅಧ್ಯಾತ್ಮ ಗೀತೆಗಳನ್ನು ರಚಿಸಿದ್ದಾನೆ.

ಕವಿಯು 'ಭರತೇಶವೈಭವ'ದಲ್ಲಿ ಕವಿಗೆ ರತ್ನಾಕರವರ್ಣಿ, ರತ್ನಾಕರ ಅಣ್ಣ, ರತ್ನಾಕರಸಿದ್ಧ ಇತ್ಯಾದಿ ಹೆಸರುಗಳಿವೆಯೆಂದೂ, ಅವುಗಳಲ್ಲಿ 'ರತ್ನಾಕರಸಿದ್ಧ' ಎಂಬ ಹೆಸರು ತನಗೆ ಅತ್ಯಂತ ಪ್ರಿಯವೆಂದೂ ಹೇಳಿಕೊಂಡಿದ್ದಾನೆ. ತನ್ನ ತಾಯ್ತಂದೆಗಳ ಹೆಸರನ್ನು ಹೇಳದೆ ತನ್ನ ದೀಕ್ಷಾಗುರು ಚಾರುಕೀರ್ತ್ಯಾಚಾರ್ಯ, ಮೋಕ್ಷಗುರು ಹಂಸನಾಥ – ಇವರ ಹೆಸರನ್ನು ಮಾತ್ರ ತಿಳಿಸಿದ್ದಾನೆ. ತನ್ನ ಭರತೇಶವೈಭವವು 'ವೃಷಭಮಾಸದಿ ತೊಡಗಿತು, ಕುಂಭಮಾಸ ಸದ್ವಿಷಯದಿ ಕೃತಿ ಪೂರ್ಣವಾಯ್ತು' ಎಂದು ಹೇಳುತ್ತಾನೆ. ಒಂಬತ್ತು ತಿಂಗಳಲ್ಲಿ ಈ ೮೪ ಸಂಧಿಗಳಷ್ಟು ಬೃಹತ್ತಾದ ಕಾವ್ಯವನ್ನು ರಚಿಸಿದ ಆತನ ಕಾವ್ಯಶಕ್ತಿ ಅದ್ಭುತವಾದುದೇ ಸರಿ. ಕವಿಯ ಶತಕತ್ರಯಗಳಲ್ಲಿ ಒಂದಾದ 'ತ್ರಿಲೋಕಶತಕ'ದಿಂದ ಕವಿಯು ತನ್ನ ಸ್ಥಳ ಮೂಡಬಿದಿರೆಯೆಂದೂ, ಆ ಶತಕವನ್ನು ಬರೆದ ಕಾಲ ಕ್ರಿ.ಶ. ೧೫೫೭ ಎಂದೂ ತಿಳಿದುಬರುತ್ತದೆ. ಇದು ಕವಿಯ ಪ್ರಥಮ ಕೃತಿಯೆಂದು ಭಾವಿಸಲು ಅವಕಾಶವಿರುವುದರಿಂದ ಕವಿಯು ೧೬ನೆಯ ಶತಮಾನದ ಉತ್ತರಾರ್ಧದಲ್ಲಿ ಕೃತಿರಚನೆ ಮಾಡಿದ್ದಾನೆಂದು ಹೇಳಬಹುದು.

ರಾಜಾವಳೀ ಕಥೆಯು ಕಟ್ಟುಕಥೆಯಾಗಿರದೆ ಅದು ರತ್ನಾಕರನ ಜೀವಿತ ವೃತ್ತಾಂತವೆಂದು ಭಾವಿಸಲು ಸಾಕಷ್ಟು ಕಾರಣಗಳಿವೆ. ಆತನ 'ಭರತೇಶ ವೈಭವ'ವನ್ನು ಓದಿದವರಿಗೆ ಕವಿಯು ಒಬ್ಬ ರಸಿಕರಸಜೀವಿಯಾಗಿದ್ದನೆಂದು ಸುಸ್ಪಷ್ಟವಾಗಿ ಗೊತ್ತಾಗುತ್ತದೆ. ಆತನು ಮತಾಂತರ ಹೊಂದಿದುದರಲ್ಲಿಯೂ ತಥ್ಯವಿದೆಯೆಂದು ತೋರುತ್ತದೆ. ಕವಿಯು ತನ್ನ 'ಭರತೇಶವೈಭವ'ದಲ್ಲಿ ಭೋಗಾಂಗ, ಯೋಗಾಂಗ, ತ್ಯಾಗಾಂಗ ಎಂಬ ಅಂಗತ್ರಯಗಳನ್ನೂ ಯೋಗಭೋಗಗಳ ಸಾಮರಸ್ಯ ಸಿದ್ಧಾಂತವನ್ನೂ ಅಳವಡಿಸಿದ್ದಾನೆ. 'ಉಂಡು ಉಪವಾಸಿ, ಬಳಸಿ ಬ್ರಹ್ಮಚಾರಿ' ಇತ್ಯಾದಿ ಸೂಕ್ತಿಗಳೂ 'ಮೊಲೆಯ ಮೇಲಿದ್ದು ಯೋಗಿಗಳುಂಟು' ಎಂಬಂತಹ ವಾಕ್ಯಗಳೂ ಈ ಅಭಿಪ್ರಾಯಕ್ಕೆ ಪೋಷಕವಾಗಿವೆ. ಪಾಲ್ಕುರಿಕೆ ಸೋಮನಾಥರಚಿತವೆಂದು ಪ್ರಖ್ಯಾತವಾಗಿರುವ 'ಸೋಮೇಶ್ವರ ಶತಕ'ವು ರತ್ನಾಕರಕವಿಕೃತವೆಂಬ ಪ್ರತೀತಿ. ಪುರಾತನ ತಾಳಪತ್ರವೊಂದರಲ್ಲಿ ಇದು ಸುಸ್ಪಷ್ಟವಾಗಿದೆಯಂತೆ ! 'ವರರತ್ನಾಕರಯೋಗಿಯೆಂದು ನಿರುತಂ ವೈರಾಗ್ಯ ಬಂದೇರಲಾಂ ಹರಿದಿಕ್ಷಾವ್ರತನಾದೆನ್ನೆ....' ಎಂಬ ಹೇಳಿಕೆ ಅಲ್ಲಿದೆ. ರತ್ನಾಕರನು ವಿಜಯಣ್ಣನ ಮೇಲಿನ ಸ್ಪರ್ಧೆಯಿಂದ 'ಭರತೇಶವೈಭವ'ವನ್ನು ಬರೆದನೆಂಬುದೂ, ಈ ಕಾವ್ಯಕ್ಕೆ ಪುರಸ್ಕಾರ ದೊರೆಯಲಿಲ್ಲವೆಂಬುದೂ ನಿಜವಿರಬೇಕು. ಭರತೇಶವೈಭವದ ಆದಿ ಅಂತ್ಯಗಳಿರುವ ಹಲವು ಪದ್ಯಗಳು ಕವಿಯ ಪ್ರತಿಭಟನಾ ಸೂಚಕವಾಗಿವೆ. ಸಂಪ್ರದಾಯಬದ್ಧವಾದ ಪುರಾಣದ ಕಥಾಕಟ್ಟಡದಲ್ಲಿ ಕವಿ ನಿರಂಕುಶಮತಿಯಿಂದ ರತ್ನಾಕರನು ಹಲವು ಬದಲಾವಣೆಗಳನ್ನು ಮಾಡಿರುವುದೂ ಆತನ ಕಾವ್ಯದಲ್ಲಿ ಸುಸ್ಪಷ್ಟವಾಗಿದೆ. ಆ ಕಾರಣಕ್ಕಾಗಿ 'ಭರತೇಶ ವೈಭವ' ಧರ್ಮಗದ್ದುಗೆಗೆ ಏರದೆ ಹೋಗಿರುವುದೂ ಸುಸ್ಪಷ್ಟವಾಗಿದೆ.

ರತ್ನಾಕರನ ಶತಕತ್ರಯದಲ್ಲಿ ಒಂದೊಂದೂ ೧೨೮ ಪದ್ಯಗಳನ್ನು ಒಳಗೊಂಡಿದೆ. ಜೈನಮತಾನುಸಾರವಾದ ಲೋಕಸ್ಥಿತಿಯನ್ನು ತಿಳಿಸುವ 'ತ್ರಿಲೋಕ ಶತಕ'ವು ಕಂದ ಪದ್ಯದಲ್ಲಿದೆ. ಉಳಿದುವೆರಡೂ ವೃತ್ತಗಳು. ಇವೆರಡೂ ವೈರಾಗ್ಯ ಬೋಧನೆಗೆ 'ಅಪರಾಜಿತೇಶ್ವರಶತಕ' ಇನ್ನು ಎಳಸು, ವಿಷಯನಿರೂಪಣಾಸರಣಿಯಲ್ಲಿ ಜಾಣ್ಮೆಯಿಲ್ಲ, ನವೀನತೆಯಿಲ್ಲ. ರತ್ನಾಕರ ಶತಕ ಕವಿಯ ಪರಿಣತಿಯನ್ನು ಪ್ರತಿಬಿಂಬಿಸುವ ಅತ್ಯುತ್ತಮ ಶತಕ. ಶಾಸ್ತ್ರಜ್ಞರನ್ನು ಕುರಿತ ಈ ಪದ್ಯ ನೋಡಿ-

ಶಾಸ್ತ್ರಂ ಬಂದೊಡೆ ಶಾಂತಿ, ಸ್ಥೈರಣೆ, ನಿಗರ್ವಂ, ನೀತಿ, ಮೆಲ್ಪಾತು. ಮು
ಕ್ತಿ, ಸ್ತ್ರೀ ಚಿಂತೆ, ನಿಜಾತ್ಮ ಚಿಂತೆ ನಿಲವೇಳ್ಕುತಲ್ಲ ದಾ ಶಾಸ್ತ್ರದಿಂ

ದುಃಸ್ತ್ರೀ ಚಿಂತನೆ ದುರ್ಮುಖಂ, ಕಲಹಮುದ್ಗರ್ವಂ ಮನಂಗೊಂಡೊಡಾ
ಶಾಸ್ತ್ರಂ ಶಸ್ತ್ರ ಮೆ, ಶಾಸ್ತ್ರಿ ಶಸ್ತ್ರಿಕನಲಾ ಕರಾಧೀಶ್ವರಾ

ಇಲ್ಲಿನ ಮಾತುಗಳಲ್ಲಿ ಹೊಳಪಿದೆ, ಹರತವಿದೆ. ಅದರಲ್ಲಿಯೂ ಕಡೆಯ ಪಾದದಲ್ಲಿ ಕಾಣಬರುವ ಕಿಡಿಹೊತ್ತ ನುಡಿಗಳ ಬೆಡಗು ಗಮನಾರ್ಹವಾದುದು. ಕವಿಯ ಮಾತು ಹರಿತವಾದರೂ ಆತನ ಧರ್ಮಪ್ರತಿಪಾದನೆ, ಧರ್ಮಜಿಜ್ಞಾಸೆಗಳಲ್ಲಿ ಔದಾರ್ಯವಿದೆ. ಆತನಿಗೆ ನಿರ್ದಾಕ್ಷಿಣ್ಯವಾಗಿ ನುಡಿಯಬಲ್ಲ ಕೆಚ್ಚೆದೆಯಿದೆ. ಮತ್ತಾವ ಜೈನ ಕವಿಗಳಲ್ಲಿಯೂ ಕಾಣಬರದ ಸ್ವತಂತ್ರ ಮನೋವೃತ್ತಿ ಇದೆ. ಜೀವನ ಕ್ಷಣಿಕವೆಂಬ ಜೈನತತ್ತ್ವವನ್ನು ಆತ ಒಪ್ಪುತ್ತಾನೆ. ಆದರೆ ಅದಕ್ಕಾಗಿ ಭೋಗವಿರತಿಯನ್ನು ಕೈಗೊಳ್ಳಬೇಕೆಂಬುದನ್ನು ಆತ ಒಪ್ಪುವುದಿಲ್ಲ, ಭೋಗ ವಿಮುಖನಾಗದೆಯೆ ಶಾಶ್ವತಸುಖವನ್ನು ಅರಸುತ್ತಾ ಹೋಗಬೇಕೆಂಬುದು ಆತನ ಸಂದೇಶ. ಇದು ಬೀಜರೂಪವಾಗಿ 'ರತ್ನಾಕರಶತಕ'ದಲ್ಲಿ ಕಾಣಬರುತ್ತದೆ; ಭರತೇಶ್ವರ ವೈಭವ ಸಾರಸರ್ವಸ್ವವೇ ಇದಾಗಿದೆ.

'ಭರತೇಶವೈಭವ'ವು ತ್ರಿಷಷ್ಟಿಶಲಾಕಾಪುರುಷರಲ್ಲಿ ಓರ್ವನಾದ ಭರತಚಕ್ರವರ್ತಿಯ ಕಥೆಯನ್ನು ಒಳಗೊಂಡಿದೆ. ಈ ಕಥೆ ಪುರಾತನವಾದುದು; ಪ್ರಥಮ ತೀರ್ಥಂಕರ ವೃಷಭನಾಥನ ಕಥೆಯ ಪರಿಶಿಷ್ಟವಾಗಿ ಇದು ಬರುತ್ತದೆ. ರತ್ನಾಕರನು ಈ ಕಥೆಯ ಮೂಲರೇಖೆಗಳನ್ನು ತನ್ನ ಕಾವ್ಯದಲ್ಲಿ ಬಳಸಿಕೊಂಡಿರುವನಾದರೂ ಅದರ ವಿವರಣೆಗಳಲ್ಲಿ ಸಾಕಷ್ಟು ಬದಲಾವಣೆಗಳನ್ನು ಮಾಡಿಕೊಂಡಿದ್ದಾನೆ. ಇದನ್ನು ಸ್ವತಂತ್ರ ಕೃತಿಯಾಗಿ ರಚಿಸಹೊರಟುದೇ ರತ್ನಾಕರನ ವೈಶಿಷ್ಟ್ಯ. ಅಷ್ಟೇ ಅಲ್ಲ, ಇದ್ದುದನ್ನು ಬದಲಾಯಿಸಿಯೋ ಹೊಸದನ್ನು ಸೇರಿಸಿಯೋ ತನ್ನ ನಾಯಕನ ಪಾತ್ರವನ್ನು ಮುಗಿಲಿಗೇರಿಸುವುದಕ್ಕೆ ಪ್ರಯತ್ನಿಸಿ ಆ ಕಾರ್ಯದಲ್ಲಿ ಕೃತಕೃತ್ಯನಾಗಿದ್ದಾನೆ, ರತ್ನಾಕರ. ಜಿನನಾಗುವವನಿಗೆ ಮಾತ್ರವೇ ಮೀಸಲಾದ ಪಂಚಕಲ್ಯಾಣಗಳಿಗೆ ಪರ್ಯಾಯವಾಗಿ ಭೋಗವಿಜಯ, ದಿಗ್ವಿಜಯ, ಯೋಗವಿಜಯ, ಅರ್ಕಕೀರ್ತಿವಿಜಯ, ಮೋಕ್ಷ ವಿಜಯ – ಎಂದು ಐದು ವಿಜಯಗಳಲ್ಲಿ ಭರತನ ಕಥೆಯನ್ನು ಹಬ್ಬಿಸಿದ್ದಾನೆ.

ಭರತೇಶವೈಭವದ 'ಭೋಗವಿಜಯ' ಅತ್ಯಂತ ರಸವತ್ತಾದುದು – ಕಥಾನಾಯಕನ ಭೋಗಸಾಮ್ರಾಜ್ಯದ ರಸಚಿತ್ರವನ್ನು ಹೃದಯಂಗಮವಾಗಿ ಚಿತ್ರಿಸುತ್ತದೆ. ತೀರ್ಥಂಕರನು 'ಗರ್ಭಾವತರಣಕಲ್ಯಾಣ'ದಲ್ಲಿ ಅನುಭವಿಸಬಹುದಾದ ಸ್ವರ್ಗಸುಖದ ನೆತ್ತಿಯ ಮೇಲೆ ಬಡಿದಂತಿದೆ ಇದು. ಕವಿಯು ಇಲ್ಲಿ ತನ್ನ ಸೃಷ್ಟಿಶಕ್ತಿಯೆಲ್ಲವನ್ನೂ ವಿನಿಯೋಗಿಸಿ, ಒಂದು ಶೃಂಗಾರರಸದ ಸಾಗರವನ್ನು ನಿರ್ಮಿಸಿದ್ದಾನೆ. ಆತನ ಹೆಂಡಿರು ಒಬ್ಬೊಬ್ಬರೂ ಅವರ ಸಂಖ್ಯೆ ತೊಂಬತ್ತಾರು ಸಾವಿರ. ಅದರಲ್ಲಿನ ಸರಸಸಲ್ಲಾಪದ ಕಲ್ಲೋಲಮಾಲೆ, ಇದರ ಮೇಲೆ ತೇಲಿ ಹೋಗುತ್ತಿರುವ ಓದುಗರು ಲಾವಣ್ಯರಸಾನುಭೂತಿಯ ಚರಸೀಮೆಯನ್ನು ಸಂದರ್ಶಿಸಿ ಧನ್ಯರಾಗುತ್ತಾರೆ. ಭರತಚಕ್ರಿಯ ಶೃಂಗಾರ ಜೀವನದ ಹರಹೂ ಅನುಭವದ ಆಳವು ರೋಮಾಂಚಕರವಾಗಿವೆ. ಆತನ ರಾಣಿಯರ ಮಾಲೆಯಲ್ಲಿ ಮಧ್ಯದ ಮುತ್ತಾದ ಕುಸುಮಾಜಿಯೊಡನೆ ಆತನು ಅನುಭವಿಸಿದ ಒಂದು ದಿನದ ಭೋಗಭಾಗ್ಯ, ಆ ಮಡದಿಯ ಸೋದರಿ ಮಕರಂದಾಜಿಯೊಡನೆ ನಡೆಸಿದ ಸರಸ ಸಂಭಾಷಣೆ ಅದ್ವಿತೀಯವಾಗಿದೆ. ಇಂತಹ ತೊಂಬತ್ತಾರು ಹೆಂಡತಿಯರ ಮಧ್ಯದಲ್ಲಿ ಭರತನು ಅತ್ಯಂತ ಸುಖಿಯಾದ ಸಂಸಾರಿಯಾಗಿದ್ದಾನೆ. ಅವನ ಹೆಂಡತಿಯರು ಪರಸ್ಪರ ಸೋದರಿಯರಂತೆ ವ್ಯವಹರಿಸುತ್ತಾರೆ. ಆ ಆಹ್ಲಾದದ ತೊರೆಗಳು ಬಂದು ಸೇರುವ ಸಂಗಮಸ್ಥಾನ ಭರತೇಶ. ಆತನು ಏಕಕಾಲದಲ್ಲಿಯೇ ಅವರನ್ನೆಲ್ಲಾ 'ತವರೂರ ಮರೆಯಿಸಿ, ನಿದ್ರೆಯ ತೊರೆಯಿಸಿ, ಶ್ರೀ ಸಿಗಳನರಿಯಿಸಿ... ದಿನರಾತ್ರಿಯೆನ್ನದೆ ಸುಖದೊಳೋಲಾಡಿಸಿ 'ತೃಪ್ತಿಪಡಿಸಬಲ್ಲ, ಶ್ರೀಮಂತನಾದ ಆ

ಸಂಸಾರ ಸುಖಿಯನ್ನು ಅವಲಂಬಿಸಿರುವವರೆಲ್ಲರೂ ಚಂದ್ರನನ್ನು ಸುತ್ತುವರಿದ ನಕ್ಷತ್ರಗಳಿಂತಿದ್ದಾರೆ. ಆ ರಾಣಿಯರೆಲ್ಲ ತಮ್ಮ ವ್ಯಕ್ತಿತ್ವವನ್ನು ಬದಿಗೊತ್ತಿ ಭರತನ ಸುಖದಲ್ಲಿ ತಮ್ಮ ಜನ್ಮ ಸಾಫಲ್ಯವನ್ನು ಕಂಡುಕೊಂಡಿದ್ದಾರೆ. ಆತನ ಹೆಂಡತಿಯರು ಮಾತ್ರವೇ ಅಲ್ಲ, ಆತನ ಗಣನಾತೀತರಾದ ಬಂಧುಬಾಂಧವರೆಲ್ಲ ಆತನ ಸುಖವನ್ನು ಪೂರ್ಣಗೊಳಿಸಲು ಸಹಾಯಕರಾಗಿದ್ದಾರೆ. ಈ ಭೋಗವಿಜಯವು ಕವಿಯಕಲ್ಪನೆಯಲ್ಲಿ ಅರಳಿರುವ ಒಂದು ಸುಂದರ ಹೊಂಗನಸು.

ರತ್ನಾಕರನು 'ದಿಗ್ವಿಜಯಪರ್ವ'ದಲ್ಲಿ ಸಂಪ್ರದಾಯ ಕಥೆಯಲ್ಲಿ ಹಲವು ಬದಲಾವಣೆಗಳನ್ನು ಮಾಡಿದ್ದಾನೆ. ಅದರಲ್ಲಿ ಬಹುಮುಖ್ಯವಾದುದು ಇಲ್ಲಿಯ ಬಾಹುಬಲಿ ಪ್ರಸಂಗ. ಭರತನು ಜಗತ್ತನ್ನೆಲ್ಲ ಗೆದ್ದು ರಾಜಧಾನಿಗೆ ಹಿಂದಿರುಗುವಾಗ ಆತನ ತಮ್ಮನಾದ ಬಾಹುಹಲಿ-ಪೌದನಪುರದ ರಾಜ-ಅಣ್ಣನಿಗೆ ಶರಣಾಗಲು ನಿರಾಕರಿಸುತ್ತಾನೆ. ಇದರಿಂದ ಅವರಿಬ್ಬರಿಗೂ ಮಲ್ಲಯುದ್ಧ, ದೃಷ್ಟಿಯುದ್ಧ ಜಲಯುದ್ಧಗಳಾಗುತ್ತವೆ. ಭರತ ಸೋಲುತ್ತಾನೆ. ತನ್ನ ಚಕ್ರವನ್ನು ಪ್ರಯೋಗಿಸುತ್ತಾನೆ. ಅದು ವ್ಯರ್ಥವಾದಾಗ ನಾಚಿಕೆಯಿಂದ ತಲೆ ತಗ್ಗಿಸುತ್ತಾನೆ. ಇದನ್ನು ಕಂಡು ಮನಕರಗಿದ ಬಾಹುಬಲಿ ಅಣ್ಣನಿಗೆ ರಾಜ್ಯವನ್ನು ಕೊಟ್ಟು ತಪಸ್ಸಿಗೆ ಹೊರಟುಹೋಗುತ್ತಾನೆ. ಸಂಪ್ರದಾಯದ ಈ ಕಥೆಯನ್ನು ರತ್ನಾಕರ ಬದಲಾಯಿಸಿ, ಯುದ್ಧದ ಪ್ರಸಕ್ತಿಯನ್ನೆ ನಿವಾರಿಸಿದ್ದಾನೆ. ಮದನನ ಅವತಾರವಾದ ಬಾಹುಬಲಿ ತನ್ನ ಮೋಹನಶಕ್ತಿಯನ್ನು ಜಗತ್ತಿನಲ್ಲೆಲ್ಲ ಹರಡಬಹುದು, ಆದರೆ ಭರತಚಕ್ರಿಯಲ್ಲಿ ಆ ಆಟ ನಡೆಯದು. ಶಕ್ತಿ ಎಂತಹುದೆಂಬುದನ್ನು ಉದಾಹರಣ ಪೂರ್ವಕ ಕವಿ ವಿವರಿಸುತ್ತಾನೆ. ಆದರೂ 'ಕ್ಷಣಕ್ಕೆ ಮುಕ್ತಿಯ ಕೊಂಬ ಮೃದುಹೃದಯಿಗೆ ಕ್ರೂರಗುಣವುಂಟೆ ?' ಯುದ್ಧಕ್ಕೆ ಸಿದ್ಧನಾದ ತನ್ನ ತಮ್ಮನನ್ನು ಮೃದುನುಡಿಗಳಿಂದಲೇ ಮೆತ್ತಗೆ ಮಾಡಿ, ನಾಚಿಕೆಯಿಂದ ಆತ ತಲೆ ತಗ್ಗಿಸುವಂತೆ ಮಾಡುತ್ತಾನೆ. ಕಡೆಗೆ ಬಾಹುಬಲಿ 'ದೇವರು ಕ್ಷಮಿಸುವುದೆನ್ನದು ತಪ್ಪೆಂದು ! ಭಾವಶುದ್ಧಿಯೊಳು ಕೈ ಮುಗಿದು' ಹೀಗೆ ಪುರಾಣಕಥೆಯಲ್ಲಿ ತನಗೆ ಸೂಕ್ತತೋರಿದ ಬದಲಾವಣೆಗಳನ್ನು ಮಾಡಿಕೊಳ್ಳಬೇಕಾದರೆ ಕವಿಗೆ ತನ್ನ 'ದರ್ಶನ'ದಲ್ಲಿ ನಿಷ್ಕೃಷ್ಟವಾದ ನಂಬಿಕೆ ಇರಬೇಕು. ರತ್ನಾಕರ ನಿಜವಾಗಿ ಎಂಟೆರ್ದೆಯವನು.

ರತ್ನಾಕರನ ಉಳಿದ ಮೂರು ವಿಜಯಗಳಲ್ಲಿ ಮೂಲದ ಕಥೆಯಿಂದ ಹೆಚ್ಚು ಬದಲಾವಣೆಗಳೇನೂ ಇಲ್ಲ.

'ಭರತೇಶವೈಭವ'ದ ಮಹೋನ್ನತಿಯಿರುವುದು ಅದರಲ್ಲಿ ಕಾಣಬರುವ ಕವಿ ಕಾವ್ಯ ದೃಷ್ಟಿಯಲ್ಲಿ, ರತ್ನಾಕರನ ದೃಷ್ಟಿಯಲ್ಲಿ ಆದರ್ಶರಾಜನೆಂದರೆ ಆತನ ರತ್ನಾಕರಾಧೀಶ್ವರಶತಕ'ದಲ್ಲಿ ಹೇಳುವಂತೆ–

ರಾಜಶ್ರೀಯೊಳನೇಕ ಕಾಮಿನೀಯರುಂಟಾಳಾಪ ನೃತ್ಯಗಳುಂ
ಟಾ ಜಿಹ್ವಾರುಚಿಯುಂಟು, ಕಾಮಿಸಿದುವೆಲ್ಲಾವುಂಟು ಉಂಟಾದೊಡಂ ।
ರಾಜೀವಂ ಕೆಸರಲ್ದಿಯಲ್ದದವೊಲಿದ್ದೂರ್ಧ್ವಕ್ಕೆ ಕಣ್ಣಿಟ್ಟೊಡಾ
ರಾಜಂ ರಾಜನೆ ರಾಜಯೋಗಿಯೈ ರತ್ನಾಕರಧೀಶ್ವರ ॥

ಇಂತಹ ಆದರ್ಶರಾಜನನ್ನು ಕವಿ ಭರತನಲ್ಲಿ ರೂಪಿಸಹೊರಟಿದ್ದಾನೆ. ಶೃಂಗಾರ ಸರಸಿಯಲ್ಲಿ ತೇಲುತ್ತಿರುವ ಕಮಲದಂತಿರುವ ಭರತ ಚಕ್ರಿ ಅದಾವ ನಿಮಿಷದಲ್ಲಿಯೊ ಸ್ಮರಣ ಶೃಂಖಲೆಯಿಂದ ಮುಕ್ತನಾಗಿ ಬ್ರಹ್ಮಾನಂದದಲ್ಲಿ ತಲ್ಲೀನನಾಗುತ್ತಾನೆ. ಭೋಗಪರಿಕರಗಳ ಶೃಂಖಲೆಯಲ್ಲಿ ಭದ್ರನಾಗಿರುವವನಂತೆ ಕಾಣಿಸುವವನು ಮರುನಿಮಿಷದಲ್ಲಿಯೇ ಕಣ್ಮುಚ್ಚಿ ಚಿನ್ಮಯಮೂರ್ತಿಯನ್ನು ಒಳಗಣ್ಣಿನಿಂದ ಕಾಣುತ್ತಾ ಯೋಗಿಯಾಗುತ್ತಾನೆ. ಆತ 'ಉಂಡು ಉಪವಾಸಿ. ಬಳಸಿ ಬ್ರಹ್ಮಚಾರಿ, ಭೂಮಂಡಲದಲ್ಲಿದ್ದು ನಿಸ್ಸೀಮ !' ತನ್ನ ಕಾವ್ಯ ಸಾಗರದಲ್ಲಿ ಕವಿಯು ಭೋಗದ ಅಲೆಯೊಂದನ್ನೆಬ್ಬಿಸಿ,

ಅದರ ಹಿಂದೆಯೆ ತ್ಯಾಗದ ಅಲೆಯನ್ನೂ ಕಳುಹಿಸುತ್ತಾನೆ. ಎರಡರ ರಭಸವೂ ಒಂದೇ ಬಗೆಯಾದುದು. ನಾಯಕನನ್ನು ಕುರಿತು -

ದೊರೆಯೆದ್ದು ಹೋಗನೆ ಹೋಗಿ ಬಾರೆಂದರೆ ! ಬರುತಿಹ ಸೇವಕನಂತೆ
ಕರಣ ನಾಲ್ಕಿಂದ್ರಿಯವೈದವನುಸುರಿದಂ ! ತಿರುತಿಹವೇನ ಬಣ್ಣಿಪೆನು
ಬೇಕಾದರಾಡಿಸಿ ಗಾಳಿಪಟವನರ್ತಿ । ಸಾಕಾಗೆ ಸುರುಳುವನಂತೆ
ನೂಕಿ ಚಿತ್ತದ ಹೊರಗಾಡಿಸುವನು ತನ್ನೊ । ಳೇಕವಾಗಿರಿಸುವನೊಮ್ಮೆ

ಎಂದು ಹೇಳಿರುವ ಮಾತು ಆತನ ಉದ್ದೇಶವನ್ನು ಸ್ಪಷ್ಟಪಡಿಸುತ್ತದೆ. ಶೃಂಗಾರ ಚಿದಂಬರ ಧ್ಯಾನಗಳು ಭರತನ ಜೀವನದಲ್ಲಿ ಕಣ್ಣುಮುಚ್ಚಾಲೆಯಾಡುತ್ತಿವೆ. ಶ್ರೀಕೃಷ್ಣನಂತೆ ಭರತನೂ ಪದ್ಮ ಪತ್ರಮಿವಾಂಭಸ. ಭೋಗ ಮೂಲವಾದ ಶೃಂಗಾರವನ್ನೂ ಯೋಗಮೂಲವಾದ ತ್ಯಾಗವನ್ನೂ ಪರಸ್ಪರ ವಿರುದ್ಧವಾಗದಂತೆ ಪ್ರದರ್ಶಿಸಿ, ಭೋಗ-ಯೋಗಗಳ ಸಮನ್ವಯತ್ವವನ್ನು ಪ್ರತಿಪಾದಿಸುವುದೇ ರತ್ನಾಕರನ ಕಾವ್ಯಸಿದ್ಧಿ. ರತ್ನಾಕರವರ್ಣಿ ನಿಜವಾಗಿಯೂ 'ಮಹಾಕವಿ' ಎಂಬ ಹೆಸರಿಗೆ ಅದರ ಸಂಪೂರ್ಣಾರ್ಥದಲ್ಲಿ ಅರ್ಹನಾಗುತ್ತಾನೆ... ಭರತೇಶವೈಭವದಲ್ಲಿ ತ್ಯಾಗಭೋಗಗಳ ಸಮನ್ವಯದ ಯೋಗದರ್ಶನವನ್ನು ಕವಿ ಸುಂದರವಾಗಿ ಪ್ರತಿಪಾದಿಸುತ್ತಾನೆ. ಅಷ್ಟೇ ಅಲ್ಲ, ಕವಿ ಆದರ್ಶವನ್ನು ಭರತನ ಜೀವನದಲ್ಲಿ ಮಾತ್ರವೆ ಅಲ್ಲದೆ ಇಡೀ ಕಾವ್ಯದ ವಿವರಗಳನ್ನೆಲ್ಲ ಬುದ್ಧಿಪೂರ್ವಕವಾಗಿ ಪ್ರತಿಮಿಸಿರುವುದನ್ನು ನೋಡಿದರಂತೂ ಇಂತಹ ಕಾವ್ಯ ಸೃಷ್ಟಿ ಜಗತ್ತಿನಲ್ಲಿ ಮತ್ತಾವ ಸಾಹಿತ್ಯದಲ್ಲೂ ಆಗಿರುವಂತೆ ಕಾಣುವುದಿಲ್ಲ. ಈ ದೃಷ್ಟಿಯಿಂದ ಈ ಕೃತಿ 'ಜಗತ್ ಕೃತಿ' ಎಂದು ಕುವೆಂಪು ಭರತೇಶವೈಭವವನ್ನು ಕುರಿತು ಹೇಳಿರುವ ಮಾತು ಈ ಕಾವ್ಯದ ಹಿರಿತನಕ್ಕೆ ಸೊಡರಿನಂತಿದೆ.

ರತ್ನಾಕರ ತನ್ನ ಕಾವ್ಯವನ್ನು ಕೇವಲ ಪಂಡಿತರಂಜನೆಗಾಗಿ ಬರೆದ 'ಪುಸ್ತಕದ ಬದನೆಕಾಯಿ' ಯಾಗಿ ಮಾಡಿಲ್ಲ, ಸ್ತ್ರೀಯರು ಸಹ ಮನೆಯಲ್ಲಿ ಹಾಡಿಕೊಳ್ಳಲೂ ಅನುಕೂಲವಾಗುವಂತೆ ಸಾಂಗತ್ಯದಲ್ಲಿ ಬರೆದಿದ್ದಾನೆ. ಆತನ ಬರವಣಿಗೆಯ ಶೈಲಿ ಲಲಿತಮನೋಹರವಾಗಿದೆ. ಇರುವ ವಸ್ತುವನ್ನು ಅದು ಇರುವ ಹಾಗೆ ವರ್ಣಿಸುವ ಚಾತುರ್ಯ ಆತನಿಗೆ ಬೇಕಾದಷ್ಟಿದೆ. ಜನರ ಅನುಭವದಲ್ಲಿರುವ ಹೋಲಿಕೆಗಳನ್ನು ತರುವುದರ ಮೂಲಕ ಇದನ್ನು ದಕ್ಷತೆಯಿಂದ ನಿರ್ವಹಿಸುತ್ತಾನೆ. ಕುಂಭದ್ರೋಣದಂತೆ ಸುರಿಯುತ್ತಿರುವ ಮಳೆಯಂತೆ ಕಿರುಧಾರೆಯಲ್ಲ, 'ತೆಂಗಿನ ಮರಗಳ ತೋರದಿರುವ ಧಾರೆಯೊಳೆಡೆಬಿಡದೆ' ಸುರಿಯುತ್ತಿತ್ತೆಂದು ವರ್ಣಿಸುತ್ತಾನೆ, 'ಗಗನವೆಂದೆಂಬ ಸೇವಗೆಯೊರಳಿಂದ ಸೇವೆಗೆಯಿಳಿವೊಲು ಮಳೆಯಾಯ್ತು' ಎನ್ನುತ್ತಾನೆ. 'ಕೊಡದ ಸಾಲಂದದ ಮುಗಿಲ ಕಾಮನಬಿಲ್ಲ ಬಡಿಗೆಯಿಂ ಬಡಿಯೆ, ದೈವಗಳು ಒಡೆದಂತೆ ಗುಡುಗಾದುದು' ಎನ್ನುತ್ತಾನೆ. ತನ್ನ ಅನುಭವವನ್ನು ಮಾತ್ರವೇ ಬಳಸಿಕೊಂಡು ಕಣ್ಣಿಗೆ ಕಟ್ಟುವಂತೆ ಚಿತ್ರಿಸಬಲ್ಲ ಕೌಶಲ ಕವಿಯದು ಸಮುದ್ರವನ್ನು ವರ್ಣಿಸುವಾಗ 'ಅಟ್ಟುವ ತೆರೆಯ, ಮುಂದೋಡುವ ತೆರೆಯ, ಪರ್ಬೆಟ್ಟದಂತೇಳ್ವ ತೆರೆಗಳ' ಎಂದು ಬಣ್ಣಿಸುತ್ತಾನೆ. ಕವಿಸಮಯದಿಂದ ಬಿಡುಗಡೆಗೊಂಡು, ಕವಿಯ ಅನುಭವದಿಂದ ಮೂಡಿಬರುವ ಈ ವರ್ಣನೆಗಳು ಹೃದಯಂಗಮವಾಗಿವೆ. ಆತನ ಸಂಗೀತ ನರ್ತನಗಳ ವರ್ಣನೆಯೂ ಅನ್ಯಾದೃಶವಾದುದು-

ಒಳಗುಣ್ಮಿ ದಾನಂದರಸ ತನ್ನ ತನುತುಂಬ । ತುಳುಕಿ ಹೊರಗೆ ಸೂಸುವಂತೆ
ತೆಳಿವಸುರಿಂದ ಬಾಯ್ದೆರೆಯೊಳು ಸುಸ್ವರ । ಹೊಳೆದು ಮೋಹಿಸುತ್ತಿದ್ದುದ್ದಾಗ
ಸುಳಿನಾಭಿಯೊಳ್ ಹುಟ್ಟಿ ಮೆಲ್ಲೆದೆಯೊಳು ಬೆಳೆ । ದೊಳಗೊರಲೊಳು ಪ್ರಾಯವಡೆದು

ಎಳೆಯಳ ಬ್ರಹ್ಮ ರಂಧ್ರನೇರಿ ಬಾಯ್ದೆರೆ । ಗಿಳಿಯ ಮೋಹಿಸುತಿದ್ದುದಾಗ
ಬೆಳಗಿನೊಳೋಲಾಡವುಂತೆ ಸಂಗೀ । ತದ ಸುಳಿಯೊಳು ತೇಲಾಡುವಂತೆ
ತೆಳುಗಾಳಿಯೇರಿ ವೈಹಾಳಿಯ ಮಾಡುವಂ । ತೆಳೆವೆಂಗಳರಸಿ ಹಾಡಿದಳು

ಪಾರಿಭಾಷಿಕ ಶಬ್ದಗಳ ಗೊಂದಲವಿಲ್ಲದೆ ನಿರಾಭರಣ ಸುಂದರವಾದ ಈ ಸಂಗೀತದ ವರ್ಣನೆ ಮತ್ತೆಲ್ಲಿ ಸಿಕ್ಕಿತು ? ಹೃದಯಕ್ಕೆ ಮಾತ್ರ ವೇದ್ಯವಾಗಬಲ್ಲ ವೇದಾಂತವಿಷಯಗಳು ಕೂಡ ಕವಿಯ ಗಾರುಡಿಗ ಶಕ್ತಿಯಿಂದ ಕಣ್ಣಿಗೆ ಕಟ್ಟಿನಿಲ್ಲುತ್ತದೆ. ಕವಿಯ ಶೈಲಿಯಲ್ಲಿ ಸರಳತೆಯಷ್ಟೆ ಕುಸುರಿಗೆಲಸವಿದೆ. ವರ್ಣನೀಯ ವಸ್ತುವಿನ ಪ್ರತಿಯೊಂದು ಪದರವನ್ನೂ ಬಿಚ್ಚಿ ತೋರಿಸುತ್ತಾನೆ. ಈ ಶೈಲಿಯ ಒಂದು ಕೊರತೆಯೆಂದರೆ ಉಗ್ರಭಾವಗಳಿಗೆ ಅದು ಹೊಂದಿಕೊಳ್ಳುವುದಿಲ್ಲ. ಇದರಿಂದ ಒಂದು ಸತ್ತ್ವ ಕಡಿಮೆಯಾದಂತಿದೆ. ಆದರೆ ರತ್ನಾಕರನ ಕೈಲಿ ಸಾಂಗತ್ಯದ ಛಂದಸ್ಸು ತನ್ನ ಆದರ್ಶಸ್ಥಿತಿಯನ್ನು ಕಂಡುಕೊಂಡಿದೆ. ಅದರಂತೆಯೆ ಕವಿಯ ಆದರ್ಶವಾದ –

ಅಯ್ಯಯ್ಯಾ ಚೆನ್ನಾದುದನೆ ಕನ್ನಡಿಗರು । ರಯ್ಯ ಮಂಚಿದಿ ಎನೆ ತೆಲುಗ
ಅಯ್ಯಯ್ಯ ಎಂಚಪೋರ್ಲಾಡೆಂದು ತುಳುವರು । ಮೈಯುಬ್ಬಿ ಕೇಳಬೇಕಣ್ಣ
ಎಂಬಷ್ಟೆ ತನ್ನ ಕಾವ್ಯ ಸರಳ ಸುಲಭವಾಗಿರಬೇಕೆಂದು ಸಾಧಿತವಾಗಿದೆ.

೪. ವಿಜಯಣ್ಣ (ಕ್ರಿ.ಶ. ೧೪೫೦)

'ದ್ವಾದಶಾನುಪ್ರೇಕ್ಷೆ' ಎಂಬ ಹೆಸರೇ ಸೂಚಿಸುವಂತೆ ಈ ಕವಿಯ ಗ್ರಂಥ ಹನ್ನೆರಡು ಅನುಪ್ರೇಕ್ಷೆ ಅಥವಾ ಚಿಂತನೆಗಳನ್ನು ನಿರೂಪಿಸುವ ಸಾಂಗತ್ಯದ ಗ್ರಂಥ. ಜೈನಧರ್ಮವನ್ನು ಪ್ರತಿಪಾದಿಸುತ್ತಿರುವ ಈ ಗ್ರಂಥದಲ್ಲಿ ಮಹೋನ್ನತವಾದ ಕಾವ್ಯಗುಣಗಳೇನೂ ಇಲ್ಲ. ಇಲ್ಲಿನ ನಿರೂಪಣೆ ಸರಳ, ಸುಲಭ, ಹೃದ್ಯ. ಆದರೆ ಈ ಗ್ರಂಥದ ಮೇಲಿನ ಸ್ಪರ್ಧೆಯಿಂದ 'ಭರತೇಶವೈಭವ'ವು ಸೃಷ್ಟಿಯಾದುದೂ, ಅದಕ್ಕೆ ದ್ವಾದಶಾನು ಪ್ರೇಕ್ಷೆಗೆ ದೊರೆತ ಪ್ರಭಾವನೆ ದೊರೆಯದೆ ಹೋದುದೂ ಅನ್ಯಾಯ. ಮೌಲ್ಯಮಾಪನದ ತಕ್ಕಡಿ ಎರಡಕ್ಕೂ ಒಂದೇ ಆದದ್ದು ಕಾರಣ. ಜೈನಧರ್ಮಕ್ಕೆ ಆಧಾರಗ್ರಂಥವಾಗಿರುವ ದ್ವಾದಶಾನುಪ್ರೇಕ್ಷೆಯನ್ನು ಕನ್ನಡಕ್ಕೆ ತಂದುಕೊಟ್ಟ ಕೀರ್ತಿ ವಿಜಯಣ್ಣನದು.

೫. ಶಿಶುಮಾಯಣ (ಕ್ರಿ.ಶ. ೧೪೭೨)

ಹೊಯ್ಸಳ ದೇಶದಲ್ಲಿ ಕಾವೇರಿತೀರದ ನಯನಾಪುರವೆಂಬಲ್ಲಿ ಬೊಮ್ಮಸೆಟ್ಟಿ ನೇಮಾಂಬಿಕೆ ಎಂಬ ಪುಣ್ಯ ದಂಪತಿಗಳ ಸುಪುತ್ರ ಶಿಶುಮಾಯಣ ಅಥವಾ ತರಳಮಾಯಣ, ಕಾನೂರ್ಗಣದ ಭಾನುಮುನಿ ಎಂಬುವರಲ್ಲಿ ವಿದ್ಯಾರ್ಜನೆ ಮಾಡಿದ. ಈತನು ಬೆಳುಗೆರೆಯಪುರದ ಅರಸನಾದ ಗೊಮ್ಮಟದೇವನ ಅಪೇಕ್ಷೆಯಂತೆ 'ಅಂಜನಾಚರಿತ್ರೆ'ಯನ್ನು ಬರೆದನು. 'ತ್ರಿಪುರದಹನಸಾಂಗತ್ಯ' ಎಂಬ ಈತನ ಮತ್ತೊಂದು ಗ್ರಂಥದಲ್ಲಿ ಈತನ ಕಾಲ ಕಂಡುಬರುತ್ತದೆ. ಈತನ ಕಾವ್ಯಗಳೆರಡೂ ಸರಳವಾಗಿ, ನಿರರ್ಗಳವಾಗಿ ಹರಿದುಕೊಂಡುಹೋಗುವ ಸಾಂಗತ್ಯದಲ್ಲಿವೆ. ಸಾಂಗತ್ಯಕಾರರ ಇತಿಹಾಸದಲ್ಲಿ, ಸಾಂಗತ್ಯದ ಬೆಳವಣಿಗೆಯಲ್ಲಿ ಈ ಕವಿಗೆ ಶ್ರೇಷ್ಠವಾದ ಒಂದು ಸ್ಥಾನವಿದೆ.

ಶಿಶುಮಾಯಣನು ಬಹು ನಮ್ರವಾದ ಕವಿ. ತಾನೇನೂ ದೊಡ್ಡ ಪಂಡಿತನಲ್ಲವಂತೆ! 'ಅಕ್ಷರಭೇದವನರಿಯದೆನಗೆ ಮತ್ತೆ ಲಕ್ಷಣಗಳು ಗೋಚರವೆ ?' 'ಕವಿತೆಯ ಮಾರ್ಗವ ಸುವಿಚಾರಂಗಳ ವಿವರಿಪಡೇನೆಂದರಿಯೆ', 'ಕೋವಿದರು ಕಾಳುಮಡಿ ನುಡಿಯದೆ ತಪ್ಪು ತಿದ್ದಿಲಾಲಿಪುದು', 'ಬಾಲಕನ ತೊದಲ್ನುಡಿಯನು ತಂದೆತಾಯಿಗಳಾಗಲಿಸಿ ಕೇಳ್ದು ತಪ್ಪಿರಲು ಆಲೋಕಿಸಿರಂತೆ ಕೃತಿ ದೋಷವಿದೆ ತಿದ್ದಿ, ಬಾಲನಹೆನು ನಾ ನಿಮಗೆ' ಎಂದು ಹೇಳಿಕೊಳ್ಳುತ್ತಾನೆ. ಆತನು ಶಿಶುಮಾಯಣ

ಎಂದು ಹೆಸರಿಟ್ಟುಕೊಂಡುದೂ ಕೂಡ 'ವಸುಧೆಯೊಳ್ಳುಳ್ಳ ಭವ್ಯರುಗಳಿಗೆಲ್ಲರ್ಗೆ ಶಿಶುವಾಗಿಪ್ಪುದರಿಂದ'ಲಂತೆ! ಈ ನಮ್ರತೆ ನಮಗೆ ಬಹು ಮೆಚ್ಚಿಗೆಯಾಗುತ್ತದೆ. ಈತನು ಮಹಾಕವಿಯಲ್ಲ ನಿಜ; ಆದರೆ ಆತನ ಕಾವ್ಯಗಳು ಜನಮನೋರಂಜಕವಾಗಿವೆ.

ಶಿಶುಮಾಯಣ 'ತ್ರಿಪುರದಹನಸಾಂಗತ್ಯ' ೨೮೨ ಪದ್ಯಗಳ ಪುಟ್ಟ ಗ್ರಂಥ; 'ಪ್ರಬೋಧಚಂದ್ರೋದಯ'ದಂತಹ ಒಂದು ಲಕ್ಷಕಾವ್ಯ. ಇಲ್ಲಿರುವುದು ಶೈವ ಪುರಾಣದಲ್ಲಿ ಪ್ರಸಿದ್ಧವಾಗಿರುವ ತ್ರಿಪುರದಹನವಲ್ಲ; ಜನನ, ಜರಾ, ಮರಣ ಎಂಬ ತ್ರಿಪುರಗಳನ್ನು ಜಿನೇಶ್ವರನು ಸುಟ್ಟುಹಾಕುವ ಕಥೆ ಶೈವಪುರಾಣಾಂತರ್ಗವಾದ ವಿವರಣೆಗಳೆಲ್ಲಕ್ಕೂ ಇಲ್ಲಿ ಸಾಂಕೇತಿಕವಾದ ಬೇರೆ ವಿವರೆಗಳಿವೆ – ಮಾಯಾಸೂರನು ಇಲ್ಲಿಯ ತ್ರಿಪುರಗಳ ರಾಜ, ಮಾಯೆ ಅವರ ರಾಣಿ, ಸುರ ನರ ನಾರಕ ತಿರ್ಯಾಕ್ ಎಂಬ ನಾಲ್ಕು ಮಕ್ಕಳು ಅವರಿಗೆ. ಕ್ರೋಧ ಲೋಭ ಇತ್ಯಾದಿ ಅರಿಷಡ್ವರ್ಗಗಳು ಮಂತ್ರಿಗಳು, ನಾನಾ ಕರ್ಮಗಳೇ ಪರಿವಾರ; ಜಿನನ ಹಣೆಯಲ್ಲಿ 'ಕೇವಲಬೋಧೆ' ಎಂಬ ಮೂರನೆಯ ಕಣ್ಣು ಉದಿಸಿ ಅದರಿಂದ ತ್ರಿಪುರಗಳು ಭಸ್ಮವಾಗಿ ಹೋದವು. ಪರಮ ದಯಾಳುವಾದ ಜಿನನು ಮೋಹಾಸುರನನ್ನು ಕೊಲ್ಲಲಿಲ್ಲ. ಬಂಧಿತನಾಗಿ ಬಂದು ತನ್ನ ಕಾಲ ಮೇಲೆ ಬಿದ್ದ ಅವನನ್ನು 'ಬೆದರಿದರೆನುತಭಯವನು' ಕೊಟ್ಟು 'ಆಳು ಬೆಸನದಿ ಪದುಳದೊಳಿರು ಹೋಗು' ಎಂದನಂತೆ ! ಜಿನನು ಶಿವನಿಗಿಂತಲೂ ಹೆಚ್ಚು ಕರುಣಾಳು !

ಕವಿಯ 'ಅಂಜನಾಚರಿತೆ'ವು ರವಿಷೇಣನು ಸಂಸ್ಕೃತದಲ್ಲಿ ಬರೆದಿರುವ ಜೈನ ರಾಮಾಯಣದಿಂದ ಅಂಜನೆ ಮತ್ತು ಅವಳ ಮಗ ಅಂಜನೇಯರ ಕಥೆಯನ್ನು ಎತ್ತಿಕೊಂಡು ಆರು ಸಹಸ್ರ ಪದ್ಯಗಳಷ್ಟು ವಿಸ್ತರಿಸುವ ಬೃಹದ್ ಗ್ರಂಥ. ಅಂಜನಾಚರಿತೆಯೆಂಬ ತನ್ನ ಕಾವ್ಯದಹೆಸರು ಅನ್ವರ್ಥವೆಂದೂ, ಅದು 'ಕಂಜಭವನ ರಾಣಿಯ ನಯನದೊಳೆಸವಂಜನವಾದ ಕಾರಣದಿ' ಎಂದೂ ಹೇಳುತ್ತಾನೆ. ಈತನ ವರ್ಣನೆಯಲ್ಲಿ ಸಹಜತೆ ಇದೆ. ಬಾಳೆಯ ವರ್ಣನೆ.

ಕುಂದಿನೊಳಗೆ ಹುಟ್ಟಿ ಕಂದರೆಲ್ಲರ ಬಿಟ್ಟು । ಮುಂದಲೆಯನು ಕೊಟ್ಟು ಜನದ
ನಿಂದೆಯೊಳೊಂದಿ ಬಾಳುವ ಬಾಳ ಸುಡಲೆಂದು । ನೊಂದೆರಗಿದ ಬಾಳೆ
ಬಾಳೆಯ ಬಾಳು ಹಾಗಾದರೆ ಹುಣಸೆಯ ಹುಮ್ಮಸ್ಸನ್ನು ನೋಡಿ–
ಒಮ್ಮೆ ಫಲವನ್ನಿತ್ತು ಸುಮ್ಮನೆಯಿಹ ತರು । ವೆಮ್ಮೊಳು ಮಚ್ಚರಿಸಿದೊಡೆ
ಹಮ್ಮು ಮುರಿವನೆಂಬ ಹುಣಸೆಯ ಮರಗಳು । ಸುಮ್ಮಾನದಿ ಬೆಳೆದಿಹವು

ಕವಿಯಲ್ಲಿ ಮಹೋನ್ನತ ಭಾವಗಳಿಲ್ಲ, ಇವೆಯೆಂದು ಆತ ಹೇಳುತ್ತಲೂ ಇಲ್ಲ. ಆತನ ದೃಷ್ಟಿ ಜನಸಾಮಾನ್ಯರ ಸಂತೋಷ. ಆತನ ಕಾವ್ಯಗಳು ಅದನ್ನು ನೀಡುತ್ತವೆ.

೬. ತೆರಕಣಾಂಬಿ ಬೊಮ್ಮರಸ (ಕ್ರಿ.ಶ. ೧೪೮೫)

'ತೆರಕಣಾಂಬಿನಿವಾಸ ಪಾರ್ಶ್ವಜಿನೇಂದ್ರಚಂದ್ರಮನ ಚರಣಕಮಲ ಭ್ರಮರ'ನಾದ ಬೊಮ್ಮರಸ 'ಸನತ್ಕುಮಾರಚರಿತೆ', 'ಜೀವಂಧರಸಾಂಗತ್ಯ'ಗಳ ಕರ್ತೃ. ಈತನ ಮುತ್ತಾತ ನೇಮಿಚಂದ್ರನೆಂಬುವನು ಪ್ರೌಢದೇವರಾಯನ (ಕ್ರಿ.ಶ. ೧೪೧೬) ಆಸ್ಥಾನದಲ್ಲಿ ವಿದ್ವಾಂಸರನ್ನು ವಾದದಲ್ಲಿ ಜಯಿಸಿದ್ದನಂತೆ ! ತಾನು 'ಬೊಮ್ಮರಸೋಪಾಧ್ಯಾಯಸುಕುಮಾರ'ನೆಂದು ಹೇಳಿಕೊಂಡಿರುವುದರಿಂದ, ತಾತನಂತೆ ತಂದೆಯೂ ವಿದ್ವಾಂಸನಾಗಿದ್ದನೆಂದು ಊಹಿಸಬಹುದು. ಈತನ 'ಸನತ್ಕುಮಾರಚರಿತೆ' ಭಾಮಿನಿಷಟ್ಪದಿಯ ೮೭೦ ಪದ್ಯಗಳನ್ನು ಒಳಗೊಂಡಿದೆ. ಇದರಲ್ಲಿ ಹಸ್ತಿನಾಪುರದ ರಾಜಕುಮಾರನಾದ ಸನತ್ಕುಮಾರನ ಕಥೆ ಇದು. 'ಸೊಗಸುವಾತಿನ ಸೋನೆ', 'ಸದ್ಭಾವನೆಗಳ ಸರಿ', 'ನವರಸಗಳೊಸರುವ ಸಾರ', 'ಭೂಮಿಗೆ ಪೊಸತೆನಲು ರಂಜಿಪುದು' ಎಂದು ಕವಿ ಹೇಳಿಕೊಂಡಿದ್ದಾನೆ.

ಇದು ಅತಿಶಯೋಕ್ತಿಯಾದರೂ ಕಥಾ ನಿರೂಪಣೆ ನೇರವಾಗಿದೆ, ಪದ್ಯಗಳ ಓಟ ನಿರರ್ಗಳವಾಗಿದೆ. ವರ್ಣನೆಗಳಲ್ಲಿ ನೂತನತೆಯಿದೆ. ವನವನ್ನು ವರ್ಣಿಸುತ್ತಾ 'ಅರಗಿಳಿಗಳೋದುವ ಮಠವೊ, ನುಣ್ಚರದ ಪಿಕಗಳ ಗಾನಶಾಲೆಯೊ, ಪಿರಿದು ನಟಿಸುವ ಮಂಟಪವೊ' ಎಂದು ಮೊದಲಾಗಿ ಹೇಳುವುದು ಸರಳ ಸುಂದರವಾಗಿದೆ. ಕವಿಗೆ ಭಕ್ಷ್ಯಭೋಜ್ಯಗಳಲ್ಲಿ ಬಹು ಆದರವೇನೊ; ಉದ್ದಿದ ಕಡುಬನ್ನು ಆತ ವರ್ಣಿಸುವುದು ಬಾಯಲ್ಲಿ ನೀರೂರುವಂತಿದೆ-

ಬಟ್ಟೆವರೆಯೊ, ಮಿಂಚಿನೊಬ್ಬುಳಿ । ಬಟ್ಟಿತಾದುದೊ, ಅಮೃತರಸಗಳ
ವಟ್ಟು ವೃತ್ತದ ಪಿಂಡಾವಾದುದೊ ಚಂದ್ರಿಕೆಯೆ ಬಂಡು
ಘಟ್ಟಗೊಂಡಿತೊ ಎನಲು ನೋಳ್ಪರ । ದಿಟ್ಟಿಗೊಲವನು; ಮನಕೆ ಹರುಷವೆ
ಪುಟ್ಟೆ ವುದ್ದಿನ ಕಡುಬು ಸವಿದರು......

ಇದರಂತೆಯೆ ಬದನೆಕಾಯಿ ಬಜ್ಜಿ ಇತ್ಯಾದಿಗಳ ವರ್ಣನೆಯೂ ನಾಲಗೆ ಚಪ್ಪರಿಸುವಂತೆ ಮಾಡುತ್ತದೆ.

'ಜೀವಂಧರಸಾಂಗತ್ಯ' ೧೪೫೦ ಸಾಂಗತ್ಯ ಪದಗಳ ಹಾಡುಗಬ್ಬ; ರಾಜಪುರಿಯ ರಾಜ ಸತ್ಯಂಧರನ ಮಗನಾದ ಜೀವಂಧರನ ಕಥೆಯನ್ನು ಒಳಗೊಂಡಿವೆ ವೈರಾಗ್ಯದಿಂದ ಜಿನದೀಕ್ಷೆ ವಹಿಸಿ ಮುಕ್ತಿಗೆ ಸಂದ ಈ ಕಥೆಯಿಂದ ಜನರು ಉದ್ಧಾರವಾಗಲೆಂಬುದು ಕವಿಯ ಆಶಯ. ಸರಳವಾಗಿರುವ ಈ ಕಥೆ ಜನಮನೋರಂಜಕವಾಗಿದೆ, ವರ್ಣನೆಗಳು ಸುಂದರವಾಗಿವೆ. ಬೊಮ್ಮರಸನು ಒಳ್ಳೆಯಕವಿ.

೭. ಮೂರನೆಯ ಮಂಗರಸ (ಕ್ರಿ.ಶ. ೧೫೦೮)

ಮೊದಲನೆಯ ಮಂಗರಸ 'ಖಗೇಂದ್ರಮಣಿದರ್ಪಣ' ಬರೆದನು; ಎರಡನೆಯ ಮಂಗರಸ ಕ್ರಿ.ಶ. ೧೩೯೮ರಲ್ಲಿ 'ಮಂಗರಾಜನಿಘಂಟು' ಬರೆದವನು; ಈತನಿಗೆ ಅಭಿನವ ಮಂಗರಸನೆಂದೂ ಹೆಸರುಂಟು. ಮೂರನೆಯ ಮಂಗರಾಜ 'ಜಯನೃಪಕಾವ್ಯ', 'ಜಿನೇಶಸಂಗತಿ', 'ಶ್ರೀ ಪಾಲಚರಿತೆ', 'ಪ್ರಭಂಜನಚರಿತೆ', 'ಸಂಯುಕ್ತ ಕೌಮುದಿ', 'ಸೂಪಶಾಸ್ತ್ರ' ಎಂಬ ಗ್ರಂಥಗಳನ್ನು ಬರೆದಿದ್ದಾನೆ. 'ಚೆಂಗಾಳ್ವಸಚಿವಕುಲೋದ್ಭವ'ನಾದ ಕಲ್ಲಹಳ್ಳಿಯ ವಿಜಯಭೂಪಾಲ ಇವನ ತಂದೆ; ತಾಯಿ ದೇವಿಲೆ; ಚಿಕ್ಕ ಪ್ರಭೇಂದು ಈತನ ಗುರು; 'ಪ್ರಭುರಾಜ' 'ಪ್ರಭುಕುಲರತ್ನದೀಪ' ಈತನ ಬಿರುದುಗಳು. ತನ್ನ ತಂದೆ 'ರಣಬಿನವ ವಿಜಯಂ' ಎಂದು ಕವಿ ಹೇಳಿಕೊಂಡಿರುವುದರಿಂದ ಆತನು ಯುದ್ಧ ವೀರನಾಗಿದ್ದನೆಂದು ತೋರುತ್ತದೆ. 'ಸಂಯುಕ್ತ್ವ ಕೌಮುದಿ'ಯಲ್ಲಿ ಅದನ್ನು ಬರೆದದ್ದು ಕ್ರಿ.ಶ. ೧೫೦೮ ಎಂದು ತಿಳಿದು ಬರುತ್ತದೆ.

ಮಂಗರಸನ ಕಾವ್ಯಗಳಲ್ಲಿ 'ಜಯನೃಪಕಾವ್ಯ' ಪರಿವರ್ಧಿನೀಷಟ್ಪದಿಯಲ್ಲಿಯೂ 'ಸೂಪಶಾಸ್ತ್ರ' ವಾರ್ಧಕಷಟ್ಪದಿಯಲ್ಲಿಯೂ, 'ಸಂಯುಕ್ತ್ವ ಕೌಮುದಿ' ಉದ್ದಂಡ ಷಟ್ಪದಿಯಲ್ಲಿಯೂ ಉಳಿದ ಮೂರು ಗ್ರಂಥಗಳು ಸಾಂಗತ್ಯದಲ್ಲಿಯೂ ಇವೆ. ಕರುಜಾಂಗಣದ ರಾಜಕುಮಾರ ಜಯನೃಪನ ಕಥೆಯೆ 'ಜಯನೃಪಕಾವ್ಯ' ಇದನ್ನು ಜಿನಸೇನನು ಸಂಸ್ಕೃತದಲ್ಲಿ ರಚಿಸಿದ್ದನಂತೆ । 'ಹಾಲಲ್ಲಿ ಸಕ್ಕರೆ ಬೆರೆಸುವಂತೆ ಕವಿಯು ಸಕ್ಕರದೊಳು ಕನ್ನಡ ವಾತಂ ಬೆರಸಿ' ಈ ಕಥಾನಾಯಕನೂ ಮದುವೆಯ ಮೇಲೆ ಮದುವೆ ಮಾಡಿಕೊಂಡು ಶೃಂಗಾರಸರಸಿಯಲ್ಲಿ ತೇಲಾಡುವುದೇ ಇದರ ಕಥಾವಸ್ತು. ಸಾವಿರಕ್ಕೂ ಹೆಚ್ಚು ಪದ್ಯಗಳನ್ನು ಒಳಗೊಂಡ ಈ ಕಾವ್ಯದಲ್ಲಿ ಹೆಚ್ಚು ಕಥೆ ಇಲ್ಲ, ಕವಿಯ ಪದಬಂಧ ಲಲಿತವಾಗಿದೆ. ಆತನ ಸ್ವಭಾವೋಕ್ತಿ ಹೃದಯಂಗಮವಾಗಿದೆ. ವಸಂತಾಗಮನವನ್ನು ವರ್ಣಿಸುತ್ತಾ 'ವನೌಷಧಿಗುತ್ತವುವೈದ್ಯಂ ಬರ್ಪಂದದಿ ಬಂದೆಸೆದುದು ನವ್ಯಚೈತ್ರಂ' ಎಂದು ಹೇಳುತ್ತಾನೆ.

ಹಿಮರೋಗದಿಂದ ತಲೆಬೋಳಾಗಿರುವ ಮರಗಳಿಗೆ ಹೊಸ ಎಲೆಗಳು ಮೂಡುವಂತೆ ಔಷಧಿ ಮಾಡಿದನಂತೆ ! ತೆಂಗಾಳಿ ಮರಗಳ ನೆತ್ತಿಯ ಮೇಲಿನ ಗಾಯವನ್ನು ಉಫ್ ಎಂದು ಊದುವ ಉಸಿರಂತೆ ! ಕವಿಯಕಲ್ಪನೆ ನವೀನವಾಗಿರುವಂತೆ ಮನೋಹರವಾಗಿಯೂ ಇದೆ. ಪರಿವರ್ಧಿನಿ ಇವನ ಕೈಲಿ ಕುಣಿಯುತ್ತ ಸಾಗುತ್ತದೆ.

'ಸೂಪಶಾಸ್ತ್ರ' ೩೫೬ ಪದ್ಯಗಳನ್ನೊಳಗೊಂಡಿದೆ. ಸಂಸ್ಕೃತ ಸೂಪಶಾಸ್ತ್ರದಿಂದ ಎತ್ತಿಕೊಂಡು, ತನಗೆ ತಿಳಿದಷ್ಟನ್ನು ಕವಿ ಬರೆಯುತ್ತಿದ್ದಾನಂತೆ. ತನ್ನ ಗ್ರಂಥ ನಳ, ಭೀಮ ಮೊದಲಾದ ಬಾಣಸವಿದ್ಯಾನಿಪುಣರ ಮತಾನುಸಾರವಾಗಿದೆಯಂತೆ ! 'ಪಿಷ್ಟಪಾಕ, ಪಾನಕ, ಕಳಮಾನ್ನಪಾಕ, ಶಾಕಪಾಕ', ಇತ್ಯಾದಿ ಷಡ್ರಸವಿಪಾಕಭೇದ ಇಲ್ಲಿ ಪ್ರತಿಪಾದಿತವಾಗಿದೆಯಂತೆ ! ಜೀವಿಗಳ ದೇಹರಕ್ಷಣೆಗೆ ರೂಪ, ರಸ, ಗಂಧ, ಸ್ಪರ್ಶಾದಿ ಭೋಗಗಳೇ ಮುಖ್ಯ. ಈ ಭೋಗೋಪಭೋಗಗಳಲ್ಲಿ ರಸನೇಂದ್ರಿಯ ತುಷ್ಟಿಯಾದರೆ ಇಹಪರಸೌಖ್ಯವುಂಟಾಗುತ್ತದೆಯಂತೆ ! ಆದ್ದರಿಂದಲೆ 'ಹಸನಾಗಿ ಪಾಕಮಂ ಮಾಳ್ಪ ವಿವರದ ಶಾಸ್ತ್ರಮಂ ಮನಂಗೊಂಡು ಪೇಳ್ವೆಂ' ಎನ್ನುತ್ತಾನೆ ಕವಿ. 'ಇದು ಹರುಷದಿಂದ ಲಾಲಿಸಿ ಕೇಳ್ವೆನೆಂದೆಂಬ ಸುದತಿಯರ ಕಿವಿಗೆ ನವಮಾಣಿಕ್ಯದ ಮಿಂಚೋಲೆಯಂತೆ! 'ಇದರಲ್ಲಿ ಅನೇಕ ವಿಧವಾದ ತಿಂಡಿತೀರ್ಥಗಳನ್ನು ತಯಾರಿಸುವ ವಿಧಾನ ರಸವತ್ತಾಗಿ ವರ್ಣಿತವಾಗಿದೆ.

ಉದ್ದಂಡಷಟ್ಪದಿಯಲ್ಲಿರುವ 'ಸಂಯುಕ್ತ್ವ ಕೌಮುದಿ' ೭೯೨ ಪದ್ಯಗಳನ್ನು ಒಳಗೊಂಡಿದೆ. ಅರ್ಹದ್ದಾಸನೆಂಬ ವೈಶ್ಯನ ಹೆಂಗಸರು ಹೇಳಿದ ಕಥೆಯನ್ನು ಉದಿತೋದಿತನೆಂಬ ರಾಜನು ಕೇಳಿ, ಸಂಯುಕ್ತ್ವವನ್ನು ವಹಿಸಿ, ದೀಕ್ಷೆಯನ್ನು ಧರಿಸಿ ಸ್ವರ್ಗಲೋಕವನ್ನು ಪಡೆದನೆಂಬುದು ಇದರ ಕಥಾವಸ್ತು. ಕಾರ್ತಿಕಮಾಸದಲ್ಲಿ ನಡೆವ ಕೌಮುದಿ ಉತ್ಸವದಲ್ಲಿ ನಾಯಕನು ಸಂಯುಕ್ತ್ವವನ್ನು ಪಡೆದನಾದುದರಿಂದ ಉತ್ಸವದಲ್ಲಿ ವಿರಕ್ತಿ ಹೊಂದಿ ದೀಕ್ಷೆಯನ್ನು ವಹಿಸಿದುದರಿಂದ ಇದಕ್ಕೆ 'ಸಂಯುಕ್ತ್ವ ಕೌಮುದಿ' ಎಂಬ ಹೆಸರು ಬಂದಿದೆ.

ತನ್ನ ಕಾವ್ಯದ ಮಾತುಗಳು 'ತರುಣಿಯರ ಬಿಂಬಾಧರಂ, ಇಂದರುಚಿ, ಪೂವಿನ ತೊಡಂಬೆ, ಜೇನಸೋನೆ, ಚೆಂದನಣ್ಬು, ಕೋಗಿಲೆಯ ನುಣ್ಚರಂ' ಎಂದು ಹೇಳಿಕೊಂಡಿರುವುದು ಸ್ವಲ್ಪಮಟ್ಟಿಗೆ ನಿಜ. ಈ ಕಥೆಯಲ್ಲಿ ಮತ್ತೆ ಕಥೆಗಳು ಬೆಳೆದುಕೊಂಡಿವೆ. ಸುಂದರವಾದ ಈ ಕಥೆಗಳು ಜಾನಪದ ಕಥೆಗಳಜಾತಿಗೆ ಸೇರಿದವು. ಇವುಗಳ ತಿರುಳು ನೀತಿ ನಿರೂಪಣೆಯಾದರೂ, ತಿರುಳಿಗಿಂತ ಅವುಗಳ ಕಣಕ ಹೆಚ್ಚು ರುಚಿಕರವಾಗಿದೆ.

ಕವಿಯ ಸಾಂಗತ್ಯಗ್ರಂಥದಲ್ಲಿ 'ಪ್ರಭಂಜನಚರಿತೆ' ಅಸಮಗ್ರವಾಗಿದೆ. ಶುಂಭದೇಶದ ಜಂಭಾಪುರದ ದೇವಸೇನರಾಜನ ಮಗ ಪ್ರಭಂಜನನ ಕಥೆ ಇದರ ವಸ್ತು. ಕಾವ್ಯ ಸರಳ ಸುಂದರವಾಗಿದೆ. ದುಷ್ಟಹೆಣ್ಣುಗಳ ಸ್ವಭಾವವನ್ನು ವರ್ಣಿಸುತ್ತಾ 'ಮೊಲದ ಮಂಡೆಯ ಮೇಲೆ ಮೊಳೆಯಿಸುವರು ಕೊಂಬ ! ನಲರನಾಗಸದೊಳಾಗಿಪರು ! ಹುಲಿಯ ಮೊಲೆಯ ಹಿಡಿದಾ ಹಾಲು ಕರೆವರು! ಲಲನಾಜನಕದು ಸಹಜ' ಎನ್ನುತ್ತಾನೆ. ಇಲ್ಲಿನ ಮೇರು ಪರ್ವತದ ವರ್ಣನೆ ಭವ್ಯವಾಗಿದೆ – 'ಅಂಬರವೆಸರ ಸುದತಿ ನರಲೋಕವೆಂ ! ದೆಂಬ ಹಂಚಿನೊಳಂ ಜನವನು ॥ ಇಂಬಿನೊಳಿಡಲೆಂದಿಟ್ಟ ಹೆಜ್ಜೊಡರೆಂ । ದೆಂಬಂತೆ ಮೇರುವೊಪ್ಪಿದುದು' ಕವಿಯ 'ಶ್ರೀ ಪಾಲಚರಿತೆ'ವು ಪುಂಡರೀಕಿಣಿಪುರದ ಗುಣಪಾಲ ರಾಜನ ಮಗ ಶ್ರೀಪಾಲನ ಕಥೆ. ಇದನ್ನು 'ಭಾವಕಜನಕರ್ಣ ವಿಭೂಷಣ', 'ಶೃಂಗಾರಸುಧಾಬ್ಧಿ' ಇತ್ಯಾದಿಯಾಗಿ ಕವಿ ಹೇಳಿಕೊಂಡಿದ್ದಾನೆ. ಇವು ಸ್ವಲ್ಪಮಟ್ಟಿಗೆ ನಿಜ. ಆತನ ಇತರ ಕಾವ್ಯಗಳಲ್ಲಿಯಂತೆ ಇಲ್ಲಿಯೂ ಕವಿಯ ವರ್ಣನೆ ನವೀನವಾಗಿ, ರಮ್ಯವಾಗಿ, ಸ್ವಾಭಾವಿಕವಾಗಿದೆ. ಇದು ಒಂದು ಕೊಳದ ವರ್ಣನೆ–

ಅಳಿಯಟಕೆ ವನದೊಡತೆ ಹೇಮಾಂಬುಜ । ದಲರ್ಗಳ ಕೆಲದಟ್ಟ ಸಹಿತ
ಒಲಿದಿಟ್ಟ ಬೆಳ್ಳಿಯ ಪರಿಯಾಣದಂತೆ ಪ । ಜ್ಜ ಳಿಸಿದುದಾ ಕಾಸಾರ

ಕವಿಯ 'ನೇಮಾಜಿನೇಶಸಂಗತಿ' ಇಪ್ಪತ್ತೆರಡನೆ ತೀರ್ಥಂಕರನ ಕಥೆಯನ್ನೊಳಗೊಂಡ ಒಂದು ಹಾಡುಗಬ್ಬ. ಇದು ಕವಿಯ ಪ್ರಥಮಕೃತಿಯೆಂದು ಊಹಿಸಲಾಗಿದೆ. ಉಳಿದ ಕವಿ ಕಾವ್ಯಗಳಲ್ಲಿ ಕಾಣಬರುವ ಓಟ ಇಲ್ಲಿಲ್ಲ. ಆದರೂ ವರ್ಣನೆಯಲ್ಲಿ ಸಹಜತೆಯಿದೆ. ಆತನು ಕ್ಷತ್ರಿಯನೆಂಬುದಕ್ಕೆ ಇಲ್ಲಿನ ಯುದ್ಧದ ವರ್ಣನೆ ಹಿರಿಯ ಸಾಕ್ಷಿಯಾಗಿದೆ. ಈ ಕಾವ್ಯದಲ್ಲಿ ಬರುವ ಮಲ್ಲಿಗೆಯ ವರ್ಣನೆ ಮನೋಹರವಾಗಿದೆ. 'ಸ್ಮರನೆನ್ನ ಹೂವಿನ ಮಾರ್ಗಣದಿಂ ಹರಿಹರ ವಿಧಿಗಳ ಗೆಲ್ದನೆಂದು ಊರುಗಬ್ಬದಿಂ ಬಿಬ್ಬನೆ ಬಿರಿ ವಂದದಿ। ಬಿರಿದೊಪ್ಪಿದವು ಮಲ್ಲಿಗೆಗಳು.'

ಮಂಗರಸನು ತನ್ನ ಕಾವ್ಯಗಳಿಂದ ಕನ್ನಡದ ತುಷ್ಟಿಪುಷ್ಟಿಗಳಿಗೆ ತನ್ನ ಸೇವೆಯನ್ನು ಸಲ್ಲಿಸಿದ್ದಾನೆ.

೮. ಅಭಿನವವಾದಿ ವಿದ್ಯಾನಂದ (ಕ್ರಿ.ಶ. ೧೫೩೩)

ಮಲ್ಲಿಕಾರ್ಜುನನ 'ಸೂಕ್ತಿಸುಧಾರ್ಣವ'ದಂತೆ 'ಕಾವ್ಯಸಾರ'ವೆಂಬ ಸಂಕಲನ ಗ್ರಂಥಗಳನ್ನು ಹೊರತಂದ ಈತನನ್ನು ನಗರದ ತಾಲ್ಲೋಕಿನಲ್ಲಿರುವ ಒಂದು ಶಾಸನದಲ್ಲಿ ಬಹುವಾಗಿ ಸ್ತುತಿಸಲಾಗಿದೆ. ಈತನ ನಿಜವಾದ ಹೆಸರು ಗೊತ್ತಿಲ್ಲ. ಆತನು ಪರವಾದಿಗಳನ್ನು ಸೋಲಿಸುವುದರಲ್ಲಿ ಅದ್ವಿತೀಯ ಜಾಣನಾಗಿದ್ದನಂತೆ ! ಆದ್ದರಿಂದಲೆ ಆತನಿಗೆ 'ಪರವಾದಿ ವಿದ್ಯಾನಂದ'ನೆಂಬ ಹೆಸರು. ಈತನು ವಿಜಯನಗರದ ಕೃಷ್ಣದೇವರಾಯನ (೧೫೦೯-೧೫೨೯) ಆಸ್ಥಾನದಲ್ಲಿ ವಾದಿಗಳನ್ನು ಜಯಿಸಿದನೆಂದು ಶಾಸನ ತಿಳಿಸುತ್ತದೆ. ಈತನು ಬಹುಶಃ ಗೇರುಸೊಪ್ಪೆ ಪ್ರಾಂತದವನಾಗಿರಬೇಕು. ತನ್ನ ಕಾಲದವರೆಗೆ ಪ್ರಸಿದ್ಧನಾದವರೆಂದು ತನ್ನ ಗಮನಕ್ಕೆ ಬಂದ ಕವಿಗಳೆಲ್ಲರಿಂದಲೂ ಪದ್ಯಗಳನ್ನು ಆಯ್ದುಕೊಂಡು ಬೇರೆ ಬೇರೆ ವರ್ಣನಾವಿಭಾಗಗಳಲ್ಲಿ ಉದ್ಧರಿಸಿದ್ದಾನೆ. ಹೀಗೆ ಉದ್ಧೃತವಾದ ಭಾಗಗಳ ಮೂಲಕಾವ್ಯದ ಹೆಸರನ್ನೂ ಈತ ತಿಳಿಸುವುದರಿಂದ ಕವಿಕಾವ್ಯಗಳ ಕಾಲ ನಿರ್ಧಾರಕ್ಕೆ ಈತನಿಂದ ಬಹಳ ಸಹಾಯವಾದಂತಾಗಿದೆ. ಅಜ್ಞಾತಕವಿಗಳ ಕೆಲವು ಚಾಟುಪದ್ಯಗಳೂ ಮುಕ್ತಕಗಳೂ ಇರುವ ಈ ಸಂಗ್ರಹದಲ್ಲಿ ಸುಮಾರು ೧೧೪೦ ಪದ್ಯಗಳಿವೆ. ಈತನು ಬರಿಯ ಸಂಗ್ರಹಕಾರನಾಗದೆ ಕವಿಯಾಗಿಯೂ ಇರುವನೆಂದು ಊಹಿಸಲು ಅವಕಾಶವಿದೆ. ಆದರೆ ಕಾವ್ಯವಾವುದೂ ಈವರೆಗೆ ಉಪಲಬ್ಧವಾಗಿಲ್ಲ.

೬. ಸಾಳ್ವ (ಕ್ರಿ.ಶ. ೧೫೬೦)

ಕ್ರಿ.ಶ. ೧೫೬೦ರ ಶಾಸನವೊಂದರಲ್ಲಿ ಸಾಳ್ವನು ಕೀರ್ತಿಸಿರುವ ರಾಜರ ಹೆಸರು ಕಂಡುಬಂದಿರುವುದರಿಂದ ಈತನ ಕಾಲವನ್ನು ೧೫೬೦ ಎಂದು ಸ್ವೀಕರಿಸಲಾಗಿದೆ. ಈತನು ಭಾರತವೊಂದನ್ನು ಬರೆದಿದ್ದಾನೆ; ಅದನ್ನು 'ಸಾಳ್ವಭಾರತ' ಎಂದು ಕರೆಯುತ್ತಾರೆ. ಈತನು ತನ್ನ ಕಾವ್ಯದಲ್ಲಿ ತನ್ನ ಪೋಷಕನಾದ ಸಾಳ್ವಮಲ್ಲ ಮತ್ತು ರಾಜನಾದ ಸಾಳ್ವದೇವ ಇವರಿಬ್ಬರ ಅಪೇಕ್ಷೆಯಂತೆ ತನ್ನ ಕಾವ್ಯರಚನೆ ಮಾಡಿರುವುದಾಗಿ ಹೇಳಿಕೊಂಡಿದ್ದಾನೆ. ಮತ್ತು ಈತನು 'ರಸಕತ್ನಾರಕ', 'ವೈದ್ಯಸಾಂಗತ್ಯ' ಎಂಬ ಮತ್ತೆರಡು ಗ್ರಂಥಗಳನ್ನು ಬರೆದಿದ್ದಾನೆ. 'ಶಾರದಾವಿಲಾಸ'ವೆಂಬ ಗ್ರಂಥವೂ ಈತನದೇ ಇರಬಹುದೆಂದು ಊಹಿಸುತ್ತಾರೆ. ಕವಿಯ ತಂದೆ ಧರ್ಮಚಂದ್ರ, ಗುರು ದೇಶಿಗಣದ ಶ್ರುತಕೀರ್ತಿ.

'ಸಾಳ್ವಭಾರತ'ಕ್ಕೆ 'ನೇಮೀಶ್ವರಚರಿತೆ' ಎಂಬ ಹೆಸರೂ ಇದೆ. ಇತರ ಜೈನ ಭಾರತಗಳಂತೆ ಇದರಲ್ಲಿಯೂ ಹರಿವಂಶ ಕುರುವಂಶಗಳ ಕಥೆ ಬಂದಿದೆ. ಇದು ಭಾಮಿನೀ ಷಟ್ಪದಿಯಲ್ಲಿದೆ.

ಕವಿಯು ವೈದಿಕಭಾರತವನ್ನು ತೆಗಳುತ್ತಾ 'ಕೊಲಿಸಿದಾತನೆ ದೇವ, ಕೊಂದಗ್ಗಳಿಕೆಯಿಂದಲೆ ಪುಣ್ಯಪುರುಷರು. ಪಲವು ಮಾತೇನೈದರೊಡಹುಟ್ಟಿದರು, ಸನ್ನುತರು. ಲಲನೆಯೊರ್ವಳನಾಳ್ವರೆಂಬೀ ಪೊಲೆನುಡಿಗೆ ಕಿವಿಗೊಂಡ' ಬಾರದೆಂದು ಹೇಳುತ್ತಾನೆ. ತನ್ನ ಕಾವ್ಯವು 'ನವರಸದ ನೆಲೆ' ಇತ್ಯಾದಿ ಗುಣಗಳಿಂದ 'ಚದುರರ ಮನವನಿರ್ಕುಳಿಗೊಳ್ವುದಚ್ಚರಿಯೆ ?' ಎಂದು ಸ್ವಪ್ರಶಂಸೆಯೊಡನೆ ಪ್ರಶ್ನಿಸುತ್ತಾನೆ. ಆತನ ಭಾರತವನ್ನೋದಿ ಮನಸ್ಸು ರೋಮಾಂಚಗೊಳ್ಳುವುದಾದರೆ ಅದು ನಿಜವಾಗಿಯೂ ಆಚ್ಚರಿಯೆ! ಅಲ್ಲಿ ಸಂಪ್ರದಾಯದ ಕಥೆಯಿದೆಯೇ ಹೊರತು ನಮ್ಮನ್ನು ರಸಲೋಕಕ್ಕೆ ಕೊಂಡೊಯ್ಯುವಂತಹ ಕಾವ್ಯ ಶಕ್ತಿಯನ್ನೇನೂ ಕವಿ ಪ್ರದರ್ಶಿಸಿಲ್ಲ. ಕವಿಯು ಬಹುಶ್ರುತನಾದ ಪಂಡಿತನೆಂಬುದರಲ್ಲಿ ಯಾವ ಸಂದೇಹವಿಲ್ಲ. ಆತನ ಕಾವ್ಯ ಮಧ್ಯಮವರ್ಗಕ್ಕೆ ಸೇರಿದುದು. ಆತನ ಹಿರಿಮೆಯನ್ನು ನೋಡಬೇಕಾದರೆ ಆತನ ಶಾಸ್ತ್ರಗ್ರಂಥಗಳನ್ನು ನೋಡಬೇಕು. ಆತನ 'ರಸರತ್ನಾಕರ' ರಸಪ್ರಕ್ರಿಯೆಯನ್ನು ಪ್ರತಿಪಾದಿಸುವ ಅಲಂಕಾರ ಗ್ರಥ. ಇದರಲ್ಲಿ ಶೃಂಗಾರ ಪ್ರಪಂಚ, ರಸವಿವರಣೆ ನಾಯಕ ನಾಯಕಿವಿವರಣೆ, ಭಾವಾಧಿಕರಣ – ಎಂಬ ನಾಲ್ಕು ಆಶ್ವಾಸಗಳಿವೆ. ರಸಪ್ರಕ್ರಿಯೆಯನ್ನು ಅದುವರೆಗೆ ಯಾರೂ ಹೇಳದಷ್ಟು ವಿಸ್ತಾರವಾಗಿ ಸಾಳ್ವ ಇಲ್ಲಿ ಹೇಳಿದ್ದಾನೆ. ಅಲ್ಲದೆ ಪಂಪ, ರನ್ನ, ನೇಮಿಚಂದ್ರ ಇತ್ಯಾದಿ ಪ್ರಾಚೀನ ಕವಿಗಳಿಂದ ಸುಂದರವಾದ ಉದಾಹರಣೆಗಳನ್ನು ಉದ್ಧರಿಸಿ ತನ್ನ ಗ್ರಂಥದ ಬೆಲೆಯನ್ನು ರಮ್ಯತೆಯನ್ನು ಹೆಚ್ಚಿಸಿದ್ದಾನೆ. 'ರಸವಿಲ್ಲದ ಕಾವ್ಯಂ ನೀರಸಮದರಿಂ ಕೃತಿಗೆ ರಸಮೆ ಸಾರಂ' ಎಂದು ಹೇಳಿ ನವರಸಗಳ ಸ್ವರೂಪವನ್ನು ದಿಗ್ದರ್ಶಿಸ್ದಿದಾನೆ. ಆದರೂ ಕವಿಗೆ ಶೃಂಗಾರರಸದಲ್ಲಿ ಇರುವ ವಿಶೇಷವಾದ ಆದರ ಇಲ್ಲಿ ಎದ್ದು ಕಾಣುತ್ತದೆ.

'ವೈದ್ಯ ಸಾಂಗತ್ಯ' ಕವಿಯ ರೋಗನಿದಾನ – ಚಿಕಿತ್ಸೆಗಳ ವೈದುಷ್ಯವನ್ನು ಪ್ರದರ್ಶಿಸುವ ಸಾಂಗತ್ಯ ಗ್ರಂಥ. ಆತನು ಬರೆದಿರಬಹುದಾದ 'ಶಾರದಾ ವಿಲಾಸ'ವು ಜೀವವೆಂದು ಹೇಳುವ ಧ್ವನಿಯನ್ನು ಪ್ರತಿಪಾದಿಸುವ ಮೊಟ್ಟಮೊದಲ ಗ್ರಂಥ. ಇದರ ಎರಡನೆ ಆಶ್ವಾಸ ಮಾತ್ರ ದೊರೆತಿದೆ. ಕವಿಯು 'ಕಾವ್ಯಪ್ರಕಾಶಿಕೆ' ಮತ್ತು 'ಸಾಹಿತ್ಯ ಸುಧಾರ್ಣವ'ಗಳ ಹೆಸರನ್ನು ಹೇಳಿರುವುದರಿಂದ ತನ್ನ ಗ್ರಂಥಸಾಮಗ್ರಿಯನ್ನು ಅಲ್ಲಿಂದ ಎತ್ತಿಕೊಂಡಿರಬಹುದು.

೧೦. ದೊಡ್ಡಯ್ಯ (ಕ್ರಿ.ಶ. ೧೫೫೦)

ಈತನು 'ಚಂದ್ರಪ್ರಭಚರಿತೆ'ಯನ್ನು ಸಾಂಗತ್ಯದಲ್ಲಿ ಬರೆದಿದ್ದಾನೆ. ತನ್ನ ಕಾವ್ಯವು 'ಪಂಡಿತಯತಿಹೃದಯಪಂಕಜಮಿತ್ರ', 'ಭಾರತೀಯಭಾಳನೇತ್ರ' ಇತ್ಯಾದಿಯಾಗಿ ಹೊಗಳಿಕೊಂಡಿದ್ದಾನೆ, ಸುಮಾರು ೪೫೦೦ ಪದ್ಯಗಳನ್ನು ಒಳಗೊಂಡ ಈ ಬೃಹದ್ಗ್ರಂಥದಲ್ಲಿ ಮಧ್ಯೆಮಧ್ಯೆ ಷಟ್ಪದಿಗಳು ಕಾಣಿಸಿಕೊಂಡಿವೆ. ಕಾವ್ಯಗುಣದ ದೃಷ್ಟಿಯಿಂದ ಈ ಹಾಡುಗಬ್ಬ ಸರ್ವಸಾಮಾನ್ಯವಾದುದು.

೧೧. ಬಾಹುಬಲಿ (ಕ್ರಿ.ಶ. ೧೫೬೦)

ಈತ ಶೃಂಗೇರಿಯ ವಣಿಜಶಿರೋಮಣಿ ಸಣ್ಣಣ್ಣ ಮತ್ತು ಆತನ ಪತ್ನಿ ಬೊಮ್ಮಲದೇವಿಯಯವರ ಮಗ. ಶೃಂಗೇರಿಪೀಠ ನರಸಿಂಹಭಾರತೀಸ್ವಾಮಿಗಳು ಧ್ಯಾನಕ್ಕೆ ಕುಳಿತಾಗ ನೆಲಮನೆಯ ರಾಜನಾದ ಭೈರವೇಂದ್ರನು ಅವರ ರಕ್ಷಕನಾಗಿರುತ್ತಿದ್ದನು. ಈ ರಾಜನ ಆಸ್ಥಾನದಲ್ಲಿ ಲಲಿತ ಕೀರ್ತಿಯೆಂಬ ಜೈನಯತಿ ಶ್ರೀಪಂಚಮಿಯ ಮಾಹಾತ್ಮ್ಯವನ್ನು ಹೇಳಿದ. ಅದನ್ನು ಕಾವ್ಯ ರೂಪದಲ್ಲಿ ಬರೆಯುವಂತೆ ರಾಜನೂ ಯತಿಯೂ ಬಾಹುಬಲಿಗೆ ಅಪ್ಪಣೆ ಮಾಡಿದರು. ಆತ 'ನಾಗಕುಮಾರಚರಿತೆ' ಎಂಬ ಹೆಸರಿನಿಂದ ಅದನ್ನು ಸಾಂಗತ್ಯದ ೩.೭೦೦ ಪದ್ಯಗಳಲ್ಲಿ ರಚಿಸಿದ.

'ನಾಗಕುಮಾರಚರಿತೆ'ಯ ಕಥೆ ಮನೋಹರವಾಗಿದೆ. ಕನಕಪುರ ದೊರೆ ಜಯಂಧರನು ಪೃಥ್ವಿದೇವಿಯೆಂಬ ರಾಜಕುಮಾರಿಯನ್ನು ಚಿತ್ರಪಟದಲ್ಲಿ ಕಂಡು ಮೋಹಿಸಿ, ಮದುವೆಯಾದ. ಆಕೆಯ ಹೊಟ್ಟೆಯಲ್ಲಿ ಹುಟ್ಟಿದವನೇ ನಾಗಕುಮಾರ. ಈತನು ವೀಣಾವಾದನದಲ್ಲಿ ಕಿನ್ನರಿ, ಮನೋಹರಿಯನ್ನು ಸೋಲಿಸಿ ಮದುವೆಯಾದ. 'ನೀಲಗಿರಿ' ಎಂಬ ಮದ್ದಾನೆಯನ್ನು ಘೋಟದೇಶದ ತುಂಟ ಕುದುರೆಯನ್ನೂ ಸೊಕ್ಕಳಿಸಿ ವಶಪಡಿಸಿಕೊಂಡ. ಅನೇಕ ರಾಜರನ್ನು ಗೆದ್ದು ವೈಭವದಿಂದ ರಾಜ್ಯವಾಳುತ್ತಾ ಕಡೆಗೆ ವೈರಾಗ್ಯದಿಂದ ನಾಗ ಕುಮಾರ ಕೇವಲಿಯಾಗಿ ಮುಕ್ತಿಯನ್ನು ಪಡೆದ.

ಕವಿಗೆ 'ಕವಿರಾಜಹಂಸ', 'ಸಂಗೀತಸುಧಾಬ್ಧಿ ಚಂದ್ರಮ' ಎಂಬ ಬಿರುದುಗಳಿವೆ. ತನ್ನ ಕಾವ್ಯ 'ಭವವಾರ್ಧಿಗೆಬ್ಬೆತ್ರ', 'ಪುಣ್ಯ ಸತ್ಯಂಗಳಿಗೆ ಸುಕ್ಷೇತ್ರ'ವಾಗಿರುವಂತೆಯೆ 'ಪೊಸದೇಸಿಯ ನೆಲವೀಡು', ರಸಿಕರ ಕರ್ಣರಸಾಯನ' ಎಂದು ಹೇಳಿಕೊಂಡಿದ್ದಾನೆ ಇದು ಸ್ವಲ್ಪಮಟ್ಟಿಗೆ ಸತ್ಯ. ಈ ಹಾಡುಗಬ್ಬವನ್ನು ಓದಿ ಜನ ಮನರಂಜನೆ ಪಡೆಯಬಹುದು. ತನ್ನ ಕಾವ್ಯವರ್ಣಕವಾದ್ದರಿಂದ ಅದರ ಶ್ರೇಷ್ಠತೆ ವಾಚ್ಯಾರ್ಥದಿಂದಲೆ ಎಂದು ಹೇಳಿ ತನ್ನ ಕಾವ್ಯದಲ್ಲಿ ವ್ಯಂಗ್ಯ, ಧ್ವನಿ ಇತ್ಯಾದಿ ಕಾವ್ಯಗುಣಗಳನ್ನು ಹುಡುಕಬೇಕಾದಿಲ್ಲವೆಂದು ಕವಿ ಸೂಚಿಸಿದ್ದಾನೆ. ಕಥೆಯಾಗಲಿ, ವರ್ಣನೆಯಾಗಲಿ, ಕವಿಯ ಮಾತು ನೇರ, ಸ್ವಷ್ಟ, ಆಲಂಕಾರಿಕವಾದ ಭಾಷೆ, ಗೂಢವಾದ ಅರ್ಥ ಆತನಲ್ಲಿಲ್ಲ.

ಹದಿನಾರನೆಯ ಶತಮಾನದಲ್ಲಿ ಶ್ರುತಕೀರ್ತಿ, ದೊಡ್ಡಣಾಂಕ ಪದ್ಮರಸ, ದೇವೋತ್ತಮ, ಶಾಂತರಸ ಇತ್ಯಾದಿ ಕಾವ್ಯರಚನೆಗೆ ಕೈ ಹಾಕಿದ್ದಾರೆ. ಇವರೆಲ್ಲರೂ ಬಹುಮಟ್ಟಿಗೆ ಹಾಡುಗಬ್ಬಗಳಿಗೆ ಕೈ ಹಾಕಿದವರೆ. ಹದಿನೇಳನೆ ಶತಮಾನದಿಂದ ಮುಂದಕ್ಕೆ ಜೈನಕವಿಗಳು ಕಾವ್ಯ ಕರ್ಮಕ್ಕೆ ಕೈ ಹಾಕುವುದು ಬಹಳ ವಿರಳ. ಹಾಗೆ ಕೈಹಾಕಿದವರಲ್ಲಿಯೂ ಕಾವ್ಯ ಗುಣ ಅಷ್ಟೇನೂ ಕಂಡುಬರುವುದಿಲ್ಲ. ಭಾಷಾದೃಷ್ಟಿಯಿಂದ ಗ್ರಂಥರಚನೆಗೆ ಕೈ ಹಾಕಿದ ಭಟ್ಟಾಕಳಂಕನು ಹದಿನೇಳನೆ ಶತಮಾನದ ಜೈನಗ್ರಂಥಕರ್ತರಲ್ಲಿ ಬಹುಮುಖ್ಯನಾದವನು.

೧೨. ಭಟ್ಟಾಕಳಂಕ (ಕ್ರಿ.ಶ. ೧೬೦೦)

ಷಡ್ಭಾಷಾಪಂಡಿತನಾದ ಮಹಾವಿದ್ವಾಂಸನೆಂದು ಪ್ರಸಿದ್ಧನಾಗಿರುವ ಭಟ್ಟಾಕಳಾಂಕನು 'ಕರ್ಣಾಟಕಶಬ್ದಾನುಶಾಸನ'ದ ಕರ್ತೃ. ಕನ್ನಡದಲ್ಲಿ ಪ್ರಸಿದ್ಧ ವೈಯಾಕರಣರಾದ ಎರಡನೆ ನಾಗವರ್ಮ, ಕೇಶಿರಾಜ – ಇವರನ್ನು ಮೀರಿಸಿದ ಮಹಾವೈಯಾಕರಣಿ ಆತ. ತನ್ನ ಕಾಲದವರೆಗೆ ಹರಿದುಬಂದಿರುವ ಕನ್ನಡ ಭಾಷಾಪ್ರವಾಹವನ್ನೆಲ್ಲ ತನ್ನ ೫೯೨ ಸೂತ್ರಗಳ ಅಣೆಕಟ್ಟಿನಲ್ಲಿ ನಿಲ್ಲಿಸಿಕೊಂಡು ಕವಿ ಕಾವ್ಯಗಳ ಬೆಲೆಗೆ ಭಾಷಾವಿಷಯಕವಾದ ನಿರೂಪಣೆಗಳನ್ನು ಹರಿಸಿದ್ದಾನೆ. ಕನ್ನಡ ವ್ಯಾಕರಣದ ಸೂತ್ರಗಳನ್ನು ಮಾತ್ರವೇ ಅಲ್ಲ, ಅದಕ್ಕೆ 'ಭಾಷಾಮಂಜರಿ' ಎಂಬ ವೃತ್ತಿಯನ್ನೂ 'ಮಂಜರೀಮಕರಂದ' ಎಂಬ ವ್ಯಾಖ್ಯೆಯನ್ನೂ ಸಂಸ್ಕೃತದಲ್ಲಿ ಬರೆದು ಸೇರಿಸಿದ್ದಾನೆ. ಕನ್ನಡ ಸಂಸ್ಕೃತ ವ್ಯಾಕರಣಗಳೆರಡರಲ್ಲಿಯೂ ತಾನು ಪ್ರವೀಣನೆಂದು ಕವಿ ಹೇಳಿಕೊಂಡಿರುವುದು ಮಂಜರಿಮಕರಂದ'ವನ್ನು ನೋಡಿದರೆ ಸತ್ಯವೆನಿಸುತ್ತದೆ. ಈತನೊಬ್ಬ ಕನ್ನಡದ ಪಾಮಿನಿ. ಈತನ ಧೋರಣೆ ಅಧಿಕಾರವಾಣಿಗಳು ಆತನ ಆಗಾಧವಾದ, ಅಪಾರವಾದ ಪಾಂಡಿತ್ಯಕ್ಕೆ ತಕ್ಕಂತಿವೆ. ಇಷ್ಟಾದರೂ ಕೇಶಿರಾಜನ ಶಬ್ದಮಣಿ ದರ್ಪಣದಲ್ಲಿ ಕಾಣಬರುವ ಪ್ರಾಮಾಣ್ಯ ಕೆಲವು ವೇಳೆ ಈತನ ಗ್ರಂಥದಲ್ಲಿ ಕಂಡುಬರುವುದಿಲ್ಲ. ಅಲ್ಲಿಗಿಂತ ಇಲ್ಲಿ ಹೆಚ್ಚು ವಿಷಯಗಳಿವೆ. ಆದರೆ ಕೆಲವು ವೇಳೆ ಈತನು ಉದಾಹರಣೆಗಳನ್ನು ತಾನೇ ಸೃಷ್ಟಿಸಿ ಸೇರಿಸಿಬಿಡುತ್ತಾನೆ.

ಈತನು ದಕ್ಷಿಣ ಕನ್ನಡ ಜಿಲ್ಲೆಯಲ್ಲಿದ್ದ ಅಕಳಂಕದೇವನ ಶಿಷ್ಯನೆಂದು ತಿಳಿದುಬಂದಿರುವುದರಿಂದ ಈತನು ಆ ಪ್ರಾಂತದವನಿರಬೇಕು.

೧೩. ಧರಣಿ ಪಂಡಿತ (ಕ್ರಿ.ಶ. ೧೬೫೦)

ಈತನು 'ವರಾಂಗನೃಪಚರಿತೆ', 'ಬಿಜ್ಜಳರಾಯ ಚರಿತೆ' ಎಂಬ ಎರಡು ಗ್ರಂಥಗಳನ್ನು ಬರೆದಿದ್ದಾನೆ. ವಿಷ್ಣುವರ್ಧನಪುರದ ಪದ್ಮಣಪಂಡಿತ ಈತನ ತಂದೆ; ಆ ಊರಿನ 'ಪಾರ್ಶ್ವಜಿನೇಂದ್ರ ಚಂದ್ರನ ಚರಣವಾರಿಜಭೃಂಗ' ಈ ಕವಿ.

ವರಾಂಗನೃಪನ ಕಥೆ ಜೈನರಿಗೆ ಬಹಳ ಪ್ರಿಯವಾದುದು. ಇದನ್ನು ಜಟಾಸಿಂಬನಂದಾಚಾರ್ಯನು ಸಂಸ್ಕೃತದಲ್ಲಿ ಬರೆದಿದ್ದ; ಬಂಧುವರ್ಮನು ತನ್ನ 'ಜೀವಸಂಬೋಧನೆ'ಯಲ್ಲಿ ಇದನ್ನು ಸಂಗ್ರಹವಾಗಿ ತಿಳಿಸಿದ್ದ. ಆ ಕಥೆಯನ್ನೆ ಧರಣಿಪಂಡಿತ ಹಿಗ್ಗಲಿಸಿ, ಭಾಮಿನೀಷಟ್ಪದಿಯಲ್ಲಿ ಬರೆದಿದ್ದಾನೆ. ವರಾಂಗನೆಂಬ ರಾಜಕುಮಾರ ತುಂಟಕುದುರೆಯನ್ನೇರಿ ಕಾಡುಪಾಲಾಗಿ, ಕಿರಾತರ, ಕೈಗೆ ಸಿಕ್ಕಿಬಿದ್ದು ಪಡಬಾರದ ಕಷ್ಟಗಳನ್ನು ಪಟ್ಟು, ಕಡೆಗೆ ಜೈನದೀಕ್ಷೆವಹಿಸಿ ಸನ್ಯಾಸಿಯಾಗುತ್ತಾನೆ. ಇದು ಇಲ್ಲಿನ ಕಥೆ. ಇದು ಸಮಗ್ರವಾಗಿ ಸಿಕ್ಕಿಲ್ಲ, ಕಾವ್ಯಗುಣವೂ ಹೇಳಿಕೊಳ್ಳುವಷ್ಟು ಹಿರಿದಾಗಿಲ್ಲ. 'ಬಿಜ್ಜಳರಾಯ ಚರಿತೆ ಸಾಂಗತ್ಯದ ೧೨೫೦ ಪದ್ಯಗಳನ್ನು ಒಳಗೊಂಡಿವೆ. ಇದು ಬಸವಣ್ಣನ ಇತಿಹಾಸ ದೃಷ್ಟಿಯಿಂದ ಕುತೂಹಲಕಾರಿಯಾಗಿದೆ. ಬಿಜ್ಜಳನು ಜೈನನಾಗಿದ್ದನೆಂದೂ, ಬಸವಣ್ಣನ ತಂದೆ ಮಾದಿರಾಜನು ಆತನ ಪುರೋಹಿತನಾಗಿದ್ದನೆಂದೂ ಈ ಪುರೋಹಿತನ ಮಗಳಾದ ಪದ್ಮಿನಿಯನ್ನು ಮದುವೆಯಾಗಿ, ಭಾವನಾದ ಬಸವಣ್ಣನಿಗೆ ಸೇನಾಪತಿತ್ವವನ್ನು ಕೊಟ್ಟನೆಂದೂ, ಬಸವಣ್ಣ ಮೋಸದಿಂದ ವಿಷದ ಮಾವಿನ ಹಣ್ಣನ್ನು ರಾಜನಿಗೆ ಕಳುಹಿಸಿ ಅವನ ಮೃತ್ಯುವಿಗೆ ಕಾರಣನಾದನೆಂದೂ, ರಾಜನ ಸೈನ್ಯ ಮಾಡಿಕೊಂಡನೆಂದೂ ಇದರಲ್ಲಿ ಹೇಳಿದೆ. 'ಉಳಿವೆನೆಂದು ಪೊಕ್ಕುಸತ್ತುದರಿಂ' ಆವೂರಿಗೆ 'ಉಳಿವೆ' ಎಂದು ಹೆಸರಾಯಿತಂತೆ ! ಇದರಲ್ಲಿ ಪರಮತದ ಅಸಹಿಷ್ಣುತೆಯು ಎದ್ದು ಕಾಣುವುದರಿಂದ ಸತ್ಯದ ಬಗ್ಗೆ ಸಂದೇಹ ಮೂಡುತ್ತದೆ.

೧೪. ದೇವಚಂದ್ರ (ಕ್ರಿ.ಶ. ೧೭೭೦-೧೮೪೧)

ಈತನು ಮುಮ್ಮಡಿಕೃಷ್ಣರಾಜ ಒಡೆಯರಕಾಲದವನು. ರಾಜನ ಆಶ್ರಿತನಾದ ವೈದ್ಯಸೂರಿ ಪಂಡಿತನ ಪ್ರೋತ್ಸಾಹದಿಂದ ಈತನ 'ರಾಜಾವಳೀಕಥೆ'ಯನ್ನು ಬರೆದನಂತೆ ! ಇದರಲ್ಲಿ ಜೈನಮತಕ್ಕೆ ಸಂಬಂಧಿಸಿದ ಹಲವು ಇತಿಹಾಸಗಳೂ ರಾಜರ ಮತ್ತು ಕವಿಗಳ ಚರಿತ್ರೆಗಳೂ ಇವೆ. ಮೈಸೂರು ರಾಜರ ವಂಶಾವಳಿಯೂ ಇದರಲ್ಲಿ ಸಂಗ್ರಹವಾಗಿ ಬಂದಿದೆ. ಕವಿಯು 'ರಾಮಕಥಾವತಾರ' ಎಂಬ ಚಂಪೂಗ್ರಂಥವನ್ನು ಬರೆದಿದ್ದಾನೆ. ಇದರಲ್ಲಿ ನಾಗಚಂದ್ರನ ಕಥೆ, ಭಾವಗಳನ್ನು ಮಾತ್ರವೇ ಅಲ್ಲದೆ ಆತನ ಅನೇಕ ಪದ್ಯಗಳನ್ನೂ ಎತ್ತಿಕೊಂಡಿದ್ದಾನೆ. ಕವಿಚರಿತ್ರೆಯ ದೃಷ್ಟಿಯಿಂದ ಆತನ 'ರಾಜಾವಳೀಕಥೆ' ಮುಖ್ಯವಾದುದು.

ವೀರಶೈವ ಸಾಹಿತ್ಯ

ಕುಮಾರವ್ಯಾಸ ಯುಗದಲ್ಲಿ ವೀರಶೈವ ಸಾಹಿತ್ಯವು ಸರ್ವತೋಮುಖವಾಗಿ ಬೆಳೆದು, ಕನ್ನಡ ಸಾಹಿತ್ಯದ ತುಷ್ಟಿ ಪುಷ್ಟಿಗಳಿಗೆ ಸಹಾಯಕವಾಯಿತು. ಹನ್ನೆರಡನೆ ಶತಮಾನದಲ್ಲಿ ಪೂರ್ಣಪ್ರವಾಹವಾಗಿ ಹರಿಯಹೊರಟು, ಕಲ್ಯಾಣದ ಕ್ರಾಂತಿಯಿಂದ ನಿಂತುಹೋಗಿದ್ದ ವಚನವಾಙ್ಮಯದ ಹೊಳೆ ಯುಗದಲ್ಲಿ ವಿಜಯನಗರದ ಪ್ರೌಢದೇವರಾಯ ಮತ್ತು ತೋಂಟದ ಸಿದ್ಧಲಿಂಗಯತಿ-ಈ ಅರಮನೆ ಗುರುಮನೆಗಳ ದಂಡನೆಯನ್ನು ಆಶ್ರಯಿಸಿ ಹರಿಯತೊಡಗುತ್ತದೆ.

ಹೊಸ ವಚನಗಳ ಸೃಷ್ಟಿಗಿಂತಲೂ ಹಳೆಯ ವಚನಗಳ ಸಂಕಲನ ಸಂಪಾದನೆಗಳೂ ಅವುಗಳ ಟೀಕೆ. ಟಿಪ್ಪಣಿ, ವ್ಯಾಖ್ಯಾನಗಳೂ ಹುಟ್ಟಿಕೊಂಡದು ಈ ಕಾಲದ ವೈಶಿಷ್ಟ್ಯ. ಈ ಯುಗವು ವೀರಶೈವ ಪುರಾಣಗಳಿಗೂ ಸುಗ್ಗಿಯ ಕಾಲ. ಪುರಾಣಗಳನ್ನು ಕನ್ನಡದಲ್ಲಿ ನೆಟ್ಟ ಕೀರ್ತಿ ಜೈನಕವಿಗಳಿಗೆ ಸಲ್ಲುವುದಾದರೂ ಕಾಲಕ್ಕೆ ತಕ್ಕಂತೆ ಹೊಂದಿಕೊಂಡು ಹೋಗುವ ಚಾಕಚಕ್ಯತೆ ಅವರಲ್ಲಿ ಇಲ್ಲದೆ ಹೋಯಿತು. ದೇಶಿಯ ಛಂದಸ್ಸಿನ ಬಳಕೆ ಮತ ಪ್ರಚಾರಕ್ಕೆ ಪ್ರಬಲಸಾಧನವಾಗುವುದೆಂದು ಅವರು ಅರ್ಥಮಾಡಿಕೊಳ್ಳುವ ವೇಳೆಗೆ ವೈದಿಕ ಮತ್ತು ವೀರಶೈವ ವಿಜಯವೈಜಯಂತಿಗಳು ಗಗನಚುಂಬಿಯಾಗಿದ್ದವು.

ಕುಮಾರವ್ಯಾಸಯುಗದ ಗ್ರಂಥರಾಶಿಯಲ್ಲಿ ವೀರಶೈವ ಪುರಾಣಗಳ ಸಂಖ್ಯೆಯಲ್ಲಿ ಮಾತ್ರವಲ್ಲದೆ ಕಾವ್ಯಗುಣದಿಂದಲೂ ಬಹು ಶ್ರೀಮಂತವಾಗಿವೆ. ಬಸವೇಶ್ವರಾದಿಗಳ ಜೀವನಚರಿತ್ರೆಯನ್ನು ವೀರಶೈವ ತತ್ತ್ವಗಳೊಂದಿಗೆ ತಿಳಿಸುವ ಕಾವ್ಯಗಳೇ ವೀರಶೈವ ಪುರಾಣಗಳೆಂದು ದಿವಂಗತ ಎಂ.ಆರ್. ಶ್ರೀನಿವಾಸಮೂರ್ತಿಯವರು ಹೇಳುತ್ತಾರೆ. ವೀರಶೈವರ ಪುರಾತನರು, ನೂತನರು, ಪವಾಡಪುರುಷರು – ಇವರ ಜೀವನಗಳನ್ನು ಆಧಾರವಾಗಿಟ್ಟುಕೊಂಡು ವೀರಶೈವತತ್ತ್ವಗಳನ್ನು ಪ್ರಚಾರ ಮಾಡುವುದೇ ಇವುಗಳ ಹೆಗ್ಗುರಿ. ಈ ಪುರಾಣಗಳಿಗೆಲ್ಲ ಸರ್ವಮಾನ್ಯವಾದ ಕೆಲವು ಲಕ್ಷಣಗಳಿವೆ. ಮರ್ತ್ಯದಲ್ಲಿ ವೀರಶೈವ ಮತ ಖಿಲವಾಗುವುದನ್ನು ಕೇಳಿ ಪರಶಿವನು ತನ್ನ ಗಣ ಸಮೂಹದಲ್ಲಿ ಒಬ್ಬನನ್ನು ಭೂಲೋಕಕ್ಕೆ ಕಳುಹಿಸುತ್ತಾನೆ. ಅವನು ಇಲ್ಲಿ ಹುಟ್ಟಿ ಪರಮತಖಂಡನೆ, ಸ್ವಮತಸ್ಥಾಪನೆಯನ್ನು ನೆರವೇರಿಸುತ್ತಾನೆ. ಈ ಪುರಾಣಗಳಲ್ಲಿ ಶಿವನ ಪಂಚವಿಂಶತಿಲೀಲೆಗಳು. ವಿಭೂತಿ ಪ್ರಸಾದ ಪಾದೋಕಗಳ ಮಹಿಮೆ ಇತ್ಯಾದಿಗಳು ಸೇರಬಹುದು. ಕಾವ್ಯದ ಕೊನೆಯಲ್ಲಿ ಶಿವನು ಪ್ರತ್ಯಕ್ಷವಾಗಿ ಕಥಾನಾಯಕನನ್ನು ಕೈಲಾಸಕ್ಕೆ ಕರೆದೊಯ್ಯುತ್ತಾನೆ. ಒಮ್ಮೊಮ್ಮೆ ಭಕ್ತನೆ ಸ್ವಮಹಿಮೆಯಿಂದ ಕೈಲಾಸಕ್ಕೆ ಹೋಗಬಹುದು.

ವೀರಶೈವ ಪುರಾಣಗಳಿಂದ ಕನ್ನಡ ಸಾಹಿತ್ಯಕ್ಕೆ ತುಷ್ಟಿ ಪುಷ್ಟಿಗಳು ಒದಗಿಬಂದಿದೆ. ಇವೆಲ್ಲ ಸಾಮಾನ್ಯವಾಗಿ ಹಾಡುಗಬ್ಬಗಳಾದುದರಿಂದ ಪಂಡಿತ ಪಾಮರರಿಬ್ಬರಿಗೂ ಮೆಚ್ಚಿಗೆಯಾಗಿವೆ.

ವಚನವಾಙ್ಮಯ

ವಿಜಯನಗರದ ದೊರೆ ಪ್ರೌಢದೇವರಾಯನ ಕಾಲದಲ್ಲಿ ಆತನ ದಂಡ ನಾಯಕನಾದ ಜಕ್ಕಣ್ಣಾಚಾರ್ಯನೂ ೧೦೧ ವಿರಕ್ತರೂ ವೀರಶೈವದ ವಿಚಾರದಲ್ಲಿ ಪ್ರವೃತ್ತರಾಗಿ ವಚನವಾಙ್ಮಯದ ಪುನರ್‌ಜ್ಜೀವನದ ಕಾರ್ಯದಲ್ಲಿ ಪ್ರಮುಖ ಪಾತ್ರವನ್ನು ವಹಿಸಿದರು. ಜಕ್ಕಣ್ಣನ ವ್ಯಾಸಂಗಕ್ಕಾಗಿ ಮಹಾಲಿಂಗದೇವನು (೧೪೨೫) ಎರಡು ವಚನಸಂಕಲ್ಪಗಳನ್ನು ಸಂಪಾದಿಸಿ, ನಿಂತು ಹೋಗಿದ್ದ ವಚನವಾಙ್ಮಯ ಚಕ್ರವನ್ನು ಮತ್ತೆ ಹರಿಯಬಿಟ್ಟನು. ಈತನ 'ಏಕೋತ್ತರ ಶತಸ್ಥಲ' ಬಸವಣ್ಣ, ಚೆನ್ನಬಸವಣ್ಣ ಮೊದಲಾದ ಶರಣರ ೧೫೦೦ ವಚನಗಳು, ಅಂಗಸ್ಥಲ ೪೪ ಲಿಂಗಸ್ಥಲ ೫೫ ಒಟ್ಟು ೧೦೧ ಸ್ಥಲಗಳ ಅನುಕ್ರಮದಲ್ಲಿ ವಿಭಾಗಗೊಂಡಿದೆ; ಆತನ 'ಪ್ರಭುದೇವರ ವಚನ ವ್ಯಾಖ್ಯಾನ'ದಲ್ಲಿ ವ್ಯಾಖ್ಯಾನಸಾಪೇಕ್ಷವಾದ ಪ್ರಭುದೇವನ ಬೆಡಗಿನ ವಚನಗಳಿಗೆ ಟೀಕೆಯನ್ನು ಬರೆದು ಅವುಗಳನ್ನು ಅರ್ಥೈಸುವ ಕಾರ್ಯ ನಡೆದಿದೆ. ಮಹಲಿಂಗದೇವನ ಶಿಷ್ಯರಾದ ಕುಮಾರಬಂಕನಾಥ (೧೪೩೦) ಮತ್ತು ಚಕ್ಕಣಾರ್ಯ (೧೪೨೦) ಈ ಇಬ್ಬರು ತಮ್ಮ ಗುರುವಿನ ಕಾರ್ಯವನ್ನು ದೇವನ ಟೀಕಿನ ವಚನ ಎಂಬೆರಡು ವಚನ ಸಂಗ್ರಹಗಳನ್ನೂ ಭಕ್ತಿ ಭಂಡಾರಿ ಜಕ್ಕಣಾರ್ಯನು 'ಏಕೋತ್ತರಶತಸ್ಥಲ'ನೆಂಬ ಒಂದು ಸಂಗ್ರಹವನ್ನೂ ಹೊರತಂದರು. ಪ್ರೌಢದೇವರಾಯನ ಗುರುವಾರ ಮುಕುಂದಪೆದ್ದಿಯ ಭಾರತ,

ರಾಮಯಣಗಳ ಮೆರವಣಿಗೆ ಮಾಡಿಸಲು ಜಕ್ಕಣಾರ್ಯನು ಅದರ ಮೇಲಿನ ಸ್ಪರ್ಧೆಯಿಂದ ತನ್ನ 'ಏಕೋತ್ತರಶತಕಸ್ಥಲ'ಕ್ಕೂ ಅಂತಹ ಪ್ರಭಾವನೆ ಮಾಡಿಸಿದನಂತೆ ! ಇವರಲ್ಲಿ ಪುರಾತನರ ೫೫೦ ವಚನಗಳು ೧೦೧ ಸ್ಥಲಗಳ ಅನುಕ್ರಮದಲ್ಲಿ ವಿಭಾಗವಾಗಿವೆ. ೧೦೧ ವಿರಕ್ತರಲ್ಲಿ ಓರ್ವನಾದ ಕಲ್ಲು ಮಠದ ಪ್ರಭುದೇವನು (೧೪೩೧) ಪ್ರಭುದೇವ, ಬಸವಣ್ಣ ಮೊದಲಾದ ಪುರಾತನ ೩.೨೦ ವಚನಗಳು ಆಯ್ದುಕೊಂಡು, ಷೋಡಶ ಸ್ಥಲಪರಿಕ್ರಮದಿಂದ ಸೇರಿಸಿ ವ್ಯಾಖ್ಯಾನಮಾಡಿರುವ 'ಲಿಂಗಲೀಲಾವಿಲಾಸ ಚಾರಿತ್ರ'ವನ್ನು ಸಂಪಾದಿಸಿದ್ದಾನೆ. ಆತನ 'ಪ್ರಭುದೇವನ ಮಂತ್ರಗೋಪ್ಯದ ಟೀಕೆ'ಯು ೨೭ ಪದ್ಯಗಳನ್ನು ಒಳಗೊಂಡು ಅವುಗಳಲ್ಲಿ ಒಂದೊಂದಕ್ಕೂ ವಿಸ್ತಾರವಾದ ಟೀಕೆಯಿದೆ. 'ಎಂಟೆಸಳ ಕಮಲದಾ ನವರಹ್ಮಪುರದೊಳಗೆ । ಎಂಟು ಬೀದಿಯಲೆಂಟು । ಕರಿಗಳುಂಟು । ಎಂಟು ಕರಿಗಳ ಸುಟ್ಟು ಕಂಟಕಂಗಳ ಗೆಲಿದು । ದಾಂಟಿದೆದು ಸಂಸಾರಸಾಗರವನು ॥' ಈ ಪದ್ಯದ ಒಂದೊಂದು ಶಬ್ದಕ್ಕೂ ಟೀಕೆಯಲ್ಲಿ ವಿವರಣೆಯನ್ನು ಕೊಟ್ಟು, ಅದರ ಕೆಳಗೆ ಒಟ್ಟು ತಾತ್ಪರ್ಯವನ್ನು ಕೊಡುತ್ತಾನೆ. ಈತ ತನ್ನ ಗ್ರಂಥ 'ಶಿವಜ್ಞಾನದರ್ಪಣಮಾಗಿರ್ದುದು' ಎಂದು ಹೇಳಿಕೊಂಡಿದ್ದಾನೆ. ಗುಬ್ಬಿಯ ಮಲ್ಲಣ್ಣ (೧೪೭೫) ತನ್ನ 'ಗಣ ಭಾಷ್ಯಾರತ್ನಮಾಲೆ'ಯಲ್ಲಿ ಪುರಾತನರ ೯೭೪ ವಚನಗಳನ್ನು ಸಂಗ್ರಹಿಸಿದ್ದಾನೆ. ಈತನು ಇತರ ಟೀಕಾಕರರಿಗಿಂತಲೂ ಒಂದು ಹೆಜ್ಜೆ ಮುಂದೆ ಹೋಗಿ, ವೇದಾಗಮಪುರಾಣ ಇತಿಹಾಸಾದಿಗಳಿಂದ ಪ್ರಮಾಣವನ್ನು ಕೊಟ್ಟು ಪುರಾತನರ ವಚನಗಳನ್ನು ವಿವರಿಸಿದ್ದಾನೆ. ಈ ವಚನಗಳ ಸಂಗ್ರಹ ಕಾರ್ಯದ ಅತ್ಯಂತ ಸುಂದರವಾದ ಮಾದರಿಯೆಂದರೆ 'ಶೂನ್ಯ ಸಂಪಾದನೆ' ಇದನ್ನು ಕುರಿತು ಹಿಂದೆಯೇ ಹೇಳಿದೆ.

ಇನ್ನು ಈ ಯುಗದಲ್ಲಿ ಸ್ವತಂತ್ರರಚನೆಗೆ ಕೈಯಿಟ್ಟ ವಚನಕಾರರನ್ನು ಸ್ವಲ್ಪ ನೋಡೋಣ. ಅವರಲ್ಲಿ ಅಗ್ರಗಣ್ಯನಾದವನು ತೋಂಟದ ಸಿದ್ಧಲಿಂಗಯತಿ. ಈತನು ನಿರಂಜರ ಗಣೇಶನ ಅವತಾರವಂತೆ! ಷಟ್‌ಸ್ಥಲದ ಉದ್ಧಾರಕ್ಕಾಗಿ ಬುವಿಯಲ್ಲಿ ಅವತರಿಸಿದನಂತೆ । ಹರದನಹಳ್ಳಿಯ ಗೋಸಲ ಚೆನ್ನಬಸವೇಶ್ವರನ ಕರಸಂಜಾತನಾದ ಈತನು ದೇಶಸಂಚಾರ ಮಾಡುತ್ತಾ ತುಮಕೂರು ಜಿಲ್ಲೆಯ ಕೆಗ್ಗೆರೆಯೆಂಬ ಹಳ್ಳಿಯ ಸಮೀಪಕ್ಕೆ ಬಂದು, ಅಲ್ಲಿದ್ದ ಒಂದು ತೋಟದಲ್ಲಿ ಇಳಿದು ಕೊಂಡನು. ನಂಬಿಯಣ್ಣನೆಂಬ ಶಿವಭಕ್ತನೊಬ್ಬ ಆತನನ್ನು ಭಿಕ್ಷಕ್ಕೆ ಆಹ್ವಾನಿಸಿ ಮನೆಗೆ ಹೋದವನು ಯಾವುದೋ ಜಗಳದಲ್ಲಿ ಮಗ್ನನಾಗಿ ಗುರುವನ್ನು ಮರೆತೇಬಿಟ್ಟ ಹಲವು ದಿನಗಳು ಉರುಳಿ ಹೋದವು. ಯತಿಯು ಧ್ಯಾನದಲ್ಲಿ ಕುರಿತು ಸಮಾಧಿಸ್ಥನಾದನು. ಆತನ ಮೇಲೆ ಹುತ್ತ ಬೆಳೆಯಿತು. ಬಹುಕಾಲದಮೇಲೆ ಭಕ್ತರು ಆತನ ಇರುವನ್ನು ಅರಿತು ಹುತ್ತವನ್ನು ಅಗೆದು ಆತನನ್ನು ಉಪಚರಿಸಿದರು. ಆತನ ಕೀರ್ತಿ ಬೆಳೆಯಿತು. ಆತನ ಸುತ್ತ ಭಕ್ತವೃಂದ ನೆರೆಯಿತು. ಬಸವಾದಿ ಇಲ್ಲಿ ಸೃಷ್ಟಿಯಾಯಿತು. ತೋಂಟದ ಸಿದ್ಧಲಿಂಗಯತಿಯು ನೆಲೆಸಿದ ನೆಲ ಭೂಕೈಲಾಸವಾಯಿತು. ಅಲ್ಲಿಯೇ ಸಮೀಪದಲ್ಲಿದ್ದ ಎಡೆಯೂರಿನಲ್ಲಿ ಬಂದು ನೆಲಸಿದ ಈ ಮಹಾತ್ಮನು ತನ್ನ ಶಿಷ್ಯರ ಮೂಲಕ ವೀರಶೈವ ಪ್ರಚಾರ ಪ್ರಸಾರಗಳನ್ನು ಅಮೃತವಾಗಿ ಸಾಧಿಸಿದರು. ಎಡೆಯೂರು ವೀರಶೈವಧರ್ಮದ ಕೇಂದ್ರವಾಯಿತು. ಆತನು ಸಮಾಧಿಯನ್ನು ಪ್ರವೇಶಿಸಿದ ಮೇಲೆ ಭಕ್ತರೂ ಒಂದು ಶಿವಾಲಯವನ್ನು ನಿರ್ಮಿಸಿ ಶಾಸನವನ್ನು ನೆಡಿಸಿದರು. ಇಂದಿಗೂ ಎಡೆಯೂರು ಶಿವಭಕ್ತರ ಪುಣ್ಯಭೂಮಿ; ಜಾಗ್ರತಸ್ಥಳವೆಂದು ಪ್ರಸಿದ್ಧಿಯಾಗಿದೆ.

ತೋಂಟದ ಸಿದ್ಧಲಿಂಗೇಶ್ವರನ ವಚನಗ್ರಂಥಕ್ಕೆ 'ಷಟ್ ಸ್ಥಲಜ್ಞಾನಸಾರಾಮೃತ' ಎಂದು ಹೆಸರು. ಇಲ್ಲಿನ ಪ್ರತಿಯೊಂದು ವಚನವೂ 'ಮಹಾಲಿಂಗ ಗುರು ಶಿವಸಿದ್ಧೇಶ್ವರ ಪ್ರಭುವೆ' ಎಂದು

ಮುಕ್ತಾಯವಾಗುತ್ತದೆ. ಈ ವಚನಗಳಲ್ಲಿ ಪುರಾತನ ವಚನಗಳ ಪ್ರಭಾವ ಕಂಡುಬರುವುದು ಕೇವಲ ಸ್ವಾಭಾವಿಕ. ಅಲ್ಲಿನ ಕಾವ್ಯಗುಣ ಇಲ್ಲಿಲ್ಲವಾದರೂ ಭಕ್ತನ ನಿಷ್ಠೆ ಶ್ರದ್ಧೆ ಆರ್ತಭಾವಗಳಿಗೆ ಕೊರತೆಯಿಲ್ಲ. ಸ್ವಾನುಭಾವವುಳ್ಳವರೆ ಲಿಂಗಾಂಗ ಸಾಮರಸ್ಯೈಕ್ಯರೆಂದು ಹೇಳುತ್ತಾ 'ಸೂರ‍್ಯನ ಬೆಳಗಿಂಗೆ ಕೊಳ್ಳಿಯ ಬೆಳಗೆ ಹಿಡಿಯಲುಂಟೆ ಮರುಳೆ ? ತನ್ನ ಮುಖದ ತಾಬಲ್ಲಂಗೆ ಕನ್ನಡಿಯ ಹಿಡಿದು ನೋಡಲುಂಟೆ ಹೇಳಾ ? ತನ್ನ ಸುಳುಹಿನ ಸೂಕ್ಷ್ಮವ ತಾನರಿದ ಸ್ವಯಜ್ಞಾನಿಗೆ ಇನ್ನಾವ ಆಗಮನದ ಬೋಧೆ ಏಕೆ ಹೇಳಾ ?' ಎನ್ನುತ್ತಾನೆ. ಜ್ಞಾನಿಗಳಾದ ಶರಣರೆ ಲಿಂಗವೆಂದು ತಿಳಿದ ಮಹಾತ್ಮರಿಗೆ ಸಂಕಲ್ಪ ಭ್ರಮೆಯಿಲ್ಲವಂತೆ – 'ಸುಧೆಯೊಳಗೆ ವಿಷವುಂಟೆ ? ಮಧುರದೊಳಗೆ ಕಹಿಯುಂಟೆ ? ದಿನಮಣಿಯೊಳಗೆ ಕಪ್ಪುಂಟೆ ?' ಎಂದು ಅದನ್ನು ಸಮರ್ಥಿಸುತ್ತಾನೆ. 'ನಿತ್ಯತೃಪ್ತಂಗೆ ಹಸಿವಿನ ಭಯವುಂಟೆ ? ಸತ್ಯಜ್ಞಾನಿಗೆ ಅಜ್ಞಾನದ ಭಯವುಂಟೆ ? ಎಂಬ ಮಾತುಗಳಲ್ಲಿ ಅನುಭಾವದ ಆಳಕ್ಕಿಂತ ಮನಸ್ಸಿನ ಸ್ಥೈರ್ಯ ಹೆಚ್ಚಾಗಿದೆ. ಆತನಲ್ಲಿ ಸಾಧಕನ ಆತ್ಮರೋದನ ಕಳವಳಗಳಿಂತಲೂ ಸಿದ್ಧ ಪುರುಷನ ಪ್ರಶಾಂತತೆಯೇ ಹೆಚ್ಚು. 'ಅಳಲದೆ ಆಯಾಸಬಡದೆ ಒಳಗಿನ ಜ್ಯೋತಿಯ ಬೆಳಗಿನ ಕಳೆಯ ಕಮಲವ ಪೂಜಿಸಬಲ್ಲ ಶರಣಂಗೆ ಬೆಳಗಾಗಿ ಎದ್ದು ಪೂಜಿಸಿಹೆನೆಂಬ ಕಳವಳವೇನು ಹೇಳಾ' ಎಂದು ಆತ ಕೇಳುತ್ತಾನೆ. 'ಜಲಧಿಯ ಸಾಗರವ ದಾಂಟಿ, ಅಮೃತ ಸಾಗರವ ಬೆರಸಿ, ಅನುಪಮ ಸುಖಿಯಾದೆನಯ್ಯ' ಎಂಬ ಆತನ ಮಾತು ಹೆಸರಿಗೆ ಸಿದ್ಧಪುರುಷನ ಮಾತೇ ಸರಿ.

ತೋಂಟದ ಸಿದ್ಧೇಶ್ವರನ ಶಿಷ್ಯರಲ್ಲಿ ಒಬ್ಬನಾದ ಸ್ವತಂತ್ರಸಿದ್ಧ ಲಿಂಗೇಶ್ವರನು (೧೪೮೦) 'ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ' ಎಂಬ ಅಂಕಿತದಿಂದ 'ಸ್ವತಂತ್ರ ಸಿದ್ಧಲಿಂಗೇಶ್ವರವಚನ' ಗಳನಲ್ಲದೆ 'ಮುಕ್ತಾಂಗನೆಯ ಕಂಠಹಾರ' 'ಜಂಗಮರಗಳೆ' ಎಂಬ ಗ್ರಂಥಗಳನ್ನು ಬರೆದಿದ್ದಾನೆ. ಸಾಹಿತ್ಯದ ದೃಷ್ಟಿಯಿಂದ ಆತನ ಗ್ರಂಥವಾವುದೂ ಗಮನಾರ್ಹವಾಗಿಲ್ಲ. ಆತನ ವಚನಗಳಲ್ಲಿ ಸರಳತೆ ಇದೆ, ಆದರೆ ಸಂಗ್ರಹಣಗುಣ ನಿಶಿತತೆಗಳು ಇಲ್ಲ; ಬರವಣಿಗೆ ವಿಷಯಗರ್ಭಿತವಾಗಿದ್ದರೂ ಸಾರವತ್ತಾಗಿಲ್ಲ. 'ಕಣ್ಣು ಕಾಲು ಎರಡುಳ್ಳವನು. ದೂರವೆಯ್ದುವನಲ್ಲದೆ, ಕಣ್ಣು ಕಾಲು ಎರಡರೊಳಗಂದಿಲ್ಲದವನು ದೂರವೆಯ್ದಲರಿಯನೆಂಬಂತೆ ಜ್ಞಾನರಹಿತನಾಗಿ ಕ್ರಿಯೆಯನ್ನಷ್ಟೆ ಮಾಡಿದರೇನು ? ಅದು ಕಣ್ಣಿಲ್ಲದವರ ನಡೆಯಂತೆ ; ಕ್ರಿಯಾರಹಿತನಾಗಿ ಜ್ಞಾನಿಯಾದೊಡೇನು ? ಅದು ಕಾಲಿಲ್ಲದವನ ಇರವಿನಂತೆ' ಎಂಬುದು ಎಷ್ಟು ವಾಚ್ಯವಾಗಿದೆ ! ಭಾವಬಂಧುರತೆಯಾಗಲಿ, ಕೊನೆಗೆ ಮಾತಿನ ಚತುರತೆಯಾಗಲಿ ಇಲ್ಲಿ ಕಾಣಬರದು. ಒಮ್ಮೊಮ್ಮೆ 'ವೇಷವ ಧರಿಸಿ, ಭಾಷೆಯ ಕಲಿತು, ದೇವರ ಸುತ್ತಿ ಬಳಲಬೇಡ, ಜಗದೀಶನ ಪಾದವನೊಲಿದು ಪೂಜಿಸಿರಣ್ಣ' ಎಂಬಂತಹ ಪ್ರಾಸದ ಬೆಡಗು ಕಾಣಬಹುದು. ಬುದ್ಧಿಗೆ ಬೆಳಕನ್ನೂ ಹೃದಯಕ್ಕೆ ಆನಂದವನ್ನೂ ಕೊಡುವ ಸಾಮಗ್ರಿ ಇಲ್ಲಿ ಅಷ್ಟಾಗಿ ಇಲ್ಲ.

ಗುಮ್ಮಳಾಪುರದ ಸಿದ್ಧಲಿಂಗೇಶ್ವರನು ತೋಂಟದ ಸಿದ್ಧಲಿಂಗಯತಿಯ ಮತ್ತೊಬ್ಬ ಶಿಷ್ಯ. ಈತ ಆತನ ಪ್ರತಿಶಿಷ್ಯನೂ ಅಹುದು. ಯತಿಯ ಶಿಷ್ಯನಾದ ಬೋಳಬಸವನು ಗೊಮ್ಮಳಾಪುರದ ಸಿದ್ಧಲಿಂಗೇಶ್ವರನ ವಿದ್ಯಾಗುರು. ತನ್ನ ವಚನಗಳಲ್ಲಿ 'ಬೋಳಬಸವೇಶ್ವರಾ ನಿಮ್ಮ ಧರ್ಮ ನಿಮ್ಮ ಧರ್ಮ' ಎಂಬುದನ್ನು ಅಂಕಿತವಾಗಿ ಬಳಸಿದ್ದಾನೆ. ಈ ವಿದ್ಯಾಗುರುವಿನ ಮೂಲಕವೇ ಈ ವಚನಕಾರನಿಗೆ ಸಿದ್ಧಲಿಂಗಯತಿಯ ಅನುಗ್ರಹ ದೊರೆತದು. ಆತನ 'ಷಟ್‌ಸ್ಥಲದ ಲಿಂಗಾಂಗ ಸಂಬಂಧದ ನಿರ್ವಚನ'ದಲ್ಲಿ ೧೫೫ ವಚನಗಳು ಮಾತ್ರ ಇವೆ. ಈತನ ಲಿಂಗಾಂಗ ಸುದೀರ್ಘ, ಕಾವ್ಯ ದೃಷ್ಟಿಯಿಂದ ಸಾಮಾನ್ಯ.

ತೋಂಟಸಿದ್ಧಲಿಂಗಯತಿಯ ಮತ್ತೊಬ್ಬ ಶಿಷ್ಯ ಘನಲಿಂಗನು (೧೪೮೦) 'ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ' ಎಂಬ ಅಂಕಿತದಿಂದ ಹಲವು ವಚನಗಳನ್ನು ಬರೆದಿದ್ದಾನೆ. ಇಲ್ಲಿನ ಒಂದು ವಚನದಲ್ಲಿ ತನ್ನ ಆತ್ಮಕಥೆಯನ್ನು ಹೇಳಿಕೊಂಡಿದ್ದಾನೆ. ಆ ವಚನದ ಆರಂಭದಲ್ಲಿ ಎಲೆ ತಂಗಿ, ಶರಣಸತಿ ಲಿಂಗಪತಿಯಾದ ಪ್ರತಿವ್ರತಾಭಾವದ ಚಿಹ್ನೆ ನಿನ್ನ ನಡೆನುಡಿಯಲ್ಲಿ ಹೊಗರುದೋರುತ್ತಿದೆ; ನಿನ್ನ ಪೂರ್ವಾಪರವಾವುದಮ್ಮ?' ಎಂದು ಪ್ರಶ್ನೆ ಹಾಕಿಕೊಂಡು, 'ಸುತ್ತೂರು ಸಿಂಹಾಸನದ ಪರ್ವತದೇವರ ಶಿಷ್ಯರು ಕೂಗಲೂರು ನಂಜಯ್ಯದೇವರು, ಆ ನಂಜಯ್ಯದೇವರ ಕರಕಮಲದಲ್ಲಿ ಉದಯವಾದ ಶರಣುವೆಣ್ಣಯ್ಯ ನಾನು' ಎಂದು ಹೇಳಿಕೊಂಡಿದ್ದಾನೆ. ಆದ್ದರಿಂದ ಈತ ಮೈಸೂರು ಜಿಲ್ಲೆಯ ಸುತ್ತೂರು ಸ್ಥಳದವನಾಗಿರಬೇಕು. ತನ್ನ ಗುರು ತೋಂಟದಸಿದ್ಧಲಿಂಗಯತಿಗೆ' ಎನ್ನ ಶರಣು ಮಾಡಿದರು' ಎಂದು ಹೇಳಿಕೊಂಡಿರುವುದರಿಂದ ಈತನು ತೋಂಟದ ಸಿದ್ಧಲಿಂಗಯತಿಯ ಶಿಷ್ಯನೂ ನಿಜ. ಈತನು ವಚನಗಳು ಬಹು ಉದ್ದವಾಗಿ ಬೆಳೆದುಕೊಂಡು ಹೋಗುತ್ತವೆ. ಆನೆಯನ್ನು ಕಂಡ ಕುರುಡರು ಕಥೆ ಇಡೀ ಒಂದು ವಚನವಾಗಿ ಕೂತಿದೆ. ಆದರೂ ಈತನ ವಚನಗಳು ಸಾರವತ್ತಾಗಿವೆ. ಅವುಗಳಲ್ಲಿ ಸಾಧಕನ ಆರ್ತತೆಯಿದೆ, ನಿಷ್ಠೆಯಿದೆ, ಭಕ್ತಿಯಿದೆ 'ಎನ್ನ ಕೇಡಿಂಗೆ ಕಡೆಯಿಲ್ಲ, ಕಾಯವಿಕಾರವೆಂಬ ಕತ್ತಲೆಗವಿಯುತ್ತು, ಮನೋವಿಕಾರವೆಂಬ ಮಾಯೆ ಸೆರೆವಿಡಿದಳು, ಇಂದ್ರಿಯ ವಿಕಾರವೆಂಬ ಹುಚ್ಚು ನಾಯಿಗಳು ಕಚ್ಚಿ ಕಚ್ಚಿ ಒದರುತ್ತಿವೆ. ಸಾವನ್ನಬರ ಸರಸ ಉಂಟೆ ಲಿಂಗವೆ ?' ಎಂದು ಹೃದಯವೇದನೆಯನ್ನು ತೋಡಿಕೊಳ್ಳುತ್ತಾನೆ. ತನ್ನನು ಉದ್ಧರಿಸೆಂದು ಬೇಡುತ್ತಾ ನಾನು ಮುಂದುವರಿಯದ ಅಂಧಕನಯ್ಯ, ನಿನ್ನ ಬಾಗಿಲ ಕಾಯ್ವ ಗೊಲ್ಲನಯ್ಯ ..... ನಿನ್ನಂಗಳದಲ್ಲಿ ಬೊಗಳುವ ಶ್ವಾನನಯ್ಯ, ನಿನ್ನ ಮನೆಯ ನಡೆಸೊಡರಯ್ಯ, ಎನ್ನ ತಪ್ಪು ಕಾಯಯ್ಯ' ಎಂಬ ಆತನ ಕರುಳರೋದನ ಹೃದಯಸ್ಪರ್ಶಿಯಾಗಿವೆ. 'ದೇವಾ ಕುಂಬಳಕ್ಕೆ ಹೋಗಿ ಕನಕದ ಕೊಡನ ಕಂಡಂತೆ ಮರ್ತ್ಯಲೋಕಕ್ಕೆ ಬಂದು ಮಾನವ ಜನ್ಮವಕಂಡೆ' 'ಕತ್ತಲೆ ಸತ್ತು ಬೆಳಗು ಬೀದಿ ವರದಿತ್ತು ನೋಡಾ' ಎಂಬಲ್ಲಿ ವಚನಕಾರನ ಕಾವ್ಯಮಯ ಶೈಲಿಯನ್ನು ನಾವು ನೋಡುತ್ತೇವೆ. ಕೆಲವು ವೇಳೆ ಆತನು ರೂಪಕಪರಂಪರೆಯನ್ನೆ ತನ್ನ ವಚನದಲ್ಲಿ ಬಳಸುತ್ತಾನೆ. ಈ ಯುಗದ ವಚನಕಾರರಲ್ಲಿ ಈತನಿಗೆ ಹಿರಿಯ ಸ್ಥಾನ ತೆರವಾಗಿದೆ.

ಈ ಯುಗದ ಮತ್ತೊಬ್ಬ ಒಳ್ಳೆಯ ವಚನಕಾರ ಷಣ್ಮುಖಸ್ವಾಮಿ (೧೭೦೦) ಈತನು ಗುಲ್ಬರ್ಗ ಜಿಲ್ಲೆಯ ದೇವರ ಗ್ರಾಮದ ಒಂದು ವಿರಕ್ತ ಮಠದ ಗುರು. ತನ್ನ ಗುರುವಾದ ಅಖಂಡೇಶ್ವರಸ್ವಾಮಿಯ ಹೆಸರಿನಲ್ಲಿ ಈತ ೭೧೭ ವಚನಗಳನ್ನು ಬರೆದಿದ್ದಾನೆ. ಭಾವ-ಭಾಷೆಗಳಲ್ಲಿ ಈತನು ಬಸವಣ್ಣ, ಅಕ್ಕಮಹಾದೇವಿಯವರಿಗೆ ಋಣಿಯಾಗಿದ್ದಾನೆ. 'ಮಾದಾರ ಚನ್ನಯ್ಯನ ಬಾಯ ತಾಂಬೂಲನ ಮೆಲುವೆ, ಕಕ್ಕಯ್ಯನ ಒಕ್ಕುಮ ಅಕ್ಕುವನುಂಬೆ, ಚೋಳಿಯಕ್ಕನ ಊಳಿಯಕ್ಕನ ಊಳಿಗದವನಾಗುವೆ, ಶ್ವಪಚನ ಆಳಾಗುವೆ' ಎಂಬುದು ಬಸವಣ್ಣನ ಜ್ಞಾಪಕಕ್ಕೆ ತಂದೆ ಅರಳಿಯ ಮರದೊಳಗಿರುವ ಅರಗಿಳಿಗಿರಾ, ನಮ್ಮ ಅಖಂಡೇಶ್ವರನ ಕಂಡಿರೆ, ಹೇಳಿರೆ ಇತ್ಯಾದಿಯಾದ ವಚನ ಅಕ್ಕಮಹಾದೇವಿಯ ವಚನವನ್ನು ಜ್ಞಾಪಕಕ್ಕೆ ತರುತ್ತದೆ. ಉದ್ದಕ್ಕೂ ಕಂಡುಬರುವ ಈ ಅನುಕರಣ ಈತನ ವಚನಗಳಿಗೆ ಸರಳ ಸುಂದರವಾದ ಪ್ರಸಾದ ಗುಣವನ್ನು ನೀಡಿದೆ. ವಚನಕಾರ ಒಲವು ತತ್ತ್ವನಿರೂಪಣೆಗಿಂತ ಆಚಾರಧರ್ಮದ ಕಡೆಗೆ ಹೆಚ್ಚು ಬಾಗಿದೆ.

ಈತನು ೪೧ ಜೋಗುಳದ ಪದಗಳನ್ನು ಬರೆದಿದ್ದಾನೆ. ಲಿಂಗ ಶಿಶು, ತಾನು ತಾಯಿ ಎಂಬ ವಾತ್ಸಲ್ಯ ಭಕ್ತಿಯಿಂದ ಕೂಡಿದ ಈ ಹಾಡುಗಳು ಹೃದಯಂಗಮವಾಗಿವೆ. ಶಿಷ್ಯನೆಂಬ ಹೆಂಡತಿಗೆ ಗುರುವೆಂಬ ಗಂಡನಿಂದ ಜನಿಸಿದ ಲಿಂಗವೆಂಬ ಶಿಶು ಈತನ ಅಂಗೈತೊಟ್ಟಿಲಲ್ಲಿ ನಲಿಯುವಷ್ಟು ಭಕ್ತಿ ಭಾವವನ್ನು ಬೆಳಸಿಕೊಂಡಿದ್ದ ಷಣ್ಮುಖಸ್ವಾಮಿ ಧನ್ಯ.

ಹಲವಾರು ಕವಿಗಳ ಹೆಸರುಗಳೊ, ವಚನಭಾಗಗಳೊ ದೊರೆಯುತ್ತವೆಯಾದರೂ ಆ ಸಾಮಾಗ್ರಿ ಅವುಗಳನ್ನು ಕುರಿತು ಬರೆಯುವಷ್ಟು ಉಪಯುಕ್ತವಾಗಿಲ್ಲ. ಈನಿಟ್ಟಿನಲ್ಲಿ ಸಂಶೋಧನೆಗೆ ಸಾಕಷ್ಟು ಅವಕಾಶವಿದೆ.

೧. ದೇಪರಾಜ (ಕ್ರಿ.ಶ. ೧೪೧೦)

ವಿಜಯನಗರ ರಾಜಮನೆತನದ ಬುಕ್ಕರಾಯನ ಮಗ ಎರಡನೆಯ ಕಂಪ ಅಥವಾ ದೇಪರಾಜನು 'ಸೊಬಗಿನಸೋನೆ' ಮತ್ತು 'ಅಮರುಶತಕ'ಗಳ ಕರ್ತೃ ತ್ರ್ಯಂಬಕದೇವನೆಂಬುವನಿಂದ ಕನ್ನಡ ಚಿತ್ರಾಶುಕವಿತ್ವವನ್ನು ತಾನು ಕಲಿತುದಾಗಿ ಕವಿ ಹೇಳಿಕೊಂಡಿದ್ದಾನೆ. ಈತನ 'ಸೊಬಗಿನ ಸೋನೆ' ಸಾಂಗತ್ಯದಲ್ಲಿದೆ 'ಸುರಭಾರತಿ, ಕುಂಜರೆ, ವಸಂತೆ – ಇತ್ಯಾದಿ ಏಳು ಜನ ರಮಣಿಯರ ಶೃಂಗಾರ ಕಥೆಗಳನ್ನು ಒಳಗೊಂಡಿದೆ. ತನ್ನ ಮಡದಿಯ ಬಯಕೆಯನ್ನು ಸಲ್ಲಿಸುವುದಕ್ಕಾಗಿ ಕವಿ ಇದನ್ನು ಬರೆದನಂತೆ। ಈ ಕಾವ್ಯ 'ಜಾಣರ ಮೆಚ್ಚು', 'ರಸಿಕರ ರಸಾಯನ' ಎಂದು ಕವಿಯ ಹೇಳಿಕೆ. ಆದರೆ ಈತನು ಬಳಸಿರುವ ಪ್ರೌಢಭಾಷೆ ಈ ಹಾಡುಗಬ್ಬಕ್ಕೆ ಹೊಂದಿಕೊಳ್ಳುವುದಿಲ್ಲ. ಇದರ ಮೇಲೆ ಕವಿಗೆ ಹದಿನೆಂಟು ಬಗೆಯ ವರ್ಣನೆಗಳಲ್ಲಿ ಬೇರೆ ಚಪಲ. ಸರಗತೆಯ ಕಡಲೆಯ ಮಧ್ಯೆ 'ಕುಮುದ ಕುಮದ ಕುಮುದೇಶ ಜನನವಾರ್ಧಿ ಕಮಲ ಕಮಲ ಕಮಲಾಲಯ' ಎಂಬಂತಹ ಕಲ್ಲುಹರಳುಗಳು ! ಕವಿಯ ಪ್ರತಿಭೆಗಿಂತಲೂ ಪಾಂಡಿತ್ಯ ಪ್ರದರ್ಶನವೇ ಹೆಚ್ಚು. ಆದರೂ ಈತನು ಸಾಂಗತ್ಯಕಾರರಲ್ಲಿ ಮೊಟ್ಟ ಮೊದಲಾದವನು. ಪ್ರಥಮ ಸಾಂಗತ್ಯಕಾರನೆಂದು ಬಹುಕಾಲ ಸ್ವೀಕೃತನಾಗಿದ್ದ ಶಿಶುಮಾಯಣನು ೧೫ನೇ ಶತಮಾನದ ಉತ್ತರಾರ್ಧಕ್ಕೆ ಹಾರಿದುದರಿಂದ ದೇಪರಾಜನಿಗೆ ಪ್ರಥಮ ಸಾಂಗತ್ಯಕಾರನ ಪಟ್ಟ ದೊರೆತಿದೆ. ಈತನ 'ಅಮರ ಶತಕ'ವು ಸಂಸ್ಕೃತದ ಭಾಷಾಂತರ, ಪರಿವರ್ಧಿನೀ ಷಟ್ಪದಿಯಲ್ಲಿದೆ. 'ಸ್ಮರರಾಜ್ಯದ ಮೈಸಿರಿ, ಶೃಂಗಾರದ ಶರನಿಧಿ'ಯಾದ ಈ ಶತಕವನ್ನು ಕನ್ನಡಕ್ಕೆ ಮೊಟ್ಟ ಮೊದಲು ತಂದು ಕೊಟ್ಟಿದಷ್ಟೇ ಅಲ್ಲ, ಪರಿವರ್ಧಿನೀ ಷಟ್ಪದಿಯಲ್ಲಿ ಅಖಂಡ ಕಾವ್ಯವೊಂದನ್ನು ಮೊಟ್ಟ ಮೊಲದು ತಂದು ಕೊಟ್ಟಕೀರ್ತಿಯೂ ಈತನಿಗೆ ಸಲ್ಲುತ್ತದೆ.

೨. ಲಕ್ಕಣ ದಂಡೇಶ (ಕ್ರಿ.ಶ. ೧೪೨೮)

ಏಕಕಾಲದಲ್ಲಿಯೇ ಕವಿಯೂ ಕಲಿಯೂ ಆಗಿದ್ದ ಲಕ್ಕಣದಂಡೇಶನು ವಿಜಯನಗರದರಸು ಪ್ರೌಢದೇವರಾಯನ ಮಹಾದಂಡನಾಯಕನಾಗಿ, ಮಂತ್ರಿಯಾಗಿ, ಆಪ್ತಸಚಿವನಾಗಿ ಅದ್ವಿತೀಯವಾದ ಅಧಿಕಾರ ಗೌರವ ಕೀರ್ತಿಗಳ ಒಡೆಯನಾಗಿದ್ದವನು. ಉದಾರವಾಗಿ, ಧರ್ಮಪರನಾಗಿದ್ದ ಈತನು ಕವಿಗಳಿಗೆ ಆಶ್ರಯದಾತನಾಗಿದ್ದುದಲ್ಲದೆ, ಸ್ವತಃ ಕವಿಯಾಗಿ, ಬೇಡಿದ ವೀರಶೈವ ತತ್ತ್ವಗಳನ್ನು ಬೇಡಿದೊಡನೆಯೇ ನೀಡಬಲ್ಲ ಚಿಂತಾಮಣಿಯಂತಿರುವ 'ಶಿವತತ್ತ್ವ ಚಿಂತಾಮಣಿ'ಯನ್ನು ಕನ್ನಡಕ್ಕೆ ನೀಡಿದ್ದಾನೆ. ಎರಡು ಸಾವಿರದ ಇನ್ನೂರಕ್ಕೂ ಹೆಚ್ಚು ವಾರ್ಧಕಷಟ್ಪದಿಯ ಪದ್ಯಗಳನ್ನು ಒಳಗೊಂಡಿರುವ ಈ ಬೃಹತ್ಕಾವ್ಯವು ಒಂದು 'ಪಂಚಾಮೃತ'ವಂತೆ ! ಇದರ ಗುರಿ ಲಿಂಗಾಂಗ ಸಾಮರಸ್ಯ ರೂಪವಾದ ಶಿವಾದ್ವೈತ ನಿರೂಪಣೆ, ಪಟಲ, ಶಿವನ ಪಂಚವಿಂಶತಿ ಲೀಲೆಗಳು, ಪುರಾತನ ಮತ್ತು ನೂತನ ಶರಣರ ಕಥೆಗಳು, ಪಂಚಾಕ್ಷರಿ ವಿಭೂತಿ ರುದ್ರಾಕ್ಷಿಗಳ ಮಹಿಮೆ, ದೀಕ್ಷಾ ಕ್ರಮ – ಇತ್ಯಾದಿ ಇತ್ಯಾದಿಗಳನ್ನು ಒಳಗೊಂಡ ಈ ಗ್ರಂಥ ವೀರಶೈವ ಧರ್ಮದ ಒಂದು ಕೈಪಿಡಿಯಂತಿದೆ. ಸಿದ್ಧನಂಜೇಶಕವಿಯು ಇದನ್ನು 'ಶಿವತತ್ತ್ವ ಚಿಂತಾಮಣಿಶಾಸ್ತ್ರ' ಎಂದು ಕರೆದಿರುವುದು ಸಾರ್ಥಕವಾಗಿದೆ. ಇದರಲ್ಲಿ ನಾವು ಬಹುಮುಖ್ಯವಾಗಿ ಗಮನಿಸಬೇಕಾದುದು ಇದರಲ್ಲಿ ಬಂದಿರುವ ಅಸಂಖ್ಯಾತ ಶಿವಶರಣಕ ಕಥೆಗಳು, ಅದರಲ್ಲಿಯೂ ನೂತನರ ಕಥೆಗಳು. ಕನ್ನಡಿಗರು ಮಾತ್ರವೆ ಅಲ್ಲದೆ ಆಂಧ್ರ, ತಮಿಳು, ಕೇರಳ, ಮಹಾರಾಷ್ಟ್ರೀಯ, ಗುಜರಾತಿ ಇತ್ಯಾದಿ

ಶಿವಶರಣರ ಕಥೆಗಳೆಲ್ಲ ಇಲ್ಲಿ ಬಂದಿವೆ. ಈ ಕಥೆಗಳನ್ನು ಸಂಗ್ರಹವಾಗಿ, ಸಾರವತ್ತಾಗಿ ನಿರೂಪಿಸುವ ಕಲೆ ಲಕ್ಕಣ್ಣನಲ್ಲಿ ಮೈವೆತ್ತಿದೆ. ಒಂದೇ ಪದ್ಯದಲ್ಲಿಯ ಮೂರು ನಾಲ್ಕು ಶರಣರ ಹೆಸರು, ಊರು, ಭಕ್ತಿ ವೈಶಿಷ್ಟ್ಯಗಳನ್ನು ಹುದುಗಿಸುತ್ತಾನೆ. ಕವಿ, ಈತನ ನಮ್ರತೆಯೂ ಸ್ತುತ್ಯವಾದುದು; ಸಣ್ಣ ದೊಡ್ಡ ಶರಣರೆಲ್ಲರಿಗೂ 'ಚರಣಾಂಬುಜಕ್ಕೆ ಶರಣು' ಮಾಡುತ್ತಾನೆ. ಹೀಗೆ ಶರಣರ ಕಥೆಗಳನ್ನು ನಿಬಿಡವಾಗಿ ನಿರೂಪಿಸ ಹೊರಟಿರುವುದರಿಂದ ಈ ಕಾವ್ಯದಲ್ಲಿ ಕಾವ್ಯ ಗುಣ ಪ್ರದರ್ಶನಕ್ಕೆ ಅವಕಾಶವೇ ಇಲ್ಲ. ತುಂಗಭದ್ರೆ ಅಥವಾ ಕಲ್ಯಾಣಗಿರಿ - ಇಂತಹವುಗಳ ವರ್ಣನೆಯಲ್ಲಿ ಆತನ ಪ್ರತಿಭೆ ಕ್ವಚಿತ್ತಾಗಿ ಕಂಡುಬರುತ್ತದೆ.

೩. ಚಾಮರಸ (ಕ್ರಿ.ಶ. ೧೪೩೦)

ಪ್ರೌಢದೇವರಾಯನ ಕಾಲದ ೧೦೧ ವಿರಕ್ತರಲ್ಲಿ ಓರ್ವನಾದ ಈ ಕವಿಯು ದೇವಮಾನವನಾದ ಅಲ್ಲಮ ಪ್ರಭುವಿನ ಜೀವನ ಚರಿತ್ರೆಯನ್ನು 'ಪ್ರಭುಲಿಂಗೇಲೀಲೆ' ಎಂಬ ಹೆಸರಿನಿಂದ ಭಾಮಿನಿಷಟ್ಪದಿಯಲ್ಲಿ ರಚಿಸಿದ್ದಾನೆ. ವಿರಕ್ತನಾದ ಈತನು ತನ್ನ ಕಾವ್ಯದಲ್ಲಿ ತನ್ನ ಪ್ರಸಕ್ತಿಯನ್ನೆ ಎತ್ತಿಕೊಂಡಿಲ್ಲ. ಈ ಕಾವ್ಯವನ್ನು ಈತನೆ ಬರೆದನೆಂದು ಹೇಳುವುದುಕೂಡ ಅದೃಶ್ಯ ಕವಿ, ಸಿದ್ಧನಂಜೇಶ ಇತ್ಯಾದಿ ಇತರ ಕವಿಗಳ ಹೇಳಿಕೆಯಿಂದ ಗದುಗಿನ ನಾರಣಪ್ಪನು ಚಾಮರಸನ ತಂಗಿಯ ಗಂಡನೆಂದೂ, ಚಾಮರಸನು ಬರೆದ ಭಾರತವನ್ನು ಆತನ ತಂಗಿಯು ತನ್ನ ಗಂಡನ ಮನಸ್ಸಂತೋಷಕ್ಕಾಗಿ ಸುಟ್ಟುಹಾಕಿದಳೆಂದೂ, ಇದರಿಂದ ನೊಂದ ಚಾಮರಸ ವೀರಶೈವನಾಗಿ ಹನ್ನೊಂದು ದಿನಗಳಲ್ಲಿ ೧೧೧೧ ಪದ್ಯಗಳನ್ನು ಒಳಗೊಂಡ 'ಪ್ರಭುಲಿಂಗಲೀಲೆ'ಯನ್ನು ಬರೆದನೆಂದೂ ತಿಳಿಸುವ ಕಥೆ ವೀರಶೈವ ಕಾವ್ಯಗಳಲ್ಲಿ ಈ ವಿಚಾರದಲ್ಲಿ 'ಇದಮಿತ್ಥಂ' ಎಂದು ಹೇಳುವುದು ಬಹುಕಷ್ಟ

ಕುಮಾರವ್ಯಾಸನ ಎತ್ತರ ಬಿತ್ತರಗಳು ಚಾಮರಸನಲ್ಲಿ ಇಲ್ಲವಾದರೂ ಆತನು ಬಹುದೊಡ್ಡ ಕವಿ ಎಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಆತನ ಕಾವ್ಯವೂ ತೆಲುಗು, ತಮಿಳುಗಳಿಗೆ, ಮಾತ್ರವೇ ಅಲ್ಲದೆ ಮರಾಠಿ, ಸಂಸ್ಕೃತಗಳಿಗೂ ಭಾಷಾಂತರವಾಗಿದೆಯೆಂಬುದನ್ನು ಗಮನಿಸಿದರೆ ಆತನ ಕಾವ್ಯ ಶಕ್ತಿ. ಜನಪ್ರಿಯತೆಗಳು ಅರ್ಥವಾಗುತ್ತದೆ. ತುಲನಾತ್ಮಕವಾಗಿ ಅವುಗಳ ಬೆಲೆಯನ್ನು ಕಟ್ಟುವುದು ಹಾಗಿರಲಿ, ಕನ್ನಡದ ಕಾವ್ಯವೊಂದು ನಾಲ್ಕು ಬೇರೆ ಬೇರೆ ಭಾಷೆಗಳಿಗೆ ಭಾಷಾಂತರವಾಗಿದೆಯೆಂಬುದೆ ರೋಮಾಂಚಕಾರಕವಾಗಿದೆ.

ಅಲ್ಲಮನ ಜೀವನಚರಿತ್ರೆಯನ್ನು ಕಾವ್ಯರೂಪದಲ್ಲಿ ನಿರೂಪಿಸಿರುವವರಲ್ಲಿ ಹರಿಹರನೆ ಮೊಟ್ಟ ಮೊದಲಿಗ. ಆದರೆ ಚಾಮರಸನ ಕಾವ್ಯ ಅದಕ್ಕಿಂತಲೂ ಹೆಚ್ಚು ಜನಪ್ರಿಯವಾಗಿದೆ. ಹರಿಹರನು ತಾನು ಕಂಡ ಅಥವಾ ಈ ಕೇಳಿದ ಅಲ್ಲಮನ ಚರಿತ್ರೆಯನ್ನು ಕಂಡಂತೆ ಅಥವಾ ಕೇಳಿದಂತೆಯೇ ಬರೆದಿದ್ದಾನೆ; ಆದರೆ ಚಾಮರಸನು ತನ್ನ ನಾಯಕನ ವ್ಯಕ್ತಿತ್ವಕ್ಕೆ ಆದರ್ಶದ ಮೆರುಗನ್ನು ಕೊಡುತ್ತಿದ್ದಾನೆ. ಹರಿಹರನ ನಾಯಕನು ತನ್ನ ಕೂರ್ತುಮಡದಿ ಕಾಮಲತೆಯ ಅಕಾಲಮರಣದಿಂದ ದಾರುಣದುಃಖಕ್ಕೊಳಕ್ಕಾಗಿ ವೈರಾಗ್ಯ ಪರನಾದ. ಈ ಮಾನವಸಹಜವಾದ ದೌರ್ಬಲ್ಯಕ್ಕೆ ಪರಜ್ಞಾನಿಯಾದ ಅಲ್ಲಮ ಒಳಗಾದನೆಂಬುದು ಮತಾಭಿಮಾನಿಗಳಿಗೆ ಹಿಡಿಸಲಿಲ್ಲವೆಂದು ತೋರುತ್ತದೆ. ಚಾಮರಸ ಅಂತಹವರ ಪ್ರತಿನಿಧಿಯಾಗಿ ನಿಂತು ತನ್ನ ಕಾವ್ಯ ಸೃಷ್ಟಿಗೆ ಹೊರಟಿರುವಂತೆ ತೋರುತ್ತದೆ; ಆತನ ಕಾವ್ಯದಲ್ಲಿ ಕಾಮಲತೆಯ ಪ್ರಸಕ್ತಿ ಇಲ್ಲ. ಹರಿಹರನಂತೆ ಚಾಮರಸನು ತನ್ನ ನಾಯಕನನ್ನು ಗಣಾಧೀಶನ ಅವತಾರವೆಂದು ಹೇಳದೆ, ಸಾಕ್ಷಾತ್ ಪರಶಿವನ ಪ್ರತಿರೂಪವೆಂದು ಹೇಳುತ್ತಾನೆ. ಪರಮೇಶ್ವರನು ಶಿವೆಗೆ ಆತನ ವಿಚಾರವನ್ನು ತಿಳಿಸುತ್ತಾ 'ಏನ ಹೇಳುವೆನಾದಿಯಾಗಲಿ ಸುಜ್ಞಾನಿ ನಿರಹಂಕಾರರೆಂಬೂನೂನ ತಪವನು ಮಾಡಲೆನ್ನ ನಿಜಸ್ವರೂಪವರ ಸೂಸುವೆಂಬಂದದಲಿ,

ಸುಳಿದನುತಾನೆ, ಅಲ್ಲಮನೆಂಬ ಪೆಸರಲಿ' ಎಂದು ಹೇಳಿ ಆ ಅಲ್ಲಮನು ನಾಮ ರೂಪ ಕ್ರಿಯೆಗಳನ್ನು ಗೆದ್ದವನು - ಎಂದು ಹೇಳುತ್ತಾನೆ. ಶಿವೆ ಇದನ್ನು ಪ್ರತಿಭಟಿಸಿ, ಅವನನ್ನು ತನ್ನ ಮಾಯೆಗೆ ಒಳಪಡಿಸುವೆನೆಂದು ಪ್ರತಿಜ್ಞೆ ಮಾಡುತ್ತಾಳೆ. ಆ ಕಾರ್ಯಸಾಧನೆಗಾಗಿ ತನ್ನ ತಾಮಸಕಳೆಯನ್ನು ಆಕೆ ಭೂಲೋಕಕ್ಕೆ ಕಳುಹಿಸುತ್ತಾಳೆ. ಆ ಕಳೆ ಬನವಸೆಯ ರಾಜ ಮಮಕಾರನಿಗೂ ಅವನ ರಾಣಿ ಮೋಹಿನಿಗೂ ಮಾಯೆಯೆಂಬ ಹೆಸರಿನಿಂದ ಮಗಳಾಗಿ ಹುಟ್ಟುತ್ತಾಳೆ. ಅವಳ ರೂಪ ಸಂಪತ್ತು 'ದೇವದಾನವಮಾನವರುಗಳ ದಾವಣಿ' ಮಾಡಿಕಟ್ಟುವಷ್ಟು ಅಸದೃಶವಾದುದು. ಅವಳು ಹುಟ್ಟುತ್ತಿದ್ದಂತೆಯೆ ಋಷಿಮುನಿಗಳೆಲ್ಲರ ಚಿತ್ತಭ್ರಾಂತಿಯಾಗಿ ಹೋಗುತ್ತದೆ. ಅವರೆಲ್ಲ ಚಿಂತಾಕ್ರಾಂತರಾಗಿರಲು ದುರ್ವಾಸ ಋಷಿಗಳು ಅವರ ಬಳಿಗೆ ಬಂದು ಮಾಯೆಯ ಜನನ ವೃತ್ತಾಂತವನ್ನು ತಿಳಿಸಿ, ಅಲ್ಲಮನ ನಾಮಸ್ಮರಣೆಯಿಂದ ಅವರ ಭಯ ನಿವಾರಣೆಯಾಗುವುದೆಂದು ಉಪದೇಶಿಸುತ್ತಾರೆ.

ಮಾಯೆ ಬೆಳೆದು ಹರೆಯದವಳಾದಳು, ಮಮಕಾರರಾಜನು ಅವಳ ಮದುವೆಯಾಗಿ ಚಿಂತಿಸುತ್ತಿರಲು, ಆತನ ಗುರುವಾದ ಅಹಂಕಾರಾಚಾರ್ಯನು ಪರಶಿವನೆ ಆಕೆಯ ಪತಿಯೆಂದು ತಿಳಿಸಿ, ಶಿವಮಂತ್ರವನ್ನು ಮಾಯೆಗೆ ಉಪದೇಶಿಸಿದನು. ಅವಳು ದಿನದಿನವೂ ಮಧಿಕೇಶ್ವರಾಲಯಕ್ಕೆ ಹೋಗಿ ಶಿವನನ್ನು ಅರ್ಚಿಸುತ್ತಿರಲು, ಒಮ್ಮೆ ಅಲ್ಲಿ ಮನೋಹರವಾಗಿ ಮದ್ದಲೆ ಬಾರಿಸುತ್ತಿದ್ದ ಅಲ್ಲಮನ ದಿವ್ಯರೂಪು ಆಕೆಯ ಮನವನ್ನು ಸೆರೆಹಿಡಿಯಿತು. 'ಮಳೆತುವಾ ಕ್ಷಣ ಕಾಮಬಾಣದ ಹಿಳುಕುಗಳು' ಸಖಿಯರ ಜಾಣ್ಮೆಯಿಂದ ಅಲ್ಲಮ ಅರಮನೆಯಲ್ಲಿ ಬಂದು ವಾಸಮಾಡುವಂತಾಯಿತು. ಆದರೆ ಮಾಯೆ ಬಯಸಿದ ಭಾಗ್ಯ ಅವಳಿಗೆ ದಕ್ಕಲಿಲ್ಲ. 'ಕುದಿದು ಕೋಟೆಲೆಗೊಳುತಲಿರ್ದಳು ಮಾಯೆ ಬೇಟದಲಿ' ಮಾಯೆಯ ಸಖಿಯರು 'ತಮವ ತರುಣಿಯನೊಂದು ಗೂಡುವೆನೆಂಬ ಭಾವಭ್ರಮಿತ ಬುದ್ಧಿಯಲಿ' ಅವರಿಬ್ಬರನ್ನು ಒಂದುಗೂಡಿಸುವ ಪ್ರಯತ್ನದಲ್ಲಿದ್ದರು. ಸಕಳೆಯೆಂಬ ಸಖಿ ಅಲ್ಲಮನನ್ನು ಕುರಿತು 'ಅಣ್ಣ ಕೇಳುದಕದಲ್ಲಿ ಮುಳುಗಿದ ಸುಣ್ಣ ಕಲ್ಲಂತಾಗಿ ಕುದಿವುತ ಬನ್ನಬಟ್ಟಳು ಮಾಯೆಕಾಣುತ ನಿನ್ನ ಬೇಟದಲಿ' ಎಂದು ತಿಳಿಸಿದಳು. ಅದೇ ವೇಳೆಗೆ ಪಾರ್ವತಿ ಮಾಯೆಯಲಿ ಕರ್ತವ್ಯ ಜಾಗೃತಿಯನ್ನುಂಟುಮಾಡಲು ವಿಮಲೆಯೆಂಬುವಳನ್ನು ಅಟ್ಟಿದಳು. ಅವಳಿಂದ ಮಾಯೆಗೆ ವಿವೇಕೋದಯವಾಯಿತು. ಅಷ್ಟರಲ್ಲಿ ಅಲ್ಲಮನು ಸ್ವಸ್ವರೂಪದ ಕಾಕರಿಗೆ ಕಾಣಿಸುವುದನುಚಿತ' ಎಂದುಕೊಂಡು ತನ್ನ ಮದ್ದಲೆಯನ್ನು ಬಿಸುಟು ಮಾಯವಾದನು. ಮಾಯೆ ಮುಂದೋರದೆ ಮಿಡುಕುತ್ತಿರಲು ವಿಮಲೆ 'ಅಲ್ಲಮನ ನೀರೇಳು ಲೋಕದಲರಸಿ ನೋಡುವ' ಎಂದು ಹೇಳಿ ಸಮಾಧಾನ ಮಾಡಿದಳು. ಅದರಂತೆಯೆ ಮಾಯೆ ತನ್ನ ಸಖಿಯರಿಬ್ಬರೊಡನೆ ಬಿಸಿಲು ಬಿರುಗಾಳಿಯೆನ್ನದೆ ಕಲ್ಲು ಮುಳ್ಳೆನ್ನದೆ ತನ್ನಿನಿಯನನ್ನು ಅರಸುತ್ತಾ ಹೊರಟಳು. ಅವಳನ್ನು ಕಾಣುತ್ತಲೆ ಋಷಿಗಳು 'ಹುಲಿಯನ್ನು ಕಂಡ ಹುಲ್ಲೆಯಂತೆ' ದೆಸೆದೆಸೆಗೆ ಎದ್ದೋಡಿದರು.

ಮಾಯೆಯ ಸಂಕಟವನ್ನೂ ಋಷಿಗಳ ಭಯವನನೂ ಕಂಡು ಕನಿಕರಿಸಿದ ಅಲ್ಲಮನು ಋಷಿಯಂತೆ ಕಾಣಿಸಿಕೊಂಡು ಅವರನ್ನು ಸಮಾಧಾನ ಮಾಡಿದ ಮೇಲೆ ಮಾಯೆಗೆ ಸ್ವಸ್ವರೂಪದಿಂದ ಕಾಣಿಸಿಕೊಂಡನು. ಮಾಯೆ ಆತನ ವರ್ತನೆಯನ್ನು ಕಟುವಾಗಿ ಟೀಕಿಸಿ, ಹರಿಹರಬ್ರಹ್ಮಾದಿಗಳು ಕೂಡ ತನ್ನ ಶಕ್ತಿಗೆ ಆಧೀನರೆಂದು ತನ್ನ ಪ್ರತಾಪವನ್ನು ಕೊಚ್ಚಿಕಂಡಳು. ಅಲ್ಲಮ ಅವಳನ್ನು ಛೀಗುಟ್ಟುತ್ತಾ 'ಮರುಳೆ ನಿನ್ನನದಾರು ನಾನಾಪರಿಯಲಾಡಿಸುವವರು, ನೀನದ ಪರಿಕಿಸದೆ ಪರ್ವದಲಿ ನುಡಿವರೆ ?' ಎಂದು ಕೇಳುತ್ತಾನೆ, ಮಾಯೆಗೆ ವಿಚಾರಮಂಥನ ಬೇಡ; 'ನಿನ್ನ

ಧೂರ್ತವಿಕಾರವೆಲ್ಲವ ಬಿಟ್ಟು ಕೃಪೆ ಮಾಡು' ಎಂದು ಕೇಳಿಕೊಂಡಳು. ತನ್ನ ಸ್ಥಿತಿಯನ್ನು ಅಲ್ಲಮನ ಕರುಳು ಕರಗುವಂತೆ ಹೇಳಿಕೊಂಡಳು–

ಭಾಷೆ ಸಲ್ಲದೆ ಹೋಯಿತೆನ್ನಯ । ವಾಸಿ ವರ್ಧಿಸಿ ಬತ್ತುತಿದೆ ಕೈ
ಲಾಸದವರಿದ ಕೇಳಿ ನಗುವಂತಾಯಿತೇ ನನಗೆ
ಈಸು ಧಾವತಿಂಯಿದ ನಾ ಕಡು । ಘಾಸಿಯಾದೆನು ಬೆಂದ ಹುಣ್ಣನು
ಕೀಸುವರೆ ಕಂಬಿಯಲಿ ಕೇಳುಕಟೆಂದಳಾ ಮಾಯೆ

ಆದರೆ ಅಲ್ಲಮ ಅವಳ ದುಃಖಸ್ಥಿತಿಗೆ ತಾನು ಕಾರಣನಲ್ಲವೆಂದ ಅವರಿಬ್ಬರಿಗೂ ಸಂಧಾನವೆಸಗಲು ವಿಮಲೆ ಯತ್ನಿಸಿದಳು. 'ನಿನ್ನೆಯ ಕರುಣಾವಾಕೆಯ ಹರಣ' ಎಂದು ಆಕೆ ಹೇಳಲು ಅಲ್ಲಮನು 'ನೀರಿಗೆ ಹೆಪ್ಪನೆರೆದಡೆ ಹಾಲಿನಂತೆ ಅದು ಹೆಪ್ಪುಗಟ್ಟಬಲ್ಲುದೆ ? ನಾನಿವಳನ್ನು ಸ್ವೀಕರಿಸಲಾರೆ.'

ಕಡಲ ನೀರುಗಳೆಲ್ಲವಮೃತದ । ಮಡುಗಳಾದಡೆಯಹವು ಸುರಗಿರಿ
ಕುಡಿವರಿದು ಹಬ್ಬಿದಡೆ ಹಬ್ಬುವುದವನಿಮಂಡಲವ
ಗಿಡಗಳೆಲ್ಲವು ಕಲ್ಪತರುವಾ । ದಡೆಯಹವು ಎತ್ತಾನು ಕಾಲಕೆ
ಮಡದಿ ಮಾಯೆಗೆ ಪರಮತತ್ತ್ವ ಜ್ಞಾನವಿಲ್ಲೆಂದ

ತಾನು ಬಂದ ದಾರಿಗೆ ಸುಂಕವಿಲ್ಲವೆಂದು ಹೇಳಿಕೊಳ್ಳುತ್ತಾ ಮಾಯೆ ವಿಮಲೆಯೊಡನೆ ಕೈಲಾಸಕ್ಕೆ ಹಿಂದಿರುಗಿದಳು. ಸುಜ್ಞಾನಿ–ನಿರಹಂಕಾರದಿಂದ ಉದಿಸಿದ ಅಲ್ಲಮ, ಮಮಕಾರ ಮೋಹಿನಿಯರ ಮಗಳಾದ ಮಾಯೆಯನ್ನು ಸೋಲಿಸಿದುದು ಸಹಜವಾಗಿಯೆ ಇದೆ. ಜ್ಞಾನವಿದ್ದೆಡೆ ನಿರಹಂಕಾರ; ಅವು ಇದ್ದ ಕಡೆ ಮಾಯೆಯಿಲ್ಲ; ಅಲ್ಲಿರುವುದು ನಿರ್ಮಾಯೆ ಅಥವಾ ಅಲ್ಲಮ. ಈ ನಿರ್ಮಾಯ ಸ್ಥಿತಿಯನ್ನು ಮುಟ್ಟಬೇಕಾದರೆ ಸುಮತಿ, ನಿರ್ಮಲ ಮನಸ್ಸುಗಳು ಅಗತ್ಯ. ಈ ತತ್ತ್ವವನ್ನು ಅನುಸರಿಸಿಯೆ ಚಾಮರಸನು ಮಹಾದೇವಿಯಕ್ಕನ ಪಾತ್ರವನ್ನು ಕಡೆದು ನಿಲ್ಲಿಸಿದ್ದಾನೆ. ಆಕೆ ಪಾರ್ವತೀದೇವಿಯ ಸಾತ್ವಿಕ ಕಳೆ. ತನ್ನ ತಾಮಸ ಕಳೆಯಿಂದ ಪ್ರಭುದೇವನನ್ನು ಒಲಿಸಿಕೊಳ್ಳಲಾರದೆ ವ್ಯಥೆಗೊಂಡ ಶಿವೆ ಶಿವನ ಬುದ್ಧಿವಾದದಂತೆ ತನ್ನ ಸಾತ್ವಿಕ ಕಳೆಯನ್ನು ಭೂಮಿಗೆ ಕಳಿಸಿದಳು. ಅದು ಉಡುತಡಿಯಲ್ಲಿದ್ದ ನಿರ್ಮಲ – ಸುಮತಿಯರ ಮಗಳಾಗಿ ಮಹಾದೇವಿಯಕ್ಕನೆಂಬ ಹೆಸರಿನಿಂದ ಜನಿಸಿತು. ಶಿವಭಕ್ತಿಯುಕ್ತಳಾಗಿ ಬೆಳೆದ ಆ ಹೆಣ್ಣನ್ನು ಕೌಶಿಕ ಮೋಹಿಸಿದ. 'ನೀನು ಸಲೆ ಶಿವಭಕ್ತನಾದೆಡೆ ಕೂಡುವೆನು ನಿನ್ನ' ಎಂದಳಾಕೆ. ಕೌಶಿಕ 'ನಮಗೆ ಶಿವಭಕ್ತಿಯನು ಮಾಡುವ ಸಮಯವಳವಡದು' ಎಂದ ಅಕ್ಕಮಹಾದೇವಿ 'ನಮಗೆ ನಿಮ್ಮಯ್ಯ ಸಂಗವಳವಡದು' ಎಂದು ಹೇಳಿ, ವೈರಾಗ್ಯದಿಂದ ಗುರುವನ್ನು ಅರಸುತ್ತಾ ಹೊರಟಳು. ಕಡೆಗೆ ತನ್ನ ಬಳಿಗೆ ಬಂದ ಆಕೆಯ ನಿಲುವನ್ನು ಅರಿತ ಅಲ್ಲಮ ಆಕೆಗೆ ಐಕ್ಯವನ್ನು ಉಪದೇಶಿಸಿ ಶ್ರೀಗಿರಿಯ ಕದಳಿವನಕ್ಕೆ ಕಳುಹಿಸಿದನು.

ಅಲ್ಲಮಪ್ರಭುವು 'ಕರಣಕಾಯದಲ್ಲಿ ಸುಳಿ' ದಾಯುತ್ತ ಗೊಗ್ಗಯ್ಯನೆಂಬ ಭಕ್ತನನ್ನು ಉದ್ಧರಿಸುತ್ತಾನೆ; ಮುಕ್ತಾಯಕ್ಕನಿಗೆ ಧರ್ಮೋಪದೇಶ ಮಾಡುತ್ತಾನೆ; ಸಿದ್ಧ ರಾಮನನ್ನು ಉದ್ಧರಿಸುತ್ತಾನೆ; ಅಕ್ಕಮಹಾದೇವಿಯನ್ನು ಶ್ರೀಗಿರಿಗೆ ಕಳುಹಿ ಮತ್ತೆ ದೇಶಪರ್ಯಟನೆ ಮಾಡುತ್ತಾ ಗೋರಕ್ಷನೆಂಬ ಸಿದ್ಧನನ್ನೂ ಕಿರಾತನನ್ನೂ ವೀರಶೈವರನ್ನಾಗಿ ಮಾಡಿ ಕಲ್ಯಾಣಕ್ಕೆ ಹಿಂದಿರುಗುತ್ತಾನೆ. ಅಲ್ಲಿ ಬಸವಣ್ಣ ನಿರ್ಮಿಸಿದ್ದ ಶೂನ್ಯ ಸಿಂಹಾಸನದಲ್ಲಿ ಕುಳಿತು ಧರ್ಮೋಪದೇಶ ಮಾಡಿದನು. ಜಂಗಮತೃಪ್ತಿ 'ಜಗತ್ತಿನ ತೃಪ್ತಿ' ಎಂಬ ಸತ್ಯವನ್ನು ಪವಾಡದ ಮೂಲಕ ಸ್ಥಾಪಿಸಿ, ಶರಣರೆಲ್ಲರನ್ನು ಉದ್ಧರಿಸಿದನು. ಆತನ ಕಥೆಯನ್ನು ಕೇಳಿದ ಶಿವೆ, ಅಲ್ಲಮನು 'ಘನಮಹಿಮಾವಲಂಬನು' ಎಂಬುದನ್ನು ಅರ್ಥಮಾಡಿಕೊಂಡಳು. ನಿತ್ಯಸ್ವರೂಪಿ ಅಲ್ಲಮನ 'ಸಂತಸದಲಿರುತಿರ್ದನೆಲ್ಲರ ಹೃದಯಕಮಲದಲಿ.'

(ಕಾಪಾಡು, ಕಾಪಾಡು)ಯೆಂದು ಬೇಡಿಕೊಂಡಪುದೆನಲ್' ಎಂಬಂತಿತ್ತಂತೆ ! ಕವಿಯು ಲಕ್ಷ್ಮೀಶನ ಕಾವ್ಯವನ್ನು ಸಂಪೂರ್ಣವಾಗಿ ಅರಗಿಸಿಕೊಂಡಿದ್ದಾನೆ.

'ಅದ್ಭುತ ರಾಮಾಯಣ' ಕವಿಯ ಮೊದಲ ಕಾವ್ಯ. ಶ್ರೀರಾಮನಿಗೂ ಅಸಾಧ್ಯವಾದ ಸಹಸ್ರಕಂಠ ರಾಮನನ್ನು ಶಕ್ತಿಯ ಅವತಾರವನ್ನು ತಾಳಿದ ಸೀತೆ ಸಂಹರಿಸುವುದು ಇಲ್ಲಿನ ಕಥೆ. ಸುರಸುಂದರಿಯಾದ ಸೀತೆ ಕರಾಳ ರೂಪಿಣಿಯಾದುದನ್ನು ಕವಿ ಕಣ್ಣಿಗೆ ಕಟ್ಟುವಂತೆ ಚಿತ್ರಿಸುತ್ತಾನೆ;

ತಿರ್ದಿದ ಕೂಂದಲ್ ನಿಗುರ್ದು ಕೆದರ್ದಿರೆ, ಪೆರೆನೊಸಲರ್ ಪೆರ್ನೊಸಲಾಗೆ, ಎಸಳ್ಗಣ್ ಗುಳಿಗಣ್ಣಾಗೆ, ನಗೆಮೊಗಂ ಉರಿಮೊಗಮಾಗೆ, ಸುಲಿಪಲ್ ನಿಡುವಲ್ಲಾಗೆ, ತಳಿರ್ನಾಲಗೆ ಜೋಲ್ನಾಲಗೆಯಾಗೆ ಸೀತೆ ಕರಾಳಮುಖಿಯಾದಳ್ !

ಕಡೆಯದಾದ 'ರಾಮಾಶ್ವ ಮೇಧ' ಕಾವ್ಯದಲ್ಲಿ ಕವಿಯ ಕಾವ್ಯಶಕ್ತಿ ಪರಿಣತಗೊಂಡಿದೆ. ಇದರ ಮೂಲಕಥೆ ಪದ್ಮ ಪುರಾಣಾಂತರ್ಗತವಾದುದು. ಶ್ರೀರಾಮನು ಅಶ್ವಮೇಧಯಾಗ ಮಾಡಿದುದು ಇಲ್ಲಿನ ಕಥಾವಸ್ತು. ಅದ್ಭುತ ಪ್ರತಿಭಾನ್ವಿತನಾದ ಮುದ್ದಣನು ಅದನ್ನು ಸಾಕಷ್ಟು ರೂಪಾಂತರಗೊಳಿಸಿ ರಸವತ್ಕಾವ್ಯವನ್ನಾಗಿ ಮಾಡಿದ್ದಾನೆ. ಪ್ರಾಚೀನ ಕಾವ್ಯಗಳಲ್ಲೆಲ್ಲಿಯೂ ಕಾಣಬರದ ಒಂದು ನವೀನತೆ ಇಲ್ಲಿ ನಮ್ಮನ್ನು ಇದಿರುಗೊಳ್ಳುತ್ತದೆ. ಕವಿ ಕಾವ್ಯವನ್ನು ಪ್ರಾರಂಭಿಸುವುದೇ ಒಂದು ಕಾದಂಬರಿಯ ಬೆಡಗುಗೊಳಿಸುವ ಸುಂದರ ಶೈಲಿಯಿಂದ 'ಓ! ಕಾಲಪುರುಷಂಗೆ ಗುಣಮಣಮಿಲ್ಲಂ ಗಡ! ನಿಸ್ತೇಜಂ ಗಡ ! ಜಡಂ ಗಡ ! 'ಇತ್ಯಾದಿಯಾದ ವರ್ಷಕಾಲದ ರಮ್ಯವರ್ಣನೆಯಿಂದ ನಾವು ಸಂತೋಷಪಡುತ್ತಿದ್ದಂತೆಯೆ ಮುದ್ದಣ-ಮನೋರಮೆ ಎಂಬ ನೂತನ ದಂಪತಿಗಳ ಗೃಹಜೀವನ ನಮ್ಮ ಕಣ್ಣೆದುರು ಕಾಣಿಸಿಕೊಳ್ಳುತ್ತದೆ. ಗಂಡ ರಸಿಕ, ಹೆಂಡತಿ ಧರ್ಮಪರಳಾದ ರಸಜ್ಞಳು. ಜಡಿಮಳೆಯಿಂದ ರೋಸಿದ ಆಕೆ ಒಂದು ಕಥೆ ಹೇಳುವಂತೆ ಕೇಳುತ್ತಾಳೆ. 'ಸೀತಾಸ್ವಯಂವರ ಆಗಲೆ ಕೇಳಿದ್ದಾಳಂತೆ !' 'ಸೀತಾಪಹರಣ, ಉಹುಂ ಆನೊಲ್ಲೆ' ಎನ್ನುತ್ತಾಳೆ. ರಾಮಾಶ್ವಮೇಧವಾಗಬಹುದು. ಆದರೆ 'ಪದ್ಯಂ ವಧ್ಯಂ, ಗದ್ಯಂ ಹೃದ್ಯಂ, ಹೃದ್ಯಮಪ್ಪಗದ್ಯ ದೊಳೆ ಪೇಳ್ವುದು' ಎಂದಳು. ಅದಕ್ಕೆ ಬಹುಮಾನವೇನು ಕೊಡುತ್ತೀ ? ಎಂದು ಗಂಡ ಕೇಳಿದ.

ಮನೊರಮೊ – ಎನ್ನನೆ ನಾನೀವೆಂ

ಮುದ್ದಣ-ಬಲ್ ಗಡಸುಗಾರ್ತಿಯೈಸೆ, ಅರಿಯಾ ಮುನ್ನಮೆ ನಿನ್ನ ತಾಯ್ತಂದೆವಿರ್ ಎನಗಿತ್ತರೆಂಬುದಂ

ಮನೋರಮೆ – ಇದೇತರ ನುಡಿ ? ಪೋಕೆ, ಆಂ ಪರಾಧೀನೆ ಗಡ ! ..... ಕಥೆಯಂ ಕೇಳ್ದು ಬಲ್ಲಂತೆ ಸಮ್ಮಾನಿಸುವೆಂ.

ಮುದ್ದಣ – ಕಥೆಯನಾಲಿಸಿ ಲಾಲಿಸಿ ಬಳಿಕ್ಕ ಮೀಯನೆಂದೊಂದೆಡೆಬಿಡಂ.

ಮನೋರಮೆ – ಅನುಂ ನೋಳ್ಪೆಂ ಕತೆಯ ಪುರುಳೆಂತಿರ್ಕುಮೆಂದುಂ.

ಇಷ್ಟಾದ ಮೇಲೆ ಕಥೆ ಪ್ರಾರಂಭ – 'ಸುರಾಸುರೇಂದ್ರ ನರೇಂದ್ರ ಫಣೀಂದ್ರ ಮಣಿಮುಕುಟತಟ ಘಟಕ....' ಎಂದು ಮುದ್ದಣ ಹೇಳುವುದನ್ನು ತಡೆದು ಮನೋರಮೆ 'ನೀರಿಳಿಯದ ಗಂಟಲಲ್ಲಿ ಕಡುಬನ್ನು ತುರುಕಿದಂತಾಯ್ತು ತಿರುಳ್ ಗನ್ನಡದ ಬೆಳ್ನುಡಿಯೊಳ್ ಪುರುಳೊಂದೆ ಪೇಳ್ವುದು' ಎಂದು ಹೇಳಿದಳು. ಕನ್ನಡದಲ್ಲಿ ಅತಿಸಂಸ್ಕೃತ ಆಕೆಗೆ ಸೇರದು 'ಕರ್ಮಣಿಸರದೊಳ್ ಚೆಂಬವಳಮಂ ಕೋದಂತಿರೆ' ಅಲ್ಲಲ್ಲಿ ಸುಸಂಸ್ಕೃತವನ್ನಿಟ್ಟು ತಿರುಳ್ಗನ್ನಡದಲ್ಲಿ ಕಥೆ ಹೇಳುವಂತೆ ಮಾಡುತ್ತಾಳೆ.

ಚಿರಸುಖಿ ಜಾಗ್ರದೊಳ್ ನೆರೆ ಮನೋರಮೆಯಪ್ಪ ನಿಜಪ್ರಿಯಾಂಗನಾ
ಸರಸತಿಪ್ರಸಂಗ ಪರಿಣಾಮಂದೊಳಿರ್ಪ ಎಡೆಗಂ ತದೀಯ ನಿ
ರ್ಭರಸುಖ ತೃಪ್ತಿ ಎಡೆಗೊಂಡಿರಲಲ್ಲಿಯ ವೇಧೆಯಿಂದಮಾ
ಪರಿಯೆ ದಿಟಂ, ಪ್ರಬುದ್ಧತೆಯೊಳಂತುಮದೇ ಸಹಜಂ ಶಿವಾಧವಾ

ಕವಿಯು ಭಕ್ತಿ ಭರಿತನಾಗಿ ಆರ್ತತೆಯಿಂದ ಭಗವಂತನನ್ನು ಕುರಿತು ಭವಬಂಧವಿಮೋಚನೆಗಾಗಿ ಪ್ರಾರ್ಥಿಸುತ್ತಾ, 'ಹೇ ಭಕ್ತರ ಕಲ್ಪವೃಕ್ಷ! ನನ್ನ ಸಂಸಾರದ ದುಸ್ಸಹದುಃಖವನ್ನೂ ಭಯವನ್ನೂ ನಿನಗಲ್ಲದೆ ಮತ್ತಾರಿಗೆ ಹೇಳಲಿ ? ಯಾರಲ್ಲಿ ಹಂಬಲಿಸಲಿ ? ಸಾರಿಗೆ ತೋರಿಸಲಿ ? ಹೇ ಅಭಯಪ್ರದ !' 'ಭವಚ್ಚರಣಾಂಬುಜ ಭಕ್ತಿಯೆತ್ತ, ಸಂಸಾರದ ಭೀತಿಯೆತ್ತ ? ಪರಮಪ್ರಭುವೆ ಮಹದೈಪುರೀಶ್ವರಾ' ಎನ್ನುತ್ತಾನೆ. ಮಾತು ಮಾತಿನಲ್ಲಿಯೂ ಆತನ ಆರ್ತಭಾವ ಮಿಡಿಯುತ್ತದೆ. ಆತನ ಮನಃಪರಿಪಾಕ ಅತ್ಯಂತ ಸಾತ್ವಿಕವಾದುದು. ಈ ಲೋಕದ ಸಂಕಷ್ಟಗಳನ್ನು ಅಥವಾ ಅಧರ್ಮದ ಪರಿಣಾಮಗಳನ್ನು ವರ್ಣಿಸುವಲ್ಲಿ ಆತನ ವಾಣಿ ಜೀವಪೂರ್ಣವಾಗುತ್ತದೆ. ಭವರೋಗಕ್ಕೆ ಭೇಷಜವಾದ ಶಿವಸ್ತೋತ್ರ, ಶಿವಾಚಾರನಿಷ್ಠೆ, ಶಿವಶರಣರ ಸೇವೆ ಇತ್ಯಾದಿಗಳ ವಿಷಯದಲ್ಲಿ ಕವಿಯ ಆತ್ಮಾನುಭಾವನೆ ಆಕಾರ ತಾಳಿದಷ್ಟು ತನ್ಮಯತೆ ಕಂಡುಬರುತ್ತದೆ. ಶರಣನು 'ನಾಹಂ', 'ಕೋಹಂ', 'ದಾಸೋಹಂ' – ಎಂದು ಹೇಳಿಕೊಳ್ಳುವವನಲ್ಲ ಎಂದು ಹೇಳಿ, 'ದಾಸೋಹಂ' ಭಾವದ ಸ್ವರೂಪವನ್ನು ವಿವರಿಸುವಲ್ಲಿ ಕವಿಯ ಆಳವಾದ ಆಲೋಚನೆ, ಪಾಂಡಿತ್ಯ, ಜ್ಞಾನಗಳು ವ್ಯಕ್ತವಾಗುತ್ತವೆ. ಮಾಯಿದೇವನ ಭಾಷೆಸಂಸ್ಕೃತಮಯ; ಭಾವಗಳು ಉನ್ನತ. ಆದ್ದರಿಂದಲೆ ವಿರಕ್ತ ತೋಂಟಾದಾರ್ಯನು ಈತನ ಶತಕತ್ರಯಕ್ಕೆ ವ್ಯಾಖ್ಯಾನ ಬರೆದಿದ್ದಾನೆ.

ಮಗ್ಗೆಯ ಮಾಯಿದೇವನನ್ನು ವೀರಶೈವಕವಿಗಳು ಪ್ರಭು, ವಿಭು ಇತ್ಯಾದಿಯಾಗಿ ಗೌರವಿಸುವುದನ್ನು ನೋಡಿದರೆ ಈತನು ಧಾರ್ಮಿಕ ಪ್ರಪಂಚದಲ್ಲಿ ಬಹು ಉನ್ನತಸ್ಥಾನವನ್ನು ಗಳಿಸಿದ್ದಾನೆಂದು ತೋರುತ್ತದೆ. ಸಿದ್ಧನಂಜೇಶನು ತನ್ನ 'ಗುರುರಾಜಚಾರಿತ್ರ'ದಲ್ಲಿ ಮಗ್ಗೆಯ ಮಾಯಿದೇವನು ಲಿಂಗವಂತರಿಗೆ ನರಕವಿಲ್ಲವೆಂದು ಹೇಳಿ, ನೆರಳಿಲ್ಲದ ಜಯಸ್ತಂಭವನ್ನು ವಿದ್ಯಾನಗರದಲ್ಲಿ ನಿಲ್ಲಿಸಿರುವುದಾಗಿ ಹೇಳುತ್ತಾನೆ. ಶಾಂತಲಿಂಗದೇಶಿಕ, ವಿರಕ್ತ ತೋಂಟದಾರ್ಯ, ವಿರೂಪಾಕ್ಷಪಂಡಿತ ಮೊದಲಾದ ಕವಿಗಳು ಆತನನ್ನು ಮುಕ್ತಕಂಠವಾಗಿ ಹೊಗಳುತ್ತಾರೆ. ಈ ಹೊಗಳಿಕೆಗೆ ಈತನು ಸಕಲ ವಿಧದಿಂದಲೂ ಅರ್ಹನೇ ಸರಿ. ಕುಮಾರ ವ್ಯಾಸಯುಗದಲ್ಲಿ ಚಂದ್ರಕವಿ (೧೪೩೦), ವೀರಭದ್ರಕವಿ (೧೫೩೦), ಸಿರನಾಮಧೇಯ ಕವಿ (೧೫೫೦), ಚೆನ್ನಮಲ್ಲಿಕಾರ್ಜುನ ಕವಿ (೧೫೬೦), ಶಂಕರದೇವ (೧೬೨೦)

ಶಾಂತವೃಷ (೧೭೦೦) ಮೊದಲಾದ ಅನೇಕ ಶತಕಕಾರರು ಕಾಣಿಸಿಕೊಂಡಿದ್ದಾರೆ. ಈ ಎಲ್ಲ ನಕ್ಷತ್ರಗಳ ಮಧ್ಯದ ಪೂರ್ಣಚಂದ್ರ, ಮಗ್ಗೆಯಮಾಯಿದೇವ.

೫. ಗುರುಬಸವ (ಕ್ರಿ.ಶ. ೧೪೩೦)

ಈತನು ಸಪ್ತಕಾವ್ಯಗಳೆಂದು ಪ್ರಸಿದ್ಧವಾಗಿರುವ 'ಶಿವಯೋಗಾಂಗ ಭೂಷಣ', 'ಸದ್ಗುರು ರಹಸ್ಯ', 'ಕಲ್ಯಾಣೇಶ್ವರ', 'ಸ್ವರೂಪಾಮೃತ', 'ವೃಷಭ ಗೀತೆ', 'ಅವಧೂತಗೀತೆ' ಮತ್ತು 'ಮನೋವಿಜಯ ಕಾವ್ಯ' ಎಂಬ ಏಳುಗ್ರಂಥಗಳನ್ನು ಬರೆದಿದ್ದಾನೆ. ಈತ ಪ್ರೌಢದೇವರಾಯನ ಕಾಲದವನೆಂದು ಚೆನ್ನಬಸವಪುರಾಣದಿಂದ ತಿಳಿದುಬರುತ್ತದೆ. ತನ್ನ 'ಮನೋವಿಜಯ ಕಾವ್ಯ'ದ ಕೊನೆಯಗದ್ಯದಲ್ಲಿ ಈತನು ತನ್ನನ್ನು 'ಶಿವಯೋಗಿಜನಸೇವಿತಚರಣಾರವಿಂದ', ವೀರಶೈವಮತ ಸ್ಥಾಪನಾಚಾರ್ಯ' ಇತ್ಯಾದಿಯಾಗಿ ಹೇಳಿಕೊಂಡಿರುವುದರಿಂದ ಈತನು ಸುಪ್ರಸಿದ್ಧ ವೀರಶೈವ ಗುರುವಾಗಿದ್ದಿರಬಹುದು.

ಚಾಮರಸನು ಕಾವ್ಯಧರ್ಮ–ಧರ್ಮಗಳನ್ನು ಸಮರಸವಾಗಿ ಬೆರಸಿ, ಕೃತಿ ರಚನೆ ಮಾಡಿದ್ದಾನೆ. ಆತನ ಕಥೆ ನೇರವಾಗಿ ಸಾಗಿ ತನ್ನ ಹೆಗ್ಗುರಿಯನ್ನು ಮುಟ್ಟುತ್ತದೆ. ಇತರ ವೀರಶೈವಪುರಾಣಕರ್ತರಂತೆ ಈತ ಇದನ್ನು ಶರಣರ ಕಥಾಕೋಶವನ್ನಾಗಿ ಮಾಡಿಲ್ಲ. ಹದಿನೆಂಟು ವರ್ಣನೆಗಳ ಚಾಪಲ್ಯವು ಕವಿಯಲ್ಲಿಲ್ಲ. ಅಗತ್ಯವಾದ ಕಡೆ ಹಿತಮಿತವಾದ ವರ್ಣನೆ ಇದೆ. ಇಲ್ಲಿನ ವೇದಾಂತ ನಿರೂಪಣೆಯು ಕಾಂತಾಸಮ್ಮಿತದ ಬಣ್ಣವನ್ನು ತಳೆಯುತ್ತದೆ. ಇಲ್ಲಿ ಬರುವ ಪಾತ್ರಗಳೆಲ್ಲ ಸಜೀವವಾಗಿವೆ. ಮಾಯಾದೇವಿಯ ಪ್ರಣಯಪ್ರಸಂಗ, ಆಕೆಯು ಅಲ್ಲಮನನ್ನು ಸಂಧಿಸುವ ಸನ್ನಿವೇಶ, ಬಸವಣ್ಣನು ಅಲ್ಲಮನಿಗೆ ಆರೋಗಣೆ ಮಾಡಿಸುವ ಪ್ರಸಂಗ – ಇತ್ಯಾದಿ ಸನ್ನಿವೇಶಗಳ ರಚನೆ ಅಲ್ಲಮನ ವ್ಯಕ್ತಿತ್ವವನ್ನು ಮಹೊನ್ನತ್ತಿಗೆ ಏರಿಸುವುದರ ಜೊತೆಗೆ ರಸವತ್ತಾಗಿದೆ. ಇಲ್ಲಿನ ಉಪಮಾನಗಳು ಮನೋಹರವಾಗಿವೆ; ಅನೇಕ ವೇಳೆ ಕುಮಾರವ್ಯಾಸನನ್ನು ಜ್ಞಾಪಕಕ್ಕೆ ತರುತ್ತವೆ. ಸರಳವಾದರೂ ಶಿಥಿಲವಲ್ಲದ ಶೈಲಿಯಲ್ಲಿ ಭಾಮಿನೀಷಟ್ಪದಿ ತುಂಬುಹೊಳೆಯಂತೆ ಧೀರಗಂಭೀರವಾಗಿ ಪ್ರವಹಿಸುವುದನ್ನ ನಾವಿಲ್ಲಿ ಕಾಣುತ್ತೇವೆ. ಇಷ್ಟೆಲ್ಲ ಶ್ರೇಷ್ಠವಾದ ಕಾವ್ಯಗುಣಗಳಿದ್ದರೂ ಕವಿಯ ಗುರಿ ಕೇವಲ ಕಥಾ ನಿರೂಪಣೆಯಲ್ಲ 'ಅಲ್ಪಸುಖಕ್ಕೆ ಸೋಲದೆ, ಕಬ್ಬಿನೊಳು ರಸವ ನೆರವಿದ ಗಜದಂತೆ, ಭಕ್ತಿಯ ತೆರನ ತಿಳಿದಾಚರಿಸಬೇಕೆಂದರಿವವರು ಲಾಲಿಸುವುದೀ ಪ್ರಭುಲಿಂಗಲೀಲೆಯನ್ನು 'ಶ್ರೀ ಎಂ.ಆರ್. ಶ್ರೀಯವರು ಹೇಳುವಂತೆ ಇದೊಂದು ಕನ್ನಡ 'Pilgrims Progress'.

೪. ಮಗ್ಗೆಯ ಮಾಯಿದೇವ (ಕ್ರಿ.ಶ. ೧೪೩೦)

ಕುಮಾರವ್ಯಾಸಯುಗದ ಶತಕಕಾರರಲ್ಲಿ ಈತ ಅಗ್ರಗಣ್ಯ. ಮಲಪ್ರಹಾರೀ ನದೀತೀರದ ಐವುರಕ್ಷೇತ್ರ ಈತನ ಹುಟ್ಟಿದೂರು; ಸಂಗಮೇಶ್ವರ ಈತನ ತಂದೆ. ಅಲ್ಲಿನ ಸೋಮೇಶ್ವರ ಈತನ ಆರಾಧ್ಯದೈವ. ಕನ್ನಡ ಸಂಸ್ಕೃತಗಳಲ್ಲಿ ಅಪಾರ ಪಂಡಿತನಾದ ಈತ 'ಅನುಭವಸೂತ್ರ', 'ಶಿವಸೂತ್ರ' ಎಂಬ ಸಂಸ್ಕೃತ ಗ್ರಂಥಗಳನ್ನೂ 'ಪ್ರಭುನೀತಿ', 'ಏಕೋತ್ತರಶತಸ್ಥಲ ಷಟ್ಪದಿ', 'ಷಟ್‌ಸ್ಥಲಗದ್ಯ', 'ಶತಕತ್ರಯ', 'ಮಗ್ಗೆಯ ಮಾಯಿದೇವವಚನ' ಎಂಬ ಕನ್ನಡ ಕೃತಿಗಳನ್ನೂ ರಚಿಸಿದ್ದಾನೆ. ಈಗ ಉಪಲಬ್ಧವಾಗಿರುವುದು 'ಶತಕತ್ರಯ'ವೊಂದೆ. ಇದರಲ್ಲಿ ಮೂರು ಶತಕಗಳಿವೆ. ೧) 'ಶಿವಾಧವಶತಕ' – ಇಲ್ಲಿನ ೧೦೧ ವೃತ್ತಗಳಲ್ಲಿ ಒಂದೊಂದು 'ಶಿವಾಧವಾ' ಎಂದು ಮುಕ್ತಾಯವಾಗುತ್ತವೆ, ೨) 'ಶಿವಾವಲ್ಲಭಶತಕ' – ಇಲ್ಲಿನ ೧೦೩ ವೃತ್ತಗಳೂ 'ಶಿವಾವಲ್ಲಭ' ಎಂದು ಕೊನೆಯಾಗುತ್ತವೆ. ೩) 'ಐವುರೀಶ್ವರಶತಕ' ಇದರ ೧೧೩ ವೃತ್ತಗಳೂ 'ಐವುರೀಶ್ವರಾ' ಎಂದು ಮುಗಿಯುತ್ತವೆ. ಇವು ಅನುಕ್ರಮವನಾಗಿ ಜ್ಞಾನ, ಭಕ್ತಿ ವೈರಾಗ್ಯಗಳನ್ನು ಪ್ರತಿಪಾದಿಸುತ್ತವೆ. ಈ ಪ್ರತಿಪಾದನೆಗೆ ನಿರರ್ಗಳವಾಗಿ, ಭಾವಭರಿತವಾಗಿ, ಹೃದಯಸ್ಪರ್ಶಿಯಾಗಿದೆ. ಕನ್ನಡಿಯಲ್ಲಿ ನೋಡಿಕೊಳ್ಳುವುದಕ್ಕೂ ಮುಂಚೆ ಕನ್ನಡಿಯ ಭಾವವಿರುತ್ತದೆ, ಪ್ರತಿಬಿಂಬವನ್ನು ನೋಡಿಕೊಂಡ ಮೇಲೆ ಕನ್ನಡಿಯ ಜ್ಞಾನವಿರುತ್ತದೆಯೆ ? ಹಾಗೆಯೇ 'ತತ್ತ್ವಮಂ ನೋಡದ ಮುನ್ನ ಮಾಯೆ; ಬಳಕೆಯಲ್ಲಿಯ ಮಾಯೆ ಬಿಡಾ, ಶಿವಾಧವಾ' ಎನ್ನುತ್ತಾನೆ. ಇಲ್ಲಿ 'ಬಿಡಾ' ಎಂಬ ಮಾತಿನ ಸ್ವಾರಸ್ಯವನ್ನು ಗಮನಿಸಬೇಕು. ಜ್ಞಾನಿಯಾದವನಿಗೆ ಮಾಯೆಯಲ್ಲಿ ಇರಬಹುದಾದ ನಿರ್ಭಯ, ಉದಾಸೀನಗಳು ಎಷ್ಟು ಸೊಗಸಾಗಿ ಧ್ವನಿತವಾಗುತ್ತವೆ !

ದೃಷ್ಟಾಂತ ಅಥವಾ ಹೋಲಿಕೆಗಳನ್ನು ಕೊಟ್ಟು ಗಹನವಾದ ವೇದಾಂತ ತತ್ತ್ವಗಳು ಹೃದ್ಗೋಚರವಾಗುವಂತೆ ಮಾಡುವ ಮಾಯಿದೇವನ ಪ್ರತಿಭೆ ಅದ್ಭುತವಾದುದು. ಇಷ್ಟಲಿಂಗದ ಧಾರಣ ಸ್ಮರಣ ಪೂಜಾದಿಗಳಿಂದ ಸುಖಿಸುತ್ತಿರುವವನು ಆ ಸಂಸ್ಕಾರ ಬಲದಿಂದ ಪ್ರಾಣಲಿಂಗ ಜ್ಞಾನಿಯಾಗಲೂ ಶಕ್ತನಾಗುತ್ತಾನಂತೆ !

ಈ ಕವಿಯ ಗದ್ಯಗಳನ್ನು ಅಭಿನವವಾದಿವಿದ್ಯಾನಂದನು ತನ್ನ 'ಕಾವ್ಯಸಾರ'ದಲ್ಲಿ ಬಳಸಿಕೊಂಡು ಆತನನ್ನು ಸತ್ಕವಿಯೆಂದು ಸತ್ಕರಿಸಿದ್ದಾನೆ.

೬. ಬೊಮ್ಮರಸ (ಕ್ರಿ.ಶ. ೧೪೫೦)

ಡೆಂಕಣಿಕೋಟೆಯ ದೊರೆ ತಿಪ್ಪರಸನು ಚಿಕ್ಕವೀರಣಾರ್ಯರೇ ಮೊದಲಾದ ಶರಣರ ಬಯಕೆಯಂತೆ ತನ್ನ ಆಸ್ಥಾನಕವಿಬೊಮ್ಮರಸನಿಂದ 'ಸೌಂದರ ಪುರಾಣ'ವನ್ನು ಬರೆಸಿದನಂತೆ ! ತಮಿಳಿನ 'ಪೆರಿಯ ಪುರಾಣ'ದಲ್ಲಿದ್ದ ಈ ಕಥೆಯನ್ನು ಹರಿಹರ ಕವಿ ಕನ್ನಡಕ್ಕೆ ತಂದು ಕೊಂಡಿದ್ದ. ಅದನ್ನು ವಾರ್ಧಕಷಟ್ಪದಿಯ ೧೨೦೦ ಪದ್ಯಗಳಲ್ಲಿ ವಿಸ್ತರಿಸಿ ಬರೆದ ಕೀರ್ತಿ ಬೊಮ್ಮರಸನದು. ವೀರಶೈವಪುರಾಣಗಳಲ್ಲೆಲ್ಲ ಈ ಪುರಾತನ ಶರಣನ ಕಥೆ ಬಂದೇ ಬರುತ್ತದೆ. ಗಿರಿಜೆಯ ವಿವಾಹಕಾಲದಲ್ಲಿ ಸರ್ವಾಲಂಕಾರಭೂಷಿತನಾದ ಪರಶಿವನು ಕನ್ನಡಿಯಲ್ಲಿ ನೋಡಿಕೊಂಡ ಪ್ರತಿಬಿಂಬವೆ 'ಸುಂದರ', 'ಶಿವನು ಈತನಿಗೆ ನೀಡಿದ ಭರವಸೆಗಳನ್ನೆಲ್ಲ ನಂಬಿದುದರಿಂದ ಈತನು 'ನಂಬಿ' ಇವೆರಡೂ ಸೇರಿ ಈತ 'ಸುಂದರನಂಬಿ' ತನ್ನ ಕಾವ್ಯವು 'ಕಣ್ಗೆ ಚೆಲ್ವಾಗಿ ನಸುಬಿರಿದ ಜಾಜಿಯನನೆಯ ತಣ್ಗಂಪನುಂಡು, ತಣ್ಣನೆ ತಣಿದು, ಕಡುಸೊಕ್ಕಿ, ನುಣ್ಗೊರಲಿ ನಿಂಚರ ಪೊರಪೊಣ್ಮೆ ಸುಳಿವ ಮರಿದುಂಬಿಯ ವಿಲಾಸದಂತೆ' ಇದೆಯೆಂದು ಕವಿಯ ಹೇಳಿಕೆ. ಇದು ಕವಿಸಹಜವಾದ ಅತಿಶಯೋಕ್ತಿಯಾದರೂ ಅಸತ್ಯವಲ್ಲ. ಬೊಮ್ಮರಸನು ಒಳ್ಳೆಯ ಕವಿ. ಆತನ ಪದಬಂಧ ಲಲಿತವಾಗಿದೆ, ಶೈಲಿ ಸರಳವಾಗಿ ನಿರರ್ಗಳವಾಗಿದೆ. ಕವಿಯು ಸಂಪ್ರದಾಯಕ್ಕೆ ಮರುಳಾಗಿ ಅಷ್ಟಾದಶವರ್ಣನೆಗಳನ್ನು ತಂದಿರುವನಾದರೂ ಅವುಗಳಲ್ಲಿ ಮಿತಿಯಿದೆ. ಕವಿಸಮಯದ ಪ್ರಯೋಗವಿದೆಯಾದರೂ ಚರ್ವಿತಚರ್ವಣೆಯಿಲ್ಲ, ನವೀನತೆಯಿದೆ. ಕಾವ್ಯ ನಾಯಕನ ಮಡದಿಯಾದ ಪರಮೆಯ ಸೌಂದರ್ಯವರ್ಣನೆಯನ್ನು ನೋಡಿ:

ಎಳೆದಿದಿರ ಕೋಮಲತ್ವವನಾಂತು ನಳನಳಿಪ
ನಳಿತೋಳು ರಂಜಿಸಿತು ನುಣ್ಮೊಲೆಗಳಿಡಿಕಿರಿದು
ಬಳೆದು ನಡುವಿಂಗೆ ಬಿಣ್ಪಾಯ್ತು, ತನು ಕನಕಚಂಪಕದ ಪುಷ್ಪದಂತೆ ।
ಪೊಳೆದು ನರುಗಂಪ ಬೀರಿದುದಿಂದ್ರ ನೀಲಮಣಿ
ಯೊಳಗಣ ತಿರುಳ್ಗೆ ಕೊಣೆಯಾದುವಾ ಕರುಳ್ಗಳು
ಜ್ವಲಿಸಿದುವು ಕದಪು ಕಣ್ಗೊನೆ ಭವಳ ಕಾಂತಿಯಂ ಪಡೆದುದಂದಾ ಪರವೆಗೆ ॥

ಪ್ರಾಸಾನುಪ್ರಾಸಗಳ ಅಥವಾ ವಿರೋಧಾಭಾಸಲಂಕಾರದ ಗರಡಿಯ ಸಾಮೂ ಅಲ್ಲಲ್ಲಿಯೆ ಕಂಡು ಬರುತ್ತದೆ. ಅಲ್ಲಿಯೂ ಕವಿಯು ಹಿತಮಿತಕ್ಕೆ ಲೋಪ ಬಂದಿಲ್ಲ. ಆತನು ಮಧ್ಯವರ್ಗಕ್ಕೆ ಸೇರಬಲ್ಲ ಒಳ್ಳೆಯ ಕವಿ.

೮. ನೀಲಕಂಠಾಚಾರ್ಯ (ಕ್ರಿ.ಶ. ೧೪೮೦)

ಸುಪ್ರಸಿದ್ಧ ಶಿವಶರಣರ ಮನೆತನಕ್ಕೆ ಸೇರಿದ ನೀಲಕಂಠಾಚಾರ್ಯನು ವೀರಶೈವ ಪಂಡಿತತ್ರಯರಲ್ಲಿ ಓರ್ವನಾದ ಪಂಡಿತಾರಾಧ್ಯನ ಕಥೆಯನ್ನು 'ಆರಾಧ್ಯಚಾರಿತ್ರ' ಎಂಬ ಹೆಸರಿನಿಂದ ವಾರ್ಧಕ ಷಟ್ಪದಿಯಲ್ಲಿ ಬರೆದಿದ್ದಾನೆ, ಮಹಾಪಂಡಿತವಾದ ಗಂಗಾಧರ ಆಚಾರ್ಯ ಈತನ ಗುರು. ಉಮ್ಮತ್ತೂರಿನ ದೊರೆ ವೀರನಂಜೇಂದ್ರನಿಂದ ಪೂಜಿತನಾದ ಕವಿಯು 'ವಿತತಕರ್ಣಾಟಲಕ್ಷಣ ಕಮಲಭವ'ನೆಂದು ತನ್ನನ್ನು ಸನ್ಮಾನಿಸಿಕೊಂಡಿದ್ದಾನೆ. ಈತನ ಕಾವ್ಯ ಮೂರು ಸಹಸ್ರಕ್ಕೂ ಹೆಚ್ಚು ಪದ್ಯಗಳನ್ನು ಒಳಗೊಂಡಿದೆ. ಪಾಲ್ಕುರಿಕೆ ಸೋಮನು ತೆಲುಗಿನಲ್ಲಿ ಬರೆದುದನ್ನು ತಾನು ಕನ್ನಡದಲ್ಲಿ ಬರೆಯುತ್ತಿದ್ದಾನಂತೆ ! ಪಂಡಿತಾರಾಧ್ಯನಿಗೆ ಬಸವಣ್ಣನಲ್ಲಿದ್ದ ಆದರ ಭಕ್ತಿ ಗೌರವಗಳನ್ನು ಕವಿ ಮುಕ್ತಕಂಠದಿಂದ ಹೊಗಳುತ್ತಾನೆ.

ಈತನ 'ಶಿವಯೋಗಾಂಗಭೂಷಣ' ಪರಿವರ್ಧಿನೀಷಟ್ಪದಿಯ ೨೭೮ ಪದ್ಯಗಳನ್ನು ಒಳಗೊಂಡಿದೆ. ಇದರ ವಸ್ತು ಯೋಗಾಭ್ಯಾಸಕ್ರಮ ಮತ್ತು ಯೋಗಾಂಗಗಳು. ಇದು ನಿಖಿಲಾಗಮತತ್ತ್ವ, ರಹಸ್ಯಂಗಳ ಘನಚೇತನವು' ಅಂತೆ! ೨೩೭ ಭಾಮಿನೀಷಟ್ಪದಿಗಳನ್ನು ಒಳಗೊಂಡ 'ಸದ್ಗುರುರಹಸ್ಯ'ವು ಪರಮ ಸಮಾಧಿ ಶಾಂಭವ ಸತ್ಯ ಸಮ್ಯಗ್ಬೋಧ ಲೀಲಾ ಲೋಲ ಶೀಲಾನ್ವಯ ರಹಸ್ಯವಿದು.' 'ಕಲ್ಯಾಣೇಶ್ವರ'ವು ಪರಿವರ್ಧಿನೀಷಟ್ಪದಿಯ ೧೦೨ ಪದ್ಯಗಳನ್ನು ಒಳಗೊಂಡಿದೆ. ಕಲ್ಯಾಣೇಶ್ವರನಾದ ಬಸವಣ್ಣ ಸಹಚರಿ ನಂದಿನಿಯು ತನ್ನ ಸೇವಕನಾದ ವಿಚಿತ್ರಕನೆಂಬ ಗಣೇಶ್ವರನಿಗೆ ಮಾಡಿದ ಜ್ಞಾನಬೋಧೆ ಇದರ ತಿರುಳು. ಗುರುಬಸವ ದೇಶಿಕನು ಅದನ್ನು ತನ್ನ ಶಿಷ್ಯನಿಗೆ ಬೋಧಿಸಿದ್ದಾನೆ. ಸ್ವರೂಪಾಮೃತ'ವು ಆತನ ಸ್ವರೂಪವನ್ನು ನಿರೂಪಿಸುವ ೭೭ ಭಾಮಿನೀಷಟ್ಪದಿಗಳನ್ನು ಒಳಗೊಂಡಿದೆ. 'ವೃಷಭಗೀತೆ' ಭೋಗಷಟ್ಪದಿಯ ೧೧೧ ಪದ್ಯಗಳಿಂದ ಕೂಡಿ ಬಸವಣ್ಣನ ಸ್ತೋತ್ರವನ್ನೂ ವೀರಶೈವ ವೇದಾಂತವನ್ನೂ ಬೋಧಿಸುತ್ತದೆ. 'ಮನೋವಿಜಯ' ಕುಸುಮ ಷಟ್ಪದಿಯ ೩೪೫ ಪದ್ಯಗಳನ್ನು ಒಳಗೊಂಡಿದೆ; ಸುವಿವೇಕನೆಂಬುವನು ಗುರುವಿನ ಅನುಗ್ರಹದಿಂದ ತನ್ನ ನಿಜ ತಾನಾದ ಸಂಗತಿ ಇದರ ವಸ್ತು. 'ಅವಧೂತ ಗೀತೆ' ವೈರಾಗ್ಯ ಬೋಧಕವಾದ ೧೦೦ ಹಾಡುಗಳ ಗ್ರಂಥ; 'ಹಸುರರಿಯದ ಸೋಣೆಗನು ಮತಿಗೆಟ್ಟು। ಮುಸುರೆಯ ಮೊಡಕೆಯೊಳಗೆ ಮೊಗವಿಟ್ಟು। ದೆಸೆಗಾಣದೆ ಬಾಧೆಗೆ ತನುಗೊಟ್ಟು। ಪೆಸರ್ಗೊಳಿಲಿದು ಸಂಸಾರದ ಗುಟ್ಟು' ಎಂಬಂತಹ ಮಾರ್ಮಿಕ ನಿರೂಪಣೆ ಕಂಡುಬರುತ್ತವೆ, ಇವುಗಳಲ್ಲಿ.

ಕವಿಯ ಗ್ರಂಥಗಳೆಲ್ಲವೂ ಗುರು ಶಿಷ್ಯ ಸಂವಾದರೂಪದ ವೀರಶೈವ ವೇದಾಂತ ಪ್ರತಿಪಾದನೆಗೆ ಹೊರಟವುಗಳು. ಈತನ ರಚನೆ ಸರಳ, ಲಲಿತ, ಸುಲಭ ಈ ವೇದಾಂತಗ್ರಂಥಗಳಲ್ಲಿ ಮಹೋನ್ನತ ಕಾವ್ಯಗಳನ್ನು ಅರಸ ಹೊರಡುವುದು ನ್ಯಾಯವಲ್ಲ.

೬. ಚಂದ್ರಕವಿ (ಕ್ರಿ.ಶ. ೧೪೩೦)

ಪ್ರೌಢದೇವರಾಯನ ಮಹಾಪ್ರಧಾನನಾದ ಗುರುರಾಯನ ಅಪ್ಪಣೆಯಂತೆ ಈ ಕವಿ ಕಾವ್ಯ ರಚನೆಗೆ ಕೈಯಿಕ್ಕಿ 'ವಿರೂಪಾಕ್ಷಸ್ಥಾನ', 'ಗುರುಮೂರ್ತಿಶಂಕರಶತಕ'ಗಳನ್ನು ಬರೆದಿದ್ದಾನೆ. ತನ್ನ ಕನ್ನಡಗಬ್ಬ 'ವಿರೂಪಾಕ್ಷ ಸ್ಥಾನವು' 'ಅಲರ್ಗಣೆಯಿಂದಿರ್ಮಡಿ, ತೆಂಬಲರಿಂ ಮೂವಡಿ, ವಸಂತವಿಂ ನಾಲ್ವಡಿ, ಕಾದಲರಿಂದಯ್ವಡಿ' ಸುಂದರವೆಂದು ಕವಿಯ ಹೇಳಿಕೆ. ಹಂಪೆಯ ವಿರೂಪಾಕ್ಷದೇವರ ಆಸ್ಥಾನವರ್ಣನೆಯನ್ನು ಕಾವ್ಯವಸ್ತುವಾಗಿ ಆಯ್ದುಕೊಂಡಿರುವ ಈ ಕಾವ್ಯ ಚಂಪೂರೂಪದಲ್ಲಿದ್ದು ಪ್ರೌಢವಾಗಿದೆ. ಈತನ ಪ್ರತಿಭೆ, ಕಲ್ಪನಾಶಕ್ತಿಗಳು ಉನ್ನತ ಮಟ್ಟದವು. ಇದು ಈತನ ಸಂಗೀತದ ವರ್ಣನೆ–

ತಿಂಗಳ ಬಿಂಬಮಂ ಹಿಡಿದು ಹಿಂಡೆ ಪಳಚ್ಚನೆ ಸೋರ್ವಸೋನೆಯಂ
ತಿಂಗಡಲಿಂ ಪೊದಳ್ವಮರ್ದನೆತ್ತಿ ದೊಡೊಯ್ಯನೆ ಸೋರ್ವ ಸೋನೆಯಂ
ತಂಗಜನಿಕ್ಷು ಕಾರ್ಮುಕವನೇರಿಸೆ ಜುಮ್ಮನೆ ಸೋರ್ವ ಸೋನೆಯಂ
ತೇಂ ಗಡ ಸೀಯನುಣ್ಬೆದುದೊ ಗೇಯದ ಮೆಲ್ಲಲಿ ಜಣ ಗಾಣನೆ

ಈ ವರ್ಣನೆ ಹೃದಯಂಗಮವಾಗಿದೆ. ಕವಿಯ 'ಗುರುಮೂರ್ತಿಶಂಕರ ಶತಕ'ವು ಭಕ್ತಿಗೆ ವಿರಕ್ತಿ ಮುಕ್ತಿಗೆ ಬೀಜಮಾಗೆ' ಹೇಳಿದ ವೃತ್ತಗಳನ್ನು ಒಳಗೊಂಡಿದೆ. ಮುಪ್ಪು ಬರುವ ಮುಂಚೆಯೆ ಶಿವನ ಪಾದಗಳನ್ನು ಪೂಜಿಸಬೇಕು. ಸಾವು ಹತ್ತಿರ ಬಂದಾಗ ಪೂಜೆಗೆ ಹೊರಟರೇನು ಫಲ ? 'ನೀರಡಸೆ ಬಳಿಕ ಬಾವಿಯ ನೆಗಳ್ದಪರೇ ಗುರು ಮೂರ್ತಿಶಂಕರಾ ?' ಎಂದು ಕವಿ ಕೇಳುತ್ತಾನೆ.

ಅವು ಉಪಲಬ್ಧವಿಲ್ಲ .... ಈ ವಿರಕ್ತ ತನ್ನ ವಿಚಾರವಾಗಿ ಎಲ್ಲಿಯೂ ಏನನ್ನೂ ಹೇಳಿಕೊಂಡಿಲ್ಲ. 'ನಿಜಗುಣಶಿವಯೋಗಿ' ಎಂಬುದು ಕೂಡ ಈತನ ಅಂಕಿತನಾಮವೊ, ಅನ್ವರ್ಥನಾಮವೋ, ಕಾವ್ಯನಾಮವೊ ! ಈತನು ಮೈಸೂರು ದೇಶದ ದಕ್ಷಿಣಭಾಗದಲ್ಲಿದ್ದ ಕಾವೇರಿತೀರದ ಸಣ್ಣ ರಾಜ್ಯವೊಂದರ ದೊರೆಯಾಗಿದ್ದನೆಂದೂ, ವೈರಾಗ್ಯಪರನಾಗಿ ಶಂಭು ಲಿಂಗನ ಬೆಟ್ಟದಲ್ಲಿ ಶಿವಯೋಗ ತತ್ಪರನಾದನೆಂದೂ ಹೇಳುತ್ತಾರೆ, ಈತನ ಕಾವ್ಯಗಳಲ್ಲಿ ಶಂಭುಲಿಂಗನ ಅಂಕಿತವಿದೆ. ಕೊಳ್ಳೇಗಾಲದ ಹತ್ತಿರವಿರುವ ಶಂಭುಲಿಂಗದ ಬೆಟ್ಟದಲ್ಲಿ ಶಂಭುಲಿಂಗನ ದೇವಾಲಯವಿದೆ ಮತ್ತು ನಿಜಗುಣಶಿವಯೋಗಿಯು ತಪಸ್ಸು ಮಾಡಿದನೆಂದು ಹೇಳುವ ಗವಿಯೊಂದು ಅಲ್ಲಿದೆ; ಆದ್ದರಿಂದ ಕವಿಯು ಆ ಪ್ರಾಂತದವನಾಗಿರುಬೇಕು. ಕವಿತಚರಿತಕಾರರು ಆತನ ಕಾಲವನ್ನು ಕ್ರಿ.ಶ. ೧೫೦೦ ಎಂದು ಊಹಿಸುತ್ತಾರೆ.

ನಿಜಗುಣ ಶಿವಯೋಗಿಯ ಗ್ರಂಥಗಳು ವಸ್ತು, ರೀತಿಗಳಲ್ಲಿ ವೈವಿಧ್ಯಮಯವಾಗಿವೆ. 'ಅನುಭವಸಾರ'ವು 'ಸಕಲವೇದಾಂತ ಸಾರವನೆ ಸಾಧಕರಿಗೆ ತಿಳಿವಂತೆ' ಬೋಧಿಸುವ ಗ್ರಂಥ. ಗುರು-ಶಿಷ್ಯ ಸಂವಾದ ರೂಪದಲ್ಲಿದೆ, ತ್ರಿಪದಿಯ ೫೩೫ ಪದ್ಯಗಳನ್ನು ಒಳಗೊಂಡಿದೆ. 'ಕೈವಲ್ಯ ಪದ್ಧತಿ'ಯು 'ಆಬಾಲಯೌವನ ವೃದ್ಧರಿಗೆ ಆಯಾಸವಿನಿತಿಲ್ಲದಂತೆ ಸಕಲವೇದಾಂತಾಗಮ ಸ್ಮೃತಿಪುರಾಣೇತಿಹಾಸ ಸೂತ್ರಾದಿ ಶಾಸ್ತ್ರಸಮ್ಮತದಿಂ ಪುರಾತನಗೀತಾನುಗಣ್ಯವೆನಿಸಿ ಮೃದು ಮಧುರ ಲಕ್ಷಣಯುಕ್ತವಾಗಿ' ರುವ ೬೪೮ ಹಾಡುಗಳನ್ನು ಒಳಗೊಂಡಿದೆ. 'ಶಂಭುಲಿಂಗ'ವೆಂಬುದು ಇವುಗಳ ಅಂಕಿತ. ಸಂಗೀತದ ಸಕ್ಕರೆಯನ್ನು ಬಳಿದುಕೊಂಡಿರುವ ಭಕ್ತಿ ಜ್ಞಾನ ವೈರಾಗ್ಯದ ಈ ಹಾಡುಗಳಲ್ಲಿ ಹಲವು ಬಹು ಜನಪ್ರಿಯವಾಗಿದೆ' ಪರಮಾರ್ಥಗೀತೆ' ೧೫೦೦ ಚರಣಗಳನ್ನು ಒಳಗೊಂಡ ಲಲಿತರಗಳೆಯಲ್ಲಿದೆ. ಕೆಲವು ಕಂದಪದ್ಯಗಳೂ ಉಂಟು; ಗುರು-ಶಿಷ್ಯ ಸಂವಾದ ರೂಪದಲ್ಲಿದ್ದು 'ಶ್ರುತಿ ಪುರಾಣ ಇತಿಹಾಸ ಸ್ಮೃತಿಗಳ' ಅರ್ಥವನ್ನು ನಿರೂಪಿಸುತ್ತದೆ. 'ಪರಮಾನುಭವಬೋಧೆ' ಅದ್ವೈತತತ್ತ್ವವನ್ನು ಬೋಧಿಸುವ ೧೦೦೦ ಪದ್ಯಗಳ ಗ್ರಂಥ, ಸಾಂಗತ್ಯದಲ್ಲಿದೆ. ಯಾಜ್ಞವಲ್ಕ್ಯ - ಮೈತ್ರೇಯಿಗಳ ಸಂವಾದ ರೂಪದಲ್ಲಿದೆ. ಉಳಿದ ಗ್ರಂಥಗಳಿಗಿಂತ ಇದರಲ್ಲಿ ಕಾವ್ಯಾಂಶ ಹೆಚ್ಚಾಗಿದೆ; ಕಠಿಣವಾದ ವೇದಾಂತತತ್ತ್ವಗಳು ಕಾಂತಾಸಮ್ಮಿತವಾಗಿವೆ.

ಕಾದ ಕಬ್ಬುನದಂದು ಗಟ್ಟಿ ಯೊಳಗಣಿತ । ಮಾದ ಕಿಡಿಗಳುದಯಿಸುವಂತೆ
ಭೇದರೂಪಿನ ಜಗಜ್ಜೀವರ ಕಲ್ಪಿತ । ನಾದೊರ್ನದಲ್ಲಿ ಮಸಕಿ ತೋರ್ಕು

ಭಾಷೆ ಸುಲಭ, ಭಾವ ಗಹನ 'ಎಲ್ಲರರಿಯಲ್ಕೆ ಇದು ಪ್ರಾಕೃತವೆ ?' ಎಂದು ಕವಿ ಶಂಕಿಸಿರುವುದು ನ್ಯಾಯವಾಗಿಯೇ ಇದೆ. ಅರವತ್ತು ಮೂರರ ತ್ರಿಪದಿ 'ಪುರಾತನ ಸ್ತೋತ್ರರೂಪವಾದ ೭೭ ಪದ್ಯಗಳನ್ನು ಒಳಗೊಂಡಿದೆ.

ನಿಜಗುಣಶಿವಯೋಗಿಯ 'ವಿವೇಕಚಿಂತಾಮಣಿ' ಬಹು ಅಮೂಲ್ಯವಾದ ಗ್ರಂಥ. ಪುರಾಣ, ಇತಿಹಾಸ, ವೇದಾಂತ, ವೈದ್ಯ ಇತ್ಯಾದಿ ೭೬೫ ವಿವಿಧ ವಿಷಯಗಳನ್ನೊಳಗೊಂಡ ಈ ವಿಶ್ವಕೋಶ ಆರುಸಹಸ್ರ ಗ್ರಂಥ ಸಂಖ್ಯೆಯುಳ್ಳ ಗದ್ಯಗ್ರಂಥ. ಮುಮುಕ್ಷು ಜನಂಗಳ್ ಈ ಜಗತ್ತಿನ ಸ್ಥಿತಿಗತಿಗಳಾವ ಪ್ರಕಾರದಿಂದಿಹುವೆಂದರಸಿಬಳಲದೆ, ಅಭಿವ್ಯಕ್ತಮಾಗಿಲ್ಲಿಯೆ ಸಲ್ಲೀಲೆಯಿಂದರಿತು ಕೃತಾರ್ಥರಾಗಲೆಂದು ಬೆಳುಗನ್ನಡಮಾದ ವಚನರಚನೆಗಳಿಂ ಕವಿ ಇದನ್ನು ರಚಿಸ್ಸಿದ್ದಾನೆ. 'ಈ ಸಂಸ್ಕೃತಿಯನಾಲಿಸಿದರ್ಗೆ ಎಡಗೊಂಡ ಸಂಶಯಸ್ತೋಮವಡಂಗಿ, ಬೇರೆ ಬಹುಶಾಸ್ತ್ರವನೋದುವ ಬಾಧೆ ಪಿಂಗಿ' ಹೋಗುತ್ತದೆ. ಇದರ ನಾಲ್ಕನೆ ಪ್ರಕರಣದಲ್ಲಿ ಕವಿಯು ಸಂಗೀತಶಾಸ್ತ್ರದ ಮೇಲೆ ಅತ್ಯಮೂಲ್ಯವಾದ ಸ್ವಾಸರಸ್ಯವಾದ

ಆಂಧ್ರನಾದ ಪಂಡಿತಾರಾಧ್ಯ ಬಸವಣ್ಣನು ಸ್ಮರಿಸುತ್ತಾ ಆತನ ಹಸ್ತದಿಂದ ಬಂದ ವಿಭೂತಿಯನ್ನು ಧರಿಸುತ್ತಲೆ ಕನ್ನಡ ಭಾಷೆ ಕರತಲಾಮಲಕವಾಯಿತಂತೆ ! ಬಸವಣ್ಣನನ್ನು ಕಾಣ ಹೊರಟ ಪಂಡಿತಾರಾಧ್ಯನಿಗೆ ಹಾದಿಯಲ್ಲಿಯೆ ಆತನು ಬಯಲಾದ ಸುದ್ದಿ ತಿಳಿಯಲು 'ಬಸವ ಬಯಲಾದೆಯಾ' ಎಂಬ ದುಃಖ ಗೀತೆಯನ್ನು ಹಾಡುತ್ತಾ ಶ್ರೀಗಿರಿಗೆ ಹೋಗಿ ಶಿವೈಕ್ಯನಾದನಂತೆ ! ಪಂಡಿತಾರಾಧ್ಯನು ಚಾರ್ವಾಕಾದಿ ಮತಗಳನ್ನು ಖಂಡಿಸಿ, ವೀರಶೈವವನ್ನು ಉದ್ಧರಿಸಿದುದುನ್ನು ಕವಿ ಆರ್ದ್ರಹೃದಯದಿಂದ ಹೊಗಳಿದ್ದಾನೆ. 'ಆರಾಧ್ಯಚಾರಿತ್ರ' 'ಪಂಡಿತಾಚಾರ್ಯನ ಚರಿತ್ರೆಗೆ ಆಧಾರದಂತಿರುವ ಸುಪ್ರಸಿದ್ಧ ವೀರಶೈವಪುರಾಣ. ಲಕ್ಷಣ ಬದ್ಧವಾದ ಬಂಧದಲ್ಲಿ ಚಮತ್ಕಾರಯುಕ್ತವಾಗಿ ಬರೆಯಬಲ್ಲ, ಈ ಕವಿಯ ಸ್ಥಾನಕ್ಕಿಂತ ರಚನಾಚಾತುರ್ಯಕ್ಕೆ ಹೆಚ್ಚು ಪ್ರಾಶಸ್ತ್ಯ ಆತನ ಕಾವ್ಯದಲ್ಲಿ.

೯. ಚತುರ್ಮುಖ ಬೊಮ್ಮರಸ (ಕ್ರಿ.ಶ. ೧೫೦೦)

ಈಶಾನಗುರು ಸಂಸ್ಕೃತದಲ್ಲಿಯೂ, ಹರಿಹರಕವಿ ಕನ್ನಡದಲ್ಲಿಯೂ ಬರೆದಿರುವ ಕಾವ್ಯಗಳನ್ನು ಸಮನ್ವಯಮಾಡಿಕೊಂಡು, ತನ್ನ 'ರೇವಣಸಿದ್ಧೇಶ್ವರ ಪುರಾಣ'ವನ್ನು ಬರೆಯುತ್ತಿರುವುದಾಗಿ ಕವಿ ಹೇಳಿಕೊಂಡಿದ್ದಾನೆ. ಆತನ ತಂದೆ ಮಾಯಣ್ಣ; ಕವಿ ತಾನು ಕಾಶ್ಯಪಗೋತ್ರದವನೆಂದೂ ಬೋಧಾಯನ ಸೂತ್ರದವನೆಂದೂ ಯಜುರ್ವೇದಿಯೆಂದೂ ಹೇಳಿಕೊಂಡಿದ್ದಾನೆ. ತನ್ನ ಕಾವ್ಯ ಕಥಾನಾಯಕನ ವಂಶದಲ್ಲಿ ಹುಟ್ಟಿದ ಬಾಲಸಿದ್ಧೇಶ್ವರ ಈತನ ಗುರು; ಆತನ ಅಪ್ಪಣೆಯಂತೆಯೆ ಕಾವ್ಯರಚನೆಗೆ ಕೈಯಿಕ್ಕಿದ್ದಾನೆ. ತಾನು 'ವರ್ಣಕ ಕವೀಂದ್ರ ಚತುರಾಸ್ಯ', 'ಕವಿಸಭಾಮಾಣಿಕ್ಯ ದೀಪ' ಎಂದು ತನ್ನನ್ನು ಹೊಗಳಿಕೊಂಡಿದ್ದಾನೆ. ರಾಘವಾಂಕಾದಿ ಪೂರ್ವಕವಿಗಳನ್ನು ಅನುಸರಿಸಿ ಶ ಷ ಸ ರ ಱ ಲ ಳ ಗಳನ್ನು ಪ್ರಾಸಕ್ಕೆ ಸೇರಿಸುವುದಾಗಿ ಹೇಳಿಕೊಂಡಿದ್ದಾನೆ.

'ರೇವಣಸಿದ್ಧೇಶಪುರಾಣ' ೫೬೫ ವಾರ್ಧಕ ಷಟ್ಪದಿಗಳನ್ನು ಒಳಗೊಂಡಿದೆ. ವಿಷ್ಣುವನ್ನು ಕಂಚಿಯಲ್ಲಿ ಮಾತಾಡುವಂತೆ ಮಾಡಿ, ಚೋಳನಿಗೆ ಕನ್ಯಾ ಬಂಧವನ್ನು ಬಿಡಿಸಿ, ಬಿಜ್ಜಳನಿಂದ ಪೂಜೆಗೊಂಡು, ಲಂಕೆಯಲ್ಲಿ ಕೋಟಿಲಿಂಗವನ್ನು ಸ್ಥಾಪಿಸಿ, ವಿಭೀಷಣನನ್ನು ಪಾಲಿಸಿದ 'ವೀರಶೈವ ಪ್ರಥಮ ದೇಶಿಕಂ' ರೇವಣಸಿದ್ಧ – ಎಂಬುದು ಇದರ ಕಥಾವಸ್ತು. ಈ ವಸ್ತು ನವರಸಗಳನ್ನೂ ಅಭಿವ್ಯಕ್ತಿಗೊಳಿಸುವಷ್ಟು ಸಾಧನ ಸಂಪದ್ಯುಕ್ತವಾಗಿಲ್ಲ. ಬೊಮ್ಮರಸನ ಕೈಲಿ ವಾರ್ಧಕಷಟ್ಪದಿ ನಿರರ್ಗಳವಾಗಿ ಸಾಗುತ್ತದೆ. ಉಚಿತ ಪದ ಪ್ರಯೋಗದಿಂದ ಕೂಡಿದ ಆತನ ರಚನೆ ವಿದ್ವಜ್ಜನಂ ಮೆಚ್ಚೆ ಶಿವಶರಣ ಕರ್ಣಮಂಡನವೆನಿಸಲು ತಕ್ಕುದಾಗಿದೆ.

೧೦. ನಿಜಗುಣ ಶಿವಯೋಗಿ (ಕ್ರಿ.ಶ. ೧೫೦೦)

ಸರ್ವಸಂಗಪರಿತ್ಯಾಗ ಮಾಡಿದ ಸನ್ಯಾಸಿಯಾದರೂ ಲೋಕ ಕಲ್ಯಾಣ ತತ್ಪರನಾಗಿದ್ದು, ಕವಿಯಾಗಿ, ದಾರ್ಶನಿಕನಾಗಿ ನಾಡುನುಡಿಗಳಿಗೆ ಅಪಾರ ಸೇವೆಯನ್ನು ಸಲ್ಲಿಸಿದ ಹಿರಿಯ ಚೇತನ, ನಿಜಗುಣ ಶಿವಯೋಗಿ. ಕನ್ನಡದಲ್ಲಿ ಈ ಹೆಸರಿನ ಮೂವರಿದ್ದಾರೆ. ಮೊದಲನೆಯಾತ ೧೨ನೇ ಶತಮಾನದಲ್ಲಿ 'ನಿಜಗುಣಯೋಗಿ'ವೆಂಬ ಅಂಕಿತದಿಂದ ವಚನರಚನೆ ಮಾಡಿದನು. ಎರಡನೆಯವನು ಪ್ರಸ್ತುತ ಕವಿ. ಮೂರನೆಯಾತ ೧೭ನೆ ಶತಮಾನದ ಮಧ್ಯ ಕಾಲದಲ್ಲಿ 'ಅದ್ವೈತ ರಾಮಾಯಣ'ವನ್ನು ರಚಿಸಿದಾತ. ಪ್ರಸ್ತುತ ಕವಿ ನಿಜಗುಣ ಶಿವಯೋಗಿಯಕಾಲ ಮತ್ತು ಜೀವನವೃತ್ತಾಂತಗಳು ನಿಷ್ಕೃಷ್ಟವಾಗಿ ಗೊತ್ತಿಲ್ಲ. ಈತನು 'ಅನುಭವಸಾರ', 'ಅರವತ್ತು ಮೂವರತ್ರಿಪದಿ', 'ಕೈವಲ್ಯಪದ್ಧತಿ', 'ಪರಮಾನುಭವಬೋಧೆ', 'ಪರಮಾರ್ಥಗೀತೆ', 'ಪರಮಾರ್ಥ ಪ್ರಕಾಶಿಕೆ', 'ವಿವೇಕ ಚಿಂತಾಮಣಿ' ಎಂಬ ಏಳು ಗ್ರಂಥಗಳನ್ನು ಬರೆದಿದ್ದಾನೆ. ಸಂಸ್ಕೃತದಲ್ಲಿಯೂ 'ದರ್ಶನಸಾರ', 'ತರ್ಕಚಿಂತಾಮಣಿ'ಗಳನ್ನು ಬರದಿದ್ದಾನಂತೆ;

ವಿಶೇಷಾಂಶಗಳು ಕಂಡುಬರುತ್ತವೆ. ಕೈಲಾಸದಲ್ಲಿ ಕ್ರಿಯೆ, ಭಾವಗಳಿಗೆ ವಾದ ಹುಟ್ಟಿ ಭಾವವು ವೃಷಭವನ್ನು ಅವಮಾನಪಡಿಸಲು, ಆತನು ಶಿವಸಭೆಯನ್ನು ಬಿಟ್ಟು ಭೂಲೋಕದಲ್ಲಿ ಸಂಚರಿಸುತ್ತಾ ಲಿಂಗಪಾಣಿಯಾದ ಅನಿಮಿಷನಿಗೆ ತನ್ನ ಲಿಂಗವನ್ನು ಕೊಟ್ಟು ಕೈಲಾಸಕ್ಕೆ ಹಿಂತಿರುಗಿದ, ಲಿಂಗವಿಲ್ಲದೆ ಆತನಿಗೆಅಲ್ಲಿ ಪ್ರವೇಶ ಸಿಕ್ಕಲಿಲ್ಲ. ಶಿವನು ಆತನನ್ನು ಪುನಃ ಲಿಂಗವನ್ನು ಪಡೆದು ಬರುವಂತೆ ಕಳುಹಿಸಲು, ಆತ ಮಾದಿರಾಜ ಮಾದಾಂಬಿಕೆಯರ ಮಗನಾಗಿ ಹುಟ್ಟಿದ. ಆತನನ್ನು ಕೈಲಾಸಕ್ಕೆ ಬಿಡದೆ ತಡೆದ ದ್ವಾರಪಾಲಕರು ಶಾಪಗ್ರಸ್ತರಾಗಿ ಬಿಜ್ಜಳ, ಕರ್ಣದೇವರಾಗಿ ಹುಟ್ಟಿದರು. ಬಸವಣ್ಣ ಎಂಟನೆ ವಯಸ್ಸಿನಲ್ಲಿ ಬ್ರಾಹ್ಮಣ ಬಾಲಕನೊಬ್ಬನನ್ನು ಬಾವಿಯಲ್ಲಿ ನೂಕಿದನೆಂಬ ಆರೋಪ ಹೊತ್ತು, ತನ್ನ ಸೋದರಿಯೊಡನೆ ಕಪ್ಪಡಿಸಂಗಮಕ್ಕೆ ಹೋದ. ಅಲ್ಲಿಂದ ಕಲ್ಯಾಣಕ್ಕೆ ಬಂದು ಬಿಜ್ಜಳನ ಭಂಡಾರದ ಕರಣಿಕನಾಗಿ, ಸ್ವರ್ಗದಿಂದ ಬಂದಿದ್ದ ದೇವಲಿಪಿಯನ್ನು ಓದಿ ಆತನ ಮಂತ್ರಿಯಾದ ಬಸವಣ್ಣನಿಗೆ ಬಾಲಸಂಗನೆಂಬ ಒಬ್ಬ ಮಗ ಹುಟ್ಟಿದ. ಕೊನೆಯಲ್ಲಿ ಬಸವಣ್ಣ ಶೂನ್ಯಸಿಂಹಾಸನವೇರಿ ಮಾಯವಾದ. ಅನಂತರ ಚೆನ್ನಬಸವಣ್ಣ ಬಿಜ್ಜಳನ ಮಂತ್ರಿಯಾದ. ಬಸವಣ್ಣ ಜೀವನ ವೃತ್ತಾಂತದಲ್ಲಿನ ಈ ರೂಪಾಂತರಗಳು ಸಿಂಗಿರಾಜಪುರಾಣಕ್ಕೆ ಪ್ರಾಶಸ್ತ್ಯವಿತ್ತಿವೆ.

೧೩. ಸುರಂಗಕವಿ (ಕ್ರಿ.ಶ. ೧೫೦೦)

ಪುಲಿಗೆರೆಯ ಸಂಗಮವಿಭು ಮಹಾದೇವಿಯವರ ಮಗನಾದ ಈ ಕವಿ 'ತ್ರಿಷಷ್ಠಿಪುರಾತನಚರಿತ್ರೆ'ಯ ಕರ್ತೃ. ತನ್ನ ಇಷ್ಟದೇವತೆಯಾದ ಪುಲಿಗೆರೆಯ ಸೋಮನಾಥನ ಅಂಕಿತದಲ್ಲಿ ತನ್ನ ಕಾವ್ಯವನ್ನು ರಚಿಸಿದ್ದಾನೆ. 'ಮನುಜಸ್ತುತಿಯಂ ಬಿಟ್ಟು ಸುರಂಗಕವಿ ನಾಲಗೆಯಂ ಗಿರೀಶಂಗೆ ಮಾರಿದಂ' ಈತನು ಯಾವ ಕನ್ನಡ ಕವಿಯನ್ನೂ ಸ್ಮರಿಸಿಲ್ಲ. 'ಕನ್ನಡಚಕ್ರವರ್ತಿ' ಬಿರುದಾಂಕಿತನಾದ ಈ ಕವಿಯನ್ನು ಈಚಿನ ಕನ್ನಡಕವಿಗಳಾದರೂ ಸ್ಮರಿಸಿಲ್ಲ. ಹೀಗಾಗಿ ಈತನ ಕಾಲ ಕವಿಚರಿತ್ರೆಕಾರರ ಊಹೆಯ ಮೇಲೆ ನಿಂತಿದೆ. 'ಸರಸ ಕವಿತಾನರ್ತಕೀ ನೃತ್ಯರಂಗಂ', 'ಪ್ರತಿಭಟಕವಿವೇಶ್ಯಾಭುಜಂಗಂ' ಎಂದು ತನ್ನನ್ನು ಸನ್ಮಾನಿಸಿಕೊಂಡಿರುವ ಈ ಕವಿಯ ಕಾವ್ಯವು 'ಅಲರ್ಗಳ ಕಂಪಿನಂತೆ, ಮಿಳಿರ್ದಾಡುವ ತುಂಬಿಯ ಬೆಂಬದಂತೆ' ಇತ್ಯಾದಿಯಾಗಿ 'ಬಲ್ಲರಂ ನಲವಿನೊಳೆಯ್ದೆ ಸೋಲಿಪುದು' ಅಂತೆ! ಚಂಪೂಮಾರ್ಗದಲ್ಲಿ ಕಾವ್ಯಸೃಷ್ಟಿಗೆ ಕೈಹಾರಿಕುವ ಕವಿ ಹದಿನೆಂಟು ಕಾವ್ಯಾಂಗಗಳನ್ನು ವರ್ಣಿಸುವುದಾಗಿ ಹೇಳಿಕೊಂಡು ಅಷ್ಟನ್ನೂ ನಿರ್ವಹಿಸಿದ್ದಾನೆ.

'ತ್ರಿಷಷ್ಠಿಪುರಾತನರ ಚರಿತ್ರೆ' ೬೩ ಪುರಾತನರ ಕಥೆಗಳನ್ನು ೬೩ ಅಧ್ಯಾಯಗಳಲ್ಲಿ ಒಳಗೊಂಡಿರುವ ಬೃಹತ್ಕಾವ್ಯ. ಈ ಪುರಾತನ ಕಥೆಯನ್ನು ಉಪಮನ್ಯು ಮುನಿ ಕಣಾದನಿಗೆ ಹೇಳಿದನಂತೆ ! ಲೈಂಗ್ಯಪುರಾಣದ ಕಥೆಯನ್ನು ಅನುಸರಿಸಿ ತಾನು ಬರೆಯುತ್ತಿರುವುದಾಗಿ ಕವಿ ಹೇಳಿಕೊಂಡಿದ್ದಾನೆ. ಈತನ ಕಥೆಗಳು ರಮ್ಯವಾಗಿವೆ. ಅಪೂರ್ವವಾದ ಕೆಲವು ವೃತ್ತಗಳನ್ನೂ ಗುಣಿತಾಕ್ಷರಿಯೆ ಮೊದಲಾದ ಕೆಲವು ಶಬ್ದಾಲಂಕಾರಗಳ ಗಾರುಡಿಗತನವನ್ನೂ ಅಲ್ಲಲ್ಲಿ ಪ್ರದರ್ಶಿಸಹೊರಟಿರುವನಾದರೂ, ಆತನಿಗೆ ನಿರಾಡಂಬರವಾದ ಸರಳ ಸುಂದರಶೈಲಿಯಲ್ಲಿ ಕಥೆಯನ್ನು ಹೃದಯಂಗಮವಾಗಿ ಹೇಳುವುದರಲ್ಲಿ ಆಸಕ್ತಿ ಹೆಚ್ಚು. ಆತನ ಶಬ್ದ ಸಂಪತ್ತು ದೊಡ್ಡದು. ಆತನು ಹೇಳಿಕೊಂಡಿಲ್ಲವಾದರೂ ಹರಿಹರ ಕವಿಯ ಭಾವಭಾಷೆಗಳನ್ನೂ ವರ್ಣನಾವಿಧಾನವನ್ನೂ ಅನುಕರಿಸಿದ್ದಾನೆ. ಹರಿಹರಕವಿ ತನ್ನ ಕಂದಪದ್ಯಗಳ ಸೊಗಸನ್ನು ಹೇಳುತ್ತಾ –

ಕಂದಗಲಮೃತಲತಿಕಾ । ಕಂದಂಗಳನೂನವಾಕ್ಯ ಫಲ ವಿಲಸನ್ಮಾ
ಕಂದಂಗಳ್ ತನಿರಸದು । ಕ್ಕಂದಂಗಳ್ ಸೊಗಯಿಸಿರ್ಪುವೀ ನುತಕೃತಿಯೊಳ್

ವಿಷಯಗಳನ್ನು ನಿರೂಪಿಸಿದ್ದಾನೆ. ಕವಿಯ 'ಪರಮಾರ್ಥ ಪ್ರಕಾಶಿಕೆ'ಯು ಚೆನ್ನಸದಾಶಿವಯೋಗಿಕೃತ ಶಿವಯೋಗಪ್ರದೀಪಿಕೆ ಎಂಬ ಸಂಸ್ಕೃತ ಗ್ರಂಥದ ಕನ್ನಡ ಅನುವಾದ.

ನಿಜಗುಣಶಿವಯೋಗಿಯನ್ನು ನಾವು ಮೆಚ್ಚುವುದು ಆತನ ಅಪಾರವಾದ ಅಧ್ಯಾತ್ಮ ಜ್ಞಾನಕ್ಕಾಗಿ; ಅದನ್ನು ಕನ್ನಡಕ್ಕೆ ತಂದುಕೊಡಲು ಆತನು ತೋರಿರುವ ಕಳಕಳಿಗಾಗಿ. ಈತನ 'ವಿವೇಕಚಿಂತಾಮಣಿ' ಸಂಸ್ಕೃತಕ್ಕೂ ಮರಾಠಿಗೂ ಭಾಷಾಂತರವಾಗಿದೆ ! ಕನ್ನಡ ಅಧ್ಯಾತ್ಮ ಸಾಹಿತ್ಯದ ಇತಿಹಾಸದಲ್ಲಿ ನಿಜಗುಣಶಿವಯೋಗಿ ಒಬ್ಬ ಚಿರಂಜೀವಿ.

೧೧. ಮುಪ್ಪಿನ ಷಡಕ್ಷರಿ (ಕ್ರಿ.ಶ. ೧೫೦೦)

ಈತನು ನಿಜಗುಣಶಿವಯೋಗಿಯ ಸಮಕಾಲಿಕ. ಆತನೊಡನೆ ಶಂಭುಲಿಂಗನ ಬೆಟ್ಟದ ಗವಿಯೊಂದರಲ್ಲಿ ವಾಸವಾಗಿದ್ದ – ಎಂದು ಹೇಳುತ್ತಾರೆ. ಆತನ ಜೀವನಚರಿತ್ರೆ ಗೊತ್ತಿಲ್ಲ. 'ಷಡಕ್ಷರಿ' ಎಂಬ ಅಂಕಿತದಿಂದ ಈತನು ಬರೆದಿರುವ ಹಲವು ಹಾಡುಗಳು 'ಸುಬೋಧಸಾರ' ಎಂಬ ಹೆಸರಿನಿಂದ ಪ್ರಕಟವಾಗಿವೆ. ಅದನ್ನು ನೋಡಿದರೆ ಆತನು ಸಹಜಾನಂದದಲ್ಲಿ ತನ್ಮಯನಾದ ವೈರಾಗ್ಯ ಮೂರ್ತಿಯೆಂಬುದು ಸ್ಪಷ್ಟವಾಗುತ್ತದೆ. ಈತನ ಕವಿತೆಗಳು ಮನೋಹರವಾದ ಭಾವಗೀತೆಗಳು, ಈತನ ಅಧ್ಯಾತ್ಮ ಚೇತನ ಅಂತರಂಗದ ಹಂಬಲ ಸುಂದರವಾದ ಶ್ರಾವ್ಯಗಂಗೆಯಾಗಿ ಹರಿದು ಬಂದಿದೆ.

ಅವರವರ ದರುಶನಕೆ । ಅವರವರ ವೇಷದಲಿ । ಅವರವರಿಗೆಲ್ಲ ಗುರು ನೀನೊಬ್ಬನೆ ।
ಅವರವರ ಭಾವಕ್ಕೆ । ಅವರವರ ಭಕ್ತಿಗೆ । ಅವರವರಿಗೆಲ್ಲ ದೇವ ನೀನೊಬ್ಬನೆ ।
ಹೋರಾಟವಿಕ್ಕಿಸಲು । ಬೇರಾದೆಯಲ್ಲದೆ । ಬೇರುಂಟೆ ಜಗದೊಳಗೆ ಎಲೆ ದೇವನೆ ।

ಬುದ್ಧಿಗೆ ಬೆಳಕನ್ನೂ ಹೃದಯಕ್ಕೆ ತಂಪನ್ನೂ ನೀಡಬಲ್ಲ ಹೃದಯ ವೈಶಾಲ್ಯ, ಸಮನ್ವಯಬದ್ಧಿ ಆತನದು. 'ಹುಲಿಯ, ಕರಡಿಯ, ಕರಿಯ, ಫಣಿಯ ಬಲುಹಿನಿಂದಲಾಳ್ವರುಂಟು; ಚಲಿಸದಂತೆ ಮನವನಾಳ್ವವರ ಕಾಣೆನು' ಎಂಬ ಆತನ ಮಾತು ಎಷ್ಟು ಸರಳವೋ ಅಷ್ಟು ಸಾರವತ್ತಾಗಿದೆ. 'ತಿರುಕನೊರ್ವನೂರಮುಂದೆ' ಎಂಬ ಆತನ ತಿರುಕನ ಕಥೆ ಅತ್ಯಂತ ಮನೋಹರವಾದ, ಜನಪ್ರಿಯ ಕವಿತೆ. 'ಕೋಪವೆನಗೆ ಲೋಪವಾಗದು' ಎಂಬ ಆತನ ಕವನದಲ್ಲಿ ಆತನ ವೀರಭಕ್ತಿ ಸಿಡಿಲಿನ ಆವೇಗದೊಡನೆ ಪುಟಿದು ಬಂದಿದೆ. ವಯಸ್ಸು, ಕುಲ, ಲಿಂಗಗಳ ಭೇದವಿಲ್ಲದೆ ಎಲ್ಲರೂ ಚಿಂತನೆ ಮಾಡಬಹುದಾದ ಸಾಮಗ್ರಿಯಿದೆ, ಇದರಲ್ಲಿ.

೧೭. ಸಿಂಗಿರಾಜ (ಕ್ರಿ.ಶ. ೧೫೦೦)

ಈತನು 'ಅಮಲಬಸವಚಾರಿತ್ರ' ಅಥವಾ 'ಸಿಂಗಿಪುರಾಣ'ವನ್ನು ವಾರ್ಧಕ ಷಟ್ಪದಿಯಲ್ಲಿ ಬರೆದ ಕವಿ. ತಾನು ಕಾಶಿಯ ವಿಶ್ವನಾಥ 'ಪದಕಮಲಷಟ್‌ಚರಣ' ವೀರಭದ್ರನ ಭಕ್ತ, ದೇಮಿದೇವನೆಂಬುವನ ಶಿಷ್ಯ. 'ಮಾನವಮಹಾದೇವ'ನಾದ ಬಸವಣ್ಣನು 'ಪ್ರತಿವಾದಮುಖದಿಂ ನೆಗಳ್ದ ಪವಾಡಂಗಳು ೬೪, ಭಕ್ತಿ ಚಾರಿತ್ರ ಭಾವನಿಷ್ಠಾಪವಾಡಂಗಳು ೨೪'ನ್ನು ವರ್ಣಿಸುವುದೇ ಈ ಕಾವ್ಯ ನಿರೂಪಣೆಯ ಉದ್ದೇಶ. ಹರಿಹರಕವಿಯ 'ಬಸವರಾಜದೇವರರಗಳೆ', ಭೀಮಕವಿಯ 'ಬಸವಪುರಾಣ', ಲಕ್ಕಣ್ಣದಂಡೇಶನ 'ಶಿವತತ್ತ್ವ ಚಿಂತಾಮಣಿ' – ಇವು ಆತನ ನಿರೂಪಣೆಗೆ ಸಾಮಗ್ರಿಯನ್ನು ಒದಗಿಸಿವೆ. ಮೂಲದ ಕಥೆಗಳನ್ನು ಸಂಗ್ರಹಿಸಿ ಅಥವಾ ಹಿಗ್ಗಲಿಸಿ, ತನ್ನವಾಗಿ ಮಾಡಿಕೊಂಡು, ಅವನ್ನು ಮೆರುಗುಗೊಳಿಸುವ ಕಾರ್ಯದಲ್ಲಿ ಕೃತಕೃತ್ಯನಾಗಿದ್ದಾನೆ.

ಸಿಂಗಿರಾಜಪುರಾಣದಲ್ಲಿ ಕಾವ್ಯಾಂಶ ಕಡಿಮೆ. ಆದರೆ ಇತರ ಪುರಾಣಗಳಲ್ಲಿ ಬರುವಂತೆ ಎಲ್ಲ ಶಿವಶರಣರ ಕಥೆಗಳನ್ನು ಇಲ್ಲಿ ತರದಿರುವುದು ಆತನ ಒಂದು ವಿಶೇಷ. ಆತನ ಕಥೆಯಲ್ಲಿ ಹಲವು

'ಭಾವಚಿಂತಾರತ್ನ' ವಾರ್ಧಕಷಟ್ಪದಿಯ ೩೭೧ ಪದ್ಯಗಳನ್ನು ಒಳಗೊಂಡಿದೆ. 'ಕೃತಿಯ ಪಲ್ಲವ ತೊಡಗಿ ಪೂರ್ಣಮಪ್ಪನ್ನಮೀ ಕೃತಿಯೊಳು-ತ್ಪ್ರೇಕ್ಷೆಯಿಲ್ಲದುದೊಂದು ಪದನಿಲ್ಲ, ಕೃತಿಗದು ನಿಮಿತ್ತದಿಂ ಭಾವಚಿಂತಾರತ್ನಮೆಂಬ ಪೆಸರು' ಎಂದು ಕವಿ ಹೇಳುತ್ತಾನೆ. ಚೋಳದೇಶದ ರಾಜಕುಮಾರನು ವೈಹಾಳಿಗೆ ಹೊರಟಾಗ ಆಕಸ್ಮಾತ್ತಾಗಿ ಶಂಕರನೆಂಬ ಶಿವಭಕ್ತ ಬಾಲಕನ ಮೇಲೆ ಕುದುರೆಯನ್ನು ಹರಿಸಿ ಅವನ ಸಾವಿಗೆ ಕಾರಣನಾಗುತ್ತಾನೆ. ಮಗುವಿನ ತಾಯಿ ತಿರುಕೊಳವಿನಾಚಿ ರಾಜನಲ್ಲಿ ದೂರುತ್ತಾಳೆ. ರಾಜನು 'ತಲೆಗೆ ತಲೆ' ಎಂಬ ತತ್ತ್ವವನ್ನು ಸ್ವೀಕರಿಸಿ, ತನ್ನ ಮಗನನ್ನು ಕೊಲ್ಲುವಂತೆ ಸಂದಾಯಿ ಎಂಬ ಸೇವಕನನ್ನು ನೇಮಿಸುತ್ತಾನೆ. ಅವನು ರಾಜಾಜ್ಞೆಯನ್ನು ನೆರವೇರಿಸಿ ತನ್ನ ತಲೆಯನ್ನೂ ಕತ್ತರಿಸಿಕೊಳ್ಳುತ್ತಾನೆ. ಸತ್ತ ಈ ಇಬ್ಬರ ತಲೆಗಳೊಡನೆ ಬಾಲಕ ಶಂಕರನ ತಲೆಯೂ ಸೇರಿ ಶಿವಪಂಚಾಕ್ಷರಿಯನ್ನು ಉಚ್ಚರಿಸುತ್ತಿರುತ್ತವೆ. ಇದನ್ನು ಕಂಡ ತಿರುಕೊಳವಿನಾಚಿ ತನ್ನ ತಲೆಯನ್ನೂ ಕತ್ತರಿಸಿಕೊಳ್ಳುತ್ತಾಳೆ. ಹೀಗೆಯೆ ರಾಜ ಮಂತ್ರಿ ಇತ್ಯಾದಿ ಒಟ್ಟು ಏಳು ತಲೆಗಳು ನೆಲಕ್ಕುರುಳಿ ಪಂಚಾಕ್ಷರಿಯನ್ನು ಜಪಿಸುತ್ತಿರುತ್ತವೆ. ಕಡೆಗೆ ರಾಣಿಯ ಸರದಿ ಬಂದಾಗ ಶಿವನು ಪ್ರತ್ಯಕ್ಷನಾಗಿ ಎಲ್ಲರಿಗೂ ಕೈಲಾಸ ಪದವಿಯನ್ನು ನೀಡುತ್ತಾನೆ. ತಿರುಜ್ಞಾನ ಸಂಬಂಧೀಶನೆಂಬ ಶಿವಶರಣನು ಕುಲಚ್ಚರೆ ಎಂಬ ಶಿವಭಕ್ತಳಿಗೆ ಈ ಕಥೆಯನ್ನು ಹೇಳಿದನಂತೆ ! ಈ ಕಾವ್ಯಕ್ಕೆ 'ಸತ್ಯೇಂದ್ರಚೋಳನ ಕಥೆ' ಎಂಬ ಮತ್ತೊಂದು ಹೆಸರು ಇದೆ.

ಪಂಚಾಕ್ಷರಿಯ ಮಹಿಮೆಯನ್ನು ಸಾರಹೊರಟಿರುವ ಈ ಕಾವ್ಯದಲ್ಲಿ ಉತ್ಪ್ರೇಕ್ಷೆಯಿಲ್ಲದ ಪದ್ಯವನ್ನೆ ಬರೆಯುವುದಿಲ್ಲವೆಂದು ಕವಿ ಹೊರಟಿರುವುದು ಶಿವಪೂಜೆಗೆ ಹೊರಟವನು ಕಿರೀಟ ಭುಜಕೀರ್ತಿಗಳನ್ನು ಧರಿಸಿದಂತಾಗಿದೆ; ಭಕ್ತಿರಸಪ್ರಧಾನವಾದ ಕಾವ್ಯ ಜನಸಾಮಾನ್ಯನಿಗೆ ಎಟುಕದಷ್ಟು ಪ್ರೌಢವಾಗಿದೆ. ಅಲ್ಲದೆ ಕಥಾಸಂವಿಧಾನದಲ್ಲಿ ಸ್ವಲ್ಪ ಒರಟುತನವಿದೆ. ಬ್ರಹ್ಮನು ಷಣ್ಮುಖನಿಗೆ ಪ್ರಣವವನ್ನು ಬೋಧಿಸಹೊರಟು ಭಂಗಿತನಾದ ಮೇಲೆ ಶಿವನು ಷಣ್ಮುಖನನ್ನು ಕುರಿತು ಪ್ರಣವದ ಅರ್ಥವನ್ನು ವಿವರಿಸುವಂತೆ ಕೇಳಿದನಂತೆ ! ಆಗ ಮಗ 'ಗದ್ದುಗೆಯೆನಿಳಿ ತಂದೆ, ಆಂ ಮೇಲಿರ್ದು ಪೇಳ್ವೆನ್' ಎಂದನಂತೆ ! ಆಗ ಶಿವನು ಕೋಪದಿಂದ 'ಹದಿನಾರುಸಾವಿರ ಜನ್ಮದಲ್ಲಿ ಪುಟ್ಟೆಂದು ಗುಹನಂ ಶಪಿಸಿದಂ' ಈ ತಂದೆಮಕ್ಕಳ ವ್ಯವಹಾರ ಒರಟುತನದ ಅಂಚಿನಲ್ಲಿ ನಿಂತಿದೆ. ರಾಜಾಜ್ಞೆ ನೆರವೇರಿಸ ಹೊರಟ ಸಂದಾಯಿಯ ಚಿತ್ರವೂ ಹಾಗೆಯೆ. ಈ ಕಥೆಯನ್ನು ಮಲ್ಲಣಾರ್ಯನಿಂದಲೆ ಎತ್ತಿಕೊಂಡಿರುವ ಷಡಕ್ಷರ ಕವಿಯು ತನ್ನ 'ರಾಜಶೇಖರವಿಳಾಸ'ದಲ್ಲಿ ಮನೋಜ್ಞವಾಗಿ ಮಾಡಿದ್ದಾನೆ.

ಮಲ್ಲಣಾರ್ಯ ಒಳ್ಳೆಯ ಕಥೆಗಾರ. ಆದ್ದರಿಂದ ಇಲ್ಲಿನ ವರ್ಣನೆಗಳು ಕಥೆಯ ಓಟಕ್ಕೆ ಭಂಗ ತಂದಿಲ್ಲ; ಔಚಿತ್ಯಕ್ಕೆ ಅಪಚಾರವಾಗದಂತೆ ಹಿತಮಿತವಾಗಿ ಬಂದಿವೆ. ಇಲ್ಲಿ ಭಕ್ತಿಯೆ ಪ್ರಧಾನ ರಸ, ಅದಕ್ಕೆ ಪೋಷಕವಾಗಿ ಶೃಂಗಾರ, ಕರುಣೆ, ಹಾಸ್ಯಗಳು ಬಂದಿವೆ. ತಿರುಕೊಳವಿನಾಚಿಯ ಪುತ್ರಶೋಕಪ್ರಲಾಪ ಕರುಳು ಕರಗುವಷ್ಟು ಕರುಣಾಮಯವಾಗಿದೆ. ಅಂಗಳದಲ್ಲಿ ಆಡುತ್ತಿದ್ದ ತನ್ನ ಮಗು ಎಲ್ಲಿ ಹೋದನೆಂದು ಕಳವಳಪಡುತ್ತಿದ್ದ ಆಕೆ ರಾಜಕುಮಾರನ ಕುದುರೆಯ ಖುರಪುಟಕ್ಕೆ ಸಿಕ್ಕಿ ಕೂಸೊಂದು ಮಡಿದುದನ್ನು ಕೇಳುತ್ತಲೆ-

ಮುತ್ತಿರ್ದ ಜನವ ಬಗಿಲದೊಳನೊಕ್ಕು ಪರಿವುತಿಹ
ನೆತ್ತರಂ ರುಂಡಮಂ ಮುಂಡಮಂ ಕಂಡು ಹಾ
ಮತ್ತ ನುಜ । ಹಾ ಕಂದ । ಹಾ ಮುದ್ದು ಮಗನೆ ಹಾ ಹಾ ಕೆಟ್ಟೆನೆಂದೊರಲುತೆ ॥
ಎತ್ತಿಕೊಂಡಾ ತಲೆಯಿನೆರ್ದೆಯ ಗುಂಡಿಗೆಯೊಳಿಮು

ಎಂದು ಹೇಳುತ್ತಾನೆ. ಸುರಂಗಕವಿ ತನ್ನ ಕಂದಂಗಳ ಸೊಬಗನ್ನು:

ಕಂದಂಗಳ್ ವಾಗ್ವನಿತೆಯೆ । ಕಂದಂಗಳ್ ಸಭ್ಯ ನವ್ಯ ಕಾವ್ಯಲಸನ್ಮಾ
ಕಂದಂಗಳ್ ನರವರಸದು । ಕ್ಕಂದಂಗಳೆನಲ್ಕೆ ಕವಿ ಸುರಂಗಂ ಪೇಳ್ದಂ

ಎಂದು ಹೇಳುತ್ತಾನೆ. ಈತನ ಕಾವ್ಯದ ಅನೇಕ ಭಾಗಗಳಲ್ಲಿ ಇಂತಹ ಅನುಕರಣ ಕಂಡುಬರುವುದಾದರೂ ಹರಿಹರನ ಹೆಸರನ್ನೆತ್ತದಿರುವುದು ಆಶ್ಚರ್ಯ, ಅನ್ಯಾಯ!

೧೪. ಗುಬ್ಬಿಯ ಮಲ್ಲಣಾರ್ಯ (ಕ್ರಿ.ಶ. ೧೪೧೩)

ವೀರಶೈವಶರಣರಲ್ಲಿ ಸುಪ್ರಸಿದ್ಧನಾದ ಅಮರಗುಂಡದ ಮಲ್ಲಿಕಾರ್ಜುನನು ಭಕ್ತರಿಗಾಗಿ ಶಿವಪುರಾಣವನ್ನು ಹೇಳುತ್ತಿದ್ದಾಗ ಎರಡು ಗುಬ್ಬಿಗಳು ದಿನವೂ ಅದನ್ನು ಕೇಳಲು ಬರುತ್ತಿದ್ದು ಕೆಲವು ದಿನಗಳಾದ ಮೇಲೆ ಆ ಪುರಾಣ ಮುಗಿಯುತ್ತಲೆ ಅಲ್ಲಿಯೆ ಪ್ರಾಣನೀಗಿದವಂತೆ ! ಅಂದಿನಿಂದ ಆ ಊರಿಗೆ 'ಅಮರಗುಂಡ'ವೆಂಬ ಹೆಸರು ತಪ್ಪಿ 'ಗುಬ್ಬಿ' ಎಂದಾಯಿತಂತೆ ! ತುಮಕೂರು ಜಿಲ್ಲೆಯಲ್ಲಿರುವ ಆ ಗುಬ್ಬಿಯಲ್ಲಿ ಸುಪ್ರಸಿದ್ಧನಾಗಿದ್ದ ಆ ಶಿವಶರಣರ ಮನೆತನದಲ್ಲಿ ಜನಿಸಿದವನು, ಮಲ್ಲಣ. ಈತನು ಪರಮಶಿವಭಕ್ತನಾಗಿದ್ದು 'ಗಣಭಾಷ್ಯರತ್ನಮಾಲೆ' ಎಂಬ ಪುರಾತನ ಸಂಗ್ರಹವನ್ನೂ 'ವಾತೂಲತಂತ್ರಟೀಕೆ' ಎಂಬ ವಾತೂಲ ಶೈವಾಗಮದ ಟೀಕಾಗ್ರಂಥವೊಂದನ್ನೂ ರಚಿಸಿದನು. ಆತನ ವಚನಸಂಗ್ರಹದಲ್ಲಿ ೧೦೦೦ ವಚನಗಳು ಸ್ಥಲಾನುಕ್ರಮವಾಗಿ ವಿಂಗಡವಾಗಿವೆ. ಪ್ರತಿಯೊಂದು ಸ್ಥಲದ ಆರಂಭದಲ್ಲಿಯೂ ಆಯಾ ಸ್ಥಲದ ಲಕ್ಷಣಗಳನ್ನು, ವೇದಾಗಮಾದಿ ಆಧಾರಗಳನ್ನು ಉದ್ಧರಿಸಿದ ಸಂಸ್ಥಾಪಿಸಿದ ಮೇಲೆ ಪುರಾತನ ವಚನಗಳನ್ನು ಉದಾಹರಣೆಗಾಗಿ ಕೊಡುತ್ತಾನೆ, ಮಲ್ಲಣ್ಣ. ತಿಳಿಯಾಗಿ, ಸರಳವಾಗಿ ಇರುವ ಈತನ ಭಾಷೆ ವಚನವಾಙ್ಮಯದ ಸೇವೆಯಿಂದ ಸಾರ್ಥಕಗೊಂಡಿದೆ. ಮಲ್ಲಣ್ಣನ ಗ್ರಂಥಗಳಿಂದ ಆತನಿಗೆ ಶಾಸ್ತ್ರಾಗಮಗಳಲ್ಲಿದ್ದ ಆತನ ಪಾಂಡಿತ್ಯ ವ್ಯಕ್ತವಾಗುವುದಲ್ಲದೆ ವೀರಶೈವತತ್ತ್ವಗಳು ಶಾಸ್ತ್ರೀಯವಾಗಿ ಆಧಾರಸಹಿತವಾಗಿ ಪ್ರತಿಪಾದಿತವಾದಂತಾಗಿದೆ. ಈ ಮೇಧಾವಿ ಮಲ್ಲಣ್ಣನ ಮೊಮ್ಮಗನೆ ಗುಬ್ಬಿಮಲ್ಲಣಾರ್ಯ.

ಮಲ್ಲಣಾರ್ಯನ ತಂದೆ ಗುರುಭಕ್ತ. ತಾಯಿ ಸಪ್ಪೆಯಮ್ಮ. ಈ ಶರಣರ ದಂಪತಿಗಳಿಂದ ಮಗನಲ್ಲಿ ಇಳಿದುಬಂದ ಸದ್ಭಕ್ತಿಗೆ ನೀರೆರೆದು ಬೆಳೆಸಿದ ಕೀರ್ತಿ ಗುರುತಿಸಿದ ಮಲ್ಲೇಶನಿಗೆ ಸಲ್ಲುತ್ತದೆ. ಆಧ್ಯಾತ್ಮಿಕಕ್ಕೆ ಈತನು ಗುರುವಾದರೆ ಲೌಕಿಕ ವಿದ್ಯೆಗೆ ಗುಮ್ಮಳಾಪುರದ ಕಾವ್ಯಶಕ್ತಿ ಅರಳಿ 'ಭಾವಚಿಂತಾರತ್ನ', 'ವೀರಶೈವಾಮೃತಪುರಾಣ', 'ಪುರಾತನರ ರಗಳೆ' ಎಂಬ ಕಾವ್ಯತ್ರಯದ ರೂಪದಲ್ಲಿ ಕಾಣಿಸಿಕೊಂಡಿತು. ಇವುಗಳಲ್ಲಿ ಕಡೆಯದಾದ 'ಪುರಾತನರ ರಗಳೆ' ಈಗ ಉಪಲಬ್ಧವಾಗಿಲ್ಲ. ಉಳಿದೆರಡರಲ್ಲಿಯೂ ಆತನ ದೈವಭಕ್ತಿ, ಅಧ್ಯಾತ್ಮ ಜ್ಞಾನಗಳು ಸ್ಪಷ್ಟವಾಗಿ ವ್ಯಕ್ತಗೊಂಡಿವೆ. ಆತನು ಸದಾ ಆಧ್ಯಾತ್ಮಿಕ ವಾತಾವರಣದಲ್ಲಿಯೆ ಉಸುರಾಡುತ್ತಿದ್ದನೆಂದು ತೋರುತ್ತದೆ. 'ಬಸವಪುರಾಣ'ವನ್ನು ಓದಿ ಅರ್ಥ ಹೇಳುವುದು ಆತನ ಕಾಯಕವಾಗಿತ್ತು. 'ಬಸವಪುರಾಣದ ಮಲ್ಲಣಾರ್ಯ' ಎಂದೆ ಆತ ಪ್ರಸಿದ್ಧನಾಗಿದ್ದ. ಆತನ ವಾಗ್‌ವೈಖರಿಯನ್ನು ಕಂಡೊ ಏನೊ ಶಿವಪೂಜೆಯಾಚಾರ್ಯನೆಂಬುವನು 'ಅಯ್ಯಾ ಮಲ್ಲಣಾರ್ಯ, ನಿನ್ನ ತಾತ 'ಗಣಭಾಷ್ಯರತ್ನಮಾಲೆ' ರಚಿಸಿದ; ನೀನು 'ಸತ್ಯೇಂದ್ರಚೋಳ ಭೂಲಲನಾಧಿಪನ ಕೃತಿಯನೊರೆ' ಎಂದು ಹೇಳಿದನಂತೆ ! ಅದರಂತೆ ಕವಿಯು 'ಪ್ರಣವ ಪಂಚಾಕ್ಷರಿಯ ಮಹಿಮೆಯಂ ತಿಳಿಪೆ, ಸದ್ಗುಣೆಯಪ್ಪ ಸತ್ಯೇಂದ್ರ ಚೋಳಭೂಪನ ಕಥಾಭಣಿತೆಯಂ ದ್ರಾವಿಡದೊಳೆರೆದುದಂ ಕನ್ನಡದಿ' ಹೇಳ ಹೊರಟ. ಇದೇ 'ಭಾವಚಿಂತಾರತ್ನ', ಇದನ್ನು ಕ್ರಿ.ಶ. ೧೫೧೩ರಲ್ಲಿ ರಚಿಸಿರುವುದಾಗಿ ಆ ಕಾವ್ಯದಿಂದ ಗೊತ್ತಾಗುತ್ತದೆ. ಆತನ 'ವೀರಶೈವಾಮೃತ ಪುರಾಣ' ಕ್ರಿ.ಶ. ೧೫೩೦ರ ವೇಳೆಗೆ ಬರೆದು ಮುಗಿಸಿರಬೇಕು.

ಅವನನ್ನು ಕೊಲ್ಲುವಂತೆ ಮಂತ್ರಿಗೆ ಹೇಳಿದ. ವಸ್ತುಸ್ಥಿತಿಯನ್ನು ಅರಿತ ಮಂತ್ರಿ ರಾಜಕುಮಾರನನ್ನು ನೆಲಮಾಳಿಗೆಯಲ್ಲಿ ಬಚ್ಚಿಟ್ಟು, ದೊರೆಯ ಆಜ್ಞೆಯನ್ನು ನಡಿಸಿದವನಂತೆ ನಟಿಸಿದ. ರಾಜಕುಮಾರ ಸತ್ತನೆಂಬ ಸುದ್ದಿ ಕೇಳಿ, ದೆಹಲಿಯ ಸೇನೆ ಮತ್ತೆ ಕುಂತಳದ ಮೇಲೆ ದಾಳಿಯಿಟ್ಟಿತು. ಆದರೆ ಸಕಾಲದಲ್ಲಿ ಕುಮಾರರಾಮ ಹೊರಗೆ ಕಾಣಿಸಿಕೊಂಡು ಸುಲ್ತಾನನ ಸೇನೆಯನ್ನು ಒಕ್ಕಲಿಕ್ಕಿದ. ಮತ್ತೆ ತನ್ನ ಸೇನೆ ಸೋತು ಬಂದುದನ್ನು ಕಂಡು ಸುಲ್ತಾನ ಕೆರಳಿ ಕೆಂಗೆಂಡವಾದ. ಆಗ ಅರಮನೆಯ ಬಾಗಿಲು ಕಾಯುವ ಮಾತಂಗಿಯೊಬ್ಬಳು ರಾಜಕುಮಾರನ ತಲೆಯನ್ನು ತರುವುದಾಗಿ ಪ್ರತಿಜ್ಞೆಮಾಡಿ ಪುನಃ ದಂಡೆತ್ತಿ ಬಂದಾಗ ಮೋಸದಿಂದ ರಾಜಕುಮಾರನ ತಲೆಯನ್ನು ಕತ್ತರಿಸಿ ತಂದಳು. ಯುದ್ಧದಲ್ಲಿ ಸೋತ ಕಂಪಿಲರಾಜನೂ ಆತನ ಪರಿವಾರವಾದರೂ ಆತ್ಮಹತ್ಯೆ ಮಾಡಿಕೊಂಡರು. ಕುಂತಳರಾಜ್ಯ ಮಣ್ಣುಗೂಡಿ ಹೋಯಿತು. ಮುಂದೆ ವಿಜಯನಗರದ ಹಕ್ಕಬುಕ್ಕರು ಆ ರಾಜ್ಯದಲ್ಲಿ ಭಂಡಾರಿಗಳಾಗಿದ್ದರು.

ಕಥಾಘಟನೆ ನಡೆದುದು ೧೪ನೆಯ ಶತಮಾನದ ಆದಿ ಭಾಗದಲ್ಲಿ; ಕಥೆ ಬರೆಯುತ್ತಿರುವುದು ೧೬ನೆಯ ಶತಮಾನದಲ್ಲಿ. ಈ ಮಧ್ಯದ ಎರಡು ಶತಮಾನಗಳಲ್ಲಿ ಕಥಾ ನಾಯಕನು ಜನರ ಬಾಯಲ್ಲಿ ಪುರಾಣಪುರುಷನಾಗಿ ಹೋಗಿದ್ದಾನೆ. ನಂಜುಂಡಕವಿಯ ದೃಷ್ಟಿಯಲ್ಲಿ ಕುಮಾರರಾಮನು ಭಾರತದ ವೀರನಾಗಿ ಅರ್ಜುನನ ಅವತಾರ; ರತ್ನಾಜಿ ಅವನ ಪರೀಕ್ಷೆಗಾಗಿ ಹುಟ್ಟಿಬಂದ ಊರ್ವಶಿ. ಮಂತ್ರಿ ರಾಜನಿಗೆ ಒಪ್ಪಿಸಿದ ಕುಮಾರನ ತಲೆ ದೇವೇಂದ್ರನು ಕಳುಹಿಸಿದ ಕೃತಕ ಶಿರ. ಅವನ ತಲೆಯನ್ನು ಕೊಂಡೊಯ್ದು ಮಾತಂಗಿ ಪೂರ್ವಜನ್ಮದ ಗಾಂಧಾರಿ. ಆತನ ಜೀವ ವಿಮಾನವೇರಿ ಕೈಲಾಸಕ್ಕೆ ಹೋಗುತ್ತದೆ. ಅವನ ತಲೆ ಗಂಗೆಯನ್ನು ಸೋಂಕುತ್ತಲೆ ಲಿಂಗವಾಗಿ ಹೋಗುತ್ತದೆ. ಹೀಗೆ ಐತಿಹಾಸಿಕ ಕಥೆ ಪುರಾಣವಾಗಿದೆ ಇಲ್ಲಿ.

ನಂಜುಂಡಕವಿಯೇ ಈ ಕಥೆಯನ್ನು ಬರೆಯಲು ತಕ್ಕವನೆಂದು ಕೋವಿದರು ಹೇಳಿದುದರಿಂದ ಇದನ್ನು ಆತ ಬರೆಯಹೊರಟನಂತೆ! ಕವಿಯ ತಂದೆ 'ಚಂಗಳನಾಡ ನಾಲ್ಕತ್ತು ನಾಯಕ ಜಗಸಿಂಹ' ಎಂಬ 'ಚದುರಮಾಧವ' ತಾತಾ 'ಪ್ರಭುಕುಲಾಗ್ರಗಣ್ಯ ವಿಜಯನೃಪಾಲ' ಹೀಗೆ ಕ್ಷತ್ರಿಯಕುಲೋತ್ಪನ್ನನಾಗಿ ಕಥಾನಾಯಕರ ಮುಖ್ಯ ಗುಣಗಳುಳ್ಳ ವಂಶಕ್ಕೆ ಸೇರಿದವನಾದ ತಾನು ಕವಿತಾಶಕ್ತಿಯೂ ಸಾಮಾನ್ಯವೇನೂ ಅಲ್ಲ. 'ಪದವಾಕ್ಯ ಪ್ರಮಾಣಜ್ಞ'.

ಉಭಯವಸ್ತುಕ ಕವಿರೆಯನೊರೆವೆನು ನೃಪ । ಸಭೆ ತಲೆದೂಗುವಂದದಲಿ
ವಿಭುಗಳು ಪೇಳೆನಲೀ ಪದ ಕವಿತೆಯ । ನಭಿಮಾನಿಸಿ ಹೇಳಿದನು

'ಇತರ ಚಂಪೂಕವಿಗಳಂತೆ ನಾನು ವಸ್ತುಕಕಾವ್ಯ ಹೇಳಬಲ್ಲೆ, ಆದರೆ ಮಹಾಜನ ಕೇಳಿಕೊಂಡುದರಿಂದ ಈ ಪದಕವಿತೆ ಹೇಳುತ್ತೇನೆ' ಎನ್ನುತ್ತಾರೆ ಕವಿ. ಚಂಪೂಕಾವ್ಯಕ್ಕಿಂತ ತನ್ನ ಕಾವ್ಯ ಕೀಳಲ್ಲವೆಂದು ತೋರುವುದಕ್ಕಾಗಿ ಸಂಪ್ರದಾಯದ ವರ್ಣನೆಗಳನ್ನೆಲ್ಲ ತನ್ನ ಕಾವ್ಯದಲ್ಲಿ ತಂದಿದ್ದಾನೆ. ಕರ್ಣಾಟಕದ ವಿಚಾರದಲ್ಲಿ ನೃಪತುಂಗನ ಬಾಂದುಗಲ್ಲುಗಳೆ ಈತನ ಕಾಲಕ್ಕೂ ಉಳಿದುಕೊಂಡು ಬಂದಿವೆ. 'ಕಾವೇರಿಯಿಂದ ಗೋದಾವರಿವರೆಗಮಿರ್ದಾ ವಸುಧಾತಳದಯ ವಳ ಭಾವಿಸಿ ಕರ್ಣಾಟಕಜನಪದ' ಇಲ್ಲಿನ ನದಿಗಳು ಭೂದೇವಿ ಉಟ್ಟು ಬಿಸುಟ ಸೀರೆಗಳು ! ತೊರೆವೆಣ್ಣು ಸಮುದ್ರವನ್ನು ಅಪ್ಪಲು ಚಾಚಿದ ಕೈಗಳಂತಿವೆ ಕಾಲಂಗಳು ! ಪಾಮರಿಯರ ಕಣ್ಣ ಕಾಂತಿಯನ್ನು ಬಳಿಯ ಬಲಗಳೆಂದು ಹೆದರಿ ಗಿಳಿಗಳು ಗದ್ದೆಗೆ ಇಳಿಯುವುದಿಲ್ಲ ! ನದಿಯಿಂದ ಮೇಲಕ್ಕೆ ಹಾರುತ್ತಿರುವ ಮೀನುಗಳು ನದಿಯೆಂಬ ರಮಣಿ ಆಡುತ್ತಿರುವ ಆಣೆಯ ಕಲ್ಲುಗಳು ! ಬ್ರಹ್ಮನು ಅಮರಾವತಿಯನ್ನೂ ಪಂಪಾಪುರಿಯನ್ನೂ ತಕ್ಕಡಿಯಲ್ಲಿಟ್ಟು ತೂಗಿದಾಗ ಅಮರಾವತಿಯ ತೂಕ

ದೊರ್ಂತಿ ಶಿವಭೊ ಎಂದು ತನುವನಿಳೆಗೀಡಾಡಿ
ಮತ್ತೆದ್ದು ಬಿದ್ದು ಹೊರಳುತ್ತ ದುಃಖದ ಕಡಲನೀಸಾಡುವಂತಿರ್ದಳು ॥

ಆಕೆಯ ಹಂಬಲ, ರೋದನ ಹೃದಯವಿದ್ರಾವಕವಾಗಿದೆ.

ಮಲ್ಲಣಾರ್ಯನ ಎರಡನೆಯ ಗ್ರಂಥ 'ವೀರಶೈವಾಮೃತಪುರಾಣ'ವೂ ವಾರ್ಧಕಷಟ್ಪದಿಯಲ್ಲಿದ್ದು ೭೦೦೦ ಪದ್ಯಗಳನ್ನು ಒಳಗೊಂಡಿದೆ. ಈ ಕಾವ್ಯವನ್ನು ಬರೆಯಲು ಹಲಗೆಯಾಚಾರ್ಯನೆಂಬ ಮಹಾಪುರುಷನು ಕಾರಣನಾದನಂತೆ! ಆತನು ತನ್ನ ಶಿಷ್ಯನಾದ ಕೆಂಚವೀರನೆಂಬುವವನಿಗೆ ಬೋಧಿಸಿದ ಉಪದೇಶವನ್ನು ಕಾವ್ಯರೂಪವಾಗಿ ರಚಿಸುವಂತೆ ಮಲ್ಲಣಾರ್ಯನಿಗೆ ಹೇಳಿದನಂತೆ! ಅದರಂತೆ ಇದನ್ನು ರಚಿಸುವುದಾಗಿ ಕವಿ ಹೇಳಿಕೊಂಡಿದ್ದಾನೆ. ಈ ಬೃಹದ್ಗ್ರಂಥವು ವೀರಶೈವಸಿದ್ಧಾಂತದ ಒಂದು ವಿಶ್ವಕೋಶದಂತಿದೆ. ಶಿವನ ಪಂಚವಿಂಶತಿ ಲೀಲೆಗಳು, ನೂತನರ, ಪುರಾತನರ ಕಥೆಗಳೂ ಅಷ್ಟಾವರಣ ಮಹಿಮೆ, ಷಟ್‌ಸ್ಥಲಸಿದ್ಧಾಂತ ಇತ್ಯಾದಿಗಳನ್ನೆಲ್ಲ ಇದು ಒಳಗೊಂಡಿದೆ. ಶರಣರ ಕಥೆಗಳನ್ನು ಶಿವತತ್ತ್ವಚಿಂತಾಮಣಿಯಿಂದ ಎತ್ತಿಕೊಂಡಿರುವುದಾಗಿ ಕವಿ ಹೇಳಿಕೊಂಡಿದ್ದಾನೆ.

'ವೀರಶೈವಾಮೃತಪುರಾಣ'ವು ಧರ್ಮಗ್ರಂಥವಾದರೂ ಕಾವ್ಯಧರ್ಮದಿಂದ ಸಂಪೂರ್ಣವಾಗಿ ವಂಚಿತವಾಗಿಲ್ಲ. ಧರ್ಮಾನುರಾಗದೊಡನೆ ಕಾವ್ಯದೃಷ್ಟಿಯೂ ಸೇರಿರುವುದರಿಂದ ಇದು ತತ್ತ್ವಾನ್ವೇಷಕರಂತೆ ಕಾವ್ಯಪ್ರೇಮಿಗಳಿಗೂ ಪ್ರಿಯವಾಗಿದೆ. ಈ ವೇದಾಂತಿ ಹೆಣ್ಣನ್ನು ವರ್ಣಿಸುವ ರೀತಿ ಇದು–

ಇವರ ನುಡಿ ಯತಿವರರ ಬಾಯ ಹುಡಿ ಭಾವಿಸಿ ।
ಲ್ಕಿವರ ಬಾಹುಗಳು ಸಜ್ಜನರ ಬೇಹುಗಳು ಬಳಿ
ಕಿವರ ಚೆಲ್ವಿನ ತುರುಬು ಸದಾಚಾರಿಗಳ ಮನದ ಬುರುಬು
ಇವರ ಚೆಲ್ವಿನ ದೇಹ ಉತ್ತಮರ ದಾಹವಿಂ
ತಿವರ ನಡೆಯನಘರಸಗಳಿಗಿವೇ ಕಡೆಯೆಂಬ
ಯುವತಿಯರು ಬಂದರಾ ದೇವದೇವೇಶನಂ ನೋಡ ತಮತಮಗೆ ಕೊಡೆ ॥

ಗುಬ್ಬಿಯ ಮಲ್ಲಣ್ಣಾರ್ಯ ಮಹಾಕವಿಯಲ್ಲದಿದ್ದರೂ ಶಕ್ತನಾದ ಶ್ರೇಷ್ಠ ಕವಿ.

೧೫. ನಂಜುಂಡ ಕವಿ (ಕ್ರಿ.ಶ. ೧೫೨೫)

ಈತನ 'ರಾಮನಾಥಚರಿತೆ' ಅಥವಾ 'ಕುಮಾರರಾಮನಸಾಂಗತ್ಯ'ವು ಕನ್ನಡದ ಅನುಪಮ ಕಲಿಯೆಂದು, ಪರದಾರಸೋದರನೆಂದು ಕೀರ್ತಿತನಾಗಿರುವ ಕುಮಾರರಾಮ ರಾಜಕುಮಾರನ ಕಥೆಯನ್ನು ಒಳಗೊಂಡಿದೆ. ಈ ಕಥೆ ವಿಜಯನಗರ ರಾಜ್ಯಸ್ಥಾಪನೆಗಿಂತಲೂ ಹತ್ತು–ಹದಿನೈದು ವರ್ಷಗಳ ಹಿಂದೆ ನಡೆದ ಐತಿಹಾಸಿಕ ಘಟನೆ. ಆಗ ಮಹಮದ್–ಬಿನ್–ತೊಗಲಕನು ದಿಲ್ಲಿಯ ಅರಸನಾಗಿದ್ದನೆಂದು ತೋರುತ್ತದೆ. ಹಂಪೆಯ ಬಳಿ ಕುಂತನೆಂಬ ಚಿಕ್ಕರಾಜ್ಯದಲ್ಲಿ ಕಂಪಿಲನೆಂಬ ದೊರೆಯಿದ್ದ. ಆತನ ಮಗ ಕುಮಾರರಾಮ. ಈತನ ಕೀರ್ತಿ ದೆಹಲಿಗೆ ವ್ಯಾಪಿಸಿ, ಅಲ್ಲಿನ ಸುಲ್ತಾನರ ಮಗಳು ಕುಮಾರರಾಮನನ್ನು ಮೋಹಿಸಿದಳು. ಆಕೆಯ ಅಪೇಕ್ಷೆಯನ್ನು ಸಲ್ಲಿಸಲು ಸುಲ್ತಾನನು ಪ್ರಯತ್ನಿಸಿದ. ಆದರೆ ಕಂಪಿಲ ಇದನ್ನು ತಿರಸ್ಕರಿಸಿದ. ಇಷ್ಟೇ ಅಲ್ಲ, ಸುಲ್ತಾನನ ಕೋಪಕ್ಕೆ ಪಾತ್ರನಾಗಿದ್ದ ಬಾದರನಿಗೆ ಆಶ್ರಯ ನೀಡಿದ. ಇದರ ಫಲವಾಗಿ ದೊಡ್ಡ ಯುದ್ಧ ನಡೆದು, ಕುಮಾರರಾಮನ ಪರಾಕ್ರಮದಿಂದ ಸುಲ್ತಾನ ಸೋತು ಹಿಂದಿರುಗಿದ. ಹೀಗೆ ಉದಿತೋದಿತನಾಗುತ್ತಿದ್ದ ಕುಮಾರರಾಮನನ್ನು ಕಂಪಿಲರಾಜನ ಕಿರಿಯ ಹೆಂಡತಿ ರತ್ನಾಜಿ ಮೋಹಿಸಿದಳು. ಧರ್ಮಭೀರುವಾದ ರಾಜಕುಮಾರ ಆಕೆಗೆ ದಕ್ಕಲಿಲ್ಲ. ತನ್ನನ್ನು ಕೆಣಕಿದನೆಂದು ಆ ರಾಣಿ ರಾಜನಲ್ಲಿ ದೂರು ಹೇಳಿದಳು. ರಾಜ

ಕನ್ನಡದಲ್ಲಿ ಬಹಳ ವಿರಳ. ಕಾವ್ಯದ ಮೊದಲ ೨೨ ಆಶ್ವಾಸಗಳಲ್ಲಿ ಹೊಯ್ಸಳ, ಬಲ್ಲಾಳ, ಕಾಕತೀಯ ಮೊದಲಾದ ರಾಜರಿಗೂ ಕಂಪರಾಜನಿಗೂ ನಡೆದ ಯುದ್ಧಗಳ ವರ್ಣನೆಯಿದೆ; ಅಲ್ಲಿಂದ ಮುಂದೆ ದಿಲ್ಲಿಯ ಸುಲ್ತಾನನಿಗೂ ಕುಮಾರರಾಮನಿಗೂ ನಡೆದ ಯುದ್ಧಗಳ ವರ್ಣನೆಯಿದೆ. ಇವು ಆ ಕಾಲದ ಇತಿಹಾಸದ ಮೇಲೆ ಅಮೂಲ್ಯವಾದ ಬೆಳಕನ್ನು ಚೆಲ್ಲುತ್ತದೆ. ಅಂದಿನ ಜನಜೀವನದ ಚಿತ್ರಣವೂ ಅಲ್ಲಲ್ಲಿ ಮಿಂಚಿ, ಕಾವ್ಯದ ಬೆಲೆಯನ್ನು ಹೆಚ್ಚಿಸಿದೆ.

ಕುಮಾರರಾಮನ ಕಥೆ ಅತ್ಯಂತ ಜನಪ್ರಿಯವಾದುದು. ಪಾಂಚಾಳಗಂಗ, ನಾಗಸಂಗಯ್ಯ, ಮಹಾಲಿಂಗಸ್ವಾಮಿ, ಕವಿಜಾಣಗಂಗಯ್ಯ, ಮತ್ತೊಬ್ಬಗಂಗ ಕವಿ ಇತ್ಯಾದಿ ಹಲವಾರು ಕವಿಗಳು ಆತನನ್ನು ಕುರಿತು ಕಾವ್ಯಗಳನ್ನು ಬರೆದಿರುವುದಲ್ಲದೆ ಯಕ್ಷಗಾನಗಳು ಹಲವಾರು ಹುಟ್ಟಿಕೊಂಡಿವೆ. ತೆಲುಗು ತಮಿಳುಗಳಲ್ಲಿಯೂ ಈ ಕಥೆ ಪ್ರಚಾರವಾಗಿದೆಯಂತೆ ! ಕನ್ನಡದಲ್ಲಿ ಕಾವ್ಯ ರಚನೆ ಮಾಡಿರುವವರಲ್ಲಿ ನಂಜುಂಡ ಅಗ್ರಗಣ್ಯ. ಆತನನ್ನು ಬಿಟ್ಟರೆ ಗಂಗನ 'ಚೆನ್ನರಾಮನ ಸಾಂಗತ್ಯ' ಅತ್ಯಂತ ಸುಂದರವಾದುದು. ಈತನ ಕೃತಿ ಐತಿಹಾಸಿಕ ದೃಷ್ಟಿಯಿಂದ ಹೆಚ್ಚು ವಾಸ್ತವಿಕವಾಗಿಯೂ ಆತ್ಮೀಯವಾಗಿಯೂ ಇದೆಯೆಂದು ತಿಳಿದುಬರುತ್ತದೆ. ಈತನ ಕಾಲ ಕ್ರಿ.ಶ. ೧೬೬೦ ಎಂದು ಕವಿ ಚರಿತೆಕಾರರ ಹೇಳಿಕೆ. ಈ ವೇಳೆಗೆ ಪುರಾಣದಲ್ಲಿ ಇತಿಹಾಸವನ್ನು ಹುಡುಕುವ ಕಾರ್ಯ ನಡೆಯಿತೆಂದು ತೋರುತ್ತದೆ.

೧೬. ಚೇರಮಾಂಕ (೧೫೨೬)

ಈತನು ವಾರ್ಧಕಷಟ್ಪದಿಯ ೫೫೫ ಪದ್ಯಗಳಲ್ಲಿ 'ಚೇರುಮಕಾವ್ಯ'ವನ್ನು ಬರೆದಿದ್ದಾನೆ. ಈತನು ರಾಜ ಪೂಜ್ಯನಾದ ಗಂಗಪ್ಪಸೆಟ್ಟಿಯ ಮಗ, ಚೆನ್ನ ವೀರೇಶನ ಶಿಷ್ಯ. ಗುಬ್ಬಿಯ ಮಲ್ಲಣಾರ್ಯನ ಕೃಪೆಯಿಂದ ಕಾವ್ಯರಚನೆ ಮಾಡಿದನಂತೆ ! ಪೂರ್ವಕವಿಸ್ತವಾವರದಲ್ಲಿ ವಾಲ್ಮೀಕಿಯನ್ನೂ ಸ್ತುತಿಸಿದ್ದಾನೆ; ಸೌಂದರನಂಬಿಯ ಸಮಾಕಾಲೀನನಾದ ಚೇರಮನು ನಂಬಿಯೊಡನೆ ಕೈಲಾಸಕ್ಕೆ ಹೋದದು ಈ ಕಾವ್ಯದ ಕಥಾವಸ್ತು. ಕವಿ ತನ್ನನ್ನು 'ನವರಸಭಾವಲಕ್ಷಣ ನಿಪುಣ'ನೆಂದು ಕರೆದುಕೊಂಡಿದ್ದಾನೆ. ಈತನ ಮಳೆಯ ವರ್ಣನೆಯಿದು.

ಬೇಸಗೆಯ ಬಿಸಿಲುರಿಗೆ ಬಾಯಾರಿ ಮೇಘವಂ
ದಾ ಸಮುದ್ರೋದಕವನತಿ ತೃಷ್ಣೆಯಿಂ ಕೊಂಡ
ದೋಸದೆ ಜಲೋದರದ ರೋಗವಾಗಲ್ಕೊಂದು ಮೊಳಗೆಂಬ ಮೊರೆಯನಿಡಲು ।
ಆಸುರದೆ ಕಾರೆಂಬ ವೈದ್ಯಾನಾ ಮಿಂಚೆಂ
ಭಾಸುರದ ಶಸ್ತ್ರಮುಮನಲ್ಲಲ್ಲಗಿಡೆ ಪೊಳೆದು
ಸೂಸತಿಹ ರಕ್ತ ಕಣವೊಗುವ ನೀರೆನಲೀಂದ್ರ ಗೋಪದೊಳ್ ಮಳೆ ಕರೆದವು ॥

ಈತನ ಪದ್ಯಗಳನ್ನು ಓದುತ್ತಿದ್ದರೆ ಲಕ್ಷ್ಮೀಶನ ನೆನಪಾಗುತ್ತದೆ. ಕುವಲಯಾನಂದದ ಕರ್ತೃ ಜಾಯೇಂದ್ರನು ಈತನ ಪದ್ಯಗಳನ್ನು ಉದಾಹರಿಸಿರುವುದು ಈತನ ಕಾವ್ಯ ಕೌಶಲ್ಯಕ್ಕೆ ಒಂದು ಹಿರಿಯ ಸಾಕ್ಷಿ. ಈತನು ಒಳ್ಳೆಯ ಕವಿ.

೧೭. ವೀರಭದ್ರಕವಿ (ಕ್ರಿ.ಶ. ೧೫೩೦)

'ತ್ರಿಭುವನತಿಲಕ'ವೆಂಬ ಹೆಸರಿನಿಂದ ಚೇರಮಾಂಕನ ಕಥೆಯನ್ನು ಸಾಂಗತ್ಯದಲ್ಲಿ ಬರೆದ ವಿರುಪರಾಜನ ಮಗ ವೀರಭದ್ರಕವಿ. 'ವೀರಭದ್ರವಿಜಯ'ವೆಂಬ ಚಂಪೂ ಕಾವ್ಯವನ್ನೂ 'ಪಾರ್ವತೀವಲ್ಲಭ ಶತಕ', 'ಉಮಾಮಹೇಶ್ವರ ಶತಕ', 'ಪ್ರಾಣನಾಥ ಶತಕ', 'ಶ್ರೀಕಂಠಸೋಮೇಶ್ವರ

ತೂಗಿ ಅದು ಮೇಲಕ್ಕೆ ಹೋಯಿತಂತೆ ! ಕವಿಯ ದೇಶಾಭಿಮಾನ ಹೊಗಳತಕ್ಕದ್ದು. ಆತನ ವರ್ಣನೆಗಳಲ್ಲಿ ನೂತನತೆಯೂ ಇದೆ. ಆದರೆ ವರ್ಣನೆ ಅತಿಯಾಯಿತು. ಈತನ ಆರು ಸಹಸ್ರ ಸ್ವಾಗತಪದ್ಯಗಳು ಕಾವ್ಯದ ಮಹತ್ತಿಗೆ ಲೋಪವಾಗದಂತೆ ಅದರ ಅರ್ಧಕ್ಕೆ ಭಟ್ಟಿ ಇಳಿಯಬಹುದಾಗಿತ್ತೆಂದು ತೋರುತ್ತದೆ.

'ಕುಮಾರರಾಮನಸಾಂಗತ್ಯ' ಧಾರಿಣಿಗೆ ಮೆಚ್ಚಿಗೆಯಾದುದು 'ವೀರತೆ, ಶುಚಿತೆಯೆಂಬೆರಡು ಗುಣಂಗಳ ಮೇರೆಯ ಮೀರದೆ ನಡೆದ ವೀರರಾಮನ ಚಾರುಚರಿತೆ' ಯಾದುದರಿಂದ, ನಾಯಕನ ವೀರತೆಗಾಗಿ ಕಾವ್ಯದ ಅರ್ಧಕ್ಕೂ ಹೆಚ್ಚು ಭಾಗ ಮೀಸಲಾಗಿದೆ. ವೀರರಸಕ್ಕೆ ಹೊಂದಿಕೆಯಾಗದ ಸಾಂಗತ್ಯದಲ್ಲಿಯೂ ವೀರಭಾವವನ್ನು ಅಭಿವ್ಯಕ್ತಿಗೊಳಿಸಬಲ್ಲ ಪ್ರತಿಭೆ ಕವಿಯದು. ಕಾಕತಿರುದ್ರನು ದಂಡೆತ್ತಿ ಬಂದನೆಂದು ಕೇಳಿದ ಕಂಪರಾಜನು,

ಮೀಸೆ ಕುಣಿಯೆ ಮೆಯ್ಯ ರೋಮ ಕಾರಿದೆ ಕಣ್ಣು । ಸೂಸೆ ಕಿಡಿಯೆ ಮೊಗಹೊಗೆಯ
ಘಾಸಿಯಾಗಲು ಗಂಟನಿಂ ಪುರ್ಬು ನೃಪಕ । ಟ್ಟಾಸುರವನು ತಾಳಿದನು
ಕುಮಾರರಾಮನು ಅವರ ಅಗಾಧ ಸೇನೆಯನ್ನು ಕಂಡು 'ಅಡವಿಯೆಷ್ಟು ಕಿಡಿಯೆಷ್ಟು ?
ಆನೆಯೆಷ್ಟು ಸಿಂಹವೆಷ್ಟು? ಕಡಲೆಷ್ಟು ಬಡಬಾನಿಲವೆಷ್ಟು ?'
ಹದ್ದು ಕಾಗೇಗಳಿಗೀ ಬಲವನೆಲ್ಲವ ರಾಯ । ಬಿರ್ದಿಕ್ಕುವೆನು ಮುಂಡಗಳನು,
ಎದ್ದಾಡಿಸುವನು ರಣದೋಳೀ ರುದ್ರನ । ಗೆದ್ದು ತೋರುವೆನು ಚಿತ್ತೈಸು
ಎಂದು ಹೇಳಿ, 'ಹೊಕ್ಕನು ರಾಯನ ಫೌಜನು'—
ಇರಿವುತ, ತರಿವುತ, ಕೊರೆವುತ, ಜೆರೆವುತ ನೆರೆಗಲಿಗಳು ಬೆಂಬೆತ್ತಿ
ಸೆರೆವಿಡಿದುದು ಮಂದಿ ಕುದುರೆಯೆಲ್ಲವ ತೀರ ಮುರಿದುದು ರುದ್ರನ ಸೇನೆ

ಕವಿಯು ಯುದ್ಧವಿದ್ಯೆಯಲ್ಲಿ ಪರಿಣತನೆಂದು ತೋರುತ್ತದೆ. ಅದೆಷ್ಟು ಆಯುಧಗಳ, ಯುದ್ಧೋಪಕರಣಗಳ ಹೆಸರು ಹೇಳುತ್ತಾನೆ ! ಅದೆಷ್ಟು ಮೈದುಂಬಿ ಯುದ್ಧವನ್ನು ವರ್ಣಿಸುತ್ತಾನೆ ! ಪ್ರಾಚೀನ ಕಾಲದ ನಮ್ಮ ಯುದ್ಧದ ರುದ್ರ ಚಿತ್ರವೊಂದನ್ನು ಕಣ್ಣಿಗೆ ಕಟ್ಟುವಂತೆ ವರ್ಣಿಸಿದ್ದಾನೆ.

ಕಥಾನಾಯಕನ ಹಿರಿಮೆಯ ಮತ್ತೊಂದು ಮುಖವಾದ ಶೌಚಗುಣವನ್ನೂ ಅದಕ್ಕೆ ಉಪಷ್ಟಂಬಕವಾದ ರತ್ನಾಜಿಯ ಪ್ರಣಯಪ್ರಸಂಗವನ್ನೂ ಕವಿ ಹೃದಯಂಗಮವಾಗಿ ಚಿತ್ರಿಸಿದ್ದಾನೆ. ಕವಿಗೆ ತನ್ನ ನಾಯಕನಲ್ಲಿರುವ ಈ ಗುಣಕ್ಕಾಗಿಯೆ ಅಪಾರವಾದ ಗೌರವ ಭಕ್ತಿ.

ಆವ ಕುಲದಲಿ ಪುಟ್ಟಲಿ ಪರವೆಣ್ಣಳ । ಭಾವಿಸನಾವನವನಿಗೆ
ದೇವರು ಸರಿಯಲ, ನರಪಶುಗಳೆ ಬಲು । ದಾವಣಿಯವನೆ ಕೇಳುವನು

ಎಂಬುದು ಕವಿಯ ಭಾವನೆ. ಕುಮಾರರಾಮನನ್ನು ಕಾಮಿಸಿದ ರತ್ನಾಜಿ ದಿವ್ಯಸುಂದರಿ, ಜನರ ಕಣ್ಣುಗಳು ಅವಳ ಲಾವಣ್ಯದಲ್ಲಿ ಓಲಾಡಿದಂತೆ ! ಅವಳನ್ನು ಸಖಿಯರು 'ಬೆದರಿದ ಹುಲ್ಲೆಗಣ್ಣ ಬೆಡಂಗಿ', 'ಮೀಟಿನ ಪೆಣ್ಗಳ ಬೈತಲೆಯೆಳೆಮುತ್ತು', 'ಎಳೆವಳ್ಳಿಯಂತೆಸೆವ ಮೈಯವಳು' ಮುಂತಾಗಿ ಬಣ್ಣಿಸಿವುದು ಅವಳ ಸೌಂದರ್ಯಕ್ಕೆ ಹಿಡಿದ ಸೊಡರಿನಂತಿವೆ. ಅವಳು ಕುಮಾರರಾಮನನ್ನು ಕಂಡು, ಕಣ್ಣುಗಳಿಂದ ಅವನನ್ನು ತನ್ನಲ್ಲಿ ಹೊಗಿಸಿಕೊಂಡವಳು. ಮತ್ತೆ ಅವ ಹೊರಗೆ ಹೋಗದಂತೆ ದಟ್ಟವಾದ ತನ್ನ ಎವೆಗಳೆಂಬ ಬಾಗಿಲುಗಳನ್ನು ಮುಚ್ಚಿಬಿಟ್ಟಳಂತೆ, ವಿವೇಕದ ಕಣ್ಣನ್ನೂ ಮುಚ್ಚಿದಳು; ದುರಂತಕ್ಕೆ ಕಾರಣಳಾದಳು. ವಸ್ತು, ಪಾತ್ರ, ರಸ – ಈ ಮೂರು ದೃಷ್ಟಿಗಳಿಂದಲೂ 'ಕುಮಾರರಾಮನ ಸಾಂಗತ್ಯ' ಮನೋಹರವಾಗಿದೆ. ಇದಕ್ಕೂ ಹೆಚ್ಚಾಗಿ ಇದೊಂದು ಐತಿಹಾಸಿಕ ಕಾವ್ಯ. ಇಂತಹ ಕಾವ್ಯಗಳು

ಮಹತ್ವವನ್ನು ಪಡೆದಿದೆ. ಬಸವಾದಿ ಪ್ರಮಥರು ಕಾಲವಾದ ಮೇಲೆ ವೀರಶೈವ ಖಿಲವಾಗಲು, ಅದನ್ನು ಉದ್ಧರಿಸುವುದಕ್ಕಾಗಿ ಪರಶಿವನು ಕಾಲಸಂಹಾರನೆಂಬ ಗಣೇಶ್ವರನನ್ನು ಮರ್ತ್ಯಕ್ಕೆ ಕಳುಹಿಸಿದ. ಆತನು ಆಂಧ್ರದೇಶದ ಸಂಗಮರಾಜ – ಹೈಮಾವತಿಯೆಂಬ ರಾಜದಂಪತಿಗಳ ಮಗನಾಗಿ ಭೈರವರಾಜನೆಂಬ ಹೆಸರಿನಿಂದ ಹುಟ್ಟಿ ಪೌರಾಣಿಕನಿಂದ ಶಿವಶರಣರ ಕಥೆಗಳನ್ನು ಕೇಳಿ, ತಾನೂ ಶಿವಭಕ್ತನಾದ. ಒಮ್ಮೆ ಶಿವನು ಈತನ ಕನಸಿನಲ್ಲಿ ಕಾಣಿಸಿಕೊಂಡು, ಮಲ್ಲಿಪಟ್ಟಣದ ಗುರುಕರುಣೆಯನ್ನು ಪಡೆದು, ಸಾಸಲಿನಲ್ಲಿ ಸೋಮೇಶ್ವರನನ್ನು ಪೂಜಿಸಿದರೆ ನಿತ್ಯಾನಂದವನ್ನು ಕರುಣಿಸುವುದಾಗಿ ಹೇಳಿದ. ಭೈರವರಾಜನು ಹಾಗೆಯೆ ಮಾಡಿ, ಅನೇಕ ಪವಾಡಗಳನ್ನು ಮೆರೆದು ಕೈಲಾಸವನ್ನು ಪಡೆದ. ಇದು ಇಲ್ಲಿಯ ಕಥೆ. ಭಕ್ತಿಗಿಂತ ಪವಾಡವೇ ಇಲ್ಲಿ ಪ್ರಮುಖವಾಗಿದೆ. ಕಾವ್ಯದ ಓಟ ನಿರರ್ಗಳ, ಶೈಲಿ ಸರಳ, ವರ್ಣನೆ ಸುಂದರ. ೧೭ನೆಯ ಶತಮಾನದ ಉತ್ತರಾರ್ಧದಲ್ಲಿದ್ದ ಶಾಂತಲಿಂಗದೇಶಿಕನು ಈ ಕಾವ್ಯಕ್ಕೆ ವಿವರಣಾತ್ಮಕವಾದ 'ಭೈರವೇಶ್ವರನ ಕಥಾಸೂತ್ರರತ್ನಾಕರ'ವನ್ನು ಗದ್ಯದಲ್ಲಿ ಬರೆದಿದ್ದಾನೆ.

೨. ವಿರಕ್ತ ತೋಂಟದಾರ್ಯ (ಕ್ರಿ.ಶ. ೧೫೬೦)

'ಷಟ್‌ಸ್ಥಲಾಚಾರಸಂಪನ್ನ', 'ಗುರುನಿರಂಜನಲಿಂಗಪದಕಮಲಸೌರಭಾಸಕ್ತ ಷಟ್ಪದಿ', ಶೈವಪಂಚಾಕ್ಷರೀಮಂತ್ರಹೃದಯ', 'ಅಖಿಲಶಾಸ್ತ್ರಾರ್ಥಕೋವಿದ' ಇತ್ಯಾದಿಯಾಗಿ ತನ್ನನ್ನು ಸಂಭಾವಿಸಿಕೊಂಡಿದ್ದಾನೆ. ವಿರಕ್ತ ತೋಂಟದಾರ್ಯ, ಈತನ ಗುರು ಪರ್ವತೇಂದ್ರ, ತೋಂಟದ ಸಿದ್ಧಲಿಂಗಯತಿಯ ಪೀಳಿಗೆಗೆ ಸೇರಿದ ಗೂಳೂರು ಸಿದ್ಧವೀರೇಶ್ವರನ ದಯಾಪಾತ್ರ ಈತ. ಈತನು ಪೂರ್ವಕವಿಗಳಲ್ಲಿ ಪಾಲ್ಕುರಿಕೆ ಸೋಮ, ಪದ್ಮರಸ, ಹರಿಹರದೇವ ಮೊದಲಾದವರನ್ನು ತನ್ನ ಕಾವ್ಯಗಳಲ್ಲಿ ಸ್ಮರಿಸಿದ್ದಾನೆ.

೨೧. ಶಾಂತೇಶ (ಕ್ರಿ.ಶ. ೧೫೬೧)

ಗುಬ್ಬಿಯ ಮಲ್ಲಣಾರ್ಯನ ಮಗನಾದ ಈತನು ಭಾಮಿನಿಷಟ್ಪದಿಯ ೬೭೧ ಪದ್ಯಗಳನ್ನೂ ೪೨೦ ಗ್ರಂಥಗಳನ್ನೂ ಒಳಗೊಂಡ 'ಸಿದ್ಧೇಶ್ವರಪುರಾಣ'ವನ್ನು ಬರೆದಿದ್ದಾನೆ. ತೋಂಟದಸಿದ್ಧಲಿಂಗಯತಿಯು ಶಿವಗಂಗೆಗೆ ಬಂದು ಕೆಗ್ಗೆರೆಯ ಸಮೀಪದಲ್ಲಿರುವ ನಾಗಿಣೀ ನದಿಯ ತೀರ ತೋಟದಲ್ಲಿ ಶಿವಯೋಗದಲ್ಲಿದ್ದಾಗ ತನ್ನ ಶಿಷ್ಯನಾದ ಚಂದ್ರಶೇಖರನಿಗೆ ಭುವನಕೋಶ, ಧರ್ಮಾಧರ್ಮವಿಚಾರ, ಶಿವನ ಪಂಚವಿಂಶತಿಲೀಲೆಗಳು, ಷಟ್‌ಸ್ಥಲಕ್ರಮ ಇತ್ಯಾದಿಗಳನ್ನು ಬೋಧಿಸಿದನಂತೆ. ಅದನ್ನು ಕಾವ್ಯ ರೂಪದಲ್ಲಿ ಬರೆಯುವಂತೆ ಆ ಶಿಷ್ಯ ಶಾಂತೇಶನನ್ನು ಕೇಳಿಕೊಂಡನಂತೆ. ಶಾಂತೇಶ ಅದರಂತೆ ಬರೆದನಂತೆ ! ವೀರಶೈವಧರ್ಮದ ವಿಚಾರದಲ್ಲಿ ತಂದೆಗಿಂತ ಹೆಚ್ಚಾಗಿಯೇನೂ ಮಗ ಬರೆದಿಲ್ಲ. ಕಾವ್ಯದಲ್ಲಿ ಅಲ್ಲಲ್ಲೆ ಯುವಕ ನಿರೋಷ್ಠ ಇತ್ಯಾದಿ ಶಬ್ದಾಲಂಕಾರಗಳು ಕಾಣಿಸಿಕೊಂಡು ಕವಿಯ ಪಾಂಡಿತ್ಯವನ್ನು ದಿಗ್ದರ್ಶಿಸುತ್ತದೆ. ಈತನ ಷಟ್ಪದಿಗಳು ನಾದಮಯವಾಗಿ ನಿರರ್ಗಳವಾಗಿ ಹರಿಯುತ್ತವೆ. ಇದೊಂದು ವನದ ವರ್ಣನೆ–

ತಿಳಿಗೊಳಂಗನ ನಡುವೆ ಮೂಡಿದ। ನಳಿವ ಕೈರವಕೆರಗಿ ಝೇಂಕರಿ
ಪಳಿಕಳಿಂದಂ ಜಕ್ಕವಕ್ಕಿಯ ತೆಕ್ಕೆಯಿಂ ಮತ್ತೆ
ಬಳಸಿ ತೋರುವ ಮಾಮರಂಗಳೊ। ರಳೆಳಸಿ ಕೂಗುವ ಪಿಕನಿಕರದಿಂ
ಗಿಳಿಯ ಸವಿನುಡಿಯಿಂದ ವನವಂತಲ್ಲಿ ರಾಜಿಪುದು

ಇದು ಈತನ ಶೈಲಿಯ ಸ್ವರೂಪ. ಸಮಭೂಮಿಯಲ್ಲಿ ಹರಿಯುತ್ತಿರುವ ಒಂದು ಕಿರುಹೊಳೆ, ಈತನ ಕವಿತೆ.

ಶತಕ', 'ಕಂದಶತಕ' ಎಂಬ ಐದು ಶತಕಗಳನ್ನು ಬರೆದಿದ್ದಾನೆ. 'ವೀರಭದ್ರವಿಜಯ'ದಲ್ಲಿ ದಕ್ಷಯಜ್ಞ ಧ್ವಂಸದ ಕಥೆಯಿದೆ. ಇದರ ಜೊತೆಗೆ ಶಿವನು ಶರಭಾವತಾರ ತಾಳಿ ನರಸಿಂಹನನ್ನು ಅನುಗ್ರಹಿಸಿದ ಕಥೆಯೂ ಇದೆ. ಇದು 'ನವರಸ ಭರಿತ ನವ್ಯ ಕಾವ್ಯಂ ದಿವ್ಯಂ' ಎಂದು ಕವಿಯ ಹೇಳಿಕೆ. ಕಾವ್ಯದ ಮೊದಲ ಆರು ಸಂಧಿಗಳಲ್ಲಿ ಸಂಪ್ರದಾಯದ ವರ್ಣನೆಗಳು ತುಂಬಿದೆ. ಕಾವ್ಯ ಶೈಲಿ ಲಲಿತವಾಗಿ ನಿರರ್ಗಳವಾಗಿದೆಯಾದರೂ ಮಹತ್ತಾದ ಕಾವ್ಯಗುಣಗಳೇನೂ ಇಲ್ಲ. ವರ್ಣನೆಯಲ್ಲಿ ನೂತನತೆಯೇನೂ ಇಲ್ಲ; ಕೇವಲ ಕವಿಸಮಯಾನುಸಾರಿ, ಅಷ್ಟೆ ಸಾಕಷ್ಟು ಶ್ಲೇಷೆ, ವಿರೋಧಾಭಾಸದಿ ಶಬ್ದಾಲಂಕಾರಗಳಿವೆ. ಕಿರಾತಸ್ತ್ರೀಯನ್ನು ವರ್ಣಿಸುತ್ತ ನಡೆಗರಸಂಚೆಯಂ ಸರಕೆ ಕೊರಲಮಂ ಪೋಲ್ತ ಕಿರಾತ ನಿತಂಬಿನೀಜನಂ' ಎಂದು ವರ್ಣಿಸಿದರೆ ಸಮುದ್ರವನ್ನು ಅನಿಮಿಷವೃಂದದಿಂ ಸುರನಿವಾಸವೊಲ್ ವಿದ್ರುಮಂಗಳಿಂ ವನದವೊಲ್ ಇತ್ಯಾದಿ ಶ್ಲೇಷೆಯೊಡನೆ ಚರ್ವಿತಚರ್ವಣವನ್ನು ತಂದಿದ್ದಾನೆ.

೧೮. ಗುರುಲಿಂಗವಿಭು (ಕ್ರಿ.ಶ. ೧೫೫೦)

'ವಸ್ತು ಕವೀಂದ್ರ ವರ್ಣಕೇವಿಶ್ವರರ ಕರ್ಣಾಭರಣ' ಎಂದು ತನ್ನನ್ನು ಸಂಭಾವಿಸಿಕೊಂಡಿರುವ ಈ ಕವಿ 'ಭೀಕ್ಷಾಟನಚರಿತೆ'ಯನ್ನು ವಾರ್ಧಕಷಟ್ಪದಿಯ ೧೫೫ ಪದ್ಯಗಳಲ್ಲಿ ಅಳವಡಿಸಿ ಬರೆದಿದ್ದಾನೆ. ಶಿವನು ದ್ವಾರಕೆಗೆ ಹೋಗಿ ತನ್ನ ಅಜಕಪಾಲವನ್ನು ತುಂಬುವಂತೆ ಶ್ರೀಕೃಷ್ಣನಲ್ಲಿ ಭಿಕ್ಷೆಯನ್ನು ಬೇಡಲು, ಆತ ತನ್ನ ತಲೆಯ ರಕ್ತದಿಂದ ಅದನ್ನು ತುಂಬಲಾರದೆ, ಮಹಾಭಾರತ ಯುದ್ಧವನ್ನು ನಡೆಸಿ, ಅಲ್ಲಿನ ರಕ್ತಪ್ರವಾಹದಿಂದ ಶಿವನ ಭಿಕ್ಷಾಪಾತ್ರೆಯನ್ನು ತುಂಬಿರುವುದು ಈ ಕಾವ್ಯದ ಕಥಾವಸ್ತು. ಹಿಂದೆ ಸೂತಮುನಿಯು ಸನಕಾದಿಗಳಿಗೆ ಹೇಳಿದ ಕಥೆಯನ್ನು ತಾನೀಗ ಹೇಳುತ್ತಿರುವುದಾಗಿ ಕವಿಯು ತಿಳಿಸುತ್ತಾನೆ. ಆಶು, ಮಧುರಂ. ಚಿತ್ರ, ವಿಸ್ತಾರ – ಎಂಬ ನಾಲ್ಕು ಬಗೆಯ ಕಾವ್ಯಸೃಷ್ಟಿಯಲ್ಲಿ ಕವಿ ಪ್ರವೀಣನಾಗಿದ್ದನಂತೆ ! ತನ್ನ ಕಾವ್ಯ 'ರಸಿಕರ ಹೃದಯ ಎಂಬ ರಂಗಮಧ್ಯದೊಳು ನರ್ತಿಸುವ ನಚ್ಚಣಿಯಂತೆ, 'ರಸಿಕರಾಭರಣ'ವಂತೆ ! ಹೆಸರು ಹಾಲಯ್ಯ, ನೆರೆದುಂಬುದಂಬಿಲವೆಂದು ಉಸಿರುವರ ಗಾದೆಯಂತಲ್ಲವೆನ್ನೀ ಕೃತಿಯ ಹೆಸರು' ಎಂದು ಹೇಳಿ, ಹೆಸರಿಗೆ ಅನುರೂಪವಲ್ಲದ ಕೃತಿಗಳನ್ನು ಮಾರ್ಮಿಕವಾಗಿ ಟೀಕಿಸಿದ್ದಾನೆ. ಈತನ ಪುಟ್ಟಕಾವ್ಯ ಚಮತ್ಕಾರಯುಕ್ತವಾಗಿ, ಅಲಂಕಾರಮಯವಾಗಿರುವ ಲಘುಕಾವ್ಯ. ತನ್ನ ಕಥೆಯನು ಅನವಶ್ಯಕವಾಗಿ ಲಂಬಿಸದೆ, ಉಚಿತವಲ್ಲದ ವರ್ಣನೆಗಳಿಂದ ಭಾರಗೊಳಿಸದೆ, ನೇರವಾಗಿ ಕಥೆಯನ್ನು ಹೇಳಿಕೊಂಡು ಹೋಗಿದ್ದಾನೆ. ಕವಿಯು ಬಹು ದೊಡ್ಡ ಪಂಡಿತ, ಅಲಂಕಾರಪ್ರಿಯ. ಸಾಕಷ್ಟು ಶ್ಲೇಷಾದಿ ಅಲಂಕಾರಗಳನ್ನು ತಂದಿದ್ದರೂ ಅವು ಕ್ಲಿಷ್ಟವಾಗಿಲ್ಲ, ಕಾವ್ಯ ನೀರಸವಾಗಿಲ್ಲ, ಇಲ್ಲಿನ ಸ್ತ್ರೀಯರು ಶಿವನಿಗೆ ಭಿಕ್ಷವನ್ನು ನೀಡುವ ಸಂದರ್ಭದಲ್ಲಿ ಸ್ವಲ್ಪಮಟ್ಟಿಗೆ ಅತಿಯೆಂಬಂತೆ ಶೃಂಗಾರವನ್ನು ತಂದಿದ್ದರೂ, ಅದು ರೊಚ್ಚೆಯಾಗಿಲ್ಲ; ಇಲ್ಲಿ ಶ್ಲೇಷೆ ಜನಸಾಮಾನ್ಯರಿಗೆ ಸ್ವಲ್ಪ ಕಷ್ಟವಾಗಬಹುದೆಂದೊ ಏನೊ, ಈ ಗ್ರಂಥಕ್ಕೊಂದು ಕನ್ನಡ ವ್ಯಾಖ್ಯಾನ ಹುಟ್ಟಿಕೊಂಡಿದೆ.

೧೬. ಕಿಕ್ಕೇರಿಯಾರಾಧ್ಯ ನಂಜುಂಡ (ಕ್ರಿ.ಶ. ೧೫೫೦)

ಈತನು ಐದು ಸಂಧಿಗಳಲ್ಲಿ ಹಬ್ಬಿರುವ ೧೨೭ ಸಾಂಗತ್ಯಪದ್ಯಗಳ ಪುಟ್ಟ ಕಾವ್ಯ 'ಭೈರವೇಶ್ವರ ಕಾವ್ಯ'ವನ್ನು ರಚಿಸಿದ್ದಾನೆ. ವೀರಶೈವ ಪುರಾಣವೊಂದನ್ನು ಸಾಂಗತ್ಯದಲ್ಲಿ ಬರೆದ ವೀರಶೈವ ಕವಿಗಳಲ್ಲಿ ಈತ ಅಗ್ರಗಣ್ಯ. ಈತನ ಸ್ಥಳ ಕಿಕ್ಕೇರಿಯಾದ್ದರಿಂದ ಈತನಿಗೆ ಕಿಕ್ಕೇರಿಯಾರಾಧ್ಯ ನಂಜುಂಡ ಎಂಬ ಹೆಸರು ಬಂದಿದೆ. ತನ್ನ ಕಾವ್ಯವು 'ಭಕ್ತಿಯ ತಾಣ, ಸನ್ಮುಕ್ತಿಯ ಸದನ, ವಿರಕ್ತಿಯ ಸೀಮೆ' ಇತ್ಯಾದಿಯಾಗಿ ಕವಿ ಹೇಳಿಕೊಂಡ್ಡಿದಾನೆ. ಕಾವ್ಯ ದೃಷ್ಟಿಗಿಂತಲೂ ಪುರಾಣದೃಷ್ಟಿಯಿಂದ ಇದು

ಕೇಳುವುದಕ್ಕಿಂತ ಹೆಚ್ಚು ಶ್ರದ್ಧೆಯಿಂದ, ಭಕ್ತಿಯಿಂದ ಜನ ಇದನ್ನು ಕೇಳುತ್ತಾರೆ. ಇದು ನಿಜ; ಆದರೆ ಹಾಗೆ ಕೇಳುವವರು ಇದರಲ್ಲಿನ ಧರ್ಮದೃಷ್ಟಿಯುಳ್ಳವರು ಮಾತ್ರ. ದಿ॥ ಶಿ.ಶಿ. ಬಸವನಾಳರು ಜೈಮಿನಿಭಾರತವು ಜನಪ್ರಿಯವಾಗಿರುವುದಕ್ಕೂ ಇದೇ ಕಾರಣ ಎಂದು ಸೂಚಿಸುತ್ತಾರೆ. ಇದನ್ನು ಸಂಪೂರ್ಣ ಸತ್ಯವೆಂದು ಗ್ರಹಿಸುವುದು ಕಷ್ಟ. ಚೆನ್ನಬಸವಪುರಾಣವು ಜೈಮಿನಿಭಾರತದಷ್ಟು ಜನಪ್ರಿಯವೆಂದು ಹೇಳಲಾಗದಿದ್ದರೂ, ಅದರೊಡನೆ ಹೊಯ್‌ಕಯ್ ಆಗಿ ನಿಲ್ಲಬಲ್ಲ ಕಾವ್ಯಗುಣಗಳು ಇದರಲ್ಲಿವೆ. ಪಾಂಡಿತ್ಯ, ಪ್ರತಿಭೆ, ಕಲ್ಪನಾ ಶಕ್ತಿಗಳಲ್ಲಿ ಲಕ್ಷ್ಮೀಶ ಮತ್ತು ವಿರೂಪಾಕ್ಷ ಪಂಡಿತರು ಸ್ವಲ್ಪ ಹೆಚ್ಚು ಕಡಿಮೆ ಸಮಾನರು. ಅವರ ಕಾವ್ಯಗಳಲ್ಲಿ ಭಾವಗಳು ಪರಸ್ಪರ ವಿನಿಮಯವಾಗಿರುವ ಹಲವು ಸನ್ನಿವೇಶಗಳು ಸಿಕ್ಕುತ್ತವೆ. ಯಾರಿಂದ ಯಾರು ಸ್ವೀಕರಿಸಿರುವರೆಂಬುದು ಚರ್ಚಾಸ್ಪದವಾದ ವಿಷಯ. ನುಡಿನಿರಿಗೆ, ಮಾತಿನ ಧೋರಣೆ, ಪದಲಾಲಿತ್ಯಗಳಲ್ಲಿ ಇಬ್ಬರ ಕಾವ್ಯಗಳೂ ಮನೋಜ್ಞವಾಗಿದೆ.

ವಿರೂಪಾಕ್ಷಪಂಡಿತನ ಪ್ರಕೃತಿವರ್ಣನೆ ಮನೋಹರವಾಗಿ ಹೃದಯಂಗಮವಾಗಿದೆ. ಆತನ ಕಾವ್ಯದ ಒಂಬತ್ತನೆ ಸಂಧಿಯೆಲ್ಲವೂ ಸೂರ್ಯಾಸ್ತ, ಚಂದ್ರೋದಯ, ಬೆಳದಿಂಗಳಿನ ವರ್ಣನೆಗೆ ಮೀಸಲಾಗಿದೆ. ಅಷ್ಟಾದಶ ವರ್ಣನೆಗೆಂದು ಹೊರಟ ಕವಿ ಮಾಲೆಗಾರ್ತಿಯರನ್ನು, ವೇಶ್ಯೆಯರನ್ನು ತನ್ನ ಕಾವ್ಯದಲ್ಲಿ ಹರಿಯಬಿಟ್ಟು ಸಾಕಷ್ಟು ಶೃಂಗಾರರಸನಿರೂಪಣೆಗೆ ಅವಕಾಶವನ್ನು ಕಲ್ಪಿಸಿಕೊಂಡಿದ್ದಾನೆ. ಈ ಭಾಗಗಳಲ್ಲೆಲ್ಲ ಪ್ರತಿಭೆಗಿಂತಲೂ ಉಕ್ತಿಚಾತುರ್ಯಕ್ಕೆ ಹೆಚ್ಚು ಪ್ರಾಶಸ್ತ್ಯ ದೊರಕಿದೆ. ಕವಿಯ ಕಲ್ಯಾಣವನ್ನು ವರ್ಣಿಸಿರುವ ವೈಖರಿ ಹೃದಯಂಗಮವಾಗಿದೆ, ವಿರೂಪಾಕ್ಷ ಪಂಡಿತನ ದೇಶಪ್ರೇಮ ತುಂಬುಹೊಳೆಯಾಗಿ ಹರಿದಿದೆ.

ವಿರೂಪಾಕ್ಷಪಂಡಿತನು ಪ್ರತಿಭೆ ಪಾಂಡಿತ್ಯಗಳನ್ನು ಸಮರಸವಾಗಿ ಬೆರೆಸಿ, ತನ್ನ ಕಾವ್ಯಕರ್ಮಕ್ಕೆ ಇದನ್ನು ಸಾಧನವಾಗಿ ಬಳಸುತ್ತಾನೆ. ಇದರಿಂದ ಆತನ ಕಾವ್ಯಕ್ಕೆ ಒಂದು ಹೊಳಪು ಬರುತ್ತದೆ.

೨೪. ಸಿದ್ಧನಂಜೇಶ (ಕ್ರಿ.ಶ. ೧೬೫೦)

ಈತನು 'ರಾಘವಾಂಕಚರಿತ್ರ', 'ಭಾವರತ್ನಾಭರಣ', 'ಬಸವಶತಕ', 'ಗುರುರಾಜಚಾರಿತ್ರ' ಎಂಬ ಗ್ರಂಥಗಳ ಕರ್ತೃ. ಇವುಗಳಲ್ಲಿ ಮೊದಲ ಮತ್ತು ಕಡೆಯ ಗ್ರಂಥಗಳು ಮಾತ್ರ ಉಪಲಬ್ಧವಾಗಿವೆ. 'ಭಾವಜ್ಞಸತ್ಕವಿಗಳಹುದೆನಲು' ತನ್ನ 'ರಾಘವಾಂಕಚಾರಿತ್ರ'ವನ್ನೂ 'ವೀರಮಾಹೇಶ್ವರ ಬಗೆಗೆ ಬರ್ಪಂತೆ' 'ಗುರುರಾಜಚಾರಿತ್ರ'ವನ್ನು ಬರೆಯುತ್ತಿದ್ದಾನಂತೆ ! ವಾರ್ಧಕಷಟ್ಪದಿಯಲ್ಲಿ ಇರುವ 'ರಾಘವಾಂಕಚಾರಿತ್ರ'ವು 'ರಸಿಕರ ರಸಾಯನ, ಕಬ್ಬಿಗರ ಹಬ್ಬ' ಎಂದು ಕವಿ ಹೇಳಿಕೊಂಡಿದ್ದಾನೆ, ರಾಘವಾಂಕನ ಜನನ, ಹರಿಹರನಿಂದ ದೀಕ್ಷೆ ಶಿಕ್ಷಣಗಳು, ಹರಿಶ್ಚಂದ್ರ ಕಾವ್ಯಪಠಣ, ಮಾನವನನ್ನು ಹೊಗಳಿದನೆಂದು ಹರಿಹರಕವಿ ಅವನ ಹಲ್ಲುದುರಿಸಿದುದು, ಗುರು ಹರಿಹರನಿಂದ ಅಷ್ಟಾವರಣ ಮಹಿಮೆಯನ್ನು ಅರಿತು ಸೋಮನಾಥಚರಿತೆ, ಶರಭಚಾರಿತ್ರಗಳನ್ನು ಬರೆದುದು, ಕುಮಾರವ್ಯಾಸನ ಗರ್ವಭಂಗ ಮಾಡಿ ಹರಿಹರಮಹತ್ವವನ್ನು ಬೋಧಿಸಿದುದು, ಕೆರೆಯ ಪದ್ಮರಸನ ದರ್ಶನ, ರುದ್ರಪ್ರತಾಪನ ಸಭೆಯಲ್ಲಿದ್ದ ಕವಿಗಳನ್ನು 'ವೀರೇಶಚರಿತೆ'ಯ ಮೂಲಕ ಭಂಗಿಸಿದುದು, ಬೇಲೂರಿನಲ್ಲಿ ಸಮಾಧಿಯಾದುದು ಇದರಲ್ಲಿ ವಿಸ್ತಾರವಾಗಿ ಪ್ರತಿಪಾದಿತವಾಗಿದೆ. ಹರಿಹರಮಹತ್ವವನ್ನು ವರ್ಣಿಸುವಾಗ ಹಲವು ಶರಣರ ಕಥೆಗಳೂ ಇದರಲ್ಲಿ ತೂರಿಕೊಂಡಿವೆ.

'ಗುರುರಾಜಚಾರಿತ್ರ' ಶಿವಶರಣರ ಒಂದು ಕಥಾಕೋಶ; ನೂರಾರು ಜನ ನೂತನ ಮತ್ತು ಪುರಾತನ ಕಥೆಗಳಿಂದ ಇದು ನಿಬಿಡವಾಗಿದೆ. ತನ್ನ ಗುರು ಸಿದ್ಧನಂಜೇಶನು ತನ್ನ ಮಡದಿ ಚೆನ್ನವೀರಾಂಬೆಗೆ ಹೇಳಿದ ಕಥೆಗಳನ್ನೇ ತಾನು ಕಾವ್ಯ ರೂಪವಾಗಿ ಬರೆಯುತ್ತಿರುವೆನೆಂದು ಕವಿ ಹೇಳಿಕೊಂಡಿದ್ದಾನೆ. ಕಾವ್ಯದ

೨೨. ಅದೃಶ್ಯ ಕವಿ (ಕ್ರಿ.ಶ. ೧೫೮೦)

ವಿದ್ಯಾನಗರದ ರಾಜ ಪ್ರೌಢರಾಯನಿಗೆ ಆತನ ಮಂತ್ರಿ ಜಕ್ಕಣಾರ್ಯನು ಹೇಳಿದ ಅನೇಕ ಶಿವಶರಣರ ಕಥೆಗಳನ್ನು ಕೇಳಿದ ಅದೃಶ್ಯಕವಿ. ಆ ಕಥೆಗಳ ಸಾರವನ್ನು 'ಕಾವ್ಯರೂಪವಾಗಿ ಬರೆದು ಅದಕ್ಕೆ ಪ್ರೌಢರಾಯನ ಕಾವ್ಯ' ಎಂದು ನಾಮಕರಣ ಮಾಡಿದ್ದಾನೆ. ಇದರಲ್ಲಿ ಹೇಳಿಕೊಳ್ಳುವಂತಹ ಕಾವ್ಯಗುಣಗಳೇನೂ ಇಲ್ಲ. ವೀರಶೈವ ಶರಣರ ಕಥೆಗಳನ್ನು ನೋಡಹೊರಡುವವರಿಗೆ ಇಲ್ಲಿ ವಸ್ತು ಇದೆ. ಪ್ರೌಢರಾಯನ ಕಾಲದ ಸಾಹಿತ್ಯೇತಿಹಾಸದ ಮೇಲೂ ಇಲ್ಲಿ ಸ್ವಲ್ಪ ಬೆಳಕು ಬಿದ್ದಿದೆ. ಕಂದಾಳ ಪೆದ್ದಯ್ಯಾಚಾರ್ಯನು ಭಾರತಕ್ಕೆ ಮೆರವಣಿಗೆ ಮಾಡಿಸಿದ್ದು, ಜಕ್ಕಣಾರ್ಯ ಏಕೋತ್ತರಶತಕಸ್ಥಲ ಬರೆದು ನೂರೊಂದು ವಿರಕ್ತರ ಮೂಲಕ ಅದಕ್ಕೆ ಮೆರವಣಿಗೆ ಮಾಡಿಸಿದ್ದು, ಮುಕುಂದಪೆದ್ದಿ ಜಕ್ಕಣರ ವಾಗ್ವಾದ, ಚಾಮರಸ ಪ್ರಭುಲಿಂಗಲೀಲೆಯನ್ನು ಬರೆದಷ್ಟು, ಜಕ್ಕಣಾರ್ಯ ಅದಕ್ಕೆ ರಾಜನ ಬಳಿ ವ್ಯಾಖ್ಯಾನ ಮಾಡಿದ್ದು ಇತ್ಯಾದಿ ವಿಚಾರಗಳು ಇಲ್ಲಿ ಕಾಣಬರುತ್ತದೆ.

೨೩. ವಿರೂಪಾಕ್ಷಪಂಡಿತ (ಕ್ರಿ.ಶ. ೧೫೮೪)

ಷಟ್‌ಸ್ಥಲಜ್ಞಾನಿಯಾಗಿ, ವಿಜಯನಗರದ ಹಿರಿಯ ಮಠದಲ್ಲಿ ಗುರುವಾಗಿದ್ದ ಸಿದ್ಧವೀರೇಶನ ಶಿಷ್ಯ ವಿರೂಪಾಕ್ಷಪಂಡಿತ. 'ಅತ್ಯುರುತಶಿವಾಚಾರ ಸಂಪನ್ನ ಸುಹೃತ್ಯವಿಪ್ರತತಿವಾರ್ಧಿವಡಬಂ' ಆದ ಈತನ ಬಳಿಗೆ ಸಕಲ ಶಿವಭಕ್ತ ಸಂಕಲವೂ ಬಂದು'ಧರೆಯೊಳಗೆ ಸಕಲ ಶರಣರ ಕಥೆಗಳಂ ಕವೀಶ್ವರರೊಲ್ದು ಪೇಳ್ದರೀ ಚೆನ್ನಬಸವೇಶ್ವರನ ಚರಿತೆಯನದೊರ್ವರುಂ ಪೇಳ್ದಿದಿಲ್ಲಮಗದಂ' ಎಂದು ಕೇಳಿಕೊಳ್ಳಲು, ವಿರೂಪಾಕ್ಷಪಂಡಿತನು ಜಗತ್ಸೇವ್ಯವಾದ ವಿನೂತನ ಕಾವ್ಯ 'ಚೆನ್ನಬಸವಪುರಾಣ'ವನ್ನು ರಚಿಸಿದ. ಸಾಕ್ಷಾತ್ ವಿರೂಪಾಕ್ಷನೇ ತನ್ನಿಂದ ಈ ಕಾವ್ಯವನ್ನು ಹೇಳಿಸುತ್ತಿದ್ದಾನಂತೆ ! ಕಾವ್ಯವು ವಾರ್ಧಕಷಟ್ಪದಿಯ ೨೯೦೦ ಪದ್ಯಗಳನ್ನು ಒಳಗೊಂಡು ೬೩ ಸಂಧಿಗಳಲ್ಲಿ ಹಬ್ಬಿಹರಡಿದೆ. ಕವಿಯು ವಿರಕ್ತನಾಗಿ, ತನ್ನ ಗುರುವಿನ ಸ್ಥಾನದಲ್ಲಿ ಪಟ್ಟಧಿಕಾರನಾಗಿದ್ದನೊ ಏನೋ ! ತನ್ನ ಸಾಂಸಾರಿಕ ಸಂಬಂಧಗಳೊಂದನ್ನು ಹೇಳಿಕೊಂಡಿಲ್ಲ.

ಈ ಕಾವ್ಯದ ಹೆಸರನ್ನು ನೋಡಿ, ಇದು ಕೇವಲ ಚೆನ್ನಬಸವಣ್ಣನ ಸಮಗ್ರ ಜೀವನಚರಿತ್ರೆಯೆಂದು ತಿಳಿಯಬಾರದು. ಐದು ಕಾಂಡಗಳಾಗಿ ವಿಭಾಗವಾಗಿರುವ ಈ ಕಾವ್ಯದಿಂದ ಮೊದಲ ಕಾಂಡದಲ್ಲಿ ಚೆನ್ನಬಸವಣ್ಣನ ಅವತಾರ, ಮಹತ್ವ, ಪವಾಡಗಳು, ವ್ಯಕ್ತಿತ್ವ ಇತ್ಯಾದಿಗಳ ವಿವರಗಳು ದೊರೆಯುತ್ತವೆ ! ಮುಂದಿನ ಮೂರು ಕಾಂಡದಲ್ಲಿ ಈಶ್ವರನ ಲೀಲೆಗಳು ವರ್ಣಿತವಾಗಿವೆ ; ಕಡೆಯ ಕಾಂಡದಲ್ಲಿ ವೀರಶೈವದ ಮಹತ್ವ ಷಟ್‌ಸ್ಥಲ ವಿವೇಚನೆ, ಪುರಾತನರು, ವಿರಕ್ತರು, ಅಮರಣಗಳು, ಕಾಲಜ್ಞಾನ ಇತ್ಯಾದಿಗಳು ತುಂಬಿವೆ. ಕಾಲಜ್ಞಾನವನ್ನು ಹೇಳುವಾಗ ಚೆನ್ನಬಸವಣ್ಣನ ವೃತ್ತಾಂತವೂ ಬರುತ್ತದೆ. ಆದ್ದರಿಂದ ಇಲ್ಲಿ ಕಾವ್ಯಾಂಶಕ್ಕಿಂತಲೂ ಧರ್ಮ ನಿರೂಪಣೆಯೆ ಪ್ರಮುಖವಾಗಿದೆ. 'ವೀರಶೈವ ಪುರಾತನರ ಮತ್ತು ಕವಿಗಳ ಕಾಲವನ್ನು ನಿರ್ಣಯಿಸುವುದಕ್ಕೆ ಈ ಗ್ರಂಥವು ಬಹಳ ಉಪಯುಕ್ತವಾಗಿದೆ' ಎಂಬ ಕವಿಚರಿತೆಕಾರರ ಅಭಿಪ್ರಾಯ ಗಮನಾರ್ಹವಾದುದು. ವಿಜಯನಗರಕ್ಕೆ ಸಂಬಂಧಿಸಿದಂತೆ ಹಲವು ಐತಿಹಾಸಿಕ ಘಟನೆಗಳು ಇಲ್ಲಿ ಪ್ರಸ್ತಾಪಿತವಾಗಿವೆ.

ಧರ್ಮವೀರನೊಬ್ಬನ ಜೀವನವೃತ್ತಾಂತವನ್ನು ಒಳಗೊಂಡ ಈ ಕಾವ್ಯದಲ್ಲಿ ಅಷ್ಟಾದಶವರ್ಣನೆಗಳೂ, ನವರಸನಿರೂಪಣೆಯೂ ಬರಲೇಬೇಕೆಂಬ ಕವಿಯ ಕೆಚ್ಚಿನ ಫಲವಾಗಿ ಕಥೆಯ ಏಕಮುಖತೆಗೆ ಭಂಗ ಬಂದಿದೆ. ಕಾವ್ಯದೃಷ್ಟಿಯಿಂದ ಆಗಿರುವ ಈ ನಷ್ಟವನ್ನು ಧರ್ಮದೃಷ್ಟಿಯಿಂದ ನಡೆದಿರುವ ನಿರೂಪಣೆ ತುಂಬಿಕೊಟ್ಟಿದೆ. ಬರಿಯ ರಸವತ್ಕಾವ್ಯವನ್ನು

ಸುರರಂ ನರರಂ' ಎಂದು ಘೋಷಿಸುತ್ತಾನೆ. 'ನವಕವಿತಾಚಿಂತಾರತ್ನಂ' ಮಾರಾರಿಯ ಕೃಪೆಯಿಲ್ಲದೆ ದೊರೆಯದು, ಆದ್ದರಿಂದ ಶಿವನ ಕೃಪೆಯಿಂದ ಬಂದ ಶಕ್ತಿಯನ್ನು ಶಿವಸ್ತುತಿಗಾಗಿಯೆ ಬಳಸಬೇಕೆನ್ನುತ್ತಾನೆ, ಕವಿ. ಆತನ ಮೂರು ಕಾವ್ಯಗಳೂ ಈ ಧ್ಯೇಯದಿಂದಲೆ ಹೊರಚಿಮ್ಮಿವೆ.

'ರಾಜಶೇಖರವಿಳಾಸ'ವು ಶಿವಪಂಚಾಕ್ಷರಿಯ ಮಹತ್ತನ್ನು ಸಾರುವುದಕ್ಕಾಗಿ ಹೊರಟ ಕಾವ್ಯ. ತಮಿಳು ಮೂಲದಿಂದ ಗುಬ್ಬಿಯಮಲ್ಲಣಾರ್ಯ ವರ್ಣಕರೂಪದಿಂದ ಕನ್ನಡಕ್ಕೆ ತಂದುಕೊಂಡುದನ್ನು ತಾನು ವಸ್ತುಕವಾಗಿ ವಿಸ್ತರಿಸುತ್ತಿರುವೆನೆಂದು ಕವಿ ಹೇಳಿಕೊಂಡಿದ್ದಾನೆ. ಮಲ್ಲಣಾರ್ಯನ 'ಭಾವಚಿಂತಾರತ್ನ'ದ ಕಥೆಯೇ ಇಲ್ಲಿಯ ಕಥೆ. ಅದರಲ್ಲಿ ಕೆಲವು ಮರ್ಪಾಡುಗಳನ್ನು ತಂದು ತನ್ನ ಕಾವ್ಯವನ್ನು ಉಜ್ವಲಗೊಳಿಸಿದ್ದಾನೆ. ಷಡಕ್ಷರಿ 'ಭಾವಚಿಂತಾರತ್ನ'ದಲ್ಲಿ ಸತ್ಯೇಂದ್ರಚೋಳ ನಾಯಕನಾಗಿ ಜಲಕೇಳಿ, ವನಕೇಳಿಗಳಲ್ಲಿ ಮಗ್ನನಾಗಿದ್ದಾನೆ; ಈ ಮುದುಕದೊರೆ ತನ್ನಂತೆಯೇ ಮುದುಕನಾದ ಮಂತ್ರಿಯನ್ನು ಸಿಂಹಳದೊಡನೆ ಯುದ್ಧಕ್ಕೆ ತೊಡಗಿಸಿ, ಅಲ್ಲಿನ ರಾಜಕುಮಾರಿಯನ್ನು ತನ್ನ ಮಗನಿಗೆ ತಂದುಕೊಳ್ಳುತ್ತಾನೆ. ಷಡಕ್ಷರದೇವನ ಕಾವ್ಯದಲ್ಲಿ ರಾಜಕುಮಾರನಾದ ರಾಜಶೇಖರನೆ ನಾಯಕ; ಆತನೆ ಸಿಂಹಳ ರಾಜನನ್ನು ಸೋಲಿಸಿ ಅವನ ಮಗಳನ್ನು ಮದುವೆಯಾಗುತ್ತಾನೆ. ರಾಜಕುಮಾರನನ್ನು ದೂತನಾದ ಸಂದಾಯಿ ಕೊಲ್ಲುವುದಿಲ್ಲ; ರಾಜಕುಮಾರನೇ ದೂತನೊಡನೆ ವಧ್ಯಭೂಮಿಗೆ ನಡೆದು 'ಚಿತ್ತಾಂತದೊಳ್ ಮೃಡಂ ಧ್ಯಾನಿಸಿ' ತನ್ನ ಕತ್ತನ್ನು ಕತ್ತರಿಸಿಕೊಳ್ಳುತ್ತಾನೆ. ರಾಜಶೇಖರನ ತಾಯಿಯ ಪುತ್ರದೋಹಳ, ಗುರುಗಳಿಂದ ಆಕೆ ವರ ಪಡೆದಸಂದರ್ಭ, ಶಿವನು ಪ್ರತ್ಯಕ್ಷನಾದ ಸನ್ನಿವೇಶ ಇತ್ಯಾದಿಗಳಲ್ಲಿ ಸೂಕ್ಷ್ಮ ಬದಲಾವಣೆಗಳನ್ನು ಮಾಡಿ, ಕವಿ ತನ್ನ ಪ್ರತಿಭೆಯನ್ನು ಮೆರೆದಿದ್ದಾನೆ.

ಷಡಕ್ಷರದೇವನು ಚಂಪೂಕವಿಗಳ ಸಂಪ್ರದಾಯವನ್ನು ಅನುಸರಿಸಿ ಮಹಾಕಾವ್ಯದ ಷೋಡಶ ವರ್ಣನೆಗಳನ್ನು ಇಲ್ಲಿ ಎಳತಂದಿದ್ದಾನೆ. ಅವು ರಮ್ಯವಾಗಿದ್ದರೂ ಔಚಿತ್ಯಪೂರ್ಣವಾಗಿಲ್ಲ. ವರ್ಣನೆಗಳ ಹಾವಳಿಯಲ್ಲಿ ಕಥೆ ಕುಂಟುತ್ತದೆ. ಅದರಲ್ಲಿಯೂ ಸನ್ಯಾಸಿಯಾದ ಈ ಕವಿಗೆ ಶೃಂಗಾರವರ್ಣನೆಯಲ್ಲಿರುವ ಆಸಕ್ತಿ ಶಕ್ತಿಗಳೆರಡೂ ಅಸಾಮಾನ್ಯವಾದುದು; ಕಾವ್ಯದ ಅರ್ಧಭಾಗವೇ ಶೃಂಗಾರರಸದಿಂದ ತುಂಬಿಹೋಗಿದೆ. ಕಗ್ಗತ್ತಲೆಯಲ್ಲಿ ಹೋಗುತ್ತಿರುವ ಈ ವೇಶ್ಯೆ-

ಜಾರೆ ನಿರಿ. ಜಾರೆ ಸೋರ್ಮುಡಿ, ಜಾರೆ ಬೆಮರ್ಜಾರೆ ಮೆಲುದದುಮುಡಿದಲರ್ಗಳ್
ಜಾರೆ, ಮುದಂ ಜಾರೆ ಮದಂ, ಜಾರೆ ಪದಂ, ಜಾರೆ ಜಾರೆ ಜಾರಿದಳೊರ್ವಳ್
ತನ್ನನ್ನು ಮೆಚ್ಚಿದ ಪ್ರೇಮಿಗೆ ರತಿಸುಖವನ್ನು ನೀಡುವವಳ ಪ್ರೌಢಿಮೆ ಹೀಗಿದೆ:
ನೋಡಿದೊಡಾಗಳಂತೆ ತಲೆವಾಗುವ, ನೋಡದೊಡೊಲ್ದು ನೋಳ್ಪಿಮಾ
ತಾಡಿಸೆ ಸುಮ್ಮನಿರ್ಪ, ನುಡಿಗುಂದಿರೆ ಮೆಲ್ಲನೆ ಸೊಲ್ಲಪಿಚ್ಚೆಯಿಂ
ಕೊಡೆಲೊಡರ್ಚೆ ಮೈದೆಗೆವಗಲ್ದಿರಲೊಯ್ಯನೆ ಸಾರ್ವ ಮುಗ್ಧೆಯೇಂ
ಮಾದಳೆ ಮೆಚ್ಚಿದೋಪನ ಮನಕ್ಕೆ ಮನೋಜಮಹೋತ್ಸವಂಗಳಿಂ

ಇಂತಹ ಶೃಂಗಾರರಸದ ಲಂಚವಿತ್ತು ಓದುಗರನ್ನು ಶಾಂತರಸದ ಮಂಗಳ ಮಂಚಕ್ಕೆ ಕೊಂಡೊಯ್ಯಬೇಕೆಂಬುದು ಕವಿಯ ಉದ್ದೇಶವಿರಬೇಕು. ಕವಿಯು ಉದ್ದಾಮಪಂಡಿತ. ಹಿಂದಿನ ಕಾವ್ಯಗಳೆಲ್ಲ ಆತನಿಗೆ ಕರತಲಾಮಲಕ. ಅವುಗಳಿಂದ ಆತ ಸಾಕಷ್ಟು ಸ್ಫೂರ್ತಿಯನ್ನು ಪಡೆದಿದ್ದಾನೆ. ಮೂಲಕಾವ್ಯಗಳ ಭಾವಭಾಷೆಗಳು ಆತನ ಪ್ರತಿಭೆಯಲ್ಲಿ ಕರಗಿ ನೂತನ ರೂಪವನ್ನು ತಾಳುತ್ತವೆ. ಆತನ ಕವಿತಾಶಕ್ತಿ ಪ್ರಜ್ಞಾವಲಯದಲ್ಲಿ ಆಜ್ಞಾಧಾರಕವಾಗಿರುತ್ತದೆ. ಕಾವ್ಯಾ ವೇಶದ ಸೆಳವಿಗಿಂತಲೂ ಉಕ್ತಿ ಚಮತ್ಕಾರದ ಸುಳಿಗಳು ಹೆಚ್ಚು ಇಲ್ಲಿ. ಆದರೆ ಒಮ್ಮೊಮ್ಮೆ ಆತನ ಕಲ್ಪನಾಹಕ್ಕಿ

ಉದ್ದಕ್ಕೂ ಆ ಗುರುದಂಪತಿಗಳ ಸಂಭಾಷಣೆ ಪ್ರಾರಂಭವಾಗಿ ಮುಂದುವರಿಯುತ್ತದೆ. ವೈವಿಧ್ಯಮಯವಾದ ಆ ಕಾವ್ಯಕ್ಕೆ ಈ ದಂಪತಿಗಳು ಒಂದು ಏಕತೆಯನ್ನು ಒದಗಿಸಿದ್ದಾರೆ.

ಕವಿ ಸಿದ್ಧನಂಜೇಶನು ತನ್ನ 'ರಾಘವಾಂಕಚಾರಿತ್ರ'ದಲ್ಲಿ ಕಾವ್ಯರಮಣೀಯತೆಯನ್ನೂ 'ಗುರುರಾಜ ಚಾರಿತ್ರ'ದಲ್ಲಿ ಮಾಹೇಶ್ವರರ ಮೆಚ್ಚುಗೆಗೆ ತಕ್ಕ ಒಂದು ಧರ್ಮವನ್ನೂ ನೀಡಿದ್ದಾನೆ. ಯೌವನದಲ್ಲಿ ಬರೆದ 'ರಾಘವಾಂಕ ಚಾರಿತ್ರ'ಕ್ಕಿಂತ ಇಳಿವಯಸ್ಸಿನಲ್ಲಿ ಬೆದಿರಬಹುದಾದ 'ಗುರುರಾಜಚಾರಿತ್ರ'ದಲ್ಲಿ ವೀರಶೈವಧರ್ಮ ಹೆಚ್ಚು ವಿಸ್ತಾರವಾಗಿದೆ. ಮೂಲತಃ ಎರಡರಲ್ಲಿಯೂ ಕಾವ್ಯಾಂಶ ಕಮ್ಮಿ. ಆದರೆ ಆತನ ಕಾವ್ಯಗಳೆರಡೂ ಸಾಹಿತ್ಯಚರಿತ್ರೆಗೆ ತುಂಬ ಸಹಾಯಕವಾಗಿದೆ. ಎರಡು ಕಾವ್ಯಗಳಲ್ಲಿಯೂ ಹಲವಾರು ಕವಿಗಳು ಸ್ತುತ್ಯರಾಗಿದ್ದಾರೆ. ಆದ್ದರಿಂದ ಕವಿಗಳ ಕಾಲವನ್ನು ನಿರ್ಧರಿಸುವುದಕ್ಕೆ ಸಿದ್ಧನಂಜೇಶನ ಕಾವ್ಯಗಳು ಒಂದು ಗಡಿಯ ಕಲ್ಲನ್ನು ಒದಗಿಸಿಕೊಟ್ಟಿವೆ.

೨೫. ಷಡಕ್ಷರದೇವ (ಕ್ರಿ.ಶ. ೧೬೫೫)

ವೈದಿಕ ಕವಿಗಳಲ್ಲಿ ಲಕ್ಷ್ಮೀಶ, ವೀರಶೈವ ಕವಿಗಳಲ್ಲಿ ಷಡಕ್ಷರಿ – ಇವರಿಬ್ಬರ ಕಾವ್ಯ'ಗಳನ್ನು ಓದಿ ಅರ್ಥೈಸಬಲ್ಲವರೆ ಪಂಡಿತರೆಂಬ ಭಾವನೆ ಬಹುಕಾಲ ನಮ್ಮ ಜನರಲ್ಲಿತ್ತು. ಇಬ್ಬರು ಪ್ರಾಜ್ಞರೂ ತಮ್ಮ ಕಾಲದ ಜನರ ಅಭಿರುಚಿಗೆ ತಕ್ಕಂತೆ ಕಾವ್ಯ ರಚನೆಮಾಡಿ 'ಸೈ' ಎನಿಸಿಕೊಂಡವರು. ೧೬ನೆಯ ಶತಮಾನದ ಆ ಲಕ್ಷ್ಮೀಶ, ೧೭ನೆಯ ಶತಮಾನದ ಈ ಷಡಕ್ಷರಿ – ಇವರಿಬ್ಬರೂ ಕನ್ನಡ ಸಾಹಿತ್ಯಾಕಾಶದ ಸೂರ್ಯ ಚಂದ್ರರಂತೆ ನಮ್ಮ ಜನಮನವನ್ನು ಆಕರ್ಷಿಸಿ ಬೆಳಗಿದ್ದಾರೆ.

ಷಡಕ್ಷರದೇವನು ಮೈಸೂರು ಜಿಲ್ಲೆಯ ದನಗೂರು ಮಠದ ಸ್ವಾಮಿಯಾಗಿದ್ದವನು. ಚಿಕ್ಕವೀರದೇಶಿಕ ಆತನ ಗುರು. ಸನ್ಯಾಸಿಯಾದ ಈತ ತಾಯ್ತಂದೆಗಳ ಹೆಸರು ಹೇಳಿಲ್ಲ, ತನ್ನ ಜೀವನದ ಬಹುಭಾಗವನ್ನು ಈತ ಎಳಂದೂರಿನಲ್ಲಿ ಕಳೆದಿರುವಂತೆ ತೋರುತ್ತದೆ. ಹದಿನಾರು ದೇಶದ ದೊರೆ ಮುದ್ದು ರಾಜನೆಂಬುವನು ಎಳಂದೂರಿನ ಹೆಣ್ಣನ್ನು ಮದುವೆಯಾಗಿದ್ದ. ಆ ಹೆಣ್ಣಿನ ಮನೆಯವರು ದನಗೂರು ಮಠದ ಶಿಷ್ಯರಾಗಿದ್ದರು. ಬಾಲಗುರುವಾದ ಷಡಕ್ಷರಿ ಮುದ್ದು ರಾಜನ ಗಮನವನ್ನು ಸೆಳೆದನೆಂದು ತೋರುತ್ತದೆ. ಆದ್ದರಿಂದ ಆತನಿಗೆ ಎಳಂದೂರಿನಲ್ಲಿಯೆ ಒಂದು ಮಠವನ್ನು ಕಟ್ಟಿಸಿಕೊಟ್ಟು, ಅಲ್ಲಿಯೆ ನಿಲ್ಲಿಸಿಕೊಂಡನೇನೊ ! ಕವಿಯು ಅಲ್ಲಿಯೇ ಕೃತಿರಚನೆ ಮಾಡಿರಬೇಕು. ಆತನ ಸಮಾಧಿಯೂ ಅಲ್ಲಿಯೇ ಇದೆ.

ಷಡಕ್ಷರದೇವ ಕನ್ನಡ, ಸಂಸ್ಕೃತಗಳಲ್ಲಿ ಕಾವ್ಯರಚನೆ ಮಾಡಿದ ಸವ್ಯಸಾಚಿ, ಸಂಸ್ಕೃತದಲ್ಲಿ ಇತರ ಗ್ರಂಥಗಳ ಜೊತೆಗೆ 'ಕವಿಕರ್ಣರಸಾಯನ' ಎಂಬ ಅಲಂಕಾರಗ್ರಂಥವನ್ನು ಬರೆದಿದ್ದಾನೆ; ಆದ್ದರಿಂದ ಸಂಸ್ಕೃತ ಕವಿಗಳೆಲ್ಲರ ಪರಿಚಯವಿದ್ದಿರಬೇಕು. ಕನ್ನಡದಲ್ಲಿ ರಾಜಶೇಖರವಿಳಾಸ, 'ವೃಷಭೇಂದ್ರವಿಜಯ' 'ಶಬರಶಂಕರವಿಳಾಸ' ಎಂಬ ಮೂರು ಚಂಪೂಕಾವ್ಯಗಳನ್ನು ಬರೆದಿದ್ದಾನೆ. ಮೂರಕ್ಕೂ ಕ್ರಮವಾಗಿ 'ಭಾವಚಿಂತಾರತ್ನ', 'ಬಸವಪುರಾಣ', 'ಕುಮಾರವ್ಯಾಸಭಾರತ' ಇವು ಕಾವ್ಯವಸ್ತುವನ್ನು ಒದಗಿಸಿವೆ ಕವಿಯ ಎಳೆವರೆಯಲ್ಲಿಯೇ ಕವಿತಾಕೋಮಳೆ ಒಲಿದುಬಂದಳಂತೆ; ಆಗ ಬರೆದುದು ಆತನ 'ರಾಜಶೇಖರ ವಿಳಾಸ' ಅದರ ಕಾಲ ಕ್ರಿ.ಶ. ೧೬೫೫ ಎಂದು ಆ ಕಾವ್ಯಾಂತ್ಯದಲ್ಲಿ ಕವಿ ತಿಳಿಸುತ್ತಾನೆ. ಇದಾದ ೨೨ ವರ್ಷಗಳ ಮೇಲೆ ಅಂದರೆ ಕ್ರಿ.ಶ. ೧೬೭೭ರಲ್ಲಿ 'ವೃಷಭೇಂದ್ರವಿಜಯ' ಹೊರಬಂದಿತು. 'ಶಬರಶಂಕರವಿಳಾಸ'ದಲ್ಲಿ ಅದರ ಕಾಲವನ್ನು ಹೇಳಿಲ್ಲ, ಅದು ಆತನ ಕಡೆಯ ಗ್ರಂಥವಿರಬೇಕು. ಈ ಕಾವ್ಯಗಳಲ್ಲಿ ಅನುಕ್ರಮದ ದೃಷ್ಟಿಯಿಂದ ಮಾತ್ರವೇ ಅಲ್ಲ, ಕಾವ್ಯಗುಣದ ದೃಷ್ಟಿಯಿಂದಲೂ 'ರಾಜಶೇಖರ ವಿಳಾಸ' ಅಗ್ರಗಣ್ಯ. ಕವಿಯು ಹರಿಹರದೇವನನ್ನು ಆದರ್ಶವಾಗಿಟ್ಟುಕೊಂಡು, 'ಶಿವನಂ ತದೀಯ ಶರಣ ವ್ರಜಮಂ .... ನುತಿಪೆಂ; ಮತಿಸೆನುಳಿದ

ಹಿಡಿದು ರಸವಾದದವರೆಗೆ ಎಲ್ಲವನ್ನೂ ತಿಳಿದಿದ್ದ. ಈ ಜಂಗಮವಿಶ್ವಕೋಶವನ್ನು ಜನ 'ಸರ್ವಜ್ಞ'ನೆಂದು ಕರೆದರು. ಈ ಅನ್ವರ್ಥನಾಮ ಆತನ ಅಂಕಿತನಾಮವನ್ನು ಅಳಿಸಿಹಾಕಿತು. ಆತನ ನಿಜವಾದ ಹೆಸರು ನಮಗೆ ಈಗ ಗೊತ್ತಿಲ್ಲ. ಆತನು ಹಾಡಿರುವ ತ್ರಿಪದಿಗಳನ್ನು 'ಸರ್ವಜ್ಞ ವಚನ'ಗಳೆಂದು ಕರೆಯುತ್ತೇವೆ.

ಸರ್ವಜ್ಞ ವಚನಗಳು ಇತರ ಕವಿ ಕಾವ್ಯಗಳಂತೆ ನಿರ್ದಿಷ್ಟವಾದ ವಸ್ತುವನ್ನು ಒಳಗೊಂಡು, ಕ್ರಮಬದ್ಧವಾಗಿ ವಿಷಯ ನಿರೂಪಣೆ ಮಾಡುತ್ತಾ, ಬೇರೆ ಬೇರೆ ಪರಿಚ್ಛೇದಗಳಾಗಿ ವಿಂಗಡನೆಯಾದುದೇನೂ ಅಲ್ಲ. ವಚನಕಾರರ ವಚನಗಳಂತೆ ಅಥವಾ ಹರಿದಾಸರ ಕೀರ್ತನೆಗಳಂತೆ ಈತನ ಒಂದೊಂದು ಪದ್ಯವೂ ಬಿಡಿಬಿಡಿಯಾಗಿ ಸ್ವಯಂಪೂರ್ಣವಾಗಿವೆ. ಆತನು ಪರಿವ್ರಾಜಕನಾಗಿ ದೇಶಪರ್ಯಟನೆ ಮಾಡುತ್ತಾ, ಮಾನವರ ಕಷ್ಟಗಳನ್ನು ಕಂಡು ಮರುಗಿಯೋ, ಅನ್ಯಾಯವನ್ನು ಕಂಡು ಕೆರಳಿಯೊ 'ಕುಂತಲ್ಲಿ ನಿಂತಲ್ಲಿ ಪದಗಳ ಹೇಳುವ' ಆಶುಕವಿ. ಆತನ ಪದ್ಯಗಳಲ್ಲಿ ಕಾಣಬರುವ ವಸ್ತುವಿಪುಲತೆ, ಸರಳತೆ, ಸೌಲಭ್ಯಗಳಂತೆಯೇ ಆತನ ವಾಗ್ದಾರ್ಢ್ಯ, ಅಪಾರ ಜ್ಞಾನ, ನಿಶಿತಮತಿಗಳು ಅದ್ವಿತೀಯವಾದವು.

ಸರ್ವಜ್ಞನ ತ್ರಿಪದಿಗಳು ಭಾವ, ಭಾಷೆ, ಶೈಲಿಗಳಲ್ಲಿ ವಚನವಾಙ್ಮಯವನ್ನು ಹೋಲುತ್ತವೆ. ಇವುಗಳ ತಿರುಳು ಕೂಡ ಅಲ್ಲಿನಂತೆಯೆ. ಷಟ್‌ಸ್ಥಲ, ಅಷ್ಟಾವರಣ, ಜಾತಿಭೇದನಿರಾಕರಣಗಳು ಇವನ್ನು ಸತ್ಯ ನಿಷ್ಠುರವಾಗಿ ನಿರೂಪಿಸುತ್ತವೆ. ಆದರೆ ಈ ತ್ರಿಪದಿಗಳು ಹೆಚ್ಚು ಸರಸವಾಗಿವೆ, ಹೆಚ್ಚು ಉದಾರದೃಷ್ಟಿಯುಳ್ಳವಾಗಿವೆ. ಧರ್ಮಸಮನ್ವಯಯುಕ್ತವಾಗಿವೆ. ಅದು ಶಾಸ್ತ್ರ ಇದು ಕಾವ್ಯ; ಆದ್ದರಿಂದ ಇಲ್ಲಿ ಆತನ ಜಾಣ್ಮೆ, ಭಾಷೆಯ ಬೆಡಗು ಮೋಹಕವಾಗಿದೆ. 'ಸದಾಚಾರಸ್ಮೃತಿ'ಗಳಾದರೆ ಇಲ್ಲಿನ ತ್ರಿಪದಿಗಳೂ ಅದೇ ಕೆಲಸವನ್ನು ಹೆಚ್ಚು ಸರಸವಾಗಿ ನೆರವೇರಿಸುತ್ತವೆ. 'ಇಲ್ಲಿ ಸಲ್ಲುವರು ಅಲ್ಲಿಯೂ ಸಲ್ಲುವರು' ಎಂಬುದನ್ನು ಸರ್ವಜ್ಞನೂ ಬಲ್ಲ. ಭಕ್ತಿಯಿಲ್ಲದ ಪ್ರದಕ್ಷಿಣೆ' ಎತ್ತು ಗಾಣವ ಹೊತ್ತು ಸುತ್ತಿ ತಾ ಬಂದಂತೆ 'ವ್ಯರ್ಥ, ಸ್ನಾನ, ಗಂಧ, ವಿಭೂತಿಗಳಿಂದ ಸದ್ಗತಿ ದೊರೆಯುವಂತಿದ್ದರೆ' ಜಲದೀಪ್ಪ ಕಪ್ಪೆ, 'ಸಾಣೆಕಲ್ಲು, ಕತ್ತೆ 'ಸ್ವರ್ಗಕ್ಕೆ ಹೋದಾವು!' ಖಂಡಿಸದೆ ಕರಣವನು, ದಂಡಿಸದೆ ದೇಹವನು ಉಂಡುಂಡು ಸ್ವರ್ಗವೇರಲಿಕೆ, ಅದನೇನು ರಂಡೆಯಾಳುವಳೆ ಸರ್ವಜ್ಞ ?' ಜಾತಿ ಭೇದವನ್ನು ಸರ್ವಜ್ಞ ಒಪ್ಪುವುದಿಲ್ಲ. 'ಜಾತಿ ಹೀನರ ಮನೆಯ ಜ್ಯೋತಿ ತಾ ಹೀನವೆ ?' ನಿಜವಾಗಿ ನೋಡಿದರೆ 'ದೇವನೊಲಿದಾತನೆಜಾತಿ' ಎಲುವಿನ ನಾಲಗೆಗೆ, ಒಲಿವಿನ ಬಡವಂಗೆ, ತೊಲೆ ಕಂಬವಿಲ್ಲ, ದೇವರಲ್ಲಿ ಕುಲಭೇದವಿಲ್ಲ. ಸರ್ವಜ್ಞ ತನ್ನ ಕವನಕ್ಕೆ ವಸ್ತುವನ್ನು ಹುಡುಕುವವನಲ್ಲ, ಕಣ್ಣಿಗೆ ಬಿದ್ದುದೆಲ್ಲ ಅವನ ಕಾವ್ಯ ವಸ್ತು. ವೈದ್ಯ, ರಸವಿದ್ಯೆ, ಜ್ಯೋತಿಷ, ರಾಜನೀತಿ, ಯೋಗ – ಆಡು ಮುಟ್ಟದ ಸೊಪ್ಪಿಲ್ಲ, ಸರ್ವಜ್ಞ ಕೈಹಾಕದ ಕಾವ್ಯ ವಸ್ತುವಿಲ್ಲ – ಇತ್ಯಾದಿ ಎಲ್ಲ ವಿಷಯಗಳನ್ನೂ ಆತ ಬೆಲೆಕಟ್ಟಿ ಹಾಕಿದ್ದಾನೆ. ಏನನ್ನೆ ಬರೆಯಲಿ, ಆತನ ದೃಷ್ಟಿ ಜನಸಾಮಾನ್ಯರ ಉದ್ಧಾರ. ಅವರಿಗೆ ಚಿರಪರಿಚಿತವಾದ ಹೋಲಿಕೆಗಳನ್ನು ಕೊಟ್ಟೇ ಆತ ಬರೆಯುತ್ತಾನೆ – ದುರ್ಜನರ ಸಂಗ ಬಚ್ಚಲ ರೊಚ್ಚಿನಂತೆ', 'ಬಾಡ ತಿಂಬಾತಂಗೆ ಆಡೇನು, ಆವೇನು ?' 'ಹಂಗಿನಾ ಹಾಲಿಗಿಂದಂಬಲಿಯ ತಿಳಿಲೇಸು', 'ಹೊತ್ತಿಗೊದಗದ ಮಾತು ಸತ್ತವನು ಎದ್ದಂತೆ', 'ಓದಿದ ಓದು ತಾ ಮೇದ ಕಬ್ಬಿನ ಸಿಪ್ಪೆ' ಆತನ ಮಾತುಗಳು ಗಾದೆಯಂತೆಸಾರವತ್ತಾಗಿದ್ದು, ಕಣ್ಣೆದುರಿಗೆ ಚಿತ್ರವನ್ನು ತಂದು ನಿಲ್ಲಿಸುತ್ತವೆ. ಆತನು ವಿಶ್ವಪ್ರೇಮಿ, ಸಾಜದ ಅನ್ಯಾಯವನ್ನು ಕಂಡಾಗ ಕೆರಳಿ ಚಾಟಿಯಂತಹ ಮಾತುಗಳಿಂದ ನಿರ್ದಾಕ್ಷಿಣ್ಯವಾಗಿ ಅಪ್ಪಳಿಸುತ್ತಾನೆ. ಇಬ್ಬಾಯ ಖಡ್ಗವನ್ನು ಝಳಪಿಸಿದಂತೆ ಆತನ ಬಾಯಿಂದ ಹರಿತವಾದ ಮಾತುಗಳು

ಗಗನವಿಹಾರಿಯಾಗಿ ಸುಂದರವಾದ ಮಂಗಳಗೀತವನ್ನೂ ಹಾಡಬಲ್ಲದು. ಈತನ ಸೂರ್ಯಾಸ್ತದ ವರ್ಣನೆ ಭವ್ಯವಾಗಿದೆ. ಇಲ್ಲಿನ ಪಾತ್ರಗಳೆಲ್ಲ ಆದರ್ಶ ವ್ಯಕ್ತಿಗಳು; ನಮ್ಮ ಹೃದಯವನ್ನು ಸೂರೆಗೊಂಡು ನೆಲೆಯಾಗಿ ನಿಲ್ಲಬಲ್ಲ ಪಾತ್ರಗಳು ಇಲ್ಲಿಲ್ಲ. ಪ್ರಾಸಾದಿಪುತ್ರನಾದ ರಾಜಶೇಖರನನ್ನು ಬಲಿಕೊಡುವಾಗ ಆತನ ತಾಯ್ತಂದೆಗಳ ಹೃದಯದಲ್ಲಾಗಲಿ, ಕೂರ್ತಮಡದಿ ಸರ್ವಮಂಗಳೆಯಲ್ಲಾಗಲಿ ಸ್ವಲ್ಪವೂ ಒಳತೋಟ ಕಾಣಬರದಿರುವುದು ಆಶ್ಚರ್ಯ. ಪಂಚಾಕ್ಷರೀ ಮಹಿಮೆಯಿದೆ; ಕಾವ್ಯ ಸತ್ವ ಮಾತ್ರ ಕೊರೆಯಾಗಿದೆ.

'ವೃಷಭೇಂದ್ರ ವಿಜಯ' ೨೨ ಆಶ್ವಾಸಗಳಲ್ಲಿ ಹರಡಿರುವ ೪೦೦೦ ಪದ್ಯಗಳನ್ನು ಒಳಗೊಂಡಿದೆ. ಬಸವಣ್ಣನ ಜೀವನಚರಿತ್ರೆ ಇದರ ಕಥಾವಸ್ತು. ಭೀಮಕವಿಯ ಬಸವಪುರಾಣ ಸಂಸ್ಕೃತಕ್ಕೆ ಪರಿವರ್ತಿತವಾದುದು ಈತನ ಈ ಕಾವ್ಯಕ್ಕೆ ಮೂಲವಂತೆ! ಈ ಧಾರ್ಮಿಕ ಕಾವ್ಯದಲ್ಲಿ ಮೂಲದಿಂದ ಬದಲಾವಣೆಗಳನ್ನೇನೂ ಮಾಡಿಕೊಂಡಿಲ್ಲ ಕವಿ. ವಿವರಣೆಗಳಲ್ಲಿ ಓರೆಕೋರೆಯನ್ನು ತಿದ್ದಿ ನಾಯಕನ ಪಾತ್ರ ಉದಾತ್ತವಾಗುವಂತೆ ಮಾಡಿದ್ದಾನೆ. ಆದರೆ ನಾಯಕನ ಕಥೆಗಿಂತ ಇತರ ಶಿವಶರಣರ ಕಥಗಳೇ ಕಾವ್ಯದ ಹೆಚ್ಚು ಭಾಗವನ್ನು ಆಕ್ರಮಿಸಿದೆ. ಹೆಚ್ಚು ಆಕರ್ಷಕವಾಗಿವೆ. ಕವಿಯು ಒಳ್ಳೆಯ ಕಥೆಗಾರ. ಆತನ ಕಥೆಗಳಲ್ಲಿ ಸಹಜವಾದ, ಸ್ವಾಭಾವಿಕವಾದ ಶೈಲಿ ಕಂಡು ಬರುತ್ತದೆ. ಆದರೆ ಇಲ್ಲಿನ ಭಕ್ತಿ ವಿರಕ್ತಿಗಳು ರಾಜಶೇಖರವಿಳಾಸದ ಲಲಿತಲ್ಯಾಸದ ಇದಿರಿನಲ್ಲಿ ಪೇಲವವಾಗಿ ಕಾಣಿಸುತ್ತವೆ.

ಇನ್ನು 'ಶಬರಶಂಕರವಿಳಾಸ'ವನ್ನು ನೋಡೋಣ. ಕವಿ ಈ ವೇಳೆಗೆ ಮುದುಕನಾಗಿದ್ದನೊ ಏನೊ! ಹಿಂದಿನ ಕಾವ್ಯಗಳಲ್ಲಿ ಕಂಡುಬರುವ ಲವಲವಿಕೆ ಇಲ್ಲ. ಶಿವನ ಪಂಚವಿಂಶತಿಲೀಲೆಗಳಲ್ಲಿ ಒಂದಾದ ಅರ್ಜುನನಿಗೆ ಪಾಶುಪತಾಸ್ತ್ರ ನೀಡುವ ಕಥಾಭಾಗ ಇದರ ವಸ್ತು. ಶಬರವೇಷ ಧಾರಿಯಾದ ಶಿವನು ಇಲ್ಲಿನ ಕಥಾನಾಯಕ. ಭಕ್ತನಾದ ಅರ್ಜುನನ ಮೇಲೆ ಶಿವನಿಗಿರುವ ಕರುಣೆಯನ್ನು ನಿರೂಪಿಸುವುದೆ ಇಲ್ಲಿನ ಗುರಿ. ಇಲ್ಲಿ ಕಥೆ ಕಡಿಮೆ, ಆದ್ದರಿಂದ ವರ್ಣನೆಗೆ ಪಟ್ಟಾಭಿಷೇಕ ಕಟ್ಟಿದಂತಾಗಿದೆ. ಕೆಲವು ವೇಳೆ ಇವು ಮನೋಹರವಾಗಿವೆಯಾದರೂ ಅಲ್ಲಿ ಹಿಂದಿನ ಕವಿಗಳ ಛಾಯೆ ಕಂಡುಬರುತ್ತದೆ. ಒಟ್ಟಿನಲ್ಲಿ ಷಡಕ್ಷರದೇವ ಅದ್ಭುತ ಪ್ರತಿಭಾಪ್ರಸನ್ನ, ಅದ್ವಿತೀಯ ಪಂಡಿತ, ಅಸದೃಷ್ಯ ಕಲ್ಪನಾಚತುರ. ತನ್ನ ವರ್ಣನೆಗಳಿಂದ ಸುಂದರವಾದ ಶಬ್ದ ಶಿಲ್ಪವನ್ನು ಸೃಷ್ಟಿಸಬಲ್ಲ ಈ ಕಲಾನಿಪುಣ, ಶ್ರೇಷ್ಠ ಕವಿಗಳ ಸಾಲಿನಲ್ಲಿ ಯೋಗ್ಯನಾದನು.

೨೬. ಸರ್ವಜ್ಞ (ಕ್ರಿ.ಶ. ೧೭೦೦)

ಧಾರವಾಡ ಜಿಲ್ಲೆಯ ಮಾಸೂರಿನ ಬಸವರಸನೆಂಬ ಆರಾಧ್ಯಬ್ರಾಹ್ಮಣ ಪುತ್ರಕಾಮಿಯಾಗಿ ಕಾಶಿಯಾತ್ರೆ ಮಾಡಿಕೊಂಡು ಬರುತ್ತಾ, ಮಾರ್ಗಮಧ್ಯದ ಅಂಬಲೂರಿನಲ್ಲಿ ಕುಂಬಾರನೊಬ್ಬನ ಮನೆಯಲ್ಲಿ ತಂಗಿದ್ದ; ಅಲ್ಲಿ ಕುಂಬಾರನ ಮಗಳಾದ ಮಾಳಿ ವಿಧವೆಯಲ್ಲಿ ಮೋಹಗಂಡ. ಅವರಿಬ್ಬರ ಪ್ರಣಯದ ಫಲವಾಗಿ ಪುತ್ರರತ್ನವೊಂದು ಉದಿಸಿತು. ಹುಟ್ಟು ದೈವಭಕ್ತನಾಗಿದ್ದ ಈ ಮಗು ಬೆಳೆದು ದೊಡ್ಡವನಾದ ಮೇಲೆ ಊರೂರು ಅಲೆಯುತ್ತಾ, ಅಲ್ಲಲ್ಲಿ ಸಂಧಿಸಿದ ಹಿರಿಯ ಚೇತನಗಳಿಂದ ಅಧ್ಯಾತ್ಮ ಜ್ಞಾನವನ್ನು ಸಂಗ್ರಹಿಸುತ್ತಾ. ಜೊತೆ ಜೊತೆಯಲ್ಲಿಯೇ ಲೋಕಾನುಭವವನ್ನು ಪಡೆಯುತ್ತಾ ಹೋದನು. ಸ್ವಭಾವಸಹಜವಾಗಿದ್ದ ಆತನ ಪ್ರತಿಭಾಶಕ್ತಿ. ಆತನು ಸಂಪಾದಿಸಿದ ಅಪಾರ ಜ್ಞಾನ ಮತ್ತು ಲೋಕಾನುಭವಗಳ ಫಲವಾಗಿ, ತ್ರಿವೇಣೀಸಂಗಮ ಹರಿಯಿತು. ತನಗೆ ಗೋಚರವಾದ ನಿತ್ಯಸತ್ಯವನ್ನು ಆತನು ಜಾನಪದ ಛಂದಸ್ಸಾದ ತ್ರಿಪದಿಯಲ್ಲಿ, ಜನ ಸಾಮಾನ್ಯರ ಬಾಯಿಯಲ್ಲಿ ಹಾಡುತ್ತಾ ಹೋದನು. ವೇಶ್ಯೆಯರಿಂದ ಹಿಡಿದು ಬ್ರಹ್ಮಜ್ಞಾನಿಯವರೆಗೆ, ರಾಜನೀತಿಯಿಂದ

ಲಾಲಿತ್ಯ, ಮಾತಿನ ಬೆಡಗೂ ಕನ್ನಡಕ್ಕೆ ಇಳಿದು ಬಂದಿದೆ. ಈ ಕಾರಣದಿಂದಲೆ ಈತನಿಗೆ 'ಅಭಿನವಕಾಳಿದಾಸ'ನೆಂಬ ಬಿರುದು ಬಂದಿದೆ.

ಈ ಕವಿಯ ಕಾವ್ಯಗಳ ವಿಸ್ತೃತ ವಿಮರ್ಶೆ 'ಆಧುನಿಕ ಕನ್ನಡ ಸಾಹಿತ್ಯ'ದ ಇತಿಹಾಸಕಾರರು ಕೈಗೊಳ್ಳಬೇಕಾಗುತ್ತದೆ.

ಆಧುನಿಕ ಯುಗ

ಆಧುನಿಕ ಯುಗಕ್ಕೆ ಪ್ರವೇಶಿಸುವ ಮುನ್ನ ಮೊದಲು 'ಮುದ್ದಣ'ನ ಬಗ್ಗೆ ತಿಳಿಯೋಣ. 'ಮುದ್ದಣ' ಆಧುನಿಕ ಯುಗದ ಮೊದಲನೆಯ ಸುಪ್ರಸಿದ್ಧ ಕವಿ.

೧. ಮುದ್ದಣ (ಕ್ರಿ.ಶ. ೧೮೬೯-೧೯೦೧)

ಮುದ್ದಣನೆಂಬ ಕಾವ್ಯ ನಾಮದಿಂದ ಗ್ರಂಥ ರಚನೆ ಮಾಡಿ, ಕುಮಾರವ್ಯಾಸ ಯುಗಕ್ಕೂ ಆಧುನಿಕ ಯುಗಕ್ಕೂ ರಸ ಸೇತುವೆಯನ್ನು ನಿರ್ಮಿಸಿದ ಲಕ್ಷ್ಮೀ ನಾರಾಣಪ್ಪನು ಉಡುಪಿಯ ಸಮೀಪದ ನಂದಳಿಕೆ ಎಂಬ ಹಳ್ಳಿಯಲ್ಲಿ ಹುಟ್ಟಿದವನು, ತಿಮ್ಮಪ್ಪಯ್ಯ ಮಹಾಲಕ್ಷ್ಮೀ ಎಂಬ ಬಡ ದಂಪತಿಗಳ ಮಗನಾದ ಈತ ಉಡುಪಿಯ ಒಂದು ಶಾಲೆಯಲ್ಲಿ ಅಂಗ ಸಾಧನೆಯ ಉಪಾಧ್ಯಾಯನಾಗಿದ್ದನು. ಸ್ವ-ಪ್ರಯತ್ನದಿಂದ ಸಾರಸ್ವತ ತಪಸ್ಸನ್ನು ಆಚರಿಸಿ, ಕನ್ನಡ ಭಾಷಾ ಸಾಹಿತ್ಯಗಳಲ್ಲಿ ಅದ್ವಿತೀಯವಾದ ಪಾಂಡಿತ್ಯವನ್ನು ಪಡೆದನು. ಚಿಕ್ಕಂದಿನಿಂದಲೂ ಯಕ್ಷಗಾನಗಳಲ್ಲಿ ಅಪಾರ ಮಮತೆಯುಳ್ಳವನಾಗಿದ್ದು 'ರತ್ನಾವತೀ ಕಲ್ಯಾಣ' 'ಕುಮಾರ ವಿಜಯ' ಎಂಬ ಎರಡು ಯಕ್ಷಗಾನಗಳನ್ನು ರಚಿಸಿರುವನಲ್ಲದೆ, ಪಾಂಡಿತ್ಯಪೂರ್ಣವಾದ 'ಅದ್ಭುತ ರಾಮಾಯಣ', 'ರಾಮಪಟ್ಟಾಭಿಷೇಕ', 'ರಾಮಾಶ್ವಮೇಧ' ಎಂಬ ಮೂರು ಸುಂದರ ಕೃತಿಗಳನ್ನು ತನಗೆ ಅತ್ಯಂತ ಪ್ರಿಯವಾದ ರಾಮಾಯಣದಿಂದಲೆ ಎತ್ತಿಕೊಂಡು ಬರೆದಿದ್ದಾನೆ. 'ಗೋದಾವರಿ' ಎಂಬ ಕಾಲ್ಪನಿಕ ಕಾದಂಬರಿಯೊಂದನ್ನು ಕವಿ ಅಸಮಗ್ರವಾಗಿ ಬರೆದು, ಅದನ್ನು ಮುಗಿಸುವ ಮುನ್ನವೇ ಅಕಾಲ ಮೃತ್ಯುವಿಗೆ ತುತ್ತಾದನು.

ಕವಿಯ ಪ್ರೌಢಗ್ರಂಥಗಳಲ್ಲಿ 'ಅದ್ಭುತರಾಮಾಯಣ ರಾಮಾಶ್ವಮೇಧ'ಗಳು ಹಳಗನ್ನಡ ಗದ್ಯರೂಪದಲ್ಲಿವೆ. 'ರಾಮಪಟ್ಟಾಭಿಷೇಕ' ವಾರ್ಧಕಷಟ್ಪದಿಯಲ್ಲಿದೆ. ಶ್ರೀ ರಾಮನು ರಾವಣಸಂಹಾರಾನಂತರ ಆಯೋಧ್ಯೆಗೆ ಹಿಂತಿರುಗಿ ಪಟ್ಟಾಭಿಷಕ್ತನಾದುದು 'ರಾಮಪಟ್ಟಾಭಿಷೇಕ'ದ ವಸ್ತು. ರನ್ನ ಕವಿಯಂತೆ ಈತನೂ 'ಸಿಂಹಾವಲೋಕನಕ್ರಮ'ದಿಂದ ಇಡೀ ರಾಮಾಯಣವನ್ನೇ ಸೂಕ್ಷ್ಮವಾಗಿ ಚಿತ್ರಿಸಿದ್ದಾನೆ. ಲಂಕೆಯಿಂದ ಪುಷ್ಪಕವಿಮಾನದಲ್ಲಿ ಹಿಂದಿರುಗುತ್ತಾ, ಆತನು ಸೀತೆಯೊಡನೆ ತಮ್ಮ ಹಿಂದಿನ ಅನುಭವಗಳ ಸ್ಥಳಗಳನ್ನು ತೋರಿಸುತ್ತಾ ಹೋದಂತೆ ಕಥೆಯ ಸುರುಳಿ ಬಿಚ್ಚಿಕೊಳ್ಳುತ್ತಾ ಹೋಗುತ್ತದೆ ; ಇಡೀ ರಾಮಾಯಣದ ಕಥೆಯ ಚಿತ್ರಣವಾದಂತಾಗುತ್ತದೆ. ಈ ಭಾಗವನ್ನು ಓದುವಾಗ ಕಾಳಿದಾಸನ 'ಮೇಘಸಂದೇಶ' ಜ್ಞಾಪಕಕ್ಕೆ ಬರುತ್ತದೆ. ಶ್ರೀ ರಾಮನು ಅಯೋಧ್ಯೆಗೆ ಬರುತ್ತಿರುವನೆಂಬ ಸುದ್ದಿಯನ್ನು ಕೇಳುತ್ತಲೇ ಭರತನು 'ಅಟವಿಯಂ ಪೊರಟಿಹರೆ ? ಬಹರೆ ? ದಾರಿಯೊಳೇಂ ಪೊರಟುದಿಲ್ಲವೆ ? ರಾಮನೊಳಿತಾಗಿಹನೆ ? ಪರ್ಯಟನದಿನಂ ಬಾಡಿಹರೆ ?

ಬರುತಮಿರ್ಪರೆ ? ಬಹರೆ ? ಬಂದರೆ ? ಎಂದು ಕೇಳುವ ಪ್ರಶ್ನೆಗಳ ಸರಮಾಲೆ ಆತನ ಉತ್ಸಾಹ ಸಂಭ್ರಮಗಳಿಗೆ ಹಿಡಿದ ಕನ್ನಡಿಯಂತಿದೆ. ರಾಮಕೌಸಲ್ಯೆಯರ ಸಮಾಗಮಾ 'ಅನ್ಯೋನ್ಯ ದರ್ಶನಸುಖಂ' ದಾಶರಥಿ ಕೌಸಲ್ಯೆಯರ ದರ್ಶನದ ಸುಖದಂತೆವೊಲ್ ಇತ್ತಂತೆ! ರಾಮಪಟ್ಟಾಭಿಷೇಕದ ದಿನ ಬೆಳಗ್ಗೆ ಕಾಗೆ ಕೂಗುತ್ತಿರುವುದು ತನ್ನ ಪ್ರಾಣದಾನ ಮಾಡಿದ ಆತನನ್ನು 'ಪೊಗಳಿ, ಕಾ ಕಾ

ಧಾರಾಕಾರವಾಗಿ ಹರಿಬರುತ್ತವೆ. ಆದರೂ ಆ ನುಡಿಯಲ್ಲಿ ನಕ್ಕು ನಗಿಸುವ ದೊಡ್ಡ ಗುಣವಿದೆ. ತಾನೂ ತಿನ್ನದ ಪರರಿಗೂ ಇಕ್ಕದವನು 'ಕೆಚ್ಚಲ ಮೇಲಲಿ ಉಣ್ಣೆ', 'ದೌರ್ಜನ್ಯಕಾರಿ ಸತ್ತರೆ ಹಿರ್ದ ಕಚ್ಚಿ ಹೋದಂತೆ', 'ಕೊಡದ ಲೋಭಿಯ ಮಾತು ಕೊಡಲಿಯ ಗಾಯ', 'ನೀಚರಾ ನೆರೆಯಿಂದ ಈಚಲ ಮರಲೇಸು' ಇಂತಹ ವಾಕ್ಯಗಳಲ್ಲಿ ಹಸನ ಭಾವ ಎದ್ದು ಕಾಣುತ್ತದೆ. ಈತನ ವಿಡಂಬನೆ ರಾವು ಗನ್ನಡಿಯಲ್ಲಿ ನೋಡಿಕೊಂಡಂತೆ ! ನಮ್ಮ ವಿಕೃತಿಯನ್ನು ನಾವೇ ನೋಡಿ ನಗುತ್ತೇವೆ. ಶುಷ್ಕವಾದ ನೀತಿಯನ್ನು ಸರಳವಾಗಿ ನಿರೂಪಿಸುವುದರಲ್ಲಿ ಕೃತಕೃತ್ಯನಾಗಿರುವ ಸರ್ವಜ್ಞನು ತೆಲುಗಿನ ವೇಮನನಂತೆ, ತಮಿಳಿನ ತಿರುವಳ್ಳುವರ್ ಅಂತೆ, ಹಿಂದಿಯ ಕಬೀರದಾಸನಂತೆ ಸ್ತುತ್ಯನಾದವನು.

ಕುಮಾರವ್ಯಾಸಯುಗದ ವೀರಶೈವಕವಿಗಳೆಲ್ಲರನ್ನೂ ಕುರಿತು ವಿವೇಚಿಸುವುದು ಸಾಧ್ಯವೂ ಇಲ್ಲ, ಅಗತ್ಯವೂ ಇಲ್ಲ. ೧೫ನೆ ಶತಮಾನದಲ್ಲಿ ಕವಿ ಕಾವ್ಯಗಳ ಮಲ್ಲಣ್ಣನ (೧೪೧೩) 'ರೇವಣ ಸಿದ್ಧೇಶ್ವರ ಪುರಾಣ', 'ಕರಸ್ಥಳದ ನಾಗಿದೇವನ (೧೪೭೦) 'ತ್ರಿವಿಧಿ', 'ಬತ್ತಲೇಶ್ವರನ (೧೪೭೦) 'ರಾಮಾಯಣ', 'ಬೊಮ್ಮರಸನ (೧೪೫೦) 'ಚತುರಾಸ್ಯನಿಘಂಟು', ಕಲ್ಲರಸನ (೧೪೫೦) 'ಜನವಶ್ಯ' ಇವು ಗಮನಾರ್ಹವಾದವು. ೧೬ನೆಯ ಶತಮಾನದಲ್ಲಿ ಬೊಂಬೆಯ ಲಕ್ಕನ (೧೫೦೮) 'ಹರಿಶ್ಚಂದ್ರನ ಸಾಂಗತ್ಯ', ವಿರೂಪರಾಜನ (೧೫೧೯) 'ತ್ರಿಭುವನತಿಲಕ', 'ಓದುವಗಿರಿಯನ (೧೫೨೫) 'ಸಾನಂದ ಗಣೇಶ ಸಾಂಗತ್ಯ' ಮತ್ತು 'ಹರಿಶ್ಚಂದ್ರ ಸಾಂಗತ್ಯ' 'ಚೆನ್ನಬಸವಾಂಕನ (೧೫೫೦) 'ಮಹಾದೇವಿಯಕ್ಕನ ಪುರಾಣ', ಅಣ್ಣಾಜಿಯ (೧೬೦೦) 'ಸೌಂದರವಿಳಾಸ', ಉತ್ತರದೇಶದ ಬಸವಲಿಂಗದೇವನ (೧೬೦೦) 'ಬಸವೇಶ್ವರ ಪುರಾಣದ ಕಥಾಸಾಗರ', 'ಭೈರವೇಶ್ವರಕಾವ್ಯದ ಕಥಾಸಾಗರ' ಮತ್ತು 'ಉಚಿತ ಕಥೆಗಳು' ಗಮನಾರ್ಹವಾಗಿವೆ. ೧೭ನೆಯ ಶತಮಾನದಲ್ಲಿ ಹರೀಶ್ವರಕವಿಯ (೧೬೦೬) 'ಪ್ರಭುದೇವಪುರಾಣ', ಚೆನ್ನಣ್ಣನ (೧೬೫೦) 'ವೀರಶೈವಚರಿತೆ' ಇವು ಗಮನಾರ್ಹ. ೧೮-೧೯ನೆ ಶತಮಾನಗಳಲ್ಲಿ ಊಷರ ಕ್ಷೇತ್ರದ ಕುಬ್ಜವೃಕ್ಷಗಳಂತೆ ಕ್ವಚಿತ್ತಾಗಿ ಗ್ರಂಥಗಳು ಹುಟ್ಟಿಕೊಂಡಿವೆ.

೨೭. ಬಸಪ್ಪಶಾಸ್ತ್ರಿ

೧೯ನೆಯ ಶತಮಾನದ ಕಡೆಯ ಭಾಗದಲ್ಲಿ, ಮೈಸೂರಿನ ದೊರೆ ಚಾಮರಾಜರ ಆಸ್ಥಾನಕವಿಯಾಗಿ ಅರಮನೆಯ ಪುರೋಹಿತನಾಗಿ, ಕನ್ನಡ-ಸಂಸ್ಕೃತಗಳಲ್ಲಿ ಅದ್ವಿತೀಯ ಪಂಡಿತನಾಗಿದ್ದ ಬಸಪ್ಪಶಾಸ್ತ್ರಿಯು ಪ್ರತಿಭಾನ್ವಿತನಾದ ಕವಿಯೂ ಆಗಿದ್ದನು. ಆತನು 'ಸಾವಿತ್ರೀ ಚರಿತ್ರೆ'ಯನ್ನು ಷಟ್ಪದಿಯಲ್ಲಿಯೂ 'ಭರ್ತೃಹರಿ ಸುಭಾಷಿತ'ವನ್ನು ವೃತ್ತದಲ್ಲಿಯೂ, 'ನೀತಿ ಸಾರಸಂಗ್ರಹ'ವನು ಕಂದದಲ್ಲಿಯೂ 'ದಮಯಂತೀಸ್ವಯಂವರ' ಮತ್ತು 'ರೇಣುಕಾರ್ಯ ವಿಜಯ' ಗಳನ್ನು ಚಂಪೂವಿನಲ್ಲಿಯೂ ಬರೆದಿದ್ದಾನೆ. ಆತನ ಕವಿತೆ ಲಲಿತವಾಗಿ, ಭಾವಗರ್ಭಿತವಾಗಿ, ನಿರರ್ಗಳವಾಗಿ ಹರಿಯುತ್ತದೆ. ಆದರೂ ಆತನ ಕೀರ್ತಿ ಮುಗಿಲು ಮುಟ್ಟುವುದು ಆತನ ನಾಟಕಗಳಿಂದ. ರಾಜಕೃಪಾಪೋಷಿತ 'ಚಾಮರಾಜೇಂದ್ರ ಚರಿತ್ರೆ', 'ರತ್ನಾವಳಿ', 'ಮಾಲತೀಮಾಧವ', 'ಶೂರಸೇನಚರಿತ್ರೆ' ಎಂಬ ಏಳು ನಾಟಕಗಳನ್ನು ಬರೆದಿದ್ದಾನೆ. ಇಂಗ್ಲಿಷ್ ಭಾಷೆ ಗೊತ್ತಿಲ್ಲದೆ ಇತರರ ಸಹಾಯದಿಂದ 'ಒಥೆಲೊ' ನಾಟಕವನ್ನು ಕನ್ನಡಕ್ಕೆ ತಂದುಕೊಳ್ಳುವ ಪ್ರಯತ್ನ ನಡೆದಿದೆ, 'ಶೂರಸೇನ' ನಾಟಕದಲ್ಲಿ. ಆದ್ದರಿಂದ ಅದು ಮೂಲದ ರಸರಹಿತ ಛಾಯೆ ಮಾತ್ರವಾಗಿದೆ. ಈತನ ಉಳಿದ ಆರು ನಾಟಕಗಳು ಸಂಸ್ಕೃತದಿಂದ ಭಾಷಾಂತರಿತವಾದವು. ವರಕವಿ ಕಾಳಿದಾಸನ ಅಂತರಂಗವನ್ನು ಹೊಕ್ಕು, ಅದರ ಆಳ-ಔನ್ನತ್ಯಗಳನ್ನು ಅರಿತು ಅದನ್ನು ಇತರರಿಗೆ ದರ್ಶನ ಮಾಡಿಸುವ ಕಾರ್ಯದಲ್ಲಿ ಕೃತಕೃತ್ಯನಾಗಿದ್ದಾನೆ ಕವಿ. ಆತನ 'ಅಭಿಜ್ಞಾನಶಾಕುಂತಲ' ನಾಟಕದಲ್ಲಿ, ಮೂಲದ ನಯ, ನಾಜೋಕು, ಭಾಷೆಯ

ರಾಮಾಶ್ವಮೇಧದಲ್ಲಿ ಬರುವ ಸೀತೆಯ ಪುತ್ರದೋಹಳ, ಸೀತೆಯನ್ನು ಅಡವಿಗಟ್ಟುವ ಸನ್ನಿವೇಶದಲ್ಲಿ ಲಕ್ಷ್ಮಣನ ಆಂತರಿಕ ಹೋರಾಟ, ರಾಮನು ತನ್ನನ್ನು ತ್ಯಜಿಸಿದನೆಂದು ತಿಳಿದಾಗ ಸೀತೆ ತೋರಿದ ಪ್ರತಿಕ್ರಿಯೆ – ಈ ಭಾಗಗಳಲ್ಲಿ ಕವಿಯ ಪ್ರತಿಭೆ ಮುಗಿಲುಮುಟ್ಟಿದೆ. ಒಂದೊಂದು ಒಂದು ರಸದ ಮಡುವಿನಂತಿದೆ. ಅಶ್ವಮೇಧಯಾಗದ ಕಥೆಯಾದುದರಿಂದ ಯುದ್ಧಪ್ರಸಕ್ತಿ ಇಲ್ಲಿ ಅನಿವಾರ್ಯ. ಆದ್ದರಿಂದ ರಸಗತೆಯಾಗುವಂತೆ ಕತೆ ಎಲ್ಲಿಯಾದರೂ ಕಂಡರೆ, ಕವಿಯು ತನ್ನ ಕಾವ್ಯ ವಿಮರ್ಶೆಗೆ ಪ್ರತಿನಿಧಿಯಾಗುವಂತೆ ಸೃಷ್ಟಿಸಿಕೊಂಡಿರುವ ಮನೋರಮೆಯನ್ನು ಮಧ್ಯದಲ್ಲಿ ತಂದು ಹಾಸ್ಯರಸದ ಹೊನಲು ಹರಿಯುವಂತೆ ಮಾಡುತ್ತಾನೆ. ಮುದ್ದಣ–ಮನೋರಮೆಯರ ಈ ಸುಂದರವಾದ, ಸರಸಮಯವಾದ ಸಂಸಾರ ಜೀವನದ ಸುವರ್ಣಮಯ ಚೌಕಟ್ಟಿನಲ್ಲಿ ಪೌರಾಣಿಕವಾದರೂ ಚಿರನೂತನವಾದ ಕಥಾಚಿತ್ರ ಕಣ್ಣಿಗೆ ಕಟ್ಟುತ್ತದೆ.

ಕಾವ್ಯಸೃಷ್ಟಿಗೆ ಅಗತ್ಯವಾದ ಭಾಷೆಯ ವಿಚಾರದಲ್ಲಿ ಕವಿ ತಳೆದಿರುವ ಭಾವನೆ ಸರ್ವ ಜನಾದರಣೀಯವಾದುದು. ಅತಿಯಾಗಿ ಸಂಸ್ಕೃತ ಬಳಸುವುದನ್ನು ಕವಿ ನಿಷೇಧಿಸುತ್ತಾನೆ. 'ಕರ್ಮಣಿಸರದೊಳ್ ಚೆಂಬವಳಮಂ ಕೋದಂತಿರೆ' ಎಂಬ ಮಾತು ಎಷ್ಟು ಧ್ವನಿಪೂರ್ಣವಾಗಿದೆ ಮಂಗಳಸೂತ್ರದಲ್ಲಿ ಕರಿಮಣಿ ಪವಿತ್ರವಾದುದು; ಇದು ಕನ್ನಡಕ್ಕಿರಬೇಕಾದ ಸ್ಥಾನ, ಕೆಂಪು ಹವಳ ಅಲ್ಲೊಂದು ಇಲ್ಲೊಂದು ಅಲಂಕಾರಕ್ಕೆ; ಅದು ಸಂಸ್ಕೃತದ ಸ್ಥಾನ.

ಕವಿಯ ಹಾಸ್ಯ ನವಿರಾಗಿ ಸುಂದರವಾಗಿದೆ; ಅಷ್ಟೇ ಅಲ್ಲ, ಅರ್ಥಪೂರ್ಣವಾಗಿ, ಭಾವಪೂರ್ಣವಾಗಿ, ಧ್ವನಿಪೂರ್ಣವಾಗಿದೆ. 'ಕಬ್ಬಿಗರಿಗೆ ಸಿದ್ಧಿಸಿದ ಸಪ್ತಾಕ್ಷರೀ ಮಂತ್ರ' 'ಭವತಿ ಬಿಕ್ಷಾಂ ದೇಹಿ' – ಇಕ್ಕೆ ಉತ್ತಮ ಉದಾಹರಣೆ. ಇವೆಲ್ಲಕ್ಕೂ ಹೆಚ್ಚಾಗಿ ಆತನ ಕಾವ್ಯ ಜಗತ್ತಿಗೊಂದು ದೊಡ್ಡ ಸಂದೇಶವನ್ನು ನೀಡುತ್ತಿದೆ. 'ಧನಿಕರಾಗುವುದು ಎಲ್ಲರಿಗೂ ಸಾಧ್ಯವಿಲ್ಲದಿರಬಹುದು. ಆದರೆ ಪ್ರಯತ್ನದಿಂದ ಪ್ರತಿಯೊಬ್ಬರೂ ರಸಿಕರಾಗುವುದು ಸಾಧ್ಯ. ಮುದ್ದಣ–ಮನೋರಮೆಯರಂತೆ ಸತ್ಕಥಾವಿನೋದದಲ್ಲಿ ಬಾಳುವುದು ಸಾಧ್ಯ. ಇದನ್ನು ಗಳಿಸಿಕೊಂಡರೆ ಜೀವನದ ಎಲ್ಲ ಅರೆಕೊರೆಗಳನ್ನೂ ತುಂಬಿಕೊಂಡಂತೆಯೆ' ಎಂಬ ಡಿ.ವಿ.ಜಿ.ಯವರ ಮಾತು ಎಷ್ಟು ಸತ್ಯ!

.... ರಸಪೂರ್ಣಶೂನ್ಯದಿಂದೊಗೆತಂದು
ದೀ ವಿಶ್ವಂ; ಅದರೊಳೆ ವಿಲೀನಮಾ ಗಡಗುವುದು.
ಆದೋಡೇಂ? ಮರಳಿ ಬೇರೊಂದಾಕೃತಿಯ ತಳೆದು
ಬೇರೊಂದು ಕಟ್ಟಳೆಗೆ ತಲೆಬಾಗಿ ಬೇರೊಂದು
ಕಾಲದಲಿ ಮೂಡುವುದು

'ಶ್ಮಶಾನ ಕುರುಕ್ಷೇತ್ರಂ' – ಕುವೆಂಪು

ಉದಯಾಸ್ತಗಳು ನಿಸರ್ಗನಿಯಮ. ಬೆಳಗಿನಲ್ಲಿ ಉದಯವಾದ ಸೂರ್ಯ ಮಧ್ಯಾಹ್ನ ಜಗತ್ತಿನ ನೆತ್ತಿಯನ್ನೇರಿ ಕಣ್ಣು ಕೋರೈಸುವ ತನ್ನ ಪ್ರಖರತೆಯಿಂದ ಜಗತ್ತನ್ನೆಲ್ಲಾ ಆವರಿಸಿ, ಆಕ್ರಮಿಸಿ, ಸಂಜೆಗೆ ಅಸ್ತನಾಗಿ ಹೋಗುತ್ತಾನೆ, ಮತ್ತೆ ನವೋದಯವನ್ನು ಪಡೆಯಲೆಂದು, ಕಾಡಿನಲ್ಲಿ ಬೆತ್ತಲೆಯಾಗಿ ಅಲೆಯುತ್ತಾ, ಬೆಂಕಿಯ ಬಳಕೆಯನ್ನು ಕೂಡ ಅರಿಯದೆ, ಕೈಗೆ ಸಿಕ್ಕುದುದ್ದನ್ನು ಹಸಿಹಸಿಯಾಗಿ ತಿಂದು, ವನ್ಯಮೃಗದಂತೆ ವ್ಯವಹರಿಸುತ್ತಿದ್ದ ಮಾನವ ದಿನದಿನಕ್ಕೆ ವಿಕಾಸಗೊಂಡು, ಇಂದು ವಿರಾಟ್ ವಿಶ್ವದ ಘನತತ್ವಗಳನ್ನೆಲ್ಲಾ ತನ್ನ ಪುಟ್ಟ ತಲೆಯಲ್ಲಿ ಅಡಗಿಸಿಟ್ಟುಕೊಳ್ಳುತ್ತಿದ್ದಾನೆ. ಇದು ಮಾನವ ಜನಾಂಗ ಪ್ರಳಯದಲ್ಲಿ ಮುಳುಗಿಹೋಗುವುದು, ಮತ್ತೆ ನವೋದಯವನ್ನು

ಪಡೆಯುವುದಕ್ಕಾಗಿಯೇ ಅನಂತ ಕಾಲ, ಅನಂತ ದೇಶ, ಅನಂತ ಜೀವನ – ಇವುಗಳ ಅಂಗವಾದ ಒಂದು ದಿನ, ಒಂದು ಊರು, ಒಬ್ಬ ಮಾನವ ಇವುಗಳ ಉನ್ನತಿ ಅವನತಿಗಳು ಮಾತ್ರವೇ ಅಲ್ಲದೆ ಒಂದು ಶತಮಾನ, ಒಂದು ಸಣ್ಣ ಜನಾಂಗ, ಒಂದು ಸಣ್ಣರಾಷ್ಟ್ರ – ಇವುಗಳೂ ಆ ವಿಶ್ವನಿಯಮಕ್ಕೆ ಅಧೀನವಾಗಿರುವುದು ನಮ್ಮ ಅರಿವಿಗೆ ಗೋಚರವಾಗಿದೆ. ಕಲೆ ಸಂಸ್ಕೃತಿ ನಾಗರಿಕತೆಗಳಲ್ಲಿ ಶಿಖರಚುಂಬಿಯಾಗಿದ್ದ ಗ್ರೀಕ್ ಜನಾಂಗ ಮರವೆಯ ಮಹಾ ಸಾಗರದಲ್ಲಿ ಮುಳುಗಿ ಹೋಗಿದೆ. ಒಂದಲ್ಲ ಒಂದು ದಿನ ನವೋದಯವನ್ನು ಪಡೆಯುವುದಕ್ಕಾಗಿಯೇ (ಈ ತತ್ವ ಶ್ರೀಮಾನ್ ಕುವೆಂಪುರವರ 'ಶ್ಮಶಾನ ಕುರುಕ್ಷೇತ್ರಂ'ನಲ್ಲಿ ರಮಣೀಯವಾಗಿ ಪ್ರತಿಪಾದಿತವಾಗಿದೆ) ಸಹಸ್ರಾರು ವರ್ಷಗಳ ಕೆಳಗೆ ಜಗತ್ತಿಗೆ ದಿವ್ಯ ಸಂದೇಶದ ಪ್ರಭೆಯನ್ನು ಚೆಲ್ಲಿದ ಭಾರತದ್ಯುಮಣಿ ಕೆಲವು ಶತಮಾನಗಳ ಕೆಳಗೆ ನಮ್ಮ ಅವಿದ್ಯೆಯ ಮುಗಿಲು ಮುಚ್ಚಿ ಅಸ್ತಂಗತನಾಗಿ ಹೋಗಿದ್ದನೋ ಎಂಬಂತಿದ್ದರೂ ಇಂದು ಮತ್ತೊಮ್ಮೆ ನವೋದಯವನ್ನು ಪಡೆದಿದ್ದಾನೆ. ಆತನ ಶುಭ್ರಧವಳ ಕಿರಣಗಳು ದಿಗಂತದೆಡೆ ದೇದೀಪ್ಯಮಾನವಾಗಿ ಬೆಳಗುತ್ತಿವೆ. ಭಾರತ ಭಾಗ್ಯದೇವತೆಯ ಸುಪುತ್ರಿಯರಂತಿರುವ ನಾಡದೇವಿಯರೆಲ್ಲರೂ ಈ ಸುಪ್ರಭಾತದಲ್ಲಿ ಸಡಗರಪಡುತ್ತಿದ್ದಾರೆ. ಅವರಲ್ಲಿ ಒಬ್ಬಳಾದ ಕನ್ನಡ ದೇವಿಯೂ ಈ ಮಹೋತ್ಸವದಲ್ಲಿ ಮುಂದಾಳಾಗಿ ನಿಂತಿದ್ದಾಳೆ. ಆಕೆಯ ಜೀವದುಸಿರೇ ಆಧುನಿಕ ಸಾಹಿತ್ಯ.

'ಆಧುನಿಕ' ಎಂದರೆ ಸ್ಥೂಲವಾಗಿ 'ಹೊಸತು' ಎಂದರ್ಥ. ಹೊಸತು ಎಂದರೆ ಹಳೆಯದನ್ನು ಹೂಳಿ ಹಾಕಿ ಸೃಷ್ಟಿಗೆ ಹಾಕುವುದೆಂದಲ್ಲ, ನಿನ್ನೆಯ ಸೂರ್ಯನೇ ಇಂದು ನೂತನ ಕಾಂತಿಯಿಂದ ಹೊರಹೊಮ್ಮುವಂತೆ ಅಂದಿನ ಸಾಹಿತ್ಯದ ಸೃಷ್ಟಿಶಕ್ತಿಯೇ ನೂತನ ಕಾಂತಿಯಿಂದ ಕಾಣಿಸಿಕೊಳ್ಳುವುದು. ಹಳೆಯದರ ಮರುಹುಟ್ಟೇ ನವೋದಯದ ಗುಟ್ಟು, ಹಳಿತಿಲ್ಲದ ಹೊಸ ತೆಂಬುದು ಬರಿಯ ಭ್ರಾಂತಿ. ಕನ್ನಡ ಸಾಹಿತ್ಯ ಜೀವಪೂರ್ಣವಾದುದು. ಆದ್ದರಿಂದ ಅದರಲ್ಲಿ ಮೇಲಿಂದ ಮೇಲೆ ನವೋದಯಗಳಾಗುತ್ತಾ ನಡೆದಿವೆ. ಮುಳುಗಿದಾಗಲೂ ಅದರ ನಡೆ ಮುಂದುವರಿಯುತ್ತಲೇ ಇರುತ್ತದೆ. ಹೀಗೆ ಮುಂದುವರೆಯುವಾಗ ಕಾಲದೇಶಗಳಿಗೆ ತಕ್ಕಂತೆ ಹೊಂದಿಕೊಂಡು ಬದಲಾವಣೆಗೊಳ್ಳುತ್ತದೆ. ಈಗ ಸಹಸ್ರ ವರ್ಷಗಳಿಂದಲೂ ಪಡೆದು ಬರುತ್ತಿರುವ ನಮ್ಮ ಸಾಹಿತ್ಯದಲ್ಲಿ ಇದನ್ನು ನಾವು ಸ್ಪಷ್ಟವಾಗಿ ಕಾಣಬಹುದು. ಬಹುಕಾಲ ರಾಜಾಸ್ಥಾನದ ಗೌರವ ಪ್ರತಿಷ್ಠೆಗಳಲ್ಲಿಯೇ ಬಾಳುತ್ತಿದ್ದುದು ಹನ್ನೆರಡನೆ ಶತಮಾನದಲ್ಲಿ ಧರ್ಮಯುಗ ಪ್ರಾರಂಭವಾದಾಗ, ವಚನಗಳ ರೂಪವನ್ನು ತಾಳಿ ಸಾಮಾನ್ಯಜನರ ಪ್ರತಿನಿಧಿಯಾಗಿ ನಿಂತಿತು. ಚಂಪೂವಿನ ಪೀಠದಿಂದ ಕೆಳಗಿಳಿದು ಬಂದ ಸಾಹಿತ್ಯವು ಹರಿಹರ ರಾಘವಾಂಕರಿಂದ ರಗಳೆ, ಷಟ್ಪದಿಗಳ ಉಡುಪನ್ನು ಧರಿಸಿತು. ಮುಂದೆ ಪುರಂದರದಾಸಾದಿ ಹರಿಭಕ್ತರು ಹಾಡುಗಳನ್ನು ಸಿಂಗರಿಸಿದರು. ಸಾಹಿತ್ಯದ ರೀತಿಯಲ್ಲಿ ವ್ಯತ್ಯಸ್ತವಾಗುತ್ತಾ ಹೋಗಿರುವಂತೆ ವಸ್ತುವಿನಲ್ಲಿಯೂ ಕಾಲಕಾಲಕ್ಕೆ ಬದಲಾವಣೆಗಳಾಗುತ್ತಾ ಬಂದಿರುವುದನ್ನು ನಾವು ಕಾಣಬಹುದು. ಸಾಹಿತ್ಯವು ರಾಜಾಸ್ಥಾನದ ಸ್ವತ್ತಾಗಿದ್ದಾಗ ಕೇವಲ ರಾಜನನ್ನು ಸಂತೋಷಪಡಿಸುವಂತಹ ಕಾವ್ಯವಸ್ತು ಕಾಣಬರುತ್ತಿತ್ತು. ರಾಜನು ವೀರನಾಗಿದ್ದಾಗ ಅವನನ್ನು ಅರ್ಜುನನೊಡನೆಯೋ ಭೀಮನೊಡನೆಯೋ ಅಭೇದವನ್ನು ಕಲ್ಪಿಸಿ ಬರೆದ ಕಾವ್ಯಗಳಿವೆ. ವೀರರಸ ಪರಿಪೂರ್ಣವಾದ ನಾಟಕಗಳು ಉದಿಸಿವೆ. ಆತನು ಶೃಂಗಾರಪ್ರಿಯನಾದಾಗ ಅದಕ್ಕೆ ತಕ್ಕ ಕಾವ್ಯ ನಾಟಕಗಳು ಉದಿಸಿದವು. ಧರ್ಮ ಪ್ರವಾಹದಲ್ಲಿ ಈ ಕೊಚ್ಚೆಯಲ್ಲವೂ ಕೊಚ್ಚಿ ಹೋಗುವಂತಾದಾಗ ಭಕ್ತಿ ಪ್ರಧಾನವಾದ ಕಾವ್ಯಗಳೂ ನೀತಿನಿರೂಪಣೆಗೆ ಮೀಸಲಾದ ನಾಟಕಗಳು ಹುಟ್ಟಿದವು. ಇಪ್ಪತ್ತನೆಯ ಶತಮಾನದ ವೇಳೆಗೆ ಕನ್ನಡ ಸಾಹಿತ್ಯದಲ್ಲಿ ನೂತನ ಯುಗವೊಂದು ಕಾಲಿಟ್ಟಿತ್ತು, ಪಾಶ್ಚಾತ್ಯ ವಿದ್ಯಾಭ್ಯಾಸದ ಫಲವಾಗಿ. ಮೊದಲು ಈ ವಿದ್ಯಾಭ್ಯಾಸದಿಂದ ಬಂದುದು,

ನಮ್ಮ ನುಡಿಯ ಮೇಲಿನ ಉದಾಸೀನ ಕಾಲಪುರುಷನ ನಿಯಮಗತಿಯನ್ನನುಸರಿಸಿ ಮೊದಲೇ ಕೆಳಮುಖವಾಗುಗಿದ ಕನ್ನಡ ಸಾಹಿತ್ಯ ಈಗ ಸುಮಾರು ಒಂದೂವರೆ ಶತಮಾನದ ಕೆಳಗೆ ಇಂಗ್ಲಿಷಿನ ಪ್ರಭಾವದಿಂದ ಅಜ್ಞಾನದಲ್ಲಿ ಮುಳುಗಿಹೋಯಿತು. ಆದರೇನು ? ಮರುಗಳಿಗೆಯೇ ಅದರ ಉದಯಕ್ಕೂ ಆರಂಭವಾಯಿತು. ಇಂಗ್ಲಿಷ್ ವಿದ್ಯಾಭ್ಯಾಸದ ಫಲವಾಗಿ ನಮ್ಮಲ್ಲಿ ಸ್ವಾಭಿಮಾನ ಉದಿಸಿತು. ಆ ಸಾಹಿತ್ಯದಲ್ಲಿ ಸ್ವಾತಂತ್ರ್ಯ, ಸೌಲಭ್ಯ, ರೀತಿ, ರಸಪುಷ್ಟಿಗಳನ್ನು ಕಂಡು ನಮ್ಮಲ್ಲಿಯೂ ಅಂತಹ ಸಾಹಿತ್ಯವನ್ನು ಸೃಷ್ಟಿಸಬೇಕೆಂಬ ಉತ್ಸಾಹ ಮೂಡಿತು. ಮೊದ ಮೊದಲು ಅಲ್ಲಿದ್ದುದನ್ನೇ ಹಸಿಹಸಿಯಾಗಿ ಇಲ್ಲಿಗೆ ತಂದುಕೊಳ್ಳುವ ಪ್ರಯತ್ನ ಪಡೆಯಿತು. ಆದರೆ ಕಾಲಕ್ರಮದಲ್ಲಿ ನಮ್ಮ ಸಾಹಿತ್ಯದೊಡನೆ ಅದನ್ನು ಸಮನ್ವಯಗೊಳಿಸಿಕೊಳ್ಳುವ ಶಕ್ತಿ ಪರಿಣತಿಗೊಂಡು ಈಗ ಚಿರಕಾವ್ಯಗಳು ಜನಿಸಲು ಸಹಾಯಕವಾಗಿದೆ.

ನಮ್ಮ ಹಳೆಯ ಸಾಹಿತ್ಯದಲ್ಲಿರುವ ಸತ್ವದೊಡನೆ ಪಾಶ್ಚಾತ್ಯ ವಿದ್ಯಾಭ್ಯಾಸದಿಂದ ಬಂದ ನೂತನ ಭಾವನೆಗಳನ್ನು ಅಳವಡಿಸಿಕೊಂಡುದೇ 'ಆಧುನಿಕ ಸಾಹಿತ್ಯ' ಎಂದು ಹೇಳಬಹುದು. ಇದನ್ನೇ ಕುವೆಂಪುರವರ ರಸವಾಣಿಯಲ್ಲಿ ಹೇಳುವುದಾದರೆ 'ರಸಋಷಿಯಾದ ಕವಿ ಅರ್ವಾಚೀನದ ಶಿಖರೇಶ್ವರದಲ್ಲಿ ನಿಂತು ತನ್ನೊಂದು ಕೈಯನ್ನು ಮುಸುಗುತ್ತಲೆ ಕವಿದ ಪ್ರಾಚೀನದಗೋರಿಯೊಳಗೆ ನೀಡಿ ಹುಡುಕುತ್ತಿರುತ್ತಾನೆ; ಮತ್ತೊಂದು ಕೈಯನ್ನು ಅನಂತತೆಯ ಗಗನೀಲಿಮೆ ತುಂಬಿರುವ ಭವಿಷ್ಯತ್ತಿನ ಅವ್ಯಕ್ತ ಗರ್ಭದ ಕಡೆಗೆ ಚಾಚಿ ತಡುವುತ್ತಿರುತ್ತಾನೆ.'[೧] ಹಾಗಾಗಿ ಆಧುನಿಕತೆ ಎಂದರೆ ಪರಂಪರೆಯನ್ನು ಹಿಂದೆ ಬಿಟ್ಟು ಮುಂದೆ ಹೋಗುವಂಥದ್ದಲ್ಲ. ಹಳತಾದದ್ದನ್ನೆಲ್ಲಾ ಹಿಂದೂಡಿ ಯಾವುದೇ ಅವ್ಯಕ್ತಕ್ಕೆ ಕೈ ಚಾಚುವುದಕ್ಕಿಂತ ಹೆಚ್ಚಾಗಿ ಆಧುನಿಕ ಪರಂಪರೆಯನ್ನು ಮುಖಾಮುಖಿಯಾಗಿ ಸಂಧಿಸುವ ಹಾಗೂ ಪ್ರಶ್ನಿಸುವ ಪ್ರಯತ್ನ ಮಾಡುತ್ತಿರುತ್ತದೆ. ಅಂದರೆ ಆಧುನಿಕತೆ ಮತ್ತು ಪರಂಪರೆ ಬೇರೆ ಬೇರೆಯಾಗಿ ನಿಲ್ಲುವ ವೈರುಧ್ಯಗಳೇನಲ್ಲ. ಆಧುನಿಕತೆ ಪರಂಪರೆಯನ್ನು ಹೊಸ ಸಾಮಾಜಿಕ ಸಾಂಸ್ಕೃತಿಕ ನೆಲೆಗಳಿಂದ ಅರ್ಥೈಸುತ್ತಲೇ ಅದನ್ನು ಮುಂದುವರೆಸುವ ಕೆಲಸವನ್ನು ಕೂಡ ಮಾಡುತ್ತಿರುತ್ತದೆ. ಪರಂಪರೆಯ ಪುನರ್ ಮೌಲ್ಯಮಾಪನ ಅದನ್ನು ಸದಾ ಜೀವಂತವಾಗಿಡುವ ಸಾಧನವೂ ಆಗಿರುತ್ತದೆ. ಇತರ ಸಾಮಾಜಿಕ ಸಂಸ್ಥೆಗಳಿಗಿಂತಲೂ ಹೆಚ್ಚಾಗಿ ಸಾಹಿತ್ಯದಲ್ಲಿ ಇಂತಹ ನವೀಕರಣ ಹೆಚ್ಚು ಜಾಗೃತವಾಗಿಯೂ ಪ್ರಬಲವಾಗಿಯೂ ಕಂಡು ಬರುತ್ತದೆ. ತನ್ನ ಕಾಲದ ಎಲ್ಲ ಸೂಕ್ಷ್ಮ ಸಂವೇದನೆಗಳಿಗೂ ಸದಾ ಎಚ್ಚರವಾಗಿರುವ ಜವಾಬ್ದಾರಿ ಸಾಹಿತ್ಯಕ್ಕೆ ಹೆಚ್ಚು ಇರುವುದರಿಂದ, ಕಾಲ ಕಾಲಕ್ಕೆ ಬದಲಾಗುವ ಸಾಹಿತ್ಯದ ಪ್ರಕಾರಗಳು ಪಲ್ಲಟಗೊಳ್ಳುತ್ತಿರುವ ಸಾಮಾಜಿಕ ಮೌಲ್ಯಗಳನ್ನು ಧ್ವನಿಸುತ್ತಿರುತ್ತದೆ. ಸಾಹಿತ್ಯದ ಮೂಲಪರಿಕರವಾದ ಭಾಷೆ ಪರಂಪರೆ ಮತ್ತು ಆಧುನಿಕತೆಗಳನ್ನು ಬೆಸೆಯುವ ಕೊಂಡಿಯಾಗಿಕೆಲಸ ಮಾಡುತ್ತಿರುತ್ತದೆ. ಕನ್ನಡದಲ್ಲಿ ಆದ ಈ ಪುನರುಜ್ಜೀವನವನ್ನು ಕನ್ನಡದ ಆಚಾರ್ಯರಾದ ಬಿ.ಎಂ. ಶ್ರೀಯವರು ವಿವರಿಸುತ್ತಾ "ಸಾಮಾನ್ಯವಾಗಿ Renaissance ಎಂಬ ಶಬ್ದವನ್ನು ಉಪಯೋಗಿಸುವುದರಲ್ಲಿ Dawn of Fresh day ಎಂಬ ಮಾತಿನಲ್ಲಿ, ನವೋ ನವೋ ಭವತಿ ಜಾಯಮಾನ ಎಂಬ ಮಂತ್ರದಲ್ಲಿ ಯಾವ ನೂತನವಾದ, ಶಾಶ್ವತವಾದ, ಲಕ್ಷಣತತ್ವಭಾವಗಳು ನಮ್ಮ ಮನಸ್ಸಿನಲ್ಲಿ ಬರುತ್ತವೆಯೋ ಅವುಗಳನ್ನೇ ಪುನರ್‌ಜ್ಜೀವನ ಎಂಬ ಶಬ್ದದ ವಿಷಯದಲ್ಲಿಯೂ ನಾವು ಇಟ್ಟುಕೊಳ್ಳಬಹುದಾಗಿದೆ"[೨] ಎಂದು ಹೇಳಿದ್ದಾರೆ. ಹೊಸದು, ಹಳದು, ನಮ್ಮದು, ಹೆರರದು ಎಲ್ಲವನ್ನೂ ಹೊಂದಿಸಿ ಮೂಡುವ ಸಮನ್ವಯವೇ ಈ ಪುನರುಜ್ಜೀವನವೆಂಬುದು ಅವರ ಭಾವನೆ.

---

೧. ಸಾಹಿತ್ಯ ಪ್ರಚಾರ, ಪುಟ ೪೦

೨. ಕನ್ನಡಿಗರಿಗೆ ಒಳ್ಳೆಯ ಸಾಹಿತ್ಯ, ಪುಟ ೬೫

ಪಾಶ್ಚಾತ್ಯ ವಿದ್ಯಾಭ್ಯಾಸದಿಂದ ಕನ್ನಡ ಸಾಹಿತ್ಯದ ಮೇಲೆ ಆಗಿರುವ ಪರಿಣಾಮ ಪ್ರಭಾವಗಳನ್ನು ಅದರ ಅಂತರಂಗ ಬಹಿರಂಗಗಳೆರಡರಲ್ಲಿಯೂ ನಾವು ಕಾಣಬಹುದು. ನಮ್ಮ ಸಂಪ್ರದಾಯದ ಸಾಹಿತ್ಯದ ತಿರುಳೆಂದರೆ ದೈವ, ಧರ್ಮ, ಪೌರುಷಕ್ಕೆ ಅವರು ಸ್ಥಾನವನ್ನೇ ಕಲ್ಪಿಸಿರಲಿಲ್ಲವೆಂದಲ್ಲ, ನಮ್ಮ ವೇದ ಉಪನಿಷತ್ತುಗಳಲ್ಲಾಗಲಿ ಅಥವಾ ಗೀತೆಯಲ್ಲಾಗಲಿ ನಾವು ಪುರುಷಕಾರ್ಯಕೆ ಅತಿಶಯವಾದ ಬೆಲೆಯಿರುವುದನ್ನು ಕಾಣುತ್ತೇವೆ. ಮಾನವನು ಒಂದು ಬಾರಿ, ಎರಡು ಬಾರಿಯಲ್ಲ; ಆರು ಬಾರಿ ಪ್ರಯತ್ನಿಸಿದ ಮೇಲೆ 'ಸಪ್ತಮಂ ದೈವ ಚಿಂತನಂ' ಸೀತಾಪಹರಣವಾದಾಗ ಶ್ರೀ ರಾಮನು ನಿರ್ವಿಣ್ಣನಾಗಿರಲು ಲಕ್ಷ್ಮಣನು ಅಣ್ಣನನ್ನು ಪ್ರತಿಬೋಧಿಸಿದ –

ಉತ್ಸಾಹೋ ಬಲವಾನಾರ್ಯ ನಾಸ್ತ್ಯು, ತ್ಸಾಹಾತ್ ಪರಂ ಬಲಂ
ಸೋತ್ಸಾಹಸ್ಯಾಸ್ತಿ ಲೋಕೇಸ್ಮಿನ ಕಿಂಚಿದಪಿ ದುರ್ಲಭಂ
ಉತ್ಸಾಹವಂತಃ ಪುರುಷಾಃ ನಾವ ಸೀದಂತಿ ಕರ್ಮಸು
ಉತ್ಸಾಹಮಾತ್ರ ಮಾಶ್ರಿತ್ಯ ಸೀತಾಂ ಪ್ರತಿಲಭೇಮಹಿ

ಎಂಬ ವೀರವಾಣಿಯಿಂದ, 'ಕುತಸ್ತ್ವಾ ಕಶ್ಮಲಮಿದಂ ವಿಷಮೇ ಸಮುಪ ಸ್ಥಿತಂ' ಎಂದು ಗದರಿಸಿ ಶ್ರೀಕೃಷ್ಣನು ಅರ್ಜುನನನ್ನು 'ತಸ್ಮಾತ್ ಯುಧ್ಯಸ್ವ ಭಾರತ' ಯಧ್ಯಸ್ವ ವಿಗತಜ್ವರಃ ಎಂದು ಧೀಗುಟ್ಟಿದ. ಆದರೆ ೧೬ನೆಯ ಶತಮಾನದಿಂದ ಈಚೆಗೆ ನಮ್ಮ ಜನರಲ್ಲಿ ನಿರುತ್ಸಾಹ ಮೂಡಿದುದನ್ನು ಕಾಣುತ್ತೇವೆ. ರಾಜಕೀಯ, ಸಾಮಾಜಿಕ, ಧಾರ್ಮಿಕ ಪ್ರಪಂಚದಲ್ಲಿ ಜನರು ಕ್ಷೋಭೆಗೊಂಡು ಕಳೆಗೆಟ್ಟರು. 'ಸಪ್ತಮಂ ದೈವಚಿಂತನಂ'ಗೆ ಬದಲಾಗಿ 'ಪ್ರಥಮಂ ದೈವ ಚಿಂತನಂ' ಆರಂಭವಾಯಿತೆಂದು ತೋರುತ್ತದೆ. ಧರ್ಮ ದೈವಗಳ ಹೆಸರಿನಲ್ಲಿ ಕುರುಡು ನಂಬಿಕೆಗಳೂ ಅಂಧಾನುಕರಣಗಳೂ ಬೇಕಾದಷ್ಟು ಆರಂಭವಾದವು. ಅವುಗಳ ಜೊತೆಗೆ ವಿಧಿ, ಕರ್ಮ, ಜನ್ಮಾಂತರಗಳ ಭಾವನೆ ಪ್ರಬಲಿಸಿ 'ದೈವಿ ವಿಚಿತ್ರಾಗತಿ', 'ಕಾಲಾಯ ತಸ್ಮೈ ನಮಃ' 'ದೈವಂ ಪರಂ ದುರ್ಜಯಂ' ಆರೇನ ಮಾಡುವರು ಆರಿಂದಲೇನಹುದು ಪೂರ್ವ ಜನ್ಮದ ಕರ್ಮ ವಿಧಿ ಬೆನ್ನ ಬಿಡಿದು' – ಎಂಬ ನುಡಿಗಳು ಮನಸ್ಸಿನಲ್ಲಿ ಮನೆಮಾಡಿಕೊಳ್ಳುವಂತಾಯಿತು. ಇದಕ್ಕೆ ಪ್ರತಿಭಟನೆಯನ್ನು ತಂದೊದಗಿಸಿತು ಪಾಶ್ಚಾತ್ಯರ ವೈಜ್ಞಾನಿಕ ಮನೋಭಾವನೆ.

ವೈಜ್ಞಾನಿಕ ಮನೋಭಾವನೆಗೆ ಜೀವಭೂತವಾದುದು ಸ್ವತಂತ್ರ ವಿವೇಚನೆ. ಇದರ ಫಲವಾಗಿ ನಮ್ಮಲ್ಲಿದ್ದ ಕುರುಡುನಂಬಿಕೆಗಳೆಲ್ಲಾ ಹಾರಿಹೋಗಿವೆ. ಅಂಧಶ್ರದ್ಧೆಗೆ ಅರ್ಧಚಂದ್ರ ಪ್ರಯೋಗವಾಗಿದೆ. ''ಶ್ರದ್ಧೆಗಿಂತಲೂ ಬುದ್ಧಿಗೆ ಪ್ರಧಾನಸ್ಥಾನ ದೊರೆತಿದೆ. ಶ್ರುತಿಪ್ರಮಾಣಕ್ಕಿಂತಲೂ ಮತಿಯ ಸಂಶೋಧನೆಗೆ ಹೆಚ್ಚೆಚ್ಚು ಮನ್ನಣೆ ದೊರೆತಿದೆ .... ಮತಿಯ ಒರೆಗಲ್ಲಿನ ಪರೀಕ್ಷೆಯಲ್ಲಿ ತೇರ್ಗಡೆ ಹೊಂದದೆ ಯಾವ ಸ್ಥಂಬುಗೆಯೂ ಬದುಕುವಂತಿಲ್ಲ'' ೧ ಪವಿತ್ರವಾದುವೆಂದೂ ಪ್ರಶ್ನೆಗೆ ಅತೀತವಾದುದೆಂದೂ ಭಾವಿಸಿದ್ದ ಪುರಾಣ ಪುಣ್ಯಕಥೆಗಳೆಲ್ಲವೂ ವಿಜ್ಞಾನದೃಷ್ಟಿಯ ಫಲವಾಗಿ ನಮ್ಮ ವಿಮರ್ಶೆಗೂ ಟೀಕೆಗೂ ಒಳಗಾಗಬೇಕಾಗಿದೆ. 'ಅಷ್ಟವರ್ಷಾ ಭವೇತ್ ಕನ್ಯಾ' ಎಂದು ಶಾಸ್ತ್ರ ಸಾರುತ್ತಿರುವುದನ್ನು ಎಷ್ಟಾದರೆ ಅಷ್ಟೇ ವರ್ಷ – ಎಂದು ಮನಸ್ಸಿನಲ್ಲಿಯೇ ತಿದ್ದುಕೊಂಡಿದ್ದಾರೆ. ಮತ ಸೂಚಕಗಳಾದ ವಿಭೂತಿಯುಂಡೆ ತುಲಸೀಮಣಿಗಳ ಪ್ರಾಬಲ್ಯ ನಿಂತುಹೋಗುತ್ತಿದೆ. ಮತ ದೃಷ್ಟಿಯೆಂಬುದು ''ಹಿಂದಿನಂತೆ ಪ್ರಚಾರಶೀಲವಾಗಿರದೆ ವಿಚಾರಾತ್ಮಕವಾಗುತ್ತದೆ'' ೨ ಅದರಲ್ಲಿದ್ದ ಭಿನ್ನಮನೋಧರ್ಮಗಳು ''ಮಾಯವಾಗಿ ವಿಶಾಲಭಾವನೆ ಬೆಳೆಯುತ್ತಿದೆ. 'ಉದಾರ ಚರಿತಾನಾಂತು ವಸುಧೈವ ಕುಟುಂಬಕಂ. 'ಅಹುದು, ವಿಜ್ಞಾನದಿಂದ ಬಂದಿರುವ ಯಂತ್ರ ಸಾಧನಗಳ ಫಲವಾಗಿ ದೂರಕ್ಕೆ ಬೆಲೆ ಕುಗ್ಗಿದೆ. ಜನರೆಲ್ಲರೂ ಬೇಕಿರಲಿ ಬೇಕಿಲ್ಲದಿರಲಿ ಪರಸ್ಪರ ಕಲೆಯುವುದು

ಅನಿವಾರ್ಯವಾಗಿದೆ. ಜಗತ್ತಿನ ಮೂಲೆಮೂಲೆಗಳಲ್ಲಿ ನಡೆಯುವುದನ್ನು ಕೊಠಡಿಯ ಮೂಲೆಯಲ್ಲಿ ಕುಳಿತೇ ಕೇಳುವ, ನೋಡುವ ಅನುಕೂಲವಿರುವುದರಿಂದ ನಮಗೆ ಅರಿವಿಲ್ಲದೆಯೇ ನಮ್ಮ ಜ್ಞಾನವೃದ್ಧಿಯಾಗುತ್ತಿದೆ. "ಆಧುನಿಕ ಜಗಜ್ಜೀವನ ರಾಜಕೀಯಾಗ್ನಿಯಿಂದ ಕುದಿಯುತ್ತಿರು"[1]ವುದರಿಂದ ಅದರ ಕಾವು ನಿತ್ಯ ಜೀವನದಲ್ಲಿಯೂ, ಆ ಜೀವನದ ಪ್ರತಿಬಿಂಬವಾದ ಸಾಹಿತ್ಯದಲ್ಲಿಯೂ ಮನೆ ಮಾಡಿಕೊಳ್ಳುತ್ತಿದೆ. ಪಾಶ್ಚಾತ್ಯರ ಲೌಕಿಕ ಮನೋಭಾವನೆ ಪ್ರಬಲಿಸಿ ಜನರು ಸ್ವತಂತ್ರರಾಗಬೇಕೆಂಬ, ಸುಖಿಗಳಾಗಬೇಕೆಂಬ ಹಂಬಲ ಹೆಚ್ಚಾಗಿ ಹೋಗಿದೆ. ಎತ್ತರದ ದೃಷ್ಟಿಯಲ್ಲದಿದ್ದರೂ ಬಿತ್ತರದ ದೃಷ್ಟಿಯಿಂದ ನಾವು ಅಭ್ಯುದಯಗಾಮಿಗಳಾಗಿದ್ದೇವೆ ಎಂದು ಆಶಾವಾದಿಗಳಾಗಬಹುದು.

ಪಾಶ್ಚಾತ್ಯರ ಪೌರುಷವಾದ ಮತ್ತು ನಮ್ಮಲ್ಲಿ ಅತ್ಯಂತ ಪ್ರಬಲಗೊಳ್ಳುತ್ತಿರುವ ಈ ಕಾಲದಲ್ಲಿ ಒಂದು ಎಚ್ಚರಿಕೆಯ ಮಾತು ಅತ್ಯವಶ್ಯ. ಪಾಶ್ಚಾತ್ಯರಲ್ಲಿ ಜನ ಎಚ್ಚೆತ್ತುಕೊಳ್ಳುತ್ತಿದ್ದಾರೆ. ಬರಿಯ ಪೌರುಷವಾದ ಹುರುಳಿಲ್ಲದುದೆಂಬುದನ್ನು ಅವರು ಮನಗಾಣುತ್ತಿದ್ದಾರೆ. ಎಂಬಾತನು ವಿಜ್ಞಾನ ಯುಗದ ಮಾನವ ಪ್ರಯತ್ನದ ಪೊಳ್ಳನ್ನು ಎತ್ತಿತೋರಿಸಿದ್ದಾನೆ.[2] ಅಲ್ಲಿನ ದೊಡ್ಡ ಸಾಹಿತಿಗಳು ಅಲ್ಲಿ ಉದಯವಾಗುತ್ತಿರುವ ಸಾಹಿತ್ಯ ಬುಡಭದ್ರವಿಲ್ಲದುದೆಂದು ಹೇಳುತ್ತಿದ್ದಾರೆ. ಆದರೆ ಅವರನ್ನು ಅನುಕರಿಸುವುದಕ್ಕೆ ಹೊರಟ ನಮ್ಮ ಜನ ಮತ್ತೊಂದು ಅಂಧಾನುಕರಣಕ್ಕೆ ಬಲಿಯಾಗುತ್ತಿದ್ದಾರೆ. ಅವರು ತಮ್ಮ ಪ್ರಕೃತಿ ವಿಜ್ಞಾನದೊಡನೆ ನಮ್ಮ ಆತ್ಮ ತತ್ವಜ್ಞಾನವನ್ನು ಹೊಂದಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಆದರೆ ನಾವು ಕೈಲಿರುವ ಮಾಣಿಕ್ಯವನ್ನು ಕಿತ್ತೊಗೆದು ಗಾಜಿನ ಕಡೆಗೆ ಕೈನೀಡುತ್ತಿದ್ದೇವೆ. ಪರದೇಶಿಯರ ಗಹನವಿಚಾರವನ್ನೂ ಉತ್ತಮ ಆಚರಣೆಯನ್ನೂ ನಮ್ಮ ಆಲೋಚನೆಗೆ ವಿಷಯಗಳನ್ನಾಗಿ ತೆಗೆದುಕೊಳ್ಳುವುದು ಅಪೇಕ್ಷಣೀಯ; ನಮ್ಮ ಸಾಹಿತ್ಯದಲ್ಲಿ ವೈವಿಧ್ಯವನ್ನೂ ಜೀವಕಳೆಯನ್ನೂ ತರಲು ಅವು ಬಹಳ ಸಹಾಯಕಗಳಾಗುತ್ತವೆ. ಆದರೆ ನಮ್ಮ ಆತ್ಮ ತತ್ವಜ್ಞಾನವನ್ನು ಸೂರೆಗೊಟ್ಟು ಹೊರಗಿನ ಲೌಕಿಕ ಜ್ಞಾನವನ್ನು ಮಾತ್ರ ಗಳಿಸಹೊರಡುವುದು ವಿವೇಕವಲ್ಲ, ಎರಡನ್ನೂ ಸಮನ್ವಯ ಮಾಡಿಕೊಳ್ಳಬೇಕು. ಹೀಗೆ ಸಮನ್ವಯ ಮಾಡಿಕೊಂಡು ಸಾಹಿತ್ಯವೇ ಚಿರ ಸಾಹಿತ್ಯ. ಅಂತಹ ಸಾಹಿತ್ಯವೇ ಆಧುನಿಕ ಸಾಹಿತ್ಯ.

ಆಧುನಿಕ ಯುಗದ ಆರಂಭ ಕಾಲ

ಕನ್ನಡ ಸಾಹಿತ್ಯವಾಹಿನಿ ಹತ್ತೊಂಬತ್ತನೆಯ ಶತಮಾನದ ಮಧ್ಯ ಭಾಗದ ಹೊತ್ತಿಗೆ ಬತ್ತಿಯೇ ಹೋಗುವುದೇನೊ ಎನ್ನುವಷ್ಟು ತೆಳುವಾಯಿತು. ಆ ವೇಳೆಗಾಗಲೇ ಕರ್ನಾಟಕ ಬ್ರಿಟಿಷರ ಆಳ್ವಿಕೆಗೆ ಸೇರಿಹೋಗಿತ್ತು. ಇಂಗ್ಲಿಷ್ ಶಿಕ್ಷಣದ ಮೂಲಕ ಕನ್ನಡ ಭಾಷೆಯ ಅಭ್ಯಾಸ ಕುಂಠಿತಗೊಂಡಿತು. ಬುದ್ಧಿ ಜೀವಗಳ ಮಾತೃಭಾಷಾಪ್ರೇಮ ಇಂಗ್ಲಿಷ್ ಭಾಷೆಯ ಮೋಹದಲ್ಲಿ ಮುಳುಗಿ ಹೋಯಿತು. ಆದರೆ ಅದೇ ಇಂಗ್ಲಿಷ್ ಭಾಷೆ ಸಾಹಿತ್ಯಗಳ ಅಧ್ಯಯನವೇ ಕನ್ನಡ ಜನರ ಆತ್ಮಾಭಿಮಾನವನ್ನು ಕೆರಳಿಸಿ, ದೇಶಭಾಷೆಗಳ ಅದ್ಭುತ ಕ್ರಾಂತಿಗೂ ಮೂಲವಾಯಿತು. ಯಾವ ಇಂಗ್ಲಿಷ್ ಭಾಷೆಯ ವ್ಯಾಮೋಹ ಕನ್ನಡಿಗರನ್ನು ಆವರಿಸಿತ್ತೋ ಆ ವ್ಯಾಮೋಹವೇ ಕನ್ನಡ ಭಾಷೆಯ ಬೆಳವಣಿಗೆಗೆ ಉದ್ಧಾರಕ್ಕೆ ಕಾರಣವಾಯಿತು. ಇಂಗ್ಲಿಷ್ ಸಾಹಿತ್ಯದಲ್ಲಿನ ಸ್ವಾತಂತ್ರ್ಯ, ಸೌಲಭ್ಯ, ರೀತಿ, ರಸಪುಷ್ಟಿಗಳನ್ನು ಕಂಡು ಕನ್ನಡದಲ್ಲಿಯೂ ಅಂಥ ಸಾಹಿತ್ಯವನ್ನು ಸೃಷ್ಟಿಸಬೇಕೆಂಬ ಉತ್ಸಾಹ ಮೂಡಿತು ಮೊದಲಿಗೆ ಈ ಕಾರ್ಯ

---

೧. ಅದೇ ಪುಟ ೫೮

೨. Man the unknown - Alexis Carrel

ಅನುವಾದಗಳ ಮೂಲಕ ನಡೆಯಿತು. ಕಾಲಕ್ರಮದಲ್ಲಿ ಕನ್ನಡ ಸಾಹಿತ್ಯದೊಡನೆ ಅದನ್ನು ಸಮನ್ವಯಗೊಳಿಸಿಕೊಳ್ಳುವ ಶಕ್ತಿ ಪರಿಣತಗೊಂಡು, ಅರ್ಧ ಶತಮಾನದಿಂದ ಈಚೆಗೆ ಉತ್ತಮ ಕಾವ್ಯಗಳು ರಚನೆಗೊಳ್ಳುತ್ತ ಬಂದಿದೆ.

ಆಧುನಿಕ ಕನ್ನಡ ಸಾಹಿತ್ಯದ ಆರಂಭದೆಸೆಯಲ್ಲಿ ಪಾಶ್ಚಾತ್ಯ ವಿದ್ವಾಂಸರಿಂದ ಕನ್ನಡಕ್ಕೆ ದೊರೆತ ಪ್ರೇರಣೆ, ಪ್ರಯೋಜನಗಳು ಚಿರಸ್ಮರಣೀಯವಾದವು. ಇವರು ಕರ್ನಾಟಕದ ಜನಜೀವನದಲ್ಲಿ ಸಮರಸವಾಗಿ ಬೆರೆತು, ಇಲ್ಲಿನ ಸಾಹಿತ್ಯ ಸಂಸ್ಕೃತಿಗಳನ್ನು ಆಳವಾಗಿ ಅಧ್ಯಯನ ಮಾಡಿ, ಹಲವು ಪ್ರಾಚೀನ ಗ್ರಂಥಗಳನ್ನು ಸಂಪಾದಿಸಿ ಪ್ರಕಟಿಸಿದುದಲ್ಲದೆ, ಕನ್ನಡ ಭಾಷಾ ಸ್ವರೂಪವನ್ನು ದಿಗ್ದರ್ಶಿಸಬಲ್ಲ ವ್ಯಾಕರಣ, ಛಂದಸ್ಸು ನಿಘಂಟು ಮೊದಲಾದ ಗ್ರಂಥಗಳ ರಚನೆಗೆ ಕೈ ಹಾಕಿದರು. ಜಾನ್ ಹ್ಯಾಂಡ್, ವಿಲಿಯಂ ರೀವ್, ಕಿಟ್ಟೆಲ್, ಜೀಗ್ಲರ್. ಬಿ.ಎಲ್. ರೈಸ್, ಇ.ಪಿ. ರೈಸ್ ಮೊದಲಾದವರಿಂದ ಕನ್ನಡ ಭಾಷಾಸಾಹಿತ್ಯಗಳಿಗೆ ಆಗಿರುವ ಸೇವೆ ಅಪಾರ. ಪಾದ್ರಿಗಳು ಕನ್ನಡ ಸಾಹಿತ್ಯದ ಹಲವು ಹೊಸಮುಖಗಳಿಗೆ ಅಂಕುರಾರ್ಪಣೆ ಮಾಡಿದರು; ವಸ್ತುನಿಷ್ಠವಾದ ಆಧುನಿಕ ಸಾಹಿತ್ಯ ವಿಮರ್ಶೆಗೆ ತಳಹದಿ ಹಾಕಿದರು. ಮೊಟ್ಟಮೊದಲ ಕನ್ನಡ ಸಾಹಿತ್ಯ ಚರಿತ್ರೆ ಬರೆದ ಕೀರ್ತಿ ಇ.ಪಿ. ರೈಸ್ (ಮೊದಲ ಮುದ್ರಣ ೧೯೧೫) ಅವರಿಗೆ ಸಲ್ಲುತ್ತದೆ; ಕನ್ನಡ ಶಾಸನಗಳನ್ನು ಕಲೆಹಾಕಿದ ಕೀರ್ತಿ ಫ್ಲೀಟ್ (ಮೊದಲ ಮುದ್ರಣ ೧೮೭೮) ಅವರದಾದರೆ, ಮೈಸೂರು ಗೆಜೆಟಿಯರಿನ ಎರಡು ಸಂಪುಟಗಳನ್ನೂ ಎಪಿಗ್ರಾಫಿಯ ಕರ್ನಾಟಕದ ಹನ್ನೆರಡು ಸಂಪುಟಗಳನ್ನೂ ಹೊರತಂದ ಕೀರ್ತಿ ಬಿ.ಎಲ್. ರೈಸ್ ಅವರಿಗೆ ಸಲ್ಲುತ್ತದೆ. ದ್ರಾವಿಡ ಭಾಷೆಗಳ ತುಲನಾತ್ಮಕ ವ್ಯಾಕರಣ ನೀಡಿದ ಕಾಲ್ಡ್‌ವೆಲ್ಲರು ಹಲವು ದೃಷ್ಟಿಗಳಿಂದ ಚಿರಸ್ಮರಣೀಯರು.

ಆಧುನಿಕ ಸಾಹಿತ್ಯದ ಅಂಕುರಾರ್ಪಣೆಗೆ ಮೈಸೂರು ಅರಸರಿಂದ ದೊರೆತ ಸಹಾಯವು ಬಹು ಮುಖ್ಯವಾದದ್ದು. ಚಾಮರಾಜ ಒಡೆಯರು ತಮ್ಮ ಆಶ್ರಯದಲ್ಲಿ ಶ್ರೀ ಚಾಮರಾಜೇಂದ್ರ ಕರ್ನಾಟಕ ನಾಟಕ ಸಭಾವನ್ನು ಸ್ಥಾಪಿಸಿ. ತಮ್ಮ ಆಸ್ಥಾನ ಪಂಡಿತರನ್ನು ನಾಟಕ ರಚನೆಗೆ ಕೈ ಹಾಕುವಂತೆ ಪ್ರೋತ್ಸಾಹಿಸಿದರು. ಅಭಿನವ ಕಾಳಿದಾಸರೆಂದು ಪ್ರಸಿದ್ಧರಾಗಿದ್ದ ಬಸಪ್ಪಶಾಸ್ತ್ರಿಗಳು ಶಾಕುಂತಲ ಮೊದಲಾದ ಸಂಸ್ಕೃತ ನಾಟಕಗಳ ಭಾಷಾಂತರಗಳನ್ನೂ ಶೂರ ಸೇನ ಚರಿತೆ ಎಂಬ ಹೆಸರಿನಿಂದ ಒಥೆಲೊ ಎಂಬ ಇಂಗ್ಲಿಷ್ ನಾಟಕದ ಭಾಷಾಂತರವನ್ನೂ ಕನ್ನಡಕ್ಕೆ ಕೊಟ್ಟರು. ಆಸ್ಥಾನಕವಿಗಳಾದ ಜಯರಾಯಾಚಾರ್ಯ, ಸುಬ್ಬಾಶಾಸ್ತ್ರಿ ಅನಂತನಾರಾಯಣ ಶಾಸ್ತ್ರಿ ಮೊದಲಾದವರೂ ಈ ಕಾರ್ಯರಂಗದಲ್ಲಿ ದುಡಿದು ಕೀರ್ತಿಶೇಷರಾದರು. ಜಯಚಾಮರಾಜರ ಅನಂತರ ಪಟ್ಟಕ್ಕೆ ಬಂದ ನಾಲ್ವಡಿ ಕೃಷ್ಣರಾಜರು ಆಧುನಿಕ ಕನ್ನಡದ ಸ್ವರ್ಣಯುಗಕ್ಕೆ ತಳಹದಿ ಹಾಕಿದವರೆಂದು ಹೇಳಬಹುದು. ಅವರ ಆಸ್ಥಾನಕವಿಗಳಾದ ಶ್ರೀಕಂಠ ಶಾಸ್ತ್ರಿಗಳೂ, ನರಹರಿ ಶಾಸ್ತ್ರಿಗಳೂ ನೂರಾರು ಸ್ವತಂತ್ರ ನಾಟಕಗಳನ್ನೂ ರಚಿಸಿ ನಾಟಕ ರಂಗಸ್ಥಳಗಳ ದ್ವಿಗಿಜಯಕ್ಕೆ ಕಾರಣರಾದುದಲ್ಲದೆ ಹಲವು ಕಾವ್ಯಗಳ ಕರ್ತೃಗಳಾಗಿ ಸಾಹಿತ್ಯದ ಶ್ರೀಮಂತಿಕೆಯನ್ನು ಹೆಚ್ಚಿಸಿದರು. ಅದರಲ್ಲಿಯೂ ಶ್ರೀಕಂಠಶಾಸ್ತ್ರಿಗಳ ಬಹುಮುಖ ಪ್ರತಿಭೆ ಅಚ್ಚರಿಯನ್ನುಂಟು ಮಾಡುತ್ತದೆ. ಹಲವು ಕಾದಂಬರಿಗಳು, ವ್ಯಂಗ್ಯಚಿತ್ರಗಳು, ವಿಡಂಬನಾತ್ಮಕ ಪ್ರಬಂಧಗಳು, ಸಂಸ್ಕೃತ, ತೆಲುಗು ಗ್ರಂಥಗಳ ಅನುವಾದಗಳು ಇವರಿಂದ ಮೂಡಿಬಂದವು. ಇದೇ ಸಂದರ್ಭದಲ್ಲಿ ಶ್ರೀಕೃಷ್ಣರಾಜ ಒಡೆಯರು ಕನ್ನಡ ನವೋದಯಕ್ಕಾಗಿ ನೀಡಿದ ಎರಡು ಮುಖ್ಯ ಕಾಣಿಕೆಗಳೆಂದರೆ ಕನ್ನಡ ಸಾಹಿತ್ಯ ಪರಿಷತ್ತು (೧೯೧೫) ಮತ್ತು ಮೈಸೂರು ವಿಶ್ವವಿದ್ಯಾನಿಲಯ (೧೯೧೬). ಈ ಎರಡು ಸಂಸ್ಥೆಗಳಿಂದ ಆಧುನಿಕ ಕನ್ನಡ ಸಾಹಿತ್ಯಕ್ಕೆ ಸಂದಿರುವ ಸೇವೆ ಅಪಾರ.

ಕನ್ನಡ ಸಾಹಿತ್ಯದಲ್ಲಾದ ನವೋದಯ ಕ್ರಾಂತಿ ನಮಗೆ ನಿಚ್ಚಳವಾಗಿ ಕಾಣುವುದು ೨೦ನೇ ಶತಮಾನ ಆದಿಭಾಗದಿಂದ. ಈ ಕ್ರಾಂತಿ ೧೨ನೆಯ ಶತಮಾನದಲ್ಲಿ ಕನ್ನಡ ಸಾಹಿತ್ಯದ ಕ್ರಾಂತಿಯಿಂದ ಸಂಪೂರ್ಣ ಭಿನ್ನವಾದುದು. ಅಂದಿನ ಕ್ರಾಂತಿ ಬಹುಮುಖ್ಯವಾಗಿ ಧರ್ಮಮೂಲವಾದುದಾಗಿದ್ದರೆ ಇಂದಿನದು ವಿಶ್ವವಿಶಾಲವಾದ ಲೌಕಿಕ ಜ್ಞಾನ ಸಾಧನೆಯನ್ನು ಹೆಗ್ಗುರಿಯಾಗಿಟ್ಟುಕೊಂಡಿತು. ಅದರ ಮುಖ್ಯ ಲಕ್ಷಣ ವೈಜ್ಞಾನಿಕ ಮನೋಭಾವನೆ. ಈ ಮನೋಭಾವನೆಗೆ ಬೀಜ ಭೂತವಾದುದು ಸ್ವತಂತ್ರ ವಿವೇಚನೆ. ಬುದ್ಧಿಗೆ ಇಲ್ಲಿ ಪ್ರಾಧಾನ್ಯ. ಮತಸೂಚಕ ಭಾವನೆಗಳಿಗೆ ಪ್ರಾಧಾನ್ಯತೆ ತಗ್ಗಿ ವಿಶಾಲ ಭಾವನೆಗಳಿಗೆ ಇಂಬು ದೊರಕಿತು. ನಮ್ಮ ಪ್ರಾಚೀನ ಸಾಹಿತ್ಯದ ಸತ್ತ್ವದೊಡನೆ ಪಾಶ್ಚಾತ್ಯ ವಿದ್ಯಾಭ್ಯಾಸದಿಂದ ಬಂದ ನೂತನ ಭಾವನೆಗಳನ್ನು ಅಳವಡಿಸಿಕೊಂಡು ಸಮನ್ವಯಗೊಳಿಸಿಕೊಂಡು ಆಧುನಿಕ ಸಾಹಿತ್ಯ ಶ್ರೀಮಂತವಾಯಿತು. ಹಿಂದೆಂದೂ ಕಾಣಬರದಷ್ಟು ಅಪಾರ ಸಂಖ್ಯೆಯ ಕವಿಗಳೂ ಗ್ರಂಥಕರ್ತರೂ ಈ ಯುಗದಲ್ಲಿ ಕಾಣಿಸಿಕೊಂಡರು. ಇಲ್ಲಿನ ಸಾಹಿತ್ಯದ ವೈಪುಲ್ಯ ವೈವಿಧ್ಯ ವೈಶಾಲ್ಯಗಳೂ ಚಕಿತಗೊಳ್ಳುವಷ್ಟು ಅಪಾರವಾದುವು. ಈ ಸಾಹಿತ್ಯ ರಾಶಿಯನ್ನು ಪದ್ಯ ಮತ್ತು ಗದ್ಯ ಎಂದು ಎರಡು ವಿಧವಾಗಿ ವಿಂಗಡಿಸಬಹುದು. ಹೊಸ ಸಾಹಿತ್ಯ ಬೆಳೆಯುವುದರ ಜೊತೆ ಜೊತೆಯಲ್ಲೇ ಸಂಪ್ರದಾಯ ಬದ್ಧವಾದ ಕಾವ್ಯ ಪ್ರಕಾರ – ವಸ್ತು ರೀತಿಗಳಲ್ಲಿ ಪ್ರಾಚೀನ ಸಾಹಿತ್ಯವನ್ನು ಅನುಸರಿಸುತ್ತಿರುವ ಕಾವ್ಯಗಳು ಬೆಳೆದುಕೊಂಡು ಬಂದವು. ಸೋಸಲೆ ಅಯ್ಯಾಶಾಸ್ತ್ರಿ, ಹೊಸಕೆರೆ ಚಿದಂಬರಯ್ಯ, ನಂಜನಗೂಡು ಶ್ರೀಕಂಠಶಾಸ್ತ್ರಿ ಬೆಳ್ಳಾವೆ ನರಹರಿಶಾಸ್ತ್ರಿ ಶ್ರೀನಿವಾಸ ರಂಗಾಚಾರ್ಯ, ಡಿ.ವಿ. ಗುಂಡಪ್ಪ ಹೆಮ್ಮಿಗೆ ದೇಶಿಕಾಚಾರ್ಯ, ಘನಪಾಠಿ ನಾರಾಯಣ ಮೊದಲಾದವರು ಚಂಪೂಕಾವ್ಯಗಳನ್ನು ರಚಿಸಿದ್ದಾರೆ. ಮುದ್ದಣನ ಶ್ರೀರಾಮಪಟ್ಟಾಭಿಷೇಕ, ವೆಂಕಟಸುಬ್ಬಯ್ಯನವರ ವಿನಾಯಕ ವಿಜಯ, ಸೋಸಲೆ ಅಯ್ಯಾಶಾಸ್ತ್ರಿಗಳ ಶೇಷರಾಮಾಯಣಂ. ಮುಳಿಯ ತಿಮ್ಮಪ್ಪಯ್ಯನವರ ಸೊಬಗಿನ ಬಳ್ಳಿ. ಸೇಡಿಯಾಪು ಕೃಷ್ಣಭಟ್ಟರ ಕೃಷ್ಣಕುಮಾರಿ, ಮೈ.ಶೇ ಅನಂತಪದ್ಮನಾಭರಾಯರ ಶ್ರೀಕೃಷ್ಣಚರಿತಾಮೃತಂ, ಆಸೂರಿ ರಾಮಸ್ವಾಮಿ ಅಯ್ಯಂಗಾರ್ಯರ ಶ್ರೀನಿವಾಸ ಲೀಲಾವಾಸ ಇತ್ಯಾದಿ ಗ್ರಂಥಗಳು ವಿವಿಧ ಷಟ್ಪದಿಗಳಲ್ಲಿವೆ. ಜಯದೇವಿತಾಯಿ ಲಿಗಾಡೆಯವರು ಸಿದ್ಧರಾಮಪುರಾಣವನ್ನು ಸಾಂಗತ್ಯದಲ್ಲಿ ಬರೆದಿದ್ದಾರೆ. ಕಾವ್ಯಗುಣದ ದೃಷ್ಟಿಯಿಂದಲೂ ಇವು ಗಮನಾರ್ಹವಾಗಿವೆ.

ಆಧುನಿಕ ಸಾಹಿತ್ಯ ಪ್ರಕಾರದಲ್ಲಿ ಬಹುಮಟ್ಟಿಗೆ ಭಾವಗೀತೆ ಪ್ರಮುಖವಾಯಿತು. ಖಂಡ ಕಾವ್ಯಗಳು. ಕಥನಕವನಗಳು. ಗೀತನಾಟಕಗಳು ಇತ್ಯಾದಿ ಕಾವ್ಯ ಮುಖಗಳು ಕಾಣಿಸಿಕೊಂಡಿದ್ದರೂ ಅವುಗಳ ಸಂಖ್ಯೆ ಅಲ್ಪ. ವಸ್ತುರೀತಿಗಳಲ್ಲಿ ಹಿಂದಿನ ಕಾವ್ಯಗಳು ಅನುಸರಿಸಬೇಕಾಗಿದ್ದ ಕಠಿಣವಾದ ನಿಯಮಗಳ ಶೃಂಖಲೆಗಳನ್ನು ಈ ಸಾಹಿತ್ಯ ಪ್ರಕಾರ ಸಡಿಲಗೊಳಿಸಿತು. ಚ.ವಾಸುದೇವಯ್ಯ, ಶ್ರೀನಿವಾಸರಾವ್, ಎಸ್.ಜಿ. ನರಸಿಂಹಾಚಾರ್, ಪಂಜೆ ಮಂಗೇಶ್ ರಾವ್ ಮೊದಲಾದ ಕವಿಗಳು ಈ ಶತಮಾನದ ಆರಂಭಕಾದಲ್ಲಿಯೆ ಈ ಪ್ರಕಾರಕ್ಕೆ ಕೈ ಹಾಕಿದ್ದರೂ ಇವುಗಳ ಪ್ರಭಾವವನ್ನು ಜನರ ಮೇಲೆ ಅಚ್ಚೊತ್ತಿ, ಹೊಸ ಹೆದ್ದಾರಿಯೊಂದನ್ನು ನಿರ್ಮಿಸಿದ ಕೀರ್ತಿ ಬಿ.ಎಂ. ಶ್ರೀ ಅವರಿಗೆ ಸಲ್ಲುತ್ತದೆ. ಇಂಗ್ಲಿಷ್ ರೋಮ್ಯಾಂಟಿಕ್ ಕವಿಗಳ ಕವನಗಳ ಭಾಷಾಂತರಗಳನ್ನು ಒಳಗೊಂಡ ಅವರ ಇಂಗ್ಲಿಷ್ ಗೀತೆಗಳು ಸ್ವಭಾವಸುಂದರವಾಗಿವೆ, ಲಲಿತ ರಮಣೀಯವಾಗಿವೆ. ಅಸಂಖ್ಯಾತ ಕವಿಗಳು ಈ ಪ್ರಕಾರಕ್ಕೆ ಕೈ ಹಾಕಿರುವರಾದರೂ ಕುವೆಂಪು, ಬೇಂದ್ರೆ ಇವರಿಬ್ಬರೂ ಆಧುನಿಕ ನವೋದಯ ಸಾಹಿತ್ಯಕ್ಕೆ ಒತ್ತುಕೊಟ್ಟ ಕವಿಗಳು. ಕುವೆಂಪು ಅವರು ಕನ್ನಡಕ್ಕೆ ನೀಡಿರುವ ಕೊಡುಗೆ ಅಸದೃಶವಾದುದು. ಅವರ

ಶ್ರೀರಾಮಾಯಣ ದರ್ಶನಂ ಆಧುನಿಕ ಕನ್ನಡ ಸಾಹಿತ್ಯದ ಮೇರು ಕೃತಿ. ಈ ಕಾವ್ಯದಲ್ಲಿ ಕುವೆಂಪು ಅವರ ಕಾವ್ಯ ಶಕ್ತಿ ಅಪೂರ್ವವಾದುದು. ಆಧುನಿಕ ಕನ್ನಡ ಕವಿಗಳಲ್ಲಿ ಅಗ್ರಗಣ್ಯರಾದ ಇವರ ಭಾವಗೀತೆಗಳನ್ನು ಕುರಿತು ವಿವೇಚಿಸುವಾಗ ಮಾತ್ರ, ಇವರ ಕಾವ್ಯ ಶಕ್ತಿ ಇಂಗ್ಲಿಷ್‌ನಲ್ಲಿ ಮೊದಲು ಇಣಕಿ ಹಾಕಿ, ಆಮೇಲೆ ಕನ್ನಡದ ಭಾವಗೀತೆಗಳಲ್ಲಿ ಅಭಿವ್ಯಕ್ತವಾಗಿದೆ ಎನ್ನಬೇಕು. ಇವರ ಕವಿತೆಗಳಲ್ಲಿ ಸರ್ವತೋಮುಖವಾದ ಆಸಕ್ತಿ ಕಂಡು ಬರುವುದಾದರೂ ಪ್ರಕೃತಿಪ್ರೇಮ, ಅಧ್ಯಾತ್ಮ ಭಕ್ತಿ ಇವು ಸ್ಥಾಯಿಭಾವವನ್ನು ಪಡೆದಿವೆ. ಇವರ ನಾಟಕಗಳು ಕೂಡ ಭಾವಗೀತಾತ್ಮಕವಾದವು. ದ.ರಾ. ಬೇಂದ್ರೆಯವರು ಅಂಬಿಕಾತನಯದತ್ತ ಎಂಬ ಕಾವ್ಯನಾಮದಿಂದ ವಿಪುಲವಾಗಿ ಕವನಗಳನ್ನು ಬರೆದಿರುವರು. ಇವರ ಕವನಗಳಲ್ಲಿ ವಿಷಯ ಮತ್ತು ಅದರ ನಿರೂಪಣೆಯಲ್ಲಿ ಕಾಣಬರುವ ವೈವಿಧ್ಯ. ಮಾತಿನ ಚಮತ್ಕಾರ, ಅಧ್ಯಾತ್ಮ ವಿಚಾರ ಲಹರಿ, ಜನಪದ ಧಾಟಿ, ನಾದಮಾಧುರ್ಯಗಳು ಅತ್ಯಂತ ಹೃದ್ಯವಾಗಿವೆ. ಇವರಿಬ್ಬರೂ ಆಧುನಿಕ ಕನ್ನಡ ಸಾಹಿತ್ಯದ ಎರಡು ವಿಶಿಷ್ಟ ಪಂಥಗಳ ನಿರ್ಮಾತೃಗಳು. ಪು.ತಿ.ನ. ಅವರು ಪ್ರಕೃತಿವರ್ಣನೆಯಲ್ಲಿ, ಭಕ್ತಿಪಾರಮ್ಯದಲ್ಲಿ, ಭಾರತ ಸಂಸ್ಕೃತಿಯ ದಿಗ್ದರ್ಶನದಲ್ಲಿ ಭಾವ ಭಾಷೆಗಳ ಕುಸುರಿಗೆಲಸ ಮಾಡುವುದರಲ್ಲಿ ಅಗ್ರಗಣ್ಯರು. ವಿ.ಸೀ., ಡಿ.ವಿ.ಜಿ. ಶ್ರೀನಿವಾಸ, ವಿನಾಯಕ, ರಾಜರತ್ನಂ ಕೆ., ಎಸ್. ನರಸಿಂಹಸ್ವಾಮಿ, ಗೋಪಾಲಕೃಷ್ಣ ಅಡಿಗ. ಚೆನ್ನವೀರ ಕಣವಿ, ಜಿ.ಎಸ್. ಶಿವರುದ್ರಪ್ಪ ನಿಸಾರ್ ಅಹಮದ್, ಚಂದ್ರಶೇಖರ ಕಂಬಾರ ಮೊದಲಾದ ಹಿರಿಯ ಕಿರಿಯ ಒಬ್ಬೊಬ್ಬರು ತಮ್ಮ ವ್ಯಕ್ತಿತ್ವವನ್ನು ಸ್ಥಾಪಿಸಿಕೊಂಡಿರುವ ಶ್ರೇಷ್ಠ ಕವಿಗಳಾಗಿದ್ದಾರೆ.

ಸುಮಾರು ೧೯೫೦ರ ಸುಮಾರಿನಿಂದ ಈಚೆಗೆ ನವ್ಯಕಾವ್ಯ ಎಂಬ ಹೆಸರಿನಿಂದ ಹೊಸದೊಂದು ಶಾಖೆ ಕನ್ನಡ ಸಾಹಿತ್ಯದಲ್ಲಿ ಕಾಣಿಸಿಕೊಂಡಿತು. ಟಿ.ಎಸ್. ಇಲಿಯೆಟ್, ಆಡೆನ್, ಸೆಸಿಲ್ ಡೆ ಲ್ಯೂಯಿ ಮೊದಲಾದ ಸಮಕಾಲೀನ ಇಂಗ್ಲಿಷ್ ಕವಿಗಳಿಂದ ಸ್ಫೂರ್ತಿಗೊಂಡ ಹಲವು ಕವಿಗಳು ಹೊಸರೀತಿಯ ಪ್ರಯೋಗಗಳ ಮೂಲಕ ಹೊಸ ಹಾದಿಯೊಂದನ್ನು ನಿರ್ಮಿಸಲು ಹೊರಟರು. ವ್ಯಕ್ತಿನಿಷ್ಠನಾಗಿ ಹೊಸ ವಸ್ತು, ಹೊಸಭಾಷೆ, ಹೊಸಶೈಲಿ, ಹೊಸ ಧೋರಣೆಗಳಿಂದ ಹೊರಟಿರುವ ಈ ಕವಿ ಕಾವ್ಯಗಳಲ್ಲಿ ಕವಿಮನದ ಸಂಕೀರ್ಣತೆಯನ್ನು ಅಭಿವ್ಯಕ್ತಿಗೊಳಿಸಲು ಬಳಸುವ ರೂಪಕಗಳೂ ಸಾಮ್ಯತೆಗಳೂ ಅನೇಕ ವೇಳೆ ಓದುಗರನ್ನು ಚಕಿತಗೊಳಿಸುತ್ತವೆ. ಸಾಂಕೇತಿಕವಾಗಿರುವ ಹಲವು ಮಾತುಗಳು ಅವುಗಳ ಪರಿಚಯವಿಲ್ಲದವರಿಗೆ ಕ್ಲಿಷ್ಟವೆನಿಸಿವೆ. ಈ ಪರಂಪರೆಯನ್ನು ಪ್ರಾರಂಭಿಸಿದ ಕೀರ್ತಿ ವಿ.ಕೃ. ಗೋಕಾಕರಿಗೆ ಸಲ್ಲುತ್ತದೆ. ಆದರೆ ಇವರ ಕವನಗಳಲ್ಲಿ ಸಂಪ್ರದಾಯ, ನವ್ಯತೆಗಳು ಸಮರಸವಾಗಿ ಬೆರತಿವೆ. ನವ್ಯಮಾರ್ಗದಲ್ಲಿ ಗೋಪಾಲಕೃಷ್ಣ ಅಡಿಗರ ಹೆಸರು ಅತ್ಯಂತ ಗಣ್ಯವಾದುದು. ಇವರ ಭಾವತರಂಗದಿಂದ ಇಲ್ಲಿಯವರೆಗಿನ ಕವನ ಸಂಗ್ರಹಗಳು ಇವರ ಪ್ರತಿಭೆ, ಕಲ್ಪನಾಶಕ್ತಿಗಳ ಮಹತ್ತಿಗೆ ಸಾಕ್ಷಿಗಳಾಗಿವೆ. ಲಂಕೇಶ ಹೇಳುವಂತೆ ಅಡಿಗರು 'ಒಂದು ಜನಾಂಗದ ಕಣ್ಣು ತೆರೆಸಿದ ಕವಿ', ಗಂಗಾಧರ ಚಿತ್ತಾಲ, ಶಂಕರ ಮೊಕಾಶಿ, ಕೆ.ಎಸ್.ನ. ರಾಮಚಂದ್ರ ಶರ್ಮ, ಎ.ಕೆ. ರಾಮಾನುಜನ್, ಜಿ.ಎಸ್. ಸಿದ್ಧಲಿಂಗಯ್ಯ, ಅರವಿಂದ ನಾಡಕರ್ಣಿ, ಪಿ. ಲಂಕೇಶ್, ಎಚ್.ಎಂ. ಚನ್ನಯ್ಯ, ಸುಮತೀಂದ್ರ ನಾಡಿಗ, ಕೆ.ಎಸ್. ನಿಸಾರ್ ಅಹಮದ್, ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ, ಶ್ರೀಕೃಷ್ಣ ಆಲನಹಳ್ಳಿ ಮೊದಲಾದವರು ನವ್ಯ ಕಾವ್ಯ ಜಗತ್ತಿನಲ್ಲಿ ಗಣ್ಯರಾದವರು. ನವ್ಯರೆಂದು ಮುದ್ರೆಯೊತ್ತುವ ಕವಿ ಕುವೆಂಪು, ಬೇಂದ್ರೆ, ಪುತಿನ. ಇವರಲ್ಲಿಯೂ ಅವರ ಇತ್ತೀಚಿನ ಕೃತಿಗಳಲ್ಲಿ ನವ್ಯತೆಯ ಸೊಗಡನ್ನು ಕಾಣಬಹುದು.

ನವ್ಯಕಾವ್ಯ ತನ್ನ ಅಂತರ್ಮುಖತೆ ಮತ್ತು ಭಾಷಾ ಕ್ಲಿಷ್ಟತೆಗಳಿಂದ ಜನ ವಿಮುಖಿಯಾಯಿತೆಂದು ಈಗ ಜನಸಾಮಾನ್ಯರ ಕಾವ್ಯ ಬಂಡಾಯ ಸಾಹಿತ್ಯವೆಂಬ ಹೆಸರನ್ನು ಹೊತ್ತು ಬಂದಿದೆ. ಸಿದ್ಧಲಿಂಗಯ್ಯ, ಚಂದ್ರಶೇಖರ ಪಾಟೀಲ, ಬುದ್ದಣ್ಣ ಹಿಂಗಮಿರೆ ಮುಂತಾದವರು ಈ ಮಾರ್ಗದ ಪ್ರಮುಖ ಹೆಸರುಗಳು.

ಇದರೊಟ್ಟಿಗೆ ನವ್ಯ ಪಂಥಕ್ಕೆ ಇನ್ನೊಂದು ಪ್ರತಿಕ್ರಿಯೆಯಾಗಿ ಕನ್ನಡ ಕಾವ್ಯ ಗೇಯತೆ, ಸರಳತೆಗಳತ್ತ ಹೊರಳಿದೆ. ನವ್ಯ ಶೈಲಿಯಲ್ಲಿ ಕಾವ್ಯ ಕೃಷಿಯನ್ನಾರಂಭಿಸಿದ ಬಿ.ಆರ್. ಲಕ್ಷ್ಮಣರಾವ್, ಎಚ್.ಎಸ್. ವೆಂಕಟೇಶ ಮೂರ್ತಿ ಮುಂತಾದ ಕವಿಗಳು ಲಲಿತ ಸಂಗೀತಕ್ಕೆ ಹೊಂದಿಸಬಹುದಾದ ಗೀತೆಗಳ ರಚನೆಯನ್ನು ಮಾಡುತ್ತಿದ್ದಾರೆ. ಆದರೆ ಹೊಸ ಪರಂಪರೆಯೊಂದನ್ನು ನಿರ್ಮಿಸುವ ಶಕ್ತಿ, ಮನ್ನಣೆ ಇನ್ನೂ ಈ ತೆರನಾದ ಕಾವ್ಯಕ್ಕೆ ಲಭಿಸಿಲ್ಲ. ಇತ್ತೀಚಿನ ಕನ್ನಡ ಕಾವ್ಯದ ಪ್ರಮುಖ ಧ್ವನಿ ಎಂದರೆ ಆಧುನಿಕ ಕಥನ ಅಥವಾ ಖಂಡ ಕಾವ್ಯಗಳು. ತಮ್ಮ ಸೈದ್ಧಾಂತಿಕತೆಯಲ್ಲಿ ವಚನಕಾರರಿಗೆ ಹೆಚ್ಚು ಹೊಂದಿಕೊಳ್ಳುವ ಹೊಸ ಅನುಭಾವಿ ನೆಲೆಯೊಂದನ್ನು ಕಂಡುಕೊಳ್ಳುವ ಈ ಪ್ರಯತ್ನದಲ್ಲಿ ಎಚ್.ಎಸ್.ಶಿವಪ್ರಕಾಶ್, ಸು.ರಂ. ಎಕ್ಕುಂಡಿಯವರನ್ನು ಹೆಸರಿಸಬಹುದು.

ಇಷ್ಟೆಲ್ಲಾ ವೈವಿಧ್ಯಗಳ ನಡುವೆ ಎಲ್ಲ ಸಾಹಿತ್ಯ ಚಳವಳಿಗಳ ಅಂಶಗಳನ್ನು ಒಳಗೊಂಡೂ, ಶೈಲಿಯಲ್ಲಿ ನವೋದಯಕ್ಕೆ ಹೆಚ್ಚು ಸಮೀಪವಾದ ಸಮನ್ವಯದ ಧ್ವನಿ ಕೂಡ ಕನ್ನಡ ಕಾವ್ಯದಲ್ಲಿ ತನ್ನ ಇರುವನ್ನು ಬಿತ್ತರಿಸುತ್ತಿದೆ. ಹಿರಿಯ ಕವಿಗಳಾದ ಕಣವಿ, ಶಿವರುದ್ರಪ್ಪ ನಿಸಾರ್ ಅಹಮದ್, ಚಂದ್ರಶೇಖರ ಕಂಬಾರ ಮೊದಲಾದವರು ಈ ಸಮನ್ವಯ ಕವಿತೆಯ ಅಧ್ವರ್ಯುಗಳು.

ಇಂಗ್ಲಿಷ್ ಶಿಕ್ಷಣದ ಪ್ರಭಾವದಿಂದ ನಮ್ಮಲ್ಲಿ ಜಾನಪದದತ್ತ ಆಸಕ್ತಿ ಮೂಡಿ ಜನಪದ ಸಾಹಿತ್ಯ ಸಂಗ್ರಹದ ಕೃಷಿ ಕಳೆದ ನಾಲ್ಕು ದಶಕಗಳ ಹಿಂದಿನಿಂದ ಪ್ರಾರಂಭವಾಯಿತು. ಹಲಸಂಗಿ ಸೋದರರಾದ ರೇವಪ್ಪ, ಮಧುರ ಚೆನ್ನ, ಸಿಂಪಿ ಲಿಂಗಣ್ಣ ಈ ಮೂವರು ಹೊರತಂದ ಗರತಿಯ ಹಾಡು ಕನ್ನಡದ ಮೊಟ್ಟಮೊದಲ ಜನಪದ ಸಂಗ್ರಹ. ರೇವಪ್ಪನವರು ಹೊರತಂದ ಮಲ್ಲಿಗೆ ದಂಡೆ ಜನಪದ ಸಾಹಿತ್ಯದ ಎಲ್ಲ ಮುಖಗಳನ್ನೂ ಒಳಗೊಂಡ ಅಮೂಲ್ಯ ಸಂಗ್ರಹ. ಇವೆರಡೂ ತ್ರಿಪದಿಗಳಲ್ಲಿವೆ. ಸಿಂಪಿ ಲಿಂಗಣ್ಣ, ಅರ್ಚಕ ರಂಗಸ್ವಾಮಿ, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಮತಿಘಟ್ಟ ಕೃಷ್ಣಮೂರ್ತಿ, ಗದ್ದಿಗಿಮಠ, ಕರಾಕೃ, ಜೀ.ಶಂ.ಪ. ರಾಗೌ, ಧವಳಶ್ರೀ, ಪಿ.ಕೆ. ರಾಜಶೇಖರ ಮೊದಲಾದ ನೂರಾರು ಜನ ತಮ್ಮ ಸಂಗ್ರಹಗಳಿಂದ ಈ ಸಾಹಿತ್ಯ ಪ್ರಕಾರವನ್ನೂ ಶ್ರೀಮಂತಗೊಳಿಸಿದ್ದಾರೆ. ಇತ್ತೀಚೆಗೆ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಜಾನಪದ ಅಧ್ಯಯನಕ್ಕೆ ಅವಕಾಶ ದೊರೆತು ಜಾನಪದ ವಸ್ತು ಸಂಗ್ರಹಾಲಯವೂ ಸ್ಥಾಪನೆಯಾಗಿದ್ದು ಜಾನಪದದ ವೈಜ್ಞಾನಿಕ ಅಧ್ಯಯನ ನಡೆಯುತ್ತಿದೆ.

ಹಾ.ಮಾ. ನಾಯಕರು 'ಜಾನಪದ'ದ ಸಮಗ್ರ ಅಧ್ಯಯನಕ್ಕೆ ಒತ್ತು ಕೊಟ್ಟು ಅದನ್ನು ಒಂದು ವಿಜ್ಞಾನವಾಗಿ ಪರಿಶೀಲಿಸಿದರು. ಜಾನಪದ ಅಧ್ಯಯನಕ್ಕೆ ಆ ಮೂಲಕ ಹೊಸ ತಿರುವನ್ನು ಕೊಟ್ಟವರು ಹಾ.ಮಾ. ನಾಯಕರು. ಜಾನಪದ ಅಧ್ಯಯನಕ್ಕೆ ಸ್ಫೂರ್ತಿ ತುಂಬಿದವರು ದೇ. ಜವರೇಗೌಡರು.

ಪಿ.ಆರ್. ತಿಪ್ಪೇಸ್ವಾಮಿ, ಎಚ್.ಎಲ್. ನಾಗೇಗೌಡ, ಕಾಳೇಗೌಡ ನಾಗವಾರ, ಹ.ಕ. ರಾಜೇಗೌಡ, ಡಿ.ಕೆ. ರಾಜೇಂದ್ರ ಮುಂತಾದವರು ಜಾನಪದ ಅಧ್ಯಯನ ಕ್ಷೇತ್ರಕ್ಕೆ ಅಮೂಲ್ಯ ಕೊಡುಗೆ ನೀಡುತ್ತ ಬಂದಿದ್ದಾರೆ. ಚನ್ನಪಟ್ಟಣದ ಬಳಿ ಸ್ಥಾಪಿತವಾಗಿರುವ 'ಜಾನಪದ ಲೋಕ' ಜಾನಪದ ಸಂಶೋಧನಾ ಕೇಂದ್ರವೂ ವಸ್ತುಸಂಗ್ರಹಾಲಯವೂ ಆಗಿದೆ. ಕರ್ನಾಟಕ ಜಾನಪದ ಟ್ರಸ್ಟ್‌ನ ಆಶ್ರಯದಲ್ಲಿ ಡಾ.ಎಚ್.ಎಲ್. ನಾಗೇಗೌಡರ ನೇತೃತ್ವದಲ್ಲಿ ಗಮನಾರ್ಹ ಕಾರ್ಯವನ್ನು ಕೈಗೊಳ್ಳಲಾಗಿದೆ.

ನವವಸಾಹತುಶಾಹಿ ಸಂದರ್ಭ ಹುಟ್ಟುಹಾಕಿರುವ ದೇಶಿಯ ಮೂಲಗಳ ಹುಡುಕಾಟದ ಅನಿವಾರ್ಯತೆ, ಇಂದು ಜಾನಪದ ಅಧ್ಯಯನಕ್ಕೆ ಇನ್ನಿಲ್ಲದ ಸಾಂಸ್ಕೃತಿಕ ಮಹತ್ವ ತಂದುಕೊಟ್ಟಿದೆ. ಮೌಖಿಕ ಸಂಪ್ರದಾಯದ ವಿಪುಲ ಸಾಮಗ್ರಿ ನಮ್ಮ ಜಾನಪದ ಸಾಹಿತ್ಯದಲ್ಲಿ ದೊರೆಯುವುದರಿಂದ, ಮತ್ತು ಇಂಥ ಸಾಹಿತ್ಯ ಕನ್ನಡ ಪರಂಪರೆಯಲ್ಲಿನ ವಿಭಿನ್ನ ಮೌನ ಧ್ವನಿಗಳ ಭಂಡಾರವಾಗಿರುವುದರಿಂದ, ಇಂದು ಜಾನಪದ ಅಧ್ಯಯನ ಎಂದರೆ ಕೇವಲ ಸಂಗ್ರಹ ಕಾರ್ಯವಾಗಿ ಮಾತ್ರ ಉಳಿದಿಲ್ಲ. ಜಾನಪದ ಇಂದು ಸಾಂಸ್ಕೃತಿಕ ಅಧ್ಯಯನಕ್ಕೆ ತನ್ನದೇ ಆದ ಸ್ವತಂತ್ರ ಕಾಣ್ಕೆಯನ್ನು ನೀಡಲು ಮುಂದಾಗಬೇಕಿದೆ.

ಪಾಶ್ಚಾತ್ತ್ಯ ಸಾಹಿತ್ಯದ ಪ್ರೇರಣೆಯಿಂದ ಉದಿಸಿದ ಆಧುನಿಕ ಕನ್ನಡ ಸಾಹಿತ್ಯದ ಇನ್ನೊಂದು ವಿಶೇಷ ಪ್ರಕಾರವೆಂದರೆ ಗದ್ಯ ಸಾಹಿತ್ಯ. ಪಾಶ್ಚಾತ್ಯ ಸಾಹಿತ್ಯದಲ್ಲಿ ಕಾಣಬರುವ ಎಲ್ಲ ಗದ್ಯ ಪ್ರಕಾರಗಳೂ ಕಾದಂಬರಿ, ಸಣ್ಣಕಥೆ, ಜೀವನಚರಿತ್ರೆ, ನಾಟಕ, ವ್ಯಕ್ತಿ ಚಿತ್ರ, ಪ್ರಬಂಧ – ಹರಟೆ, ಪ್ರವಾಸ ಸಾಹಿತ್ಯ, ಪತ್ರ ಸಾಹಿತ್ಯ. ವೈಜ್ಞಾನಿಕ ಸಾಹಿತ್ಯ ಮಕ್ಕಳ ಸಾಹಿತ್ಯ ವಿಮರ್ಶೆ, ಹಾಸ್ಯ ಇತ್ಯಾದಿ ಆಧುನಿಕ ಕನ್ನಡ ಸಾಹಿತ್ಯದಲ್ಲಿಯೂ ಬೆಳೆದು ನಿಂತಿವೆ.

ಹೊಸಗನ್ನಡ ಗದ್ಯ ಸಾಹಿತ್ಯಕ್ಕೆ ಕೆಂಪುನಾರಾಯಣ (ಸು. ೧೮೨೩) ತನ್ನ ಮುದ್ರಾಮಂಜೂಷದಿಂದ ನಾಂದಿ ಹಾಡಿದನೆಂದು ಹೇಳಬಹುದು. ಇದೇ ಸಂದರ್ಭದಲ್ಲಿ ಸಂಪ್ರದಾಯಕ್ಕೂ ಆಧುನಿಕತೆಗೂ ಕಟ್ಟಿದ ರಸಸೇತುವೆಯಂತಿರುವ ಮುದ್ದಣನನ್ನು ಹೆಸರಿಸಬಹುದು. ಈತ ಅದ್ಭುತ ರಾಮಾಯಣ, ರಾಮಾಶ್ವಮೇಧ ಎಂಬ ಎರಡು ಗದ್ಯ ಗ್ರಂಥಗಳನ್ನು ಬರೆದಿದ್ದಾನೆ. ಹಳಗನ್ನಡ ನಡುಗನ್ನಡ ಬೆರೆತ ಇವನ ಗದ್ಯ ಶೈಲಿ ಹೊಸಗನ್ನಡಕ್ಕೆ ನಾಂದಿ ಹಾಡಿತೆಂದು ಹೇಳಬಹುದು. ಭಾಷಾ ಶೈಲಿಯ ದೃಷ್ಟಿಯಿಂದ ಈತನ ಗದ್ಯ ವಿಶಿಷ್ಟವಾಗಿದೆ. ಇವೆರಡರ ವಸ್ತುವೂ ಹಳೆಯದು, ಬಳಸಿರುವ ಭಾಷೆ ಹಳಗನ್ನಡ. ಆದರೆ ಕವಿಯ ಮನೋಭಾವ ಆಧುನಿಕ. ರಾಮಾಶ್ವಮೇಧದ ಮುದ್ದಣ ಮನೋರಮೆಯರ ಸಂಭಾಷಣೆ ಸ್ವಾರಸ್ಯ ಪೂರ್ಣವಾಗಿದೆ.

ಆಧುನಿಕ ಕನ್ನಡ ಗದ್ಯ ಪ್ರಕಾರಗಳಲ್ಲಿ ಕಾದಂಬರಿ ಅತ್ಯಂತ ಜನಪ್ರಿಯವಾದುದು. ಈ ಪ್ರಕಾರ ಕನ್ನಡದಲ್ಲಿ ಹತ್ತೊಂಬತ್ತನೆಯ ಶತಮಾನದ ಪೂರ್ವಾರ್ಧದಲ್ಲಿಯೇ ಕ್ವಚಿತ್ತಾಗಿ ಕಾಣಿಸಿಕೊಂಡಿತಾದರೂ ನಮ್ಮ ಜನರಲ್ಲಿ ಇದರ ವಾಚನಾಭಿರುಚಿಯನ್ನು ನೆಲೆಗೊಳಿಸಿದವರು ಬಿ. ವೆಂಕಟಾಚಾರ್ಯ ಮತ್ತು ಗಳಗನಾಥರು, ಗುಲ್ವಾಡಿ ವೆಂಕಟರಾಯರು, ಬೋಳಾರ ಬಾಬು ರಾಯರು, ಕೆರೂರ ವಾಸುದೇವಾಚಾರ್ಯರು ಮೊದಲಾದವರು. ಸುಂದರವಾದ ಸ್ವತಂತ್ರ ಕಾದಂಬರಿಗಳನ್ನು ರಚಿಸಿದ್ದಾರೆ. ಅವು ಕೇವಲ ಒಂದೋ ಎರಡೋ ಅಷ್ಟೇ. ವಾಸ್ತವಿಕತೆಯನ್ನು ಕಾದಂಬರಿಯಲ್ಲಿ ತರುವ ಸಂಪ್ರಾದಯಕ್ಕೆ ಎಂ.ಎಸ್. ಪುಟ್ಟಣ್ಣನವರು ಆದ್ಯರಾದರು. ೧೯೩೦ ರಿಂದ ಈಚೆಗೆ ಕಾದಂಬರಿಕಾರರ ಸಂಖ್ಯೆ ಅಪರಿಮಿತವಾಗಿದೆ. ಇವರ ಸಾಲಿನಲ್ಲಿ ಶಿವರಾಮ ಕಾರಂತ, ಕುವೆಂಪು ರಾವಬಹದ್ದೂರ ಇವರ ಹೆಸರುಗಳು ಅಗ್ರಗಣ್ಯವಾದವು. ಆಧುನಿಕ ಕಾದಂಬರಿಕಾರರಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಾದಂಬರಿಗಳನ್ನು ಬರೆದವರಲ್ಲಿ ಅ.ನ.ಕೃ. ಪ್ರಸಿದ್ಧರು. ಅ.ನ.ಕೃ. ಅವರ ಪರಂಪರೆಗೆ ಸೇರಿದವರು ತ.ರಾ.ಸು. ಚಿತ್ರದುರ್ಗದ ಇತಿಹಾಸವನ್ನು ಆಧರಿಸಿ ಬರೆದಿರುವ ಇವರ ಐತಿಹಾಸಿಕ ಕಾದಂಬರಿಗಳು ಸುಪ್ರಸಿದ್ಧವಾಗಿವೆ. ವಿನಾಯಕ, ಮಿರ್ಜಿ ಅಣ್ಣಾರಾಯ, ಶ್ರೀರಂಗ, ಶ್ರೀನಿವಾಸ, ಕೆ.ವಿ. ಅಯ್ಯರ್, ಬಿ. ಪುಟ್ಟಸ್ವಾಮಯ್ಯ, ಕೃಷ್ಣಮೂರ್ತಿ ಪುರಾಣಿಕ, ಎಸ್.ಎಲ್. ಭೈರಪ್ಪ, ತ್ರಿವೇಣಿ, ಎಂ.ಕೆ. ಇಂದಿರಾ ಮೊದಲಾದ ಕಾದಂಬರಿಕಾರರು ಈ ಸಾಹಿತ್ಯ ಪ್ರಕಾರವನ್ನು ಶ್ರೀಮಂತಗೊಳಿಸಿದ್ದಾರೆ.

ಹೊಸಗನ್ನಡ ಗದ್ಯ ಸಾಹಿತ್ಯದಲ್ಲಿ ಕಾದಂಬರಿಯನ್ನು ಬಿಟ್ಟರೆ ಎರಡನೆಯ ಸ್ಥಾನ ಸಣ್ಣ ಕಥೆಗೆ ಸಲ್ಲುತ್ತದೆ. ಈ ಪ್ರಕಾರದಲ್ಲಿ ಕೈ ಹಾಕಿ ಕೃಷಿ ಮಾಡಿರುವುದರಿಂದ ಸಂಖ್ಯೆಯೂ ಅಪಾರ. ಕನ್ನಡದಲ್ಲಿ ಸಣ್ಣ ಕಥೆಯನ್ನು ಆರಂಭಿಸಿದವರು ಯಾರೇ ಆಗಲಿ ಅದನ್ನು ಸ್ಥಾಯಿಯಾಗಿ ಮಾಡಿದರು ಶ್ರೀನಿವಾಸರು (ಮಾಸ್ತಿ ವೆಂಕಟೇಶ ಅಯ್ಯಂಗಾರ್) ಕೆರೂರ ವಾಸುದೇವಾಚಾರ್ಯ, ಎಂ.ಎನ್. ಕಾಮತ್. ಪಂಜೆ ಮಂಗೇಶ್‌ರಾವ್ - ಇವರು ಶ್ರೀನಿವಾಸರ ಸಮಕಾಲೀನರು. ಈ ಪ್ರಕಾರವನ್ನು ಕುವೆಂಪು, ಎ.ಆರ್.ಕೃ.ಗೊರೂರು ರಾಮಸ್ವಾಮಿ ಅಯ್ಯಂಗಾರ್, ಚದುರಂಗ, ಅಶ್ವತ್ಥ, ಅ.ನ.ಕೃ., ಗೌರಮ್ಮ ಯು.ಆರ್. ಅನಂತಮೂರ್ತಿ, ಪೂರ್ಣಚಂದ್ರ ತೇಜಸ್ವಿ, ಸದಾಶಿವ ಮೊದಲಾದವರು ಸಮರ್ಥವಾಗಿ ಮುಂದುವರಿಸಿದರು.

ಗದ್ಯ ಪ್ರಕಾರಗಳಲ್ಲಿ ಜೀವನಚರಿತ್ರೆ ಮತ್ತೊಂದು. ಕನ್ನಡದಲ್ಲಿ ಇದುವರೆಗೆ ಸುಮಾರು ಒಂದು ಸಾವಿರದಷ್ಟು ಜೀವನ ಚರಿತ್ರೆಗಳು ಕಾಣಿಸಿಕೊಂಡಿವೆ. ಈ ಸಾಹಿತ್ಯ ಪ್ರಕಾರ ಅತ್ಯಂತ ಹುಲುಸಾಗಿ ಬೆಳೆದಿದೆ. ಈ ಪ್ರಕಾರವನ್ನು ಜನಪ್ರಿಯವಾಗಿ ಮಾಡಿದವರು ಸುಬೋಧ ರಾಮರಾಯರು, ಡಿ.ವಿ.ಜಿ., ಕುವೆಂಪು ಸಿ.ಕೆ. ವೆಂಕಟರಾಮಯ್ಯ, ದೇ.ಜ.ಗೌ. ಮೊದಲಾದ ಅನೇಕರು ಶ್ರೇಷ್ಠವಾದ ಜೀವನಚರಿತ್ರೆಗಳನ್ನು ಬರೆದಿದ್ದಾರೆ.

ಇಂಗ್ಲಿಷ್ ಸಾಹಿತ್ಯದ ಸಂಪರ್ಕದಿಂದ ಕನ್ನಡದಲ್ಲಿ ಕಾಣಿಸಿಕೊಂಡ ಸಾಹಿತ್ಯಪ್ರಕಾರಗಳಲ್ಲಿ ನಾಟಕ ಬಹುಮುಖ್ಯವಾದುದು. ಹತ್ತೊಂಬತ್ತನೆಯ ಶತಮಾನದ ಕಡೆಯಭಾಗದಿಂದ ಮುಂದೆ ಈ ಪ್ರಕಾರ ಅತ್ಯಂತ ಹುಲುಸಾಗಿ ಬೆಳೆಯುತ್ತಾ ಬಂದಿದೆ. ಮೊದಮೊದಲು ಸಂಸ್ಕೃತದಿಂದ ಭಾಷಾಂತರ ಮಾಡಿಕೊಳ್ಳುವ ಪರಿಪಾಠವಿದ್ದುದು ಈ ಶತಮಾನದ ಆರಂಭದಿಂದ ಸ್ವತಂತ್ರ ನಾಟಕ ರಚನೆಗೆ ಎಡೆಮಾಡಿಕೊಟ್ಟಿತ್ತು. ಶುದ್ಧಗದ್ಯದಲ್ಲಿ ಸಾಮಾಜಿಕ ನಾಟಕಗಳನ್ನು ರಚಿಸಿ, ಹೆದ್ದಾರಿಯೊಂದನ್ನು ನಿರ್ಮಿಸಿದ ಕೀರ್ತಿ ಕೈಲಾಸಂ ಅವರಿಗೆ ಸಲ್ಲುತ್ತದೆ. ನಾಟಕದ ಎಲ್ಲ ಪ್ರಕಾರಗಳಲ್ಲಿಯೂ ಗದ್ಯ ಬಳಕೆಯಾಗಿರುವ ನಾಟಕಗಳು ವಿಪುಲ ಸಂಖ್ಯೆಯಲ್ಲಿ ಈಗ ಕಾಣಿಸಿಕೊಂಡಿವೆ. ಶ್ರೀರಂಗ, ಕುವೆಂಪು, ಮಾಸ್ತಿ, ಶಿವರಾಮಕಾರಂತ, ಜಿ.ಬಿ. ಜೋಶಿ, ಪರ್ವತವಾಣಿ, ಪು.ತಿ.ನ., ವಿ. ಸೀತಾರಾಮಯ್ಯ, ಎಚ್.ಕೆ. ರಂಗನಾಥ, ಗಿರೀಶ ಕಾರ್ನಾಡ ಮೊದಲಾದ ನಾಟಕ ಕರ್ತೃಗಳು ಪ್ರಸಿದ್ಧರಾಗಿದ್ದಾರೆ.

ಸಾಹಿತ್ಯ ವಿಮರ್ಶೆ ಕನ್ನಡಕ್ಕೆ ಹೊಸದು ಬಿ.ಎಂ. ಶ್ರೀಯವರು ಇದಕ್ಕೆ ಮಾರ್ಗದರ್ಶನ ಮಾಡಿದರು. ಈ ಕಾರ್ಯ ಇಂದು ಯಥೇಚ್ಛವಾಗಿ ನಡೆದಿದೆ. ಎ.ಆರ್. ಕೃ., ಟಿ.ಎಸ್. ವೆಂಕಣಯ್ಯ, ಕುವೆಂಪು, ಎಸ್.ವಿ. ರಂಗಣ್ಣ ಮಾಸ್ತಿ, ತೀ.ನಂ.ಶ್ರೀ, ಡಿ.ಎಲ್.ಎನ್., ಕುರ್ತಕೋಟಿ, ಮುಗಳಿ, ಚಿದಾನಂದ ಮೂರ್ತಿ, ಜಿ.ಎಸ್. ಶಿವರುದ್ರಪ್ಪ ಮೊದಲಾದ ಅನೇಕ ವಿಮರ್ಶಕರು ಈ ಕಾರ್ಯವನ್ನು ಮುಂದುವರೆಸಿದ್ದಾರೆ.

ಕನ್ನಡದಲ್ಲಿ ಇತ್ತೀಚೆಗೆ ಕಾಣಿಸಿಕೊಂಡಿರುವ ಪ್ರಬಂಧ, ಹರಟೆ, ಹಾಸ್ಯ ಪ್ರಬಂಧ, ವ್ಯಕ್ತಿಚಿತ್ರ ಮೊದಲಾದವು ವಿಪುಲವಾಗಿ ಅಲ್ಲದಿದ್ದರೂ ವಿಶಿಷ್ಟವಾಗಿ, ಇದೊಂದು ಪ್ರತ್ಯೇಕ ಸಾಹಿತ್ಯ ಪ್ರಕಾರವೆನ್ನುವಷ್ಟು ಪ್ರಮಾಣದಲ್ಲಿ ಬೆಳೆದಿವೆ. ಇತರ ಸಾಹಿತ್ಯ ಪ್ರಕಾರಗಳಂತೆ ಪ್ರಬಂಧವೂ ಹತ್ತೊಂಬತ್ತನೆಯ ಶತಮಾನದ ಕೊನೆ ಮತ್ತು ಇಪ್ಪತ್ತನೆಯ ಶತಮಾನದ ಆರಂಭಕಾಲದಲ್ಲಿ ಕಾಣಿಸಿ ಕೊಂಡಿತಾದರೂ ಅದು ಸ್ಥಾಯಿಯಾಗಿ ನೆಲೆ ನಿಂತಿದ್ದು ೧೯೩೦ರಿಂದ ಈಚೆಗೆ ವಿ.ಸೀ., ಪುತಿನ, ತೀ.ನಂ.ಶ್ರೀ, ಕುವೆಂಪು, ಎ.ಎನ್.ಮೂರ್ತಿರಾವ್, ಕೆ.ಎಸ್. ನರಸಿಂಹಸ್ವಾಮಿ, ಹ.ಬಾ. ಕುಲಕರ್ಣಿ, ನಾ. ಕಸ್ತೂರಿ, ಗೊರೂರು ರಾಮಸ್ವಾಮಿ ಅಯ್ಯಂಗಾರ್, ರಾ.ಶಿ., ಅ.ರಾ.ಸೇ.,

ದಾಶರಥಿ ದೀಕ್ಷಿತ್, ಬೀಚಿ, ನಾಡಿಗೇರ ಕೃಷ್ಣರಾಯ, ರಾ.ಕು., ಎಚ್ಚೆಸ್ಕೆ, ಎಸ್. ಪ್ರಹ್ಲಾದರಾವ್, ಹಾ.ಮಾ. ನಾಯಕ, ಶಿವರಾಮಕಾಂತ. ರಾವ್ ಬಹದ್ದೂರ ಮೊದಲಾದವರು ಪ್ರಬಂಧ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ.

ವಿಚಾರಸಾಹಿತ್ಯ, ವಿಜ್ಞಾನ ಸಾಹಿತ್ಯಗಳ ಬೆಳವಣಿಗೆಯಿಂದಲೂ ಆಧುನಿಕ ಕನ್ನಡ ಶ್ರೀಮಂತವಾಗಿದೆ. ಕ್ಲಿಷ್ಟವಾದ ಶಾಸ್ತ್ರ ವಿಷಯಗಳನ್ನು ಸರಳವಾದ, ಸುಲಭವಾದ ಕನ್ನಡದಲ್ಲಿ ಜನಸಾಮಾನ್ಯರಿಗೆ ಬೋಧಿಸುವುದರಲ್ಲಿ ಕರ್ನಾಟಕದ ಮೂರು ವಿಶ್ವವಿದ್ಯಾನಿಲಯಗಳ, ಪ್ರಕಟಣಾ ಸಂಸ್ಥೆಗಳೂ ಅಪಾರವಾಗಿ ಶ್ರಮಿಸಿವೆ.

ಹನ್ನೆರಡನೆಯ ಶತಮಾನದ ವಚನ ಸಾಹಿತ್ಯವನ್ನು ಅದರ ಶಾಸ್ತ್ರೀಯ ಸ್ವರೂಪದ ವಿವರಣೆ ವಿಶ್ಲೇಷಣೆಗಳೊಡನೆ ಹೊರತರುವುದರ ಜೊತೆಗೆ, ಎಸ್.ವಿ. ರಂಗಣ್ಣ, ಪರಮೇಶ್ವರ ಭಟ್ಟ ಮುಂತಾದವರು ಹಲವು ವಚನಗಳನ್ನೂ ಬರೆದಿದ್ದಾರೆ. ಆಧುನಿಕ ಕನ್ನಡ ಸಾಹಿತ್ಯದಲ್ಲಿ ಮಕ್ಕಳ ಸಾಹಿತ್ಯ ಫಲಭರಿತವಾಗಿದೆ. ಪಂಜೆ ಮಂಗೇಶರಾಯರು, ಜಿ.ಪಿ. ರಾಜರತ್ನಂ, ಹೊಯಿಸಳ ಮೊದಲಾದವರು ಈ ದಿಶೆಯಲ್ಲಿ ಗಮನಾರ್ಹ ಸೇವೆ ಸಲ್ಲಿಸಿದ್ದಾರೆ. ಬೇರೆ ಬೇರೆ ಭಾಷೆಗಳಿಂದ ಅನುವಾದವಾಗಿರುವ, ಅನುವಾದವಾಗುತ್ತಿರುವ ಗ್ರಂಥಗಳೂ ನಮ್ಮ ಗದ್ಯದ ಶ್ರೀಮಂತಿಕೆಯನ್ನು ಬೆಳಸುತ್ತಿವೆ. ಕನ್ನಡ ವಿಶ್ವಕೋಶಗಳು ಕನ್ನಡ ಗದ್ಯದ ಶ್ರೀಮಂತಿಕೆಯನ್ನು ಹೆಚ್ಚಿಸುತ್ತಿವೆ. ಸಾಹಿತ್ಯ ಅಧ್ಯಯನಕ್ಕೆ ಅಗತ್ಯವಿರುವ ಇತರ ಭಾರತೀಯ ಭಾಷೆಗಳ ಸಾಹಿತ್ಯದ ಪರಿಚಯ ಮತ್ತು ತುಲನಾತ್ಮಕ ವಿಶ್ಲೇಷಣೆಗಳ ಮಹತ್ವದ ದೃಷ್ಟಿಯಿಂದ, ಕೇಂದ್ರ ಹಾಗೂ ರಾಜ್ಯ ಸಾಹಿತ್ಯ ಅಕಾಡೆಮಿಗಳು ಹೊರತರುವ ಪ್ರಕಟಣೆಗಳು, ಭಾಷಾಂತರಗಳು, ನಿಯತಕಾಲಿಕಗಳು ಗಮನಾರ್ಹ ಕೆಲಸ ಮಾಡುತ್ತಿವೆ. ಇತ್ತೀಚೆಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಹೊರತಂದಿರುವ 'ಭಾರತೀಯ ಸಾಹಿತ್ಯ ಸಮೀಕ್ಷೆ'ಯ ಎರಡು ಸಂಪುಟಗಳು ಈ ಸಾಲಿಗೆ ಸೇರುತ್ತವೆ. ಕನ್ನಡ ಸಾಹಿತ್ಯದ ವೈವಿಧ್ಯ ವೈಶಿಷ್ಟ್ಯಗಳನ್ನು ಗುರುತಿಸಲು ಕನ್ನಡ ಸಾಹಿತ್ಯ ಚರಿತ್ರೆಗಳು ಸಮಗ್ರವಾಗಿ ಪ್ರಕಟಗೊಳ್ಳುತ್ತಿವೆ. ಹೀಗೆ ಸುಮಾರು ೧೫೦೦ ವರ್ಷಗಳ ಭದ್ರ ಪರಂಪರೆಯಿಂದ ಪುಷ್ಟಗೊಂಡ ಕನ್ನಡ ಸಾಹಿತ್ಯ ಆಯಾಯಾ ಶತಮಾನಗಳಲ್ಲಿ ಆ ಕಾಲದ ಸಮಗ್ರ ಸತ್ವವನ್ನು ಹೀರಿ ಬೆಳೆದು ಅಂದಂದಿಗೆ ಅದರ ವೈವಿಧ್ಯತೆಯನ್ನು ಪ್ರಕಟಿಸುತ್ತ ಜೀವಂತವಾಗಿ ಹರಿದು ಬಂದಿದೆ.

೧. ಆಧುನಿಕ ಕನ್ನಡ ಸಾಹಿತ್ಯದಲ್ಲಿ ಆರಂಭದ ದೆಶೆ

ಕನ್ನಡ ಗದ್ಯ ಸಾಹಿತ್ಯದ ಉಗಮವನ್ನು ಹಲ್ಮಿಡಿ ಶಾಸನದಿಂದ (ಸು. ೪೫೦) ಗುರುತಿಸಬಹುದಾಗಿದೆ. ಪೂರ್ವದ ಹಳಗನ್ನಡ ಭಾಷೆಯಲ್ಲಿ ರಚಿತವಾಗಿರುವ ಈ ಶಾಸನ ಕದಂಬ ಕಾಕುತ್ಸವರ್ಮನ ಕಾಲಕ್ಕೆಸೇರಿದ್ದೆಂದು ಹೇಳಲಾಗಿದೆ. ಈ ಶಾಸನದಲ್ಲಿ ಹೆಚ್ಚಾಗಿ ಸಂಸ್ಕೃತ ಪದಗಳೇ ಬಳಕೆಗೊಂಡಿದ್ದು, ಕೆಲವೇ ಕೆಲವು ಕನ್ನಡ ಪದಗಳು ಕಾಣಸಿಗುತ್ತವೆ. ಪೂರ್ವ ಹಳಗನ್ನಡದ ವಿಭಕ್ತಿ ಪ್ರತ್ಯಯಗಳೂ, ಕರ್ಮಣೀ ಪ್ರಯೋಗದ ಒಂದು ರೂಪವೂ ಈ ಶಾಸನದಲ್ಲಿ ಕಂಡುಬಂದಿದ್ದು ಕನ್ನಡದ ಮೇಲೆ ಉಂಟಾಗಿದ್ದ ಸಂಸ್ಕೃತದ ಪ್ರಭಾವದ ಬಗ್ಗೆ ಬೆಳಕು ಚೆಲ್ಲುತ್ತದೆ. ಒಂದನೆಯ ಮತ್ತು ಎರಡನೆಯ ಶತಮಾನಗಳಿಗೂ ಹಿಂದೆಯೇ ಗ್ರಾಂಥಿಕ ಭಾಷೆಯಾಗಿ ಕನ್ನಡ ಬಳಕೆಯಲ್ಲಿತ್ತು ಎಂಬುದು ಇದರಿಂದ ಸ್ಪಷ್ಟವಾಗುತ್ತದೆ.

ಸುಮಾರು ಐದನೆಯ ಶತಮಾನದ ನಂತರ ಪ್ರಾರಂಭಗೊಂಡು ಸುಮಾರು ೧೮ನೆಯ ಶತಮಾನದವರೆಗೂ ವಿಪುಲ ಸಂಖ್ಯೆಯ ಗದ್ಯ ಶಾಸನಗಳು ಲಭ್ಯವಾಗಿದೆ. ವೀರಗಲ್ಲು, ಮಾಸ್ತಿಕಲ್ಲು, ದತ್ತಿಶಾಸನಗಳು ಆ ಕಾಲದ ಸಾಮಾಜಿಕ, ಐತಿಹಾಸಿಕ ವಿವರಗಳನ್ನು ನೀಡುವುದಲ್ಲದೆ ಭಾಷೆ ಬೆಳೆದು ಬಂದ ಬಗೆಯನ್ನೂ ತಿಳಿಸುತ್ತವೆ.

ಹಳಗನ್ನಡ ಶಬ್ದಗಳ ಬಳಕೆ ಮುಂದೆ ಏಳು, ಎಂಟು ಮತ್ತು ಒಂಬತ್ತನೆಯ ಶತಮಾನಗಳ ಗದ್ಯ ಶಾಸನಗಳಲ್ಲಿ, ಪೂರ್ವದ ಹಳಗನ್ನಡ ಪ್ರಯೋಗಗಳೊಂದಿಗೇ ನಡೆದಿದೆ.

ಅಲ್ಲಲ್ಲಿ ಸಂಸ್ಕೃತ, ಪ್ರಾಕೃತ, ತದ್ಭವಗಳ ಮಿಶ್ರಣ ಕಂಡುಬಂದರೂ, ಕನ್ನಡ ಭಾಷೆ ಮತ್ತು ಅದರ ವ್ಯಾಕರಣ ಪ್ರಯೋಗಗಳಲ್ಲಿ ಬಹುಪಾಲು ತಮಿಳು ಭಾಷೆಯ ಹೋಲಿಕೆಗಳಿವೆ.

ಕ್ರಿ.ಶ. ೮೦೦ರಲ್ಲಿ ರಚಿತವಾದ ಮಾವಳಿ ಶಾಸನ ಖಚಿತವಾದ ಸಾಹಿತ್ಯಕ ಗುಣಗಳನ್ನು ಹೊಂದಿರುವ ಕಾರಣ, ಹೆಚ್ಚಿನ ಮಹತ್ವ ಪಡೆಯುತ್ತದೆ. ಹಲ್ಮಿಡಿ ಶಾಸನಕ್ಕೂ ಈ ಶಾಸನಕ್ಕೂ ನಡುವಿನ ಸುಮಾರು ಮೂರೂವರೆ ಶತಮಾನಗಳ ಅವಧಿಯಲ್ಲಿ, ಭಾಷೆಯಲ್ಲಿ ಉಂಟಾಗಿದ್ದ ಬೆಳವಣಿಗೆಗೆ ಈ ಶಾಸನ ಸಾಕ್ಷಿಯಾಗಿ ನಿಲ್ಲುತ್ತದೆ. ವೀರನೊಬ್ಬನು ಯುದ್ಧದಲ್ಲಿ ತೋರಿದ ಶೌರ್ಯಸಾಹಸಗಳನ್ನೂ, ಅಂತಿಮವಾಗಿ ವೀರಮರಣವನ್ನಪ್ಪಿದ ಪರಿಯನ್ನೂ ಈ ಶಾಸನ ನಾಟಕೀಯವಾಗಿ ವರ್ಣಿಸುತ್ತದೆ. ಸತ್ವಯುತ ಭಾಷೆಯ ಮೂಲಕ ಯುದ್ಧರಂಗದ ಭೀಕರ ವಾತಾವರಣವನ್ನು ವರ್ಣಿಸಿದೆ.

ಹತ್ತನೆಯ ಶತಮಾನದ ಸುಮಾರಿಗೆ ಗದ್ಯದಿಂದ ಪದ್ಯದೆಡೆಗೆ ಉಂಟಾದ ಪಯಣದಿಂದಾಗಿ, ಗದ್ಯ ಶಾಸನಗಳಿಗಿಂತ ಪದ್ಯ ಶಾಸನಗಳೇ ಹೆಚ್ಚಿನ ಸಂಖ್ಯೆಯಲ್ಲಿ ಕಾಣಸಿಗುತ್ತವೆ. ಚಂಪೂಯುಗದ ಸುವರ್ಣ ಕಾಲವೆನಿಸಿದ ಈ ಅವಧಿಯಲಿ, ಶಾಸನ ಕವಿಗಳು ಪಂಪ, ರನ್ನರ ಪ್ರಭಾವಕ್ಕೆ ಒಳಗಾಗಿರಬಹುದೆಂದು ತೋರುತ್ತದೆ. ಸುಮಾರು ೧೩ನೆಯ ಶತಮಾನದಿಂದ ಹಿಡಿದು ೧೭ನೆಯ ಶತಮಾನದವರೆಗಿನ ಶಾಸನಗಳಲ್ಲಿ ಹೊಸತನವಾಗಲೀ, ಭಾಷೆಯ ದೃಷ್ಟಿಯಿಂದ ಹೆಚ್ಚಿನ ಬೆಳವಣಿಗೆಯಾಗಲೀ ಕಂಡುಬರುವುದಿಲ್ಲ. ಮಹಮ್ಮದೀಯರು ಮತ್ತು ಇಂಗ್ಲಿಷರ ಆಳ್ವಿಕೆಗೆ ಒಳಗಾದ ಕಾಲದಲ್ಲಿ, ಆ ಭಾಷೆಗಳಲ್ಲಿ ಬಳಸಲಾಗುತ್ತಿದ್ದ ಮಾತುಗಳು ಶಾಸನ ಸಾಹಿತ್ಯದಲ್ಲೂ ಸೇರಿಕೊಂಡವು.

ಸುಮಾರು ೧೧ರಿಂದ ೧೮ನೆಯ ಶತಮಾನದವರೆಗಿನ ಅವಧಿಯಲ್ಲಿ ಪದ್ಯ ಶಾಸನಗಳೇ ಹೆಚ್ಚಾಗಿ ಕಾಣಸಿಕ್ಕರೂ, ಅಲ್ಲಲ್ಲಿ ಗದ್ಯ ಶಾಸನಗಳು ತಲೆದೋರಿದವು. ಅವುಗಳಲ್ಲಿ ಕೆಲವು ಉತ್ತಮ ಮಟ್ಟದ ಗದ್ಯ ಶೈಲಿಯನ್ನೂ ಒಳಗೊಂಡಿವೆ. ನೀರಸವಾಗಿದ್ದ ಗದ್ಯ ಜೀವಂತಿಕೆಯನ್ನು ಪಡೆಯಿತು. ಸಜ್ಜನತಿಲಕನೆಂಬ ಕವಿ ಬರೆದ ಸಿರಸಿಂಗಿ ಶಾಸನ ಇದಕ್ಕೊಂದು ಉತ್ತಮ ಉದಾಹರಣೆ. ಈತ ಚಾಳುಕ್ಯ ನಾಲ್ಕನೆಯ ಸೋಮೇಶ್ವರನ ಕಾಲದ ಕವಿ. ಋಷ್ಯಶೃಂಗನ ಕಥೆಯನ್ನು ಹೃದಯ ಮುಟ್ಟುವಂತೆ ಹೇಳುವ ಈ ಶಾಸನ ಒಂದು ಪುಟ್ಟ ಚಂಪೂಕಾವ್ಯದಂತಿದೆ. ಪುಟ್ಟ ಪುಟ್ಟ ಮಾಲೆಗಳನ್ನು ಹೆಣೆದು ಸುದೀರ್ಘವಾದ ವಾಕ್ಯವೊಂದನ್ನು ಕಟ್ಟಿರುವ ಪರಿ ಈತನ ಕಾವ್ಯದ ಹಿರಿಮೆ. ಹೀಗೆ ಕೆಲವು ಶಾಸನಗಳು ಸಂಪ್ರದಾಯದ ಹಾದಿಯಲ್ಲಿ ನಡೆದಿದ್ದರೆ ಮತ್ತೆ ಕೆಲವು ಅಚ್ಚಕನ್ನಡದ ಪುಟ್ಟ ಪುಟ್ಟ ವಾಕ್ಯಗಳ ಉತ್ತಮ ಗದ್ಯಭಾಗಗಳಿಂದ ಕೂಡಿರುವುದು ಕಂಡುಬರುತ್ತದೆ. ಶಾಸನದ ಗದ್ಯದಲ್ಲಿ ವಿವಿಧ ರೀತಿಯ ಭಾಷಾ ವೈಶಿಷ್ಟ್ಯಗಳು ಆಡುಮಾತಿನ ಭಾಷೆ, ಸರ್ಕಾರಿ ಭಾಷೆ, ಗ್ರಂಥದ ಮತ್ತು ಕಾವ್ಯದ ಭಾಷೆ, ಪ್ರಾದೇಶಿಕ ಭಾಷೆ ಎಲ್ಲವೂ ಕಾಣಸಿಗುತ್ತವೆ. ಹೀಗಾಗಿ ಶಾಸನದ ಗದ್ಯ ಕನ್ನಡದ ಗದ್ಯ ಸಾಹಿತ್ಯಕ್ಕೆ ಒಂದು ಮಹತ್ತರ ಕೊಡುಗೆಯಾಗಿ ಪರಿಣಮಿಸಿದೆ.

ವಡ್ಡಾರಾಧನೆ (ಸು. ೯೨೦) ಕನ್ನಡ ಸಾಹಿತ್ಯ ಕ್ಷೇತ್ರದ ಮೊಟ್ಟಮೊದಲ ಗದ್ಯ ಕೃತಿ. ಶಿವಕೋಟ್ಯಾಚಾರ್ಯನ ಈ ಕೃತಿ ಹತ್ತೊಂಬತ್ತು ಕಥೆಗಳನ್ನು ಒಳಗೊಂಡ ಗದ್ಯ ಕಥಾಕೋಶ. ಕನ್ನಡತನವನ್ನು ಮೆರೆವ ಈ ಕೃತಿ, ಚಿಕ್ಕ ಚಿಕ್ಕ ವಾಕ್ಯಗಳನ್ನು ಒಳಗೊಂಡ ಜೀವಂತ ಶೈಲಿಯಲ್ಲಿದೆ. ಜೈನ ತತ್ವಗಳನ್ನು ಬೋಧಿಸುವ ಕಥೆಗಳನ್ನು ಸಾಮಾನ್ಯರಿಗೂ ಮನ ಮುಟ್ಟುವ ಶೈಲಿಯಲ್ಲಿ ಕವಿ ರಚಿಸಿದ್ದಾನೆ. ನಾಣ್ಣುಡಿಗಳು, ದೃಷ್ಟಾಂತಗಳು ಈ ಕಥೆಗಳಲ್ಲಿ ಹಾಸು ಹೊಕ್ಕಾಗಿದ್ದು, ಕಥೆಗಳ ಸೌಂದರ್ಯವನ್ನು

ಹೆಚ್ಚಿಸಿವೆ. ಅನುಭವದಿಂದ ಕೂಡಿ ಅಭಿವ್ಯಕ್ತಿ, ಜೀವಂತ ಗದ್ಯ, ವಿಶಿಷ್ಟ ವ್ಯಾಕರಣ ಪ್ರಯೋಗಗಳು, ಪದಗಳ ಬಳಕೆಯಲ್ಲಿ ಹೊಸತನ, ಕನ್ನಡ ಸಂಸ್ಕೃತ ಪದಗಳ ತೋಲನ ಈ ವಿಶಿಷ್ಟಗುಣಗಳಿಂದಾಗಿ ವಡ್ಡಾರಾಧನೆ ಹಳಗನ್ನಡ ಗದ್ಯದ ಉತ್ತಮ ಮಾದರಿಯಾಗಿ ನಿಲ್ಲುತ್ತದೆ. ಇಲ್ಲಿ ದೀರ್ಘವಾಕ್ಯಗಳಲ್ಲಿ ಕನ್ನಡ ಗದ್ಯದ ಹೊಸ ಲಯ ಅನುಭವಕ್ಕೆ ಬರುತ್ತದೆ. ಈ ಗದ್ಯ ದೇಸಿ ಮತ್ತು ಮಾರ್ಗಗಳ ಸಮನ್ವಯ ಸಾಧಿಸಿದೆ ಎಂದೂ ಹೇಳಲಾಗಿದೆ. ಇಲ್ಲಿ ಕಥೆಗಳು ಧಾರ್ಮಿಕ ಉದ್ದೇಶದಿಂದ ರಚಿತವಾದ ಕಥೆಗಳಾಗಿದ್ದರೂ ಜೀವಂತಿಕೆ ಮತ್ತು ನಿರೂಪಕ ಅಂಶಗಳಿಂದ ಮೂಲ ಉದ್ದೇಶವನ್ನೂ ಮೀರಿದ ಸ್ವತಂತ್ರ 'ಕಥೆಗಳಾಗಿ' ರಾರಾಜಿಸುತ್ತವೆ.

ಶಾಸನಗದ್ಯ ಮತ್ತು ವಡ್ಡಾರಾಧನೆಯ ಗದ್ಯದ ನಂತರ ಬರುವ ಪ್ರಮುಖ ಘಟ್ಟ ಚಾವುಂಡರಾಯನ ಗದ್ಯ. ಈತನ ತ್ರಿಷಷ್ಟಿ-ಲಕ್ಷಣ-ಮಹಾಪುರಾಣ (ಸು. ೯೭೮) ಕನ್ನಡ ಸಾಹಿತ್ಯದ ಎರಡನೆಯ ಮುಖ್ಯ ಗ್ರಂಥವೆನಿಸಿದೆ. ಈ ಕೃತಿಯ ಗದ್ಯಶೈಲಿ ವಡ್ಡಾರಾಧನೆಗೆ ಹೋಲಿಸಿದರೆ ಹೆಚ್ಚು ಪ್ರೌಢವಾಗಿ, ಗಂಭೀರವಾಗಿ ತೋರುತ್ತದೆ. ಜೈನಧರ್ಮದ ತತ್ವಗಳನ್ನೂ ಅರವತ್ತಮೂರು ಮಂದಿ ಪುರಾತನರ ಚರಿತ್ರೆಗಳನ್ನೂ ಈ ಕೃತಿ ಒಳಗೊಳ್ಳುತ್ತದೆ. ದೀರ್ಘವಾದ ವಾಕ್ಯಗಳಿಂದ ಕೂಡಿದ ಈ ಕೃತಿ ಸಂಸ್ಕೃತ ಮತ್ತು ಪ್ರಾಕೃತಗಳಲ್ಲಿ ಕವಿಗೆ ಲಭಿಸಿದ್ದ ಭಾಷಾ ಪಾಂಡಿತ್ಯವನ್ನು ಎತ್ತಿ ಹಿಡಿದಿವೆ. ವಡ್ಡಾರಾಧನೆ ಬಂದು ಸುಮಾರು ಆರು ದಶಕಗಳ ನಂತರ ಕಾಣಿಸಿಕೊಂಡ ಈ ಕೃತಿ ಹಳಗನ್ನಡದಲ್ಲಿದ್ದು, ಇದರ ಗದ್ಯ ಶೈಲಿ ವಿಶಿಷ್ಟವಾಗಿದೆ. ವಡ್ಡಾರಾಧನೆಯಲ್ಲಿ ಪ್ರಧಾನವಾಗಿ ಕಂಡುಬಂದಂತಹ ಕಥಾಗದ್ಯದೊಂದಿಗೆ ಶಾಸ್ತ್ರಿಯ ಗದ್ಯವೂ ಮೇಳೈಸಿರುವುದು ಈ ಕೃತಿಯ ವೈಶಿಷ್ಟ್ಯವಾಗಿದ್ದು, ಇಂತಹ ಮಿಶ್ರ ಬಳಕೆ ಹಿರಿಮೆಯೂ ಆಗಿದೆ.

ಗದ್ಯ ಸಾಹಿತ್ಯ ಪ್ರಕಾರಕ್ಕೆ ಮತ್ತೊಂದು ಮುಖ್ಯ ಕೊಡುಗೆ ಗದ್ಯ ಪದ್ಯಗಳು ಮಿಶ್ರವಾದ ಚಂಪೂ ಗ್ರಂಥಗಳಲ್ಲಿ ಕಂಡು ಬರುವ ಗದ್ಯ. ಪಂಪ ತನ್ನ ಎರಡೂ ಚಂಪೂಕೃತಿಗಳಲ್ಲಿ ಬಳಸಿರುವ ಗದ್ಯ ಅತ್ಯಂತ ಔಚಿತ್ಯಪೂರ್ಣವೆನಿಸಿದೆ. ಈತನ ಕಾವ್ಯಶೈಲಿಯ ವೈಶಿಷ್ಟ್ಯಗಳಾದ ದೇಸೀ ನುಡಿಗಟ್ಟುಗಳು ಮತ್ತು ನಾದಗುಣ ಈತನ ಗದ್ಯದಲ್ಲಿ ಕಂಡು ಬರುತ್ತದೆ. ತನ್ನ ಕಥಾನಾಯಕ ಅರಿಕೇಸರಿ ಯೌವನಾವಸ್ಥೆಗೆ ಕಾಲಿಟ್ಟ ಸಂದರ್ಭದ ವರ್ಣನೆ ಇದಕ್ಕೊಂದು ಉತ್ತಮ ಉದಾಹರಣೆ. ಪಂಪ ತನ್ನ ಚಂಪೂಕಾವ್ಯಗಳಲ್ಲಿ ಬಳಸಿರುವ ಗದ್ಯ ಅನಂತರದ ಕೃತಿಕಾರರಿಗೆ ಮಾರ್ಗದರ್ಶಿಯಾಗಿ ಪರಿಣಮಿಸಿತು.

ಪಂಪನ ನಂತರ ಚಂಪೂಕಾವ್ಯ ರಚಿಸಿದವರಲ್ಲಿ ಪಾಂಡಿತ್ಯ ಪ್ರದರ್ಶನಕ್ಕೆ ಒತ್ತು ಕೊಟ್ಟವರೇ ಹೆಚ್ಚು. ಜನ್ನ, ಷಡಕ್ಷರಿ, ರುದ್ರಭಟ್ಟ ಮುಂತಾದ ಅನೇಕರು ಈ ಸಾಲಿಗೆ ಸೇರುತ್ತಾರೆ. ಆದರೆ ದುರ್ಗಸಿಂಹ, ನಯಸೇನ ಮುಂತಾದ ಚಂಪೂ ಕೃತಿಕಾರರು ರಚಿಸಿರುವ ಗದ್ಯಭಾಗಗಳು ಮನಮುಟ್ಟುವ ಶೈಲಿಯಲ್ಲಿದ್ದು ಸರಳವಾಗಿಯೂ, ಸ್ಪಷ್ಟವಾಗಿಯೂ ಇವೆ. ದುರ್ಗಸಿಂಹನ ಪಂಚ ತಂತ್ರದಲ್ಲಿ ಗದ್ಯವೇ ಪ್ರಧಾನವಾಗಿದೆ. ನಾಣ್ಣುಡಿಗಳೂ, ಜಾಣ್ನುಡಿಗಳೂ ತುಂಬಿರುವ ದುರ್ಗಸಿಂಹನ ಗದ್ಯದ ರೀತಿಯೇ ನಯಸೇನನ ಧರ್ಮಾಮೃತದಲ್ಲೂ ಮುಂದುವರಿದಿದೆ. ಈ ಕೃತಿಯಲ್ಲಿ ಹೋಲಿಕೆಗಳ ಸರಮಾಲೆಯನ್ನೇ ಹೆಣೆಯಲಾಗಿದ್ದು ಚಿಕ್ಕಚಿಕ್ಕ ವಾಕ್ಯಗಳ ಚೊಕ್ಕ ಗದ್ಯವನ್ನೂ ಇಲ್ಲಿ ಕಾಣಬಹುದಾಗಿದೆ.

ಅನಂತರ ಬಂದ ಚಂಪೂ ಕವಿಗಳ ಗದ್ಯದಲ್ಲಿ ಹೆಚ್ಚಿನ ವೈಶಿಷ್ಟ್ಯಗಳಿಲ್ಲ. ಅವು ಹೆಚ್ಚು ಕಡಿಮೆ ಒಂದೇ ಮಾದರಿಯವು. ಅನಗತ್ಯವಾಗಿ ತುಂಬಲಾದ ದೀರ್ಘ ಸಮಾಸಗಳು ಮತ್ತು ಅಲಂಕಾರಗಳು ಗದ್ಯವನ್ನು ಶಿಥಿಲಗೊಳಿಸಿವೆ. ಏನೇ ಆದರೂ, ಚಂಪೂಗದ್ಯ, ಗದ್ಯ ಸಾಹಿತ್ಯದ ಬೆಳವಣಿಗೆಯಲ್ಲಿ ವಹಿಸಿರುವ ಪಾತ್ರವನ್ನು ಅಲ್ಲಗಳೆಯುವಂತಿಲ್ಲ.

ಹನ್ನರಡನೆಯ ಶತಮಾನದಲ್ಲಿ ಕಾಲಿಟ್ಟ ವಚನ ಸಾಹಿತ್ಯ ಕನ್ನಡ ಗದ್ಯ ಪ್ರಕಾರಕ್ಕೆ ಮಹತ್ತರ ಕೊಡುಗೆಯೆನಿಸಿದೆ. ಚಂಪೂಕಾವ್ಯ ಪರಂಪರೆ ಅವನತಿಯ ಹಾದಿಯಲ್ಲಿ ಮುಂದುವರಿಯುತ್ತಿದ್ದಂತೆಯೇ, ಹನ್ನೆರಡನೆಯ ಶತಮಾನದಲ್ಲಿ ವಚನಕಾರರ ಚಳವಳಿ ಕಾಲಿಟ್ಟಿತು. ಈ ಸಾಮಾಜಿಕ - ಧಾರ್ಮಿಕ ಕ್ರಾಂತಿಯ ಸಂದರ್ಭದಲ್ಲಿ, ವೀರಶೈವ ಶರಣರು ವಚನಗಳನ್ನು ಧರ್ಮಪ್ರಚಾರದ ಮಾಧ್ಯಮವನ್ನಾಗಿ ಬಳಸಿಕೊಂಡರು. ವಚನಗಳು ಪದ್ಯ ಜಾತಿಗೆ ಸೇರಿದವೋ, ಗದ್ಯ ಜಾತಿಗೆ ಸೇರಿದವೋ ಎಂಬ ಪ್ರಶ್ನೆಯಿದೆ. ಗದ್ಯ ಪದ್ಯಗಳ ನಡುವಿನ ಒಂದು ಪ್ರಕಾರ ಎಂಬ ಅಭಿಪ್ರಾಯವೂ ವ್ಯಕ್ತಗೊಂಡಿದೆ. ವಚನಗಳ ಭಾಷೆ ಭಾವಾವೇಶದಿಂದ ಕೂಡಿದ ಜೀವಂತ ಭಾಷೆಯಾಗಿದ್ದು ಲಯ ಮಾಧುರ್ಯಗಳಿಂದ ಕೂಡಿರುವಂತಹದು, ದಾಸಿಮಯ್ಯ, ಅಲ್ಲಮಪ್ರಭು, ಬಸವಣ್ಣ, ಅಕ್ಕಮಹಾದೇವಿ, ಸಿದ್ಧರಾಮ, ಚೆನ್ನಬಸವಣ್ಣ ಮೊದಲಾದವರ ವಚನಗಳು ಅಂದಿನ ಸಾಮಾಜಿಕ ಧಾರ್ಮಿಕ ಜೀವನ, ಸಾಹಿತ್ಯ ಧೋರಣೆಗಳನ್ನು ಪ್ರತಿಬಿಂಬಿಸುತ್ತವೆ. ಜನಸಾಮಾನ್ಯರನ್ನು ಉದ್ದೇಶಿಸಿ ಬರೆಯಲಾದ ಈ ವನಚಗಳು ಆಡು ಮಾತಿನಲ್ಲಿದ್ದವು. ಅವು ಶೈಲೀಕೃತ ಪ್ರಯೋಗಗಳನ್ನು ತ್ಯಜಿಸಿ, ಜನಸಾಮಾನ್ಯರ ಸರಳ ಸಹಜ ಭಾಷೆಯನ್ನು ಬಳಸುತ್ತ ಕನ್ನಡ ಸಾಹಿತ್ಯದಲ್ಲಿ ಒಂದು ಕ್ರಾಂತಿಯನ್ನುಂಟು ಮಾಡಿದವು. ವಿವಿಧ ಕಸುಬುಗಳನ್ನು ಆಶ್ರಯಿಸಿದ್ದ ಕಸಬುದಾರರು ತಮ್ಮ ತಮ್ಮ ಕಸಬಿನ ಪರಿಭಾಷೆಯನ್ನು ಬಳಸುವ ಮೂಲಕ, ಭಾಷೆಗೆ ಒಂದು ಹೊಸ ಆಯಾಮವನ್ನು ನೀಡಿದರು. ಅತ್ಯಂತ ಅಮೂರ್ತವಾದ ವಿಚಾರಗಳನ್ನು ಕೂಡ ಸರಳವಾದ ಸ್ಪಷ್ಟವಾದ ರೀತಿಯಲ್ಲಿ ಅಭಿವ್ಯಕ್ತಿಸುವ ಗುಣ ಕನ್ನಡಭಾಷೆಗಿದೆ ಎಂಬುದನ್ನು ವಚನಸಾಹಿತ್ಯ ಸಾಬೀತುಪಡಿಸಿತು. ೧೭ನೆಯ ಶತಮಾನದಲ್ಲಿ ಗದ್ಯ ಮತ್ತೆ ಮುಂಚೂಣಿಗೆ ಬಂದಾಗ, ವಚನ ಸಾಹಿತ್ಯ ಭಾಷೆಯ ಮೇಲೆ, ಅಭಿವ್ಯಕ್ತಿಯ ಸ್ವರೂಪದ ಮೇಲೆ ಉಂಟುಮಾಡಿದ ಪರಿಣಾಮವನ್ನು ಮೈಗೂಡಿಸಿಕೊಂಡೇ ಬರಬೇಕಾಯಿತು. ೧೫ನೆಯ ಶತಮಾನದಲ್ಲಿ ವಚನಕಾರರಲ್ಲಿ ಕೆಲವರು, ಹಿಂದಿನ ವಚನಗಳನ್ನು ಆಯ್ದು ಜೋಡಿಸಿ ಶೂನ್ಯ ಸಂಪಾದನೆ ಮುಂತಾದ ವಚನ ಗ್ರಂಥಗಳು ಹುಟ್ಟಿ ಬರಲು ಕಾರಣರಾದರು.

ಕನ್ನಡ ಗದ್ಯಕ್ಕೆ ಮತ್ತೊಂದು ಮುಖ್ಯ ಕೊಡುಗೆ ಹರಿಹರನ ರಗಳೆಯಲ್ಲಿಯ ಗದ್ಯ. ಕಥೆಗಳು ದೀರ್ಘವಾಗಿದ್ದಾಗ, ರಗಳೆ ಮತ್ತು ಗದ್ಯಭಾಗಗಳು ಒಂದಾದ ಮೇಲೊಂದರಂತೆ ಬರುತ್ತವೆ. ಚಂಪೂ ಕ್ರಮಕ್ಕಿಂತ ಹಿರಿದಾದ ಈ ಪ್ರಯೋಗ ವಿಶಿಷ್ಟವಾದುದು. ವಚನಗಳ ಧೋರಣೆಯನ್ನು ಮೈಗೂಡಿಸಿಕೊಂಡು ಬೆಳೆದ ರಗಳೆ ಜೀವಂತ ಗದ್ಯ ಸೃಷ್ಟಿಗೆ ಕಾರಣವಾಯಿತು. ಆಡು ಮಾತಿಗೆ ಹತ್ತಿರವಾದ ಭಾಷೆಯ ಬಳಕೆಯಿಂದ ಗದ್ಯದ ಉದ್ದೇಶ ಈಡೇರಿದಂತಾಯಿತು.

ಸಂಗೀತ, ವ್ಯಾಕರಣ, ಧರ್ಮ, ವೈದ್ಯ, ಜ್ಯೋತಿಷ್ಯ ಮುಂತಾದ ವಿಷಯಗಳ ಬಗ್ಗೆ ರಚಿತವಾಗಿರುವ ಶಾಸ್ತ್ರೀಯ ಗ್ರಂಥಗಳು, ಟೀಕೆ-ಟಿಪ್ಪಣಿಗಳನ್ನೂ ವ್ಯಾಖ್ಯಾನಗಳನ್ನೂ ಒಳಗೊಂಡಿದೆ. ಇವನ್ನು ಉತ್ತಮ ಗದ್ಯವೆಂದು ಕರೆಯಲಾಗದಿದ್ದರೂ ಕನ್ನಡ ಗದ್ಯಸಾಹಿತ್ಯದ ಇತಿಹಾಸದಲ್ಲಿ ಈ ವ್ಯಾಖ್ಯಾನಕಾರರ ಹೆಸರು ಉಲ್ಲೇಖಾರ್ಹ. ಸುಮಾರು ೧೪ನೆಯ ಶತಮಾನದ ಕಾವ್ಯ ಮಾದರಿಯನ್ನು ಪ್ರತಿನಿಧಿಸುವ ಹಸ್ತಿ ಮಲ್ಲನ ಪೂರ್ವಪುರಾಣದ ನಂತರ, ಸುಮಾರು ೧೨ನೆಯ ಶತಮಾನದವರೆಗೆ ಹೆಚ್ಚಿನ ಬೆಳವಣಿಗೆಯೇನೂ ಕಂಡುಬರುವುದಿಲ್ಲ, ಕನ್ನಡದ ಮೊಟ್ಟ ಮೊದಲ ವಿಶ್ವಕೋಶವೆಂದು ಗುರುತಿಸಲಾದ ನಿಜಗುಣ ಶಿವಯೋಗಿ ವಿರಚಿತ 'ವಿವೇಕ ಚಿಂತಾಮಣಿ' ಗುಬ್ಬಿಯ ಮಲ್ಲಣ್ಣ, ಮಗ್ಗೆಯ ಮಾಯಿದೇವ ಮುಂತಾದ ವೀರಶೈವ ಕೃತಿಗಳನ್ನು ಬಿಟ್ಟರೆ, ಹೆಚ್ಚಿನ ಕೃತಿಗಳು ಈ ಅವಧಿಯಲ್ಲಿ ರಚಿತವಾಗಿಲ್ಲ, ದೇವತೆಗಳು ಮತ್ತು ಪುಣ್ಯ ಕ್ಷೇತ್ರಗಳ ಮಹಿಮೆಯನ್ನು ವರ್ಣಿಸುವ

ಕೆಲವು 'ಮಹಾತ್ಮೆಗಳು' ಹಾಗೂ 'ನೋಂಪಿ' ಕಥೆಗಳು (ಕೆಲವು ವಿಶಿಷ್ಟ ವ್ರತಗಳನ್ನು ದೃಷ್ಟಾಂತರ ಮೂಲಕ ವಿವರಿಸುವಂಥ ಕಥೆಗಳು) ಈ ಅವಧಿಯ ಕೊಡುಗೆಗಳೇ.

೧೭ನೆಯ ಶತಮಾನದಲ್ಲಿ ಮೈಸೂರರಸರ ಕಾಲದಲ್ಲಿ ಗದ್ಯ ಸಾಹಿತ್ಯ ಗಣನೀಯ ಬೆಳವಣಿಗೆ ಸಾಧಿಸಿತು. ಚಿಕ್ಕದೇವರಾಜನ 'ಚಿಕ್ಕದೇವರಾಜ ಬಿನ್ನಪ', ತಿರುಮಲಾರ್ಯನ 'ಚಿಕ್ಕದೇವರಾಜ ವಂಶಾವಳಿ' ಉತ್ತಮ ಹಳಗನ್ನಡದ ಮಾದರಿಗಳಾಗಿವೆ. ಹಳಗನ್ನಡ ನಡುಗನ್ನಡಗಳ ಮಿಶ್ರಣವನ್ನು 'ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರ ರತ್ನಾಕರ' ದಲ್ಲಿ ಕಾಣಬಹುದು.

ಬಖೈರು, ಕೈಫಿಯೆತ್ತು ಎಂದು ಕರೆಯಲಾಗುವ ಐತಿಹಾಸಿಕ ಗದ್ಯ ಕೃತಿಗಳಲ್ಲಿ ಅಸಂಖ್ಯ ಉರ್ದು, ಪಾರಸೀ ಶಬ್ದಗಳು ಒಳಗೊಂಡಿವೆ. ೧೭-೧೮ನೆಯ ಶತಮಾನದ ಈ ಪ್ರಕಾರಗಳು ಕನ್ನಡ ಗದ್ಯದ ಬೆಳವಣಿಗೆಯ ದೃಷ್ಟಿಯಿಂದ ಮಹತ್ತರವೆನಿಸಿವೆ.

೧೮-೧೯ನೆಯ ಶತಮಾನವನ್ನು ಕನ್ನಡ ಗದ್ಯ ಸಾಹಿತ್ಯದ ಸುವರ್ಣಯುಗವೆಂದು ಕರೆಯಬಹುದು. ಅಸಂಖ್ಯ ಗದ್ಯ ಕೃತಿಗಳನ್ನು ಕೊಡುಗೆಯಾಗಿ ನೀಡಿದೆ ಈ ಕಾಲದ ಪ್ರಸಿದ್ಧರು ಕಳಲೆ ನಂಜರಾಜ (೧೭೪೦), ದೇವಚಂದ್ರ (೧೭೭೦-೧೮೪೧) ಮುಮ್ಮಡಿ ಕೃಷ್ಣರಾಜ (೧೭೯೪-೧೮೬೮), ಕೆಂಪು ನಾರಾಯಣ (ಸು. ೧೮೨೩), ಅಳಿಯ ಲಿಂಗರಾಜ (೧೮೨೩-೭೪), ಮುದ್ದಣ (೧೮೭೦-೧೯೦೧) ಮೊದಲಾದವರು. ಕೆಂಪುನಾರಾಯಣ 'ಮುದ್ರಾಮಂಜೂಷ' (೧೮೨೩) ಹಳಗನ್ನಡ ನಡುಗನ್ನಡ ಮತ್ತು ಹೊಸಗನ್ನಡಗಳ ಸಂಗಮ. ಇಪ್ಪತ್ತನೆಯ ಶತಮಾನದ ಗದ್ಯಕ್ಕೆ ದಾರಿ ದೀಪವಾದ ಈ ಕೃತಿ, ಕಥಾನಿರೂಪಣೆಗೆ ಸೂಕ್ತವಾದ ಭಾಷೆಯನ್ನು ಬಳಸಿಕೊಂಡಿದೆ. ದೇವಚಂದ್ರನ 'ರಾಜಾವಳಿ ಕಥೆ' ಮತ್ತು ಮಹಾರಾಜ ಕೃಷ್ಣರಾಜ ಒಡೆಯರ್ ರಚಿಸಿದ ಗದ್ಯ ಕೃತಿಗಳೂ ಮುಖ್ಯವಾದವು 'ಮಹಾಸಂಕ್ರಮಣಯುಗ' ಎನಿಸಿರುವ ಹತ್ತೊಂಬತ್ತನೆಯ ಶತಮಾನದಲ್ಲಿ ದೇಶವಿಡೀ ಹಲವಾರು ಕ್ಷೇತ್ರಗಳಲ್ಲಿ ಹಲವು ಬಗೆಯ ಹೊಸ ಪರಿವರ್ತನೆಗಳು ನಡೆಯುತ್ತಿದ್ದವು. ಊಳಿಗಮಾನ್ಯ ಪದ್ಧತಿಯ ಹಿಡಿತ ಸಡಿಲಗೊಳ್ಳುತ್ತಿತ್ತು. ಹೊಸ ಚಿಂತನೆ, ಹೊಸ ಜೀವನ ವ್ಯವಸ್ಥೆಗಳು ಜನರನ್ನು ಆಕರ್ಷಿಸತೊಡಗಿದ್ದವು. ಗದ್ಯ ಪ್ರಕಾರ ಹೊಸ ಚಿಂತನೆಗಳ ವಾಹಕವಾಗಿ ಜನಪ್ರಿಯತೆ ಗಳಿಸಿತು. ಇದೇ ಹಾದಿಯಲ್ಲಿ ಗದ್ಯ ಸತ್ವಶಾಲಿಯಾಗಿ ಬೆಳೆಯುತ್ತಾ ೨೦ನೆಯ ಶತಮಾನದಲ್ಲಿ ಹಿಂದೆಂದೂ ಕಾಣದ ಎತ್ತರಗಳನ್ನು ಕಂಡುಕೊಳ್ಳಲು ಸಾಧ್ಯವಾಯಿತು. ಬ್ರಿಟಿಷ್ ಆಳ್ವಿಕೆಯಲ್ಲಿ, ಕನ್ನಡ ಭಾಷೆಯನ್ನಾಡುವ ಪ್ರದೇಶಗಳಲ್ಲಿ ಒಂದೇ ಬಗೆಯ ಶಿಕ್ಷಣ ಮತ್ತು ಆಡಳಿತ ವ್ಯವಸ್ಥೆಗಳು ಜಾರಿಗೊಂಡವು. ಹೊಸ ಶಿಕ್ಷಣ ಕ್ರಮಗಳ ಫಲವಾಗಿ ಜನರಿಗೆ ಪಾಶ್ಚಾತ್ಯ ಸಾಹಿತ್ಯದ ಸಂಪರ್ಕವೇರ್ಪಟ್ಟಿತು. ಸಮಾಜ ಸುಧಾರಣೆ ಮತ್ತು ಸಂಬಂಧಿತ ವಿಷಯಗಳು ಜನರನ್ನು ತಲುಪಿ ಅವರನ್ನು ಚಿಂತನೆಗೆ ಹಚ್ಚಿದವು. ಈ ಎಲ್ಲ ಪ್ರಕ್ರಿಯೆಗಳ ಪರಿಣಾಮವಾಗಿ ಸುಶಿಕ್ಷಿತ ಮಧ್ಯಮವರ್ಗವೊಂದು ಅಸ್ತಿತ್ವಕ್ಕೆ ಬಂತು. ಮುಂದೆ ಈ ವರ್ಗವೇ ಸಾಹಿತ್ಯವನ್ನು ಸೃಷ್ಟಿಸಿತು ಸಾಹಿತ್ಯದ ವಸ್ತುವೂ ಆಯಿತು.

ಕ್ರೈಸ್ತಮತ ತತ್ವಗಳನ್ನು ಪ್ರಚಾರ ಮಾಡುವ ಆ ಹೊತ್ತಿನ ಉದ್ದೇಶದಿಂದ ಸ್ಥಳೀಯ ಜನರ ಭಾಷೆಯನ್ನು ಕಲಿತು, ಆ ಭಾಷೆಯ ಮೂಲಕ ಅವರೊಂದಿಗೆ ವ್ಯವಹರಿಸುತ್ತ, ಜನರ ಬಳಿ ತಲುಪಲು ಯತ್ನಿಸಿದರು. ಇಲ್ಲಿನ ಪ್ರಾದೇಶಿಕ ಭಾಷೆಯಾದ ಕನ್ನಡವನ್ನು ಆಳವಾಗಿ ಅಧ್ಯಯನ ಮಾಡಿ, ಬೈಬಲ್ ಮತ್ತು ಇತರ ಕ್ರೈಸ್ತ ಧರ್ಮಗ್ರಂಥಗಳನ್ನು ಕನ್ನಡಕ್ಕೆ ಭಾಷಾಂತರಿಸಿದರು. ಮುಂದಿನ ಹಂತವಾಗಿ ಕನ್ನಡದಲ್ಲಿ ಪಠ್ಯ ಪುಸ್ತಕಗಳನ್ನು ಹೊರತಂದರು, ನಿಘಂಟುಗಳನ್ನು ಸಂಪಾದಿಸಿದರು. ಕನ್ನಡದ ಪ್ರಾಚೀನ ಗ್ರಂಥಗಳನ್ನೂ ಸಂಪಾದಿಸಿದರು. ತಮ್ಮೊಂದಿಗೆ ತಂದ ಮುದ್ರಣಯಂತ್ರದ ಸಹಾಯದಿಂದ

ಇವೆಲ್ಲವನ್ನೂ ಮುದ್ರಿಸಿ ಪ್ರಕಟಿಸುವುದು ಅವರಿಗೆ ಸುಲಭವಾಯಿತು. ಬರುವಾಗ ಬ್ರಿಟಿಷರು 'ಒಂದು ಕೈಯಲ್ಲಿ ಬೈಬಲನ್ನೂ ಮತ್ತೊಂದು ಕೈಯಲ್ಲಿ ಮುದ್ರಣ ಯಂತ್ರವನ್ನೂ ಹಿಡಿದುಕೊಂಡು ಬಂದಿದ್ದರು' ಎಂಬ ಜನಪ್ರಿಯ ನುಡಿ ಅವರ ಚಟುವಟಿಕೆಗಳನ್ನು ಸಮರ್ಥವಾಗಿ ವರ್ಣಿಸುತ್ತದೆ. ಜನಸಂಪರ್ಕವನ್ನು ವ್ಯಾಪಕಗೊಳಿಸುವ ಉದ್ದೇಶದಿಂದ ಕ್ರೈಸ್ತ ಮಿಷಿನರಿಗಳು ಪತ್ರಿಕೆಗಳನ್ನು ಹೊರಡಿಸತೊಡಗಿದರು. ಈ ಎಲ್ಲ ಕಾರ್ಯಗಳ ಪರಿಣಾಮವಾಗಿ ಗದ್ಯದ ಬೆಳವಣಿಗೆ ಗಮನಾರ್ಹವಾಗಿ ಬೆಳೆಯಿತು. ಹತ್ತೊಂಬತ್ತನೆಯ ಶತಮಾನದಲ್ಲಿ ಸ್ವತಂತ್ರ ಬರಹಗಳಿಗಿಂತ ಭಾಷಾಂತರಗಳ ಪ್ರಮಾಣವೇ ಹೆಚ್ಚಾಗಿದ್ದರೂ, ಜನರಿಗೆ ಈ ಭಾಷಾಂತರಗಳ ಮೂಲಕ ಹೊಸ ಗ್ರಂಥಗಳೂ, ಹೊಸ ರೀತಿಯ ಬರವಣಿಗೆಗಳೂ ದೊರೆಯುವಂತಾಯಿತು. ಇವೆಲ್ಲದರ ಒಟ್ಟು ಪರಿಣಾಮವಾಗಿ ಗದ್ಯ ಒಂದು ಜನಪ್ರಿಯ ಸಾಹಿತ್ಯ ಮಾಧ್ಯಮವಾಗಿ ರೂಪಗೊಳ್ಳಲು ಸಾಧ್ಯವಾಯಿತು.

ಸುಮಾರು ೧೮೨೩ರಲ್ಲಿ ಬೈಬಲ್ ಗ್ರಂಥ ಕನ್ನಡ ಗದ್ಯದಲ್ಲಿ ಪ್ರಕಟವಾಯಿತು. ಬೈಬಲಿನ ಭಾಷಾಂತರ ಕಾರ್ಯ ಆಧುನಿಕ ಕನ್ನಡ ಗದ್ಯ ಸಾಹಿತ್ಯದ ಇತಿಹಾಸದಲ್ಲಿ ವಿಶೇಷ ಮಹತ್ವ ಪಡೆಯುತ್ತದೆ. ಹತ್ತೊಂಬತ್ತನೆಯ ಶತಮಾನದುದ್ದಕ್ಕೂ ಈ ಭಾಷಾಂತರದ ಪರಿಷ್ಕರಣೆ ನಡೆಯಿತು. ಭಾಷೆಯ ಬಳಕೆಯಲ್ಲಿ ಕಾಲಕಾಲಕ್ಕೆ ಉಂಟಾಗುತ್ತಿದ್ದ ಬದಲಾವಣೆಗಳನ್ನು ಗಮನಿಸಿ, ಅವುಗಳನ್ನು ಕ್ರಮೇಣ ಅಳವಡಿಸಿಕೊಳ್ಳುವುದು ಪರಿಷ್ಕರಣೆಯ ಮುಖ್ಯ ಧೋರಣೆಯಾಗಿತ್ತು. ಇಂತಹ ಧೋರಣೆಯ ಪರಿಣಾಮವಾಗಿ ದೇಶೀ ಶಬ್ದಗಳಿಗೂ ತದ್ಭವಗಳಿಗೂ ಪ್ರಾಶಸ್ತ್ಯ ದೊರೆಯಿತು. ಅವು ದೊರೆಯದ ಸಂದರ್ಭದಲ್ಲಿ ಮಾತ್ರ ಸಂಸ್ಕೃತ ಶಬ್ದಗಳ ಬಳಕೆಯಾಯಿತು. ಹೀಗಾಗಿ ಗದ್ಯಕ್ಕೆ ಒಂದು ಹೊಸ ಶೈಲಿ, ಏಕರೂಪತೆ ಪ್ರಾಪ್ತವಾದವು.

ಬನ್ಯನ್‌ನ 'ದಿ ಪಿಲಿಗ್ರಿಮ್ಸ್ ಪ್ರೋಗ್ರೆಸ್' ಮತ್ತಿತ್ತರ ಗ್ರಂಥಗಳೂ, ಕ್ರೈಸ್ತ ಧರ್ಮಕ್ಕೆ ಸಂಬಂಧಿಸಿದ ಕಥೆಗಳೂ ಭಾಷಾಂತರಗೊಂಡವು, ರೆವರೆಂಡ್ ಎಫ್.ಕಿಟ್ಟೆಲ್‌ರವರ ಕನ್ನಡ - ಇಂಗ್ಲಿಷ್ ನಿಘಂಟು ಪ್ರಕಟವಾಯಿತು. ಕನ್ನಡ ಭಾಷೆಯಲ್ಲಿ ಇಂದಿಗೂ ಇದು ಶ್ರೇಷ್ಠ, ಪ್ರಮಾಣ ಭೂತ ನಿಘಂಟಾಗಿದೆ. ಕೇಶಿರಾಜನ 'ಶಬ್ದಮಣಿದರ್ಪಣ' ಮತ್ತು ನಾಗವರ್ಮನ 'ಛಂದೋಂಬುಧಿ' ಗ್ರಂಥಗಳನ್ನು ಸಂಪಾದಿಸಿ, ವಿದ್ವತ್‌ಪೂರ್ಣ ಮುನ್ನುಡಿಗಳೊಂದಿಗೆ ಅನುಕ್ರಮವಾಗಿ ೧೮೭೨ ಮತ್ತು ೧೮೭೫ರಲ್ಲಿ ಪ್ರಕಟಿಸಿದರು. 'ಪಂಚತಂತ್ರ' ಮತ್ತು 'ಕರ್ನಾಟಕ ಕಾವ್ಯಮಾಲೆ' (೧೮೭೪) ಎಂಬ ಸಂಗ್ರಹಗಳನ್ನು ಕಿಟ್ಟೆಲ್ ಹೊರತಂದಿದ್ದಾರೆ. ರೀವ್, ಗ್ಯಾರೆಟ್, ಸಾಂಡರ್ ಸನ್ ಬಕನನ್, ಮೆಕಂಸ್ಸಿ ರೈಸ್ ಮತ್ತು ಫ್ಲೀಟ್‌ರವರು ಕನ್ನಡ ಗದ್ಯಕ್ಕೆ ನೀಡಿರುವ ಕೊಡುಗೆಯೂ ಮಹತ್ವಪೂರ್ಣವಾದುದೇ. ಮಂಗಳೂರಿನ ಬಾಸೆಲ್ ಮಿಷನ್ ಮೊಗ್ಲಿಂಗ್‌ರವರ ಸಂಪಾದಕತ್ವದಲ್ಲಿ ೧೮೪೩ರಲ್ಲಿ 'ಮಂಗಳೂರು ಸಮಾಚಾರ' ಎಂಬ ದ್ವೈಮಾಸಿಕವನ್ನು ಹೊರತಂದರು. ಇದು ಕನ್ನಡದ ಮೊಟ್ಟಮೊದಲ ಪತ್ರಿಕೆ. ಇದನ್ನು ಅನುಸರಿಸಿ ಬೇರೆ ಬೇರೆ ನಿಯತಕಾಲಿಕಗಳೂ, ಪತ್ರಿಕೆಗಳೂ ಹುಟ್ಟಿಬಂದವು. ಕನ್ನಡ ಗದ್ಯಕ್ಕೆ ಇವು ತಮ್ಮದೇ ಆದ ಕೊಡುಗೆಯನ್ನು ನೀಡಿವೆ.

'ಪದ್ಯಂ ವದ್ಯಂ ಗದ್ಯಂ ಹೃದ್ಯಂ' ಎಂದು ಗದ್ಯದ ಹಿರಿಮೆಯನ್ನು ಸಾರಿದ ಮುದ್ದಣ 'ಅದ್ಭುತ ರಾಮಾಯಣ' ಮತ್ತು 'ರಾಮಾಶ್ವಮೇಧ' ಎಂಬ ಎರಡು ಗದ್ಯ ಗ್ರಂಥಗಳನ್ನು ರಚಿಸಿದನು. 'ಅದ್ಭುತ ರಾಮಾಯಣ' ಸರಳ ಶೈಲಿಯಲ್ಲಿ ಹಳಗನ್ನಡದಲ್ಲಿ ರಚಿಸಲಾದ ಚೊಕ್ಕ ಗ್ರಂಥ. 'ರಾಮಾಶ್ವಮೇಧ' ಸಂಭಾಷಣ ಚಾತುರ್ಯ, ಮನೋಹರ ವರ್ಣನೆಗಳಿಂದ ಕೂಡಿದ, ಸ್ವತಂತ್ರ ಮನೋಧರ್ಮದ

ನವೀನ ಗದ್ಯ ಶೈಲಿಯ ಕೃತಿಯಾಗಿದೆ. ಹಳಗನ್ನಡ ಭಾಷೆಯನ್ನು ಆಧುನಿಕ ಶೈಲಿಯಲ್ಲಿ ಬಳಸಿಕೊಂಡಿರುವುದು ಮುದ್ದಣನ ವೈಶಿಷ್ಟ್ಯ.

ವಿದೇಶಿ ಭಾಷಾ ಸಾಹಿತ್ಯಗಳ ಪ್ರಭಾವದಿಂದಾಗಿ ಕನ್ನಡದಲ್ಲಿ ಅನ್ಯ ದೇಶಿಯ ಪದಗಳು ಹೆಚ್ಚು ಹೆಚ್ಚಾಗಿ ಬಂದು ಸೇರಿಕೊಂಡವು. ನಡುಗನ್ನಡ ಶಬ್ದಗಳು ಹೊಸ ಹೊಸ ಶಬ್ದಗಳಿವೆ ಎಡೆ ಮಾಡಿದವು. ಹೊಸ ರೀತಿಯ ಗದ್ಯ ವಿವಿಧ ಸಾಧ್ಯತೆಗಳನ್ನು ಪಡೆದು, ಸಾಹಿತ್ಯ ಮಾಧ್ಯಮವಾಗಿ ಯಶಸ್ಸುಗಳಿಸಿತು. ಇಂಗ್ಲಿಷ್ ಸಾಹಿತ್ಯ ಹಾಗೂ ಇತರ ವಿದೇಶೀ ಸಾಹಿತ್ಯಗಳ ಅಭ್ಯಾಸದಿಂದಾಗಿ ಹೊಸ ಪ್ರಜ್ಞೆಯೊಂದು ಇಲ್ಲಿಯೂ ಹರಡಿತು. ಕಾದಂಬರಿ, ಸಣ್ಣಕಥೆ, ಪ್ರಬಂಧ, ನಾಟಕ, ಜೀವನ ಚರಿತ್ರೆ, ಪ್ರವಾಸ ಸಾಹಿತ್ಯ, ವ್ಯಕ್ತಿ ಚಿತ್ರ ಹೀಗೆ ಹಲವಾರು ಗದ್ಯ ಪ್ರಕಾರಗಳ ಉಗಮಕ್ಕೆ ಇದು ಕಾರಣವಾಯಿತು.

ಪಾಶ್ಚಾತ್ಯ ಸಾಹಿತ್ಯ ಪ್ರಭಾವದಿಂದ ಮೂಡಿದ ಹೊಸ ಗದ್ಯ ಪ್ರಕಾರಗಳ ಪೈಕಿ ಒಂದಾದ ಜೀವನ ಚರಿತ್ರೆಯ ಬೆಳವಣಿಗೆ, ಸಂಖ್ಯೆಯ ದೃಷ್ಟಿಯಿಂದ ಗಣನೀಯವಾಗಿದೆ. ಕರ್ನಾಟಕದ ತುಂಬ ಹರಡಿರುವ ವೀರಗಲ್ಲು, ಮಾಸ್ತಿಗಲ್ಲು, ಶಿಲಾಶಾಸನಗಳಲ್ಲಿ ವ್ಯಕ್ತಿಗಳ ಜೀವನಕ್ಕೆ ಸಂಬಂಧಿಸಿದ ಹಲವಾರು ವಿಷಯಗಳು ಕಾಣಸಿಗುತ್ತವೆಯಾದರೂ, ಇದೊಂದು ಸ್ವತಂತ್ರ ಪ್ರಕಾರವಾಗಿ ಬೆಳೆದುಬಂದುದನ್ನು ಇತ್ತೀಚೆಗೆ ೨೦ನೆಯ ಶತಮಾನದ ಆದಿಯಿಂದ ಪ್ರಾರಂಭಗೊಂಡು ಬೆಳೆಯುತ್ತ ಬಂದಿರುವ ಈ ಪ್ರಕಾರಕ್ಕೆ ಸ್ವಾತಂತ್ರ್ಯೋತ್ತರ ಕಾಲದಲ್ಲಿ ಸುಮಾರು ೧೦೦೦ ಕೃತಿಗಳವರೆಗೆ ಸೇರ್ಪಡೆಯಾಗಿದೆ.

ಕನ್ನಡದಲ್ಲಿ ಮೊದಲು ಬಂದ ಜೀವನಚರಿತ್ರೆಗಳು ಮಹಾಪುರುಷರ ಜೀವನದ ಸಾಧನೆಗಳನ್ನು ತಿಳಿಸುವ, ದೇಶಾಭಿಮಾನ, ಉನ್ನತ ಧ್ಯೇಯಗಳನ್ನು ಬಿತ್ತುವ ಉದ್ದೇಶದಿಂದ ಬಂದವು. ಯೇಸುಕ್ರಿಸ್ತ (ಕಿಟ್ಟೆಲ್) ಶಂಕರಚಾರ್ಯರ ಜೀವನ ಚರಿತ್ರೆ, (ದೊಡ್ಡ ಬೆಲೆ ನಾರಾಯಣಶಾಸ್ತ್ರೀ) ಮಧ್ವಾಚಾರ್ಯರ ಚರಿತ್ರೆ (ರಾಜಪುರೋಹಿತ), ಭಗವಾನ್ ಬುದ್ಧನ ಚರಿತ್ರೆ, ಬಸವಚರಿತ್ರೆ, ಮಹಮ್ಮದ್ ಪೈಗಂಬರ್ (ಎಂ.ಪಿ. ಪೂಜಾರ), ಅಬ್ರಹಾಂ ಲಿಂಕನ್ (ಬಿ. ಚಂದ್ರಶೇಖರಯ್ಯ, ಸಿ.ಕೆ. ವೆಂಕಟರಾಮಯ್ಯ, ಹೊನ್ನಾಪುರಮಠ), ನೆಪೋಲಿಯನ್ ಬೋನಪಾರ್ಟ್ (ರಾಮರಾಯರು, ರಜಿಯಾ ಬೇಗಂ) ಮೊದಲಾದವು ಗಮನಾರ್ಹ ಜೀವನಚರಿತ್ರೆಗಳು.

ನಂತರದ ಅವಧಿಯಲ್ಲಿ ಜೀವನಚರಿತ್ರೆಗಳ ಆಯ್ಕೆಯಲ್ಲಿ ವೈವಿಧ್ಯ ಕಂಡು ಬಂತು. ದೇಶಭಕ್ತರು, ವಿಜ್ಞಾನಿಗಳು, ಕಲಾವಿದರು ಮುಂತಾದವರ ಜೀವನಚಿತ್ರಣವನ್ನು ಉತ್ತಮ ಸಾಹಿತಿಗಳು ಕೈಗೊಂಡ ಕಾರಣ ಜೀವನಚರಿತ್ರೆಯ ಪ್ರಕಾರವೂ ಉತ್ತಮಾಂಶಗಳನ್ನೂ ಮೈಗೂಡಿಸಿಕೊಂಡು ಬೆಳೆಯಲು ಸಾಧ್ಯವಾಯಿತು. ಚ. ವಾಸುದೇವಯ್ಯ, ಎಂ.ಎಸ್. ಪುಟ್ಟಣ್ಣ, ಆಲೂರ ವೆಂಕರಾಯರು, ಮಾಸ್ತಿ, ಡಿ.ವಿ. ಗುಂಡಪ್ಪನವರು, ಎ.ಆರ್. ಕೃಷ್ಣಶಾಸ್ತ್ರಿ ಟಿ.ಎಸ್. ವೆಂಕಣ್ಣಯ್ಯ, ಕುವೆಂಪು ಮೊದಲಾದ ಶ್ರೇಷ್ಠ ಬರಹಗಾರರು ಈ ಪ್ರಕಾರಕ್ಕೆ ತಮ್ಮ ಕೊಡುಗೆ ನೀಡಿದರು.

ಎಂ.ಎಸ್. ಪುಟ್ಟಣ್ಣನವರ 'ಕುಣಿಗಲ್ ರಾಮಾಶಾಸ್ತ್ರಿಗಳ ಚರಿತ್ರೆ' (೧೯೧೦) ಮತ್ತು 'ಮಹಮ್ಮದ್ ಗವಾನ್' (೧೯೨೨), ಡಿ.ವಿ.ಜಿ.ಯವರ 'ಗೋಪಾಲಕೃಷ್ಣ ಗೋಖಲೆ' (೧೯೧೫) ಮತ್ತು 'ದಿವಾನ್ ಸಿ, ರಂಗಾಚಾರ್ಲು', ವೆಂಕಟರಾಮಯ್ಯನವರ 'ಹರ್ಷವರ್ಧನ', 'ಮಹಮ್ಮದ್ ಪೈಗಂಬರ್ ಮತ್ತು 'ಆಳಿದ ಮಹಾಸ್ವಾಮಿಯವರು', ಮಾಸ್ತಿಯವರ 'ರವೀಂದ್ರನಾಥ ಠಾಕೂರರು', ಕುವೆಂಪುರವರ 'ರಾಮಕೃಷ್ಣ ಪರಮಹಂಸ' ಮುಂತಾದವು ಉತ್ತಮ ಮಾದರಿಗಳು.

ಎಂ.ಎಸ್. ಪುಟ್ಟಣ್ಣನವರ 'ಕುಣಿಗಲ್ ರಾಮಾಶಾಸ್ತ್ರಿಗಳ ಚರಿತ್ರೆ' ಕನ್ನಡದ ಮೊಟ್ಟಮೊದಲ ಜೀವನ ಚರಿತ್ರೆ, ಕಲ್ಪನಾತ್ಮಕ ನಿರೂಪಣೆ ಈ ಕೃತಿಯ ವೈಶಿಷ್ಟ್ಯ. ಈ ಜೀವನಚರಿತ್ರೆಯಲ್ಲಿ ಬರುವ ವ್ಯಕ್ತಿಗಳ ವ್ಯಕ್ತಿ ಚಿತ್ರಗಳು ಸ್ಪಷ್ಟವಾದ, ಜೀವಂತ ಮಾದರಿಗಳು. ದಿನಚರಿ ಮುಂತಾದ ಲಿಖಿತ ದಾಖಲೆಗಳು ಇಲ್ಲದಿದ್ದ ಸಂದರ್ಭದಲ್ಲಿ ರಾಮಾಶಾಸ್ತ್ರಿಗಳ ಶಿಷ್ಯರು ಮತ್ತು ಅವರ ಅಪ್ರಕಟಿತ ಕಥೆಗಳ ಆಧಾರದ ಮೇಲೆ, ಕಲ್ಪನಾತ್ಮಕ ನಿರೂಪಣೆಯನ್ನು ಕೈಗೊಂಡಿರುವುದು ಈ ಕೃತಿಯ ವೈಶಿಷ್ಟ್ಯ.

ಡಿ.ವಿ.ಜಿ. ಯವರ 'ದಿವಾನ್ ರಂಗಚಾರ್ಲು' ಜೀವನಚರಿತ್ರೆಗಳ, ರಚನೆಯಲ್ಲಿ ಒಂದು ಮಾದರಿ ಕೃತಿಯೆನಿಸಿದೆ. ಮೈಸೂರು ಸಂಸ್ಥಾನದ ಮೊದಲ ದಿವಾನರಾಗಿದ್ದ ರಂಗಾಚಾರ್ಲುರವರ ಜೀವನಚರಿತ್ರೆ ಅವರ ಆಡಳಿತ ಕಡತಗಳು, ವೈಯಕ್ತಿಕ ಪತ್ರಗಳು ಮತ್ತು ಅವರ ಭಾಷಣಗಳನ್ನೂ ಆಧರಿಸಿದ ವಾಸ್ತವಿಕ ಅಧ್ಯಯನವಾಗಿದೆ.

ಧಾರ್ಮಿಕ ನಾಯಕರನ್ನು ಕುರಿತಂತೆ ರಚಿತವಾದ ಉತ್ತಮ ಕೃತಿಗಳು ಗೌತಮ ಬುದ್ಧ (ರಾಜರತ್ನ), ಮಹಾವೀರನ ಜೀವನಚರಿತ್ರೆ (ಮಿರ್ಜಿ ಅಣ್ಣಾರಾಯ) ಮುಂತಾದವು ಶರಣಚರಿತಾಮೃತ (ಸಿದ್ಧಯ್ಯ ಪುರಾಣಿಕ) ಶೈವಧರ್ಮಕ್ಕೆ ಸೇರಿದ ೬೩ ಮಂದಿ ಪುರಾತನರ ಜೀವನವನ್ನು ಕುರಿತದ್ದು. ಶ್ರೀ ರಾಮಾನುಜ (ಎಚ್ಚೆಸ್ಕೆ) ಧಾರ್ಮಿಕ ನಾಯಕರ ಜೀವನ ಚರಿತ್ರೆಯ ಸಾಲಿಗೆ ಸೇರುವ ಗಮನಾರ್ಹ ಕೃತಿ. ಬಸವಣ್ಣನವರ ಜೀವನದ ಬಗ್ಗೆ ಬಂದಿರುವ ಕೃತಿಗಳು ಹಲವಾರು. ಡಾ. ಎಂ. ಚಿದಾನಂದ ಮೂರ್ತಿಯವರ 'ಬಸವಣ್ಣನವರು' ಸಂಶೋಧನಾತ್ಮಕ ದೃಷ್ಟಿಕೋನದಿಂದ ರಚಿಸಲಾದ, ವಸ್ತುನಿಷ್ಠ ಧೋರಣೆಯ ಗ್ರಂಥ. ಎಂ.ಆರ್. ಶ್ರೀನಿವಾಸ ಮೂರ್ತಿಯವರ' ಭಕ್ತಿ ಭಂಡಾರಿ ಬಸವಣ್ಣನವರ ವಚನಗಳ ಆಧಾರದ ಮೇಲೆ ವ್ಯಕ್ತಿತ್ವದ ಬೆಳವಣಿಗೆಯನ್ನು ಗುರುತಿಸುತ್ತದೆ. ಕಾವ್ಯ, ವಚನ, ಶಾಸನಗಳ ಆಧಾರ ಈ ಗ್ರಂಥಕ್ಕಿದೆ, ಮೈಸೂರು ವಿಶ್ವವಿದ್ಯಾನಿಲಯ ಪ್ರಕಟಿಸಿರುವ ಪ್ರಾತಿನಿಧಿಕ ಗ್ರಂಥ ''ಶ್ರೀ ಬಸವೇಶ್ವರರು' ಬಸವಣ್ಣನವರ ಸಾಧನೆ ಸಿದ್ಧಿಗಳ ಬಗ್ಗೆ, ಜೀವನ ಮೌಲ್ಯಗಳ ಬಗ್ಗೆ ಉತ್ತಮ ಲೇಖನಗಳನ್ನು ಒಳಗೊಂಡಿದೆ. ಕರ್ನಾಟಕ ವಿಶ್ವವಿದ್ಯಾನಿಲಯದವರು ಪ್ರಕಟಿಸಿರುವ 'ಬಸವಣ್ಣನವರ ವ್ಯಕ್ತಿತ್ವ ಹಾಗೂ ಜೀವನ ಸಿದ್ಧಿ' ಈ ಸಾಲಿನ ಮತ್ತೊಂದು ಉತ್ತಮ ಗ್ರಂಥ. ರಾಮಕೃಷ್ಣ ಪರಮಹಂಸ, ಯೇಸುಕ್ರಿಸ್ತ, ಬುದ್ಧ ಅರವಿಂದರ ಜೀವನ ಚರಿತ್ರೆಗಳೂ ಕನ್ನಡದಲ್ಲಿ ಬಂದಿವೆ. 'ರಾಮಕೃಷ್ಣ ಲೀಲಾ ಪ್ರಸಂಗ' (ಪ್ರಣವೇಶಾನಂದ) ಬಂಗಾಳಿಯಿಂದ ಕನ್ನಡಕ್ಕೆ ಬಂದಿದೆ. ಪರಮಹಂಸ, ಶಾರದಾದೇವಿ ಹಾಗೂ ವಿವೇಕಾನಂದರ ಜೀವನ ಚರಿತ್ರೆಗಳನ್ನು ಬರೆದಿರುವವರು ಸ್ವಾಮಿ ಸೋಮನಾಥಾನಂದ. ಕನ್ನಡ ಜೀವನ ಚರಿತ್ರೆಗಳ ಇತಿಹಾಸದಲ್ಲಿ ಕುವೆಂಪು ಬರೆದಿರುವ 'ಶ್ರೀ ರಾಮಕೃಷ್ಣ ಪರಮಹಂಸ' ಮತ್ತು 'ಸ್ವಾಮಿ ವಿವೇಕಾನಂದ' ವಿಶಿಷ್ಟ ಕೃತಿಗಳು. ಭಾಷೆಯ ಬಳಕೆ ಮತ್ತು ವರ್ಣನೆಗಳ ಶ್ರೀಮಂತಿಕೆಯಿಂದಾಗಿ ಕಾವ್ಯಗುಣ ಪಡೆದಿರುವ ಈ ಕೃತಿಗಳು ಕಾದಂಬರಿಯ ಶ್ರೇಷ್ಠತೆಯನ್ನು ಸಾಧಿಸಿವೆ. 'ಸ್ವಾತಂತ್ರಯೋಧ ಶ್ರೀ ಅರವಿಂದ' ಅರವಿಂದ ಜೀವನ ಚಿತ್ರಣ ನೀಡುವ ಕೊ. ಚೆನ್ನಬಸಪ್ಪನವರ ಕೃತಿ.

ಪಂಪ, ರನ್ನ, ಕುಮಾರವ್ಯಾಸ, ಮುದ್ದಣ ಮುಂತಾದವರ ಜೀವನಚರಿತ್ರೆಗಳು ಪ್ರಶಸ್ತ ಗ್ರಂಥಗಳ ಮೂಲಕ ಲಭ್ಯವಿದೆ. ಮುಳಿಯ ತಿಮ್ಮಪ್ಪಯ್ಯನವರ 'ನಾಡೋಜ ಪಂಪ' ಸಾಹಿತ್ಯ ಚರಿತ್ರೆ, ಸಂಶೋಧನೆ ಈ ಎಲ್ಲದರ ಅಂಶಗಳನ್ನೂ ಒಳಗೊಂಡ ಉತ್ತಮ ಕೃತಿ. ಇವರ ಪಾರ್ತಿಸುಬ್ಬ ಮತ್ತೊಂದು ಗಮನಾರ್ಹ ಕೃತಿ. ಅ.ನ.ಕೃ. ಬರೆದ 'ಕೈಲಾಸಂ' ತ.ರಾ.ಸು. ಬರೆದ 'ಅ.ನ.ಕೃ.' ವಿ.ಸೀ. ಅವರ 'ಶಿವರಾಮ ಕಾರತ', ಶಿವರಾಮ ಕಾರಂತರ 'ಕಲಾವಿದ ಕೃಷ್ಣ ಹೆಬ್ಬಾರರು' ತಿರುಮಲೆ ರಾಜಮ್ಮ

ಬರೆದ 'ವೀಣೆ ಶೇಷಣ್ಣ', ದೇಜಗೌ ಬರೆದ 'ರಾಷ್ಟ್ರಕವಿ ಕುವೆಂಪು ಮತ್ತು ತೀ.ನಂ.ಶ್ರೀ ಇವು ಗಮನಾರ್ಹವಾದ ಮತ್ತಷ್ಟು ಜೀವನ ಚರಿತ್ರೆಗಳು. ಐಸ್ಯಾಕ್‌ನ್ಯೂಟನ್, ಥಾಮಸ್ ಆಲ್ವೆಡಿಸನ್, ಚಾರ್ಲ್ಸ್ ಡಾರ್ವಿನ್, ಅಲೆಕ್ಸಾಂಡರ್ ಫ್ಲೆಮಿಂಗ್, ಲೂಯಿಪಾಸ್ತರ್, ಐನ್‌ಸ್ಟೀನ್, ಸಿ.ವಿ.ರಾಮನ್, ಹೆನ್ರಿ ಫೋರ್ಡ್, ಮೇರಿಕ್ಯೂರಿ, ಪಿ.ಸಿ.ರೇ, ಜೆ.ಸಿ. ಬೋಸ್ ಮುಂತಾದ ವಿಶ್ವದ ಪ್ರಸಿದ್ಧ ವಿಜ್ಞಾನಿಗಳ ಜೀವನ ಚರಿತ್ರೆಗಳು ಸ್ವತಂತ್ರವಾಗಿಯೂ, ಅನುವಾದ ಕೃತಿಗಳಾಗಿಯೂ, ಕನ್ನಡದಲ್ಲಿ ಮೂಡಿವೆ. ಹಾಗೆಯೇ ಕಾರ್ಲ್ ಮಾರ್ಕ್ಸ್, ಮಾಕ್ಸಿಂ ಗಾರ್ಕಿ, ಲೆನಿನ್ ಸ್ಟಾಲಿನ್, ಮಾರ್ಟಿನ್ ಲೂಥರ್ ಕಿಂಗ್, ಅಬ್ರಹಾಂ ಲಿಂಕನ್, ಕೆನಡಿ ಜಾನಂ ಸ್ಟುವರ್ಟ್, ಮಿಲ್ ಮುಂತಾದ ಮಹಾನ್ ವ್ಯಕ್ತಿಗಳನ್ನು ಪರಿಚಯಿಸುವ ಕಾರ್ಯ ಜೀವನಚರಿತ್ರೆಗಳ ಮೂಲಕ ನಡೆದಿದೆ.

ರಾಷ್ಟ್ರೀಯ, ಅಂತಾರಾಷ್ಟ್ರೀಯ ರಾಜಕಾರಣಿಗಳ ಜೀವನಚರಿತ್ರೆಗಳೂ ಕನ್ನಡದಲ್ಲಿ ದೊರಕುತ್ತವೆ. ಗಾಂಧಿಯನ್ನು ಕುರಿತ ಸಿದ್ಧವನಹಳ್ಳಿ ಕೃಷ್ಣಶರ್ಮರ 'ಪರ್ಣಕುಟಿ' ಹತ್ತು ಪ್ರಬಂಧಗಳನ್ನು ಒಳಗೊಂಡ ಮಹತ್ವದ ಕೃತಿ. ರಾಜೇಂದ್ರಪ್ರಸಾದ್ (ಕಾ.ರಾ. ಸಾರಂಗ), ಡಾ. ಜಾಕೀರ್ ಹುಸೇನ್ (ಮತ್ತೂರು ಕೃಷ್ಣಮೂರ್ತಿ), ಲಾಲ್‌ಬಹದ್ದೂರ್ ಶಾಸ್ತ್ರಿ (ಬಿ.ಆರ್. ಪ್ರಾಣೇಶರಾಯರು) ಸಮಾಜವಾದಿ ಇಂದಿರಾಗಾಂಧಿ (ಕೆ.ಎಫ್. ಪಾಟೀಲ) ಮುಂತಾದವನ್ನೂ ಇಲ್ಲಿ ಹೆಸರಿಸಬಹುದು. (ತಿ.ತಾ.ಶರ್ಮರ) 'ಮೋಕ್ಷಗುಂಡಂ' ಸರ್.ಎಂ. ವಿಶ್ವೇಶ್ವರಯ್ಯನವರನ್ನು ಕುರಿತ ಉಲ್ಲೇಖಾರ್ಹ ಕೃತಿ. ಮೈಸೂರಿನ ಕೆಲವು ದಿವಾನರುಗಳ ಪರಿಚಯವನ್ನು ಡಿ.ವಿ.ಜಿ. ಅವರ 'ಮೈಸೂರಿನ ದಿವಾನರುಗಳು'ನಲ್ಲಿ ಕಾಣಬಹುದು. (ಅನುವಾದ ಮೂಲಕ ಕನ್ನಡಕ್ಕೆ ಬಂದಿರುವ ಆತ್ಮ ಕಥೆಗಳ ಪೈಕಿ ಗಾಂಧೀಜಿಯವರ ಆತ್ಮ ಕಥೆ, ನೆಹರೂವರ ಆತ್ಮ ಕಥೆ, ಟಾಲ್‌ಸ್ಟಾಯ್ ಆತ್ಮ ಕಥೆ ಮುಂತಾದವು ಗಮನಾರ್ಹವಾದವು.)

ಶಿವರಾಮ ಕಾರಂತರ 'ಹುಚ್ಚು ಮನಸ್ಸಿನ ಹತ್ತು ಮುಖಗಳು' ಶ್ರೀರಂಗರ 'ಗಾಢ ನೆನಪುಗಳು', ಬೇಂದ್ರೆಯವರ 'ಚತುರ್ಮುಖ', ಆಲೂರ ವೆಂಕಟರಾಯರ 'ಜೀವನ ಸ್ಮರಣೆ', ಮಾಸ್ತಿಯವರ 'ಭಾವ' ಅ.ನ. ಕೃಷ್ಣರಾಯರ 'ಬರಹಗಾರನ ಬದುಕು'ದೇ. ಜ.ಗೌ. ಅವರ 'ಹೋರಾಟದ ಬದುಕು' ಎ.ಎನ್. ಮೂರ್ತಿರಾಯರ 'ಸಂಜೆಗಣ್ಣಿನ ಹಿನ್ನೋಟ' ಮುಂತಾದ ಕೃತಿಗಳು ವ್ಯಕ್ತಿ ತನ್ನ ಬದುಕನ್ನು ಪ್ರಾಮಾಣಿಕವಾಗಿ ದಾಖಲಿಸುವ, ಅರ್ಥೈಸುವ ಸೃಜನಾತ್ಮಕ ಕ್ರಿಯೆಯನ್ನು ಎತ್ತಿ ಹಿಡಿದಿವೆ.

ಉತ್ತಮ ವ್ಯಕ್ತಿಚಿತ್ರಗಳ ಮಾದರಿಗಳನ್ನೂ ಎಚ್ಚೆಸ್ಕೆಯವರ 'ಎತ್ತರದ ವ್ಯಕ್ತಿಗಳು' ಮತ್ತು 'ಬದುಕು ಬೆಳಕು', ದೇಜಗೌ ಅವರ 'ಸಾಹಿತಿಗಳ ಸಂಗದಲ್ಲಿ', ಬಿ.ವಿ. ವೈಕುಂಠರಾಜು ಅವರ 'ನೃಪತುಂಗ', ಬಿ.ಜಿ.ಎಲ್. ಸ್ವಾಮಿಯವರ 'ಪಂಚಕಲಶ ಗೋಪುರ' ಮುಂತಾದ ಕೃತಿಗಳಲ್ಲಿ ಕಾಣಬಹುದು. ನಿಯತಕಾಲಿಕೆಗಳಲ್ಲಿ ಪ್ರಕಟವಾಗುವ ವ್ಯಕ್ತಿ ಚಿತ್ರಗಳು ಈ ಪ್ರಕಾರಕ್ಕೆ ಕೊಡುಗೆಗಳೆನಿಸಿವೆ.

ಅಭಿನಂದನ ಗ್ರಂಥಗಳು, ಸಂಭಾವನ ಗ್ರಂಥಗಳು ಮುಂತಾದ ಪ್ರವರ್ಗಗಳಿಗೆ ಸೇರಿದ ಗ್ರಂಥಗಳನ್ನೂ ಜೀವನ ಚರಿತ್ರೆಗಳ ಸಾಲಿನಲ್ಲಿಯೇ ಇರಿಸಬಹುದು. ಪಂಜೆಯವರ ನೆನಪಿಗಾಗಿ (ಪಂಜೆ ಮಂಗೇಶರಾಯ), ಶ್ರದ್ಧಾಂಜಲಿ (ಮುಳಿಯ ತಿಮ್ಮಪ್ಪಯ್ಯ), ಅಭಿವಂದನೆ (ಎ.ಆರ್. ಕೃಷ್ಣಶಾಸ್ತ್ರೀ) ಒಸಗೆ (ಸೇಡಿಯಾಪು ಕೃಷ್ಣಭಟ್ಟ), ದೀವಿಗೆ (ಗೋವಿಂದ ಪೈ), ಗಂಗೋತ್ರಿ (ಕುವೆಂಪು), ಗೊರೂರು ಗೌರವ ಗ್ರಂಥ (ಗೊರೂರು ರಾಮಸ್ವಾಮಿ ಅಯ್ಯಂಗಾರ್), ಸ್ವಸ್ತಿ (ತ.ಸು.

ಶಾಮರಾಯರು), ಸವಿನೆನಪು (ಟಿ.ಎಸ್. ವೆಂಕಣ್ಣಯ್ಯ) ಅಂತಃಕರಣ (ದೇಜಗೌ), ಚಂದನ (ಕೆ.ಎಸ್. ನರಸಿಂಹ ಸ್ವಾಮಿ) ಕಾರಂತ ಪ್ರಪಂಚ (ಶಿವರಾಮ ಕಾರಂತ), ಶ್ರೀನಿವಾಸ (ಮಾಸ್ತಿ ವೆಂಕಟೇಶ ಅಯ್ಯಂಗಾರ್) ಸ್ನೇಹಕಾರ್ತಿಕ (ಜಿ.ಎಸ್. ಶಿವರುದ್ರಪ್ಪ), ಮಾನ (ಹಾ.ಮಾ. ನಾಯಕ) ಮತ್ತು ಇತ್ತೀಚೆಗೆ ಪ್ರಕಟವಾದ ಎನ್.ಎಸ್. ಲಕ್ಷ್ಮೀನಾರಾಯಣಭಟ್ಟರ 'ನೀಲಾಂಜನ' – ಇವೇ ಮುಂತಾದ ಕೃತಿಗಳು ಆಯಾ ಮಹಾನ್ ವ್ಯಕ್ತಿಗಳ ಸಾಧನೆ ಸಿದ್ಧಿಗಳನ್ನೂ ವೈಶಿಷ್ಟ್ಯಗಳನ್ನೂ ಚಿತ್ರಿಸುತ್ತವೆ.

ಜನರು ಮಾತನಾಡುವ ಭಾಷೆಯಲ್ಲೇ ಜ್ಞಾನದ ಸಂವಹನವಾಗಬೇಕೆಂಬ ನಿಲುವು ಶಿಕ್ಷಣ ಸಂಸ್ಥೆಗಳ ಬೆಳವಣಿಗೆ, ವೃತ್ತಪತ್ರಿಕೆಗಳ, ಪ್ರಸಾರ ಮಾಧ್ಯಮಗಳ ಜಾಲದ ವಿಸ್ತರಣೆ ಈ ಎಲ್ಲ ಅಂಶಗಳೂ ಕನ್ನಡ ಗದ್ಯದ ಮೇಲೆ ಪ್ರಭಾವ ಬೀರಿದವು. ಆರ್. ನರಸಿಂಹಾಚಾರ್ಯರ 'ಕವಿ ಚರಿತೆ'ಯ ಮೂರು ಸಪುಟಗಳು (೧೯೦೭–೨೯) ಸಾಹಿತ್ಯ ಚರಿತ್ರೆಯನ್ನು ದಾಖಲಿಸಿರುವ ಅಮೂಲ್ಯ ಗ್ರಂಥ. ರಂ.ಶ್ರೀ. ಮುಗುಳಿಯವರ 'ಕನ್ನಡ ಸಾಹಿತ್ಯ ಚರಿತ್ರೆ' (೧೯೫೩) ಮತ್ತು ತ.ಸು. ಶಾಮರಾಯರ 'ಕನ್ನಡ ಸಾಹಿತ್ಯ ಚರಿತ್ರೆ' ಒಂದು ಸಮೀಕ್ಷೆ ಪ್ರಕಟವಾದವು. ಬೆಂಗಳೂರು ಮತ್ತು ಮೈಸೂರು ವಿಶ್ವವಿದ್ಯಾನಿಲಯಗಳು ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆಯನ್ನು ಹೊರತರಲು ಹಮ್ಮಿ ಕೊಂಡಿರುವ ಯೋಜನೆಗಳು ಕಾರ್ಯಗತವಾಗಿದ್ದು ಕೆಲವು ಸಂಪುಟಗಳು ಈಗಾಗಲೇ ಹೊರಬಂದಿವೆ. ಕರ್ನಾಟಕ ಸರ್ಕಾರದ ಸಂಸ್ಕೃತಿ ಇಲಾಖೆಯ ಪ್ರಕಟಣೆ 'ಕರ್ನಾಟಕದ ಪರಂಪರೆ' ಮತ್ತು ಕರ್ನಾಟಕ ಸಾಹಿತ್ಯ ಅಕಾಡೆಮಿಯ ಬೆಳ್ಳಿ ಹಬ್ಬದ ಪ್ರಕಟಣೆ 'ಭಾರತೀಯ ಸಾಹಿತ್ಯ ಸಮೀಕ್ಷೆ' (ಎರಡು ಸಂಪುಟಗಳು) ಬೃಹತ್ ಕೊಡುಗೆಗಳೆನಿಸಿವೆ. ಕರ್ನಾಟಕ ವಿಶ್ವವಿದ್ಯಾಲಯ 'ಶೂನ್ಯ ಸಂಪಾದನೆ' ಮುಂತಾದ ಉತ್ತಮ ಪ್ರಕಟಣೆಗಳನ್ನು ಹೊರತಂದಿದೆ.

ಶ್ರೀರಂಗ ('ಗೀತಾಗಾಂಭೀರ್ಯ' ಮತ್ತು 'ಗೀತಾದರ್ಪಣ'), ಡಿ.ವಿ.ಜಿ. ('ಜೀವನ ಧರ್ಮಯೋಗ') ಮುಂತಾದ ವಿಚಾರಪೂರ್ಣ ಕೃತಿಗಳು ಕನ್ನಡ ಗದ್ಯಕ್ಕೆ ಉತ್ತಮ ಕೊಡುಗೆಗಳೆನಿಸಿವೆ. ೧೯೬೭ರಲ್ಲಿ ಪ್ರಕಟವಾದ 'ಜೀವನಧರ್ಮಯೋಗ' ಭಗವದ್ಗೀತೆಯನ್ನು ಕುರಿತ ವಿಚಾರ ಪೂರ್ಣ ಕೃತಿ. ಈ ಬೃಹತ್ ಗ್ರಂಥ ಜೀವನ ಹಾಗೂ ದರ್ಶನಕ್ಕೆ ಸಂಬಂಧಿಸಿದ ಉತ್ಕೃಷ್ಟ ವಿಷಯಗಳನ್ನು ಸರಳವಾದ ಶೈಲಿಯಲ್ಲಿ ನಿಷ್ಕೃಷ್ಟವಾಗಿ ಹೇಳುವ ಅಪರೂಪದ ಕೃತಿ. ಕನ್ನಡ ಗದ್ಯ ಕ್ಷೇತ್ರಕ್ಕೆ ಸಂದಿರುವ ಅತ್ಯಂತ ಶ್ರೇಷ್ಠ ಕೃತಿಗಳಲ್ಲಿ ಒಂದು.

ಶಿವರಾಮ ಕಾರಂತರ 'ವಿಜ್ಞಾನ ಪ್ರಪಂಚ' (ನಾಲ್ಕು ಸಂಪುಟಗಳು) ವಿಶ್ವಕೋಶದ ವ್ಯಾಪ್ತಿಯನ್ನು ಹೊಂದಿರುವಂತಹ ಅಪರೂಪದ ಕೊಡುಗೆ. ಸರಳ ಶೈಲಿಯಲ್ಲಿ ವಿಪುಲ ಮಾಹಿತಿ ವಿಜ್ಞಾನದ ಸೂತ್ರಗಳು ಮತ್ತು ಅನ್ವಯಗಳನ್ನು ನಿರೂಪಿಸುವ ಈ ಗ್ರಂಥ. ಪಾರಿಭಾಷಿಕ ಪದಗಳ ಗೊಂದಲವನ್ನು ಬಗೆಹರಿಸಿಕೊಂಡಿರುವ ರೀತಿ ವಿಶೇಷ ಗಮನ ಸೆಳೆಯುತ್ತದೆ. ವಿಜ್ಞಾನದ ವಿಷಯಗಳನ್ನು ಸರಳ ರೀತಿಯಲ್ಲಿ ನಿರೂಪಿಸಬಲ್ಲ ಕನ್ನಡ ಗದ್ಯದ ಸಾಮರ್ಥ್ಯಕ್ಕೆ ಈ ಸಂಪುಟಗಳು ಉದಾಹರಣೆಗಳಾಗಿ ನಿಲ್ಲಬಲ್ಲವು. ವಾಸ್ತುಶಿಲ್ಪ ಮತ್ತು ಕಲೆಗಳ ಬಗ್ಗೆ ವಿಸ್ತಾರವಾದ ಕೃತಿಗಳು ಕಾರಂತರ ಲೇಖನಿಯಿಂದ ಮೂಡಿದೆ. ಇವು ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಹೊಸ ಬಗೆಯ ಕೊಡುಗೆಗಳೆಂದರೆ ಅತಿಶಯೋಕ್ತಿಯಲ್ಲ. 'ಭಾರತೀಯ ಶಿಲ್ಪ', 'ಚಾಳುಕ್ಯ ಶಿಲ್ಪ', 'ಕರ್ನಾಟಕದಲ್ಲಿ ಚಿತ್ರಕಲೆ', 'ಯಕ್ಷಗಾನ ಬಯಲಾಟ' ಮುಂತಾದವು ಅಮೂಲ್ಯ ಕೊಡುಗೆಗಳು. ಕಾರಂತರ ವಿಶಿಷ್ಟ ಗದ್ಯ ಶೈಲಿಯಲ್ಲಿ ರಚಿಸಲಾದ ಜೀವಂತ ಕೃತಿಗಳಿವು.

ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆ ಇದುವರೆಗೆ ಹೊರತಂದಿರುವ ಮತ್ತು ಆ ಯೊಜನೆಯ ಅನ್ವಯ ತರಲಿರುವ ಸಂಪುಟಗಳು ಜ್ಞಾನ ಸಮೃದ್ಧಿಯ ದೃಷ್ಟಿಯಿಂದ

ಅತ್ಯಮೂಲ್ಯವಾದವು. ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಹೊರತಂದಿರುವ 'ಜ್ಞಾನ ಗಂಗೋತ್ರಿ' (ಏಳು ಸಂಪುಟಗಳು) ಮತ್ತು ಮೈಸೂರು ವಿಶ್ವವಿದ್ಯಾನಿಲಯ ಪ್ರಕಟಿಸಿರುವ ವಿಷಯ ವಿಶ್ವಕೋಶ, ಮನೆ ಮನೆಯಲ್ಲೂ ಇರಬೇಕಾದ ಸಂಪುಟಗಳು. ಭಾಷಾಪ್ರಯೋಗದಲ್ಲಿ ಏಕರೂಪತೆ, ಭಾಷೆಯ ವೈಜ್ಞಾನಿಕ ಬಳಕೆ, ಅನುಚಿತವೆಂದು ತೋರುವ ಪ್ರತ್ಯಯಗಳ ನಿವಾರಣೆ, ಪಾರಿಭಾಷಿಕ ಪದಗಳ ಔಚಿತ್ಯಪೂರ್ಣ ಬಳಕೆ ಇವು ಇಲ್ಲಿನ ಕೃತಿಗಳಲ್ಲಿ ಕಂಡುಬರುವ ಗದ್ಯದ ವೈಶಿಷ್ಟ್ಯಗಳಾಗಿವೆ. ವಿಜ್ಞಾನ, ಪರಿಸರ ವಿಜ್ಞಾನ, ಮನೋವಿಜ್ಞಾನ, ಕಲಾ ಪ್ರಪಂಚ – ಕ್ಷೇತ್ರ ಯಾವುದೇ ಆಗಲಿ ಸಂಬಂಧಪಟ್ಟ ವಿಷಯವನ್ನು ಕನ್ನಡ ಗದ್ಯ ಸಮರ್ಥವಾಗಿ ನಿರೂಪಿಸಬಲ್ಲದು ಎಂಬುದನ್ನು ಈ ವಿಶ್ವ ಕೋಶಗಳು ಸಾರುತ್ತವೆ.

ಸಂಶೋಧನಾ ಗ್ರಂಥಗಳು, ಸಂಪ್ರಬಂಧಗಳು – ಗದ್ಯ ಕ್ಷೇತ್ರಕ್ಕೆ ಸಂದ ಅಮೂಲ್ಯ ಕೊಡುಗೆಗಳಾಗಿವೆ ಎಂಬುದನ್ನು ಮರೆಯುವಂತಿಲ್ಲ.

ಕಥೆ, ಗಾದೆ, ಗೀತೆ, ಒಗಟುಗಳನ್ನು ಒಳಗೊಂಡ ಪ್ರಕಾರ ಜಾನಪದ ಸಾಹಿತ್ಯ. ಇಲ್ಲಿ ಬಳಸಲಾದ ಭಾಷೆ ಆಡುಭಾಷೆಯ ಸೊಡಗಿನಿಂದ ಕೂಡಿದ್ದು ಜೀವಂತ ಶೈಲಿಯಿಂದ ಕಂಗೊಳಿಸುತ್ತದೆ. ಜಾನಪದದ ಬಗ್ಗೆ ಜನಪದ ಸಾಹಿತ್ಯದ ಬಗ್ಗೆ ಸಾಕಷ್ಟು ಸಾಹಿತ್ಯ ಕೃಷಿ ನಡೆದಿದ್ದು ವಿಮರ್ಶಾ ಕೃತಿಗಳೂ, ಲೇಖನಗಳೂ ಹೊರಬರುತ್ತಿವೆ.

ಕನ್ನಡಗದ್ಯ ವಿವಿಧ ಸಾಧ್ಯತೆಗಳನ್ನು ಹೆಚ್ಚೆಚ್ಚು ವಿಸ್ತಾರವಾಗಿ ಬಳಸಿಕೊಂಡ ಪ್ರಕಾರಗಳು, ಪ್ರವಾಸ ಸಾಹಿತ್ಯ ಮತ್ತು ಪ್ರಬಂಧಗಳು ವಿ.ಸೀ.ಯವರ 'ಪಂಪಾಯಾತ್ರೆ' ಹಂಪೆಯ ಪ್ರವಾಸವನ್ನು ವರ್ಣಿಸುವ ಏಕಕಾಲಕ್ಕೆ ಬೆರಗು ಮತ್ತು ಚಿಂತನೆಯನ್ನು ಉಂಟು ಮಾಡುವ ಶ್ರೀಮಂತ ಕೃತಿ. ಶಿವರಾಮ ಕಾರಂತರ 'ಅಬುವಿನಿಂದ ಬರಾಮಕ್ಕೆ' ಅವರ ಪ್ರಕೃತಿಪ್ರೇಮ ಮತ್ತು ಕಲಾಸಕ್ತಿಯನ್ನು ಎತ್ತಿ ಹಿಡಿಯುತ್ತದೆ. ಅವರ 'ಪೂರ್ವ ಪಶ್ಚಿಮ' ಇಂತಹುದೇ ಮತ್ತೊಂದು ಕೃತಿ. ಅವರ ಅಮೇರಿಕಾ ಪ್ರವಾಸದ ಅನುಭವವನ್ನು 'ಪಾತಾಳಕ್ಕೆ ಪಯಣ'ದಲ್ಲಿ ಕಾಣಬಹುದು. ಸಿದ್ದವನಹಳ್ಳಿ ಕೃಷ್ಣಶರ್ಮರ 'ವಾರ್ಧಾಯಾತ್ರೆ', ಶ್ರೀರಂಗರ 'ಶ್ರೀರಂಗಯಾತ್ರೆ' ಗೊರೂರು ರಾಮಸ್ವಾಮಿ ಅಯ್ಯಂಗಾರರ 'ಅಮೇರಿಕಾದಲ್ಲಿ ಗೊರೂರು' ಜಿ.ಎಸ್. ಶಿವರುದ್ರಪ್ಪನವರ 'ಮಾಸ್ಕೋದಲ್ಲಿ ಇಪ್ಪತ್ತೆರಡು ದಿನ 'ದೇ ಜವರೇಗೌಡರ 'ವಿದೇಶದಲ್ಲಿ ನಾಲ್ಕು ವಾರ', ಬಿ.ಜಿ.ಎಲ್. ಸ್ವಾಮಿ, ಕೃಷ್ಣನಂದಕಾಮತ್ ಮುಂತಾದವರ ಅಮೇರಿಕಾ ಪ್ರವಾಸದ ಕೃತಿಗಳು ಮುಂತಾದವು ಈ ಕ್ಷೇತ್ರಕ್ಕೆ ಸಂದಿರುವ ವೈವಿಧ್ಯಮಯ ಕೊಡುಗೆಗಳು.

ಕನ್ನಡ ಗದ್ಯದ ಸಾಧನೆಯನ್ನು ಪ್ರಮುಖವಾಗಿ ಗುರುತಿಸಲೇಬೇಕಾದದ್ದು 'ಲಘು ಪ್ರಬಂಧ' ಮತ್ತು 'ಹರಟೆ'ಯ ಕ್ಷೇತ್ರದಲ್ಲಿ ವಸ್ತುವಿಗಿಂತ ಶೈಲಿ ಇಲ್ಲಿ ಪ್ರಾಮುಖ್ಯ ಪಡೆಯುತ್ತದೆ. ಬರಹಗಾರನ ಅನುಭವ, ಸುಸಂಸ್ಕೃತ ಚಿಂತನೆ, ಅಭಿರುಚಿ ಇವೆಲ್ಲವೂ ಕಾರ್ಯಪ್ರವೃತ್ತವಾಗಿದ್ದುಕೊಂಡು, ಅಭಿವ್ಯಕ್ತಿಯ ವೈಶಿಷ್ಟ್ಯದಿಂದ ಜೀವತುಂಬಿಕೊಂಡು ಹರಿಯುವ ಬರವಣಿಗೆಯೇ ಈ ಪ್ರಕಾರ. ನಿರ್ದಿಷ್ಟ ಕೇಂದ್ರವೊಂದನ್ನು ಇರಿಸಿಕೊಳ್ಳದೆ ಆಲೋಚನಾ ಲಹರಿಯನ್ನು ಹರಿಯಬಿಡುತ್ತ ಹಾಸ್ಯಭರಿತವಾಗಿ ಸರಾಗವಾಗಿ ಸಾಗುವ ಹರಟೆಯೊಂದು ಮನರಂಜನೆಗೆ ಆಹಾರವಾಗುತ್ತದೆ. ಒಂದು ವಿಷಯವನ್ನು ಕೇಂದ್ರವಾಗಿ ಹೊಂದಿದ್ದು, ಅದರ ಸುತ್ತ ನಮ್ಮ ಆಲೋಚನೆಗಳನ್ನು ಹರಿಯಬಿಡುತ್ತಾ ಸಾಗುವ ಲಲಿತಪ್ರಬಂಧ ನಾನಾ ಬಗೆಯ ಲೇಖಕರನ್ನು ಆಕರ್ಷಿಸಿದೆ. ಪ್ರಬಂಧದ ಶೈಲಿ ಇಂತಹ ಆಲೋಚನೆಗಳನ್ನು ಧ್ವನಿಸುವ ಓದುಗರನ್ನು ಆ ಆಲೋಚನೆಗಳೊಂದಿಗೆ ಕೊಂಡೊಯ್ಯುವ, ಅದಕ್ಕೆ ಪೂರಕವಾದ ವಿವಿಧ ಚಿತ್ರಗಳನ್ನು ಓದುಗರ ಮುಂದೆ ಬಿಡಿಸುವ

ಸಾಮರ್ಥ್ಯ ಹೊಂದಿರಬೇಕು. ಗೊರೂರು ರಾಮಸ್ವಾಮಿ ಅಯ್ಯಂಗಾರ್, ಕುವೆಂಪು, ರಾವ್‌ಬಹದ್ದೂರ್ ಮುಂತಾದವರ ಪ್ರಬಂಧಗಳಲ್ಲಿ ಗ್ರಾಮೀಣ ಬದುಕಿನ, ಹಾಸ್ಯತುಂಬಿದ ಚಿತ್ರಗಳನ್ನು ಕಾಣಬಹುದು. ಗೊರೂರರ 'ಹೇಮಾವತಿ ತೀರದಲ್ಲಿ', 'ನಮ್ಮೂರಿನ ರಸಿಕರು', ಕುವೆಂಪುರವರ 'ಮಲೆನಾಡಿನ ಚಿತ್ರಗಳು' ಮುಂತಾದವು ಈ ಸಾಲಿಗೆ ಸೇರುವ ಪ್ರಬಂಧ ಸಂಗ್ರಹಗಳು. ಪು.ತಿ. ನರಸಿಂಹಾಚಾರ್ ಮತ್ತು ತೀ.ನಂ. ಶ್ರೀಯವರ ಪ್ರಬಂಧಗಳಲ್ಲಿ ಬದುಕಿನ ಅತಿ ಸಾಮಾನ್ಯ ವಿಷಯಗಳಲ್ಲಿ ಮಹತ್ತರ ಸತ್ಯವನ್ನೂ, ಸೌಂದರ್ಯವನ್ನೂ ಕಾಣಿಸುವ ಗುಣವಿದೆ. ರಾ. ಕುಲಕರ್ಣಿಯವರ ಬರಹಗಳಲ್ಲಿ ವಿಡಂಬನೆ, ಕಟಕಿಗಳ ಪಾತ್ರ ಹಿರಿದು. 'ಗಾಳಿಪಟ', 'ವಿಷಕನ್ಯೆ' ಮುಂತಾದವು ಅವರ ಬರಹದ ಅತ್ಯುತ್ತಮ ಪ್ರತಿನಿಧಿಗಳು. ವಿ.ಸೀ.ಯವರು ಶ್ರೇಷ್ಠ ದರ್ಜೆಯ ಪ್ರಬಂಧಕಾರರು. ಅವರ ಅಗಾಧವಾದ ಪಾಂಡಿತ್ಯ, ವಿಮರ್ಶಕ ಪ್ರಜ್ಞೆ, ಕವಿ ಮನಸ್ಸು, ಸುಸಂಸ್ಕೃತಿ ಸಂವೇದನೆ ಎಲ್ಲವೂ ಬೆರೆತು ಒಂದು ವಸ್ತುವನ್ನು ಹಲವು ದೃಷ್ಟಿಕೋನಗಳಿಂದ ನೋಡುತ್ತಾ ಸಾಗುವ, ಪ್ರಬಂಧದ ಪರಿ ವಿಶೇಷವಾದದ್ದು. 'ಬೆಳದಿಂಗಳು' 'ಸೀಕರಣೆ' ಮುಂತಾದ ಪ್ರಬಂಧಗಳಲ್ಲಿ ತಮ್ಮ ಜೀವಂತಿಕೆಯಿಂದಲೂ, ಶ್ರೀಮಂತ ವಿವರಗಳಿಂದಲೂ ಓದುಗರನ್ನು ಸೆರಿಹಿಡಿಯುತ್ತವೆ. ತೆಳುವಾದ ವಿಚಾರ ಧಾರೆಯೊಂದಿಗೆ, ರಸಿಕ ಮನಸ್ಸೊಂದು ಲವಲವಿಕೆಯಿಂದ ಕೂಡಿದ ಶೈಲಿಯಲ್ಲಿ ಮುಂದುವರೆಯುವುದನ್ನು ಈ ಪ್ರಬಂಧಗಳಲ್ಲಿ ಕಾಣಬಹುದು.

ಕನ್ನಡ ಪ್ರಬಂಧಕಾರರು ವೈವಿಧ್ಯಮಯ ವಿಚಾರಗಳನ್ನು ತಮ್ಮ ಪ್ರಬಂಧದ ವಿಷಯಗಳಿಗಾಗಿ ಆಯ್ಕೆ ಮಾಡಿಕೊಂಡಿರುವುದು. ಆ ಪ್ರಕಾರಕ್ಕೂ ಕನ್ನಡ ಗದ್ಯಕ್ಕೂ ಹೊಸ ಆಯಾಮಗಳನ್ನು ತರುವಲ್ಲಿ ಸಹಕಾರಿಯಾಗಿದೆ. ನಂಟರು, ನೆಗಡಿ, ತಿಗಣೆ (ತೀ.ನಂ.ಶ್ರೀಕಂಠಯ್ಯ), ಸಾವಿನ ಕೂಡ ಸರಸ (ದ.ರಾ. ಬೇಂದ್ರೆ), ಶಾಂತಿ (ಮಾಸ್ತಿ ವೆಂಕಟೇಶ ಅಯ್ಯಂಗಾರ್), ಹೋಟಲುಗಳು (ಎ.ಎನ್.ಮೂರ್ತಿ ರಾವ್), ಮೀಸೆ, ಜೈಲ್ದರ್ಶನ (ಎಂ.ಜಿ. ವೆಂಕಟೇಶಯ್ಯ), ತುಂಬೆಯ ಹೂ (ಎಂ.ವಿ. ಸೀತಾರಾಮಯ್ಯ), ನನ್ನ ಸ್ವಂತ ಶ್ರಾದ್ಧ (ಶ್ರೀರಂಗ) ಮುಂತಾದವು ಕನ್ನಡ ಪ್ರಬಂಧಗಳ ವಿಷಯ ವೈವಿಧ್ಯದ ಮೇಲೆ ಬೆಳಕು ಚೆಲ್ಲುತ್ತವೆ.

ಎ.ಎನ್. ಮೂರ್ತಿರಾಯರ ಲಲಿತ ಪ್ರಬಂಧಗಳು ಕನ್ನಡ ಗದ್ಯ ಪ್ರಕಾರಕ್ಕೆ ವಿಶಿಷ್ಟ ಕೊಡುಗೆಯೆನಿಸಿವೆ. ಮೂರ್ತಿರಾಯರ ವಿಷಯದ ವ್ಯಾಪ್ತಿ ವಿ.ಸೀ. ಯವರಷ್ಟು ವಿಸ್ತಾರವಲ್ಲದಿದ್ದರೂ ಅವರ ಶೈಲಿ ಅತ್ಯಂತ ಸೂಕ್ಷ್ಮವಾದದ್ದು, ಸೊಗಸಾದದ್ದು, ಮನುಷ್ಯನ ಸ್ವಭಾವದ ಏರುಪೇರುಗಳನ್ನು ಹಾಸ್ಯ ತುಂಬಿದ ಧಾಟಿಯಲ್ಲಿ ಸಹಾನುಭೂತಿಪರವಾಗಿ ನೋಡುವ ಗುಣ ಮೂರ್ತಿರಾಯರದು. ವಿಷಯ ಯಾವುದೇ ಆಗಿರಲಿ, ಅದನ್ನು ಅಭಿವ್ಯಕ್ತಿಸುವಲ್ಲಿ ಮೂರ್ತಿರಾಯರ ಸೂಕ್ಷ್ಮತೆ ಮತ್ತು ಕೌಶಲ್ಯಗಳು ಎದ್ದು ಕಾಣುವಂಥವು. ಮೂರ್ತಿರಾಯರ ಕೆಲವು ಶ್ರೇಷ್ಠ ಪ್ರಬಂಧಗಳು ಜಗತ್ತಿನ ಯಾವುದೇ ಭಾಷೆಯ ಶ್ರೇಷ್ಠ ಪ್ರಬಂಧಗಳೊಂದಿಗೆ ಸರಿಸಾಟಿಯಾಗಿ ನಿಲ್ಲಬಲ್ಲವು ಎಂಬ ಖ್ಯಾತಿ ಅವರಿಗಿದೆ. 'ಹಗಲುಗನಸುಗಳು' (೧೯೩೭), 'ಅಲೆಯುವ ಮನ' (೧೯೫೭) ಮತ್ತು 'ಮಿನುಗು ಮಿಂಚು' (೧೯೬೨) ಅವರ ಪ್ರಮುಖ ಸಂಕಲನಗಳು, ನಂತರದಲ್ಲಿ ಅವರ 'ಸಮಗ್ರ ಲಲಿತ ಪ್ರಬಂಧಗಳು' ಪ್ರಕಟಗೊಂಡಿವೆ. ಇತ್ತೀಚೆಗೆ ಪ್ರಕಟವಾದ ಅವರ ಕೃತಿ 'ದೇವರು'ನಲ್ಲಿ ಪರಿಪಕ್ವವಾಗಿದೆ. ಆರೋಗ್ಯಕರ ಮನಸ್ಸೊಂದು ವಿಚಾರ ಪೂರ್ಣ ಮಂಥನದಲ್ಲಿ ತೊಡಗಿರುವುದನ್ನು ಕಾಣಬಹುದು.

ಸಾಹಿತ್ಯೇತರ ವಿಷಯಗಳನ್ನು ಪ್ರಬುದ್ಧ ರೀತಿಯಲ್ಲಿ ಗದ್ಯ ಬರಹಕ್ಕಿಳಿಸಿರುವವರಲ್ಲಿ ಪೂರ್ಣ ಚಂದ್ರ ತೇಜಸ್ವಿ, ಲಂಕೇಶ್, ಕೆ.ವಿ. ಸುಬ್ಬಣ್ಣ ಮುಂತಾದವರು ಪ್ರಮುಖರು. ಕೃಷಿ, ಪರಿಸರ, ಮಾನವ

ಶಾಸ್ತ್ರ ಮುಂತಾದ ವಿಷಯಗಳನ್ನು ಕುರಿತು ತೇಜಸ್ವಿಯವರ ಬರಹಗಳು ಶ್ರೇಷ್ಠ ಗದ್ಯದ ಮಾದರಿಗಳೆನಿಸಿವೆ. 'ಪರಿಸರದ ಕತೆ', 'ಸಹಜ ಕೃಷಿ', 'ಮಿಸ್ಸಿಂಗ್ ಲಿಂಕ್' ಮುಂತಾದವು ತೇಜಸ್ವಿಯವರ ಗದ್ಯದ ಸ್ಪಷ್ಟತೆ, ಸರಳತೆ ಮತ್ತು ಸಹಜ ಹರಿವಿಗೆ ಉದಾಹರಣೆಗಳಾಗಿ ನಿಲ್ಲುತ್ತವೆ.

ಕನ್ನಡ ಗದ್ಯಕ್ಕೆ ಹೊಸ ಆಯಾಮ ತಂದುಕೊಟ್ಟ ಲಂಕೇಶರ ಪ್ರತಿಭೆ ಪತ್ರಿಕೋದ್ಯಮದ ವಲಯದಲ್ಲೂ ಬಿಂಬಿತವಾಗಿದೆ. ಅವರ ಸಂಪಾದಕೀಯಗಳು, ರಾಜಕೀಯ ಬರಹಗಳು ಇದಕ್ಕೆ ಸಾಕ್ಷಿಯಾಗಿವೆ. ಇತ್ತೀಚೆಗೆ ಪ್ರಕಟವಾಗಿರುವ ಅವರ 'ಟೀಕೆ-ಟಿಪ್ಪಣಿ'ಯ ಜೀವಂತ ಗದ್ಯ, ಗದ್ಯ ಕ್ಷೇತ್ರಕ್ಕೆ ಒಂದು ಮುಖ್ಯ ಕೊಡುಗೆಯಾಗಿದೆ.

ಬಿ.ಜಿ.ಎಲ್. ಸ್ವಾಮಿ ಹಾಸ್ಯದ ಲೇಪ ಹೊದಿಸಿ, ಸಸ್ಯ ವಿಜ್ಞಾನಕ್ಕೆ ಸಂಬಧಿಸಿದ ವಿಷಯಗಳನ್ನು ತಮ್ಮ ವೃತ್ತಿ ಜೀವನಕ್ಕೆ ಸಂಬಂಧಿಸಿದ ವಿಚಾರಗಳನ್ನು ಅತ್ಯಂತ ರಂಜನೀಯವಾಗಿ, ಆತ್ಮೀಯವಾಗಿ ಹಂಚಿಕೊಂಡಿರುವ ವಿಶಿಷ್ಟ ಬರಹಗಾರರು. ಅವರ 'ಕಾಲೇಜು ರಂಗ', 'ಕಾಲೇಜು ತರಂಗ', 'ಪ್ರಾಧ್ಯಾಪಕನ ಪೀಠದಲ್ಲಿ', 'ತಮಿಳು ತಲೆಗಳ ನಡುವೆ' ಮುಂತಾದ ಕೃತಿಗಳೂ ಅತ್ಯಂತ ಜನಪ್ರಿಯವೂ, ಜನಮನ್ನಣೆಗಳಿಸಿದ ಕೃತಿಗಳೂ ಆಗಿವೆ. ಅವರ 'ಹಸುರು ಹೊನ್ನು' ಮಾನವೀಯ ಧ್ವನಿಯಿಂದ ಕೂಡಿದ್ದ ಕನ್ನಡ ಗದ್ಯ ಪ್ರಕಾರಕ್ಕೆ ಸಂದಿರುವ ಶ್ರೇಷ್ಠ ಕೊಡುಗೆಗಳಲ್ಲಿ ಒಂದಾಗಿದೆ.

ವೃತ್ತಪತ್ರಿಕೆಗಳು, ಸಾಪ್ತಾಹಿಕ, ಪಾಕ್ಷಿಕ ಪತ್ರಿಕೆಗಳು, ಮಾಸಿಕ ತ್ರೈಮಾಸಿಕಗಳು, ಸಾಹಿತ್ಯಕ ಪತ್ರಿಕೆಗಳು ಗದ್ಯದ ಬೆಳವಣಿಗೆಗೆ ಜೀವಂತ ಮಾಧ್ಯಮಗಳಾಗಿವೆ. ವರದಿ, ವರ್ಣನೆ, ಸಂವಾದ, ಚರ್ಚೆ, ವಾದವಿವಾದ, ಮನರಂಜನೆ, ಚಿಂತನೆ ಎಲ್ಲದಕ್ಕೂ ಪತ್ರಿಕೆಗಳಲ್ಲಿ ಆಸ್ಪದವಿದೆ. ಹೊಸ ಪದಗಳು, ನುಡಿಗಟ್ಟುಗಳು, ಮಾತಿನ ತಿರುವುಗಳು, ಹೊಸ ಗದ್ಯ ಮಾದರಿಗಳು ಬಹುಮಟ್ಟಿಗೆ ಈ ಪತ್ರಿಕೆಗಳ ಮೂಲಕ ಹುಟ್ಟಿಬರುತ್ತವೆ ಎಂದರೆ ತಪ್ಪಾಗಲಾರದು. ಕೆಲವು ನಿಯತಕಾಲಿಕಗಳು ಸುದ್ದಿ ಪ್ರಸಾರದ ಜೊತೆಗೆ, ನಿಗದಿತ ವಿಶೇಷ ಅಂಕಣಗಳ ಮೂಲಕ ಸಾಹಿತ್ಯ ಸಂಸ್ಕೃತಿಗಳಿಗೆ ಸಂಬಂಧಿಸಿದ ವಿಚಾರಗಳನ್ನು, ಚಿಂತನೆಗಳನ್ನು ಪ್ರಕಟಿಸುತ್ತಿವೆ. ಕನ್ನಡದ ಪ್ರಮುಖ ಗದ್ಯ ಲೇಖಕರಾದ ಡಿ.ವಿ.ಜಿ., ಮಾಸ್ತಿ ವೆಂಕಟೇಶ್ ಅಯ್ಯಂಗಾರ್, ಶಿವರಾಮ ಕಾರಂತ, ಸಿದ್ಧವನಹಳ್ಳಿ ಕೃಷ್ಣಶರ್ಮ, ಬಸವರಾಜ ಕಟ್ಟೀಮನಿ, ಅ.ನ.ಕೃ., ನಿರಂಜನ, ಪಿ. ಲಂಕೇಶ್ ಇವರೆಲ್ಲರೂ ಪತ್ರಿಕೋದ್ಯಮದ ಅನುಭವವನ್ನು ಹೊಂದಿದ್ದು, ಆ ಮೂಲಕ ಕನ್ನಡ ಗದ್ಯಕ್ಕೆ ಕೊಡುಗೆ ನೀಡುತ್ತ ಬಂದಿದ್ದಾರೆ.

ಅಂಕಣ ಬರಹಗಳ ಮೂಲಕ ಖ್ಯಾತರಾದವರು ನಿರಂಜನ, ಹಾ.ಮಾ. ನಾಯಕ, ಕು.ಶಿ. ಹರಿದಾಸ ಭಟ್ಟ, ಎಚ್ಚೆಸ್ಕೆ ಮುಂತಾದವರು. ತಮ್ಮ ಅಂಕಣಬರಹಗಳನ್ನೂ ಗದ್ಯ ಲೇಖನಗಳನ್ನೂ ಪುಸ್ತಕ ರೂಪದಲ್ಲಿ ಹೊರತರುವ ಪರಿಪಾಟ ಈಗ ಬೆಳೆದುಬಂದಿದ್ದು 'ಅಂಕಣ' 'ಸಲ್ಲಾಪ' 'ಸಂಪ್ರತಿ' ಅರುವತ್ತರ ಅರಲು, ಭಾರತ ಧರ್ಮ 'ಲೋಕಾಭೀರಾಮ' ಮುಂತಾದ ಹಲವು ಜನಪ್ರಿಯ ಕೃತಿಗಳು ಪ್ರಕಟಗೊಂಡಿವೆ.

ಕನ್ನಡ ಗದ್ಯ ಸಂಸ್ಕೃತದಿಂದ ಇಂಗ್ಲಿಷ್ ಮತ್ತಿತರ ಭಾರತೀಯ ಭಾಷೆಗಳಿಂದ ಶ್ರೀಮಂತಗೊಂಡು ಹೊಸ ಲಕ್ಷಣಗಳನ್ನೂ, ಜೀವಂತಿಕೆಯನ್ನು ಮೈಗೂಡಿಸಿಕೊಂಡಿದೆ, ಸತ್ವಶಾಲಿಯಾಗಿ ಆಯಾಕಾಲ ಅಗತ್ಯಗಳಿಗೆ ಸ್ಪಂದಿಸುತ್ತ, ಬೆಳೆಯುತ್ತ ಬಂದಿದೆ. ಹಳೆಯ ತಲೆಮಾರಿನ ಶ್ರೇಷ್ಠ ಬರಹಗಾರರಾದ ಡಿ.ವಿ.ಜಿ., ಎ.ಆರ್. ಕೃಷ್ಣಶಾಸ್ತ್ರೀ, ಮಾಸ್ತಿ ವೆಂಕಟೇಶ್ ಅಯ್ಯಂಗಾರ್, ವಿ.ಸೀ.ಎ.ಎನ್. ಮೂರ್ತಿರಾಯರು, ಅ.ನ.ಕೃ., ನಿರಂಜನ ಅನಂತರದ ತಲೆಮಾರಿನ ಲಂಕೇಶ್, ತೇಜಸ್ವಿ, ಅನಂತಮೂರ್ತಿ ಮುಂತಾದ ಹಲವು ಸತ್ವಶಾಲಿ ಗದ್ಯ ಬರಹಗಾರರ ಸಾಧನೆಗಳನ್ನೂ, ಕಸುವನ್ನೂ ರೂಡಿಸಿಕೊಂಡು ಬೆಳೆದಿದೆ.

ಆಧುನಿಕ ಯುಗದಲ್ಲಿ ಗದ್ಯಕ್ಕೆ ಅತ್ಯಂತ ಪ್ರಮುಖ ಸ್ಥಾನ ದೊರೆತಿದೆ. ವ್ಯಾವಹಾರಿಕ ದೃಷ್ಟಿಯಿಂದಲೂ ಗದ್ಯಕ್ಕೆ ಹೆಚ್ಚಿನ ಮಹತ್ವ ಲಭಿಸಿದ್ದು, ಹೆಚ್ಚುತ್ತಿರುವ ಕನ್ನಡ ಬಳಕೆಯ ನೇರ ಪರಿಣಾಮವೆಂಬಂತೆ ಗದ್ಯವನ್ನು ಹೊಸಹೊಸ ಅಗತ್ಯಗಳಿಗೆ ದುಡಿಸಿಕೊಳ್ಳಬೇಕಾದ ಪ್ರಮೇಯವೂ ಒದಗಿದೆ. ಆಡಳಿತ ಭಾಷೆಯಾಗಿ, ಶಿಕ್ಷಣ ಮಾಧ್ಯಮವಾಗಿ, ವಾಣಿಜ್ಯ ವ್ಯವಹಾರದ ಭಾಷೆಯಾಗಿ ವಿವಿಧ ಜ್ಞಾನಕ್ಷೇತ್ರಗಳಲ್ಲಿ ಅಭಿವ್ಯಕ್ತಿಯ ಮಾಧ್ಯಮವಾಗಿ ಗದ್ಯದ ಜವಾಬ್ದಾರಿ ಮತ್ತು ಬೆಳವಣಿಗೆಗಳು ಹೆಚ್ಚಿವೆ, ಹೆಚ್ಚುತ್ತಲೇ ಇವೆ.

೨. ಕಾದಂಬರಿ

ಕಾದಂಬರಿ ಎಂದರೆ ಹೆಂಡ, ಮದ್ಯ ಎಂದರ್ಥ. ಅದರ ಕುಡಿತವು ಹೇಗೆ ಮೈಮರೆಸುತ್ತದೆಯೋ ಹಾಗೆಯೇ ಕಾದಂಬರಿಯೂ ಮೈ ಮರೆಸುವುದರಿಂದ ಈ ಸಾಹಿತ್ಯ ಪ್ರಕಾರಕ್ಕೆ ಈ ಹೆಸರು ಹೊಂದಿಕೆಯಾಗುತ್ತದೆಂದು ಕಾಣುತ್ತದೆ. ಸಂಸ್ಕೃತದಲ್ಲಿರುವ ಬಾಣಭಟ್ಟನ 'ಕಾದಂಬರಿ' ಇದಕ್ಕೊಂದು ಉದಾಹರಣೆ. ಈ ಕಾದಂಬರಿಯನ್ನು ತುರಮುರಿಯವರು ೧೯ನೆಯ ಶತಮಾನದಲ್ಲಿ ಕನ್ನಡಕ್ಕೆ ಅನುವಾದಿಸಿ 'ಕಾದಂಬರೀ ಕಾವ್ಯದ ಹೊಸಗನ್ನಡ ಗದ್ಯರೂಪ' ಎಂಬ ಹೆಸರಿನಲ್ಲಿ ಪ್ರಕಟಿಸಿದರು. ಕತೆ, ನಿರೂಪಣೆ ವರ್ಣನಾ ಕೌಶಲ್ಯ, ಶೈಲಿ ಮತ್ತು ರಸಾನುಭವದ ದೃಷ್ಟಿಯಿಂದ ಕಾದಂಬರಿ ಕಾವ್ಯ ಅತ್ಯಂತ ಜನಪ್ರಿಯವಾಯಿತು. ಹೀಗೆಯೇ ಮುಂದುವರಿದು ಸಂಸ್ಕೃತದ ಕಾದಂಬರಿ ಕಾವ್ಯದಂತೆ ರಮ್ಯವಾದ ಎಲ್ಲ ಕೃತಿಗಳಿಗೂ ಕಾದಂಬರಿ ಎಂಬ ನಾಮಾಂಕಿತವೇ ಉಳಿಯಿತು.

ಇಂಗ್ಲಿಷ್ ಸಾಹಿತ್ಯದ ಪ್ರಭಾವಕ್ಕೆ ಕನ್ನಡ ಒಳಗಾಗುವ ಮುನ್ನವೇ ಕಾದಂಬರಿ ಎನ್ನಬಹುದಾದ ಮೂರು ಕೃತಿಗಳು ರಚಿತವಾಗಿದ್ದವು ಎಂಬ ಅಭಿಪ್ರಾಯವಿದೆ. ಯಾದವನ 'ಕಲಾವತೀ ಪರಿಣಯ' (೧೮೧೫), ಮುಮ್ಮಡಿ ಕೃಷ್ಣರಾಜರ 'ಸೌಗಂಧಿಕಾ ಪರಿಣಯ' ಮತ್ತು ಕೆಂಪುನಾರಾಯಣನ 'ಮುದ್ರಾಮಂಜೂಷ' (೧೮೨೩) ಇವೇ ಈ ಮೂರು ಕೃತಿಗಳು. ನಂತರದ ಅವಧಿಯಲ್ಲಿ ಇಂಗ್ಲಿಷಿನಿಂದ ಭಾಷಾಂತರ ಕೃತಿಗಳೂ, ಇಂಗ್ಲಿಷ್ ಕಾದಂಬರಿಗಳ ಪ್ರಭಾವದಿಂದ ಸೃಷ್ಟಿಯಾದ ಕಾದಂಬರಿಗಳೂ ಕನ್ನಡದಲ್ಲಿ ಕಾಣತೊಡಗಿದವು. ಬನ್ಯನ್‌ನ 'ಪಿಲಿಗ್ರಿಮ್ಸ್ ಪ್ರೋಗ್ರೆಸ್' ಯಾತ್ರಿಕನ ಸಂಚಾರ ಎಂಬ ಹೆಸರಿನಲ್ಲಿ ೧೮೪೭ರಲ್ಲಿ ಪ್ರಕಟವಾಯಿತು. ೧೮೬೫ರಲ್ಲಿ 'ಸ್ಯಾಂಟ್‌ಫರ್ಡ್ ಅಂಡ್ ಮರ್ಟನ್'ನ ಅನುವಾದವನ್ನು ಪುಟ್ಟಣ್ಣನವರು ಪ್ರಕಟಿಸಿದರು. ಈ ನಡುವೆ ಡ್ಯಾನಿಯಲ್ ಡಿಫೋನ್ 'ರಾಬಿನ್‌ಸನ್‌ಕ್ರೂಸೋ' ಮತ್ತು ೧೮೭೯ರಲ್ಲಿ ಮರಾಠಿ ಕಾದಂಬರಿ 'ಯಮುನಾ ಪರ್ಯಟನ'ದ ಅನುವಾದ ಪ್ರಕಟಗೊಂಡವು. ಭಾರತೀಯ ಭಾಷೆಯೊಂದರಿಂದ ಕನ್ನಡಕ್ಕೆ ಬಂದ ಮೊಟ್ಟಮೊದಲ ಅನುವಾದವೂ ಆಗಿದೆ. ೧೯ನೆಯ ಶತಮಾನದ ಕಟ್ಟಕಡೆಯ ಭಾಗದಲ್ಲಿ ತೆಲುಗು ಕಾದಂಬರಿಗಳ ಅನುವಾದಗಳೂ ಕಾಣಿಸಿಕೊಳ್ಳತೊಡಗಿದವು.

ಬಂಗಾಳಿ ಕಾದಂಬರಿಗಳ ಭಾಷಾಂತರದ ಮೂಲಕ ಕನ್ನಡಿಗರಿಗೆ ಕಾದಂಬರಿಗಳನ್ನು ಮೊದಲ ಬಾರಿಗೆ ಪರಿಚಯಿಸಿದವರು ಬಿ. ವೆಂಕಟಾಚಾರ್ಯರು. ೧೮೮೫ರಲ್ಲಿ ಬಂಕಿಮಚಂದ್ರರ 'ದುರ್ಗೇಶನಂದಿನಿ'ಯನ್ನು ವೆಂಕಟಾಚಾರ್ಯರು ಕನ್ನಡಕ್ಕೆ ಅನುವಾದಿಸಿದರು. ಅದಕ್ಕೆ ಬರೆದ ಇಂಗ್ಲಿಷ್ ಮುನ್ನುಡಿಯಲ್ಲಿ ಮೊದಲ ಬಾರಿಗೆ 'ನಾವೆಲ್' ಪದವನ್ನು ಬಳಸಿದರು. ತಮ್ಮ ಮೊದಲ ಅನುವಾದ ಕೃತಿಯಾದ 'ಭ್ರಾಂತಿವಿಲಾಸ'ದ ಮೂಲಕ ವೆಂಕಟಾಚಾರ್ಯರು ಕಾದಂಬರಿಗಳ ಆರಂಭಕ್ಕೆ ನಾಂದಿ ಹಾಡಿದರು, ಅಂದಿನಿಂದ ಇಂದಿನವರೆಗೆ ಕಾದಂಬರಿ ಪ್ರಕಾರದ ಬೆಳವಣಿಗೆಯನ್ನು ಮೂರು ಹಂತಗಳಲ್ಲಿ ಗುರುತಿಸುವ ಪರಿಪಾಠವಿದೆ.

೧. ಆರಂಭ ಕಾಲ: ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧದಿಂದ ಇಪ್ಪತ್ತನೆಯ ಶತಮಾನದ ಕಾಲು ಶತಕದವರೆಗೆ

೨. ನಿರ್ಮಾಣಶೀಲಯುಗ: ಸುಮಾರು ೧೯೨೫ರಿಂದ ಸ್ವಾತಂತ್ರ್ಯೋದಯದವರೆಗೆ

೩. ಸ್ವಾತಂತ್ರ್ಯೋತ್ತರ ಯುಗ: ಸ್ವಾತಂತ್ರ್ಯೋದಯ ಕಾಲದಿಂದ ಪ್ರಸಕ್ತದವರೆಗೆ

೧೮೯೯ರಲ್ಲಿ ಗುಲ್ವಾಡಿ ವೆಂಕಟರಾಯರು ಬರೆದ 'ಇಂದಿರಾಬಾಯಿ' ಅಥವಾ 'ಸದ್ಧರ್ಮ ವಿಜಯ' ಕನ್ನಡದ ಪ್ರಥಮ ಸ್ವತಂತ್ರ ಸಾಮಾಜಿಕ ಕಾದಂಬರಿ ಎಂದು ಹೇಳಲಾಗುತ್ತದೆ. 'ಭಾಗೀರಥಿ' ಮತ್ತು 'ಸೀಮಂತಿನಿ', ಇವರ ಇತರ ಕಾದಂಬರಿಗಳು. ೧೮೯೫ರಲ್ಲಿ ಪ್ರಕಟವಾದ 'ಕೇಸರಿ ವಿಲಾಸ'ವು ಕಾದಂಬರಿಯ ಲಕ್ಷಣಗಳನ್ನುಳ್ಳ ಕನ್ನಡದ ಪ್ರಥಮ ಸ್ವತಂತ್ರ ಕಾದಂಬರಿ ಎಂದು ಗೋವಿಂದ ಪೈ ಅಭಿಪ್ರಾಯಪಟ್ಟಿದ್ದಾರೆ. ಮೈಲಾಪುರದಲ್ಲಿ ಹೈಕೋರ್ಟ್ ವಕೀಲರಾಗಿದ್ದ ರೆಂಟ್ಲ ವೆಂಕಟಸುಬ್ಬರಾವ್ ಈ ಕೃತಿಯನ್ನು ರಚಿಸಿ ಮದರಾಸಿನಲ್ಲಿ ಪ್ರಕಟಿಸಿದರೆಂದು ತಿಳಿದುಬಂದಿದೆ. ಕಾದಂಬರಿ ಪ್ರಕಾರದ ಬೆಳವಣಿಗೆಯಲ್ಲಿ ಗಳಗನಾಥರ ಹೆಸರು ಬಹುಮುಖ್ಯವಾದುದು. ೧೮೯೮ರಲ್ಲಿ ಬಂದ 'ಪದ್ಮನಯನೆ' ಇವರ ಪ್ರಥಮ ಕಾಲ್ಪನಿಕ ಕಾದಂಬರಿ. ೧೯೦೫ರಲ್ಲಿ ಪ್ರಕಟವಾದ ಬೋಳಾರ ಬಾಬುರಾಯರ ಸ್ವತಂತ್ರ ಕಾದಂಬರಿ 'ವಾಗ್ದೇವಿ', ಅಂದಿನ ಸಮಾಜದ ವಾಸ್ತವ ಚಿತ್ರಣವನ್ನೊಳಗೊಂಡಿದೆ. ಅಣ್ಣಾಜಿರಾವ್ ಗುಲ್ವಾಡಿ ರಚಿಸಿದ 'ರೋಹಿಣಿ ಇಲ್ಲವೇ ಸಾರಸ್ವತ ಮಂಡಳಿ' (೧೯೦೬) ಸಾಮಾಜಿಕ ಕಾದಂಬರಿಗಳ ಸಾಲಿಗೆ ಸೇರುತ್ತದೆ. ೧೯೦೮ರಲ್ಲಿ ಬಂದ ಕೃತಿ ಕೆರೂರ ವಾಸುದೇವಾಚಾರ್ಯರ 'ಇಂದಿರೆ' ಉತ್ತರ ಕರ್ನಾಟಕದ ಭಾಷೆಯನ್ನು ಬಳಸಿಕೊಂಡಿರುವ ಈ ಸ್ವತಂತ್ರ ಕಾದಂಬರಿ ವಿಧವಾ ವಿವಾಹ, ಸ್ತ್ರೀ ಶಿಕ್ಷಣ ಮತ್ತು ಸ್ತ್ರೀ ಸ್ವಾತಂತ್ರ್ಯದಂತಹ ವಿಷಯಗಳನ್ನು ಪ್ರಸ್ತಾಪಿಸಿ, ಗಮನಾರ್ಹ ಕೃತಿಯೆನಿಸಿದೆ. ಇತಿಹಾಸವನ್ನು ವಸ್ತುವಾಗಿ ಹೊಂದಿರುವ 'ಔರಂಗಜೇಬ' ಇವರ ಇನ್ನೊಂದು ಕಾದಂಬರಿ.

ಕಾದಂಬರಿಗಳ ಆರಂಭಕಾಲದ ಆದಿಯಲ್ಲಿ ಹಲವರು ಕೃತಿ ರಚನೆಯಲ್ಲಿ ತೊಡಗಿದರು. ಮೈಸೂರು ತಾತಯ್ಯ ಎಂದೇ ಪ್ರಸಿದ್ಧರಾದ ವೆಂಕಟಕೃಷ್ಣಯ್ಯನವರು ಬರೆದ 'ಚೋರಗ್ರಹಣತಂತ್ರ' ಕನ್ನಡದ ಮೊದಲ ಪತ್ತೇದಾರಿ ಕಾದಂಬರಿ. ೧೮೯೫ರಲ್ಲಿ ಶ್ರೀಕಂಠೇಶಗೌಡರ 'ಕನ್ಯಾವಿತಂತು' ಪ್ರಕಟವಾಯಿತು. ರಾಜಶೇಖರ ಚರಿತ್ರೆ, ಸತ್ಯವತೀ ಚರಿತ್ರೆ ಮತ್ತು ಸತ್ಯರಾಜನ ಪೂರ್ವದೇಶದ ಯಾತ್ರೆಗಳು ಎಂಬ ಮೂರು ಕೃತಿಗಳನ್ನು ಬೆನಗಲ್ ರಾಮರಾಯರು ೧೮೯೯ರ ವೇಳೆಗಾಗಲೇ ತೆಲುಗಿನಿಂದ ಕನ್ನಡಕ್ಕೆ ಭಾಷಾಂತರ ಮಾಡಿದ್ದರು. ಜಾನ್‌ಸನ್ನರ ಕಾದಂಬರಿ ರಾಪೆಲಾಸನ್ನು ಕನ್ನಡಕ್ಕೆ ತಂದವರು ಗೋಡಿ ಜೀವಣರಾಯರು.

ಓದುವ ಪ್ರವೃತ್ತಿಯನ್ನು ಜನರಲ್ಲಿ ಹುಟ್ಟುಹಾಕಿ, ಕನ್ನಡ ಜನತೆಗೆ ಬಂಗಾಳಿ ಕೃತಿಗಳನ್ನು ತಂದುಕೊಟ್ಟು, ಜನಪ್ರಿಯತೆ ಗಳಿಸಿದವರು ವೆಂಕಟಾಚಾರ್ಯರು. ಈಶ್ವರಚಂದ್ರ ವಿದ್ಯಾಸಾಗರ, ಬಂಕಿಮಚಂದ್ರ, ರಮೇಶಚಂದ್ರ ದತ್ತ ಮುಂತಾದವರ ಕೃತಿಗಳನ್ನು ಕನ್ನಡಕ್ಕೆ ತರುವ ಕಾರ್ಯವನ್ನು ಇವರು ಸುಮಾರು ಎರಡು ದಶಕಗಳ ಕಾಲ ಮುಂದುವರಿಸಿದರು. ಸಂಸ್ಕೃತದಿಂದ ತುಂಬಿದ ಶುದ್ಧ ಗ್ರಾಂಥಿಕ ಶೈಲಿ ಬಂಗಾಳಿ ಕಾದಂಬರಿಗಳದ್ದು. ಇದೇ ಶೈಲಿಯನ್ನು ವೆಂಕಟಾಚಾರ್ಯರ ಕೃತಿಗಳಲ್ಲೂ ಕಾಣಬಹುದು. 'ಆನಂದ ಮಠ', ವಿಷವೃಕ್ಷ, 'ದೇವೀ ಚೌಧುರಾಣಿ' ಮುಂತಾದ ಇವರ ಕಾದಂಬರಿಗಳು ಇಂದಿಗೂ ಜನಪ್ರಿಯವಾಗಿವೆ. ಬಂಕಿಮಚಂದ್ರರು ದೇಶಾಭಿಮಾನ, ಸಾಹಸಪ್ರವೃತ್ತಿ, ಭಕ್ತಿ ಮುಂತಾದ

ಗುಣಗಳಿಂದ ಕೂಡಿದ ಐತಿಹಾಸಿಕ, ಸಾಮಾಜಿಕ ಕಾದಂಬರಿಗಳನ್ನಲ್ಲದೆ, ಸರ್ ವಾಲ್ಟರ್ ಸ್ಕಾಟ್ ಮತ್ತು ಸರ್ ವಿಲ್ಕಿಕಾಲಿನ್ಸ್‌ರ ಕೃತಿಗಳಿಂದ ಸ್ಫೂರ್ತಿ ಪಡೆದು, ನಮ್ಮ ದೇಶದ ಚಾರಿತ್ರಿಕ ಘಟನೆಗಳ ಆಧಾರದ ಮೇಲೆ ಕಾದಂಬರಿಗಳನ್ನು ರಚಿಸಿದರು.

ಗಳಗನಾಥರೂ ಪ್ರಮುಖ ಕಾದಂಬರಿಕಾರರ ಸಾಲಿಗೆ ಸೇರಿದವರು. ಮರಾಠಿಯಿಂದ ಕನ್ನಡಕ್ಕೆ ಅನುವಾದ ಮಾತ್ರವಲ್ಲದೆ, ಸ್ವತಂತ್ರ ಕೃತಿ ರಚನೆಯಲ್ಲಿಯೂ ತೊಡಗಿದ್ದರು. ಹಲವಾರು ಕಾದಂಬರಿಗಳಿಗೆ ಮರಾಠಿಯಿಂದ ವಸ್ತುವನ್ನು ಆಯ್ದುಕೊಂಡು ತಮಗೆ ಸರಿಕಂಡಂತೆ ಮಾರ್ಪಾಡುಗಳನ್ನು ಮಾಡಿ ಕನ್ನಡಕ್ಕೆ ತಂದಿದ್ದಾರೆ. 'ಕಮಲಕುಮಾರಿ' ಇವರ ಅನುವಾದ ಕಾದಂಬರಿಯಾಗಿದೆ. ವಿಜಯನಗರದ ಇತಿಹಾಸವನ್ನು ವಸ್ತುವಾಗಿ ಮಾಡಿಕೊಂಡು ಗಳಗನಾಥರು ರಚಿಸಿದ ಸ್ವತಂತ್ರ ಮೇರುಕೃತಿ. 'ಮಾಧವ ಕರುಣಾ ವಿಲಾಸ' (೧೯೨೩). ಇವರ ಐತಿಹಾಸಿಕ ಕಾದಂಬರಿ 'ಕನ್ನಡಿಗರ ಕರ್ಮಕಥೆ' ತಾಳೀಕೋಟೆಯ ಯುದ್ಧವನ್ನು ವಸ್ತುವಾಗಿ ಹೊಂದಿದೆ. ಇವರ ಬಹುತೇಕ ಕಾದಂಬರಿಗಳು ಮರಾಠರ ಮತ್ತು ರಜಪೂತರ ಚರಿತ್ರೆಗಳಿಗೆ ಸಂಬಂಧಿಸಿದೆ. ಇವರ ರಚನೆಯಲ್ಲಿ ಬಹುಪಾಲು ಐತಿಹಾಸಿಕ ಕಾದಂಬರಿಗಳಾಗಿದ್ದು 'ಈಶ್ವರೀ ಸೂತ್ರ', 'ಧಾರ್ಮಿಕ ತೇಜ', 'ಕ್ಷಾತ್ರ ತೇಜ' ಮೊದಲಾದ ಇಪ್ಪತ್ತಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ಇವರ ಕಾದಂಬರಿಗಳಲ್ಲಿ ದೇಶಾಭಿಮಾನ, ಕ್ಷಾತ್ರ ತೇಜಸ್ಸು ಮತ್ತು ಧಾರ್ಮಿಕ ಪ್ರಭಾವ ಹಾಸುಹೊಕ್ಕಾಗಿವೆ. ಉತ್ತರ ಕರ್ನಾಟಕದ ಆಡು ಭಾಷೆಯ ಬಳಕೆ ಗಳಗನಾಥರ ಕೃತಿಗಳಲ್ಲಿ ಕಂಡುಬರುತ್ತದೆ.

ನಾಗೇಶರ 'ಈಶಸಂಕಲ್ಪ' ಮತ್ತು 'ಎಚ್ಚಮನಾಯಕ' ಕಾದಂಬರಿಗಳು ಕನ್ನಡನಾಡಿನ ಚರಿತ್ರೆಯನ್ನು ಆಧರಿಸಿದವು. ಕನ್ನಡ ಗರಡಿಯಾಳು ಎಂಬುವರ 'ಕರ್ಮಫಲ ಅಥವಾ ಪ್ರೇಮಫಲ', ಬಿ. ಕೃಷ್ಣಪ್ಪನವರ 'ರಾಯಚೂರು ವಿಜಯ' ಮತ್ತು ಜಿ. ಶ್ರೀನಿವಾಸಶರ್ಮರ 'ನೀಲವಾಸನಾ ಸುಂದರಿ' ಮುಂತಾದವು ಆ ಕಾಲದ ಇತರ ಕೃತಿಗಳು.

ಅದೇ ಕಾಲದಲ್ಲಿ ಪತ್ತೇದಾರಿ ಕಾದಂಬರಿಗಳು ಹುಟ್ಟಿ ಬಂದಿದ್ದು, ಬಿ.ಪ. ಕಾಳೆ, ಬಾಲಸರಸ್ವತಿ, ನಾಗೇಶ ಮುಂತಾದ ಕಾದಂಬರಿಕಾರರು ಬೆಳಕಿಗೆ ಬಂದರು. ಪಾಂಚಕೊಡಿ ಡೇ ಅವರ 'ಹತ್ಯಾಕಾರಿ' ಎಂಬ ಬಂಗಾಳಿ ಕಾದಂಬರಿಯನ್ನು ಆಧರಿಸಿ ಬಾಲ ಸರಸ್ವತಿಯವರು ೧೯೧೧ರಲ್ಲಿ 'ಕುಮುದಿನಿ' ಯನ್ನು ರಚಿಸಿದರು. ಚಿತ್ರಗುಪ್ತನ ದಫ್ತರಗಳು, ಗುರುತು ಕಂಡ ಕಳ್ಳ, ನರಬಲಿ ಮುಂತಾದ ಪತ್ತೇದಾರಿ ಸಾಮಾಜಿಕ ಕಾದಂಬರಿಗಳನ್ನೂ, ಕಂಠಾಭರಣ, ರಾಣಿ ಚೌಧರಾಣಿ ಮೊದಲಾದ ಸಾಮಾಜಿಕ ಕಾದಂಬರಿಗಳನ್ನು ಇವರು ರಚಿಸಿದ್ದಾರೆ.

ಕನ್ನಡ ಕಾದಂಬರಿಗಳ ಆರಂಭ ಕಾಲದಲ್ಲಿ ಸ್ತ್ರೀಯರ ಕೊಡುಗೆ ಸಂದದ್ದು ಸತೀ ಹಿತೈಷಿಣಿ ಮಾಲೆಯ ತಿರುಮಲ್ಲಮ್ಮನವರ ಮೂಲಕ. ವಿದ್ಯುಲ್ಲತಾ ವಿರಾಗಿಣಿ, ನಭ, ಪೂರ್ಣಕಲಾ ಮುಂತಾದವು ಅವರ ಕೃತಿಗಳು. ಸ್ತ್ರೀಯರು ಮತ್ತು ಅವರ ಸಾಮಾಜಿಕ ಸ್ಥಾನಮಾನಗಳ ವಿಷಯದ ಪ್ರಸ್ತಾಪ ಇವರ ಕೃತಿಗಳಲ್ಲಿ ಕಂಡುಬರುತ್ತದೆ.

ಇದೇ ಕಾಲದಲ್ಲಿ ಇಂಗ್ಲಿಷಿನಿಂದ ಹಲವು ಕೃತಿಗಳನ್ನು ಕನ್ನಡಕ್ಕೆ ಭಾಷಾಂತರಿಸಿದರು ಎ.ವಿ. ಶ್ರೀನಿವಾಸಾಚಾರ್ಯ, ಉಲ್ಲಾಳ ಮಂಗೇಶರಾಯರು ಮುಂತಾದವರು.

ಕಾದಂಬರಿಗಳ ಬೆಳವಣಿಗೆಯ ಪಥದಲ್ಲಿ ಕ್ರಮೇಣ ಆಧುನಿಕತೆ ತಲೆದೋರಿ, ಅಲ್ಲಲ್ಲಿ ಒಂದೊಂದು ಕೃತಿ ವಾಸ್ತವಿಕತೆಯತ್ತ ಹೊರಳುತ್ತಿದ್ದುದನ್ನು ಕಾಣಬಹುದು.

ಕಾದಂಬರಿ ಕ್ಷೇತ್ರದಲ್ಲಿ ಎಂ.ಎಸ್. ಪುಟ್ಟಣ್ಣನವರದು ಪ್ರಮುಖ ಹೆಸರು. ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ನಡೆದುವೆಂದು ಹೇಳಲಾದ ಘಟನೆಗಳ ಆಧಾರದ ಮೇಲೆ 'ಮಾಡಿದ್ದುಣ್ಣೋ

ಮಹಾರಾಯ' ಎಂಬ ಕೃತಿಯನ್ನು ೧೯೧೪ರಲ್ಲಿ ರಚಿಸಿದರು. ಇವರ ಕಥನ ವೈಖರಿ, ಪ್ರಾದೇಶಿಕ ಭಾಷೆಯ ಬಳಕೆ, ಸನ್ನಿವೇಶವುಳ್ಳ ಸೃಷ್ಟಿ ಉತ್ಕೃಷ್ಟವಾಗಿದ್ದು ಇದೊಂದು ಗಮನಾರ್ಹ ಕೃತಿಯೆನಿಸಿದೆ. ಇದು ಮಾನವ ಸ್ವಭಾವವನ್ನು ಚಿತ್ರಿಸಹೊರಟ ಮೊದಲ ಕೃತಿಯೂ ಹೌದು. 'ಮುಸುಕು ತೆಗೆಯೆ ಮಾಯಾಂಗನೆ' ಇವರ ಮತ್ತೊಂದು ಮುಖ್ಯ ಕೃತಿ.

೧೯೩೦ರ ನಂತರದ ಕಾದಂಬರಿಗಳ ನಿರ್ಮಾಣದಲ್ಲಿ ಕಾದಂಬರಿಗಳ ರೂಪು ರೇಷೆಗಳು ಸ್ಪಷ್ಟವಾಗಿ ಗೋಚರಿಸುತ್ತವೆ. ವಸ್ತು, ಶೈಲಿ, ತಂತ್ರ ಮತ್ತು ನಿರೂಪಣೆಯಲ್ಲಿ ಆಧುನಿಕತೆಯ ಲಕ್ಷಣಗಳು ಮೂಡತೊಡಗಿದವು. ಈ ಕಾಲಕ್ಕೆ ''ನಿರ್ಮಾಣಶೀಲಯುಗ''ವೆಂದು ಹೆಸರು ಬರಲು ಇದೇ ಕಾರಣ. ೧೯೩೩ರಲ್ಲಿ ಶಿವರಾಮ ಕಾರಂತರ ''ಚೋಮನದುಡಿ'' ಪ್ರಕಟವಾಯಿತು. ಬೆಟಗೇರಿ ಕೃಷ್ಣಶರ್ಮ ('ಆನಂದಕಂದ')ರ 'ಸುದರ್ಶನ' ಮತ್ತು 'ಮಗಳ ಮದುವೆ', ರಂ.ಶ್ರೀ. ಮುಗಳಿಯವರ 'ಬಾಳುರಿ', 'ಅನ್ನ', 'ಕಾರಣ ಪುರುಷ', ಜಡಭರತರ 'ಧರ್ಮಸೆರೆ' ಮುಂತಾದ ಕಾದಂಬರಿಗಳು ಆದರ್ಶವಾದ ತಳಹದಿಯ ಮೇಲೆ ನಿರ್ಮಾಣಗೊಂಡವು. ಅ.ನ. ಕೃಷ್ಣರಾಯರ 'ಉದಯರಾಗ' ಮತ್ತು 'ಜೀವನಯಾತ್ರೆ', ಶ್ರೀರಂಗರ 'ವಿಶ್ವಾಮಿತ್ರ ಸೃಷ್ಟಿ', ೧೯೩೫ರಲ್ಲಿ ಆನಂದಕಂದರ 'ರಾಜಯೋಗಿ' ಮತ್ತು 'ಅಶಾಂತಿಪರ್ವ' ಎಂಬ ಎರಡು ಐತಿಹಾಸಿಕ ಕಾದಂಬರಿಗಳು, ವಿನಾಯಕರ 'ಇಜ್ಜೋಡು' ಅ.ನ.ಕೃ. ರವರ 'ಸಂಧ್ಯಾರಾಗ' ಮುಂತಾದ ಕೃತಿಗಳು ಹೊರಬಂದವು. ಕುವೆಂಪುರವರ ಬೃಹತ್ ಕಾದಂಬರಿ 'ಕಾನೂರು ಸುಬ್ಬಮ್ಮ ಹೆಗ್ಗಡತಿ' ೧೯೩೬ರಲ್ಲಿ ಪ್ರಕಟವಾಯಿತು.

ಕುವೆಂಪು, ಶಿವರಾಮ ಕಾರಂತ, ಅ.ನ.ಕೃ., ಆನಂದಕಂದ, ರಂ.ಶ್ರೀ. ಮುಗುಳಿ, ಕಡೆಂಗೊಡ್ಲು ಶಂಕರಭಟ್ಟ, ಶ್ರೀರಂಗ, ಮಿರ್ಜಿ ಅಣ್ಣಾರಾಯ, ದೇವುಡು ಮೊದಲಾದವರು ನಿರ್ಮಾಣಶೀಲಯುಗದ ಪ್ರಮುಖ ಕಾದಂಬರಿಕಾರರು. ಇವರೆಲ್ಲ ಆಧುನಿಕ ವಿದ್ಯಾಭ್ಯಾಸವನ್ನು ಪಡೆದ ವಿಚಾರಶೀಲರೂ ಹೌದು.

ಶಿವರಾಮ ಕಾರಂತರ 'ದೇವದೂತರು' (೧೯೨೮) ಅವರ ಮೊದಲ ಮಹತ್ವದ ಕೃತಿ. ಅವರ 'ಚೋಮನ ದುಡಿ' ಸಾಮಾಜಿಕ ಕಾಳಜಿಯಿಂದ ಕೂಡಿದ್ದು, ಶೋಷಣೆಗೆ ಒಳಗಾದ ದಲಿತನೊಬ್ಬನ ಬದುಕು ಹೇಗೆ ನಾಶವಾಯಿತು ಎಂಬುದರ ಚಿತ್ರಣ ನೀಡುತ್ತದೆ. ಈ ಕಾದಂಬರಿ ಚೋಮನ ಬದುಕಿನ ಸುತ್ತ ಹೆಣೆಯಲಾದ ಹಸಿವಿನ, ಅನ್ಯಾಯದ, ಅವಮಾನದ ಕಥೆ. ಕಾರಂತರ 'ಮರಳಿ ಮಣ್ಣಿಗೆ' (೧೯೪೨) ಕನ್ನಡದ ಮಹಾಕಾದಂಬರಿಗಳಲ್ಲಿ ಒಂದು ಎನಿಸಿದೆ. ಈ ಕಾದಂಬರಿಯ ಮೂಲಕ ನಿಸರ್ಗ ಕಾದಂಬರಿ ಕ್ಷೇತ್ರಕ್ಕೆ ಆಗಮಿಸಿತು. ಬೆಟ್ಟದ ಜೀವ, ಔದಾರ್ಯದ ಉರುಳಲ್ಲಿ ಮುಗಿದ ಯುದ್ಧ, ಕುಡಿಯರ ಕೂಸು, ಧರ್ಮರಾಯರ ಸಂಸಾರ ಮುಂತಾದ ವೈಶಿಷ್ಟ್ಯಪೂರ್ಣ ಕಾದಂಬರಿಗಳು ಕಾರಂತರ ಲೇಖನಿಯಿಂದ ಮೂಡಿಬಂದವು. 'ಮೈಮನಗಳ ಸುಳಿಯಲ್ಲಿ' ಕಾದಂಬರಿಯಲ್ಲಿ, ಸಂಪೂರ್ಣ ಜೀವನಾನುಭವವನ್ನು ದಕ್ಕಿಸಿಕೊಳ್ಳುವ ಕ್ರಿಯೆಯಲ್ಲಿ ಮೈಮನಗಳು ಶ್ರುತಿಗೊಳ್ಳಬೇಕಾದ ಅಗತ್ಯವನ್ನು ಕಾರಂತರು ಎತ್ತಿ ಹಿಡಿಯುತ್ತಾರೆ. ಇದು ೧೯೯೦ರ ಪಂಪ ಪ್ರಶಸ್ತಿಯನ್ನು ಗಳಿಸಿರುವ ಕೃತಿಯೂ ಹೌದು. ಅವರ 'ಮೂಕಜ್ಜಿಯ ಕನಸುಗಳು' (೧೯೬೮) ಹೊಸ ದೃಷ್ಟಿಯಿಂದ ಕೂಡಿದ ಮಹತ್ವದ ಕೃತಿ. ೧೯೭೮ ಜ್ಞಾನಪೀಠ ಪ್ರಶಸ್ತಿ ಕಾರಂತರ ಈ ಕೃತಿಗೆ ಲಭಿಸಿತು. ಸಾವಿರಾರು ವರ್ಷಗಳ ಮಾನವ ಚರಿತ್ರೆಯನ್ನು ಹಳ್ಳಿಯ ಅನಕ್ಷರಸ್ಥ ಆದರೆ ವಿವೇಕಶಾಲಿ ಮುದುಕಿಯೊಬ್ಬಳು ಕಾಣುವ ದೃಶ್ಯಗಳ ಮೂಲಕ ಕಾಣಿಸುವ ಮತ್ತು ಶೋಧಿಸುವ ಯತ್ನ ಈ ಕಾದಂಬರಿಯದು. 'ಅಳಿದಮೇಲೆ' ಎಂಬ ಕಾದಂಬರಿ ತಂತ್ರ ಮತ್ತು ಹೊಸ ಆಲೋಚನೆಯಿಂದಾಗಿ ಮಹತ್ವ ಪಡೆಯುತ್ತದೆ. ಬದುಕನ್ನು ನೋಡುವ ಸೂಕ್ಷ್ಮ ದೃಷ್ಟಿ ಆಳವಾದ ಅನುಭವ, ಪಾತ್ರಗಳ

ವೈವಿಧ್ಯ, ಸಹಜ ಶೈಲಿ, ಸ್ವತಂತ್ರ ಮನೋವೃತ್ತಿ ಇವು ಕಾರಂತರ ಕಾದಂಬರಿಗಳಲ್ಲಿ ಹಾಸುಹೊಕ್ಕಾಗಿವೆ. ೧೯೪೩ರಲ್ಲಿ ಪ್ರಕಟವಾದ 'ಬೆಟ್ಟದ ಜೀವ' ಆತ್ಮ ಚರಿತ್ರೆ ಕಥನದ ತಂತ್ರವನ್ನು ಬಳಸಿಕೊಂಡಿರುವ ಕೃತಿ. ಇದು ಈ ತಂತ್ರವನ್ನು ಬಳಸಿಕೊಂಡು ಮೊದಲ ಕನ್ನಡ ಕಾದಂಬರಿಯೆಂಬ ಅಭಿಪ್ರಾಯವೂ ಇದೆ. ಕಾರಂತರು ನವೋದಯ ಯುಗದ ಅವಧಿಯಲ್ಲಿ ಬರವಣಿಗೆ ಪ್ರಾರಂಭಿಸಿವರಾದರೂ, ಅವರ ಸಮಕಾಲೀನರಂತೆ ಭಾರತೀಯ ಸಂಸ್ಕೃತಿ, ಪ್ರಾಚೀನ ಸಂಸ್ಕೃತಿಗಳನ್ನು ಕಾರಂತರು ವೈಭವೀಕರಿಸುವುದಿಲ್ಲ. ಅಷ್ಟೇ ಅಲ್ಲ, ಇಂಗ್ಲಿಷ್ ಬರಹಗಾರರ ಪ್ರಭಾವದಿಂದಲೂ ಅವರು ಮುಕ್ತರು. ಈ ಅಂಶವನ್ನು ಗುರುತಿಸುವ ಪ್ರೊ. ಎಲ್.ಎಸ್. ಶೇಷಗಿರಿರಾವ್ "ಕಾರಂತರು ನವೋದಯ ಯುಗಕ್ಕೆ ಸೇರಿದವರು, ಆದರೆ ಅದನ್ನು ಮೀರಿದವರು" ಎನ್ನುತ್ತಾರೆ.

ಕುವೆಂಪುರವರ 'ಕಾನೂರು ಸುಬ್ಬಮ್ಮ ಹೆಗ್ಗಡತಿ' (೧೯೩೬) ಮತ್ತು 'ಮಲೆಗಳಲ್ಲಿ ಮದುಮಗಳು' ಕನ್ನಡದ ಎರಡು ಮಹಾ ಕಾದಂಬರಿಗಳು. ಭಾಷೆಯ ಬಳಕೆಯ ದೃಷ್ಟಿಯಿಂದ, ಇವು ಕನ್ನಡ ಗದ್ಯ ಶೈಲಿಯ ಶ್ರೀಮಂತ ಪ್ರತಿನಿಧಿಗಳೆನಿಸಿವೆ. ಮೊದಲು ಎರಡು ಭಾಗಗಳಲ್ಲಿ ಹೊರಬಂದ ಗೋಕಾಕರ 'ಇಜ್ಜೋಡು', ನಂತರ 'ಸಮರಸವೇ ಜೀವನ' ಎಂಬ ಬೃಹತ್ ಕಾದಂಬರಿ ಹೊರಬಂದಿತು. ಇದು ಗ್ರಾಂಥಿಕ ಶೈಲಿ ಮತ್ತು ನೀರಸ ವಿವರಣೆಗಳಿಂದ ಕೂಡಿದ ಕೃತಿಯಾದರೂ, ಕಾಲು ಶತಮಾನದ ಜೀವನ ಸಮಗ್ರ ಚಿತ್ರಣ ಇದರಲ್ಲಿ ಮೂಡಿಬಂದಿದೆ. ತಾಂತ್ರಿಕ ದೃಷ್ಟಿಯಿಂದ ಸಾಂಪ್ರದಾಯಿಕವಾಗಿದ್ದು ಕೊಂಡೇ, ವಾಸ್ತವತೆ ಮನೋವಿಶ್ಲೇಷಣೆಯನ್ನೂ, ಆಧುನಿಕತೆಯ ಅಂಶಗಳನ್ನೂ ಮೈಗೂಡಿಸಿಕೊಂಡಿದೆ.

ತಮ್ಮ 'ಸಂಧ್ಯಾರಾಗ' ಕಾದಂಬರಿಯಿಂದ ಖ್ಯಾತರಾದ ಅ.ನ.ಕೃ. ಕನ್ನಡದಲ್ಲಿ ಅತಿ ಹೆಚ್ಚು ಕಾದಂಬರಿಗಳನ್ನು ರಚಿಸಿ 'ಕಾದಂಬರಿ ಸಾರ್ವಭೌಮ' ಎಂಬ ಮನ್ನಣೆಗೆ ಪಾತ್ರರಾದವರು. ಹೆಚ್ಚಿನ ಸಂಖ್ಯೆಯ ಕಾದಂಬರಿಗಳನ್ನು ರಚಿಸಿದ್ದರೂ, ಇವರ ಕಾದಂಬರಿಗಳಲ್ಲಿ ಆಳವಾದ ಅನುಭವದ ಅಭಾವವಿದೆ. ವಿಚಾರಗಳು ಭಾವಪರವಶತೆಯಲ್ಲಿ ಕಳೆದು ಹೋಗುತ್ತವೆ. ಪಾತ್ರಗಳಿಗೆ ಗುರಿಯಿಲ್ಲದಂತಾಗಿದೆ. ತಮ್ಮ ಮೊದಲ ಕಾದಂಬರಿ 'ಜೀವನಯಾತ್ರೆ'ಯಲ್ಲಿ ಕಾಮ ಮತ್ತು ನೀತಿಯ ವಸ್ತುವನ್ನು ಆಯ್ಕೆ ಮಾಡಿಕೊಂಡು ದಿಟ್ಟತನ ತೋರಿದವರು ಅ.ನ.ಕೃ. 'ಸಂಧ್ಯಾರಾಗ' ಅವರ ಕಾದಂಬರಿಗಳ ಪೈಕಿ ಅತ್ಯುತ್ತಮವಾದುದೆಂದು ವಿಮರ್ಶಕರ ಅಭಿಪ್ರಾಯ. ಅವರ 'ನಟಸಾರ್ವಭೌಮ' ಕಲಾವಿದನೊಬ್ಬನ ಜೀವನವನ್ನೂ ಚಿತ್ರಿಸುವ ಬೃಹತ್ ಕಾದಂಬರಿ.

ಸರಳವಾದ ಆಕರ್ಷಕ ಶೈಲಿ, ಕನ್ನಡಾಭಿಮಾನ, ಸಮಾಜದ ಕುಂದು ಕೊರತೆಗಳ ಬಗ್ಗೆ ಕಾಳಜಿ– ಈ ಎಲ್ಲ ಕಾರಣಗಳಿಂದ ಜನಪ್ರಿಯರಾಗಿ ಇವರ ಕೃತಿಗಳ ಸಂಖ್ಯೆ ಬೆಳೆದರೂ, ಗುಣದ ದೃಷ್ಟಿಯಿಂದ ಇವರ ಕಾದಂಬರಿಗಳು ಎತ್ತರಕ್ಕೆ ಏರಲಿಲ್ಲ.

ಪ್ರಗತಿಶೀಲ ಪಂಥವನ್ನು ಅನುಸರಿಸಿದವರಲ್ಲಿ ತ.ರಾ. ಸುಬ್ಬರಾಯರು, ಬಸವರಾಜ ಕಟ್ಟೀಮನಿ, ನಿರಂಜನ ಮತ್ತು 'ಚದುರಂಗ' ಕಾವ್ಯನಾಮದ ಸುಬ್ರಮಣ್ಯರಾಜ ಅರಸ್ ಪ್ರಮುಖರು. ೫೦ರ ದಶಕದಲ್ಲಿ 'ಮುಂಜಾವಿನಿಂದ ಮುಂಜಾವು' (೧೯೫೦), 'ಜ್ವಾಲಾಮುಖಿಯ ಮೇಲೆ' (೧೯೫೧), 'ಪುರುಷಾವತಾರ' (೧೯೫೧), 'ಚಿರಸ್ಮರಣೆ' ಮುಂತಾದ ಪ್ರಗತಿಶೀಲ ಕಾದಂಬರಿಗಳು ಹುಟ್ಟಿದವು. ಝೋಲಾ, ಗಾರ್ಕಿಯಂಥವರನ್ನು ಮಾದರಿಗಳನ್ನಾಗಿ ಹೊಂದಿದ ಪ್ರಗತಿಶೀಲರು, ಭಿನ್ನವಾಗಿ ಬರೆಯತೊಡಗಿದರು. ಜೀವನದ ದುಃಖ ಬೀಳುಗಳನ್ನು ರೊಚ್ಚು ತುಂಬಿದ ಶೈಲಿಯಲ್ಲಿ ತ.ರಾ.ಸು. ಚಿತ್ರಿಸಿದರು. ಪ್ರಜ್ಞಾ ಪ್ರವಾಹ ತಂತ್ರವನ್ನು ಮೊದಲ ಬಾರಿಗೆ ಕನ್ನಡದಲ್ಲಿ ಬಳಸಿದವರು ತ.ರಾ.ಸು.

ರೋಷತುಂಬಿದ ಧಾಟಿಯಲ್ಲಿ ಹಲವಾರು ಎಡೆಗಳಲ್ಲಿ ಅನುಭವವನ್ನು ಹಸಿಹಸಿಯಾಗಿ ಚಿತ್ರಿಸಿದವರು ಬಸವರಾಜ ಕಟ್ಟೀಮನಿ. 'ಬೀದಿಯಲ್ಲಿ ಬಿದ್ದವಳು', 'ಮೋಹದ ಬಲೆಯಲ್ಲಿ', 'ಜರತಾರಿ ಜಗದ್ಗುರು' ಮುಂತಾದ ಅವರ ಕಾದಂಬರಿಗಳು ಸಮಾಜದ ಅನ್ಯಾಯಗಳನ್ನು ತೀಕ್ಷ್ಣವಾಗಿ ಚಿತ್ರಿಸುತ್ತವೆ. 'ನೀ ನನ್ನ ಮುಟ್ಟಬೇಡ', 'ಜನಿವಾರ ಶಿವದಾರ' ಇವುಗಳಲ್ಲಿ ಜಾತೀಯತೆಯ ಸಮಸ್ಯೆಯನ್ನು ವಸ್ತುವಾಗಿ ಆಯ್ದುಕೊಂಡಿದ್ದಾರೆ. ಪ್ರಗತಿಶೀಲರ ಗುಂಪಿನಿಂದ ರಚಿತವಾದ ಕಾದಂಬರಿಗಳಲ್ಲಿ ಪ್ರಗತಿಶೀಲತೆ ಘೋಷಿತ ಪ್ರಣಾಲಿಯಾಯಿತೆ ವಿನಃ ಅನುಭವ ಸಾಮಗ್ರಿಯಾಗಿ ಮೂಡಿಬರಲಿಲ್ಲ. ಚದುರಂಗರು ಇತ್ತೀಚೆಗೆ ಸಂದರ್ಶನವೊಂದರಲ್ಲಿ ಹೇಳಿರುವಂತೆ, 'ಪ್ರಗತಿಶೀಲರು ಸಂಕೀರ್ಣ ಬದುಕನ್ನು ಒಟ್ಟಾರೆಯಾಗಿ ಗ್ರಹಿಸದೆ ಹೋದರು. ಬಿಳುಪನ್ನು ಬಿಳುಪಾಗಿಯೂ, ಕಪ್ಪನ್ನೂ ಕಪ್ಪಾಗಿಯೂ ಚಿತ್ರಿಸುತ್ತ ನಡೆದರು. ಹೀಗಾಗಿ ಕೊಂಚಮಟ್ಟದ ಉತ್ತಮ ಸಾಹಿತ್ಯ ಹುಟ್ಟಿಕೊಂಡರೂ ಶ್ರೇಷ್ಠ ಸಾಹಿತ್ಯ ಮೂಡಲಿಲ್ಲ. ನಿರಂಜನರು ಮಾತ್ರ ಇದಕ್ಕೆ ಕೊಂಚ ಅಪವಾದವೆನಿಸುತ್ತಾರೆ. ನಿರ್ದಿಷ್ಟ ಸಾಮಾಜಿಕ ಧೋರಣೆ, ವರ್ಗ ಸಂಘರ್ಷದ ಪ್ರಜ್ಞೆ ನಿರಂಜನರ ಸಾಹಿತ್ಯದ ಬೆನ್ನೆಲುಬು. ಆದ್ದರಿಂದಲೇ ಕೆಳವರ್ಗದ ಸಂಘಟನೆಯ ಹೋರಾಟ ಕುರಿತು ಅವರ 'ಚಿರಸ್ಮರಣೆ' ಕನ್ನಡ ಕಾದಂಬರಿ ಚರಿತ್ರೆಯಲ್ಲಿ ಮುಖ್ಯ ಸ್ಥಾನ ಪಡೆಯುತ್ತದೆ. ಕಲಾಕೃತಿಯಾಗಿ ಇದು ಮಹತ್ವವನ್ನು ಪಡೆಯದೇ ಹೋದರೂ ಚಾರಿತ್ರಿಕ ಮಹತ್ವ ಇದಕ್ಕಿದೆ. ಕಟ್ಟೀಮನಿಯವರ 'ಜ್ವಾಲಾಮುಖಿಯ ಮೇಲೆ' ಕಾದಂಬರಿಯಲ್ಲಿ ಬರುವ ಶೋಷಕರ ಮತ್ತು ಶೋಷಣೆಗೆ ಒಳಗಾದವರ ಬದುಕಿನ ಚಿತ್ರಣ, ಲೇಖಕರ ಜೀವನಾನುಭವದ ನೆಲೆಯಿಂದಲೇ ಹೊರಟದ್ದು 'ಚಿರಸ್ಮರಣೆ'ಯಲ್ಲಿ ಬರುವ ಜೀವನ ಚಿತ್ರಣ ಇನ್ನೂ ಉತ್ತಮ ಮಟ್ಟದ್ದಾಗಿದ್ದು ವರ್ಗ ಸಂಬಂಧಗಳು ಕೃತಿಯಲ್ಲಿ ಮುಖಾಮುಖಿಯಾಗುವುದನ್ನು ಕಾಣಬಹುದು. ಕ್ರಾಂತಿಕಾರಿ ಹೋರಾಟವೊಂದರ ನಿಕಟ ಪರಿಚಯ ಹೊಂದಿದ್ದು, ಅಲ್ಲಿ ದಕ್ಕಿದ ನೇರ ಅನುಭವಗಳನ್ನು 'ಚಿರಸ್ಮರಣೆ'ಯ ರಚನೆಯಲ್ಲಿ ಬಳಸಿಕೊಂಡ ಅಪರೂಪದ ಲೇಖಕರು ನಿರಂಜನ. ಈ ಕಾರಣಕ್ಕಾಗಿ 'ಚಿರಸ್ಮರಣೆ' ಬಂಡಾಯ ಸಾಹಿತ್ಯದ ಅತ್ಯುತ್ತಮ ಪ್ರತಿನಿಧಿಯೆಂಬ ಶ್ಲಾಘನೆಗೆ ಗುರಿಯಾಗಿದೆ. 'ದೂರದ ನಕ್ಷತ್ರ', 'ರಂಗಮ್ಮನ ವಠಾರ', 'ಅಭಯಾಶ್ರಮ' ಮುಂತಾದವು ಅವರ ಇತರ ಕಾದಂಬರಿಗಳು.

ಚದುರಂಗರನ್ನು ಪ್ರಗತಿಶೀಲರೆಂದು ಗುರುತಿಸಲಾಗಿದ್ದರೂ, ಮಾಸ್ತಿಯವರ ದಟ್ಟ ಪ್ರಭಾವವನ್ನು ಅವರ ಬರಹಗಳಲ್ಲಿ ಕಾಣಬಹುದಾಗಿದೆ. ಚದುರಂಗರು ನವೋದಯ ಪರಂಪರೆಯ ಹಿಡಿತಕ್ಕೆ ಸಿಕ್ಕವರೂ ಆಗಿದ್ದಾರೆ. ಕನ್ನಡ ಕಾದಂಬರಿ ಪರಂಪಗೆಯ ಎಲ್ಲ ಮುಖ್ಯ ಪ್ರವಾಹಗಳೊಂದಿಗೂ ನವೋದಯ, ಪ್ರಗತಿಶೀಲ, ನವ್ಯ ಮತ್ತು ನವ್ಯೋತ್ತರ ಚದುರಂಗರು ಸಂಬಂಧ ಹೊಂದಿದ್ದಾರೆ. ಮೂರೇ ಮೂರು ಕಾದಂಬರಿಗಳನ್ನು ಬರೆದಿದ್ದರೂ ನಮ್ಮ ಅತ್ಯಂತ ಪ್ರಾತಿನಿಧಿಕ ಕಾದಂಬರಿಕಾರರೆನಿಸಿದ್ದಾರೆ. 'ಸರ್ವಮಂಗಳಾ' (೧೯೫೦), ಉಯ್ಯಾಲೆ (೧೯೬೦), ಮತ್ತು ವೈಶಾಖ (೧೯೮೧) ಇವರ ಕಾದಂಬರಿಗಳು. ಅವರ ಮೊದಲ ಕಾದಂಬರಿ 'ಸರ್ವಮಂಗಳಾ' ನವೋದಯದ ಆದರ್ಶವಾದ ರಮ್ಯತಾವಾದಗಳನ್ನೂ ಮೈಗೂಡಿಸಿಕೊಂಡಿರುವ ಪ್ರೇಮದ ಕಥೆ. ಕೌಟುಂಬಿಕ ಸಂಬಂಧಗಳು ಮತ್ತು ಸಮುದಾಯ ಜೀವನದ ಚೌಕಟ್ಟಿನಲ್ಲಿ ವಾಸ್ತವ ಪ್ರಜ್ಞೆಯ ನೆಲೆಯಿಂದ ಕಥೆ ಹೆಣೆಯಲಾಗಿದೆ. 'ಉಯ್ಯಾಲೆ' ಕಾದಂಬರಿಯಲ್ಲಿ ವಿವಾಹ ಮತ್ತು ಪ್ರೇಮಗಳ ನಡುವಿನ ವಿರೋಧ, ಇವೆರಡರ ನಡುವೆ ಪಾತ್ರಗಳ ಮನಸ್ಸಿನ ಹೊಯ್ದಾಟ ಚಿತ್ರಿತವಾಗಿದೆ. ಇದು ಪ್ರಗತಿಶೀಲರಿಗೆಲ್ಲ ಪ್ರಿಯವಾದ ವಸ್ತುವೂ ಹೌದು. 'ವೈಶಾಖ'ದಲ್ಲಿ ಸಂಕೀರ್ಣ ಗ್ರಾಮೀಣ ಸಮಾಜವೊಂದರಲ್ಲಿ ಮುಗ್ಧರಿಗೆ ಏರ್ಪಟ್ಟ ಸಂಕಟಗಳ ಚಿತ್ರಣವಿದೆ. ಗಂಡು-ಹೆಣ್ಣಿನ ಸಂಬಂಧದ ವಿವಿಧ ಪ್ರಕಾರಗಳು

'ವೈಶಾಖ'ದಲ್ಲಿ ಕಾಣಸಿಗುತ್ತವೆ. ಇವೆಲ್ಲದರ ನಡುವೆ ದಲಿತನೊಬ್ಬನ ಪ್ರಜ್ಞೆಯ ವಿಕಾಸವೂ, ಮುಗ್ಧತೆಯ ಶೋಧವೂ ಈ ಕಾದಂಬರಿಯಲ್ಲಿ ನಡೆಯುತ್ತವೆ. ತಂತ್ರ, ಭಾಷೆ ಮತ್ತು ಸಂಕೇತಗಳ ಬಳಕೆಯ ದೃಷ್ಟಿಯಿಂದಲೂ ಈ ಕೃತಿ ವಿಶಿಷ್ಟವೆನಿಸಿದೆ.

ಶ್ರೀರಂಗರ 'ವಿಶ್ವಾಮಿತ್ರ ಸೃಷ್ಟಿ ಮತ್ತು ಪುರುಷಾರ್ಥ' ಎರಡು ಗಮನಾರ್ಹ ಕಾದಂಬರಿಗಳು. ೩೦ರ ದಶಕದಲ್ಲಿಯೇ ಶ್ರೀರಂಗರು ಅನನ್ಯ (the outside) ವಸ್ತುವಿನ ಬಗ್ಗೆ ಬರೆದರು. ಪ್ರಜ್ಞೆಯ ಕೇಂದ್ರವೊಂದರಲ್ಲಿ ಓದುಗನನ್ನೂ ತಂದು ನಿಲ್ಲಿಸಿದ ಮೊದಲ ಕಾದಂಬರಿಯಿದು. 'ವಿಶ್ವಾಮಿತ್ರ ಸೃಷ್ಟಿ'ಯಲ್ಲಿ ಶ್ರೀರಂಗರು ಪ್ರಜ್ಞಾಪ್ರವಾಹ ತಂತ್ರವನ್ನು ಬಳಸಿ, ವಿಶಿಷ್ಟ ಕೃತಿಯೊಂದನ್ನು ನೀಡಿದ್ದಾರೆ. ದೇವುಡುರವರ 'ಅಂತರಂಗ' ಮಾನಸಿಕ ಹೊಯ್ದಾಟಗಳನ್ನು ಚಿತ್ರಿಸುವ ಪ್ರಥಮ ಮನೋವೈಜ್ಞಾನಿಕ ಕೃತಿಯಾಗಿದೆ. ವೇದಕಾಲದ ವಿಶ್ವಾಮಿತ್ರನ ಕಥೆಯನ್ನು ಹೇಳುವ ಇವರ 'ಮಹಾಬ್ರಾಹ್ಮಣ' ಒಂದು ಶ್ರೇಷ್ಠ ಕೃತಿ. 'ಮಯೂರ' (೧೯೨೮) ಇವರ ಐತಿಹಾಸಿಕ ಕಾದಂಬರಿ. ಮಿರ್ಜಿ ಅಣ್ಣಾರಾಯರ 'ನಿಸರ್ಗ' ಕೃತಿಯಲ್ಲಿ ಹೆಣ್ಣುಗಂಡುಗಳ ವಿಫಲ ಪ್ರಣಯದ ದುರಂತ, ಆಡುಮಾತಿನ ಭಾಷೆಯಲ್ಲಿ ಸುಂದರವಾಗಿ ಮೂಡಿದೆ.

ಧೂಮಕೇತು, ದೇವತಾಮನುಷ್ಯ ಮತ್ತು ಲೋಕದ ಕಣ್ಣು ಇವು ಕಡೆಂಗೋಡ್ಲು ಶಂಕರಭಟ್ಟರ ಸಾಮಾಜಿಕ ಕಾದಂಬರಿಗಳು. ಬಾ.ಕೃ. ಲಕ್ಷ್ಮೀಶ್ವರರ 'ಗ್ರಾಮಪಂಚಾನನ' ಕಾದಂಬರಿಯಲ್ಲಿ ಹಳ್ಳಿಯ ಜನರ ಜೀವನಚಿತ್ರವನ್ನು ಪ್ರಥಮ ಬಾರಿಗೆ ಕಾಣಬಹುದು. ನಾ. ಕಸ್ತೂರಿಯವರ ಗಾಳಿಗೋಪುರ 'ಚಕ್ರದೃಷ್ಟಿ', 'ಶಂಖವಾದ್ಯ', 'ಚಂಗೂಲಿ ಚಲುವ' ಮುಂತಾದ ಕಾದಂಬರಿಗಳಲ್ಲಿನ ತಂತ್ರ ಮತ್ತು ವಿಡಂಬನೆ ಗಮನಾರ್ಹವಾದುವು.

ಸ್ವಾತಂತ್ರ್ಯಾ ನಂತರದ ಕಾಲು ಶತಮಾನದ ಅವಧಿಯಲ್ಲಿ ಕಾದಂಬರಿಗಳ ರಚನೆ ಗಣನೀಯವಾಗಿದೆ. ಸ್ವಾತಂತ್ರ್ಯ ಪೂರ್ವ ಅವಧಿಯ ಹಲವು ಪ್ರಮುಖ ಬರಹಗಾರರು ಸ್ವಾತಂತ್ರ್ಯ ನಂತರವೂ ಸತ್ವಯುತ ಕಾದಂಬರಿಗಳನ್ನು ರಚಿಸುತ್ತ ಬಂದಿದ್ದಾರೆ. ಅವರೊಂದಿಗೆ ಹಲವು ಮಂದಿ ಹೊಸ ಕಾದಂಬರಿಕಾರರು ಉದಿಸಿ ಬಂದಿದ್ದಾರೆ. ಕಾದಂಬರಿಗಳ ಹರಹು ವಿಸ್ತಾರಗೊಂಡಿದ್ದು, ವಸ್ತು, ಶೈಲಿ, ತಂತ್ರ ಮತ್ತು ನಿರೂಪಣೆಗಳಲ್ಲಿ ವೈವಿಧ್ಯ ಉಂಟಾಗಿದೆ.

ದೇಶದಲ್ಲಿ ನಡೆದ ರಾಜಕೀಯ ಹೋರಾಟ ಮತ್ತು ಸ್ವಾತಂತ್ರ್ಯ ಚಳವಳಿಗಳು ಹಲವು ಕಾದಂಬರಿಗಳಿಗೆ ವಸ್ತುವಾಗಿ ಒದಗಿಬಂದಿದೆ. ರಾಜಕೀಯ ಮತ್ತು ಶೈಕ್ಷಣಿಕ ಕ್ಷೇತ್ರಗಳಲ್ಲಿ ನಡೆದ ಪ್ರಯೋಗಗಳ, ಸೋಲುಗೆಲುವುಗಳ ಚಿತ್ರಣವನ್ನು ಶಿವರಾಮ ಕಾರಂತರ 'ಔದಾರ್ಯದ ಉರುಳಲ್ಲಿ' ಎಂಬ ಕೃತಿಯಲ್ಲಿ ಕಾಣಬಹುದಾಗಿದೆ. ಮಿರ್ಜಿ ಅಣ್ಣಾರಾಯರ 'ಪ್ರಗತಿಕಾರ', 'ರಾಷ್ಟ್ರ ಪುರುಷ', ಬಸವರಾಜ ಕಟ್ಟೀಮನಿಯವರ 'ಮಾಡಿ ಮಡಿದವರು', 'ತ.ರಾ.ಸು. ರವರ 'ರಕ್ತತರ್ಪಣ', ನಿರಂಜನರ 'ಚಿರಸ್ಮರಣೆ' ಮೊದಲಾದ ಕಾದಂಬರಿಗಳು ಸ್ವಾತಂತ್ರ್ಯ ಚಳವಳಿಯ ಚಿತ್ರವನ್ನು ನೀಡುತ್ತವೆ. ಮುಂಬಯಿಯಲ್ಲಿ ೧೯೪೨ರ ಆಗಸ್ಟ್ ತಿಂಗಳಲ್ಲಿ ನಡೆದ ಚಳವಳಿಯ ಹಿನ್ನೆಲೆಯಲ್ಲಿ ವಿ.ಎಂ. ಇನಾಂದಾರರ 'ಮೂರಾಬಟ್ಟೆ' ಕಾದಂಬರಿ ರಚಿತವಾಗಿದೆ. ಬೆಟಗೇರಿ ಕೃಷ್ಣಶರ್ಮರ 'ಸುದರ್ಶನ' (೧೯೩೩) ಗಾಂಧೀವಾದದ ವಸ್ತುವನ್ನು ಹೊಂದಿದ್ದು ಗಾಂಧಿಯ ಆದರ್ಶಗಳನ್ನು ವೈಭವೀಕರಿಸಿದ ಮೊದಲ ಕಾದಂಬರಿಯೆನಿಸಿದೆ.

ಬಿ. ವೆಂಕಟಾಚಾರ್ಯರು ಮತ್ತು ಗಳಗನಾಥರ ನಂತರ ಕನ್ನಡದಲ್ಲಿ ಐತಿಹಾಸಿಕ ಕಾದಂಬರಿಗಳ ರಚನೆ ಹೆಚ್ಚಾಗಿ ನಡೆಯಲಿಲ್ಲ. ಹಾಗಿದ್ದರೂ, ಇತಿಹಾಸವನ್ನು ಆಧರಿಸಿದ ಹಲವು ಮುಖ್ಯ ಕೃತಿಗಳು ಈ ಸಮಯದಲ್ಲಿ ಮೂಡಿಬಂದಿದ್ದು, ಮಾಸ್ತಿಯವರ 'ಚನ್ನಬಸವನಾಯಕ' (೧೯೫೦) 'ಚಿಕವೀರ

ರಾಜೇಂದ್ರ' (೧೯೫೬) ಮಹತ್ವದ ಕೃತಿಗಳ ಸಾಲಿಗೆ ಸೇರುತ್ತದೆ. ಗತ ಇತಿಹಾಸದ ವೈಭವವನ್ನು ಪುನರ್ ಸೃಷ್ಟಿಸುವ ಪ್ರಯತ್ನದಲ್ಲಿ ತೊಡಗದೆ, ಮಾಸ್ತಿಯವರ ಅವನತಿಯ ಪ್ರಕ್ರಿಯೆಗೆ ಕಾರಣಗಳಾದ ಶಕ್ತಿಗಳ ವಿಶ್ಲೇಷಣೆ ನಡೆಸುತ್ತಾರೆ. ಚರಿತ್ರೆಯನ್ನು ಅರ್ಥೈಸುವ ಪರಿಯಿಂದಾಗಿ ಮಾಸ್ತಿಯವರ ಈ ಎರಡು ಐತಿಹಾಸಿಕ ಕಾದಂಬರಿಗಳು ವಿಶಿಷ್ಟ ಸ್ಥಾನ ಪಡೆಯುತ್ತವೆ. ತ.ರಾ. ಸುಬ್ಬರಾಯರ ಮೊದಲ ಕಾದಂಬರಿ 'ಹಂಸಗೀತೆ' ಆ ಕಾಲದ ಸಂಗೀತಗಾರನೊಬ್ಬನ ಕಥೆ. 'ಕಂಬನಿಯ ಕುಯಿಲು', 'ರಕ್ತ ರಾತ್ರಿ', 'ತಿರುಗುಬಾಣ' ಮುಂತಾದವು ಚಿತ್ರದುರ್ಗದ ಇತಿಹಾಸವನ್ನು ಆಧರಿಸಿ ಬರೆದ ಕಾದಂಬರಿಗಳಾಗಿದ್ದು, ವೀರರಸಪ್ರಧಾನ ಕೃತಿಗಳಾಗಿವೆ. ಇವರ 'ದುರ್ಗಾಸ್ತಮಾನ' ಕಾದಂಬರಿ ಚಿತ್ರದುರ್ಗದ ಕೊನೆಯ ನಾಯಕ ಮದಕರಿ ನಾಯಕನ ಜೀವನವನ್ನು ಕುರಿತ ಐತಿಹಾಸಿಕ ಕಾದಂಬರಿ. ಐತಿಹಾಸಿಕ ಕಾದಂಬರಿಗಳಲ್ಲೇ ಇದೊಂದು ಮೇರುಕೃತಿಯೆನಿಸಿದೆ. 'ಶಿಲ್ಪಶ್ರೀ' ಚಾವುಂಡರಾಯನ ಜೀವನವನ್ನು ಆಧರಿಸಿ ಬರೆದಂತಹ ಕಾದಂಬರಿಯಾಗಿದೆ. ಕೆ.ವಿ. ಅಯ್ಯರ್‌ರವರ 'ಶಾಂತಲಾ' (೧೦೫೪) ಹೊಯ್ಸಳ ವಿಷ್ಣುವರ್ಧನ ರಾಣಿ ಶಾಂತಲಾದೇವಿಯ ಜೀವನವನ್ನು ಚಿತ್ರಿಸುತ್ತಲೇ, ಇನ್ನೊಂದು ಮಗ್ಗುಲಲ್ಲಿ ಹೊಯ್ಸಳ ರಾಜ್ಯದ ಆಗುಹೋಗುಗಳನ್ನೂ ಚಿತ್ರಿಸುತ್ತದೆ. ಇತಿಹಾಸ ವಸ್ತುವಿನ ರೂಪದಲ್ಲಿ ಕಾದಂಬರಿಯನ್ನು ಪ್ರವೇಶಿಸಿದ್ದರೂ, ಅಯ್ಯರ್‌ರವರ ಕಲಾವಂತಿಕೆಯಿಂದಾಗಿ ವಿಶಿಷ್ಟ ರೀತಿಯ ಅಭಿವ್ಯಕ್ತಿ ಪಡೆಯುತ್ತದೆ. ಇತಿಹಾಸದ ಆಚೆಗಿನ ಸತ್ಯವನ್ನೂ ಎತ್ತಿ ಹಿಡಿಯುತ್ತದೆ. ಟಿಪ್ಪು ಸುಲ್ತಾನನ ಕಾಲದ ಚರಿತ್ರೆಯನ್ನು ಹೇಳುವ ವೀರಕೇಸರಿ ಸೀತಾರಾಮಶಾಸ್ತ್ರಿಗಳ 'ದೌಲತ್' ಎಂಬ ಬೃಹತ್ ಕಾದಂಬರಿ ವೀರಶೃಂಗಾರ ರಸಗಳಿದ ಕೂಡಿದ್ದು, ಮೂರು ಭಾಗಗಳಲ್ಲಿ ಪ್ರಕಟವಾಗಿದೆ. ಶ್ರೀನಿವಾಸರಾವ್ ಕೊರಟಿ ರಚಿಸಿದ ಹಲವಾರು ಕೃತಿಗಳ ಪೈಕಿ 'ಪರಮೇಶ್ವರ ಪುಲಿಕೇಶಿ' ಜನಪ್ರಿಯತೆ ಗಳಿಸಿದೆ. ಬಿ. ಪುಟ್ಟಸ್ವಾಮಯ್ಯನವರ 'ಕ್ರಾಂತಿಕಲ್ಯಾಣ' ಮತ್ತು ಸಮೇತನಹಳ್ಳಿ ರಾಮರಾಯರ 'ಸವತಿ ಗಂಧವಾರಣೆ' ಇತರ ಐತಿಹಾಸಿಕ ಕಾದಂಬರಿಗಳು.

ಪೌರಾಣಿಕ ಕಾದಂಬರಿಗಳನ್ನು ಕನ್ನಡಕ್ಕೆ ಕೊಟ್ಟವರಲ್ಲಿ ದೇವುಡು ಅಗ್ರ ಗಣ್ಯರು. ಇವರ 'ಮಹಾಬ್ರಾಹ್ಮಣ', 'ಮಹಾಕ್ಷತ್ರಿಯ' ಮತ್ತು 'ಮಹಾದರ್ಶನ' ಉತ್ತಮ ಕಾದಂಬರಿಗಳು. ಇವರ ಕಾದಂಬರಿಗಳಲ್ಲಿ ವಿದ್ವತ್ತು, ಕಲ್ಪನೆ, ವೇದಾಂತದಲ್ಲಿ ಸಾಧಿಸಿದ್ದ ಆಗಾಧ ಪಾಂಡಿತ್ಯ, ಪ್ರಾಚೀನ ಆದರ್ಶಗಳ ಬಗ್ಗೆ ಅವರಿಗಿದ್ದ ವಿಶ್ವಾಸ ಈ ಎಲ್ಲವೂ ಸೃಜನಶೀಲ ರೀತಿಯಲ್ಲಿ ರೂಪತಾಳಿವೆ. ವಿವರಗಳ ಸಂಪತ್ತಿನ ದೃಷ್ಟಿಯಿಂದಲೂ 'ಮಹಾಬ್ರಾಹ್ಮಣ'ಕ್ಕೆ ಎತ್ತರದ ಸ್ಥಾನ ಲಭಿಸುತ್ತದೆ. ಔಚಿತ್ಯಪೂರ್ಣ ವರ್ಣನೆಗಳೊಂದಿಗೆ ಕನ್ನಡ ಭಾಷೆಯ ಧ್ವನಿಶಕ್ತಿಯೂ ಉಜ್ವಲವಾಗಿ ಮೂಡಿದೆ. ಜನಾರ್ದನ ಗುರ್ಕಾರರ 'ಚೂಡಾಲ' ತ.ರಾ.ಸು. ರವರ 'ಬೆಳಕು ತಂದ ಬಾಲಕ' ಪುರಾಣ ವಸ್ತುವನ್ನು ಬಳಸಿಕೊಂಡ ಕೃತಿಗಳೇ ಆಗಿವೆ. ಇತಿಹಾಸವನ್ನೂ ಒಳಗೊಂಡಿದ್ದೂ, ಆಧ್ಯಾತ್ಮಿಕ ಸ್ತರದಲ್ಲಿ ನಡೆಯುವ ಕಾದಂಬರಿಗಳ ಸಾಲಿಗೆ ಎಚ್. ತಿಪ್ಪೇರುದ್ರಸ್ವಾಮಿಯವರ 'ಕದಳಿಯ ಕರ್ಪೂರ', 'ಜ್ಯೋತಿ ಬೆಳಗುತಿದೆ', 'ಪರಿಪೂರ್ಣದೆಡೆಗೆ', ತ.ರಾ.ಸು.ರವರ 'ಅಗ್ನಿರಥ' 'ಮುಕ್ತಿಪಥ' ಮುಂತಾದವುಗಳನ್ನು ಸೇರಿಸಬಹುದು. ೮೦ರ ದಶಕದಲ್ಲಿ ಬಂದ ಶಂಕರ ಮೊಕಾಶಿ ಪುಣೇಕರರ 'ಅವಧೇಶ್ವರಿ' ವೇದಕಾಲದ ರಾಜಕೀಯ ಕಾದಂಬರಿ.

ಗ್ರಾಮಜೀವನದ ಚಿತ್ರಣವನ್ನು ನೀಡುವ ಕೆಲವು ಗಮನಾರ್ಹ ಕೃತಿಗಳು ಎಚ್. ದೇವೀರಪ್ಪನವರ 'ಬೆಳವಲದ ಮಡಿಲಲ್ಲಿ', ಕೃಷ್ಣಮೂರ್ತಿ ಪುರಾಣಿಕರ 'ಹಬ್ಬಿದ ಬಳ್ಳಿ', ಬಸವರಾಜ ಕಟ್ಟೀಮನಿಯವರ 'ಮಣ್ಣು ಮತ್ತು ಹೆಣ್ಣು', ಚದುರಂಗರ 'ಸರ್ವಮಂಗಳಾ', ತ.ರಾ. ಸುಬ್ಬರಾಯರ 'ಚಂದವಳ್ಳಿಯ ತೋಟ' ಮೊದಲಾದವು. ಹಳ್ಳಿಗಳ ಸರಳ ಜೀವನ ಮತ್ತು ಬದಲಾಗುತ್ತಿರುವ ಗ್ರಾಮೀಣ ಪರಿಸರದ

ವಾಸ್ತವಿಕ ಚಿತ್ರಗಳಿವು. ರಾವ್ ಬಹದ್ದೂರರ 'ಗ್ರಾಮಾಯಣ' ಗ್ರಾಮಜೀವನವನ್ನು ಕುರಿತಂತೆ ವಿಶಿಷ್ಟವಾದ ಉತ್ಕೃಷ್ಟ ಕಾದಂಬರಿಯಾಗಿದೆ. ಇದು ಪಾದಳ್ಳಿ ಎಂಬ ಒಂದು ಊರಿನ ಕತೆ. ಇಲ್ಲಿನ ಜನಾಂಗವೇ ಕಾದಂಬರಿಯ ಮುಖ್ಯ ಪಾತ್ರ. ಅಲ್ಲಿನ ವ್ಯಕ್ತಿಗಳ ಜೀವನ ಈ ನೆಲೆಯಿಂದಲೇ ರೂಪುಗೊಂಡು, ಅದರೊಂದಿಗೆ ಹೆಣೆದುಕೊಂಡಿರುವಂಥದು ಒಂದು ಸಮೂಹದ ಜೀವನವನ್ನು ಆಧಾರವಾಗಿಟ್ಟುಕೊಂಡು, ಅದರ ಮೂಲಕ ಕಾದಂಬರಿಕಾರರು ಜೀವನದರ್ಶನ ಮಾಡಿಸುತ್ತಾರೆ. ಈ ಕಾದಂಬರಿಯ ಕೆಲ ಭಾಗದಲ್ಲಿ ಅತ್ಯುತ್ತಮ ಗದ್ಯವನ್ನೂ ಕಾಣಬಹುದಾಗಿದೆ. 'ಧೂಮಕೇತು', 'ವೃಂದಾವನ', 'ಬಿತ್ತಿ ಬೆಳೆದವರು' ಇವರ ಇತರ ಕಾದಂಬರಿಗಳು.

ಕೆ.ವಿ. ಅಯ್ಯರರ 'ರೂಪದರ್ಶಿ' ಕಲ್ಪನಾಶಕ್ತಿಯನ್ನು ಸೃಜನಶೀಲ ರೀತಿಯಲ್ಲಿ ದುಡಿಸಿಕೊಂಡು, ಸರಳ ಭಾಷೆಯಲ್ಲಿ ಬರೆದ ಶ್ರೇಷ್ಠ ಕೃತಿಗಳಲ್ಲಿ ಒಂದಾಗಿದೆ. ಇಟಲಿಯ ಪ್ರಸಿದ್ಧ ಕಲಾವಿದ ಮೈಕಲ್ ಅಂಜಲೋನ ಜೀವನದ ಒಂದು ಘಟನೆಯನ್ನು ಆಧರಿಸಿ ಸುಂದರ ಶೈಲಿಯಲ್ಲಿ ಈ ಕೃತಿಯನ್ನು ರಚಿಸಲಾಗಿದೆ. ಇಟಲಿಯ ಎಲ್ಲ ಪ್ರಸಿದ್ಧ ನಗರಗಳಲ್ಲೂ ಪ್ರಯಾಣಿಸಿ, ಮಧ್ಯಯುಗದ ವಾತಾವರಣವನ್ನು ಈ ಕಾದಂಬರಿ ಪುನರ್ ಸೃಷ್ಟಿಸುತ್ತದೆ.

ಜಡಭರತರ 'ಜಡಭರತರ ಕನಸುಗಳು' ವಿಶಿಷ್ಟ ರೀತಿಯ ಕೃತಿ. ಕನಸು ಈ ಕಾದಂಬರಿಯ ಮೂಲದ್ರವ್ಯ. ಜಡಭರತರು ಕನಸಿನಲ್ಲಿ ದೊರೆಯುವ ಅರಿವನ್ನು ಶಕ್ತಿಯುತವಾಗಿ ಬಳಸಿಕೊಂಡು ಅದಕ್ಕೆ ಕಲಾತ್ಮಕ ಅಭಿವ್ಯಕ್ತಿಯನ್ನು ತಮ್ಮ ಕಾದಂಬರಿಯಲ್ಲಿ ನೀಡಿದ್ದಾರೆ.

ಸ್ವಾತಂತ್ರ್ಯೋತ್ತರ ಕಾಲದಲ್ಲಿ ಕಾದಂಬರಿಗಳನ್ನು ಬರೆದ ಲೇಖಕರ ಸಂಖ್ಯೆ ಗಣನೀಯವಾಗಿದೆ. ಶಿವರಾಮಕಾರಂತ, ಕುವೆಂಪು, ರಾವಬಹುದ್ದೂರ, ದೇವುಡು (ಅಂತರಂಗ, ಮಲ್ಲಿ), ಬಿ.ಪುಟ್ಟಸ್ವಾಮಯ್ಯ, ಶ್ರೀನಿವಾಸ, ಎಂ.ಆರ್. ಶ್ರೀನಿವಾಸಮೂರ್ತಿ, ಅ.ನ.ಕೃಷ್ಣರಾಯರು, ತ.ರಾ.ಸು. (ಚಂದನದ ಗೊಂಬೆ, ಮಸಣದಹೂವು, ನಾಗರಹಾವು, ದುರ್ಗಾಸ್ತಮಾನ) ಶ್ರೀರಂಗ, ವಿ.ಕೃ. ಗೋಕಾಕ, ಕೆ.ವಿ. ಅಯ್ಯರ್, ಮಿರ್ಜಿ ಅಣ್ಣಾರಾಯ, ಬಸವರಾಜ ಕಟ್ಟೀಮನಿ (ಮೋಹದ ಬಲೆಯಲ್ಲಿ ಜರತಾರಿ ಜಗದ್ಗುರು, ಖಾನಾವಳಿಯ ನೀಲಾ), ವಿ.ಎಂ. ಇನಾಂದಾರ್, ನಿರಂಜನ (ಅಭಯಾಶ್ರಮ, ಚಿರಸ್ಮರಣೆ), ಚದುರಂಗ (ಉಯ್ಯಾಲೆ, ವೈಶಾಖ), ಆನಂದಕಂದ (ಸುದರ್ಶನ, ಮಗಳ ಮದುವೆ), ಎಸ್. ಅನಂತನಾರಾಯಣರ (ಅತ್ತಿಗೆ) ಗೊರೂರು ರಾಮಸ್ವಾಮಿ ಅಯ್ಯಂಗಾರ್ (ಹೇಮಾವತಿ, ಊರ್ವಶಿ), ಮಿರ್ಜಿ ಅಣ್ಣಾರಾಯ (ನಿಸರ್ಗ), ವ್ಯಾಸರಾಯ ಬಲ್ಲಾಳ (ಹೇಮಂತಗಾನ, ಉತ್ತರಾಯಣ, ವಾತ್ಸಲ್ಯಪಥ, ಚಿರವಿರಹಿ, ಬಂಡಾಯ), ಬೀಚಿ (ದಾಸಕೂಟ), ಕೃಷ್ಣಮೂರ್ತಿ ಪುರಾಣಿಕ (ಹಾಲುಂಡ ತವರು, ವಸಂತಲಕ್ಷ್ಮೀ, ಮುಗಿಲ ಮಲ್ಲಿಗೆ, ಮನೆ ತುಂಬಿದ ಹೆಣ್ಣು, ಮಣ್ಣಿನ ಮಗಳು, ತಂಪು ನೆಳಲು), ರಾಮಚಂದ್ರ ಕೊಟ್ಟಲಗಿ (ದೀಪ ಹತ್ತಿತು), ಭಾರತೀಸುತ (ಎಡಕಲ್ಲು ಗುಡ್ಡದ ಮೇಲೆ), ಎಸ್.ಎಲ್. ಭೈರಪ್ಪ(ವಂಶವೃಕ್ಷ, ಗೃಹಭಂಗ, ಗ್ರಹಣ, ದಾಟು, ಸಾಕ್ಷಿ, ಪರ್ವ, ನೆಲೆ), ವಿಶುಕುಮಾರ್ (ಕರಾವಳಿ, ಮದರ್), ಎನ್ಕೆ (ಸಾವಿನ ಉಡಿಯಲ್ಲಿ ಎರಡನೆ ಸಂಬಂಧ), ಯಶವಂತ ಚಿತ್ತಾಲ (ಮೂರು ದಾರಿಗಳು, ಶಿಕಾರಿ, ಪುರುಷೋತ್ತಮ, ಛೇದ), ಶಾಂತಿನಾಥ ದೇಸಾಯಿ (ಮುಕ್ತಿ, ವಿಕ್ಷೇಪ, ಸಂಬಂಧಗಳು), ಯು.ಆರ್. ಅನಂತಮೂರ್ತಿ (ಸಂಸ್ಕಾರ, ಭಾರತೀಪುರ, ಅವಸ್ಥೆ), ಪಿ. ಲಂಕೇಶ್ (ಬಿರುಕು, ಮುಸ್ಸಂಜೆಯ ಕಥಾಪ್ರಸಂಗ, ಅಕ್ಕ) ಎ.ಕೆ. ರಾಮಾನುಜನ್ (ಹಳದಿ ಮೀನು), ಶಂಕರ ಮೊಕಾಶಿ ಪುಣೇಕರ (ಗಂಗವ್ವ, ಗಂಗಾಮಯಿ, ಅವಧೇಶ್ವರಿ), ಪೂರ್ಣಚಂದ್ರ ತೇಜಸ್ವಿ (ಸ್ವರೂಪ, ನಿಗೂಢ ಮನುಷ್ಯರು, ಕರ್ವಾಲೋ, ಚಿದಂಬರ ರಹಸ್ಯ), ಗಿರಿ (ಗತಿಸ್ಥಿತಿ), ಕಾಮರೂಪಿ (ಕುದುರೆಮೊಟ್ಟೆ), ಆರ್ಯ (ಗುರು), ಶ್ರೀಕೃಷ್ಣ ಆಲನಹಳ್ಳಿ,

(ಕಾಡು, ಪರಸಂಗದ ಗೆಂಡೆತಿಮ್ಮ, ಭುಜಂಗಯ್ಯನ ದಶಾವತಾರ), ದೇವನೂರು ಮಹಾದೇವ (ಒಡಲಾಳ, ಕುಸುಮ ಬಾಲೆ) ಮೊದಲಾದವರು.

ಸ್ವಾತಂತ್ರ್ಯೋತ್ತರ ಕಾಲದಲ್ಲಿ ಕಾದಂಬರಿ ರಚನೆಗೆ ಸ್ತ್ರೀಯರ ಕೊಡುಗೆಯೂ ಸಂದಿದೆ. ಬೆಳ್ಳಿಮೋಡ, ಹಣ್ಣೆಲೆ ಚಿಗುರಿದಾಗ, ಬೆಕ್ಕಿನಕಣ್ಣು ಮುಂತಾದ ಕಾದಂಬರಿಗಳನ್ನು ನೀಡಿದ 'ತ್ರಿವೇಣಿ' ಕಾವ್ಯನಾಮದ ಅನಸೂಯಾ ಅತ್ಯಂತ ಜನಪ್ರಿಯರಾದರು. ಇವರ ಕಾದಂಬರಿಗಳು ಮನೋವೈಜ್ಞಾನಿಕ ನೆಲೆಯಲ್ಲಿ ಜೀವನದ ಸಮಸ್ಯೆಗಳನ್ನು ವಿಶ್ಲೇಷಿಸುತ್ತವೆ. ತ್ರಿವೇಣಿಯವರು ಕಾದಂಬರಿಯ ವಸ್ತುವಿಗೆ ಸಂಬಂಧಿಸಿದಂತೆ ಹೊಸಲೋಕವೊಂದನ್ನು ಓದುಗರ ಮುಂದಿಟ್ಟರೂ ತಮ್ಮ ಸ್ವಂತದ್ದೇ ಆದ ಅಭಿವ್ಯಕ್ತಿ ಕ್ರಮವನ್ನು ರೂಢಿಸಿಕೊಳ್ಳದೆ ಹೋದರು. ಎಂ.ಕೆ. ಇಂದಿರಾ, ವಾಣಿ, ಎಂ.ಕೆ. ಜಯಲಕ್ಷ್ಮೀ, ಅನುಪಮಾ ನಿರಂಜನ, ಆರ್ಯಾಂಬ ಪಟ್ಟಾಭಿ, ಗೀತಾ ಕುಲಕರ್ಣಿ, ಎ.ಪಿ. ಮಾಲತಿ, ಕೆ. ಸರೋಜಾದೇವಿ, ವೀಣಾ ಶಾಂತೇಶ್ವರ ಮುಂತಾದವರು ಕಾದಂಬರಿಗಳನ್ನು ನೀಡಿದ್ದಾರೆ.

ಕಾದಂಬರಿ ಪ್ರಕಾರಕ್ಕೆ ಸೃಜನಶೀಲ ಬರಹಗಾರರ ಕೊಡುಗೆಯೊಂದು ಕಡೆಯಾದರೆ, ಭಾಷಾಂತರಗಳ ಮೂಲಕ ಕನ್ನಡಕ್ಕೆ ಬಂದಿರುವ ವಿಶ್ವದ ಹಲವು ಶ್ರೇಷ್ಠ ಕೃತಿಗಳು ಇನ್ನೊಂದೆಡೆ. ಇಂಗ್ಲಿಷ್, ಫ್ರೆಂಚ್, ರಷ್ಯನ್ ಮುಂತಾದ ಭಾಷೆಗಳಲ್ಲದೆ ಭಾರತೀಯ ಭಾಷೆಗಳಾದ ಬಂಗಾಳಿ, ಮರಾಠಿ, ಹಿಂದಿ, ಮಲೆಯಾಳಂ, ತೆಲುಗು, ತಮಿಳು ಮುಂತಾದ ಭಾಷೆಗಳಿಂದ ಶ್ರೇಷ್ಠ ಕೃತಿಗಳು ಅನುವಾದಗೊಂಡಿವೆ.

೧೯೫೬ರಲ್ಲಿ ಪ್ರಕಟವಾದ ಶಂಕರಮೊಕಾಶಿಪುಣೇಕರರ 'ಗಂಗವ್ವ ಗಂಗಾಮಯಿ' ಮತ್ತು ೧೯೫೭ರಲ್ಲಿ 'ಗ್ರಾಮಾಯಣ' ಕಾದಂಬರಿಗಳನ್ನು ವಾಸ್ತವಮಾರ್ಗದಲ್ಲಿ ಮತ್ತೊಂದು ಮುಖ್ಯ ಹೆಜ್ಜೆಯೆಂದು ಪರಿಗಣಿಸಲಾಗಿದೆ. ವ್ಯಕ್ತಿಗಳ ಅಂತರಂಗವನ್ನು ಚಿತ್ರಿಸುವಲ್ಲಿ ಮೊಕಾಶಿಯವರ ಸಾಧನೆಯನ್ನು ಕಾಣಬಹುದು. ಕಾದಂಬರಿಯ ಕೇಂದ್ರವ್ಯಕ್ತಿ ಕಿಟ್ಟಿ ದುರ್ಬಲ ಸ್ವಭಾವದವನಾಗಿದ್ದು ಕಾದಂಬರಿಯ ಕ್ರಿಯೆಗೆ ಕಾರಣರಾಗದಿದ್ದರೂ ಆ ಕ್ರಿಯೆಗೆ ಗುರಿಯಾಗುತ್ತಾನೆ. ಅದನ್ನು ವಿರೋಧಿಸುವ ಶಕ್ತಿಯಾಗಲಿ, ತನ್ನ ಕಾಲ ಮೇಲೆ ತಾನು ನಿಂತು ಜೀವನವನ್ನು ನಡೆಸುವ ಸಾಮರ್ಥ್ಯವಾಗಲಿ ಅವನಲ್ಲಿಲ್ಲ. ಸಾಮಾನ್ಯವಾಗಿ ಕಾದಂಬರಿಯ ನಾಯಕರಲ್ಲಿ ಕಂಡು ಬರುವ ಕ್ರಿಯಾಶೀಲ ಗುಣ ಕಿಟ್ಟಿಯಲ್ಲಿಲ್ಲ. ಇಂತಹ ಆ-ನಾಯಕನನ್ನು (ಆಂಟಿ ಹೀರೋ) ಕಾದಂಬರಿ ಕ್ಷೇತ್ರಕ್ಕೆ ತಂದ ಪುಣೇಕರರು ನವ್ಯತೆಯ ಗುಣವನ್ನು ಮೆರೆದಿದ್ದಾರೆ. ಪಾತ್ರರಚನೆಯ ದೃಷ್ಟಿಯಿಂದ ನಡೆ-ನುಡಿ-ಸ್ವಭಾವಗಳು ಒಂದಕ್ಕೊಂದು ಹೊಂದಿರುವ ಸಂಬಂಧಗಳ ಅನ್ವೇಷಣೆಯ ದೃಷ್ಟಿಯಿಂದ ಈ ಕೃತಿ ಮಹತ್ವ ಪಡೆಯುತ್ತದೆ.

ರಾವ್‌ಬಹದ್ದೂರರ 'ಗ್ರಾಮಾಯಣ' ಇದಕ್ಕಿಂತ ತೀರ ಭಿನ್ನವಾದ, ಆದರೆ ಅಷ್ಟೇ ಮಹತ್ವಪೂರ್ಣ ಕೃತಿ. ಸುಮಾರು ೮೦ ಪಾತ್ರಗಳನ್ನು ಒಳಗೊಂಡ ಈ ಕೃತಿ ಗ್ರಾಮದ ಮಹಾಕಾವ್ಯವೆನಿಸಿದೆ. ಪಾತ್ರಗಳ ಬದುಕು ಪಾದಳ್ಳಿಯ ಆಗುಹೋಗುಗಳೊಂದಿಗೆ ಸಹಜವಾಗಿ ಹೆಣೆದುಕೊಂಡಿದ್ದು, ಗ್ರಾಮದ ಅವನತಿಯೊಂದಿಗೆ ಸಮುದಾಯದ ಅವನತಿಯೂ ಸೇರಿಹೋಗಿದೆ. 'ಪಾದಳ್ಳಿ' ಕಾದಂಬರಿಯ ನಾಯಕಪಾತ್ರವನ್ನು ವಹಿಸಿದ, ಮುಗ್ಧ ಹುಡುಗಿಯೊಬ್ಬಳ ಶೀಲಭಂಗದಿಂದ ಪ್ರಾರಂಭವಾಗುವ ಕ್ಷೋಭೆ ಇಡೀ ಗ್ರಾಮವನ್ನು ಆವರಿಸಿ ಇಡೀ ಸಮುದಾಯದ ಅವನತಿಗೆ ಕಾರಣವಾಗುತ್ತದೆ. ಪಾದಳ್ಳಿಯ ಬಳಿ ಹರಿಯುವ ನದಿ ಈ ಎಲ್ಲ ಅಹಿತಕರ ಘಟನೆಗಳಿಗೆ ಮೂಕಸಾಕ್ಷಿಯಾಗುತ್ತದೆ.

೧೯೫೦ರ ದಶಕದ ಪ್ರಾರಂಭದಲ್ಲಿ ನವ್ಯ ಚಳವಳಿ ಆರಂಭವಾಯಿತು. ಸ್ವಾತಂತ್ರ್ಯ ದೊರೆತ ಕೆಲವೇ ವರ್ಷಗಳು ಸಂದಿದ್ದರೂ, ಆ ಐದಾರು ವರ್ಷಗಳ ಆಗುಹೋಗುಗಳು ನಿರಾಶಾದಾಯಕ ಪರಿಸರವನ್ನು ನಿರ್ಮಿಸಿದ್ದವು. ಆಶಯಕ್ಕೂ ವಾಸ್ತವಕ್ಕೂ ನಡುವೆ ಏರ್ಪಟ್ಟ ಅಜಗಜಾಂತರ ವ್ಯತ್ಯಾಸದಿಂದ ಜನರ ಕನಸುಗಳಿಗೆ ಪೆಟ್ಟುಬಿತ್ತಾಗಿತ್ತು. ನವೋದಯ ಯುಗದ ಆಶಯ ಪೂರಿತ ಧೋರಣೆಗಳೂ, ಪ್ರಗತಿಶೀಲ ಯುಗದ ಕೆಚ್ಚೆದೆಯ ಉತ್ಸಾಹಗಳೂ ಅರ್ಥಹೀನವೆನಿಸತೊಡಗಿದವು. ಇಂತಹ ಭ್ರಮನಿರಸನದ ಭಾವನೆಗಳನ್ನು ಅಡಿಗರು ಸಮರ್ಥವಾಗಿ ತಮ್ಮ ಕವನಗಳಲ್ಲಿ ಹಿಡಿದಿಟ್ಟರು. ೧೯೫೨ರಲ್ಲಿ ಪ್ರಕಟವಾದ ಅಡಿಗರ 'ಕೃಷ್ಣನಕೊಳಲು' ಮತ್ತು 'ಹಿಮಗಿರಿಯ ಕಂದರ'ಗಳ ಮೂಲಕ ನವ್ಯ ಚಳವಳಿಯ ಉಗಮವಾಯಿತು. ೧೯೬೦ರ ದಶಕದಲ್ಲಿ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ವಿಜೃಂಭಿಸಿದ ನವ್ಯ ಮನೋಧರ್ಮ ಕಾದಂಬರಿ ಪ್ರಪಂಚವನ್ನೂ ಆವರಿಸಿತು. ಈ ದಿಕ್ಕಿನಲ್ಲಿ ಪ್ರಕಟವಾದ ಮೊದಲ ಕೃತಿ ಶಾಂತಿನಾಥ ದೇಸಾಯಿಯವರ 'ಮುಕ್ತಿ' (೧೯೬೧)

ನವ್ಯ ಮನೋಧರ್ಮವು ಪ್ರತಿಮೆ ಮತ್ತು ಸಂಕೇತಗಳಿಗೆ ಹೆಚ್ಚಿನ ಮಹತ್ವ ನೀಡಿತು. 'ಐರನಿ'ಯನ್ನು ಸಮರ್ಥವಾಗಿ ಬಳಸಿಕೊಂಡಿತು. ಕಾದಂಬರಿಯ ಪರಂಪರಾಗತವಾಗಿ ರೂಢಿಸಿ ಕೊಂಡಿದ್ದ ಆದಿ–ಮಧ್ಯ–ಅಂತ್ಯಗಳನ್ನು ಬಿಟ್ಟು ಕೊಡಲಾಯಿತು. ಅನುಭವದ ಆಧಾರದ ಮೇಲೆ ಹೊಸಮೌಲ್ಯಗಳನ್ನು ಅನ್ವೇಷಣೆ ಮಾಡುವುದು ನವ್ಯ ಕಾದಂಬರಿಯ ಮುಖ್ಯ ಕಾಳಜಿಯಾಯಿತು. 'ತೆರೆದ ಕಾದಂಬರಿ'ಗಳು ಇವರ ಅಗತ್ಯಗಳಿಗೆ ಹೆಚ್ಚು ಸೂಕ್ತವೆನಿಸಿದವು. ತಮ್ಮ ಸಂಕೀರ್ಣ ಅನುಭವವನ್ನು ಚಿತ್ರಿಸುವ ಕಾರ್ಯದಲ್ಲಿ ನವ್ಯರಿಗೆ ಕನಸು, ಫ್ಯಾಂಟಸಿಗಳು ಸಹಾಯಕವಾದವು. ಸಂಕೋಚಗಳನ್ನು ದೂರ ಇರಿಸಿ ತಮ್ಮ ಅನುಭವಗಳನ್ನು ಚಿತ್ರಿಸುವುದು ನವ್ಯರಿಗೆ ಮುಖ್ಯವಾಗಿತ್ತು. ನವೋದಯ ಬರಹಗಾರರು ತಾವು ಸ್ವೀಕರಿಸಿದ್ದ ಮೌಲ್ಯಗಳನ್ನು ನಿರೂಪಿಸಿದರು, ಪ್ರಗತಿಶೀಲರು ಸಾಮಾಜಿಕ ಕ್ರಾಂತಿಯ ಬಗ್ಗೆ ತಮಗಿದ್ದ ಕಾಳಜಿಯನ್ನು ಎತ್ತಿಹಿಡಿಯುತ್ತ ತಮ್ಮ ಓದುಗರಲ್ಲೂ ಈ ನಿಷ್ಠೆಯನ್ನು ಹುಟ್ಟುಹಾಕುವ ಯತ್ನದಲ್ಲಿದ್ದರು. ನವ್ಯ ಕಾದಂಬರಿಕಾರರು ಇವೆಲ್ಲವನ್ನೂ ಕೊಂಚ ಅನುಮಾನದಿಂದಲೇ ಕಾಣತೊಡಗಿದರು. ಬದುಕು ಅರ್ಥಪೂರ್ಣ ಎಂಬ ನಂಬಿಕೆಯನ್ನೇ ಪ್ರಶ್ನಿಸತೊಡಗಿದ ನವ್ಯರು ತಮ್ಮ ಹಿಂದಿನವರ ಉತ್ಸಾಹ, ಧೋರಣೆಗಳನ್ನು ಅನುಮಾನದಿಂದಲೇ ಅವಲೋಕಿಸಿದರು. ಕಾದಂಬರಿಕಾರ – ಓದುಗರ ನಡುವಿನ ಸಂಬಂಧ ಪೂರ್ಣ ಪ್ರಮಾಣದ ಬದಲಾವಣೆಗೆ ಗುರಿಯಾಯಿತು. ಭಾಷೆಯ ಬಳಕೆಯಲ್ಲಿಯೂ ಬದಲಾವಣೆಯುಂಟಾಯಿತು. ಭಾಷೆ ಅನುಭವದ ವಿಶ್ಲೇಷಣೆಯ ಸಾಧನವಾಯಿತು. ವಿಸ್ತಾರವಾದ ವಿಶ್ವದಲ್ಲಿ ಮಾನವನ ಏಕಾಂಗಿತನವನ್ನೂ, ಅವನ ಅನಾಥಪ್ರಜ್ಞೆಯನ್ನೂ ಹಿಡಿದಿಡುವ ಸಾಧನವಾಯಿತು. ಹೈಡೆಗರ್ ಪ್ರತಿಪಾದಿಸುವ ಮನುಷ್ಯನ ಮೂಲಭೂತ ಏಕಾಂಗಿತನ, ಬಾಹ್ಯ ಜಗತ್ತಿನ ವಸ್ತುಗಳೊಂದಿಗೆ ವ್ಯಕ್ತಿಗಳೊಂದಿಗೆ ನಿಜವಾದ ಸಂಬಂಧ ಬೆಳೆಸಿಕೊಳ್ಳಲು ಸಾಧ್ಯವಾಗದ ಆಧುನಿಕ ಮಾನವನ ಏಕಾಂಗಿತನವೇ ಆಗಿದೆ. ಪರಕೀಯ ಪ್ರಜ್ಞೆ, ಏಕಾಂಗಿತನ, ನಿರರ್ಥಕತೆ – ಇವು ನವ್ಯರ ಅತಿ ಮುಖ್ಯ ಧೋರಣೆಗಳಾಗಿವೆ. ಈ ತಾತ್ವಿಕ ದೃಷ್ಟಿಕೋನ ನವ್ಯ ಕಾದಂಬರಿಗಳನ್ನೂ ನಿರ್ದೇಶಿಸಿದೆ. ನಿಗೂಢವಾದ ಸಾಮಾಜಿಕ, ರಾಜಕೀಯ ಶಕ್ತಿಗಳಿಂದ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಬದುಕುತ್ತಿರುವ ವ್ಯಕ್ತಿಗೆ ಉಂಟಾಗುವ ಅಸ್ವಸ್ಥತೆ ಮತ್ತು ತುಮುಲಗಳ ಅನುಭವ ಚಿತ್ರಣ ನವ್ಯರಲ್ಲಿ ಮತ್ತೆ ಮತ್ತೆ ಕಾಣುತ್ತದೆ. ಲಂಕೇಶರ 'ಬಿರುಕು', ತೇಜಸ್ವಿಯವರ 'ಸ್ವರೂಪ' ಮುಂತಾದವು ಇಂತಹ ಅಸ್ವಸ್ಥತೆಯನ್ನು ಸಮರ್ಥವಾಗಿ ಚಿತ್ರಿಸುವ ಕಾದಂಬರಿಗಳು. ವಾಸ್ತವತೆ ನವ್ಯ ಕಾದಂಬರಿಯ ಗುರಿಯಾಗಿದ್ದರೂ ನವ್ಯರಿಗೆ ಆ ವಾಸ್ತವತೆ ನೆಲೆಸಿರುವುದು ಮಾನವನ ಪ್ರಜ್ಞೆಯಲ್ಲೇ ಹೊರತು ಹೊರಗಿನ

ಪ್ರಪಂಚದಲ್ಲಲ್ಲ. ಹಾಗಿದ್ದರೂ ನವ್ಯ ಕಾದಂಬರಿಯಲ್ಲಿ ಸಂಕೀರ್ಣ ಅನುಭವವನ್ನು ಅಭಿವ್ಯಕ್ತಿಸಲು ಬಳಸುವ ಕನಸು, ಫ್ಯಾಂಟಸಿಗಳೂ, ಸಂಕೀರ್ಣ ಕಾಲಪ್ರಜ್ಞೆ ಮುಂತಾದ ಅಂಶಗಳಿಂದಾಗಿ ನವ್ಯ ಕಾದಂಬರಿಗಳು ವಾಸ್ತವ ಮಾರ್ಗದ ಕಾದಂಬರಿಗಳಿಗಿಂತ ಭಿನ್ನವಾಗಿ ನಿಲ್ಲುತ್ತವೆ. ಸಂಸ್ಕೃತಿ ಜನ್ಯ ಮೌಲ್ಯಗಳನ್ನು ಪ್ರಶ್ನೆಗೆ ಗುರಿಪಡಿಸುತ್ತಲೇ, ಹೊಸ ಮೌಲ್ಯಗಳನ್ನು ಸ್ವೀಕರಿಸುವ ನವ್ಯ ಕಾದಂಬರಿಕಾರರು ಸಂಸ್ಕೃತಿಯ ಸ್ವರೂಪವನ್ನೇ ಬದಲಾಯಿಸುವ ಯತ್ನ ನಡೆಸಿದರು.

ಯು.ಆರ್. ಅನಂತಮೂರ್ತಿಯವರ ಕಾದಂಬರಿ 'ಸಂಸ್ಕಾರ' (೧೯೬೬)ವನ್ನು ಇದಕ್ಕೆ ಉತ್ತಮ ಉದಾಹರಣೆಯಾಗಿ ನೀಡಬಹುದು. ಕಾದಂಬರಿಯ ನಾಯಕ ಪ್ರಾಣೇಶಾಚಾರ್ಯರು ಸತ್ವಹೀನವಾದ ಮೌಲ್ಯಗಳಿಂದ ಬಿಡುಗಡೆ ಹೊಂದಿ, ಆ ಪ್ರಕ್ರಿಯೆಯಲ್ಲಿ ಉಂಟಾಗುವ ಘರ್ಷಣೆ, ದುಃಖ, ದ್ವಂದ್ವಗಳನ್ನು ಅನುಭವಿಸುತ್ತಲೇ, ಹೊಸ ಮೌಲ್ಯಗಳ ಅನ್ವೇಷಣೆಯಲ್ಲಿ ತೊಡಗುವುದನ್ನು ಕಾದಂಬರಿಯಲ್ಲಿ ಕಾಣುತ್ತೇವೆ. ಹೊಸ ಮೌಲ್ಯಗಳ ಶೋಧನೆಯಲ್ಲಿ ತೊಡಗಿರುವ ನವ್ಯರ ಅನ್ವೇಷಣಾ ಪ್ರವೃತ್ತಿ ಈ ಕಾದಂಬರಿಯ ಭಾಷೆ, ವಸ್ತು, ಕಥಾನಕಗಳಲ್ಲಿಯೂ ಸಮರ್ಥವಾಗಿ ಮೂಡಿದೆ. ಈ ಎಲ್ಲ ಕಾರಣಗಳಿಂದ 'ಸಂಸ್ಕಾರ' ಕನ್ನಡದ ಶ್ರೇಷ್ಠ ಕಾದಂಬರಿಗಳ ಸಾಲಿಗೆ ಸೇರುತ್ತದೆ.

ಗಿರಿಯವರ 'ಗತಿಸ್ಥಿತಿ', ಯಶವಂತ ಚಿತ್ತಾಲರ 'ಮೂರು ಆದರಿಗಳು', ಕುಸುಮಾಕರರ 'ನಾಲ್ಕನೆಯ ಆಯಾಮ' ಮುಂತಾದವು ನವ್ಯದ ಅತ್ಯುತ್ತಮ ಮಾದರಿಗಳು. ಎ.ಕೆ. ರಾಮಾನುಜನ್‌ರವರ 'ಹಳದಿಮೀನು' ಕಾದಂಬರಿಯಲ್ಲಿ ಬರುವ ಕಥಾನಾಯಕ 'ಅವನು', ಕನ್ನಡ ಸಾಹಿತ್ಯದಲ್ಲಿ ರೂಪುಗೊಂಡ ಮೊಟ್ಟಮೊದಲ ಅಬ್ಸರ್ಡ್ ನಾಯಕ ಎಂದು ಹೇಳಲಾಗಿದೆ. ಆಲ್ಬರ್ಟ್ ಕಾಮುವಿನ ಅಬ್ಸರ್ಡ್ ತತ್ವದಿಂದ ಪ್ರಭಾವಗೊಂಡಿರುವ ಈ ಕಾದಂಬರಿ ಯಶಸ್ವೀ ನವ್ಯ ಕತೆಗಳ ಸಾಲಿಗೆ ಸೇರುವ ಕೃತಿಯಾಗಿದೆ. ಅನಂತಮೂರ್ತಿಯವರ 'ಅವಸ್ಥೆ', ಯಶವಂತ ಚಿತ್ತಾಲರ 'ಶಿಕಾರಿ' ಮುಂತಾದವು ನವ್ಯ ಮಾರ್ಗದ ಆತ್ಮನಿಷ್ಠತೆ ಮತ್ತು ವಾಸ್ತವ ಮಾರ್ಗದ ವಸ್ತುನಿಷ್ಠತೆ ಎರಡನ್ನೂ ಮೇಳೈಸಲು ನಡೆಸಿರುವ ಯತ್ನಗಳಾಗಿವೆ. ಇಂತಹ ಮಾರ್ಗವನ್ನು ನವವಾಸ್ತವವಾದವೆಂದೂ ಕರೆಯುವುದುಂಟು.

ನವ್ಯ ಪಂಥದ ಕಾದಂಬರಿಗಳು ರೂಪಗೊಳ್ಳುತ್ತಿದ್ದ ಕಾಲದಲ್ಲೇ, ಕನ್ನಡ ಸಾಹಿತ್ಯದ ಮೊದಲ ಪೀಳಿಗೆಯ ಬರಹಗಾರರೂ ಉತ್ತಮ ಕಾದಂಬರಿಗಳ ಸೃಷ್ಟಿಯಲ್ಲಿ ತೊಡಗಿದ್ದರು. ಕುವೆಂಪುರವರ 'ಮಲೆಗಳಲ್ಲಿ ಮದುಮಗಳು' (೧೯೬೭), ಪ್ರಕಟಗೊಂಡಿದ್ದು ಆ ಸಮಯದಲ್ಲೇ ತ.ರಾ. ಸುಬ್ಬರಾಯರು, ಬಸವರಾಜ ಕಟ್ಟೀಮನಿ, ಜೆ.ಬಿ. ಜೋಷಿ, ವಿ.ಎಂ. ಇನಾಂದಾರ್, ತ್ರಿವೇಣಿ ಮಂತಾದವರೂ ಕೃತಿರಚನೆಯನ್ನು ಮುಂದುವರಿಸಿದ್ದರು.

ನವ್ಯಮಾರ್ಗದ ಹೊರಗೇ ಉಳಿದ ಜನಪ್ರಿಯ ಕಾದಂಬರಿಕಾರ ಎಸ್.ಎಲ್. ಭೈರಪ್ಪನವರು ೧೯೬೫ರಲ್ಲಿ ತಮ್ಮ ಮೊದಲ ಮುಖ್ಯ ಕಾದಂಬರಿ 'ವಂಶವೃಕ್ಷ'ವನ್ನು ಪ್ರಕಟಿಸಿ ಅಪಾರ ಖ್ಯಾತಿ ಗಳಿಸಿದರು. ಸಜೀವ ಪಾತ್ರಗಳ ನಿರ್ಮಾಣ, ಕಲಾವಂತಿಕೆ, ಭಾಷೆಯ ವೈವಿಧ್ಯಪೂರ್ಣ ಬಳಕೆ ಇಂತಹ ಗುಣಗಳಿಗೆ ಹೆಸರಾದ ಭೈರಪ್ಪನವರು 'ಜಲಪಾತ', 'ದೂರ ಸರಿದರು', 'ನಾಯಿ ನೆರಳು', 'ಗೃಹಭಂಗ', ಮುಂತಾದ ಹಲವು ಕಾದಂಬರಿಗಳನ್ನು ರಚಿಸಿದ್ದಾರೆ. ಅವರ ಎಲ್ಲ ಕಾದಂಬರಿಗಳಲ್ಲೂ ಎದ್ದುಕಾಣುವ ಅಂಶ ವೈಚಾರಿಕತೆ. ಅವರ ಪ್ರಮುಖ ಪಾತ್ರಗಳು ನಿಖರವಾದ ಜೀವನ ಸಿದ್ಧಾಂತವನ್ನು ಹೊಂದಿದ್ದು ಸ್ಪಷ್ಟವಾದ ರೀತಿಯಲ್ಲಿ ಕ್ರಿಯೆ ಮುಂದುವರಿಯುತ್ತ, ಸಮೃದ್ಧ ಅನುಭವಕ್ಕೂ ಕಾರಣವಾಗುತ್ತದೆ. ಆದರೆ ಭೈರಪ್ಪನವರ ಸೃಜನಶೀಲತೆ ಅವರ ವೈಚಾರಿಕತೆಯೊಂದಿಗೆ ಮೇಳೈಸದೆ ಹೋಗುವ ಕಾರಣ, ಅವರ ಕೃತಿಗಳು ಸೋಲುತ್ತವೆ. ನಮ್ಮ ಸಂಸ್ಕೃತಿಯ ಒಳಾಂಗಣದಿಂದಲೇ

ಸಮಕಾಲೀನ ಸಂದರ್ಭದ ಆಗುಹೋಗುಗಳನ್ನು ಅರ್ಥೈಸುವ ಯತ್ನವನ್ನು ಅವರ 'ದಾಟು' ಕಾದಂಬರಿಯಲ್ಲಿ ಕಾಣಬಹುದು. ಮಹಾಭಾರತದಿಂದ ವಸ್ತುವನ್ನು ಆಯ್ದುಕೊಂಡು ವಾಸ್ತವ ಮಾರ್ಗದಲ್ಲಿ ರಚಿಸಲಾದ ಕಾದಂಬರಿ 'ಪರ್ವ', 'ನೆಲೆ', 'ಸಾಕ್ಷಿ' ಇವರ ಇತರ ಕಾದಂಬರಿಗಳು.

ಮುಂದೆ ನವ್ಯಪಂಥದವರ ಕೃತಿಗಳ ಅತಿಯಾದ ಕ್ಲಿಷ್ಟತೆ, ಸಂಕೀರ್ಣತೆಗಳಿಂದಾಗಿ ಕಾದಂಬರಿಯ ಓದು ಪ್ರಯಾಸಕರವೆನಿಸಿತು. ಈ ಲೇಖಕರಿಗೂ ಓದುಗರಿಗೂ ನಡುವೆ ಕಂದರವೇರ್ಪಟ್ಟಿತು. ಪಾಶ್ಚಾತ್ಯ ಪ್ರೇರಣೆಯಿಂದ ಆಮದು ಮಾಡಿಕೊಂಡ ಮೌಲ್ಯವ್ಯವಸ್ಥೆ ಪರಕೀಯವೆನಿಸಿದ್ದೂ ಇದಕ್ಕೊಂದು ಕಾರಣ. ನವ್ಯ ಕಾದಂಬರಿಗಳ ಪಾತ್ರಗಳು ಬದುಕನ್ನು ಎದುರಿಸುವುದಿಲ್ಲ ಎನ್ನುವ ಭಾವನೆಯೂ ನವ್ಯ ಕೃತಿಗಳ ನಿರಾಕರಣೆಗೆ ಕಾರಣವಾಯಿತು. ಬದಲಾಗುತ್ತಿದ್ದ ರಾಜಕೀಯ ಮತ್ತು ಸಾಮಾಜಿಕ ಪರಿಸರದಲ್ಲಿ ಇಂತಹ ಮನೋಧರ್ಮ ಒಪ್ಪಿಯಾಗಲಿಲ್ಲ.

ಶಾಂತಿನಾಥ ದೇಸಾಯಿಯವರು ತಮ್ಮ 'ನವ್ಯ ಸಾಹಿತ್ಯ ದರ್ಶನ'ಕ್ಕೆ ಬರೆದ ಮುನ್ನುಡಿಯಲ್ಲಿ ನವ್ಯ ಕಾದಂಬರಿಯ ಸೀಮಿತ ಯಶಸ್ಸನ್ನು ಹೀಗೆ ಅರ್ಥೈಸುತ್ತಾರೆ: 'ನವ್ಯ ಕಾದಂಬರಿ ಸಾಕಷ್ಟು ಮಹತ್ವಾಕಾಂಕ್ಷೆಯನ್ನು ಹೊತ್ತುಕೊಂಡೇ ಪ್ರಾರಂಭವಾಯಿತು. ಆದರೆ ನವ್ಯ ಮನೋಧರ್ಮದಲ್ಲಿ ಕಾದಂಬರಿ ಸೃಷ್ಟಿಗೆ ಬೇಕಾದ ''ವಿಶಾಲ'' ದೃಷ್ಟಿ ಇಲ್ಲವೇನೋ .... ನವ್ಯತೆಯ ಆಂತರ್ಯದಲ್ಲಿಯೇ ಚುಟುಕು-ದರ್ಶನಗಳಿಗೆ ಸೀಮಿತವಾದ ತೀವ್ರತೆ ಇದೆಯೇನೋ.' ''ಚಿಕ್ಕ ಕಾದಂಬರಿಗಳಾದ 'ಸಂಸ್ಕಾರ', 'ಕಾಡು', 'ಒಡಲಾಳ', 'ಸ್ವರೂಪ'ಗಳೇ ನವ್ಯದ ಪ್ರಮುಖ ಕಾದಂಬರಿಗಳು, ಉಳಿದ ಬಹುತೇಕ ಕಾದಂಬರಿಗಳಲ್ಲಿ ಸಣ್ಣಕತೆಗಳ ಜೀವವೇ ಹರಿದಾಡಿವೆ'' ಎನ್ನುವ ಮಾತೂ ಗಮನಾರ್ಹವಾದುದು.

ಅನುಕರಣೆ ಅತಿಯಾಗಿ ನವ್ಯ ಸಾಹಿತ್ಯ ಮಿತಿಮೀರಿದ ಬೌದ್ಧಿಕ ಕಸರತ್ತಾಗಿ ಪರಿಣಮಿಸಿದ ಸಂದರ್ಭದಲ್ಲಿ, ನವ್ಯದೊಳಗೆ ಬರೆಯುತ್ತಿದ್ದ ಪಿ. ಲಂಕೇಶ್, ಪೂರ್ಣಚಂದ್ರ ತೇಜಸ್ವಿ ಮುಂತಾದ ಪ್ರಮುಖ ಬರಹಗಾರರು ಹೊರಬಂದು ಅನೇಕ ಬಗೆಯ ಸಾಹಿತ್ಯಕ ತಿರುವುಗಳಿಗೆ ಕಾರಣರಾದರು.

ನವ್ಯ ಸಾಹಿತ್ಯದ ಉತ್ತಮಾಂಶಗಳನ್ನು ಮೈಗೂಡಿಸಿಕೊಂಡು, ಸಾಮಾಜಿಕ ಕಾಳಜಿಯಿಂದ ಕೂಡಿದ ಹಲವು ಕಾದಂಬರಿಗಳು ೭೦ರ ದಶಕದಲ್ಲಿ ಮತ್ತು ಅನಂತರದ ಅವಧಿಯಲ್ಲಿ ಕಾಣಿಸಿಕೊಂಡವು. ಶ್ರೀ ಕೃಷ್ಣ ಆಲನಹಳ್ಳಿಯವರ 'ಕಾಡು', ಕಾಮರೂಪಿಯವರ 'ಕುದುರೆಮೊಟ್ಟೆ', ವಿಶುಕುಮಾರರ 'ಕರಾವಳಿ' ಮುಂತಾದವು ಈ ಸಾಲಿಗೆ ಸೇರುವ ಕೃತಿಗಳು.

ನವ್ಯ ಸಾಹಿತ್ಯಕ್ಕೆ ಪ್ರತಿಕ್ರಿಯೆಯ ರೂಪದಲ್ಲಿ ಹುಟ್ಟಿಕೊಂಡ ಬಂಡಾಯ-ದಲಿತ ಸಾಹಿತ್ಯ, ಸಾಮಾಜಿಕ ಕ್ರಾಂತಿಯ ಉದ್ದೇಶವನ್ನು ಘೋಷಿಸಿಕೊಂಡೇ ಅಡಿಯಿಟ್ಟಿತು. ಮಾರ್ಕ್ಸ್‌ವಾದಿ ತತ್ವಗಳ ಅರಿವಿನ ಹಿನ್ನಲೆಯಿದ್ದ ಬರಹಗಾರರು ಸಾಹಿತ್ಯಕ್ಕೊಂದು ಸ್ಪಷ್ಟ ನೆಲೆಗಟ್ಟನ್ನು ನಿರ್ಮಿಸಲು ಯತ್ನಿಸಿದರು. ಕಾದಂಬರಿಯನ್ನು ಸಾಮಾಜಿಕ ಕ್ರಾಂತಿಯ ಸಾಧನವನ್ನಾಗಿ ಬಳಸಬಹುದೆಂಬ ಇವರ ನಂಬಿಕೆ ಪ್ರಗತಿಶೀಲರ ಧೋರಣೆಗೆ ಹತ್ತಿರವಾದುದು. ಸಮಾಜ ವ್ಯವಸ್ಥೆಯ ವಿರುದ್ಧ ಸಿಡಿದೆದ್ದು ಹಿಂಸೆ, ಶೋಷಣೆಗಳ ಅನುಭವವನ್ನು ದಟ್ಟವಾಗಿ ಅಭಿವ್ಯಕ್ತಿಸುವ ಕಾದಂಬರಿಗಳನ್ನು ಬಂಡಾಯ-ದಲಿತ ಬರಹಗಾರರು ನೀಡಿದ್ದಾರೆ. ಕುಂ. ವೀರಭದ್ರಪ್ಪನವರ 'ಕಪ್ಪು', ಬರಗೂರು ರಾಮಚಂದ್ರಪ್ಪನವರ 'ಸೂತ್ರ', ಕಾ.ತ. ಚಿಕ್ಕಣ್ಣನವರ 'ಮುಂಜಾವು' ಮುಂತಾದವು ಕೆಲವು ಉಲ್ಲೇಖಾರ್ಹ ಕೃತಿಗಳು. ದಲಿತ ಸಾಹಿತ್ಯಕ್ಕೆ ರೋಷ ಮತ್ತು ಭೀತಿಯ ನೆಲೆ ಒಂದಾದರೆ, ಹಕ್ಕುಗಳಿಗಾಗಿ ಹೊಡೆದಾಡುವ ಸಾಮರ್ಥ್ಯ ಮತ್ತು ಆ ಸಾಮರ್ಥ್ಯದ ಅರಿವು ಮತ್ತೊಂದು ನೆಲೆಯನ್ನು ಒದಗಿಸುತ್ತದೆ.

ಕನ್ನಡದ ಕಾದಂಬರಿ ಇತಿಹಾಸದಲ್ಲಿ ದೇವನೂರು ಮಹಾದೇವರ ಕೃತಿಗಳಿಗೆ ವಿಶಿಷ್ಟಸ್ಥಾನವಿದೆ. ಯಾವ ಹಣೆಪಟ್ಟಿಯ ಅಗತ್ಯವೂ ಇಲ್ಲದೆ ಈ ಲೇಖಕ, ದಲಿತ ಬದುಕಿನ ದಾಖಲೆಯಾಗಷ್ಟೇ ಉಳಿಯದೆ, ಮಾನವ ಜೀವನದ ದಾಖಲೆಯಾಗಬಲ್ಲಂಥ ಕಾದಂಬರಿಗಳನ್ನು ರಚಿಸಿದ್ದಾರೆ. ತಮ್ಮ ಅನುಭವದಿಂದ ನೇರವಾಗಿ, ಶಕ್ತಿಯುತವಾಗಿ ಬರೆಯುತ್ತ, ಭಾಷೆಯನ್ನು ಸೃಜನಶೀಲ ರೀತಿಯಲ್ಲಿ ಬಳಸುತ್ತಾ 'ಒಡಲಾಳ', 'ಕುಸುಮಬಾಲೆ'ಯಂತಹ ಅತ್ಯುತ್ತಮ ಕೃತಿಗಳನ್ನು ನೀಡಿದ್ದಾರೆ. ಮೇಲ್ವರ್ಗದ ಇರವನ್ನು ಹೋಗಲಾಡಿಸಿ, ದಲಿತರ ಬದುಕಿನ ಆಂತರಿಕ ವಲಯವನ್ನು ತೆರೆದಿಡುವುದರಲ್ಲಿ ಮಹಾದೇವರ ಕೃತಿಗಳು ಸಫಲವಾಗಿವೆ. ಈ ಆಂತರಿಕತೆಯ ಅರಿವು ಕನ್ನಡದಲ್ಲಿ ಮೂಡಿರುವ ದಲಿತ ಸಾಹಿತ್ಯದ ಅತ್ಯಂತ ಮುಖ್ಯ ಲಕ್ಷಣವಾಗಿದೆ. ದಲಿತ ಅನುಭವದ ಪುಟ್ಟ ಪ್ರಪಂಚವನ್ನು ನಿರ್ಮಿಸುವ ಸಮಯದಲ್ಲೇ, ಕಾದಂಬರಿಯ ಪಾತ್ರಗಳ ಮೂಲಕ ಮೇಲ್ಜಾತಿಯ ಪುನರ್‌ಸೃಷ್ಟಿಯೂ ನಡೆಯುತ್ತದೆ, ಒಡಲಾಳದ ಸಾಕವ್ವ ಇದಕ್ಕೊಂದು ಉತ್ತಮ ಉದಾಹರಣೆ.

ಹೆಣ್ಣಿನ ಸ್ವಾತಂತ್ರ್ಯ ಮತ್ತು ಬಂಡಾಯದ ಪ್ರಶ್ನೆಗಳನ್ನು ಎತ್ತಿಕೊಳ್ಳುವ ವೀಣಾ ಶಾಂತೇಶ್ವರ ಕೃತಿಗಳು ಸ್ತ್ರೀಪರವಾದಿ ಕೃತಿಗಳ ಸಾಲಿನಲ್ಲಿ ಎದ್ದು ನಿಲ್ಲುವಂಥವು. ಹೆಣ್ಣಿನ ಸಮಸ್ಯೆಯ ಸಂಕೀರ್ಣ ಸ್ವರೂಪದ ಅರಿವು, ಅವುಗಳ ಚಿತ್ರಣಕ್ಕೆ ಅಗತ್ಯವಾದ ಪ್ರಾಮಾಣಿಕತೆ ಮತ್ತು ದಿಟ್ಟತನಗಳನ್ನು ವೀಣಾರವರ ಕಾದಂಬರಿಗಳಲ್ಲಿ ಕಾಣಬಹುದು. 'ಗಂಡಸರು', 'ಶೋಷಣೆ', 'ಅದೃಷ್ಟ' ಮುಂತಾದವು ಈ ಗುಣಗಳನ್ನು ಮೈಗೂಡಿಸಿಕೊಂಡಿರುವ ಕಾದಂಬರಿಗಳು. ಕತೆಗಾರ್ತಿಯರ ಪೈಕಿ ವಿಶಿಷ್ಟ ಸ್ಥಾನ ಗಳಿಸಿಕೊಂಡಿರುವ ವೈದೇಹಿಯವರ ಕಾದಂಬರಿ 'ಅಸ್ಪೃಶ್ಯರು', ತಮ್ಮ ಕಾದಂಬರಿಗಳ ಮೂಲಕ ಹೊಸ ಅನುಭವಲೋಕವೊಂದನ್ನು ತೆರೆದಿಟ್ಟ ಬರಹಗಾರ್ತಿ ಸಾರಾ ಅಬೂಬ್ಬಕರ್ ಮುಸ್ಲಿಂ ಜನಾಂಗದ ಜೀವನ ರೀತಿಯ ಹಿನ್ನೆಲೆಯಲ್ಲಿ ಮಹಿಳೆಯ ನೋವು, ದಾರುಣ ಸ್ಥಿತಿಗತಿಗಳನ್ನು ಅಭಿವ್ಯಕ್ತಿಸಿದ್ದಾರೆ. 'ಚಂದ್ರಗಿರಿಯ ತೀರದಲ್ಲಿ', 'ತಳ ಒಡೆದ ದೋಣಿಯಲ್ಲಿ', 'ಕದನ ವಿರಾಮ' ಮುಂತಾದ ಕಾದಂಬರಿಗಳು ಕನ್ನಡದ ಉತ್ತಮ ಕಾದಂಬರಿಗಳ ಸಾಲಿಗೆ ಸೇರುತ್ತವೆ.

ಸ್ತ್ರೀ ಸ್ವಾತಂತ್ರ್ಯದ ಪ್ರಶ್ನೆ ಗಂಡಿಗಿಂತ ವಿಭಿನ್ನವಾದ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವ ಮತ್ತು ಪಡೆದುಕೊಂಡ ಸ್ಥಾನಗಳಿಗೆ ಸಮ್ಮತಿಗೊಳಿಸಿಕೊಳ್ಳುವ ಪ್ರಶ್ನೆಯಾಗಿ ಹೆಚ್ಚು ಪ್ರಸ್ತುತವಾಗಿರುವ ಇಂದಿನ ಸಂದರ್ಭದಲ್ಲಿ, ಇಂತಹ ಬರಹಗಳು ಸ್ವಾಗತಾರ್ಹವಾಗಿವೆ.

ಇತ್ತೀಚಿನ ಬರಹಗಾರರಲ್ಲಿ ಕೆ. ಸತ್ಯನಾರಾಯಣ ಭರವಸೆ ಹುಟ್ಟಿಸುವ ಕಾದಂಬರಿಕಾರರಾಗಿದ್ದಾರೆ. 'ಒಂದು ಕಥಾನಕದ ಮೂಲಕ', 'ರಾಜಧಾನಿಯಲ್ಲಿ ಶ್ರೀಮತಿಯರು' ಮತ್ತು 'ಗೌರಿ' ಇವರ ಕಾದಂಬರಿಗಳು. ಹೆಣ್ಣನ್ನು ಕುರಿತಂತೆ ಕಾಳಜಿಯಿಂದ ಕೂಡಿದ ಮನಸ್ಸೊಂದು ತನ್ನ ವಿಶಿಷ್ಟ ಸಂವೇದನೆಯ ಮೂಲಕ ಕೃತಿರಚನೆಯಲ್ಲಿ ತೊಡಗಿರುವುದನ್ನು ಇವರ ಕಾದಂಬರಿಗಳು ಸಾಬೀತು ಪಡಿಸುತ್ತವೆ.

ತನ್ನ ಪರಿಸರದಲ್ಲಿ ಉಂಟಾಗುವ ಬದಲಾವಣೆಗಳಿಗೆ ಸ್ಪಂದಿಸುತ್ತ, ವಿಶಿಷ್ಟಸತ್ಯಗಳನ್ನು, ಬದುಕಿನ ವಿವರಗಳನ್ನು ಅವುಗಳ ಎಲ್ಲ ಸಂಕೀರ್ಣತೆಯೊಂದಿಗೆ ನಮ್ಮೆದುರು ದಟ್ಟವಾಗಿ ತೆರೆದಿಡುವ ಕಾದಂಬರಿ, ಸಾಕಷ್ಟು ಬೆಳವಣಿಗೆ ಹೊಂದಿ, ಹೊಸ ಹೊಸ ದಿಕ್ಕುಗಳತ್ತ ಕೈಚಾಚುತ್ತಿದೆ. ಯು.ಆರ್. ಅನಂತಮೂರ್ತಿಯವರು ಹೇಳುವಂತೆ ನಾವು ''ಬದುಕುತ್ತಿರುವ ಈ ಪರ್ವಕಾಲದಲ್ಲಿ ಬದಲಾಗುತ್ತಿರುವ ಬಾಹ್ಯಪ್ರಪಂಚ ಮತ್ತು ತತ್ಪರಿಣಾಮವಾಗಿ ಸಂಘರ್ಷಕ್ಕೆ ಸಿಕ್ಕ ಮನುಷ್ಯ ಎರಡನ್ನೂ ಒಟ್ಟಿಗೆ ಸೃಷ್ಟಿಸಬಲ್ಲ ಲೇಖಕ ಮಾತ್ರ ನಮ್ಮ ಕಾದಂಬರಿ ಲೋಕದಲ್ಲಿ ಹೊಸದನ್ನು ಸಾಧಿಸಬಲ್ಲ.''

೩. ಸಣ್ಣ ಕಥೆ

ಜನಪ್ರಿಯತೆಯ ಮಾನದಂಡದಿಂದ ಅಳೆಯುವುದಾದರೆ, ಕಾದಂಬರಿಯ ಅನಂತರದ ಸ್ಥಾನ ಸಣ್ಣ ಕಥಾ ಪ್ರಕಾರಕ್ಕೆ ಲಭಿಸುತ್ತದೆ. ಮನುಷ್ಯನಿಗೆ ಕಥೆಯ ಬಗ್ಗೆ ಇರುವ ಸಹಜ ಕುತೂಹಲ ಒಂದು ಕಾರಣವಾದರೆ, ಸಣ್ಣ ಕಥೆ ಕಾದಂಬರಿಯಂತೆ ಯೂರೋಪ್, ಅದರಲ್ಲೂ ಇಂಗ್ಲೆಂಡಿನಿಂದ ಹೊಸದಾಗಿ ಬಂದ ಸಾಹಿತ್ಯ ಪ್ರಕಾರ ಎಂಬುದು ಮತ್ತೊಂದು ಕಾರಣವೆನ್ನಬಹುದು. ಕನ್ನಡದ 'ಸಣ್ಣ ಕಥೆ' ಎಂಬ ಶಬ್ದವೇ ಇಂಗ್ಲಿಷಿನ 'Short Story' ಎಂಬುದರ ನೇರ ಭಾಷಾಂತರವಾಗಿದೆ. ಹಾಗಿದ್ದರೂ ಸಣ್ಣ ಕಥೆಗೆ ಭಾರತೀಯ ಪರಂಪರೆಯಲ್ಲಿ ಕೂಡ ನೆಲೆಯಿದೆ ಎಂಬುದನ್ನು ಮರೆಯಲಾಗದು. ೧೦ನೆಯ ಶತಮಾನದ ಶಿವಕೋಟ್ಯಾಚಾರ್ಯನ 'ವಡ್ಡಾರಾಧನೆ' ಕನ್ನಡದ ಅತ್ಯಂತ ಪ್ರಾಚೀನ ಗದ್ಯ ಕಥೆಗಳ ಸಂಕಲನ. ದುರ್ಗಸಿಂಹನ 'ಪಂಚತಂತ್ರ' (೧೧ನೆಯ ಶತಮಾನ), ನಯಸೇನನ 'ಧರ್ಮಾಮೃತ' (೧೨ನೆಯ ಶತಮಾನ), 'ಕಥಾಸರಿತ್ಸಾಗರ', ಜಾನಪದ ಕಥೆಗಳು ಮುಂತಾದವು ಭಾರತೀಯ ನೆಲೆಯಿಂದ ಹೊರಟ ಕೃತಿಗಳೇ ಆಗಿವೆ. ಆಧುನಿಕ ಸಣ್ಣಕಥೆ ವಸ್ತು ಮತ್ತು ತಂತ್ರಗಳ ದೃಷ್ಟಿಯಿಂದ ಈ ಗದ್ಯಕಥೆಗಳಿಗಿಂತ ಭಿನ್ನವಾಗಿದ್ದು, ಪಶ್ಚಿಮದ ನೇರ ಪ್ರಭಾವದಿಂದ ಜನಿಸಿದ ಸಾಹಿತ್ಯ ಪ್ರಕಾರವಾಗಿದೆ. ಓ ಹೆನ್ರಿ, ಲಿಯೋಟಾಲ್‌ಸ್ಟಾಯ್, ಆಂಟನ್ ಚೆಕಾವ್, ಸಾಮರ್‌ಸೆಟ್‌ಮಾಮ್, ಎಡ್ಗರ್ ಆಯಲನ್‌ಪೋ, ಮೊಪಾಸಾ ಮುಂತಾದವರನ್ನು ಮಾದರಿಯಾಗಿ ಸ್ವೀಕರಿಸಿದ ಕನ್ನಡದ ಸಣ್ಣ ಕಥಾ ಪ್ರಕಾರ ತೀವ್ರಗತಿಯಲ್ಲಿ ಬೆಳೆಯಿತು.

ತಮ್ಮ 'ನವ್ಯ ಸಾಹಿತ್ಯ ದರ್ಶನ'ಕ್ಕೆ ಬರೆದ ಮುನ್ನುಡಿಯಲ್ಲಿ ಶಾಂತಿನಾಥ ದೇಸಾಯಿಯವರು ಹೇಳುವ ''ಕಾವ್ಯ ಹೇಳಿ ಕೇಳಿ ಒಳಧ್ವನಿಯ ಹೊರ ಅಭಿವ್ಯಕ್ತಿ. ಸಣ್ಣಕಥೆ ಹೊರಜಗತ್ತಿನ ಒಳ ಅಭಿವ್ಯಕ್ತಿ. ಈ ಅಭಿವ್ಯಕ್ತಿ ಮೊದಮೊದಲು ಸಣ್ಣ ಪುಟ್ಟ ಕಾಣ್ಕೆಗಳಲ್ಲಿಯೇ ಮೂರ್ತಗೊಳ್ಳುವುದು ಅನಿವಾರ್ಯ'' ಮತ್ತು ''ಸಣ್ಣ ಕಥೆಯೇ ಅಸ್ತಿತ್ವವಾದೀ ಭೂಮಿಕೆಗೆ ತಕ್ಕುದಾದ ಸಾಹಿತ್ಯ ಪ್ರಕಾರವೇನೋ ಎಂದು ನನಗೆ ಆಗಾಗ್ಗೆ ಅನಿಸಿದ್ದುಂಟು'' ಎಂಬ ಮಾತುಗಳು ಉಲ್ಲೇಖಾರ್ಹ.

ಇಂದಿನ ಮಾಧ್ಯಮಗಳ ಸ್ಫೋಟ (Media explosion) ಅದರಲ್ಲೂ ದೃಶ್ಯ ಮಾಧ್ಯಮಗಳು ಸ್ಫೋಟದ ಸಂದರ್ಭದಲ್ಲಿ ಕೂಡ, ಸಣ್ಣ ಕಥೆ ತನ್ನ ಜನಪ್ರಿಯತೆಯನ್ನು ಬಿಟ್ಟುಕೊಟ್ಟಿಲ್ಲ. ದಿನಪತ್ರಿಕೆಗಳಲ್ಲಿ, ವಾರಪತ್ರಿಕೆ ಮಾಸಪತ್ರಿಕೆಗಳಲ್ಲಿ ಸಣ್ಣ ಕಥೆಗಳು ನಿರಂತರವಾಗಿ ಬರುತ್ತಲೇ ಇವೆ. ಬಹುಪಾಲು ಟಿ.ವಿ. ಧಾರವಾಹಿಗಳು ಕೂಡ ಸಣ್ಣ ಕಥೆಯ ವಿಸ್ತೃತ ರೂಪಗಳೇ ಆಗಿರುವುದನ್ನು ಕಾಣಬಹುದು.

ಸಣ್ಣಕಥೆಯ ಪ್ರಕಾರಕ್ಕೆ ವಿಶಿಷ್ಟರೂಪ ನೀಡಿ ಅದನ್ನು ಪರಿಣಾಮಕಾರಿ ಮಾಧ್ಯಮವನ್ನಾಗಿ ಬಳಸಿದವರಲ್ಲಿ ಶ್ರೀನಿವಾಸರು (ಮಾಸ್ತಿ ವೆಂಕಟೇಶ್ ಅಯ್ಯಂಗಾರ್) ಮೊದಲಿಗರು. ಚಾರಿತ್ರಿಕವಾಗಿ ಸಣ್ಣ ಕಥೆಗಳನ್ನು ಬರೆದವರಲ್ಲಿ ಮೊದಲಿಗರು ಯಾರು ಎಂಬ ಜಿಜ್ಞಾಸೆಯಿದೆ. ಈ ಶತಮಾನದ ಆರಂಭದಲ್ಲಿ ಕನ್ನಡದ ಸಣ್ಣ ಕಥೆಗಳ ಉಗಮವಾಯಿತು. ಆರಂಭದಲ್ಲಿ ಸಣ್ಣ ಕಥೆಗಳನ್ನು ಬರೆದವರ ಸಾಲಿಗೆ ಪಂಜೆ ಮಂಗೇಶರಾಯರು, ಕೆರೂರ ವಾಸುದೇವಾಚಾರ್ಯರು, ಎಂ.ಎನ್. ಕಾಮತರು ಮುಂತಾದವರು ಸೇರುತ್ತಾರೆ. ೧೯೦೦ರ ಸುಮಾರಿಗೆ ಪ್ರಕಟವಾದ ಪಂಜೆ ಮಂಗೇಶರಾಯರ 'ನನ್ನ ಚಿಕ್ಕತಾಯಿ', 'ಕಮಲಾಪುರದ ಹೋಟ್ಲಿನಲ್ಲಿ', 'ಭಾರತ ಶ್ರವಣ' ಮುಂತಾದವು ಕನ್ನಡ ಸಣ್ಣ ಕಥೆಯ ಮೊದಲ ಉದಾಹರಣೆಗಳು. ಕೆರೂರು ವಾಸುದೇವಾಚಾರ್ಯರ ಕಥನಗುಣ ಗಟ್ಟಿಯಾದ ಕಥಾವಸ್ತುವಿಗೆ 'ಪ್ರಕೃತಿ ಬಲ', 'ಮಲ್ಲೇಶಿಯ ನಲ್ಲೆಯರು', 'ತೊಳೆದ ಮುತ್ತು' ಮೊದಲಾದವು ಉತ್ತಮ ಉದಾಹರಣೆಗಳು. ಇವು ತಂತ್ರದ ದೃಷ್ಟಿಯಿಂದ, ಆರಂಭ ಮುಕ್ತಾಯಗಳ ದೃಷ್ಟಿಯಿಂದ,

ಆಧುನಿಕ ಸಣ್ಣ ಕಥೆಗಳಿಗಿಂತ ಭಿನ್ನವಾಗಿದೆ. ಜಾನಪದ ರಚನೆಗಳಿಗೆ ಹತ್ತಿರವಾಗಿದ್ದು ಆಡುಮಾತಿನ ಸೊಗಡು ಆಕರ್ಷಕ ಸಂಭಾಷಣೆಗಳಿಂದ ಕೂಡಿದೆ.

ಸಮಗ್ರ ಜೀವನದೃಷ್ಟಿಯ ಅಭಾವದಿಂದಾಗಿ ಈ ಮೂವರು ಕಥೆಗಾರರು ನಂತರದ ಕಥೆಗಾರರ ಮೇಲೆ ಪ್ರಭಾವ ಬೀರದೆ ಹೋದರು. ಆದರೂ ಸಣ್ಣ ಕಥೆಯ ಬೆಳವಣಿಗೆಯ ಹಾದಿಯಲ್ಲಿ ಇವರಿಗೆ ಐತಿಹಾಸಿಕ ಮಹತ್ವ ಲಭಿಸಿದೆ.

ಅನಿಶ್ಚಿತ ಸ್ವರೂಪದ ಕಥೆಗಳು ಬರುತ್ತಿದ್ದ ಕಾಲದಲ್ಲೇ ಬಂದ ಶಿ.ಸೋ. ಕುಲಕರ್ಣಿಯವರ 'ನಾಡಸಿಲೆಗಾರ' ಒಂದು ಅಪವಾದವೆನಿಸಿದೆ. ಇದು ಸತ್ವಯುತ ಭಾಷೆಯಿಂದ ಕೂಡಿದ ಶ್ರೇಷ್ಠ ಕೃತಿಯೆಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಪಂಚತಂತ್ರದ ಸಂಪ್ರದಾಯವನ್ನು ಕನ್ನಡದಲ್ಲಿ ಮತ್ತೆ ಕಾಣಿಸಿದ ಈ ಕೃತಿಯಲ್ಲಿ ಪಶುಪಕ್ಷಿಗಳೇ ಪ್ರಧಾನ ಪಾತ್ರಗಳು. ಮನುಷ್ಯ ಅಲ್ಲಲ್ಲಿ ಕಾಣಿಸಿಕೊಳ್ಳುತ್ತಾನೆ. ದೃಷ್ಟಾಂತವಾಗಿ, ರೂಪಕವಾಗಿ ಸಮಕಾಲೀನ ಜೀವನದ ವಿವರಗಳನ್ನೊಳಗೊಂಡ ಕಥೆಗಳು ಇಲ್ಲಿ ಕಂಡುಬರುತ್ತವೆ.

ಹಾಗಿದ್ದರೂ, ಶ್ರೀನಿವಾಸರು ಸಣ್ಣ ಕಥೆಯ ಜನಕರೆಂಬ ಖ್ಯಾತಿಗೆ ಪಾತ್ರರಾಗಿದ್ದಾರೆ. ೧೯೨೦ರಲ್ಲಿ ಪ್ರಕಟವಾದ ಅವರ ಮೊದಲ ಕಥಾಸಂಕಲನ 'ಕೆಲವು ಸಣ್ಣ ಕಥೆಗಳು', ಇವು ಆರಂಭದ ಕಥೆಗಳಾಗಿದ್ದರೂ ಗೋಚರಿಸುವ ಆಳವಾದ ತಿಳಿವು ಮತ್ತು ಜೀವನದೃಷ್ಟಿಗಳು ಇಂದಿಗೂ ಬೆರಗುಗೊಳಿಸುವಂಥವು. ಮಾಸ್ತಿಯವರ ಕಥೆಗಳ ವಸ್ತು, ತಂತ್ರ, ತಿಳಿಹಾಸ್ಯ, ಹಿರಿದಾದ ಜೀವನದೃಷ್ಟಿ, ಸರಳ ಸುಂದರ ಶೈಲಿ, ಅಚ್ಚಳಿಯದ ಪಾತ್ರಗಳು ಕನ್ನಡ ಸಣ್ಣ ಕಥಾ ಪ್ರಪಂಚದಲ್ಲಿ ವಿಶಿಷ್ಟವಾಗಿ ಉಳಿದಿದೆ. ಸಾಮಾಜಿಕ, ಐತಿಹಾಸಿಕ, ಪೌರಾಣಿಕ ಎಲ್ಲ ಬಗೆಯ ಕಥೆಗಳನ್ನೂ ಮಾಸ್ತಿ ರಚಿಸಿದ್ದಾರೆ.

ಮಾಸ್ತಿಯವರ ಸಣ್ಣ ಕಥೆಗಳು ರಚನೆಯಲ್ಲಿ ಇಂಗ್ಲಿಷ್ ಸಣ್ಣ ಕಥೆಗಳ ಮಾದರಿಯಲ್ಲಿದ್ದರೂ, ಕಥಾನಕ (narrative) ಭಾರತೀಯ ಪಂರಪರೆಯದೇ. ಮಾಸ್ತಿಯವರ ಬಹುಪಾಲು ಕಥೆಗಳು 'ಕಥೆಯ ಕಥೆ'ಗಳೇ, ನೇರ ಕಥೆಗಳಲ್ಲ, ನಡೆದ ಘಟನೆಗೂ, ಹೇಳಲಾಗುತ್ತಿರುವ ಕಥೆಗೂ ಎರಡು ಧ್ವನಿಗಳ ಅಂತರವನ್ನು ಗುರುತಿಸಬಹುದು. ಈ ಕಾರಣಕ್ಕಾಗಿ ಮಾಸ್ತಿಯವರು ಸರ್ವಸಾಕ್ಷಿ ಪ್ರಥಮಾ ವಿಭಕ್ತಿಯನ್ನು ಬಿಟ್ಟು, ಒಬ್ಬ ನಿರೂಪಕನಿಂದ ಆತ ಕಂಡದ್ದೋ, ಇಲ್ಲವೋ ಯಾರಿಂದಲೋ ಕೇಳಿದ್ದೋ ಕಥೆಯನ್ನು ಹೇಳಿಸುತ್ತಾರೆ. ಹೀಗೆ ಎರಡು ಬಾರಿ ಹಿಂದೆ ಸರಿಸಲ್ಪಟ್ಟ ಕಥಾನಕವೂ ಮೌಖಿಕ ಪರಂಪರೆಯ ಕಥಾನಕಕ್ಕೆ ಹತ್ತಿರವಾಗುತ್ತಲೇ ಓದುಗರನ್ನು ತನ್ನ ಸನಿಹಕ್ಕೆ ಬರಮಾಡಿಕೊಳ್ಳುತ್ತದೆ. ಮಾಸ್ತಿಯವರ ಕಥೆಗಳಲ್ಲಿ ''ಇದು ನಡೆದದ್ದು ಹೀಗೆ, ನನ್ನ ನೇರ ಅನುಭವದ ಸಂಗತಿಯೇ'' ಎಂಬ ಖಚಿತತೆ ಇಲ್ಲ, ಇದು 'ಹೀಗೆ ಕೂಡ ನಡೆದಿರಲು ಸಾಧ್ಯ' ಎಂಬ ಆಪ್ತ ಹಾಗೂ ಪ್ರಾಮಾಣಿಕ ಧ್ವನಿ ಕಥಾನಕದ ಓಟಕ್ಕೆ ಶ್ರುತಿ ಮಿಡಿಯುತ್ತಲೇ ಇರುತ್ತದೆ. ಘಟನಾವಳಿಗಳು ಅಥವಾ ಕಥೆಯ ಓಘ ಒಂದು ವಾಸ್ತವತೆಯನ್ನು ಸಿದ್ಧಿಸಿಕೊಂಡಿರಲೇಬೇಕೆಂಬ ಷರತ್ತಿನಿಂದ ಮಾಸ್ತಿಯವರ ಕಥೆಗಳು ಸುಲಭವಾಗಿ ಪಾರಾಗುವುದು ಹೀಗೆ.

ಕಾದಂಬರಿ, ನಾಟಕ, ಕಾವ್ಯದಂತಹ ಬೇರೆ ಸಾಹಿತ್ಯ ಪ್ರಕಾರಗಳನ್ನು ತಮ್ಮ ಅಭಿವ್ಯಕ್ತಿಗಾಗಿ ಮಾಸ್ತಿ ಬಳಸಿಕೊಂಡಿದ್ದರೂ, ಸಣ್ಣ ಕಥೆಯನ್ನೇ ಪ್ರಧಾನ ಮಾಧ್ಯಮವನ್ನಾಗಿ ಬಳಸಿಕೊಂಡು ಶ್ರೇಷ್ಠ ದರ್ಜೆಯ ಗದ್ಯ ಲೇಖಕರಲ್ಲಿ ಒಬ್ಬರಾದವರು. ಸಣ್ಣ ಕಥೆಗೆ ನಿಜವಾದ ಸಾಹಿತ್ಯಕ ಸ್ವರೂಪ ನೀಡಿ, ಶ್ರೀಮಂತಿಕೆ ಅರ್ಥಪೂರ್ಣತೆಗಳನ್ನು ತಂದುಕೊಟ್ಟವರು ಶ್ರೀನಿವಾಸರು. ತಮ್ಮ 'ರಂಗಪ್ಪನ ಕತೆಗಳು' ಮೂಲಕ

ಹೊಸ ಸಾಹಿತ್ಯ ಲೋಕವನ್ನು ನಮ್ಮ ಮುಂದೆ ತೆರೆದಿಟ್ಟ ಮಾಸ್ತಿ, ಸಾಮಾನ್ಯ ಘಟನೆಗಳನ್ನು ಉತ್ಪ್ರೇಕ್ಷೆಯಿಲ್ಲದೆ ಸರಳವಾಗಿ ನಿರೂಪಿಸುವ ಕಲೆಯಲ್ಲಿ ನಿಪುಣರು. ಉದಾತ್ತ ಗುಣಗಳಿಂದ ಕೂಡಿದ ಇವರ ಪಾತ್ರಗಳು, ಮರೆಯಲಾಗದ ಚೇತನಗಳಾಗಿ ಓದುಗರ ಮನಸ್ಸಿನಲ್ಲಿ ಉಳಿಯುತ್ತದೆ. ವೆಂಕಟಿಗನ ಹೆಂಡತಿ, ವೆಂಕಟಶಾಮಿಯ ಪ್ರಣಯ, ನಮ್ಮ ಮೇಷ್ಟರು, ಕಾಮನ ಹಬ್ಬದ ಒಂದು ಕಥೆ ಮುಂತಾದವು ಅವರ ಅತ್ಯುತ್ತಮ ಸಾಮಾಜಿಕ ಕಥೆಗಳ ಸಾಲಿಗೆ ಸೇರುತ್ತವೆ. ಜೀವನಶ್ರದ್ಧೆ ಇವರ ಸಾಮಾಜಿಕ ಕಥೆಗಳಲ್ಲಿ ಹಾಸುಹೊಕ್ಕಾಗಿದ್ದರೆ, ಪೌರಾಣಿಕ ಕಥೆಗಳಲ್ಲಿ ಕಂಡುಬರುವುದು ಸದ್ದಿಲ್ಲದೆ ಮೆರೆಯುವ ಸಂಸ್ಕೃತಿಯ ಧಾರೆ. ರಾಜಕೀಯ ಜೀವನವನ್ನು ಚಿತ್ರಿಸುವ ಅವರ ಕಥೆಗಳು ಪ್ಡಂಡಿತರ ಮರಣಶಾಸನ, ಬಾದಶಹನ ದಂಡನೆ ಮುಂತಾದವು ಧೈರ್ಯಶಾಲಿಗಳೂ, ಉದಾತ್ತರೂ ಆದ ಹೆಣ್ಣು ಮಕ್ಕಳು, ನಿಜಗಲ್ಲಿನ ರಾಣಿ, ಪೆನುಗೊಂಡೆಯ ಕೃಷ್ಣಮೂರ್ತಿ ಇಂತಹ ಕಥೆಗಳಲ್ಲಿ ಕಾಣಿಸಿಗುತ್ತಾರೆ. 'ಹೇಮಕೂಟದಿಂದ ಬಂದ ಮೇಲೆ', 'ಮಸುಮತ್ತಿ', 'ಆಚಾರ್ಯರ ಪತ್ನಿ' ಮೊದಲಾದ ಕಥೆಗಳು ಮಾಸ್ತಿಯವರ ವಸ್ತುವಿನ ಆಯ್ಕೆಯ ಅನನ್ಯತೆಯನ್ನು ಸೂಚಿಸುತ್ತವೆ. 'ಮೊಸರಿನ ಮಂಗಮ್ಮ', 'ಜೋಗ್ಯೊರ ಅಂಜಪ್ಪನ ಕೋಳಿ ಕಥೆ', 'ಹೇಮಕೂಟದಿಂದ ಬಂದ ಮೇಲೆ', 'ವಸುಮತಿ' ಇಂತಹ ಕಥೆಗಳು ಬೇರಾವುದೇ ಭಾಷೆ ಅತ್ಯುತ್ತಮ ಕಥೆಗಳ ಸಾಲಿಗೆ ಸೇರಬಲ್ಲವು.

ಶ್ರೀನಿವಾಸರ ಮಾರ್ಗದಲ್ಲಿ ಬೆಳೆದ ಮುಖ್ಯ ಕಥೆಗಾರರ ಪೈಕಿ 'ಆನಂದ (ಅಜ್ಜಂಪುರ ಸೀತಾರಾಂ) ಅಗ್ರಗಣ್ಯರು. ವಾರದ ಹುಡುಗನೊಬ್ಬನ ದುಃಖವನ್ನು ಚಿತ್ರಿಸುವ 'ಭವತಿ ಭಿಕ್ಷಾಂ ದೇಹಿ' ಇವರ ಮೊದಲ ಕಥೆ. ಬಡತನದ ಬೇಗೆಯನ್ನೂ ವ್ಯಕ್ತಿಯ ಆಸೆ ಆಕಾಂಕ್ಷೆಗಳು ಬಡತನಕ್ಕೆ ಸಿಕ್ಕು ನಲುಗುವ ಪರಿಯನ್ನೂ 'ಬೇವು-ಬೆಲ್ಲ', 'ಕೊನೇ ಎಂಟಾಣೆ' ಮುಂತಾದ ಕಥೆಗಳಲ್ಲಿ ಚಿತ್ರಿಸುತ್ತಾರೆ. ಕಥೆಗಾರರೆನಿಸಿದ ಆನಂದರು 'ಹೆಂಡತಿಯ ಕಾಗದ', 'ಪದ್ಮ ಪಾಕ', 'ನಾವು ಹಾಗೆಯೇ', 'ರಾಧೆಯ ಕ್ಷಮೆ' ಮುಂತಾದ ಕಥೆಗಳಲ್ಲಿ ಪ್ರಣಯ ಜೀವನದ ನಾಜೂಕುಗಳನ್ನು ಚಿತ್ರಿಸಿದ್ದಾರೆ. ಈ ಕಥೆಗಳು ಕೆ.ಎಸ್. ನರಸಿಂಹಸ್ವಾಮಿಯವರ 'ಮೈಸೂರು ಮಲ್ಲಿಗೆ'ಯಂತಹ ಅನುಭವ ನೀಡುತ್ತವೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. 'ನಾನು ಕೊಂದ ಹುಡುಗಿ' (೧೯೨೯) ಇವರ ಅತ್ಯುತ್ತಮ ಕಥೆ. ಇಡೀ ಕಥೆ ಒಂದು ಚಿತ್ರಕೃತಿಯಂತೆ ಮೂಡಿದೆ. ಸಣ್ಣಕಥೆಯ ವ್ಯಾಪ್ತಿಯಲ್ಲಿ ಸಂಕೀರ್ಣ ಸಾಮಾಜಿಕ ಸಮಸ್ಯೆಯೊಂದರ ಚಿತ್ರವನ್ನು ಬಿಡಿಸಿರುವ ಆನಂದರು ಸಣ್ಣ ಕಥೆಯ ವ್ಯಾಪ್ತಿಯನ್ನೇ ಹಿಗ್ಗಿಸಿದರು. ಮಾನವೀಯತೆ ತನ್ನ ಎಲ್ಲ ಸಾಂಸ್ಕೃತಿಕ, ಮನಃಶಾಸ್ತ್ರೀಯ ಆಯಾಮಗಳೊಂದಿಗೆ ದಟ್ಟ ಅನುಭವವಾಗಿ ಪರಿಣಮಿಸುತ್ತದೆ. ಈ ಕಾರಣದಿಂದಾಗಿ ಆನಂದರು ಮೊದಲು 'ಆಧುನಿಕ ಕಥೆಗಾರರೆನಿಸುತ್ತಾರೆ. ಪಟ್ಟಣದ ಸುಶಿಕ್ಷಿತ ಮಧ್ಯಮ ವರ್ಗದ ಸಂಸ್ಕೃತಿ ಮತ್ತು ಗ್ರಾಮೀಣ ಸಂಸ್ಕೃತಿ – ಈ ಎರಡರ ನಡುವಿನ ಮುಖಾಮುಖಿಯನ್ನು ಚಿತ್ರಿಸುವ ಈ ಸಂಕೀರ್ಣವಾದ ಕಥೆ ಮಹತ್ವಾಕಾಂಕ್ಷೆಯಿಂದ ಕೂಡಿದ್ದು ಒಂದು ಮೈಲುಗಲ್ಲೆನಿಸಿದೆ.

ಕೆ. ಗೋಪಾಲಕೃಷ್ಣರಾಯರು ತಮ್ಮ ಕಥೆಗಳಲ್ಲಿ ವ್ಯಕ್ತಿಯ ಬದುಕಿನ ಗುರಿ, ರೀತಿ, ನೀತಿಗಳನ್ನು ಚಿತ್ರಿಸಿದ್ದಾರೆ. ಇವರ 'ಜಟಕಾ ಸಾಹೇಬ್', 'ಮಾಗಡಿ ರಂಗ' ಮುಂತಾದವು ಮನುಷ್ಯ ಸ್ವಭಾವದಲ್ಲಿ ಅಡಗಿರುವ ಹಿರಿಮೆಯನ್ನು ಎತ್ತಿಹಿಡಿಯುತ್ತವೆ. ಕಲಾತ್ಮಕತೆಯ ದೃಷ್ಟಿಯಿಂದ ನೋಡಿದರೆ, ಅವು ಆನಂದರ ಕಥೆಗಳಷ್ಟು ಉತ್ಕೃಷ್ಟವೆನಿಸುವುದಿಲ್ಲ. ಅವರ 'ಸುಶೀಲ್ ಸಂಕೇತ್' ಸುಂದರವಾಗಿ ಹೆಣೆಯಲಾದ ಕಥೆ. ಇವರ 'ಕೆನ್ಸಿಂಗ್ಟನ್ ಪಾರ್ಕ್'ನಲ್ಲಿರುವ 'ಪಲ್ನಿಸ್ವಾಮಿ ಪಾರ್ಕ್' ಮತ್ತೊಂದು ಯಶಸ್ವಿಯಾದ ಕಥೆ. ಸುಂದರ ಕಥೆಗಳನ್ನು ರಚಿಸಿದವರಲ್ಲಿ 'ಶ್ರೀ ಸ್ವಾಮಿ' (ರಂಗಸ್ವಾಮಿ

ಅಯ್ಯಂಗಾರ್) ಮತ್ತೊಬ್ಬರು. 'ಪುಷ್ಪಮಾಲೆ', 'ಗೋಧೂಳಿ ಲಗ್ನ', 'ಪತಿಪರಾಯಣೆ', 'ಬೀಬಿ ನಾಚ್ಚಿಯಾರ್' ಮುಂತಾದವು ಇವರ ಉಲ್ಲೇಖಾರ್ಹ ಕಥೆಗಳು. 'ಭಾರತೀಯಪ್ರಿಯ' (ಎಸ್. ವೆಂಕಟರಾವ್), ಸಿ.ಕೆ. ವೆಂಕಟರಾಮಯ್ಯ ಮತ್ತು ಎಂ.ವಿ. ಸೀತಾರಾಮಯ್ಯ ಮೊದಲಾದವರು ಮಾಸ್ತಿಯವರ ಹಾದಿಯಲ್ಲೇ ನಡೆದ ಮತ್ತಷ್ಟು ಕಥೆಗಾರರು. ಇದೇ ಸಾಲಿಗೆ ಸೇರುವ 'ಅಶ್ವತ್ಥ' (ಕೆ. ಅಶ್ವತ್ಥನಾರಾಯಣರಾವ್) ಕನ್ನಡದಲ್ಲಿ ಅತಿ ಹೆಚ್ಚು ಸಣ್ಣ ಕಥಗಳನ್ನು ಬರೆದವರಲ್ಲಿ ಒಬ್ಬರಾಗಿರುತ್ತಾರೆ. ಶಿಷ್ಟವಾದ ರೀತಿಯಲ್ಲಿ ಹಲವಾರು ಬಗೆಯ ಅನುಭವಗಳನ್ನು ಅವರ ಕಥೆಗಳಲ್ಲಿ ಚಿತ್ರಿಸಿದಾರೆ.

ಮಧ್ಯಮ ವರ್ಗದ ಬದುಕನ್ನು ಯಶಸ್ವಿಯಾಗಿ ಚಿತ್ರಿಸಿರುವ ಕಥೆಗಾರರು ಎಸ್.ಜಿ. ಶಾಸ್ತ್ರಿಗಳು. ನವರತ್ನ ರಾಮರಾಯರ ಕಥೆಗಳಲ್ಲಿ ಮೂಡಿಬರುವ ಕಛೇರಿ ವಾತಾವರಣ ವಿಶಿಷ್ಟವಾದುದು. 'ಹೆಣ್ಣು ಹೃದಯ' ಅವರ ಉತ್ತಮ ಕಥೆ. ಕುತೂಹಲ ಕೆರಳಿಸುವ ಗುಣ ಅವರ ಕಥೆಗಳ ಮತ್ತೊಂದು ವೈಶಿಷ್ಟ್ಯ. ಮಾಸ್ತಿಯವರು ಹುಟ್ಟುಹಾಕಿದ ಉತ್ತಮ ಮೌಲ್ಯಗಳನ್ನು ಅವರ ಹಾದಿಯಲ್ಲಿ ನಡೆದ ಹೆಚ್ಚಿನ ಕಥೆಗಾರರು ತಮ್ಮ ಕೃತಿಗಳಲ್ಲಿ ಅಳವಡಿಸಿಕೊಂಡರು. ಈ ಪರಂಪರೆಯ ಹೊರಗೂ ಅನೇಕ ಕಥೆಗಾರರು ಕಥಾರಚನೆಯಲ್ಲಿ ನಿರತರಾಗಿದ್ದಾರೆ. ಎ.ಆರ್. ಕೃಷ್ಣಶಾಸ್ತ್ರಿಗಳು ಕೆಲವೇ ಕಥೆಗಳನ್ನು ರಚಿಸಿದ್ದರೂ, ಗುಣಮಟ್ಟದ ದೃಷ್ಟಿಯಿಂದ ಇವು ಅಮೂಲ್ಯವಾದುವು. ಇವರ 'ಶ್ರೀಮತಿ ಕಥೆಗಳು' ಒಂದು ಉತ್ತಮ ಕಥಾಸಂಕಲನ. ಇವರ ಕಥೆಗಳ ಪೈಕಿ 'ಗುರುಗಳ ಮಹಿಮೆ' ವಿಶಿಷ್ಟವಾಗಿದ್ದು ಜೀವನದ ಸಮಗ್ರ ನೋಟವನ್ನು ಒಳಗೊಂಡಿದೆ.

ಗ್ರಾಮೀಣ ಬದುಕಿನ ಮಾರ್ಮಿಕ ಚಿತ್ರಣದೊಂದಿಗೆ ಗೊರೂರು ರಾಮಸ್ವಾಮಿ ಅಯ್ಯಂಗಾರರ ಹೆಸರು ಹೆಣೆದುಕೊಂಡಿದೆ. ಇವರು ಮಾಸ್ತಿಯವರಿಂದ ಸ್ಫೂರ್ತಿ ಪಡೆದವರಾದರೂ, ಆ ಸಂಪ್ರದಾಯದ ಹೊರಗೆ ನಿಲ್ಲುತ್ತಾರೆ. ವಿಪುಲ ಸಂಖ್ಯೆಯಲ್ಲಿ ಸಣ್ಣ ಕಥೆಗಳನ್ನು ರಚಿಸಿರುವ ಗೊರೂರು ತಮ್ಮ ವಿಶಿಷ್ಟ ಹಾಸ್ಯದ ಲೇಪನದಿಂದಾಗಿ ಮನದಲ್ಲಿ ಅಚ್ಚೊತ್ತಿ ನಿಲ್ಲುವಂಥ ವೈವಿಧ್ಯ ಪೂರ್ಣ ವ್ಯಕ್ತಿಗಳು, ಘಟನಾವಳಿಗಳನ್ನೂ, ಕೊಡುಗೆಯಾಗಿ ನೀಡಿದ್ದಾರೆ. ಗೊರೂರರ ಹಾಸ್ಯ, ಪ್ರತಿಭೆ, ವ್ಯಂಗ್ಯ, ವಿಡಂಬನೆಗಳನ್ನೂ ಒಳಗೊಳ್ಳುತ್ತದೆ. ಸಹಾನುಭೂತಿ ಗೊರೂರರ ಹಾಸ್ಯದ ಜೊತೆಜೊತೆಗೂ ಹರಿಯುತ್ತ ಯಶಸ್ವೀ ಜೀವನ ಚಿತ್ರಣಕ್ಕೆ ಕಾರಣವಾಗಿದೆ. ವೈಯ್ಯಾರಿ, ಗರುಡಗಂಬದ ದಾಸಯ್ಯ, ಶಿವರಾತ್ರಿ, ಬೆಸ್ತರ ಕರಿಯ ಮುಂತಾದ ಹಲವು ಕಥಾ ಸಂಗ್ರಹಗಳು ಗೊರೂರರ ಲೇಖನಿಯಿಂದ ಮೂಡಿವೆ. ಬೂತಯ್ಯನ ಮಗ ಅಯ್ಯು, ಹಾರುವಯ್ಯ ಹಜಾಮನಾದದು, ಆಚಾರ ಕೆಟ್ಟರೂ ಆಕಾರ ಕೆಡಬಾರದು, ಡೊಂಕುಬಾಲ ಮುಂತಾದವು ಗೊರೂರರ ಸುಗಮ ಕಥನ ಶೈಲಿಗೆ ಹೆಸರಾದ ಅತ್ಯುತ್ತಮ ಕಥೆಗಳ ಸಾಲಿಗೆ ಸೇರುತ್ತವೆ.

ಪಡುಕೋಣೆ ರಮಾನಂದರಾಯರು ಗೊರೂರರಂತೆಯೇ ನಗೆ ಬರಹಗಾರರು. ಅವರ 'ಹುಚ್ಚು ಬೆಳದಿಂಗಳಿನ ಹೂಬಾಣಗಳು' ಎಂಬ ಸಂಗ್ರಹದಲ್ಲಿ ಸಣ್ಣ ಕಥೆಗಳು ಎನ್ನಬಹುದಾದ ರಚನೆಗಳಿದ್ದರೂ, ಅವು ನಗೆಬರಹಗಳಾಗಿಯೇ ಉಳಿದಿದೆ. 'ನನ್ನ ಭಾವ' ಎಂಬ ಕಥೆ ಈ ತಲೆಮಾರಿನ ಅತ್ಯಂತ ವಿನೋದಮಯ ಕಥೆಗಳಲ್ಲಿ ಒಂದೆನಿಸಿದೆ.

ಕೊಡಗಿನ ಗೌರಮ್ಮ ಉತ್ತಮ ಕಥೆಗಾರ್ತಿಯೆನಿಸಿ ಹೆಣ್ಣಿನ ಬದುಕಿನ ನೋವು ನಲಿವುಗಳ ಚಿತ್ರಗಳನ್ನು ತಮ್ಮ ಕಥೆಗಳಲ್ಲಿ ನೀಡಿದ್ದಾರೆ. ಮೊದಲ ಲೇಖಕಿಯಾಗಿರುವ ಹೆಗ್ಗಳಿಕೆಯೊಂದಿಗೆ ಒಳ್ಳೆಯ ಕಥೆಗಾರ್ತಿ ಎಂಬ ಹೆಸರೂ ಈಕೆಗಿದೆ. 'ಕಂಬನಿ', 'ಗೌರಮ್ಮ ಕಥೆಗಳು' ಮತ್ತು 'ಚಿಗುರು' ಇವರ ಕಥಾಸಂಕಲನಗಳು. ಕಥೆಗಾರ್ತಿಯಲ್ಲಿ ಶ್ಯಾಮಲಾದೇವಿಯರದು ಇನ್ನೊಂದು ಮುಖ್ಯ ಹೆಸರು.

'ಹೂ ಬಿಸಿಲು' ಮತ್ತು 'ಹೊಂಬಿಸಿಲು' ಎಂಬ ಎರಡು ಕಥಾ ಸಂಗ್ರಹದಲ್ಲಿ ಮಧ್ಯಮ ಕೌಟುಂಬಿಕ ಜೀವನವನ್ನು ನೈಜವಾಗಿ ಚಿತ್ರಿಸಲಾಗಿದೆ. 'ದಾಜಿಬಾ', 'ಸೇರಪಾಟ್ಲಿ' ಮುಂತಾದ ಕಥೆಗಳು ಮಾನವೀಯತೆಯಿಂದ ಕೂಡಿದೆ.

ಸಣ್ಣಕಥಾ ಕ್ಷೇತ್ರದಲ್ಲಿ ದೇವುಡು ಅವರದು ಮತ್ತೊಂದು ಮುಖ್ಯ ಹೆಸರು. ಅವರ 'ಸೋಲೋ ಗೆಲುವೋ'ನಲ್ಲಿ ಕಂಡುಬರುವ ನೀಳ್ಗತೆಗಳು ಉತ್ತಮ ರಚನೆಗಳೆನಿಸಿವೆ.

ಕವಿಗಳೆನಿಸಿದ ಬೇಂದ್ರೆ, ಕುವೆಂಪು, ಪು.ತಿ. ನರಸಿಂಹಾಚಾರ್ ಮೊದಲಾದವರು ಮಹತ್ವಪೂರ್ಣ ಕಥೆಗಳನ್ನು ರಚಿಸಿದ್ದಾರೆ. ಬೇಂದ್ರೆಯವರ 'ಪಾಲಾಪು', 'ಹಿರಿದ ಕತ್ತಿ', 'ಏಕಾಕಿನಿ' ಮುಂತಾದವು ಭಾವಗೀತಾತ್ಮಕ ಗುಣದಿಂದ ಕೂಡಿದ ಸುಂದರ ಕಥೆಗಳು. 'ಸಣ್ಣ ಕಥೆ ತನ್ನ ಆಂತರಿಕ ಸ್ವಭಾವದಲ್ಲಿ ಭಾವಗೀತಕ್ಕೆ ತೀರ ಸಮೀಪವಾಗಿರುವುದರಿಂದಲೋ ಏನೋ ಈ ಕಥೆಗಳ ಸೌಂದರ್ಯ ಕಲ್ಲಿನಲ್ಲಿ ಕೊರೆದಷ್ಟು ಸ್ಪಷ್ಟವಾಗಿದೆ' ಎಂಬ ಕೀರ್ತಿನಾಥ ಕುರ್ತಕೋಟಿಯವರ ಮಾತು ಇಲ್ಲಿ ಉಲ್ಲೇಖಾರ್ಹ. ನಿಸರ್ಗ ಪ್ರೇಮಿಯಾದ ಕುವೆಂಪುರವರ ಕಥೆಗಳಲ್ಲಿ ಸಮಾಜದ ಅಂಕುಡೊಂಕುಗಳನ್ನು ತಿದ್ದುವ ಬಯಕೆ ಗೋಚರವಾಗುತ್ತದೆ. 'ಧನ್ವಂತರಿಯ ಚಿಕಿತ್ಸೆ' ಎಂಬ ಕಥೆಯಲ್ಲಿ ಸಾಮಾಜಿಕ ಕ್ರಾಂತಿಯ ಒಲವು ಕಂಡುಬರುತ್ತದೆ. ಭಗ್ನ ಪ್ರಣಯದ ಸುಂದರ ನಿರೂಪಣ 'ಮೀನಾಕ್ಷಿಯ ಮನೆ ಮೇಷ್ಟ್ರು' ಕಥೆಯಲ್ಲಿ ಕಾಣಸಿಗುತ್ತದೆ. 'ಯಾರೂ ಅರಿಯದ ವೀರ' ಎಂಬ ಕಥೆಯಲಿ ಉತ್ತಮ ಕಥೆಗಾರಿಕೆಯ ಗುಣ ಪ್ರಕಟವಾಗಿದೆ. 'ನನ್ನ ದೇವರು', 'ಸನ್ಯಾಸಿ' ಮೊದಲಾದವು ಆದರ್ಶದ ತಳಹದಿಯ ಮೇಲೆ ರೂಪುಗೊಂಡ ಕಥೆಗಳು.

ಸತ್ವಯುತವಾದ ಕಥೆಗಳನ್ನೊಳಗೊಂಡ ಪು.ತಿ.ನ. ರವರ ಸಂಕಲನ 'ಧ್ವಜ ರಕ್ಷಣೆ' ಎಂಬ ಕಥೆಯ ವಸ್ತುನೇರವಾಗಿ ರಾಜಕೀಯ ಹೋರಾಟಕ್ಕೆ ಸಂಬಂಧಿಸಿದ್ದರೂ, ಆದರ್ಶದ ಬೆನ್ನು ಹತ್ತಿದ ಯುವಕನೊಬ್ಬನ ಆಂತರಿಕ ಹೋರಾಟವನ್ನೂ, ಈ ಕಥೆ ಪರಿಣಾಮಕಾರಿಯಾಗಿ ಚಿತ್ರಿಸುತ್ತದೆ.

ಸಣ್ಣ ಕಥೆಯ ಕ್ಷೇತ್ರದಲ್ಲಿ 'ಭಾರತೀಪ್ರಿಯ' (ಎಸ್. ವೆಂಕಟರಾವ್) ಮರೆಯಲಾಗದ ಹೆಸರುಗಳಲ್ಲಿ ಒಂದು. 'ಮೋಚಿ' ಸರಳ ಮನ ಮಿಡಿಯುವ ಕಥೆ. ಇವರ 'ವೀಣೆ' ಮತ್ತು 'ಒಂದು ಹಳೆಯ ಕಥೆ' ಓದುಗರ ಮನಸ್ಸಿನಲ್ಲಿ ಅಚ್ಚೊತ್ತಿ ನಿಲ್ಲಬಲ್ಲ ರಚನೆಗಳು. ವೈನಾಡಿನ ಜನರ ರೀತಿ ನೀತಿಗಳನ್ನು ಇವರ ಕಥೆಗಳಲ್ಲಿ ಕಾಣಬಹುದಾಗಿದೆ.

ಎಂ.ವಿ. ಸೀತಾರಾಮಯ್ಯನವರ 'ಹುಟ್ಟಿನ ಹಂಬಲ', ಜಡಭರತರ 'ಡೂಗಜ್ಜನ ಬಹಿಷ್ಕಾರ', ಕ್ಷೀರಸಾಗರರ 'ನಮ್ಮೂರಿನ ಪಶ್ಚಿಮಕ್ಕೆ' ಮುಂತಾದವು ಕನ್ನಡದ ಒಳ್ಳೆಯ ಕಥೆಗಳೆನಿಸಿವೆ. ಸೇಡಿಯಾಪು ಕೃಷ್ಣಭಟ್ಟರ ಕಥೆಗಳು ವಡ್ಡಾರಾಧನೆಯ ಸ್ವರೂಪವನ್ನು ನೆನಪಿಸುವಂಥವು. 'ಚೆನ್ನೆಮಣೆ', 'ನಾಗರ ಬೆತ್ತ'ದಂತಹ ಕಥೆಗಳಲ್ಲಿ ಸೊಗಸಾದ ಗದ್ಯದ ಅನುಭವವಾಗುತ್ತದೆ. ಶಿವರಾಮ ಕಾರಂತರು 'ಹಸಿವು' ಮತ್ತು 'ಹಾವು' ಎಂಬ ಎರಡು ಕಥಾಸಂಕಲನಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಜನಜೀವನದ ರೀತಿಯನ್ನೂ, ಬಡತನದ ಚಿತ್ರಣವನ್ನೂ ಮನಮುಟ್ಟುವ ರೀತಿಯಲ್ಲಿ ನೀಡಿದ್ದಾರೆ. ಅವರ 'ಹೋಳಿಗೆ' ಬಡತನದ ದಾರುಣತೆಯನ್ನೂ, ಸಾಮಾಜಿಕ ವಿಷಮತೆಯನ್ನೂ ಎತ್ತಿ ಹಿಡಿಯುವ ಆ ಕಾಲದ ಶ್ರೇಷ್ಠ ಕಥೆಯೆನಿಸಿದೆ.

ಎಸ್.ಜಿ. ಶಾಸ್ತ್ರಿಗಳ ಕಥೆಗಳಲ್ಲಿ ಮಧ್ಯಮ ವರ್ಗದ ಬದುಕಿನ ಯಶಸ್ವೀ ಚಿತ್ರಣ ದೊರೆಯುತ್ತದೆ. ನವರತ್ನ ರಾಮರಾಯರ ಕಥೆಗಳಲ್ಲಿ ಮೂಡಿ ಬರುವ ಕಛೇರಿ ವಾತಾವರಣ ವಿಶಿಷ್ಟವಾದುದು. 'ಹೆಣ್ಣು ಹೃದಯ' ಅವರ ಉತ್ತಮ ಕಥೆ. ಕುತೂಹಲ ಕೆರಳಿಸುವ ಗುಣ ಅವರ ಕಥೆಗಳ ಮತ್ತೊಂದು ವೈಶಿಷ್ಟ್ಯ.

ಉತ್ತರ ಕರ್ನಾಟಕದ ಪ್ರದೇಶದಿಂದಲೂ ಸಾಕಷ್ಟು ಕಥೆಗಳು ಹರಿದು ಬಂದವು. ಹಳೆ ಮೈಸೂರಿನ ಬಹಳಷ್ಟು ಕಥೆಗಾರರು ಮಾಸ್ತಿಯವರ ಪ್ರಭಾವಕ್ಕೆ ಒಳಗಾಗಿದ್ದುದು ಕಂಡುಬಂದರೆ, ಅದೇ ಕಾಲಕ್ಕೆ ಬರೆಯತೊಡಗಿದ್ದ ಉತ್ತರ ಕರ್ನಾಟಕದ ಕಥೆಗಾರರು ಸ್ವತಂತ್ರ ರೀತಿಯಲ್ಲಿ ಕಥಾರಚನೆಯಲ್ಲಿ ತೊಡಗಿದ್ದರು. ಅಲ್ಲಿನ ಹಳ್ಳಿಗಳ ಜೀವನವನ್ನು ಚಿತ್ರಿಸಿರುವ ಆನಂದಕಂದ (ಬೇಟಗೇರಿ ಕೃಷ್ಣಶರ್ಮ) ಗೊರೂರರಂತೆ ಗ್ರಾಮೀಣ ಜೀವನದ ನೈಜ ಚಿತ್ರಣಕ್ಕೆ ಹೆಸರಾದವರು. ಆದರೆ ಗೊರೂರರ ಹಾಸ್ಯ ಆನಂದಕಂದರ ಕಥೆಗಳಲ್ಲಿಲ್ಲ. ಅವರ ಕಥೆಗಳಲ್ಲಿ ಭಾವನಾಪರವಶತೆ ಕಳೆದು, ವಾಸ್ತವ ದೃಷ್ಟಿ ಮನೆಮಾಡಿದೆ. 'ಇಬ್ಬಣದ ದಿಬ್ಬಣ'ದಲ್ಲಿ ಇಂತಹ ವಾಸ್ತವತೆಯನ್ನು ಕಾಣಬಹುದು. 'ಮಲ್ಲಮ್ಮನ ಮಹಾಭಾರತ' ಅವರ ಮತ್ತೊಂದು ಸುಂದರ ಕಥೆ. ಭಾಷೆಯ ಬಳಕೆಯ ದೃಷ್ಟಿಯಿಂದಲೂ ಆನಂದಕಂದರ ಕಥೆಗಳು ಉತ್ತಮವೆನಿಸಿವೆ. ಅವರ ಎಲ್ಲ ಕಥೆಗಳನ್ನೂ ಒಟ್ಟಾರೆಯಾಗಿ ಪರಿಶೀಲಿಸಿದಾಗ ಭಾಷೆಯ ಬಳಕೆಯಲ್ಲಿ ಆನಂದಕಂದರು ಸಾಧಿಸಿರುವ ವೈವಿಧ್ಯ ಎದ್ದು ಕಾಣುತ್ತದೆ. ಸೀಮೆ ಕಲ್ಲಿನ ಶಾಸನದ ಭಾಷೆ, ಚೋಗತಿ ಕಲ್ಲಿನ ಧರಮಣ್ಣನ ಕೆಚ್ಚು ತುಂಬಿದ ಭಾಷೆ, ಕಂಕಣದ ಕೈಯ ಐತಿಹಾಸಿಕ ಭಾಷೆಗಳನ್ನು ಇಲ್ಲಿ ಉದಾಹರಿಸಬಹುದು.

ಕೃಷ್ಣಕುಮಾರ ಕಲ್ಲೂರರವರ ಮೊದಲ ಕಥಾ ಸಂಕಲನ 'ಬಿಸಿಲು ಕುದುರೆ'. ಅನುಭವದ ದೃಷ್ಟಿಯಿಂದ ಪಕ್ವತೆಯ ಕೊರತೆಯಿದ್ದರೂ, ಕಲೆಗಾರಿಕೆಯ ಕೆಲವು ಅಂಶಗಳು ಅಲ್ಲಿ ಕಾಣಸಿಗುತ್ತವೆ. 'ಜೀವನ' ಎಂಬ ಎರಡನೆಯ ಸಂಲಕನ ಕೆಲವು ಉತ್ತಮ ಕಥೆಗಳನ್ನು ಒಳಗೊಂಡಿದೆ. 'ಜೀವನ' ಎಂಬ ಕಥೆಯಲ್ಲಿ ಬರುವ ರಮಾಬಾಯಿಯ ಪಾತ್ರಸೃಷ್ಟಿ ಇವರ ಕಲಾ ಪ್ರೌಢಿಮೆಯನ್ನು ಎತ್ತಿ ಹಿಡಿಯುವಂಥದ್ದು.

'ಗಂಗೆಯ ಗುತ್ತಿಗೆ' ಮತ್ತು 'ಛಪ್ಪದಬಂದ' ಕತೆಗಳನ್ನು ಬರೆದು ಪ್ರಸಿದ್ಧಿಗೆ ಬಂದವರು ಟೇಂಗ್ಸೆ ಗೋವಿಂದರಾಯರು. ಮೊದಲನೆಯ ಕಥೆ ವಿನೋದದ ಚೌಕಟ್ಟಿನಲ್ಲಿ ರಚಿತವಾಗಿದ್ದರೆ. ಎರಡನೆಯದು ಸರಳ ಪ್ರೀತಿಯ, ಬಡತನದ ಯಶಸ್ವೀ ಚಿತ್ರಣವೆನಿಸಿದೆ. ಅವರ ಪ್ರತಿಭೆಯ ಎರಡು ಮುಖಗಳನ್ನು ಈ ಕಥೆಗಳು ಪ್ರತಿನಿಧಿಸಿವೆ.

'ಕನಸಿನ ಕೆಳದಿ' ರಂ. ಶ್ರೀ. ಮುಗಳಿಯವರ ಉತ್ತಮ ಸಂಕಲನ. ಮಧ್ಯಮ ವರ್ಗದ ಸಮಸ್ಯೆಗಳ ಹೃದಯಂಗಮ ಚಿತ್ರಣ ನೀಡುವ ಈ ಕಥೆಗಳು ರಚನಾ ಕೌಶಲ್ಯದಿಂದ ಉತ್ತಮವೆನಿಸಿದ್ದು ವಾಸ್ತವತೆಯ ಕೆಚ್ಚು ವಿಚಾರ ಪ್ರಚೋದಕ ಗುಣಗಳಿಂದ ತುಂಬಿದೆ. 'ವಿತಂತು ವೇಶ್ಯೆ' ದುರದೃಷ್ಟಕ್ಕೆ ಗುರಿಯಾದ ಹೆಣ್ಣೊಬ್ಬಳ ದಾರುಣ ಕಥೆಯನ್ನು ಹೇಳುವ ವಿಶಿಷ್ಟ ಕಥೆ. 'ನೀರಿನ ಸಾರಪ್ಪ' ಹಾಗೂ 'ಕೂಟ ಪ್ರಶ್ನೆ'ಗಳು ಅವರ ಇತರ ಶ್ರೇಷ್ಠ ಕಥೆಗಳು.

ತಮ್ಮ ಮಧ್ಯಮ ವಯಸ್ಸಿನಲ್ಲೇ ಸಾವಿಗೀಡಾದ ದಿ|| ಎಚ್.ಸಿ. ಜೋಶಿ ಬರೆದಿರುವ ಕಥೆಗಳು ಸಂಖ್ಯೆಯ ದೃಷ್ಟಿಯಿಂದ ಕಡಿಮೆಯೆನಿಸಿದರೂ, ನಿರಂತರ ಕಲೆಗಾರಿಕೆಯಿಂದ ಕೂಡಿದ ಅವರ ಕಥೆಗಳು ವಿಶಿಷ್ಟ ಕೊಡುಗೆಗಳೆನಿಸಿವೆ. ಕಥಾವಸ್ತುವನ್ನು ಅತ್ಯಂತ ಜಾಗರೂಕರಾಗಿ ನಿರ್ವಹಿಸುವ ಜೋಶಿಯವರು 'ಭಾವಪ್ರಪಾತ'ದಂತಹ ಅಚ್ಚಳಿಯದ ಕಥೆಗಳ ಸಂಗ್ರಹವನ್ನು ನೀಡಿದ್ದಾರೆ. 'ಕಿಚ್ಚಿನ ಕಾವಲು' ದಟ್ಟವಾದ ರೀತಿಯಲ್ಲಿ ವಾಸ್ತವತೆಯನ್ನು ಚಿತ್ರಿಸುತ್ತ, ಮನುಷ್ಯ ಸ್ವಭಾವವನ್ನು ಗುರುತಿಸಲು ಯತ್ನಿಸುತ್ತದೆ.

ಕೃಷ್ಣಕುಮಾರ ಕಲ್ಲೂರ, ದಿ|| ಎಚ್.ಸಿ. ಜೋಶಿ, ಟೇಂಗ್ಸೆ ಗೋವಿಂದರಾಯರು, ಮುಗಳಿ ಮುಂತಾದವರು ಪ್ರಾರಂಭದಲ್ಲಿ ಸಣ್ಣ ಕಥಾ ರಚನೆಯಲ್ಲಿ ತಮ್ಮ ಪ್ರತಿಭೆಯನ್ನು ತೋರಿದವರಾದರೂ, ಇವರು ಯಾರೂ ಕಥಾ ರಚನೆಯನ್ನು ಮುಂದುವರಿಸಿಕೊಂಡು ಹೋಗಲಿಲ್ಲ.

೧೯೨೦ರಿಂದ ೪೨ರವರೆಗಿನ ಅವಧಿಯನ್ನು ಪರಿಶೀಲಿಸಿದರೆ, ಸಣ್ಣ ಕಥಾಸಾಹಿತ್ಯದ ಬೆಳವಣಿಗೆ ತೃಪ್ತಿಕರವೆಂದು ತೋರುವುದಿಲ್ಲ. ಸ್ವಾತಂತ್ರ್ಯ ಸಮರದ ತೀವ್ರತೆ, ಸ್ವಾತಂತ್ರ್ಯದೊಂದಿಗೆ ಹೆಣೆದುಕೊಂಡಿದ್ದ ಸುವರ್ಣಯುಗದ ಬರವಿನ ಆಶಾವಾದ, ಮನುಷ್ಯನ ಘನತೆ ಧೀರೋದಾತ್ತತೆಗಳನ್ನು ಕುರಿತು ರೊಮ್ಯಾಂಟಿಕ್ ಕಲ್ಪನೆ ಮುಂತಾದವು ನವೋದಯ ಯುಗದ ಮುಖ್ಯ ಪ್ರಭಾವಗಳೆನಿಸಿದವು. ಮೊದಲ ಬಾರಿಗೆ ಪ್ರತಿಭಟನೆಯ ದನಿ ಕೇಳಿಬಂದದ್ದು ಪ್ರಗತಿಶೀಲರಿಂದ. ಶ್ರೀಸಾಮಾನ್ಯನ ಬದುಕಿನ ಏರುಪೇರುಗಳನ್ನು ಸಣ್ಣ ಕಥೆಗಳ ಲೋಕಕ್ಕೆ ತಂದವರು ಪ್ರಗತಿಶೀಲರು, ಸುಧಾರಣೆಯ, ಹೊಂದಾಣಿಕೆಯ ಧೋರಣೆ ತಳೆದ ನವೋದಯದ ಲೇಖಕರಲ್ಲಿ ಒಂದು ಬಗೆಯ ಆತ್ಮಸಂತೃಪ್ತಿಯೂ ಮನೆ ಮಾಡಿತ್ತು. ಲೇಖಕ ಸಾಮಾಜಿಕ ಕ್ರಾಂತಿಯ ಹರಿಕಾರನಾಗಬೇಕೆಂದು ಅಪೇಕ್ಷಿಸಿದ ಪ್ರಗತಿಶೀಲರು ಈ ಪ್ರವೃತ್ತಿಯ ಬಗ್ಗೆ ಅಸಮಾಧಾನಗೊಂಡರು, ನವೋದಯದ ಲೇಖಕರಿಗೆ ಪ್ರತಿಗಾಮಿಗಳೆಂಬ ಹಣೆಪಟ್ಟಿ ಅಂಟಿಸಿದರು. ಸಣ್ಣ ಕಥೆಗಳ ಬೆಳವಣಿಗೆ ಪ್ರಗತಿಶೀಲತೆಯ ಚಳವಳಿಯೊಂದಿಗೆ ಹೆಣೆದುಕೊಂಡಿದೆ. ೧೯೩೫ರಿಂದ ೪೭ರವರೆಗಿನ ರಾಜಕೀಯ ಆಗು ಹೋಗುಗಳು, ಪ್ರಗತಿಶೀಲತೆಯ ಪ್ರಚಾರ, ರಷ್ಯನ್ ಮತ್ತು ಹಿಂದಿ ಸಾಹಿತ್ಯಗಳಿಂದ ದೊರಕಿದ್ದ ವಿಚಾರ ಸಂಪತ್ತು, ಇವುಗಳು ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಪ್ರಮುಖ ಬದಲಾವಣೆಗಳಿಗೂ ಸತ್ವಯುತ ಸಾಹಿತ್ಯ ರಚನೆಗೂ ಕಾರಣವಾದವು. ಪ್ರಗತಿಶೀಲರ ದೃಷ್ಟಿಯಲ್ಲಿ ಹಳೆಯ ಸಾಹಿತ್ಯವೆಲ್ಲಾ 'ಬೂರ್ಜ್ವಾ ಸಾಹಿತ್ಯ' ವೆನಿಸಿತು. ಕಾವ್ಯ, ನಾಟಕ ಪ್ರಕಾರಗಳು ಪ್ರಗತಿಶೀಲತೆಯ ಬಿಸಿಯಿಂದ ದೂರವೇ ಉಳಿದಿದ್ದವು. ಆದರೆ ಜನಪ್ರಿಯ ಸಾಹಿತ್ಯ ಪ್ರಕಾರಗಳಾದ ಕಥೆ, ಕಾದಂಬರಿಗಳ ಮೇಲೆ ಈ ವಾದ ಸಾಕಷ್ಟು ಪ್ರಭಾವ ಬೀರಿತು.

ಸಣ್ಣ ಕಥಾ ಪ್ರಕಾರದಲ್ಲಿ ಪ್ರಗತಿಶೀಲತೆಯನ್ನು ದಟ್ಟವಾಗಿ ತಂದವರು ಅ.ನ.ಕೃ. ಮತ್ತು ಅನುಯಾಯಿಗಳಾದ ತ.ರಾ.ಸು., ನಿರಂಜನ, ಬಸವರಾಜಕಟ್ಟೀಮನಿ, ಚದುರಂಗ ಮುಂತಾದವರು. ಶೋಷಣೆಯ ವಿರುದ್ಧ ಪ್ರತಿಭಟನೆ, ಸಾಮಾಜಿಕ ಸಮಸ್ಯೆಗಳ ಬಗ್ಗೆ ತೀವ್ರ ಕಾಳಜಿ, ಕೆಳವರ್ಗಗಳ ಬಗ್ಗೆ ಸಹಾನುಭೂತಿ ಇವುಗಳನ್ನು ಚಿಂತನೆಯ ಕೇಂದ್ರವಾಗುಳ್ಳ ಪ್ರಗತಿಶೀಲರು ಸಿದ್ಧಾಂತವೊಂದನ್ನು ತಮ್ಮ ಮುಂದಿರಿಸಿಕೊಂಡು ಸ್ಪಷ್ಟವಾದ ಬರವಣಿಗೆಯಲ್ಲಿ ತೊಡಗಿದರು. ಪ್ರಗತಿಶೀಲತೆಯಿಂದಾಗಿ ವಸ್ತು ವೈಯಕ್ತಿಕ ತೀವ್ರತೆಯನ್ನು ಕಳೆದುಕೊಂಡು ಸಾಮಾಜಿಕ ನೆಲೆಯೇ ಮುಖ್ಯ ಕಾಳಜಿಯಾಯಿತು. ಆದರೆ ವಸ್ತುವಿನ ಆಯ್ಕೆ ಸೀಮಿತಗೊಂಡಿತು. ಮನೋಧರ್ಮದಲ್ಲಿ ಮತ್ತು ವಸ್ತುವನಲ್ಲಿ ಉಂಟಾದ ಬದಲಾವಣೆಯಿಂದಾಗಿ ಬರವಣಿಗೆಯ ಧಾಟಿಯೂ ಬದಲಾಯಿತು. ಆಡು ಮಾತಿನ ಬಳಕೆ ಹೆಚ್ಚಾಯಿತು, ಬರವಣಿಗೆಗೆ ಹೊಸ ರಭಸ ಮೂಡಿತು. ಪ್ರತಿಯೊಂದು ಹೊಸ ಕಥೆಯಲ್ಲೂ ಹೊಸ ಸಮಸ್ಯೆಯೊಂದನ್ನು ಎತ್ತಿಕೊಂಡು, ಕಥೆಗಳಲ್ಲಿ ಸಮಸ್ಯೆಗಳ ಚರ್ಚೆ ಪರಿಹಾರಗಳ ಹುಡುಕಾಟ ಆರಂಭವಾಯಿತು.

ಕಥನಕಲೆಯನ್ನು ಅದ್ಭುತವಾಗಿ ಸಾಧಿಸಿದ್ದ ಅ.ನ.ಕೃ. ಜೀವಂತ ಶೈಲಿಯ ಮೂಲಕ ಓದುಗರನ್ನು ಮೋಡಿಗೊಳಿಸಿದರು. ಇವರ 'ಅಗ್ನಿಕನ್ಯೆ' ಎಂಬ ಸಂಕಲನ ಕೆಲವು ಪ್ರಗತಿಶೀಲ ಕಥೆಗಳನ್ನೊ ಒಳಗೊಂಡಿದೆ. ೧೯೩೩ರಲ್ಲೇ 'ಕಾಮನಬಿಲ್ಲು' ಎಂಬ ಸಣ್ಣ ಕಥಾ ಸಂಕಲನವನ್ನೂ ಅ.ನ.ಕೃ. ಸಂಪಾದಿಸಿದರು. ಇದು ಕನ್ನಡ ಸಣ್ಣ ಕಥೆಗಳ ಮೊದಲ ಮುಖ್ಯ ಸಂಕಲನವೂ ಹೌದು.

ಅ.ನ.ಕೃ. ಅವರ ಪ್ರಗತಿಶೀಲತೆಯ ವಾದದ ಪ್ರಭಾವಕ್ಕೆ ಒಳಗಾದ ಹಲವಾರು ಲೇಖಕರಲ್ಲಿ ಮುಖ್ಯವಾಗಿ ತ.ರಾ.ಸು., ನಿರಂಜನ, ಚದುರಂಗ, ಬಸವರಾಜ ಕಟ್ಟೀಮನಿ, ಅರ್ಚಕ ವೆಂಕಟೇಶ, ವೆಂಕಟರಾಜ ಪಾನಸೆ ಮೊದಲಾದವರನ್ನು ಹೆಸರಿಸಬಹುದು, ವಸ್ತುವಿನ ಆಯ್ಕೆಯಲ್ಲಿ ತ.ರಾ.ಸು.

ಮತ್ತು ಅ.ನ.ಕೃ. ಇವರಿಬ್ಬರ ನಡುವೆ ಸಾಕಷ್ಟು ಸಾಮ್ಯವನ್ನು ಗುರುತಿಸಬಹುದು. ಆದರೆ ತ.ರಾ.ಸು. ತಂತ್ರ ಮತ್ತು ಬರವಣಿಗೆಯ ಸ್ವರೂಪ ಬಗ್ಗೆಯೂ ಕಾಳಜಿ ವಹಿಸಿದರು. ೦-೦-೯ ಎಕ್ಸ್ ಇನ್ನೊಂದು ಮುಖ ಮುಂತಾದ ತಂತ್ರದ ದೃಷ್ಟಿಯಿಂದ ವಿಶಿಷ್ಟವೆನಿಸುವ ಕಥೆಗಳನ್ನು ತ.ರಾ.ಸು. ರಚಿಸಿದ್ದಾರೆ. ಅವರ "೦-೦=೦" ಎಂಬ ಕಥೆ ವಸ್ತು ಮತ್ತು ನಿರ್ವಹಣೆಗಳ ದೃಷ್ಟಿಯಿಂದ ಪ್ರಗತಿಶೀಲತೆಗಿಂತ ನವ್ಯಕ್ಕೆ ಹೆಚ್ಚು ಸಮೀಪವೆನಿಸಿದೆ. ತೀವ್ರತೆ ಇದ್ದಾಗ್ಯೂ ಕಥೆಯ ವಸ್ತು, ಪಾತ್ರಗಳ ವ್ಯಕ್ತಿತ್ವಗಳನ್ನು ಉಳಿಸಿಕೊಂಡಿರುವ ಕಾರಣ, ತ.ರಾ.ಸು. ರವರ ಕಥೆಗಳು ಪ್ರಗತಿಶೀಲತೆ ಪ್ರವಾಹದಲ್ಲಿ ಕೊಚ್ಚಿಕೊಂಡು ಹೋಗದೆ ಉಳಿಯುತ್ತವೆ. ವೇಶ್ಯಾ ಸಮಸ್ಯೆ, ಸ್ತ್ರೀ ವಿಮೋಚನೆಯಂತಹ ವಸ್ತುಗಳನ್ನು ನಿರ್ವಹಿಸುವಾಗಲೂ ಲೇಖಕರ ಸಂಯಮ ಎದ್ದು ಕಾಣುತ್ತದೆ.

ಪರಿಣಾಮಕಾರಿ ಕಥೆಗಾರ ನಿರಂಜನರು ತಮ್ಮ ಹರಿತವಾದ ಶೈಲಿಯಲ್ಲಿ ಬಡತನ, ಶೋಷಣೆ, ಸಾಮಾಜಿಕ ಅನ್ಯಾಯಗಳ ವಿರುದ್ಧ ಅಸಹನೆಯನ್ನು ವ್ಯಕ್ತಪಡಿಸಿದರು. 'ಕೊನೆಯ ಗಿರಾಕಿ' ಇವರ ಅತ್ಯುತ್ತಮ ಪ್ರಾತಿನಿಧಿಕ ಕಥೆ. ಹೆಣ್ಣನ್ನು ಭೋಗದ ಸಾಮಗ್ರಿಯಾಗಿ ಬಳಸುವ ಸಮಾಜದ ಕ್ರೌರ್ಯವನ್ನು ಅತ್ಯಂತ ಯಶಸ್ವಿಯಾಗಿ ಇಲ್ಲಿ ಚಿತ್ರಿಸಲಾಗಿದೆ. 'ರಕ್ತ ಸರೋವರ' ಮತ್ತು 'ಸಂಧಿಕಾಲ' ಅವರ ಕಥಾ ಸಂಕಲನಗಳು.

ಕನ್ನಡದ ಜೀವಂತ ಜ್ವಾಲಾಮುಖಿಯೆನಿಸಿದ ಬಸವರಾಜ ಕಟ್ಟೀಮನಿ ಅನ್ಯಾಯದ ವಿರುದ್ಧ ಎದ್ದು ನಿಂತು 'ಗಿರಿಜಾ ಕಂಡ ಸಿನಿಮಾ', 'ಬೂಟ್ ಪಾಲಿಷ್', 'ರಕ್ತಧ್ವಜ' 'ನಾಗಪಂಚಮಿಗೆ ಬಂದದ್ದು', 'ಜೀವನ ಕಲೆ', ಮುಂತಾದ ಕಥೆಗಳನ್ನು ಕಥಾಲೋಕಕ್ಕೆ ನೀಡಿದ್ದಾರೆ. ಕಟ್ಟೀಮನಿಯವರು ಸಹಜ ಕಥೆಗಾರರೆನಿಸಿ, ಭಾಷೆಯನ್ನು ಜೀವಂತವಾಗಿ ಬಳಸಿಕೊಂಡರು. ಓದುಗರಿಗೆ ಶಿಕ್ಷಣ ನೀಡುವ ಉದ್ದೇಶಕ್ಕಾಗಿ ತಮ್ಮ ಲೇಖನಿಯನ್ನು ಬಳಸಿಕೊಂಡ ಕಟ್ಟೀಮನಿಯವರು, ತಮ್ಮ ಕಾಲದ ಇತರ ಪ್ರಗತಿಶೀಲ ಲೇಖಕರಂತೆ ಕಪ್ಪು-ಬಿಳುಪನ್ನೇ ಸೃಷ್ಟಿಸಿದರು.

ಹಳ್ಳಿಯ ಬದುಕಿನ ನಾಡಿಯನ್ನು ಬಲ್ಲ ಕೋ ಚೆನ್ನಬಸಪ್ಪನವರು 'ನಮ್ಮೂರಿನ ದೀಪ', 'ಉಂಗುರದ ಉರುಲು' ಮುಂತಾದ ಕಥೆಗಳನ್ನು ರಚಿಸಿದ್ದಾರೆ. 'ಮುಕ್ಕಣ್ಣನ ಮುಕ್ತಿ', 'ದಾಸರಯ್ಯನ ಪಟ್ಟೆ' ಇಂತಹ ಕಥೆಗಳಲ್ಲಿ ಒಕ್ಕಲಿಗರ ಜೀವನದ ವಿವರಗಳನ್ನು ಸೂಕ್ಷ್ಮವಾಗಿ ಚಿತ್ರಿಸುವಲ್ಲಿ ಲೇಖಕರ ಕೌಶಲ್ಯ ಮತ್ತು ಸಹಾನೂಭೂತಿಯಪರ ನಿಲುವು ವ್ಯಕ್ತಗೊಂಡಿವೆ. 'ಗಡೀಪಾರು' ಹಾಗೂ 'ನಮ್ಮೂರಿನ ದೀಪ' ಇವರ ಕಥಾಸಂಗ್ರಹಗಳು.

ಮಾರ್ಕ್ಸ್ ಮತ್ತು ಲೆನಿನ್‌ರಂತಹವರ ವಿಚಾರಗಳಿಂದ ರಷ್ಯಾದ ಸಾಹಿತ್ಯ ಕ್ಷೇತ್ರದಲ್ಲಿ ಉಂಟಾದ ಕ್ರಾಂತಿ ಮುಲ್ಕ್‌ರಾಜ ಆನಂದ್, ಕೆ. ಅಬ್ಬಾಸ್‌ರಂಥ ಬರಹಗಾರರ ಮೂಲಕ ಭಾರತವನ್ನು ಪ್ರವೇಶಿಸಿತು. ಹಿಂದಿ ಸಾಹಿತ್ಯಕ್ಕೆ ಕಾಲಿಟ್ಟ ಪ್ರಗತಿವಾದ ಉಳಿದ ಭಾಷೆಗಳಿಗೂ ಹರಡಿತು. ಆದರೆ ಇದು ಇಲ್ಲಿನ ಸಾಮಾಜಿಕ ಪರಿಸರಕ್ಕೆ ಹೊಂದಿಕೆಯಾಗದ್ದಿದ ಕಾರಣ ಪ್ರಗತಿವಾದ ಬರಿ ವಾದವಾಗಿ ಉಳಿದುಹೋಯಿತು. ಈ ವಾದದಿಂದ ಜನಿಸಿದ ಸಾಹಿತ್ಯವೂ ದೃಷ್ಟಿಕೋನಕ್ಕೇ ಹೆಚ್ಚು ಮಹತ್ವ ನೀಡುತ್ತ, ಅನುಭವ ಲೋಕದಿಂದ ದೂರವೇ ಉಳಿಯಿತು. ಪ್ರಗತಿಶೀಲರು ತಮ್ಮ ಸಾಮಾಜಿಕ ಕಳಕಳಿಯನ್ನು ವ್ಯಕ್ತಪಡಿಸುವ ಸಂದರ್ಭದಲ್ಲಿ, ಅದಕ್ಕೆ ಸೂಕ್ತವಾದ ತಾಂತ್ರಿಕ ಬೆಳವಣಿಗೆಯನ್ನು ಸಾಧಿಸಲಾಗದೆ ಹೋದರು. ವಾಕ್ಚಾತುರ್ಯ ಮತ್ತು ವಾಸ್ತವತಾವಾದಗಳ ಪೂರ್ಣ ಉಪಯೋಗ ಪಡೆದುಕೊಂಡ ಪ್ರಗತಿಶೀಲರು ಕಾವ್ಯ ಸಂವೇದನೆಯನ್ನು ಕಳೆದುಕೊಂಡರು. ಹೀಗಾಗಿ ಒಂದು ದಶಕದ ಪ್ರಗತಿಶೀಲರ ಅವಧಿಯಲ್ಲಿ ಕನ್ನಡ ಸಣ್ಣ ಕಥೆ ವಿಶೇಷ ಬೆಳವಣಿಗೆಯನ್ನೇನೂ ಸಾಧಿಸಲಿಲ್ಲವೆಂದೇ ಹೇಳಬೇಕಾಗುತ್ತದೆ.

ಪ್ರಗತಿಶೀಲತೆಯ ವಾತಾವರಣದಲ್ಲಿದ್ದಾಗ್ಯೂ ಶ್ರೀನಿವಾಸರ ಮಾರ್ಗದಲ್ಲಿ ಮುಂದುವರಿದ ಎಸ್. ಅನಂತನಾರಾಯಣ, ಅಶ್ವತ್ಥ ಮುಂತಾದ ಲೇಖಕರು ಹಲವು ಮಹತ್ವಪೂರ್ಣಕಥೆಗಳನ್ನು ರಚಿಸಿದರು. ಅಶ್ವತ್ಥರ 'ಶ್ರೀಧರನ ಹಸಿವು'ನಲ್ಲಿ ಮಾಸ್ತಿಯವರ ನಿರೂಪಣೆಯನ್ನು ಕಾಣಬಹುದಾಗಿದೆ. ಮುಂದೆ ಇವರು ಬರೆದ 'ಗುಂಗು', 'ಜೂಜುಗಾರ' ಉತ್ತಮ ಮಾದಿರಗಳೆನಿಸುವಂಥ ಕಥೆಗಳಾಗಿವೆ.

ದ.ಬಾ. ಕುಲಕರ್ಣಿಯವರ 'ಲೇಡಿ ಟೈಪಿಸ್ಟ್', 'ಕಪ್ಪು ಹುಡುಗಿ' ಎಂಬ ಕಥೆಗಳಲ್ಲಿ ಆಧುನಿಕವೆನಿಸುವ ಸಮಸ್ಯೆಗಳ ಚಿತ್ರಣವಿದೆ. ರಾಮಚಂದ್ರ ಕೊಟ್ಟಲಗಿಯವರ 'ಗೀಚುಗೆರೆ'ಯಲ್ಲಿ ಗಟ್ಟಿಯಾದ ಬದುಕನ್ನು ನಿರೂಪಿಸುವ ಉತ್ತಮ ಶೈಲಿಯ ಕಥೆಗಳನ್ನು ಕಾಣಬಹುದಾಗಿದೆ.

ಮಾಸ್ತಿಯವರ ಪರಂಪರೆಯಲ್ಲೇ ಸಾಗುವ ವ್ಯಾಸರಾಯ ಬಲ್ಲಾಳರ ಕಥೆಗಳು ಮುಂಬಯಿ ನಗರದ ಸುಶಿಕ್ಷಿತ ವರ್ಗದ ಹಲವು ಬಗೆಯ ಸಮಸ್ಯೆಗಳನ್ನು ಚಿತ್ರಿಸುತ್ತದೆ. 'ಕೆಂಪು ಭೀತಿ', 'ನಿವೃತ್ತಿ', 'ಭಾವ ಬಂಧನ'ದಂತಹ ಯಶಸ್ವೀ ಕಥೆಗಳನ್ನು ನಿರ್ವಹಿಸಿದ ಬಲ್ಲಾಳರು, ಹೊಸ ಹೊಸ ಸಮಸ್ಯೆಗಳನ್ನು ಕೈಗೆತ್ತಿಕೊಂಡು, ಅವುಗಳ ಪರಿಹಾರ ಅರಸುತ್ತ, ಅಂತಃಕರಣದ ಪ್ರೀತಿಯಲಿ ಪರಿಹಾರ ಕಂಡುಕೊಳ್ಳುತ್ತಾರೆ. 'ಸಂಪಿಗೆ ಹೂ' ಇವರ ಕಥಾ ಸಂಗ್ರಹ.

ಜೀವನದ ವೈವಿಧ್ಯವನ್ನು ಕೇಂದ್ರವಸ್ತುವಾಗುಳ್ಳ ಕಥೆಗಾರರ ಗುಂಪೊಂದು ಸಂಪ್ರದಾಯಶೀಲ ಮತ್ತು ಪ್ರಗತಿಶೀಲ ಮಾರ್ಗಗಳಿಗಿಂತ ಭಿನ್ನವಾದ ನೆಲೆಯೊಂದನ್ನು ಕಂಡುಕೊಂಡಿತು. ಇವರಲ್ಲೂ ಸಮಾಜ ಸುಧಾರಣೆಯ ಬಗೆಗಿನ ಕಾಳಜಿಯನ್ನು ಗುರುತಿಸಬಹುದು. ಎಂ.ವಿ. ಸೀತಾರಾಮಯ್ಯ, ಚದುರಂಗ, ರಾಮಚಂದ್ರ ಕೊಟ್ಟಲಗಿ, ಮಿರ್ಜಿ ಅಣ್ಣಾರಾಯ, ಜೀ.ಶಂ. ಪರಮಶಿವಯ್ಯ, ಶೇಷನಾರಾಯಣ, ಜನಾರ್ದನ ಗುರ್ಕಾರ್, ಬೆಸಗರಹಳ್ಳಿ ರಾಮಣ್ಣ, ಕ.ವೆಂ. ರಾಜಗೋಪಾಲ, ಎಲ್.ಎಸ್. ಶೇಷಗಿರಿರಾವ್, ಟಿ.ಕೆ. ರಾಮರಾವ್, ಮುಂತಾದ ಅನೇಕರು ಈ ಸಾಲಿಗೆ ಸೇರುತ್ತಾರೆ.

ಸಣ್ಣ ಕಥಾ ಕ್ಷೇತ್ರಕ್ಕೆ ಹಲವಾರು ಲೇಖಕಿಯರಿಂದಲೂ ಕೊಡುಗೆ ಸಂದಿದೆ. ವಾಣಿ, ಜಯಲಕ್ಷ್ಮೀ, ಕಾತ್ಯಾಯಿನಿ, ಉಷಾದೇವಿ, ಎಂ.ಕೆ. ಇಂದಿರಾ, ತ್ರಿವೇಣಿ, ಎಚ್.ವಿ. ಸಾವಿತ್ರಮ್ಮ ಮುಂತಾದವರನ್ನು ಇಲ್ಲಿ ಹೆಸರಿಸಬಹುದು. ಬಾಲ್ಯ ಹಾಗೂ ಅಸಮ ವಿವಾಹ, ವಿಧವಾ ವಿವಾಹ, ವರದಕ್ಷಿಣೆ, ಮೊದಲಾದವುಗಳನ್ನು ತಮ್ಮ ಕಥೆಗಳಲ್ಲಿ ಈ ಲೇಖಕಿಯರು ಪ್ರಸ್ತಾಪಿಸಿದ್ದಾರೆ. ಕಾದಂಬರಿಕಾರ್ತಿಯಾಗಿ ಜನಪ್ರಿಯರಾಗಿರುವ ತ್ರಿವೇಣಿ ಮನೋವೈಜ್ಞಾನಿಕ ದೃಷ್ಟಿಯಿಂದ ಕೂಡಿದ ಕಥೆಗಳನ್ನು ರಚಿಸಿದ್ದಾರೆ. 'ಹೆಂಡತಿಯ ಹೆಸರು' ಮತ್ತು 'ಸಮಸ್ಯೆಯ ಮಗು' ಇವರ ಮುಖ್ಯ ಕಥಾ ಸಂಕಲನಗಳು.

ಸಾವಿತ್ರಮ್ಮನವರ 'ಮರುಮದುವೆ' ಎಂ. ಸೀತಾರತ್ನರವರ 'ಕೆಂಪು ಗುಲಾಬಿ', ವಾಣಿಯವರ 'ಅರ್ಪಣೆ' ಮುಂತಾದ ಸಂಕಲನಗಳು ಮಹಿಳೆಯರ ಲೇಖನಿಯಿಂದ ಬಂದವು. ಕಾತ್ಯಾಯಿನಿಯವರ 'ಮಾಲಾ ಮತ್ತು ಇತರ ಕಥೆಗಳು' 'ಸಣ್ಣ ಕಥೆಗಳ ಪರಂಪರೆಯ ದೃಷ್ಟಿಯಿಂದ ಮಹತ್ವ ಪಡೆಯುತ್ತವೆ. ಇಲ್ಲಿನ ಕಥೆಗಳಲ್ಲಿ ವಿಶೇಷವಾಗಿ 'ಮಾದೇವಿ', 'ರಂಗೂ' ಎಂಬ ಎರಡು ಕಥೆಗಳಲ್ಲಿ ಚೈತನ್ಯ ಪೂರ್ಣ ಗುಣ ಕಂಡುಬರುತ್ತದೆ. 'ರಂಗೂ' ಈ ಸಂಕಲನದ ಅತ್ಯುತ್ತಮ ಕಥೆಯೆನಿಸಿದೆ. ಕನ್ನಡ ಸಣ್ಣ ಕಥಾ ಪರಂಪರೆಯಲ್ಲಿ ನಿಶ್ಚಿತ ಪ್ರಗತಿಯನ್ನು ತೋರುವಂಥ ಸಾಮರ್ಥ್ಯ ಈ ಸಂಕಲನಕ್ಕಿದೆ.

ಸೂಕ್ತ ವಾತಾವರಣದ ಅಭಾವದಿಂದಾಗಿ ಪ್ರಗತಿಶೀಲತೆ ನಂದಿಹೋದ ಬಳಿಕ, ಹೊಸ ದನಿಗಳು ಕೇಳಿ ಬಂದವು. ಅಂತಹ ದನಿಗಳ ಪೈಕಿ ಸ್ವಾತಂತ್ರ್ಯ ನಂತರದಲ್ಲಿ ಜನಿಸಿದ ನವ್ಯ ಪಂಥದವರ ದನಿಯೂ ಒಂದಾಗಿತ್ತು. ನವ್ಯಯುಗದ ಹಲವಾರು ಪ್ರೇರಣಗಳ ಪೈಕಿ, ಸ್ವಾತಂತ್ರ್ಯ ನಂತರದಲ್ಲಿ

ಏರ್ಪಟ್ಟ ಸಾಮಾಜಿಕ ಬದಲಾವಣೆಗಳ ಪಾತ್ರ ಮಹತ್ವವಾದುದು. ಮೌಲ್ಯಗಳ ಕುಸಿತ ಮತ್ತು ಭ್ರಮನಿರಸನಗಳಿಂದ ಕೂಡಿದ ಪರಿಸರವೇರ್ಪಟ್ಟ ಬದಲಾವಣೆಗಾಗಿ ಹಾತೊರೆಯುತ್ತಿದ್ದ ಲೇಖಕರಿಗೆ ಈ ಪರಿಸರ ಸೂಕ್ತವಾಗಿ ಒದಗಿ ಬಂತು.

ಖಚಿತವಾದ ಮೌಲ್ಯಗಳನ್ನು ನಂಬಿದ್ದ ಪ್ರಗತಿಶೀಲರು ವಾಸ್ತವತಾ ವಾದವನ್ನು ತಮ್ಮ ಅಭಿವ್ಯಕ್ತಿ ಮಾಧ್ಯಮವನ್ನಾಗಿ ಬಳಸಿಕೊಂಡರು. ಆದರೆ ಜೀವನವನ್ನು ನಿರ್ದಿಷ್ಟ ವಿನ್ಯಾಸದಲ್ಲಿ ರೂಪಿಸಬಹುದೆಂಬ ಪ್ರಗತಿಶೀಲರ ನಿಲುವನ್ನು ಪ್ರಶ್ನಿಸಿದ ನವ್ಯರು ಸೃಷ್ಟಿಸಿದ ಲೋಕ ಅಮೂರ್ತವಾದದ್ದು. ಪ್ರಗತಿಶೀಲರ ಸಾಹಿತ್ಯದಲ್ಲಿ ಸಾಮಾಜಿಕ ಮನುಷ್ಯ ಆವರಿಸಿದ್ದ ಕೇಂದ್ರ ಸ್ಥಾನವನ್ನು ನವ್ಯರ ಕಾಲದಲ್ಲಿ ಏಕಾಕಿಯಾದ, ಆಧುನಿಕ ಮನುಷ್ಯ ಆಕ್ರಮಿಸಿಕೊಂಡ ತನ್ನನ್ನೂ ತನ್ನ ಸುತ್ತಲ ಪ್ರಪಂಚವನ್ನೂ ಅರಿಯಲು ಯತ್ನಿಸುತ್ತಿರುವ ಇಂಥ ಮನುಷ್ಯನ ವೈಯಕ್ತಿಕ ಸಮಸ್ಯೆಗಳು, ಅಧಿಕೃತ ಅನುಭವಗಳು ತೀವ್ರ ಮತ್ತು ಪ್ರಾಮಾಣಿಕ ಸ್ವರೂಪದವುಗಳಾಗಿ, ಸಾರ್ವತ್ರಿಕತೆ ಪಡೆದುಕೊಳ್ಳುತ್ತವೆ ಎಂಬ ನಿಲುವು ನವ್ಯರದು. ನವ್ಯರು ಮನಸ್ಸಿನ ಒಳಹೊಕ್ಕು, ಅವರ ಪರಿಯನ್ನೂ ಪದರಗಳನ್ನೂ ಬಿಡಿಸಿ ನೋಡುವ ಕಾರ್ಯಕ್ಕೇ ಕೈಹಾಕಿದರು.

ನವ್ಯತೆ ಪ್ರಥಮವಾಗಿ ಕಾವ್ಯದಲ್ಲಿ ನಂತರ ಸಣ್ಣ ಕಥಾ ಪ್ರಕಾರದಲ್ಲಿ ಪರಿಣಾಮಕಾರಿ ಅಭಿವ್ಯಕ್ತಿ ಪಡೆದುಕೊಂಡಿತು. ''ನವ್ಯ ಕಥೆಯ ಮುಖ್ಯ ಲಕ್ಷಣ ತಾತ್ವಿಕ ಅಂತರ್ಮುಖತೆ'' ಎಂದು ಗಿರಡ್ಡಿ ಗೋವಿಂದರಾಜರು ಗುರುತಿಸಿದ್ದಾರೆ. ಈ ಉದ್ದೇಶದೊಂದಿಗೆ ಹೊರಟ ನವ್ಯ ಕಥೆ ಹೆಚ್ಚಿನ ಸೂಕ್ಷ್ಮತೆ, ಸಂಕೀರ್ಣತೆಗಳನ್ನು ಮೈಗೂಡಿಸಿಕೊಂಡಿತು. ಕಥನಕ್ರಮ ಹಿಂದಕ್ಕೆ ಸರಿದು ಕಥೆಯ ಪಾತ್ರಗಳ ಹಲವಾರು ರೀತಿಯ ಶಕ್ತಿಗಳ (Forces) ಪ್ರಭಾವಕ್ಕೆ ಸಿಕ್ಕು ಆ ಹಿಂದಿನ ಸುಲಭಗ್ರಾಹ್ಯ ಪಾತ್ರಗಳಿಗಿಂತ ಭಿನ್ನ ಲಕ್ಷಣಗಳನ್ನು ಪಡೆದವು.

ನವ್ಯದ ಭಾಷೆ, ತಂತ್ರಗಳು ಪರಿವರ್ತನೆಗೊಂಡು, ಸಣ್ಣ ಕಥೆ ಕಾವ್ಯಕ್ಕೆ ಸಮೀಪವಾಯಿತು. ಕಾಲಾನುಕ್ರಮದ ಕಥಾ ನಿರೂಪಣೆ ಮತ್ತು ತರ್ಕಬದ್ಧ ಬೆಳವಣಿಗೆಗಳು ಇಲ್ಲವಾದವು. ಅಸ್ತಿತ್ವವಾದ ಮತ್ತು ಮಾನವಶಾಸ್ತ್ರಗಳ ಪ್ರಭಾವವನ್ನೂ ನವ್ಯದ ಕಥೆಗಳು ಮೈಗೂಡಿಸಿಕೊಂಡವು. ಪ್ರಜ್ಞಾಪ್ರವಾಹ ತಂತ್ರದ ಸಮರ್ಥ ಬಳಕೆಯು ನಡೆಯಿತು.

ಕನ್ನಡದ ಹಲವಾರು ಶ್ರೇಷ್ಠ ಬರಹಗಾರರಿಗೆ ನವ್ಯ ಚಳವಳಿ ಜನ್ಮ ನೀಡಿತು. ಲಾರೆನ್ಸ್, ಸಾರ್ತ್ರ್, ಕಾಫ್ಕ, ಕಾಮೂ ಮುಂತಾದ ಪಾಶ್ಚಿಮಾತ್ಯ ಲೇಖಕರ ಪ್ರಭಾವಕ್ಕೆ ಒಳಗಾಗಿದ್ದರೂ, ನವ್ಯ ಲೇಖಕರು ವಿಶಿಷ್ಟ ರೀತಿಯ ಕಥೆಗಳನ್ನು ಕನ್ನಡಕ್ಕೆ ತಂದರು. ಯು.ಆರ್. ಅನಂತಮೂರ್ತಿ, ರಾಮಚಂದ್ರ ಶರ್ಮ, ಯಶವಂತ ಚಿತ್ತಾಲ, ಪಿ. ಲಂಕೇಶ್, ಶಾಂತಿನಾಥ ದೇಸಾಯಿ, ತೇಜಸ್ವಿ ಮುಂತಾದವರು ನವ್ಯ ಪ್ರಕಾರದ ಪ್ರಮುಖರು. ನವ್ಯ ಕಥೆಯ ಪ್ರವರ್ತಕರಲ್ಲೊಬ್ಬರಾದ ರಾಮಚಂದ್ರ ಶರ್ಮರ 'ಸೆರಗಿನ ಕೆಂಡ', 'ಸಂಗಮ', 'ಏಳನೆಯ ಜೀವ' ಮುಂತಾದವು ನವ್ಯ ಕಥೆಗಳ ಕೆಲವು ಮಾದರಿಗಳು. 'ಕತೆಗಾರನ ಕತೆ' ಎಂಬ ಅವರ ಸಂಕಲನ 'ಐದನೆಯವನು' ಮತ್ತು 'ದಿವಾಕರ' ಎಂದು ಎರಡು ಗುಂಪುಗಳಲ್ಲಿ ಒಗ್ಗೂಡಿಸಿದ ಕಥೆಗಳನ್ನು ಒಳಗೊಳ್ಳುತ್ತದೆ. ಕನ್ನಡ ಸಣ್ಣ ಕಥೆಯ ವಸ್ತು ಮತ್ತು ರೂಪಗಳಲ್ಲಿ ಹೊಸತನವನ್ನು ತಂದವರು ಯು.ಆರ್. ಅನಂತಮೂರ್ತಿ. ಇವರ 'ಎಂದೆಂದೂ ಮುಗಿಯದ ಕಥೆ' ನವ್ಯ ಕಥೆಗಳ ಪ್ರಾತಿನಿಧಿಕ ಸಂಗ್ರಹ.

ಸಣ್ಣ ಕಥಾ ಮಾಧ್ಯಮವನ್ನು ಹೊಸ ಸಂವೇದನೆಯ ಅಭಿವ್ಯಕ್ತಿ ಮಾಧ್ಯಮವನ್ನಾಗಿ ಪರಿಣಾಮಕಾರಿ ರೀತಿಯಲ್ಲಿ ಬಳಸಿಕೊಂಡ ಅನಂತಮೂರ್ತಿಯವರು 'ಪ್ರಶ್ನೆ', 'ಮೌನಿ', 'ಆಕಾಶ ಮತ್ತು ಬೆಕ್ಕು'

ಮುಂತಾದ ಮಹತ್ವದ ಸಂಕಲನಗಳನ್ನು ಪ್ರಕಟಿಸಿದ್ದಾರೆ. 'ಪ್ರಶ್ನೆ', 'ಕ್ಲಿಪ್ ಜಾಯಿಂಟ್', 'ಘಟಶ್ರಾದ್ಧ', 'ಪ್ರಕೃತಿ', 'ಪ್ರಸ್ತ', 'ಆಕಾಶ ಮತ್ತು ಬೆಕ್ಕು', 'ಸೂರ್ಯನ ಕುದುರೆ' ಮುಂತಾದ ಕಥೆಗಳಲ್ಲಿ ಬದುಕಿನ ಅನುಭವದ ಹಲವಾರು ಮುಖಗಳು ಕಾಣಸಿಗುತ್ತವೆ.

೬೦ರ ದಶಕದಲ್ಲಿ 'ಅದೃಷ್ಟ', 'ಪಯಣ', 'ಸೆರೆ', 'ಆಟ', 'ಛಲ' ಮುಂತಾದ ಮಹತ್ತರ ಕಥೆಗಳನ್ನು ತಂದ ಕಥೆಗಾರ ಯಶವಂತ ಚಿತ್ತಾಲ. ಕಲಾತ್ಮಕ ಕಥೆಯ ದೃಷ್ಟಿಯಿಂದ ಅವರ ಕಥೆಗಳು ಶ್ರೇಷ್ಠವೆನಿಸಿವೆ. 'ಪಯಣ', 'ಆಟ', 'ಅದೃಷ್ಟ' ಮುಂತಾದ ಕಥೆಗಳಲ್ಲಿ 'ಸಾವು' ಮುಖ್ಯ ವಸ್ತುವಾಗಿದೆ. ಮಾನವಶಾಸ್ತ್ರ, ಮನೋವಿಜ್ಞಾನ, ವಿಕಾಸವಾದ, ಮಾರ್ಕ್ಸ್‌ವಾದ – ಹೀಗೆ ಹಲವಾರು ಜ್ಞಾನ ಕ್ಷೇತ್ರಗಳ ವಿಚಾರದಿಂದ ಪ್ರಭಾವಗೊಂಡಿರುವ ಮನಸ್ಸೊಂದು ಅವರ ಕಥೆಗಳ ಹಿಂದಿದೆ. ಬದುಕಿನ ಅಸಂಗತತೆ, ಹಿಂಸೆ ಮತ್ತು ಸಾವುಗಳ ಅನಿವಾರ್ಯತೆ ಜೀವನದಲ್ಲಿ ಎದುರಾಗುವ ಸೋಲನ್ನು ಎದುರಿಸಿ ನಿಲ್ಲಲು ಯತ್ನಿಸುವ ಮಾನವನ ವ್ಯಕ್ತಿತ್ವ ಇವುಗಳನ್ನು ಚಿತ್ತಾಲರು ತಮ್ಮ ಕಥೆಗಳಲ್ಲಿ ತಮ್ಮದೇ ಆದ ವಿಶಿಷ್ಟ ಶೈಲಿಯಲ್ಲಿ ವಿಶ್ಲೇಷಿಸುತ್ತಾರೆ. 'ಸಂದರ್ಶನ', 'ಆಬೋಲಿನ', 'ಆಟ', 'ಆಯ್ದ ಕಥೆಗಳು', 'ಕತೆಯಾದಳು ಹುಡುಗಿ', 'ಬೇನ್ಯಾ' ಇವರ ಕಥಾ ಸಂಕಲನಗಳು. 'ಚಿತ್ತಾಲರ ಕತೆಗಳು' ಮೂರು ದಶಕಗಳ ಅವಧಿಯಲ್ಲಿ ಚಿತ್ತಾಲರು ಬರೆದ ಮೂವತ್ತಮೂರು ಕಥೆಗಳನ್ನು ಒಳಗೊಂಡಿದೆ. ಅವರ ವೈಯಕ್ತಿಕ ಬೆಳವಣಿಗೆಯ ಹಂತಗಳನ್ನು ಈ ಸಂಗ್ರಹದಲ್ಲಿ ಗುರುತಿಸಬಹುದಾಗಿದೆ.

ಪಿ. ಲಂಕೇಶರು ಅತ್ಯಂತ ಸೂಕ್ಷ್ಮವಾದ ಭಾವನೆಗಳನ್ನು ಹಿಡಿದಿಡಬಲ್ಲವರು. ಈ ಕೆಲಸದಲ್ಲಿ ಗದ್ಯವನ್ನು ಅತ್ಯಂತ ಯಶಸ್ವಿಯಾಗಿ ಬಳಸಿಕೊಳ್ಳುತ್ತ, ಅಸಾಧಾರಣ ಗದ್ಯ ಶೈಲಿಯನ್ನು ರೂಢಿಸಿಕೊಂಡವರು. ಲಂಕೇಶರ 'ನಾನಲ್ಲ' ಸಣ್ಣ ಕಥಾಸಂಕಲನದ ಮುನ್ನುಡಿಯಲ್ಲಿ ಅಡಿಗರು ಹೇಳಿರುವ ಮಾತುಗಳನ್ನು ಇಲ್ಲಿ ಸ್ಮರಿಸಬಹುದು; ''ಲಂಕೇಶರ ಗದ್ಯದ ಸೊಗಸು ಇರುವುದು ಅದರ ಸಾರ್ಥಕತೆಯಲ್ಲಿ, ಉದ್ದೇಶ ಸಾಧನೆಗೆ ಸಿಕ್ಕ ಸಾಧನವಾಗಿರುವುದರಲ್ಲಿ.'' ಗಿರಡ್ಡಿ ಗೋವಿಂದರಾಜರ ಮಾತುಗಳಲ್ಲಿ ಹೇಳುವುದಾದರೆ ''ಅವರ ಭಾಷೆ ಎಷ್ಟು ಪಾರದರ್ಶಕ, ಅರ್ಥ ಎಷ್ಟು ಸೂಕ್ಷ್ಮ ಎಂದರೆ, ಎಷ್ಟೋ ಸಲ ಅವರ ಕಥೆಗಳನ್ನು 'ಕಥೆ' ಯಾಗಿ ಸಂಗ್ರಹಿಸಿ ಹೇಳಲೂ ಆಗುವುದಿಲ್ಲ. ಕಥೆ ಅವರ ಪಾಲಿಗೆ ಅನುಭವದ ಅರ್ಥವಂತಿಕೆಯನ್ನು ಶೋಧಿಸುವ ಸಾಧನವಾಗಿದೆ ಮತ್ತು ಈ ಶೋಧವೇ ಕಥೆಯಾಗಿದೆ.'' ಲಂಕೇಶರು ಕನ್ನಡ ಸಣ್ಣ ಕಥೆಗೆ ಭಾವಗೀತದ ತೀವ್ರತೆ, ಸೂಕ್ಷ್ಮತೆಗಳನ್ನು ತಂದ ಖ್ಯಾತಿಗೆ ಪಾತ್ರರಾಗಿದ್ದಾರೆ. 'ನಾನಲ್ಲ' 'ಕೆರೆಯ ನೀರನ್ನು ಕೆರೆಗೆ ಚೆಲ್ಲಿ', 'ಉಮಾಪತಿಯ ಸ್ಕಾಲರ್‌ಶಿಪ್ ಯಾತ್ರೆ' ಮುಂತಾದ ಕಥಾಸಂಕಲನಗಳನ್ನು ಲಂಕೇಶರು ತಂದಿದ್ದಾರೆ. ಲಂಕೇಶರ 'ರೊಟ್ಟಿ'ಯನ್ನು ''ಲಂಕೇಶರ ಕಲೆಗಾರಿಕೆಯಲ್ಲಿ ಒಂದು ಹೊಸ ಮೈಲಿಗಲ್ಲು'' ಎಂದು ಗೋಪಾಲಕೃಷ್ಣ ಅಡಿಗರು ವರ್ಣಿಸಿದ್ದಾರೆ. ಉಳ್ಳವರ ಇಲ್ಲದವರ ನಡುವಿನ ಘರ್ಷಣೆಯನ್ನು ವಸ್ತುವಾಗುಳ್ಳ ಈ ಕಥೆ, ವ್ಯಕ್ತಿಯೊಬ್ಬನು ಗುಂಪಿನ ಭಾಗವಾದಾಗ ಪಡೆಯುವ ಮೃಗೀಯ ಗುಣಗಳ ಚಿತ್ರಣವನ್ನು ಉತ್ಕೃಷ್ಟ ರೀತಿಯಲ್ಲಿ ನೀಡುತ್ತದೆ. ಸಾಮಾಜಿಕ ಸತ್ಯವೊಂದನ್ನು ಪರಿಣಾಮಕಾರಿಯಾಗಿ ನಿರೂಪಿಸುವ ಈ ಕತೆ ಕನ್ನಡ ಸಾಹಿತ್ಯದಲ್ಲೇ ಒಂದು ಅತ್ಯುತ್ತಮ ಸಣ್ಣ ಕಥೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. 'ಕೆರೆಯ ನೀರನು ಕೆರೆಗೆ ಚೆಲ್ಲಿ', 'ಕುರುಡು ಕಾಂಚಾಣ', 'ಒಂದು ಘಟನೆ', 'ನಾನಲ್ಲ', 'ನಿವೃತ್ತರು', 'ವಾಮನ' ಮುಂತಾದ ಕಥೆಗಳನ್ನೂ ಇವರು ರಚಿಸಿದ್ದಾರೆ. ಬದುಕಿನ ಬಗ್ಗೆ ಆಳವಾದ ತಿಳಿವು, ಗೌರವಗಳನ್ನುಳ್ಳ ಶಾಂತಿನಾಥ ದೇಸಾಯಿ ವಸ್ತುನಿಷ್ಠತೆಗೆ ಹೆಸರಾದ ಕಥೆಗಾರರು. ಅವರ ಕಥೆಗಳ ಉದ್ದೇಶಕ್ಕೆ ಹೊಂದುವಂತೆ ಸೂಕ್ತ ಕಲಾಶಿಲ್ಪವನ್ನು ದೇಸಾಯಿಯವರು ಕಂಡುಕೊಂಡಿದ್ದಾರೆ. ಮನುಷ್ಯ ಸಂಬಂಧಗಳಲ್ಲಿ ವಿಶೇಷವಾಗಿ ಗಂಡು–ಹೆಣ್ಣಿನ ಸಂಬಂಧಗಳಲ್ಲಿ ದೇಸಾಯಿಯವರಿಗೆ ವಿಶೇಷ ಆಸಕ್ತಿ.

'ಮಂಜುಗಡ್ಡೆ', 'ಕ್ಷಿತಿಜ', 'ದಂಡೆ', 'ರಾಕ್ಷಸ', 'ಪರಿವರ್ತನೆ', 'ಕೂರ್ಮಾವತಾರ' ಮುಂತಾದವು ಅವರ ಕಥಾ ಸಂಕಲನಗಳು. 'ಕ್ಷಿತಿಜ' ಎಂಬ ಅವರ ಸಣ್ಣ ಕಥೆ ನವ್ಯ ಮನೋಧರ್ಮದ ಅತ್ಯುತ್ತಮ ಪ್ರತಿನಿಧಿಯೆನಿಸಿದೆ.

'ರಾಮನ ಸವಾರಿ ಸಂತೆಗೆ ಹೋದದ್ದು', 'ಹಾವು' ಮುಂತಾದ ಉತ್ಕೃಷ್ಟ ಕಥೆಗಳನ್ನು ನೀಡಿರುವ ಕೆ. ಸದಾಶಿವರಿಗೆ ನವ್ಯ ಕಥಾ ಜಗತ್ತಿನಲ್ಲಿ ವಿಶಿಷ್ಟ ಸ್ಥಾನವಿದೆ. ಪಾರದರ್ಶಕವಾದ, ಸೂಕ್ಷ್ಮವಾದ ರೀತಿಯಲ್ಲಿ ವ್ಯಂಗ್ಯಾತ್ಮಕ ದೃಷ್ಟಿಯನ್ನಿರಿಸಿಕೊಂಡು ಬರವಣಿಗೆಯಲ್ಲಿ ತೊಡಗಿದ ಈ ಲೇಖಕರು, ನಂತರದಲ್ಲಿ ಅದನ್ನೇ ತಮ್ಮ ಜೀವನದೃಷ್ಟಿಯನ್ನಾಗಿಸಿಕೊಂಡರು. 'ಅಗೆದರೆ ಸಿಕ್ಕುವುದು ಮಣ್ಣಲ್ಲ', 'ನಲ್ಲಿಯಲ್ಲಿ ನೀರು ಬಂತು', 'ಹೆಳವನ ಮೇಲೆ ಕುರುಡ ಕೂತಿದ್ದಾನೆ', 'ನೆರಳ ಬೆಳಕಿನಾಟದಲ್ಲಿ ಕಂಡದ್ದೇನು' ಮುಂತಾದವು ಅವರ ಇತರ ಕಥೆಗಳು. ಟಿ.ಜಿ. ರಾಘವ 'ಜ್ವಾಲೆ ಅರಿತು' ಕಾಮರೂಪಿ 'ಒಂದು ತೊಲ ಪುನಗು ಮತ್ತು ಇತರ ಕಥೆಗಳು' ಗಿರಡ್ಡಿ ಗೋವಿಂದ ರಾಜ 'ಆಮುಖ ಈ ಮುಖ' ರಾಘವೇಂದ್ರ ಖಾಸನೀಸ, ಎಸ್ ದಿವಾಕರ, ಈಶ್ವರಚಂದ್ರ, ಜಯಂತ ಕಾಯ್ಕಿಣಿ, ರಾಮಚಂದ್ರ ದೇವ 'ದಂಗೆಯ ಪ್ರಕರಣ', ಬರಗೂರು ರಾಮಚಂದ್ರಪ್ಪ 'ಸುಂಟರಗಾಳಿ', ಬಿ.ವಿ. ವೈಕುಂಠರಾಜು, ಶ್ರೀ ಕೃಷ್ಣ ಆಲನಹಳ್ಳಿ 'ತಪ್ತ, ಫೀನಿಕ್ಸ್' ಸುಮತೀಂದ್ರ ನಾಡಿಗ, ಕ.ವೆಂ. ರಾಜಗೋಪಾಲ, ಕೆ.ಎಸ್. ಸದಾಶಿವ, ಚಂದ್ರಶೇಖರಪಾಟೀಲ. ರಾಜಶೇಖರ ನೀರಮಾನ್ವಿ ಮೊದಲಾದವರು ಕಥಾ ಸಾಹಿತ್ಯ ಪ್ರಕಾರದಲ್ಲಿ ನವ್ಯತೆಯನ್ನು ತರಲು ಕಾರಣರಾದರು.

ತ್ರಿವೇಣಿ ಬರೆಯುತ್ತಿದ್ದ ಕಾಲದಲ್ಲೇ ಹೊಸ ಬಗೆಯ ಅಭಿವ್ಯಕ್ತಿಗಾಗಿ ಯತ್ನಿಸಿದ ಶ್ರೀಮತಿ ರಾಜಲಕ್ಷ್ಮಿ ಎನ್. ರಾವ್‌ರವರ 'ಆವೇ ಮೇರಿಯಾ'ದಲ್ಲಿ ನವೀನ ಪ್ರಜ್ಞೆಯನ್ನು ಗುರುತಿಸಬಹುದು. ಅವರ ನಂತರದ ನವ್ಯಧ್ವನಿ ವೀಣಾ ಶಾಂತೇಶ್ವರ ಅವರದು. ಹೆಣ್ಣಿನ ಮನಸ್ಸನ್ನು ಪ್ರಾಮಾಣಿಕವಾಗಿ, ಸೂಕ್ಷ್ಮವಾಗಿ, ದಿಟ್ಟತನದಿಂದ ಚಿತ್ರಿಸುವ ವೀಣಾ ತಮ್ಮ ಕಲಾಪ್ರಜ್ಞೆ ಮತ್ತು ಭಾಷೆಯ ಮೇಲಿನ ಪ್ರಭುತ್ವದಿಂದಾಗಿ ಯಶಸ್ವೀ ಕಥೆಗಳನ್ನು ನೀಡಿದ್ದಾರೆ. 'ಮುಳ್ಳುಗಳು' ಅವರ ಮೊದಲ ಕಥಾ ಸಂಕಲನ. 'ಅತಿಥಿ', 'ಪ್ರಶ್ನೆ', 'ನೆನಪು .... ಬರಿ ನೆನಪು' ಇಂತಹ ಕಥೆಗಳಲ್ಲಿ ಕಥಾರಚನೆಯೇ ಸತ್ಯ ಶೋಧನೆಯ ಮಾರ್ಗವಾಗಿರುವುದನ್ನು ಕಾಣಬಹುದು. ವಿಡಂಬನೆಯೊಂದಿಗೆ ಸಹಾನುಭೂತಿಯೂ ಬೆರೆತು, ದೃಷ್ಟಿಕೋನದಲ್ಲಿ ನವ್ಯತೆ ಕಾಲಿಟ್ಟಿರುವುದು ಕಂಡುಬರುತ್ತದೆ. 'ಕೊನೆಯ ದಾರಿ', 'ಕವಲು', 'ಹಸಿವು' ಮುಂತಾವು ವೀಣಾರವರ ಇತರ ಸಂಗ್ರಹಗಳು.

ನವ್ಯರಿಗೆ ಸಮಾಜದ ಸಮಸ್ಯೆಗಳಿಗಿಂತ ವೈಯಕ್ತಿಕ ಸಮಸ್ಯೆಗಳೇ ಹೆಚ್ಚು ಅಧಿಕೃತವೆನಿಸಿದವು. ಪ್ರಜ್ಞೆಯ ಸ್ಥಿತಿಗಳನ್ನು ಮಾತುಗಳಲ್ಲಿ ಹಿಡಿದಿಡುವುದು ಇವರ ಗುರಿಯಾಯಿತು. ವ್ಯಕ್ತಿಯ ಮನಸ್ಸಿನ ಒಳತೋಟಿಗಳನ್ನು, ರಹಸ್ಯಗಳನ್ನು ನಿಸ್ಸಂಕೋಚವಾಗಿ ಚಿತ್ರಿಸಿದರು. ಸಾಮಾಜಿಕ ಬದಲಾವಣೆಗಳನ್ನು, ಅವು ವ್ಯಕ್ತಿಯ ಸಂವೇದನೆಯ ಮೇಲೆ ಉಂಟುಮಾಡುವ ಪರಿಣಾಮಗಳ ಮೂಲಕ, ಅರ್ಥ ಮಾಡಿಕೊಳ್ಳುವುದು ನವ್ಯರ ಉದ್ದೇಶವಾಯಿತು. ಇವರ ಗುರಿಗಳು ಸೂಕ್ಷ್ಮ ಹಾಗೂ ಸಂಕೀರ್ಣಗೊಂಡ ಫಲವಾಗಿ, ಇವರ ಬರವಣಿಗೆಯೂ ಹಲವೊಮ್ಮೆ ಸಂಕೀರ್ಣಗೊಂಡು ಕ್ಲಿಷ್ಟವೆನಿಸಿತು. ಸಾಮಾನ್ಯ ಓದುಗರು ಕಥೆಯಿಂದ ದೂರ ಸರಿಯತೊಡಗಿದರು. ಕೆಲವು ಕಾಲದ ನಂತರ ವಸ್ತುವಿನ ಆಯ್ಕೆಯಲ್ಲಿ ಪುನರಾವೃತ್ತಿ ಕಂಡುಬಂತು, ಅಂತರ್ಮುಖತೆ ಒಂದು ಗೀಳಾಯಿತು. ನವ್ಯಪಂಥದ ಸೃಜನಶೀಲ ಲೇಖಕರು ಹೊಸ ರೀತಿಯಲ್ಲಿ ಬರೆಯಬೇಕೆಂದು ಯತ್ನಿಸತೊಡಗಿದರು. ಪಿ. ಲಂಕೇಶ್, ಕೆ. ಪೂರ್ಣಚಂದ್ರ ತೇಜಸ್ವಿ, ಚಂದ್ರಶೇಖರ ಪಾಟೀಲ ಮುಂತಾದವರು ಈ ಸಾಲಿಗೆ ಸೇರುತ್ತಾರೆ.

ನವ್ಯ ಸಾಹಿತ್ಯ ಸುಶಿಕ್ಷಿತ ಮಧ್ಯಮ ವರ್ಗದ ಸ್ವತ್ತಾಗಿದೆಯೆಂದೂ, ನವ್ಯ ಸಾಹಿತ್ಯದಲ್ಲಿ ಅಂತರ್ಮುಖತೆ ಮಿತಿಮೀರಿ ಬದುಕಿನ ಸ್ಪರ್ಶವೇ ನಷ್ಟವಾಗಿದೆಯೆಂಬ ಅಭಿಪ್ರಾಯಗಳು ತಲೆದೋರಿದವು. ಅದು ಬರಿಯ ಬೌದ್ಧಿಕ ಕಸರತ್ತು ಎಂಬಂಥ ಮಾತುಗಳೂ ಕೇಳಿಬಂದವು. ಸರಳ ಬರವಣಿಗೆಯ ಮೂಲಕ ಸಮಾಜದ ಶೋಷಿತ ವರ್ಗಗಳಲ್ಲಿ ಜಾಗೃತಿ ಮೂಡಿಸಿ, ಸಾಮಾಜಿಕ ನ್ಯಾಯಕ್ಕಾಗಿ ಹೋರಾಡುವಂತೆ ಮಾಡುವ ಉದ್ದೇಶ ಹೊತ್ತು ಆಗಮಿಸಿದ ಪಂಥ, ದಲಿತ ಮತ್ತು ಬಂಡಾಯ ಲೇಖಕರದು. ಕಲೆಗಿಂತ ವಸ್ತುವಿಗೆ ಹೆಚ್ಚಿನ ಆದ್ಯತೆ ನೀಡಬಯಸಿದ ಈ ಲೇಖಕರು ಸಾಮಾಜಿಕ ಅನ್ಯಾಯ, ಶೋಷಣೆ, ಬಡತನಗಳ ನಿವಾರಣೆಗಳ ಉದ್ದೇಶವನ್ನು ತಮ್ಮ ಮುಂದಿರಿಸಿಕೊಂಡು ಪ್ರಗತಿಶೀಲ ಚಳವಳಿಯ ಸಮೀಪಕ್ಕೆ ಬಂದು ನಿಂತಿದ್ದಾರೆ.

ನವ್ಯರ ರೀತಿಯಲ್ಲಿ ಬರೆಯಲು ಆರಂಭಿಸಿದ ಕೆ. ಪೂರ್ಣಚಂದ್ರ ತೇಜಸ್ವಿ ನಂತರದಲ್ಲಿ ನವ್ಯದ ತಂತ್ರಗಳನ್ನು ಬಿಟ್ಟುಕೊಟ್ಟು ಸರಳ ನಿರೂಪಣೆಯನ್ನು ಮೈಗೂಡಿಸಿಕೊಂಡರು. ವಿಶಾಲವಾದ ಸಾಮಾಜಿಕ ದೃಷ್ಟಿಕೋನವನ್ನು ಅಳವಡಿಸಿಕೊಂಡು 'ಕುಬಿ ಮತ್ತು ಇಯಾಲ', 'ಅಬಚೂರಿನ ಪೋಸ್ಟಾಫೀಸು', 'ತಬರನ ಕಥೆ' ಮುಂತಾದ ಉತ್ಕೃಷ್ಟ ಕಥೆಗಳನ್ನು ರಚಿಸಿದ್ದಾರೆ. 'ಅಬಚೂರಿನ ಪೋಸ್ಟಾಫೀಸು' ಸಂಗ್ರಹಕ್ಕೆ ಬರೆದ ಮುನ್ನುಡಿಯಲ್ಲಿ ತೇಜಸ್ವಿಯವರ ಮಾತೊಂದು ಉಲ್ಲೇಖಾರ್ಹವೆನಿಸುತ್ತದೆ. ನವ್ಯ ಸಾಹಿತ್ಯ ಬದಲಾಗುತ್ತಿರುವ ಪರಿಸರದ ಹೊಸ ಜವಾಬ್ದಾರಿಗಳನ್ನು ಹೊರಲಾರದೆಂದು ಹೇಳುವ ತೇಜಸ್ವಿ, 'ಅದರ ಸಾಂಕೇತಿಕ ಶೈಲಿ ತಂತ್ರಗಳು, ಕೇವಲ ಉಪಾಧ್ಯಾಯರೇ ಹೆಚ್ಚಾಗಿರುವ ಅದರ ಸಾಹಿತಿ ವರ್ಗ ಮತ್ತು ಕೇವಲ ಸಾಹಿತ್ಯದ ಮಟ್ಟಿಗೇ ಸೀಮಿತಗೊಂಡ ಅವರ ಕ್ರಾಂತಿಕಾರತನ' – ಈ ಮೂರು ಕಾರಣಗಳನ್ನು ಗುರುತಿಸುತ್ತಾರೆ. 'ಹುಲಿಯೂರಿನ ಸರಹದ್ದು', 'ಅಬಚೂರಿನ ಪೋಸ್ಟಾಫೀಸು' ಸಂಗ್ರಹಗಳ ಕಥೆಗಳನ್ನೂ ಒಳಗೊಂಡಿರುವ 'ಕೆ.ಪಿ. ಪೂರ್ಣಚಂದ್ರ ತೇಜಸ್ವಿಯವರ ಎಲ್ಲ ಕಥೆಗಳು ೧೯೮೩'ರ ಒಂದು ಮಹತ್ವದ ಸಂಕಲನ. 'ಕಿರಿಗೂರಿನ ಗಯ್ಯಾಳಿಗಳು' ಅವರ ಇತ್ತೀಚಿನ ಸಂಕಲನ.

ಆಧುನಿಕ ಕನ್ನಡದ ಮೊದಲ ದಲಿತ ಲೇಖಕ ದೇವನೂರು ಮಹಾದೇವ 'ನಮ್ಮ ರಕ್ತ ಪೂರ್ಣ ಸಂವೇದಿಸುವಂತಹದನ್ನೇ ಹಿಡಿದು ಹೊರಡುವುದು ಇಂದು ಆಗಬೇಕಾದದ್ದು' ಎಂಬ ಗ್ರಹಿಕೆಯಿಂದ ಬರವಣಿಗೆಯಲ್ಲಿ ತೊಡಗಿದವರು. ತಮ್ಮ ಮೊದಲ ಕೃತಿಯಲ್ಲೇ ಸ್ವಂತದನಿಯೊಂದನ್ನು ಕಂಡುಕೊಂಡು, ಆ ದನಿಯನ್ನು ಅಭಿವ್ಯಕ್ತಿಗಾಗಿ ಬಳಸಿಕೊಳ್ಳುತ್ತ, ಸಜೀವ, ಸ್ಫೋಟಕ ಭಾಷೆಯ ಮೂಲಕ ತಮ್ಮ ಅನುಭವವನ್ನು ಓದುಗ ಮುಂದಿರಿಸಿದವರು. 'ದ್ಯಾವನೂರು' ಅವರ ಏಳು ಕಥೆಗಳನ್ನು ಒಳಗೊಂಡ ಅವರ ಸಂಗ್ರಹ 'ಮಾರಿಕೊಂಡವರು', 'ಗ್ರಸ್ತರು' ಮುಂತಾದ ಕಥೆಗಳು ಭಾಷೆ ಅನುಭವ, ಸಂವಹನ ಎಲ್ಲ ದೃಷ್ಟಿಗಳಿಂದಲೂ ಉತ್ಕೃಷ್ಟವೆನಿಸಿದೆ. 'ಮೂಡಲ ಸೀಮೇಲಿ ಕೊಲೆ-ಗಿಲೆ ಮುಂತಾಗಿ', 'ಅಮಾಸ' ಇಂತಹ ಕಥೆಗಳಲ್ಲಿ ಶೋಷಣೆಯ ಹಲವು ಮುಖಗಳನ್ನು ವಿಶಿಷ್ಟ ಒಳನೋಟದಿಂದ ಚಿತ್ರಿಸಲಾಗಿದೆ. ಅವರ ಬರಹದಲ್ಲಿ ಸೂಕ್ಷ್ಮತೆ, ಕಲಾತ್ಮಕತೆ, ಸಂಯಮ ಮುಂತಾದ ನವ್ಯಗುಣಗಳನ್ನು ಮೈಗೂಡಿಸಿಕೊಂಡು ಪ್ರಗತಿಶೀಲರಿಗಿಂತ ಭಿನ್ನರೆನಿಸುತ್ತಾರೆ. ತಮ್ಮ ಪಾತ್ರಗಳ ಮೂಲಕ ಜನಾಂಗವೊಂದರ ಸಂಸ್ಕೃತಿಯನ್ನೆ ಓದುಗರ ಮುಂದಿಡುವ ಮಹಾದೇವರ ಕಥೆಗಳು ಕನ್ನಡ ಕಥಾಲೋಕಕ್ಕೆ ಚೈತನ್ಯ ಪೂರ್ಣ ಕೊಡುಗೆಗಳಾಗಿ ಪರಿಣಮಿಸಿವೆ. ಇವರ ಕಥೆಗಳು ದಲಿತ ಬದುಕಿನ ದಾಖಲೆಯಾಗಷ್ಟೇ ಉಳಿಯದೆ ಮಾನವ ಜೀವನದ ದಾಖಲೆಯೂ ಆಗಿವೆ. ಬಂಡಾಯ ಸಾಹಿತ್ಯವನ್ನು ಪ್ರತಿನಿಧಿಸುವ ಬರಗೂರು ರಾಮಚಂದ್ರಪ್ಪ, ಬೆಸಗರಹಳ್ಳಿ ರಾಮಣ್ಣ, ಕುಂ. ವೀರಭದ್ರಪ್ಪ, ಕಾಳೇಗೌಡ ನಾಗವಾರ ಮುಂತಾದ ಅನೇಕ ಬರಹಗಾರರು ಸಾಮಾಜಿಕ ಕಳಕಳಿಯನ್ನು ಹೊತ್ತು,

ಪ್ರತಿಭಟನೆಯ ಗಟ್ಟಿದನಿಗೆ, ಜನಪರ ಸಾಮಾಜಿಕ, ರಾಜಕೀಯ ಪ್ರಜ್ಞೆಗೆ ಒತ್ತು ಕೊಟ್ಟವರು. ಹಿಂದಿನ ಸಾಹಿತ್ಯದಲ್ಲಿ ಪ್ರತಿಭಟನೆಯ ಅಂಶಗಳಿದ್ದರೂ, ನವ್ಯೋತ್ತರದ ಪ್ರತಿಭಟನಾ ಮನೋಧರ್ಮ ವಿಶಿಷ್ಟವಾದುದು. 'ಇದುವರೆಗಿನ ನಮ್ಮ ಸಾಹಿತ್ಯದಲ್ಲಿ ಪ್ರತಿಭಟನೆಯ ಅಂಶಗಳಿದ್ದುವೇ ಹೊರತು ಪ್ರತಿಭಟನೆಯನ್ನೇ ಒಂದು ಮೌಲ್ಯವೆಂದು ಒಪ್ಪಿಕೊಂಡ ಪ್ರತಿಭಟನಾ ಸಾಹಿತ್ಯವೆಂಬುದು ಇರಲಿಲ್ಲ' ಎಂಬ ಜಿ.ಎಸ್. ಶಿವರುದ್ರಪ್ಪನವರ ಮಾತನ್ನು ಇಲ್ಲಿ ಸ್ಮರಿಸಬಹುದು. ಸಮಕಾಲೀನ ಸಾಹಿತ್ಯಕ್ಕೆ ಚಳವಳಿಯಾದ ಬಂಡಾಯದ ಲೇಖಕರಿಂದ ಕನ್ನಡ ಕಥಾಲೋಕಕ್ಕೆ ಮಹತ್ತರ ಕೊಡುಗೆ ಇನ್ನೂ ಬರಬೇಕಾಗಿದೆ.

ಕಳೆದ ಸುಮಾರು ಒಂದು ದಶಕದ ಅವಧಿಯಲ್ಲಿ ಹೊಸ ಹೊಸ ಕಥೆಗಾರರು ಬೆಳಕಿಗೆ ಬರುತ್ತಿದ್ದು ಕನ್ನಡ ಸಣ್ಣ ಕಥಾ ಪ್ರಪಂಚ ಶ್ರೀಮಂತಗೊಳ್ಳುತ್ತಲೇ ನಡೆದಿದೆ. ಪರಂಪರೆಯ ಕೇವಲ ಅನುಕರಣೆಯನ್ನು ಬಿಟ್ಟು ಹೊಸ ಬಗೆಯ ಸೃಜನಶೀಲ ರಚನೆಯಲ್ಲಿ ತೊಡಗಿರುವ ತರುಣ ಲೇಖಕರು ಹಲವು ಬಗೆಯ ಪ್ರಯತ್ನಗಳಲ್ಲಿ ತೊಡಗಿದ್ದಾರೆ. ಎಸ್. ದಿವಾಕರ್, ಮೊಗಳ್ಳಿ ಗಣೇಶ್, ಕೇಶವ ಮಳಗಿ, ವಿವೇಕ ಶಾನಭಾಗ್, ಜಯಂತ ಕಾಯ್ಕಿಣಿ, ಶಶಿಕಾಂತ ಕುಲಕರ್ಣಿ, ಕಾ.ತ. ಚಿಕ್ಕಣ್ಣ ಮುಂತಾದವರನ್ನು ಹೆಸರಿಸಬಹುದು. ಬೊಳುವಾರ ಮಹಮದ್ ಕುಂಞ, ಫಕೀರ್ ಮಹಮದ್ ಕಟ್ಪಾಡಿ ಮುಂತಾದ ಮುಸ್ಲಿಂ ಕಥೆಗಾರರು ತಮ್ಮ ಕಥೆಗಳ ಮೂಲಕ ಹೊಸ ಅನುಭವ ಲೋಕಗಳನ್ನು ತೆರೆದಿಟ್ಟಿದ್ದಾರೆ. ಕರೀಗೌಡ ಬೀಚನಹಳ್ಳಿ, ನಾಗತಿಹಳ್ಳಿ ಚಂದ್ರಶೇಖರ, ಚಿರಂಜೀವಿ, ಕೃಷ್ಣ ಮಾಸಡಿ, ನಾ ಡಿಸೋಜ, ಶಾಂತರಸ ಮುಂತಾದವರು ತಮ್ಮ ಕೊಡುಗೆ ನೀಡುತ್ತಲೇ ಬಂದಿದ್ದಾರೆ.

ಇತ್ತೀಚಿನ ಕಥೆಗಾರ್ತಿಯಲ್ಲಿ ವೈದೇಹಿಯವರದು ವಿಶಿಷ್ಟ ಹೆಸರು. 'ಅಂತರಂಗದ ಪುಟಗಳು', 'ಆಯ್ದ ಕಥೆಗಳು' ಮುಂತಾದ ಸಂಗ್ರಹಗಳು ಸತ್ವಶಾಲಿ ಕಥೆಗಳನ್ನು ಒಳಗೊಂಡಿವೆ. 'ಅಕ್ಕು' ಎಂಬ ಕಥೆ ಹಿಂಸೆಯ ಅನುಭವದ ಯಶಸ್ವೀ ಚಿತ್ರಣದಿಂದಾಗಿ ವಿಶೇಷ ಗಮನ ಸೆಳೆದಿದೆ. ವೈದೇಹಿಯವರ ಸಜೀವ ಶೈಲಿಯಲ್ಲಿ ಹೆಣ್ತನದ ವಿಶಿಷ್ಟ ಅನುಭವಗಳನ್ನು ಸೂಕ್ಷ್ಮವಾಗಿ ಸೆರೆ ಹಿಡಿದಿದ್ದಾರೆ. ಹೆಣ್ಣಿನ ಪ್ರಜ್ಞೆಗೆ ಸಂಬಂಧಿಸಿದ ಕೆಲವು ವಿಶಿಷ್ಟ ಸಮಸ್ಯೆಗಳನ್ನು ಮಾನವೀಯ ನೆಲೆಯಿಂದ ಅರ್ಥೈಸುತ್ತಾರೆ. ಸಾರಾ ಅಬೂಬಕ್ಕರ್, ಬಾನು ಮುಷ್ತಾಕ್‌ರಂತಹ ಕಥೆಗಾರ್ತಿಯರು ಮುಸ್ಲಿಮರ ಬದುಕಿನ ಆಂತರಿಕ ವಲಯವನ್ನು, ಆ ಜನಾಂಗದ ಹೆಣ್ಣುಗಳ ಬವಣೆಯ ವಿವಿಧ ಮುಖಗಳನ್ನು ತೆರೆದಿಡುವ ಯತ್ನದಲ್ಲಿ ಮುಂದುವರಿಯುತ್ತಿದ್ದಾರೆ. 'ಚಪ್ಪಲಿಗಳು ಹಾಗೂ ಪಯಣ ಮತ್ತು ಇತರ ಕತೆಗಳು' ಸಾರಾ ಅವರ ಕಥಾ ಸಂಕಲನಗಳು ಹೇಮಾಪಟ್ಟಣಶೆಟ್ಟಿ, ಕಮಲ ಹೆಮ್ಮಿಗೆ, ನೇಮಿಚಂದ್ರ ಮುಂತಾದವರೂ ಸಣ್ಣ ಕಥಾ ಕ್ಷೇತ್ರದಲ್ಲಿ ಕೃಷಿ ನಡೆಸುತ್ತಿದ್ದಾರೆ. ನೇಮಿಚಂದ್ರರವರ ಮೊದಲ ಕಥಾಸಂಕಲನ 'ನಮ್ಮ ಕನಸುಗಳಲ್ಲಿ ನೀವಿದ್ದೀರಿ' ಜಾಗೃತ ಪ್ರಜ್ಞೆ ಮತ್ತು ತಾತ್ವಿಕ ತಿಳಿವುಗಳನ್ನು ಮೈಗೂಡಿಸಿಕೊಳ್ಳುವ ಯತ್ನವಾಗಿದೆ. 'ಮತ್ತೆ ಬರೆದ ಕಥೆಗಳು' ಅವರ ಇತ್ತೀಚಿನ ಸಂಕಲನ. ಕನ್ನಡ ಸಣ್ಣ ಕಥೆ ಪ್ರಬುದ್ಧವಾಗಿ, ಸಮೃದ್ಧವಾಗಿ ಬೆಳೆದು ನಿಂತಿದೆ. ನವ್ಯ, ದಲಿತ-ಬಂಡಾಯ ಪರಂಪರೆಗಳಲ್ಲಿ ಲವಲವಿಕೆ, ಪ್ರಯೋಗಶೀಲತೆಗಳನ್ನು ಮೈಗೂಡಿಸಿಕೊಂಡು ಹೊಸ ಕಥೆಗಳು ಹುಟ್ಟಿಬರುತ್ತಲೇ ಇವೆ.

೪. ಕನ್ನಡದಲ್ಲಿ ವಿಮರ್ಶೆ

ಸಾಹಿತ್ಯ ವಿಮರ್ಶೆ ಕನ್ನಡದಲ್ಲಿ ಬೆಳೆದು ಬಂದದ್ದು ಪಾಶ್ಚಾತ್ಯ ಸಾಹಿತ್ಯ ವಿಮರ್ಶೆಯ ಪ್ರಭಾವದಿಂದಾಗಿ. ಕಾವ್ಯ ಮೀಮಾಂಸೆ ಮತ್ತು ಅಲಂಕಾರ ಶಾಸ್ತ್ರಗಳಲ್ಲಿ ಮಾತ್ರ ತೊಡಗಿದ್ದ ಹಿಂದಿನ

ನಮ್ಮ ಬರಹಗಾರರು ಸಂಸ್ಕೃತದ ಕಾವ್ಯಮೀಮಾಂಸೆಯ ಹೆಜ್ಜೆಗಳನ್ನೇ ಅನುಸರಿಸಿದರು. ಪ್ರತ್ಯೇಕ ಕೃತಿಗಳ ವಿವರಣೆ, ವಿಶ್ಲೇಷಣೆಗಳಲ್ಲಿ ಅವರು ತೊಡಗಲಿಲ್ಲ. ಕೃತಿಗಳ ವಿಶ್ಲೇಷಣೆ ಮತ್ತು ಮೌಲ್ಯ ಮಾಪನ ಮಾಡುವ ಒಂದು ಪ್ರತ್ಯೇಕ ಶಾಸ್ತ್ರವಾಗಿ ರೂಪುಗೊಂಡ ವಿಮರ್ಶೆಯ ಪ್ರಕಾರ ಈ ಶತಮಾನದಲ್ಲಿ ಗಣನೀಯವಾಗಿ ಬೆಳೆದು ೨೧ನೆಯ ಶತಮಾನದಲ್ಲಿ ಇನ್ನೂ ವಿಸ್ತಾರಗೊಳ್ಳುವ ಲಕ್ಷಣಗಳು ಕಂಡು ಬರುತ್ತಿವೆ. ಇಂಗ್ಲಿಷ್ ಭಾಷೆ, ಸಾಹಿತ್ಯ ಮತ್ತು ವಿಮರ್ಶೆಗಳನ್ನು ಅಭ್ಯಸಿಸಿ ಕನ್ನಡದ ಬರಹಗಾರರು, ಪಾಶ್ಚಿಮಾತ್ಯ ವಿಮರ್ಶೆಯ ಆಳ, ವಿಸ್ತಾರಗಳಿಂದ ಪ್ರಭಾವಗೊಂಡು ಅಲ್ಲಿಯ ಮೂಲತತ್ವಗಳನ್ನು ಕನ್ನಡಕ್ಕೆ ತಂದುಕೊಳ್ಳುವ ಯತ್ನದಲ್ಲಿ ತೊಡಗಿದರು. ಅದೇ ತತ್ವಗಳನ್ನು ಕನ್ನಡದ ಕೃತಿಗಳಿಗೆ ಅನ್ವಯಿಸಿ ವಿಮರ್ಶೆ ಮಾಡುವ ಕಾರ್ಯವೂ ನಡೆಯಿತು. ಆ ನಂತರ ನಮ್ಮ ಸಾಹಿತ್ಯ ಕೃತಿಗಳಿಗೆ ಅನ್ವಯಿಸಬಹುದಾದ ಮಾನದಂಡಗಳು ಯಾವುವು ಎಂಬ ಬಗ್ಗೆಯೂ ಸಾಕಷ್ಟು ಚರ್ಚೆ ನಡೆಯಿತು.

ಇಂಗ್ಲಿಷ್ ಸಾಹಿತ್ಯದ ದಟ್ಟವಾದ ಪ್ರಭಾವ ಮತ್ತು ಸ್ವದೇಶ ಭಾಷೆಗಳ ಮೇಲಿನ ಅಭಿಮಾನ ಇವುಗಳ ನಡುವಿನ ತಿಕ್ಕಾಟ ಹೊಸ ಸಾಹಿತ್ಯಕ್ಕೆ ಕೇಂದ್ರವಾಗಿತ್ತೆಂಬ ಮಾತನ್ನು ವಿಮರ್ಶೆಯ ಕ್ಷೇತ್ರಕ್ಕೂ ಅನ್ವಯಿಸಬಹುದು. ಇಂಗ್ಲಿಷ್ ವಿಮರ್ಶಕರ ಸೂತ್ರಗಳನ್ನು ನಾವು ಮಾದರಿಯನ್ನಾಗಿಟ್ಟುಕೊಂಡು ಪ್ರಾಚೀನ ಸಾಹಿತ್ಯಕ್ಕೆ ಪ್ರತಿಕ್ರಿಯಿಸುವ, ಮೌಲ್ಯಮಾಪನ ಮಾಡುವ ಕಾರ್ಯ ವಿಪುಲವಾಗಿ ನಡೆಯಿತು. ಕನ್ನಡದ ಪ್ರಖ್ಯಾತ ಕೃತಿಕಾರರ ರಚನೆಗಳನ್ನು ತುಲನೆಗೆ ಒಳಪಡಿಸಲಾಯಿತು. ಈ ಎಲ್ಲ ಪ್ರಕ್ರಿಯೆಗಳು ಕನ್ನಡದಲ್ಲಿ ಸಾಹಿತ್ಯ ವಿಮರ್ಶೆಯನ್ನು ಬೆಳೆಸಿದವು.

ವಿಮರ್ಶೆ ಒಂದು ಶಾಸ್ತ್ರವಾಗಿ ರೂಪುಗೊಂಡ ಪೂರ್ವದಲ್ಲಿ ಪ್ರಾಚೀನರ ಅಲಂಕಾರ ಗ್ರಂಥಗಳಲ್ಲಿ ಕಂಡು ಬರುತ್ತಿದ್ದ ಕಾವ್ಯದ ಗುಣದೋಷಗಳ ಪ್ರಸ್ತಾಪವನ್ನೇ ಒಂದು ರೀತಿಯ ವಿಮರ್ಶೆಯೆನ್ನಬಹುದು. ನಮಗೆ ಕಾಣಸಿಗುವ ಮಾದರಿಗಳು ಇಂಥವೇ. ಕವಿಗಳು ಕಾವ್ಯದ ಮೊದಲಿನಲ್ಲಿ ಅಥವಾ ಕಡೆಯಲ್ಲಿ ಒಳ್ಳೆಯ ಕಾವ್ಯ, ಕೆಟ್ಟ ಕಾವ್ಯದ ಬಗ್ಗೆ ಮಾತನಾಡುತ್ತಿದ್ದುದೂ ಅಥವಾ ವ್ಯಾಖ್ಯಾನ ಮಾಡುತ್ತಿದ್ದುದೂ ಒಂದು ರೀತಿಯ ವಿಮರ್ಶೆಯೇ. ಕ್ರಮಬದ್ಧ, ಶಾಸ್ತ್ರೀಯ ವಿಮರ್ಶೆ ಎಂದು ಕರೆಯಬಹುದಾದ ವಿಮರ್ಶೆ ಪ್ರಾರಂಭವಾದದ್ದು ಸಂಸ್ಕೃತ ಕೃತಿಗಳ ಮತ್ತು ಪ್ರಾಚೀನ ಕನ್ನಡ ಕೃತಿಗಳ ಪರಿಚಯದಿಂದ ಎನ್ನಬಹುದು. ಎಂ.ಎ. ರಾಮನುಜ ಅಯ್ಯಂಗಾರರ 'ಕವಿ ಚಕ್ರವರ್ತಿ ರನ್ನನ ಜೀವನ ಚರಿತ್ರೆ, ಗ್ರಂಥ ವಿಮರ್ಶೆ ಇತ್ಯಾದಿ' ಈ ಸಾಲಿಗೆ ಸೇರುವ ಮೊಟ್ಟ ಮೊದಲ ಕೃತಿ. ರನ್ನನ ಜೀವನ ಚರಿತ್ರೆ ಕೃತಿಗಳ ಪರಿಚಯ ಮತ್ತು ವಿಮರ್ಶೆ ಎಲ್ಲವೂ ಈ ಕೃತಿಯಲ್ಲಿ ದೊರೆಯುತ್ತದೆ. ಇಲ್ಲಿಂದ ಪ್ರಾರಂಭಿಸುವುದಾದರೆ, ಕನ್ನಡ ವಿಮರ್ಶೆಯ ಉಗಮವನ್ನು ಹತ್ತೊಂಭತ್ತನೆಯ ಶತಮಾನದ ಕೊನೆಯ ಭಾಗದಲ್ಲಿ ಗುರುತಿಸಬಹುದು. ೧೯೨೩ರಲ್ಲಿ ಬಂದ ಬಿ. ಕೃಷ್ಣಪ್ಪನವರ 'ರಾಮಚಂದ್ರಚರಿತಪುರಾಣ ವಿಮರ್ಶೆ' ಐತಿಹಾಸಿಕ ದೃಷ್ಟಿಯಿಂದ ಮುಖ್ಯವಾದುದು. ೧೯೩೧ರಲ್ಲಿ ಪ್ರಕಟವಾದ ಜಿ.ಪಿ. ರಾಜರತ್ನಂರವರ 'ಶ್ರೀ ಕವಿ ಪಂಪ' ಪಂಪನನ್ನು ಕುರಿತಂತೆ ಸಾಕಷ್ಟು ವಿಶದವಾದ ವಿಮರ್ಶೆಯಾಗಿದೆ.

೧೯೩೮ರಲ್ಲಿ ಪ್ರಕಟವಾದ ಮುಳಿಯ ತಿಮ್ಮಪ್ಪಯ್ಯನವರ 'ನಾಡೋಜ ಪಂಪ' ಪಂಪನನ್ನು ಕುರಿತು ಆಳವಾದ, ವಿಸ್ತಾರವಾದ ಅಧ್ಯಯನ. ಹೊಸ ಚಾರಿತ್ರಿಕ ದೃಷ್ಟಿಯನ್ನು ಒದಗಿಸಿದ ಈ ಗ್ರಂಥ ಪಂಪನ ಕೃತಿಗಳ ವಿಮರ್ಶೆಯನ್ನು ಒಳಗೊಂಡಿದ್ದು ಒಂದು ಅಸಾಮಾನ್ಯ ಕೃತಿಯೆನಿಸಿದೆ. ೧೯೩೯ರಲ್ಲಿ ಬಂದ ತೀ.ನಂ.ಶ್ರೀ. ಯವರ 'ಪಂಪ', ಪಂಪಮಹಾಕವಿಯನ್ನು ಪರಿಚಯಿಸುವ ಉತ್ತಮ ಕೃತಿ ಎಸ್.ವಿ. ರಂಗಣ್ಣನವರು ಬರೆದ 'ಕುಮಾರವ್ಯಾಸ' (೧೯೬೨) ಇದೇ ಸಾಲಿಗೆ ಸೇರುವ

ಅಚ್ಚುಕಟ್ಟಾದ ಇನ್ನೊಂದು ಕೃತಿ. ಕನ್ನಡವನ್ನೂ ಒಳಗೊಂಡಂತೆ ಭಾರತೀಯ ಭಾಷೆಗಳ ಹಲವಾರು ಕವಿಗಳನ್ನು ಕುರಿತಂತೆ ಪರಿಚಯಾತ್ಮಕವಾದ ಕಿರು ಹೊತ್ತಿಗೆಗಳು ಪ್ರಕಟಗೊಂಡಿವೆ. ಈ ಕೃತಿಗಳಲ್ಲೂ ಕೆಲಮಟ್ಟದ ವಿಮರ್ಶೆ ದೊರೆಯುತ್ತದೆ.

೧೯೭೫ರಲ್ಲಿ ಬಂದ ವಿ ಸೀತಾರಾಮಯ್ಯನವರ 'ಮಹಾಕವಿ ಪಂಪ' ತಿಮ್ಮಪ್ಪಯ್ಯನವರ ಕೃತಿಯ ನಂತರ ಪಂಪನನ್ನು ಕುರಿತಂತೆ ಬಂದ ಮತ್ತೊಂದು ಮಹತ್ತರ ಕೃತಿ. ವಿ.ಸೀ.ಯವರ ಅನುಭವ, ಅವರ ಕಾವ್ಯ ತತ್ವಗಳ ಅಧ್ಯಯನ, ಜೀವನಾನುಭವ, ಜೀವನಕ್ಕೆ ಹತ್ತಿರವಾದ ದೃಷ್ಟಿಕೋನ ಎಲ್ಲವನ್ನೂ ಒಳಗೊಂಡಿರುವ ಈ ವಿಮರ್ಶಾಕೃತಿ ಆಳವಾದ ವಿಮರ್ಶೆಯಲ್ಲಿ ತೊಡಗಿ ಒಂದು ಮಾದರಿಯೆನಿಸಿದೆ. ಹಿಂದಿನ ಕವಿಗಳನ್ನು ಸಹೃದಯರಿಗೆ ಪರಿಚಯಿಸುವಂಥ ಕೆಲವು ಸಂಭಾವನಾ ಗ್ರಂಥಗಳು ಪ್ರಕಟಗೊಂಡಿವೆ.

'ಮುದ್ದಣ' (೧೯೨೬), 'ರನ್ನ ಕವಿ ಪ್ರಶಸ್ತಿ' (೧೯೨೮), 'ಕವಿ ಲಕ್ಷ್ಮೀಶ' (೧೯೩೩), 'ಅಭಿನವ ಪಂಪ' (೧೯೩೪), 'ಹರಿಹರದೇವ' (೧೯೩೭), 'ಕುಮಾರವ್ಯಾಸ ಪ್ರಶಸ್ತಿ' (೧೯೬೫) ಮುಂತಾದವು ಈ ಸಾಲಿಗೆ ಸೇರುತ್ತವೆ.

ಟಿ.ಎಸ್. ವೆಂಕಣ್ಣಯ್ಯನವರ 'ಕನ್ನಡ ಸಾಹಿತ್ಯ ಚರಿತ್ರೆ ಮತ್ತು ಇತರ ಲೇಖನಗಳು' (೧೯೩೮) ತೀ.ನಂ.ಶ್ರೀಯವರ 'ಕಾವ್ಯ ಸಮೀಕ್ಷೆ' (೧೯೪೭), ಮತ್ತು 'ಸಮಾಲೋಕನ' (೧೯೫೮), ಸುಜನಾರವರ 'ಹೃದಯ ಸಂವಾದ' (೧೯೬೪), ಚೆನ್ನವೀರ ಕಣವಿಯವರ 'ಸಾಹಿತ್ಯ ಚಿಂತನ' (೧೯೬೬), ಜಿ.ಎಸ್. ಶಿವರುದ್ರಪ್ಪನವರ 'ಪರಿಶೀಲನ' (೧೯೬೭), 'ಗತಿಬಿಂಬ' (೧೯೬೯) ಮುಂತಾದ ಕೃತಿಗಳಲ್ಲಿ ಪ್ರಮುಖ ಲೇಖಕರು ಪ್ರಾಚೀನ ಕವಿಗಳನ್ನು ಕುರಿತು ತಮ್ಮ ವಿಚಾರಗಳನ್ನು ಮಂಡಿಸುತ್ತಲೇ ವಿಮರ್ಶೆಯ ಸಾಧ್ಯತೆಗಳನ್ನೂ ಶೋಧಿಸುವ ಪರಿಯನ್ನು ಕಾಣಬಹುದಾಗಿದೆ. ದೇ ಜವರೇಗೌಡರ 'ನಂಜುಂಡ ಕವಿ' ಮತ್ತು 'ಷಡಕ್ಷರ ದೇವ' ಆಯಾ ಕವಿಗಳನ್ನು ಕುರಿತು ವಿಮರ್ಶೆಯನ್ನೊಳಗೊಂಡಿದೆ.

೧೯೪೮ರಲ್ಲಿ ಬಂದ 'ಹೆಮ್ಮೆಗಳು' ಕೃತಿಯಲ್ಲಿ ಮುಪ್ಪಿನ ಷಡಕ್ಷರಿಯ ರಚನೆಗಳ ವಿಮರ್ಶೆಯನ್ನೂ, ೧೯೫೦ರಲ್ಲಿ ಪ್ರಕಟವಾದ 'ಅಲ್ಲಯ್ಯನ ಬೆಳಕು' ಎಂಬ ಕೃತಿಯಲ್ಲಿ ಅಲ್ಲಮಪ್ರಭುವಿನ ವಚನಗಳ ವಿಮರ್ಶೆಯನ್ನೂ ವಿಮರ್ಶೆಯ ಕ್ಷೇತ್ರಕ್ಕೆ ನೀಡಿದವರು ಪೂಜ್ಯ ಜ.ಚ.ನಿ. ಎಂದು ಪರಿಚಿತರಾಗಿರುವ ಚೆನ್ನಬಸವ ದೇಶೀಕೇಂದ್ರ ಶಿವಾಚಾರ್ಯರು.

ಸಂಸ್ಕೃತದ ಕೃತಿಗಳನ್ನೂ ಕೃತಿಕಾರರನ್ನೂ ಪರಿಚಯಿಸುವ ಪ್ರಕ್ರಿಯೆಯಲ್ಲಿ ಮೂಡಿದ ಕೃತಿಗಳನ್ನು ವಿಮರ್ಶೆಯ ಕ್ಷೇತ್ರಕ್ಕೆ ಸಂದ ಕೊಡುಗೆಗಳೆನ್ನಬಹುದು. ಎ.ಆರ್. ಕೃಷ್ಣಶಾಸ್ತ್ರಿಗಳ 'ಸಂಸ್ಕೃತ ನಾಟಕ' ಈ ಸಾಲಿಗೆ ಸೇರುವ ಅತ್ಯುನ್ನತ ಮಾದರಿಯೆನಿಸಿದೆ. ಸಂಸ್ಕೃತ ನಾಟಕಗಳನ್ನು ಕುರಿತಂತೆ ಇದೊಂದು ಅಪೂರ್ವ ಕೃತಿ. ಅನೇಕ ವಿದ್ವಾಂಸರ ಅಭಿಪ್ರಾಯದಲ್ಲಿ ಇಂತಹ ಕೃತಿ ಬೇರಾವುದೇ ಭಾಷೆಯಲ್ಲಿ ಪ್ರಕಟಗೊಂಡಿಲ್ಲ. ೧೯೩೩ರಲ್ಲಿ ಪ್ರಕಟಗೊಂಡ ಅವರ 'ಭಾಸ ಕವಿ' ಮತ್ತೊಂದು ಶ್ರೇಷ್ಠ ಕೊಡುಗೆಯೆನಿಸಿದೆ. ವೆಂಕಟೇಶ ಕುರಡಿಯವರ 'ಶ್ರೀ ಹರ್ಷನ ನಾಟಕಗಳು' (೧೯೩೦), ವಿ.ಸೀ. ಯವರ 'ಅಭಿಜ್ಞಾನ ಶಾಕುಂತಲ' (೧೯೪೩), ಸಿ.ಕೆ. ವೆಂಕಟರಾಮಯ್ಯನವರ 'ಕಾಳಿದಾಸ ಮಹಾಕವಿ' (೧೯೬೬), ಎಂ. ಸುಬ್ರಾಯನ್‌ರವರ 'ವಿಶ್ವಕವಿ ಕಾಳಿದಾಸ ಕೃತಿ ದರ್ಶನ', ಸಿ.ಆರ್. ಹೊಸಲಯ್ಯನವರ 'ಸಂಸ್ಕೃತಿ' (೧೯೫೫), ಎಂ. ರಾಜಗೋಪಾಲಚಾರ್ಯ ಅವರ 'ಕಾಳಿದಾಸನ ಉಪಮೆಗಳು' (೧೯೬೭) – ಮುಂತಾದವು ಈ ಬಗೆಯ ಕೃತಿಗಳೇ ಆಗಿವೆ. ಕಾಳಿದಾಸನ ನಾಟಕಗಳು ಮತ್ತು ಭವಭೂತಿ ಎಂಬ ಎರಡು ಕೃತಿಗಳಲ್ಲಿ ಆ ಕವಿಗಳ ಕೃತಿಗಳನ್ನು ಪ್ರಸ್ತಾಪಿಸಿರುವವರು ಕೆ. ಕೃಷ್ಣಮೂರ್ತಿಗಳು.

ಹಲವಾರು ಕಾವ್ಯ ಸಂಗ್ರಹಗಳ ಮುನ್ನುಡಿಗಳಲ್ಲೂ ಪ್ರಾಚೀನ ಕವಿಗಳನ್ನು ಕುರಿತು ವಿಮರ್ಶೆಯನ್ನು ಕಾಣಬಹುದಾಗಿದೆ. 'ಆದಿಪುರಾಣ ಸಂಗ್ರಹ'ಕ್ಕೆ ಡಿ.ಎಲ್. ನರಸಿಂಹಾಚಾರ್ಯರು, 'ಹರಿಶ್ಚಂದ್ರ ಕಾವ್ಯ ಸಂಗ್ರಹ'ಕ್ಕೆ ಎ.ಆರ್. ಕೃಷ್ಣಶಾಸ್ತ್ರಿಗಳು, 'ಭರತೇಶ ವೈಭವ ಸಂಗ್ರಹ'ಕ್ಕೆ ತ.ಸು. ಶಾಮರಾಯರು ಬರೆದಿರುವ ಮುನ್ನುಡಿಗಳಲ್ಲಿ ಆಯಾ ಕವಿಗಳನ್ನು ಕುರಿತು ವಿಮರ್ಶೆಯಿದೆ.

ಪ್ರಾಚೀನ ಕನ್ನಡ ಕವಿಗಳ ಕೃತಿಗಳನ್ನು ಪರಿಚಯಿಸುವ ಗ್ರಂಥಗಳಲ್ಲಿ ಕಂಡುಬರುವ ವಿಮರ್ಶೆ ಮತ್ತೊಂದು ಬೆಳವಣಿಗೆ. ೧೯೪೬ರಲ್ಲಿ ಪ್ರಕಟಗೊಂಡ ರಂ.ಶ್ರೀ. ಮುಗಳಿಯವರ 'ರನ್ನನ ಕೃತಿ ರತ್ನ', ಚನ್ನಬಸವಪ್ಪ ಕವಲಿ ಮತ್ತು ಎಸ್. ಮರಿದೇವಸ್ವಾಮಿಯ 'ಮರುಳಸಿದ್ಧಾಂತ (೧೯೪೯), ೧೯೫೦ರಲ್ಲಿ ಬಂದ ಡಿ.ವಿ. ಶೇಷಗಿರಿರಾಯರ 'ಪಂಪರಾಮಾಯಣ ಕಾವ್ಯ ಪರಿಚಯ' ಮತ್ತು ನಾಗಚಂದ್ರನ ಕಾವ್ಯಗಳು', ಎಂ. ಶಿವಾನಂದರವರ 'ಸೀಮಾಪುರುಷ ಷಡಕ್ಷರದೇವ' (೧೯೬೬) - ಮುಂತಾದವು ಈ ಸಾಲಿಗೆ ಸೇರುತ್ತವೆ.

೧೯೭೯ರಲ್ಲಿ ಬಂದ ಸಂ.ಶಿ. ಭೂಸನೂರುಮಠರ 'ಶೂನ್ಯ ಸಂಪಾದನೆಯ ಪರಾಮರ್ಶೆ' ಒಂದು ಕೃತಿಯನ್ನು ಕುರಿತಂತೆ ನಡೆದಿರುವ ಅಪೂರ್ವ ವಿಚಾರ ಮಂಥನದ ಫಲ. ಕೃತಿಯೊಂದರ ಒಳಹೊಕ್ಕು ವಿಮರ್ಶೆಯ ಮೂಲಕ ಆ ಕೃತಿಯ ಅನುಭವವನ್ನು ಸಹೃದಯರಿಗೆ ಒದಗಿಸುವ ವಿಶೇಷ ಚಟುವಟಿಕೆ ಇಲ್ಲಿ ನಡೆದಿದೆ. ಮಾಸ್ತಿಯವರ 'ವಿಮರ್ಶೆ' ಕೃತಿಯ ಸಾಲಿಗೆ ಸೇರುವ ವಿಮರ್ಶೆಯ ಮೂಲತತ್ವಗಳನ್ನು ಕುರಿತ ಇತರ ಗ್ರಂಥಗಳು, ವಿ.ಕೃ. ಗೋಕಾಕರ 'ಇಂದಿನ ಕನ್ನಡ ಕಾವ್ಯದ ಗೊತ್ತು ಗುರಿಗಳು' (೧೯೪೬), ಸ.ಸ. ಮಾಳವಾಡರ 'ಪುಸ್ತಕ ಪ್ರಪಂಚ' (೧೯೫೯), ಮಿರ್ಜಿ ಅಣ್ಣಾರಾಯರ 'ವಿಮರ್ಶೆಯ ಸ್ವರೂಪ' (೧೯೫೯), ಜಿ.ಎಸ್. ಶಿವರುದ್ರಪ್ಪನವರ 'ವಿಮರ್ಶೆಯ ಪೂರ್ವ-ಪಶ್ಚಿಮ' ಕೃತಿಗಳಲ್ಲಿ ವಿಮರ್ಶೆಯನ್ನು ಶಾಸ್ತ್ರೀಯವಾಗಿ ವಿವೇಚಿಸಿರುವ ಕ್ರಮ ಪ್ರಶಂಸಾರ್ಹವಾದುದು. ಆಕರ್ಷಕ ಶೈಲಿಯನ್ನು ಶ್ಲಾಘ್ಯ ರೀತಿಯಲ್ಲಿ ಕೈಗೊಂಡ ಮೊಟ್ಟಮೊದಲ ಪುಸ್ತಕ ಎಂಬ ಹೆಗ್ಗಳಿಕೆಗೆ ಈ ಕೃತಿ ಪಾತ್ರವಾಗಿದೆ. ಹೆಚ್. ತಿಪ್ಪೇರುದ್ರ ಸ್ವಾಮಿಯವರ ಗ್ರಂಥಗಳಲ್ಲಿ ಪಾಶ್ಚಾತ್ಯ ವಿಮರ್ಶೆಯ ಮೂಲ ತತ್ವಗಳನ್ನು ಭಾರತೀಯ ಕಾವ್ಯ ಮೀಮಾಂಸೆಯ ಹಿನ್ನೆಲೆಯಲ್ಲಿ ನಿರೂಪಿಸಲಾಗಿದೆ. ಪಶ್ಚಿಮ ಮತ್ತು ಪೂರ್ವದ ಸಾಹಿತ್ಯ ಮೀಮಾಂಸೆಯ ಅಧ್ಯಯನ ಮತ್ತು ಆಧುನಿಕ ಮನಃಶಾಸ್ತ್ರದ ಹಿನ್ನೆಲೆ ಈ ಇಬ್ಬರೂ ಗ್ರಂಥಕರ್ತರ ಮನೋಚಟುವಟಿಕೆಯಲ್ಲಿ ಪಾತ್ರವಹಿಸಿರುವುದನ್ನು ಕಾಣಬಹುದು.

ವಿಮರ್ಶೆಯ ಸಿದ್ಧಾಂತಗಳು ಕಿರಿಯರ ವಿಶ್ವಕೋಶವೆನಿಸಿರುವ ಬಿ.ಹೆಚ್. ಶ್ರೀಧರರ 'ಕಾವ್ಯಸೂತ್ರ' (೧೯೮೮) ವಿಮರ್ಶೆಯ ಮೂಲಭೂತ ಸಿದ್ಧಾಂತಗಳನ್ನು ಶಾಸ್ತ್ರೀಯವಾದ ಶೈಲಿಯಲ್ಲಿ ಮಂಡಿಸುತ್ತವೆ.

ವಿಶ್ವದ ಅತ್ಯುತ್ತಮ ಸಾಹಿತ್ಯವನ್ನು ವಿಮರ್ಶಿಸಲು ಬಳಸಲಾಗಿರುವ ಮೂಲತತ್ವಗಳನ್ನು ಕನ್ನಡಕ್ಕೆ ತಂದ ಹಲವಾರು ಕೃತಿಗಳು ನಮ್ಮ ಸಂದರ್ಭದಲ್ಲಿ ಸಾಹಿತ್ಯ ಚರಿತ್ರೆ ಬೆಳೆಯಲು ಸಹಕಾರಿಯಾಗಿವೆ. ಎನ್. ಬಾಲಸುಬ್ರಹ್ಮಣ್ಯರವರ 'ಅರಿಸ್ಟಾಟಲನ ಕಾವ್ಯಮೀಮಾಂಸೆ' (೧೯೫೯) ಮತ್ತು ಹೊರೇಸನ 'ಸಾಹಿತ್ಯ ವಿಮರ್ಶೆ' (೧೯೭೯) ಎಂಬ ಎರಡು ಕೃತಿಗಳು ಕನ್ನಡಕ್ಕೆ ಅಮೂಲ್ಯವಾಗಿ ಪರಿಣಮಿಸಿವೆ. ಸ್ಪಷ್ಟನಿರೂಪಣೆ, ಸುಂದರ ಶೈಲಿ, ವಿಮರ್ಶನ ಪ್ರತಿಭೆಗಳಿಂದಾಗಿ ಅವು ಉತ್ತಮ ಅನುವಾದಗಳೆನಿಸಿವೆ. ಸಿ.ಪಿ. ಕೃಷ್ಣಕುಮಾರರು 'ಪ್ರಿನ್ಸಿಪಲ್ಸ್ ಆಫ್ ಲಿಟರರಿ ಕ್ರಿಟಿಸಿಸಂ' ಕೃತಿಯನ್ನು 'ಸಾಹಿತ್ಯ ವಿಮರ್ಶೆಯ ತತ್ವಗಳು' (೧೯೬೪) ಎಂದೂ, ವಿಲಿಯಂ ಹೆನ್ರಿ ಹಡ್ಸನ್ನನ 'ಇಂಟ್ರೊಡಕ್ಷನ್ ಟು ದಿ ಸ್ಟಡಿ ಆಫ್ ಲಿಟರೇಚರ್, ಎಂಬ ಕೃತಿಯನ್ನು 'ಸಾಹಿತ್ಯ ಪ್ರವೇಶ' (೧೯೬೫) ಎಂದೂ ಅನುವಾದಿಸಿದ್ದಾರೆ.

೧೯೭೦ರಲ್ಲಿ ಪ್ರಕಟವಾದ ಇವರ 'ಪಾಶ್ಚಾತ್ಯ ಕಾವ್ಯ ಚಿಂತನ', ಲೀ. ಹಂಟ್, ಜಾನ್ ಸ್ಟುವರ್ಟ್‌ಮಿಲ್, ಮ್ಯಾಥ್ಯೂ ಆರ್ನಾಲ್ಡ್, ಜಾರ್ಜ್ ಸಾಂತಾಯನ, ಎ ಸಿ ಬ್ರಾಡ್ಲೆ, ಎಮರ್ಸನ್ ಮುಂತಾದವರ ಕಾವ್ಯ ಚಿಂತನೆಗಳ ಅನುವಾದವನ್ನು ಒಳಗೊಂಡಿದೆ. ಷೆಲ್ಲಿಯ 'ಡಿಫೆನ್ಸ್ ಆಫ್ ಪೊಯಟ್ರಿ'ಯ ಸರಳಾನುವಾದವನ್ನು ಕುವೆಂಪು ನೀಡಿದ್ದರೂ ಸುಮಾರು ಕಾಲು ಶತಮಾನದ ನಂತರ ಜಿ. ಗುಂಡಣ್ಣ ಮತ್ತು ಸಿ. ಮಹದೇವಪ್ಪನವರು 'ಕಾವ್ಯ ಸಮರ್ಥನೆ' (೧೯೫೬) ಎಂಬ ಹೆಸರನಲ್ಲಿ ಈ ಇಂಗ್ಲಿಷ್ ಕೃತಿಯ ಅನುವಾದವನ್ನು ತಂದರು. ವರ್ಡ್ಸ್‌ವರ್ತ್ ಕವಿಯ 'ಲಿರಿಕಲ್ ಬ್ಯಾಲಡ್ಸ್'ನ ಕನ್ನುಡಿಯನ್ನು ಅನುವಾದಿಸಿ 'ಕಾವ್ಯ ಮತ್ತು ಕಾವ್ಯದ ಶಬ್ದ ರೀತಿ'ಯನ್ನು ಹೊರತಂದರು. ಶೋಪೆನ್ ಹೋವರ್‌ನ ನಾಲ್ಕು ಪ್ರಬಂಧಗಳನು ಅನುವಾದಿಸಿ 'ಸಾಹಿತ್ಯದ ಜೀವಾಳ' (೧೯೪೨) ಎಂಬ ಕೃತಿ ಸಂಕಲನವನ್ನು ಹೊರತಂದವರು ಗೊರೂರು ರಾಮಸ್ವಾಮಿ ಅಯ್ಯಂಗಾರರು. ಟಿ.ಎಸ್. ಎಲಿಯಟ್ ಎಂಬ ಬ್ರಾಡ್‌ಬ್ರೂಕ್‌ನ ಗ್ರಂಥವನ್ನು ಕನ್ನಡಕ್ಕೆ ತಂದವರು ಬಿ.ಹೆಚ್. ಶ್ರೀಧರರು. ೧೯೮೨ರಲ್ಲಿ ಬಂದ ಮಾರ್ಕ್ಸ್‌ವಾದ ಮತ್ತು ಕಾವ್ಯ ಜಾರ್ಜ್ ಥಾಮ್‌ಸನ್‌ರವರ ಕೃತಿಯನ್ನು ಹೆಚ್.ಕೆ. ರಾಮಚಂದ್ರ ಮೂರ್ತಿ ಅನುವಾದಿಸ್ದಿದಾರೆ. ಕರ್ನಾಟಕ ಸಾಹಿತ್ಯ ಅಕಾಡೆಮಿಯವರು ೧೯೯೦ರಲ್ಲಿ ಕನ್ನಡ ಸಾಹಿತ್ಯವನ್ನೇ ದೃಷ್ಟಿಕೋನದ ಕೇಂದ್ರವಾಗಿರಿಸಿಕೊಂಡು ೧೯೯೯ರಲ್ಲಿ ಸಾಹಿತ್ಯ ಪಾರಿಭಾಷಿಕ ಮಾಲೆಯೊಂದನ್ನು ಪ್ರಾರಂಭಿಸಿ ಆ ಮಾಲೆಯ ಅಡಿಯಲ್ಲಿ ಕನ್ನಡ ಸಾಹಿತ್ಯ ವಿಮರ್ಶೆಯ ಪರಿಭಾಷೆ, ಪರಿಕಲ್ಪನೆಗಳನ್ನು ತಿಳಿದುಕೊಳ್ಳಲು ಸಹಾಯಕವಾಗುವಂಥ ಉಪಯುಕ್ತ ಕೃತಿಗಳನ್ನು ತಂದಿದ್ದಾರೆ. ಪ್ರಜ್ಞಾಪ್ರವಾಹತಂತ್ರ, ಅಸ್ತಿತ್ವವಾದ, ಶೈಲಿಶಾಸ್ತ್ರ ಸಾಹಿತ್ಯ ವಿಮರ್ಶೆ ಮುಂತಾದ ಇಪ್ಪತ್ತೊಂದು ಪುಸ್ತಿಕೆಗಳನ್ನು ಈ ಮಾಲೆ ಒಳಗೊಂಡಿದೆ.

ಹಲವಾರು ವಿದ್ವಾಂಸರ ಸಂಪ್ರಬಂಧಗಳು (ಡಾಕ್ಟರೇಟ್ ಪ್ರಬಂಧಗಳು) ವಿಮರ್ಶೆಯ ಕ್ಷೇತ್ರಕ್ಕೆ ಮೌಲಿಕ ಕೊಡುಗೆಗಳಾಗಿ ಪರಿಣಮಿಸಿವೆ. ತ.ಸು. ಶಾಮರಾಯರ 'ಕನ್ನಡ ನಾಟಕ' (೧೯೬೧), ಎಚ್. ತಿಪ್ಪೇರುದ್ರಸ್ವಾಮಿಯವರ 'ಶರಣರ ಅನುಭವ ಸಾಹಿತ್ಯ' (೧೯೬೩), ಜಿ.ಎಸ್. ಶಿವರುದ್ರಪ್ಪನವರ 'ಸೌಂದರ್ಯ ಸಮೀಕ್ಷೆ' (೧೯೬೫), ಪ್ರಭುಶಂಕರರ 'ಕನ್ನಡದಲ್ಲಿ ಭಾವಗೀತೆ' (೧೯೬೬), ಕೆ. ಮರುಳಸಿದ್ದಪ್ಪನವರ 'ಕನ್ನಡ ನಾಟಕ ಸಮೀಕಷೆ', ತಿಪ್ಪೇರುದ್ರಸ್ವಾಮಿಯವರ 'ಕರ್ನಾಟಕ ಸಂಸ್ಕೃತಿ ಸಮೀಕ್ಷೆ', ಎಚ್.ಎಸ್. ಸುಜಾತಾರವರ 'ಎಂ.ಎಸ್. ಪುಟ್ಟಣ್ಣ ಒಂದು ಅಧ್ಯಯನ' ಮುಂತಾದವು.

ವಿಪುಲವಾದ ಸಂಖ್ಯೆಯಲ್ಲಿ ಬಂದಿರುವ ಅಭಿನಂದನಾ ಗ್ರಂಥಗಳು ವಿಮರ್ಶೆಯ ಕ್ಷೇತ್ರಕ್ಕೆ ಲಭಿಸಿರುವ ಕೊಡುಗೆಗಳೆಂದೇ ಹೇಳಬಹುದು. ೧೯೪೧ರಲ್ಲಿ ಬಿ.ಎಂ.ಶ್ರೀ.ಯವರಿಗೆ ಅರ್ಪಿಸಲಾದ 'ಸಂಭಾವನೆ' ಕನ್ನಡದ ಮೊಟ್ಟಮೊದಲನೆಯ ಅಭಿನಂದನಾ ಗ್ರಂಥ. ಬೇಂದ್ರೆ, ಕುವೆಂಪು, ಡಿ.ಎಲ್. ನರಸಿಂಹಚಾರ್, ಪಂಜೆ ಮಂಗೇಶರಾಯರು, ವಿ.ಸೀ., ಎಸ್.ವಿ. ರಂಗಣ್ಣ, ಟಿ.ಎಸ್. ವೆಂಕಣ್ಣಯ್ಯ, ಶಿವರಾಮ ಕಾರಂತ, ವಿ.ಕೃ. ಗೋಕಾಕ್, ಎ.ಆರ್.ಕೃ., ಜಿ. ವೆಂಕಟಸುಬ್ಬಯ್ಯ, ತ.ರಾ.ಸು., ತ.ಸು.ಶಾ, ಮಾಸ್ತಿ, ತೀ.ನಂ.ಶ್ರೀ ಮುಂತಾದ ವಿದ್ವಾಂಸರಿಗೆ ಅರ್ಪಿಸಲಾದ ಸಂಭಾವನಾ ಗ್ರಂಥಗಳಲ್ಲಿ ಹಲವಾರು ಅತ್ಯುತ್ತಮ ವಿಮರ್ಶೆ ಲೇಖನಗಳು ಪ್ರಕಟಗೊಂಡಿವೆ.

ಸಾಹಿತ್ಯ ಅಕಾಡೆಮಿಯ ಪ್ರಕಟಣೆಗಳಾದ ಚಂದನ, ಅನಿಕೇತನ (ಕನ್ನಡ ಮತ್ತು ಇಂಗ್ಲಿಷಿನ ಎರಡು ಪ್ರತ್ಯೇಕ ಪ್ರಕಟಣೆಗಳು) ಹಲವಾರು ವಿಮರ್ಶಾ ಲೇಖನಗಳನ್ನೂ ಅನುವಾದಿತ ಲೇಖನಗಳನ್ನೂ ವಿಮರ್ಶೆಯ ಕ್ಷೇತ್ರಕ್ಕೆ ನೀಡಿವೆ. ಈ ಪತ್ರಿಕೆಗಳು ಕಾಲಕಾಲಕ್ಕೆ ತರುವ ವಿಶೇಷಾಂಕಗಳು ಉತ್ತಮ ವಿಮರ್ಶಾ ದಾಖಲೆಗಳೆನಿಸಿವೆ. ಉದಾ: ಮನ್ವಂತರದ ನಾಟಕಾಂಕ,

ಸಾಕ್ಷಿ ಪತ್ರಿಕೆ ತಂದ ಕವಿತೆಯ ಸಾಕ್ಷಿ ಮತ್ತು ಸಂಕ್ರಮಣ ಪತ್ರಿಕೆಯ ಸಂಕ್ರಮಣ ಸಾಹಿತ್ಯ ಸಂಪುಟ ಇತ್ಯಾದಿ.

ಮೈಸೂರು, ಬೆಂಗಳೂರು ಮತ್ತು ಕರ್ನಾಟಕ ವಿಶ್ವವಿದ್ಯಾನಿಲಯಗಳಲ್ಲದೆ ಸಾಹಿತ್ಯ ಅಕಾಡೆಮಿ, ಕನ್ನಡ ಸಾಹಿತ್ಯ ಪರಿಷತ್ತುಗಳು ಏರ್ಪಡಿಸಿದ್ದ ವಿಚಾರ ಸಂಕಿರಣಗಳಲ್ಲಿ ಮಂಡಿಸಲಾದ ಪ್ರಬಂಧಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಲಾಗಿದೆ. ವಿಮರ್ಶೆಯ ಕ್ಷೇತ್ರಕ್ಕೆ ಇವು ಅಮೂಲ್ಯವಾದ ಕೊಡುಗೆಗಳು.

ರಾಜ್ಯ ಸಾಹಿತ್ಯ ಅಕಾಡೆಮಿಯ ಸ್ವಾತಂತ್ರ್ಯೋತ್ತರ ಕನ್ನಡ ಸಾಹಿತ್ಯ, ಚಿಕ್ಕವೀರ ರಾಜೇಂದ್ರ- ಒಂದು ಚಿಂತನ, ಟಿ.ಎಸ್. ಎಲಿಯಟ್ ಮತ್ತು ಕನ್ನಡ ನವ್ಯಕಾವ್ಯ ಸಂದರ್ಭ, ಕನ್ನಡ ಸಾಹಿತ್ಯ ಮತ್ತು ಪ್ರತಿಭಟನೆ, ಷೇಕ್ಸ್‌ಪಿಯರ್ ಮತ್ತು ಕನ್ನಡ ಸಾಹಿತ್ಯ, ರಾಷ್ಟ್ರೀಯತೆ ಮತ್ತು ಆಧುನಿಕ ಕನ್ನಡ ಸಾಹಿತ್ಯ, ಸಾಹಿತ್ಯ ಮತ್ತು ಸಾಮಾಜಿಕ ನಿಲುವುಗಳು ಇತ್ಯಾದಿ.

ಬೆಂಗಳೂರು ವಿಶ್ವವಿದ್ಯಾನಿಲಯವು ವರ್ಷವರ್ಷವು ಹೊರತರುವ 'ಸಾಹಿತ್ಯ ವಾರ್ಷಿಕ'ಗಳು, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಕಟಿಸಿರುವ ವಿವಿಧ ಸಾಹಿತ್ಯ ಪ್ರಕಾರಗಳ ವಾರ್ಷಿಕಗಳು ಅತ್ಯಂತ ಉಪಯುಕ್ತ ದಾಖಲೆಗಳಾಗಿವೆ. ರಾಜ್ಯ ಸಾಹಿತ್ಯ ಅಕಾಡೆಮಿ ಹೊರತಂದ ದಶವಾರ್ಷಿಕ ವಿಮರ್ಶೆ (೧೯೭೪-೮೩) ಒಂದು ಉತ್ತಮ ಸಂಕಲನವಾಗಿದ್ದು ಒಂದು ದಶಕದ ಕಾಲದಲ್ಲಿ ವಿಮರ್ಶೆಯ ಬೆಳವಣಿಗೆಯ ಹಾದಿಯನ್ನು ಗುರುತಿಸುತ್ತದೆ.

ಕನ್ನಡ ಸಾಹಿತ್ಯದ ಪ್ರತ್ಯೇಕ ಕೃತಿಗಳನ್ನು ಕುರಿತಂತೆ ಮತ್ತು ಕವಿಗಳನ್ನು ಕುರಿತಂತೆ ಬಂದಿರುವ ವಿಮರ್ಶಾ ಕೃತಿಗಳೂ ಸಾಕಷ್ಟಿವೆ. 'ಶ್ರೀ ರಾಮಾಯಣ ದರ್ಶನಂ ಮಹಾಕಾವ್ಯ ಸಮೀಕ್ಷೆ' (ಕೋ. ಚೆನ್ನಬಸಪ್ಪ), 'ಶ್ರೀ ರಾಮಾಯಣ ದರ್ಶನಂ ಸಮೀಕ್ಷೆ', 'ಸಾಹಿತ್ಯಾರಾಧನೆ' (ಕುವೆಂಪು ಸಾಹಿತ್ಯ ವಿಮರ್ಶೆ), (ಸಂ. ದೇಜಗೌ, ಸಿಪಿಕೆ), ಮಾಸ್ತಿಯವರು ಮತ್ತು ಚಿಕ್ಕವೀರ ರಾಜೇಂದ್ರ ಒಂದು ಚಿಂತನ, ಕಾರಂತ : ಕೆಲವು ಮುಖಗಳು (ಸಂ.ಜಿ.ಎಸ್. ಭಟ್ಟ, ಕೆ.ವೈ. ಶಿವಕುಮಾರ್), ಅಡಿಗರ ಕಾವ್ಯ (ಸುಮತೀಂದ್ರ ನಾಡಿಗ್), 'ಮಾಸ್ತಿಯವರ ಕತೆಗಳು' (ಎ.ಎನ್. ಮೂರ್ತಿರಾವ್), 'ಮಾಸ್ತಿಯವರು ಮತ್ತು ಚಿಕ್ಕವೀರ ರಾಜೇಂದ್ರ' (ಸಂ. ರಾಮೇಗೌಡ, ಪ್ರಧಾನ್ ಗುರುದತ್ತ), 'ತ್ರಿವೇಣಿ: ವ್ಯಕ್ತಿ ಮತ್ತು ಸಾಹಿತ್ಯ' (ಡಾ|| ಎನ್.ವಿ. ವಿಮಲ) ಮುಂತಾದವು ಈ ಸಾಲಿಗೆ ಸೇರುತ್ತವೆ. ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಕಟಿಸಿರುವ 'ಕನ್ನಡ ಭಾರತಿ' (ಸಂ.ಎಲ್.ಎಸ್. ಶೇಷಗಿರಿರಾವ್)ಯಲ್ಲಿ ರಾಷ್ಟ್ರೀಯ ಮಟ್ಟದಲ್ಲಿ ಪುರಸ್ಕಾರ ಪಡೆದಿರುವ ಎಲ್ಲ ಕೃತಿಗಳ ಪರಿಚಯ ಮತ್ತು ಅವುಗಳನ್ನು ಕುರಿತಂತೆ ವಿಮರ್ಶಾತ್ಮಕ ಲೇಖನಗಳನ್ನು ಒಟ್ಟುಗೂಡಿಸಿ ಓದುಗರಿಗೆ ನೀಡಲಾಗಿದೆ.

ಹೊಸಗನ್ನಡ ವಿಮರ್ಶೆಗೆ 'ಶ್ರೀ' ಎಂದು ಖ್ಯಾತರಾಗಿದ್ದ ಬಿ.ಎಂ. ಶ್ರೀಕಂಠಯ್ಯನವರ ಕೊಡುಗೆ ಅಪಾರ ಮತ್ತು ಅಮೂಲ್ಯವಾದುದು. ಇವರು ಪ್ರಾಚೀನ ಕಾವ್ಯಗಳ ಮೌಲ್ಯಮಾಪನ ಮಾಡಿ ಶಾಸ್ತ್ರೀಯ ರೀತಿಯಲ್ಲಿ ವಿಮರ್ಶೆ ಮಾಡಿದವರು. ಅವರ ಕನ್ನಡ ಸಾಹಿತ್ಯ ಚರಿತ್ರೆ ಮತ್ತಿತರ ಹಲವಾರು ಗ್ರಂಥಗಳಿಗೆ ಅವರು ಬರೆದಿರುವ ಮುನ್ನುಡಿ ('ಕನ್ನಡ ಕೈಪಿಡಿ', ೨ನೇ ಸಂಪುಟ (೧೯೪೭))ಗಳು ಇದಕ್ಕೆ ಉತ್ತಮ ಉದಾಹರಣೆಗಳಾಗಿವೆ. ೧೯೪೮ರಲ್ಲಿ ಬಂದ 'ಕನ್ನಡಿಗರಿಗಾಗಿ ಒಳ್ಳೆಯ ಸಾಹಿತ್ಯದಲ್ಲಿ ಪಂಪ, ರನ್ನ, ಕುಮಾರವ್ಯಾಸ ಮುಂತಾದ ಕವಿಗಳ ಬಗ್ಗೆ ಅತ್ಯುತ್ತಮ ವಿಮರ್ಶೆಯನ್ನು ನೀಡಿದ್ದಾರೆ. ಪ್ರಾಚೀನ ಕಾವ್ಯವನ್ನು ಕುರಿತಂತೆ ಬರೆದಿರುವ ಶ್ರೀಯವರು ವಿಮರ್ಶೆಯಲ್ಲಿ ಸೌಂದರ್ಯಕ್ಕೆ ಮನಸೋಲುವ ಪ್ರವೃತ್ತಿಯೊಂದಿಗೇ ಆಧುನಿಕತೆಯ ನೆಲೆಯಿಂದ ಹೊರಟ ಪ್ರಕ್ರಿಯೆಯೂ ಸೇರಿದೆ. ಉತ್ಸಾಹ, ಆವೇಶಗಳು ಅವರ ವಿಮರ್ಶೆಯ ಪ್ರಧಾನ ಅಂಶಗಳಾಗಿ ಕಂಡುಬರುತ್ತದೆ.

ನಿರ್ಣಯಾತ್ಮಕವಾದ ವಿಮರ್ಶೆ ಮೂಡದೆ, ಗೊಂದಲಗಳಿಗೂ ಎಡೆ ಮಾಡಿರುವ ವಿಮರ್ಶೆ ಶ್ರೀಯವರ ಆಧುನಿಕ ವಿಮರ್ಶಾ ಸಾಹಿತ್ಯದ ಪ್ರೇರಕಶಕ್ತಿಯಾಗಿ ಉತ್ಸಾಹದಿಂದ ದುಡಿದರಾದರೂ, ಅವರು ಯಾವ ಬಗೆಯ ವಿಮರ್ಶಾ ಸಿದ್ಧಾಂತವನ್ನೂ ನೀಡದೆ ಹೋದರು. ಆದರೆ ಅವರು ತಮ್ಮ ಸಾಹಿತ್ಯದ ಮೂಲಕ ಹುಟ್ಟುಹಾಕಿದ ಹೊಸ ಪ್ರಜ್ಞೆಯೇ ವಿಮರ್ಶೆಯ ಕ್ಷೇತ್ರಕ್ಕೆ ಒಂದು ಹೊಸ ಕೊಡುಗೆಯೆನಿಸಿದೆ. ಗ್ರೀಕ್ ಮತ್ತು ಎಲಿಝಬತ್ ದುರಂತ ನಾಟಕಗಳ ಹಿನ್ನಲೆಯಲ್ಲಿ ರನ್ನ ಮತ್ತು ನಾಗಚಂದ್ರರಂಥವರ ಕೃತಿಗಳಲ್ಲಿ ಬರುವ ದುರಂತದ ಸ್ವರೂಪವನ್ನು ಶ್ರೀಯವರು ಗುರುತಿಸಿದರು. ರನ್ನನ ವಸ್ತುವನ್ನು ಬಳಸಿಕೊಂಡು ಪಾಶ್ಚಾತ್ಯ ಸಾಹಿತ್ಯದ ದರ್ಶನದ ಮೂಲಕ ರಚಿಸಿದ ಅವರ ಗದಾಯುದ್ಧ ನಾಟಕ ಇದಕ್ಕೊಂದು ಉತ್ತಮ ಉದಾಹರಣೆ. ಹಾಗೆಯೇ 'ಅರಿಸ್ಟಾಟಲನ ಕಾವ್ಯ ಮಿಮಾಂಸೆ'ಯ ಪರಿಕಲ್ಪನೆಗಳನ್ನು ನಿರ್ಭಿಡೆಯಿಂದ ನಮ್ಮ ಹಲವಾರು ಪ್ರಾಚೀನ ಕೃತಿಗಳಿಗೆ ಅನ್ವಯಿಸಿ ಆ ನಿಟ್ಟಿನಲ್ಲಿ ಒಂದು ಮೇಲ್ಪಂಕ್ತಿಯನ್ನು ಹಾಕಿಕೊಟ್ಟರು. ಗ್ರೀಕ್ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ವಿಜೃಂಭಿಸಿದ 'ಟ್ರಾಜೆಡಿ' ಎಂಬ ನಾಟಕ ರೂಪದ ದುರಂತದ ಪರಿಕಲ್ಪನೆಯನ್ನು ಕನ್ನಡಕ್ಕೆ ತಂದ ಶ್ರೀಯವರು ಅವರ ಗದಾಯುದ್ಧ ನಾಟಕ, ಅಶ್ವತ್ಥಾಮನ್‌ಗಳನ್ನು ರುದ್ರನಾಟಕಗಳೆಂದು ಕರೆದರು. ಇಂಗ್ಲಿಷ್ ರೊಮ್ಯಾಂಟಿಕ್ ಕಾವ್ಯದ ಸಂಪ್ರದಾಯಕ್ಕೆ ಸೇರಿದ ಕವನಗಳನ್ನು ರೂಪಾಂತರಿಸಿ 'ಇಂಗ್ಲಿಷ್ ಗೀತೆಗಳು' ಎಂಬ ಸಂಗ್ರಹವನ್ನು ೧೯೨೧ರಲ್ಲಿ ಶ್ರೀಯವರು ಹೊರತಂದರು. ಈ ಕೃತಿ ಕನ್ನಡ ಕಾವ್ಯವನ್ನು ಹೊಸ ಜಾಡಿಗೆ ಒಯ್ಯುವುದರಲ್ಲಿ ಸಫಲವಾಯಿತು. ಲಯ, ಛಂದಸ್ಸು, ಕಾವ್ಯ ಭಾಷೆಗಳಲ್ಲಿ ಶ್ರೀಯವರು ಮಾಡಿದ ಪ್ರಯೋಗಗಳು ಹೊಸ ಅಭಿವ್ಯಕ್ತಿ ಮಾರ್ಗಗಳ ಸೃಷ್ಟಿಗೆ ಕಾರಣವಾಯಿತು.

ಡಿ.ವಿ.ಜಿ.ಯವರ 'ಜೀವನ ಸೌಂದರ್ಯ ಮತ್ತು ಸಾಹಿತ್ಯ' (೧೯೩೨) ಹಾಗೂ 'ಸಾಹಿತ್ಯ ಶಕ್ತಿ' (೧೯೫೦) ಮಾರ್ಗ ಸಂಪ್ರದಾಯಕ್ಕೆ ಸೇರುವ ವಿಮರ್ಶಾ ಕೃತಿಗಳು. ಡಿ.ವಿ.ಜಿ. ಯವರದು ತಾತ್ವಿಕ ಸ್ವರೂಪದ ವಿಮರ್ಶೆಯಾಗಿದೆ. ಅದು ಯಾವ ಜೀವಂತ ಸಾಹಿತ್ಯದೊಂದಿಗೂ ಸಂಬಂಧವೇರ್ಪಡಿಸಿ ಗೊಂಡಿಲ್ಲದ ಕಾರಣ ಶಾಸ್ತ್ರವಾಗಿಯೇ ಉಳಿದಿದೆ. ಕೋಲರಿಜ್ ಶೇಕ್ಸಪಿಯರ್‌ನ ನಾಟಕಗಳನ್ನು ವರ್ಡ್ಸ್‌ವರ್ತ್‌ನ ಕಾವ್ಯವನ್ನು ಮೂಲ ಆಧಾರವಾಗಿಟ್ಟುಕೊಂಡು ತನ್ನ ವಿಮರ್ಶೆಯನ್ನು ರಚಿಸಿದಂತೆ ಡಿ.ವಿ.ಜಿ.ಯವರೂ ಯಾವುದಾದರೂ ಸಾಹಿತ್ಯದ ಆಧಾರವನ್ನು ಪಡೆದುಕೊಂಡಿದ್ದರೆ, ಈ ತತ್ವಗಳೆಲ್ಲ ಅರ್ಥಪೂರ್ಣವಾಗುತ್ತಿದ್ದವು–ಎಂಬ ಕುರ್ತಕೋಟಿಯವರ ವ್ಯಾಖ್ಯಾನ ಅತ್ಯಂತ ಗಮನಾರ್ಹ ವಾದುದು. ಅವರ ಪ್ರಾಯೋಗಿಕ ವಿಮರ್ಶೆ – ಉಮರನ ಒಸಗೆ ಮತ್ತು ಮ್ಯಾಕ್‌ಬೆತ್ ನಾಟಕಗಳಿಗೆ ಬರೆದ ಮುನ್ನುಡಿಗಳು – ಅವರ ವಿಮರ್ಶಾ ಸಾಮರ್ಥ್ಯವನ್ನು ಸಾರುತ್ತವೆ. ಸುಂದರ ದೃಷ್ಟಾಂತಗಳು, ಸರಳ ಸ್ಪಷ್ಟ ಶೈಲಿ, ಭಾಷೆಯ ಔಚಿತ್ಯಪೂರ್ಣ ಬಳಕೆ ಇವರ ವಿಮರ್ಶೆಯ ಲಕ್ಷಣಗಳು. ಸಾಹಿತ್ಯ ಮತ್ತು ಜನಜೀವನ (೧೯೨೦) ಎಂಬ ಅವರ ಭಾಷಣದಲ್ಲಿ ಸಾಹಿತ್ಯ ಮತ್ತು ಜೀವನದ ನಡುವಣ ಸಂಬಂಧವನ್ನು ಕುರಿತಂತೆ ವಿವರವಾದ ಚರ್ಚೆಯಿದೆ. ಇದು ಈ ವಿಷಯದ ಬಗ್ಗೆ ನವೋದಯ ಕಾಲದಲ್ಲಿ ಬಂದ ಮೊದಲ ಚರ್ಚೆಯಾಗಿದೆ.

ಎ.ಆರ್. ಕೃಷ್ಣಶಾಸ್ತ್ರಿಗಳು 'ಸಂಸ್ಕೃತ ನಾಟಕ' ಹಾಗೂ 'ಭಾಸಕವಿ' (೧೯೩೩) ಮುಂತಾದ ಸಮರ್ಥ ಗ್ರಂಥಗಳನ್ನು ನೀಡಿದ್ದೂ, ಹೊಸ ದೃಷ್ಟಿಕೋನದಿಂದ, ನಿಶ್ಚಿತ ರೀತಿಯಲ್ಲಿ ವಿಮರ್ಶೆ ಬರೆದವರಾಗಿದ್ದಾರೆ. ಸಂಸ್ಕೃತ ಸಾಹಿತ್ಯವನ್ನು ಜೀವಂತ ಸಾಹಿತ್ಯವೆಂದು ಪರಿಗಣಿಸಿ ಭಾಸಕವಿಯ ಬಗ್ಗೆ ಬೇರಾವ ವಿಮರ್ಶಕರೂ ನೀಡದಂಥ ಸಮರ್ಥ ವಿಮರ್ಶೆಯನ್ನು ನೀಡುತ್ತಲೇ ಸಂಸ್ಕೃತ ನಾಟಕದ ಇತಿಹಾಸವನ್ನು ಗುರುತಿಸಿದ್ದಾರೆ.

'ಕೆಲವು ಸಣ್ಣ ಕಥೆಗಳು', 'ಟೊಳ್ಳು ಗಟ್ಟಿ' ಮುಂತಾದ ವಿಮರ್ಶಾತ್ಮಕ ಲೇಖನಗಳು ಹೊಸಗನ್ನಡ ಸಾಹಿತ್ಯವನ್ನು ಕುರಿತಂತೆ ಇವರು ಬರೆದಿರುವ ಗಮನಾರ್ಹವಾದ ಲೇಖನಗಳೆನಿಸಿವೆ. ಹೆಚ್ಚಾಗಿ ಪ್ರಾಯೋಗಿಕ ವಿಮರ್ಶೆಯಲ್ಲಿ ತೊಡಗಿದ ಎ.ಆರ್.ಕೃ. ಸಾಹಿತ್ಯದ ಪ್ರೇರಣೆಗಳನ್ನೂ ಸ್ವರೂಪವನ್ನೂ ತಿಳಿಸುವಂಥ ತಾತ್ವಿಕ ವಿಮರ್ಶೆಯನ್ನು ನೀಡಲಿಲ್ಲ. ಆದರೂ 'ಪೂರ್ಣಕಲಾ' ಎಂಬ ಕಾದಂಬರಿಯನ್ನು ಕುರಿತು ಅವರ ಲೇಖನದಲ್ಲಿ ಕಾದಂಬರಿಯ ಸ್ವರೂಪ ವಿನ್ಯಾಸಗಳ ಬಗ್ಗೆ ಸೂಕ್ಷ್ಮ ದೃಷ್ಟಿಯಿಂದ ಕೂಡಿದ ಚರ್ಚೆಯಿದೆ. ಮಾಸ್ತಿಯವರ ಸಣ್ಣ ಕಥೆಗಳ ಬಗೆಗಿನ ಅವರ ವಿಮರ್ಶೆಯಲ್ಲೂ ಈ ಸೂಕ್ಷ್ಮ ದೃಷ್ಟಿಯನ್ನು ಗುರುತಿಸಬಹುದಾಗಿದೆ. ಸಂಸ್ಕೃತ ಮತ್ತು ಕನ್ನಡ ಸಾಹಿತ್ಯಗಳಲ್ಲಿ ಆಳವಾದ ಬೇರುಗಳನ್ನೂ ಹೊಂದಿದ್ದ ಎ.ಆರ್.ಕೃ. ಪಾಶ್ಚಾತ್ಯ ಸಾಹಿತ್ಯದಿಂದ ಬಂದ ನಾಟಕ, ಸಣ್ಣ ಕಥೆ, ಕಾದಬರಿಗಳಂಥ ವಾಸ್ತವವಾದ ಪ್ರಕಾರಗಳಲ್ಲಿ ಬರುತ್ತಿದ್ದ ಸಮಕಾಲೀನ ಪ್ರಯೋಗಗಳ ಸಮರ್ಪಕ ಮೌಲ್ಯಮಾಪನ ಮಾಡಿರುವುದು ಅವರ ವಿಮರ್ಶಾ ಶಕ್ತಿಗೆ ಸಾಕ್ಷಿಯಾಗಿದೆ.

ಭಾರತದ ಪ್ರಾಚೀನ ಸಾಹಿತ್ಯ, ಇಂಗ್ಲಿಷ್ ಸಾಹಿತ್ಯ, ಬಂಗಾಳಿ ಸಾಹಿತ್ಯಗಳ ಹಿನ್ನೆಲೆಯುಳ್ಳ ಮಾಸ್ತಿಯವರಿಂದ ಸಾಹಿತ್ಯದ ಬಗೆಗಿನ ವಿಚಾರಗಳೂ ಜೊತೆಗೆ ಸಾಕಷ್ಟು ಪ್ರಾಯೋಗಿಕ ವಿಮರ್ಶೆಗಳೂ ಮೂಡಿಬಂದಿವೆ. ಅವರ 'ಸಾಹಿತ್ಯ' ಕೃತಿ ಸಾಹಿತ್ಯ ಮೀಮಾಂಸೆಯ ಕೃತಿಗಳ ಸಾಲಿನಲ್ಲಿ ಮೊದಲನೆಯದು. ಸಾಹಿತ್ಯದ ರೂಪು-ರೇಷೆಗಳು, ಬೆಳವಣಿಗೆ, ಸತ್ಯ ಮತ್ತು ಸೌಂದರ್ಯಗಳ ಮೀಮಾಂಸೆ, ಸಾಹಿತ್ಯಕ್ಕೂ ಶಾಸ್ತ್ರಗಳಿಗೂ ಇರುವ ಅಂತರ - ಮುಂತಾದ ಮುಖ್ಯ ವಿಚಾರಗಳನ್ನೆಲ್ಲ ಮಾಸ್ತಿಯವರು ಈ ಕೃತಿಯಲ್ಲಿ ವಿಶ್ಲೇಷಣೆಗೆ ಗುರಿಪಡಿಸಿದ್ದಾರೆ. ಅವರ ಲೇಖನಿಯಿಂದ ಬಂದಿರುವ ಪ್ರಾಯೋಗಿಕ ವಿಮರ್ಶೆಯೂ ಗಣನೀಯವಾಗಿದೆ. ವಾಲ್ಮೀಕಿ ಮತ್ತು ರವೀಂದ್ರರ ಕಾವ್ಯಗಳ ಬಗ್ಗೆ ಎರಡು ಪುಸ್ತಕಗಳು, ಹಳಗನ್ನಡ ಕವಿಗಳು, ಕಾಳಿದಾಸ, ಗಯಟೆ - ಮುಂತಾದ ವಿಭಿನ್ನ ಲೇಖಕರ ಬಗ್ಗೆ ವಿಮರ್ಶಾತ್ಮಕ ಲೇಖನಗಳು - ಹೀಗೆ ಮಾಸ್ತಿಯವರ ಕೊಡುಗೆ ವೈವಿಧ್ಯಪೂರ್ಣವಾಗಿದೆ. ಬೇಂದ್ರೆಯವರ 'ನಾದಲೀಲೆಗೆ' ಬರೆದಿರುವ ಮುನ್ನುಡಿಯಲ್ಲಿ ಕಾವ್ಯಸ್ವರೂಪದ ಬಗ್ಗೆ ಕೆಲವು ಮಹತ್ವಪೂರ್ಣ ಅಂಶಗಳನ್ನು ತಿಳಿಸಿದ್ದಾರೆ.

ವಿಮರ್ಶೆಯೇ ಕಾವ್ಯವಾಗಿ ಹರಿದಿರುವ 'ಆದಿಕವಿ ವಾಲ್ಮೀಕಿ' ಮಾಸ್ತಿಯವರ ರಸಸೃಷ್ಟಿಯೆನಿಸಿದೆ. ಮಾಸ್ತಿಯವರು ವಾಲ್ಮೀಕಿಯ ಸಾಮರ್ಥ್ಯದ ಮಜಲುಗಳನ್ನೂ, ಆ ಕೃತಿಯ ಔನ್ನತ್ಯವನ್ನೂ ಅದ್ಭುತವಾಗಿ ಪರಿಚಯಿಸಿದ್ದಾರೆ. ವಿಮರ್ಶೆಯ ಮೂಲತತ್ವಗಳನ್ನು ಪರಿಚಯಿಸುವ ಕೆಲವಾರು ಕೃತಿಗಳು ರಚನೆಯಾಗಿದ್ದರೂ, ವಿಮರ್ಶೆ ಎಂದರೇನು ಎಂಬುದನ್ನೂ ಮೊದಲ ಬಾರಿಗೆ ಸರಳ ಧಾಟಿಯಲ್ಲಿ ನಮಗೆ ತಿಳಿಯಪಡಿಸಿದವರು ಮಾಸ್ತಿ. ವಿಮರ್ಶೆಯ ಆಳವಾದ ಪಾಂಡಿತ್ಯ, ಪೂರ್ವ-ಪಶ್ಚಿಮಗಳ ಸಾಹಿತ್ಯದ ತಿಳಿವು, ಉತ್ತಮ ಮನೋಧರ್ಮ ಇವೆಲ್ಲವನ್ನೂ ಉಳ್ಳ ಈ ಉದ್ದಾಮ ಸಾಹಿತಿ ಸರಳ ಶೈಲಿಯಲ್ಲಿ ವಿಮರ್ಶೆಯ ಮೂಲತತ್ವಗಳನ್ನು ತಿಳಿಸಿದ್ದಾರೆ. ೧೯೨೬ರಲ್ಲಿ ಪ್ರಕಟಗೊಂಡ 'ವಿಮರ್ಶೆ' ಎಂಬ ಅವರ ಕೃತಿಯಲ್ಲಿರುವ 'ಸಾಹಿತ್ಯ ವಿಮರ್ಶೆಯ ಕಾರ್ಯ' ಎಂಬ ಪ್ರಬಂಧ ಇದಕ್ಕೊಂದು ಉತ್ತಮ ಉದಾಹರಣೆ. ಉತ್ತಮ ವಿಮರ್ಶೆಯಿಂದ "ಸದ್ಯ ಇರುವ ಸಾಹಿತ್ಯ ಎಲ್ಲರಿಗೂ ಚೆನ್ನಾಗಿ ತಿಳಿಯುವುದಲ್ಲದೆ ಮುಂದಕ್ಕೆ ಒಳ್ಳೆಯ ಸಾಹಿತ್ಯ ಬರುವುದು ಸಾಧ್ಯವಾಗುವುದು. ಪ್ರತಿಭಾಶಾಲಿಯ ವಿಮರ್ಶೆಯಲ್ಲಿ ಕವಿಯ ತತ್ವಬೋಧೆಯಂತೆ ಕಾವ್ಯ ವಿವರಣವೂ ಉಪಯುಕ್ತವಾಗುವುದು. 'ಅಂಥ ವಿಮರ್ಶೆಯೂ ಕಾವ್ಯವೇ ಸರಿ' ಎಂಬಂಥ ಅಂಶಗಳು ಅಲ್ಲಿ ಕಾಣಸಿಗುತ್ತವೆ.

ಸಾಹಿತ್ಯ ವಿಮರ್ಶೆ ಮತ್ತು ಸಾಹಿತ್ಯ ರಚನೆ ಎರಡೂ ಭಿನ್ನವೆಂದು ತೋರುವ ಪ್ರಕ್ರಿಯೆಗಳಾದರೂ ಅವುಗಳಿಗೆ ಮೂಲವಾದ ಮನೋಧರ್ಮ ಒಂದೇ ಪ್ರತಿಭೆಯಿಂದ ಕೂಡಿದ ವಿಮರ್ಶೆಯೂ ಕಾವ್ಯವೇ

ಎಂಬ ಅಭಿಪ್ರಾಯವನ್ನು ಮಾಸ್ತಿಯವರು ತಳೆಯುತ್ತಾರೆ. ಮಾಸ್ತಿಯವರು ಬರೆದಿರುವ ಸಾಹಿತ್ಯ ಮತ್ತು ಅದರ ವಿಮರ್ಶೆ ಪರಸ್ಪರ ಪೂರಕವಲ್ಲ. ಅವರು ಮಾರ್ಗ ಸಂಪ್ರದಾಯದ ಲೇಖಕರಾದರೂ ಅವರ ವಿಮರ್ಶೆ ರೊಮ್ಯಾಂಟಿಕ್ ಸಂಪ್ರದಾಯದ ತತ್ವಗಳನ್ನೊಳಗೊಂಡಿದೆ ಎಂಬ ಅಂಶ ಕುತೂಹಲಕಾರಿಯಾಗಿದೆ.

ತೀ.ನಂ.ಶ್ರೀ. ಯವರ 'ಭಾರತೀಯ ಕಾವ್ಯಮೀಮಾಂಸೆ' (೧೯೫೩) ಮಹತ್ತರವಾದ ಗ್ರಂಥವೆನಿಸಿದೆ. ಭಾರತದ ಪ್ರಾಚೀನ ಕಾವ್ಯಮೀಮಾಂಸೆಯನ್ನು ಪೂರ್ಣ ಪ್ರಮಾಣದಲ್ಲಿ ಪರಿಚಯಿಸಿದ ಇಂತಹ ಅಪೂರ್ವ ಕೃತಿ ಬೇರಾವುದೇ ಭಾಷೆಯಲ್ಲೂ ಬಂದಿಲ್ಲ. ಈ ಕೃತಿಯಲ್ಲಿನ ಸರಳತೆ, ಸ್ಪಷ್ಟತೆ ಮತ್ತು ನಿರೂಪಣಾ ಶೈಲಿಗಳು ನಮ್ಮ ಗಮನವನ್ನು ವಿಶೇಷವಾಗಿ ಸೆಳೆಯುತ್ತವೆ. ಕುವೆಂಪುರವರು ತಮ್ಮ ಮುನ್ನುಡಿಯಲ್ಲಿ ವರ್ಣಿಸಿರುವಂತೆ ಇದೊಂದು 'ಆಚಾರ್ಯಕೃತಿ', ಅವರ ಕಾವ್ಯದ ಸಮೀಕ್ಷೆಯಲ್ಲಿ (೧೯೪೩) ಪ್ರಾಚೀನ ಸಂಸ್ಕೃತ ನಾಟಕಗಳು ಮತ್ತು ಕನ್ನಡ ಕಾವ್ಯ ನಾಟಕಗಳನ್ನು ಕುರಿತು ಲೇಖನಗಳಿವೆ. ಇಂಗ್ಲಿಷ್ ನಾಟಕ ವಿಮರ್ಶೆಯ ಪ್ರಭಾವವನ್ನು ಈ ಲೇಖನಗಳಲ್ಲಿ ಕಾಣಬಹುದಾಗಿದೆ.

ಅವರ 'ಸಮಾಲೋಕನ' (೧೯೫೮)ದಲ್ಲಿ ಹೊಸಗನ್ನಡದ ಬಗ್ಗೆ ಲೇಖನಗಳಿವೆ. ಬಿ.ಎಂ.ಶ್ರೀ ಯವರ 'ಇಂಗ್ಲಿಷ್ ಗೀತೆಗಳು' ಕೃತಿಯಲ್ಲಿ ಛಂದಸ್ಸಿನ ಪ್ರಯೋಗಗಳನ್ನು ಕುರಿತು ಲೇಖನ ಹಾಗೂ ಬೇಂದ್ರೆಯವರ 'ಗರಿ' ಮತ್ತು 'ಸಖಿಗೀತ'ದ ಮೇಲಿನ ಲೇಖನಗಳು ಸತ್ವಪೂರ್ಣವಾಗಿವೆ. ಕಾವ್ಯ ಮೀಮಾಂಸೆಗೆ ಸಂಬಂಧಿಸಿದ ಕನ್ನಡದಲ್ಲಿ ಆಗಿರುವ ಬೆಳವಣಿಗೆಗಳ ಬಗ್ಗೆ ಇಲ್ಲಿ ಹೇಳುವುದು ಅಪ್ರಸ್ತುತವಾಗಲಾರದು. ತೀ.ನಂ.ಶ್ರೀ ಯವರ 'ಭಾರತೀಯ ಕಾವ್ಯ ಮೀಮಾಂಸೆ' ನಂತರ ಬೆರಳೆಣಿಕೆಯಷ್ಟು ಕೃತಿಗಳು ಮಾತ್ರ ಬಂದಿದೆ. ಕೆ. ಕೃಷ್ಣಮೂರ್ತಿಯವರ 'ಆನಂದವರ್ಧನನ ಕಾವ್ಯಮೀಮಾಂಸೆ' (೧೯೫೨), 'ಕನ್ನಡ ಧ್ವನ್ಯಾಲೋಕ ಮತ್ತು ಲೋಚನಸಾರ' (೧೯೫೩), 'ರಸೋಲ್ಲಾಸ' (೧೯೫೮) 'ಭಾರತೀಯ ಕಾವ್ಯಮೀಮಾಂಸೆ' 'ತತ್ವ ಮತ್ತು ಪ್ರಯೋಗ' ಮತ್ತು ಕೆಲವು ಬಿಡಿ ಲೇಖನಗಳನ್ನು ಬಿಟ್ಟರೆ ಹೆಚ್ಚಿನವರು ಈ ಕ್ಷೇತ್ರದಲ್ಲಿ ಕೃಷಿ ನಡೆಸಿಲ್ಲ. ೧೯೮೮ರಲ್ಲಿ ಪ್ರಕಟವಾದ ಕೆ.ವಿ. ನಾರಾಯಣರ 'ಧ್ವನ್ಯಾಲೋಕ – ಒಂದು 'ಅಧ್ಯಯನ' ಕೃತಿ ಈ ದಿಸೆಯಲ್ಲಿ ಒಂದು ಮೈಲಿಗಲ್ಲು ಎನ್ನಬಹುದು. ಆನಂದವರ್ಧನನ ವಿಚಾರಗಳ ಮೂಲಕ ಕಾವ್ಯತತ್ವದ ಚೌಕಟ್ಟೊಂದನ್ನು ರೂಪಿಸಿಕೊಳ್ಳುವ ಯತ್ನ ಇದಾಗಿದೆ. ಕನ್ನಡ ಕಾವ್ಯ ಮೀಮಾಂಸೆಯ ಕ್ಷೇತ್ರಕ್ಕೆ ನಿಚ್ಚಳವಾಗಿ ಇದೊಂದು ಮಹತ್ವದ ಕೊಡುಗೆಯಾಗಿದೆ.

ವಿಮರ್ಶೆಯ ಕ್ಷೇತ್ರಕ್ಕೆ ತಮ್ಮ ಕೊಡುಗೆಯಿಂದಾಗಿ ವಿಶೇಷ ಗಮನ ಸೆಳೆದವರಲ್ಲಿ ಎಸ್.ವಿ. ರಂಗಣ್ಣನವರೂ ಒಬ್ಬರು. ಶೈಲಿಯ (೧೯೪೪, ೧೯೬೮, ೧೯೭೧ ಮೂರು ಸಂಪುಟಗಳು) ಮೂಲಕ ಕನ್ನಡ ವಿಮರ್ಶಾ ಕ್ಷೇತ್ರಕ್ಕೆ ಆವರೆಗೂ ಇಲ್ಲದಿದ್ದ ಒಂದು ಹೊಸ ಆಯಾಮವನ್ನು ತಂದುಕೊಟ್ಟವರು, ಇವರು ಶೈಲಿಯ ಸ್ವರೂಪದೊಂದಿಗೆ ಮಧ್ಯಮ ಶೈಲಿ, ಸಾಧಾರಣ ಶೈಲಿ ಮುಂತಾದ ಪರಿಕಲ್ಪನೆಗಳನ್ನೂ ಪರಿಚಯಿಸಿ ಕನ್ನಡದ ಪಂಪ ಆದಿಯಾಗಿ ಎಲ್ಲ ಮುಖ್ಯ ಪ್ರಾಚೀನ ಕವಿಗಳ ಶೈಲಿಯ ಸ್ವರೂಪವನ್ನು ತಮ್ಮ ಕೃತಿಯಲ್ಲಿ ಚರ್ಚಿಸಿದರು. ಇಂಗ್ಲಿಷ್ ಭಾಷಾ ಸಾಹಿತ್ಯಗಳ ಆಳವಾದ ತಿಳಿವಿನೊಂದಿಗೆ ಕನ್ನಡ ಕವಿಗಳ ಬಗ್ಗೆ ನಡೆಸಿದ ಕೂಲಂಕಷ ಅಧ್ಯಯನ ಈ ಕೃತಿಯ ಬೆಂಬಲಕ್ಕಿದ್ದವು. 'ವಿಮರ್ಶೆಯ ಮೇಲಿನ ಹಿಡಿತ ಇವರ ಬರವಣಿಗೆಯ ಶೈಲಿ ಮೆಚ್ಚುವಂಥವು. ೧೯೫೯ರಲ್ಲಿ ಬಂದ ಇವರ 'ಹೊನ್ನಶೂಲ' ಅಗಾಧ ಪ್ರಶಂಸೆಗೆ ಪಾತ್ರರಾಗಿದ್ದ ಅನೇಕ ಕವಿಗಳ (ಕನ್ನಡದ ಮುದ್ದಣ, ಸಂಸ್ಕೃತದ ಕಾಳಿದಾಸ ಇತ್ಯಾದಿ) ಮೌಲ್ಯಮಾಪನ ಕೈಗೊಂಡಿತು. ಎಸ್.ವಿ. ರಂಗಣ್ಣನವರ 'ಶಾಕುಂತಲ ನಾಟಕ ವಿಮರ್ಶೆ'

ಮತ್ತು 'ವಿಕ್ರಮೋರ್ವಶೀಯ ನಾಟಕದ ವಿಮರ್ಶೆ' (೧೯೬೦) ಎಂಬ ಕೃತಿಗಳಲ್ಲಿ ಕಾಳಿದಾಸನನ್ನು ಪುನರ್ ವಿಮರ್ಶೆಗೆ ಗುರಿಪಡಿಸಿದ್ದಾರೆ. ಎಸ್.ವಿ. ರಂಗಣ್ಣನವರ 'ಪಾಶ್ಚಾತ್ಯ ಗಂಭೀರ ನಾಟಕಗಳು' (೧೯೭೦) ಗ್ರೀಕ್ ಯುಗದಿಂದ ಪ್ರಾರಂಭಿಸಿ, ೨೦ನೆಯ ಶತಮಾನದವರೆಗೆ ನಾಟಕ ಬೆಳೆದು ಬಂದ ದಾರಿಯನ್ನು ವಿಮರ್ಶಾತ್ಮಕವಾಗಿ ದಾಖಲಿಸಿದೆ. ಬಿ.ಎಂ.ಶ್ರೀ. ಯವರ 'ಕನ್ನಡಿಗರಿಗೆ ಒಳ್ಳೆಯ ಸಾಹಿತ್ಯ'ಕ್ಕೆ ಬರೆದ ಮುನ್ನುಡಿ ಮತ್ತು 'ಗದಾಯುದ್ಧ ನಾಟಕ'ವನ್ನು ಕುರಿತ ಲೇಖನಗಳು ಇವುಗಳನ್ನು ಬಿಟ್ಟರೆ ಅವರ ಎಲ್ಲ ಬರಹವೂ ಪ್ರಾಚೀನ ಸಾಹಿತ್ಯವನ್ನು ಕುರಿತೇ ಬಂದಿದೆ.

ಪಾಶ್ಚಾತ್ಯರಿಂದ ನಮಗೊದಗಿದ ಶೈಲಿ ಎಂಬ ಸಾಹಿತ್ಯ ಮೌಲ್ಯದಿಂದ ಸಾಹಿತ್ಯದ ಶಕ್ತಿ ದೌರ್ಬಲ್ಯಗಳನ್ನು ಅಳೆಯುತ್ತ ಹೋಗುವುದು ಸಮರ್ಪಕವಲ್ಲ ಎಂಬ ಪ್ರತಿಕ್ರಿಯೆಯೂ ಕೇಳಿಬಂದಿದೆ. ಕವಿ ವಾಕ್ಯಗಳನ್ನೇ ಬಳಸಿಕೊಂಡು ಸಮರ್ಥ ವಿಮರ್ಶೆ ಮಾಡುತ್ತ ಹೋದರೂ ಸುಸಂಬದ್ಧವಾದ ಸಾಹಿತ್ಯ ಮೀಮಾಂಸೆಯ ಆಧಾರವಿಲ್ಲದೆ ಹೋದದ್ದು ಮತ್ತು ಸೂಕ್ಷ್ಮ ವಿಶ್ಲೇಷಣೆಯ ಅಭಾವ – ಇವುಗಳಿಂದಾಗಿ ಅವರ ವಿಮರ್ಶೆ ಜೀವಂತ ಬೆಳವಣಿಗೆಯನ್ನು ಸಾಧಿಸದೇ ಹೋಯಿತು ಎಂಬ ಅಭಿಪ್ರಾಯಕ್ಕೆಡೆ ಮಾಡಿದೆ.

ಕಾವ್ಯ ತತ್ವಗಳನ್ನು ನಿರೂಪಿಸುತ್ತ ಹೊಸ ವಿಮರ್ಶೆಯನ್ನು ಕೈಗೊಂಡ ವಿಮರ್ಶಕರು ಕುವೆಂಪು. ಇವರ 'ಕಾವ್ಯ ವಿಹಾರ', 'ತಪೋನಂದನ', 'ವಿಭೂತಿ ಪೂಜೆ' (೧೯೫೩), 'ದ್ರೌಪದಿಯ ಶ್ರೀಮುಡಿ' (೧೯೬೦), 'ರಸೋವೈಸಃ' (೧೯೬೨) ..... ಈ ಕ್ಷೇತ್ರಕ್ಕೆ ಸಂದಿರುವ ಕೊಡುಗೆಗಳು. ಸರೋವರದ ಸಿರಿಗನ್ನಡಿಯಲ್ಲಿ, ಪಂಪನಲ್ಲಿ ಭವ್ಯತೆ, ಕಾವ್ಯ ವಿಮರ್ಶೆಯಲ್ಲಿ ಪೂರ್ಣ ದೃಷ್ಟಿ ಮುಂತಾದವು ಅವರ ಗಮನಾರ್ಹ ವಿಮರ್ಶಾ ಪ್ರಬಂಧಗಳು. ಇವರ ವಿಮರ್ಶೆಯನ್ನು 'ದರ್ಶನ ವಿಮರ್ಶೆ' ಎಂದು ವ್ಯಾಖ್ಯಾನಿಸಲಾಗಿದೆ. ಇತರರಿಗೆ ಕಾಣದ ಎತ್ತರಗಳನ್ನು ಮಹಿಮೆಗಳನ್ನು ಕಾವ್ಯತ್ಮಕವಾಗಿ ನಿರೂಪಿಸುವ ಸಾಮರ್ಥ್ಯ ಇವರ ವಿಮರ್ಶೆಗಿದೆ. ಸಾಮಾನ್ಯ ತತ್ವಗಳನ್ನು ಅತಿಶಯವೆಂಬಂತೆ ವರ್ಣಿಸುವ ಗುಣವೂ ಈ ಮೂಲದಿಂದಲೇ ಹೊರಟು, ಸ್ಪಷ್ಟತೆ ಮರೆಯಾಗುವುದನ್ನು ಕಾಣಬಹುದಾಗಿದೆ. ಇವರ ಭಾಷೆಯ ಆರ್ಭಟ ಬಹಳಷ್ಟು ಗೊಂದಲ, ದಿಗ್ಭ್ರಮೆಗಳಿಗೆ ಎಡೆಮಾಡಿ, ವಿಮರ್ಶೆಗೆ ಒಗ್ಗದ ಶೈಲಿಯೊಂದಿಗೆ ಉಪಯುಕ್ತ ವಿಮರ್ಶೆ ಬರಲು ಸಾಧ್ಯವಾಗಿಲ್ಲ.

ಕವಿಗಿರುವಂತೆ ವಿಮರ್ಶಕನಿಗೂ ಸಮಗ್ರವಾದ 'ದರ್ಶನ'ವಿರಬೇಕೆಂಬುದು ಕುವೆಂಪುರವರ ಅಭಿಪ್ರಾಯ. ದರ್ಶನ, ಪೂರ್ಣ ದೃಷ್ಟಿ ಕಾಲವನ್ನು ಸಮಗ್ರವಾಗಿ ಒಳಗೊಳ್ಳುವ ಪ್ರಜ್ಞೆ ಮತ್ತು ಪ್ರತಿಮಾ (ಕವಿಯ ದರ್ಶನದ ಮಾಧ್ಯಮ) ಇವು ಕುವೆಂಪುರವರ ಕಾವ್ಯಮೀಮಾಂಸೆಯ ಮೂರು ಮುಖ್ಯ ಪರಿಕಲ್ಪನೆಗಳು.

ಸ್ವತಂತ್ರವಾಗಿ ಕಾವ್ಯಮೀಮಾಂಸೆಯ ತತ್ವಗಳನ್ನು ನಿರೂಪಿಸಬಲ್ಲ ಪು.ತಿ.ನ. ರವರ ಸಾಮರ್ಥ್ಯವನ್ನು ಅವರ 'ಕಾವ್ಯ'ದಲ್ಲಿ ಕಾಣಬಹುದು.

ದ.ರಾ.ಬೇಂದ್ರೆ ಯವರ ವಿಮರ್ಶೆಯಲ್ಲಿ ಪಾಶ್ಚಾತ್ಯ ಕಾವ್ಯಮೀಮಾಂಸೆ ಹಾಗೂ ಭಾರತೀಯ ಕಾವ್ಯ ಮೀಮಾಂಸೆಗಳೆರಡೂ ಕೆಲಸ ಮಾಡುತ್ತ ಈ ಸಮನ್ವಯಗುಣ ಇತರ ವಿಮರ್ಶಕರಿಗಿಂತ ಹೆಚ್ಚು ಪ್ರಧಾನವಾಗಿ ಕಂಡು ಬರುತ್ತೆ. 'ಸಾಹಿತ್ಯ ಹಾಗೂ ವಿಮರ್ಶೆ' (೧೯೭೦) ಮತ್ತು 'ಸಾಹಿತ್ಯ ಸಂಶೋಧನ' (೧೯೪೦) ಈ ವಿಮರ್ಶೆಯ ಗ್ರಂಥಗಳು ವಿಮರ್ಶಾ ಕ್ಷೇತ್ರಕ್ಕೆ ಮೌಲಿಕ ಕೊಡುಗೆಗಳಾಗಿವೆ. ಮನ್ವಂತರದ ಸಂಚಿಕೆಯೊಂದರಲ್ಲಿ ಪ್ರಕಟವಾದ ಕಾವ್ಯೋದ್ಯೋಗ ಎಂಬ ಅವರ ಲೇಖನ ಕಾವ್ಯಸೃಷ್ಟಿಯ ಬಗ್ಗೆ ಮತ್ತು ಕಾವ್ಯಸ್ವರೂಪದ ಬಗ್ಗೆ ಅವರ ಚಿಂತನೆಯನ್ನು ಒಳಗೊಂಡಿದೆ.

ಕಾವ್ಯದ ಸ್ವರೂಪ, ವಿಮರ್ಶೆಯ ಸ್ವರೂಪ, ಕವಿ ಮತ್ತು ವಿಮರ್ಶಕರ ಸಂಬಂಧ – ಮುಂತಾದ ವಿಚಾರಗಳನ್ನು ಬೇಂದ್ರೆ ಪ್ರಸ್ತಾಪಿಸಿದ್ದಾರೆ. ನವರಸಗಳ ಬಗೆಗಿನ ವ್ಯಾಖ್ಯಾನ, ರಸಭಾವಗಳ ನಡುವಣ ಅಂತರ, ಕಾವ್ಯದಲ್ಲಿ ಶ್ರೇಷ್ಠತೆ ಮತ್ತು ಕಾವ್ಯ ನಾಟಕಗಳ ಆಧುನಿಕ ಸ್ವರೂಪ – ಹೀಗೆ ಹಲವಾರು ವಿಷಯಗಳನ್ನು ಚರ್ಚಿಸಿದ್ದಾರೆ. ಆದರೆ ಈ ವಿಚಾರಗಳನ್ನು ಶಾಸ್ತ್ರೀಯವಾಗಿ ಸುಸಂಬದ್ಧವಾಗಿ ಬರೆದಿಲ್ಲದ ಕಾರಣ ಒಂದು ವಿಮರ್ಶಾ ಸಂಪ್ರದಾಯ ಬೆಳೆಯಲು ಅವಕಾಶವಾಗಲಿಲ್ಲ. 'ಸಾಹಿತ್ಯ ಸಂಶೋಧನಾ' ಉತ್ತಮ ಪ್ರಾಯೋಗಿಕ ವಿಮರ್ಶೆಯ ಲೇಖನಗಳನ್ನೊಳಗೊಂಡಿದೆ. ಸ್ವತಂತ್ರದೃಷ್ಟಿ ಕಲ್ಪನಾಶಕ್ತಿಗಳನ್ನು ಬೇಂದ್ರೆಯವರ ವಿಮರ್ಶೆ ಒಳಗೊಂಡಿದ್ದಾಗ್ಯೂ ಅದು ಸಾಕಷ್ಟು ವಿಶಾಲವಾಗಿ ಬೆಳೆಯಲಿಲ್ಲ.

ವಿ. ಸೀತಾರಾಮಯ್ಯನವರು ಹೊಸ ಬಗೆಯ ಮನೋವೃತ್ತಿಯಿಂದ ವಿಮರ್ಶೆಯಲ್ಲಿ ತೊಡಗಿದವರು. ಸಾಹಿತ್ಯದ ಹುಟ್ಟು ಮತ್ತು ಸ್ವರೂಪಗಳ ಬಗೆಗಿನ ವಿ.ಸೀ.ಯವರ ನಿಲುವುಗಳು ಪಾಶ್ಚಾತ್ಯ ವಿಮರ್ಶಕರ ವಿಚಾರಗಳನ್ನು ಹೋಲುತ್ತವೆ. ಅವರ ಮಹತ್ವದ ಕೃತಿಗಳಾದ 'ಕವಿ–ಕಾವ್ಯ–ದೃಷ್ಟಿ' (೧೯೫೫) ಮತ್ತು 'ಕಲಾನುಭವ' (೧೯೭೦)ಗಳಲ್ಲಿ ಸಾಹಿತ್ಯದ ಸ್ವರೂಪ, ಕಲೆಯ ಕ್ಷೇತ್ರದ ಆಗು–ಹೋಗುಗಳು, ಸೌಂದರ್ಯಾನುಭವ, ಕಲಾಕೃತಿಯ ಅರ್ಥ ಮುಂತಾದ ಮಹತ್ವದ ಪ್ರಶ್ನೆಗಳನ್ನು ಎತ್ತುತ್ತಾರೆ. ಸಾಹಿತ್ಯ ಸಂಪ್ರದಾಯ ಮತ್ತು ಹೊಸ ಮಾರ್ಗ ೧೯೬೭ರಲ್ಲಿ ಪ್ರಕಟವಾದ ಅವರ ಮತ್ತೊಂದು ಮುಖ್ಯ ಕೃತಿ.

ಕನ್ನಡ ಸಾಹಿತ್ಯ ಚರಿತ್ರೆಯ ಮೂಲಕ ಕನ್ನಡ ಸಾಹಿತ್ಯ ಸಂಪ್ರದಾಯದ ಸತ್ವಯುತ ಪರಿಚಯವನ್ನು ನೀಡಿರುವ ರಂ.ಶ್ರೀ. ಮುಗಳಿಯವರ ಕೊಡುಗೆ ವಿಶಿಷ್ಟವಾದುದು. ೧೯೬೩ರಲ್ಲಿ ಪ್ರಕಟವಾದ ಅವರ 'ಕನ್ನಡ ಸಾಹಿತ್ಯ ಇತಿಹಾಸ' ಮತ್ತೊಂದು ಮಹತ್ವಪೂರ್ಣ ಕೃತಿ. ಇತಿಹಾಸಪ್ರಜ್ಞೆ, ಸಮನ್ವಯಶೀಲತೆ, ತಾಳ್ಮೆಗಳನ್ನು ಮೈಗೂಡಿಸಿಕೊಂಡ ಪ್ರಾಮಾಣಿಕ ಪರಿಪೂರ್ಣ ವಿಮರ್ಶೆಯನ್ನು ನಮಗೆ ಈ ಕೃತಿಗಳು ಒದಗಿಸುತ್ತವೆ. 'ರನ್ನನ ಕೃತಿ ರತ್ನ' (೧೯೪೬), 'ಸಾಹಿತ್ಯೋಪಾಸನೆ' (೧೯೫೫), 'ತವನಿಧಿ' (೧೯೫೭) – ಮುಂತಾದವು ಇವರ ಇತರ ಕೃತಿಗಳು. ಕಾದಂಬರಿ, ಸಣ್ಣ ಕಥೆ, ನಾಟಕ, ಕಾವ್ಯ ಮುಂತಾದ ಬೆಳವಣಿಗೆಯನ್ನು ಸಾಹಿತ್ಯದ ವಿವಿಧ ಪ್ರಕಾರದ ಲಕ್ಷಣಗಳನ್ನೂ ಶಾಸ್ತ್ರೀಯವಾಗಿ ಮುಗಳಿಯವರು ವಿಶ್ಲೇಷಿಸಿದ್ದಾರೆ. ಮುಗಳಿಯವರು ತಮ್ಮ ವಿಮರ್ಶೆಯನ್ನು ಸರಳ, ಮೂಲಭೂತ ತತ್ವಗಳ ಆಧಾರದ ಮೇಲೆ ತಮ್ಮ ವಿಮರ್ಶಕ ಪ್ರತಿಭೆಯಿಂದ ರಚಿಸಿದ್ದಾರೆ.

ವಿಸ್ತಾರವಾದ ಅಧ್ಯಯನದ ಹಿನ್ನೆಲೆ, ಸಂಸ್ಕೃತಿಯ ಬಗ್ಗೆ ಆಳವಾದ ತಿಳಿವು ಮತ್ತು ಕಾಳಜಿಗಳನ್ನು ಸಾಹಿತ್ಯ ವಿಮರ್ಶೆಯ ಕ್ಷೇತ್ರದಲ್ಲಿ ವಿಶಿಷ್ಟ ಸ್ಥಾನ ಗಳಿಸಿಕೊಂಡಿರುವ ಕೀರ್ತಿನಾಥ ಕುರ್ತಕೋಟಿಯವರಲ್ಲಿ ಕಾಣಬಹುದು. ಪಾಶ್ಚಾತ್ಯ ಸಂಸ್ಕೃತಿ ಸಾಹಿತ್ಯಗಳ ಜೊತೆಗೆ ನಮ್ಮ ಪ್ರಾಚೀನ ಸಾಹಿತ್ಯ ಸಂಸ್ಕೃತಿಗಳ ಜ್ಞಾನದಿಂದ ಪಕ್ವವಾದ ಮನಸ್ಸು ವಿಮರ್ಶೆಯ ಕಾರ್ಯದಲ್ಲಿ ತೊಡಗುವುದನ್ನು ಇವರ ಕೃತಿಗಳಲ್ಲಿ ಕಾಣಬಹುದು. ೧೯೬೨ರಲ್ಲಿ ಪ್ರಕಟಗೊಂಡ ಇವರ 'ಯುಗಧರ್ಮ ಹಾಗೂ ಸಾಹಿತ್ಯ ದರ್ಶನ' ಮುಗಳಿಯವರ ಸಾಹಿತ್ಯ ಚರಿತ್ರೆಯ ನಂತರ ಪ್ರಕಟಗೊಂಡ ಅದೇ ಸಾಲಿಗೆ ಸೇರುವ ಮತ್ತೊಂದು ಮಹತ್ವದ ಕೃತಿ. ಆಧುನಿಕ ಕನ್ನಡ ಸಾಹಿತ್ಯದ ವಿವಿಧ ಸಾಹಿತ್ಯ ಪ್ರಕಾರಗಳನ್ನು ಈ ಕೃತಿಯಲ್ಲಿ ವಿವರವಾದ ವಿಶ್ಲೇಷಣೆಗೆ ಗುರಿಪಡಿಸಲಾಗಿದೆ. ಇಲ್ಲಿನ ವಿಮರ್ಶಾಲೇಖನಗಳು ಕುರ್ತಕೋಟಿಯವರ ವಿದ್ವತ್ತು, ಕಳಕಳಿ, ಅರ್ಥಪೂರ್ಣ ಒಳನೋಟಗಳನ್ನು ತುಂಬಿಕೊಂಡಿದೆ.

ಕುರ್ತಕೋಟಿಯವರ 'ಭೃಂಗದ ಬೆನ್ನೇರಿ' ಎಂಬ ಕೃತಿ ಬೇಂದ್ರೆಯವರನ್ನು ಕುರಿತು ಸಮಗ್ರ ಅಧ್ಯಯನವಾಗಿದೆ. ಆ ಸಾಲಿನ ಕೃತಿಗಳ ಅತ್ಯುತ್ತಮ ಪ್ರತಿನಿಧಿಯಾಗಿದ್ದು ಕುರ್ತಕೋಟಿಯವರ

ವಿಮರ್ಶಾ ಪ್ರತಿಭೆಗೆ ಸಾಕ್ಷಿಯಾಗಿದೆ. ಕುರ್ತಕೋಟಿಯವರು ಬಳಸುವ ಭಾಷೆ ವಿಶಿಷ್ಟವಾದದ್ದು. ಸರಳ, ಸುಲಲಿತ ಭಾಷೆಯ ಮೂಲಕ ವಿಮರ್ಶೆಗೆ ಸಂಬಂಧಿಸಿದ ವಿಚಾರಗಳನ್ನು ಅತ್ಯಂತ ಯಶಸ್ವಿಯಾಗಿ ನಿಷ್ಕೃಷ್ಟವಾಗಿ ಪ್ರತಿಪಾದಿಸುವ ಕಲೆ ಅವರಿಗೆ ಸಿದ್ಧಿಸಿದೆ. ಇವರ 'ಕುಮಾರವ್ಯಾಸ' ಕುಮಾರವ್ಯಾಸನ ಕಥನ ತಂತ್ರವನ್ನು ಪರಿಶೀಲಿಸುವ ಸಾರ್ಥಕ ಕೃತಿಯಾಗಿದೆ.

ರಷ್ಯನ್ ಸಾಹಿತ್ಯದಿಂದ ಹೊರಟು, ಹಿಂದಿ ಸಾಹಿತ್ಯದ ಮೂಲಕ ಕನ್ನಡಕ್ಕೆ ಆಗಮಿಸಿದ ಪ್ರಗತಿವಾದ ಅ.ನ. ಕೃಷ್ಣರಾಯರು ಮತ್ತು ಅವರ ಪಂಥದ ಅನುಯಾಯಿಗಳಾದ ತ.ರಾ.ಸು., ಬಸವರಾಜ ಕಟ್ಟೀಮನಿ, ನಿರಂಜನ, ಚದುರಂಗ ಮುಂತಾದವರ ಸಾಹಿತ್ಯದ ಮೇಲೆ ಪ್ರಭಾವ ಬೀರಿತು. ಝೋಲಾ, ಗಾರ್ಕಿಯಂಥ ಬರಹಗಾರರೂ, ಮಾರ್ಕ್ಸ್‌ವಾದಿ ಸಿದ್ಧಾಂತವೂ ಪ್ರಗತಿಶೀಲ ಪಂಥದ ಬರಹಗಾರರ ಸಂವೇದನೆಯಲ್ಲಿ ಮಹತ್ತರ ಬದಲಾವಣೆಗೆ ಕಾರಣವಾಯಿತು. ಅಂದಿನ ಸಾಂಸ್ಕೃತಿಕ ಮತ್ತು ಸಾಹಿತ್ಯದ ಮೌಲ್ಯಗಳ ವಿರುದ್ಧ ಸಿಡಿದೆದ್ದ ಪ್ರಗತಿಶೀಲರು ಸಹಾನುಭೂತಿ; ಸರಳ ಸಂವಹನ, ಸಾಮಾಜಿಕ ಕ್ರಾಂತಿಗಳನ್ನು ಎತ್ತಿಹಿಡಿದು. ಹೊಸ ಸಾಹಿತ್ಯ ಮೌಲ್ಯಗಳು ಪ್ರಗತಿಶೀಲರ ಕಾಲದಲ್ಲಿ ಕಾಲಿಟ್ಟವಾದರೂ, ಆ ಚಳವಳಿ ಸತ್ವಶಾಲಿ ವಿಮರ್ಶೆಯನ್ನೇನೂ ನೀಡಲಿಲ್ಲ. ಕಳೆದ ಎರಡು ದಶಕಗಳಲ್ಲಿ ಪ್ರಗತಿಶೀಲರ ಚಳವಳಿಗೆ ಹೊಸ ಬಗೆಯ ಮಹತ್ವವೊಂದು ಲಭಿಸಿದೆ. ನವ್ಯೋತ್ತರ ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ಬೆಳೆದುಬಂದ ಎಡಪಂಥೀಯ ಪ್ರಭಾವ ಮತ್ತು ಈ ಎರಡೂ ಚಳವಳಿಗಳು ಹೊಂದಿದ್ದ ಸಾಮಾಜಿಕ ಕ್ರಾಂತಿಯ ಸಮಾನ ಉದ್ದೇಶಗಳನ್ನು ಇದರ ಮುಖ್ಯ ಕಾರಣಗಳೆಂದು ತಿಳಿಯಬಹುದು. ನಿರಂಜನರ 'ಚಿರಸ್ಮರಣೆ'ಯನ್ನು 'ಬಂಡಾಯ ಸಾಹಿತ್ಯದ ಅತ್ಯುತ್ತಮ ಪ್ರತಿನಿಧಿ' ಎಂದು ಸಿದ್ಧಲಿಂಗಯ್ಯ ಗುರುತಿಸಿದ್ದಾರೆ – ಇದೊಂದು ಗಮನಾರ್ಹ ಸಂಗತಿ.

ಪಾಶ್ಚಾತ್ಯ ವಿಮರ್ಶೆಯ ಪ್ರಭಾವವನ್ನು ಮೈಗೂಡಿಸಿಕೊಂಡು ವಿಮರ್ಶೆಯಲ್ಲಿ ತೊಡಗಿದ ವಿ.ಕೃ. ಗೋಕಾಕರು ಇಂಗ್ಲಿಷ್ ಸಾಹಿತ್ಯ ಪ್ರಕಾರಗಳನ್ನು ಇಡಿಯಾಗಿ ಕನ್ನಡಕ್ಕೆ ಪರಿಚಯಿಸಿದವರು. ಅವರ 'ಇಂದಿನ ಕಾವ್ಯದ ಗೊತ್ತುಗುರಿಗಳು' (೧೯೪೬) ಕಾವ್ಯದ ಸ್ವರೂಪ, ರಚನಾಕ್ರಮ, ಅಭಿವ್ಯಕ್ತಿ ಮುಂತಾದ ವಿಷಯಗಳ ಚರ್ಚೆಯನ್ನು ಒಳಗೊಂಡಿದೆ.

ಗೋಕಾಕರು ಆಧುನಿಕ ಇಂಗ್ಲಿಷ್ ಕವಿಗಳಿಂದ ಪ್ರಭಾವಗೊಂಡು ನವ್ಯ ಚಳವಳಿಯನ್ನು ಸಾರಿದರು. ಗೋಕಾಕರ ಪ್ರಕಾರ ಕನ್ನಡ ಕಾವ್ಯ ಹೊಸ ಹಾದಿಯಲ್ಲಿ ನಡೆಯಬೇಕಾದುದು ಒಂದು ತಾಂತ್ರಿಕ ಆವಶ್ಯಕತೆಯಾಗಿದೆ. ''ನವ್ಯತೆಯೆಂದರೆ ಒಂದು ತಂತ್ರ, ಅದನ್ನು ಯಾರಾದರೂ ಬಳಸಬಹುದು'' ೧೯೫೬ರಲ್ಲಿ ಪ್ರಕಟವಾದ ತಮ್ಮ 'ನವ್ಯಧ್ವನಿ'ಯಲ್ಲಿ ಹೀಗೆ ಬರೆದರು. ''ನವ್ಯ ಕಾವ್ಯ ಮಾರ್ಗ ಒಂದು ತಂತ್ರದ ವಿಶಿಷ್ಟತೆಯಲ್ಲಿದೆಯೇ ಹೊರತು ಯಾವುದೊಂದು ವಿಶಿಷ್ಟ ಜೀವನದೃಷ್ಟಿಯಲ್ಲಿಲ್ಲ'' ಎಂಬ ಮಾತು 'ನವ್ಯತೆ'ಯಲ್ಲಿ ಕಂಡುಬರುತ್ತದೆ. ನವ್ಯಕಾವ್ಯವನ್ನು ಗೋಕಾಕರು ಒಂದು ಪ್ರಯೋಗವೆಂದು ಗುರುತಿಸದರೇ ವಿನಃ ಸಂವೇದನೆಯಲ್ಲಿ ಉಂಟಾದ ಬದಲಾವಣೆಯಿಂದಲ್ಲ. 'ನವ್ಯತೆ ಹಾಗೂ ಕಾವ್ಯ ಜೀವನ' 'ಕವನಗಳಲ್ಲಿ ಸಂಕೀರ್ಣತೆ' ಮುಂತಾದವು ಅವರ ವಿಮರ್ಶಾ ಕೃತಿಗಳು.

ಗೋಕಾಕರ ನವ್ಯಕಾವ್ಯ ಪರಿಕಲ್ಪನೆಗಿಂತ ಅತ್ಯಂತ ಉನ್ನತ ಮಟ್ಟದ, ಅರ್ಥಪೂರ್ಣ ಮಾದರಿ ನಮಗೆ ದೊರೆಯುವುದು ಗೋಪಾಲಕೃಷ್ಣ ಅಡಿಗರಲ್ಲಿ. 'ಕಾಲ ಪರಿವರ್ತನೆಯ, ವಾತಾವರಣ ಭಿನ್ನತೆಯ ದೃಷ್ಟ್ಯಂತರದ ಪ್ರತೀತಿಯೇ ಕಾವ್ಯದಲ್ಲಿ ನವ್ಯತೆಯ ಮೂಲ' ಎಂಬ ವ್ಯಾಖ್ಯಾನ ಅಡಿಗರ 'ಮಣ್ಣಿನ ವಾಸನೆ' (೧೯೬೬)ಯಲ್ಲಿ ಕಂಡುಬರುತ್ತದೆ. ನವೋದಯ ಸಿದ್ಧಾಂತದ ಬಗೆಗಿನ ಅವರ ನಿಲುವು ಸ್ಪಷ್ಟವಾದರೂ, ಸಂದಿಗ್ಧ ರಹಿತವಾದುದೂ ಆಗಿತ್ತು. ಆ ಬಗ್ಗೆ ಅವರ ನಿರಾಕರಣ

ಸಂಪೂರ್ಣವಾಗಿತ್ತು. ಅಡಿಗರ ಕಾವ್ಯ ಮತ್ತು ಸಾಹಿತ್ಯ ಚಿಂತನೆ ಅವರ ಕಿರಿಯ ಪೀಳಿಗೆಯ ಬರಹಗಾರರ ಮೇಲೆ ಉಂಟುಮಾಡಿದ ಪ್ರಭಾವ ಮತ್ತು ಅವರ ಸಮಕಾಲೀನ ಹಾಗೂ ಹಿಂದಿನ ಪೀಳಿಗೆಯವರಿಗೆ ಒಡ್ಡಿದ ಸವಾಲು ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಮಹತ್ವದ ವಿಷಯವಾಗಿದೆ. ಲಂಕೇಶ್, ಚಿತ್ತಾಲ, ಸುಮತೀಂದ್ರ ನಾಡಿಗ ಮುಂತಾದವರ ಕೃತಿಗಳಿಗೆ ಬರೆದ ಮುನ್ನುಡಿಗಳಲ್ಲಿ ಅಡಿಗರ 'ಪ್ರಖರವಾದ' ವಿಮರ್ಶಾಶಕ್ತಿ ಗೋಚರಿಸುತ್ತದೆ.

ಕನ್ನಡ ಅಗ್ರಪಂಕ್ತಿಯ ಸೃಜನಶೀಲ ಲೇಖಕರ ಸಾಲಿಗೆ ಸೇರುವ ಡಾ.ಯು.ಆರ್. ಅನಂತಮೂರ್ತಿ ಶ್ರೇಷ್ಠ ವಿಮರ್ಶಕರೂ ಆಗಿದ್ದಾರೆ. ಪ್ರೌಢ ವ್ಯಾಸಂಗ, ಆಳವಾದ ಅನನ್ಯ ಚಿಂತನೆ, ವಿಮರ್ಶೆಯ ಬಗ್ಗೆ ಕಳಕಳಿ ಇವೆಲ್ಲವೂ ಇರುವ ಅನಂತಮೂರ್ತಿಯವರು ಪ್ರಬುದ್ಧ ವಿಮರ್ಶೆಯನ್ನು ಕನ್ನಡ ವಿಮರ್ಶಾ ಕ್ಷೇತ್ರಕ್ಕೆ ನೀಡಿದ್ದಾರೆ. ಅಡಿಗರ 'ಭೂಮಿಗೀತ' ಕವನ ಸಂಕಲನಕ್ಕೆ ಬರೆದ ಮುನ್ನುಡಿಯಲ್ಲಿ ಬರುವ 'ಕವನಗಳ ಕಡೆ ಬೆರಳು ಮಾಡಿ ತೋರಿಸಿ ಸಮರ್ಥಿಸಿಕೊಳ್ಳಲಾಗದ ಮಾತುಗಳನ್ನು ತನ್ನ ಜವಾಬ್ದಾರಿಯನ್ನರಿತ ವಿಮರ್ಶಕ ಆಡಕೂಡದು. ಅವನ ಜಾಣತನದ ಪ್ರದರ್ಶನಕ್ಕೆ ಕವಿ ನೆವವಾಗಕೂಡದು' ಎಂಬ ಮಾತುಗಳು ವಿಮರ್ಶಕರ ಜವಾಬ್ದಾರಿಯನ್ನು ಕುರಿತವು. ಪಾಶ್ಚಾತ್ಯ ನವ್ಯ ವಿಮರ್ಶಕರ, ಮುಖ್ಯವಾಗಿ ಇಂಗ್ಲೆಂಡ್ ಮತ್ತು ಅಮೆರಿಕದ ನವ್ಯ ವಿಮರ್ಶಕರ ತತ್ವಗಳಿಗೆ ಜನಮನ್ನಣೆ ತಂದುಕೊಡುವುದರ ಜೊತೆಗೇ ನಮ್ಮ ಸಂದರ್ಭಕ್ಕೆ ಸೂಕ್ತವಾದ ರೀತಿಯಲ್ಲಿ ಆ ವಿಮರ್ಶಾವಿಧಾನಗಳನ್ನು ಬಳಸುತ್ತ ಸತ್ವಶಾಲಿ ವಿಮರ್ಶೆಯನ್ನು ನೀಡಿದ್ದಾರೆ. 'ಪ್ರಜ್ಞೆ ಮತ್ತು ಪರಿಸರ' (೧೯೭೧), 'ಸನ್ನಿವೇಶ' (೧೯೭೪), 'ಸಮಕ್ಷಮ', 'ಪೂರ್ವಪರ' ಅವರ ವಿಮರ್ಶಾ ಸಂಕಲನಗಳು ಶ್ರೇಷ್ಠ ವಿಮರ್ಶಾ ಬರಹಗಳನ್ನು ಒಳಗೊಂಡಿವೆ.

ಹೊಸ ಬಗೆಯ ಸಾಹಿತ್ಯ ಹುಟ್ಟಿದಾಗ ಹೊಸ ವಿಮರ್ಶೆಯ ಅಗತ್ಯವೂ ತಾನೇತಾನಾಗಿ ಏರ್ಪಡುತ್ತದೆ. ೬೦ರ ದಶಕದಲ್ಲಿ ಮತ್ತು ಅನಂತರದ ಅವಧಿಯಲ್ಲಿ ನವ್ಯ ಕಾವ್ಯ ಬೆಳೆದು ಸಣ್ಣ ಕತೆ, ಕಾದಂಬರಿ ಕ್ಷೇತ್ರಗಳಲ್ಲೂ ನವ್ಯತೆ ಆಗಮಿಸಿದ ಕಾರಣ, ವಿಮರ್ಶೆಯಲ್ಲಿಯೂ ಒಂದು ಹೊಸ ಹಂತ ಅಡಿಯಿಟ್ಟಿತು. ನವ್ಯಯುಗ ಹಲವು ಮಂದಿ ಸತ್ವಶಾಲಿ ವಿಮರ್ಶಕರನ್ನೂ ಹುಟ್ಟುಹಾಕಿತು.

ಸಾಕ್ಷಿಯ ಮೊದಲ ಸಂಚಿಕೆಗೆ ಬರೆದ ಮುನ್ನುಡಿಯಲ್ಲಿ ಗೋಪಾಲಕೃಷ್ಣ ಅಡಿಗರು ಹೊಸ ವಿಮರ್ಶೆಯ ಸ್ವರೂಪವನ್ನು ಹೀಗೆ ಅರ್ಥೈಸಿದ್ದಾರೆ:

'ವಿಮರ್ಶನದ ಮೊದಲನೆಯ ಕೆಲಸ ಕೃತಿಯ ಆಮೂಲಾಗ್ರವಾದ ಅಭ್ಯಾಸ; ಈ ಅಭ್ಯಾಸಕ್ಕೆ ತಕ್ಕ ಊಹಾಶಕ್ತಿ, ಭಾಷಾಜ್ಞಾನ, ವಿನಯ ಮತ್ತು ತಾಳ್ಮೆ ಅತ್ಯಗತ್ಯ .....' ಈವರೆಗಿನ ನಮ್ಮ ವಿಮರ್ಶೆ ಸ್ನೇಹಿತರ ಬಗ್ಗೆ ದಾಕ್ಷಿಣ್ಯ, ದೊಡ್ಡವರ ಬಗ್ಗೆ ಭಯ, ಮೂರನೆಯವರ ಬಗ್ಗೆ ಔದಾಸೀನ್ಯ ಅಥವಾ ನಿಷ್ಕಾರಣ ವಿರೋಧ – ಇವುಗಳಿಂದ ಸಾಮಾನ್ಯವಾಗಿ ಮಲಿನವಾಗಿದೆ ಎಂದರೆ ವಿಮರ್ಶಕನ ಕಾರ್ಯ ವ್ಯಕ್ತಿನಿಷ್ಠವಾಗಿತ್ತೇ ಹೊರತು ಕೃತಿನಿಷ್ಠವಾಗಿರಲಿಲ್ಲ ..... ವಸ್ತುನಿಷ್ಠ ಯೋಚನೆ ವ್ಯವಹಾರಗಳಿಲ್ಲದೆ, ಕೃತಿನಿಷ್ಠ ವಾಚನ ವಿಮರ್ಶನಗಳಿಲ್ಲದೆ ಬುದ್ಧಿ ಜೀವನ ವಿಕಾಸವಾಗುವುದಿಲ್ಲ, ಹೃದಯ ಶುದ್ಧವಾಗುವುದಿಲ್ಲ; ಬದಲಾಗಿ, ಬುದ್ಧಿ, ದಾರಿದ್ರ್ಯ ಹೃದಯದ ಕಾರ್ಪಣ್ಯ ಇವು ಹಬ್ಬುತ್ತವೆ'

ಕೃತಿನಿಷ್ಠ ವಿಮರ್ಶೆಯ ಅಗತ್ಯವನ್ನು ಎತ್ತಿ ಹಿಡಿದ ಎಂ.ಜಿ. ಕೃಷ್ಣಮೂರ್ತಿಯವರ ಮಾತುಗಳಿವು: 'ಸಾಹಿತ್ಯದ ವಿಮರ್ಶೆಯೆಂದರೆ ಪ್ರಮುಖವಾಗಿ ಅದರ ಅಂಗಗಳೂ ಅದರ ತಂತ್ರದ

ಪರೀಕ್ಷೆ: ಕೃತಿಯಲ್ಲಿ ರಚನೆ, ಶಿಲ್ಪ, ಪ್ರತಿಮೆ, ಭಾಷೆ ಇವು ಮುಖ್ಯ. ಇವುಗಳ ಹೊರತಾಗಿ ಕೃತಿಯ ಅಸ್ತಿತ್ವವಿಲ್ಲವೆನ್ನುವುದೇ ನವ್ಯವಿಮರ್ಶೆಯ ಕೇಂದ್ರ ಸೂತ್ರ' (ತಮ್ಮ 'ಆಧುನಿಕ ಭಾರತೀಯ ಸಾಹಿತ್ಯ'ಕ್ಕೆ ಎಂ.ಜಿ. ಕೃಷ್ಣಮೂರ್ತಿಯವರು ಬರೆದ 'ಮೊದಲ ಮಾತು'ನಿಂದ ಉದ್ಧೃತ)

'ಸಾಕ್ಷಿ', 'ಮನ್ವಂತರ', 'ಸಂಕ್ರಮಣ', 'ರುಜುವಾತು', 'ಶೂದ್ರ' ಮುಂತಾದ ನಿಯತಕಾಲಿಕ ಅನಿಯತಕಾಲಿಕ ಪತ್ರಿಕೆಗಳು ಉತ್ತಮ ಗುಣಮಟ್ಟದ ಅನೇಕ ವಿಮರ್ಶಾ ಲೇಖನಗಳನ್ನೂ, ವಿಶೇಷವಾಗಿ ತರುಣ ಪೀಳಿಗೆಯ ಚಿಂತಕರ ಬರಹಗಳನ್ನು ಪ್ರಕಟಿಸುತ್ತಾ ಬಂದಿವೆ. ಈ ಪತ್ರಿಕೆಗಳ ಮೂಲಕ ಸಮಕಾಲೀನ ಮತ್ತು ಕೊಂಚ ಹಿಂದಿನ ಸಾಹಿತ್ಯದ ವಿಶ್ಲೇಷಣೆ ಮತ್ತು ಪುನರ್ ಮೌಲ್ಯಮಾಪನ ಅಗಾಧ ಪ್ರಮಾಣದಲ್ಲಿ ನಡೆಯಿತು. ಈ ಪತ್ರಿಕೆಗಳು ಕಾಲಕಾಲಕ್ಕೆ ತಂದಿರುವ ವಿಶೇಷಾಂಕಗಳು ಉದಾ: ಮನ್ವಂತರದ ನಾಟಕ ವಿಮರ್ಶೆಯ ವಿಶೇಷಾಂಕ ನಾಟಕಾಂಕ, ಸಾಕ್ಷಿ ಪತ್ರಿಕೆ ತಂದ 'ಕವಿತೆಯ ಸಾಕ್ಷಿ', 'ಸಂಕ್ರಮಣದ 'ಬಂಡಾಯ ಸಾಹಿತ್ಯ ವಿಶೇಷಾಂಕ', ಶೂದ್ರ ಪತ್ರಿಕೆಯ 'ಬೇಂದ್ರೆ ವಿಶೇಷಾಂಕ', ದಲಿತ ಚಳವಳಿ ನಮ್ಮ ಸಾಹಿತ್ಯ ಸಂದರ್ಭಗಳ ಉತ್ತಮ ದಾಖಲೆಗಳಾಗಿವೆ. ಇತ್ತೀಚೆಗೆ ಪ್ರಕಟವಾದ 'ಸಂಕ್ರಮಣ ಸಾಹಿತ್ಯ ಸಂಪುಟ ೧' – ಸಂಕ್ರಮಣ ಪತ್ರಿಕೆಯಲ್ಲಿ ಈವರೆಗೆ ಪ್ರಕಟವಾಗಿರುವ ಆಯ್ದ ಲೇಖನಗಳ ಸಂಗ್ರಹ.

ಅನಂತಮೂರ್ತಿಯವರ ಸಮಕಾಲೀನರಾದ ಎಂ.ಜಿ. ಕೃಷ್ಣಮೂರ್ತಿಯವರು ಕೂಡ ಆಧುನಿಕ ಇಂಗ್ಲಿಷ್ ಮತ್ತು ಅಮೆರಿಕನ್ ವಿಮರ್ಶಾ ವಿದಾನಗಳನ್ನೂ ಕನ್ನಡ ವಿಮರ್ಶೆಗೆ ತಂದು ಕೊಟ್ಟವರು. ಸಾಹಿತ್ಯದ ಪರಿಭಾಷೆಯನ್ನು ಬಳಸುತ್ತ ಸಾಂಸ್ಕೃತಿಕ ಚೌಕಟ್ಟಿನ ಮೂಲಕ ಸಾಹಿತ್ಯದ ವಿಶ್ಲೇಷಣೆಯಲ್ಲಿ ತೊಡಗುವುದನ್ನು ಕಾಣಬಹುದು. ಅವರ 'ಆಧುನಿಕ ಭಾರತೀಯ ಸಾಹಿತ್ಯ' (೧೯೭೦) ವಿಮರ್ಶಾ ಕ್ಷೇತ್ರಕ್ಕೆ ಸಂದ ಅಮೂಲ್ಯ ಕೊಡುಗೆಯೆನಿಸಿದೆ. ಕುವೆಂಪುರವರ ಕಾದಂಬರಿಗಳನ್ನು, ರಾವ್‌ಬಹದ್ದೂರರ 'ಗ್ರಾಮಾಯಣ' ಕಾದಂಬರಿ ಮತ್ತು ಅಡಿಗರ 'ಭೂಮಿಗೀತೆ' ಗಳನ್ನು ಕುರಿತ ಇವರ ಲೇಖನಗಳು ಸತ್ವಯುತ ವಿಮರ್ಶೆಯನ್ನು ಒಳಗೊಂಡಿದೆ. ಚಿಕ್ಕ ವಯಸ್ಸಿನಲ್ಲೇ ಎಂ.ಜಿ. ಕೃಷ್ಣಮೂರ್ತಿ ಸಾವಿಗೀಡಾದುದರಿಂದ ವಿಮರ್ಶಾ ಕ್ಷೇತ್ರ ಅಷ್ಟರಮಟ್ಟಿಗೆ ಬಡವಾಯಿತೆಂದೇ ಹೇಳಬಹುದು. ಸಾಹಿತ್ಯದ ವಿಶ್ಲೇಷಣೆಯ ಮೂಲಕ ಸಂಸ್ಕೃತಿಯನ್ನು ಅರ್ಥೈಸಲು ಸಾಂಸ್ಕೃತಿಕ ಪರಿಭಾಷೆಯನ್ನು ಬಳಸುವ ಡಿ.ಆರ್. ನಾಗರಾಜರ ವಿಮರ್ಶೆ ಇನ್ನೊಂದು ಬಗೆಯದು. ಅವರ 'ಶಕ್ತಿ ಶಾರದೆಯ ಮೇಳ' ನವೋದಯ ಮತ್ತು ನವ್ಯ ಕಾವ್ಯಗಳ ಚೌಕಟ್ಟಿನಲ್ಲಿ ಮೂಡಿರುವ ಆಧುನಿಕ ಕನ್ನಡ ಕಾವ್ಯದ ಅಧ್ಯಯನ ತಾತ್ವಿಕ ಮತ್ತು ಪ್ರಾಯೋಗಿಕ ವಿಮರ್ಶೆ ಮೇಳೈಸಿರುವ ಈ ಅಧ್ಯಯನ, ಸಾಹಿತ್ಯ ವಿಮರ್ಶೆಯ ಪರಿಧಿಯನ್ನು ಮೀರಿ ಸಾಂಸ್ಕೃತಿಕ ವಿಮರ್ಶೆಯಲ್ಲಿ ತೊಡಗಿರುವ ಅಮೂಲ್ಯ ಕೃತಿಯೆನಿಸಿದೆ.

ಕೃತಿಯೇ ಕೇಂದ್ರವಾದ ನವ್ಯ ವಿಮರ್ಶೆಯ ಕೃತಿಯ ಸೂಕ್ಷ್ಮವಾದ ವಿವರವಾದ ಅಧ್ಯಯನಕ್ಕೆ ಒತ್ತುಕೊಟ್ಟಿತು. ಕೃತಿಯೊಂದರಲ್ಲಿ ವಸ್ತು, ತಂತ್ರ, ಭಾಷೆ, ಆವರಣ – ಇತ್ಯಾದಿಗಳೆಲ್ಲ ಸಾವಯವ ಸಂಬಂಧ ಹೊಂದಿರುತ್ತವೆಂಬ ನೆಲೆಯಿಂದ ಹೊರಟಂಥ ವಿಮರ್ಶೆಯಿದು. ಆಯ್ದ ಪ್ರಾತಿನಿಧಿಕ ಉದಾಹರಣೆಗಳ ಮೂಲಕ ನವ್ಯ ವಿಮರ್ಶೆಯ ವಿಶ್ಲೇಷಣದ ಪರಿಯನ್ನು 'ಪ್ರಾಯೋಗಿಕ ವಿಮರ್ಶೆ' (೧೯೭೧, ಸಂಪದಾಕರು ಜಿ.ಎಸ್.ಎಸ್. ಮತ್ತು ಎನ್.ಎಸ್.ಎಲ್.) ಎಂಬ ಕೃತಿಯಲ್ಲಿ ಚರ್ಚಿಸಲಾಗಿದೆ ಜಿ.ಎಸ್.ಎಸ್. ಅವರ 'ವಿಮರ್ಶೆಯ ಪೂರ್ವ–ಪಶ್ಚಿಮ' (೧೯೭೨) ಮತ್ತೊಂದು ಮುಖ್ಯ ಕೃತಿ. ಎಲ್.ಎಸ್. ಶೇಷಗಿರಿರಾವ್ (ಕಾದಂಬರಿ, ಸಾಮಾನ್ಯ ಮನುಷ್ಯ, ೧೯೫೭) ಕೀರ್ತಿನಾಥ ಕುರ್ತಕೋಟಿ, ಯು.ಆರ್. ಅನಂತಮೂರ್ತಿ, ಎಂ.ಜಿ. ಕೃಷ್ಣಮೂರ್ತಿ,

ಶಂಕರ ಮೊಕಾಶಿ ಪುಣೇಕರ, ರಾಜೀವ ತಾರಾನಾಥ. ಸಿ.ಪಿ.ಕೆ. ಪ್ರೋಲಂಕಿ ರಾಮಮೂರ್ತಿ ಮುಂತಾದವರ ಕೊಡುಗೆ ಈ ನಿಟ್ಟಿನಲ್ಲಿ ಅಮೂಲ್ಯವಾದುದು. ಇವರಲ್ಲದೆ ಗಿರಡ್ಡಿ ಗೋವಿಂದ ರಾಜ 'ಸಣ್ಣ ಕಥೆಯ ಹೊಸ ಒಲವುಗಳು' (೧೯೬೫), 'ಕಾದಂಬರಿ ವಸ್ತು ಮತ್ತು ತಂತ್ರ' (೧೯೭೬), 'ಸಾತತ್ಯ' (೧೯೯೨), ಪಿ. ಲಂಕೇಶ 'ಪ್ರಸ್ತುತ, ಕಂಡದ್ದು ಕಂಡ ಹಾಗೆ' (೧೯೭೫), ಡಿ.ಎಂ. ಶಂಕರ 'ನಿರ್ವಹಣೆ' (೧೯೭೬), ಹೆಚ್.ಎಂ.ಚನ್ನಯ್ಯ 'ಜಿಜ್ಞಾಸೆ' (೧೯೭೫), ಎನ್.ಎಸ್. ಲಕ್ಷ್ಮೀನಾರಾಯಣಭಟ್ಟ 'ಹೊರಳು ದಾರಿಯಲ್ಲಿ ಕಾವ್ಯ', ಕೆ.ವಿ. ನಾರಾಯಣ, ಕಿ.ರಂ. ನಾಗರಾಜ, ರಾಜೇಂದ್ರ ಚೆನ್ನಿ, ಜಿ.ಎಸ್. ಆಮೂರ 'ಕೃತಿ ಪರೀಕ್ಷೆ' (೧೯೭೦), 'ಸಮಕಾಲೀನ ಕಥೆ ಕಾದಂಬರಿ – ಹೊಸ ಪ್ರಯೋಗಗಳು' (೧೯೮೧), 'ಅರ್ಥಲೋಕ' (೧೯೮೮), ವ್ಯವಸಾಯ (೧೯೯೨), ಸುಮತೀಂದ್ರ ನಾಡಿಗ 'ಗೋಪಾಲಕೃಷ್ಣ ಅಡಿಗ ಒಂದು ಕಾವ್ಯಾಭ್ಯಾಸ', ಜಿ.ಹೆಚ್. ನಾಯಕ 'ಸಮಕಾಲೀನ' (೧೯೭೩), 'ಅನಿವಾರ್ಯ' (೧೯೮೦), 'ನಿರಪೇಕ್ಷ' (೧೯೮೪), 'ನಿಜದನಿ' (೧೯೮೮), ಡಿ.ಆರ್. ನಾಗರಾಜ 'ಅಮೃತ ಮತ್ತು ಗರುಡ' (೧೯೮೩), ಶಾಂತಿನಾಥ ದೇಸಾಯಿ 'ಸಾಹಿತ್ಯ ಮತ್ತು ಭಾಷೆ', ಗಂಗಾಧರ ಚಿತ್ತಾಲರ 'ಕಾವ್ಯಸೃಷ್ಟಿ', 'ಕನ್ನಡ ಕಾದಂಬರಿ ನಡೆದು ಬಂದ ರೀತಿ', 'ನವ್ಯ ಸಾಹಿತ್ಯದ ದರ್ಶನ' (೧೯೯೦), ಎಚ್.ಎಸ್. ರಾಘವೇಂದ್ರರಾವ್ (ನಿಲುವು), ಟಿ.ಪಿ. ಅಶೋಕ 'ಹೊಸ ಹೆಜ್ಜೆ ಹೊಸ ದಾರಿ' (೧೯೮೧), ಪುರುಷೋತ್ತಮ ಬಿಳಿಮಲೆ 'ಶಿಷ್ಟ ಪರಿಶಿಷ್ಟ' (೧೯೯೨), ಬಿ. ದಾಮೋದರರಾವ್ 'ಆಯಾಮಗಳು' (೧೯೯೨), ಕೆ. ಸತ್ಯನಾರಾಯಣ 'ಆಸಕ್ತಿ' (೧೯೯೧), ಓ.ಎಲ್. ನಾಗಭೂಷಣಸ್ವಾಮಿ 'ವಿಮರ್ಶೆಯ ಪರಿಭಾಷೆ' ವಿಜಯಾ ದಬ್ಬೆ 'ಮಹಿಳೆ ಸಾಹಿತ್ಯ ಸಮಾಜ' (೧೯೮೯) ಅರವಿಂದ ನಾಡಕರಣಿ ಮುಂತಾದವರೂ ವಿಮರ್ಶಾ ಕ್ಷೇತ್ರಕ್ಕೆ ವಿಶಿಷ್ಟ ಕೊಡುಗೆ ನೀಡಿದ್ದಾರೆ.

ನವ್ಯ ಸಾಹಿತ್ಯಕ್ಕೆ ಪ್ರತಿಕ್ರಿಯೆಯ ರೂಪದಲ್ಲಿ ಬಂದ ಹೊಸ ದನಿಗಳು, ಸಾಮಾಜಿಕ ಕಾಳಜಿಯಿಂದ ಕೂಡಿದ ಬದ್ಧ ಸಾಹಿತ್ಯ ಸೃಷ್ಟಿಯಲ್ಲಿ ತೊಡಗಿದವು. ಜನಪರ ರಾಜಕೀಯ ಸಾಮಾಜಿಕ ಪ್ರಜ್ಞೆಯಿಂದ ಕೂಡಿದ ಮತ್ತು ಕ್ರೌರ್ಯ ತುಂಬಿದ ವ್ಯವಸ್ಥೆಯ ವಿರುದ್ಧ ಸಿಡಿದೇಳುವ ಮನೋಧರ್ಮ ಬಂಡಾಯ ಸಾಹಿತ್ಯ ಚಳವಳಿಯನ್ನು ರೂಪಿಸಿತು. ಕಾದಂಬರಿ, ಕಥೆ, ಕವಿತೆಗಳು ಈ ಮನೋಧರ್ಮ ಪ್ರತಿಬಿಂಬಿಸಲು ಯತ್ನಿಸಿದವು. ಎಡ ಪಂಥೀಯ ವಿಚಾರಧಾರೆ, ದಲಿತ ಕಾಳಜಿಗಳಿಗೆ ಬದ್ಧವಾದ ಬಂಡಾಯದ ಬರಹಗಾರರು ವಿಮರ್ಶೆಯನ್ನು ಸೈದ್ಧಾಂತಿಕ ಹೋರಾಟದ ಸಾಧನವನ್ನಾಗಿ ನೋಡಿರುತ್ತಾರೆ. ಈ ನಿಟ್ಟಿನಲ್ಲಿ ಬಂದಿರುವ ಕೃತಿಗಳೂ, ವಿಮರ್ಶಾ ಬರಹಗಳೂ, ಬಂಡಾಯ ಬದಲಾದ ಜೀವನ ದೃಷ್ಟಿಯ ಅಗತ್ಯಗಳಿಗೆ ಬೇಕಾದ ವಿಮರ್ಶೆಯ ಪರಿಭಾಷೆಯನ್ನೂ, ಪರಿಕರವನ್ನೂ ಕಂಡುಕೊಳ್ಳುವ ಹಂತದಲ್ಲಿದೆ. ಚಂದ್ರಶೇಖರ ಪಾಟೀಲರ 'ಬಂಡಾಯ ಮತ್ತು ಸಾಹಿತ್ಯ' (೧೯೭೯) ಮತ್ತು ಇತ್ತೀಚೆಗೆ ಪ್ರಕಟವಾದ ಬರಗೂರು ರಾಮಚಂದ್ರಪ್ಪನವರ ಮೂರು ಪುಸ್ತಕಗಳು ಈ ಕಾರಣದಿಂದ ಮಹತ್ವ ಪಡೆಯುತ್ತವೆ. ಬಂಡಾಯ ಸಾಹಿತ್ಯವನ್ನು ಕುರಿತ ಇವರ ತಾತ್ವಿಕ ಚಿಂತನೆ 'ಬಂಡಾಯ ಸಾಹಿತ್ಯ ಮೀಮಾಂಸೆ', 'ಸಂಸ್ಕೃತಿ ಮತ್ತು ಸೃಜನಶೀಲತೆ' ಮತ್ತು 'ಇಣುಕು ನೋಟ' ಎಂಬ ಮೂರು ಕೃತಿಗಳಲ್ಲೂ ಕಂಡುಬರುತ್ತದೆ. ಸಮಕಾಲೀನ ಸಾಹಿತ್ಯದ ಚಳವಳಿಯಾದ ಬಂಡಾಯ ಸಾಹಿತ್ಯವನ್ನು ವಿಶ್ಲೇಷಿಸಲು ಈ ಕೃತಿಗಳು ಸಹಾಯ ನೀಡಬಲ್ಲವು 'ದಲಿತ ಸಾಹಿತ್ಯ ಮತ್ತು ಇತರ ಲೇಖನಗಳು' (೧೯೮೨) ಎಂಬ ದೇವಯ್ಯ ಹರವೆಯವರ ಮೊದಲ ವಿಮರ್ಶಾ ಸಂಕಲನದಲ್ಲಿ ಹೊಸ ದೃಷ್ಟಿಯಿಂದ ಕೃತಿಗಳ ವಿಶ್ಲೇಷಣೆಯಲ್ಲಿ ತೊಡಗಿರುವ ಮನಸ್ಸೊಂದನ್ನು ಕಾಣಬಹುದಾಗಿದೆ. ಸಿದ್ಧಲಿಂಗಯ್ಯನವರ 'ಹಕ್ಕಿನೋಟ' (೧೯೯೦) ಈ ದಶಕದ ಮತ್ತೊಂದು ಮುಖ್ಯ ವಿಮರ್ಶಾ ಕೃತಿ.

ಚಂದ್ರಶೇಖರ ಪಾಟೀಲ, ಬರಗೂರು ರಾಮಚಂದ್ರಪ್ಪ, ಸಿದ್ಧಲಿಂಗಯ್ಯ, ಪುರುಷೋತ್ತಮ ಬಿಳಿಮಲೆ, ಅರವಿಂದ ಮಾಲಗತ್ತಿ, ಕಾಳೇಗೌಡ ನಾಗವಾರ, ಬೀ. ಕೃಷ್ಣಪ್ಪ, ಬೆಸಗರಹಳ್ಳಿ ರಾಮಣ್ಣ ಮುಂತಾದ ಲೇಖಕರು ಬರೆದಿರುವ ಹಲವಾರು ಬಿಡಿ ಲೇಖನಗಳು ನಿಯತಕಾಲಿಕಗಳು ಮತ್ತು ವಿಮರ್ಶಾ ಸಂಕಲನಗಳಲ್ಲಿ ಆಗಿಂದಾಗ್ಗೆ ಪ್ರಕಟಗೊಳ್ಳುತ್ತಿರುತ್ತವೆ. ಇವು ಕೂಡ ಬಂಡಾಯ ವಿಮರ್ಶೆಗೆ ಸಂದ ಕೊಡುಗೆಗಳಾಗಿವೆ. ಜನಪರ ಧೋರಣೆಗಳಿಂದ ಹೊರಟ ಈ ವಿಮರ್ಶಾಮಾರ್ಗಗಳಿಗೆ ಚಾರಿತ್ರಿಕ ಮಹತ್ವವಿದ್ದರೂ ಇವು ಸಾಂಸ್ಕೃತಿಕ ವಿಮರ್ಶೆಯ ಆಯಾಮವನ್ನು ಪಡೆದುಕೊಂಡಿಲ್ಲ. ಇದಕ್ಕೆ ಮುಖ್ಯ ಕಾರಣ ನಮ್ಮ ಬಹಳಷ್ಟು ಬಂಡಾಯ ಮಾರ್ಗದ ವಿಮರ್ಶಕರು ತಮ್ಮ ತಮ್ಮ ಪಂಥೀಯ ಧೋರಣೆಗಳನ್ನೇ ಹಿಡಿದಿರುವುದು ಹಾಗೂ ತಮ್ಮ ಜನಪರ ಧೋರಣೆಗಳನ್ನು ಸಾಹಿತ್ಯ ಕೃತಿಯಲ್ಲಿ ತೀರಾ ಲೋಕಾಭಿರಾಮವಾಗಿ ಕಂಡುಕೊಳ್ಳಲು ಯತ್ನಿಸಿರುವುದೂ ಆಗಿವೆ. ತಾತ್ವಿಕ ಸ್ವರೂಪವನ್ನು ಹೊಂದಿದ್ದು ಅವರ ಪಂಥೀಯ ಧೋರಣೆಗಳ ಇಕ್ಕಟ್ಟಿನಿಂದ ಹೊರಬಂದಿರುವ ಜಿ. ರಾಜಶೇಖರ ಅವರ ಬಿಡಿ ಬರಹಗಳಲ್ಲಿ ಗಟ್ಟಿ ವಿಮರ್ಶೆಯನ್ನು ಕಾಣಬಹುದು.

ಪಾಶ್ಚಿಮಾತ್ಯ ಸಾಹಿತ್ಯದ ಪ್ರಭಾವದಿಂದ ಹೊಸ ಸಾಹಿತ್ಯ ಪ್ರಕಾರಗಳು ಕನ್ನಡದಲ್ಲಿ ಜನ್ಮ ತಾಳಿದ ಕಾರಣ, ಸಾಹಿತ್ಯ ವಿಮರ್ಶೆಯಲ್ಲೂ ಈ ಪ್ರಭಾವ ಕಾಣುವುದು ಸಹಜವೇ ಆಗಿದೆ. ಆದರೆ ಈ ಪ್ರಭಾವವನ್ನು ಮೈಗೂಡಿಸಿಕೊಂಡು ಕನ್ನಡದ ಜಾಯಮಾನಕ್ಕೆ ಒಗ್ಗುವಂಥ ವಿಮರ್ಶೆ ಕನ್ನಡದಲ್ಲಿ ಬಾರದೆ ಹೋಯಿತು. 'ಕನ್ನಡದ ಜಾಯಮಾನಕ್ಕೆ ಮತ್ತು ಕನ್ನಡ ಸಾಹಿತ್ಯದ ಬೆಳವಣಿಗೆಗೆ ಸೂಕ್ತವಾದ ವಿಮರ್ಶಾ ಪದ್ಧತಿ ಇದುವರೆಗೂ ಹುಟ್ಟಿಲ್ಲ' ಎನ್ನುವ ಕುರ್ತಕೋಟಿಯವರ ಮಾತು ಇಲ್ಲಿ ಉಲ್ಲೇಖಾರ್ಹ.

ಬಹುಕಾಲದಿಂದ ಸೊಲ್ಲಡಗಿದ್ದ ಮಂದಿಯ ಧ್ವನಿಗಳು ಇಂದು ಕೇಳಿ ಬರುತ್ತಿರುವುದು ಆರೋಗ್ಯಕರ ಪ್ರವೃತ್ತಿಯೇ ಆಗಿದೆ. ಹೀಗಾದಾಗ ಅನಿವಾರ್ಯವಾಗಿ ಹೊಸ ಅನುಭವ ಲೋಕಗಳು ಸಾಹಿತ್ಯ ಕ್ಷೇತ್ರಕ್ಕೆ ಆಗಮಿಸುತ್ತವೆ. ಉದಾ: ಮುಸ್ಲಿಂ ಬರಹಗಾರರ, ದಲಿತ ಲೇಖಕರ, ಮಹಿಳೆಯರ ಕೃತಿಗಳು. ಇಂತಹ ಹೊಸ ಲೋಕಗಳನ್ನು ನಮ್ಮ ಮುಂದೆ ತೆರೆದಿಡುವ ಸಾಹಿತ್ಯದ ಮೌಲ್ಯಮಾಪನ ಮಾಡಲು ಹೊಸ ಮಾನದಂಡಗಳ ಅಗತ್ಯವಿದೆಯೇ ಎಂಬ ಬಗ್ಗೆ ಇತ್ತೀಚಿನ ದಿನಗಳಲ್ಲಿ ತೀವ್ರತರ ಚರ್ಚೆ ನಡೆಯುತ್ತಿವೆ. ಸಾಹಿತ್ಯದಲ್ಲಿ ಹೊಸ ಮಾನದಂಡಗಳ ಅಗತ್ಯ ಉಂಟಾಗುವುದು. ಸಾಹಿತ್ಯದ ರೂಪದಲ್ಲಿ ಕ್ರಾಂತಿಕಾರಕವಾದ ಬದಲಾವಣೆಗಳಾಗಿ ಲಭ್ಯವಿರುವ ಮಾನದಂಡಗಳು ಅಪೂರ್ವ ಎನ್ನಿಸಿದಾಗ ಈ ಅಗತ್ಯ ಬೀಳುತ್ತದೆ ಎನ್ನುವ ಡಿ.ಆರ್. ನಾಗರಾಜರ ಮಾತು ಇಲ್ಲಿ ಉಲ್ಲೇಖಾರ್ಹ.

ಮಹಾದೇವರ 'ಕುಸುಮಬಾಲೆ' ಯಂಥ ಕಾದಂಬರಿ ಪಾಶ್ಚಿಮಾತ್ಯ ಕಾದಂಬರಿಯ ಮಾರ್ಗಗಳಿಗೆ ಮತ್ತು ವಾಸ್ತವವಾದಿ ಹಾದಿಯಲ್ಲಿ ನಡೆದು ಬಂದಿರುವ ಕಾದಂಬರಿಯ ಸ್ವರೂಪಕ್ಕೆ ಒಗ್ಗಿ ಹೋಗಿರುವ ಓದಿನ ಕ್ರಮವನ್ನೇ ಪ್ರಶ್ನಿಸುತ್ತದೆ. ಇಂಥ ಸವಾಲು ಕೇವಲ ಕನ್ನಡ ಸಾಹಿತ್ಯದ ಸಂದರ್ಭಕ್ಕೇ ವಿಶಿಷ್ಟವಾದುದಲ್ಲ ಎಂಬುದನ್ನು ಕೂಡ ಗಮನಿಸುವುದು ಅಗತ್ಯ. ಪಾಶ್ಚಿಮಾತ್ಯ ವಿಮರ್ಶಾ ಪ್ರಪಂಚದಲ್ಲಂತೂ ವಿಮರ್ಶಾ ಸಿದ್ಧಾಂತಗಳ ಧಾಳಿಯೇ ನಡೆದಿದೆ. ಆಧುನಿಕ ಭಾಷಾಶಾಸ್ತ್ರ ಮಾನವಶಾಸ್ತ್ರ, ಸ್ತ್ರೀ ಪರವಾದ, ವಿವಿಧ ಮಾರ್ಕ್ಸಿಸ್ಟ್ ಚಿಂತನೆಗಳು ಇತ್ಯಾದಿ ಶಿಸ್ತುಗಳಿಂದ ಪ್ರೇರಣೆಗೊಂಡ ಹತ್ತು ಹಲವು ವಿಮರ್ಶಾಪದ್ಧತಿಗಳ ಬೆಳವಣಿಗೆಗೆ, ಕಳೆದ ಎರಡೂ ಮೂರು ದಶಕಗಳಲ್ಲಿ ಸಾಹಿತ್ಯ ಕೃತಿಯನ್ನು ಓದುವ, ಅರ್ಥೈಸುವ ಕ್ರಮವನ್ನೇ ತೀಕ್ಷ್ಣ ಮರುಪರೀಕ್ಷೆಗೆ ಗುರಿಮಾಡಿವೆ. ಅಷ್ಟೇ ಅಲ್ಲ, ಸಾಹಿತ್ಯ ಮತ್ತು ಸಾಹಿತ್ಯೇತರ ಎಂಬ ವಿಭಜನೆಯ ಕ್ರಮವನ್ನು ಕೂಡ ಈ ಹೊಸ ವಿಮರ್ಶಾ ಪದ್ಧತಿಗಳು ಪ್ರಶ್ನಿಸತೊಡಗಿದೆ. ಹಾಗಾಗಿ ಪಾಶ್ಚಾತ್ಯ ವಿಮರ್ಶಾ ಜಗತ್ತಿನಲ್ಲಿ ಒಂದು

ವಿಲಕ್ಷಣ ಸಂದಿಗ್ಧತೆ ಕೂಡ ತಲೆದೋರಿದೆ. ಈ ಸಂದಿಗ್ಧತೆಯ ಚುರುಕು ಕನ್ನಡ ವಿಮರ್ಶಾ ಲೋಕವನ್ನು ತಲುಪದೆ ಏನಿಲ್ಲ.

ಹಾಗೆಯೇ ಪಾಶ್ಚಾತ್ಯ ವಿಮರ್ಶೆಯ ಮಾನದಂಡಗಳನ್ನು ನೇರವಾಗಿ ನಮ್ಮ ಸಂದರ್ಭಕ್ಕೆ ಆಮಂತ್ರಿಸಿಕೊಳ್ಳಬಾರದ ಎಚ್ಚರಿಕೆಯನ್ನೂ ಕನ್ನಡ ವಿಮರ್ಶೆ ತಳೆದಿರುವ ಸೂಚನೆಗಳಿವೆ. ೬೦, ೭೦ರ ದಶಕದ ಕನ್ನಡ ನವ್ಯವಿಮರ್ಶೆ ಪಾಶ್ಚಿಮಾತ್ಯ ವಿಮರ್ಶಾ ಪರಿಕರಗಳನ್ನು ತನ್ನ ಸಂದರ್ಭಕ್ಕೆ ಒಗ್ಗಿಸಿಕೊಂಡಷ್ಟು ಸಲೀಸಾಗಿ ಇಂದಿನ ಕನ್ನಡ ವಿಮರ್ಶೆ ಇತ್ತೀಚಿನ ಪಾಶ್ಚಾತ್ಯ ಮಾದರಿಗಳನ್ನು ಕನ್ನಡ ಸಂದರ್ಭಕ್ಕೆ ಒಗ್ಗಿಸಿಕೊಂಡಿಲ್ಲ ಎಂಬುದು ಗಮನಾರ್ಹ. ಇದರ ಅರ್ಥ ಇಂದಿನ ವಿಮರ್ಶೆ ಪಶ್ಚಿಮದ ವಿಮರ್ಶಾ ಆಸ್ಫೋಟವನ್ನು ಗ್ರಹಿಸಿಲ್ಲ ಎನ್ನುವುದಲ್ಲ, ಬದಲಾಗಿ, ಈ ಮಾದರಿಗಳ ಸ್ವರೂಪದ ಬಗ್ಗೆ ಕೊಂಚ ಸಂದೇಹ, ಕೊಂಚ ಎಚ್ಚರವನ್ನು ತಳೆದಿರುವುದೇ ಆಗಿದೆ. ಇಂತಹ ಸಂದೇಹ ಮತ್ತು ಎಚ್ಚರಗಳು ನವ ವಸಾಹತುಶಾಹಿ ಸಂದರ್ಭದಲ್ಲಿ ಆರೋಗ್ಯವಾದದ್ದೇ. ಹಾಗೆಯೇ ದೇಶೀಯ ಮೂಲವೊಂದರ ಹುಡುಕಾಟ ಕೂಡ ಇಂದು ಕೂಡ ವಿಮರ್ಶೆಯ ಪ್ರಮುಖ ಕಾಳಜಿಯಾಗಿದೆ. ಹೀಗಾಗಿ ಪಶ್ಚಿಮದ ತೃತೀಯ ಜಗತ್ತಿನಲ್ಲೂ ಪಡೆದುಕೊಳ್ಳುವ ಸ್ವರೂಪಗಳು ವಿಭಿನ್ನವಾಗಿರುತ್ತವೆ. ಇಂಥದೊಂದು ವಿಭಿನ್ನ ಸಂದಿಗ್ಧತೆ ಕನ್ನಡ ಸಾಹಿತ್ಯ ವಿಮರ್ಶೆಯ ಜಗತ್ತನಲ್ಲಿ ಉಂಟಾಗಿರುವುದು, ಮುಂದೆ ಕನ್ನಡ ವಿಮರ್ಶೆ ಕಂಡುಕೊಳ್ಳಬಹುದಾದ ನೆಲೆಗಳ ಭರವಸೆಯನ್ನು ಮೂಡಿಸುತ್ತದೆ.

೫. ಕನ್ನಡದಲ್ಲಿ ನಾಟಕ ಸಾಹಿತ್ಯ

ಕನ್ನಡ ಸಾಹಿತ್ಯ ಪ್ರಕಾರಗಳ ಪೈಕಿ ಅತ್ಯಂತ ತಡವಾಗಿ ಹುಟ್ಟಿದ್ದು ನಾಟಕ. ನಾಟಕ ಪ್ರಕಾರದ ಹುಟ್ಟು ಚಿಕ್ಕದೇವರಾಜ ಒಡೆಯರ ಕಾಲಕ್ಕೆ ಉಂಟಾಯಿತೆನ್ನಬಹುದು. ೧೬೮೦ರ ಸುಮಾರಿಗೆ ಒಡೆಯರ ಆಸ್ಥಾನ ಕವಿ ಸಿಂಗರಾರ್ಯ ರಚಿಸಿದ 'ಮಿತ್ರವಿಂದಾ ಗೋವಿಂದ' ಕನ್ನಡದ ಮೊಟ್ಟಮೊದಲ ನಾಟಕವೆಂದು ಹೇಳಬಹುದು. ಶ್ರೀ ಹರ್ಷನ ಸಂಸ್ಕೃತ ನಾಟಕ 'ರತ್ನಾವಳಿಯ' ರೂಪಾಂತರವಾದ ಈ ನಾಟಕದ ಭಾಷೆ ಹಳಗನ್ನಡ. ಮೂಲ ನಾಟಕದ ಉತ್ತಮಾಂಶಗಳು ಕನ್ನಡದಲ್ಲಿ ಮೂಡಿಲ್ಲವಾದರೂ, ಈವರೆಗೆ ದೊರೆತಿರುವ ಕನ್ನಡ ನಾಟಕಗಳಲ್ಲಿ ಮೊದಲನೆಯದು ಎಂಬ ಕಾರಣಕ್ಕಾಗಿ ಇದಕ್ಕೆ ಐತಿಹಾಸಿಕ ಮಹತ್ವ ಲಭಿಸಿದೆ. ಹನ್ನೊಂದನೆಯ ಶತಮಾನದ ಶಾಸನವೊಂದರಲ್ಲಿ ನಾಟಕಶಾಲೆಯ ಉಲ್ಲೇಖವಿದೆ. ಪಂಪ, ರನ್ನ, ದುರ್ಗಸಿಂಹ ಎಲ್ಲರೂ ನಾಟಕ ಪ್ರದರ್ಶನಗಳನ್ನು ಉಲ್ಲೇಖಿಸಿದ್ದಾರೆ. ಜಾನಪದ ರಂಗಭೂಮಿಗೆ ತನ್ನದೇ ಆದ ದೀರ್ಘ ಇತಿಹಾಸವಿದೆ. ಹೀಗಿದ್ದರೂ 'ಮಿತ್ರವಿಂದಾ ಗೋವಿಂದ' ನಾಟಕದ ಪೂರ್ವದಲ್ಲಿ ಸಂಸ್ಕೃತದಿಂದ ಯಾವುದಾದರೂ ನಾಟಕ ಅನುವಾದಗೊಂಡಿದ್ದಿರಬಹುದಾದರೂ ಯಾವ ನಾಟಕವೂ ದೊರಕಿಲ್ಲ.

ದುರ್ಗಸಿಂಹನು ಸ್ಮರಿಸಿದ ಕನ್ನಮ್ಮಯ್ಯನ ರಚನೆ 'ಮಾಳವೀ ಮಾಧವ' ಕೇಶಿರಾಜನ ಶಬ್ದ ಮಣಿದರ್ಪಣದಲ್ಲಿ ಪ್ರಸ್ತಾಪಿಸಲಾದ 'ಸುಭದ್ರಾಹರಣ' ಮತ್ತು 'ಪ್ರಬೋಧ ಚಂದ್ರ' ಕನ್ನಡ ನಾಟಕಗಳಿರಬೇಕೆಂಬುದು ವಿದ್ವಾಂಸರ ಅಭಿಪ್ರಾಯ. ಎರಡನೆಯ ನಾಗವರ್ಮನ ಕಾವ್ಯಾವಲೋಕನದಲ್ಲಿ ಕಾಳಿದಾಸನ 'ವಿಕ್ರಮೋರ್ವಶೀಯ' ನಾಟಕದ ಒಂದು ಪದ್ಯವೂ, ಶ್ರೀ ಹರ್ಷನ 'ನಾಗಾನಂದ' ಹಾಗೂ ಭವಭೂತಿಯ 'ಮಾಲತೀ ಮಾಧವ' ನಾಟಕಗಳ ಕೆಲವು ಪದ್ಯಗಳೂ ಕನ್ನಡಕ್ಕೆ ಬಂದಿದೆ. ಅಂದಿನ ಕಾಲಕ್ಕಾಗಲೇ ಸಂಸ್ಕೃತ ನಾಟಕಗಳು ಕನ್ನಡಕ್ಕೆ ಅನುವಾದ ಗೊಂಡಿರಬಹುದೆಂದು ಈ ಆಧಾರದ ಮೇಲೆ ಸಂಶೋಧಕರು ಊಹಿಸುತ್ತಾರೆ. ಮೈಸೂರಿನ ಕಂಠೀರವ ನರಸರಾಜರ ಅರಮನೆಯಲ್ಲಿ ನಾಟಕ ಶಾಲೆಯಿತ್ತೆಂದು 'ನರಸರಾಜ ವಿಜಯ' ದಿಂದ ತಿಳಿದುಬರುತ್ತದೆ.

ರತ್ನಾಕರವರ್ಣಿಯ 'ಭರತೇಶ ವೈಭವ'ದಲ್ಲಿ ನಾಟಕ ಎಂಬ ಪದದ ಬಳಕೆಯಾಗಿದೆ, ನಾಟಕಶಾಲೆಯ ವರ್ಣನೆಗಳಿವೆ. ಕೃಷ್ಣದೇವರಾಯನ ಕಾಲದಲ್ಲಿ ರತ್ನಖಚಿತ ನಾಟಕಶಾಲೆಗಳಿದ್ದುವೆಂದು ತಿಳಿದು ಬರುತ್ತದೆ. ಬಸವ ಪುರಾಣ, ಶೃಂಗಾರ ರತ್ನಾಕರ, ವಿವೇಕ ಚೂಡಾಮಣಿ, ಕಂಠೀರವ ವಿಜಯ, ಕರ್ಣಾಟ ಭಾರತ ಕಥಾಮಂಜರಿ ಮುಂತಾದ ಕೃತಿಗಳಲ್ಲಿ ನಾಟಕ ಎಂಬ ಪದದ ಬಳಕೆಯನ್ನು ಕಾಣಬಹುದಾಗಿದೆ. ಪಂಪನ ಮಾತಿನಲ್ಲಿ 'ಕೃತಾನುಕರಣಮೆ ನಾಟಕಂ' ರನ್ನನ 'ಗದಾಯುದ್ಧ' ಮತ್ತು ರಾಘವಾಂಕನ 'ಹರಿಶ್ಚಂದ್ರ ಕಾವ್ಯ'ಗಳಲ್ಲಿ ನಾಟಕೀಯ ಸನ್ನಿವೇಶಗಳೂ, ಉತ್ತಮ ಸಂಭಾಷಣೆಯೂ ಕಂಡುಬರುತ್ತದೆ. ಕನ್ನಡದ ಮೊದಲ ನಾಟಕ ನಮಗೆ ಹದಿನೇಳನೆಯ ಶತಮಾನದವರೆಗೆ ದೊರೆಯಲಿಲ್ಲವಾದರೂ, ಹತ್ತನೆಯ ಶತಮಾನದಿಂದಲೆ ನಾಟಕ ಪ್ರಕಾರ ಇದ್ದಿತು ಎಂದು ಗ್ರಹಿಸಬಹುದಾಗಿದೆ. ಹಾಗಿದ್ದರೂ, ಸಂಸ್ಕೃತ ಭಾಷೆಯ ಮೇಲುಗೈಯಿಂದಾಗಿ ಕನ್ನಡ ಭಾಷೆಯಲ್ಲಿ ಸ್ವತಂತ್ರ ನಾಟಕಗಳು ಮೂಡಲಿಲ್ಲ ಎಂಬ ಊಹೆಗೆ ಇದು ಎಡೆ ಮಾಡಿದೆ.

ಸಿಂಗರಾರ್ಯನ ನಂತರ ಹತ್ತೊಂಬತ್ತನೆಯ ಶತಮಾನದ ಕೊನೆಯವರೆಗೂ ಕನ್ನಡದ ಯಾವುದೇ ಸ್ವತಂತ್ರ ನಾಟಕವಾಗಲೀ ಅಥವಾ ಸಂಸ್ಕೃತ ಅನುವಾದವಾಗಲೀ ದೊರೆತಿಲ್ಲ. ೧೯ನೆಯ ಶತಮಾನದ ಕೊನೆಯ ವೇಳೆಗೆ ಚುರಮರಿ ಶೇಷಗಿರಿರಾಯರು ಮತ್ತು ಬಸಪ್ಪ ಶಾಸ್ತ್ರಿಗಳಿಂದ ಪ್ರಾರಂಭವಾಗಿ ಭಾಷಾಂತರ ನಾಟಕಗಳ ಸರಮಾಲೆಯೇ ಕನ್ನಡಕ್ಕೆ ಆಗಮಿಸಿತು. ೧೮೬೯ರಲ್ಲಿ ಬಂದ ಚುರುಮರಿಯವರ 'ಶಾಕುಂತಲಾ', 'ಮಿತ್ರವಿಂದಾ ಗೋವಿಂದ'ದ ನಂತರ ಬಂದ ಸಂಸ್ಕೃತ ನಾಟಕಗಳ ಕನ್ನಡಾನುವಾದಗಳ ಪೈಕಿ ಒಂದು ಮೈಲಿಗಲ್ಲೆನಿಸಿದೆ. ಇಲ್ಲಿಯವರೆಗೆ ದೊರೆತಿರುವ ಶಾಕುಂತಲದ ಅನುವಾದಗಳಲ್ಲಿ ಇದು ಮೊದಲನೆಯದು. ಗದ್ಯ ರೂಪದಲ್ಲಿ ಬಂದ ಶೂದ್ರಕನ 'ಮೃಚ್ಛಕಟಿಕ' ಮತ್ತು ಹೆನ್ರಿಫೀಲ್ಡಂಗ್‌ನ ಕೃತಿಯೊಂದನ್ನಾಧರಿಸಿ ರಚಿಸಲಾದ 'ಸುಂದರನಾಟಕ' ಎಂಬ ಏಕಾಂಕ ನಾಟಕ ಚುರುಮರಿಯವರ ಮತ್ತೆರಡು ಅನುವಾದಗಳು.

ಈವರೆಗೆ ದೊರೆತಿರುವ ಕನ್ನಡ ಭಾಷೆಯ ನಾಟಕ ಸಾಹಿತ್ಯವನ್ನು ದೃಷ್ಟಿಯಲ್ಲಿಸಿಕೊಂಡರೆ ಚುರುಮರಿ ಶೇಷಗಿರಿರಾಯರ ದ್ವಿತೀಯ ನಾಟಕಕಾರರೆಂಬ ಮಹತ್ವಕ್ಕೆ ಪಾತ್ರರಾಗುತ್ತಾರೆ.

ಮೈಸೂರಿನ ಚಾಮರಾಜ ಒಡೆಯರ ಕಾಲದಲ್ಲಿ ಪಾರಸೀ ಕಂಪನಿ ಪ್ರದರ್ಶಿಸಿದ ನಾಟಕಗಳಲ್ಲಿನ, ಅಂದಿಗೆ 'ಆಧುನಿಕ'ವೆನ್ನಬಹುದಾದ ಅಭಿನಯರಂಗ ಪರಿಕರಗಳು, ರಂಗಸಾಧ್ಯತೆಗಳು ಕನ್ನಡಿಗರಿಗೆ ಸ್ಫೂರ್ತಿಯಾದವು. ಮಹಾರಾಜರ ಆಶ್ರಯದಲ್ಲಿ ಶ್ರೀ ಚಾಮರಾಜೇಂದ್ರ ಕರ್ನಾಟಕ ನಾಟಕ ಸಭಾ ೧೮೮೨ರಲ್ಲಿ ಸ್ಥಾಪನೆಗೊಂಡಿತು. ಆಸ್ಥಾನ ಕವಿ ಬಸಪ್ಪಶಾಸ್ತ್ರಿಗಳು ನಾಟಕಗಳನ್ನು ರಚಿಸತೊಡಗಿದರು. ಸಂಸ್ಕೃತದಿಂದ ಕನ್ನಡಕ್ಕೆ ಶಾಕುಂತಲಾ, ವಿಕ್ರಮೋರ್ವಶೀಯ, ರತ್ನಾವಳಿ, ಉತ್ತರರಾಮ ಚರಿತೆ, ಚಂಡಕೌಶಿಕ, ಮಾಲತೀಮಾಧವ ಮುಂತಾದ ನಾಟಕಗಳ ಸರಮಾಲೆಯೇ ಆಗಮಿಸಿತು. ಇವರು ಇಂಗ್ಲಿಷ್ ನಾಟಕ ಕ್ಷೇತ್ರಕ್ಕೂ ಕೈಹಾಕಿ ಷೇಕ್ಸ್‌ಪಿಯರನ 'ಒಥೆಲೊ' ನಾಟಕವನ್ನು 'ಶೂರಸೇನ ಚರಿತ್ರೆ' ಎಂದು ಅನುವಾದಿಸಿದರು. ಇವರ ಇಂಗ್ಲಿಷ್ ನಾಟಕದ ಅನುವಾದಕ್ಕಿಂತ ಸಂಸ್ಕೃತ ಅನುವಾದಗಳು ಮೆಚ್ಚುಗೆ ಗಳಿಸಿದವು. ಅದರಲ್ಲಿಯೂ 'ಕರ್ಣಾಟಕ ಶಾಕುಂತಲಾ ನಾಟಕಂ' (೧೮೯೧) ಶ್ರೇಷ್ಠ ಅನುವಾದ ಎಂಬ ಪ್ರಶಂಸೆಗೆ ಪಾತ್ರವಾಯಿತು. ಮೂಲ ನಾಟಕದ ಆಳ ವಿಸ್ತಾರಗಳು, ಸೌಂದರ್ಯ ಸತ್ವಗಳು ಅನುವಾದದಲ್ಲೂ ಪ್ರತಿಫಲಿಸಿ ಈ ಅನುವಾದ ಕನ್ನಡದ್ದೇ ಎನ್ನುವಷ್ಟು ಸಮರ್ಪಕವಾಗಿದೆ. ಭಾಷಾಂತರಕಲೆಗೆ ಒಂದು ಉತ್ತಮ ನಿದರ್ಶನವಾಗಿ ಈ ಕೃತಿ ನಿಲ್ಲಬಲ್ಲುದಾಗಿದೆ. ಅನುವಾದ ಕಾರ್ಯದಲ್ಲಿ ಮತ್ತೊಂದು ಮುಖ್ಯ ಹೆಸರು ಅಳಸಿಂಗರಾಚಾರ್ಯ. ಭಾಸನ ಅತ್ಯುತ್ತಮ ನಾಟಕವೆನಿಸಿದ 'ಸ್ವಪ್ನವಾಸವದತ್ತ' ಮಾತ್ರವಲ್ಲದೆ ಆತನ ಪಂಚರಾತ್ರ ನಾಟಕವನ್ನೂ ಮೂಲಕ್ಕೆ ಧಕ್ಕೆಯಾಗದಂತೆ ಕನ್ನಡಕ್ಕೆ ಅನುವಾದಿಸಿದ್ದಾರೆ.

ಶ್ರೇಷ್ಠ ಸಂಸ್ಕೃತ ನಾಟಕಗಳಲ್ಲಿ ಒಂದಾದ ಶ್ರೀ ಹರ್ಷನ ನಾಗಾನಂದ ಮೈಸೂರಿನ ಅನಂತನಾರಾಯಣಶಾಸ್ತ್ರಿಗಳಿಂದ ಕನ್ನಡಕ್ಕೆ ಅನುವಾದಗೊಂಡಿತು. ಮೂಲ ನಾಟಕದ ಜಾಡನ್ನು ಅನುಸರಿಸಿ ಉತ್ತಮ ಭಾಷೆ, ಶೈಲಿಗಳನ್ನು ಬಳಸಿ ಈ ನಾಟಕವನ್ನು ಭಾಷಾಂತರಿಸಲಾಗಿದೆ. ಕನ್ನಡಕ್ಕೆ ಬಂದಿರುವ ಮುಖ್ಯ ನಾಟಕಗಳಲ್ಲೊಂದಾದ ಶೂದ್ರಕನ 'ಮೃಚ್ಛಕಟಿಕ'ದಲ್ಲಿ ಕೆಲವು ಮಾರ್ಪಾಡುಗಳನ್ನು ತಂದು ಅನುವಾದಿಸಿದವರು ನಂಜನಗೂಡು ಸುಬ್ಬಾಶಾಸ್ತ್ರಿಗಳು.

ಸಂಸ್ಕೃತದಿಂದ ಕಾಳಿದಾಸ, ಭಾಸ, ಭಟ್ಟನಾರಾಯಣ, ಶೂದ್ರಕ, ಶ್ರೀಹರ್ಷ ಮೊದಲಾದವರ ಶ್ರೇಷ್ಠ ಸಂಸ್ಕೃತ ನಾಟಕಗಳನ್ನು ಎಲ್. ಗುಂಡಪ್ಪ ಎಸ್.ವಿ. ಪರಮೇಶ್ವರ ಭಟ್ಟ, ಸಿ.ಪಿ. ಕೃಷ್ಣಕುಮಾರ್, ಎಂ. ವಾಸುದೇವಭಟ್ಟ, ಕೆ.ಕೃಷ್ಣಮೂರ್ತಿ, ಗಣಪತಿ ಮೊಳಿಯಾರ್, ಪಂಡಿತ ಕವಲಿ ಮುಂತಾದವರು ಕನ್ನಡಕ್ಕೆ ಭಾಷಾಂತರಿಸಿದ್ದಾರೆ. ತಮಗೆ ಮಹತ್ತರವೆನಿಸಿದ ಕೃತಿಗಳನ್ನು ಕೈಗೆತ್ತಿಕೊಂಡು, ಮೂಲ ನಾಟಕಗಳನ್ನು ಆಳವಾಗಿ ಅಭ್ಯಸಿಸಿ, ನಾಟಕಗಳ ಉದ್ದೇಶಕ್ಕೆ ಧಕ್ಕೆ ಉಂಟಾಗದಂತೆ, ಒಮ್ಮೊಮ್ಮೆ ಕೆಲವು ಮಾರ್ಪಾಟುಗಳೊಂದಿಗೆ ಉತ್ತಮ ಭಾಷೆ, ನಿರೂಪಣೆಗಳ ಮೂಲಕ ಕನ್ನಡಕ್ಕೆ ತಂದಿರುವುದು ಈ ಭಾಷಾಂತಕಾರರ ಪ್ರತಿಭೆಗೆ ಸಾಕ್ಷಿಯಾಗಿದೆ.

ಇಂಗ್ಲಿಷ್‌ನಿಂದ ಕನ್ನಡಕ್ಕೆ ಬಂದ ನಾಟಕಗಳಲ್ಲಿ ಕೆಲವರು ಮೂಲವನ್ನೇ ಅನುಸರಿಸಿದ್ದರೆ, ಮತ್ತೆ ಕೆಲವರು ರಂಗಭೂಮಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ಕೆಲವು ಬದಲಾವಣೆಗಳನ್ನು ತಂದರು, ಕೆಲವು ರೂಪಾಂತರಗಳೂ ಬಂದವು. ಕೆರೂರು ವಾಸುದೇವಚಾರ್ಯರು 'ಎ ಮಿಡ್ ಸಮರ್ ನೈಟ್ಸ್ ಡ್ರೀಮ್' ಅನ್ನು 'ವಸಂತಯಾಮಿನಿ ಸ್ವಪ್ನ' ಎಂಬ ಹೆಸರಿನಿಂದ ತಂದರು. ೧೮೯೦ರ ಸುಮಾರಿನಲ್ಲಿ ಎಂ.ಎಲ್. ಶ್ರೀಕಂಠೇಶಗೌಡರು ಷೇಕ್ಸ್‌ಪಿಯರ್‌ನ 'ಮ್ಯಾಕ್‌ಬೆತ್' ಹಾಗೂ 'ಎ ಮಿಡ್ ಸಮ್ಮರ್ ನೈಟ್ಸ್ ಡ್ರೀಮ್' ನಾಟಕಗಳನ್ನು 'ಪ್ರತಾಪರುದ್ರದೇವ' ಮತ್ತು 'ಪ್ರಮೀಳಾರ್ಜುನೀಯ' ಎಂಬ ಹೆಸರಿನಲ್ಲಿ ಕನ್ನಡಕ್ಕೆ ತಂದಿದ್ದಾರೆ. 'ಪ್ರತಾಪರುದ್ರದೇವ' ನಾಟಕದಲ್ಲಿ ಪಾತ್ರಗಳ ಹೆಸರುಗಳನ್ನು ಬದಲಾಯಿಸಲಾಗಿದೆ, ಆದರೆ ಮೂಲದ ಭಾವಗಳನ್ನು ಉಳಿಸಿಕೊಳ್ಳಲಾಗಿದೆ. ಹೀಗಾಗಿ ಈ ನಾಟಕದಲ್ಲಿ ಅಸ್ವಾಭಾವಿಕತೆ ತಲೆದೋರಿದೆ. 'ಪ್ರಮೀಳಾರ್ಜುನೀಯ'ದಲ್ಲಿ ಮೂಲವನು ಉಳಿಸಿಕೊಂಡು, ಸಂಭಾಷಣೆಗಳು ಮತ್ತು ಹೆಸರುಗಳನ್ನು ಮಾರ್ಪಡಿಸಿದ್ದಾರೆ. ಈ ಎರಡೂ ನಾಟಕಗಳನ್ನು ಶ್ರೀಕಂಠೇಶಗೌಡರು ರಂಗಭೂಮಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ರಚಿಸಿರುವಂತೆ ತೋರುತ್ತದೆ. ಡಿ.ವಿ.ಜಿ.ಯವರ 'ಮ್ಯಾಕ್‌ಬೆತ್' ನಾಟಕದ ಅನುವಾದ ಉತ್ತಮವಾಗಿದ್ದು ಕಾವ್ಯವಿದ್ದಲ್ಲಿ ಕಾವ್ಯ. ಗದ್ಯವಿದ್ದಲ್ಲಿ ಗದ್ಯವನ್ನು ಉಳಿಸಿಕೊಂಡಿದ್ದಾರೆ.

ಬಿ.ಎಂ.ಶ್ರೀಯವರ 'ಪಾರಸಿಕರು', 'ಎಸ್.ಜಿ. ಶಾಸ್ತ್ರಿಯವರ 'ಸಾಕ್ರಟೀಸನ ಕೊನೆಯ ದಿನಗಳು', 'ಆರ್ಯಕ' ಮತ್ತು 'ಸೂತ್ರದ ಬೊಂಬೆ' ಮುಂತಾದವು ಒಳ್ಳೆಯ ಅನುವಾದಗಳ ಸಾಲಿಗೆ ಸೇರುತ್ತದೆ. ಷೇಕ್ಸ್‌ಪಿಯರ್‌ನ ಒಥೆಲೋ ನಾಟಕ ಗುಂಡೋ ಕೃಷ್ಣ ಚುರುಮುರಿಯವರಿಂದಲೂ, ರೋಮಿಯೋ ಜ್ಯೂಲಿಯಟ್ 'ರಾಮವರ್ಮ ಲೀಲಾವತಿ' ಎಂಬ ಹೆಸರಿನಿಂದ ಸಿ. ಆನಂದರಾಯರಿಂದಲೂ ಅನುವಾದಗೊಂಡಿವೆ. ಗ್ರೀಕ್ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ವಿಜೃಂಭಿಸಿದ 'ಟ್ರಾಜೆಡಿ' ಎಂಬ ನಾಟಕ ರೂಪದ ದುರಂತದ ಪರಿಕಲ್ಪನೆಯೇ ಕನ್ನಡದಲ್ಲಿ ಇರಲಿಲ್ಲವೆಂಬುದು ಗಮನಾರ್ಹ ಸಂಗತಿ. 'ರಾಮವರ್ಮ ಲೀಲಾವತಿ' ಸಾವಿನಿಂದ ಅಂತ್ಯಗೊಳ್ಳದೆ ಕಡೆಯಲ್ಲಿ ಅವರಿಬ್ಬರೂ ದೈವಕೃಪೆಯಿಂದ ಜೀವ ಪಡೆಯುತ್ತಾರೆ. ಕನ್ನಡಕ್ಕೆ ಟ್ರಾಜಿಡಿಯನ್ನು ತಮ್ಮ 'ಗದಾಯುದ್ಧ ನಾಟಕ' 'ಅಶ್ವತ್ಥಾಮನ್'ಗಳ ಮೂಲಕ ಪರಿಚಯಿಸಿದವರು ಬಿ.ಎಂ.ಶ್ರೀ. ಎಂಬುದು ಗಮನಾರ್ಹ ಸಂಗತಿ. ಆನಂದರಾಯರ ಹ್ಯಾಮ್ಲೆಟ್ ಅನುವಾದವೂ ಸೇರಿದಂತೆ, ಈ ಎಲ್ಲ ಕೃತಿಗಳಲ್ಲೂ ಪಾತ್ರಗಳ

ಹೆಸರುಗಳು ರೂಪಾಂತರಗೊಂಡಿವೆ. 'ರಾಮವರ್ಮ ಲೀಲಾವತಿ' ರಂಗ ಭೂಮಿಯಲ್ಲಿ ಬಹಳ ಜನಪ್ರಿಯತೆ ಗಳಿಸಿತೆಂದು ತಿಳಿದುಬರುತ್ತದೆ. ಮೂಸ್ತಿಯವರು 'ಒಥೆಲೋ' ನಾಟಕವನ್ನು 'ಶೂರಸೇನೆ' ಎಂದು ವಿ. ಸೀತಾರಾಮಯ್ಯನವರು ಬರ್ನಾಡ್‌ಷಾನ 'ಪಿಗ್ ಮೇಲಿಯೆನ್' ನಾಟಕವನ್ನು ಅದೇ ಹೆಸರಿನಲ್ಲೂ ಅನುವಾದಿಸಿದ್ದಾರೆ.

ಷೇಕ್ಸ್‌ಪಿಯರ್‌ನ 'ಟೆಂಪೆಸ್ಟ್' ನಾಟಕ ಕುವೆಂಪುರವರ ಕೈಯಲ್ಲಿ ಮಾರ್ಪಾಟು ಹೊಂದಿ ಉತ್ತಮವಾಗಿ ಅನುವಾದಗೊಂಡು 'ಬಿರುಗಾಳಿ' ಎಂಬ ಕೃತಿಯಾಗಿ ಬೆಳಕುಕಂಡಿತು. 'ಹ್ಯಾಮ್ಲೆಟ್' ನಾಟಕವನ್ನು ಆಧರಿಸಿ ಬರೆದ ಕುವೆಂಪುರವರ 'ರಕ್ತಾಕ್ಷಿ' ಕನ್ನಡದ ಅತ್ಯುತ್ತಮ ಐತಿಹಾಸಿಕ ನಾಟಕಗಳ ಸಾಲಿಗೆ ಸೇರಿತು. ಲಂಕೇಶ್ ಅವರ 'ಈಡಿಪಸ್' ಹಾಗೂ 'ಅಂತಿಗೊನೆ' ಮಹತ್ವದ ಭಾಷಾಂತರ ಕೃತಿಗಳೆನಿಸಿವೆ. ಆಡು ಮಾತಿಗೆ ಹತ್ತಿರವಾದ ಭಾಷೆಯನ್ನು ಬಳಸಿದ್ದರೂ, ನಾಟಕ ಒದಗಿಸುವ ಅನುಭವದ ದೃಷ್ಟಿಯಿಂದ ಇದು ಮೂಲಕ್ಕೆ ನಿಕಟವಾಗಿದೆ ಎಂದೇ ಹೇಳಬಹುದು. ಕೆ.ವಿ. ರಾಘವಾಚಾರ್ಯರಿಂದ ಅನುವಾದಗೊಂಡ 'ಅಂತಿಗೊನೆ' ಹಳಗನ್ನಡ ಭಾಷೆಯನ್ನು ಬಳಸಿಕೊಂಡಿದೆ. ಅಮೆರಿಕನ್ ನಾಟಕಕಾರ ಟೆನೆಸಿ ವಿಲಿಯಮ್ಸ್‌ನ 'ಗ್ಲಾಸ್ ಮೆನಾಜರಿ'ಯನ್ನು ಎಚ್.ಕೆ. ರಾಮಚಂದ್ರ ಮೂರ್ತಿಯವರು ಅನುವಾದಿಸಿ 'ಗಾಜಿನ ಗೊಂಬೆ' ಎಂದು ಹೆಸರಿಸಿದ್ದಾರೆ. ಇದು ಕನ್ನಡದ ಸ್ವತಂತ್ರ ನಾಟಕವೆಂಬಂತೆ ರಚಿತವಾಗಿದೆ. ಕೆ.ಎಸ್. ನಿಸಾರ್ ಅಹಮದ್‌ರವರು ಮಾಡಿರುವ ಷೇಕ್ಸ್‌ಪಿಯರ್‌ನ 'ಎ ಮಿಡ್ ಸಮ್ಮರ್ ನೈಟ್ ಡ್ರೀಮ್' 'ಒಥೆಲೋ' ರಾಮಚಂದ್ರ ದೇವರು ಮಾಡಿರುವ 'ಮ್ಯಾಕ್‌ಬೆತ್' ಮತ್ತು ಎಚ್.ಎಸ್. ಶಿವಪ್ರಕಾಶರ 'ಕಿಂಗ್‌ಲಿಯರ್' ಇತ್ತೀಚೆಗೆ ಬಂದಿರುವ ಕೆಲವು ಮುಖ್ಯ ಅನುವಾದ ನಾಟಕಗಳು.

ಯಶಸ್ವಿಯಾಗಿ ರೂಪಾಂತರಗೊಂಡು ಪ್ರಪಂಚದ ವಿವಿಧ ಭಾಗಗಳಿಂದ ಕನ್ನಡಕ್ಕೆ ಬಂದಿರುವ ಕೃತಿಗಳಲ್ಲಿ ಎ.ಎನ್. ಮೂರ್ತಿರಾಯರ 'ಆಷಾಢಭೂತಿ' ಪರ್ವತವಾಣಿ ಅವರ 'ಬಹದ್ದೂರ್ ಗಂಡ', 'ವಾರ್ಷಿಕೋತ್ಸವ', 'ಉಂಡಾಡಿ ಗುಂಡ' ಮುಂತಾದವು ಉಲ್ಲೇಖಾರ್ಹ ಕೃತಿಗಳು.

ಮೊದಮೊದಲು ಕನ್ನಡದಲ್ಲಿ ಬಂದ ನಾಟಕಗಳು ಸಂಸ್ಕೃತದಿಂದ ಭಾಷಾಂತರಗೊಂಡು ಬಂದ ಪೌರಾಣಿಕ ನಾಟಕಗಳೇ ಆಗಿದ್ದವು. ನಂತರ ಬಂದ ಸ್ವತಂತ್ರ ನಾಟಕಗಳು ಕೂಡ ಈ ಮಾದರಿಯ ಮೇಲೆಯೇ ರೂಪಿತವಾದವು. ಕಾಲಕ್ರಮೇಣ ಕನ್ನಡಾಭಿಮಾನದಿಂದಾಗಿ ಮತ್ತು ಕನ್ನಡ ರಂಗಭೂಮಿಗೆ ಜೀವ ತುಂಬುವ ಅಭಿಲಾಷೆಯಿಂದಾಗಿ, ಕೆಲವರು ಸ್ವತಂತ್ರವಾಗಿ ಪೌರಾಣಿಕ ನಾಟಕಗಳನ್ನು ರಚಿಸಿದರು. ಇವರಲ್ಲಿ ಮೊದಲಿಗರು ಶಾಂತಕವಿಗಳು. ಇವರ ನಾಟಕಗಳು ಬಯಲಾಟಗಳಿಗೂ ನಾಟಕಗಳಿಗೂ ನಡುವೆ ಬರುತ್ತವೆ. ಗಿರಿಜಾಕಲ್ಯಾಣ, ಉಷಾಹರಣ, ವತ್ಸಲಾಹರಣ ಇಂತಹ ನಾಟಕಗಳನ್ನು ಪೌರಾಣಿಕ ವಸ್ತುವನ್ನಾಧರಿಸಿ ಶಾಂತಕವಿಗಳು ರಚಿಸಿದರು. ಹೊಸ ದೃಷ್ಟಿಯಾಗಲಿ, ರಚನಾ ಕೌಶಲ್ಯವಾಗಲಿ ಕಂಡುಬರುವುದಿಲ್ಲವಾದರೂ, ಕನ್ನಡದಲ್ಲಿ ಬಂದ ಮೊದಲ ಸ್ವತಂತ್ರ ರಂಗನಾಟಕಗಳೆಂಬ ದೃಷ್ಟಿಯಿಂದ ಇವು ಮಹತ್ವ ಪಡೆಯುತ್ತವೆ.

ರಂಗಭೂಮಿಗಾಗಿಯೇ ನಾಟಕ ಬರೆದವರಲ್ಲಿ ಬೆಳ್ಳಾವೆ ನರಹರಿಶಾಸ್ತ್ರಿಗಳದು ಮರೆಯಲಾಗದ ಹೆಸರು. ಕೃಷ್ಣಲೀಲಾ, ರುಕ್ಮಿಣೀ ಸ್ವಯಂವರ, ಶ್ರೀ ಕೃಷ್ಣಾ ಪಾರಿಜಾತ, ಮಾರ್ಕಂಡೇಯ, ತುಕಾರಾಂ ಮುಂತಾದ ರಂಗ ನಾಟಕಗಳು ರಂಗದ ಮೇಲೆ ಯಶಸ್ವೀ ಪ್ರಯೋಗಗಳೆನಿಸಿದವು. ಇವರ ದಾರಿಯನ್ನೇ ಅನುಸರಿಸಿ, ನಂಜನಗೂಡು ಶ್ರೀಕಂಠಶಾಸ್ತ್ರಿಗಳು ಸೀತಾಪರಿಣಯ, ಅಭಿಜ್ಞಾನ ಪ್ರಧಾನ, ಸೀತಾ ಸ್ವರ್ಣಮೃಗ, ರಾಜಸೂಯಯಾಗ ಮೊದಲಾದ ಪಾಂಡಿತ್ಯಪೂರ್ಣ ನಾಟಕಗಳನ್ನು ರಚಿಸಿದರು.

ಬಿ. ಪುಟ್ಟಸ್ವಾಮಯ್ಯನವರೂ ರಂಗಭೂಮಿಗಾಗಿಯೇ ನಾಟಕ ರಚಿಸಿದವರು. ಸತಿ ತುಳಸಿ, ಕುರುಕ್ಷೇತ್ರ, ದಶಾವತಾರ, ಅಕ್ಕಮಹಾದೇವಿ, ಗೌತಮಬುದ್ಧ, ಷಹಜಹಾನ್ ಅವರ ಕೆಲವು ಮುಖ್ಯ ನಾಟಕಗಳು. ಕುರುಕ್ಷೇತ್ರ ಮತ್ತು ದಶಾವತಾರ ನಾಟಕಗಳು ೨೦೦೦ಕ್ಕೂ ಹೆಚ್ಚು ಪ್ರಯೋಗಗಳನ್ನು ಕಂಡ ಪೌರಾಣಿಕ ನಾಟಕಗಳೆಂದು ವೃತ್ತಿರಂಗಭೂಮಿಯ ಇತಿಹಾಸದಲ್ಲಿ ದಾಖಲಾಗಿವೆ. ಪೌರಾಣಿಕ ಮತ್ತು ಐತಿಹಾಸಿಕ ವಸ್ತುವನ್ನೇ ಇವರು ಬಳಸಿದ್ದರೂ, ಸಂಪ್ರದಾಯಿಕ ನಾಟಕಗಳ ಚೌಕಟ್ಟಿನಲ್ಲೇ ಹೊಸ ದೃಷ್ಟಿಕೋನವೊಂದನ್ನು ಪ್ರೇಕ್ಷಕರಲ್ಲಿ ಬಿತ್ತಲು ಪ್ರಯತ್ನಿಸಿದರು.

ಗ್ರೀಕ್, ಇಂಗ್ಲಿಷ್ ಮೊದಲಾದ ಸಾಹಿತ್ಯಗಳನ್ನು ಅಭ್ಯಸಿಸಿದವರು ಅವುಗಳ ಪ್ರಭಾವಕ್ಕೆ ಒಳಗಾದವರು. ಓದಲೂ, ಆಡಲೂ ಸಾಧ್ಯವಾಗುವಂಥ ರೂಪಾಂತರಗಳು ಅನುವಾದಗಳು ಮತ್ತು ಸ್ವತಂತ್ರ ನಾಟಕಗಳು ಮೂಡಿಬಂದವು. ಬಿ.ಎಂ.ಶ್ರೀ, ಕುವೆಂಪು, ಮಾಸ್ತಿ, ಜಿ.ಪಿ. ರಾಜರತ್ನಂ, ಎಲ್ ಗುಂಡಪ್ಪ, ಡಿ.ವಿ.ಜಿ., ವಿ.ಸೀ., ಕಡಂಗೋಡ್ಲು ಶಂಕರಭಟ್ಟ ಮೊದಲಾದವರು ರಚಿಸಿದ ನಾಟಕಗಳು ಈ ಗುಂಪಿಗೆ ಸೇರುತ್ತವೆ. ಗದಾಯುದ್ಧ, ಅಶ್ವತ್ಥಾಮನ್ ಮತ್ತು ಪಾರಸಿಕರು ಇಂತಹ ಆಧುನಿಕ ನಾಟಕಗಳು ಇಂಗ್ಲಿಷ್, ಗ್ರೀಕ್ ಮತ್ತು ಕನ್ನಡ ಸಾಹಿತ್ಯಗಳ ನಿಕಟ ಪರಿಚಯವಿದ್ದ ಬಿ.ಎಂ.ಶ್ರೀ ಯವರ ಲೇಖನಿಯಿಂದ ಮೂಡಿಬಂದವು. 'ಅಶ್ವತ್ಥಾಮನ್' ಸೋಫೋಕ್ಲಿಸನ 'ಅಯಾಸ್' ನಾಟಕದ ರೂಪಾಂತರ ಬಿ.ಎಂ.ಶ್ರೀಯವರು 'ಗದಾಯುದ್ಧ', 'ಅಶ್ವತ್ಥಾಮನ್' ನಾಟಕಗಳನ್ನು 'ರುದ್ರನಾಟಕ'ಗಳೆಂದು ಕರೆದರು. 'ಟ್ರಾಜಿಡಿ' ಎಂಬ ನಾಟಕರೂಪದ ದುರಂತದ ಪರಿಕಲ್ಪನೆಯನ್ನು ಬಿ.ಎಂ.ಶ್ರೀ. ಯವರು ಈ ನಾಟಕಗಳ ಮೂಲಕ ಕನ್ನಡಕ್ಕೆ ತಂದರು.

ಹವ್ಯಕರ ಆಡುಭಾಷೆಯಲ್ಲಿ ರಚಿತವಾದ 'ಇಗ್ಗಪ್ಪ ಹೆಗಡೇ ವಿವಾಹ ಪ್ರಹಸನವು' (೧೮೮೭) ಉತ್ತರ ಕನ್ನಡ ಜಿಲ್ಲೆಯ ಕೊಡುಗೆ. ಹೊಸ ಕನ್ನಡದ ಮೊದಲ ಸಾಮಾಜಿಕ ನಾಟಕ ಎಂಬ ಚಾರಿತ್ರಿಕ ಮಹತ್ವ ಈ ಕೃತಿಗೆ ಲಭಿಸಿದೆ. ಸಾಮಾಜಿಕ ನಾಟಕ ಕ್ಷೇತ್ರದಲ್ಲಿ ಕಾರ್ಯಪ್ರವೃತ್ತರಾದವರಲ್ಲಿ ಕೈಲಾಸಂ ಮತ್ತು ಶ್ರೀರಂಗರು ಅಗ್ರಗಣ್ಯರು. ದಿನಬಳಕೆಯ ಭಾಷೆಯನ್ನು ಬಳಸಿಕೊಂಡು ಗದ್ಯನಾಟಕಗಳನ್ನು ರಚಿಸುವ ಮೂಲಕ ನಾಟಕ ಪ್ರಪಂಚದಲ್ಲಿ ಹೊಸ ಹಾದಿಯನ್ನು ತೆರೆದ ಕೀರ್ತಿ ಕೈಲಾಸಂರವರದು. ಅವರ ಸೃಷ್ಟಿ ಪ್ರತಿಕೃತಿ ವಿಧಾನಕ್ಕೆ ಹತ್ತಿರವಾದುದು. ಕೈಲಾಸಂ ಮತ್ತು ಶ್ರೀರಂಗರಿಬ್ಬರೂ ಇಂಗ್ಲೆಂಡಿನಲ್ಲಿ ಶಿಕ್ಷಣ ಪಡೆದು ಇಬ್ಸನ್ನನ ದುರಂತ ನಾಟಕಗಳು ಮತ್ತು ಬರ್ನಾಡ್ ಷಾನ ಗಂಭೀರ ವೈನೋದಿಕಗಳ ಪ್ರಭಾವಕ್ಕೆ ಒಳಗಾಗಿದ್ದವರು. ಇಬ್ಸನ್, ಬರ್ನಾಡ್ ಷಾ ಮುಂತಾದ ನಾಟಕಕಾರರ ಮಾದರಿಯಲ್ಲಿ ಇವರ ಕೃತಿರಚನೆ ಮುಂದುವರಿಯಿತು. ಮಧ್ಯಮವರ್ಗದವರ ಜೀವನ ಮತ್ತು ಸಮಸ್ಯೆಗಳನ್ನು ಟಿ.ಪಿ. ಕೈಲಾಸಂ ಯಶಸ್ವಿಯಾಗಿ ಚಿತ್ರಿಸಿದರು. ಹಾಸ್ಯದೃಷ್ಟಿ ವ್ಯಂಗ್ಯಗಳಿಂದ ಕೂಡಿದ, ಅಂತಃಕರಣ ತುಂಬಿದ ವಿಶಾಲ ಹೃದಯದಿಂದ ಸಮಾಜವನ್ನು ನೋಡುವ ಟಿ.ಪಿ. ಕೈಲಾಸಂ ಅವರ ಪರಿ ವಿಶಿಷ್ಟವಾದುದು. ಕೈಲಾಸಂರವರ ಹಾಸ್ಯದ ಸೃಷ್ಟಿಯಲ್ಲಿ ಕರುಣೆಯ ಶ್ರುತಿ ಹಿನ್ನಲೆಯು ನಿರಂತರವಾಗಿ ಮಿಡಿಯುತ್ತಿರುತ್ತದೆ. ಮಧ್ಯಮ ವರ್ಗದವರ ಆಡುಮಾತು ರಂಗಕ್ಕೇರಿತು.

ಸುಬ್ಬಣ್ಣ, ಪಾರ್ವತಮ್ಮ, ಅಹೋಬ್ಳು, ಸಾವಿತ್ರಮ್ಮ ಇವರುಗಳು ರಂಗದ ಮೇಲೆ ಕಾಣಿಸಿಕೊಂಡರು. ಈ ದೃಷ್ಟಿಯಿಂದ ರಂಗಭೂಮಿಯ ಇತಿಹಾಸದಲ್ಲಿ ಇದೊಂದು ಕ್ರಾಂತಿಯೇ ಆಯಿತು. 'ಟೊಳ್ಳು-ಗಟ್ಟಿ' (೧೯೨೩) ಕೈಲಾಸಂರವರ ಪ್ರಥಮ ನಾಟಕ. 'ನಂ.ಕಂಪ್ನಿ', 'ಹೋಂ ರೂಲು' (೧೯೩೦), 'ಬಂಡ್ವಾಳ್ವಿಲ್ಲದ ಬಡಾಯಿ' (೧೯೪೭), ಪಾತು ಪೌರ್‍ಕನೆ, ಸಾತು ಪೌರ್‍ಕನೆ, ಅಮ್ಮಾವ್ರ ಗಂಡ, (೧೯೩೯) 'ಸೂಳೆ' (೧೯೪೫). 'ಬಹಿಷ್ಕಾರ' ಮೊದಲಾದವು ಇವರ ಮುಖ್ಯ

ನಾಟಕಗಳು. ಮಹಾಭಾರತದ ಪಾತ್ರವೊಂದನ್ನು ಆಧರಿಸಿ ರಚಿಸಿದ 'ಕೀಚಕ' ಒಂದು ನವೀನ ಪ್ರಯೋಗ.

ಕೈಲಾಸಂ ಷಾನ ಪ್ರಭಾವಕ್ಕೆ ತೀವ್ರವಾಗಿ ಒಳಗಾಗಿದ್ದರೂ, ಕೈಲಾಸಂನಪಾತ್ರಗಳು ಷಾನ ಪಾತ್ರಗಳಿಗಿಂತಲೂ ಹೆಚ್ಚು ತೀವ್ರವಾದ ಮಾನವೀಯ ನೆಲೆಯಿಂದ ಹುಟ್ಟಿದಂಥವು. ಪಾತ್ರಗಳಿಗನುವಾದ ಭಾಷೆಯನ್ನು ನೀಡುತ್ತ, ಕೈಲಾಸಂ ತಮ್ಮ ಭಾಷಾ ಸಾಮರ್ಥ್ಯ ಮತ್ತು ಭಾಷೆಯ ಬಳಕೆಯಲ್ಲಿ ವೈವಿಧ್ಯತೆಯನ್ನು ತೋರಿದ್ದಾರೆ. ನಾಟಕವನ್ನು ಬದುಕಿಗೆ ಅತ್ಯಂತ ನಿಕಟವಾಗಿ ತಂದಿರಿಸಿದ ಕೈಲಾಸಂಗೆ, ತೋರಿಕೆ ಮತ್ತು ನೈಜ ಸ್ಥಿತಿಯ ನಡುವಣ ವೈರುಧ್ಯವನ್ನೂ, ದ್ವಂದ್ವವನ್ನೂ ಚಿತ್ರಿಸುವುದು ಮುಖ್ಯ ಕಾಳಜಿಗಳಲ್ಲೊಂದಾಗಿತ್ತು. ಅಸಹಾಯಕ ವಿಧವೆಯರು, ತುಳಿತಕ್ಕೆ ಒಳಗಾದ ಗೃಹಿಣಿಯರು, ಹೃದಯವಂತರು, ಬಂಡವಾಳವಿಲ್ಲದೆ ಬಡಾಯಿ ಕೊಚ್ಚುವವರು, ಸೋಗು ಹಾಕುವವರು, ಇವರೆಲ್ಲರೂ ರಂಗದ ಮೇಲೇರಿದ ಕಾರಣ ನಾಟಕಗಳಲ್ಲಿ ಮನೋರಂಜನೆ – ಗಂಭೀರ ಚಿಂತನೆಗಳು ಏಕಕಾಲಕ್ಕೆ ಬಂದವು.

ಶ್ರೀರಂಗರು ಸಾಮಾಜಿಕ ಸಮಸ್ಯೆಗಳನ್ನು ಕೈಗೆತ್ತಿಕೊಂಡು ತೀಕ್ಷ್ಣವಾದ ವಿಮರ್ಶೆಗೆ ಗುರಿಪಡಿಸಿದರು. ಸಮಾಜದ ದೌರ್ಜನ್ಯವನ್ನು ಕಂಡು ಕೆರಳುವ, ಕೆಟ್ಟದ್ದನ್ನು ಬೇರುಸಹಿತ ನಾಶಗೊಳಿಸಬೇಕೆಂಬ ಕ್ರಾಂತಿಕಾರಕ ಧೋರಣೆ ಅವರದು. ಸಮಾಜದ ಪುನರ್ ನಿರ್ಮಾಣ ಇವರ ತೀವ್ರ ಕಾಳಜಿಯಾಗಿದ್ದು, ನ್ಯಾಯ, ಅನ್ಯಾಯ, ಹಳೆಯದು, ಹೊಸದು, ಮುಪ್ಪು ಯೌವನ ಮುಂತಾದ ದ್ವಂದ್ವಗಳನ್ನು ಇವರು ನಾಟಕಗಲ್ಲಿ ಚಿತ್ರಿಸಿದರು.

೧೯೩೦ರಲ್ಲಿ ಬರೆದ 'ಉದರ ವೈರಾಗ್ಯ' ಶ್ರೀರಂಗರ ಮೊದಲ ನಾಟಕ. ಅವರ 'ಹರಿಜನ್ವಾರ' ಒಂದು ಮಹತ್ವದ ಕೃತಿ. ಶ್ರೀರಂಗರ ಹರಿಜನ್ವಾರ ಅತ್ಯಂತ ಕಲಾತ್ಮಕವೂ, ಅತ್ಯಂತ ವಿವಾದಕ್ಕೆ ಒಳಗಾದ ಕೃತಿಯೂ ಆಗಿದೆ. ಸಾಮಾಜಿಕ ರಾಜಕೀಯ ಸುಧಾರಣೆಯಲ್ಲಿ ತೊಡಗಿದ ದೊಡ್ಡರಾಯರಂಥ ಮಂದಿಯ ಆಷಾಢಭೂತಿ ಸ್ವಭಾವವನ್ನು ವಿಡಂಬನೆ ಮಾಡುವ ನಾಟಕವಿದು. ಹೃದಯವಂತೆಯೂ, ಸಂಪ್ರದಾಯವಂತಳೂ ಆದ ವೇಣಕ್ಕ ತೋರಿಕೆಯ ಆದರ್ಶಗಳಿಗಿಂತ ಹೆಚ್ಚಾಗಿ ಮಾನವೀಯ ಸಂವೇದನೆಗಳಿಂದ ಪ್ರಭಾವಿತಳಾಗುತ್ತಾಳೆ. ಸಂಸಾರಿಗೆ ಕಂಸ, ಪ್ರಪಂಚ ಪಾಣಿಪತ್ತು, ನರಕದಲ್ಲಿ ನರಸಿಂಹ ಮುಂತಾದವನ್ನು ಇವರ ಮುಖ್ಯ ನಾಟಕಗಳೆಂದು ಹೆಸರಿಸಬಹುದು. ಅನಂತರದಲ್ಲಿ ಬಂದ ಅವರ ಬುದ್ಧಿ ಪ್ರಧಾನ ನಾಟಕಗಳಲ್ಲಿ ಸಂಭಾಷಣೆ, ಬೆಳಕು, ರಂಗಸಜ್ಜಿಕೆ, ಉಡುಗೆ – ಹೀಗೆ ವಿವಿಧ ಆಯಾಮಗಳ ಮೂಲಕ ರಂಗಸಾಧ್ಯತೆಗಳ ಅನ್ವೇಷಣೆ ನಡೆದಿದೆ. 'ಯಾರಿಗೆ ಮಾಡ್ತೀ ಮ್ಯಾ' 'ಕೇಳು ಜನಮೇಜಯ', 'ಕತ್ತಲೆ–ಬೆಳಕು', 'ಏನ ಬೇಡಲಿ ನಿನ್ನ ಬಳಿಗೆ ಬಂದು' 'ದಾರಿ ಯಾವುದಯ್ಯ ವೈಕುಂಠಕ್ಕೆ' ಮುಂತಾದವು ಈ ಸಾಲಿಗೆ ಸೇರುವ ನಾಟಕಗಳು.

'ಕತ್ತಲೆ–ಬೆಳಕು' ನಾಟಕ ಜೀವನದ ನಿರರ್ಥಕತೆಯನ್ನು ಸಾರುತ್ತದೆ. ಕತ್ತಲೆ ಬೆಳಕು, ಕಪ್ಪು-ಬಿಳುಪುಗಳ ನಡುವಿನ ಭೇದ, ದ್ವಂದ್ವಗಳನ್ನು ಗುರುತಿಸಲಾಗದ ಸ್ಥಿತಿಯಲ್ಲಿ ನಾಟಕ ಬರೆಯಲು ಸಾಧ್ಯವೇ ಇಲ್ಲ ಎಂಬ ನಿಲುವನ್ನು ನಾಟಕಕಾರ ತಲುಪುತ್ತಾನೆ. ನಾಟಕಕಾರನೂ ಜೀವನವನ್ನರಿಯಲಾಗದ ಕುರುಡನಾಗಿದ್ದಾನೆ ಎನ್ನುವ ಸತ್ವ ಧ್ವನಿತವಾಗಿದೆ. ನಾಟಕದೊಳಗೊಂದು ನಾಟಕ ಸೃಷ್ಟಿಸುವ ತಂತ್ರದ ಮೂಲಕ ಅತ್ಯಂತ ಪರಿಣಾಮಕಾರಿ ರೀತಿಯಲ್ಲಿ ನಾಟಕಕಾರರಿಗೆ ಸಂವಹನ ಸಾಧ್ಯವಾಗುತ್ತದೆ. 'ಕೇಳು ಜನಮೇಜಯ'ದಲ್ಲಿ ಇದೇ ಹುಡುಕಾಟ ಆಯಾಮಗಳೊಂದಿಗೆ ಮೈತಳೆದಿದೆ.

ಕೈಲಾಸಂ ಮತ್ತು ಶ್ರೀರಂಗರು ರಂಗಭೂಮಿಯ ಮೇಲೆ ಅಚ್ಚಳಿಯದ ಪ್ರಭಾವ ಬೀರಿದರು. ನಾಟಕ ರಂಗ ಪ್ರಯೋಗದ ಮೂಲಕ ಪ್ರೇಕ್ಷಕರಲ್ಲಿ ಉಂಟು ಮಾಡುವ ಅನುಭವವೇ ಮುಖ್ಯ ಎಂಬ

ನೆಲೆಯಿಂದ ಕೃತಿ ರಚನೆಯಲ್ಲಿ ತೊಡಗಿದವರು. ಪುರಾಣದ ಪಾತ್ರಗಳನ್ನು ಬಿಟ್ಟು ರಕ್ತ ಮಾಂಸ ತುಂಬಿದ ಪಾತ್ರಗಳನ್ನು, ಜೀವಂತ ವ್ಯಕ್ತಿಗಳ ಸುಖ ದುಃಖಗಳನ್ನು ಮನುಷ್ಯ ಸಂಬಂಧಗಳನ್ನೂ ರಂಗದ ಮೇಲೆ ತಂದವರು.

ಕೈಲಾಸಂ ಮತ್ತು ಶ್ರೀರಂಗರು ಸಾಮಾಜಿಕ ಸಮಸ್ಯೆಗಳನ್ನು ಚಿತ್ರಿಸ ಹೊರಟವರು ಪರ್ವತವಾಣಿ. ಹವ್ಯಾಸಿ ರಂಗಭೂಮಿಯನ್ನು ಜೀವಂತವಾಗಿಡುವ ದೃಷ್ಟಿಯಿಂದ ಹಲವಾರು ಕೃತಿಗಳನ್ನು ರಚಿಸಿದರು. ಇವುಗಳಲ್ಲಿ ರೂಪಾಂತರಗಳೂ, ಸ್ವತಂತ್ರ ನಾಟ್ಕಗಳೂ ಸೇರಿವೆ 'ವಾರ್ಷಿಕೋತ್ಸವ', 'ಬಹದ್ದೂರ್ ಗಂಡ', 'ಉಂಡಾಡಿ ಗುಂಡ' ಮುಂತಾದವು ಸಾಕಷ್ಟು ಪ್ರಯೋಗಗಳನ್ನೂ ಕಂಡ ಅವರ ಮುಖ್ಯ ನಾಟಕಗಳು. ಇದೇ ಕಾಲದಲ್ಲಿ ಹಲವಾರು ಪ್ರಹಸನಗಳ ರಚನೆಯೂ ನಡೆಯಿತು. ಹವ್ಯಾಸಿ ರಂಗಭೂಮಿಯನ್ನೇ ದೃಷ್ಟಿಯಲ್ಲಿಟ್ಟುಕೊಂಡು ಬರೆದ ಇತರರು ದಾಶರಥಿ ದೀಕ್ಷಿತ್, ಎ.ಎಸ್. ಮೂರ್ತಿ, ನಾ. ಕಸ್ತೂರಿ, ಎನ್ಕೆ, ಗುಂಡಣ್ಣ ಮುಂತಾದವರು.

ಕನ್ನಡದ ಗೀತ ನಾಟಕಗಳು ಇಂಗ್ಲಿಷ್‌ನ ಅಪೆರಾ ನಾಟಕಗಳ ಪ್ರಭಾವದಿಂದ ಹುಟ್ಟಿದಂಥವು. ಈ ಕ್ಷೇತ್ರಕ್ಕೆ ಶಿವರಾಮ ಕಾರಂತ ಮತ್ತು ಪು.ತಿ.ನರಸಿಂಹಚಾರ್ಯರ ಕೊಡುಗೆ ಅಪಾರ. ಶಿವರಾಮ ಕಾರಂತರ 'ಮುಕ್ತ ದ್ವಾರ' ಕನ್ನಡದ ಪ್ರಥಮ ಗೀತ ನಾಟಕ. ಜನಪದ ದೇಸಿಯಲ್ಲಿ ರಚಿತಗೊಂಡ ಕಾರಂತರ ಸತ್ವಶಾಲಿ ಗೀತ ನಾಟಕಗಳು ಪು.ತಿ.ನ. ರವರ ಗೀತ ನಾಟಕಗಳಿಗಿಂತ ಭಿನ್ನವಾಗಿವೆ. ಪೌರಾಣಿಕ ವಸ್ತುಗಳನ್ನು ಆಯ್ದುಕಂಡು 'ಅಹಲ್ಯೆ', 'ಗೋಕುಲ ನಿರ್ಗಮನ', 'ಹಂಸ ದಮಯಂತಿ' ಮುಂತಾದ ಗೀತರೂಪಕಗಳನ್ನು ಪು.ತಿ.ನ. ರಚಿಸಿದ್ದಾರೆ. ಇವರ ಕೃತಿಗಳಲ್ಲಿ ಕವಿತಾ ಶಕ್ತಿಯೊಂದಿಗೆ ದಿವ್ಯ ದರ್ಶನವೊಂದು ಮೇಳೈಸುವುದನ್ನು ಕಾಣಬಹುದು. ಜಾನಪದ ಪ್ರಭಾವವೂ ಅಲ್ಲಲ್ಲಿ ಗೋಚರಿಸುತ್ತವೆ. ಶಿವರಾಮಕಾರಂತರ ಗೀತ ನಾಟಕಗಳಲ್ಲಿ ಜೀವ – ಸಾವುಗಳು, ಸಮಸ್ಯೆಗಳು, ಹೆಣ್ಣು–ಗಂಡಿನ ಸಂಬಂಧಗಳು, ಪುರಾಣ ಘಟನೆಗಳು, ಇತಿಹಾಸ ಎಲ್ಲವೂ ಸೇರಿವೆ. ಕಾರಂತರ ಗೀತ ನಾಟಕಗಳು ಸತ್ವವನ್ನು ಅಳವಡಿಸಿಕೊಂಡು ಶಕ್ತಗೊಂಡಿವೆ.

ಕಾಳಿದಾಸನ 'ಅಭಿಜ್ಞಾನ ಶಾಕುಂತಲಾ' ಕೃತಿಯನ್ನು ಆಧರಿಸಿ ಕೆ.ವಿ. ಸುಬ್ಬಣ್ಣ ರಚಿಸಿರುವ ಆಧುನಿಕ ನಾಟಕ 'ಲೋಕ ಶಾಕುಂತಲಾ', 'ಚಾಣುಕ್ಯ ಪ್ರಪಂಚ', 'ಮಿಸ್ ಸದಾರಮೆ' ಮುಂತಾದವು ಅವರ ಇತರ ನಾಟಕಗಳು.

ಕೈಲಾಸಂ ನಾಟಕದ ಬಗ್ಗೆ ಹೇಳುವಾಗ 'ಇಲ್ಲಿನ ಭಾಷೆ ಆಡು ಭಾಷೆಯಾಗದಿದ್ದಾಗ ಈ ನಾಟಕದ ಜನಪ್ರಿಯತೆ ಅಳಿಸಿ ಹೋಗುತ್ತದೆ' ಈ ಮಾತನ್ನು ಸೇರಿಸಬೇಕು (ನೋಡಿ: ತ.ಸು. ಶಾಮರಾಯರ 'ಕನ್ನಡ ನಾಟಕ')

ಸಾಹಿತ್ಯದ ದೃಷ್ಟಿಯಿಂದ ಮತ್ತು ರಂಗಭೂಮಿಯ ದೃಷ್ಟಿಯಿಂದ ಮಹತ್ವದ ಕೃತಿಗಳೆನಿಸಿದ ನಾಟಕಗಳಲ್ಲಿ ಮಾಸ್ತಿಯವರ 'ಕಾಕನ ಕೋಟೆ' ಒಂದು. ಕುವೆಂಪುರವರ 'ಬೆರಳ್ ಗೆ ಕೊರಳ್' ಏಕಲವ್ಯನ ವೃತ್ತಾಂತವನ್ನು ಕಥಾವಸ್ತುವಾಗಿ ಹೊಂದಿದೆ. 'ಶೂದ್ರ ತಪಸ್ವಿ' ರಾಮಾಯಣದ ಕಥೆಯೊಂದನ್ನು ಆಧರಿಸಿ ರಚಿತವಾಗಿದೆ. 'ಮಹಾರಾತ್ರಿ', 'ಶ್ಮಶಾನ ಕುರುಕ್ಷೇತ್ರ', 'ಯಮನ ಸೋಲು' ಮುಂತಾದವು ಅವರ ಇತರ ಮುಖ್ಯ ನಾಟಕಗಳು. ಜಿ.ಬಿ. ಜೋಷಿ (ಜಡಭರತ) ತಮ್ಮ 'ಕದಡಿದ ನೀರು', 'ಮೂಕ ಬಲಿ', 'ಆ ಊರು ಈ ಊರು', ಮುಂತಾದ ನಾಟಕಗಳ ಮೂಲಕ ನಾಟಕ ಕ್ಷೇತ್ರದಲ್ಲಿ ವಿಶಿಷ್ಟ ಸ್ಥಾನವೊಂದನ್ನು ಗಳಿಸಿಕೊಂಡಿದ್ದಾರೆ. ಯಶಸ್ವಿ ಪ್ರಯೋಗಗಳನ್ನು ಕಂಡ ಅವರ 'ಸತ್ತವರ ನೆರಳು' ಆಚಾರದ ಹೆಸರಿನಲ್ಲಿ ನಡೆಯುವ ಶೋಷಣೆ ಮತ್ತು ಅದು ಹುಟ್ಟುಹಾಕುವ ಮೌಢ್ಯವನ್ನು ಎತ್ತಿ ತೋರಿಸುವ ಗಮನಾರ್ಹ ಕೃತಿಯೆನಿಸಿದೆ. ಸಂಸ ಎಂದೇ ಖ್ಯಾತರಾಗಿರುವ ಸಾಮಿ ವೆಂಕಟಾದ್ರಿ

ಅಯ್ಯರ್‌ರವರ ನಾಟಕಗಳು ಒಂದು ಪ್ರತ್ಯೇಕ ವರ್ಗಕ್ಕೆ ಸೇರುತ್ತದೆ. 'ವಿಗಡ ವಿಕ್ರಮರಾಯ' (೧೯೩೩) 'ಬಿರುದೆಂತೆಂಬರ ಗಂಡ' ಮುಂತಾದ ನಾಟಕಗಳನ್ನು ಕನ್ನಡಕ್ಕೆ ನೀಡಿದ ಸಂಸರು, ಮೈಸೂರು ಇತಿಹಾಸಕ್ಕೆ ಸಂಬಂಧಿಸಿದ ಘಟನೆಗಳನ್ನು ತಮ್ಮ ನಾಟಕಗಳಲ್ಲಿ ಚಿತ್ರಿಸಿದ್ದಾರೆ. ವೃತ್ತಿ ನಾಟಕ ಕಂಪನಿಗಳು ಆಡುತ್ತಿದ್ದ ಐತಿಹಾಸಿಕ ನಾಟಕಗಳ ಪಾತ್ರಗಳಲ್ಲಾಗಲೀ, ವಸ್ತುವಿನಲ್ಲಾಗಲೀ ಯಾವುದೇ ವೈವಿಧ್ಯ, ಆಳಗಳು ಕಂಡುಬರುತ್ತಿರಲಿಲ್ಲ. 'ಐತಿಹಾಸಿಕ ನಾಟಕಕ್ಕೆ ಹೊಸ ಸ್ವರೂಪವನ್ನೂ ಜೀವಂತಿಕೆಯನ್ನೂ ನೀಡಿ, ಸತ್ವ ತುಂಬಿದವರು ಸಂಸರು. ಸಂಸ್ಕೃತನಾಟಕದ ಸಂಪ್ರದಾಯ ಬದ್ಧ ಚೌಕಟ್ಟಿನಲ್ಲೇ ಹಳಗನ್ನಡ ಶೈಲಿಯಲ್ಲಿ ಶ್ರೇಷ್ಠ ನಾಟಕಗಳ ರಚನೆ ಮಾಡಿದ ವೈಶಿಷ್ಟ್ಯ ಸಂಸರದು. 'ಇವರ ನಾಟಕಗಳು ಭಾಷೆಯ ದೃಷ್ಟಿಯಿಂದ ಮತ್ತು ರಂಗ ಪ್ರಯೋಗದ ದೃಷ್ಟಿಯಿಂದ ವೈಶಿಷ್ಟ್ಯ ಪೂರ್ಣವಾದವು. ಎಂ.ಆರ್. ಶ್ರೀನಿವಾಸಮೂರ್ತಿಯವರ 'ಧರ್ಮದುರಂತ' ಒಂದು ಗಮನಾರ್ಹ ಐತಿಹಾಸಿಕ ನಾಟಕ. ಕೀರ್ತಿನಾಥ ಕುರ್ತಕೋಟಿಯವರ 'ಆ ಮನಿ' ಶಿವರಾಮ ಕಾರಂತರ 'ಗರ್ಭಗುಡಿ' ಮುಂತಾದವು ಉಲ್ಲೇಖಾರ್ಹ ನಾಟಕಗಳಾಗಿವೆ.

ಪಾಶ್ಚಾತ್ಯ ಸಾಹಿತ್ಯ ಮತ್ತು ಪಾಶ್ಚಾತ್ಯ ರಂಗಭೂಮಿಯ ಹೊಸ ಪರಿಕಲ್ಪನೆಗಳು, ಪ್ರಕಾರಗಳು, ಒಲವುಗಳು ಇವುಗಳ ಪರಿಚಯ ನಮ್ಮ ಪರಿಸರದಲ್ಲಿ ಹೊಸ ಅಲೆಯೊಂದರ ಬರವಿಗೆ ಕಾರಣವಾಯಿತು. ಬೇರೆ ಬೇರೆ ಪ್ರದೇಶಗಳ, ರಾಜ್ಯಗಳ ನಾಟಕಗಳು ಬೆಂಗಳೂರಿಗೆ ಆಗಮಿಸಿ, ಬೆಂಗಳೂರು ರಂಗ ಚಳವಳಿಯ ಕೇಂದ್ರವಾಯಿತು. ಬಾದಲ್ ಸರ್ಕಾರಕ್ಕೆ ಬಂಗಾಳಿ ನಾಟಕಗಳು, ವಿಜಯ್ ತೆಂಡೂಲ್ಕರರ ಮರಾಠಿ ನಾಟಕಗಳು, ಬ್ರೆಕ್ಟ್ ಪಿರಾಂಡೆಲ್ಲೋ ಮುಂತಾದವರ ಕನ್ನಡ ಅನುವಾದಗಳು ಇಲ್ಲಿ ಪ್ರದರ್ಶಿತಗೊಂಡು ಹೊಸ ಅಲೆಗೆ ಕಾರಣವಾದವು. ವಸ್ತು, ಪಾತ್ರ, ರಚನೆ ಮತ್ತು ರಂಜನೆಯನ್ನು ಕೇಂದ್ರವಾಗಿ ಹೊಂದಿದ್ದ ಸಾಂಪ್ರದಾಯಕ ನಾಟಕಗಳು ಬುದ್ಧಿಜೀವಿಗಳಿಂದ ನಿರಾಕರಿಸಲ್ಪಟ್ಟವು. ಬದಲಾದ ಮೌಲ್ಯಗಳು, ವ್ಯಕ್ತಿ ಸ್ವಾತಂತ್ರ್ಯಕ್ಕೆ ಉಂಟಾದ ಧಕ್ಕೆ, ರಾಜಕೀಯ ದೊಂಬರಾಟ, ಅಸಂಗತತೆ ಮುಂತಾದ ವಿಷಯಗಳು ಚಿಂತನೆಯ ವಸ್ತುಗಳಾಗಿ ಅಸಂಗತ ನಾಟಕಗಳ ಹುಟ್ಟಿಗೆ ಕಾರಣವಾದವು. ಈ ನಿಟ್ಟಿನಲ್ಲಿ ಕನ್ನಡಕ್ಕೆ ಬಂದ ಮೊದಲ ಕೃತಿ ಅಯನಸ್ಕೋವಿನ 'ಬಾಲ್ಡ್‌ಸೊಪ್ರಾನೊ' ಇದನ್ನು ಸುಮತೀಂದ್ರ ನಾಡಿಗರು 'ಬಕ್ಕತಲೆಯ ನರ್ತಕಿ' (೧೯೬೬)ಯಾಗಿ ಕನ್ನಡಕ್ಕೆ ತಂದರು. ಐತಿಹಾಸಿಕವಾಗಿ ಇದು ಮಹತ್ವದ ಕೃತಿಯೆನಿಸಿದೆ. ಇದು ಕನ್ನಡದ ಮೊದಲ ಅಸಂಗತ ನಾಟಕ. ಇದರ ನಂತರ ಪಿ. ಲಂಕೇಶ್, ಪೂರ್ಣಚಂದ್ರ ತೇಜಸ್ವಿ, ನ. ರತ್ನ, ಚಂದ್ರಶೇಖರ ಪಾಟೀಲ, ರಾಮಚಂದ್ರಶರ್ಮ, ಚಂದ್ರಶೇಖರ ಕಂಬಾರ ಮುಂತಾದವರು ಈ ಮಾದರಿಯಲ್ಲಿ ಕೃತಿ ರಚನೆಗೆ ತೊಡಗಿದರು ಲಂಕೇಶರ 'ತೆರೆಗಳು', ಪೂರ್ಣಚಂದ್ರ ತೇಜಸ್ವಿಯವರ 'ಯಮಳ ಪ್ರಶ್ನೆ'ನ. ರತ್ನರ 'ಎಲ್ಲಿಗೆ?' ಚಂದ್ರಶೇಖರ ಪಾಟೀಲರ 'ಅಪ್ಪ', ಚಂದ್ರಶೇಖರ ಕಂಬಾರರ 'ಚಾಳೇಶ' ಚಂದ್ರಕಾಂತ ಕುಸನೂರರ 'ರತ್ತೋ ರತ್ತೋರಾಯನ ಮಗಳೆ' 'ಆನಿ ಬಂತಾನಿ' ಮುಂತಾದವು ಆ ಘಟ್ಟದಲ್ಲಿ ಬಂದ ಮಹತ್ವದ ಕೃತಿಗಳು. ಜೀವನದ ಅಸಂಗತತೆಯನ್ನು ಚಿತ್ರಿಸಿದ ನಾಟಕಗಳಸಾಲಿಗೆ 'ಹಳ್ಳಾ ಕೊಳ್ಳಾ ನೀರು', 'ಇಲಿಬೋನು', 'ಕೊಡೆಗಳು' ಮುಂತಾದ ನಾಟಕಗಳು ಸೇರುತ್ತವೆ. ಚಂದ್ರಶೇಖರ ಪಾಟೀಲರ 'ಗೋಕರ್ಣದ ಗೌಡಸಾನಿ' ಚಂದ್ರಶೇಖರ ಕಂಬಾರರ 'ಜೋಕುಮಾರಸ್ವಾಮಿ' ಇವು ಎಪಿಕ್ ನಾಟಕದ ಮಾದರಿಯಲ್ಲಿ ರಚಿತಗೊಂಡವು. ಇತಿಹಾಸವನ್ನು ಹೊಸ ರೀತಿಯಲ್ಲಿ ಅರ್ಥೈಸಿದ 'ಋಷ್ಯಶೃಂಗ', 'ಸಂಕ್ರಾಂತಿ' ಯಂಥ ನಾಟಕಗಳೂ ಹುಟ್ಟಿಬಂದವು.

ಅಸಂಗತಗಳ ಮಾದರಿಯ ನಾಟಕಗಳನ್ನು ಕನ್ನಡಕ್ಕೆ ತಂದ ಪ್ರಮುಖರಲ್ಲಿ ನ. ರತ್ನ ಮೊದಲಿಗರು. 'ಗೋಡೆ ಬೇಕೆ ಗೋಡೆ', 'ಎಲ್ಲಿಗೆ', 'ಬೊಂತೆ' ಇವರ ಮುಖ್ಯ ನಾಟಕಗಳು. ಚದುರಂಗರ 'ಇಲಿಬೋನು' ನಾಟಕ ಅಸಂಗತ ರಂಗಭೂಮಿಯ ಗಾಢ ಪ್ರಭಾವಕ್ಕೆ ಒಳಗಾಗಿರುವುದನ್ನು ಕಾಣಬಹುದು.

ಭಾಷೆಯ ಬಳಕೆಯ ದೃಷ್ಟಿಯಿಂದ ಅಪಾರ ಯಶಸ್ಸು ಪಡೆದಿರುವ ನಾಟಕಗಳನ್ನು ಚಂದ್ರಶೇಖರ ಪಾಟೀಲರು ರಚಿಸಿದ್ದಾರೆ. 'ಟಿಂಗರ ಬುಡ್ಡಣ್ಣ', 'ಕೊಡೆಗಳು', 'ಗುರ್ತಿನವರು', 'ಕುಂಟ ಕುಂಟ ಕುರವತ್ತಿ' ಮುಂತಾದ ನಾಟಕಗಳಲ್ಲಿ ಅಸಂಗತ ರಂಗಭೂಮಿಯ ಪ್ರಭಾವವನ್ನು ಕಾಣಬಹುದು.

ಪ್ರದರ್ಶನ ಮೂಲಕ ಜೀವ ತಳೆಯಬೇಕಾದ ನಾಟಕ ಮಾಧ್ಯದಲ್ಲಿ ಕ್ಲಿಷ್ಟತೆಗೆ ಅತಿ ಸಂಕೀರ್ಣತೆಗೆ ಎಡೆಯಿಲ್ಲದ ಕಾರಣ, ಅಸಂಗತ ನಾಟಕಗಳ ಅಧ್ಯಾಯ ವಿಸ್ತಾರಗೊಳ್ಳಲಿಲ್ಲ. ಅಸಂಗತತೆಯಿಂದ 'ಮುಕ್ತ ರಂಗಭೂಮಿ'ಯತ್ತನಡೆದ ಪಯಣದಿಂದಾಗಿ 'ಜೋಕುಮಾರಸ್ವಾಮಿ', 'ಹಯವದನ', 'ಸಂಕ್ರಾಂತಿ', 'ಗೋಕರ್ಣದ ಗೌಡಸಾನಿ' ಮುಂತಾದ ನಾಟಕಗಳು ಜನಿಸಲು ಕಾರಣವಾಯಿತು. ವಾಸ್ತವವಾದಿ ಮತ್ತು ಅಸಂಗತ ನಾಟಕಗಳ ಕಾಲ ಬೌದ್ಧಿಕತೆಯೇ ಪ್ರಧಾನವಾಗಿದ್ದ ಕಾಲ. ಜಾನಪದ ಸತ್ವದ ಸುಂದರ ನಾಟಕಗಳು ಈ ಘಟ್ಟದಲ್ಲಿ ಅತ್ಯಂತ ಸ್ವಾಗತಾರ್ಹವೆನಿಸಿದವು.

ವೃತ್ತಿ ರಂಗಭೂಮಿಗೂ ಜಾನಪದಕ್ಕೂ ಹಿಂದಿನಿಂದಲೂ ನಂಟಿತ್ತು ಎಂಬುದು ಮುಖ್ಯ ಸಂಗತಿ. ವೃತ್ತಿ ರಂಗಭೂಮಿಯ ಸಂಗೀತ ಮತ್ತು ಹಾಸ್ಯ ಸನ್ನಿವೇಶಗಳ ಮೇಲೆ ಜಾನಪದದ ಪ್ರಭಾವವನ್ನು ಗುರುತಿಸಬಹುದಾಗಿದೆ. ನವೋದಯ ಯುಗದ ಮಾಸ್ತಿಯವರ 'ಕಾಕನ ಕೋಟೆ', ಶಿವರಾಮ ಕಾರಂತರ ಗೀತ ನಾಟಕಗಳು ಮತ್ತು ಪು.ತಿ.ನ.ರವರ ಕೆಲವು ಗೀತ ನಾಟಕಗಳು ಕೂಡ ಜಾನಪದರಿಂದ ಸತ್ವ ಹೀರಿಕೊಂಡವೇ. ಇಷ್ಟೆಲ್ಲ ಹಿನ್ನೆಲೆಯಿದ್ದರೂ ಜಾನಪದವನ್ನು ಸಮರ್ಥವಾಗಿ ಬಳಸಿಕೊಂಡವರಲ್ಲಿ ನವ್ಯ ನಾಟಕಕಾರರೇ ಮೊದಲಿಗರು. ಜಾನಪದದ ಬಳಕೆಯಿಂದ ಎರಡು ಬಗೆಯ ಅನುಕೂಲಗಳು ಏಕಕಾಲಕ್ಕೆ ಏರ್ಪಟ್ಟವು. ನಗರ ಪ್ರದೇಶದ ಪ್ರೇಕ್ಷಕರಿಗೆ ಜಾನಪದದ ದ್ರವ್ಯ ಲಭಿಸುವಂತಾಯಿತು. ಜನಪದ ರಂಗಭೂಮಿಗೆ ಒಂದು ಮರುಹುಟ್ಟು ಸಾಧ್ಯವಾಯಿತು. ಜನಪದ ರಂಗಭೂಮಿಯ ಸಾಧ್ಯತೆಗಳನ್ನು ಶೋಧಿಸುವ ಪ್ರಕ್ರಿಯೆಯಲ್ಲಿ ನವ್ಯ ನಾಟಕಕಾರರಿಗೆ ಜರ್ಮನ್ ನಾಟಕಕಾರ ಬರ್ಟೋಲ್ಟ್ ಬ್ರೆಕ್ಟ್‌ರ ಪ್ರಭಾವ ಮಹತ್ತರವಾದುದು. ಬ್ರೆಕ್ಟ್ ಪ್ರತಿಪಾದಿಸಿದ 'ಮುಕ್ತ ರಂಗಭೂಮಿ'ಯ ಪರಿಕಲ್ಪನೆ ನವ್ಯ ನಾಟಕಕಾರರನ್ನು ಆಕರ್ಷಿಸಿತು. ಬ್ರೆಕ್ಟ್ ಪ್ರತಿಪಾದಿಸಿದ ಹಾಡು, ಜನಪದ ಕಥೆಗಳು, ಸ್ವಗತಗಳು ಮುಂತಾದ ತಂತ್ರಗಳು ನಮ್ಮ ಬಯಲಾಟಕ್ಕೆ ಸಮೀಪವಾಗಿದ್ದವು. ವಾಸ್ತವ ನಾಟಕಗಳ ಪರಂಪರೆಯಲ್ಲಿ ಕಾಪಾಡಿಕೊಳ್ಳಬೇಕಾಗಿದ್ದ ಕಾಲ, ಕ್ರಿಯೆ, ಸ್ಥಳಗಳ ಐಕ್ಯ ರಂಗಸಾಧ್ಯತೆಗಳ ಮೇಲೆ ನಿಯಂತ್ರಣ ಹೇರುತ್ತಿತ್ತು. 'ಎಪಿಕ್ ರಂಗಭೂಮಿ' ಅಥವಾ 'ಮಹಾಕಾವ್ಯ ರಂಗಭೂಮಿ' ಇತರ ಒತ್ತಡಗಳನ್ನು ಸಡಿಲಗೊಳಿಸಿತು. ಸಮಾಜವಾದಿ ವಿಚಾರಗಳ ಪ್ರಚಾರಕ್ಕಾಗಿ ಬ್ರೆಕ್ಟ್ ಎಪಿಕ್ ರಂಗಭೂಮಿಯ ಮಾಧ್ಯಮದ ಉಪಯೋಗ ಪಡೆದದ್ದು ಕಂಡುಬರುತ್ತದೆ. ಕನ್ನಡ ನವ್ಯ ನಾಟಕಕಾರರು ಅಂಧಾನುಕರಣೆಯಲ್ಲಿ ತೊಡಗದೆ ಜನಪದ ರಂಗಭೂಮಿಯ ತಾಂತ್ರಿಕ ಸಾಧ್ಯತೆಗಳನ್ನು ಶೋಧಿಸುವ ದಿಕ್ಕಿನಲ್ಲಿ ಮಾತ್ರ ಬ್ರೆಕ್ಟ್‌ನ ಪ್ರಭಾವವನ್ನು ಸ್ವೀಕರಿಸಿದ್ದು ಆರೋಗ್ಯಕರ ಬೆಳವಣಿಗೆಯಾಗಿ ಪರಿಣಮಿಸಿತು.

ಗಿರೀಶ್‌ಕಾರ್ನಾಡರ ಮೊಟ್ಟ ಮೊದಲ ನಾಟಕ 'ಯಯಾತಿ' (೧೯೬೧) ಮಹಾಭಾರತದ ಮೂಲಕಥೆಯನ್ನು ಬಳಸಿಕೊಂಡು, ಹೊಸ ಕಾಣ್ಕೆಯೊಂದನ್ನು ಮೂಡಿಸುವುದರಲ್ಲಿ ಯಶಸ್ವಿಯಾಯಿತು. ವಿಮರ್ಶಕರಿಂದ ಬಹು ಪ್ರಶಂಸೆಗೆ ಪಾತ್ರವಾದ ಈ ನಾಟಕದ ನಂತರ ೧೯೬೪ ರಲ್ಲಿ ಕಾರ್ನಾಡರ ಎರಡನೆಯ ಕೃತಿ 'ತುಘಲಕ್' ಹೊರಬಂತು. ನಾಟಕೀಯತೆ ವಿಜೃಂಭಿಸುವ,

ಅಗಾಧ ರಂಗಸಾಧ್ಯತೆಗಳ ಈ ನಾಟಕ ಆಲ್ಬರ್ಟ್‌ಕಾಮೂವಿನ 'ಕಾಲಿ ಗುಲಾ' ನಾಟಕದಿಂದ ಪ್ರೇರಿತವಾದದ್ದು. ಮೂಲ ಕೃತಿಗಿಂತ ಹೆಚ್ಚು ಸಾಂದ್ರವೂ, ಸಂಕೀರ್ಣವೂ ಆಗಿದ್ದು ಚರಿತ್ರೆಯಲ್ಲಿ ಬರಲು ಐಲು ದೊರೆ ತುಘಲಕ್‌ನ ಕಥೆಯನ್ನು ಹೊಸ ರೀತಿಯಲ್ಲಿ ಬಿತ್ತರಿಸುವ ಪ್ರಖರವಾದ ನಾಟಕವಿದು. 'ಹಯವದನ' (೧೯೭೧) ಬಯಲಾಟದ ಪ್ರಕಾರವನ್ನು ಬಳಸಿಕೊಂಡಿರುವ ಮಹತ್ವಾಕಾಂಕ್ಷೆಯಿಂದ ಕೂಡಿದ ನಾಟಕ. ರಂಗಭೂಮಿಯ ದೃಷ್ಟಿಯಿಂದ ಉತ್ಕೃಷ್ಟ ಸಾಧ್ಯತೆಗಳನ್ನು ಹೊಂದಿದ್ದ 'ಹಯವದನ' ನಾಟಕವನ್ನು ನಿರ್ದೇಶಕನ ನಾಟಕವೆಂದೂ 'ತುಘಲಕ್' ನಾಟಕವನ್ನು ನಟನ ನಾಟಕವೆಂದೂ ಕರೆಯುವ ಪರಿಪಾಠವಿದೆ. ಕನ್ನಡದಲ್ಲಿ ನವ್ಯ ನಾಟಕ ಸಂಪ್ರದಾಯವನ್ನು ತಂದ ಕೃತಿಗಳಲ್ಲಿ 'ತುಘಲಕ್' ಮುಖ್ಯವಾದದ್ದು. ತುಘಲಕ್‌ನ ಕಥೆಯ ಐತಿಹಾಸಿಕ ಸಂದರ್ಭವನ್ನು ಕಾರ್ನಾಡರ ಆಧುನಿಕ ನೆಲೆಯಲ್ಲಿ ಶೋಧಿಸುತ್ತದೆ. ಕಾರ್ನಾಡರ 'ಯಾಯಾತಿ', 'ತುಘಲಕ್', 'ಹಯವದನ', 'ನಾಗಮಂಡಲ' ಎಲ್ಲ ನಾಟಕಗಳಲ್ಲೂ ಮನುಷ್ಯ ತನ್ನ ಐಡೆಂಟಿಟಿಯನ್ನು ಬದಲಾಯಿಸುವ ವಿಷಯ ನಿರಂತರವಾಗಿ ಹರಿದುಬಂದಿದೆ.

ಪುರಾಣ ಮತ್ತು ಇತಿಹಾಸದ ವಸ್ತುವನ್ನು ಬಳಸಿಕೊಂಡು ಸಮಕಾಲೀನ ಜೀವನವನ್ನು ಅರ್ಥೈಸುತ್ತಿದ್ದ ಕಾರ್ನಾಡರು 'ಅಂಜುಮಲ್ಲಿಗೆ'ಯಲ್ಲಿ ಸಮಕಾಲೀನ ವಸ್ತುವೊಂದನ್ನು ಆಯ್ದುಕೊಂಡಿರುವುದು ಕಂಡುಬರುತ್ತದೆ. ಅಂತರರಾಷ್ಟ್ರೀಯ ಮಟ್ಟದಲ್ಲಿರುವ ಮೇಲು ಕೀಳಿನ ಕಲ್ಪನೆ ಇದಕ್ಕೆ ಸಂಬಂಧಿಸಿದಂತಹ ವರ್ಗವ್ಯವಸ್ಥೆ ವ್ಯಕ್ತಿಗಳ ಮೇಲೆ ಬೀರುವ ಪರಿಣಾಮಗಳನ್ನು 'ಅಂಜು ಮಲ್ಲಿಗೆ' ಚಿತ್ರಿಸುತ್ತದೆ.

ಪಿ. ಲಂಕೇಶರವರ 'ಸಂಕ್ರಾಂತಿ' ಹನ್ನೆರಡನೆಯ ಶತಮಾನದ ರಾಜಕೀಯ, ಸಾಮಾಜಿಕ ಆಗು ಹೋಗುಗಳ ಹಿನ್ನಲೆಯಲ್ಲಿ ಬಿಜ್ಜಳ-ಬಸವಣ್ಣನ ಸಂಬಂಧವನ್ನು ಕುರಿತ ನಾಟಕ. ಇತ್ತೀಚಿನ ವರ್ಷಗಳಲ್ಲಿ ಪ್ರಕಟವಾದ ಎಚ್.ಎಸ್. ಶಿವಪ್ರಕಾಶರ 'ಮಹಾಚೈತ್ರ' ಮತ್ತು ಗಿರೀಶ್ ಕಾರ್ನಾಡರ 'ತಲೆದಂಡ' ನಾಟಕಗಳು ಒಂದೇ ಸಾಲಿಗೆ ಸೇರುವ ಕೃತಿಗಳಾಗಿವೆ.

ಲಂಕೇಶರ ಮೊದಲ ನಾಟಕವಾದ 'ಟಿ ಪ್ರಸನ್ನನ ಗೃಹಸ್ಥಾಶ್ರಮ', 'ನನ್ನ ತಂಗಿಗೊಂದು ಗಂಡು ಕೊಡಿ' ಮುಂತಾದವು ಸಮಾಜ ಜೀವನವನ್ನು ತೀವ್ರವಾದ ವಿಮರ್ಶೆಗೆ ಗುರಿಪಡಿಸುವಂಥ ನಾಟಕಗಳು. 'ತೆರೆಗಳು' ತಾಂತ್ರಿಕ ದೃಷ್ಟಿಯಿಂದ ಹೊಸ ಪ್ರಯೋಗವೆನಿಸಿದ ಕೃತಿ. ಲಂಕೇಶರ 'ಬಿರುಕು' ಅದೇ ಹೆಸರಿನ ತಮ್ಮ ಕಾದಂಬರಿಯನ್ನು ಆಧರಿಸಿ ರಚಿಸಲಾದ ಸಾಮಾಜಿಕ ನಾಟಕ. 'ಕ್ರಾಂತಿ ಬಂತು ಕ್ರಾಂತಿ', 'ಗಿಳಿಯು ಪಂಜರದೊಳಿಲ್ಲ' ಅವರ ಇತರ ನಾಟಕಗಳು.

ಚಂದ್ರಶೇಖರ ಕಂಬಾರರ 'ಜೋಕುಮಾರಸ್ವಾಮಿ' (೧೯೭೩) ಜಾನಪದ ರಂಗಭೂಮಿಯ ಪ್ರಭಾವವನ್ನು ಮೈಗೂಡಿಸಿಕೊಂಡು ಎಪಿಕ್ ಮಾದರಿಯಲ್ಲಿ ರಚಿತವಾದ ಮಹತ್ವದ ನಾಟಕ. ಬಯಲಾಟದ ಪ್ರಕಾರವನ್ನು ವಿಶಿಷ್ಟ ರೀತಿಯಲ್ಲಿ ಅಳವಡಿಸಿಕೊಂಡ ಈ ನಾಟಕ, ಅಪ್ಯಾಯಮಾನವಾದ ಮಾತುಗಾರಿಕೆ, ಮನತುಂಬುವ ಹಾಡುಗಳನ್ನು ಒಳಗೊಂಡಿದೆ. 'ಋಷ್ಯ ಶೃಂಗ', 'ಜೈಸಿದ್ದ ನಾಯ್ಕ' ಮುಂತಾದವು ಅವರ ಇತರ ನಾಟಕಗಳು. ಈ ಎಲ್ಲ ನಾಟಕಗಳಲ್ಲೂ ಶೋಷಣೆಯ ವಿರುದ್ಧ ನಡೆಸಿದ ಹೋರಾಟವನ್ನು ಚಿತ್ರಿಸಲಾಗಿದೆ. ಇತ್ತೀಚೆಗೆ ಪ್ರಕಟವಾದ ಕಂಬಾರರ 'ಸಿರಿ ಸಂಪಿಗೆ' ಮಹಾಕಾವ್ಯದ ಆಳ, ವ್ಯಾಪ್ತಿಯನ್ನು ಹೊಂದಿರುವ ನಾಟಕವೆಂಬ ಪ್ರಶಂಸೆಗೆ ಪಾತ್ರವಾಗಿದೆ. ಇದು ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಗಳಿಸಿರುವ ಕನ್ನಡದ ಮೊದಲ ನಾಟಕವೂ ಆಗಿದೆ.

ಕಂಬಾರರ 'ನಾರ್ಸಿಸಸ್' ಮತ್ತು 'ಚಾಳೇಶ' ಅಸಂಗತ ಅಂಶಗಳನ್ನು ಒಳಗೊಂಡ ನಾಟಕಗಳು. ಸಂಕೇತಗಳ ವಿಶಿಷ್ಟ ಬಳಕೆ ಇಲ್ಲಿ ನಡೆದಿದೆ.

ದೇಸಿ ಪರಂಪರೆ ಮತ್ತು ಪುರಾಣದಿಂದ ವಸ್ತುವನ್ನು ಆಯ್ದುಕೊಂಡು, ಸಮಕಾಲೀನ ಬದುಕಿನ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲುವ ಮತ್ತು ಅವುಗಳಿಗೆ ಉತ್ತರ ಕಂಡುಕೊಳ್ಳುವ ಯತ್ನದಲ್ಲಿ ಮೂಲ ವಸ್ತುವಿಗೆ ತಿರುವು ಕೊಡುವ ಅಥವಾ ಹೊಸ ದೃಷ್ಟಿಕೋನವೊಂದರಿಂದ ಅರ್ಥೈಸುವ ಕ್ರಿಯೆಯಲ್ಲಿ ಇಂತಹ ನಾಟಕಗಳು ಸಾಮಾನ್ಯವಾಗಿ ತೊಡಗುತ್ತದೆ. ಜನಪದ ತಂತ್ರಗಳನ್ನೂ ಸಾಹಿತ್ಯವನ್ನೂ ಬಳಸಿಕೊಂಡ ನಾಟಕಗಳು, ಜನಪದ ಜೀವನದ ಅಂಶಗಳನ್ನು ಬಳಸಿಕೊಂಡ ನಾಟಕಗಳು, ಹೀಗೆ ಹಲವಾರು ರೀತಿಯಲ್ಲಿ ಜಾನಪದ ಅಂಶಗಳ ಬಳಕೆ ನಡೆದಿದೆ. ಒಂದೇ ಜನಪದ ಕಥೆಯ ಮೂಲದಿಂದ ಹೊರಟ ಕಂಬಾರರ 'ಸಿರಿ ಸಂಪಿಗೆ' ಮತ್ತು ಗಿರೀಶ್ ಕಾರ್ನಾಡರ 'ನಾಗ ಮಂಡಲ', 'ಸ್ವತಂತ್ರ ಅಸ್ತಿತ್ವವನ್ನು ಪಡೆದುಕೊಂಡ ಎರಡು ವಿಭಿನ್ನ ನಾಟಕಗಳಾಗಿ ರೂಪಗೊಂಡಿದೆ.

ಜಿ.ಎನ್. ರಂಗನಾಥ್‌ರವರ 'ಹಾವು ಹೊಕ್ಕ ಮನೆಗಳು' (೧೯೮೭) ನಿಸರ್ಗಪ್ರಿಯರವರ 'ಅಗ್ನಿ' ಜನಪದ ಪುರಾಣ ವಸ್ತುವನ್ನು ಬಳಸಿಕೊಂಡ ನಾಟಕಗಳೇ ಆಗಿವೆ. ರಾಮಚಂದ್ರದೇವ ಮತ್ತು ಟಿ.ಎನ್. ನರಸಿಂಹನ್‌ರವರ 'ಕುದುರೆ ಬಂತು ಕುದುರೆ' (೧೯೮೩) ನಾಟಕದ ವಸ್ತು ಆಧುನಿಕವಾಗಿದ್ದರೂ, ಬದುಕನ್ನು ಅರ್ಥೈಸುವ ಸಾಧನವಾಗಿ ಕೀಲು ಕುದುರೆಯ ರಾಜಕುಮಾರನ ಜನಪದ ಕಥೆಯನ್ನು ಬಳಸಿಕೊಳ್ಳಲಾಗಿದೆ.

ಡಾ. ಸಂಗಮೇಶ ಸವದತ್ತಿಮಠ ಅವರ 'ಶೆಟವಿ' (೧೯೮೬) ಜಾನಪದ ವಸ್ತುವನ್ನೇ ಆಧರಿಸಿದ ಉತ್ತರ ಕರ್ನಾಟಕದ ಆಡುಭಾಷೆಯಲ್ಲಿ ರಚಿತವಾದ ಕೃತಿ. ಜಾನಪದದ ಸಣ್ಣಾಟನ ಪ್ರಭಾವವನ್ನೂ ಇದರಲ್ಲಿ ಕಾಣಬಹುದು.

ಒಂದೆಡೆ ಜಾನಪದ ಸತ್ವ ಪರಿಕರಗಳನ್ನು ಬಳಸಿಕೊಂಡು ಸಮರ್ಥ ನಾಟಕಗಳು ಕನ್ನಡದಲ್ಲಿ ಮೂಡಿರುವುದು ಕಂಡುಬರುತ್ತದೆ. ಮತ್ತೊಂದೆಡೆಯಲ್ಲಿ ಜಾನಪದ ಪ್ರಕಾರಗಳನ್ನು ನಾವೆಲ್ಲಿಯ ಸಲುವಾಗಿ, ಅವುಗಳ ಔಚಿತ್ಯವನ್ನೂ ಪ್ರಶ್ನಿಸದೆ, ನಾಟಕದ ರಚನೆಯಲ್ಲಿ ಬಲವಂತವಾಗಿ ಜೋಡಿಸಿಕೊಳ್ಳುತ್ತ ಕ್ಲೀಷೆಯ ಮಟ್ಟಕ್ಕೆ ಒಯ್ಯಲಾಗಿದೆ. ಹಳೆಯ ಪ್ರಕಾರಗಳನ್ನು ವಿವೇಚನೆಯಿಲ್ಲದೆ, ದೃಷ್ಟಿಹೀನವಾಗಿ ಪುನರುಜ್ಜೀವನಕ್ಕೆ ಒಳಪಡಿಸುವುದರ ಬದಲಾಗಿ, ಸಂಪ್ರದಾಯವನ್ನು ನಾವು ಹೇಗೆ ನೋಡುತ್ತೇವೆ ಎಂಬುದೂ, ಸಂಪ್ರದಾಯವನ್ನು ಪುನರ್ ವ್ಯಾಖ್ಯಾನಕ್ಕೆ ಒಳಪಡಿಸುವುದೂ ಮುಖ್ಯವಾಗುತ್ತವೆ ಎಂಬ ಬಿ.ವಿ.ಕಾರಂತರ ಅಭಿಪ್ರಾಯವನ್ನು ನಾಟಕಕಾರರು ಗಂಭೀರವಾಗಿ ಸ್ವೀಕರಿಸಬೇಕಾದ ಅಗತ್ಯವಿದೆ. ರಂಗಭೂಮಿಯ ದೃಷ್ಟಿಯಿಂದ ಮತ್ತು ಹೊಸ ನಾಟಕಗಳ ಆಗಮನದ ದೃಷ್ಟಿಯಿಂದ, ಅನುವಾದ ಅಥವಾ ರೂಪಾಂತರಗೊಂಡು ಇತರ ಭಾಷೆಗಳಿಂದ ಕನ್ನಡಕ್ಕೆ ನಾಟಕಗಳು ಬಂದದ್ದು ಸ್ವಾಗತಾರ್ಹವೇ ಆಗಿದೆ. ಹೊಸ ಅನುಭವಗಳು, ಹೊಸ ಸಂವೇದನೆಗಳು ಕನ್ನಡ ರಂಗಭೂಮಿಯಲ್ಲೂ ಕಾಣಿಸಿಕೊಳ್ಳಲು ಕಾರಣವಾಯಿತು.

ವಿಜಯ್ ತೆಂಡೂಲ್ಕರ್‌ರ ಮರಾಠಿ ನಾಟಕ 'ಶಾಂ ತತಾ ಕೋರ್ಟ್ ಚಾಲೂ ಆಹೆ' ಕನ್ನಡಕ್ಕೆ 'ಸದ್ದು ವಿಚಾರಣೆ ನಡೀತಾ ಇದೆ' ಎಂದೂ, ಬಿ.ವಿ. ಕಾರಂತರ 'ಏವಂ ಇಂದ್ರಜಿತ್' ಎಂದೂ, ಬಾದಲ್ ಸರ್ಕಾರ್‌ರವರ 'ಬಾಕಿ ಇತಿಹಾಸ್' 'ಬಾಕಿ ಇತಿಹಾಸ' (ಅನು.ಎನ್.ಎಸ್.ವೆಂಕಟರಾಂ) ಎಂದೂ ಕನ್ನಡಕ್ಕೆ ಬಂದವು. ಮೋಹನ್ ರಾಕೇಶರ 'ಅಷಾಡ್-ಕ-ಏಕ್ ದಿನ್' ನಾಟಕವನ್ನು

ಸಿದ್ಧಲಿಂಗ ಪಟ್ಟಣಶೆಟ್ಟಿಯವರು 'ಆಷಾಡದ ಒಂದು ದಿನ' ಎಂದು ಅನುವಾದಿಸಿದ್ದಾರೆ. ಇತ್ತೀಚೆಗೆ ಬಂದ ಅವರ ಅನುವಾದ ಕೃತಿ 'ಮೋಹನ ರಾಕೇಶರ ಮೂರು ನಾಟಕಗಳು' ಮತ್ತಷ್ಟು ನಾಟಕಗಳನ್ನು ಕನ್ನಡಕ್ಕೆ ತಂದಿದೆ.

ಎಚ್.ಎಸ್. ಶಿವಪ್ರಕಾಶ್ 'ಮಹಾಚೈತ್ರ', 'ಮಾದಾರಿ ಮಾದಯ್ಯ' ಪ್ರಸನ್ನ 'ತದ್ರೂಪಿ', 'ದಂಗೆಯ ಮುಂಚಿನ ದಿನಗಳು', ಟಿ.ಎನ್. ಸೀತಾರಾಂ 'ಆಸ್ಫೋಟ', 'ನಮ್ಮೊಳಗೊಬ್ಬ ನಾಜೂಕಯ್ಯ', ಗೋಪಾಲ ವಾಜಪೇಯಿ 'ದೊಡ್ಡಪ್ಪ', ನಿಸರ್ಗಪ್ರಿಯ 'ಬೆನಕನ ಕೆರೆ', 'ಸ್ವರ್ಗಸ್ಥ', ಬರಗೂರು ರಾಮಚಂದ್ರಪ್ಪ'ನಂ. ಸಂಗಪ್ಪ', 'ಭರತನಗರಿ', ಕೀ.ರಂ. ನಾಗರಾಜ 'ನೀಗಿಕೊಂಡ ಸಂಸ, 'ಕಾಲಜ್ಞಾನಿ ಕನಕ', ಹೂಲಿಶೇಖರ್ 'ಹಾವು ಹರಿದಾಡತಾವ' ಮುಂತಾದವರು ಕಳೆದ ದಶಕದಲ್ಲಿ ನಾಟಕ ರಚನೆಯ ಮೂಲಕ ತಮ್ಮ ಕೊಡುಗೆ ನೀಡಿರುವ ಪ್ರಮುಖರು.

ಹಲವು ಕಾದಂಬರಿ, ಸಣ್ಣ ಕಥೆಗಳನ್ನು ರೂಪಾಂತರಗೊಳಿಸಿ ರಂಗ ಮಾಧ್ಯಮಕ್ಕೆ ಅಳವಡಿಸಲಾಗಿದೆ. ಅವುಗಳು ಯಶಸ್ವಿ ಪ್ರಯೋಗಗಳೂ ನಡೆದಿವೆ. ದೇವನೂರು ಮಹಾದೇವರ 'ಒಡಲಾಳ', 'ಚದುರಂಗ', 'ವೈಶಾಖ', ತೇಜಸ್ವಿಯವರ 'ಚಿದಂಬರ ರಹಸ್ಯ' ಮುಂತಾದವುಗಳ ಯಶಸ್ವೀ ರಂಗ ಪ್ರಯೋಗಗಳು ನಡೆದಿದೆ. ಬಿ.ವಿ. ಕಾರಂತರ ರೆಪರ್ಟರಿ ನಾಟಕ ಕರ್ನಾಟಕ ರಂಗಾಯಣದವರ 'ಕುಸುಮಬಾಲೆ'ಯ ರಂಗ ಪ್ರಯೋಗ ಮತ್ತು ಅಡಿಗರ 'ಭೂಮಿಗೀತೆ'ದ ರಂಗ ಅಭಿವ್ಯಕ್ತಿ ಮೈಲಿಗಲ್ಲು ಸಾಧನೆಗಳೆನಿಸಿವೆ.

ಬೀದಿ ನಾಟಕಗಳು ಸಾಮಾಜಿಕ ಕಳಕಳಿಯಿಂದ ತುಂಬಿದ ನಿರ್ದಿಷ್ಟ ಸಂದೇಶಗಳನ್ನು ಹೊತ್ತ ವಿಚಾರಪ್ರಚೋದಕ ನಾಟಕಗಳ ಸ್ವರೂಪ ಪಡೆದಿವೆ. ಕನಿಷ್ಠ ರಂಗಪರಿಕರಗಳನ್ನು ಬಳಸಿಕೊಂಡ ಪ್ರೇಕ್ಷಕರಿದ್ದಲ್ಲಿಗೇ ನಾಟಕವನ್ನು ಕೊಂಡೊಯ್ದು ಆಡಿಸಿ ನಾಟಕ ಮಾಧ್ಯಮದ ಮುಖಾಂತರ ಒಂದು ಸಂವಾದ ಏರ್ಪಡಿಸುವ ಕ್ರಮ ಈ ಬೀದಿ ನಾಟಕಗಳ ವೈಶಿಷ್ಟ್ಯ. ವಿಜಯಾ 'ಕೇಳ್ರಪ್ಪೋ ಕೇಳ್ರಿ', 'ಗೆಳೆಯರ ಗುಂಪಿನ ಎ.ಎಸ್.ಮೂರ್ತಿ, ಚಂದ್ರಶೇಖರ ಪಾಟೀಲ ಮುಂತಾದವರ ಬೀದಿನಾಟಕಗಳು ಈ ಪ್ರಕಾರಕ್ಕೆ ಸಂದ ಉತ್ತಮ ಕೊಡುಗೆಗಳು. ಸಮುದಾಯ ನಾಟಕ ತಂಡದ ಪ್ರಸನ್ನ ಮತ್ತು ಸಿ.ಜಿ. ಕೃಷ್ಣಸ್ವಾಮಿ ಬೀದಿ ನಾಟಕಗಳ ಮೂಲಕ ರಂಗ ಚಳವಳಿಗೆ ಕೊಡುಗೆ ನೀಡಿದ್ದನ್ನು ಇಲ್ಲಿ ಮರೆಯುವಂತಿಲ್ಲ. ಕನ್ನಡದ ಬೀದಿ ನಾಟಕಗಳು ಜರ್ಮನ್ ನಾಟಕಕಾರ ಬರ್ಟೋಲ್ಟ್ ಬ್ರೆಕ್ಟ್‌ನ 'ಮುಕ್ತ ರಂಗಭೂಮಿ' ಮತ್ತು ಬಂಗಾಳಿ ನಾಟಕಕಾರ ಬಾದಲ್ ಸರ್ಕಾರದ ಪ್ರಭಾವವನ್ನು ಮೈಗೂಡಿಸಿಕೊಂಡು ಬಂದವು. 'ಧನ್ವಂತರಿ ಚಿಕಿತ್ಸೆ', 'ಜಗದಂಬೆಯ ಬೀದಿ ನಾಟಕ', 'ಬಲ್ಚಿ' 'ದಲಿತರು ಬರುವರು ದಾರಿ ಬಿಡಿ' ಮುಂತಾದವು ಕನ್ನಡದ ಮುಖ್ಯ ಬೀದಿ ನಾಟಕಗಳ ಸಾಲಿಗೆ ಸೇರುತ್ತವೆ.

ಪ್ರಸಾರ ನಾಟಕಗಳು 'ಮೂಕ ನಾಟಕಗಳು', ಛಾಯ ನಾಟಕಗಳು, ಅಣಕವಾಡುಗಳು ಮುಂತಾದ ಹಲವು ಪ್ರಕಾರದ ನಾಟಕಗಳು ಪರಿಮಿತ ರೀತಿಯಲ್ಲಿ ತಮ್ಮ ಕೊಡುಗೆ ನೀಡುತ್ತ ಬಂದಿವೆ.

ಇಷ್ಟೆಲ್ಲ ಚಟುವಟಿಕೆಗಳ ನಡುವೆಯೂ ಆಧುನಿಕ ಜೀವನದ ಸಂಕೀರ್ಣತೆಯನ್ನು ನಾಟಕ ರೂಪದಲ್ಲಿ ಹಿಡಿಯುವ ಬಗೆ ಹೇಗೆ ಎಂಬುದು ನಾಟಕಕಾರನ ಮುಂದಿರುವ ಪ್ರಮುಖ ಸವಾಲುಗಳಲ್ಲಿ ಒಂದಾಗಿದೆ. ನಾಟಕವನ್ನು ಸಾಹಿತ್ಯ ಪ್ರಕಾರವಾಗಿ ನೋಡುತ್ತ ಅಧ್ಯಯನ ನಡೆಸಿರುವಂತೆ, 'ರಂಗಭೂಮಿ'ಯಾಗಿ ನಾಟಕದ ವ್ಯವಸ್ಥಿತ ಅಭ್ಯಾಸ ಇನ್ನೂ ಆಗಬೇಕಿದೆ. ಹಾಗಿದ್ದರೂ, ಸಿಂಧುವಳ್ಳಿ ಅನಂತಮೂರ್ತಿ, ಕೆ.ವಿ. ಸುಬ್ಬಣ್ಣ, ಪ್ರಸನ್ನ ಮುಂತಾದವರು ಈ ನಿಟ್ಟಿನಲ್ಲಿ ಕೆಲವು ಉಪಯುಕ್ತ ಗ್ರಂಥಗಳನ್ನು ಹೊರತಂದಿದ್ದಾರೆಂಬುದು ಗಮನಾರ್ಹ ಸಂಗತಿ. ಪಾಶ್ಚಾತ್ಯ ದೇಶಗಳಲ್ಲಿ

ಬಂದಿರುವ ರಂಗಭೂಮಿ ಸಾಹಿತ್ಯವನ್ನು ಗಮನಿಸಿದಾಗ, ಇಲ್ಲಿ ಕಂಡುಬರುವ ಮತ್ತೊಂದು ದೊಡ್ಡ ಕೊರತೆ ಪ್ರಮುಖ ನಟ ನಟಿಯರ ಅಭಿನಯದ ಥಿಯರಿಗಳು ಹುಟ್ಟಿ ಬಂದಿಲ್ಲ ಎಂಬುದು.

ಶ್ರೀ ರಂಗರ ನಂತರ 'ತುಘಲಕ್', 'ಜೋಕುಮಾರಸ್ವಾಮಿ', 'ಸಂಕ್ರಾಂತಿ', 'ಹಯವದನ', 'ತಲೆದಂಡ' ಮುಂತಾದ ಉತ್ತಮ ನಾಟಕಗಳು ಬಂದಿವೆ. ಆದರೆ ಪರಂಪರೆಯೊಂದನ್ನು ನಿರ್ಮಿಸಬಲ್ಲಂಥ ನಾಟಕಕಾರರು ಬಂದಿಲ್ಲ. ಬಹುಮಟ್ಟಿಗೆ ಪ್ರೇಕ್ಷಕರಿಗೆ ಮನರಂಜನೆಯ ಸಾಧನವಾಗಿಯೇ ಉಳಿದಿರುವ ನಾಟಕ ಜನತೆಯ ಸಾಂಸ್ಕೃತಿಕ ಬದುಕಿನ ಅಂಗವಾಗಿ ರೂಪಗೊಂಡಿಲ್ಲ.

ಬಿ.ವಿ. ಕಾರಂತ, ಪ್ರಸನ್ನ, ಸಿ.ಜಿ. ಕೃಷ್ಣಸ್ವಾಮಿ ಮುಂತಾದ ದಕ್ಷ ನಿರ್ದೇಶಕರ ವೈಯಕ್ತಿಕ ಸಾಧನೆಗಳು ಕಾಲಕಾಲಕ್ಕೆ ಮಿಂಚಿರುವುದು ಕಂಡು ಬಂದರೂ, ಅವಿಚ್ಛಿನ್ನ ಪರಂಪರೆಯೊಂದು ಇನ್ನೂ ಬೆಳೆದಿಲ್ಲ. ಸಾಮಾಜಿಕ, ರಾಜಕೀಯ ಪಲ್ಲಟಗಳಿಗೆ ಅನುಗುಣವಾಗಿ ರಂಗಭೂಮಿ ಹೊಸ ಹೊಸ ಪ್ರಭಾವ, ಪ್ರೇರಣೆಗಳು, ಒಲವುಗಳನ್ನು ಕಂಡುಕೊಳ್ಳುತ್ತ ಅವುಗಳನ್ನು ಮೈಗೂಡಿಸಿಕೊಂಡು ಮುಂದುವರಿಯಬೇಕಾದ ಅಗತ್ಯವಿದೆ. ಹಾಗಾದಾಗ ಮಾತ್ರ ರಂಗಭೂಮಿ ಜನತೆಯ ಸಾಂಸ್ಕೃತಿಕ ಬದುಕಿನ ಅಂಗವಾಗಿ ಅರ್ಥಪೂರ್ಣ ಮಾಧ್ಯಮವಾಗಿ ರೂಪುಗೊಳ್ಳಲು ಸಾಧ್ಯ.

೬. ಕನ್ನಡದಲ್ಲಿ ಆಧುನಿಕ ಕಾವ್ಯ

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಸ್ವರೂಪವನ್ನು ರೂಪಿಸಿದ ಪ್ರಭಾವಗಳಲ್ಲಿ ಎರಡು ಪ್ರಮುಖ ಅಂಶಗಳು: ಇಂಗ್ಲಿಷ್ ವಿದ್ಯಾಭ್ಯಾಸದ ಮೂಲಕ ಉಂಟಾದ ಪಾಶ್ಚಾತ್ಯ ಪ್ರಭಾವ ಮತ್ತು ರಾಜಕೀಯ ಹೋರಾ'ಟದ ಮೂಲಕ ಉಂಟಾದ ರಾಷ್ಟ್ರೀಯತೆಯ ಪ್ರಜ್ಞೆ. ಒಂದು ಕಡೆ ಹೊರ ಜಗತ್ತಿನ, ವಿಜ್ಞಾನ-ಯಂತ್ರ ನಾಗರಿಕತೆಯ ಆಕರ್ಷಣೆ, ಇನ್ನೊಂದು ಕಡೆ ಕಳೆದು ಹೋದ ಸುವರ್ಣಗತ-ಯುಗದ ಪುನರ್ನಿರ್ಮಾಣದ ಅದಮ್ಯ ಬಯಕೆ. ಹೀಗೆ ಸಂದಿಗ್ಧ ಸ್ಥಿತಿಯಲ್ಲಿದ್ದ ಭಾರತೀಯ ಮನಸ್ಸಿನ ಸ್ಥಿತಿ ಕನ್ನಡ ಸಾಹಿತ್ಯದಲ್ಲೂ ಪ್ರಕಟಗೊಂಡಿತು. ಹಾಗೂ ಇಂಥ ಸಂದಿಗ್ಧತೆಗೆ ಹತ್ತೊಂಬತ್ತನೆಯ ಶತಮಾನದ ಬ್ರಿಟಿಷ್ ರಮ್ಯ ಸಂಪ್ರದಾಯ ಸೂಕ್ತ ಮನೋಭೂಮಿಕೆಯನ್ನು ನಿರ್ಮಿಸುವ ಸಾಧನವಾಗಿ ಒದಗಿಬಂತು.

ಆಧುನಿಕ ಕನ್ನಡ ಸಾಹಿತ್ಯದ ಆದಿ ಭಾಗ – ೧೮೫೦ ರಿಂದ ಸುಮಾರು ಒಂದು ಶತಮಾನ ಕಾಲ – ಹೊಸ ರಾಷ್ಟ್ರೀಯ ಪ್ರಜ್ಞೆಯೊಂದು ದಟ್ಟವಾಗಿ ಆವರಿಸಿದ್ದ ಕಾಲ. ತನ್ನ ತನದ ಸ್ಥಾಪನೆಗಾಗಿ ದೇಶವೊಂದು ರಾಜಕೀಯ ಸಮರದಲ್ಲಿ ನಿರತವಾಗಿದ್ದ ಕಾಲ. ಈ ಕಾಲದಲ್ಲೇ ರಮ್ಯ ಸಂಪ್ರದಾಯ ಮತ್ತು ಅದಕ್ಕೆ ಪ್ರತಿಕ್ರಿಯೆಯಾಗಿ ವಾಸ್ತವವಾದ ಆಗಮಿಸಿದವು. ಸ್ವಾತಂತ್ರ್ಯಾ ನಂತರದ ಕಾಲು ಶತಮಾನದ ಅವಧಿ ಕನ್ನಡ ಕಾವ್ಯದ ಪ್ರಯೋಗಶೀಲತೆಯ ಉತ್ಸಾಹದ ಕಾಲ, ತನ್ನ ಅತ್ಯುನ್ನತ ಪ್ರತಿನಿಧಿಗಳನ್ನು ಬಿ.ಎಂ. ಶ್ರೀಕಂಠಯ್ಯ ಮತ್ತು ಎಂ. ಗೋವಿಂದ ಪೈ ಅವರಲ್ಲಿ ಕಂಡು ಕೊಂಡಿತು. ಸಂಸ್ಕೃತದಿಂದ ಕನ್ನಡಕ್ಕೆ ಬಂದಿದ್ದ ಭಾಷೆಯ ಉಪಯೋಗ, ಶೈಲಿಗಳಲ್ಲಿನ ದೋಷಗಳನ್ನು ಬಗೆಹರಿಸಿಕೊಳ್ಳಲು ಇಂಗ್ಲಿಷ್ ಭಾಷೆಯ ನೆರವು ಪಡೆದುಕೊಳ್ಳುವುದು ಉಚಿತವೆಂದು ಮನಗಂಡವರು ಬಿ.ಎಂ.ಶ್ರೀ. ಪ್ರಾಸತ್ಯಾಗದ ನಿರ್ಧಾರವನ್ನು ಧೈರ್ಯದಿಂದ ಕೈಗೊಂಡ ಪೈ ಕನ್ನಡ ಛಂದಸ್ಸಿನಲ್ಲಿ ಸುಧಾರಣೆ ತರಲು ಯತ್ನಿಸಿದರು. 'ಕನ್ನಡಕ್ಕೆ ಪ್ರಾಸವೇನು ವೇದವಾಕ್ಯವೂ ಅಲ್ಲ, ಶಾಶ್ವತವೂ ಅಲ್ಲ, ಅದನ್ನು ಬೇಕಾದಂತೆ ಬಿಟ್ಟುಬಿಡಬಹುದು' ಎಂಬ ನಿಲುವಿನಿಂದ ಹೊರಟವರು ಗೋವಿಂದ ಪೈ. ಈ ಪ್ರಾಸತ್ಯಾಗದಿಂದಾಗಿ ಕವಿಗೆ ಭಾವಗಳನ್ನು ಅಭಿವ್ಯಕ್ತಿಸುವಲ್ಲಿ ಹೆಚ್ಚಿನ ಸ್ವಾತಂತ್ರ್ಯ ಲಭಿಸಿತು. ಯೇಸುವಿನ ಅಂತ್ಯವನ್ನು ಚಿತ್ರಿಸುವ ಗೊಲ್ಗೊಥಾ ಮತ್ತು ಬುದ್ಧನ ಕಡೆಯ ದಿನಗಳನ್ನು

ಚಿತ್ರಿಸುವ ವೈಶಾಖಿ ಇವರ ನೀಳ್ಗವನಗಳು. ಇವಲ್ಲದೆ 'ಗಿಳಿವಿಂಡು', 'ನಂದಾದೀಪ' ಇತ್ಯಾದಿ ಬಿಡಿ ಕವನಗಳೂ ಪ್ರಕಟಗೊಂಡಿದೆ. ಕನ್ನಡ ಸಾಹಿತ್ಯದ ಆಗಿನ ಸಂದರ್ಭದಲ್ಲಿ ಈ ಇಬ್ಬರು ಮಹನೀಯರು ಉಂಟುಮಾಡಿದ ಕ್ರಾಂತಿಯ ಫಲವಾಗಿ ಹೊಸ ರೀತಿಯ ಕಾವ್ಯ ಮತ್ತು ಕಾವ್ಯ ಭಾಷೆಗಳು ಹುಟ್ಟಿಕೊಂಡವು. ಇಂಗ್ಲಿಷ್ ಕವಿತೆಗಳನ್ನು ಕನ್ನಡಕ್ಕೆ ಭಾಷಾಂತರಿಸುವ ಮೂಲಕ ಕನ್ನಡ ಭಾಷೆಗೆ ಹೊಸ ಆಯಾಮಗಳನ್ನು ದೊರಕಿಸಿಕೊಡಲಾಯಿತು. ಜೊತೆಗೆ ಆಂಗ್ಲ ವಿದ್ಯಾಭ್ಯಾಸದ ಮೂಲಕ ಆಗಮಿಸಿದ ಸಂಕೀರ್ಣ ವಿಚಾರಗಳನ್ನು ಅಭಿವ್ಯಕ್ತಿಸಲು ಭಾಷೆಯನ್ನು ಹೆಚ್ಚು ವ್ಯಾಪಕವಾಗಿ ಮತ್ತು ಸಮರ್ಥವಾಗಿ ಬಳಸಿಕೊಳ್ಳುವ ಅನಿವಾರ್ಯವೂ ಉಂಟಾಯಿತು. ಸಂಸ್ಕೃತಭೂಯಿಷ್ಠವಾಗಿದ್ದ ಸಮಕಾಲೀನ ವಸ್ತುಸ್ಥಿತಿಗೆ ವಿಮುಖವಾಗಿದ್ದ ಕನ್ನಡ ಕಾವ್ಯಕ್ಕೆ ಆಡು ಭಾಷೆಯ ಬಳಕೆಯ ಮೂಲಕ ಮತ್ತೆ ಚೈತನ್ಯ ತುಂಬಲಾಯಿತು. ಜಾನಪದ ಕಾವ್ಯ ಪ್ರಕಾರಗಳಿಂದ ಸತ್ವ ಹೀರಿಕೊಳ್ಳುವ ಯತ್ನವೂ ನಡೆದು 'ದೇಸಿಕಾವ್ಯ'ದ ಹುಟ್ಟಿಗೆ ಕಾರಣವಾಯಿತು. 'ಮಾರ್ಗ ಕಾವ್ಯ'ವೂ ಗಟ್ಟಿ ಬೇರುಗಳನ್ನು ಹೊಂದಿದ್ದರಿಂದ ಮಾರ್ಗ – ದೇಸಿ ಕಾವ್ಯಗಳು ಒಟ್ಟೊಟ್ಟಿಗೆ ಮುಂದುವರೆದವು.

ಬಿ.ಎಂ.ಶ್ರೀ.ಯವರ 'ಇಂಗ್ಲಿಷ್ ಗೀತೆಗಳು' ಆಧುನಿಕ ಕನ್ನಡ ಕಾವ್ಯದ ಪ್ರಮುಖ ಚಾರಿತ್ರಿಕ ಘಟ್ಟಗಳಲ್ಲೊಂದು. ೧೯೨೧ರಲ್ಲಿ ಪ್ರಕಟವಾದ ಈ ಸಂಗ್ರಹ ೬೩ ಕವನಗಳನ್ನು ಒಳಗೊಂಡಿದೆ. ಶೆಲ್ಲಿ ಕೀಟ್ಸ್ ವರ್ಡ್ಸ್‌ವರ್ತ್, ಬೈರನ್, ಕೋಲರಿಜ್ ಟೆನಿಸನ್, ಬ್ರೌನಿಂಗ್ ಸ್ಕಾಟ್, ಷೇಕ್ಸ್‌ಪಿಯರ್, ಬರ್ನ್ಸ್, ಕಾಂಪಬೆಲ್ ಇತ್ಯಾದಿ ಕವಿಗಳ ಹಲವಾರು ಕವನಗಳ ಅನುವಾದವನ್ನು ಇದರಲ್ಲಿ ಕಾಣಬಹುದು. ರಮ್ಯ ಕಾವ್ಯ ಸಂಪ್ರದಾಯದ ವಸ್ತು ವೈವಿಧ್ಯ ಈ ಸಂಗ್ರಹದ ಮೂಲಕ ಕನ್ನಡಕ್ಕೆ ಆಗಮಿಸಿತು. ಪ್ರಕೃತಿ ವರ್ಣನೆ, ಪ್ರೇಮ, ದೇಶಪ್ರೇಮ, ಯುದ್ಧ, ಧೀರೋದಾತ್ತತೆ ಇತ್ಯಾದಿ ಸಾರ್ವಕಾಲಿಕವೂ ಸರ್ವಸಮ್ಮತವೂ ಆದಂಥ ವಿಶ್ವಾತ್ಮಕ ಮೌಲ್ಯಗಳನ್ನು ಎತ್ತಿ ಹಿಡಿಯುವ ಕವನಗಳನ್ನು ಬಿ.ಎಂ.ಶ್ರೀ. ಆಯ್ದುಕೊಂಡರು. ಇವುಗಳನ್ನು ಅನುವಾದಕ್ಕಿಂತಲೂ ಹೆಚ್ಚಾಗಿ 'ಅನುಸೃಷ್ಟಿ' ಎಂದು ಕರೆಯಬಹುದಾಗಿದೆ.

'ಇಂಗ್ಲಿಷ್ ಗೀತೆಗಳು' ಸಂಗ್ರಹವನ್ನು ಕುರಿತ ಮಾಸ್ತಿಯವರ ಮಾತುಗಳು ಉಲ್ಲೇಖಾರ್ಹ. 'ಆಂಗ್ಲೇಯ ಸಾಹಿತ್ಯವನ್ನು ಕಾಣದೆ ಇರುವವರಿಗೆ ಆ ಸಾಹಿತ್ಯದ ಐಶ್ವರ್ಯವೆಂಥದು ಎಂದು ತಿಳಿಯುವುದಕ್ಕೆ ಕನ್ನಡದಲ್ಲಿ ಇಂಥ ಒಂದು ಭಾಷಾಂತರ ಬೇಕಿತ್ತು. ಈ ಅತ್ಯವಶ್ಯಕವಾದ ಕಾರ್ಯವನ್ನು ಕೈಗೊಂಡಿದ್ದಕ್ಕಾಗಿ ಕನ್ನಡಿಗರು ಗ್ರಂಥಕರ್ತರನ್ನು ವಂದಿಸಬೇಕಾಗಿದೆ. ಶ್ರೀಕಂಠಯ್ಯನವರು ಪ್ರಯೋಗಿಸಿರುವ ಛಂದೋರೂಪಗಳು ಸುಂದರವಾಗಿವೆ, ಕಾವ್ಯವಸ್ತುವಿಗೆ ಅನುಕೂಲವಾಗಿವೆ; ಕನ್ನಡದ ಮರ್ಯಾದೆಗೆ ಒಪ್ಪಿವೆ. ಮುಖ್ಯವಾಗಿ ಶೈಲಿಯಲ್ಲಿಯೂ, ಛಂದಸ್ಸಿನಲ್ಲಿಯೂ ಶ್ರೀಕಂಠಯ್ಯನವರು ಮಾರ್ಗದರ್ಶಿಗಳು. ಇನ್ನು ಮೇಲೆ ಬರುವ ಕವಿಗಳು ಇವರು ತೋರಿಸಿ ಕೊಟ್ಟಿರುವ ದಾರಿಯಲ್ಲಿ ಹೆಚ್ಚು ಹೆಚ್ಚಾಗಿ ನಡೆಯುವರೆಂಬುದರಲ್ಲಿಯೂ ಇದರಿಂದ ನಮ್ಮ ಸಾಹಿತ್ಯವೂ ಪಂಡಿತರಿಗೆ ಮಾತ್ರವಲ್ಲದೆ, ಹಿಂದಿಗಿಂತಲೂ ಹೆಚ್ಚಾಗಿ ಜನಸಾಮಾನ್ಯಕ್ಕೆ ನಿಲುಕುವತಾಗುತ್ತದೆಂಬುದರಲ್ಲಿ ಸಂದೇಹವಿಲ್ಲ. 'ಇಂಗ್ಲಿಷಿನ ಅಂತ್ಯ ಪ್ರಾಸ', ಚರಣವಿನ್ಯಾಸಗಳನ್ನೂ ಜನರ ಆಡುಭಾಷೆಯನ್ನೂ ಕನ್ನಡಕ್ಕೆ ಒಗ್ಗಿಕೊಂಡು, ಹಳೆಯ ಮಾತ್ರಾಗಣಗಳನ್ನು ಆಧಾರವಾಗಿಟ್ಟುಕೊಂಡೇ ಹೊಸ ಹೊಸ ಪ್ರಯೋಗಗಳನ್ನು ಸಾಧಿಸಿದ್ದು ಬಿ.ಎಂ.ಶ್ರೀ.ಯವರ ಹೆಗ್ಗಳಿಕೆ. ಇಂಗ್ಲಿಷ್ ಗೀತೆಗಳಲ್ಲಿ ಇಂಗ್ಲಿಷ್ ರಮ್ಯ ಕಾವ್ಯ ಯುಗದ ಕವಿಗಳನ್ನು ಮಾತ್ರ ಕನ್ನಡಕ್ಕೆ ತಂದಿಲ್ಲ, ರಮ್ಯ ಕಾವ್ಯ ಸಂಪ್ರದಾಯಕ್ಕೆ ಸೇರಿದ ರಮ್ಯ ಯುಗದ ಹೊರಗಿನ ಕವಿಗಳನ್ನೂ ಈ ಕಾವ್ಯ ಸಂಗ್ರಹದಲ್ಲಿ ಪರಿಚಯಿಸಿದ್ದಾರೆ. ಷೇಕ್ಸ್‌ಪಿಯರ್‌ನ ಎರಡು ಕವಿತೆಗಳನ್ನೂ ಶ್ರೀಯವರ ಮೂರು ಸ್ವರಚಿತ

ಕವನಗಳನ್ನು 'ಇಂಗ್ಲಿಷ್ ಗೀತ'ಗಳು ಒಳಗೊಂಡಿವೆ. 'ಇಲ್ಲಿ ಕೊಟ್ಟಿರುವ ಕವನಗಳೆಲ್ಲ ಇಂಗ್ಲಿಷ್ ಕಾವ್ಯಮಾಲೆಯ ನಾಯಕರತ್ನಗಳೆಂದು ಆಯ್ದುಕೊಂಡವಲ್ಲ. ಉತ್ತಮವಾದ ಕವಿಗಳೂ ಇಲ್ಲಿ ಎಲ್ಲರೂ ಇಲ್ಲ. ಆಗಾಗ್ಗೆ ಓದುತ್ತಿರುವಾಗ ನನ್ನ ಮನಸ್ಸಿಗೊಪ್ಪಿ ನನ್ನ ಕೈ ಮೀರಿದುದಾಗಿ ಕಂಡ ಗೀತಗಳಿವು' ಎಂದು ಈ ಕಾವ್ಯ ಸಂಗ್ರಹಕ್ಕೆ ಬರೆದಿರುವ ಆರಿಕೆಯಲ್ಲಿ ಶ್ರೀಯವರು ಹೇಳಿಕೊಂಡಿದ್ದಾರೆ. ಕೀಟ್ಸ್, ಶೆಲ್ಲಿಯಂಥ ಕವಿಗಳ ರಚನೆಗಳಲ್ಲೂ ಸಂಕೀರ್ಣವಾದವುಗಳನ್ನು ಬಿ.ಎಂ.ಶ್ರೀ. ಆಯ್ದುಕೊಂಡಿಲ್ಲ. ಕನ್ನಡ ಭಾಷೆಗೆ ಇಂಗ್ಲಿಷ್ ಭಾಷೆಯ ಸಂಕೀರ್ಣತೆಯನ್ನು ದಕ್ಕಿಸಿಕೊಳ್ಳುವಷ್ಟು ಸಾಮರ್ಥ್ಯವಿರಲಿಲ್ಲವೆಂಬ ಅಭಿಪ್ರಾಯವೂ ಕೇಳಿಬಂದಿದೆ. ಆದರೆ ಈ ವಾದ ಅಷ್ಟು ಸಮಂಜಸವಾದುದೆಂದು ತೋರುವುದಿಲ್ಲ. ಯಾಕೆಂದರ ಇಂಗ್ಲಿಷ್ ಕವನಗಳ ಆಯ್ಕೆಯ ಪ್ರೇರಣೆ ಕೇವಲ ಭಾಷಾ ಉಪಯೋಗದ ಸಾಧ್ಯಾ ಸಾಧ್ಯತೆಯ ಕಾಳಜಿಗಿಂತಲೂ ವಿಶ್ವಾಸಾತ್ಮಕ ಮೌಲ್ಯಗಳ ವಿಶೇಷ ಒಲವಿನಿಂದ ಕೂಡಿ ಬಂದಿದ್ದು ಎಂಬುದನ್ನು ಮರೆಯಲಾಗದು. ಇಂಥ ಒಲವಿಗೂ, ಆಗ ಮೊಳೆಯತೊಡಗಿದ್ದ ರಾಷ್ಟ್ರೀಯತೆಯ ಪ್ರಜ್ಞೆಗೂ ಆಳವಾದ ಸಂಬಂಧವಿದೆ. ವಸ್ತುವಿನ ಸಾರ್ವಕಾಲಿಕತೆಯನ್ನು ಈ ಕವನಗಳ ಆಯ್ಕೆಯ ಹಿಂದಿನ ಪ್ರೇರಣೆಯಾಗಿ ಅವರು ಬಳಸಿಕೊಂಡಿರುವ ಹಿಂದೆ, ಹೊಸ ಜಗತ್ತಿಗೆ ಕಾಲಿಡುತ್ತಿದ್ದ ಕನ್ನಡ ಸಾಹಿತ್ಯ ಆಳುವ ವರ್ಗದ ಸಾಹಿತ್ಯದೊಂದಿಗೆ ಭಾವನಾತ್ಮಕ ಸಮೀಕರಣ ಸಾಧಿಸುವ ರಾಷ್ಟ್ರೀಯ ಅಗತ್ಯ ಕೂಡ ಕೆಲಸ ಮಾಡಿದೆಯೆಂಬುದನ್ನು ಮರೆಯಲಾಗದು, ಅಂತಾರಾಷ್ಟ್ರೀಯತೆಯ, ವಿಶ್ವನಾಗರಿಕತೆಯ ಮೌಲ್ಯಗಳು ಈಗಿನಷ್ಟು ಅನಾಕರ್ಷಕವಾಗಿರಲು ಆಗ ಸಾಧ್ಯವಿರಲಿಲ್ಲ. ರಾಷ್ಟ್ರೀಯ ಆಂದೋಲನದ ಐತಿಹಾಸಿಕ ಸಂದರ್ಭವನ್ನು ತಾತ್ವಿಕ ಹಿನ್ನಲೆಯನ್ನೂ ಹೊಸ ಅಭಿವ್ಯಕ್ತಿಯಲ್ಲಿ ಹಿಡಿಯುವ ಪ್ರಯತ್ನದ ಮೊದಲ ಧ್ವನಿ ಬಿ.ಎಂ.ಶ್ರೀ.ಯವರದು. ಇದೇ ತಾತ್ವಿಕತೆ ಮತ್ತು ಆಸಕ್ತಿಗಳು ನವೋದಯಕಾವ್ಯದ ಪ್ರಮುಖ ಕಾಳಜಿಗಳಾಗಿ ಮುಂದುವರೆದವು.

ಇಂಥದೇ ಪ್ರಯತ್ನ ೨೦ನೆಯ ಶತಮಾನದ ಆರಂಭ ಕಾಲದಲ್ಲಿ ಬೇರೆಯವರಿಂದ ಕೂಡ ನಡೆಯಿತು ಎನ್ನುವುದಕ್ಕೆ ಪುರಾವೆಗಳಿವೆ. ಎಸ್.ಜಿ. ನರಸಿಂಹಾಚಾರ್ಯರ 'ಹೊಗೆಯ ಗಾಡಿ' ಜಯರಾಯಾಚಾರ್ಯರ 'ರೈಲುಗಾಡಿ' ಮುಂತಾದವು ಇದಕ್ಕೆ ಒಳ್ಳೆ ಉದಾಹರಣೆಗಳು. ಸುಲಲಿತ ಶೈಲಿಯಲ್ಲಿ ಶ್ರೀಯುತರಿಗಿಂತ ಮುಂಚಿತವಾಗಿ ಅನುವಾದ, ಸ್ವತಂತ್ರ ರಚನೆಯಲ್ಲಿ ತೊಡಗಿದ್ದ ಕವಿ ಪಂಜೆ ಮಂಗೇಶರಾಯರು. ಕೊಡಗರ ನಾಡಗೀತೆಯಾದ 'ಹುತ್ತರಿ ಹಾಡು' ಪಂಜೆಯವರ ಕೊಡುಗೆ ಅವರ 'ನಾಗರ ಹಾವೇ .....' ನಂಥ ಕವಿತೆಗಳು ಕನ್ನಡಿಗರ ಮನೆ ಮನೆಯಲ್ಲೂ ಚಿರಪರಿಚಿತವಾದವು.

೨೦ನೆಯ ಶತಮಾನದ ಆರಂಭ ಕಾಲದ ಇನ್ನೊಬ್ಬ ಪ್ರಮುಖ ಕವಿ ಸಕ್ಕರಿ ಬಾಳಾಚಾರ್ಯರು (ಶಾಂತಕವಿ). ಕನ್ನಡ ಭಾಷೆಯನ್ನು ಹೊಸ ರೀತಿಯಲ್ಲಿ ಬಳಸಿಕೊಳ್ಳುತ್ತ, ಸೊಗಸಾದ ಕವನಗಳನ್ನೂ, ಅನುವಾದಗಳನ್ನೂ ನೀಡಿದ್ದಾರೆ:

ವೀಣೆಗಳು ಮುಸುಕಿಟ್ಟು ಮೌನದಿ
ಕೋಣೆಯೊಳಡಗಿಹವು ಬಿನ್ನನೆ
ಜಾಣಳಿದು ನಾಟಕಗಳುಳಿದವು ತೆರೆಯ ಮರೆಯೊಳಗೆ॥

ಕಲೆಗಳಿಗೆ ಆಶ್ರಯದಾತರಾಗಿದ್ದ ಶ್ರೀಚಾಮರಾಜ ಒಡೆಯರ್ ಅವರು ೧೮೯೪ರಲ್ಲಿ ಮೃತರಾದ ಸಂದರ್ಭದಲ್ಲಿ ಷಟ್ಪದಿ ಛಂದಸ್ಸಿನಲ್ಲಿ ರಚಿತವಾದ ಹೊಸ ಬಗೆಯ ಶೋಕ ಗೀತೆಯಿದು.

ಶ್ರೀಯವರು ಹಾಕಿಕೊಟ್ಟ ಮಾರ್ಗದಲ್ಲಿ ನಡೆಯುತ್ತ ಅದಕ್ಕೆ ಹೆಚ್ಚಿನ ವಿಸ್ತಾರ ವ್ಯಾಪ್ತಿ ಕಲ್ಪಿಸಿಕೊಟ್ಟವರು ಡಿ.ವಿ.ಜಿ. ಭಾರತದ ಪ್ರಾಚೀನ ಸಂಪ್ರದಾಯ ಸಂಸ್ಕೃತಿಗಳನ್ನು ಎತ್ತಿ ಹಿಡಿಯುತ್ತ,

ಸಂಪ್ರದಾಯಿಕ ದೃಷ್ಟಿಯೊಂದಿಗೆ ಮುಂದುವರೆದ ಪು.ತಿ. ನರಸಿಂಹಚಾರ್, ಗೋವಿಂದ ಪೈ, ವಿ. ಸೀತಾರಾಮಯ್ಯ ಮುಂತಾದವರು, ಡಿ.ವಿ.ಜಿ.ಯಂತೆ ಹೊಸ ಮಾರ್ಗ ಸಂಪ್ರದಾಯಕ್ಕೆ ಸೇರಿದವರು. ಈ ಕವಿಗಳ ಕಾವ್ಯದಲ್ಲಿ ಚಿಂತನಶೀಲ ಗುಣ ಗಾಂಭೀರ್ಯ, ಆಳವಾದ ವಿದ್ವತ್ತು, ಸಂಯಮಗಳು ಎದ್ದು ಕಾಣುವ ಗುಣಗಳು. ಡಿ.ವಿ.ಜಿ.ಯವರ 'ಮಂಕುತಿಮ್ಮನ ಕಗ್ಗ' (೧೯೩೪) ದಾರ್ಶನಿಕ ಗುಣಗಳನ್ನು ಪಡೆದಿದ್ದರೆ, 'ಅಂತಃಪುರ ಗೀತೆ' (೧೯೫೦) ನೃತ್ಯ ಲಯದಿಂದ ಕೂಡಿದ ಲಲಿತ ಗೀತೆಗಳ ಗೇಯತೆಯನ್ನು ಹೊಂದಿದೆ. 'ವನಸುಮ' ಎನ್ನುವುದು ಇವರ ಬಹಳ ಜನಪ್ರಿಯ ಗೀತೆ. ಹಳೆಯ ಛಂದಸ್ಸು ವಸ್ತುವನ್ನು ಉಳಿಸಿಕೊಂಡು ಕಾವ್ಯ ಕ್ರಮದಲ್ಲಿ ಹೊಸತನ ತಂದಿರುವುದು ಇವರ ಕಾವ್ಯದ ವೈಶಿಷ್ಟ್ಯ.

ಹಾಗೆಯೇ ಭಾವದೊಂದಿಗೆ ಚಿಂತನಶೀಲತೆಯನ್ನು ಮೇಳೈಸಿ ಅಮೂಲ್ಯ ಕವನಗಳನ್ನು ಕೊಡುಗೆಯಾಗಿ ನೀಡಿರುವ ಪು.ತಿ. ನರಸಿಂಹಚಾರ್ಯರ 'ಅಹಲ್ಯೆ', 'ಗೋಕುಲ ನಿರ್ಗಮನ' ಶ್ರೇಷ್ಠ ಗೀತರೂಪಕಗಳು. 'ಹಣತೆ', 'ಶಾರದ ಯಾಮಿನೀ', 'ಮಾಂದಳಿರು', 'ಮಲೆದೇಗುಲ' ಮುಂತಾದ ಸಂಕಲನಗಳು ಅವರ ಕೆಲವಾರು ಶ್ರೇಷ್ಠ ಭಾವಗೀತೆಗಳನ್ನು ಒಳಗೊಡಿದೆ. ಪ್ರಕೃತಿಯ ಅನುಭವದಂತೆ ಭಕ್ತಿ ಶ್ರದ್ಧೆಗಳೂ ಕಾವ್ಯಕ್ಕೆ ಹೊಸತನವನ್ನು ತುಂಬಬಲ್ಲವು ಎಂಬ ವಿಶ್ವಾಸ ಪು.ತಿ.ನ. ಅವರ ಕಾವ್ಯದಲ್ಲಿ ಮೈದಾಳಿವೆ. ಜಗದ ಚೆಲುವಿನ ಆರಾಧನೆಯೊಂದಿಗೇ ದೈವಿಕ ಅನುಭವ. ಭಾವತೀವ್ರತೆ ಮತ್ತು ಗೇಯತೆ ಇವರ ಕಾವ್ಯವನ್ನು ರೂಪಿಸಿದೆ. ಬೆರಗು ಮತ್ತು ವಿಷಾದಗಳೂ ಇವರ ಕಾವ್ಯದ ಮುಖ್ಯ ಲಕ್ಷಣಗಳು.

ವಿ.ಸೀ. ಎಂದೇ ಖ್ಯಾತನಾಮರಾಗಿರುವ ವೀ. ಸೀತಾರಾಮಯ್ಯ ಪ್ರಮುಖ ಭಾವಗೀತಕಾರರೂ, ಬಹುಮುಖ ಪ್ರತಿಭೆಯ ಕವಿಯೂ ಆಗಿದ್ದಾರೆ. 'ಕವಿಯ ಪ್ರಪಂಚವನ್ನು ಕಣ್ಣು ತುಂಬ ನೋಡಲಿ, ತನ್ನ ಆದೇಶಗಳು ಒಂದು ಹದಕ್ಕೂ ಪಾಕಕ್ಕೂ ಬರುವಂತೆ ಮನಸ್ಸನ್ನು ನಿರಂತರವಾಗಿ ಒಂದು ಶಾಖದಲ್ಲಿಟ್ಟು ಕೊಳ್ಳಲಿ, ತನ್ನ ವ್ಯಕ್ತಿತ್ವದ ಮುದ್ರೆಯನ್ನು ಕವಿತೆಯ ಮೇಲೆ ಹಾಕಲಿ ... ಪ್ರಪಂಚಕ್ಕೆ ಒಂದು ಹೊಸ ದೃಷ್ಟಿಯನ್ನೂ, ಸಾತ್ವಿಕತೆಯಿಂದ ಮಿಡಿಯುವ ಒಂದು ಮೃದು ಜೀವನವನ್ನೂ ಕಾಣಿಕೆಯಾಗಿ ಅರ್ಪಿಸಲಿ' ಎಂದವರು ವಿ.ಸೀ. ಅವರ ಕಾವ್ಯ ವಸ್ತುವಿನ ಹರಹು ವಿಶಾಲವಾದದ್ದು. ಪ್ರೀತಿ, ವಿಶ್ವಾಸ, ಮನುಷ್ಯ ಸಂಬಂಧಗಳು, ನೋವು ನಲಿವಿನ ಸೂಕ್ಷ್ಮತೆಗಳು ಚಿತ್ರಿಸುವ ವಿ.ಸೀ. ಕನ್ನಡದ ಅತಿ ಶ್ರೇಷ್ಠ ಭಾವಗೀತೆಗಳ ಸಾಲಿಗೆ ಸೇರಬಲ್ಲ 'ಮನೆ ತುಂಬಿಸುವ' ಕವನವನ್ನು ಬರೆದವರು. ಸೂಕ್ಷ್ಮ ಸಂವೇದನೆ ಸಂಗೀತಗುಣ ಮೇಳೈಸಿರುವ ಸೊಗಸಾದ ಕವನಗಳು 'ನೆಳಲು ಬೆಳಕು' 'ದ್ರಾಕ್ಷಿ-ದಾಳಿಂಬೆ', 'ಗೀತಗಳು', 'ದೀಪಗಳು', ಮುಂತಾದ ಕವನ ಸಂಕಲನಗಳಲ್ಲಿ ಕಾಣಸಿಗುತ್ತವೆ. 'ಅಭೀಃ ಕಸ್ಮೈ ದೇವಾಯ'ದಂತಹ ಸಮರ್ಥ ಕವನಗಳೂ ವಿ.ಸೀ.ಯವರ ಲೇಖನಿಯಿಂದ ಮೂಡಿವೆ.

ಆಳವಾದ ಧಾರ್ಮಿಕ ನೆಲೆಯಿಂದ ಹೊರಟ ಈ ಕವಿತೆಗಳಲ್ಲಿ ಹಳೆಯದು ಹೊಸದು, ಪೂರ್ವ ಪಶ್ಚಿಮಗಳು ಸಂಗಮಗೊಂಡಿರುವುದನ್ನು ಕಾಣಬಹುದು. ನಮ್ಮ ಪುರಾತನ ಸಂಸ್ಕೃತಿ ಸಂಪ್ರದಾಯಗಳ ಉತ್ತಮಾಂಶಗಳನ್ನು ಉಳಿಸಿಕೊಂಡು, ಪಾಶ್ಚಿಮಾತ್ಯ ಸಂಸ್ಕೃತಿಯಲ್ಲಿ ಸ್ವೀಕಾರಾರ್ಹವೆಂದು ಕಂಡು ಬಂದ ಇತ್ಯಾತ್ಮಕ ಗುಣಗಳನ್ನು ಆಮದು ಮಾಡಿಕೊಳ್ಳುವ ವಿವೇಚನಾ ಸಾಮರ್ಥ್ಯ ಈ ಕವನಗಳಲ್ಲಿ ವಿಪುಲವಾಗಿತ್ತು. ಹೀಗಾಗಿ ತಮ್ಮ ನಿಲುವನ್ನು ಉಳಿಸಿಕೊಂಡೂ, ಕಾವ್ಯ ನಿಂತ ನೀರಾಗದಂತೆ ನೋಡಿಕೊಂಡರು. ಅದಕ್ಕೆ ಅಗತ್ಯವಾದ ಚಲನಶೀಲಗುಣಗಳನ್ನು ತಂದುಕೊಟ್ಟ ಕಾವ್ಯದ ಬೆಳವಣಿಗೆಗೆ ಕಾರಣರಾದರು.

ಮಾಸ್ತಿಯವರ 'ಅರುಣ', 'ಬಿನ್ನಹ', 'ತಾವರೆ' ಇತ್ಯಾದಿ ಭಾವಗೀತೆಗಳ ಸಂಗ್ರಹಗಳನ್ನು ಹೊರತಂದಿದ್ದಾರೆ. ಭಗವಂತನ ಅನುಗ್ರಹಕ್ಕಾಗಿ ಸಂಪೂರ್ಣಶರಣಾಗತಿ ಸಾಧಿಸಿರುವ ಬಗೆ ಮಾಸ್ತಿಯವರ 'ಶರಣಾಗತಿ' ಎಂಬ ಸುನೀತದಲ್ಲಿ ವ್ಯಕ್ತವಾಗಿದೆ. ಭಗವಂತನ ಕೃಪೆಗಾಗಿ ಕಾತರರಾಗಿರುವ, ಚೆಲುವನ್ನು ಕಂಡು ಬೆರಗುಗೊಳ್ಳುವ ಮನಸ್ಸೊಂದು ಅವರ ಕಾವ್ಯದ ಹಿಂದಿರುವುದು ಗೋಚರವಾಗುತ್ತದೆ.

ಕನ್ನಡ ನವೋದಯದ ಕಾಲದ ಅತ್ಯಂತ ಸತ್ವಶಾಲಿ ಕವನಗಳನ್ನು ಬರೆದ ಕು.ವೆಂ.ಪು. ಮತ್ತು ದ.ರಾ.ಬೇಂದ್ರೆ ಕನ್ನಡ ಕಾವ್ಯಕ್ಕೆ ಕಸುವನ್ನೂ ಚಿಂತನೆಯ ಸತ್ವವನ್ನೂ ತಂದವರು. ಕನ್ನಡ ನವೋದಯದ ಕಾವ್ಯ ಪಂರಪರೆಯ ದಿಗ್ಗಜಗಳು, ಈ ಇಬ್ಬರು ಕವಿಗಳು.

ಭಾವಗೀತೆಯನ್ನು ಸಮೃದ್ಧಗೊಳಿಸಿದ ಕು.ವೆಂ.ಪು. ತಮ್ಮ ಭಾವಗೀತೆಗಳಲ್ಲಿ ಪ್ರಕೃತಿವರ್ಣನೆ, ಸ್ನೇಹ, ಪ್ರೇಮ, ಅಧ್ಯಾತ್ಮ ಚಿಂತನೆ, ಹಾಗೆಯೇ ಸಾಮಾಜಿಕ, ಸಾಂಸ್ಕೃತಿಕ ಕೇಡುಗಳ ಬಗ್ಗೆ ಅಸಹನೆ, ಸಿಟ್ಟು ಮುಂತಾದ ಹತ್ತು ಹಲವು ವಿಷಯಗಳನ್ನು ಕಾವ್ಯಮಯವಾಗಿ ರೂಪಿಸಿದರು. 'ಸೂರ್ಯೋದಯ-ಚಂದ್ರೋದಯ ದೇವರ ದಯೆ ಕಾಣೋ' ಎಂದು ಪ್ರಕೃತಿಯ ಆರಾಧನೆಯನ್ನು ದೈವೀಕತೆಯನ್ನೂ ಸಮೀಕರಿಸಿದವರು ಕುವೆಂಪು. 'ಕೊಳಲು', 'ಪಕ್ಷಿಕಾಶಿ', 'ಅಗ್ನಿಹಂಸ', 'ಪ್ರೇಮಕಾಶ್ಮೀರ', 'ಇಕ್ಷು ಗಂಗೋತ್ರಿ', 'ಚಂದ್ರಮಂಚಕೆ ಬಾ ಚಕೋರಿ', 'ಕೋಗಿಲೆ ಮತ್ತು ಸೋವಿಯತ್‌ರಷ್ಯಾ' ಮುಂತಾದವು ಅವರ ಕವನ ಸಂಕಲನಗಳು. ರಾಮಕೃಷ್ಣ ಪರಮಹಂಸ, ವಿವೇಕಾನಂದರನ್ನು ಆದರ್ಶ ಗುರುಗಳನ್ನಾಗಿ ಇರಿಸಿಕೊಂಡಿದ್ದ ಕುವೆಂಪು ಮೋಕ್ಷವನ್ನು ಗುರಿಯಾಗಿ ಹೊಂದಿ ಅನುಭಾವ ಮಾರ್ಗದಲ್ಲಿ ನಡೆದವರು.

ಮಹತ್ವಾಕಾಂಕ್ಷೆಯ ಕವಿಯಾದ ಕುವೆಂಪು ಉನ್ನತ ಶೈಲಿಯನ್ನೂ, ಸಂಸ್ಕೃತ ಭೂಯಿಷ್ಠವಾದ ಭಾಷೆಯನ್ನೂ ಬಳಸಿಕೊಂಡು ಭವ್ಯತೆಯನ್ನು ಸಾಧಿಸುವ ಯತ್ನದಲ್ಲಿ ಉದ್ದೇಶಪೂರ್ವಕವಾಗಿ ಪ್ರತಿಮೆಗಳನ್ನು ಬಳಸಿದರು. ಈ ಸಾಧನೆಯಲ್ಲಿ ಮೇಲೇರುತ್ತಲೇ ತಮ್ಮ ಸಾಧನೆಯ ಶಿಖರವಾದ 'ಶ್ರೀ ರಾಮಾಯಣ ದರ್ಶನಂ' ಮಹಾಕಾವ್ಯವನ್ನು ರಚಿಸಿದರು. ಮೊಟ್ಟಮೊದಲಿಗೆ ಪರಂಪರೆಯನ್ನು ವ್ಯಾಖ್ಯಾನಿಸಿದ ಈ ಕೃತಿ 'ಹೊಸದೆಂಬಂತೆ, ಹೊಸ ದೇಹದಲ್ಲಿ .....' ಪುನರ್ಭವ ನಿರ್ಮಿತಿಯ ಪರಂಪರೆಗೆ ಸೇರಿದುದು. ೨೨, ೩೦೦ ಸಾಲುಗಳ ಈ ಕಾವ್ಯದ ವಸ್ತುವಿನಲ್ಲಿ ಕುವೆಂಪುರವರು ತಮ್ಮ ಜೀವನ ದರ್ಶನಕ್ಕೆ ಸರಿಹೊಂದುವ ರೀತಿಯಲ್ಲಿ ಮಹತ್ವದ ಕೆಲವು ಮಾರ್ಪಾಟುಗಳನ್ನು ಮಾಡಿಕೊಂಡಿದ್ದಾರೆ.

ಮಹಾಕಾವ್ಯಕ್ಕೆ ಸೂಕ್ತವಾದ ಭವ್ಯ ಶೈಲಿಯಲ್ಲಿ ಸಾಂಸ್ಕೃತಿಕ ಪ್ರಸ್ತುತತೆಯನ್ನು ತಮ್ಮ ವೈಯಕ್ತಿಕ ಜೀವನ ದರ್ಶನವನ್ನೂ ಕಾಪಾಡಿಕೊಂಡು, ಕನ್ನಡ ರಮ್ಯ ಕಾವ್ಯ ಸಂಪ್ರದಾಯದ ಮೇರು ಕೃತಿಗಳಲ್ಲಿ ಒಂದೆನಿಸಿರುವ 'ಶ್ರೀ ರಾಮಾಯಣ ದರ್ಶನಂ' ಮಹಾಕಾವ್ಯವನ್ನು ರಚಿಸಿದ್ದಾರೆ.

ಜನಪದ ನುಡಿಗಟ್ಟು, ಸತ್ವ, ಲಯ, ಛಂದಸ್ಸುಗಳನ್ನು ಬಳಸಿಕೊಂಡು ಉತ್ತರ ಕರ್ನಾಟಕದ ಆಡು ಭಾಷೆಯಲ್ಲಿ ಭಾವಗೀತೆಗಳನ್ನು ರಚಿಸಿರುವವರು ದ.ರಾ.ಬೇಂದ್ರೆ. ಬೇಂದ್ರೆಯವರ ಕಾವ್ಯ ಅತ್ಯಂತ ಉನ್ನತ ಮಟ್ಟದ ಬೌದ್ಧಿಕ ಚಟುವಟಿಕೆಯಾಗಿದ್ದು ಬೇಂದ್ರೆಯವರನ್ನು ಕನ್ನಡ ಕಾವ್ಯದ ಅತ್ಯಂತ ಸಂಕೀರ್ಣ ಕವಿಯನ್ನಾಗಿಸಿದೆ. ದಟ್ಟವಾದ ಅನುಭವ ಮತ್ತು ಬೌದ್ಧಿಕ ಶ್ರೇಷ್ಠತೆ ಸೃಷ್ಟಿಯಲ್ಲಿ ಅಡಗಿರುವ ದ್ವಂದ ವಿರೋಧಗಳ ಅರಿವು ಈ ಎಲ್ಲವೂ ಬೇಂದ್ರೆಯವರ ಕಾವ್ಯದ ಹಿರಿಮೆಗೆ ಕಾರಣವಾಗಿವೆ. ಸಮಾಜದ ಸಂಸ್ಕೃತಿಗಳ ಬೀಳು ಪ್ರವೃತ್ತಿಯನ್ನು ಅರಿತುಕೊಂಡಿದ್ದರೂ. ಅವುಗಳೊಂದಿಗೆ

ಒಪ್ಪಂದವೇರ್ಪಡಿಸಿಕೊಂಡು ಬದುಕಲೇಬೇಕಾದ ಅನಿವಾರ್ಯತೆಯನ್ನು ಮನಗಂಡಿದ್ದರು ಬೇಂದ್ರೆ. ಅಪರಿಮಿತ ಕಾವ್ಯಸತ್ವವನ್ನು ಹೊಂದಿದ್ದ ಬೇಂದ್ರೆ ಇಂದಿನ ಕವಿಗಳೆಲ್ಲರಿಗಿಂತಲೂ ಹೆಚ್ಚು ಭಾವಗೀತಾತ್ಮಕವಾದ ರಚನೆಗಳನ್ನು ನೀಡಿದ್ದಾರೆ. ಬೇಂದ್ರೆಯವರ ಪ್ರಾರಂಭದ ಕವನಗಳಲ್ಲಿ ಸಾಮಾಜಿಕ ಅನ್ಯಾಯಗಳನ್ನು ಕುರಿತ ಅಸಹನೆ, ಭಾವತೀವ್ರತೆಗಳು ಕಂಡುಬಂದರೆ, ಅನಂತರದ ಅವಧಿಯಲ್ಲಿ ಅನುಭಾವದ ಕಡೆಗೆ ತಿರುಗಿದ್ದನ್ನು ಕಾಣಬಹುದು. ಮುಂದೆ ಭಾಷೆಯೊಂದಿಗೆ ಪ್ರಯೋಗ ನಡೆಸುತ್ತ ಪದಗಳ ಕಸರತ್ತಿನಲ್ಲಿ ಮಗ್ನರಾದುದನ್ನು ಗುರುತಿಸಬಹುದು.

ಬೇಂದ್ರೆಯವರ ಕಾವ್ಯ ಜಗತ್ತಿನ ದರ್ಶನವನ್ನು ಅವರ ಶ್ರೇಷ್ಠ ಪದ್ಯಗಳಲ್ಲಿ ಒಂದಾದ 'ಭಾವಗೀತ' ಪದ್ಯದಲ್ಲಿ ಕಾಣಬಹುದು. 'ಗರಿ', 'ನಾದಲೀಲೆ', 'ಸಖಿಗೀತ', 'ಗಂಗಾವತರಣ', 'ನಾಕುತಂತಿ' ಮುಂತಾದವು ನವೋದಯ ಕಾವ್ಯದ ಹಲವು ಉತ್ಕೃಷ್ಟ ಕವನಗಳನ್ನು ಒಳಗೊಂಡಿದೆ. 'ಕುರುಡು ಕಾಂಚಾಣ', 'ಪುಟ್ಟ ವಿಧವೆ' ಮುಂತಾದ ಕವನಗಳಲ್ಲಿ ಸಾಮಾಜಿಕ ಅನ್ಯಾಯಗಳ ಖಂಡನೆಯನ್ನು ಕಾಣಬಹುದು. ಜನಪದ ಕಾವ್ಯದಲ್ಲಿ ಕಂಡುಬರುವ ವಿಶಿಷ್ಟ ರೀತಿಯ ಜೀವಂತಿಕೆ, ನಾದ, ಆಳವಾದ ಜೀವನಾನುಭವಗಳು ಬೇಂದ್ರೆಯವರ ಕಾವ್ಯಕ್ಕೆ ಸಮರ್ಥವಾಗಿ ಹರಿದುಬಂದಿತ್ತು. ಬೇಂದ್ರೆಯವರ ಕಾವ್ಯಕ್ಕೆ ವಿಶಿಷ್ಟವಾದ ಮಾತಿನ ಮೋಡಿ, ಭಾವ, ನಾದದ ಝೇಂಕಾರ ಇಂತಹ ಗುಣಗಳು ಲಭಿಸಲು ಕಾರಣವಾಗಿದೆ.

'ರತ್ನನ ಪದಗಳು' ಮತ್ತು 'ನಾಗನ ಪದಗಳು' ಮೂಲಕ ಕನ್ನಡಿಗರು, ಮರೆಯಲಾರದ ಕಾಣಿಕೆ ನೀಡಿರುವ ಕವಿ ಜಿ.ಪಿ. ರಾಜರತ್ನಂ, ಆಡು ಮಾತಿನಲ್ಲಿ ಮಧ್ಯಮ ವರ್ಗದ ಜನತೆಯ ಸಂವೇದನೆಗಳು, ಭಾವನೆಗಳನ್ನು ಸಮರ್ಥವಾಗಿ ಚಿತ್ರಿಸಿದ ಇವರ ಕವನಗಳು, ಕನ್ನಡ ಪ್ರೇಮ, ಕುಟುಂಬ ಜೀವನದ ಸೊಗಸುಗಳನ್ನೂ ನಿರೂಪಿಸಿವೆ.

'ನರಕಕ್ ಇಳ್ಸಿ ನಾಲ್ಗೆ ಸೀಳ್ಸಿ
ಬಾಯ್ ಒಲಿಸಾಕಿದ್ರೂನೆ
ಮೂಗ್ನಲ್ ಕನ್ನಡ ಪದವಾಡ್ತೀನಿ'

ಎಂಬಂಥ ಕನ್ನಡ ಪ್ರೇಮ ಕನ್ನಡಕಾವ್ಯ ಲೋಕದಲ್ಲಿ ಬೇರೊಂದಿಲ್ಲ. ಕುಡುಕನ ಭಾಷೆಯನ್ನು ಬಳಸುತ್ತ ನೇರ ಸಂವಹನದಲ್ಲಿ ಯಶಸ್ವಿಯಾದವರು ರಾಜರತ್ನಂ.

'ಒಲುಮೆ' ಎಂಬ ಪ್ರೇಮ ಕವನಗಳ ಪ್ರಥಮ ಸಂಕಲನ ಹೊರಬಂದುದು ೧೯೩೨ರಲ್ಲಿ. ಶೀ.ನಂ.ಶ್ರೀಕಂಠಯ್ಯನವರ ಈ ಸಂಗ್ರಹದಲ್ಲಿ ಸಾಂಸಾರಿಕ ಚೌಕಟ್ಟಿನಲ್ಲಿ ಶುದ್ಧವಾದ ಸರಳವಾದ ಪ್ರೇಮ ಪಡೆಯುವ ವಿವಿಧ ಅಭಿವ್ಯಕ್ತಿಗಳನ್ನು ಸರಳ ಸುಂದರ ಶೈಲಿಯಲ್ಲಿ ಚಿತ್ರಿಸಲಾಗಿದೆ.

'ಮೈಸೂರು ಮಲ್ಲಿಗೆ' ಮೂಲಕ ಕನ್ನಡಿಗರ ಮನೆಮಾತಾದ ಕೆ.ಎಸ್. ನರಸಿಂಹಸ್ವಾಮಿಯವರಿಗೆ ಕನ್ನಡ ಕಾವ್ಯ ಲೋಕದಲ್ಲಿ ಜನಪ್ರಿಯ ಸ್ಥಾನವಿದೆ. ಅಚ್ಚ ಕನ್ನಡ ಭಾಷೆಯಲ್ಲಿ ಆಡುನುಡಿಗೆ ಅತ್ಯಂತ ನಿಕಟವಾದ ಕಾವ್ಯ ಭಾಷೆಯನ್ನು ರೂಢಿಸಿಕೊಂಡು ಮಧುರ ಭಾವಗಳಿಂದ ತುಂಬಿದ ಸುಂದರ ಲೋಕವನ್ನು ಕವನಗಳಲ್ಲಿ ಕೆ.ಎಸ್. ನರಸಿಂಹಸ್ವಾಮಿ ಹಿಡಿದಿಟ್ಟಿದ್ದಾರೆ. 'ಪ್ರೇಮದ ಕಾಮದ ದಟ್ಟಗಳಿಗೆಗಳು ಎದುರಾಗುವ ಪಾಪ, ಭೀತಿ, ಅನೀತಿಗಳ ಸಂಪರ್ಕವೇ ಇರದ ಮುಗ್ಧ ಸೌಂದರ್ಯ ಈ ಗೀತೆಗಳದು. ಆ ಚಂಡ ಮಾರುತಗಳಿಂದ ದೂರವಿದ್ದು ಸುರಕ್ಷಿತವಾಗಿರುವ ಸಂಸಾರವಿದು. ಜನಾಂಗವೊಂದು ತನ್ನ ಕಾಲದ ಭಾಷೆಯಲ್ಲಿ ಒಮ್ಮೆ ಮಾತ್ರ ಸೃಷ್ಟಿಸಲು ಸಾಧ್ಯವಿರುವ ರೀತಿಯ ಕೃತಿ 'ಮೈಸೂರು ಮಲ್ಲಿಗೆ' ಎನ್ನುವ ಡಿ.ಆರ್. ನಾಗರಾಜ ಅವರ ಮಾತು ಗಮನಾರ್ಹ.

'ಉಂಗುರ', 'ಇರುವಂತಿಗೆ', 'ದೀಪದ ಮಲ್ಲಿ' ಮುಂತಾದವು ಕೆ.ಎಸ್.ನ.ರವರ ಇತರ ಕವನಸಂಕಲನಗಳು. ದಾಂಪತ್ಯ ಪ್ರೇಮ, ಕೌಟುಂಬಿಕ ನೋವು ನಲಿವುಗಳ ಚಿತ್ರಣ, ಸಂಸಾರದ ರಸ ನಿಮಿಷಗಳ ಕಲಾತ್ಮಕ ಅಭಿವ್ಯಕ್ತಿಯನ್ನು ವಿಶಿಷ್ಟ ಉಪಮೆಗಳ ಮೂಲಕ ಕೆ.ಎಸ್.ನ. ಕೈಗೊಂಡಿದ್ದಾರೆ. ಮುಂದಿನ ಹಂತಗಳಲ್ಲಿ ಹುಟ್ಟು, ಸಾವು, ಭೂಮಿ ಮತ್ತು ಮನುಷ್ಯ ಸಂಬಂಧ, ಕಾಲ ಮುಂತಾದ ಸಂಕೀರ್ಣ ಸಮಸ್ಯೆಗಳ ಶೋಧನೆಯಲ್ಲಿ ಕವಿ ತೊಡಗಿರುವುದನ್ನು ಕಾಣಬಹುದಾಗಿದೆ. 'ಮನೆಯಿಂದ ಮನೆಗೆ', 'ಶಿಲಾಲತೆ', 'ತೆರೆದ ಬಾಗಿಲು' ಮುಂತಾದವು ಇವರ ಇತರ ಕವನ ಸಂಕಲನಗಳು.

'ದೀಪದ ಮಲ್ಲಿ', 'ಶಿಲಾಲತೆ' ಸಂಕಲನಗಳ ನಂತರದ ಅವಧಿಯಲ್ಲಿ ಮಾನವ, ದೇವರು, ಭೂಮಿ ಮುಂತಾದ ಆಯಾಮಗಳು ಪ್ರಮುಖವಾಗಿ ಪ್ರವೇಶಿಸುತ್ತವೆ. ಮೈಸೂರು ಮಲ್ಲಿಗೆ ಸುಕುಮಾರ ಲೋಕವೊಂದರಿಂದ ವಿಶಾಲ ಅನುಭವಗಳ ಜಗತ್ತಿಗೆ ಕೆ.ಎಸ್.ನ. ರವರ ಕಾವ್ಯದ ಪ್ರಯಾಣವನ್ನು ಗುರುತಿಸಬಹುದು. ಮುಕ್ತ ಛಂದಸ್ಸಿನ ಪರಿಣಾಮಕಾರಿ ಬಳಕೆಯಲ್ಲೂ ಕೆ.ಎಸ್.ನ. ರವರ ಕಾವ್ಯದ ಬೆಳವಣಿಗೆಯನ್ನು ಗುರುತಿಸಬಹುದು. ಕೆ.ಎಸ್.ನ.ರವರ ಮಾನವ ಕಲ್ಪನೆ ಮತ್ತು ದೇವರ ಕಲ್ಪನೆಗಳು ವಿಶಿಷ್ಟವಾದವು. ದೇವರಿಗೆ ದೈನಂದಿನ ಶರಣಾಗದ, ಕುಗ್ಗದ ಕ್ರಿಯಾಶೀಲತೆಯ ಮಾನವರಿಗೆ ಕೆ.ಎಸ್.ನ ರವರ ಕಾವ್ಯದಲ್ಲಿ ಆದ್ಯತೆ.

'ನನ್ನ ದೇವರ ಕಲ್ಪನೆಯೇ ವಿಚಿತ್ರವಾಗಿದೆ, ಬಾಳಿನ ಸುಖದುಃಖಗಳ ಅಧಿಪತಿಯಾಗಿ ದೇವರಿದ್ದಾನೆ ಎನ್ನುವುದು ನನ್ನ ನಂಬಿಕೆಯಲ್ಲ, ಸೃಷ್ಟಿಗೆ ಕಾರಣನಾಗಿ ಇದ್ದ ದೇವರು ಸೃಷ್ಟಿಯಾದಂದಿನಿಂದ ಈ ಲೋಕವನ್ನು ಮನುಷ್ಯನಿಗೊಪ್ಪಿಸಿ ತಾನು ದೂರ ನಿಂತ. ಭೂಮಿಯ ನಾಳಿನ ಕತೆ ಮನುಷ್ಯನಿಗೆ ಸೇರಿದ್ದು, ದೇವರೆತ್ತರಕ್ಕೆ ಬೆಳೆದು ನಿಲ್ಲುವ ಆಸೆ ನಮ್ಮದಾಗಬೇಕು' ಕೆ.ಎಸ್.ನ.ರವರ ಈ ಮಾತುಗಳು ಅವರ ಮಾನವ ಪ್ರೀತಿಗೂ ಸಾಕ್ಷಿಯಾಗಿ ನಿಲ್ಲುತ್ತವೆ.

ನವೋದಯ ಕಾಲದಲ್ಲಿ ಭಾವಗೀತಕಾರರಾಗಿ ತಮ್ಮ ಕಾವ್ಯ ಜೀವನವನ್ನು ಆರಂಭಿಸಿದ ಗೋಪಾಲಕೃಷ್ಣ ಅಡಿಗರ 'ಭಾವತರಂಗ', 'ಕಟ್ಟುವೆವು ನಾವು' ಕವನ ಸಂಕಲನಗಳು ಕೆಲವು ಸತ್ವಪೂರ್ಣ ಭಾವಗೀತೆಗಳನ್ನು ಒಳೊಂಡಿವೆ. ಇವರ 'ಮೋಹನ-ಮುರಲಿ', ಸುಂದರ, ಸತ್ವಶಾಲಿ ಕವನ.

ಜಿ.ಎಸ್. ಶಿವರುದ್ರಪ್ಪನವರು ಬೆರಗು ತುಂಬಿದ ಧಾಟಿಯಲ್ಲಿ ಸಾಮಾನ್ಯ ವಿಷಯಗಳನ್ನು ಮೋಹಕ ರೀತಿಯಲ್ಲಿ ವರ್ಣಿಸಿ, ಹೊಸ ಕಾಣ್ಕೆಯನ್ನು ಸಾಧಿಸಿ, ತಮ್ಮ ಕವಿತಾಶಕ್ತಿಯನ್ನು ಮೆರೆಸುತ್ತಾರೆ. 'ಮುಂಬಯಿ ಜಾತಕ', 'ಜಡೆ', 'ಮಲ್ಲಿಗೆ' ಮುಂತಾದವು ಓದುಗರ ಮನಸ್ಸನ್ನು ಸೆರೆಹಿಡಿಯುವ ವಿಶಿಷ್ಟ ಶೈಲಿಯ ಕವನಗಳು. 'ಸಾಮಗಾನ', 'ಸಂಜೆದಾರಿ', 'ಚೆಲುವು-ಒಲವು', 'ದೀಪದ ಹೆಜ್ಜೆ' ಮುಂತಾದವು ಜಿ.ಎಸ್. ಶಿವರುದ್ರಪ್ಪನವರ ಕವನ ಸಂಕಲನಗಳು. 'ದೀಪದ ಹೆಜ್ಜೆ', 'ಭಗ್ನ ಚೆಲುವೆ', 'ಮಣ್ಣಿನಿಂದ ಮಣ್ಣಿಗೆ', 'ಗಡಿಯಾರದಂಗಡಿಯಲ್ಲಿ' ಮುಂತಾದವು ಕಾಲವನ್ನು ವಸ್ತುವಾಗುಳ್ಳ ಜಿ.ಎಸ್.ಎಸ್.ರವರ ಮಹತ್ವದ ಕವನಗಳು.

ಪ್ರಕೃತಿಯ ಆರಾಧಕಾರದ ಕವಿಗಳ ಸಾಲಿಗೆ ಚೆನ್ನವೀರ ಕಣವಿಯವರೂ ಸೇರುತ್ತಾರೆ. ಸಹಜ ಪ್ರತಿಭೆಯಿಂದ ಕಾವ್ಯ ರಚಿಸತೊಡಗಿದ ಕಣವಿಯವರು ಮಾನವೀಯತೆ ಅನುಭಾವಿಕತೆಗಳ ನೆಲೆಯಿಂದ 'ಆಕಾಶ ಬುಟ್ಟಿ', 'ಮಧುಚಂದ್ರ', 'ಕಾವ್ಯಾಕ್ಷಿ', 'ನೆಲ ಮುಗಿಲು', 'ಮಣ್ಣಿನ ಮೆರವಣಿಗೆ', 'ದೀಪಧಾರಿ' ಮುಂತಾದ ಕವನ ಸಂಕಲನಗಳನ್ನು ತಂದವರು. ಸರಳ, ಸುಲಭ, ಕಾವ್ಯ ಭಾಷೆಯನ್ನು ರೂಢಿಸಿಕೊಂಡು 'ನಿಯಮೋಲ್ಲಂಘನ', 'ಕಾಲ', 'ಯುಗ ಯುಗದ ಹಾಡು' 'ಕಾಲ ಪುರುಷನಲ್ಲಿ ಕವಿಗಳ ಕೋರಿಕೆ' ಮುಂತಾದ ಕವನಗಳನ್ನು ಕಾವ್ಯ ಕ್ಷೇತ್ರಕ್ಕೆ ನೀಡಿದ್ದಾರೆ.

ಈ ಪ್ರಮುಖ ಕವಿಗಳಲ್ಲದೆ ಎಂ.ವಿ. ಸೀತಾರಾಮಯ್ಯ, ಸಿದ್ದಯ್ಯ ಪುರಾಣಿಕ, ಸು.ರಂ. ಎಕ್ಕುಂಡಿ, ಡಿ.ಎಸ್. ಕರ್ಕಿ, ಗಂಗಾಧರ ಚಿತ್ತಾಲ, ಮಧುರಚೆನ್ನ, ಪೇಜಾವರ ಸದಾಶಿವರಾಯರು, ಎಸ್.ವಿ. ಪರಮೇಶಭಟ್ಟ, ರಂ.ಶ್ರೀ. ಮುಗುಳಿ, ಸಾಲಿ ರಾಮಚಂದ್ರರಾಯರು, ಅಕಬರ ಅಲಿ ಮುಂತಾದ ಹಲವು ಹತ್ತು ಭಾವಗೀತಕಾರರು ಕಾವ್ಯ ರಚನೆಯಲ್ಲಿ ತೊಡಗಿದ್ದರು.

ಇಂಗ್ಲಿಷ್ ಪ್ರಭಾವದಿಂದ ಆಗಮಿಸಿದ ಲಿರಿಕ್ ಕನ್ನಡದ ಭಾವಗೀತ ಪ್ರಕಾರವಾಗಿ ಸುಮಾರು ೧೯೫೦ರವರೆಗಿನ ಕಾಲು ಶತಮಾನದ ಅವಧಿಯಲ್ಲಿ ಅಪಾರ ಬೆಳವಣಿಗೆ ಸಾಧಿಸಿತು. ೧೯೨೫ರಿಂದ ೧೯೫೦ವರೆಗಿನ ಅವಧಿಯನ್ನು 'ಕನ್ನಡ ಭಾವಗೀತೆಯ ಸುವರ್ಣಯುಗ' ಎಂದು ಗುರುತಿಸಲಾಗಿದೆ. 'ಇಂಗ್ಲಿಷ್ ಗೀತೆಗಳು' ಹೊರಬಂದ ನಂತರ ಭಾವಗೀತೆಯ ಮೂಲಕ ವೈಯಕ್ತಿಕ ಭಾವನೆಗಳನ್ನು ಅಭಿವ್ಯಕ್ತಿಸುವ ಕ್ರಮ ಮೊದಲಾಯಿತು. ಬೇಂದ್ರೆ ಮತ್ತು ಕುವೆಂಪುರವರು ಒಂದು ದಶಕದ ಅವಧಿಯಲ್ಲಿ ಭಾವಗೀತೆಯ ಪ್ರಕಾರವನ್ನು ಯಶಸ್ಸಿನ ಪರಾಕಾಷ್ಠೆಗೊಯ್ದರು. 'ಭಾವಗೀತ' ಪ್ರಕಾರ ಇಂದಿಗೂ ತನ್ನ ಜನಪ್ರಿಯತೆಯನ್ನು ಉಳಿಸಿಕೊಂಡು ಸಮರ್ಥ ಅಭಿವ್ಯಕ್ತಿ ಮಾಧ್ಯಮವಾಗಿ ಮುಂದುವರಿಯುತ್ತಿದೆ. ಪ್ರಕೃತಿ, ಪ್ರೇಮ, ದೇಶಭಕ್ತಿ, ವಿಶ್ವ ಭ್ರಾತೃತ್ವ, ಅಧ್ಯಾತ್ಮ ಅನುವಾದಗಳು ಜಾತ್ಯತೀತತೆಯ ಸಮಾನತೆಯ ಮೌಲ್ಯಗಳು.

ಈ ವಸ್ತು ವೈವಿಧ್ಯದಿಂದ ಕನ್ನಡ ಕಾವ್ಯ ಶ್ರೀಮಂತವಾಯಿತು. ನವೋದಯ ಯುಗ ಧ್ವನಿಸಿತು. ಮಾನವ ಮತ್ತು ನಿಸರ್ಗದ ನಡುವಿನ ಆಧ್ಯಾತ್ಮಿಕ ಸಂಬಂಧವನ್ನೂ ಈ ಮನೋಧರ್ಮ ಗುರುತಿಸಿತು. ವಸ್ತು ವೈವಿಧ್ಯದ ಜೊತೆಗೆ ಛಂದೋವೈವಿಧ್ಯವೂ ಅಡಿಯಿಟ್ಟಿತು. ಜನರ ಆಡು ಭಾಷೆಗೆ ಹತ್ತಿರವಾದ ಕಾವ್ಯ ಭಾಷೆಯನ್ನು ರೂಢಿಸಿಕೊಂಡ ಫಲವಾಗಿ, ಕಾವ್ಯದಲ್ಲಿ ಹೆಚ್ಚಿನ ಜೀವಂತಿಕೆ, ಸತ್ವಗಳು ಮನೆಮಾಡಿದವು. ಕನ್ನಡ ಕಾವ್ಯ ಪ್ರಕಾರಕ್ಕೆ ಭಾವಗೀತಕಾರರಿಂದ ಶ್ರೀಮಂತಿಕೆ ಸಮೃದ್ಧಿ ಲಭಿಸಿದವು. ಈ ಭಾವಗೀತ ಪ್ರಕಾರ ಮುಂದೆ ನವ್ಯಕಾವ್ಯದ ಉಗಮಕ್ಕೆ ದಾರಿ ಮಾಡಿತು.

ನವೋದಯ ಕಾವ್ಯದಂತೆ ನವ್ಯ ಕಾವ್ಯವೂ ಇಂಗ್ಲಿಷ್ ಕಾವ್ಯದ ಪ್ರೇರಣೆಯಿಂದಲೇ ಜನಿಸಿದ ಪ್ರಕಾರ ಇಂಗ್ಲಿಷಿನ ಮಾಡರ್ನ್ ಪೊಯೆಟ್ರಿಗೆ ಸಂವಾದಿಯಾಗಿ ಈ ಹೆಸರು ಹುಟ್ಟಿಕೊಂಡಿತು. ನವೋದಯ ಕಾವ್ಯವನ್ನು ಆಧುನಿಕ ಕಾವ್ಯ ಎಂದೂ ಕರೆಯುವ ಪರಿಪಾಠವಿದ್ದುದರಿಂದ, ಇಂಗ್ಲಿಷಿನ ಮಾಡರ್ನ್ ಪೊಯಟ್ರಿಯ ಪ್ರಭಾವದಿಂದ ಜನಿಸಿದ ಈ ಕಾವ್ಯವನ್ನು ನವ್ಯ ಕಾವ್ಯ ಎಂದು ಕರೆಯಲಾಯಿತು. ನವ್ಯ ಕಾವ್ಯ ಎಂಬ ಹೆಸರನ್ನು ಆ ಪ್ರಕಾರಕ್ಕೆ ನೀಡಿದವರು ವಿ.ಕೃ. ಗೋಕಾಕರು. ಇಲ್ಲಿ ನವ್ಯ ಕಾವ್ಯವೆಂಬ ಹೆಸರು ಕಾವ್ಯ ಪ್ರಕಾರವೊಂದಕ್ಕೆ ನೀಡಲಾದ ಪಾರಿಭಾಷಿಕ ಪದವೇ ಹೊರತು ಇದು ಎಲ್ಲ ರೀತಿಗಳಿಂದಲೂ ಸದಾ ಕಾಲಕ್ಕೂ ನವ್ಯ ಎಂದು ಅರ್ಥೈಸಲೂಬಾರದು.

೨೦ನೆಯ ಶತಮಾನದ ಆದಿಭಾಗದಲ್ಲಿ ಇಂಗ್ಲಿಷಿನ ರಮ್ಯ ಸಂಪ್ರದಾಯದ ಪ್ರಭಾವ ಗಾಢವಾಗಿತ್ತೆಂಬುದು ಕನ್ನಡ ಆಧುನಿಕ ಕಾವ್ಯದ ಅಧ್ಯಯನದಿಂದ ಸ್ಪಷ್ಟವಾಗುತ್ತದೆ. ಇಂಗ್ಲೆಂಡಿನಲ್ಲಿ ಆ ವೇಳೆಗೆ ರೊಮ್ಯಾಂಟಿಕ್ ಯುಗ ಆದ ನಂತರ ಬಂದ ವಿಕ್ಟೋರಿಯನ್ ಯುಗ ಎಲ್ಲವೂ ಮುಗಿದು ಪ್ರತಿಮಾನಿಷ್ಠ ಚಳುವಳಿ ಕಾಲಿಟ್ಟಿತ್ತು. ಇಂಗ್ಲಿಷ್ ಸಾಹಿತ್ಯ ತನ್ನ ಹೊಸ ದಿಕ್ಕಿಗೆ ಫ್ರೆಂಚ್ ಮತ್ತು ಜರ್ಮನ್ ಸಾಹಿತ್ಯದಲ್ಲಿ ನಡೆಯುತ್ತಿದ್ದ ನೂತನ ಆಂದೋಲನಗಳನ್ನು ಗಮನಿಸುತ್ತಿದ್ದ ಕಾಲ ಅದು. ಅದರಲ್ಲೂ ಎರಡನೆ ಮಹಾಯುದ್ಧದ ನಂತರದಲ್ಲಿ ಪಶ್ಚಿಮದ, ಅದರಲ್ಲೂ ಇಂಗ್ಲೆಂಡಿನ ಕವಿಗಳಿಗೆ ತಮ್ಮ ವೈಯಕ್ತಿಕ ಋಜುತ್ವವನ್ನು ಉಳಿಸಿಕೊಳ್ಳುವ, ಮುಂದೆ ಯುದ್ಧಗಳಾಗದಂತೆ ಮಾನವ ಸಂಬಂಧಗಳು ಕಲುಷಿತವಾಗದಂತೆ ಕಾಪಾಡುವ ವಿಚಾರಗಳು ಮುಖ್ಯವಾಗಿದ್ದವು. ಈ ಎಲ್ಲಾ ಹಿನ್ನಲೆಯ ಅರಿವಿದ್ದ ಗೋಕಾಕರು ಮತ್ತು ಅಡಿಗರು ಕನ್ನಡದಲ್ಲಿ ನವ್ಯಕಾವ್ಯವನ್ನು ಬಿತ್ತಿ ಬೆಳೆದರು. ಇಂಗ್ಲಿಷ್ ನವ್ಯಮಾರ್ಗದ ಕಾವ್ಯದಲ್ಲಿನ ಒಬ್ಬಂಟಿತನ, ನಿರಾಶೆ, ಜೀವನದ ಅಸಂಗತ ಅಂಶಗಳು ಸ್ವಾತಂತ್ರ್ಯಾ ನಂತರದ ಭಾರತದ ಸಾಮಾಜಿಕ ಸಂದರ್ಭಕ್ಕೆ ಹೊಂದಿಕೊಂಡಂತೆಯೇ ಇದ್ದವು, ನಲವತ್ತೇಳರ ನಂತರದ ಅವಧಿಯಲ್ಲಿ ಉಂಟಾದ ಸಾಮಾಜಿಕ, ರಾಜಕೀಯ ಬದಲಾವಣೆಗಳು, ಭ್ರಮನಿರಸನ, ಪರಕೀಯ ಪ್ರಜ್ಞೆ, ನೈತಿಕ ಸಮಸ್ಯೆಗಳು ಜನಾಂಗದ ಹೊಸ ಪ್ರಜ್ಞೆಗೆ ಕಾರಣವಾಯಿತು. ಸಾಮಾಜಿಕ ಅಸಹಾಯಕತೆ, ಸಾಮಾಜಿಕ ಮೌಲ್ಯಗಳನ್ನು ವ್ಯಕ್ತಿಗಳ ಒಳಬದುಕಿನಲ್ಲೇ ಹುಡುಕುವ ಅನಿವಾರ್ಯತೆಯನ್ನು ತಂದೊಡ್ಡಿತು. ಈ ಅರಿವನ್ನು ಅಭಿವ್ಯಕ್ತಿಸಲು ಹೊಸ ಭಾಷೆರೂಪಕ ಶೈಲಿಗಳು ಅನಿವಾರ್ಯ ಅಗತ್ಯಗಳಾಗಿದ್ದವು.

ರಮ್ಯ ಸಂಪ್ರದಾಯವಾದಿಯಾಗಿದ್ದ ಗೋಕಾಕರು ಕನ್ನಡ ಕಾವ್ಯದಲ್ಲಿ ಮಹತ್ವದ ಬದಲಾವಣೆಯ ಅಗತ್ಯವನ್ನು ಮನಗಂಡು ಅದನ್ನು ಮುಂಬಯಿಯಲ್ಲಿ ನಡೆದ ೩೪ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಗೋಷ್ಠಿಯ ಅಧ್ಯಕ್ಷ ಭಾಷಣದಲ್ಲಿ ವ್ಯಕ್ತಪಡಿಸಿದರು. 'ಪ್ರಗತಿಯ ಹಾದಿಯಲ್ಲಿ ಮುನ್ನಡೆಯುತ್ತಿರುವ ದೇಶದ ಆವಶ್ಯಕತೆಗಳಿಗೆ ಪೂರಕವಾಗುವಂಥ ಹೊಸ ಕಾವ್ಯ ಬರವಿದೆ' ಎಂಬ ಮುನ್ಸೂಚನೆ ನೀಡಿದರು. ೪೦ರ ದಶಕದಲ್ಲಿ ಗೋಕಾಕರು ತಮ್ಮ ಕವನಗಳಲ್ಲಿ ನವ್ಯ ಪ್ರಯೋಗಗಳಲ್ಲಿ ತೊಡಗಿದರಾದರೂ ೫೦ರಲ್ಲಿ ಅದಕ್ಕೆ ಸ್ಪಷ್ಟ ಧ್ವನಿ ನೀಡಿದರು. ಈ ಹೊಸ ಕಾವ್ಯಕ್ಕೆ 'ನವ್ಯ-ಕಾವ್ಯ'ವೆಂಬ ಹೆಸರು ನೀಡಿ ಭಾಷೆ, ಪ್ರತಿಮೆ, ಲಯ ಮುಂತಾದವುಗಳಲ್ಲಿ ಪರಿವರ್ತನೆಯ ಅಗತ್ಯವನ್ನು ಒತ್ತಿ ಹೇಳಿದರು. ನವ್ಯ ಕಾವ್ಯದ ಎಂಟು ಲಕ್ಷಣಗಳನ್ನು ಗೋಕಾಕರು ಪಟ್ಟಿಮಾಡಿದ್ದಾರೆ. ಬಳಕೆಮಾತು, ಛಂದಸ್ಸಿನಲ್ಲಿಯ ನವೀನ ಪ್ರಯೋಗ, ಪ್ರತಿಮಾ ಪ್ರಧಾನತೆ, ವಾಸ್ತವಿಕ ಚಿತ್ರಸೃಷ್ಟಿ, ಪಾರಿಭಾಷಿಕ ಶೈಲಿ, ವಸ್ತುವಿನ ಆಯ್ಕೆಯಲ್ಲಿನ ಸ್ವಾತಂತ್ರ್ಯ, ಬುದ್ಧಿ ಪ್ರಧಾನತೆ, ವ್ಯಕ್ತಿಗತ ಮೌಲ್ಯಗಳಿಗೆ ಪ್ರಧಾನತೆ. ಕಾವ್ಯ ಧೋರಣೆಯ ವಿಚಾರದಲ್ಲಿ ಗೋಕಾಕರು ನವೋದಯವಾದ, ಆದರ್ಶವಾದಗಳ ಪರವಾಗೇ ಇದ್ದರು. ಭಾಷೆ ಮತ್ತು ಛಂದೋರೂಪಗಳ ಪ್ರಯೋಗದಲ್ಲಿ ತೊಡಗಿದ ಗೋಕಾಕರು ಮುಕ್ತ ಛಂದಸ್ಸಿಗೆ ಕೊಡುಗೆ ನೀಡಿದರು. ನವೋದಯಕ್ಕಿಂತ ಬೇರೆಯೇ ಆದ ಪ್ರತಿಮೆಗಳನ್ನು ರೂಪಿಸಿದರು.

ಗೋಕಾಕರ ಪ್ರಭಾವಕ್ಕೆ ಒಳಗಾಗಿಯೂ ತಮ್ಮ ವೈಯಕ್ತಿಕ ವೈಶಿಷ್ಟ್ಯವನ್ನು ಉಳಿಸಿಕೊಂಡವರು ಗಂಗಾಧರ ಚಿತ್ತಾಲ, ಶಂಕರ ಮೊಕಾಶಿ ಪುಣೇಕರ, ಸು.ರಂ. ಎಕ್ಕುಂಡಿ ಮುಂತಾದವರು. ಎರಡನೆಯ ಮಹಾಯುದ್ಧದಿಂದಾಗಿ ಮಾನವ ಜನಾಂಗ ಕಂಗೆಟ್ಟ ಹಂತದಲ್ಲಿ ನಿರರ್ಥಕತೆ, ಹತಾಶೆ, ನೋವುಗಳು ದಟ್ಟವಾಗಿ ಹರಡಿದ್ದ ಕಾಲದಲ್ಲಿ ಈ ಕವಿಗಳು ಕಾವ್ಯ ರಚನೆಯಲ್ಲಿ ನಿರಾತರಾಗಿದ್ದವರು. ಗಂಗಾಧರ ಚಿತ್ತಾಲರ ಮೊದಲ ಸಂಕಲನ 'ಕಾಲದ ಕತೆ' ಯಲ್ಲಿ ಈ ಎಲ್ಲದರ ವಾಸ್ತವ ಚಿತ್ರಣವಿದೆ. 'ಮನುಕುಲದ ಹಾಡು', 'ಹರಿವ ನೀರಿದು', 'ಸಂಕಲನಗಳಲ್ಲಿ ಬದುಕು ಮತ್ತು ಸಾವಿನ ಸಂಬಂಧದ ಬಗ್ಗೆ, ಮನುಷ್ಯ ಸ್ವಭಾವದ ಬಗ್ಗೆ ಕುರಿತ ಕವನಗಳಿವೆ. ಸಾವು, ಲೈಂಗಿಕತೆ, ಪ್ರೇಮ, ಹಸಿವು ಮುಂತಾದ ವಿಚಾರಗಳೊಡನೆ ಮಾನವ ಸಂಬಂಧ ಹಾಗೂ ಇವುಗಳ ಮುಖಾಮುಖಿಯಲ್ಲಿ ಮನುಷ್ಯನು ಎದುರಿಸುವ ಸಂದಿಗ್ಧತೆಗಳನ್ನು ಚಿತ್ತಾಲರು ಚಿತ್ರಿಸಿದ್ದಾರೆ.

ತಮ್ಮ ಕಥನಕವನಗಳ ಮೂಲಕ, ಭಾವಗೀತೆಗಳ ಗೇಯತೆಯನ್ನು ನವ್ಯ ಪಂಥದ ವೈಚಾರಿಕತೆಯನ್ನು ಕಾವ್ಯದಲ್ಲಿ ಕಸಿ ಮಾಡಿದವರು ಸು.ರಂ. ಎಕ್ಕುಂಡಿ. ಇವರ 'ಹಾವಾಡಿಗರ ಹುಡುಗ', 'ಮತ್ಸ್ಯ ಗಂಧಿ' ಮುಂತಾದ ಕವನ ಸಂಗ್ರಹಗಳಲ್ಲಿ ಚರಿತ್ರೆ ಮತ್ತು ಪುರಾಣಗಳ ವ್ಯಕ್ತಿ ವಿಚಾರಗಳನ್ನು, ಪ್ರತಿಮೆಗಳನ್ನು ಬಳಸುವ ಇವರ ಕಾವ್ಯಗುಣವನ್ನು, ಇತ್ತೀಚೆಗೆ ಪ್ರಕಟವಾಗಿರುವ 'ಬಕುಳದ ಹೂಗಳು' ಕವನ ಸಂಗ್ರಹದ ಮುನ್ನುಡಿಯಲ್ಲಿ ಡಾ.ಕೆ.ವಿ. ನಾರಾಯಣ ಅವರು ಹೀಗೆ ಗುರುತಿಸುತ್ತಾರೆ. 'ಮತ್ತೂ ವಿವರಿಸುವುದಾದರೆ, ಇಲ್ಲಿನ ಕಥನ 'ಸ್ತೋತ್ರ' ಮತ್ತು 'ಕೀರ್ತನೆ'ಗಳ ನಡುವೆ ನಿಂತಿದೆ ಎನ್ನಬೇಕು. ಸ್ತೋತ್ರದ ಶ್ರದ್ಧೆಯ ಅಪಾರದರ್ಶಕತೆಯಿಂದ ಕೀರ್ತನೆಗಳ ವಾಗ್ವಾದದ ತಂತ್ರದಿಂದ ಇಲ್ಲಿನ ಕಥನ ಹೊರಗೆ ಉಳಿದಿದೆ. ಆದರೂ ಈ ಕವಿತೆಗಳ ಧಾರ್ಮಿಕತೆ ಓದುಗನಿಗೆ ಒಂದು ಸವಾಲಾಗಿ ನಿಲ್ಲುವುದು.

ಶಂಕರ ಮೊಕಾಶಿ ಪುಣೇಕರರ ಕವನ ಸಂಕಲನ 'ಮಾಯಿಯ ಮೂರು ಮುಖಗಳು' ಹೊಸ ಪ್ರಯೋಗಗಳಿಗೆ ತಮ್ಮನ್ನು ತೆರೆದುಕೊಳ್ಳುವ ಮೊಕಾಶಿ ಕಂದ ಮತ್ತು ಚಂಪೂ ಪದ್ಯಗಳಿಂದ ಕೂಡಿದ ಸೀಮಂತಿನೀಕೋಪಾಖ್ಯಾನ, ಅಷ್ಟಷಟ್ಪದಿ ಮತ್ತು ಹೊಸಗನ್ನಡಗಳಿಂದ ಕೂಡಿದ 'ಸಂಸ್ಕೃತಿ' ಮುಂತಾದ ವಿಶಿಷ್ಟ ಕವನಗಳನ್ನು ರಚಿಸಿದ್ದಾರೆ. 'ಮಾಯಿಯ ಮೂರು ಮುಖಗಳು', 'ನೆರಳು ಬೆಳಕು', 'ಗಂಧ ಕೊಡರು' ಮುಂತಾದವು ಮೊಕಾಶಿಯವರ ಕಾವ್ಯ ಸಾಮರ್ಥ್ಯವನ್ನು ಎತ್ತಿತೋರುತ್ತದೆ.

ಇದೇ ಸಮಯದಲ್ಲಿ ವಿ.ಜಿ. ಭಟ್ಟ, ಪೇಜಾವರ ಸದಾಶಿವರಾಯ ಮುಂತಾದವರು ಹಳೆಯ ಮೌಲ್ಯಗಳನ್ನು ಟೀಕಿಸುವ, ಪ್ರಶ್ನಿಸುವ ಪ್ರಯತ್ನ ಮಾಡಿದರು. ಹೊಸ ಮೌಲ್ಯಗಳ ಅನ್ವೇಷಣೆ

ನಡೆಯಬೇಕಿದ್ದ ಚಾರಿತ್ರಿಕ ಘಟ್ಟದಲ್ಲಿ ಗೋಪಾಲಕೃಷ್ಣ ಅಡಿಗರು ಆ ಕಾರ್ಯವನ್ನು ಕೈಗೆತ್ತಿಕೊಂಡರು. ನವೋದಯ ಸಂಪ್ರದಾಯದಲ್ಲಿ 'ಭಾವತರಂಗ', 'ಕಟ್ಟುವೆವು ನಾವು' ಮುಂತಾದ ಸಂಕಲನಗಳ ಮೂಲಕ ಹೆಸರು ಮಾಡಿದ ಅಡಿಗರು ಹೊಸ ಕಾವ್ಯದ ಅಗತ್ಯ ಮತ್ತು ಅನಿವಾರ್ಯತೆಗಳ ಬಗ್ಗೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು. 'ನಡೆದು ಬಂದ ದಾರಿ' (೧೯೫೨) ಸಂಕಲನಕ್ಕೆ ಬರೆದ ಮುನ್ನುಡಿಯಲ್ಲಿ 'ಆಧುನಿಕ ಕನ್ನಡ ಕಾವ್ಯದಲ್ಲಿ ಒಂದು ಘಟ್ಟ ಕಳೆದು ಈಗ ಇನ್ನೊಂದು ಘಟ್ಟ ಮೊದಲಾಗುತ್ತಿದೆ. ಕಾವ್ಯ ರೂಪದಲ್ಲಿ ಬದಲಾವಣೆ ಆಗಬೇಕಾದ ಕಾಲ ಆಗಲೇ ಬಂದುಬಿಟ್ಟಿದೆ. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬರುವ ತನಕ ಇದ್ದ ವಾತಾವರಣ ಈಗ ಸಮೂಲ ಪರಿವರ್ತನೆಗೊಂಡಿದೆ. ಸ್ವಾತಂತ್ರ್ಯ ಸಂಗ್ರಾಮದ ಉತ್ಸಾಹ, ಉದ್ವೇಗ, ಆದರ್ಶಪರವಶತೆಯ ಹಾರಾಟ ಮುಗಿದು ಈಗ ನಮ್ಮ ಮನಸ್ಸು ಮತ್ತೆ ನೆಲಕ್ಕಿಳಿದಿದೆ. ಮೋಡವಾಗಿ ಮೇಲೇರಿದ ಮನಸ್ಸು ಮಳೆಯಾಗಿ ಬಿದ್ದು ಮತ್ತೆ ಹಳ್ಳ ಕೊಳ್ಳಗಳಲ್ಲಿ ತುಂಬಿಕೊಂಡಿದೆ. ತಳದಲ್ಲಿ ಕೂತಿದ್ದ ಕೊಳೆ ಕಸ ರಾಡಿಯೆಲ್ಲ ಈಗ ಮೇಲೆದ್ದು ಬಂದು ಕನ್ನಡಿಯಂಥ ನೀರು ಕಲಕಿದೆ. ಹೊಸ ಆದರ್ಶಕ್ಕಾಗಿ ಹೊಸ ಕನಸಿಗಾಗಿ ದೇಶದ ಮನಸ್ಸು ಹಸಿದು ಕಾಯುತ್ತಿದೆ. ಇಂಥಾ ವಾತಾವರಣ ಸುತ್ತಲೂ ಇರುವಾಗ, ಜೀವನಾವಲಂಬಿಯಾದ ಕಾವ್ಯವೂ ಪರಿವರ್ತನಗೊಳ್ಳುವುದು ಸಹಜ, ಎಂದು ಹೊಸ ಕಾವ್ಯ ಮಾರ್ಗಕ್ಕೆ ಕರೆಯಿತ್ತರು ಮತ್ತು ಅಂಥ ಹೊಸ ಮಾರ್ಗದ ದಾರಿಯನ್ನು ಸೃಷ್ಟಿಸಿದರು.

ಹೊಸ ಕವಿತೆಯನು ಕುರಿತು (೧೯೫೩), ಇಂದಿನ ಜೀವನ ಕ್ಲಿಷ್ಟ ಎಂದರೇನು ? (೧೯೫೪), 'ಸಾಕ್ಷಿ' (೧೯೬೨), ಕಳೆದ ಹತ್ತು ವರ್ಷಗಳ ಕನ್ನಡ ಕಾವ್ಯ (೧೯೬೫) ಮಣ್ಣಿನ ವಾಸನೆ, ನವ್ಯ ಕವಿತೆಯಲ್ಲಿ ಪ್ರತಿಮಾ ವಿಧಾನ (೧೯೬೭) ಮುಂತಾದ ಲೇಖನಗಳಲ್ಲಿ 'ನಡೆದು ಬಂದ ದಾರಿ'ಯ ಮುನ್ನುಡಿಯಲ್ಲಿನ ನಿರ್ದಿಷ್ಟ ಖಚಿತ ಅಭಿಪ್ರಾಯಗಳ ಮುಂದುವರಿಕೆ, ವಿಮರ್ಶೆಗಳನ್ನು ಕಾಣಬಹುದು. ಅವರ ಮುಂದಿನ ಸಂಕಲನಗಳಾದ 'ಚಂಡೆಮದ್ದಳೆ', 'ಭೂಮಿಗೀತ', 'ವರ್ಧಮಾನ' ಸಂಕಲನಗಳು ಅವರ ಆಲೋಚನಾ ಕ್ರಮ, ಕಾವ್ಯ ಪರಿಶ್ರಮ ಬದ್ಧತೆಗೆ ಅನುಗುಣವಾಗಿಯೇ ರಚಿತವಾಗಿರುವುದನ್ನು ಕಾಣಬಹುದು. ಅಡಿಗರ ಪ್ರಭಾವ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಒಂದು ಅಪೂರ್ವ ಸಂಗತಿ. ಲಂಕೇಶರು ತಮ್ಮ 'ಅಕ್ಷರ ಹೊಸ ಕಾವ್ಯ'ದ ಮುನ್ನುಡಿಯಲ್ಲಿ ಹೇಳಿರುವ ಹಾಗೆ 'ಅಡಿಗರು ಒಂದು ಜನಾಂಗದ ಕಣ್ಣು ತೆರೆಸಿದ ಕವಿ'. ಅವರ ಸಮಕಾಲೀನರಿಗೆ ಅಡಿಗರು ಒಂದು ಸವಾಲಾದರೆ, ಕಿರಿಯ ತಲೆಮಾರಿನ ಕವಿಗಳಿಗೆ ಮಾದರಿಯಾದರು.

ಅಡಿಗರಲ್ಲಿ ಹೊಸ ಕಾವ್ಯದ ರೂಪುರೇಷೆಗಳನ್ನು ಕುರಿತಂತಹ ಚಿಂತನೆಗಳು ಹಿಂದೆಂದೂ ಕಾಣದ ಸ್ಪಷ್ಟತೆ, ಖಚಿತತೆಯನ್ನು ಪಡೆದುಕೊಂಡವು. ಅವರ ಹೊಸ ಕಾವ್ಯದ ಕಲ್ಪನೆ ಹೊಸತನ್ನು ಹುಡುಕಬೇಕೆಂಬ ನಾವೀನ್ಯತೆಯ ಪ್ರಲೋಭವನ್ನು ಮೀರಿ ಒಂದು ಕಾಲದ ಆಂತರಿಕ ಚಡಪಡಿಕೆಗಳಿಗೆ ಭಾಷೆಯ ಮೂಲಕ ಗಟ್ಟಿ ಅಭಿವ್ಯಕ್ತಿಯನ್ನು ಪಡೆದುಕೊಳ್ಳುವುದಾಗಿತ್ತು. ಆದ್ದರಿಂದಲೇ ಅವರ ಕಾವ್ಯದಲ್ಲಿ ನಿಷ್ಠುರದ ನಿಜಧ್ವನಿಗಳನ್ನು ಆಪ್ತವಾಗಿಸುವ ಕಾವ್ಯಾನುಸಂಧಾನವಿದೆ.

ಆಗೆವಾಗ ಮೊದಲು ಕೋಶಾವಸ್ಥೆ ಮಣ್ಣು
ಕೆಳಕ್ಕೆ, ತಳಕ್ಕೆ ಗುದ್ದಲಿಯೊತ್ತಿ ಕುಕ್ಕಿದರೆ
ಕೂಡೀತು ಗೆರೆಮಿರವ ಚಿನ್ನದದಿರು
ಹೊರತೆಗೆದು ಸುಟ್ಟು ಸೋಸುವಪರಂಜಿ ವಿದ್ಯೆಗಳ
ಇನ್ನಾದರೂ ಕೊಂಚ ಕಲಿಯಬೇಕು;
ಹೊನ್ನು ಕಾಯಿಸಿ ಹಿಡಿದು ಬಡಿದಿಷ್ಟದೇವತಾ
ವಿಗ್ರಹಕ್ಕೊಗ್ಗಿಸುವ ಹಳಸು ಕಸಬು

("ಭೂತ")

ಅಡಿಗರ ನವ್ಯ ಮಾರ್ಗದಿಂದ ಪ್ರಭಾವಗೊಂಡು ಹಲವಾರು ಕವಿಗಳು ಅಡಿಗರ ಮಾರ್ಗದಲ್ಲಿ ತಮ್ಮ ಕಾವ್ಯ ಜೀವನವನ್ನು ರೂಪಿಸಿಕೊಂಡರು. ಅಡಿಗರ ಸಮಕಾಲೀನರಾದ ಬಿ.ಸಿ. ರಾಮಚಂದ್ರ ಶರ್ಮರವರು ಈ ಸಾಲಿಗೆ ಸೇರುವ ಪ್ರಮುಖರು. ಮನುಷ್ಯನ ಮೂಲಭೂತ ಪ್ರವೃತ್ತಿಗಳ ಬಗ್ಗೆ ವಿಶೇಷವಾಗಿ ಕಾಮದ ಬಗ್ಗೆ ಚಿತ್ರಕ ಭಾಷೆಯಲ್ಲಿ ಕಾವ್ಯ ರಚಿಸಿ 'ಏಳು ಸುತ್ತಿನ ಕೋಟೆ' (೧೯೫೩), 'ಬ್ರುವಿ ನೀಡಿದ ಸ್ಫೂರ್ತಿ', 'ಹೇಸರಗತ್ತೆ' ಮುಂತಾದ ಸಂಕಲನಗಳನ್ನು ಹೊರತಂದರು. ಹೊಸ ರೀತಿಯ ಅಭಿವ್ಯಕ್ತಿ ಮತ್ತು ಜೀವಂತಿಕೆಗಳನ್ನು ಮೈಗೂಡಿಸಿಕೊಂಡ ಕವನಗಳು ಶರ್ಮರ ಲೇಖನಿಯಿಂದ ಮೂಡಿದವು.

ವಿ.ಕೃ. ಗೋಕಾಕ್, ಗೋಪಾಲಕೃಷ್ಣ ಅಡಿಗ ಮತ್ತು ರಾಮಚಂದ್ರಶರ್ಮ ತರುಣ ಪೀಳಿಗೆಯ ಬಹಳಷ್ಟು ಕವಿಗಳ ಮೇಲೆ ವಿವಿಧ ರೀತಿಯ ಪ್ರಭಾವ ಬೀರಿದರು. ನವೋದಯದಲ್ಲಿ ಸತ್ವಶಾಲಿ ಕಾವ್ಯ ನೀಡಿದ ಚೆನ್ನವೀರ ಕಣವಿ, ಜಿ.ಎಸ್. ಶಿವರುದ್ರಪ್ಪ ಮುಂತಾದ ಕವಿಗಳು ಕೂಡ ಹೊಸ ಭಾಷೆಯನ್ನೂ ಹೊಸ ರೀತಿಯ ಸಂವೇದನೆಗಳನ್ನು ಮೈಗೂಡಿಸಿಕೊಂಡು ಕಾವ್ಯ ರಚನೆಯಲ್ಲಿ ತೊಡಗಿದರು. ನವೋದಯ–ನವ್ಯಗಳ ಅಂಶಗಳನ್ನು ಮೈಗೂಡಿಸಿಕೊಂಡು, ತಮ್ಮದೇ ಆದ ವಿಶಿಷ್ಟ ರೀತಿಯಲ್ಲಿ ಸೃಜನಶೀಲ ಕಾವ್ಯ ಚಟುವಟಿಕೆಯಲ್ಲಿ ತೊಡಗಿರುವ ಈ ಇಬ್ಬರು ಕವಿಗಳಿಗೆ 'ಸಮನ್ವಯ' ಕವಿಗಳೆಂಬ ಹೆಸರೂ ಬಂದಿದೆ. ಎಸ್. ನಾರಾಯಣಶೆಟ್ಟಿ (ಸುಜನಾ) ಮತ್ತು ಸಿ.ಪಿ. ಕೃಷ್ಣಕುಮಾರ್ ಸಮನ್ವಯ ಅಂಶಗಳನ್ನು ಮೈಗೂಡಿಸಿಕೊಂಡ ಕವಿಗಳ ಸಾಲಿಗೆ ಸೇರುತ್ತಾರೆ.

ಅತ್ಯಂತ ಸ್ವತಂತ್ರ ಮನೋವೃತ್ತಿಯಿಂದ, ಭಿನ್ನ ರೀತಿಯ ಕಾವ್ಯ ರಚನೆಯಲ್ಲಿ ತೊಡಗಿದ ಮೊದಲಿಗರ ಸಾಲಿಗೆ ವಿ.ಜಿ. ಭಟ್ಟರು ಮತ್ತು ಪೇಜಾವರ ಸದಾಶಿವರಾಯರು ಸೇರುತ್ತಾರೆ. ಅವರ ಮರಣಾನಂತರ ಪ್ರಕಟವಾದ 'ಮರಣ' (೧೯೫೨) ಇಂತಹ ಸ್ವತಂತ್ರ ಮನೋಧರ್ಮವನ್ನು ಬಿಂಬಿಸುತ್ತದೆ. ನವ್ಯಕಾವ್ಯದ ಅಧಿಕೃತ ಘೋಷಣೆಗೆ ಮೊದಲೇ ರಚಿತವಾದ 'ನಾಟಕೋತ್ಸವ' 'ವರುಣ' ಮುಂತಾದ ಕವನಗಳು ತಮ್ಮ ಹೊಸತನ, ಲಯ ವೈವಿಧ್ಯಗಳಿಂದಾಗಿ ವಿಶಿಷ್ಟ ಕೊಡುಗೆಗಳೆನಿಸಿವೆ.

'ಪಲಾಯನ', 'ರಕ್ತಾಂಜಲಿ', 'ತುಂಟನ ಪದಗಳು', 'ಕಾವ್ಯ ವೇದನೆ', 'ಕಿಷ್ಕಿಂದೆ' ಮುಂತಾದ ಸಂಕಲನಗಳನ್ನು ನೀಡಿರುವ ವಿ.ಜಿ. ಭಟ್ಟರು ಹಳೆಯ ಮೌಲ್ಯಗಳ ವಿರುದ್ಧ ಬಂಡೆದ್ದು, ಹೊಸ ಮೌಲ್ಯಗಳ ಹುಡುಕಾಟದಲ್ಲಿ ತೊಡಗಿದವರು. 'ಆತ್ಮ ಶೋಧನೆ' ಎಂಬ ಅವರ ಕವಿತೆಯಲ್ಲಿ ಈ ಹುಡುಕಾಟದ ತೀವ್ರತೆ ಸ್ಪಷ್ಟವಾಗುತ್ತದೆ.

ಹುಡುಕಿದೆ ಹಗಲೆಲ್ಲಾ
ಎಲ್ಲೂ ಸಿಗಲಿಲ್ಲ
ಹಳಬರು ಹೇಳಿದ ಆತ್ಮವೂ ನನಗೆ
ಎಲ್ಲೂ ಸಿಗಲಿಲ್ಲ
ಗುಡಿಯಲ್ಲಿ ಬರಿ ಕಲ್ಲು
ವೇದ ಪುರಾಣದ ಪೀಠದ ಮೇಲೆ
ಬೆಳೆದಿದೆ ಒಣಹುಲ್ಲು.........
ಹುಡುಕಿದೆ ಮಗುವಿನ ಕಣ್ಣಿನಲಿ
ಮಸಣದ ಮಣ್ಣಿನಲಿ
ಸಿಗಲಿಲ್ಲ
ಪರಿಕಿಸಿದೆನು ಚೆಲುವಿನ ಕೆನ್ನೆ
ಒಳಗಡೆ ಬರಿ ಸೊನ್ನೆ

ಆತ್ಮದ ಹುಡುಕಾಟವನ್ನು ಚಿತ್ರಿಸುವ ಮತ್ತೊಂದು ಘಟ್ಟದಲ್ಲಿ
ಸಿಕ್ಕಿತು! ಸಿಕ್ಕಿತು
ಆತ್ಮವು ಸಿಕ್ಕಿತು
ಕಿಟ್ಟಲ್ ಕೋಶದ ನೂರಾ ಐವತ್
ಮೂರನೆ ಪುಟದಲ್ಲಿ

(ನವ್ಯ ಸಾಹಿತ್ಯದ ದರ್ಶಿನಿ ಪು. ೨)

ಎಚ್.ಎಸ್. ಬಿಳಿಗಿರಿಯವರು ವಿ.ಜಿ. ಭಟ್ಟರ ಸಾಲಿಗೆ ಸೇರುವ, ವಿಡಂಬನ ಕವನಗಳಿಗೆ ಹೆಸರಾದ ಕವಿ. ಸೂಕ್ಷ್ಮ ಸಂವೇದನೆಯಿಂದ ಕೂಡಿದ ಕವನಗಳನ್ನು ಅವರ 'ನಂದನ', 'ನಾಯಿಕೊಡೆ' ಸಂಕಲನಗಳಲ್ಲಿ ಕಾಣಬಹುದು.

ಜನಪದ ಕಾವ್ಯ ಭಾಷೆಯನ್ನು ಸಮರ್ಥವಾಗಿ ರೂಢಿಸಿಕೊಂಡು ವಸಾಹತುಶಾಹಿ ಅನುಭವದಿಂದಾಗಿ ಕಳೆದು ಹೋಗಿರುವ ದೇಸೀ ವ್ಯಕ್ತಿತ್ವದ ಮೂಲಗಳ ಹುಡುಕಾಟದಲ್ಲಿ ತೊಡಗುವ ಕಾವ್ಯ ಚಂದ್ರಶೇಖರ ಕಂಬಾರರದು. 'ಹೇಳತೇನ ಕೇಳ' ಎಂಬ ಅವರ ಮೈಲುಗಲ್ಲು ಕೃತಿಯಲ್ಲಿ ಈ ಶೋಧನೆ ಸಮರ್ಥವಾಗಿ ನಡೆದಿದೆ. ನವ್ಯ ಧೋರಣೆ ಮತ್ತು ಅಭಿವ್ಯಕ್ತಿ ತಂತ್ರವನ್ನು ಜನಪದ ಕಾವ್ಯ ಭಾಷೆಯೊಂದಿಗೆ ಮೇಳೈಸುವ ಕಂಬಾರರ ಸಾಧನೆ ಅದ್ವಿತೀಯವಾದುದು. 'ಜನ್ಮ ಜಾತ ಕವಿ ಪ್ರತಿಭೆಗೆ ಪುಟಿತ ಇವರಷ್ಟು ಸಹಜ ಸಮೃದ್ಧಿಯಲ್ಲಿ ಅಡಗಿದ ಅನಂತರದ ಇನ್ನಾವ ನವ್ಯ ಕವಿಯಲ್ಲಿಯೂ ಕಾಣುವುದಿಲ್ಲ' ಎಂಬ ಜಿ.ಎಚ್. ನಾಯಕರ ಅಭಿಪ್ರಾಯ ಇಲ್ಲಿ ಉಲ್ಲೇಖಾರ್ಹ. ತಮ್ಮ ಕಾವ್ಯದ ಉದ್ದಕ್ಕೂ ಮಾನವನ ಮೂಲಭೂತ ಸಂವೇದನೆಗಳಲ್ಲಿ ಒಂದಾದ ವಸ್ತುವನ್ನು ಸಶಕ್ತವಾಗಿ ಬಳಸಿ ಕೊಂಡಿರುವ ರೀತಿ ಕನ್ನಡ ಕಾವ್ಯದಲ್ಲೇ ವಿಶಿಷ್ಟವಾದುದು. 'ಕಾಡುಕುದುರೆ', 'ಗಂಗಾಮಾಯಿ', 'ನೆರಳಿನ ಜೋಡಿ ಹಾದರ ಮಾಡಿ', 'ಮಾವೊತ್ಸೆ ತುಂಗನಿಗೆ' ಮುಂತಾದ ವಿಶಿಷ್ಟ ಸತ್ವಪೂರ್ಣ ಕವನಗಳನ್ನು ಕಂಬಾರರು ಕಾವ್ಯ ಕ್ಷೇತ್ರಕ್ಕೆ ನೀಡಿದ್ದಾರೆ. 'ಹೇಳತೇನ ಕೇಳ', 'ತಕರಾರಿನವರು' ಇವರ ಕವನ ಸಂಗ್ರಹಗಳು.

ರಾಮಚಂದ್ರಶರ್ಮರ ಹಾದಿಯಲ್ಲೇ ಮುಂದುವರಿದು ಕಾಮವನ್ನು ಪ್ರಧಾನ ವಸ್ತುವಾಗುಳ್ಳ ಕವನಗಳನ್ನು ರಚಿಸಿದವರು ಎಚ್.ಎಂ. ಚನ್ನಯ್ಯ, 'ಕಾಮಿ' 'ಆಮೆ' ಇವರ ಸಂಕಲನಗಳು. 'ನೀ-ನಾ', 'ಔರಂಗಜೇಬ ಮತ್ತು ಇತರ ಕವನಗಳ ಸಂಕಲನಗಳನ್ನು ಹೊರತಂದಿರುವ ಸಿದ್ದಲಿಂಗಪಟ್ಟಣ ಶೆಟ್ಟಿಯವರ ಕಾವ್ಯ ಬೆಳವಣಿಗೆಯ ಹಾದಿಯಲ್ಲಿ ಸ್ವಂತ ಅಭಿವ್ಯಕ್ತಿಯ ಶೋಧದಲ್ಲಿ ತೊಡಗಿರುವ ಅನ್ವೇಷಣಾ ಮಾರ್ಗವನ್ನು ಪ್ರತಿನಿಧಿಸುತ್ತದೆ. ಪಟ್ಟಣಶೆಟ್ಟಿಯವರೂ ಚನ್ನಯ್ಯನವರಂತೆ ಕಾಮವನ್ನು ವಿಶ್ಲೇಷಿಸುವ ಯತ್ನ ನಡೆಸಿದವರು. ಚಂದ್ರಶೇಖರ ಪಾಟೀಲರು ತಮ್ಮ ಹರಿತವಾದ ಶೈಲಿಯಲ್ಲಿ ವ್ಯಂಗ್ಯವನ್ನು ಬಳಸಿಕೊಂಡು ಕಾವ್ಯ ಬರೆಯತೊಡಗಿದವರು. ಅನಂತರದಲ್ಲಿ ಬದ್ಧ ಸಾಹಿತ್ಯ ಸೃಷ್ಟಿಯತ್ತ ಹೊರಳಿದರು. 'ಬಾನುಲಿ', 'ಮಧ್ಯ ಬಿಂದು', 'ಹತ್ತೊಂಬತ್ತು ಕವನಗಳು' ಮುಂತಾದವು ಇವರ ಕವನ ಸಂಕಲನಗಳು.

ಸಹಜ, ಜೀವಂತ ಶೈಲಿಯಲ್ಲಿ ಕಾವ್ಯ ರಚಿಸುವ ಸುಮತೀಂದ್ರ ನಾಡಿಗರ 'ಕಪ್ಪು ದೇವತೆ' ಅವರ ಅತ್ಯುತ್ತಮ ಕವನವೆನಿಸಿದೆ. 'ನಿಮ್ಮ ಪ್ರೇಮ ಕುಮಾರಿಯ ಜಾತಕ', 'ಕಪ್ಪು ದೇವತೆ' ಮತ್ತು 'ಲೀಲಾರಾಮರ ಕವನಗಳು' ನಾಡಿಗರು ಪ್ರಕಟಿಸಿರುವ ಸಂಕಲನಗಳು. ನಿರರ್ಗಳ ಶೈಲಿಯಲ್ಲಿ, ಚಾಕಚಕ್ಯತೆಯಿಂದ ಪದ್ಯ ರಚಿಸುವ ನಿಸಾರ್ ಅಹಮದ್ 'ಮನಸು ಗಾಂಧಿ ಬಜಾರು', 'ಸುಮುಹೂರ್ತ', 'ನೆನೆವರು ಮನದಲಿ', 'ಸಂಜೆ ಐದರ ಮಳೆ', 'ನಾನೆಂಬ ಪರಕೀಯ' ಸಂಗ್ರಹಗಳನ್ನು ಹೊರತಂದಿದ್ದಾರೆ. ಎನ್.ಎಸ್.ಲಕ್ಷ್ಮೀನಾರಾಯಣ ಭಟ್ಟರ ಅಚ್ಚುಕಟ್ಟಾದ ನೇರ ಶೈಲಿಯಲ್ಲಿ ರಚಿತವಾದ ಕವನಗಳನ್ನು 'ವೃತ್ತ', 'ಸುಳಿ', 'ನಿನ್ನೆಗೆ ನನ್ನ ಮಾತು' ಎಂಬ ಸಂಕಲನಗಳಲ್ಲಿ

ಕಾಣಬಹುದು. ಕ.ವೆಂ. ರಾಜಗೋಪಾಲ, ಜಿ.ಎಸ್. ಸಿದ್ದಲಿಂಗಯ್ಯ ಮುಂತಾದವರೂ ಇದೇ ಸಾಲಿಗೆ ಸೇರುವ ಕವಿಗಳು.

ವಿಶಿಷ್ಟ ಶೈಲಿಯ ಗದ್ಯದ ಬಳಕೆಯ ಮೂಲಕ ಕಾವ್ಯಾನುಭವವನ್ನು ತಂದುಕೊಡುವ ಪಿ. ಲಂಕೇಶರು, ನವ್ಯ ಕಾವ್ಯ ಸಂದರ್ಭದಲ್ಲಿ ಗದ್ಯದ ಭಾಷೆಗೆ ಹತ್ತಿರವಾದ ಕಾವ್ಯ ಭಾಷೆಯನ್ನು ರೂಢಿಸಿಕೊಂಡು ಎಲ್ಲ ಅರ್ಥದಲ್ಲೂ 'ನವ್ಯ'ವೆನಿಸುವ ಕಾವ್ಯವನ್ನು ರಚಿಸಿದರು. ಅವರ 'ಅವ್ವ' ಕವನ ಈ ಮಾದರಿಯ ಅತ್ಯುತ್ತಮ ಉದಾಹರಣೆ. ಅಷ್ಟೇ ಅಲ್ಲದೆ 'ಅವ್ವ' ಕನ್ನಡದ ಅತ್ಯುತ್ತಮ ಕವನಗಳ ಸಾಲಿಗೆ ಸೇರುವ ಶ್ರೇಷ್ಠ ಕವನವೂ ಆಗಿದೆ.

ನನ್ನವ್ವ ಫಲವತ್ತಾದ ಕಪ್ಪುನೆಲ
ಅಲ್ಲಿ ಹಸಿರು ಪತ್ರದ ಹರವು, ಬಿಳಿಯ ಹೂ ಹಬ್ಬ;
ಸುಟ್ಟಷ್ಟು ಕಸುವು, ನೊಂದಷ್ಟು ಹೂ ಹಣ್ಣು
ಮಕ್ಕಳೊದ್ದರೆ ಅವಳ ಅಂಗಾಂಗ ಪುಲಕ
ಹೊತ್ತ ಬುಟ್ಟಿಯ ಇಟ್ಟು ನರಳಿ ಎನೆ ಮುಚ್ಚಿದಳು ತೆರೆಯದಂತೆ

'ಬಿಚ್ಚು', 'ತಲೆಮಾರು' ಇವರ ಕವನ ಸಂಕಲನಗಳು. ನವ್ಯ ಕಾವ್ಯದ ಪ್ರಾತಿನಿಧಿಕ ಕವನ ಸಂಗ್ರಹ 'ಅಕ್ಷರ ಹೊಸ ಕಾವ್ಯ' ಇವರ ಸಂಪಾದನೆಯಲ್ಲಿ ಹೊರಬಂದಿದೆ. ನವ್ಯ ಕಾವ್ಯದ ವಿವಿಧ ಹರಹು, ಆಶಯಗಳು, ಭಾಷಾಪ್ರಯೋಗ, ವಿಷಯ ವೈವಿಧ್ಯಗಳ ನಿರ್ಭಿಡತೆ ಈ ಸಂಕಲನದಲ್ಲಿ ಅಡಕಗೊಂಡಿದೆ.

ಅಡಿಗರ ಪ್ರಭಾವಕ್ಕೆ ಒಳಗಾಗಿ ಬರೆಯುತ್ತಿದ್ದ ಕಂಬಾರ, ಲಂಕೇಶ್, ತೇಜಸ್ವಿ, ಚಂದ್ರಶೇಖರ ಪಾಟೀಲ ಆ ಪ್ರಭಾವ ವಲಯದಿಂದ ಹೊರಬಂದು ಭಿನ್ನವಾದ ಕಾವ್ಯದ ನೆಲೆಯೊಂದನ್ನು ಕಂಡುಕೊಳ್ಳಲು ಪ್ರಯತ್ನಪಟ್ಟಿರುವುದೂ ಕೂಡ ನವ್ಯಮಾರ್ಗದ ವಿಶೇಷ ಮುಂದುವರಿಕೆಗೆ ಕಾರಣವಾಯಿತು. ರೂಪ ಶೈಲಿಗಿಂತಲೂ ಹೆಚ್ಚಾಗಿ ವಸ್ತುವಿನ ಆಯ್ಕೆ ಮತ್ತು ಆಯ್ದ ವಸ್ತುವಿನ ನಿರೂಪಣೆ, ವಿಶ್ಲೇಷಣೆ ಹೊಸ ಮಹತ್ವ ಮೂಡಿ ಬಂತು. ಪರಂಪರೆಯ, ಶೋಷಣೆಯ ವಿರುದ್ಧ ಎಚ್ಚರದ ಧ್ವನಿ ಅಡಿಗೋತ್ತರ ಕನ್ನಡ ಕಾವ್ಯದ ಪ್ರಮುಖ ಆಶಯವಾಗಿ ಬೆಳೆದು ಬಂದಿದೆ. ಇದೇ ಸಾಲಿನಲ್ಲಿ ಯು.ಆರ್. ಅನಂತಮೂರ್ತಿಯವರ 'ಅಜ್ಜನ ಹೆಗಲ ಸುಕ್ಕುಗಳು' ಮತ್ತು 'ಮಿಥುನ' ಸಂಕಲನಗಳನ್ನು ಗುರುತಿಸಬಹುದು.

ಎಪ್ಪತ್ತರ ದಶಕದಲ್ಲಿ ನವ್ಯ ಮತ್ತು ನವ್ಯೋತ್ತರ ಎಂಬ ಎರಡು ಮುಖ್ಯ ಪ್ರವೃತ್ತಿಗಳು ಕನ್ನಡ ಕಾವ್ಯ ಮಾರ್ಗವನ್ನು ಮುಂದುವರೆಸಿದವು. ನವ್ಯರಲ್ಲೇ ಎರಡು ಬಗೆಯ ಧೋರಣೆಯನ್ನು ಕಾಣಬಹುದು. ಬಿ.ಆರ್. ಲಕ್ಷ್ಮಣರಾವ್, ಕೆ.ವಿ. ತಿರುಮಲೇಶ್ ಮುಂತಾದ ಯುವ ಕವಿಗಳು ಅಸಂಗತ ಮಾಧ್ಯಮದ ಮೂಲಕ ವ್ಯಂಗ್ಯ, ಪರಿಹಾಸ್ಯಗಳನ್ನೊಳಗೊಂಡ ಕಾವ್ಯ ರಚನೆಯಲ್ಲಿ ತೊಡಗಿದರು. ಕಾವ್ಯ ಕಲೆಯಲ್ಲಿ ಕೌಶಲ್ಯ ಸಾಧಿಸಿದ್ದ ಈ ಇಬ್ಬರೂ ಭಾಷೆಯ ಸೂಕ್ಷ್ಮ ಬಳಕೆಯಿಂದ ಪರಿಣಾಮ ಬೀರುವುದರಲ್ಲಿ ಯಶಸ್ವಿಯಾದರು. 'ಮುಖವಾಡಗಳು', 'ವಠಾರ', 'ಮಹಾಪ್ರಸ್ಥಾನ' ತಿರುಮಲೇಶರ ಮುಖ್ಯ ಸಂಕಲನಗಳು. ಹಾಗೆಯೆ 'ಗೋಪಿ ಮತ್ತು ಗಾಂಡಲೀನ' ಲಕ್ಷ್ಮಣರಾಯರ ಯಶಸ್ವೀ ಸಂಕಲನ.

ಭಾರತೀಯ ಆಂಗ್ಲ ಲೇಖಕ ಕವಿಯಾದ ಎ.ಕೆ. ರಾಮಾನುಜನ್ ಕನ್ನಡದ ಪ್ರಮುಖ ಕವಿಗಳ ಸಾಲಿನಲ್ಲಿಯೂ ನಿಲ್ಲಬಲ್ಲ ಕವಿ. ಗದ್ಯಕ್ಕೆ ಹತ್ತಿರವಾದ, ಆಡುಭಾಷೆಯ ನುಡಿಗಟ್ಟುಗಳನ್ನು ಬಳಸಿ ವಿಶಿಷ್ಟ ಪ್ರಯೋಗಗಳನ್ನು ನಡೆಸಿ ನವ್ಯ ಕಾವ್ಯಕ್ಕೆ ಹೊಸ ಆಯಾಮವೊಂದನ್ನು ತಂದು ಕೊಟ್ಟವರು ಇವರು. 'ಹೊಕ್ಕಳಲ್ಲಿ ಹೂವಿಲ್ಲ' (೧೯೬೯), ಮತ್ತು ಇತರ ಪದ್ಯಗಳು' (೧೯೭೭)

'ಕುಂಟೋಬಿಲ್ಲೆ' (೧೯೯೦) ಸಂಕಲನಗಳಲ್ಲಿ ಭಾಷಾ ಸಂರಚನೆಯ ಪ್ರಯೋಗಗಳು, ಕಚಗುಳಿ ಇಡುವ ಪದ ವಿನ್ಯಾಸಗಳು ಇವೆ. ಭಾಷೆಯ ಮಿತವಾದ ಉಪಯೋಗ ಮಾಡಿ, ಮೌನದ ಧ್ವನಿಯನ್ನು ತಮ್ಮ ಪದ್ಯಗಳಲ್ಲಿ ದುಡಿಸಿಕೊಳ್ಳುವ ಶಕ್ತಿಯ ಅಪರೂಪದ ಕವಿ ರಾಮಾನುಜನ್. ವಸ್ತುನಿಷ್ಠವಾಗಿಯೂ ಆಪ್ತಧಾಟಿಯಲ್ಲಿ ಬರೆಯುವ ಪರಕೀಯ ಪ್ರಜ್ಞೆಯ ಗಾಜಿನ ಮೂಲಕ ಗತ ನೆನಪುಗಳನ್ನು ಮತ್ತೆ ಮೆರೆಸುವ ವಿಶಿಷ್ಟ ಧಾಟಿ ರಾಮಾನುಜನ್ ಕವಿತೆಗಳಲ್ಲಿವೆ. 'ಅಂಗುಲ-ಹುಳುವಿನ ಪರಕಾರಯ ಪ್ರವೇಶ', 'ನಲವತ್ತು ನೆರಳು' ಇತ್ಯಾದಿ ಕವಿತೆಗಳು ವಿಶೇಷವಾಗಿ ವಿಮರ್ಶೆಗೆ ಒಳಗಾಗಿರುವ ಪದ್ಯಗಳು.

ನವ್ಯ ಕಾವ್ಯ ವ್ಯಕ್ತಿ ವಿಶೇಷ, ಅಂತರ್ಮುಖತೆ, ಭಾಷಾ ಕ್ಲಿಷ್ಟತೆಯಿಂದಾಗಿ ಜನವಿಮುಖಿಯಾಗಿದೆ ಎನ್ನುವ ಕೂಗು, ಬಂಡಾಯ ಕಾವ್ಯದ ಸಮರ್ಥನೆಯಾಗಿ ಮೂಡಿಬಂತು ಮತ್ತು ನವ್ಯ ಕಾವ್ಯ ಸಮಾಜದ ಕೆಳ ವರ್ಗದವರ ಧ್ವನಿಯಾಗಲು ಸೋತಿದೆ ಎನ್ನುವ ಟೀಕೆ ಕೂಡ. ಕಾವ್ಯದಲ್ಲಿ ಸಾಮಾಜಿಕ ಧೋರಣೆ ಬದ್ಧತೆಗಳನ್ನು ಬಯಸುವ ಇನ್ನೊಂದು ಕಾವ್ಯ ಮಾರ್ಗ ಸೃಷ್ಟಿಯಾಗಬೇಕೆಂಬ ಆಶಯವನ್ನು ಹೊತ್ತು ಬಂಡಾಯ ಕಾವ್ಯ, ಲೇಖನಿಯನ್ನು ಖಡ್ಗವನ್ನಾಗಿಸುವ 'ಪ್ರಣಾಲಿಕೆಯನ್ನು ಮುಂದಿಟ್ಟುಕೊಂಡಿತು. ಬಂಡಾಯ ಕಾವ್ಯ ದಲಿತ ಕವಿ ಸಿದ್ಧಲಿಂಗಯ್ಯನವರ 'ಹೊಲೆ ಮಾದಿಗರ ಹಾಡು' ವಿನೊಂದಿಗೆ ತನ್ನ ವಿಶೇಷತೆಯನ್ನು ಪ್ರಕಟಿಸಿತು. ದಲಿತರ ಆಕ್ರೋಶ, ಸಿಟ್ಟುಗಳನ್ನು ಸಮರ್ಥವಾಗಿ ಕಾವ್ಯವನ್ನಾಗಿಸುವ ಇವರ 'ಸಾವಿರಾರು ನದಿಗಳು' ಬಂಡಾಯ ಕಾವ್ಯದ ಉತ್ತಮ ಪ್ರಾತಿನಿಧಿಕ ಕವಿತೆ. ಇದಕ್ಕೆ ಹಿನ್ನೆಲೆಯಾಗಿ ಬುದ್ದಣ್ಣ ಹಿಂಗಮಿರೆ ಸಂಪಾದಿಸಿದ 'ರಷ್ಯನ್ ಹೊಸ ಕವಿತೆ' ಹಿಂದೆಯೇ ಪ್ರಕಟವಾಗಿತ್ತು. ಬಂಡಾಯ ಕಾವ್ಯದ ಪ್ರಮುಖ ಲೇಖಕರಾಗಿ ಸಿದ್ದಲಿಂಗಯ್ಯ, ಚಂದ್ರಶೇಖರ ಪಾಟೀಲ, ಬರಗೂರು ರಾಮಚಂದ್ರಪ್ಪ, ಕೆ.ಬಿ. ಸಿದ್ದಯ್ಯ, ಕಾಳೇಗೌಡ ನಾಗವಾರ, ರಂಜಾನ್ ದರ್ಗಾ, ಕೆ.ಎಂ. ಮುನಿಕೃಷ್ಣಪ್ಪ ಈ ಸಾಹಿತ್ಯ ಪ್ರಕಾರವನ್ನು ವೃದ್ಧಿಗೊಳಿಸಿದ್ದಾರೆ. ಕಾವ್ಯದ ಕಸುಬು ಸಾಮಾಜಿಕ ಹೋರಾಟದ ಭಾಗವಾಗಿಯೇ ಇರಬೇಕಾದ ಅನಿವಾರ್ಯತೆ ಬಂಡಾಯ ಕಾವ್ಯದ ತಾತ್ವಿಕ ಸಮರ್ಥನೆಯಾಗಿದೆ. ಕೇವಲ ಅಕೆಡೆಮಿಕ್ ಆದ ಕಾವ್ಯದ ಬಗೆಗಿನ ಸಿಟ್ಟು ವಿರೋಧಗಳನ್ನು ಕೂಡ ಬಂಡಾಯ ಸಾಹಿತ್ಯ ಧ್ವನಿಸುತ್ತದೆ ಹಾಗೆಯೇ ಕೇವಲ ಕ್ರೋಧ ಸಿಟ್ಟುಗಳು ಮಾತ್ರ ಬಂಡಾಯ ಕಾವ್ಯವಾಗುವುದಿಲ್ಲವೆಂಬ ಅರಿವು ಕೂಡ ಈಗ ಈ ಕವಿಗಳ ಕಾವ್ಯರಚನೆಯ ಹಿಂದೆ ಕೆಲಸ ಮಾಡುತ್ತಿದೆ. ದಲಿತರ ಬದುಕನ್ನು ದಲಿತ ಸಂಪ್ರದಾಯದ, ನೋವು ನಲಿವುಗಳ ಹಿನ್ನಲೆಯೇ ಅರ್ಥೈಸುವ ಒಲವನ್ನು ಇತ್ತೀಚಿನ ಬಂಡಾಯ ಸಾಹಿತ್ಯ ಅದರಲ್ಲೂ ಕಾವ್ಯ ತೋರಿಸುವತ್ತ ಹೆಜ್ಜೆಯಿಡುತ್ತಿದೆ.

ಬಂಡಾಯ ಕಾವ್ಯದ ಮಾರ್ಗಕ್ಕಿಂತ ಭಿನ್ನವಾದ, ಆದರೆ ನವ್ಯೋತ್ತರ ಆಶಯಗಳನ್ನು ಹೊಂದಿದ ಇನ್ನೊಂದು ತೆರನಾದ ಕಾವ್ಯ ರಚನೆ ಕೂಡ ಇತ್ತೀಚಿನ ಕನ್ನಡ ಕಾವ್ಯದ ಮುಖ್ಯ ಗುಣವಾಗಿದೆ. ಈ ಕಾವ್ಯ ದೇಶೀಯ ನೆಲೆಗಳಲ್ಲೇ ತನ್ನತನವನ್ನೂ ಸಮಕಾಲೀನ ಸಮಾಜದ ಅರ್ಥವಿನ್ಯಾಸವನ್ನೂ ಹುಡುಕಲು ಮುಂದಾಗಿದೆ. ಇಂಥ ಪಂಥದ ಪ್ರಮುಖ ಕವಿ ಎಚ್.ಎಸ್. ಶಿವಪ್ರಕಾಶ್ ಅವರು. ದೇಸಿ ಪರಂಪರೆಯಿಂದ ಪುರಾಣಗಳಿಂದ ಸಮಕಾಲೀನ ಬದುಕಿನ ಆಶಯಗಳನ್ನು ಪ್ರತಿಬಿಂಬಿಸುವ ಅನುಭಾವಿ ಕಾವ್ಯರಚನೆಯಲ್ಲಿ ಶಿವಪ್ರಕಾಶರ ಕಾವ್ಯ ನಿರತವಾಗಿದೆ. 'ಮಳೆಬಿದ್ದ ನೆಲದಲ್ಲಿ', 'ಮಿಲರೇಪ' ಹಾಗೂ ಇತ್ತೀಚಿನ 'ಅಣುಕ್ಷಣ ಚರಿತೆ' ಇವರ ಕವನ ಸಂಗ್ರಹಗಳು.

ಇವಲ್ಲದೆ ನವ್ಯ-ನವೋದಯ ಎರಡರ ಆಶಯಗಳನ್ನು ಮೇಳವಿಸಿ ಸಮನ್ವಯದ ಬಯಕೆಯ ಕವನ ಕೂಡ ರಚಿತವಾಗಿರುವುದು ಕನ್ನಡ ಕಾವ್ಯದ ಇನ್ನೊಂದು ವೈಶಿಷ್ಟ್ಯ. ಚೆನ್ನವೀರ ಕಣವಿ ಹಾಗೂ ಶಿವರುದ್ರಪ್ಪನವರ ಕವಿತೆಗಳು ಇಂಥ ಸಮನ್ವಯದ ದಾರಿಯನ್ನು ತುಳಿದಂಥ ಕಾವ್ಯ ಪ್ರಕಾರಗಳು. ಇವರಲ್ಲದೆ ಈ ಆಧುನಿಕ ಯುಗದಲ್ಲಿ ಕೂಡ ಗೋಕಾಕರ 'ಭಾರತ ಸಿಂಧು ರಶ್ಮೀ' ಮತ್ತು ಪು.ತಿ.ನ. ರವರ 'ಶ್ರೀ ಹರಿಚರಿತೆ' ಯಂತಹ ಮಹಾ ಕಾವ್ಯಗಳು ಕೂಡ ಹುಟ್ಟಿ ಬಂದಿವೆ.

ಹೀಗಾಗಿ ಇಂದಿನ ಕನ್ನಡ ಕಾವ್ಯ ಅನೇಕ ವಾಹಿನಿಗಳಿಂದ ಕೂಡಿದ ಜೀವಂತ ಪ್ರವಾಹವಾಗಿಯೇ ಉಳಿದಿದೆ. ಎಲ್ಲ ಬಗೆಯ, ಎಲ್ಲಾ ಮಾರ್ಗದ ಕವಿಗಳೂ ಕಾವ್ಯ ರಚನೆಯಲ್ಲಿ ನಿರತರಾಗಿರುವ ವಿಶಿಷ್ಟವಾದ ಸ್ಥಿತ್ಯಂತರದ ಘಟ್ಟದಲ್ಲಿ ಇಂದು ಕನ್ನಡ ಕಾವ್ಯ ನಿಂತಿದೆ. ಇದು ಕನ್ನಡ ಕಾವ್ಯ ಯಾವುದೊ ಒಂದು ಮಾರ್ಗದಲ್ಲಿ ಮಾತ್ರ ಮುನ್ನಡೆಯುತ್ತಿಲ್ಲ ಎಂಬುದನ್ನು ಸೂಚಿಸುತ್ತದೆ ಮಾತ್ರವಲ್ಲ, ಅನೇಕ ಲಯಗಳನ್ನು ತನ್ನೊಡಲಲ್ಲೇ ಹಿಡಿದಿಟ್ಟುಕೊಳ್ಳುವ ವೈವಿಧ್ಯತೆಯನ್ನು ಕೂಡ ಸಾರಿ ಹೇಳುತ್ತದೆ. ಹಾಗೆಯೇ ನವೋದಯದ ಮಾರ್ಗದಲ್ಲಿ ಪ್ರಾರಂಭಿಸಿ ನಂತರ ತಮ್ಮ ವಿನ್ಯಾಸ ಶೈಲಿ ಭಾಷಾ ಪ್ರಯೋಗಗಳನ್ನು ಬದಲಾಯಿಸಿಕೊಂಡ ಕೆ.ಎಸ್.ನ. ಅವರಂಥ ಕವಿಗಳು ಕೂಡ ಇರುವುದನ್ನು ಗಮನಿಸಬೇಕಾಗಿದೆ.

ಆಧುನಿಕ ಕನ್ನಡ ಕಾವ್ಯ ಕೃಷಿಯಲ್ಲಿ ಮಹಿಳೆಯರ ಪಾತ್ರವೂ ಹಿರಿದಾಗಿಯೇ ಇದೆ. ಮಾಲತಿ ಪಟ್ಟಣಶೆಟ್ಟಿ, ಚ. ಸರ್ವಮಂಗಳಾ, ಹೇಮಾ, ಪ್ರತಿಭಾ ನಂದಕುಮಾರ, ಶಶಿಕಲಾ ವಸ್ತ್ರದ, ವೈದೇಹಿ ಮುಂತಾದವರ ಕವನ ಸಂಗ್ರಹಗಳು ನವ್ಯ ಬಂಡಾಯ ಇವೆರಡೂ ಮಾರ್ಗಗಳ ದಾಟಿಯಲ್ಲೇ ಮಹಿಳೆಯರ ಅಂತರಂಗದ ನೋವು ಭಾವನೆಗಳನ್ನು ವ್ಯಕ್ತಪಡಿಸಿವೆ. ಅಸ್ಪೃಶ್ಯರಲ್ಲದೆಯೂ ಮೂಲೆಗುಂಪಾದ, ಅಲ್ಪಸಂಖ್ಯಾತರಾಗದೆಯೂ ತುಳಿತಕ್ಕೊಳಗಾದ ಮಹಿಳೆಯರ ಬದುಕು – ಪ್ರಜ್ಞೆಯ ಸಮರ್ಥ ಅಭಿವ್ಯಕ್ತಿಗೆ ಕನ್ನಡ ಕಾವ್ಯ ಹಾಯುತ್ತಿವೆ ಎಂದೇ ಹೇಳಬೇಕು.

ಕಳೆದ ಕಾಲು ಶತಮಾನಕ್ಕೂ ಮೀರಿದ ಆಧುನಿಕ ಕನ್ನಡ ಕಾವ್ಯ ಹಿಂದೆಂದಿಗಿಂತಲೂ ಈಗ ಅನೇಕ ಕವಲುದಾರಿಯ ಸಾಧ್ಯತೆಗಳನ್ನು ಹೊಂದಿದೆ. ಈ ಅನೇಕತೆಗೆ 'ಮಾಯಾವಿ', 'ಜರಾಸಂಧ' ಸಂಕಲನಗಳನ್ನು ಪ್ರಕಟಿಸಿದ ಅರವಿಂದ ನಾಡಕರ್ಣಿ, 'ಶೂದ್ರದ ಹಾ ಮು ಪಟೇಲ', 'ನೀನಾ', 'ಔರಂಗಜೇಬದ, ಸಿದ್ಧಲಿಂಗ ಪಟ್ಟಣಶೆಟ್ಟಿ', 'ಮುಸುಕು–ನಸುಕು', 'ಜೀವ ಜೀವಂತ'ದ ವೇಣುಗೋಪಾಲ ಸೊರಬ, 'ವಿದಾಯ'ದ ಯರ್ಮುಂಜ ರಾಮಚಂದ್ರ, 'ತುಡುಗಿಯ ಎಚ್.ಎಸ್. ಭೀಮಗೌಡರ 'ಗರಿ ಮುರಿದ ಹಕ್ಕಿಗಳು' ಸಂಕಲನದ ವೇಣುಗೋಪಾಲ ಕಾಸರಗೋಡು ಮತ್ತು ಎಚ್.ಎಸ್. ವೆಂಕಟೇಶಮೂರ್ತಿ.ಜೆ. ಸುದರ್ಶನ, ದೊಡ್ಡರಂಗೇಗೌಡ, ಲ್.ಎನ್. ಮುಕುಂದ ರಾಜ್, ರಾಮಚಂದ್ರದೇವ, ಎಸ್. ಮಾಲತಿ, ಸ ಉಷಾ, ಎಂ.ಆರ್ ಮಲ, ಅಬ್ದುಲ್ ಮಜೀದ್ ಖಾನ್ ಮುಂತಾದ ಹಲವಾರು ಕವಿಗಳು ತಮ್ಮ ದನಿ ಸೇರಿಸಿದ್ದಾರೆ. ಹಾಗೆಯೇ ಹೊಸ ಕವಿತೆಗಳಿಗೆ ಸಾಹಿತ್ಯಕ್ಕೆ ಮೀಸಲಾದ ಕಿರುಪತ್ರಿಕೆಗಳು ಕೂಡ ತಮ್ಮ ಕಾಣಿಕೆಯನ್ನು ನೀಡುತ್ತಾ ಬಂದಿವೆ.

★ ★ ★

ಸಮಸ್ತ ಕನ್ನಡಿಗರ ಏಕೈಕ ಪ್ರಾತಿನಿಧಿಕ ಸಂಸ್ಥೆಯಾದ ಕನ್ನಡ ಸಾಹಿತ್ಯ ಪರಿಷತ್ತು ೧೯೧೫ರಲ್ಲಿ ಸ್ಥಾಪನೆಗೊಂಡು ಅಂದಿನಿಂದ ನಿರಂತರವಾಗಿ ಕನ್ನಡ ಕಟ್ಟುವ ಕಾರ್ಯದಲ್ಲಿ ಕ್ರಿಯಾತ್ಮಕವಾಗಿ ತೊಡಗಿಕೊಂಡು ಬರುತ್ತಿದೆ. ಪರಿಷತ್ತು ನಡೆಸುವ ಸಾಹಿತ್ಯ ಪರೀಕ್ಷೆಗಳಾದ ಕನ್ನಡ ಪ್ರವೇಶ, ಕಾವ, ಜಾಣ ಮತ್ತು ರತ್ನ ಬಹಳ ವರ್ಷಗಳಿಂದ ಜನಪ್ರಿಯವಾಗಿವೆ. ಈ ಪರೀಕ್ಷೆಗಳನ್ನು ತೆಗೆದುಕೊಳ್ಳುವವರ ಸಂಖ್ಯೆಯು ವರ್ಷದಿಂದ ವರ್ಷಕ್ಕೆ ಅಧಿಕಗೊಳ್ಳುತ್ತಿರುವುದು ಅವುಗಳ ಜನಪ್ರಿಯತೆಗೆ ಹಿಡಿದ ಕನ್ನಡಿಯಾಗಿದೆ. ಕನ್ನಡ ನಾಡು, ನುಡಿ, ಸಾಹಿತ್ಯ, ಕಲೆ, ಸಂಸ್ಕೃತಿ ಮೊದಲಾದ ವಿಷಯಗಳ ವ್ಯಾಪಕ ಅಧ್ಯಯನಕ್ಕೆ ಅವಕಾಶ ಮಾಡಿಕೊಡುವ ಈ ಪರೀಕ್ಷೆಗಳಲ್ಲಿ ಉತ್ತೀರ್ಣರಾದರೆ ಹಲವಾರು ಪ್ರಯೋಜನಗಳು ಇವೆ. ಈ ಪರೀಕ್ಷೆಯನ್ನು ಪಾಸು ಮಾಡಿಕೊಂಡ ರಾಜ್ಯ ಸರ್ಕಾರಿ ನೌಕರರಿಗೆ ಕಡ್ಡಾಯ ಕನ್ನಡ ಭಾಷಾ ಪರೀಕ್ಷೆಯಿಂದ ವಿನಾಯಿತಿ ಇದೆ. 'ರತ್ನ' ಪರೀಕ್ಷೆಯಲ್ಲಿ ತೇರ್ಗಡೆಯಾದವರು ಪದವಿ ತರಗತಿಯಲ್ಲಿ ಕನ್ನಡವನ್ನು ಐಚ್ಛಿಕವಾಗಿ ಅಧ್ಯಯನ ಮಾಡದಿದ್ದರೂ ಕನ್ನಡ ಎಂ.ಎ. ಪದವಿಗೆ ಸೇರಲು ಬೆಂಗಳೂರು ಹಾಗೂ ಗುಲ್ಬರ್ಗ ವಿಶ್ವವಿದ್ಯಾಲಯಗಳು ಅವಕಾಶವನ್ನು ಕಲ್ಪಿಸಿಕೊಟ್ಟಿವೆ.

ಪುಂಡಲೀಕ ಹಾಲಂಬಿ
ಅಧ್ಯಕ್ಷರು

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು-೫೬೦೦೧೮